ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ-22

ಶಲ್ಯಪರ್ವ

ಮತ್ತು ಗದಾಪರ್ವ

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೨೨

ಶಲ್ಯಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್ ಗಣಪತಿ ಭಟ್, ಉಡುಪಿ.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಶಲ್ಯಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಶಲ್ಯಪರ್ವ - ಭಾಗ ೨೨

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-00-6

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XXX + 576 = 606
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಗಣಪತಿ ಭಟ್ ಉಡುಪಿ.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ ಮತ್ತು ಸಂಸ್ಕೃತ ಶ್ಲೋಕ ಲಿಪ್ಯಂತರ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಅಕ್ಷರ ಜೋಡಣೆ	-	ವಿದ್ವಾನ್ ಗಣಪತಿ ಭಟ್, ಉಡುಪಿ.
ಮುದ್ರಕರು	-	ಪವನ್ ಪ್ರಿಂಟರ್ಸ್, ಬೆಂಗಳೂರು.
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ವುಮಃ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

ಅನುಗ್ರಹ ಸಂದೇಶ

ಎಷ್ಟು ಬಾರಿ ಶಲ್ಯ-ಗದಾ ಪರ್ವಗಳನ್ನು ಅಧ್ಯಯನ ಮಾಡಿದರೂ ಒಂದು ವಿಷಯದಲ್ಲಿ ಪುನಃ ಪುನಃ ಸಂಶಯವು ಹುಟ್ಟುತ್ತಲೇ ಇರುತ್ತದೆ. ಈ ಸಂಶಯವು ಪರಿಹಾರವಾಗಬೇಕಾದಲ್ಲಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯವನ್ನು ಅವಲೋಕಿಸಲೇಬೇಕು. ವ್ಯಾಸರ ಅಂತರಂಗವನ್ನು ಎಳೆಎಳೆಯಾಗಿ ಬಿಡಿಸಿಕೊಟ್ಟವರು ನಮ್ಮ ಶ್ರೀಮದಾಚಾರ್ಯರು.

ಶಲ್ಯನು ಧರ್ಮಯುದ್ಧದಿಂದ ಧರ್ಮಾತ್ಮನಾದ ಧರ್ಮಜನಿಂದಲೇ ಮರಣ ಹೊಂದಿದ ಬಳಿಕ ಸಮಗ್ರ ಸೇನೆಯು ಹತವಾಯಿತೆಂದು ಖಿನ್ನನಾದ ದುರ್ಯೋಧನನು ದ್ವೈಪಾಯನ ಸರಸನ್ನು ಕುರಿತು ತನ್ನ ಮೂಲಮಂತ್ರಗಳನ್ನು ಜಪಿಸಲು ಹೊರಟನು. ದ್ವೈಪಾಯನ ಸರೋವರವನ್ನು ಪ್ರವೇಶಿಸಿ ಜಲಸ್ತಂಭನ ವಿದ್ಯೆಯಿಂದ ದುರ್ವಾಸರು ನೀಡಿದ ಮಂತ್ರಗಳನ್ನು ಜಪಿಸಲಾರಂಭಿಸಿದನು. ಏಳು ದಿನಗಳ ಕಾಲ ನೀರಿನಲ್ಲಿದ್ದು ಈ ಮಂತ್ರಗಳನ್ನು ಜಪಿಸಿದಲ್ಲಿ ಸತ್ತವರೆಲ್ಲ ಪುನಃ ಜೀವಂತವಾಗುವ ಅಪಾಯವು ಇತ್ತು. ಇದನ್ನು ಕಂಡ ಕೃಷ್ಣನು ಧರ್ಮಜನ ದ್ವಾರ ದ್ವೈಪಾಯನ ಸರೋವರದ ಬಳಿ ಆಗಮಿಸಿ ದುರ್ಯೋಧನನಿಗೆ ಕ್ರೂರ ಮಾತುಗಳಿಂದ ನಿಂದಿಸಲು ಪ್ರಚೋದಿಸಿದನು. ಧರ್ಮಜನ ಮಾತಿನಿಂದ ರೊಚ್ಚಿಗೆದ್ದ ದುರ್ಯೋಧನನು ಮರ್ಯಾದೆಯ ರಕ್ಷಣೆಗಾಗಿ ಪಾಂಡವರ ವಿರುದ್ಧ ಯುದ್ಧಕ್ಕೆ ನಿಂತನು. ಈ ಪ್ರಸಂಗದಲ್ಲಿ ದುರ್ಯೋಧನನನ್ನು ಸಂಹರಿಸುವುದಾಗಿ ಪ್ರತಿಜ್ಞೆ ಮಾಡಿದ ಭೀಮಸೇನನು ದುರ್ಯೋಧನನನ್ನು ಎದುರಿಸಿದನು. ಇವರೀರ್ವರಿಗೆ ಆಶ್ಚರ್ಯಕರವಾದ ಯುದ್ಧವೇ ಏರ್ಪಟ್ಟಿತು. ಇದೇ ಪ್ರಸಂಗದಲ್ಲಿ ಬಲರಾಮನು ಅವರನ್ನು ತಡೆಯಲು ಪ್ರಯತ್ನಿಸಿದರೂ ಕೃಷ್ಣನ ಪ್ರೇರಣೆಯಂತೆ ಯುದ್ಧವು ಮುಂದುವರೆಯಿತು. ಈ ಯುದ್ಧದ ಪ್ರಸಂಗದಲ್ಲಿ ಭೀಮನ ಪ್ರತಿಜ್ಞೆಯನ್ನು ಭಗ್ನಗೊಳಿಸಬೇಕೆಂದು, ವಂಚಿಸಬೇಕೆಂದು ದುರ್ಯೋಧನನು ತನ್ನ ದೇಹವನ್ನೇ ತಲೆಕೆಳಗಾಗಿ ಮಾಡಿ ಯುದ್ಧ ಮಾಡಲಾರಂಭಿಸಿದನು. ಈ ಪ್ರಸಂಗದಲ್ಲಿ ಭೀಮನು ಕೃಷ್ಣನ ಅಪ್ಪಣೆಯಂತೆ ದುರ್ಯೋಧನನ ಪೃಷ್ಠಮೂಲದಲ್ಲಿ ಗದೆಯಿಂದ

ಅಪ್ಪಳಿಸಿದನು. 'ಪೃಷ್ಠಮೂಲೇ ಅಹನದ್‌ಭೀಮೋ ಭಿನ್ನ ಸತ್ತಿಶ್ಚ ಸೋಪತತ್' ಎನ್ನುತ್ತಾರೆ ಶ್ರೀಮದಾಚಾರ್ಯರು. ಭೀಮನು ತನ್ನ ಪ್ರತಿಜ್ಞಾ ಪಾಲನೆಗಾಗಿ ನಾಭಿಯ ಮೇಲೂ ಅಲ್ಲದೆ, ಕೆಳಕ್ಕೂ ಅಲ್ಲದೆ ಮಧ್ಯದಲ್ಲಿ ಪ್ರಹರಿಸಿದನು. ಗದಾ ಯುದ್ಧದ ನಿಯಮವನ್ನು ಪಾಲಿಸಿ ತನ್ನ ಪ್ರತಿಜ್ಞೆಯನ್ನು ಪೂರೈಸಿಕೊಳ್ಳಬೇಕೆಂದು ಪೃಷ್ಠದ ಮೂಲದಲ್ಲಿ ಹೊಡೆದು ಎರಡು ತೊಡೆಗಳನ್ನು ಮುರಿದನು. ಪುನಃ ದ್ಯೂತದಲ್ಲಿ ಕೃಷ್ಣನನ್ನು ಪಣವಾಗಿರಿಸು ಎಂದು ದುರ್ಯೋಧನನು ಸಭೆಯಲ್ಲಿ ನುಡಿದಾಗ ಭೀಮನು ಇಂತಹ ಕೆಟ್ಟ ಆಲೋಚನೆ ಮಾಡಿದ ದುರ್ಯೋಧನನ ತಲೆಯನ್ನು ರಣರಂಗದಲ್ಲಿ ತುಳಿಯುತ್ತೇನೆಂದು ಪ್ರತಿಜ್ಞೆ ಮಾಡಿದ್ದನು. ಅದಕ್ಕನುಗುಣವಾಗಿ ದುರ್ಯೋಧನನ ತಲೆಯನ್ನು ತುಳಿಯುತ್ತಾ 'ವೃಷಭಂ ಮಾ ಸಮಾನಾನಾಂ' ಎಂಬ ವೃಷಭ ಸೂಕ್ತವನ್ನು ಕಂಡುಕೊಂಡನು. ಇಷ್ಟು ಕಥೆಯು ನಮ್ಮೆಲ್ಲರಿಗೂ ತಿಳಿದಿದೆ. ರಣರಂಗದಲ್ಲಿ ಭೀಮನ ಈ ಕ್ರೌರ್ಯವನ್ನು ದುರ್ಯೋಧನನ ಅವನತಿಯನ್ನು ಕಂಡು ಬಲರಾಮನಿಗೆ ಕೋಪವು ತಡೆಯಲಾಗಲಿಲ್ಲ. ಭೀಮಸೇನನು ಧರ್ಮಯುದ್ಧವನ್ನು ಮಾಡಿಲ್ಲ ಎಂದು ಎರಡು ತೋಳುಗಳನ್ನೂ ಮೇಲಕ್ಕೆ ಎತ್ತಿ ಗಟ್ಟಿಯಾಗಿ ಕಿರುಚಿಕೊಳ್ಳುತ್ತಾನೆ. ಇಷ್ಟೇ ಅಲ್ಲದೆ ಸಿಟ್ಟಿನಿಂದ ಮುಸಲವನ್ನು ಧರಿಸಿ ಭೀಮನನ್ನೇ ಹೊಡೆಯಲು ಮುನ್ನುಗ್ಗುತ್ತಾನೆ. ಈ ಪ್ರಸಂಗದಲ್ಲಿ ಬಲರಾಮನನ್ನು ಕುರಿತು ಕೃಷ್ಣನೇ ಸಮಾಧಾನ ಪಡಿಸುತ್ತಾನೆ. ಮಂಡಲಾಕಾರದಲ್ಲಿ, ಪರಿಭ್ರಮಣ ಹೊಂದುವ ಕಾಲದಲ್ಲಿ, ಅಭಿಮುಖವಾಗಿ ಯುದ್ಧವನ್ನು ಮಾಡುವ ಕಾಲದಲ್ಲಿ, ಹಿಮ್ಮುಖವಾಗಿ ಸಾಗುವ ಕಾಲದಲ್ಲಿ ನಾಭಿಯಿಂದ ಕೆಳಭಾಗವನ್ನು ಹೊಡೆಯಬಾರದು ಎಂಬುದು ಯುದ್ಧದ ನಿಯಮವಾದರೂ ಈ ಮೂರು ಪ್ರಸಂಗದಲ್ಲಿ ವಂಚನೆಯನ್ನು ಮಾಡಿದರೆ ಅವನನ್ನು ನಾಭಿಯಿಂದ ಕೆಳಭಾಗದಲ್ಲಿ ಪ್ರಹರಿಸಬಹುದು. ತಲೆಕೆಳಗಾಗಿ ಯುದ್ಧ ಮಾಡುತ್ತಾ ಭೀಮನನ್ನು ವಂಚಿಸಿದ ದುರ್ಯೋಧನನನ್ನು ಹೀಗೆ ಹೊಡೆದಿರುವುದು ಧರ್ಮಸಮ್ಮತವೇ ಆಗಿದೆ ಎಂದು ಕೃಷ್ಣನು ಉತ್ತರಿಸುತ್ತಾನೆ. ವಾಸ್ತವಿಕವಾಗಿ ಭೀಮಸೇನನು ದುರ್ಯೋಧನನಿಗೆ ನಾಭಿಯಿಂದ ಕೆಳಗೆ ಹೊಡೆಯಲಿಲ್ಲ. ನಾಭಿಯ ಮೇಲ್ಭಾಗದಲ್ಲೂ ಹೊಡೆಯದೇ ಮಧ್ಯದ ಭಾಗದಲ್ಲಿಯೇ ಹೊಡೆದಿರುತ್ತಾನೆ. 'ನಾದಸ್ಥಾತ್ ಮಧ್ಯಯೇವಾಸೋ ನಿಜಘನೇತಂ ವೃಕೋದರಃ' ಎನ್ನುತ್ತಾರೆ ಶ್ರೀಮದಾಚಾರ್ಯರು. ಆದರೆ ಈ ಸತ್ಯವನ್ನು ಬಲರಾಮನಿಗೆ ಕೃಷ್ಣನು ಹೇಳದೆ ವಂಚಕರಾದವರನ್ನು ನಾಭಿಯ ಕೆಳಭಾಗವನ್ನು ಹೊಡೆಯುವುದು ಧರ್ಮವೇ ಆಗಿದೆ ಎಂದು ಹೇಳುತ್ತಾನೆ. ಅಧರ್ಮ ಮಾಡುವ ಜನರನ್ನು ಧರ್ಮದಿಂದ ಕೊಲ್ಲಬಾರದು. ದೇವತೆಗಳೂ ವಂಚನೆಯಿಂದಲೇ ಅಸುರರನ್ನು ಸಂಹರಿಸಿದ್ದಾರೆ. ಆದ್ದರಿಂದ ದುರ್ಯೋಧನನು ಅಧರ್ಮದಿಂದ ಸತ್ತಿದ್ದಾನೆ. ದೋಷವೇನೂ ಇಲ್ಲ.

ಪ್ರತಿಜ್ಞಾ ಪಾಲನೆಯ ದೃಷ್ಟಿಯಿಂದ ಭೀಮನು ಅವನ ತೊಡೆಗಳನ್ನು ಮುರಿದಿರುತ್ತಾನೆ. ಅವನ ಪಾಪಕ್ಕೆ ಯೋಗ್ಯವಾದ ಧಾರ್ಮಿಕ ಪ್ರತಿಜ್ಞೆಯನ್ನೇ ಭೀಮ ಮಾಡಿರುತ್ತಾನೆ. ಆದ್ದರಿಂದ ಯಾವ ಅನ್ಯಾಯವೂ ನಡೆದಿಲ್ಲ. ಭೀಮನು ಮಾಡಿದ್ದು ಧರ್ಮವೇ ಆಗಿದೆ ಎಂದು ಬಲರಾಮನ ಬಳಿ ಕೃಷ್ಣನು ವಿವರಿಸಿದಾಗ ಧರ್ಮರಾಜನಿಗೆ ಸಂಶಯ ಉಂಟಾಗುತ್ತದೆ. ದುರ್ಯೋಧನನು ಭೀಮನು ಅಧರ್ಮದಿಂದಲೇ ಹೊಡೆದು ಸಂಹರಿಸಿದ್ದಾನೆ ಎಂದು ಭಾವಿಸಿಕೊಳ್ಳುತ್ತಾನೆ. ಧರ್ಮಜಟಿಲವಾದ ಪ್ರಸಂಗವು ಇದೇ ಆಗಿದೆ. ವಸ್ತುತಃ ಭೀಮನು ನಾಭಿಯ ಕೆಳಭಾಗದಲ್ಲಿ ಹೊಡೆಯದೆ ಕೃಷ್ಣನ ಆಜ್ಞೆಯಂತೆ ಧರ್ಮಯುದ್ಧದಿಂದಲೇ ಸಂಹರಿಸಿದ್ದರೂ ಕೃಷ್ಣನು ಈ ಸತ್ಯವನ್ನು ಬಲರಾಮನ ಮುಂದೆ ಸ್ಪಷ್ಟಪಡಿಸಲಿಲ್ಲ ಎಂದು ತೋರುತ್ತದೆ. ಇದಕ್ಕೆ ಶ್ರೀಮದಾಚಾರ್ಯರು ಎರಡು ಕಾರಣಗಳನ್ನು ನೀಡಿದ್ದಾರೆ. ಒಂದು ಅಯೋಗ್ಯರಲ್ಲಿ ಅಧರ್ಮ ಯುದ್ಧವೂ ಧರ್ಮವಾಗುತ್ತದೆ. **'ಕ್ಷಮಾ ಸರ್ವತ್ರ ಧರ್ಮೋನ ಪಾಪಹೇತುಶ್ಚ ದುರ್ಜನೇ'** ಎಂಬ ನೀತಿಯನ್ನು ತಿಳಿಸಿದ್ದಾರೆ. ಜೊತೆಗೆ ಭೂಭಾರಹರಣದ ಸಮಗ್ರ ಪುಣ್ಯವು ಭೀಮನಿಗೆ ಮಾತ್ರ ದೊರೆಯಬೇಕು. ಸಂಶಯದಿಂದ ಧರ್ಮಾನುಷ್ಠಾನ ಮಾಡಿದವರಿಗೆ ಪೂರ್ಣ ಪುಣ್ಯವು ದೊರೆಯಲಾಗದು. ಧರ್ಮಜನು ಈ ಸಮಗ್ರ ಪುಣ್ಯಕ್ಕೆ ಅರ್ಹನಲ್ಲ ಎಂಬ ಕಾರಣದಿಂದಲೇ ಅವನಿಗೆ ಸಂಶಯ ಹುಟ್ಟಲೆಂದೇ ಕೃಷ್ಣನು ಈ ವಿವರಣೆಯನ್ನು ನೀಡಿದ್ದಾನೆ. ಕೃಷ್ಣನ ವಿವರಣೆಯಲ್ಲಿ ಯಾವುದೇ ದೋಷವಿಲ್ಲದಿದ್ದರೂ ಧರ್ಮಜನು ತಪ್ಪಾಗಿ ಭಾವಿಸುತ್ತಾನೆ. ಭೀಮನ ಯುದ್ಧದಲ್ಲೇ ಆಗಲಿ, ಕೃಷ್ಣನ ವಿವರಣೆಯಲ್ಲಾಗಲಿ ಗೊಂದಲವಿಲ್ಲ ಎಂಬುದನ್ನು ಶ್ರೀಮದಾಚಾರ್ಯರು ಸ್ಪಷ್ಟಪಡಿಸುತ್ತಾ ಅವರವರ ಅರ್ಹತೆಗೆ ತಕ್ಕಂತೆ ಮಹಾಭಾರತದ ಕಥೆಗಳನ್ನು ಅರ್ಥೈಸಿಕೊಳ್ಳುತ್ತಾರೆ ಎನ್ನಲು ಧರ್ಮರಾಜನೂ ಒಂದು ನಿದರ್ಶನವಾಗಿದ್ದಾನೆ ಎನ್ನುವ ಮೂಲಕ ಮಹಾಭಾರತದ ಗೂಢಾರ್ಥಗಳು ದೇವತೆಗಳಿಗೂ ಅಗಮ್ಯವಾಗಿರುವಾಗ ಸಾಮಾನ್ಯರು ಇದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲಾಗದು ಎಂದು ಇದರ ಮಹತ್ವವನ್ನು ಈ ಪ್ರಸಂಗದಲ್ಲಿ ವಿಶೇಷವಾಗಿ ತಿಳಿಸಿಕೊಟ್ಟಿದ್ದಾರೆ. ಕೃಷ್ಣನಾದರೂ ಮುಂದೆ ಬಲರಾಮ, ಪ್ರಜೆಗಳು, ಅರ್ಜುನ, ಎಲ್ಲರಿಗೂ ಸಂಶಯ ಪರಿಹಾರವಾಗುವಂತೆ ಭೀಮನ ಗದಾಯುದ್ಧದ ಪ್ರಸಂಗವನ್ನು ನಿರೂಪಿಸಿದರೂ ಧರ್ಮರಾಜನ ಪಾಲಿಗೆ ಮಾತ್ರ ಇದರ ಪೂರ್ಣ ಮರ್ಮವನ್ನು ತಿಳಿಸಲಿಲ್ಲ.

ಹೀಗೆ ಮಹಾಭಾರತವು ಕೇವಲ ಕಥೆಯನ್ನು ಮಾತ್ರ ಹೇಳಿಕೊಂಡು ಹೋಗದೆ ಅತ್ಯಂತ ಸೂಕ್ಷ್ಮವಾದ ಧರ್ಮವನ್ನೂ ವಿಶ್ಲೇಷಿಸುತ್ತಾ ಸಾಗುತ್ತದೆ ಎಂದು ತಿಳಿಸಲು ಈ ಶಲ್ಯಪರ್ವವು ನಿದರ್ಶನವಾಗಿ ನಿಲ್ಲುತ್ತದೆ.

ಈ ಶಲ್ಯ ಮತ್ತು ಗದಾಪರ್ವಗಳನ್ನು ವಿದ್ವಾನ್ ಕೆ. ಗಣಪತಿ ಭಟ್ ಇವರು ಅತ್ಯಂತ ಸರಳವಾಗಿ ಮೂಲಶ್ಲೋಕಕ್ಕೆ ಅನುಗುಣವಾಗಿ, ಸುಂದರವಾಗಿ ಅನುವಾದಿಸಿ ಕೊಟ್ಟಿರುತ್ತಾರೆ. ಸಂಶೋಧಕರು, ವಿಮರ್ಶಕರು ಆದ ವಿದ್ವಾನ್ ಕೆ. ಗಣಪತಿ ಭಟ್ ಇವರಿಂದ ಈ ರೀತಿಯಾದ ಸತ್ಕರ್ಮಗಳು ನಿರಂತರ ನಡೆಯುತ್ತಿರಲೆಂದು ನಮ್ಮ ಉಪಾಸ್ಯ ಮೂರ್ತಿ ಶ್ರೀರಾಮಚಂದ್ರನಲ್ಲಿ ಪ್ರಾರ್ಥಿಸುತ್ತೇವೆ. ಇದರಂತೆ ಮಹಾಭಾರತ ಮೂಲಶೋಧನೆ, ವಿದ್ವಾಂಸರ ನಿರ್ವಹಣೆ ಮುಂತಾದ ಕಾರ್ಯಗಳಲ್ಲಿ ನಿರಂತರ ಪರಿಶ್ರಮವಹಿಸಿದ ಅನೇಕ ವಿದ್ವಾಂಸರನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ. ಇದರಂತೆ ಸಮಗ್ರ ಮಹಾಭಾರತದ ಪ್ರಕಾಶನದ ಜವಾಬ್ದಾರಿಯನ್ನು ಹೊತ್ತಿರುವ ವಿದ್ವಾಂಸರಾದ ಬೆ.ನಾ.ವಿಜಯೀಂದ್ರಾಚಾರ್ಯರಿಗೂ ವಿಶೇಷವಾಗಿ ಶ್ರೀಹರಿವಾಯುಗುರುಗಳ ಅನುಗ್ರಹವನ್ನು ಬಯಸುತ್ತೇವೆ. ಇದರಲ್ಲಿ ಸಹಕರಿಸಿದ ಎಲ್ಲರಿಗೂ ಭಗವಂತನು ಸನ್ಮಂಗಳವನ್ನು ಉಂಟುಮಾಡಲಿ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಪ್ರಕಾಶಕರ ನುಡಿ

ಹದಿನೆಂಟನೆಯ ದಿವಸದಲ್ಲಿ ಶಲ್ಯನು ಕೌರವ ಸೇನಾಧಿಪತಿಯಾಗಿ ಪಾಂಡವರನ್ನು ಎದುರಿಸುತ್ತಾನೆ. ಬಾಹು ಯುದ್ಧದಲ್ಲಿ ಪ್ರಸಿದ್ಧರಾದ ನಾಲ್ವರಲ್ಲಿ ಶಲ್ಯನೂ ಒಬ್ಬ. ಸಲ್ಲಾಹನ ಅವತಾರನಾದ, ವಾಯು ಆವೇಷದಿಂದ ಯುಕ್ತನಾದ ಶಲ್ಯನು ಧರ್ಮಯುದ್ಧವನ್ನೇ ಮಾಡುತ್ತಾ ಧರ್ಮಜನಿಂದಲೇ ಯುದ್ಧದಲ್ಲಿ ಹತನಾಗುತ್ತಾನೆ. ಕೌರವ ಸೇನೆಯಲ್ಲಿ ಮಹಾರಥಿಕರೆಲ್ಲರೂ ಅಸುನೀಗಲು ಕಂಗಾಲಾದ ದುರ್ಯೋಧನನು ದುರ್ವಾಸರಿಂದ ನೀಡಲ್ಪಟ್ಟ ಮಂತ್ರವನ್ನು ಜಪಿಸಿ ಪುನಃ ಸಮಸ್ತ ಸೇನೆಯನ್ನು ಬದುಕಿಸಬೇಕೆಂದು ದ್ವೈಪಾಯನದ ಸರೋವರದ ಕಡೆ ಸಾಗುತ್ತಾನೆ. ಇಲ್ಲಿ ದುರ್ಯೋಧನನು ಪ್ರವೇಶಿಸಿದ್ದು ವೈಶಂಪಾಯನ ಸರೋವರ ಎಂದು ಪಂಪಭಾರತದಲ್ಲಿ ಪಂಪನು ಉಲ್ಲೇಖಿಸಿದ್ದಾನೆ. ಆದರೆ ಮೂಲಮಹಾಭಾರತದಲ್ಲಿ ಎಲ್ಲಿಯೂ ಈ ಸರೋವರದ ಉಲ್ಲೇಖವು ಇರುವುದಿಲ್ಲ. ದ್ವೈಪಾಯನ ಸರೋವರವೇ ದುರ್ಯೋಧನನು ಪ್ರವೇಶಿಸಿದ ಸರೋವರವು. ಕಾಲಿಕವಾಗಿ ಅನೇಕ ಕಥಾ ವ್ಯತ್ಯಾಸಗಳು ನಡೆದಿದೆ ಎಂದು ತಿಳಿಯಬಹುದು. ಸರೋವರದಲ್ಲಿ ಅಡಗಿ ಕುಳಿತ ದುರ್ಯೋಧನನನ್ನು ಧರ್ಮರಾಜನು ಪ್ರಚೋದಿಸಿ ಯುದ್ಧಕ್ಕೆ ಆಹ್ವಾನಿಸಿದಾಗ ಅನಿವಾರ್ಯವಾಗಿ ದುರ್ಯೋಧನನು ಭೀಮನೊಂದಿಗೆ ಸೆಣೆಸಾಡಿ ಅಸುನೀಗುತ್ತಾನೆ. ಪಾಪಿಗಳಲ್ಲಿ ಪಾಪಿಯಾದ ದುರ್ಯೋಧನನು ಪ್ರಾಣ ಹೋಗುವ ಸಮಯದಲ್ಲಿಯೂ ಪಶ್ಚಾತ್ತಾಪವನ್ನು ಪಡದೆ ತಾನು ಮಾಡಿದ್ದೆಲ್ಲವೂ ಒಳ್ಳೆಯದ್ದೇ ಆಗಿದೆ ಎಂದು ಭಾವಿಸುತ್ತಾನೆ.

ಕೃಷ್ಣನು ಗೀತೆಯಲ್ಲಿ-

'ಈಶ್ವರೋಽಹಮಹಂ ಭೋಗಿ ಸಿದ್ಧೋಽಹಂ ಬಲವಾನ್ ಸುಖೀ ।
ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋಮಯಾ ।
ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ ॥

ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ ॥

ಎಂದು ತಾಮಸರ ಸ್ವಭಾವವನ್ನು ವರ್ಣಿಸಿದ್ದಾನೆ. ಈ ದುರ್ಗುಣಗಳಿಗೆ

ನಿದರ್ಶನವಾಗಿದ್ದಾನೆ ದುರ್ಯೋಧನ. ತಾನು ಸಾಯುವ ಸಮಯದಲ್ಲಿ ತನ್ನ ಯಾವ ತಪ್ಪನ್ನೂ ಎಣಿಸದೆ– 'ನಾನು ಯಜ್ಞಗಳನ್ನಾಚರಿಸಿದ್ದೇನೆ. ಪುಣ್ಯಕರ್ಮಗಳನ್ನು ಮಾಡಿದ್ದೇನೆ. ಶತ್ರುಗಳನ್ನು ಸಂಹರಿಸಿದ್ದೇನೆ. ಯುದ್ಧಭೂಮಿಯಲ್ಲಿಯೇ ಸನ್ಮರಣವನ್ನು ಹೊಂದಿದ್ದೇನೆ. ಸಮಸ್ತ ಭೋಗಗಳನ್ನು ಅನುಭವಿಸಿದ್ದೇನೆ. ಆದ್ದರಿಂದ ಎಲ್ಲರಿಗಿಂತ ಶ್ರೇಷ್ಠವಾದ ಗತಿಯನ್ನೇ ನಾನು ಹೊಂದುತ್ತೇನೆ. ಪಾಂಡವರೆಲ್ಲರೂ ಕಪಟ ಯುದ್ಧವನ್ನು ಮಾಡಿ ದುಃಖ ಭಾಗಿಗಳಾಗುತ್ತಾರೆ. ರತ್ನಹೀನ ವಸುಂಧರೆಯನ್ನು ಪಾಂಡವರು ಅನುಭವಿಸಲಿ' ಎಂದು ಹೇಳುವ ಪ್ರಸಂಗದಲ್ಲಿಯೇ ದುರ್ಯೋಧನನ ಮೇಲೆ ದೇವತೆಗಳು ಪುಷ್ಪವೃಷ್ಟಿಯನ್ನು ಸುರಿಸುತ್ತಾರೆ. ಈ ಎಲ್ಲ ಪ್ರಸಂಗವನ್ನು ಕಂಡಾಗ ಯಾವುದು ಧರ್ಮ? ಯಾವುದು ಅಧರ್ಮ? ಎಂಬುದೇ ಓದುಗರಿಗೆ ಗೊಂದಲವಾಗುತ್ತದೆ. ಶ್ರೀಮದಾಚಾರ್ಯರು ಈ ಪ್ರಸಂಗದಲ್ಲಿ ದುಷ್ಟರಿಗೆ ವಿಪರೀತ ಬುದ್ಧಿಯಲ್ಲಿಯೇ ದಾರ್ಢ್ಯವನ್ನು ಹುಟ್ಟಿಸಲು ತನ್ಮೂಲಕ ಗಾಢವಾದ ಅಂಧಃತಮಸ್ಸಿನಲ್ಲಿ ಪತನ ಹೊಂದಬೇಕು ಎಂಬುದು ದೇವತೆಗಳ ಪುಷ್ಪವೃಷ್ಟಿಯ ಉದ್ದೇಶವಾಗಿದೆ. ಆತ್ಮ ಪ್ರಶಂಸೆಯನ್ನು ಮಾಡಿಕೊಳ್ಳುತ್ತಾ ಹರಿಭಕ್ತರನ್ನು, ಶ್ರೀಹರಿಯನ್ನು ನಿಂದಿಸಿದವರಿಗೆ ಅಂಧಃತಮಸ್ಸಲ್ಲದೆ ಬೇರೆ ಯಾವ ಗತಿಯೂ ಇರುವುದಿಲ್ಲ. ಎಲ್ಲ ವಿಧವಾದ ಅನರ್ಥಗಳನ್ನು ಮಾಡಿದ ದುರ್ಯೋಧನನಿಗೆ ನಿತ್ಯ ದುಃಖವು ತಪ್ಪಿದ್ದಲ್ಲ. ದುರ್ಯೋಧನನು ಸತ್ಫಲವನ್ನು ಹೊಂದಿದರೆ ಕತ್ತಲೆಯೂ ಸೇರಿನಂತೆ ಬೆಳಗಬೇಕಾದೀತು ಎನ್ನುತ್ತಾನೆ ಶ್ರೀಕೃಷ್ಣ. ಹೀಗೆ ಆಯಾ ಜೀವರ ಯೋಗ್ಯತೆಗೆ ತಕ್ಕಂತೆ ಸಾಧನೆಯನ್ನು ಮಾಡಿಸಲು ವೇದಿಕೆಯನ್ನು ಕಲ್ಪಿಸುವುದು ಭಗವಂತನ ಸಂಕಲ್ಪವಾಗಿದೆ. ಹೀಗೆ ಮಹಾಭಾರತವು ಸಾತ್ವಿಕ, ತಾಮಸರ ಅರ್ಹತೆಗಳೇನೆಂದು ತಿಳಿಸಲು ಕೌರವ– ಪಾಂಡವರ ಕಥೆಯನ್ನು ಮಾಧ್ಯಮವನ್ನಾಗಿಸಿಕೊಂಡಿದೆ ಎಂಬ ಮರ್ಮವನ್ನು ಶ್ರೀಮದಾಚಾರ್ಯರು ಈ ಪ್ರಸಂಗದಲ್ಲಿ ತಿಳಿಸಿಕೊಟ್ಟಿರುತ್ತಾರೆ. ಇಂತಹ ತಾತ್ವಿಕ ವಿಚಾರಗಳಿಂದ ರಮಣೀಯವಾಗಿ ಹೊರಹೊಮ್ಮಿರುವ ಮಹಾಭಾರತ ಶಲ್ಯಪರ್ವದ ಕನ್ನಡಾನುವಾದವನ್ನು ಪೂರೈಸಿಕೊಟ್ಟಿರುವ ವಿದ್ವಾನ್ ಕಡಂದಲೆ ಗಣಪತಿ ಭಟ್ ಇವರನ್ನು ತತ್ವಸಂಶೋಧನ ಸಂಸತ್ ವತಿಯಿಂದ ವಿಶೇಷವಾಗಿ ಅಭಿನಂದಿಸುತ್ತೇವೆ.

ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಪರಮಾನುಗ್ರಹದಿಂದ ಶ್ರೀಮನ್ಮಹಾಭಾರತದ ಶುದ್ಧಪಾಠದ ಮುದ್ರಣವೆಂಬ ಮಹತ್ಕಾರ್ಯವನ್ನು

ಕೈಗೆತ್ತಿಕೊಂಡು, ಅದಕ್ಕೆ ಸಂಬಂಧಪಟ್ಟ ವಿದ್ವಾಂಸರನ್ನು ಒಟ್ಟುಗೂಡಿಸಿ, ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಮಾಡಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಾಜಕ್ಕೆ ದೊಡ್ಡಕೊಡುಗೆಯನ್ನು ನೀಡುತ್ತಿದ್ದಾರೆ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು. ಆ ನಿಟ್ಟಿನಲ್ಲಿ ಈಗ ಶಲ್ಯ ಹಾಗೂ ಗದಾಪರ್ವದ ಭಾಗವನ್ನು ಅರ್ಥಸಹಿತ ಒಂದು ಸಂಪುಟದಲ್ಲಿ ಲೋಕಾರ್ಪಣೆ ಮಾಡುತ್ತಿದ್ದೇವೆ. ಪ್ರಾತಃಸ್ಮರಣೀಯರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಮಹತ್ಸಂಕಲ್ಪವಾದ ಶ್ರೀಮಹಾಭಾರತ ಮುದ್ರಣವು ಅವರೇ ಹುಟ್ಟುಹಾಕಿದ ತತ್ವಸಂಶೋಧನ ಸಂಸತ್ತಿನಿಂದ ಆಗಬೇಕೆಂದು ಶ್ರೀಪಾದರು ಸಂಕಲ್ಪಿಸಿದ್ದಾರೆ. ಅದು ಕೂಡ ಶ್ರೀಪಾದರ ದ್ವಿತೀಯ ಶ್ರೀಕೃಷ್ಣಪೂಜಾ ಪರ್ಯಾಯದ ಶುಭಾವಸರದಲ್ಲಿ ಬಿಡುಗಡೆಗೊಳ್ಳುತ್ತಿರುವುದು ಯೋಗವೇ ಸರಿ. ಈ ನಮ್ಮ ಸಂಸ್ಥೆಯ ಎಲ್ಲಾ ವಿಷಯಗಳಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ಧಾರೆಯೆರೆದ ನಮ್ಮ ಸಂಸ್ಥೆಯ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಗೆ ಹೃತ್ಪೂರ್ವಕ ಅನಂತ ನಮೋವಾಕ್ಯಗಳನ್ನು ಸಮರ್ಪಿಸುತ್ತಿದ್ದೇನೆ.

ಅದೇ ರೀತಿಯಲ್ಲಿ ಇಂತಹ ಅದ್ಭುತವಾದ ಈ ಕೃತಿ ಹೊರಬರಲು ಆರ್ಥಿಕವಾಗಿ ಎಲ್ಲರೀತಿಯ ಸಹಕಾರ ನೀಡಿರುವಂತಹ ನಮ್ಮ ಘನವೆತ್ತ ಕರ್ನಾಟಕ ಸರ್ಕಾರಕ್ಕೆ, ಅದರ ಎಲ್ಲಪದಾಧಿಕಾರಿಗಳಿಗೆ ಸಂಶೋಧನ ಸಂಸತ್‌ನ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶಲ್ಯಪರ್ವದ ಮುದ್ರಣಕ್ಕೆ ಬೇಕಾದ ಧನವನ್ನು ನಮ್ಮವರೇ ಆದ ಶ್ರೀಯುತ ಅರವಿಂದ ಗಂಭೀರ್ ಶ್ರೀಮತಿ ಪರಿಮಳಾ ದಂಪತಿಗಳು ನೀಡಿರುತ್ತಾರೆ. ಬೆಂಗಳೂರಿನಲ್ಲಿ ಗಂಭೀರ್ ಟೂಟರ್ ಪಾಡ್ ಪ್ರೈವೇಟ್ ಲಿಮಿಟೆಡ್ (GTPL) ಸಂಸ್ಥೆಯನ್ನು ಸ್ಥಾಪಿಸಿ ನೂರಾರು ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿದ್ದಾರೆ. ನಮ್ಮ ಪ್ರಕಾಶನಕ್ಕೆ ಉದಾರವಾದ ಸೇವೆಯನ್ನು ಸಲ್ಲಿಸಿದ ಉದಾರಿಗಳೂ, ಧರ್ಮನಿಷ್ಠರೂ ಆದ ಕುಮಾರಿ ತತ್ವಮಂಜರೀ, ಕುಮಾರಿ ಮಾಯಾ ಎಂಬ ಮಕ್ಕಳಿಂದ ಕೂಡಿರುವ ಇವರ ಕುಟುಂಬಕ್ಕೆ ಭಗವಂತನು ವಿಶೇಷವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಅದೇ ರೀತಿಯಲ್ಲಿ ಈ ಶ್ರೀಮಹಾಭಾರತ ಶುದ್ಧಪಾಠದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು, ಸಮರ್ಥವಾಗಿ ಆ ಯೋಜನೆ ಕಾರ್ಯಗತ ಆಗುವಲ್ಲಿ ಪೂರ್ಣಪ್ರಮಾಣದಲ್ಲಿ ಶ್ರಮಿಸುತ್ತಿರುವ ನಮ್ಮ ನಾಡಿನ ಖ್ಯಾತ ಪ್ರವಚನಕಾರರೂ,

ವಿದ್ವಾಂಸರೂ ಆಗಿರುವಂತಹ ಡಾ|| ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಮತ್ತು ಇದಕ್ಕಾಗಿ ಶ್ರಮವಹಿಸಿದ ಎಲ್ಲಾ ವಿದ್ಯನ್ಮಣಿಗಳಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಶ್ರೀಮಹಾಭಾರತದ ಮುದ್ರಣದ ಬೃಹತ್ ಯೋಜನೆಯಲ್ಲಿ ಈ ಇಳಿ ವಯಸ್ಸಿನಲ್ಲಿಯೂ ನಮ್ಮ ಜೊತೆಗೇ ಇದ್ದುಕೊಂಡು ಸಂಪೂರ್ಣ ಸಹಕಾರವನ್ನು ನೀಡುತ್ತಿರುವ ಶ್ರೀಯುತ ರಘುಪತಿ ತಂತ್ರಿ ಇವರಿಗೂ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ಮೂಲ ಸಂಸ್ಕೃತ ಶ್ಲೋಕಗಳನ್ನು ದೋಷರಹಿತವಾಗಿ ಕನ್ನಡಕ್ಕೆ ಲಿಪ್ಯಂತರವನ್ನು ಮಾಡಿಕೊಟ್ಟು ಹಾಗೂ ಪುಟ ಸಂಯೋಜನೆಯನ್ನು ಮಾಡಿದ ಶ್ರೀಯುತ ಶರತ್‌ಚಂದ್ರ ಎಂ., ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಅವರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳು. ಹಾಗೆಯೇ ತಿದ್ದುಪಡಿಯಲ್ಲಿ ಸಹಕಾರ ಮಾಡಿಕೊಟ್ಟಿರುವ ಶ್ರೀಯುತ ಶ್ರೀವತ್ಸ ಆಚಾರ್ಯ (ಸಿದ್ಧಾಂತಿ) ಇವರಿಗೂ ಧನ್ಯವಾದಗಳು. ಹಾಗೆಯೇ ನಮಗೆ ಬೇಕಾದ ಕ್ಲಪ್ತ ಸಮಯದಲ್ಲಿ ಸುಂದರವಾಗಿ ಮುದ್ರಣವನ್ನು ಮಾಡಿಕೊಟ್ಟಿರುವ ಪವನ್ ಪ್ರಿಂಟರ್ಸ್‌ನ ಮಂಜುನಾಥ್‌ರವರಿಗೂ ನಮ್ಮ ಸಂಸ್ಥೆಯ ಪರವಾಗಿ ವಿಶೇಷ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ. ಈ ಕಾರ್ಯದಲ್ಲಿ ಶ್ರಮಿಸಿದ ಸಂಶೋಧನ ಮಂದಿರದ ಎಲ್ಲಾ ಕಾರ್ಯಕಾರಿಣಿ ವರ್ಗಕ್ಕೂ ಈ ಮೂಲಕ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಶಲ್ಯಪರ್ವದ ಅಧ್ಯಯನವನ್ನು ಮಾಡಿ ತನ್ಮೂಲಕ ಸಾಧನೆ ಮಾರ್ಗವನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಭಗವಂತನನ್ನು ಒಲಿಸಿಕೊಳ್ಳುವುದರ ಬಗ್ಗೆ ಅವನ ಸಂಕಲ್ಪಕ್ಕೆ ಅನುಗುಣವಾಗಿ ಅವನ ಪ್ರೇರಣೆಯಂತೆ ಎಲ್ಲರೂ ಕೈ ಜೋಡಿಸುವ ಮೂಲಕ ಶ್ರೀಕೃಷ್ಣನ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ ಎಂದು ಅಪೇಕ್ಷಿಸುತ್ತಿದ್ದೇನೆ.

ಪ್ರಕಾಶಕರು

ಡಾ. ವಂಶೀಕೃಷ್ಣಾಚಾರ್ಯ ಪುರೋಹಿತ್

ನಿರ್ದೇಶಕರು, ತತ್ವಸಂಶೋಧನಸಂಸತ್,

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಪರ್ವದ ಸಾರಾಂಶ

ಶಲ್ಯಪರ್ವವು ಮಹಾಭಾರತದ ಒಂಬತ್ತನೆಯ ಪರ್ವ. ಇದರಲ್ಲಿ ಅವಾಂತರ ಉಪಪರ್ವಗಳಾಗಿ ಶಲ್ಯವಧಪರ್ವ, ಹ್ರದಪ್ರವೇಶಪರ್ವ, ತೀರ್ಥಯಾತ್ರಾಪರ್ವ ಮತ್ತು ಗದಾಯುದ್ಧಪರ್ವಗಳು ಉಲ್ಲೇಖಗೊಂಡಿವೆ.

ಶಲ್ಯವಧಪರ್ವ :

ಮಹಾಭಾರತದ ಹದಿನೆಂಟು ದಿನದ ಯುದ್ಧದಲ್ಲಿ ಹದಿನೇಳು ದಿನಗಳ ಯುದ್ಧವು ಮುಗಿದಾಗ ಕರ್ಣನು ಹತನಾಗಿದ್ದ. ಕೌರವರ ಸೈನ್ಯದ ಮಹಾವೀರರೆಲ್ಲರೂ ನಾಶವಾದ ಸಂದರ್ಭದಲ್ಲಿ ಹದಿನೆಂಟನೆಯ ಯುದ್ಧಕ್ಕಾಗಿ ದುರ್ಯೋಧನನು ಮದ್ರದೇಶದ ಚಕ್ರವರ್ತಿಯಾದ ಶಲ್ಯಮಹಾರಾಜನನ್ನು ಸೇನಾಧಿಪತಿಯನ್ನಾಗಿ ಪಟ್ಟಾಭಿಷೇಕಮಾಡುತ್ತಾನೆ. ಶಲ್ಯನು ಹದಿನೆಂಟನೆಯ ದಿನದ ಆ ಯುದ್ಧದಲ್ಲಿ ಧರ್ಮರಾಜನ ಕೈಯಲ್ಲಿ ಹತನಾಗುತ್ತಾನೆ.

ಶಲ್ಯನು ಮಹಾಭಾರತದಲ್ಲಿ ಬರುವ ಒಂದು ವಿಶಿಷ್ಠಪಾತ್ರನಾಗಿದ್ದಾನೆ. ಇವನ ಬಗ್ಗೆ ಶ್ರೀಮದಾಚಾರ್ಯರು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಹೀಗೆ ಉಲ್ಲೇಖಿಸಿದ್ದಾರೆ.

ಅಥ ಚಾರ್ತಾಯನಾನಾಮ ಮದ್ರೇಶಃ ಶಕ್ರತುಲ್ಯಪುತ್ರಾರ್ಥೀ ।
ಕನ್ಯಾರತ್ನಂ ಚೇಚ್ಛಂಶ್ಚಕ್ರೇ ಬ್ರಾಹ್ಮಂ ತಪೋ ವರಂ ಚಾऽಪ ॥

ಪ್ರಹ್ಲಾದಾವರಜೋ ಯಃ ಸಹ್ಲಾದೋ ನಾಮತೋ ಹರೇರ್ಭಕ್ತಃ ।
ಸೋऽಭೂತ್ ಬ್ರಹ್ಮವರಾನ್ತೇ ವಾಯೋರಾವೇಶಯುಕ್ ಸುತೋ ರಾಜ್ಞಃ॥

– ಮ.ಭಾ.ತಾ.ನಿ – 11–157, 158

ಸ ಮಾರುತಾವೇಶವಶಾತ್ ಪೃಥಿವ್ಯಾಂ ಬಲಾಧಿಕೋऽಭೂದ್ ವರತಶ್ಚ ಧಾತುಃ।
ಶಲ್ಯಶ್ಚ ನಾಮ್ನಾऽಖಿಲಶತ್ರುಶಲ್ಯೋ ಬಭೂವ ಕನ್ಯಾऽಸ್ಯ ಮಾದ್ರಿನಾಮ್ನೀ ॥

ಮದ್ರದೇಶದ ಅಧಿಪತಿ ಋತಾಯನಮಹಾರಾಜನು, ಪರಾಕ್ರಮದಲ್ಲಿ ಇಂದ್ರಸದೃಶನಾದ ಪುತ್ರಪ್ರಾಪ್ತಿಗಾಗಿ ಮತ್ತು ಇನ್ನೊಂದು ಪುತ್ರಿಯನ್ನು ಪಡೆಯುವ ಇಚ್ಛೆಯಿಂದ ಚತುರ್ಮುಖಬ್ರಹ್ಮದೇವರನ್ನು ಕುರಿತು ತಪಸ್ಸನ್ನಾಚರಿಸಿದನು. ತಪಸ್ಸಿಗೆ ಒಲಿದ ಬ್ರಹ್ಮದೇವರು ಇವನಿಗೆ ವರವನ್ನು ದಯಪಾಲಿಸಿದ್ದಾರೆ. ಬ್ರಹ್ಮದೇವರ

ವರಬಲದಿಂದಾಗಿ ಕರ್ಮಜದೇವತೆಯಾದ ಪ್ರಹ್ಲಾದನ ತಮ್ಮ ಸಹ್ಲಾದನು ಋತಾಯನರಾಜನಿಗೆ ಮಗನಾಗಿ ಅವತರಿಸುತ್ತಾನೆ. ಅವನೇ ಮಹಾಭಾರತದ ಶಲ್ಯ. ಶ್ರೀಹರಿಯ ಪರಮಭಕ್ತ. ಬ್ರಹ್ಮದೇವರ ವರಬಲ ಮತ್ತು ವಾಯುದೇವರ ವಿಶೇಷ ಆವೇಶದಿಂದಾಗಿ ಈತನು ಮಹಾಪರಾಕ್ರಮಿಯಾಗಿದ್ದನು. ಶತ್ರುಗಳಿಗೆ ಶಲ್ಯ (ಈಟಿಯಂತೆ) ದಂತೆ ಪ್ರಾಣಹಾರಕನಾಗಿದ್ದನು. ಶ್ರೀಕೃಷ್ಣನಿಂದ ಮಹಾರಥ ಎಂಬುದಾಗಿ ಗುರುತಿಸಿಕೊಂಡವನು.

ಶಲ್ಯನ ತಂಗಿಯಾದ ಮಾದ್ರಿಯನ್ನು ಪಾಂಡುರಾಜನು ವಿವಾಹವಾಗುತ್ತಾನೆ. ಅವಳಲ್ಲಿ ಹುಟ್ಟಿದ ಮಕ್ಕಳೇ ನಕುಲ ಮತ್ತು ಸಹದೇವರು.

ಯದ್ಯಪಿ ನಕುಲ ಸಹದೇವರ ಸೋದರಮಾವನಾದ ಇವನು ಪಾಂಡವರಪಕ್ಷದಲ್ಲಿ ಇದ್ದುಕೊಂಡು ಕೌರವರ ವಿರುದ್ಧವಾಗಿ ಕಾದಾಡಬೇಕಿತ್ತು. ಹಾಗಿದ್ದರೂ ಭಗವತ್ಸಂಕಲ್ಪವು ಬೇರೆನೇ ಆಗಿತ್ತು. ಮಹಾಭಾರತಯುದ್ಧದ ಸಿದ್ಧತೆಯ ಸಂದರ್ಭದಲ್ಲಿ ಮದ್ರರಾಜ ಶಲ್ಯನು ಪಾಂಡವರನ್ನು ಸೇರಲಿಕ್ಕಾಗಿ ಹೊರಟಿದ್ದಾನೆ. ಮಾರ್ಗಮಧ್ಯದಲ್ಲಿ ಪರಾಕ್ರಮಿಯಾದ ಶಲ್ಯನ ಸಹಾಯವನ್ನು ಹಾಗೂ ಅವನ ಸೈನ್ಯಬಲವನ್ನು ತನ್ನದಾಗಿಸಿಕೊಳ್ಳಬೇಕೆಂಬ ದುರ್ಬುದ್ಧಿಯಿಂದ ಕಪಟಿಯಾದ ದುರ್ಯೋಧನನು ತಾನು ಮರೆಯಲ್ಲಿ ಇದ್ದುಕೊಂಡು ವಿಶ್ರಾಂತಿಸಭಾವನ್ನು ನಿರ್ಮಿಸಿ ಶಲ್ಯನಿಗೆ ಬೇಕಾದ ಎಲ್ಲಾ ಭೋಗವ್ಯವಸ್ಥೆಗಳನ್ನು ಮಾಡಿಕೊಡುತ್ತಾನೆ. ಇವೆಲ್ಲವನ್ನೂ ಧರ್ಮರಾಜನೇ ಮಾಡಿರಬೇಕೆಂದು ಅಂದುಕೊಂಡ ಶಲ್ಯನು ಈ ವ್ಯವಸ್ಥೆಯನ್ನು ಮಾಡಿದವರ ಇಚ್ಛೆಯನ್ನು ನೆರವೇರಿಸುತ್ತೇನೆ ಎಂಬುದಾಗಿ ಘೋಷಣೆಯನ್ನು ಮಾಡುತ್ತಾನೆ. ತಕ್ಷಣ ಮುಂದೆ ಬಂದ ದುರ್ಯೋಧನನು ತಾನೇ ಇವೆಲ್ಲವನ್ನೂ ಒದಗಿಸಿಕೊಟ್ಟಿದ್ದು ಎಂದು ಹೇಳಿ ತನಗೇ ಯುದ್ಧದಲ್ಲಿ ಸಹಾಯವನ್ನು ಮಾಡಬೇಕೆಂದು ಆಗ್ರಹಿಸುತ್ತಾನೆ.

ರಕ್ಷಾರ್ಥಮಾತ್ಮವಾಕ್ಯಸ್ಯ ತಥೇತ್ಯೇವಾಭ್ಯಭಾಷತ । – ಮ.ತಾ.ನಿ – 24–32

ತನ್ನ ಮಾತನ್ನು ಉಳಿಸಿಕೊಳ್ಳಲಿಕ್ಕಾಗಿ ಹಾಗೆಯೇ ಆಗಲಿ ಎಂದು ಹೇಳಿ ಶಲ್ಯನು ಅನಿವಾರ್ಯವಾಗಿ ದುರ್ಯೋಧನನ ಪಕ್ಷಕ್ಕೆ ಸೇರಿಕೊಳ್ಳಬೇಕಾಗುತ್ತದೆ. ಶಲ್ಯನು ಈ ವಿಷಯದಲ್ಲಿ ಪಾಂಡವರನ್ನು ಭೇಟಿಮಾಡಿ ಅವರ ಒಪ್ಪಿಗೆ ಪಡೆದುಕೊಳ್ಳುತ್ತಾನೆ. ಅರ್ಜುನನ ಶ್ರೇಯಸ್ಸಿಗಾಗಿ ಯುದ್ಧದಲ್ಲಿ ಕರ್ಣನ ತೇಜೋವಧೆಯನ್ನು ಮಾಡು ಎಂದು ಶಲ್ಯನನ್ನು ಧರ್ಮರಾಜನು ಕೇಳಿಕೊಂಡಾಗ ಅದಕ್ಕೆ ತನ್ನ ಸಮ್ಮತಿಯನ್ನು ಸೂಚಿಸುತ್ತಾನೆ ಶಲ್ಯ.

ಶಲ್ಯನ ಪರಾಕ್ರಮ–

ಇಷ್ಟೆಲ್ಲಾ ಆದರೂ ಮದ್ರರಾಜ ಶಲ್ಯನು ತಾನು ಕೊಟ್ಟ ಮಾತಿಗೆ ಅನುಸಾರವಾಗಿ ಯುದ್ಧದಲ್ಲಿ ದುರ್ಯೋಧನನ ಪಕ್ಷದಲ್ಲಿ ಪ್ರಾಮಾಣಿಕವಾಗಿ ಹೋರಾಡುತ್ತಾನೆ. ಕರ್ಣನಿಗೆ ಸಾರಥಿಯಾಗಿ ಕಾರ್ಯನಿರ್ವಹಿಸಲೂ ಹಿಂಜರಿಯಲಿಲ್ಲ. ಹದಿನೇಳನೆಯ ದಿನ ಕರ್ಣನು ಸತ್ತು ಧರಾಶಾಯಿಯಾದಾಗ ಅಶ್ವತ್ಥಾಮನ ಸಲಹೆಯಂತೆ ದುರ್ಯೋಧನನು ಶಲ್ಯನನ್ನು ಸೇನಾಧಿಪತಿಯಾಗಲು ಕೇಳಿಕೊಂಡಾಗ ಆ ಜವಾಬ್ದಾರಿಯನ್ನು ವಹಿಸಿಕೊಂಡು ಬಹಳ ದಕ್ಷತೆಯಿಂದ ಯುದ್ಧವನ್ನು ಮುಂದುವರಿಸುತ್ತಾನೆ.

ಮಹಾಪರಾಕ್ರಮಿಯಾದ ಶಲ್ಯನು ವೀರಾವೇಶದಿಂದ ಕಾದಾಡಿ ಸಾತ್ಯಕಿ ದೃಷ್ಟದ್ಯುಮ್ನಮೊದಾಲಾದ ಮಹಾರಥರ ಆಯುಧಗಳನ್ನು ತುಂಡರಿಸುತ್ತಾನೆ. ಅರ್ಜುನ ಭೀಮಮೊದಲಾದವರನ್ನೂ ಧೈರ್ಯದಿಂದ ಎದುರಿಸುತ್ತಾನೆ.

ಒಂದು ಸಂದರ್ಭದಲ್ಲಿ ಶಲ್ಯನು ರಣರಂಗದಲ್ಲಿ ಮೆರೆಯುತ್ತಿದ್ದಾಗ ಅರ್ಜುನನು ಶಲ್ಯನನ್ನು ಎದುರಿಸುತ್ತಾನೆ. ಶಲ್ಯನು ವಜ್ರಾಯುಧದಂತಹ ಬಾಣವನ್ನು ಎತ್ತಿಕೊಂಡು ಅರ್ಜುನನ ಎದೆಗೆ ಹೊಡೆದು ಅವನನ್ನು ಮೂರ್ಛೆಗೊಳಿಸಿದನು. ಸಾವರಿಸಿಕೊಂಡ ಅರ್ಜುನನು ಶಲ್ಯನ ಎಲ್ಲಾ ಶಸ್ತ್ರಗಳನ್ನೂ ಪುಡಿಮಾಡುತ್ತಾನೆ. ಮತ್ತೊಮ್ಮೆ ಗದೆಯಿಂದ ಅರ್ಜುನನಗೆ ಹೊಡೆದು ಮೂರ್ಛೆಗೊಳಿಸುತ್ತಾನೆ. ಹೀಗೆ ಪರಾಕ್ರಮಿ ಅರ್ಜುನನ್ನೂ ಮಣಿಸಿದವನು ಶಲ್ಯ. ಧರ್ಮರಾಜನ ರಥವನ್ನೂ ಪುಡಿಮಾಡಿ ಕೌರವರ ಗೌರವಕ್ಕೆ ಪಾತ್ರನಾಗುತ್ತಾನೆ. ಇಂತಹ ಮಹಾಪರಾಕ್ರಮಿಯಾದ ಶಲ್ಯನನ್ನು ಮಣಿಸಲು ಭೀಮಸೇನನೇ ಬರಬೇಕಾಯಿತು. ಭೀಮಸೇನನು ಶಲ್ಯನ ಆಯುಧಗಳನ್ನು ಪುಡಿಮಾಡಿ ರಥವನ್ನೂ ನಾಶಮಾಡಿದನು. ಶಲ್ಯನಿಗೆ ಚೆನ್ನಾಗಿ ಪ್ರಹಾರಮಾಡಿದನು. ಅವನ ಮರ್ಮಸ್ಥಾನಗಳನ್ನು ಭೇದಿಸಿದ. ಹೀಗಿದ್ದಾಗ ಶಲ್ಯನು ಧರ್ಮರಾಜನ ಬಳಿಗೆ ಯುದ್ಧಕ್ಕೆ ಹೋದನು. ನಾನೂ ಒಬ್ಬ ಮಹಾವೀರನನ್ನು ಕೊಲ್ಲುವೆನು ಎಂಬ ಧರ್ಮರಾಜನ ಪ್ರತಿಜ್ಞೆಯನ್ನು ನೆರವೇರಿಸಲಿಕ್ಕಾಗಿ ಭೀಮನು ಶಲ್ಯನನ್ನು ಕೊಲ್ಲದೇ ಬಿಟ್ಟು ಬಿಡುತ್ತಾನೆ.

ಎದುರಿಗೆ ಬಂದ ಶಲ್ಯನ ಮೇಲೆ ಧರ್ಮರಾಜನು ತನ್ನ ಸತ್ಯಧರ್ಮ ಆಚರಣೆಗಳಿಂದ ಬಂದ ಪುಣ್ಯಪ್ರಭಾವವನ್ನೂ ಸೇರಿಸಿ ಅಮೋಘವಾದ ಶಕ್ತ್ಯಾಯುಧವನ್ನು ಪ್ರಯೋಗಿಸಿ ಶಲ್ಯನನ್ನು ಬೀಳಿಸುತ್ತಾನೆ. ಎದೆಯೊಡೆದು ಕೆಳಬಿದ್ದ ಶಲ್ಯನು ವೀರಸ್ವರ್ಗವನ್ನು ಹೊಂದುವನು.

ಹೀಗೆ ಕೇವಲ ಅರ್ಧದಿನದ ಕಾಲ ಸೇನಾಧಿಪತಿಯಾಗಿದ್ದರೂ ದುರ್ಯೋಧನನ ಆಪದ್ಬಾಂಧವನಾಗಿ ತನ್ನ ಸೋದರಳಿಯರ ಮೇಲೆಯೇ ಯುದ್ಧಮಾಡಿ ಮಹಾಭಾರತದಲ್ಲಿ ಅಚ್ಚಳಿಯದ ಸ್ಥಾನವನ್ನು ಪಡೆಯುತ್ತಾನೆ ಮದ್ರದೇಶದ ಚಕ್ರವರ್ತಿ ಶಲ್ಯ.

ಹ್ರದಪ್ರವೇಶಪರ್ವ–

ಶಲ್ಯನ ವಧೆಯ ಸಂದರ್ಭದಲ್ಲಿ ಬಹುಶಃ ಕೌರವರ ಎಲ್ಲಾ ಸೈನಿಕರೂ ಯೋಧರೂ ಹತರಾಗಿದ್ದರು. ಇಷ್ಟಾದರೂ ಸೋಲೊಪ್ಪಲು ತಯಾರಿಲ್ಲದ ದುರ್ಯೋಧನನು ಮತ್ತೆ ತನ್ನವರನ್ನು ಬದುಕಿಸಿ ಯುದ್ಧದಲ್ಲಿ ಜಯವನ್ನು ಪಡೆಯುವ ಅಪೇಕ್ಷೆಯನ್ನು ಹೊಂದಿದ್ದ. ಅದಕ್ಕಾಗಿ ಅವನು ರಣರಂಗದಿಂದ ಕಾಲ್ನಡಿಗೆಯಲ್ಲಿಯೇ ಹೊರಟುಬಿಡುತ್ತಾನೆ. ಕೈಯಲ್ಲಿ ತನ್ನ ಭಾರವಾದ ಗದೆಯನ್ನು ಹಿಡಿದುಕೊಂಡು ದ್ವೈಪಾಯನಸರೋವರವನ್ನು ಪ್ರವೇಶಿಸುತ್ತಾನೆ. ಅಲ್ಲಿ ದೂರ್ವಾಸರು ಉಪದೇಶಿಸಿದ ಮೃತಸಂಜೀವಿನಿಮಂತ್ರವನ್ನು ಜಪಿಸಲು ಪ್ರಾರಂಭಿಸುತ್ತಾನೆ. ನೀರಿನಲ್ಲಿ ಇದ್ದುಕೊಂಡು ಏಳು ದಿನ ಈ ಮಂತ್ರವನ್ನು ಜಪಿಸಿದರೆ ಮೃತರಾದ ಎಲ್ಲಾ ಕೌರವಯೋಧರನ್ನು ಮತ್ತೆ ಬದುಕಿಸುವ ಸಾಮರ್ಥ್ಯ ಆ ಮಂತ್ರಕ್ಕಿತ್ತು.

ಗದಾ(ಯುದ್ಧ)ಪರ್ವ–

ದುರ್ಯೋಧನನ ಮಂತ್ರವಿದ್ಯೆಯನ್ನು ತಿಳಿದಿದ್ದ ಪಾಂಡವರು ಕೌರವರನ್ನು ನಿಃಶೇಷವಾಗಿ ಕೊನೆಗೊಳಿಸಲಿಕ್ಕಾಗಿ ದುರ್ಯೋಧನನ್ನು ಹುಡುಕುತ್ತಾ ಹೊರಡುತ್ತಾರೆ. ಮಾರ್ಗಮಧ್ಯದಲ್ಲಿ ಹಿಂದೆ ಭೀಮನಿಗೆ ಮಾಂಸವನ್ನು ತಂದುಕೊಡುತ್ತಿದ್ದ ಬೇಡರು ದುರ್ಯೋಧನನು ದ್ವೈಪಾಯನಸರೋವರವನ್ನು ಪ್ರವೇಶಿಸಿದ ವಿಷಯವನ್ನು ತಿಳಿಸುತ್ತಾರೆ.

ಸರೋವರದ ಬಳಿಗೆ ಬಂದ ಧರ್ಮರಾಜನು ಶ್ರೀಕೃಷ್ಣನ ಆದೇಶದಂತೆ ಕಟುವಾದ ಮಾತುಗಳಿಂದ ದುರ್ಯೋಧನನ್ನು ನಿಂದಿಸುತ್ತಾನೆ. ಸಹನೆಕಳೆದುಕೊಂಡ ದುರ್ಯೋಧನನು ಎಲ್ಲವನ್ನೂ ಕಳೆದುಕೊಂಡು ವಿಧವೆಯಂತಾದ ಸಾಮ್ರಾಜ್ಯವನ್ನು ನೀನೇ ಭೋಗಿಸು ಎಂದು ಧರ್ಮರಾಜನಿಗೆ ಹೇಳುತ್ತಾನೆ. ಆದರೆ ಅವನ ಇಂಗಿತ ಬೇರೆಯದ್ದೇ ಇತ್ತು. ಪಾಂಡವರು ಇಲ್ಲಿಂದ ದೂರ ಹೊರಟುಹೋದರೆ ತಾನು ಮಂತ್ರಸಿದ್ಧಿಯನ್ನು ಪಡೆಯುವುದು ಅವನ ಉದ್ದೇಶವಾಗಿತ್ತು. ಕೊನೆಗೆ ನೀರಿನಿಂದ ಮೇಲೆದ್ದ ದುರ್ಯೋಧನನು ಪಾಂಡವರೊಡನೆ ಯುದ್ಧಕ್ಕೆ ಸನ್ನದ್ಧನಾಗುತ್ತಾನೆ. ಈ

ಸಂದರ್ಭದಲ್ಲಿ ಧರ್ಮರಾಜನು ನಮ್ಮಲ್ಲಿ ಯಾರಾದರೊಬ್ಬರೊಡನೆ ಯುದ್ಧಮಾಡಿ ಸೋಲಿಸಿದರೂ ರಾಜ್ಯವನ್ನು ಮತ್ತೆ ಪಡೆಯುವಿ, ನಾವು ಮತ್ತೆ ಕಾಡಿಗೆ ಹೋಗುತ್ತೇವೆ ಎನ್ನುತ್ತಾನೆ. ಆಗ ದುರ್ಯೋಧನನು ದುರ್ಬಲರಾದ ಯುಧಿಷ್ಠಾದಿ ನಾಲ್ವರಜೊತೆಗೆ ಯುದ್ಧಮಾಡುವುದಿಲ್ಲ, ಭೀಮನೊಡನೆ ಗದೆಯಿಂದಲೇ ಯುದ್ಧಮಾಡುತ್ತೇನೆ ಎಂದು ಹೇಳುತ್ತಾನೆ. ಭೀಮದುರ್ಯೋಧನರು ಗದಾಯುದ್ಧಕ್ಕೆ ಸನ್ನದ್ಧರಾದಾಗ ಶ್ರೀಕೃಷ್ಣನು ಧರ್ಮರಾಜನಿಗೆ ನೀನು ಅಪಾಯಕಾರಿಯಾದ ನಿರ್ಧಾರವನ್ನು ತೆಗೆದುಕೊಂಡಿರುವಿ. ದುರ್ಯೋಧನನು ಅರ್ಜುನಾದಿ ನಾಲ್ವರನ್ನೂ ಕೊಲ್ಲಬಲ್ಲವನಾಗಿದ್ದ. ಬಲದಲ್ಲಿ ಭೀಮನಿಗೆ ಸಮಾನನು ಇನ್ನೊಬ್ಬನಿಲ್ಲದಿದ್ದರೂ ದುರ್ಯೋಧನನೂ ತುಂಬ ಬಲಿಷ್ಠನಾಗಿದ್ದಾನೆ ಹಾಗೂ ಸದಾ ಪ್ರಯತ್ನಶೀಲನಾಗಿದ್ದಾನೆ. ಬಲಕ್ಕಿಂತಲೂ ಪ್ರಯತ್ನವೇ ಶ್ರೇಷ್ಠವಾದುದು. ಆದ್ದರಿಂದ ಭೀಮನು ಆಪದ್ಧರ್ಮವನ್ನು ಅನುಸರಿಸಿ ಏನಾದರೂ ಉಪಾಯವನ್ನು ಮಾಡಿ ದುರ್ಯೋಧನನನ್ನು ಸಾಯಿಸಬೇಕು. ಎಂದು ಹೇಳುತ್ತಾನೆ.

ಬಲೀ ಭೀಮಃ ಸಮರ್ಥಶ್ಚ ಕೃತೀ ರಾಜಾ ಸುಯೋಧನಃ ।
ಬಲವಾಂಶ್ಚ ಕೃತೀ ಚೇತಿ ಕೃತೀ ರಾಜನ್ ವಿಶಿಷ್ಯತೇ ॥ – ಮ.ಭಾ. ಶಲ್ಯಪರ್ವ

ಗದಾಯುದ್ಧದಲ್ಲಿ ದುರ್ಯೋಧನನೇ ನಿಪುಣನಾಗಿದ್ದಾನೆ ಎಂಬುದು ಮೇಲ್ನೋಟಕ್ಕೆ ತಿಳಿದುಬರುತ್ತದೆ. ಆದರೆ ದುರ್ಯೋಧನನನ್ನು ಹೊಗಳುವುದು ಶ್ರೀಕೃಷ್ಣನ ಅಭಿಪ್ರಾಯವಾಗಿರಲಿಲ್ಲ. ಪ್ರಯತ್ನವಿಲ್ಲದೇ ಕಾರ್ಯಸಾಧನೆಮಾಡುವುದು ಬಲಶಾಲಿಗಳಿಗೆ ದೊಡ್ಡಗುಣವೇ ಆಗಿರುತ್ತದೆ. ಪ್ರಯತ್ನಪೂರ್ವಕ ಕಾರ್ಯಸಾಧನೆ ದುರ್ಬಲರ ಲಕ್ಷಣ. ಭೀಮನು ನಿರಾಯಸವಾಗಿ ದುರ್ಯೋಧನನ್ನು ಸಾಯಿಸಬಲ್ಲ ಎಂಬುದು ಶ್ರೀಕೃಷ್ಣನ ಅಭಿಪ್ರಾಯ.

ಇನ್ನು ಆಪದ್ಧರ್ಮವನ್ನು ಅನುಸರಿಸು ಎಂದು ಹೇಳಿದ್ದೂ ಗೂಢಾಭಿಸಂಧಿಯಿಂದ. ದುರ್ಯೋಧನನ ತೊಡೆಯನ್ನು ಮುರಿಯುವುದು ಭೀಮನ ಪ್ರತಿಜ್ಞೆಯಾಗಿತ್ತು. ಆದರೆ ಗದಾಯುದ್ಧದಲ್ಲಿ ನಾಭಿಗಿಂತ ಕೆಳಗೆ ಹೊಡೆಯುವುದು ಲೋಕನಿಂದಿತವಾದುದು. ಪ್ರತಿಜ್ಞಾಪಾಲನೆ ಕ್ಷತ್ರಿಯನಿಗೆ ಮುಖ್ಯಧರ್ಮ. ಗದಾಯುದ್ಧದ ನಿಯಮವನ್ನು ಪಾಲಿಸುವುದು ಅದಕ್ಕಿಂತ ಅಮುಖ್ಯಧರ್ಮ. ಹುಲಿಯಿಂದ ಗೋವನ್ನು ರಕ್ಷಿಸಲಿಕ್ಕಾಗಿ ಹುಲಿಯನ್ನು ಸಾಯಿಸುವುದು ಆಪದ್ಧರ್ಮವಾಗುತ್ತದೆ. ಭೀಮನಿಗೆ ಜನಾಪವಾದ ಬರಬಾರದು ಎಂಬ ಕಾರಣದಿಂದ ಶ್ರೀಕೃಷ್ಣನು ಯಾವುದಾದರೂ ಉಪಾಯದಿಂದ ದುರ್ಯೋಧನನ ತೊಡೆಯನ್ನು

ಮುರಿಯಲು ಹೇಳುತ್ತಿದ್ದಾನೆ. ಮುಂದೆ ಭೀಮನೂ ಗದಾಯುದ್ಧದ ನಿಯಮಕ್ಕೆ ಭಂಗಬರದ ರೀತಿಯಲ್ಲಿಯೇ ದುರ್ಯೋಧನನ ಎರಡೂ ತೊಡೆಗಳನ್ನೂ ಮುರಿಯುತ್ತಾನೆ.

ತೀರ್ಥಯಾತ್ರಾಪರ್ವ-

ಇತ್ತ ಕುರುಪಾಂಡವರ ಯುದ್ಧದಲ್ಲಿ ಭಾಗವಹಿಸದೆ ಬಲರಾಮನು ತೀರ್ಥಯಾತ್ರೆಗೆಹೋಗಿದ್ದ. ಸರಸ್ವತೀತೀರದಲ್ಲಿ ನಾರದರ ಮಾತಿನಿಂದ ತನ್ನ ಶಿಷ್ಯರಾದ ಭೀಮ-ದುರ್ಯೋಧನರ ಗದಾಯುದ್ಧದ ವಿಷಯವನ್ನುತಿಳಿದು ಬಲರಾಮನೂ ದ್ವೈಪಾಯನಸರೋವರದ ಸನಿಹಕ್ಕೆ ಬರುತ್ತಾನೆ.

ಈ ಸಂದರ್ಭದಲ್ಲಿ ಜನಮೇಜಯರಾಜನು ಬಲರಾಮನ ತೀರ್ಥಯಾತ್ರೆಯ ಬಗ್ಗೆ ಕೇಳಿದಾಗ ವೈಶಂಪಾಯನರು ಬಲರಾಮನ ವಿವಿಧತೀರ್ಥಯಾತ್ರೆಯನ್ನು ವಿವರಿಸುತ್ತಾರೆ. ಪ್ರಭಾಸಕ್ಷೇತ್ರದ ಮಹಿಮೆ, ಚಂದ್ರನಿಗೆ ದಕ್ಷನಶಾಪಪ್ರಾಪ್ತಿ ಮತ್ತು ಅದರ ವಿಮೋಚನೆಯನ್ನು ವಿವರಿಸಿ ಆಮೂಲಕ ಕ್ಷೇತ್ರದ ಮಹಿಮೆಯನ್ನು ವರ್ಣಿಸುತ್ತಾರೆ. ಉದಪಾನತೀರ್ಥ, ಸಪ್ತಸಾರಸ್ವತತೀರ್ಥ, ಔಷನಸತೀರ್ಥ, ಕಪಾಲಮೋಚನತೀರ್ಥ ಮೊದಲಾದ ತೀರ್ಥಗಳ ವೈಶಿಷ್ಟ್ಯವು ಹೇಳಲ್ಪಡುತ್ತದೆ. ಸರಸ್ವತಿಯ ಶಾಪವಿಮೋಚನೆ, ವಿಶ್ವಾಮಿತ್ರವಸಿಷ್ಠರ ಕಥಾಪ್ರಸಂಗ, ಸ್ಕಂದನ ಉತ್ಪತ್ತಿ, ದೇವಸೇನಾಧಿಪತಿಯಾಗಿ ಸ್ಕಂದನ ಪಟ್ಟಾಭಿಷೇಕ, ವರುಣನ ಪಟ್ಟಾಭಿಷೇಕ, ವೃದ್ಧಕನ್ಯಾಚರಿತ್ರೆ ಮೊದಲಾದವುಗಳನ್ನೂ ಜನಮೇಜಯರಾಜನಿಗೆ ತಿಳಿಸುತ್ತಾರೆ.

ನಾರದರ ಮಾತಿನಂದ ಕುರುಕ್ಷೇತ್ರಕ್ಕೆ ಬಂದ ಬಲರಾಮನು ಭೀಮದುರ್ಯೋಧನರ ಯುದ್ಧವನ್ನುತಡೆಯುವಂತೆ ಶ್ರೀಕೃಷ್ಣನಿಗೆ ಹೇಳುತ್ತಾನೆ. ಆದರೆ ಬಲರಾಮನು ತಡೆದರೂ ಭೀಮದುರ್ಯೋಧನರು ಯುದ್ಧವನ್ನು ನಿಲ್ಲಿಸುವುದಿಲ್ಲ. ಶ್ರೀಕೃಷ್ಣನೂ ಕೋಪಗೊಂಡ ಬಲರಾಮನಿಗೆ ಪರಿಸ್ಥಿತಿಯನ್ನು ವಿವರಿಸುತ್ತಾನೆ.

ಗದಾಯುದ್ಧಕುಶಲರಾದ ಭೀಮದುರ್ಯೋಧನರು ಮಂಡಲಾಕಾರವಾಗಿ ಕಾದಾಡುತ್ತಿದ್ದರು. ದುರ್ಯೋಧನನನ್ನು ಹೊಡೆದುರುಳಿಸುವ ಮುಹೂರ್ತಕ್ಕಾಗಿ ಭೀಮಸೇನನು ಶ್ರೀಕೃಷ್ಣನ ಅನುಜ್ಞೆಗಾಗಿ ಕಾಯುತ್ತಿದ್ದ. ಶ್ರೀಕೃಷ್ಣನ ಒಪ್ಪಿಗೆಯನ್ನು ಅರ್ಜುನನು ತೊಡೆತಟ್ಟುವ ಮೂಲಕ ತೋರಿಸುತ್ತಾನೆ. ಆಗ ದುರ್ಯೋಧನನು ಭೀಮನನ್ನು ವಂಚಿಸುವ ದೃಷ್ಟಿಯಿಂದ ತನ್ನ ತಲೆಯನ್ನು ಕೆಳಗೆಮಾಡಿ ಸೊಂಟವನ್ನು ಮೇಲೆ ಮಾಡಿ ಪ್ರಾಣಿಯಂತೆ ನಿಂತುಕೊಂಡು ಭೀಮನಮೇಲೆ ಆಕ್ರಮಣವನ್ನು

ಮಾಡಲು ಕಾಯುತ್ತಿದ್ದ. ತಕ್ಷಣ ಭೀಮನು ದುರ್ಯೋಧನನ ನಾಭಿಗೆ ಸಮಾನಾಂತರದಲ್ಲಿ ಬೆನ್ನನ ಬುಡಕ್ಕೆ ಗದೆಯಿಂದ ಹೊಡೆಯುತ್ತಾನೆ. ಆ ಹೊಡೆತದಿಂದಾಗಿ ದುರ್ಯೋಧನನ ಎರಡೂ ತೊಡೆಗಳೂಮುರಿದುಬಿದ್ದವು. ಹೀಗೆ ಗದಾಯುದ್ಧದಲ್ಲಿ ಭೀಮನು ನಾಭಿಯ ಕೆಳಗೂ ಹೊಡೆಯಲಿಲ್ಲ, ನಾಭಿಯ ಮೇಲ್ಭಾಗಕ್ಕೂ ಹೊಡೆಯಲಿಲ್ಲ, ಬದಲಾಗಿ ನಾಭಿಗೆ ಸಮಾನಾಂತರದಲ್ಲಿ ಹೊಡೆದು ಶತ್ರುವಿನ ತೊಡೆಯನ್ನು ಮುರಿಯುತ್ತಾನೆ. ಹೀಗೆ ಭೀಮನಿಗೆ ಬರಬಹುದಾಗಿದ್ದ ಅಪಕೀರ್ತಿಯೂ ಇಲ್ಲವಾಯಿತು. ಅವನ ಪ್ರತಿಜ್ಞೆಯೂ ನೆರವೇರಿತು. ಕಲಿಯ ಅವತಾರವಾದ ದುರ್ಯೋಧನನು ನೆಲಕ್ಕೆ ಬಿದ್ದಾಗ ರಕ್ತ ಮತ್ತು ದೂಳಿನ ಮಳೆಯು ಸುರಿಯಿತು. ಅನೇಕ ಅಪಶಕುನಗಳು ಕಾಣಿಸಿಕೊಂಡವು.

ಜೂಜಿನಲ್ಲಿ ಶ್ರೀಕೃಷ್ಣನನ್ನೇ ಪಣವನ್ನಾಗಿ ಇಡು ಎಂದು ದುರ್ಯೋಧನನು ಹೇಳಿದ್ದಕ್ಕೆ ಪ್ರತಿಯಾಗಿ ಭೀಮನು ಕೆಳಬಿದ್ದ ದುರ್ಯೋಧನನ ತಲೆಯನ್ನು ಕಾಲಿನಂದ ಮತ್ತೆ ತುಳಿಯುತ್ತಾನೆ.

ಋಷಭಂ ಮಾ ಸಮಾನಾನಾಮಿತಿ ಸೂಕ್ತಂ ದದರ್ಶ ಹ ।
ತೇಷಾಂ ಪುಣ್ಯಾನಿ ವಿದ್ಯಾಶ್ಚ ಸಮಾದಾಯೈವ ಸರ್ವಶಃ ॥
ತಾಂಶ್ಚಕಾರ ತಮೋಗಂತ್ಸ್ತಾಂಸ್ತಸ್ಯ ಮೂರ್ಧ್ನಿ ಪದಾऽಕ್ರಮನ್ ॥

– ಮ. ತಾ. ನಿ. 28/10

ದುಷ್ಟರಾದ ಧಾರ್ತರಾಷ್ಟ್ರರ ಪುಣ್ಯ ಮತ್ತು ಜ್ಞಾನಗಳನ್ನು ಕಸಿದು ಅವರನ್ನು ತಮಸ್ಸಿಗೆ ಕಳುಹಿಸಲಿಕ್ಕಾಗಿ ಭೀಮನು ದುರ್ಯೋಧನನ ತಲೆಯನ್ನು ತುಳಿದನು. ಋಷಭಸೂಕ್ತದ ಮಂತ್ರಗಳಿಂದ ಭಗವಂತನನ್ನು ಸ್ತುತಿಸುತ್ತಾ ಈ ಕಾರ್ಯವನ್ನು ಮಾಡುತ್ತಾನೆ ಭೀಮಸೇನ. ದುರ್ಯೋಧನನು ಮಾಡಿದ ಕೆಟ್ಟ ಕೆಲಸಗಳನ್ನೆಲ್ಲಾ ನೆನಪಿಸುತ್ತಾನೆ. ಇದೇ ತಲೆಯಿಂದ ಶ್ರೀಕೃಷ್ಣನನ್ನು ಬಂಧಿಸುವ ಆಲೋಚನೆಯನ್ನು ಮಾಡಿದ್ದಿ ಎಂದು ಹೇಳುತ್ತಾ ಮತ್ತೊಮ್ಮೆ ತಲೆಗೆ ಒದೆಯುತ್ತಾನೆ.

ಭೀಮನು ಅಧರ್ಮವನ್ನು ಮಾಡಿದನೇ?

ಈ ಆಕ್ಷೇಪವನ್ನು ಮಾಡುತ್ತಾ ಬಲರಾಮನು ತನ್ನ ಹಲಾಯುಧವನ್ನು ಎತ್ತಿಕೊಂಡು ಭೀಮನ ಮೇಲೆ ಆಕ್ರಮಣಮಾಡಲು ಬಂದಾಗಲೂ ಭೀಮನು ಅಚಲನಾಗಿ ನಿಂತುಕೊಂಡನು. ಆಗ ಶ್ರೀಕೃಷ್ಣನೇ ಬಲರಾಮನನ್ನು ತಡೆಯುತ್ತಾನೆ ಮತ್ತು ಭೀಮನು ಧರ್ಮವನ್ನೇ ಮಾಡಿದ್ದಾನೆ ಎಂದು ಯುಕ್ತಿಯುಕ್ತವಾಗಿ ಸಮರ್ಥಿಸುತ್ತಾನೆ.

ನ ಮಂಡಲೇऽಭಿಸಾರೇ ವಾ ನಾಪಸಾರೇ ಚ ನಾಭಿತಃ ।
ಅಧೋ ಹನ್ಯಾದ್ ವಂಚಯಂತಮಧೋ ಹತ್ವಾ ನ ದುಷ್ಯತಿ ॥

ಗದಾಯುದ್ಧದಲ್ಲಿ ವಿಧಿಬದ್ಧವಾದ ಮಂಡಲರಚನೆಯಲ್ಲಾಗಲೀ, ಮುಂದುಗಡೆಯಿಂದ ಯುದ್ಧಮಾಡವಾಗಲೀ ಅಥವಾ ದೂರಕ್ಕೆ ಹೋಗುತ್ತಿರು-ವಾಗಲೀ ಭೀಮನು ನಾಭಿಯಿಂದ ಕೆಳಗೆ ಹೊಡೆಯಬಾರದು. ಆದರೆ ವಂಚನೆಯನ್ನು ಮಾಡುವಾಗ ನಿಯಮವನ್ನು ಮೀರಿದರೂ ದೋಷವಾಗುವುದಿಲ್ಲ. ಪರಸ್ತ್ರೀಗೆ ತೊಡೆಯನ್ನು ತೋರಿಸಿದವನ ತೊಡೆಯನ್ನು ಮುರಿಯುವುದು ಧರ್ಮವೇ ಆಗಿದೆ. ಆ ಪ್ರತಿಜ್ಞೆಯನ್ನು ನೆರವೇರಿಸಿದ್ದಾನೆ ಭೀಮನೇನ. ಆದ್ದರಿಂದ ಭೀಮನು ಯಾವ ಅಧರ್ಮವನ್ನೂಮಾಡಲಿಲ್ಲ ಎಂದು ಶ್ರೀಕೃಷ್ಣನು ಸಮರ್ಥಿಸುತ್ತಾನೆ.

ದುರ್ಯೋಧನನ ಮೇಲೆ ದೇವತೆಗಳು ಪುಷ್ಪವೃಷ್ಟಿಮಾಡಿದರು!

ಪಾಂಡವರಲ್ಲಿ ಯಾವ ಅಧರ್ಮವೂ ಇಲ್ಲ ಎಂಬುದಾಗಿ ಶ್ರೀಕೃಷ್ಣನು ಮತ್ತೆ ಮತ್ತೆ ಹೇಳಿದಾಗ ಅದನ್ನು ಸಹಿಸಿಕೊಳ್ಳಲಾಗದೆ ನೆಲದಲ್ಲಿ ಬಿದ್ದ ದುರ್ಯೋಧನನು ಅಲ್ಲಿಂದಲೇ ಶ್ರೀಕೃಷ್ಣನನ್ನು ನಿಂದಿಸುತ್ತಾನೆ. ನೀನೇ ಪಾಂಡವರ ಮೂಲಕ ಪಾಪವನ್ನು ಮಾಡಿಸಿದವನು ಎಂದು ಹೀಯಾಳಿಸುತ್ತಾನೆ.

ಆಗ ಶ್ರೀಕೃಷ್ಣನು ದುರ್ಯೋಧನನು ಮಾಡಿದ ಅಧರ್ಮಗಳ ಸರಮಾಲೆಯನ್ನೇ ನೆನಪಿಸುತ್ತಾನೆ. ಪಾಂಡವರು ಸ್ವಭಾವದಿಂದಲೂ ಧಾರ್ಮಿಕರು ಹಾಗೂ ಗುಣಶಾಲಿಗಳು. ನೀನು ಸ್ವಭಾವದಿಂದಲೇ ಪಾಪಿ. ಧಾರ್ಮಿಕರನ್ನೂ ಪಾಪ ಮಾರ್ಗದಲ್ಲಿ ತೊಡಗಿಸಿ ಅದರ ಫಲವಾಗಿ ಇಂತಹ ಅಧೋಗತಿಯನ್ನು ಹೊಂದಿರುವಿ ಎನ್ನುತ್ತಾನೆ.

ಆಗ ದುರ್ಯೋಧನನು ತನ್ನ ಅಂತ್ಯವನ್ನು ತಾನೇ ಕೊಂಡಾಡಿಕೊಳ್ಳುತ್ತಾನೆ. ನನ್ನಂತಹ ಮನಸ್ಸನ್ನಾಗಲೀ ನನಗೆ ಬಂದಂತಹ ಮರಣವನ್ನಾಗಲೀ ಬೇರೆ ಎಲ್ಲಿಯೂ ನೋಡಲು ಸಾಧ್ಯವಿಲ್ಲ. ಯಾಗಯಜ್ಞಗಳನ್ನು ಮಾಡಿದೆ. ರಣರಂಗದಲ್ಲಿಯೇ ಮರಣವನ್ನು ಹೊಂದಿ ಉತ್ತಮ ವೀರಸ್ವರ್ಗವನ್ನೂ ಹೊಂದುವೆನು. ಪಾಪಿಗಳಾದ ಪಾಂಡವರು ಎಲ್ಲಾ ಯೋಧರನ್ನು ಕಳೆದುಕೊಂಡಿರುವ ಈ ಭೂಮಿಯನ್ನು ಅನುಭವಿಸಲಿ ಎಂದು ಹೇಳುತ್ತಾನೆ.

ದೇವೇಂದ್ರನು ಇಂತಹವರಿಗಾಗಿಯೇ ತಾತ್ಕಾಲಿಕವಾಗಿ ವೀರಸ್ವರ್ಗವನ್ನು ನಿರ್ಮಿಸುತ್ತಾನೆ. ಇದು ಸ್ವರ್ಗಕ್ಕಿಂತ ಕೆಳಗೆ ಹಾಗೂ ಅಂತರಿಕ್ಷಕ್ಕಿಂತ ಮೇಲೆ ಇರುತ್ತದೆ ಎಂದು ಲಕ್ಷಾಲಂಕಾರದಲ್ಲಿ ಶ್ರೀವಾದಿರಾಜರು ಹೇಳುತ್ತಾರೆ.

ಆಗ ದೇವತೆಗಳು ದೇವಲೋಕದಿಂದ ಹೂವಿನ ಮಳೆ ಸುರಿಯುತ್ತಾರೆ. ಆದರೆ ಇದು ಸಂತೋಷದ ಪುಷ್ಪವೃಷ್ಟಿಯಲ್ಲ.

ಇತ್ಯುಕ್ತವತ್ಯೇವ ನೃಪೇ ಸುರೇಶೈಃ ಪ್ರಸೂನವೃಷ್ಟಿರ್ವಿಹಿತಾ ಪಪಾತ ।
ತಾಮೇವ ಬುದ್ಧಿಂ ಧೃತರಾಷ್ಟ್ರಸೂನೋಃ ಕೃತ್ವಾ ದೃಢಾಂ ಪಾತಯಿತುಂ ತಮೋऽಂಧೇ ॥

– ಮ.ತಾ.ನಿ.

ದುರ್ಯೋಧನನಿಗೆ ಈ ಪಾಪ ಬುದ್ಧಿಯು ದೃಢವಾಗಿ, ಅವನನ್ನು ಅಂಧಂತಮಸ್ಸಿನಲ್ಲಿ ಬೀಳಿಸುವುದಕ್ಕಾಗಿ ದೇವತೆಗಳು ಈ ರೀತಿಯಲ್ಲಿ ಮಾಡುತ್ತಾರೆ.

ಲಕ್ಷಾಲಂಕಾರದಲ್ಲಿ ಶ್ರೀವಾದಿರಾಜರು ಹೀಗೆ ಹೇಳುತ್ತಾರೆ – ದೇವತೆಗಳ ಪುಷ್ಪವೃಷ್ಟಿಯು ಪ್ರೀತಿಯಿಂದ ಆಗಿದ್ದಲ್ಲ, ಏಕೆಂದರೆ ದುರ್ಯೋಧನನು ತೊಡೆಮುರಿದು ಬಿದ್ದಾಗ ಇದೇ ದೇವತೆಗಳು ರಕ್ತದ ಹಾಗೂ ದೂಳಿನ ಮಳೆಯನ್ನು ಸುರಿಸಿದ್ದರು. ಇದೇ ದೇವತೆಗಳು ಹಿಂದೆ ಇಂತಹ ದುರ್ಯೋಧನ ಮೊದಲಾದ ದುಷ್ಟರ ತೊಂದರೆಯನ್ನು ಪರಿಹಾರಮಾಡಲಿಕ್ಕಾಗಿಯೇ ಶ್ವೇತದ್ವೀಪಕ್ಕೆ ಹೋಗಿ ಶ್ರೀಮನ್ನಾರಾಯಣನಲ್ಲಿ ಪ್ರಾರ್ಥಿಸಿದ್ದರು. ದುರ್ಯೋಧನನ ಮೇಲೆ ಅಂತಹ ಪ್ರಬಲವಾದ ದ್ವೇಷವಿರಿಸಿಕೊಂಡಿದ್ದ ದೇವತೆಗಳಿಗೆ ಅವನ ಮೇಲೆ ಪ್ರೀತಿಯುಂಟಾಗಲು ಖಂಡಿತಾ ಸಾಧ್ಯವಿಲ್ಲ. ಈ ಪುಷ್ಪವೃಷ್ಟಿಯು ಅವನ ದುಷ್ಟಬುದ್ಧಿಯ ಸ್ಥಿರತೆಗಾಗಿಯೇ ನಡೆದಿತ್ತು.

ಮಹಾಭಾರತದ ಅಧ್ಯಯನದಲ್ಲಿ ಶ್ರೀಮದಾಚಾರ್ಯರ ತಾತ್ಪರ್ಯನಿರ್ಣಯ ಮತ್ತು ಶ್ರೀವಾದಿರಾಜರ ಲಕ್ಷಾಲಂಕಾರಗಳ ಪಾತ್ರ –

ವ್ಯಾಸರು ಕೊಟ್ಟ ಮೂಲಮಹಾಭಾರತವನ್ನು ಹಾಗೆಯೇ ಅರ್ಥೈಸಲು ಹೊರಟರೆ ಅರ್ಥಕ್ಕಿಂತ ಅನರ್ಥವಾಗುವ ಸಂಭವವೇ ಹೆಚ್ಚು. ಸತ್ಯಧರ್ಮನ್ಯಾಯಗಳನ್ನು ಪ್ರತಿನಿಧಿಸುವ ಪಾಂಡವರೇ ಎಷ್ಟೋ ಸಂದರ್ಭದಲ್ಲಿ ಎಡವಿದಂತೆ ಕಾಣಿಸುತ್ತದೆ. ಧರ್ಮಸಂಸ್ಥಾನಗೋಸ್ಕರನೇ ಅವತರಿಸಿದ ಶ್ರೀಕೃಷ್ಣನೇ ಅಧರ್ಮವನ್ನು ಬೋಧಿಸಿದಂತೆ ಭಾಸಬಾಗುತ್ತದೆ. ಇದಕ್ಕೆಲ್ಲಾ ಸಮರ್ಥ ಉತ್ತರವನ್ನು ಕೊಟ್ಟವರು ಶ್ರೀಮಧ್ವಾಚಾರ್ಯರು. ದುರ್ಯೋಧನನ ಊರುಭಂಗಸಂದರ್ಭದಲ್ಲಿ ಕೃಷ್ಣಭಕ್ತರಿಗೂ ಇರುಸುಮುರುಸು ಆಗುವ ಸಂದರ್ಭವು ಮೂಲಮಹಾಭಾರತವನ್ನು ಓದಿದಾಗ ಉಂಟಾಗುತ್ತದೆ. ಭೀಮನು ಗದಾಯುದ್ಧದ ನಿಯಮವನ್ನು ಮೀರಿ ದುರ್ಯೋಧಾನನ ತೊಡೆಗಳನ್ನು ಮುರಿದ ಎಂಬ ಅಪವಾದ ಭೀಮನಿಗೆ

ಅಂಟಿಕೊಳ್ಳುವ ಅವಕಾಶ ಸೃಷ್ಟಿಯಾಗುತ್ತದೆ. ಶ್ರೀಮಧ್ವಾಚಾರ್ಯರು ಪಾಂಡವರು ಯಾವಸಂದರ್ಭದಲ್ಲಿಯೂ ಧರ್ಮವನ್ನು ಮೀರಿ ನಡೆದಿಲ್ಲ ಎಂಬುದನ್ನು ಯುಕ್ತಿ-ಪ್ರಮಾಣಗಳಿಂದ ಸಮರ್ಥಿಸಿ ತೋರಿಸಿದ್ದಾರೆ. ದುಷ್ಟ ದುರ್ಯೋಧನನು ಶ್ರೀಕೃಷ್ಣನನ್ನು ಹಾಗೂ ಪಾಂಡವರನ್ನು ನಿಂದಿಸಿದಾಗ ಆಕಾಶದಿಂದ ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದರು ಎಂಬ ಮಹಾಭಾರತದ ಕಥಾನಕದ ಒಳಾರ್ಥವನ್ನು ಆಚಾರ್ಯರು ವಿಶದಪಡಿಸಿದ್ದಾರೆ.

ಶ್ರೀವಾದಿರಾಜರ ಲಕ್ಷಾಲಂಕಾರವು ಮಹಾಭಾರತದ ಪಾಠರಕ್ಷಣೆಯಲ್ಲಿ ಮಹತ್ತ್ವದ ಕಾರ್ಯವನ್ನು ವಹಿಸುತ್ತದೆ. ಅಪ್ರಸಿದ್ಧವಾದ ಪದಗಳು ಬಂದಾಗ ಅರ್ಥವಾಗದೆ ಪಾಠವನ್ನೇ ಬದಲಿಸುವ ಸಂದರ್ಭವು ಸಾಮಾನ್ಯವಾಗಿ ಕಂಡುಬರುತ್ತದೆ. ಆದರೆ ಶ್ರೀವಾದಿರಾಜರು ಅಂತಹ ವಿಶಿಷ್ಟಪದಗಳಿಗೂ ವಿದ್ವಜ್ಜನಸಮ್ಮತವಾದ ಯುಕ್ತಿಯುಕ್ತವಾದ ಅರ್ಥವನ್ನು ತೋರಿಸಿಕೊಟ್ಟಿದ್ದಾರೆ.

ವಿಧ್ವಸ್ತಕವಚಾಃಸರ್ವೇ ಕಾಂದಿಶೀಕಾ ವಿಚೇತಸಃ। ಇದು ಶಲ್ಯಪರ್ವದ ಆರಂಭದಲ್ಲಿಯ ಒಂದು ಶ್ಲೋಕ. ಇಲ್ಲಿ ಕಾಂದಿಶೀಕಾಃ ಎಂಬ ಪದಕ್ಕೆ ರಣೇ ಶಸ್ತ್ರಾದಿನಾ ಕೃತವರ್ಣಾಃ ಎಂಬ ವ್ಯಾಖ್ಯಾನವನ್ನು ಶ್ರೀವಾದಿರಾಜರು ಮಾಡಿ ಕಾಂದಿಶೀಕೋ ರಣೇ ಕ್ಷತಃ ಇತ್ಯಮರಃ ಎಂಬ ಕೋಶವನ್ನೂ ಉಲ್ಲೇಖಮಾಡುತ್ತಾರೆ.

ಇನ್ನೊಂದೆಡೆ

ಭವನಾದ್ ಭವನಂ ರಾಜನ್ ಪ್ರಯಾತುಃ ಪೃಥಿವೀಪತೇ ।
ದೇವಾಲಯಪ್ರವೇಶೇ ಚ ಪಂಥಾಃ ಯಸ್ಯ ಹಿರಣ್ಮಯಃ ॥ ಶಲ್ಯಪರ್ವ 29-54

ಸ್ವಗೃಹಾಂತರ್ವರ್ತಿಭವನೇಷು ಭವನಾದ್ ಭವನಂ ಪ್ರಯಾತುಂ ಸ್ವಗೃಹಾಂತರ್ವರ್ತಿದೇವಮಂದಿರಪ್ರವೇಶಾಯ ಇತ್ಯರ್ಥಃ ।

ತನ್ನ ಅರಮನೆಯ ಒಳಗೆ ದೇವಮಂದಿರಕ್ಕೆ ಹೋಗುವ ದಾರಿಯನ್ನು ಬಂಗಾರದಿಂದ ಅಲಂಕರಿಸಿದ್ದ ಎಂದು ಅರ್ಥ.

ಹೀಗೆ ಈ ಎರಡೂ ವ್ಯಾಖ್ಯಾನಗಳು ಮಹಾಭಾರತದ ಅರ್ಥಶುದ್ಧಿಗೆ ಮತ್ತು ಪಾಠಶುದ್ಧಿಗೆ ಅತ್ಯಂತ ಆವಶ್ಯಕವಾದವುಗಳು ಎಂಬುದನ್ನು ಗಮನಿಸಿಬೇಕು.

ಕೃತಜ್ಞತೆ - ಸಮರ್ಪಣೆ

ಉಡುಪಿ ಸರ್ವಜ್ಞಪೀಠಾಧಿಷ್ಠಿತರಾದ ಪಲಿಮಾರು ಮಠದ ಪರಮಪೂಜ್ಯ **ಶ್ರೀ ಶ್ರೀ ವಿದ್ಯಾಧೀಶತೀರ್ಥರ** ನೇತೃತ್ವದಲ್ಲಿ ನಡೆಯುತ್ತಿರುವ ಮಹಾಭಾರತ

ಕನ್ನಡೀಕರಣಯೋಜನೆಯು ವಿದ್ವಾಂಸರಿಗೂ ಹಾಗೂ ಸಾಮಾನ್ಯಜನರಿಗೂ ಬಹಳ ಉಪಕಾರಿಯಾಗಿದೆ. ಮುದ್ರಿತಪುಸ್ತಕಗಳನ್ನು ಕೊಂಡು ಓದುವ ಹವ್ಯಾಸವು ಕಮ್ಮಿಯಾಗಿರುವ ಈಗಿನ ಕಾಲಘಟ್ಟದಲ್ಲಿಯೂ ಇಂತಹ ಬೃಹತ್ ಯೋಜನೆಯನ್ನು ಕೈಗೆತ್ತಿಕೊಂಡಿರುವುದು ನಿಜವಾಗಿಯೂ ಹರಿಗುರುಗಳು ಮೆಚ್ಚುವ ಕಾರ್ಯವಾಗಿದ್ದು ಶ್ಲಾಘನೀಯವಾಗಿದೆ. ಮಹಾಭಾರತದ ಅನೇಕ ವ್ಯಾಖ್ಯಾನಗಳು ಉಪಲಬ್ಧವಾಗಿದ್ದರೂ ಶುದ್ಧಪಾಠದ ಹಾಗೂ ಪರಿಶುದ್ಧಾರ್ಥವುಳ್ಳ ಸರಳಾನುವಾದಸಹಿತವಾದ ಪ್ರಕಾಶನ ಇದಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಶ್ರೀಗಳ ಮನದ ಇಂಗಿತವನ್ನು ಚೆನ್ನಾಗಿ ಅರಿತಿರುವ ವಿದ್ವಾಂಸರಾದ ಡಾ॥ ಬೆ.ನಾ.ವಿಜಯೀಂದ್ರ ಆಚಾರ್ಯರು ಈ ಕಾರ್ಯವನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಅಲ್ಪಜ್ಞನಾದ ನನ್ನ ಕೈಯಿಂದಲೂ ಈ ಮಹತ್ಕಾರವನ್ನು ಮಾಡಿಸಿದ ಶ್ರೀಪಾದರ ಪ್ರೇರಣೆ ಕರುಣೆಗೆ ನಾನು ಚಿರಋಣಿ. ಶ್ರೀಪಾದರಿಂದ ಸ್ಥಾಪಿಸಲ್ಪಟ್ಟ ತತ್ತ್ವಸಂಶೋಧನ ಸಂಸತ್ ಇದನ್ನು ಪ್ರಕಾಶನಗೊಳಿಸುತ್ತಿದೆ. ಈ ಸಂಸ್ಥೆಯು ಸಜ್ಜನರ ಆಧ್ಯಾತ್ಮಿಕ ಸಾಧನೆಗೆ ಅನುಕೂಲಕರವಾದ ಇನ್ನೂ ಅನೇಕ ಗ್ರಂಥಗಳನ್ನು ಪ್ರಕಾಶಿಸಿ ವಾಙ್ಮಯಪ್ರಪಂಚವನ್ನು ಶ್ರೀಮಂತಗೊಳಿಸಿದೆ. ಮಹಾಭಾರತದ ಆಂಗ್ಲ ಆವೃತ್ತಿ ಮತ್ತು ಸಂಸ್ಕೃತ ಆವೃತ್ತಿಗಳೂ ಸದ್ಯದಲ್ಲಿಯೇ ಉಪಲಬ್ಧವಾಗಲಿದ್ದು ಜಿಜ್ಞಾಸುಗಳು ಈ ಎಲ್ಲಾ ಕಾರ್ಯಗಳ ಸದುಪಯೋಗವನ್ನು ಪಡುವಂತಾಗಲಿ ಎಂದು ಆಶಿಸೋಣ ಹಾಗೂ ಹರಿಗುರುಗಳು ನಮಗೆಲ್ಲರಿಗೂ ಸಜ್ಜ್ಞಾನವನ್ನು ಕೊಡಲಿ ಎಂದು ಪ್ರಾರ್ಥಿಸೋಣ.

ಕಡಂದಲೆ ಗಣಪತಿ ಭಟ್
ಉಡುಪಿ

★ ★ ★ ★ ★

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೨೨

ಶಲ್ಯಪರ್ವ

ಪುಟ ಸಂ.

1. ಶಲ್ಯ ಮತ್ತು ದುರ್ಯೋಧನರ ವಧೆಯನ್ನು ಸಂಜಯನ ಮಾತಿನಿಂದ ತಿಳಿದ ಧೃತರಾಷ್ಟ್ರನು ಮೂರ್ಛೆ ಹೊಂದಿದ್ದು. ಎಚ್ಚರಗೊಂಡ ಧೃತರಾಷ್ಟ್ರನನ್ನು ವಿದುರನು ಸಮಾಧಾನಪಡಿಸಿದ್ದು 1

2. ಧೃತರಾಷ್ಟ್ರನು ಅಳುತ್ತಾ ಸಂಜಯನಲ್ಲಿ ಯುದ್ಧವೃತ್ತಾಂತವನ್ನು ಕೇಳುವುದು 14

3. ಸಂಜಯನು ಧೃತರಾಷ್ಟ್ರನಿಗೆ ಭೀಮಾದಿಗಳ ಯುದ್ಧವನ್ನು ವರ್ಣಿಸುವುದು 27

4. ಕರ್ಣನ ಸಾವಿನಿಂದ ದುಃಖಿತನಾದ ದುರ್ಯೋಧನನಿಗೆ ಕೃಪರು ತಮ್ಮ ಮತ್ತು ಪರರ ದೌರ್ಬಲ್ಯ-ಪ್ರಾಬಲ್ಯಗಳನ್ನು ತಿಳಿಸಿ ಸಂಧಾನಕ್ಕೆ ಪ್ರೇರೇಪಿಸುವುದು 39

5. ದುರ್ಯೋಧನನು ಸಕಾರಣವಾಗಿ ಸಂಧಿಗೆ ಒಪ್ಪದಿರುವುದು 49

6. ದುರ್ಯೋಧನನು ಸೇನಾಧಿಪತ್ಯದ ಬಗ್ಗೆ ವಿಚಾರ ಮಾಡಿದಾಗ ಅಶ್ವತ್ಥಾಮನು ಶಲ್ಯನನ್ನು ಸೂಚಿಸಿದನು. ಆ ಪ್ರಕಾರ ದುರ್ಯೋಧನನು ಶಲ್ಯನನ್ನು ಸೇನಾಪತಿಯಾಗಲು ಪ್ರಾರ್ಥಿಸಿದನು 60

7. ದುರ್ಯೋಧನನು ಶಲ್ಯನನ್ನು ಸೇನಾಪತಿಯನ್ನಾಗಿ ನೇಮಿಸುವುದು. ಶಲ್ಯನನ್ನು ವಧಿಸುವ ಬಗ್ಗೆ ಶ್ರೀಕೃಷ್ಣನು ಧರ್ಮರಾಜನಿಗೆ ಹೇಳುವುದು 67

8. ಎರಡೂ ಕಡೆಯ ಸೈನ್ಯಗಳಿಂದ ವ್ಯೂಹರಚನೆ ಹಾಗೂ ಯುದ್ಧಕ್ಕಾಗಿ ನಿರ್ಗಮನ 83

9. ಹದಿನೆಂಟನೆಯ ದಿನದ ಯುದ್ಧದ ಆರಂಭ. ಸಂಕುಲ ಯುದ್ಧ 93

10. ನಕುಲನು ಕರ್ಣನ ಮೂರು ಮಕ್ಕಳನ್ನೂ ವಧಿಸಿದ್ದು 103

11. ಶಲ್ಯನ ಪರಾಕ್ರಮ. ಕೌರವ-ಪಾಂಡವರ ದ್ವಂದ್ವಯುದ್ಧ. ಭೀಮಸೇನನು ಶಲ್ಯನನ್ನು ಸೋಲಿಸಿದ್ದು 118

12. ಶಲ್ಯ ಮತ್ತು ಭೀಮರಲ್ಲಿ ಗದಾಯುದ್ಧ 129

13. ಶಲ್ಯನ ಪರಾಕ್ರಮದ ವರ್ಣನೆ 141

14. ಅರ್ಜುನ ಮತ್ತು ಅಶ್ವತ್ಥಾಮರ ಯುದ್ಧ. ಪಾಂಚಾಲವೀರನಾದ ಸುರಥನ ವಧೆ 151

15. ಸಂಕುಲಯುದ್ಧ 161

16. ಶಲ್ಯ ಮತ್ತು ಯುಧಿಷ್ಠಿರನ ಮಧ್ಯದ ಯುದ್ಧ 169

17. ಯುಧಿಷ್ಠಿರ-ಶಲ್ಯರ ಯುದ್ಧ, ಯುಧಿಷ್ಠಿರನಿಂದ ಶಲ್ಯನ ವಧೆ 183

18. ಸಂಕುಲಯುದ್ಧ 208

19. ಸಂಕುಲಯುದ್ಧ 217

20. ಸಾತ್ಯಕಿಯಿಂದ ಸಾಲ್ವನ ವಧೆ 232

21. ಸಾತ್ಯಕಿಯಿಂದ ಕೃತವರ್ಮನ ಪರಾಜಯ 240

22. ದುರ್ಯೋಧನನ ಪರಾಕ್ರಮ.
ಎರಡೂ ಕಡೆಯ ಸೇನೆಯ ಘೋರವಾದ ಯುದ್ಧ. 248

23. ಕೌರವ ಸೇನೆಯ ಮಹಾರಥರ ವಧೆ. ಎರಡೂ ಸೇನೆಗಳ ಮಧ್ಯೆ ಎಲ್ಲೆ
ಮೀರಿದ ಯುದ್ಧ. ಶಕುನಿಯ ಯುದ್ಧ ಮತ್ತು ಅವನ ಪರಾಜಯ 258

24. ಶ್ರೀಕೃಷ್ಣನ ಮುಂದೆ ಅರ್ಜುನನು ದುರ್ಯೋಧನನ ದುರಾಗ್ರಹವನ್ನು
ನಿಂದಿಸುವುದು. ರಥಸೇನೆಯ ಸಂಹಾರ. 277

25. ಧೃಷ್ಟದ್ಯುಮ್ನನಿಂದ ಸೋತ ದುರ್ಯೋಧನನ ಪಲಾಯನ.
ಅಶ್ವತ್ಥಾಮಾದಿಗಳಿಂದ ಅವನ ಹುಡುಕಾಟ 290

26. ಭೀಮನು ಉಳಿದ ದುರ್ಯೋಧನ ಸಹೋದರರನ್ನು ಕೊಲ್ಲುವುದು 303

27. ಕೃಷ್ಣಾರ್ಜುನರ ಸಂವಾದ, ಸಂಕುಲಯುದ್ಧ, ಭೀಮನಿಂದ
ಧೃತರಾಷ್ಟ್ರಪುತ್ರ ಸುದರ್ಶನನ ವಧೆ 311

28. ಸಹದೇವನು ಶಕುನಿ ಮತ್ತು ಉಲೂಕನನ್ನು ವಧಿಸುವುದು 323

29. ಉಳಿದ ಕೌರವಸೇನೆಯ ನಾಶ. ಸಂಜಯನನ್ನು ಬಂಧಿಸದೆ ಬಿಟ್ಟಿದ್ದು.
ದುರ್ಯೋಧನನು ಸರೋವರವನ್ನು ಪ್ರವೇಶಿಸಿದ್ದು. ಯುಯುತ್ಸುವು
ಅರಮನೆಯ ಸ್ತ್ರೀಯರನ್ನು ಕರೆದುಕೊಂಡು ಹಸ್ತಿನಾಪುರಕ್ಕೆ ಹೋಗಿದ್ದು 339

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೨೨

ಗದಾಪರ್ವ

ಪುಟ ಸಂ.

1. ಕೃಪ, ಕೃತವರ್ಮ ಮತ್ತು ಅಶ್ವತ್ಥಾಮರು ದ್ವೈಪಾಯನ ಸರೋವರದ ಹತ್ತಿರ ದುರ್ಯೋಧನನ ಜೊತೆಗೆ ಮಾತನಾಡುತ್ತಿರುವಾಗ ಯದೃಚ್ಛಯಾ ಅಲ್ಲಿಗೆ ಬೇಟೆಗಾರರು ಬಂದುದು. ಬೇಟೆಗಾರರ ಮಾತಿನಂತೆ ಪರಿವಾರ ಸಮೇತರಾದ ಪಾಂಡವರು ಸರೋವರದ ಹತ್ತಿರ ಬರುವುದು, ಅವರನ್ನು ನೋಡಿ ದುರ್ಯೋಧನನ ಒಪ್ಪಿಗೆಯಿಂದ ಕೃಪಾದಿಗಳು ದೂರ ಹೋಗಿ ಆಲದ ಮರದ ಕೆಳಗೆ ಕುಳಿತುಕೊಂಡಿದ್ದು. ದುರ್ಯೋಧನನು ಪುನಃ ಜಲಸ್ತಂಭನ ಮಾಡಿ ಸರೋವರವನ್ನು ಪ್ರವೇಶಿಸಿದ್ದು. 363

2. ಯುಧಿಷ್ಠಿರನು ಸರೋವರದಲ್ಲಿ ಅಡಗಿದ್ದ ದುರ್ಯೋಧನನಿಗೆ ನಿಷ್ಠುರಮಾತುಗಳಿಂದ ಬೈಯುವುದು. ಯುಧಿಷ್ಠಿರ-ದುರ್ಯೋಧನರ ನಡುವೆ ವಿವಾದ. ಯುಧಿಷ್ಠಿರನ ಕಟುವಾದ ಮಾತುಗಳಿಂದ ಕುಪಿತನಾದ ದುರ್ಯೋಧನನು ಗದೆಯನ್ನು ಹಿಡಿದುಕೊಂಡು ಸರೋವರದಿಂದ ಹೊರಬಂದುದು. ಯುಧಿಷ್ಠಿರ-ದುರ್ಯೋಧನರ ಮಧ್ಯೆ ಪುನಃ ವಿವಾದ. 378

3. ಯುಧಿಷ್ಠಿರನ ಮಾತಿನಂತೆ ದುರ್ಯೋಧನನು ಸರೋವರದಿಂದ ಹೊರ ಬಂದು ಯಾರಾದರೊಬ್ಬ ಪಾಂಡವನ ಜೊತೆಗೆ ಯುದ್ಧಕ್ಕೆ ಸಿದ್ಧನಾಗುವುದು. 394

4. ತಮ್ಮಲ್ಲಿ ಯಾರನ್ನಾದರೊಬ್ಬರನ್ನು ಸೋಲಿಸಿದರೂ ರಾಜ್ಯವನ್ನು ಪಡೆಯುವಿ ಎಂಬ ಯುಧಿಷ್ಠಿರನ ಬಗ್ಗೆ ಶ್ರೀಕೃಷ್ಣನು ಕೋಪಗೊಂಡಿದ್ದು, ಭೀಮನೂ ಕೂಡ ದುರ್ಯೋಧನನನ್ನು ಸೋಲಿಸುವ ವಿಚಾರದಲ್ಲಿಯೂ ಶ್ರೀಕೃಷ್ಣನು ತನ್ನ ಸಂಶಯವನ್ನು ವ್ಯಕ್ತಪಡಿಸಿದ್ದು. ಕೃಷ್ಣನನ್ನು ಕುರಿತು ತನ್ನ ಸಾಮರ್ಥ್ಯವನ್ನು ಹೇಳಿಕೊಂಡು, ದುರ್ಯೋಧನನನ್ನು ಸಾಯಿಸುವುದು ಸುಲಭ ಎಂದು ಭೀಮನು ಹೇಳಿದಾಗ ಕೃಷ್ಣ ಮೊದಲಾದವರಿಂದ ಭೀಮನ ಪ್ರಶಂಸೆ. ಭೀಮ ಮತ್ತು ದುರ್ಯೋಧನರ ಮಧ್ಯೆ ವೀರೋಚಿತ ಮಾತುಗಳ ಮೂಲಕ ಯುದ್ಧಕ್ಕೆ ತಯಾರಿ. 409

5. ಬಲರಾಮನ ಆಗಮನ. ಅವನಿಗೆ ಸ್ವಾಗತ-ಉಪಚಾರ. ಭೀಮ ಮತ್ತು ದುರ್ಯೋಧನರ ಯುದ್ಧ ಪ್ರಾರಂಭ. 421

6. ಬಲರಾಮನು ಮಾಡಿದ ತೀರ್ಥಯಾತ್ರೆಯ ಬಗ್ಗೆ ವೈಶಂಪಾಯನರಲ್ಲಿ ಜನಮೇಜಯನ ಪ್ರಶ್ನೆ. ವೈಶಂಪಾಯನರು ಅದನ್ನು ಹೇಳುತ್ತಾ ಪ್ರಭಾಸತೀರ್ಥಕ್ಕೆ ಆ ಹೆಸರು ಬರಲು ಕಾರಣವೇನೆಂಬುದನ್ನು ತಿಳಿಸುವುದು. ಚಂದ್ರನು ತನ್ನ ಪತ್ನಿಯರಾದ ಅಶ್ವಿನೀ ಮೊದಲಾದವರನ್ನು ಉಪೇಕ್ಷಿಸಿ ರೋಹಿಣಿಯೊಬ್ಬಳಲ್ಲಿಯೇ ಆಸಕ್ತನಾದಾಗ ಕೋಪಗೊಂಡ ದಕ್ಷನು ಚಂದ್ರನ ಮೇಲೆ ಕ್ಷಯರೋಗವನ್ನು ಹಾಕಿದ್ದು. 426

7. ದೇವತೆಗಳಿಂದ ಸಂತುಷ್ಟನಾದ ದಕ್ಷನ ಆದೇಶದಂತೆ ಪ್ರಭಾಸತೀರ್ಥದಲ್ಲಿ ಅವಗಾಹನ ಮಾಡಿ, ಕ್ಷಯವನ್ನು ಪರಿಹರಿಸಿಕೊಂಡಿದ್ದು. ಬಲರಾಮನು ಆ ತೀರ್ಥದಲ್ಲಿ ಮಜ್ಜನಾದಿಗಳನ್ನು ಮಾಡಿದ್ದು. 440

8. ಏಕತ, ದ್ವಿತ, ತ್ರಿತನಾಮಕ ಬ್ರಾಹ್ಮಣರ ಕಥೆ 447

9. ಬಲರಾಮನು ಸರಸ್ವತೀತೀರದಲ್ಲಿರುವ ಅನೇಕ ತೀರ್ಥಕ್ಷೇತ್ರಗಳಿಗೆ ಯಾತ್ರೆ ಮಾಡಿದ್ದರ ವರ್ಣನೆ. ಆ ತೀರ್ಥಗಳ ಮಹಿಮೆಗಳ ವರ್ಣನೆ 458

10. ಸರಸ್ವತಿಯು ಏಳು ಭಾಗವಾಗಿ ವಿಭಾಗಗೊಂಡಿರುವುದಕ್ಕೆ ಕಾರಣ ನಿರೂಪಣೆ. ಏಳೂ ಭಾಗಗಳೂ ಒಂದು ತೀರ್ಥದಲ್ಲಿ ಒಟ್ಟು ಸೇರುವುದರಿಂದ ಆ ತೀರ್ಥಕ್ಕೆ ಸಪ್ತಸಾರಸ್ವತ ಎಂಬ ಹೆಸರು ಬಂದಿರುವುದು. ಮಂಕಣಕಮುನಿಯ ಚರಿತ್ರೆಯ ಪ್ರತಿಪಾದನೆ. 471

11. ಬಲರಾಮನು ಔಶನಸತೀರ್ಥಕ್ಕೆ ಹೋದುದು. ಆ ತೀರ್ಥಕ್ಕೆ ಕಪಾಲಮೋಚನತೀರ್ಥವೆಂಬ ಹೆಸರು ಬರಲು ಕಾರಣದ ನಿರೂಪಣೆ. ಬಲರಾಮನು ಉಶಂಗ್ವಾಶ್ರಮಕ್ಕೆ ಹೋದುದು. ಉಶಂಗುಚರಿತ್ರೆಯ ನಿರೂಪಣೆ. ಬಲರಾಮನು ಪೃಥೂದಕತೀರ್ಥದಲ್ಲಿ ಸ್ನಾನ-ದಾನಾದಿಗಳನ್ನು ಮಾಡಿದುದು. 484

12. ಆರ್ಷ್ಟಿಷೇಣನು ಪೃಥೂದಕದಲ್ಲಿ ತಪಸ್ಸನ್ನು ಮಾಡಿ ಎಲ್ಲಾ ವೇದಗಳ ಅಧ್ಯಯನವನ್ನು ಮಾಡಿದುದು. ವಿಶ್ವಾಮಿತ್ರಾದಿಗಳು ಆಯಾಯ ತೀರ್ಥಗಳಲ್ಲಿ ತಪಸ್ಸನ್ನು ಮಾಡಿ ಬ್ರಾಹ್ಮಣತ್ವವನ್ನು ಪಡೆದದ್ದು. ಬಲರಾಮನು ಅಲ್ಲಿ ಸ್ನಾನಾದಿಗಳನ್ನು ಮಾಡಿ ಬದರಿಕಾಶ್ರಮಕ್ಕೆ ಹೋದದ್ದು. 492

13. ಬಲರಾಮನು ಅವಾಕೀರ್ಣಕ್ಷೇತ್ರಕ್ಕೆ ಹೋದದ್ದು. ಬಕಮುನಿಯ ಚರಿತ್ರೆ. ಅನಂತರ ಬಲರಾಮನು ವಸಿಷ್ಠಾಪವಾಹತೀರ್ಥಕ್ಕೆ ಹೋದುದು. 499

14. ವಸಿಷ್ಠಾಪವಾಹತೀರ್ಥಕ್ಕೆ ಆ ಹೆಸರು ಬಂದ ರೀತಿಯ ವರ್ಣನೆ. 507

15. ವಿಶ್ವಾಮಿತ್ರನ ಶಾಪದಿಂದ ರಕ್ತಸಿಕ್ತಳಾದ ಸರಸ್ವತಿಯನ್ನು ಋಷಿಗಳು ತಮ್ಮ ತಪಸ್ಸಿನ ಪ್ರಭಾವದಿಂದ ಶುದ್ಧಿಮಾಡಿದ್ದು. ಸರಸ್ವತಿ ಮತ್ತು ಅರುಣರ ಸಂಗಮಸ್ಥಳದಲ್ಲಿ ಯಾಗಮಾಡಿ ಇಂದ್ರನು ತನ್ನ ಬ್ರಹ್ಮಹತ್ಯಾ ದೋಷವನ್ನು ಪರಿಹರಿಸಿಕೊಂಡಿದ್ದು. ಬಲರಾಮನು ಅಲ್ಲಿ ಸ್ನಾನಾದಿಗಳನ್ನು ಮಾಡಿ ಅಲ್ಲಿಂದ ಸೋಮತೀರ್ಥಕ್ಕೆ ಹೋದದ್ದು. 516

16. ಕುಮಾರನ ಉತ್ಪತ್ತಿಯ ವರ್ಣನೆ 527

17. ಸ್ಕಂದನ ಪಟ್ಟಾಭಿಷೇಕ. ಅವನ ಪರಿವಾರ ಗಣಗಳ ಸ್ವರೂಪ ಮತ್ತು ಹೆಸರುಗಳ ವರ್ಣನೆ. 537

18. ಕುಮಾರಮಾತೃಗಣದ ನಾಮಕೀರ್ತನವು, ಕುಮಾರನು ತಾರಕಾಸುರನನ್ನು ಸಂಹರಿಸಿದ್ದು ಮತ್ತು ಕ್ರೌಂಚಪರ್ವತವನ್ನು ಪುಡಿ ಮಾಡಿದ್ದು. 558

★ ★ ★ ★ ★

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಶಲ್ಯಪರ್ವ

೧. ಶಲ್ಯಪರ್ವ

ಒಂದನೆಯ ಅಧ್ಯಾಯ

ಶಲ್ಯ ಮತ್ತು ದುರ್ಯೋಧನರ ವಧೆಯನ್ನು ಸಂಜಯನ ಮಾತಿನಿಂದ
ತಿಳಿದ ಧೃತರಾಷ್ಟ್ರನು ಮೂರ್ಛೆ ಹೊಂದಿದ್ದು. ಎಚ್ಚರಗೊಂಡ
ಧೃತರಾಷ್ಟ್ರನನ್ನು ವಿದುರನು ಸಮಾಧಾನಪಡಿಸಿದ್ದು.

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥

ಸಮಸ್ತಗುಣಪರಿಪೂರ್ಣನಾದ, ಸಕಲದೋಷದೂರನಾದ, ಸಕಲಸಚ್ಛಾಸ್ತ್ರ-ಪ್ರತಿಪಾದ್ಯನಾದ, ಮುಕ್ತಾಮುಕ್ತನಿಯಾಮಕನಾದ, ಮುಕ್ತಗಮ್ಯನಾದ ಶ್ರೀಮನ್ನಾರಾಯಣನನ್ನು ನಮಸ್ಕರಿಸಿ, ನರೋತ್ತಮನೆನಿಸಿದ ಮುಖ್ಯಪ್ರಾಣನನ್ನೂ, ನರರೂಪಿಯಾದ ಅರ್ಜುನನನ್ನೂ, ಸಕಲಮಂಗಳದೇವತೆಯಾದ ಜಗನ್ಮಾತೆಯಾದ

ಲಕ್ಷ್ಮೀದೇವಿಯನ್ನೂ, ವಿದ್ಯಾಭಿಮಾನಿನಿಯಾದ ಸರಸ್ವತಿಯನ್ನೂ, ಗ್ರಂಥಕರ್ತೃಗಳಾದ ಶ್ರೀವೇದವ್ಯಾಸರನ್ನೂ ನಮಸ್ಕರಿಸಿ, ಜಯಪ್ರದವಾದ ಜಯನಾಮಕವಾದ ಮಹಾಭಾರತವನ್ನು ಆರಂಭಿಸಬೇಕು.

ಜನಮೇಜಯಃ

ಏವಂ ನಿಪಾತಿತೇ ಕರ್ಣೇ ಸಮರೇ ಸವ್ಯಸಾಚಿನಾ ।
ಅಲ್ಪಾವಶಿಷ್ಟಾಃ ಕುರವಃ ಕಿಮಕುರ್ವತ ವೈ ದ್ವಿಜ ॥೧॥

ಮಹಾಭಾರತದ ಹದಿನೇಳನೆಯ ದಿನದ ಯುದ್ಧದಲ್ಲಿ ಸವ್ಯಸಾಚಿ ಎನಿಸಿದ ಅರ್ಜುನನು ಕರ್ಣನನ್ನು ಹೊಡೆದುರುಳಿಸಿದ. ಅನಂತರ ಕೌರವ ಪಕ್ಷದಲ್ಲಿ ಕೆಲವರಷ್ಟೇ ಉಳಿದಿದ್ದರು. ಸೈನ್ಯವು ಕ್ಷೀಣಿಸಿತ್ತು. ಎಲೈ ದ್ವಿಜನೇ! ಉಳಿದ ಕೌರವರು ಏನು ಮಾಡಿದರು?

ಉದೀರ್ಯಮಾಣಂ ಚ ಬಲಂ ದೃಷ್ಟ್ವಾ ರಾಜಾ ಸುಯೋಧನಃ ।
ಪಾಂಡವೈಃ ಪ್ರಾಪ್ತಕಾಲಂ ಚ ಕಿಂ ಪ್ರಾಪದ್ಯತ ಕೌರವಃ ॥೨॥

ಯುದ್ಧವನ್ನು ಗೆದ್ದುಕೊಂಡ ಪಾಂಡವರ ಸೈನ್ಯದಲ್ಲಿ ಹೊಸ ಹುರುಪು ಕಂಡುಬರುತ್ತಿದೆ. ಕಾಲವು ಪಾಂಡವರಿಗೆ ಅನುಕೂಲವಾಗಿದೆ. ಇದನ್ನು ನೋಡಿದ ದುರ್ಯೋಧನನು ಕಾಲೋಚಿತವಾದ ಯಾವ ಕಾರ್ಯದಲ್ಲಿ ತೊಡಗಿದ?

ಏತದಿಚ್ಛಾಮ್ಯಹಂ ಶ್ರೋತುಂ ತದಾಚಕ್ಷ್ವ ದ್ವಿಜೋತ್ತಮ ।
ನ ಹಿ ತೃಪ್ಯಾಮಿ ಪೂರ್ವೇಷಾಂ ಶೃಣ್ವಾನಶ್ಚರಿತಂ ಮಹತ್ ॥೩॥

ಹೇ ದ್ವಿಜಶ್ರೇಷ್ಠನೇ! ಈ ಎಲ್ಲಾ ವಿಷಯಗಳನ್ನು ಕೇಳಲು ಬಯಸುತ್ತೇನೆ. ಅವೆಲ್ಲವನ್ನೂ ಹೇಳು. ಏಕೆಂದರೆ ನನ್ನ ಪೂರ್ವಜರ ಅದ್ಭುತವಾದ ಚರಿತ್ರೆಯನ್ನು ಕೇಳಿದಷ್ಟೂ ನನಗೆ ತೃಪ್ತಿ ಉಂಟಾಗುವುದಿಲ್ಲ. ಪುನಃ ಪುನಃ ಕೇಳುವ ಇಚ್ಛೆ ಉಂಟಾಗುತ್ತಿದೆ.

ವೈಶಂಪಾಯನಃ

ತತಃ ಕರ್ಣೇ ಹತೇ ರಾಜನ್ ಧಾರ್ತರಾಷ್ಟ್ರಃ ಸುಯೋಧನಃ ।
ಭೃಶಂ ಶೋಕಾರ್ಣವೇ ಮಗ್ನೋ ನಿರಾಶಃ ಸರ್ವತೋಽಭವತ್ ॥೪॥

ವೈಶಂಪಾಯನರು ಹೇಳುತ್ತಾರೆ– ಮಹಾಭಾರತ ಯುದ್ಧದಲ್ಲಿ ಕರ್ಣನು ಹತನಾದಾಗ ದುರ್ಯೋಧನನು ಬಹಳವಾಗಿ ದುಃಖಿತನಾಗುತ್ತಾನೆ. ಶೋಕಸಾಗರದಲ್ಲಿ ಮುಳುಗಿದ ಅವನನ್ನು ಸರ್ವವಿಧದಲ್ಲಿಯೂ ನಿರಾಶೆಯು ಆವರಿಸುತ್ತದೆ.

ಹಾ ಕರ್ಣ ಹಾ ಕರ್ಣ ಇತಿ ಶೋಚಮಾನೋ ಮುಹುರ್ಮುಹುಃ ।
ಕೃಚ್ಛ್ರಾತ್ ಸ್ವಶಿಬಿರಂ ಪ್ರಾಯಾದ್ಧತಶಿಷ್ಟೈರ್ನರಾಧಿಪೈಃ ಸಹ ॥೫॥

''ಹಾ ಕರ್ಣ! ಹಾ ಕರ್ಣ!'' ಎಂಬುದಾಗಿ ಮತ್ತೆ ಮತ್ತೆ ದುಃಖಿಸುತ್ತಾ ಅಳಿದುಳಿದ ರಾಜರೊಡನೆ ತನ್ನ ಶಿಬಿರಕ್ಕೆ ಬಹಳ ಕಷ್ಟದಿಂದ ತೆರಳಿದ.

ಸ ಸಮಾಶ್ವಾಸ್ಯಮಾನೋಽಪಿ ಹೇತುಭಿಃ ಶಾಸ್ತ್ರನಿಶ್ಚಿತೈಃ ।
ದುಃಖಾರ್ತೋ ನಾಲಭಚ್ಛರ್ಮ ಸೂತಪುತ್ರವಧಂ ಸ್ಮರನ್ ॥೬॥

ದುಃಖಿಸುತ್ತಿರುವ ಸುಯೋಧನನನ್ನು ರಾಜರು ಶಾಸ್ತ್ರದ ಸಹೇತುಕ ಹಿತನುಡಿಗಳಿಂದ ಸಮಾಧಾನಪಡಿಸುತ್ತಾರೆ. ಆದರೂ ಪ್ರಾಣಸ್ನೇಹಿತನಾದ ಕರ್ಣನ ವಧೆಯನ್ನು ನೆನೆಯುತ್ತಾ ಮತ್ತೂ ದುಃಖಿತನಾದ ದುರ್ಯೋಧನನು ಮನಸ್ಸಮಾಧಾನವನ್ನು ಹೊಂದಲಿಲ್ಲ.

ಸ ದೈವಂ ಬಲವನ್ಮತ್ವಾ ಪ್ರಭಾತೇ ವಿಮಲೇ ಸತಿ ।
ಸಂಗ್ರಾಮೇ ನಿಶ್ಚಯಂ ಕೃತ್ವಾ ಪುನರ್ಯುದ್ಧಾಯ ನಿರ್ಯಯೌ ॥೭॥

'ವಿಧಿಯೇ ಬಲವತ್ತಾದದ್ದು, ಅದೇ ಮುಂದಾಗುವುದನ್ನು ನಿಶ್ಚಯಿಸುತ್ತದೆ' ಎಂದು ಅರಿತ ದುರ್ಯೋಧನನು ಸೂರ್ಯೋದಯವಾಗುತ್ತಿರಲು ಯುದ್ಧದಲ್ಲಿಯೇ ನಿಶ್ಚಯವುಳ್ಳವನಾಗಿ ಮತ್ತೆ ಯುದ್ಧಕ್ಕಾಗಿ ಹೊರಡುತ್ತಾನೆ.

ಶಲ್ಯಂ ಸೇನಾಪತಿಂ ಕೃತ್ವಾ ವಿಧಿವದ್ ರಾಜಪುಂಗವಃ(ಮ್) ।
ರಣಾಯ ನಿರ್ಯಯೌ ರಾಜಾ ಹತಶೇಷೈರ್ನರಾಧಿಪೈಃ ಸಹ ॥೮॥

ತೆರವಾದ ಸೇನಾಧಿಪತಿ ಸ್ಥಾನದಲ್ಲಿ ಶ್ರೇಷ್ಠರಾಜನಾದ ಶಲ್ಯನನ್ನು ವಿಧ್ಯುಕ್ತವಾಗಿ ನೇಮಿಸುತ್ತಾನೆ. ಬದುಕುಳಿದ ರಾಜರೊಡನೆ ದುರ್ಯೋಧನನು ಯುದ್ಧಕ್ಕೆ ಹೊರಡುತ್ತಾನೆ.

ತತಃ ಸುತುಮುಲಂ ಯುದ್ಧಂ ಕುರುಪಾಂಡವಸೇನಯೋಃ ।
ಬಭೂವ ಭರತಶ್ರೇಷ್ಠ ದೇವಾಸುರರಣೋಪಮಮ್ । ।೯।।

ಭರತಶ್ರೇಷ್ಠನೇ! ಕೌರವ-ಪಾಂಡವರ ಸೇನೆಗಳ ಮಧ್ಯೆ ಬಹಳ ಗೊಂದಲ-ಮಯವಾದ ಹಾಗೂ ಭಯಂಕರವಾದ ಯುದ್ಧವು ನಡೆಯುತ್ತದೆ. ಈ ಯುದ್ಧವು ಹಿಂದೆ ದೇವಾಸುರರ ನಡುವೆ ನಡೆದ ಯುದ್ಧದ ಹಾಗೆ ಇತ್ತು.

ತತಃ ಶಲ್ಯೋ ಮಹಾರಾಜ ಕೃತ್ವಾ ಕದನಮಾಹವೇ ।
ಸಸೈನ್ಯೋಽಥ ಮಧ್ಯಾಹ್ನೇ ಧರ್ಮರಾಜೇನ ಘಾತಿತಃ ।।೧೦।।

ಮಹಾರಾಜ! ಶಲ್ಯನೂ ಕೂಡ ಯುದ್ಧದಲ್ಲಿ ಬಹಳವಾಗಿ ಹೋರಾಡುತ್ತಾನೆ. ಮಧ್ಯಾಹ್ನದ ಸಮಯದಲ್ಲಿ ಧರ್ಮರಾಜನು ಶಲ್ಯನನ್ನೂ ಅವನ ಸೈನ್ಯವನ್ನೂ ಸಾಯಿಸುತ್ತಾನೆ.

ತತೋ ದುರ್ಯೋಧನೋ ರಾಜಾ ಹತಬಂಧೂ ರಣಾಜಿರಾತ್ ।
ಅಪಸೃತ್ಯ ಹ್ರದಂ ಘೋರಂ ವಿವೇಶ ರಿಪುಜಾದ್ಭಯಾತ್ ।।೧೧।।

ತನ್ನ ಎಲ್ಲಾ ತಮ್ಮಂದಿರನ್ನೂ, ಸಂಬಂಧಿಗಳನ್ನು ಕಳೆದುಕೊಂಡ ದುರ್ಯೋಧನನು ರಣರಂಗವನ್ನು ತೊರೆದು, ಶತ್ರುಗಳಿಂದ ಭಯಗೊಂಡು ಭಯಂಕರವಾದ (ವೈಶಂಪಾಯನ) ಸರೋವರವನ್ನು ಪ್ರವೇಶಿಸಿ ಅಡಗಿಕೊಳ್ಳುತ್ತಾನೆ.

ಅಥಾಪರಾಹ್ಣೇ ತಸ್ಯಾಹ್ನಃ ಪರಿವಾರ್ಯ ಮಹಾರಥೈಃ ।
ಹ್ರದಾದಾಹೂಯ ಯುದ್ಧಾಯ ಭೀಮಸೇನೇನ ಪಾತಿತಃ ।।೧೨।।

ಇಷ್ಟೆಲ್ಲಾ ನಡೆದ ನಂತರ ಅದೇ ದಿನ ಅಪರಾಹ್ಣದಲ್ಲಿ ಭೀಮಸೇನನು ಮಹಾರಥರನ್ನೆಲ್ಲಾ ಸೋಲಿಸಿ, ಸರೋವರದ ಬಳಿಗೆ ಬರುತ್ತಾನೆ. ಮಡುವಿನಲ್ಲಿ ಅಡಗಿದ ದುರ್ಯೋಧನನನ್ನು ಕಟುನುಡಿಗಳಿಂದ ಯುದ್ಧಕ್ಕಾಗಿ ಹೊರಸೆಳೆದು ಹೊಡೆದುರುಳಿಸುತ್ತಾನೆ.

ತಸ್ಮಿಂಸ್ತು ನಿಹತೇ ವೀರೇ ಹತಶಿಷ್ಟಾಸ್ತ್ರಯೋ ರಥಾಃ ।
ಕೃತವರ್ಮಾ ಕೃಪೋ ದ್ರೌಣಿರ್ಜಘ್ನುಃ ಪಾಂಡವಸೈನಿಕಾನ್ ।।೧೩।।

ದುರ್ಯೋಧನನು ಹತನಾದ ಮೇಲೆ ಉಳಿದ ಮೂವರು ಮಹಾರಥರು ಕೃತವರ್ಮ, ಕೃಪ ಹಾಗೂ ಅಶ್ವತ್ಥಾಮ. ಇವರು ಪಾಂಡವಸೈನಿಕರನ್ನು ಸದೆಬಡಿದರು.

ತತೋಽಪರಾಹ್ಣಸಮಯೇ ಶಿಬಿರಾದೇತ್ಯ ಸಂಜಯಃ ।
ಪ್ರವಿವೇಶ ಪುರೀಂ ದೀನೋ ದುಃಖಶೋಕಸಮನ್ವಿತಃ ॥೧೪॥

ನಂತರ ಅಪರಾಹ್ಣಕಾಲದಲ್ಲಿ ಸಂಜಯನು ದುಃಖ ಹಾಗೂ ಶೋಕದಿಂದ ದೀನನಾಗಿ ಶಿಬಿರದಿಂದ ಹಿಂತಿರುಗಿ ಹಸ್ತಿನಾಪುರಕ್ಕೆ ಬಂದನು.

ಪ್ರವಿಶ್ಯ ತು ಪುರಂ ತೂರ್ಣಂ ಭುಜಾವುದ್ಯಮ್ಯ ದುಃಖಿತಃ ।
ವೇಪಮಾನಸ್ತದಾ ರಾಜ್ಞಃ ಪ್ರವಿವೇಶ ನಿವೇಶನಮ್ ॥೧೫॥

ಪಟ್ಟಣವನ್ನು ಪ್ರವೇಶಿಸಿದ ಸಂಜಯನು ಭುಜಗಳನ್ನು ಎತ್ತಿಕೊಂಡು ದುಃಖದಿಂದ ನಡುಗುತ್ತಾ ರಾಜನ ಅರಮನೆಯನ್ನು ಪ್ರವೇಶಿಸಿದನು.

ಧಾವತಶ್ಚಾಪ್ಯಪಶ್ಯತ್ ಸ ತತ್ರತ್ಯಾನ್ ಪುರುಷರ್ಷಭಾನ್ ।
ನಷ್ಟಚಿತ್ತಾನಿವೋನ್ಮತ್ತಾನ್ ಶೋಕೇನ ಭೃಶದುಃಖಿತಾನ್ ॥೧೬॥

ಅರಮನೆಯಲ್ಲಿ ಅವನ ಕಂಡ ದೃಶ್ಯ ಹೀಗಿತ್ತು – ಅಲ್ಲಿರುವ ಪುರುಷಶ್ರೇಷ್ಠರು ಮನಸ್ಸಿನ ಸ್ಥಿಮಿತವನ್ನು ಕಳೆದುಕೊಂಡು, ಬಹಳ ದುಃಖಿತರಾಗಿ, ಹುಚ್ಚರಂತೆ ಆ ಕಡೆ ಈ ಕಡೆ (ಅತ್ತಿತ್ತ) ಓಡಾಡುತ್ತಿದ್ದರು.

ದೃಷ್ಟ್ವೈವ ನರಾನ್ ಶೀಘ್ರಂ ವ್ಯಾಜಹಾರಾತಿದುಃಖಿತಾನ್ ।
ರುರೋದ ಚ ನರವ್ಯಾಘ್ರ ಹಾ ರಾಜನ್ನಿತಿ ದುಃಖಿತಃ ॥೧೭॥

ಅಹೋ ಬತ ವಿಪನ್ನೋಽಸ್ಮಿ ನಿಧನೇನ ಮಹಾತ್ಮನಃ ।
ಅಸೌ ಸುಬಲವಾನ್ ಕಾಲೋ ಗತಿಶ್ಚ ವಿಷಮಾ ತಥಾ ।
ಶಕ್ರತುಲ್ಯಬಲಾಃ ಸರ್ವೇ ಯತ್ರಾಹನ್ಯಂತ ಪಾರ್ಥಿವಾಃ ॥೧೮॥

ಹೀಗೆ ಬಹುದುಃಖಿತರಾದ ಅರಮನೆಯ ಜನರನ್ನು ಕಂಡು ಸಂಜಯನೂ ದುಃಖಿತನಾಗುತ್ತಾನೆ. ಅಳುತ್ತಾ ಹೀಗೆ ಹೇಳಿದ, ''ನರಶ್ರೇಷ್ಠ! ರಾಜನೇ! ಮಹಾತ್ಮ ಸುಯೋಧನನ ಸಾವಿನಿಂದ ಬಹಳ ದುಃಖಿತನಾಗಿದ್ದೇನೆ. ಕಾಲವು ಬಹಳ

ಬಲಶಾಲಿಯಾದದ್ದು. ಅದರ ಗತಿಯು ನಮಗೆ ವಿಪರೀತವಾಗಿದೆ. ಏಕೆಂದರೆ ಪರಾಕ್ರಮದಲ್ಲಿ ಇಂದ್ರನಿಗೆ ಸದೃಶರಾದ ರಾಜರು ಈ ಯುದ್ಧದಲ್ಲಿ ಮಡಿದಿದ್ದಾರೆ.''

ವೈಶಂಪಾಯನಃ

ದೃಷ್ಟ್ವೈವ ಹಿ ಪುರೇ ರಾಜನ್ ಜನಃ ಸರ್ವೋ ಹಿ ಸಂಜಯಮ್ ।
ಶೋಕೇನ ಮಹತಾ ಯುಕ್ತಃ ಸರ್ವತೋ ರಾಜಸತ್ತಮ ।
ಪ್ರರುರೋದ ಭಯೋದ್ವಿಗ್ನೋ ಹಾ ರಾಜನ್ನಿತಿ ಸಸ್ವನಮ್ ॥೧೯॥

ರಾಜೋತ್ತಮನೇ! ಅರಮನೆಯಲ್ಲಿ ಸಂಜಯನನ್ನು ಕಂಡಾಕ್ಷಣ ಎಲ್ಲಾ ಜನರೂ ಬಹಳ ದುಃಖದಿಂದ ಕೂಡಿದವರಾಗಿ ಹಾಗೂ ಭಯದಿಂದ ಕಳವಳಗೊಂಡವರಾಗಿ ''ಹಾ! ರಾಜನ್!'' ಎಂದು ಜೋರಾಗಿ ಶಬ್ದಮಾಡುತ್ತಾ ಅತ್ತರು.

ಆಕುಮಾರಂ ನರವ್ಯಾಘ್ರ ತತ್ ಪುರಂ ವೈ ಸಮಂತತಃ ।
ಆರ್ತನಾದಂ ಮಹಚ್ಚಕ್ರೇ ಶ್ರುತ್ವಾ ವಿನಿಹತಂ ನೃಪಮ್ ॥೨೦॥

ನರೋತ್ತಮನೇ! ರಾಜ ದುರ್ಯೋಧನನು ಮಡಿದ ವಾರ್ತೆಯನ್ನು ಕೇಳಿ ಅರಮನೆಯಲ್ಲಿ ಮಕ್ಕಳಾದಿಯಾಗಿ ಎಲ್ಲರೂ ಜೋರಾಗಿ ಅಳುತ್ತಾರೆ. ಇಡೀ ಅರಮನೆಯೇ ದುಃಖದಲ್ಲಿ ಮುಳುಗಿತು.

ಪಪಾತ ಚ ತತೋ ಭೂಮೌ ಸ ಚೈವ ಪುರುಷರ್ಷಭಃ ।
ಶ್ರುತ್ವಾ ಸ ತಾನಿವೋನ್ಮತ್ತಾನ್ ಶೋಕೇನ ಭೃಶಪೀಡಿತಾನ್ ॥೨೧॥

ಬಹುದುಃಖಿತರಾಗಿ ಉನ್ಮತ್ತರಂತೆ ವರ್ತಿಸುತ್ತಿದ್ದ ಅರಮನೆಯ ಜನರ ದುಃಖದ ಆರ್ತನಾದವನ್ನು ಕೇಳಿದ ಧೃತರಾಷ್ಟ್ರನು ಭೂಮಿಯಲ್ಲಿ ಕುಸಿದು ಬೀಳುತ್ತಾನೆ.

ತಥಾ ಸ ವಿಹ್ವಲಃ ಸೂತಃ ಪ್ರವಿಶ್ಯ ನೃಪತಿಕ್ಷಯಮ್ ।
ದದರ್ಶ ನೃಪತಿಶ್ರೇಷ್ಠಂ ಪ್ರಜ್ಞಾಚಕ್ಷುಷಮೀಶ್ವರಮ್ ॥೨೨॥

ನಂತರ ಒಳಗೆ ಪ್ರವೇಶಿಸಿದ, ದುಃಖವಿಹ್ವಲನಾದ ಸಂಜಯನು ಬಾಹ್ಯಕಣ್ಣನ್ನು ಕಳೆದುಕೊಂಡಿದ್ದರೂ ಪ್ರಜ್ಞಾನೇತ್ರವನ್ನು ಹೊಂದಿದ ಧೃತರಾಷ್ಟ್ರನನ್ನು ನೋಡುತ್ತಾನೆ.

ದೃಷ್ಟ್ವಾ ಚಾಸೀನಮನಘಂ ಸಮಂತಾತ್ ಪರಿವಾರಿತಮ್ ।
ಸ್ನುಷಾಭಿರ್ಭರತಶ್ರೇಷ್ಠ ಗಾಂಧಾರ್ಯಾ ವಿದುರೇಣ ಚ ॥೨೩॥

ತಥಾಽನ್ಯೈಶ್ಚ ಸುಹೃದ್ಭಿಶ್ಚ ಜ್ಞಾತಿಭಿಶ್ಚ ಹಿತೈಷಿಭಿಃ ।
ತಮೇವ ಚಾರ್ಥಂ ಧ್ಯಾಯಂತಂ ಕರ್ಣಸ್ಯ ನಿಧನಂ ಪ್ರತಿ ॥೨೪॥

ರುದನ್ನೇವಾಬ್ರವೀದ್ವಾಕ್ಯಂ ರಾಜಾನಂ ಜನಮೇಜಯ ।
ನಾತಿಹೃಷ್ಟಮನಾಃ ಸೂತೋ ಬಾಷ್ಪಸಂದಿಗ್ಧಯಾ ಗಿರಾ ॥೨೫॥

ಭರತಶ್ರೇಷ್ಠ! ನಿಷ್ಪಾಪಿಯಾದ ಧೃತರಾಷ್ಟ್ರನನ್ನು ಸೊಸೆಯಂದಿರು, ಗಾಂಧಾರಿ ಹಾಗೂ ವಿದುರ ಮೊದಲಾದವರು ಸುತ್ತಲೂ ಸುತ್ತುವರಿದಿದ್ದಾರೆ. ಹಾಗೆಯೇ ಬೇರೆ ಸ್ನೇಹಿತರು, ಬಾಂಧವರು ಹಾಗೂ ಹಿತೈಷಿಗಳು ಸೇರಿದ್ದಾರೆ. ರಾಜನಾದರೂ ಕರ್ಣನ ಮರಣವನ್ನೇ ನೆನೆಸಿಕೊಳ್ಳುತ್ತಿದ್ದಾನೆ. ಹೇ ಜನಮೇಜಯ! ಇಂತಹ ಧೃತರಾಷ್ಟ್ರನನ್ನು ನೋಡಿದ ಸಂಜಯನು ಅಸಂತುಷ್ಟಮನಸ್ಸುಳ್ಳವನಾಗಿ, ಕಣ್ಣೀರಿನಿಂದ ಗಂಟಲು ಕಟ್ಟಿದವನಾಗಿ ರಾಜ ಧೃತರಾಷ್ಟ್ರನಿಗೆ ಹೀಗೆ ಹೇಳುತ್ತಾನೆ.

ಸಂಜಯಃ

ಸಂಜಯೋಽಹಂ ನರವ್ಯಾಘ್ರ ನಮಸ್ತೇ ಭರತರ್ಷಭ ॥೨೬॥

ಮದ್ರಾಧಿಪೋ ಹತಃ ಶಲ್ಯಃ ಸೌಬಲಶ್ಚಕುನಿಸ್ತಥಾ ।
ಉಲೂಕಃ ಪುರುಷವ್ಯಾಘ್ರ ಕೈತವ್ಯೋ ದೃಢವಿಕ್ರಮಃ ॥೨೭॥

ಹೇ ನರಶ್ರೇಷ್ಠ! ನಾನು ಸಂಜಯ ಬಂದಿದ್ದೇನೆ. ನಿನಗೆ ನಮಸ್ಕಾರ. ಯುದ್ಧದಲ್ಲಿ ಮದ್ರದೇಶಾಧಿಪತಿಯಾದ ಶಲ್ಯನೂ, ಸುಬಲನ ಮಗನಾದ ಶಕುನಿಯೂ, ಕಿತವನ ಮಗನಾದ, ಒಳ್ಳೆಯ ಪರಾಕ್ರಮಿಯಾದ ಉಲೂಕ ಇವರೇ ಮೊದಲಾದವರು ಯುದ್ಧದಲ್ಲಿಮಡಿದಿದ್ದಾರೆ.

ಸಂಶಪ್ತಕಾ ಹತಾಃ ಸರ್ವೇ ಕಾಂಭೋಜಾಶ್ಚ ಶಕೈಸ್ಸಹ ।
ಮ್ಲೇಚ್ಛಾಶ್ಚ ಪಾರ್ವತೀಯಾಶ್ಚ ಯವನಾಶ್ಚ ನಿಪಾತಿತಾಃ ।
ಮತ್ಸ್ಯಾಶ್ಚೈವ ಮಹಾರಾಜನ್ ಶೂರಸೇನಾಶ್ಚ ಪಾತಿತಾಃ ॥೨೮॥

ರಾಜನೇ, ಸಂಶಪ್ತಕರು, ಕಾಂಭೋಜದೇಶದ ಯೋಧರು, ಶಕರು, ಮ್ಲೇಚ್ಛರು, ಪರ್ವತವಾಸಿ ಯೋಧರು, ಯವನರು, ಮತ್ಸ್ಯದೇಶದ ಯೋಧರು, ಶೂರಸೇನರು ಇವರೆಲ್ಲರೂ ಯುದ್ಧದಲ್ಲಿ ಪ್ರಾಣವನ್ನು ಕಳೆದುಕೊಂಡಿದ್ದಾರೆ.

ಪ್ರಾಚ್ಯಾ ಹತಾ ಮಹಾರಾಜ ದಾಕ್ಷಿಣಾತ್ಯಾಶ್ಚ ಸರ್ವಶಃ ।
ಉದೀಚ್ಯಾಶ್ಚ ಹತಾಸ್ಸರ್ವೇ ಪ್ರತೀಚ್ಯಾಶ್ಚ ಪರಂತಪ ॥೨೯॥

ಮಹಾರಾಜ। ಶತ್ರುತಾಪಕರ! ಪೂರ್ವ, ದಕ್ಷಿಣ, ಉತ್ತರ, ಪಶ್ಚಿಮ ದಿಕ್ಕಿನ ಯೋಧರು ಎಲ್ಲರೂ ಯುದ್ಧದಲ್ಲಿ ಮಡಿದಿದ್ದಾರೆ.

ರಾಜಾನೋ ರಾಜಪುತ್ರಾಶ್ಚ ಸರ್ವೇ ವಿನಿಹತಾ ನೃಪ ।
ಕರ್ಣಪುತ್ರೋ ಹತಶೂರಃ ವೃಷಸೇನೋ ಮಹಾಬಲಃ ॥೩೦॥

ರಾಜರು, ರಾಜಕುಮಾರರು ಎಲ್ಲರೂ ನಷ್ಟರಾಗಿದ್ದಾರೆ. ಮಹಾಬಲಶಾಲಿಯಾದ ಶೂರನಾದ ಕರ್ಣಪುತ್ರ ವೃಷಸೇನನೂ (ಸತ್ಯಸೇನನೂ) ಹತನಾಗಿದ್ದಾನೆ.

ದುರ್ಯೋಧನೋ ಹತೋ ರಾಜನ್ ಯಥೋಕ್ತಂ ಪಾಂಡುಸೂನುನಾ ।
ಭಗ್ನಸಕ್ಥಿರ್ಮಹಾರಾಜ ಶೇತೇ ಪಾಂಸುಷು ರೂಷಿತಃ ॥೩೧॥

ಮಹಾರಾಜ! ಹಿಂದೆ ಭೀಮಸೇನನು ಪ್ರತಿಜ್ಞೆಮಾಡಿದ ರೀತಿಯಲ್ಲಿಯೇ ದುರ್ಯೋಧನನು ತೊಡೆಮುರಿದು ಧೂಳಿನಿಂದ ಲೇಪಿತನಾಗಿ ಭೂಮಿಯಲ್ಲಿ ಮಲಗಿದ್ದಾನೆ.

ಧೃಷ್ಟದ್ಯುಮ್ನೋ ಹತೋ ರಾಜನ್ ಶಿಖಂಡೀ ಚಾಪರಾಜಿತಃ ।
ಉತ್ತಮೌಜಾ ಯುಧಾಮನ್ಯುಃ ತಥಾ ಸರ್ವೇ ಪ್ರಭದ್ರಕಾಃ ॥೩೨॥

ಪಾಂಚಾಲಾಶ್ಚ ಮಹಾರಾಜ ಚೇದಯಶ್ಚ ನಿಪೂದಿತಾಃ ।
ತವ ಪುತ್ರಾಃ ಹತಾಸ್ಸರ್ವೇ ದ್ರೌಪದೇಯಾಶ್ಚ ಭಾರತ ॥೩೩॥

ರಾಜನೇ! ಇನ್ನು ಪಾಂಡವರ ಕಡೆಯಲ್ಲಿ ಧೃಷ್ಟದ್ಯುಮ್ನನೂ ಹತನಾಗಿದ್ದಾನೆ. ಸದಾ ಜಯಶಾಲಿಯಾದ ಶಿಖಂಡಿಯೂ ಮಡಿದಿದ್ದಾನೆ. ಉತ್ತಮೌಜ, ಯುಧಾಮನ್ಯು, ಪ್ರಭದ್ರಕರು, ಪಾಂಚಾಲರು, ಚೇದಿದೇಶದ ಯೋಧರು, ಇವರೆಲ್ಲರೂ ಹತರಾಗಿದ್ದಾರೆ.

ಭರತಕುಲಪ್ರಸೂತನೇ! ನಿನ್ನ ಎಲ್ಲಾ ಮಕ್ಕಳೂ ಯುದ್ಧದಲ್ಲಿ ಮಡಿದಿದ್ದಾರೆ. ದ್ರೌಪದಿಯ ಕುಮಾರರಾದ ಉಪಪಾಂಡವರೂ ಸತ್ತಿದ್ದಾರೆ.

ನರಾಃ ವಿನಿಹತಾಸ್ಸರ್ವೇ ಗಜಾಶ್ಚ ವಿನಿಷೂದಿತಾಃ ।
ರಥಿನಶ್ಚ ನರವ್ಯಾಘ್ರ ತಥಾऽಶ್ವಾ ನಿಹತಾ ಯುಧಿ ॥೩೪॥

ನರಶ್ರೇಷ್ಠ! ಯುದ್ಧದಲ್ಲಿ ಎಲ್ಲಾ ಪದಾತಿಗಳು, ಆನೆಗಳು, ರಥಿಕರು ಹಾಗೂ ಕುದುರೆಗಳು ಎಲ್ಲರೂ ಸತ್ತಿದ್ದಾರೆ.

ನಿಶ್ಶೇಷಂ ಶಿಬಿರಂ ರಾಜನ್ ತಾವಕಾನಾಂ ಕೃತಂ ಪ್ರಭೋ ।
ಪಾಂಡವಾನಾಂ ಚ ಶೂರಾಣಾಂ ಸಮಾಸಾದ್ಯ ಪರಸ್ಪರಮ್ ॥೩೫॥

ರಾಜನೇ! ನಿನ್ನ ಹಾಗೂ ಪಾಂಡವರ ಸೈನ್ಯವು ಪರಸ್ಪರ ಹೋರಾಡಿ ಸತ್ತಿದೆ. ಎರಡೂ ಕಡೆಯ ಯುದ್ಧ ಶಿಬಿರಗಳು ಖಾಲಿಯಾಗಿವೆ.

ಪ್ರಾಯಃ ಸ್ತ್ರೀಶೇಷಮಭವತ್ ಜಗತ್ ಕಾಲೇನ ಮೋಹಿತಮ್ ।
ಸಪ್ತ ವೈ ಪಾಂಡವಾಶ್ಶಿಷ್ಟಾ ಧಾರ್ತರಾಷ್ಟ್ರಾಃ ತ್ರಯೋ ಜನಾಃ ॥೩೬॥

ಬಹುಶಃ ಕಾಲಪಾಶಕ್ಕೊಳಗಾಗಿ ಮೋಹಕ್ಕೊಳಗಾದ ಜಗತ್ತಿನಲ್ಲಿ ಸ್ತ್ರೀಯರು ಮಾತ್ರ ಉಳಿದಿದ್ದಾರೆ. ಪಾಂಡವರಲ್ಲಿ ಏಳು ಮಂದಿ ಹಾಗೂ ಕೌರವರ ಕಡೆಯಲ್ಲಿ ಮೂವರು ಉಳಿದಿದ್ದಾರೆ.

ತೇ ಚೈವ ಭ್ರಾತರಃ ಪಂಚ ವಾಸುದೇವೋऽಥ ಸಾತ್ಯಕಿಃ ।
ಕೃಪಶ್ಚ ಕೃತವರ್ಮಾ ಚ ದ್ರೌಣಿಶ್ಚ ಜಯತಾಂ ವರಃ ॥೩೭॥

ಪಾಂಡವರಲ್ಲಿ ಧರ್ಮರಾಜ ಮೊದಲಾದ ಪಂಚ ಪಾಂಡವರು, ಶ್ರೀ ಕೃಷ್ಣ ಹಾಗೂ ಸಾತ್ಯಕಿ ಇವರು ಉಳಿದುಕೊಂಡಿದ್ದಾರೆ. ಕೌರವರ ಕಡೆಯಲ್ಲಿ ಕೃಪಾಚಾರ್ಯ, ಕೃತವರ್ಮ ಹಾಗೂ ಜಯಶಾಲಿಯಾದ ಅಶ್ವತ್ಥಾಮ ಇವರು ಉಳಿದಿದ್ದಾರೆ.

ಏತೇ ಶೇಷಾ ಮಹಾರಾಜ ರಥಿನೋ ರಾಜಸತ್ತಮ ।
ಅಕ್ಷೌಹಿಣೀನಾಮಷ್ಟಾನಾಂ ದಶಾನಾಂ ಚ ನರೇಶ್ವರ ।
ಏತೇ ಶೇಷಾ ಮಹಾರಾಜ ಸರ್ವೇऽನ್ಯೇ ನಿಧನಂ ಗತಾಃ ॥೩೮॥

ಹೇ ರಾಜಶ್ರೇಷ್ಠ! ಪಾಂಡವರ ಏಳು ಅಕ್ಷೌಹಿಣೀ ಸೈನ್ಯ ಹಾಗೂ ಕೌರವರ ಹನ್ನೊಂದು ಅಕ್ಷೌಹಿಣಿ ಸೈನ್ಯದಲ್ಲಿ ಈಗ ಉಳಿದಿರುವವರು ಇವರು ಮಾತ್ರ. ಮಹಾರಾಜ! ಉಳಿದೆಲ್ಲರೂ ನಿಧನ ಹೊಂದಿದ್ದಾರೆ.

ಕಾಲೇನ ನಿಹತಂ ಸರ್ವಂ ಜಗದ್ವೈ ಭರತರ್ಷಭ ।
ದುರ್ಯೋಧನಂ ವೈ ಪುರತಃ ಕೃತ್ವಾ ಸರ್ವೇ ಹತಾ ನರಾಃ ॥೩೯॥

ಭರತಶ್ರೇಷ್ಠನೇ! ಇಡೀ ಜಗತ್ತು ಕಾಲನಾಮಕ ಭಗವಂತನಿಂದ ಹತವಾಗಿದೆ. ದುರ್ಯೋಧನನನ್ನು ಮುಂದಿಟ್ಟುಕೊಂಡು ಎಲ್ಲಾ ಜನರೂ ಮೃತರಾಗಿದ್ದಾರೆ.

ವೈಶಂಪಾಯನಃ

ಏತಚ್ಛ್ರುತ್ವಾ ವಚಃ ಕ್ರೂರಂ ಧೃತರಾಷ್ಟ್ರೋ ಜನೇಶ್ವರಃ ।
ನಿಪಪಾತ ಮಹಾರಾಜ ಗತಸತ್ತ್ವೋ ಮಹೀತಳೇ ॥೪೦॥

ವೈಶಂಪಾಯನರು ಹೇಳಿದರು – ಮಹಾರಾಜ! ಕರ್ಣಕಠೋರವಾದ ಈ ಮಾತನ್ನು ಕೇಳಿದ ಚಕ್ರವರ್ತಿ ಧೃತರಾಷ್ಟ್ರನು ಶಕ್ತಿ ಕಳೆದುಕೊಂಡು ನೆಲದಲ್ಲಿ ಕುಸಿದುಬಿದ್ದನು.

ತಸ್ಮಿನ್ ನಿಪತಿತೇ ವೀರೇ ವಿದುರೋऽಪಿ ಮಹಾಯಶಾಃ ।
ನಿಪಪಾತ ಮಹಾರಾಜ ಪುತ್ರವ್ಯಸನಕರ್ಶಿತಃ ॥೪೧॥

ಧೃತರಾಷ್ಟ್ರನು ಕುಸಿದು ಬೀಳಲು ಮಹಾಕೀರ್ತಿಶಾಲಿಯಾದ ವಿದುರನೂ ಕೂಡ ರಾಜಪುತ್ರರ ವಿಷಯದಲ್ಲಿ ದುಃಖಕ್ಕೊಳಗಾಗಿ ಕುಸಿಯುತ್ತಾನೆ.

ಗಾಂಧಾರೀ ಚ ಮಹಾಭಾಗಾ ಸರ್ವಾಶ್ಚ ಕುರುಯೋಷಿತಃ ।
ಪತಿತಾಸ್ಸಹಸಾ ಭೂಮೌ ಶ್ರುತ್ವಾ ಘೋರತರಂ ವಚಃ ॥೪೨॥

ಅತಿಭಯಂಕರವಾದ ಮಾತನ್ನು ಕೇಳಿ ಮಹಾಭಾಗ್ಯವಂತಳಾದ ಗಾಂಧಾರಿ ಹಾಗೂ ಎಲ್ಲಾ ಕೌರವಸ್ತ್ರೀಯರೂ ಕೂಡಲೇ ನೆಲದಲ್ಲಿ ಕುಸಿದು ಬಿದ್ದರು.

ನಿಃಸಂಜ್ಞಂ ಪತಿತಂ ಭೂಮೌ ತದಾಸೀದ್ರಾಜಮಂಡಲಮ್ ।
ವಿಲಾಪಮೂರ್ಛೋಪಹತಂ ಚಿತ್ರಂ ನ್ಯಸ್ತಂ ಪಟೇ ಯಥಾ ॥೪೩॥

ಸ್ತ್ರೀಯರು, ಪುರುಷರೂ ಸೇರಿ ಇಡೀ ರಾಜನ ಅಂತಃಪುರದ ಸಕಲಪರಿವಾರವೇ ನೆಲದಲ್ಲಿ ಬಿದ್ದು ಎಲ್ಲರ ಸದ್ದು ಅಡಗಿದೆ. ದುಃಖದಿಂದ ಮೂರ್ಛಾವಸ್ಥೆಗೆ ಹೋಗಿದೆ. ಈ ದೃಶ್ಯವು ಬಟ್ಟೆಯೊಂದರಲ್ಲಿ ಬರೆದ ಚಿತ್ರದ ಹಾಗೆ ಇತ್ತು.

ಕೃಚ್ಛ್ರೇಣ ತು ತತಸ್ತತ್ರ ಧೃತರಾಷ್ಟ್ರೋ ಮಹೀಪತಿಃ ।
ಶನೈರಲಭತ ಪ್ರಾಣಾನ್ ಪುತ್ರವ್ಯಸನಕರ್ಶಿತಃ ॥೪೪॥

ಅನಂತರ ಪುತ್ರಶೋಕಕ್ಕೊಳಗಾದ ರಾಜ ಧೃತರಾಷ್ಟ್ರನು ಬಹಳ ಕಷ್ಟದಿಂದ ನಿಧಾನವಾಗಿ ಪ್ರಾಣವನ್ನು (ಚೇತನ) ಹೊಂದಿದನು.

ಲಬ್ಧ್ವಾ ತು ನೃಪತಿಃ ಪ್ರಾಣಾನ್ ವೇಪಮಾನಃ ಪುನಃ ಪುನಃ ।
ನಿರೀಕ್ಷ್ಯ ಚ ದಿಶಸ್ಸರ್ವಾಃ ಕ್ಷತ್ತಾರಂ ವಾಕ್ಯಮಬ್ರವೀತ್ ॥೪೫॥

ಪ್ರಾಣಶಕ್ತಿಯಿಂದ ಜಾಗೃತನಾದ ಧೃತರಾಷ್ಟ್ರನು ಮತ್ತೆ ಮತ್ತೆ ನಡುಗುತ್ತಾನೆ. ತನ್ನ ಸುತ್ತಲಿನ ದೃಶ್ಯವನ್ನು ನೋಡಿ ವಿದುರನಿಗೆ ಹೇಳುತ್ತಾನೆ.

ಧೃತರಾಷ್ಟ್ರಃ

ವಿದ್ವನ್ ಕ್ಷತ್ತರ್ಮಹಾಪ್ರಾಜ್ಞ ತ್ವಂ ಗತಿರ್ಭರತರ್ಷಭ ।
ಮಮಾನಾಥಸ್ಯ ಸುಭೃಶಂ ಪುತ್ರಹೀನಸ್ಯ ಸರ್ವಶಃ ॥೪೬॥

ಧೃತರಾಷ್ಟ್ರನು ಹೇಳಿದನು– ವಿದ್ವನ್! ಮಹಾಜ್ಞಾನಿಯೇ! ಭರತಶ್ರೇಷ್ಠ! ವಿದುರ! ಮಕ್ಕಳನ್ನು ಕಳೆದುಕೊಂಡು ಎಲ್ಲಾ ರೀತಿಯಲ್ಲಿ ಅನಾಥನಾದ ನನಗೆ ಅತಿಶಯವಾದ ಆಶ್ರಯ ನೀನೇ ಆಗಿದ್ದಿ.

ವೈಶಂಪಾಯನಃ

ಏವಮುಕ್ತ್ವಾ ತತೋ ಭೂಯೋ ನಿಸ್ಸಂಜ್ಞಃ ಪತಿತೋ ಭುವಿ ॥೪೭॥

ವೈಶಂಪಾಯನರು ಹೇಳಿದರು– ಹೀಗೆ ಹೇಳಿದ ನಂತರ ಧೃತರಾಷ್ಟ್ರನು ಮತ್ತೆ ಮೂರ್ಛಿತನಾಗಿ ನೆಲದಲ್ಲಿ ಬಿದ್ದನು.

ತಂ ತಥಾ ಪತಿತಂ ದೃಷ್ಟ್ವಾ ಬಾಂಧವಾಸ್ತಸ್ಯ ಕೇಚನ ।
ತೇ ಶೀತೈಸ್ಸಿಷಿಚುಸ್ತೋಯೈಃ ವಿವಿಜುರ್ವ್ಯಜನೈರಪಿ ॥೪೮॥

ಹೀಗೆ ಬಿದ್ದ ರಾಜನನ್ನು ನೋಡಿದ ಅವನ ಕೆಲವು ಬಾಂಧವರು ಶೀತೋದಕವನ್ನು ಸಿಂಪಡಿಸಿ ಬೀಸಣಿಕೆಗಳಿಂದ ಗಾಳಿ ಬೀಸಿದರು.

ತೂಷ್ಣೀಮಾಸೀನ್ಮಹೀಪಾಲಃ ಪುತ್ರವ್ಯಸನಕರ್ಶಿತಃ ॥೪೯॥

ಮಕ್ಕಳ ದುಃಖದಿಂದ ಕೃಶನಾದ ರಾಜನು ಏನೂ ಮಾತನಾಡದೆ ಸುಮ್ಮನೆ ಇದ್ದ.

ಸ ತು ದೀರ್ಘೇಣ ಕಾಲೇನ ಪ್ರತ್ಯಾಶ್ವಸ್ತೋ ಮಹೀಪತಿಃ ।
ನಿಃಶ್ವಸನ್ ಪನ್ನಗ ಇವ ಕುಂಭಕ್ಷಿಪ್ತೋಽಭವನ್ನೃಪ ॥೫೦॥

ರಾಜನೇ! ದೀರ್ಘಸಮಯದ ನಂತರ ಎಚ್ಚರಗೊಂಡ ಧೃತರಾಷ್ಟ್ರನು ಘಟದೊಳಗಿರಿಸಿದ ಹಾವಿನ ಹಾಗೆ ದೀರ್ಘವಾಗಿ ಉಸಿರಾಡುತ್ತಾನೆ.

ಸಂಜಯೋಽಪ್ಯರುದತ್ ತತ್ರ ದೃಷ್ಟ್ವಾ ರಾಜಾನಮಾತುರಮ್ ।
ತಥಾ ಸರ್ವಾಃ ಸ್ತ್ರಿಯಶ್ಚೈವ ಗಾಂಧಾರೀ ಚ ಯಶಸ್ವಿನೀ ॥೫೧॥

ದುಃಖಕ್ಕೊಳಗಾದ ರಾಜ ಧೃತರಾಷ್ಟ್ರನನ್ನು ನೋಡಿ ಸಂಜಯನೂ ಅಳುತ್ತಾನೆ. ಹಾಗೆಯೇ ಎಲ್ಲಾ ಸ್ತ್ರೀಯರೂ ಮತ್ತು ಯಶಸ್ವಿನಿಯಾದ ಗಾಂಧಾರಿಯೂ ಅಳುತ್ತಾರೆ.

ತತೋ ದೀರ್ಘೇಣ ಕಾಲೇನ ವಿದುರಂ ವಾಕ್ಯಮಬ್ರವೀತ್ ।
ಧೃತರಾಷ್ಟ್ರೋ ನರವ್ಯಾಘ್ರೋ ಮುಹ್ಯಮಾನಃ ಪುನಃ ಪುನಃ ॥೫೨॥

ಅನಂತರ ತುಂಬಾ ಸಮಯ ಕಳೆದ ಮೇಲೆ ನರಶ್ರೇಷ್ಠನಾದ ಧೃತರಾಷ್ಟ್ರನು ಮತ್ತೆ ಮತ್ತೆ ಮೂರ್ಛಿತನಾಗುತ್ತಾ ವಿದುರನಿಗೆ ಹೇಳುತ್ತಾನೆ.

ಧೃತರಾಷ್ಟ್ರಃ

ಗಚ್ಛಂತು ಯೋಷಿತಸ್ಸರ್ವಾಃ ಗಾಂಧಾರೀ ಚ ಯಶಸ್ವಿನೀ ।
ತಥೇಮೇ ಸುಹೃದಸ್ಸರ್ವೇ ಮುಹ್ಯತೇ ಮೇ ಮನೋ ಭೃಶಮ್ ॥೫೩॥

ಅರಮನೆಯ ಎಲ್ಲಾ ಸ್ತ್ರೀಯರೂ, ಯಶಸ್ವಿನಿಯಾದ ಗಾಂಧಾರಿಯೂ ಹಾಗೂ ಈ ಎಲ್ಲಾ ಸುಹೃತ್ಸಂಬಂಧಿಗಳೂ ಇಲ್ಲಿಂದ ಹೊರಟುಹೋಗಲಿ. ನನ್ನ ಮನಸ್ಸು ತುಂಬಾ ಭ್ರಾಂತವಾಗಿದೆ.

ವೈಶಂಪಾಯನಃ

ಏವಮುಕ್ತಸ್ತತಃ ಕ್ಷತ್ತಾ ತಾಃ ಸ್ತ್ರಿಯೋ ಭರತರ್ಷಭ ।
ವಿಸರ್ಜಯಾಮಾಸ ತದಾ ಮುಹ್ಯಮಾನೋ ನರಾಧಿಪ ॥೫೪॥

ಭರತಶ್ರೇಷ್ಠನೇ! ನರಾಧಿಪನೇ! ಧೃತರಾಷ್ಟ್ರನು ಹೀಗೆ ಹೇಳಿದಾಗ, ದುಃಖದಿಂದ ಮತ್ತೆ ಮತ್ತೆ ಮೂಢನಾದ ವಿದುರನು ಎಲ್ಲಾ ಸ್ತ್ರೀಯರನ್ನು ನಿಧಾನವಾಗಿ ಕಳುಹಿಸುತ್ತಾನೆ.

ನಿರ್ಜಗ್ಮುಶ್ಚ ತತಸ್ಸರ್ವಾಃ ತಾಸ್ತ್ರಿಯೋ ಜನಮೇಜಯ ।
ಸುಹೃದಶ್ಚ ತಥಾ ಸರ್ವೇ ದೃಷ್ಟ್ವಾ ರಾಜಾನಮಾತುರಮ್ ॥೫೫॥

ಜನಮೇಜಯನೇ! ಅನಂತರ ಎಲ್ಲಾ ಸ್ತ್ರೀಯರೂ ಹಾಗೂ ಎಲ್ಲಾ ಸ್ನೇಹಿತರೂ ದುಃಖಿತನಾದ ಧೃತರಾಷ್ಟ್ರನನ್ನು ಕಂಡು ಹೊರಟುಹೋದರು.

ತತೋ ನರಪತಿಸ್ತತ್ರ ಸಂಜ್ಞಾಂ ಲಬ್ಧ್ವಾ ಪರಂತಪ ।
ಗತಿರ್ಮೇ ಕೋ ಭವೇದದ್ಯ ಇತಿ ಚಿಂತಾಸಮಾಕುಲಃ ॥೫೬॥

ಅವೈಕ್ಷತ್ ಸಂಜಯಂ ತತ್ರ ರುದಮಾನೋ ಮಹೀಪತಿಃ ॥೫೭॥

ಶತ್ರುತಾಪಕರನೇ! ಅನಂತರ ರಾಜ ಧೃತರಾಷ್ಟ್ರನು ಎಚ್ಚರಗೊಂಡು ''ನನಗೆ ಇನ್ನಾರು ಗತಿ?'' ಎಂಬುದಾಗಿ ಚಿಂತಾಕ್ರಾಂತನಾಗಿ ಅಳುತ್ತಾ ಸಂಜಯನನ್ನು ನೋಡಿದ.

ಪ್ರಾಂಜಲಿಂ ಸಂಜಯಂ ದೃಷ್ಟ್ವಾ ರುದಮಾನಂ ಮುಹುರ್ಮುಹುಃ ।
ಬಹುಶಶ್ಚಿಂತಯಿತ್ವಾ ತು ಸಂಜಯಂ ವಾಕ್ಯಮಬ್ರವೀತ್ ॥೫೮॥

ಕೈಮುಗಿದು ಮತ್ತೆ ಮತ್ತೆ ಅಳುತ್ತಿರುವ ಸಂಜಯನನ್ನು ನೋಡಿ ಬಹಳವಾಗಿ ಆಲೋಚಿಸಿ ಈ ಮಾತನ್ನು ಹೇಳಿದನು.

ಪ್ರಾಂಜಲಿರ್ನಿಶ್ವಸಂತಂ ಚ ತಂ ನರೇಂದ್ರಂ ಮುಹುರ್ಮುಹುಃ ।
(ರಾಜಾನಂ ಶೋಚಮಾನಸ್ತು ತಂ ಶೋಚಂತಂ ಮುಹುರ್ಮುಹುಃ-ಪಾ)
ಸಮಾಶ್ವಾಸಯತ ಕ್ಷತ್ತಾ ವಚಸಾ ಮಧುರೇಣ ಚ ॥೫೯॥

ದುಃಖದಿಂದ ಮತ್ತೆ ಮತ್ತೆ ನಿಟ್ಟುಸಿರನ್ನು ಬಿಡುತ್ತಿದ್ದ ರಾಜನನ್ನು ವಿದುರನು ಅಂಜಲಿಬದ್ಧನಾಗಿ ಮಧುರವಾದ ಮಾತಿನಿಂದ ಸಮಾಧಾನಪಡಿಸುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎರಡನೆಯ ಅಧ್ಯಾಯ

ಧೃತರಾಷ್ಟ್ರನು ಅಳುತ್ತಾ ಸಂಜಯನಲ್ಲಿ ಯುದ್ಧವೃತ್ತಾಂತವನ್ನು ಕೇಳುವುದು.

ವಿಸೃಷ್ಟಾಸ್ವಥ ನಾರೀಷು ಧೃತರಾಷ್ಟ್ರೋऽಂಬಿಕಾಸುತಃ ।
ವಿಲಲಾಪ ಮಹಾರಾಜ ದುಃಖಾದ್ದುಃಖಿತರಂ ಗತಃ ॥೧॥

ಮಹಾರಾಜ! ವಿದುರನ ಮಾತಿನಂತೆ ಅಂತಃಪುರದ ಸ್ತ್ರೀಯರು ಹೊರಗೆ ಹೋದ ಮೇಲೆ ಅಂಬಿಕಾಪುತ್ರನಾದ ಧೃತರಾಷ್ಟ್ರನು ಅತ್ಯಂತದುಃಖವನ್ನು ಹೊಂದಿದವನಾಗಿ ಜೋರಾಗಿ ಅತ್ತನು.

ಸಧೂಮಮಿವ ನಿಃಶ್ವಸ್ಯ ಕರೌ ಧುನ್ವನ್ ಪುನಃ ಪುನಃ ।
ಬಹುಶಶ್ಚಿಂತಯಿತ್ವಾ ತು ಸಂಜಯಂ ವಾಕ್ಯಮಬ್ರವೀತ್ ॥೨॥

ಬೆಂಕಿಯಂತೆ ಬಿಸಿಯಾದ ನಿಟ್ಟುಸಿರನ್ನು ಬಿಟ್ಟು, ಮತ್ತೆ ಮತ್ತೆ ಕೈಹೊಸೆಯುತ್ತಾ, ಬಹಳವಾಗಿ ಚಿಂತಿಸಿ ಸಂಜಯನನ್ನುಕುರಿತು ಹೀಗೆಂದನು.

ಧೃತರಾಷ್ಟ್ರಃ

ಅಹೋ ಬತ ಮಹದ್ದುಃಖಂ ಯದಹಂ ಪಾಂಡವಾನ್ ರಣೇ ।
ಕ್ಷೇಮಿಣಶ್ಚಾವ್ಯಯಾಂಶ್ಚೈವ ತತ್ತಃ ಸೂತ ಶೃಣೋಮ್ಯಹಮ್ ॥೩॥

ಸಂಜಯ! ಯುದ್ಧದಲ್ಲಿ ಪಾಂಡವರು ಯಾವುದೇ ಹಾನಿಗೊಳಗಾಗದೆ ಕ್ಷೇಮವಾಗಿದ್ದಾರೆ ಎಂಬುದನ್ನು ನಾನು ನಿನ್ನಿಂದ ಕೇಳಿ ತಿಳಿದುಕೊಂಡೆ. ಈ ಸಮಾಚಾರದಿಂದ ನನಗೆ ಬಹಳ ದುಃಖವಾಗಿದೆ. ಹಾ! ಕಷ್ಟ!

ವಜ್ರಸಾರಮಯಂ ನೂನಂ ಹೃದಯಂ ಮಮ ದುರ್ಭಿದಮ್ ।
ಯಚ್ಛ್ರುತ್ವಾ ನಿಹತಾನ್ ಪುತ್ರಾನ್ ದೀರ್ಯತೇ ನ ಸಹಸ್ರಧಾ ॥೪॥

ನನ್ನ ಮಕ್ಕಳು ಸತ್ತಿದ್ದಾರೆ ಎಂಬ ವಿಷಯವನ್ನು ಕೇಳಿಯೂ ಸಾವಿರಹೋಳಾಗದ ನನ್ನೀ ಹೃದಯವು ನಿಶ್ಚಯವಾಗಿಯೂ ಎಂದಿಗೂ ಒಡೆಯದ ವಜ್ರಾಯುಧ(ವಜ್ರ)ದಂತೆ ಸಾರಭೂತವಾಗಿದೆ.

ಚಿಂತಯಿತ್ವಾ ವಚಸ್ತೇಷಾಂ ಬಾಲಕ್ರೀಡಾಂ ಚ ಸಂಜಯ ।
ಅದ್ಯ ಚೈವ ಹತಾನ್ ಶ್ರುತ್ವಾ ಭೃಶಂ ಮೇ ದೂಯತೇ ಮನಃ ॥೫॥

ಸಂಜಯ! ನನ್ನ ಮಕ್ಕಳ ಬಾಲ್ಯದ ತೊದಲ್ನುಡಿಗಳನ್ನೂ, ಅವರ ಬಾಲ್ಯದ ಚೇಷ್ಟೆಗಳನ್ನು ನೆನೆಸಿಕೊಂಡು, ಮತ್ತೆ ಈಗ ಅವರು ಸತ್ತಿದ್ದಾರೆ ಎಂದು ಕೇಳಿ ನನ್ನ ಮನಸ್ಸು ಬಹಳವಾಗಿ ದುಃಖಿತವಾಗಿದೆ.

ಅಂಧತ್ವಾದ್ಯದಿ ಪುತ್ರಾಣಾಂ ನ ಮೇ ರೂಪನಿದರ್ಶನಮ್ ।
ಪುತ್ರಸ್ನೇಹಕೃತಾ ಪ್ರೀತಿಃ ನಿತ್ಯಮೇತೇಷು ಧಾರಿತಾ ॥೬॥

ನಾನು ಕುರುಡನಾದ್ದರಿಂದ ನನ್ನ ಮಕ್ಕಳ ರೂಪವನ್ನು ನಾನು ಕಾಣಲಿಲ್ಲ. ಆದರೂ ಮಕ್ಕಳ ಮಮತೆಯಿಂದುಂಟಾದ ಪ್ರೀತಿಯನ್ನು ಅವರಲ್ಲಿ ನಿತ್ಯವೂ ಹೊಂದಿದ್ದೇನೆ.

ಬಾಲಭಾವಮತಿಕ್ರಾಂತಾನ್ ಯೌವನಸ್ಥಾಂಶ್ಚ ತಾನಹಮ್ ।
ವೃದ್ಧಿಪ್ರಾಪ್ತಾನಹಂ ಶ್ರುತ್ವಾ ಹೃಷ್ಟ ಆಸಂ ತದಾ ಭೃಶಮ್ ॥೭॥

ಬಾಲ್ಯವನ್ನು ಕಳೆದುಕೊಂಡು ನನ್ನ ಮಕ್ಕಳು ಯೌವನಾಸ್ಥೆಗೆ ಬಂದು ಬೆಳೆದು ನಿಂತರು ಎಂಬುದನ್ನು ಕೇಳಿದಾಗ ನಾನು ಬಹಳವಾಗಿ ಸಂತೋಷಗೊಂಡಿದ್ದೆ.

ತಾನದ್ಯ ನಿಹತಾನ್ ಶ್ರುತ್ವಾ ಹೃತೈಶ್ವರ್ಯಾನ್ ಹೃತೌಜಸಃ ।
ನ ಲಭೇ ವೈ ಕ್ವಚಿಚ್ಛಾಂತಿಂ ಪುತ್ರಾಧಿಭಿರಭಿಪ್ಲುತಃ ॥೮॥

ಅಂತಹ ನನ್ನ ಮಕ್ಕಳು ಇಂದು ಸಂಪತ್ತು ಕೀರ್ತಿ ಓಜಸ್ಸುಗಳನ್ನು (ಪರಾಕ್ರಮ) ಕಳೆದುಕೊಂಡು ಸತ್ತಿದ್ದಾರೆ ಎಂದು ಕೇಳಿ ಪುತ್ರಶೋಕದಿಂದ ತುಂಬಿ ಎಲ್ಲಿಯೂ ನೆಮ್ಮದಿಯನ್ನು ನಿಶ್ಚಯವಾಗಿಯೂ ಹೊಂದಲಾರೆ.

ಏಹ್ಯೇಹಿ ವತ್ಸ ರಾಜೇಂದ್ರ ಮಮಾನಾಥಸ್ಯ ಪುತ್ರಕ ।
ತ್ವಯಾ ಹೀನೋ ಮಹಾಬಾಹೋ ಕಾಂ ನು ಯಾಸ್ಯಾಮ್ಯಹಂ ಗತಿಮ್॥

ರಾಜನೇ! ಪ್ರಿಯನೇ! ಅನಾಥನಾದ ನನ್ನ ಕುಮಾರನೇ! ಎದ್ದೇಳು! ಎದ್ದೇಳು! ಹೇ ಮಹಾಪರಾಕ್ರಮಿಯೇ! ನಿನ್ನನ್ನಗಲಿ ನಾನು ಯಾವ ಗತಿಯನ್ನು ತಾನೇ ಹೊಂದಲಿ?

ಗತಿರ್ಭೂತ್ವಾ ಮಹಾರಾಜ ಜ್ಞಾತೀನಾಂ ಸುಹೃದಾಂ ತಥಾ ।
ಅಂಧಂ ವೃದ್ಧಂ ಚ ಮಾಂ ವೀರ ವಿಹಾಯ ತ್ವಂ ಕ್ವ ಗಚ್ಛಸಿ ॥೧೦॥

ಹೇ ಮಹಾರಾಜ! ಬಂಧುಗಳಿಗೆ ಹಾಗೂ ಸ್ನೇಹಿತರಿಗೆ ನೀನೇ ಸರ್ವಾಶ್ರಯನಾಗಿದ್ದಿ. ಹೇ ವೀರನೇ! ಕಣ್ಣುಕಾಣಿಸದ ಮುದುಕನಾದ ನನ್ನನ್ನು ಬಿಟ್ಟು ನೀನು ಎಲ್ಲಿಗೆ ಹೋಗುತ್ತಿ?

ಯಾ ಕೃಪಾ ಯಾ ಚ ತೇ ಪ್ರೀತಿಃ ಯಾ ಚ ರಾಜಸು ಮಾನಿತಾ ।
ಕಥಂ ತ್ವಂ ನಿಹತಃ ಪಾರ್ಥೈಃ ಸಂಯುಗೇಷ್ವಪರಾಜಿತಃ ॥೧೧॥

ಪ್ರಜೆಗಳಲ್ಲಿ ನೀನು ಮಾಡುವ ಕರುಣೆಯಾಗಲೀ ಹಾಗೂ ನೀನು ತೋರುವ ಪ್ರೀತಿಯಾಗಲೀ, ರಾಜರೆಲ್ಲರು ನಿನಗೆ ಕೊಡುವ ಗೌರವವಾಗಲೀ ಅಸದೃಶವಾದುದು. ಹೀಗೆ ಯುದ್ಧದಲ್ಲಿ ಸದಾ ಜಯಶಾಲಿಯಾದ ನಿನ್ನನ್ನು ಪಾಂಡವರು ಹೇಗೆ ತಾನೆ ಕೊಂದು ಹಾಕಿದರು?

ಕಥಂ ತ್ವಂ ಪೃಥಿವೀಪಾಲಾನ್ ತ್ಯಕ್ತ್ವಾ ತಾತ ಸಮಾಗತಾನ್ ।
ಶೇಷೇऽದ್ಯ ನಿಹತೋ ಭೂಮೌ ಪ್ರಾಕೃತಃ ಕುನೃಪೋ ಯಥಾ ॥೧೨॥

ರಾಜನೇ! ನಿನ್ನ ದರ್ಶನಕ್ಕಾಗಿ ಅನೇಕ ಚಕ್ರವರ್ತಿಗಳು ಬಂದಿದ್ದಾರೆ. ಅಂತಹವರನ್ನು ಬಿಟ್ಟು ಇಂದು ನೀನು ಭೂಮಿಯಲ್ಲಿ ಸಾಮಾನ್ಯರಾಜನಂತೆ ಹೇಗೆ ಸತ್ತು ಮಲಗಲು ಸಾಧ್ಯವಾಯಿತು?

ಕೋ ನು ಮಾಮುತ್ಥಿತಂ(ಮುತ್ಥಿತಃ) ವೀರ(ಕಾಲೇ)ತಾತ ತಾತೇತಿ ವಕ್ಷ್ಯತಿ ।
ಮಹಾರಾಜೇತಿ ಸತತಂ ಲೋಕನಾಥೇತಿ ಚಾಸಕೃತ್ ॥೧೩॥

ಹೇ ವೀರ! (ನನ್ನ ಏಳುವಿಕೆಯನ್ನೇ ಎದುರುನೋಡುತ್ತಾ) ನಾನು ಎದ್ದಾಗ ''ತಂದೆ! ಅಪ್ಪ! ಮಹಾರಾಜ! ಲೋಕನಾಥ!'' ಎಂಬುದಾಗಿ ಪದೇ ಪದೇ ಯಾರು ಹೇಳುವರು?

ಪರಿಷ್ವಜ್ಯ ತು ಕಂ ಕಂಠೇ ಸ್ನೇಹೇನ ಕ್ಲಿನ್ನಲೋಚನಃ ।
ಅನುಶಾಸ್ತಾಸ್ಮಿ ಕೌರವ್ಯ ತತ್ ಸಾಧು ವದ ಮೇ ವಚಃ ॥೧೪॥

ಕುರುಕುಲನಂದನ! ನಾನಾದರೂ ಪ್ರೀತಿಯಿಂದ ತೇವಗೊಂಡ ಕಣ್ಣುಳ್ಳವನಾಗಿ ಯಾರನ್ನು ಆಲಿಂಗಿಸಿಕೊಳ್ಳಲಿ? ಯಾರಿಗೆ ಆದೇಶವನ್ನು ಕೊಡಲಿ? ಈ ಎಲ್ಲಾ ನನ್ನ ಪ್ರಶ್ನೆಗಳಿಗೆ ಒಳ್ಳೆಯ ಉತ್ತರವನ್ನು ಕೊಡು.

ನನು ನಾಮಾಹಮಶ್ರೌಷಂ ವಚನಂ ತವ ಪುತ್ರಕ ।
ಭೂಯಸೀ ಮಮ ಸೇನಾ ಚ ತಾತ ಪಾರ್ಥಸ್ಯ ನೋ ತಥಾ ॥೧೫॥

ಪ್ರಿಯಕುಮಾರನೆ! ಹಿಂದೆ ನೀನಾಡಿದ ಮಾತನ್ನು ನಾನೂ ಕೇಳಿಸಿಕೊಂಡಿದ್ದೆ! ''ತಂದೆ! ನನ್ನ ಸೈನ್ಯವು ಬಹಳವಾಗಿದೆ. ಪಾಂಡವರ ಸೈನ್ಯವು ಹಾಗಿಲ್ಲ''.

ಭಗದತ್ತಃ ಕೃಪಶ್ಚಲ್ಯ ಆವಂತ್ಯೌ ಚ ಜಯದ್ರಥಃ ।
ಭೂರಿಶ್ರವಾಃ ಸೋಮದತ್ತೋ ಮಹಾರಾಜಶ್ಚ ಬಾಹ್ಲಿಕಃ ॥೧೬॥

ಅಶ್ವತ್ಥಾಮಾ ಕೃತವರ್ಮಾ ಮಾಗಧಶ್ಚ ಮಹಾಬಲಃ ।
ಬೃಹದ್ಬಲಶ್ಚ ಕಾಶೀಶಃ ಶಕುನಿಶ್ಚಾಪಿ ಸೌಬಲಃ ॥೧೭॥

ಮ್ಲೇಚ್ಛಾಶ್ಚ ಬಹುಸಾಹಸ್ರಾಃ ಶಕಾಶ್ಚ ಯವನೈಸ್ಸಹ ।
ಸುದಕ್ಷಿಣಶ್ಚ ಕಾಂಭೋಜಃ ತ್ರಿಗರ್ತಾಧಿಪತಿಸ್ತಥಾ ॥೧೮॥

ಭೀಷ್ಮಃ ಪಿತಾಮಹಶ್ಚೈವ ಭಾರದ್ವಾಜೋऽಥ ಗೌತಮಃ ।
ಶ್ರುತಾಯುಶ್ಚಾಶ್ರುತಾಯುಶ್ಚ ಶತಾಯುಶ್ಚಾಪಿ ವೀರ್ಯವಾನ್ ॥೧೯॥

ಜಲಸಂಧೋऽಪ್ಯಾರ್ಶ್ಯಶೃಂಗೀ ರಾಕ್ಷಸಶ್ಚಾಪ್ಯಲಾಯುಧಃ ।
ಅಲಂಬುಸೋ ವೀರಬಾಹುಃ ಸುಬಾಹುಶ್ಚ ಶತಾಯುಧಃ ॥೨೦॥

ಏತೇ ಚಾನ್ಯೇ ಚ ಬಹವೋ ರಾಜಾನೋ ರಾಜಸತ್ತಮ ।
ಮದರ್ಥಂ ಪ್ರಹರಿಷ್ಯಂತಿ ಪ್ರಾಣಾಂಸ್ತ್ಯಕ್ತ್ವಾ ಮಹಾರಣೇ ॥೨೧॥

ಎಲೈ ರಾಜಶ್ರೇಷ್ಠನೇ! ಭಗದತ್ತ, ಕೃಪ, ಶಲ್ಯ, ಅವಂತಿ ದೇಶದ ರಾಜ, ಜಯದ್ರಥ, ಭೂರಿಶ್ರವಸ್ಸು, ಸೋಮದತ್ತ, ಬಾಹ್ಲಿಕ ಮಹಾರಾಜ, ಅಶ್ವತ್ಥಾಮ, ಕೃತವರ್ಮ,

ಮಗಧಾಧಿಪತಿಯಾದ ಮಹಾಬಲಶಾಲಿ ಬೃಹದ್ಬಲ, ಕಾಶಿದೇಶದ ರಾಜ, ಸುಬಲದೇಶದ ಅಧಿಪತಿ ಶಕುನಿ, ಅನೇಕ ಸಹಸ್ರ ಸಂಖ್ಯೆಯ ಮ್ಲೇಚ್ಛರು, ಅಷ್ಟೇ ಸಂಖ್ಯೆಯ ಶಕರು, ಯವನರು, ಸುದಕ್ಷಿಣ, ಕಾಂಭೋಜ, ತ್ರಿಗರ್ತದೇಶದ ರಾಜ, ಪಿತಾಮಹನಾದ ಭೀಷ್ಮ, ಭರದ್ವಾಜಪುತ್ರನಾದ ಗೌತಮ, ಶ್ರುತಾಯು, ಅಶ್ರುತಾಯು, ಬಲಶಾಲಿಯಾದ ಶತಾಯು, ಜಲಸಂಧ, ಆರ್ಷ್ಯಶೃಂಗಿ, ಅಲಾಯುಧನೆಂಬ ರಾಕ್ಷಸ, ಅಲಂಬುಸ, ವೀರಬಾಹು, ಸುಬಾಹು, ಶತಾಯುಧ ಇವರು ಹಾಗೂ ಇನ್ನೂ ಅನೇಕ ರಾಜರುಗಳು ನನಗಾಗಿ ಯುದ್ಧ ಮಾಡುತ್ತಾರೆ. ರಣರಂಗದಲ್ಲಿ ನನಗಾಗಿ ಪ್ರಾಣವನ್ನೂ ಬಿಡುತ್ತಾರೆ.

ತೇಷಾಂ ಮಧ್ಯೇ ಸ್ಥಿತೋ ಯುದ್ಧೇ ಭ್ರಾತೃಭಿಃ ಪರಿವಾರಿತಃ ।
ಯೋಧಯಿಷ್ಯಾಮ್ಯಹಂ ಪಾರ್ಥಾನ್ ಪಾಂಚಾಲಾನ್ ಸೃಂಜಯಾಂಸ್ತಥಾ ॥

ಸೋಮಕಾನ್ ನೃಪಶಾರ್ದೂಲ ದ್ರೌಪದೇಯಾಂಶ್ಚ ಸಂಯುಗೇ ।
ಸಾತ್ಯಕಿಂ ಕುಂತಿಭೋಜಂ ಚ ರಾಕ್ಷಸಂ ಚ ಘಟೋತ್ಕಚಮ್ ॥೨೩॥

ಏಕೋಽಪ್ಯೇಷಾಂ ಮಹಾರಾಜ ಸಮರ್ಥಸ್ಸನ್ನಿವಾರಣೇ ।
ಸಮರೇ ಪಾಂಡುಯೋಧಾನಾಂ ಸಂಕ್ರುದ್ಧೋ ಹ್ಯಭಿಧಾವತಾಮ್ ।
ಕಿಂ ಪುನಸ್ಸಹಿತೋ ವೀರೈಃ ಕೃತವೈರಶ್ಚ ಪಾಂಡವೈಃ ॥೨೪॥

''ಎಲೈ ರಾಜೇಂದ್ರನೇ! ಇಂತಹ ಯೋಧರ ಮಧ್ಯದಲ್ಲಿಸುತ್ತಲೂ ಸಹೋದರರನ್ನು ಸೇರಿಸಿಕೊಂಡು ಎದುರು ಪಕ್ಷದಲ್ಲಿರುವ ಪಾರ್ಥರು, ಪಾಂಚಾಲರು, ಸೃಂಜಯರು, ಸೋಮಕರು, ದ್ರೌಪದಿಕುಮಾರರು, ಸಾತ್ಯಕಿ, ಕುಂತಿಭೋಜ, ರಾಕ್ಷಸನಾದ ಘಟೋತ್ಕಚ ಇವರೆಲ್ಲರ ಜೊತೆಗೆ ಹೋರಾಡುತ್ತೇನೆ. ಮಹಾರಾಜ! ರಣರಂಗದಲ್ಲಿ ಯುದ್ಧಕ್ಕೆ ಧಾವಿಸಿಬರುವ ಈ ಪಾಂಡವರನ್ನು ಎದುರಿಸಲು ಕೋಪಗೊಂಡ ನಾನೊಬ್ಬನೇ ಸಾಕು. ಹಾಗಿರುವಾಗ ಪಾಂಡವರೊಡನೆ ದ್ವೇಷಸಾಧಿಸುತ್ತಿರುವ ನಾನು ವೀರಯೋಧರಿಂದ ಕೂಡಿಕೊಂಡಿರುವಾಗ ಮತ್ತೇನು ಹೇಳಬೇಕು?''

ಅಥವಾ ಸರ್ವಪಾಂಚಾಲೈಃ ಪಾಂಡವಸ್ಯಾನುಸೈನಿಕೈಃ ।
ಯೋತ್ಸ್ಯಾಮಿ ಸಹ ರಾಜೇಂದ್ರ ಹನಿಷ್ಯಾಮಿ ಚ ತಾನ್ ಮೃಧೇ ॥೨೫॥

''ಅಥವಾ ಪಾಂಡವರ ಅನುಯಾಯಿಗಳಾದ ಸೈನಿಕರಿಂದ ಕೂಡಿಕೊಂಡ ಸರ್ವಪಾಂಚಾಲರ ಜೊತೆಗೆ ಹೋರಾಡುತ್ತೇನೆ. ರಾಜೇಂದ್ರ! ರಣರಂಗದಲ್ಲಿ ಅವರೆಲ್ಲರನ್ನೂ ಸಾಯಿಸುತ್ತೇನೆ''.

ಕರ್ಣಸ್ತ್ವೇಕೋ ಮಯಾ ಸಾರ್ಧಂ ನಿಹನಿಷ್ಯತಿ ಪಾಂಡವಾನ್ ।
ತೇ ವೈ ನೃಪತಯೋ ವೀರಾಃ ಸ್ಥಾಸ್ಯಂತಿ ಮಮ ಶಾಸನೇ ॥೨೬॥

''ಕರ್ಣನು ನನಗೆ ಸಹಾಯಕ್ಕೆ ನಿಂತುಕೊಂಡು ಪಾಂಡವರನ್ನು ಕೊಂದುಹಾಕುವನು. ಹಿಂದೆ ಹೇಳಿದ ಎಲ್ಲಾ ವೀರರಾದ ರಾಜರೂ ನನ್ನ ಅಧೀನದಲ್ಲಿಯೇ ಇರುತ್ತಾರೆ''.

ಯಶ್ಚ ತೇಷಾಂ ಪ್ರಣೇತಾ ವೈ ವಾಸುದೇವೋ ಮಹಾಬಲಃ ।
ನ ಸ ಸಂನಹ್ಯತೇ ರಾಜನ್ನಿತಿ ಮಾಮಬ್ರವೀದ್ವಚಃ ॥೨೭॥

''ಹೇ ರಾಜನ್! ಇನ್ನು ಪಾಂಡವರಿಗೆ ಮಾರ್ಗದರ್ಶಕನಾದ ವಸುದೇವಪುತ್ರ ಶ್ರೀಕೃಷ್ಣನೂ ಯುದ್ಧದಲ್ಲಿ ಕವಚವನ್ನು ತೊಡುವುದಿಲ್ಲ'' ಎಂಬುದಾಗಿ ದುರ್ಯೋಧನನು ನನಗೆ ಹೇಳಿದ್ದಾನೆ.

ಏವಂ ಚ ವದತಸ್ಸೂತ ಬಹುಶೋ ಮಮ ಸನ್ನಿಧೌ ।
ಯುಕ್ತಿತೋಽಪ್ಯನುಪಶ್ಯಾಮಿ ನಿಹತಾನ್ ಪಾಂಡವಾನ್ ಮೃಧೇ ॥೨೮॥

ಎಲೈ ಸೂತನೇ! ಇಂತಹ ಅನೇಕ ಮಾತುಗಳನ್ನು ದುರ್ಯೋಧನನು ನನ್ನ ಮುಂದೆ ಹೇಳಿದ್ದಾನೆ. ಯುಕ್ತಿಗಳಿಂದ ವಿಚಾರಮಾಡಿದಾಗಲೂ ಪಾಂಡವರೆಲ್ಲರೂ ಯುದ್ಧದಲ್ಲಿ ಮಡಿದಿರುವರು ಎಂಬುದಾಗಿ ನಿರೀಕ್ಷಿಸುತ್ತಿದ್ದೇನೆ.

ತೇಷಾಂ ಮಧ್ಯೇ ಸ್ಥಿತೋ ಯತ್ರ ಹನ್ಯತೇ ಮಮ ಪುತ್ರಕಃ ।
ವ್ಯಾಯಚ್ಛಮಾನಸ್ಸಮರೇ ಕಿಮನ್ಯದ್ಭಾಗಧೇಯತಃ ॥೨೯॥

ಇಂತಹವರ ಮಧ್ಯದಲ್ಲಿ ಸದಾ ಯುದ್ಧದಲ್ಲಿ ಉದ್ಯುಕ್ತನಾದ ನನ್ನ ಪ್ರಿಯ ಮಗನು ಹತನಾಗಿದ್ದಾನೆಂದರೆ ವಿಧಿಯನ್ನಲ್ಲದೆ ಬೇರೇನನ್ನು ಹೇಳಲು ಸಾಧ್ಯ?

ಭೀಷ್ಮಶ್ಚ ನಿಹತೋ ಯತ್ರ ಲೋಕನಾಥಃ ಪ್ರತಾಪವಾನ್ ।
ಶಿಖಂಡಿನಂ ಸಮಾಸಾದ್ಯ ಮೃಗೇಂದ್ರ ಇವ ಕುಂಜರಮ್ ॥೩೦॥

ದ್ರೋಣಶ್ಚ ಬ್ರಾಹ್ಮಣೋ ವೃದ್ಧಃ ಸರ್ವಶಸ್ತ್ರಾಸ್ತ್ರಪಾರಗಃ ।
ನಿಹತಃ ಪಾಂಡವೈಸ್ಸಂಖೇ ಕಿಮನ್ಯದ್ದೈವಧೇಯತಃ ॥೩೧॥

ಶಿಖಂಡಿಯನ್ನು ಮುಂದಿಟ್ಟುಕೊಂಡು ಪರಾಕ್ರಮಿಯಾದ ಲೋಕೇಶ್ವರ ಭೀಷ್ಮನೂ ಆನೆಯ ಮುಂದೆ ಸಿಂಹದ ಹಾಗೆ ತಾನು ಹತನಾಗಿದ್ದಾನೆ. ಸಕಲಶಸ್ತ್ರ-ಅಸ್ತ್ರವೇತ್ತನಾದ ಜ್ಞಾನವಯೋವೃದ್ಧಬ್ರಾಹ್ಮಣ ದ್ರೋಣನೂ ಯುದ್ಧದಲ್ಲಿ ಪಾಂಡವರಿಂದ ಹತನಾಗಿದ್ದಾನೆ. ಅದೃಷ್ಟವಲ್ಲದೆ ಬೇರೇನೂ ಇಲ್ಲಿ ಕಾರಣವಾಗಿಲ್ಲ.

ಭೂರಿಶ್ರವಾ ಹತೋ ಯತ್ರ ಸೋಮದತ್ತಶ್ಚ ಸಂಯುಗೇ ।
ಬಾಹ್ಲಿಕಶ್ಚ ಮಹಾರಾಜಃ ಕಿಮನ್ಯದ್ದೈವಧೇಯತಃ ॥೩೨॥

ಯುದ್ಧದಲ್ಲಿ ಭೂರಿಶ್ರವಸ್ಸು, ಸೋಮದತ್ತ, ಬಾಹ್ಲಿಕ ಮಹಾರಾಜ ಇವರೆಲ್ಲರೂ ಹತರಾಗಿದ್ದಾರೆ. ವಿಧಿಯೇ ಇಲ್ಲಿ ಪ್ರಧಾನ ಕಾರಣ.

ಭಗದತ್ತೋ ಹತೋ ಯತ್ರ ರಾಜ(ಗಜ)ಯುದ್ಧವಿಶಾರದಃ ।
ಜಯದ್ರಥಶ್ಚ ನಿಹತಃ ಕಿಮದ್ಯದ್ದೈವಧೇಯತಃ ॥೩೩॥

ಯಾವ ಈ ಯುದ್ಧದಲ್ಲಿ, ಯುದ್ಧದಲ್ಲಿ ಕುಶಲನಾದ ಭಗದತ್ತ, ಜಯದ್ರಥನೂ ಸತ್ತಿದ್ದಾರೆ. ಅಹೋ! ವಿಧಿಯಲ್ಲದೇ ಬೇರೆ ಏನೂ ಕಾರಣವಿಲ್ಲ.

ಸುದಕ್ಷಿಣೋ ಹತೋ ಯತ್ರ ಜಲಸಂಧಶ್ಚ ಕೌರವಃ ।
ಶ್ರುತಾಯುಶ್ಚ ಶತಾಯುಶ್ಚ ಕಿಮನ್ಯದ್ದೈವಧೇಯತಃ ॥೩೪॥

ಸುದಕ್ಷಿಣ, ಜಲಸಂಧ, ಶ್ರುತಾಯು, ಶತಾಯು ಮೊದಲಾದವರೂ ಯುದ್ಧದಲ್ಲಿ ಸತ್ತಿದ್ದಾರೆ. ವಿಧಿಯೇ ಇದಕ್ಕೆಲ್ಲಾ ಕಾರಣ.

ಮಹಾಬಲಸ್ತಥಾ ಶಲ್ಯಃ ಸರ್ವಶಸ್ತ್ರಾಸ್ತ್ರಪಾರಗಃ ।
ನಿಹತಃ ಪಾಂಡವೈಸ್ಸಂಖೇ ಕಿಮನ್ಯದ್ದೈವಧೇಯತಃ ॥೩೫॥

ಮಹಾಬಲ, ಸಕಲಶಸ್ತ್ರವೇತ್ತನಾದ ಶಲ್ಯ ಇವರೂ ಯುದ್ಧದಲ್ಲಿ ಪಾಂಡವರ ಕೈಯಿಂದ ಹತರಾಗಿದ್ದಾರೆ. ಇದು ವಿಧಿಯಲ್ಲದೆ ಮತ್ತೇನು?

ಬೃಹದ್ಬಲೋ ಹತೋ ಯತ್ರ ಮಾಗಧಶ್ಚ ಮಹಾಬಲಃ ।
ಆವಂತ್ಯೌ ನಿಹತೌ ಯತ್ರ ಶಕುನಿಶ್ಚಾಪಿ ಸೌಬಲಃ ॥೩೬॥

ತ್ರಿಗರ್ತಶ್ಚ ಮಹಾಬಾಹುಃ ಸಂಶಪ್ತಾಶ್ಚ ಮಹಾಬಲಾಃ ।
ನಾರಾಯಣಾ ಹತಾ ಯತ್ರ ಗೋಪಾಲಾ ಯುದ್ಧದುರ್ಮದಾಃ ॥೩೭॥

ಮ್ಲೇಚ್ಛಾಶ್ಚ ಬಹುಸಾಹಸ್ರಾಃ ಕಿಮನ್ಯದ್ಭಾಗಧೇಯತಃ ॥೩೮॥

ಬೃಹದ್ಬಲ, ಬಲಶಾಲಿಯಾದ ಮಗಧರಾಜ, ಅವಂತಿದೇಶದ ರಾಜರು, ಸುಬಲದೇಶದ ರಾಜ ಶಕುನಿ, ತ್ರಿಗರ್ತದೇಶದ ಮಹಾಬಾಹು, ಬಲಶಾಲಿಗಳಾದ ಸಂಶಪ್ತಕರು, ಯುದ್ಧವಿಶಾರದರಾದ ಗೋಪಾಲರುಳ್ಳ ನಾರಾಯಣೀ ಸೇನೆ, ಸಾವಿರಾರು ಸಂಖ್ಯೆಯಲ್ಲಿದ್ದ ಮ್ಲೇಚ್ಛಸೈನ್ಯ ಇವರೆಲ್ಲರೂ ಯುದ್ಧದಲ್ಲಿ ಹತರಾಗಿದ್ದಾರೆ. ಇದೂ ವಿಧಿಯ ಪ್ರಾಬಲ್ಯವೇ ಸರಿ.

ಅಲಂಬುಸಸ್ತಥಾ ಶೂರೋ ರಾಕ್ಷಸಶ್ಚಾಪ್ಯಲಾಯುಧಃ ।
ಆರ್ಶ್ಯಶೃಂಗಶ್ಚ ನಿಹತಃ ಕಿಮನ್ಯದ್ಭಾಗಧೇಯತಃ ॥೩೯॥

ಶೂರನಾದ ಅಲಂಬುಸ, ಅಲಾಯುಧ ರಾಕ್ಷಸ, ಆರ್ಶ್ಯಶೃಂಗ ಇವರೂ ಸತ್ತಿದ್ದಾರೆ. ಇದಕ್ಕೂ ವಿಧಿಯೇ ಕಾರಣ.

ರಾಜಾನೋ ರಾಜಪುತ್ರಾಶ್ಚ ಶೂರಾಃ ಪರಿಘಬಾಹವಃ ।
ನಾನಾದೇಶಸಮಾವೃತ್ತಾಃ ಕ್ಷತ್ರಿಯಾ ಯತ್ರ ಸಂಜಯ ।
ನಿಹತಾಃ ಪಾಂಡವೇಯೈಸ್ತೈಃ ಕಿಮನ್ಯದ್ಭಾಗಧೇಯತಃ ॥೪೦॥

ರಾಜರು, ರಾಜಪುತ್ರರು, ಯುದ್ಧಕ್ಕಾಗಿ ಸೇರಿದ ನಾನಾ ದೇಶದ ಕ್ಷತ್ರಿಯರು ಈ ಯುದ್ಧದಲ್ಲಿ ಪಾಂಡವರ ಕಡೆಯವರಿಂದ ಹತರಾಗಿದ್ದಾರೆ. ಇದು ವಿಧಿಯ ಆಟವೇ ಸರಿ.

ದುರ್ಯೋಧನೋ ಹತೋ ಯತ್ರ ಪುತ್ರಾಶ್ಚಾಸ್ಯ ಮಹಾತ್ಮನಃ ।
ಸೋದರಾಶ್ಚ ಮಹೇಷ್ವಾಸಾಃ ಕಿಮನ್ಯದ್ಭಾಗಧೇಯತಃ ॥೪೧॥

ದುರ್ಯೋಧನನೂ, ಮಹಾಬಲಶಾಲಿಯಾದ ಅವನ ಮಕ್ಕಳೂ, ಮಹಾಬಿಲ್ಲಾರರಾದ ಅವನ ಸಹೋದರರೂ ಸತ್ತಿದ್ದಾರೆ. ವಿಧಿಯಲ್ಲದೆ ಬೇರೆ ಕಾರಣವೇ ಇಲ್ಲ.

ಯತ್ರ(ಶ್ಚ) ಭಾಗ್ಯಸಮಾಯುಕ್ತಃ ಸ ಶಿವಂ ಪ್ರಾಪ್ನುಯಾದ್ಭುವಿ ॥೪೨॥

ಅಹಂ ನಿ(ವಿ)ಯುಕ್ತಃ ಸ್ವೈರ್ಭಾಗ್ಯೈಃ ಪುತ್ರೈಶ್ಚ ಸಹ ಸಂಜಯ ।
ಕಥಮಂಧೋ ಭವಿಷ್ಯಾಮಿ ವೃದ್ಧಶತ್ರುವಶಂ ಗತಃ ॥೪೩॥

ಯಾರು ಭಾಗ್ಯಶಾಲಿಗಳೋ ಅವರು ಭೂಮಿಯಲ್ಲಿ ಮಂಗಳವನ್ನು ಹೊಂದುತ್ತಾರೆ. ನಾನು ಭಾಗ್ಯಶಾಲಿಯೂ ಅಲ್ಲ. ಮಕ್ಕಳನ್ನೂ ಕಳೆದುಕೊಂಡಿದ್ದೇನೆ. ವೃದ್ಧ ಹಾಗೂ ಕುರುಡನಾದ ನಾನು ಏನಾದರೂ ಶತ್ರುಗಳ ಕೈಗೆ ಸಿಕ್ಕಿಹಾಕಿಕೊಂಡರೆ ಏನು ಮಾಡುವುದು?

ನಾನ್ಯದದ್ಯ ಪರಂ ಮನ್ಯೇ ವನವಾಸಾದೃತೇ ಪ್ರಭೋ ।
ಸೋಽಹಂ ವನಂ ಗಮಿಷ್ಯಾಮಿ ನಿರ್ಬಂಧುರ್ಜ್ಞಾತಿಸಂಕ್ಷಯೇ ॥೪೪॥

ಬಂಧುಗಳನ್ನೂ, ಸಂಬಂಧಿಗಳನ್ನು ಕಳೆದುಕೊಂಡ ನನಗೆ ವನವಾಸಕ್ಕಿಂತ ಉತ್ತಮವಾದ ಬೇರೆ ಯಾವುದೂ ಇಲ್ಲ. ಆದ್ದರಿಂದ ನಾನು ವನಕ್ಕೆ ತೆರಳುತ್ತೇನೆ.

ನ ಹಿ ಮೇಽನ್ಯದ್ಭವೇಚ್ಛ್ರೇಯೋ ವನಾಭ್ಯುಪಗಮಾದೃತೇ ।
ಏತಾಮವಸ್ಥಾಂ ಪ್ರಾಪ್ತಸ್ಯ ಲೂನಪಕ್ಷಸ್ಯ ಸಂಜಯ ॥೪೫॥

ಹೇ ಸಂಜಯ! ನನ್ನ ಕಡೆಯವರನ್ನೆಲ್ಲಾ ಕಳೆದುಕೊಂಡು ಇಂತಹ ಅವಸ್ಥೆಯನ್ನು ಹೊಂದಿದ್ದೇನೆ. ಅಂತಹ ನನಗೆ ವನವಾಸಕ್ಕಿಂತ ಬೇರೆ ಯಾವುದೇ ಶ್ರೇಯಸ್ಕರವಾದ ಕಾರ್ಯವು ಇಲ್ಲ.

ದುರ್ಯೋಧನೋ ಹತೋ ಯತ್ರ ಶಲ್ಯಶ್ಚ ಬಲವಾನ್ ಯುಧಿ ।
ದುಶ್ಶಾಸನೋ ವಿಶಸ್ತಶ್ಚ ವಿಕರ್ಣಶ್ಚ ಮಹಾಬಲಃ ॥೪೬॥

ಕಥಂ ನು ಭೀಮಸೇನಸ್ಯ ಶ್ರೋಷ್ಯೇಽಹಂ ಶಬ್ದಮುತ್ತಮಮ್ ।
ಏಕೇನ ಸಮರೇ ಯೇನ ಹತಂ ಪುತ್ರಶತಂ ಮಮ ॥೪೭॥

ಅಸಕೃದ್ವದತಸ್ತಸ್ಯ ದುರ್ಯೋಧನವಧೇನ ಚ ।
ಪುತ್ರಶೋಕಾಭಿಸಂತಪ್ತೋ ನ ಶ್ರೋಷ್ಯೇ ಪರುಷಾ ಗಿರಃ ॥೪೮॥

ದುರ್ಯೋಧನ, ಶಲ್ಯ, ದುಃಶಾಸನ, ವಿಶಸ್ತ, ವಿಕರ್ಣ ಇವರೆಲ್ಲಾ ಸತ್ತಿದ್ದಾರೆ. ಏಕಾಕಿಯಾಗಿ ನನ್ನ ನೂರು ಜನ ಮಕ್ಕಳನ್ನು ಸಾಯಿಸಿದ ಭೀಮಸೇನನ ಭಯಂಕರವಾದ ಯುದ್ಧಗರ್ಜನೆಯನ್ನು ಹೇಗೆ ನಾನು ಕೇಳಲಿ? ಕೇಳಲು ಅಸಾಧ್ಯವಾದ ಕ್ರೂರಮಾತುಗಳನ್ನು ಈ ಭೀಮಸೇನ ಆಡುತ್ತಾನೆ. ದುರ್ಯೋಧನ ವಧೆಯಿಂದಾಗಿ ಪುತ್ರಶೋಕದಿಂದ ಬಳಲುತ್ತಿರುವ ನಾನು ಅವನ ಕಠಿಣಮಾತುಗಳನ್ನು ಕೇಳಲಾರೆ.

ವೈಶಂಪಾಯನಃ

ಏವಂ ಸ ಶೋಕಸಂತಪ್ತಃ ಪಾರ್ಥಿವೋ ಹತಬಾಂಧವಃ ।
ಮುಹುರ್ಮುಹುರ್ಮುಹ್ಯಮಾನಃ ದುಃಖೇನ ಮಹತಾऽऽಪ್ಲುತಃ॥೪೯॥

ವಿಲಪ್ಯ ಸುಚಿರಂ ಕಾಲಂ ಧೃತರಾಷ್ಟ್ರೋऽಂಬಿಕಾಸುತಃ ।
ದೀರ್ಘಮುಷ್ಣಂ ವಿನಿಶ್ವಸ್ಯ ಚಿಂತಯಿತ್ವಾ ಪರಾಭವಮ್ ॥೫೦॥

ದುಃಖೇನ ಮಹತಾ ರಾಜನ್ ಸಂತಪ್ತೋ ಭರತರ್ಷಭ ।
ಪುನರ್ಗಾವಲ್ಗಣಿಂ ಸೂತಂ ಪರ್ಯಪೃಚ್ಛದ್ಯಥಾತಥಮ್ ॥೫೧॥

ವೈಶಂಪಾಯನರು ಹೇಳುತ್ತಾರೆ– ಹೀಗೆ ಬಂಧುಗಳನ್ನು ಕಳೆದುಕೊಂಡು ಶೋಕದಿಂದ ಜರ್ಝರಿತನಾದ ಧೃತರಾಷ್ಟ್ರನು ಬಹಳವಾದ ದುಃಖದಿಂದ ಕೂಡಿಕೊಂಡವನಾಗಿ ಮತ್ತೆ ಮತ್ತೆ ಮೂರ್ಛೆಹೋದನು. ತುಂಬಾ ಸಮಯ ಹೀಗೆ ದುಃಖಿಸುತ್ತಾ ಅಂಬಿಕಾಸುತನಾದ ಧೃತರಾಷ್ಟ್ರನು ನಿಡಿದಾದ ಬಿಸಿಯುಸಿರನ್ನು ಬಿಡುತ್ತಾ, ತನ್ನ ಸೋಲನ್ನು ನೆನೆಯುತ್ತಾ, ಬಹಳವಾದ ದುಃಖದಿಂದ ಸಂತಪ್ತನಾಗಿ ಪುನಃ ಸಂಜಯನನ್ನು ಕೇಳುತ್ತಾನೆ.

ಧೃತರಾಷ್ಟ್ರಃ

ಭೀಷ್ಮದ್ರೋಣೌ ಹತೌ ಶ್ರುತ್ವಾ ಸೂತಪುತ್ರಂ ಚ ಪಾತಿತಮ್ ।
ಸೇನಾಪತಿಂ ಮಹೇಷ್ವಾಸಂ ಕಿಮಕುರ್ವತ ಮಾಮಕಾಃ ॥೫೨॥

ಧೃತರಾಷ್ಟ್ರ ಹೇಳುತ್ತಾನೆ– (ಧೃತರಾಷ್ಟ್ರನು ಮತ್ತೆ ಹಿಂದಿನ ಘಟನೆಗಳನ್ನು ಮೆಲುಕು ಹಾಕಲಿಕ್ಕಾಗಿ ಪ್ರಶ್ನಿಸುತ್ತಾನೆ) ಯುದ್ಧದಲ್ಲಿ ಸೇನಾಪತಿಗಳಾಗಿ ನಿಯುಕ್ತರಾಗಿದ್ದ ಮಹಾಪರಾಕ್ರಮಿಗಳಾದ ಭೀಷ್ಮಾಚಾರ್ಯರು, ದ್ರೋಣಾಚಾರ್ಯರು ಹಾಗೂ ಕರ್ಣ ಇವರು ಹತರಾದ ನಂತರ ನನ್ನ ಪಕ್ಷದವರು ಏನು ಮಾಡಿದರು?

ಯಂ ಯಂ ಸೇನಾಪ್ರಣೇತಾರಂ ಯುದ್ಧೇ ಕುರ್ವಂತಿ ಮಾಮಕಾಃ ।
ಅಚಿರೇಣೈವ ಕಾಲೇನ ತಂ ತಂ ನಿಘ್ನಂತಿ ಪಾಂಡವಾಃ ॥೫೩॥

ನಮ್ಮವರು ಯಾರನ್ನೆಲ್ಲಾ ಸೇನಾಧಿಪತಿಗಳನ್ನಾಗಿ ಮಾಡಿದರೂ ಪಾಂಡವರು ಶೀಘ್ರದಲ್ಲಿಯೇ ಅವರನ್ನು ಸಾಯಿಸುತ್ತಾರೆ.

ರಣಮೂರ್ಧ್ನಿ ಹತೋ ಭೀಷ್ಮಃ ಪಶ್ಯತಾಂ ವಃ ಕಿರೀಟಿನಾ ।
ಏವಮೇವ ಹತೋ ದ್ರೋಣಃ ಸರ್ವೇಷಾಮೇವ ಪಶ್ಯತಾಮ್ ॥೫೪॥

ಯುದ್ಧದಲ್ಲಿ ಎಲ್ಲರು ನೋಡುತ್ತಿರುವಂತೆಯೇ ಅರ್ಜುನನು ಭೀಷ್ಮನನ್ನು ಸೋಲಿಸಿದ್ದಾನೆ. ದ್ರೋಣನೂ ಎಲ್ಲರ ಎದುರುಗಡೆಯೇ ಹತನಾಗಿದ್ದಾನೆ.

ಏವಮೇವ ಹತೋ ಕರ್ಣಃ ಸೂತಪುತ್ರಃ ಪ್ರತಾಪವಾನ್ ।
ಸರಾಜಕಾನಾಂ ಸರ್ವೇಷಾಂ ಪಶ್ಯತಾಂ ವಃ ಕಿರೀಟಿನಾ ॥೫೫॥

ಅರ್ಜುನನು ಮಹಾಪ್ರತಾಪಿಯಾದ ಸೂತಪುತ್ರ ಕರ್ಣನನ್ನೂ ಎಲ್ಲಾ ರಾಜರುಗಳ ಸಮಕ್ಷಮದಲ್ಲಿಯೇ ಕೊಂದಿದ್ದಾನೆ.

ಪೂರ್ವಮೇವಾಹಮುಕ್ತೋಽಸ್ಮಿ ವಿದುರೇಣ ಮಹಾತ್ಮನಾ ।
ದುರ್ಯೋಧನಾಪರಾಧೇನ ಪ್ರಜೇಯಂ ವಿನಶಿಷ್ಯತಿ ॥೫೬॥

ಮಹಾತ್ಮನಾದ ವಿದುರನು ಮೊದಲೇ ನನಗೆ ಹೇಳಿದ್ದ- ದುರ್ಯೋಧನನಿಂದಾಗಿ ನಿನ್ನ ಪ್ರಜೆಗಳೂ ಮಕ್ಕಳು ಎಲ್ಲರೂ ನಾಶ ಹೊಂದುವವರೆಂದು.

ಕೇಚಿನ್ನ ಸಮ್ಯಕ್ಪಶ್ಯಂತಿ ಮೂಢಾಃ ಸಮ್ಯಗವೇಕ್ಷ್ಯ ಚ ।
ತದಿದಂ ಮಮ ಮೂಢಸ್ಯ ತಥಾಭೂತಂ ವಚಸ್ತು ತತ್ ॥೫೭॥

ಲೋಕದಲ್ಲಿ ಮೂಢರಾದ ಕೆಲವರು ಪ್ರತ್ಯಕ್ಷವಾಗಿ ನೋಡುತ್ತಿದ್ದರೂ ವಿಷಯಪದಾರ್ಥಗಳನ್ನು ಸರಿಯಾಗಿ ಗಮನಿಸುವುದಿಲ್ಲ. ಈ ಮಾತಿಗೆ ದೃಷ್ಟಾಂತ-ಮೂಢನಾದ ನಾನೇ! ನನ್ನ ಪಾಲಿಗೆ ಈ ಮಾತು ಸತ್ಯವಾಗಿದೆ.

ಯದಬ್ರವೀನ್ಮಾಂ ಧರ್ಮಾತ್ಮಾ ವಿದುರೋ ದೀರ್ಘದರ್ಶಿವಾನ್ ।
ತತ್ತಥಾ ಸಮನುಪ್ರಾಪ್ತಂ ವಚನಂ ದೀರ್ಘದರ್ಶಿನಃ ॥೫೮॥

ಧರ್ಮಾತ್ಮನಾದ ಹಾಗೂ ದೂರದರ್ಶಿಯಾದ ವಿದುರನು ಯಾವುದನ್ನು ನನಗೆ ಹೇಳಿದ್ದನೋ ಅದು ಹಾಗೆಯೇ ನಡೆದಿದೆ.

ದೈವೋಪಹತಚಿತ್ತೇನ ಯನ್ಮಯಾನುಷ್ಠಿತಂ ಪುರಾ ।
ಅನಯಸ್ಯ ಫಲಂ ತಸ್ಯ ಬ್ರೂಹಿ ಗಾವಲ್ಗಣೇ ಪುನಃ ॥೫೯॥

ಹೇ ಸಂಜಯ! ವಿಧಿಯ ಆಟಕ್ಕೆ ಒಳಗಾದ ನಾನು ಏನೆಲ್ಲಾ ಅನ್ಯಾಯಗಳನ್ನು ಮಾಡಿದ್ದೆನೋ ಅವುಗಳಿಂದುಂಟಾಗುವ ಫಲವನ್ನು ಮತ್ತೆ ಹೇಳು.

ಕೋ ವಾ ಮುಖಮನೀಕಾನಾಮಾಸೀತ್ಕರ್ಣೇ ನಿಪಾತಿತೇ ।
ಅರ್ಜುನಂ ವಾಸುದೇವಂ ಚ ಕೋ ವಾ ಪ್ರತ್ಯುದ್ಯಯೌ ರಥೀ ॥೬೦॥

ಸೇನಾಪತಿಯಾದ ಕರ್ಣನು ಯುದ್ಧದಲ್ಲಿ ಮಡಿದ ಮೇಲೆ ಯಾರು ನಮ್ಮ ಸೇನೆಯ ಅಧಿಪತಿಯಾದರು? ಕೃಷ್ಣಾರ್ಜುನರನ್ನು ಯಾರು ಯುದ್ಧದಲ್ಲಿ ಎದುರಿಸಿದರು?

ಕೇऽರಕ್ಷನ್ ದಕ್ಷಿಣಂ ಚಕ್ರಂ ಮದ್ರರಾಜಸ್ಯ ಸಂಯುಗೇ ।
ವಾಮಂ ವಾ ಯೋದ್ಧುಕಾಮಸ್ಯ ಕೇ ವಾ ವೀರಸ್ಯ ಪೃಷ್ಠತಃ ॥೬೧॥

ಮದ್ರರಾಜನಾದ ಶಲ್ಯನ ರಥದ ಬಲಭಾಗದ ಚಕ್ರರಕ್ಷಕ ಯಾರಾಗಿದ್ದರು? ಯುದ್ಧಸನ್ನದ್ಧನಾದ ಶಲ್ಯನ ಎಡಭಾಗದ ಚಕ್ರರಕ್ಷಕರು ಯಾರು? ಪರಾಕ್ರಮಿಯಾದ ಅವನ ಹಿಂದೆ ಯಾರಿದ್ದರು?

ಕಥಂ ಚ ವಸ್ಸಮೇತಾನಾಂ ಮಹಾರಾಜೋ ಮಹಾಬಲಃ ।
ನಿಹತಃ ಪಾಂಡವೈಸ್ಸಂಖೇ ಪುತ್ರಾ ವಾ ಮಮ ಸಂಜಯ ।
ಬ್ರೂಹಿ ಸರ್ವಂ ಯಥಾತತ್ತ್ವಂ ಭಾರತಾನಾಂ ಮಹಾಕ್ಷಯಮ್ ॥೬೨॥

ಹೀಗೆ ಸುತ್ತಲೂ ನಮ್ಮವರು ಸುತ್ತುವರಿದಿದ್ದರೂ ಮಹಾಬಲಶಾಲಿಯಾದ ಮದ್ರರಾಜನನ್ನು ಹಾಗೂ ನನ್ನ ಮಕ್ಕಳನ್ನು ಯುದ್ಧದಲ್ಲಿ ಪಾಂಡವರು ಹೇಗೆ ಕೊಂದುಹಾಕಿದರು? ಕುರುಗಳ ನಾಶವು ಹೇಗೆ ನಡೆಯಿತೆಂಬುದನ್ನು ಯಥಾವತ್ತಾಗಿ ಎಲ್ಲವನ್ನೂ ಹೇಳು.

ಯಥಾ ಚ ನಿಹತಸ್ಸಂಖೇ ಪುತ್ರೋ ದುರ್ಯೋಧನೋ ಮಮ ।
ಪಾಂಚಾಲಾಶ್ಚ ಯಥಾ ಸರ್ವೇ ನಿಹತಾಃ ಸ್ವಪದಾನುಗಾಃ ॥೬೩॥

ದ್ವಂದ್ವಯುದ್ಧದಲ್ಲಿ ನನ್ನ ಮಗ ದುರ್ಯೋಧನನು ಹೇಗೆ ಸತ್ತ? ಸೇವಕರಿಂದ ಸಹಿತರಾದ ದ್ರೌಪದಿಯ ಐದು ಮಕ್ಕಳು ಹೇಗೆ ಹತರಾದರು?

ಧೃಷ್ಟದ್ಯುಮ್ನಶ್ಶಿಖಂಡೀ ಚ ದ್ರೌಪದ್ಯಾಃ ಪಂಚ ಚಾತ್ಮಜಾಃ ।
ಪಾಂಡವಾಶ್ಚ ಯಥಾ ಮುಕ್ತಾಃ ತಥಾ ತೌ ಸಾತ್ವತೌ ಭುವಿ(ಯುಧಿ) ॥

ಕೃಪಶ್ಚ ಕೃತವರ್ಮಾ ಚ ಭಾರದ್ವಾಜಾತ್ಮಜಸ್ತಥಾ ॥೬೫॥

ಪಾಂಡವರ ಪಕ್ಷದಲ್ಲಿ ಧೃಷ್ಟದ್ಯುಮ್ನ, ಶಿಖಂಡಿ, ದ್ರೌಪದಿಯ ಐದು ಮಕ್ಕಳು, ಧರ್ಮರಾಜ ಮೊದಲಾದ ಪಂಚ ಪಾಂಡವರು ಹಾಗೂ ಕೌರವರ ಪಕ್ಷದಲ್ಲಿ ಪರಾಕ್ರಮಿಗಳಾದ ಕೃಪ, ಕೃತವರ್ಮ, ಅಶ್ವತ್ಥಾಮ ಇವರು ಯುದ್ಧದಲ್ಲಿ ಹೇಗೆ ಉಳಿದುಕೊಂಡರು?

ಯದ್ಯಥಾ ಯಾದೃಶಂ ವೃತ್ತಂ ಯಥಾ ಚೈವೇಹ ಸಾಂಪ್ರತಮ್ ।
ನಿಖಿಲಂ ಶ್ರೋತುಮಿಚ್ಛಾಮಿ ಕುಶಲೋ ಹ್ಯಸಿ ಸಂಜಯ ॥೬೬॥

ಈ ಎಲ್ಲಾ ವಿಷಯಗಳನ್ನು ಹೇಗೆ ನಡೆದಿದೆಯೋ ಹಾಗೆಯೇ ಕೇಳಲು ಉತ್ಸುಕನಾಗಿದ್ದೇನೆ. ಸಂಜಯ! ಇವೆಲ್ಲವನ್ನೂ ಹೇಳಲು ನೀನು ಸಮರ್ಥನಾಗಿರುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ಸಂಜಯನು ಧೃತರಾಷ್ಟ್ರನಿಗೆ ಭೀಮಾದಿಗಳ ಯುದ್ಧವನ್ನು ವರ್ಣಿಸುವುದು

ಸಂಜಯಃ

ಶೃಣು ರಾಜನ್ನವಹಿತೋ ಯಥಾವೃತ್ತೋ ಮಹಾನ್ ಕ್ಷಯಃ ।
ಕುರೂಣಾಂ ಪಾಂಡವಾನಾಂ ಚ ಸಮಾಸಾದ್ಯ ಪರಸ್ಪರಮ್ ॥೧॥

ರಾಜನ್! ಪರಸ್ಪರವಾಗಿ ಯುದ್ಧಮಾಡುತ್ತಿದ್ದ ಕೌರವರ ಮತ್ತು ಪಾಂಡವರ ಮಹತ್ತಾದ ನಾಶವನ್ನು ಹೇಳುತ್ತೇನೆ. ಗಮನವಿಟ್ಟು ಕೇಳು.

ನಿಹತೇ ಸೂತಪುತ್ರೇ ತು ಪಾಂಡವೇನ ಮಹಾತ್ಮನಾ ।
ವಿದ್ರುತೇಷು ಚ ಸೈನ್ಯೇಷು ಸಮಾನೀತೇಷು ಚಾಸಕೃತ್ ॥೨॥

ಮಹಾತ್ಮನಾದ ಅರ್ಜುನನಿಂದ ಕರ್ಣನು ಹತನಾಗಲು ಒಟ್ಟುಸೇರಿಸಿದ್ದ ಎಲ್ಲಾ ಸೈನ್ಯವೂ ಭಯದಿಂದ ಓಡಿಹೋಯಿತು. ಪ್ರಯತ್ನಪಟ್ಟು ಮತ್ತೆ ಕರೆತಂದರೂ ಪುನಃ ಓಡಲಾರಂಭಿಸಿತು.

ಘೋರೇ ಮನುಷ್ಯದೇಹಾನಾಮಾಜೌ ನರವರಕ್ಷಯೇ ।
ಯತ್ತತ್ಕರ್ಣೇ ಹತೇ ಪಾರ್ಥಃ ಸಿಂಹನಾದಮಥಾಕರೋತ್ ॥೩॥

ಭಯಂಕರವಾದ ಯುದ್ಧದಲ್ಲಿ ನರಶ್ರೇಷ್ಠರು ಸತ್ತುಬಿದ್ದಿದ್ದಾರೆ. ಬಹುದೊಡ್ಡದಾದ ಹೆಣದ ರಾಶಿ ಬಿದ್ದಿದೆ. ಕರ್ಣನು ಯಾವಾಗ ಸತ್ತನೋ ಆಗ ಅರ್ಜುನನು ಸಿಂಹಗರ್ಜನೆಯನ್ನು ಮಾಡಿದನು.

ತದಾ ತವ ಸುತಾನ್ ರಾಜನ್ ಪ್ರಾವಿಶತ್ ಸುಮಹದ್ಭಯಮ್ ॥೪॥

ಅರ್ಜುನನ ಗರ್ಜನೆ, ಕರ್ಣನ ಸಾವು ಇವೆರಡರಿಂದ ನಿನ್ನ ಮಕ್ಕಳು ಭಯಗ್ರಸ್ತರಾದರು.

ನ ಸಂಧಾತುಮನೀಕಾನಿ ನ ಚೈವಾಥ ಪರಾಕ್ರಮೇ ।
ಆಸೀದ್ ಬುದ್ಧಿರ್ಹತೇ ಕರ್ಣೇ ತವ ಯೋಧಸ್ಯ ಕಸ್ಯಚಿತ್ ॥೫॥

ಕರ್ಣನನ್ನು ಕಳೆದುಕೊಂಡ ನಿನ್ನ ಯೋಧರಿಗೆ ಚದುರಿಹೋದ ಸೈನ್ಯವನ್ನು ಒಟ್ಟು ಸೇರಿಸಲೂ ಆಗಲಿಲ್ಲ. ವೀರಾವೇಶದಿಂದ ಯುದ್ಧ ಮಾಡಲೂ ಮನಸ್ಸುಂಟಾಗಲಿಲ್ಲ.

ವಣಿಜೋ ನಾವಿ ಭಿನ್ನಾಯಾಮಗಾಧೇ ವಿಪ್ಲವಾ ಇವ ।
ಅಪಾರೇ ಪಾರಮಿಚ್ಛಂತೋ ಹತೇ ದ್ವೀಪೇ ಕಿರೀಟಿನಾ ॥೬॥

ಸೂತಪುತ್ರೇ ಹತೇ ರಾಜನ್ ವಿತ್ರಸ್ತಾಃ ಶರವಿಕ್ಷತಾಃ ।
ಅನಾಥಾ ನಾಥಮಿಚ್ಛಂತೋ ಮೃಗಾಃ ಸಿಂಹಾರ್ದಿತಾ ಇವ ॥೭॥

ಭಗ್ನಶೃಂಗಾ ಇವ ವೃಷಾ ಶೀರ್ಣದಂಷ್ಟ್ರಾ ಇವೋರಗಾಃ ।
ಪ್ರತ್ಯುಪಾಯಾಮ ಸಾಯಾಹ್ನೇ ನಿರ್ಜಿತಾ ಸವ್ಯಸಾಚಿನಾ ॥೮॥

ಹತಪ್ರವೀರಾ ವಿಧ್ವಸ್ತಾ ನಿಕೃತ್ತಾ ನಿಶಿತೈಃ ಶರೈಃ ।
ಸೂತಪುತ್ರೇ ಹತೇ ರಾಜನ್ ಪುತ್ರಾಸ್ತೇ ಪ್ರಾದ್ರವಂಸ್ತತಃ ॥೯॥

ವಿಧ್ವಸ್ತಕವಚಾಃ ಸರ್ವೇ ಕಾಂದಿಶೀಕಾ ವಿಚೇತಸಃ ।
ಅನ್ಯೋನ್ಯಮಭಿನಿಘ್ನಂತೋ ವೀಕ್ಷಮಾಣಾ ಭಯಾದ್ ದಿಶಃ ॥೧೦॥

ಅಪಾರವಾದ ಕಡಲನ್ನು ದಾಟಿ ದಡಸೇರಲು ಉತ್ಸುಕನಾದ ವ್ಯಾಪಾರಿಯ ನಾವೆಯೂ ಮುರಿದುಬಿದ್ದಿದೆ. ಪಕ್ಕದಲ್ಲಿಯೇ ಆಧಾರವಾಗಬಹುದಾಗಿದ್ದ ದ್ವೀಪವೂ ನಾಶವಾಗಿದೆ. ಆಗ ಉಂಟಾಗುವ ಕ್ಷೋಭೆಯಂತೆ ಕೌರವರಲ್ಲಿಯೂ ಕ್ಷೋಭೆಯು ಉಂಟಾಯಿತು. ಭಯಂಕರವಾದ ಯುದ್ಧದಲ್ಲಿ ಜಯವನ್ನು ಗಳಿಸಬೇಕೆಂಬ ತವಕದಲ್ಲಿ ಇದ್ದ ಕೌರವರಿಗೆ ಆಶ್ರಯನಾಗಿದ್ದ ಕರ್ಣನನ್ನು ಅರ್ಜುನನು ಸಂಹರಿಸಿದ್ದಾನೆ. ರಾಜನೇ! ಕರ್ಣನು ಹತನಾಗಲು ನಿನ್ನ ಮಕ್ಕಳೆಲ್ಲರೂ ಭಯಗೊಂಡು ಅನಾಥವಾದ ಜಿಂಕೆಗಳು ಸಿಂಹದಿಂದ ದಾಳಿಗೊಳಗಾಗಿ ರಕ್ಷಕರನ್ನು ಹುಡುಕುವಂತೆ ಅರ್ಜುನನಿಂದ ಸೋತು ರಣರಂಗದಿಂದ ಓಡಿಹೋದರು.

ತಮ್ಮ ಕೋಡನ್ನು ಕಳೆದುಕೊಂಡ ಎತ್ತುಗಳಂತೆ, ವಿಷದ ಹಲ್ಲುಗಳನ್ನು ಕಳೆದುಕೊಂಡ ಹಾವುಗಳಂತೆ ನಿನ್ನ ಮಕ್ಕಳು ವೀರಯೋಧರನ್ನು ಕಳೆದುಕೊಂಡು ಸವ್ಯಸಾಚಿಯಾದ ಅರ್ಜುನನ ಹರಿತವಾದ ಬಾಣಗಳಿಂದ ಗಾಯಗೊಂಡು ಪಲಾಯನ ಮಾಡಿದರು. ಸಾಯಂಕಾಲದ ಹೊತ್ತು ನಾವೆಲ್ಲಾ ಶಿಬಿರಗಳನ್ನು ಸೇರಿಕೊಂಡೆವು.

ಮಾಮೇವ ನೂನಂ ಬೀಭತ್ಸುರ್ಮಾಮೇವ ಚ ವೃಕೋದರಃ ।
ಅಭಿಯಾತೀತಿ ಮನ್ವಾನಾಃ ಪೇತುರ್ಮಮ್ರುಶ್ಚ ಭಾರತ ॥೧೧॥

ನನ್ನ ವಿರುದ್ಧವಾಗಿ ಯುದ್ಧಮಾಡಲು ಯುದ್ಧ ಭಯಂಕರನಾದ ಅರ್ಜುನನು ಬಂದಿದ್ದಾನೆ, ನನ್ನವಿರುದ್ಧವಾಗಿ ಯುದ್ಧಮಾಡಲು ಭೀಮನು ಬಂದಿದ್ದಾನೆ, ಎಂಬುದಾಗಿ ತಿಳಿಯುತ್ತಾ ಭಯದಿಂದ ಬೀಳುತ್ತಿದ್ದರು. ಬಿದ್ದು ಸಾಯುತ್ತಿದ್ದರು.

ಅಶ್ವಾನನ್ಯೇ ಗಜಾನನ್ಯೇ ರಥಾನನ್ಯೇ ಮಹಾರಥಾಃ ।
ಆರುಹ್ಯ ಜವಸಂಪನ್ನಾಃ ಪಾದಾತಾನ್ ಪ್ರಜಹುರ್ಭಯಾತ್ ॥೧೨॥

ಮಹಾರಥರೆನಿಸಿದವರೂ ಕೂಡ ಭಯಗೊಂಡು ಕೆಲವರು ಕುದುರೆಗಳನ್ನೂ, ಕೆಲವರು ಆನೆಗಳನ್ನೂ, ಕೆಲವರು ರಥವನ್ನೂ ಹತ್ತಿ ಬಹುವೇಗದಿಂದ ಓಡಿಹೋದರು.

ಕುಂಜರೈಃ ಸ್ಯಂದನಾ ಭಗ್ನಾಃ ಸಾದಿನಶ್ಚ ಮಹಾರಥೈಃ ।
ಪದಾತಿಸಂಘಾಶ್ಚಾಶ್ವೌಘೈಃ ಪಲಾಯದ್ಭಿರ್ಭೃಶಂ ಹತಾಃ ॥೧೩॥

ಓಡುತ್ತಿದ್ದ ಆನೆಗಳಿಂದಾಗಿ ರಥಗಳು ಪುಡಿಯಾದವು. ದೊಡ್ಡ ದೊಡ್ಡ ರಥಗಳಿಗೆ ಸಿಲುಕಿ ಕುದುರೆ ಸವಾರರು ಸತ್ತುಬಿದ್ದರು. ಓಡುತ್ತಿರುವ ಕುದುರೆಗಳ ಕಾಲಿಗೆ ಸಿಲುಕಿ ಪದಾತಿಗಳು ಬಹಳವಾಗಿ ಸತ್ತರು.

ವ್ಯಾಲತಸ್ಕರಸಂಕೀರ್ಣೇ ಸಾರ್ಥಹೀನಾ ಯಥಾ ವನೇ ।
ತಥಾ ತ್ವದೀಯಾ ನಿಹತೇ ಸೂತಪುತ್ರೇ ತದಾऽಭವನ್ ॥೧೪॥

ಸೇನಾಪತಿಯಾದ ಕರ್ಣನು ಸತ್ತು ಬಿದ್ದಾಗ ನಿನ್ನ ಕಡೆಯವರೆಲ್ಲಾ ಅನಾಥರಾದರು. ವಿಷಜಂತುಗಳು ಮತ್ತು ಕಳ್ಳರಿಂದ ತುಂಬಿದ ಕಾಡಿನಲ್ಲಿ ರಕ್ಷಕರಿಲ್ಲದಿರುವ ಜನರಂತೆ ನಿನ್ನ ಕಡೆಯವರು ಆದರು.

ಹತಾರೋಹಾಸ್ತಥಾ ನಾಗಾಶ್ಛಿನ್ನಹಸ್ತಾಸ್ತಥಾऽಪರೇ ।
ಸರ್ವಂ ಪಾರ್ಥಮಯಂ ಲೋಕಮಪಶ್ಯನ್ ವೈ ಭಯಾರ್ದಿತಾಃ ॥೧೫॥

ಕುದುರೆಗಳನ್ನು ಮನೆಗಳನ್ನು ಕಳಕೊಂಡವರು, ಕೈಮುರಿದುಕೊಂಡವರು ಹೀಗೆ ಎಲ್ಲರೂ ಭಯದಿಂದ ಸುತ್ತಮುತ್ತಲೂ ಅರ್ಜುನನೇ ಇದ್ದಾನೆ ಎಂಬುದಾಗಿ ತಿಳಿದರು.

ತಾನ್ ಪ್ರೇಕ್ಷ್ಯ ದ್ರವತಃ ಸರ್ವಾನ್ ಭೀಮಸೇನಭಯಾರ್ದಿತಾನ್ ।
ದುರ್ಯೋಧನೋಽಥ ಸ್ವಂ ದೂತಂ ಹಾಹಾಕೃತ್ವೈವಮಬ್ರವೀತ್ ॥೧೬॥

ಹೀಗೆ ಭೀಮನ ಭಯದಿಂದ ಓಡುತ್ತಿರುವ ತನ್ನ ಕಡೆಯವರನ್ನೆಲ್ಲಾ ನೋಡಿದ ದುರ್ಯೋಧನನು ಜೋರಾಗಿ ಬೊಬ್ಬೆಹೊಡೆದು ತನ್ನ ದೂತ(ಸಾರಥಿ)ನಿಗೆ ಹೀಗೆ ಹೇಳುತ್ತಾನೆ.

ನಾತಿಕ್ರಮಿಷ್ಯತೇ ಪಾರ್ಥೋ ಧನುಷ್ಪಾಣಿಮವಸ್ಥಿತಮ್ ।
ಜಘ್ನೇ ವರ್ತಮಾನಂ ಮಾಂ ತೂರ್ಣಮಶ್ವಾನ್ ಪ್ರಚೋದಯ॥೧೭॥

ಧನುರ್ಧಾರಿಯಾಗಿ ಸೇನಾಸಮುದ್ರದ ತೀರದಲ್ಲಿ ಯುದ್ಧಮಾಡುತ್ತಾ ಇರುವ ನನ್ನನ್ನು ಅರ್ಜುನನು ಇನ್ನೂ ದಾಟಿಹೋಗಲಿಲ್ಲ. ಆದ್ದರಿಂದ ಬೇಗನೆ ಕುದುರೆಗಳನ್ನು ಓಡಿಸು.

ಸಮರೇ ಯುಧ್ಯಮಾನಂ ಹಿ ಕೌಂತೇಯೋ ಮಾಂ ಧನಂಜಯಃ ।
ನೋತ್ಸಹೇತಾಪ್ಯತಿಕ್ರಾಂತುಂ ವೇಲಾಮಿವ ಮಹಾರ್ಣವಃ ॥೧೮॥

ಮಹಾಸಮುದ್ರವೂ ಕೂಡ ತೀರವನ್ನು ಮೀರಿ ಹೋಗಲಾರದು. ಹಾಗೆಯೇ ರಣರಂಗದಲ್ಲಿ ಯುದ್ಧಮಾಡುತ್ತಿರುವ ನನ್ನನ್ನು ಕುಂತೀಪುತ್ರ ಅರ್ಜುನನು ಮೀರಿಹೋಗಲು ಸಮರ್ಥನಾಗಲಾರನು.

ಅದ್ಯಾರ್ಜುನಂ ಸಗೋವಿಂದಂ ಮಾನಿನಂ ಚ ವೃಕೋದರಮ್ ।
ನಿಹತ್ಯ ಶಿಷ್ಟಾನ್ ಶತ್ರೂಂಶ್ಚ ಕರ್ಣಸ್ಯಾನೃಣ್ಯಮಾಪ್ನುಯಾಮ್ ॥೧೯॥

ಇವತ್ತು ನಾನು ಅರ್ಜುನ ಮತ್ತು ಅವನ ಸಹವರ್ತಿ ಕೃಷ್ಣ ಇವರೀರ್ವರನ್ನೂ, ಮಾನವಂತನಾದ ಭೀಮನನ್ನೂ ಹಾಗೂ ಉಳಿದೆಲ್ಲಾ ಶತ್ರುಗಳನ್ನೂ ಕೊಂದು ಕರ್ಣನ ಋಣವನ್ನು ಪರಿಹರಿಸಿಕೊಳ್ಳುತ್ತೇನೆ.''

ತಚ್ಛ್ರುತ್ವಾ ಕುರುರಾಜಸ್ಯ ಶೂರಾರ್ಯಸದೃಶಂ ವಚಃ ।
ಸೂತೋ ಹೇಮಪರಿಚ್ಛನ್ನಾನ್ ಶನೈರಶ್ವಾನಚೋದಯತ್ ॥೨೦॥

ದುರ್ಯೋಧನನ ಈ ವೀರೋಚಿತವಾದ ಮಾತನ್ನುಕೇಳಿದ ಸಾರಥಿಯು ಬಂಗಾರದ ಮೇಲ್ಹೊದಿಕೆಗಳನ್ನು ಹಾಕಿಕೊಂಡಿರುವ ಕುದುರೆಗಳನ್ನು ಓಡಿಸುತ್ತಾನೆ.

ಗಜಾಶ್ವರಥಹೀನಾಸ್ತು ಪದಾತಾಶ್ಚೈವ ಮಾರಿಷ ।
ಪಂಚವಿಂಶತಿಸಾಹಸ್ರಾಃ ಪ್ರಾದ್ರವನ್ ಶನಕೈರಿವ ॥೨೧॥

ಎಲೈ ರಾಜನೇ! ಕೌರವನ ಪಕ್ಷದಲ್ಲಿ ಆನೆ, ಕುದುರೆ, ರಥಗಳು ಇರಲಿಲ್ಲ. ಕೇವಲ ಇಪ್ಪತ್ತೈದು ಸಾವಿರ ಪದಾತಿಗಳು ನಿಧಾವಾಗಿ ಶತ್ರುಗಳ ಮೇಲೇರಿ ಬಂದರು.

ತಾನ್ ಭೀಮಸೇನಃ ಸಂಕ್ರುದ್ಧೋ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಬಲೇನ ಚತುರಂಗೇಣ ಪರಿಕ್ಷಿಪ್ಯಾಹನಚ್ಛರೈಃ ॥೨೨॥

ಕುಪಿತನಾದ ಭೀಮಸೇನ ಮತ್ತು ದ್ರುಪದಪುತ್ರನಾದ ಧೃಷ್ಟದ್ಯುಮ್ನರು ಗಜಾಶ್ವರಥಪದಾತಿಯುಕ್ತವಾದ ಚತುರಂಗಸೇನೆಯಿಂದ ಎದುರಿಸಿ ಕ್ರಮೇಣ ನಾಶಮಾಡಿದರು.

ಪ್ರತ್ಯಯುಧ್ಯಂಸ್ತು ತೇ ಸರ್ವೇ ಭೀಮಸೇನಂ ಸಪಾರ್ಷತಮ್ ।
ಪಾರ್ಥಪಾರ್ಷತಯೋಶ್ಚಾನ್ಯೇ ಜಗೃಹುಸ್ತತ್ರ ನಾಮನೀ ॥೨೩॥

ದುರ್ಯೋಧನನ ಸೈನಿಕರೂ ಈ ಭೀಮ-ಧೃಷ್ಟದ್ಯುಮ್ನರನ್ನು ಎದುರಿಸಿ ಅವರೀರ್ವರ ಹೆಸರನ್ನು ಕರೆಯುತ್ತಾ ಯುದ್ಧಮಾಡಿದರು.

ಅಕ್ರುದ್ಧ್ಯತ ರಣೇ ಭೀಮಸ್ತೈರ್ಮಧೇ ಪ್ರತ್ಯವಸ್ಥಿತೈಃ ।
ಸೋಽವತೀರ್ಯ ರಥಾತ್ತೂರ್ಣಂ ಗದಾಪಾಣಿರಯುಧ್ಯತ ॥೨೪॥

ಯುದ್ಧದಲ್ಲಿ ಪ್ರತಿಸ್ಪರ್ಧಿಗಳಾಗಿ ನಿಂತಿರುವ ಶತ್ರುಸೈನಿಕರಿಂದಾಗಿ ಭೀಮನು ಮತ್ತೂ ಕ್ರುದ್ಧನಾದನು. ಕೂಡಲೇ ರಥದಿಂದ ಕೆಳಗೆ ಧುಮುಕಿ ಕೈಯಲ್ಲಿ ಗದೆಯನ್ನು ಹಿಡಿದುಕೊಂಡು ಯುದ್ಧಮಾಡಿದನು.

ನ ತಾನ್ ರಥಸ್ಥೋ ಭೂಮಿಷ್ಠಾನ್ ಧರ್ಮಾಪೇಕ್ಷೀ ವೃಕೋದರಃ ।
ಯೋಧಯಾಮಾಸ ಕೌಂತೇಯೋ ಭುಜವೀರ್ಯಮುಪಾಶ್ರಿತಃ ॥೨೫॥

ಧರ್ಮಯುದ್ಧದಲ್ಲಿ ತೊಡಗಿರುವ ಭೀಮನು ತಾನು ರಥದ ಮೇಲಿನಿಂದ ಕೆಳಗಿರುವ ಪದಾತಿಗಳೊಂದಿಗೆ ಯುದ್ಧಮಾಡಲು ಇಷ್ಟಪಡಲಿಲ್ಲ. ಅದು ಧರ್ಮವಿರುದ್ಧವಾಗುತ್ತಿತ್ತು. ತನ್ನ ಭುಜಬಲದಿಂದಲೇ ಯುದ್ಧಮಾಡಿದನು.

ಜಾತರೂಪಪರಿಚ್ಛನ್ನಾಂ ಪ್ರಗೃಹ್ಯ ಮಹತೀಂ ಗದಾಮ್ ।
ನ್ಯವಧೀತ್ ತಾವಕಾನ್ ಸರ್ವಾನ್ ದಂಡಪಾಣಿರಿವಾಂತಕಃ ॥೨೬॥

ಬಂಗಾರದ ಹೊದಿಕೆಯುಳ್ಳ ಬೃಹತ್ತಾದ ಗದೆಯನ್ನು ಕೈಗೆತ್ತಿಕೊಂಡು ನಿನ್ನ ಕಡೆಯವರೆನ್ನೆಲ್ಲ ಸಾಯಿಸಿದನು. ಅದು ಯಮನು ದಂಡಪಾಣಿಯಾಗಿ ಜೀವರನ್ನು ಸಾಯಿಸುವ ಹಾಗೆ ಇತ್ತು.

ಪದಾತಯೋ ಹಿ ಸಂರಬ್ಧಾಸ್ತ್ಯಕ್ತಜೀವಿತಬಾಂಧವಾಃ ।
ಭೀಮಮಭ್ಯದ್ರವನ್ ಸಂಖೇ ಪತಂಗಾ ಇವ ಪಾವಕಮ್ ॥೨೭॥

ತಮ್ಮ ಪ್ರಾಣ ಹಾಗೂ ಬಂಧುಗಳ ಮಮತೆಯನ್ನು ಬಿಟ್ಟ ಸೈನಿಕರು ಬಹು ಸಂಭ್ರಮದಿಂದ ಯುದ್ಧದಲ್ಲಿ ಭೀಮನನ್ನು ಎದುರಿಸಿದರು. ಇದು ಪತಂಗಗಳು ತಾವಾಗಿಯೇ ಬೆಂಕಿಗೆ ಬೀಳುವ ಹಾಗೆ ಇತ್ತು.

ಆಸಾದ್ಯ ಭೀಮಸೇನಂ ತೇ ಸಂರಬ್ಧಾ ಯುದ್ಧದುರ್ಮದಾಃ ।
ವಿನೇದುಃ ಸಹಸಾ ದೃಷ್ಟ್ವಾ ಭೂತಗ್ರಾಮಾ ಇವಾಂತಕಮ್ ॥೨೮॥

ಭೀಮಸೇನನ ಎದುರಿಗೆ ಬಂದ ಯುದ್ಧದ ಮದವೇರಿದ ಸೈನಿಕರು ಕೂಡಲೇ ಜೋರಾಗಿ ಬೊಬ್ಬಿಟ್ಟರು. ಅದು, ಯಮನನ್ನು ಕಂಡು ಜೀವರು ಬೊಬ್ಬಿಡುವಂತೆ ಇತ್ತು.

ಶ್ಯೇನವದ್ ವ್ಯಚರದ್ ಭೀಮಃ ಖಡ್ಗೇನ ಗದಯಾ ತಥಾ ।
ಪಂಚವಿಂಶತಿಸಾಹಸ್ರಾಂಸ್ತಾವಕಾನಾಂ ವ್ಯಪೋಥಯತ್ ॥೨೯॥

ರಣರಂಗದಲ್ಲಿ ಭೀಮನು ಗರುಡನಂತೆ ಸಂಚರಿಸುತ್ತಾ, ಖಡ್ಗ ಮತ್ತು ಗದೆಯಿಂದ ನಿನ್ನ ಕಡೆಯ ಇಪ್ಪತ್ತೈದು ಸಾವಿರ ಸೈನಿಕರನ್ನು ಕೆಳಬೀಳಿಸಿದನು.

ಹತ್ವಾ ತತ್ಪುರುಷಾನೀಕಂ ಭೀಮಃ ಸತ್ಯಪರಾಕ್ರಮಃ ।
ಧೃಷ್ಟದ್ಯುಮ್ನಂ ಪುರಸ್ಕೃತ್ಯ ಪುನಸ್ತಸ್ಥೌ ಮಹಾಬಲಃ ॥೩೦॥

ಮಹಾಬಲಶಾಲಿ ಹಾಗೂ ಸತ್ಯಪರಾಕ್ರಮನಾದ ಭೀಮನು ಆ ಸೈನಿಕಸಮೂಹವನ್ನು ಸಾಯಿಸಿ, ಸೇನಾಪತಿ ಧೃಷ್ಟದ್ಯುಮ್ನನನ್ನು ಮುಂದೆ ಇಟ್ಟುಕೊಂಡು ಮತ್ತೆ ಯುದ್ಧಕ್ಕೆ ನಿಂತನು.

ಧನಂಜಯೋ ರಥಾನೀಕಮನ್ವಪದ್ಯತ ವೀರ್ಯವಾನ್ ॥೩೧॥

ಮಾದ್ರೀಪುತ್ರೌ ಚ ಶಕುನಿಂ ಸಾತ್ಯಕಿಶ್ಚ ಮಹಾಬಲಃ ।
ಜವೇನಾಭ್ಯಪತನ್ ಹೃಷ್ಟಾ ಘ್ನಂತೋ ದೌರ್ಯೋಧನಂ ಬಲಮ್ ॥೩೨॥

ವೀರನಾದ ಅರ್ಜುನನು ರಥಸೇನೆಯನ್ನು ಎದುರಿಸಿದ. ಮಾದ್ರಿಯ ಪುತ್ರರಾದ ನಕುಲ-ಸಹದೇವ ಹಾಗೂ ಮಹಾಬಲಶಾಲಿಯಾದ ಸಾತ್ಯಕಿ ಇವರು ದುರ್ಯೋಧನನ ಸೇನೆಯನ್ನು ಸಂತೋಷದಿಂದ ಸದೆಬಡಿಯುತ್ತಾ ವೇಗವಾಗಿ ಶಕುನಿಯನ್ನು ಎದುರುಗೊಂಡರು.

ತಸ್ಯಾಶ್ವವಾಹಾನ್ ಸುಬಹೂಂಸ್ತೇ ನಿಹತ್ಯ ಶಿತೈಃ ಶರೈಃ ।
ತಮನ್ವಧಾವಂಸ್ತ್ವರಿತಾಸ್ತತ್ರ ಯುದ್ಧಮವರ್ತತ ॥೩೩॥

ಆ ಶಕುನಿಯ ಅನೇಕ ಕುದುರೆಸವಾರರನ್ನು ಹರಿತವಾದ ಬಾಣಗಳಿಂದ ಕೊಂದು, ಬೇಗನೆ ಅವನ ಮೇಲೆ ಆಕ್ರಮಣ ಮಾಡಿದನು. ಅಲ್ಲಿ ಅವರ ಮಧ್ಯೆ ಯುದ್ಧ ನಡೆಯಿತು.

ತತೋ ಧನಂಜಯೋ ರಾಜನ್ ರಥಾನೀಕಮಗಾಹತ ।
ವಿಶ್ರುತಂ ತ್ರಿಷು ಲೋಕೇಷು ಗಾಂಡೀವಂ ವ್ಯಾಕ್ಷಿಪನ್ ಧನುಃ ॥೩೪॥

ರಾಜನೇ! ಅರ್ಜುನನು ಮೂರು ಲೋಕದಲ್ಲಿ ಪ್ರಸಿದ್ಧವಾದ ತನ್ನ ಗಾಂಡೀವ ಧನುಸ್ಸನ್ನು ಠೇಂಕರಿಸುತ್ತಾ ರಥಸೇನೆಯನ್ನು ಪ್ರವೇಶಿಸಿದನು.

ಕೃಷ್ಣಸಾರಥಿಮಾಯಾಂತಂ ದೃಷ್ಟ್ವಾ ಶ್ವೇತಹಯಂ ರಥಮ್ ।
ಅರ್ಜುನಂ ಚಾಪಿ ಯೋದ್ಧಾರಂ ತ್ವದೀಯಾಃ ಪ್ರಾದ್ರವನ್ ಭಯಾತ್ ॥

ಕೃಷ್ಣನೇ ಸಾರಥಿಯಾಗಿಯುಳ್ಳ ಮತ್ತು ಬೆಳ್ಳಗಿನ ಕುದುರೆಗಳನ್ನು ಹೊಂದಿದ ರಥವನ್ನೂ, ಅದರ ಮೇಲಿಂದ ಯುದ್ಧ ಮಾಡುತ್ತಿರುವ ಅರ್ಜುನನನ್ನೂ ಕಂಡು ನಿನ್ನವರು ಭಯದಿಂದ ಓಡಿಹೋದರು.

ವಿಪ್ರಹೀನರಥಾಶ್ಚಾಶ್ವಾಶ್ಚ ಶರೈಶ್ಚ ಪರಿವಾರಿತಾಃ ।
ಪಂಚವಿಂಶತಿಸಾಹಸ್ರಾಃ ಪಾರ್ಥಮಾರ್ಚ್ಛನ್ ಪದಾತಯಃ ॥೩೬॥

ರಥಗಳನ್ನೂ ಕುದುರೆಗಳನ್ನೂ ಕಳೆದುಕೊಂಡ ಇಪ್ಪತ್ತೈದು ಸಾವಿರ ಕಾಲಾಳುಗಳು ಬಾಣಗಳಿಂದ ಆಚ್ಛಾದಿತರಾಗಿ ಅರ್ಜುನನನ್ನು ಆಕ್ರಮಿಸಿದರು.

ಹತ್ವಾ ತತ್ಪುರುಷಾನೀಕಂ ಪಾಂಚಾಲಾನಾಂ ಮಹಾರಥಃ ।
ಭೀಮಸೇನಂ ಪುರಸ್ಕೃತ್ಯ ನ ಚಿರಾತ್ ಪ್ರತ್ಯದೃಶ್ಯತ ॥೩೭॥

ಪಾಂಚಾಲದೇಶದ ಮಹಾರಥಿಯಾದ ಧೃಷ್ಟದ್ಯುಮ್ನನು ಆ ಕಾಲಾಳುಸೈನ್ಯವನ್ನು ಕೊಂದುಹಾಕಿ, ಭೀಮಸೇನನನ್ನು ಮುಂದಿಟ್ಟುಕೊಂಡು ಬೇಗನೆ ಕಾಣಿಸಿಕೊಂಡನು.

ಮಹಾಧನುರ್ಧರಃ ಶ್ರೀಮಾನಮಿತ್ರಗಣಮರ್ದನಃ ।
ಪುತ್ರಃ ಪಾಂಚಾಲರಾಜಸ್ಯ ಧೃಷ್ಟದ್ಯುಮ್ನೋ ಮಹಾಯಶಾಃ ॥೩೮॥

ಪಾಂಚಾಲರಾಜನಾದ, ದ್ರುಪದನ ಮಗನಾದ ಈ ಧೃಷ್ಟದ್ಯುಮ್ನನು ಕಾಂತಿಮಾನ್ ಆಗಿದ್ದಾನೆ. ಒಳ್ಳೆಯ ಬಿಲ್ಲಾರನೂ ಹೌದು. ಶತ್ರುಗಳ ಸಮೂಹವನ್ನು ನಾಶ ಮಾಡುವವನು. ಬಹಳ ಕೀರ್ತಿವಂತನಾಗಿದ್ದಾನೆ.

ಪಾರಾವತಸವರ್ಣಾಶ್ವಂ ಕೋವಿದಾರವರಧ್ವಜಮ್ ।
ಧೃಷ್ಟದ್ಯುಮ್ನಂ ರಣೇ ದೃಷ್ಟ್ವಾ ತವದೀಯಾಃ ಪ್ರಾದ್ರವನ್ ಭಯಾತ್॥೩೯॥

ಪಾರಿವಾಳದ ಹಾಗೆ ಬೆಳ್ಳಗಿನ ಕುದುರೆಗಳುಳ್ಳ, ಕೋವಿದಾರ ವೃಕ್ಷದ ಧ್ವಜವುಳ್ಳ ಧೃಷ್ಟದ್ಯುಮ್ನನನ್ನು ನೋಡಿ ನಿನ್ನವರು ಭಯದಿಂದ ಓಡಿ ಹೋದರು.

ಗಾಂಧಾರರಾಜಂ ಶೀಘ್ರಾಸ್ತ್ರಮನುಸೃತ್ಯ ಯಶಸ್ವಿನೌ ।
ಅಚಿರಾತ್ ಪ್ರತ್ಯದೃಶ್ಯೇತಾಂ ಮಾದ್ರೀಪುತ್ರೌ ಸಸಾತ್ಯಕೀ ॥೪೦॥

ಯಶೋವಂತರಾದ, ಮಾದ್ರಿಯ ಮಕ್ಕಳಾದ ನಕುಲ-ಸಹದೇವರು ಸಾತ್ಯಕಿಯೊಂದಿಗೆ ಶೀಘ್ರವಾಗಿ ಅಸ್ತ್ರಪ್ರಯೋಗಮಾಡುವ ಶಕುನಿಯನ್ನು ಬೆನ್ನಟ್ಟುತ್ತಾ ಬೇಗನೆ ಕಾಣಿಸಿಕೊಂಡರು.

ಚೇಕಿತಾನಃ ಶಿಖಂಡೀ ಚ ದ್ರೌಪದೇಯಾಶ್ಚ ಮಾರಿಷ ।
ಹತ್ವಾ ತವದೀಯಂ ಸುಮಹತ್ಸೈನ್ಯಂ ಶಂಖಾನಧ್ಮಾಧ್ಮಮನ್ ॥೪೧॥

ರಾಜನೇ! ಚೇಕಿತಾನ, ಶಿಖಂಡೀ ಮತ್ತು ದ್ರೌಪದಿಯ ಮಕ್ಕಳು ನಿನ್ನ ಪಕ್ಷದ ಬಹಳ ಸೈನ್ಯವನ್ನು ನಾಶಮಾಡಿ ವಿಜಯದ ಶಂಖನಾದವನ್ನು ಮಾಡಿದರು.

ತೇ ಸರ್ವೇ ತಾವಕಾನ್ ಪ್ರೇಕ್ಷ್ಯ ದ್ರವತೋ ವೈ ಪರಾಙ್ಮುಖಾನ್ ।
ಅಭ್ಯಧಾವಂತ ನಿಘ್ನಂತೋ ವೃಷಾನ್ ಜಿತ್ವಾ ವೃಷಾ ಇವ ॥೪೨॥

ಗೂಳಿಕಾಳಗದಲ್ಲಿ ಗೆದ್ದ ಗೂಳಿಯು ಸೋತ ಗೂಳಿಯನ್ನು ಅಟ್ಟಿಸಿಕೊಂಡು ಹೋಗುವಂತೆ ಯುದ್ಧದಿಂದ ವಿಮುಖರಾಗಿ ಓಡುತ್ತಿರುವ ನಿನ್ನ ಕಡೆಯವರನ್ನು ನೋಡಿದ ಪಾಂಡವ ವೀರರು ಹೊಡೆಯುತ್ತಾ ಅಟ್ಟಿಸಿಕೊಂಡು ಹೋದರು.

ಸೇನಾವಶೇಷಂ ತಂ ದೃಷ್ಟ್ವಾ ತವ ಪುತ್ರಸ್ಯ ಪಾಂಡವಃ ।
ಅವಸ್ಥಿತಂ ಸವ್ಯಸಾಚೀ ಚುಕ್ರೋಧ ಬಲವನ್ನೃಪ ॥೪೩॥

ರಾಜನೇ! ನಿನ್ನ ಮಗನ ಸೈನ್ಯದ ಅವಶೇಷವನ್ನು ಕಂಡ ಸವ್ಯಸಾಚಿ ಎನಿಸಿದ ಅರ್ಜುನನು ಬಹು ಕುಪಿತನಾದನು.

ತತ ಏನಂ ಶರೈ ರಾಜನ್ ಸಹಸಾ ಸಮವಾಕಿರತ್ ।
ರಜಸಾ ಚೋದ್ಧತೇನಾಥ ನ ಸ್ಮ ಕಿಂಚನ ದೃಶ್ಯತೇ ॥೪೪॥

ಅಳಿದುಳಿದ ಸೇನೆಯ ಮೇಲೆ ಅರ್ಜುನನು ಬಾಣಗಳ ಮಳೆಯನ್ನು ಸುರಿಸಿದನು. ಅದರಿಂದ ಎದ್ದ ಧೂಳಿನಿಂದ ಯಾವ ಪದಾರ್ಥಗಳೂ ಕಾಣದಾದವು.

ಅಂಧಕಾರೀಕೃತೇ ಲೋಕೇ ಶರೀಭೂತೇ ಮಹೀತಳೇ ।
ದಿಶಃ ಸರ್ವಾ ಮಹಾರಾಜ ತಾವಕಾಃ ಪ್ರಾದ್ರವನ್ ಭಯಾತ್ ॥೪೫॥

ಭೂಮಿಯು ಬಾಣಗಳಿಂದ ತುಂಬಿಹೋಯಿತು. ಯುದ್ಧದ ಧೂಳಿನಿಂದ ಎಲ್ಲಾ ದಿಕ್ಕುಗಳಲ್ಲೂ ಕತ್ತಲೆ ಆವರಿಸಿತು. ನಿನ್ನವರು ಭಯದಿಂದ ಓಡಿಹೋದರು.

ಭಜ್ಯಮಾನೇಷು ಸರ್ವೇಷು ಕುರುರಾಜೋ ವಿಶಾಂಪತೇ ।
ಪರೇಷಾಮಾತ್ಮನಶ್ಚೈವ ಸೈನ್ಯೇ ತೇ ಸಮುಪಾದ್ರವತ್ ॥೪೬॥

ರಾಜನೇ! ಎಲ್ಲರೂ ಯುದ್ಧದಲ್ಲಿ ನಾಶಹೊಂದುತ್ತಿರಲು ಕುರುರಾಜನಾದ ದುರ್ಯೋಧನನು ಎದುರಾಳಿಗಳ ಹಾಗೂ ತನ್ನ ಸೈನ್ಯದ ಮೇಲೆ ಏರಿಬಂದನು.

ತತೋ ದುರ್ಯೋಧನಃ ಸರ್ವಾನಾಜುಹಾವಾಥ ಪಾಂಡವಾನ್ ।
ಯುದ್ಧಾಯ ಭರತಶ್ರೇಷ್ಠ ದೇವಾನಿವ ಪುರಾ ಬಲಿಃ ॥೪೭॥

ಹೇ ಭಾರತೋತ್ತಮನೇ! ಅನಂತರ ಬಲಿಯು ದೇವತೆಗಳನ್ನು ಯುದ್ಧಕ್ಕೆ ಕರೆದಂತೆ ದುರ್ಯೋಧನನು ಎಲ್ಲಾ ಪಾಂಡವರನ್ನೂ ಯುದ್ಧಕ್ಕೆ ಆಹ್ವಾನಿಸುತ್ತಾನೆ.

ತ ಏನಮಭಿಗರ್ಜಂತಂ ಸಹಿತಾಃ ಸಮುಪಾದ್ರವನ್ ।
ನಾನಾಶಸ್ತ್ರಭೃಜಃ ಕ್ರುದ್ಧಾ ಭರ್ತ್ಸಯಂತೋ ಮುಹುರ್ಮುಹುಃ ॥೪೮॥

ಹೀಗೆ ಗರ್ಜಿಸುತ್ತಿರುವ ದುರ್ಯೋಧನನನ್ನು ಎಲ್ಲರೂ ಸೇರಿ ವಿವಿಧ ಶಸ್ತ್ರಾಸ್ತ್ರಗಳ ಮಳೆಗರೆಯುತ್ತ, ಕೋಪದಿಂದ ಪರಸ್ಪರ ದೂಷಿಸುತ್ತಾ ಚೆನ್ನಾಗಿ ಎದುರಿಸಿದರು.

ದುರ್ಯೋಧನೋಽಪ್ಯಸಂಭ್ರಾಂತಸ್ತಾನರೀನ್ ವ್ಯಧಮಚ್ಛರೈಃ ॥೪೯॥

ದುರ್ಯೋಧನನೂ ಯಾವುದೇ ಗಾಬರಿಗೊಳಗಾಗದೆ ಆ ಶತ್ರುಗಳನ್ನು ಬಾಣಗಳಿಂದ ಪುಡಿ ಪುಡಿ ಮಾಡಿದನು.

ತತ್ರಾದ್ಭುತಮಪಶ್ಯಾಮ ತವ ಪುತ್ರಸ್ಯ ಪೌರುಷಮ್ ।
ಯದೇನಂ ಪಾಂಡವಾಃ ಸರ್ವೇ ನ ಶೇಕುರತಿವರ್ತಿತುಮ್ ॥೫೦॥

ಪಾಂಡವರಿಗೆ ಮೀರಲಾಗದ ನಿನ್ನ ಮಗನ ಅದ್ಭುತವಾದ ಪೌರುಷವನ್ನು ನಾವೆಲ್ಲಾ ನೋಡಿದೆವು.

ನಾತಿದೂರಾಪಯಾತಂ ಚ ಕೃತಬುದ್ಧಿಂ ಪಲಾಯನೇ ।
ದುರ್ಯೋಧನಃ ಸ್ವಕಂ ಸೈನ್ಯಮಪಶ್ಯದ್ ಭೃಶವಿಕ್ಷತಮ್ ॥೫೧॥

ದುರ್ಯೋಧನನು ಸನಿಹದಲ್ಲಿಯೇ ತನ್ನ ಸೈನ್ಯವು ಬಹಳವಾಗಿ ಪೆಟ್ಟು ತಿಂದು ಓಡಿಹೋಗಲು ನಿಶ್ಚಯಿಸಿರುವುದನ್ನು ನೋಡಿದನು.

ತತೋಽವಸ್ಥಾಪ್ಯ ರಾಜೇಂದ್ರ ಕೃತಬುದ್ಧಿಸ್ತವಾತ್ಮಜಃ ।
ಹರ್ಷಯನ್ನಿವ ತಾನ್ ಯೋಧಾಂಸ್ತತೋ ವಚನಮಬ್ರವೀತ್ ॥೫೨॥

ರಾಜಶ್ರೇಷ್ಠನೇ! ನಿನ್ನ ಮಗನು ಯುದ್ಧದ ದೃಢನಿಶ್ಚಯವನ್ನು ಮಾಡಿಕೊಂಡು, ಆ ತನ್ನ ಸೈನ್ಯವನ್ನು ತಡೆದು ನಿಲ್ಲಿಸಿ, ತದನಂತರ ಆ ಯೋಧರಿಗೆ ಸಂತೋಷವನ್ನು ಉಂಟುಮಾಡಲಿಕ್ಕಾಗಿ ಈ ಮಾತನ್ನು ಹೇಳುತ್ತಾನೆ.

ನ ತಂ ದೇಶಂ ಪ್ರಪಶ್ಯಾಮಿ ಪೃಥಿವ್ಯಾಂ ಪರ್ವತೇಷು ಚ ।
ಯತ್ರ ಯಾತಾನ್ನ ವೋ ಹನ್ಯುಃ ಪಾಂಡವಾಃ ಕಿಂ ಸ್ಕೃತೇನ ವಃ ॥೫೩॥

''ನೀವು ಓಡಿಹೋಗುವುದರಿಂದ ಏನು ಫಲ? ಏಕೆಂದರೆ ಪಾಂಡವರ ಕೈಯಿಂದ ತಪ್ಪಿಸಿಕೊಂಡು ಇರಲು ಯಾವುದೇ ಸ್ಥಳವು ಭೂಮಿಯಲ್ಲಾಗಲೀ, ಪರ್ವತಗಳಲ್ಲಾಗಲೀ ನನ್ನ ಅರಿವಿಗೆ ಗೋಚರಿಸುತ್ತಿಲ್ಲ. ಪಾಂಡವರು ಬಂದು ನಿಮ್ಮನ್ನು ಕೊಲ್ಲದಿರುವ ಯಾವುದೇ ಸ್ಥಾನ ಸಿಗಲಾರದು.

ಸ್ವಲ್ಪಂ ಚೈವ ಬಲಂ ತೇಷಾಂ ಕೃಷ್ಣೌ ಚ ಭೃಶವಿಕ್ಷತೌ ।
ಯದಿ ಸರ್ವೇऽತ್ರ ತಿಷ್ಠಾಮೋ ಧ್ರುವಂ ನೋ ವಿಜಯೋ ಭವೇತ್ ॥

ಬದಲಾಗಿ ನಾವು ಎಲ್ಲರೂ ಇಲ್ಲಿಯೇ ಪಾಂಡವರನ್ನು ಎದುರಿಸಿದರೆ ನಮಗೆ ಜಯವು ನಿಶ್ಚಿತ. ಏಕೆಂದರೆ ಅವರ ಸೈನ್ಯವೂ ಸ್ವಲ್ಪವಷ್ಟೇ ಉಳಿದಿದೆ. ಅರ್ಜುನ ಮತ್ತು ಶ್ರೀಕೃಷ್ಣರೂ ಬಹಳವಾಗಿ ಗಾಯಗೊಂಡು ದಣಿದಿದ್ದಾರೆ.

ವಿಪ್ರಯಾತಾಂಸ್ತು ವೋ ಭಿನ್ನಾನ್ ಪಾಂಡವಾಃ ಕೃತಕಿಲ್ಬಿಷಾನ್ ।
ಅನುಸೃತ್ಯ ಹನಿಷ್ಯಂತಿ ಶ್ರೇಯೋ ನಃ ಸಮರೇ ವಧಃ ॥೫೫॥

ನೀವೆಲ್ಲಾ ಭಯದಿಂದ ಬೇರೆ ಬೇರೆಯಾಗಿ ಇಲ್ಲಿಂದ ಓಡಿಹೋದರೆ ಅಪರಾಧಿಗಳಾದ ನಿಮ್ಮನ್ನು ಪಾಂಡವರು ಅಟ್ಟಿಸಿಕೊಂಡು ಬಂದು ಸಾಯಿಸುತ್ತಾರೆ. ಅದಕ್ಕಿಂತ ರಣರಂಗದಲ್ಲಿ ಯುದ್ಧಮಾಡಿ ಸಾಯುವುದೇ ಲೇಸು.

ಸುಖಃ ಸಾಂಗ್ರಾಮಿಕೋ ಮೃತ್ಯುಃ ಕ್ಷತ್ರಧರ್ಮೇಣ ಯುದ್ಧ್ಯತಾಮ್ ।
ಮೃತೋ ದುಃಖಂ ನ ಜಾನೀತೇ ಪ್ರೇತ್ಯ ಚಾನಂತ್ಯಮಶ್ನುತೇ ॥೫೬॥

ಕ್ಷತ್ರಿಯ ಧರ್ಮದಿಂದ ಯುದ್ಧಮಾಡುವ ಯೋಧನಿಗೆ ಸಂಗ್ರಾಮದಲ್ಲಿ ಬರುವ ಮರಣವು ಸುಖಪ್ರದವಾಗುವುದು. ಯುದ್ಧದಲ್ಲಿ ಸತ್ತರೂ ದುಃಖವನ್ನು

ಅನುಭವಿಸುವುದಿಲ್ಲ. ಮರಣಹೊಂದಿ ವೀರಸ್ವರ್ಗರೂಪವಾದ ಸುಖವನ್ನು ಪಡೆಯುತ್ತಾನೆ.

ಶೃಣ್ವಂತು ಕ್ಷತ್ರಿಯಾಃ ಸರ್ವೇ ಯಾವಂತೋಽತ್ರ ಸಮಾಗತಾಃ ।
ದ್ವಿಷತೋ ಭೀಮಸೇನಸ್ಯ ವಶಮೇಷ್ಯಥ ವಿದ್ರುತಾಃ ॥೫೭॥

ಕ್ಷತ್ರಿಯರೆ! ಯಾರೆಲ್ಲಾ ಇಲ್ಲಿ ಯುದ್ಧಕ್ಕೆ ಬಂದಿರುವಿರೋ ಎಲ್ಲರೂ ಕೇಳಿ. ನೀವು ಇಲ್ಲಿಂದ ಓಡಿಹೋದರೆ ಶತ್ರುವಾದ ಭೀಮಸೇನನ ವಶಕ್ಕೆ ಒಳಗಾಗುವಿರಿ.

ಪಿತಾಮಹೈರಾಚರಿತಂ ನ ಧರ್ಮಂ ಹಾತುಮರ್ಹಥ ।
ನಾನ್ಯತ್ಕರ್ಮಾಸ್ತಿ ಪಾಪೀಯಃ ಕ್ಷತ್ರಿಯಸ್ಯ ಪಲಾಯನಾತ್ ॥೫೮॥

ನಿಮ್ಮ ತಾತಂದಿರು ನಡೆಸಿಕೊಂಡು ಬಂದಿರುವ ಕ್ಷತ್ರಿಯ ಧರ್ಮವನ್ನು ಬಿಡುವುದು ಯೋಗ್ಯವಲ್ಲ. ಕ್ಷತ್ರಿಯನಿಗೆ ರಣರಂಗದಿಂದ ಓಡಿಹೋಗುವುದಕ್ಕಿಂತ ಮಿಗಿಲಾದ ಇನ್ನೊಂದು ಪಾಪವು ಇಲ್ಲ.

ನ ಯುದ್ಧಧರ್ಮಾಚ್ಛ್ರೇಯಾನ್ ಹಿ ಪಂಥಾಃ ಸ್ವರ್ಗಸ್ಯ ಕೌರವಾಃ ।
ಅಚಿರೇಣಾರ್ಜಿತಾಲ್ಲೋಕಾನ್ ಸದ್ಯೋ ಯುದ್ಧಾತ್ ಸಮಶ್ನುತೇ ॥೫೯॥

ಕೌರವವೀರರೇ! ಸ್ವರ್ಗಪ್ರಾಪ್ತಿಗೆ ಯುದ್ಧಧರ್ಮಕ್ಕಿಂತ ಬೇರೆಯಾದ ಮಾರ್ಗವೇ ಇಲ್ಲ. ಬಹಳ ಕಾಲದ ಸಾಧನೆಯಿಂದ ಪಡೆಯಬಹುದಾದ ಉತ್ತಮಲೋಕಗಳನ್ನು ಯುದ್ಧದಿಂದ ಶೀಘ್ರದಲ್ಲಿಯೇ ಪಡೆಯಬಹುದು.

ತಸ್ಯ ತದ್ವಚನಂ ರಾಜ್ಞಃ ಪೂಜಯಿತ್ವಾ ಮಹಾರಥಾಃ ।
ಪುನರೇವಾಭ್ಯವರ್ತಂತ ಕ್ಷತ್ರಿಯಾಃ ಪಾಂಡವಾನ್ ಪ್ರತಿ ॥೬೦॥

ಪರಾಜಯಮಮೃಷ್ಯಂತಃ ಕೃತಚಿತ್ತಾಶ್ಚ ವಿಕ್ರಮೇ ॥೬೧॥

ರಾಜನಾದ ದುರ್ಯೋಧನನ ಮಾತನ್ನು ಗೌರವಿಸಿದ ಮಹಾರಥಿಕರಾದ ಕ್ಷತ್ರಿಯಯೋಧರು ಪುನಃ ಪಾಂಡವರನ್ನು ಎದುರಿಸಿದರು. ಅವರು ಯುದ್ಧದಲ್ಲಿ ಸೋಲನ್ನು ಸಹಿಸಿಕೊಳ್ಳುವವರಲ್ಲ. ವಿಜಯವನ್ನು ಪಡೆಯಲೇಬೇಕೆಂದು ನಿಶ್ಚಯಿಸಿಕೊಂಡು ಪಾಂಡವರ ಜೊತೆಗೆ ಯುದ್ಧಕ್ಕೆ ನಿಂತರು.

ತತಃ ಪ್ರವವೃತೇ ಯುದ್ಧಂ ಪುನರೇವ ಸುದಾರುಣಮ್ ।
ತಾವಕಾನಾಂ ಪರೇಷಾಂ ಚ ದೇವಾಸುರರಣೋಪಮಮ್ ॥೬೨॥

ಅನಂತರ ನಿನ್ನ ಕಡೆಯವರಿಗೂ ಪಾಂಡವರಿಗೂ ಪುನಃ ಘೋರವಾದ ಯುದ್ಧವು ನಡೆಯಿತು. ಅದು ದೇವಾಸುರರ ಯುದ್ಧದಂತೆ ಇತ್ತು.

ಯುಧಿಷ್ಠಿರಪುರೋಗಾಂಶ್ಚ ಸರ್ವಸೈನ್ಯೇನ ಪಾಂಡವಾನ್ ।
ಅನ್ವಧಾವನ್ಮಹಾರಾಜ ಪುತ್ರೋ ದುರ್ಯೋಧನಸ್ತವ ॥೬೩॥

ಮಹಾರಾಜ! ನಿನ್ನ ಮಗನಾದ ದುರ್ಯೋಧನನು ತನ್ನೆಲ್ಲಾ ಸೈನ್ಯದ ಜೊತೆಗೆ ಧರ್ಮರಾಜ ಮೊದಲಾದ ಪಾಂಡವರ ಮೇಲೆ ಆಕ್ರಮಣ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ತೃತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ಕರ್ಣನ ಸಾವಿನಿಂದ ದುಃಖಿತನಾದ ದುರ್ಯೋಧನನಿಗೆ ಕೃಪರು ತಮ್ಮ ಮತ್ತು ಪರರ ದೌರ್ಬಲ್ಯ-ಪ್ರಾಬಲ್ಯಗಳನ್ನು ತಿಳಿಸಿ ಸಂಧಾನಕ್ಕೆ ಪ್ರೇರೇಪಿಸುವುದು

ಸಂಜಯಃ

ಪತಿತಾನಿ ಚ ನೀಡಾನಿ ಧ್ವಜಾಂಶ್ಚೈವ ಮಹಾತ್ಮನಾಮ್ ॥೧॥

ರಣೇ ವಿನಿಹತಾನ್ ನಾಗಾನ್ ದೃಷ್ಟ್ವಾ ಪತ್ತೀಂಶ್ಚ ಮಾರಿಷ ।
ಆಯೋಧನಂ ಚಾತಿಘೋರಂ ರುದ್ರಸ್ಯಾಕ್ರೀಡಸನ್ನಿಭಮ್ ॥೨॥

ಸಂಜಯ– ರಾಜನೇ! ರಣರಂಗದಲ್ಲಿ ಬಿದ್ದಿರುವ ಮಹಾಯೋಧರ ರಥದ ಆಸನಗಳು, ಧ್ವಜಗಳು, ಸತ್ತುಬಿದ್ದಿರುವ ಆನೆಗಳು, ಪದಾತಿಗಳು ಇವೆಲ್ಲವನ್ನೂ ನೋಡಿದರೆ ರಣರಂಗವು ರುದ್ರನ ಭಯಂಕರವಾದ ಕ್ರೀಡಾಭೂಮಿಯಾದ ಸ್ಮಶಾನದ ಹಾಗೆ ಗೋಚರಿಸುತ್ತಿತ್ತು.

ಅಪ್ರಖ್ಯಾತಿಂ ಗತಾನಾಂ ತು ರಾಜ್ಞಾಂ ಶತಸಹಸ್ರಶಃ ।
ಕೃಪಾವಿಷ್ಟಃ ಕೃಪೋ ದೃಷ್ಟ್ವಾ ವಯಃಶೀಲಸಮನ್ವಿತಃ ॥೩॥

ಅಬ್ರವೀತ್ ತತ್ರ ತೇಜಸ್ವೀ ಸೋಽಭಿಸೃತ್ಯ ಜನಾಧಿಪಮ್ ।
ದುರ್ಯೋಧನಮನುಕ್ರೋಶಾದ್ ವಚನಂ ವಚನಕ್ಷಮಃ ॥೪॥

ಯುದ್ಧದಲ್ಲಿ ಮರಣವನ್ನು ಹೊಂದಿ ಸಾವಿರಾರು ಸಂಖ್ಯೆಯಲ್ಲಿ ನಾಮಾವಶೇಷಕ್ಕೆ ಒಳಗಾದ ರಾಜರನ್ನು ಕಂಡು, ವಯಸ್ಸು-ಗುಣಗಳಿಂದ ಕೂಡಿದ ತೇಜೋವಂತನಾದ ಕೃಪನು ಕರುಣೆಯಿಂದ ಕೂಡಿದವನಾಗಿ ರಾಜನಾದ ದುರ್ಯೋಧನನ ಸಮೀಪಕ್ಕೆ ಬಂದು ಸಮಾಧಾನದಿಂದ ಈ ಮಾತನ್ನು ಹೇಳುತ್ತಾನೆ. ಕೃಪನು ಒಳ್ಳೆಯ ಸಮಯೋಚಿತವಾದ ಮಾತುಗಾರನಾಗಿದ್ದನು.

ಕೃಪಃ

ದುರ್ಯೋಧನ ನಿಬೋಧೇದಂ ಯತ್ ತ್ವಾ ವಕ್ಷ್ಯಾಮಿ ಕೌರವ ।
ಶ್ರುತ್ವಾ ಕುರು ಮಹಾರಾಜ ಯದಿ ತೇ ರೋಚತೇಽನಘ ॥೫॥

ಕೃಪರು– ''ಕುರುವಂಶಸಂಭೂತನಾದ ದುರ್ಯೋಧನನೇ! ನಾನು ಹೇಳುವ ಮಾತನ್ನು ಕೇಳು. ಪಾಪರಹಿತನಾದ ಮಹಾರಾಜನೇ! ನನ್ನ ಮಾತನ್ನು ಕೇಳಿದ ನಂತರ ನಿನಗೆ ಅದು ಯುಕ್ತವೆನಿಸಿದರೆ ಹಾಗೆಯೇ ಮಾಡು.

ನ ಯುದ್ಧಧರ್ಮಾಚ್ಛ್ರೇಯಾನ್ ವೈ ಪಂಥಾ ರಾಜೇಂದ್ರ ವಿದ್ಯತೇ ।
ಯಂ ಸಮಾಶ್ರಿತ್ಯ ಯುಧ್ಯಂತೇ ಕ್ಷತ್ರಿಯಾಃ ಕ್ಷತ್ರಿಯರ್ಷಭ ॥೬॥

ರಾಜೇಂದ್ರ! ಕ್ಷತ್ರಿಯರಿಗೆ ಯುದ್ಧಕ್ಕಿಂತ ಬೇರೆಯಾದ ಉತ್ತಮ ಮಾರ್ಗವು ಇಲ್ಲ. ಕ್ಷತ್ರಿಯೋತ್ತಮನೇ! ಕ್ಷತ್ರಿಯರು ಆ ಯುದ್ಧಧರ್ಮವನ್ನು ಆಶ್ರಯಿಸಿಯೇ ಯುದ್ಧವನ್ನು ಮಾಡುತ್ತಾರೆ.

ಪುತ್ರೋ ಭ್ರಾತಾ ಪಿತಾ ಚೈವ ಸ್ವಸ್ರೀಯೋ ಮಾತುಲಸ್ತಥಾ ।
ಸಂಬಂಧಿಬಾಂಧವಾಶ್ಚೈವ ಯೋದ್ಧವ್ಯಾಃ ಕ್ಷತ್ರಜೇವಿನಾ ॥೭॥

ಕ್ಷತ್ರೀಯನಾದವನು ಮಗ, ಸಹೋದರ, ತಂದೆ, ಸೋದರಳಿಯ, ಸೋದರಮಾವ, ಸಂಬಂಧಿಗಳು ಇವರ ಜೊತೆಗೆ ಯುದ್ಧವನ್ನು ಮಾಡಬೇಕು.

ವಧೇ ಚೈವ ಪರೋ ಧರ್ಮಃ ತಥಾऽಧರ್ಮಃ ಪಲಾಯನೇ ।
ತೇ ಸುಘೋರಾಂ ಸಮಾಪನ್ನಾ ಜೀವಿಕಾಂ ಜೀವಿತಾರ್ಥಿನಃ ॥೮॥

ಯುದ್ಧದಲ್ಲಿ ಸಾಯುವುದೂ ಉತ್ತಮ ಧರ್ಮ. ಹಾಗೆಯೇ ಓಡಿಹೋಗುವುದು ದೊಡ್ಡದಾದ ಅಧರ್ಮ, ಜೀವದ ಆಸೆಯಿಂದ ಓಡಿಹೋಗುವವರು ಅತ್ಯಂತ ನೀಚವಾದ ಜೀವನವನ್ನು ಪಡೆಯುತ್ತಾರೆ.

ತತ್ರ ತ್ವಾಂ ನೃಪ ವಕ್ಷ್ಯಾಮಿ ಕಿಂಚಿದೇವ ಹಿತಂ ವಚಃ ।
ಹತೇ ಭೀಷ್ಮೇ ಹತೇ ದ್ರೋಣೇ ಕರ್ಣೇ ಚೈವ ಮಹಾರಥೇ ॥೯॥

ಜಯದ್ರಥೇ ಚ ನಿಹತೇ ತವ ಭ್ರಾತೃಷು ಚಾನಘ ।
ಲಕ್ಷ್ಮಣೇ ತವ ಪುತ್ರೇ ಚ ಕಿಂ ಶೇಷಂ ಪರ್ಯುಪಾಸ್ಮಹೇ ॥೧೦॥

ರಾಜನೇ! ಈ ಸಂದರ್ಭದಲ್ಲಿ ನಾನು ಕೆಲವು ಹಿತನುಡಿಗಳನ್ನು ನಿನಗೆ ಹೇಳುತ್ತೇನೆ. ಮಹಾರಥರೆನಿಸಿರುವ ಭೀಷ್ಮ, ದ್ರೋಣ, ಕರ್ಣ ಮೊದಲಾದವರೆ ಹತರಾಗಿದ್ದಾರೆ. ಜಯದ್ರಥನೂ ಸತ್ತಿದ್ದಾನೆ. ನಿನ್ನ ಸಹೋದರರೂ ಮರಣಹೊಂದಿದ್ದಾರೆ. ನಿನ್ನ ಮಗನಾದ ಲಕ್ಷ್ಮಣನೂ ಸತ್ತಿದ್ದಾನೆ. ಹೀಗಿರುವಾಗ ನಾವು ಯಾರನ್ನು ಆಶ್ರಯಿಸಿಕೊಳ್ಳುವುದು?

ಯೇಷು ಭಾರಂ ಸಮಾಸಜ್ಯ ರಾಜ್ಯೇ ಮತಿಮಕುರ್ಮಹಿ ।
ತೇ ಸಂತ್ಯಜ್ಯ ತನೂರ್ಯಾತಾಃ ಶೂರಾ ಬ್ರಹ್ಮವಿದಾಂ ಗತಿಮ್ ॥೧೧॥

ಯಾರ ಮೇಲೆ ಭಾರವನ್ನು ಹಾಕಿ ರಾಜ್ಯವನ್ನು ಮತ್ತೆ ನಮ್ಮದಾಗಿಸಿಕೊಳ್ಳುವ ಆಲೋಚನೆಯನ್ನು ಮಾಡಿದ್ದೇವೆಯೋ ಅಂತಹ ಶೂರರು ಶರೀರರವನ್ನು ತೊರೆದು ಬ್ರಹ್ಮಜ್ಞಾನಿಗಳು ಹೊಂದುವ ಉತ್ತಮಲೋಕವನ್ನು ಹೊಂದಿದ್ದಾರೆ.

ವಯಂ ತ್ವಿಹ ವಿನಾಭೂತಾ ಗುಣವದ್ಭಿರ್ಮಹಾರಥೈಃ ।
ಕೃಪಣಂ ವರ್ತಯಿಷ್ಯಾಮಃ ಪಾತಯಿತ್ವಾ ನೃಪಾನ್ ಬಹೂನ್ ॥೧೨॥

ಗುಣಶಾಲಿಗಳಾದ ಮಹಾರಥರು ನಮ್ಮ ಜೊತೆಗೆ ಇಲ್ಲವಾಗಿದ್ದಾರೆ. ರಾಜರನ್ನು ಕಳೆದುಕೊಂಡು ನಾವು ಬಹಳ ದಯನೀಯವಾದ ಅವಸ್ಥೆಯನ್ನು ಹೊಂದಿದ್ದೇವೆ.

ಸರ್ವೈರಪಿ ಚ ಜೀವದ್ಭಿಃ ಬೀಭತ್ಸುರ್ನ ಪರಾಜಿತಃ ।
ಕೃಷ್ಣೋ ನೇತಾ ಮಹಾಬಾಹುಃ ದೇವೈರಪಿ ದುರಾಸದಃ ॥೧೩॥

ಬದುಕಿರುವ ಯಾರೂ ಕೂಡ ಅರ್ಜುನನನ್ನು ಸೋಲಿಸಲು ಸಾಧ್ಯವಿಲ್ಲ. ಮಹಾವೀರನಾದ ಸಾರಥಿ ಶ್ರೀಕೃಷ್ಣನನ್ನು ಎದುರಿಸಲು ದೇವತೆಗಳಿಗೂ ಸಾಧ್ಯವಿಲ್ಲ.

ಇಂದ್ರಕಾರ್ಮುಕವಜ್ರಾಭಮಿಂದ್ರಕೇತುಮಿವೋಚ್ಛ್ರಿತಮ್ ।
ವಾನರಂ ಕೇತುಮಾಸಾದ್ಯ ಸಂಚಚಾಲ ಮಹಾಚಮೂಃ ॥೧೪॥

ಇಂದ್ರನ ಧನುಸ್ಸಿನ ಹಾಗೆ ಬಣ್ಣವುಳ್ಳ, ಇಂದ್ರನ ಧ್ವಜದ ಹಾಗೆ ಎತ್ತರವಾಗಿಯುಳ್ಳ ಕಪಿಧ್ವಜವನ್ನು ಹೊಂದಿರುವ ಅರ್ಜುನನನ್ನು ಸಮೀಪಿಸಿದ ನಮ್ಮ ದೊಡ್ಡದಾದ ಸೈನ್ಯವು ಭಯದಿಂದ ಕಂಪಿಸಿದೆ.

ಸಿಂಹನಾದೇನ ಭೀಮಸ್ಯ ಪಾಂಚಜನ್ಯಸ್ವನೇನ ಚ ।
ಗಾಂಡೀವಸ್ಯ ಚ ನಿರ್ಘೋಷಾತ್ ಸಮ್ಮುಹ್ಯಂತೇ ಮನಾಂಸಿ ನಃ ॥೧೫॥

ಭೀಮನ ಸಿಂಹನಾದ, ಶ್ರೀಕೃಷ್ಣನ ಪಾಂಚಜನ್ಯಶಂಖದ ನಾದ ಹಾಗೂ ಗಾಂಡೀವಧನುಸ್ಸಿನ ಘೋಷದಿಂದ ನಮ್ಮ ಮನಸ್ಸುಗಳು ಭಯದಿಂದ ಚಂಚಲಿತವಾಗಿವೆ.

ಚಲಂತೀವ ಮಹಾವಿದ್ಯುನ್ಮುಷ್ಣಂತೀ ನಯನಪ್ರಭಾಮ್ ।
ಅಲಾತಮಿವ ಚಾವಿದ್ಧಂ ಗಾಂಡೀವಂ ಸಮದೃಶ್ಯತ ॥೧೬॥

ಚಲಿಸುತ್ತಿರುವ ದೊಡ್ಡಮಿಂಚಿನಂತೆ ಕಣ್ಣುಕೋರೈಸುತ್ತಿರುವ ಹಾಗೂ ಬೆಂಕಿಯ ಚಕ್ರದಂತೆ ಅರ್ಜುನನ ಗಾಂಡೀವಧನುಸ್ಸು ಕಾಣಿಸುತ್ತಿದೆ.

ಜಾಂಬೂನದವಿಚಿತ್ರಂ ಯದ್ಧೂಯಮಾನಂ ಮಹದ್ಧನುಃ ।
ದೃಶ್ಯತೇ ದಿಕ್ಷು ಸರ್ವಾಸು ವಿದ್ಯುದಭ್ರಗಣೇಷ್ವಿವ ॥೧೭॥

ಎಲ್ಲ ದಿಕ್ಕುಗಳಲ್ಲಿಯೂ ಚಲಿಸುತ್ತಿರುವ ಅರ್ಜುನನ ಈ ಗಾಂಡೀವ ಧನುಸ್ಸು ಮೋಡಗಳ ಗುಂಪಿನಲ್ಲಿ ಕಾಣಿಸುವ ಮಿಂಚಿನಂತೆ ಇದೆ.

ಉಹ್ಯಮಾನಾಶ್ಚ ಕೃಷ್ಣೇನ ವಾಯುನೇವ ಬಲಾಹಕಾಃ ।
ಜಾಂಬೂನದವಿಚಿತ್ರಾಂಗಾ ವಹಂತ್ಯೇವಾರ್ಜುನಂ ಹಯಾಃ ॥೧೮॥

ಗಾಳಿಯಿಂದಾಗಿ ಮೋಡಗಳು ಓಡುವಂತೆ ಶ್ರೀಕೃಷ್ಣನಿಂದಾಗಿ ಬಹು ವೇಗದಿಂದ ಓಡುತ್ತಿರುವ, ಮೈಮೇಲಿನ ಬಂಗಾರದ ಆಭರಣಗಳಿಂದಾಗಿ ವಿಚಿತ್ರವಾದ ಅಂಗಗಳುಳ್ಳ ಕುದುರೆಗಳು ಅರ್ಜುನನನ್ನು ಹೊತ್ತು ಸಾಗುತ್ತಿವೆ.

ತಾವಕಂ ತದ್ಬಲಂ ಸರ್ವಮರ್ಜುನೋಽಸ್ತ್ರವಿದಾಂ ವರಃ ।
ಗಹನಂ ಶಿಶಿರಾಪಾಯೇ ದದಾಹಾಗ್ನಿರಿವೋತ್ಥಿತಃ ॥೧೯॥

ರಾಜನೇ! ಶಿಶಿರ ಋತು ಕಳೆದಾಗ ಹಬ್ಬಿದ ಕಾಡ್ಗಿಚ್ಚು ಕಾಡನ್ನು ಸುಡುವಂತೆ ಅಸ್ತ್ರವೇತ್ತನಾದ ಅರ್ಜುನನು ನಿನ್ನ ಸೈನ್ಯವನ್ನು ನಾಶಮಾಡಿದನು.

ಗಾಹಮಾನಾಮನೀಕಾನಿ ಮಹೇಂದ್ರಸದೃಶಂ ಪ್ರಭುಮ್ ।
ಧನಂಜಯಮಪಶ್ಯಾಮ ಚತುರ್ದಂತಮಿವ ದ್ವಿಪಮ್ ॥೨೦॥

ಇಂದ್ರನ ಹಾಗೆ ಕಾಂತಿಯುಳ್ಳ ಅರ್ಜುನನು ನಾಲ್ಕು ದಾಡೆಗಳುಳ್ಳ ಆನೆಯಂತೆ ಸೈನ್ಯವನ್ನು ಪ್ರವೇಶಿಸುವುದನ್ನು ನಾವು ನೋಡಿದೆವು.

ವಿಕ್ಷೋಭಯಂತಂ ಸೇನಾಂ ವೈ ತ್ರಾಸಯಂತಂ ಚ ಪಾರ್ಥಿವಾನ್ ।
ಧನಂಜಯಮಪಶ್ಯಾಮ ನಲಿನೀಷ್ವಿವ ಕುಂಜರಮ್ ॥೨೧॥

ಸೈನ್ಯವನ್ನು ಅಲ್ಲೋಲ-ಕಲ್ಲೋಲಮಾಡುತ್ತಿರುವ ಹಾಗೂ ರಾಜರೆಲ್ಲರನ್ನು ಪೀಡಿಸುತ್ತಿರುವ ಅರ್ಜುನನನ್ನು ನೋಡಿದೆವು. ಅದು ಆನೆಯು ಕೊಳವನ್ನು ಕದಡುವಂತೆ ಇತ್ತು.

ತ್ರಾಸಯಂತಂ ತಥಾ ಯೋಧಾನ್ ರಥಘೋಷೇಣ ಪಾಂಡವಮ್ ।
ಭೂಯ ಏವ ಹಿ ಪಶ್ಯಾಮಃ ಸಿಂಹಂ ಮೃಗಗಣಾ ಇವ ॥೨೨॥

ಸಿಂಹವನ್ನು ಕಂಡ ಜಿಂಕೆಗಳಂತೆ ರಥದ ಶಬ್ದಘೋಷದಿಂದ ಯೋಧರನ್ನು ಭಯಪಡಿಸುತ್ತಿರುವ ಅರ್ಜುನನನ್ನು ಪುನಃ ನೋಡಿದೆವು.

ಸರ್ವಲೋಕಮಹೇಷ್ವಾಸೌ ವೃಷಭೌ ಸರ್ವಧನ್ವಿನಾಮ್ ।
ಆಮುಕ್ತಕವಚೌ ಕೃಷ್ಣೌ ಲೋಕಮಧ್ಯೇ ವಿರೇಜತುಃ ॥೨೩॥

ಕವಚಧಾರಿಗಳಾದ, ಧನುರ್ಧಾರಿಗಳಲ್ಲಿ ಶ್ರೇಷ್ಠರಾದ ಹಾಗೂ ಲೋಕಪ್ರಸಿದ್ಧವಾದ ಧನುಸ್ಸನ್ನು ಹೊಂದಿದ ಶ್ರೀಕೃಷ್ಣ ಮತ್ತು ಅರ್ಜುನರು ಯೋಧರ ಮಧ್ಯದಲ್ಲಿ ಶೋಭಿಸುತ್ತಿದ್ದರು.

ಅದ್ಯ ಸಪ್ತದಶಾಹಾನಿ ವರ್ತಮಾನಸ್ಯ ಭಾರತ ।
ಸಂಗ್ರಾಮಸ್ಯಾತಿಘೋರಸ್ಯ ಯುಧ್ಯತಾಂ ಚಾಪಿ ನೋ ಯುಧಿ ॥೨೪॥

ಭಾರತ! ರಣರಂಗದಲ್ಲಿ ಯುದ್ಧಮಾಡುತ್ತಿರುವ ನಮ್ಮ ಯೋಧರಿಗೆ ಬಹಳ ಘೋರವಾದ ಯುದ್ಧದಲ್ಲಿ ಹದಿನೇಳು ದಿನಗಳು ಆದವು.

ವಾಯುನೇವ ವಿಧೂತಾನಿ ತವಾನೀಕಾನಿ ಗಚ್ಛತಾ ।
ಶರದಂಭೋದಜಾಲಾನಿ ವ್ಯಶೀರ್ಯಂತ ಬಲಾನಿ ನಃ ॥೨೫॥

ಗಾಳಿಯಿಂದಾಗಿ ಶರತ್ಕಾಲದ ಮೋಡಗಳು ಛಿದ್ರಗೊಳ್ಳುವಂತೆ ನಿನ್ನ ಸೇನೆಯು ಎಲ್ಲಾ ಕಡೆಯೂ ಛಿದ್ರ-ವಿಚ್ಛಿದ್ರವಾಗಿದೆ.

ತಾಂ ನಾವಮಿವ ಪರ್ಯಸ್ತಾಂ ಭ್ರಾಂತವಾತಾಂ ಮಹಾರ್ಣವೇ ।
ತವ ಸೇನಾಂ ಮಹಾರಾಜ ಸವ್ಯಸಾಚೀ ವ್ಯಕಂಪಯತ್ ॥೨೬॥

ಮಹಾರಾಜ! ಮಹಾಸಮುದ್ರದಲ್ಲಿ ಗಾಳಿಯ ಹೊಡೆತಕ್ಕೆ ಸಿಕ್ಕ ನಾವೆಯಂತೆ ಇರುವ ನಿನ್ನ ಸೇನೆಯನ್ನು ಅರ್ಜುನನು ಬಹಳವಾಗಿ ಭಯದಿಂದ ನಡುಗುವಂತೆ ಮಾಡಿದ.

ಕ್ವ ನು ತೇ ಸೂತಪುತ್ರೋಽಭೂತ್ ಕ್ವ ನು ದ್ರೋಣಃ ಸಹಾತ್ಮಜಃ ।
ಅಹಂ ಕ್ವ ನು ಕ್ವ ಚಾತ್ಮಾ ತೇ ಹಾರ್ದಿಕ್ಯಶ್ಚ ತಥಾ ಕ್ವ ನು ॥೨೭॥

ದುಃಶಾಸನಶ್ಚ ಭ್ರಾತಾ ತೇ ಭ್ರಾತೃಭಿಃ ಸಹಿತಃ ಕ್ವ ನು ॥೨೮॥

ಬಾಣಗೋಚರಸಂಪ್ರಾಪ್ತಂ ಪ್ರೇಕ್ಷ್ಯ ಚೈವ ಜಯದ್ರಥಮ್ ।
ಸಂಬಂಧಿನಸ್ತೇ ಭ್ರಾತೄಂಶ್ಚ ಸಹಾಯಾನ್ ಮಾತುಲಾಂಸ್ತಥಾ ॥೨೯॥

ಅಂದು ಜಯದ್ರಥನು ಬಾಣಗಳ ಹೊಡೆತಕ್ಕೆ ಸಿಲುಕಿದಾಗ ಅದನ್ನು ನೋಡಿಯೂ ಸೂತಪುತ್ರ ಕರ್ಣನು ಎಲ್ಲಿ ಹೋದ? ಮಗನಾದ ಅಶ್ವತ್ಥಾಮನಿಂದ ಕೂಡಿದ ದ್ರೋಣ

ಎಲ್ಲಿಹೋಗಿದ್ದ? ನಾನೆಲ್ಲಿದ್ದೆ? ಕೃತವರ್ಮ ಎಲ್ಲಿಹೋದ? ದುಃಶಾಸನ ಮೊದಲಾದ ನಿನ್ನ ಸಹೋದರರು ಎಲ್ಲಿಹೋಗಿದ್ದರು? ಸೋದರಮಾವಂದಿರು ಎಲ್ಲಿದ್ದರು?

ಸರ್ವಕ್ಷತ್ರಸ್ಯ ಮಿಷತೋ ಲೋಕಾನಾಕ್ರಮ್ಯ ಮೂರ್ಧನಿ ।
ಜಯದ್ರಥೋ ಹತೋ ರಾಜನ್ ಕಿಂ ನು ಶೇಷಮುಪಾಸ್ಮಹೇ ॥೩೦॥

ಎಲ್ಲ ಕ್ಷತ್ರಿಯಕುಲವೇ ನೋಡುತ್ತಿರಲು ಅರ್ಜುನನು ನಿನ್ನ ಸಂಬಂಧಿಕರನ್ನೂ ಸಹೋದರರನ್ನೂ ಸೋದರಮಾವಂದಿರನ್ನೂ ಸಹಾಯಕರನ್ನೂ ಹಾಗೂ ಎಲ್ಲರನ್ನೂ ಆಕ್ರಮಿಸಿ ಸೋಲಿಸಿ ಜಯದ್ರಥನನ್ನು ಕೊಂದುಹಾಕಿದ್ದಾನೆ. ಆದ್ದರಿಂದ ನಮ್ಮ ಭರವಸೆಗೆ ಯೋಗ್ಯರಾದವರು ಬೇರಾರಿದ್ದಾರೆ?

ಕೋ ವೇಹ ಸ ಪುಮಾನಸ್ತಿ ಯೋ ವಿಜೇಷ್ಯತಿ ಪಾಂಡವಮ್ ।
ತಸ್ಯ ಚಾಸ್ತ್ರಾಣಿ ದಿವ್ಯಾನಿ ವಿವಿಧಾನಿ ಮಹಾತ್ಮನಃ ॥೩೧॥

ಗಾಂಡೀವಸ್ಯ ಚ ನಿರ್ಘೋಷೋ ವೀರ್ಯಾಣಿ ಹರತೇ ಹಿ ನಃ ॥೩೨॥

ಮಹಾತ್ಮನಾದ ಅರ್ಜುನನ ವಿವಿಧಪ್ರಕಾರದ ದಿವ್ಯವಾದ ಅಸ್ತ್ರಗಳು, ಗಾಂಡೀವಧನುಸ್ಸಿನ ಠೇಂಕಾರ ಇವುಗಳು ನಮ್ಮ ಸಾಮರ್ಥ್ಯವನ್ನೇ ಅಡಗಿಸಿವೆ. ಅಂತಹ ಅರ್ಜುನನನ್ನು ಗೆಲ್ಲುವ ವ್ಯಕ್ತಿ ಯಾವನಿದ್ದಾನೆ?

ನಷ್ಟಚಂದ್ರಾ ಯಥಾ ರಾತ್ರಿಃ ಸೇನೇಯಂ ಹತನಾಯಕಾ ।
ನಾಗನಕ್ರಝಷಾಕೀರ್ಣಾ ನದೀ ವಿಲುಲಿತಾ ಯಥಾ ॥೩೩॥

ಸೇನಾಧಿಪತಿಯನ್ನು ಕಳೆದುಕೊಂಡಿರುವ ನಮ್ಮ ಈ ಸೈನ್ಯವು ಚಂದ್ರನಿಲ್ಲದ ರಾತ್ರಿಯಂತೆ ಮಾರ್ಗದರ್ಶಕರಿಲ್ಲದಾಗಿದೆ. ಆನೆ ಮೊಸಳೆ ಮೀನುಗಳು ನದಿಯನ್ನು ಅಲ್ಲೋಲ-ಕಲ್ಲೋಲಮಾಡುವಂತಾಗಿವೆ.

ಧ್ವನಿಜ್ಯಾಂ ಹತನೇತ್ರ್ಯಾಯಾಂ ಯಥೇಷ್ಟಂ ಶ್ವೇತವಾಹನಃ ।
ಚರಿಷ್ಯತಿ ಮಹಾರಾಜ ಕಕ್ಷೇಽಗ್ನಿರಿವ ಸ ಜ್ವಲನ್ ॥೩೪॥

ಮಹಾರಾಜ! ನೇತಾರನನ್ನು ಕಳೆದುಕೊಂಡಿರುವ ನಮ್ಮ ಸೈನ್ಯವನ್ನು ಶ್ವೇತವಾಹನನಾದ ಅರ್ಜುನನು ಪ್ರವೇಶಿಸಿ ಕಾಡ್ಗಿಚ್ಚು ಕಾಡನ್ನು ಸುಡುವಂತೆ ಸಂಚರಿಸುತ್ತಿದ್ದಾನೆ.

ಸಾತ್ಯಕೇಶ್ಚೈವ ಯೋ ವೇಗೋ ಭೀಮಸೇನಸ್ಯ ಚೋಭಯೋಃ ।
ದಾರಯೇತ ಗಿರೀನ್ ಸರ್ವಾನ್ ಶೋಷಯೇತಾಪಿ ಸಾಗರಾನ್ ॥೩೫॥

ಸಾತ್ಯಕಿಯ ಹಾಗೂ ಭೀಮಸೇನನ ಯುದ್ಧವೇಗವು ಎಲ್ಲಾ ಪರ್ವತಗಳನ್ನೇ ಸೀಳಬಹುದು. ಸಮುದ್ರಗಳನ್ನೇ ಒಣಗಿಸಬಹುದು.

ಉವಾಚ ವಾಕ್ಯಂ ಯದ್ ಭೀಮಃ ಸಭಾಮಧ್ಯೇ ವಿಶಾಂಪತೇ ।
ಕೃತಂ ತತ್ ಸಫಲಂ ಸರ್ವಂ ಭೂಯಶ್ಚೈವ ಕರಿಷ್ಯತಿ ॥೩೬॥

ರಾಜನೇ! ಸಭೆಯ ಮಧ್ಯದಲ್ಲಿ ಭೀಮನು ಯಾವ ಮಾತನ್ನು ಆಡಿದ್ದನೋ ಅದನ್ನು ಸತ್ಯವನ್ನಾಗಿ ಮಾಡಿದ್ದಾನೆ. ಅದಕ್ಕಿಂತಲೂ ಅಧಿಕವಾದುದನ್ನೇ ಮಾಡುವನು.

ಪ್ರಮುಖಸ್ಥೇ ತದಾ ಕರ್ಣೇ ಬಲಂ ಪಾಂಡವರಕ್ಷಿತಮ್ ।
ದುರಾಸದಂ ತಥಾ ಗುಪ್ತಂ ವ್ಯೂಢಂ ಗಾಂಡೀವಧನ್ವಿನಾ ॥೩೭॥

ಕರ್ಣನು ಸೇನಾಪ್ರಮುಖನಾಗಿರುವಾಗಲೂ ಗಾಂಡೀವಧಾರಿ ಅರ್ಜುನನಿಂದ ರಕ್ಷಿಸಲ್ಪಟ್ಟ ಹಾಗೂ ವ್ಯೂಹರಚನೆಗೆ ಒಳಪಟ್ಟ ಪಾಂಡವ ಸೈನ್ಯವನ್ನು ಎದುರಿಸುವುದು ಅತಿಕಠಿಣಸಾಧ್ಯವಾಗಿತ್ತು.

ಯುಷ್ಮಾಭಿಸ್ತಾನಿ ಚೀರ್ಣಾನಿ ಯಾನ್ಯಸಾಧೂನಿ ಸಾಧುಷು ।
ಅಕಾರಣಕೃತಾನ್ಯೇವ ತೇಷಾಂ ವಃ ಫಲಮಾಗತಮ್ ॥೩೮॥

ಸಜ್ಜನರ ವಿಷಯದಲ್ಲಿ ನೀವು ಯಾವುದೇ ಕಾರಣವಿಲ್ಲದೆಯೇ ನ್ಯಾಯವಿರುದ್ಧವಾಗಿ ನಡೆದುಕೊಂಡಿರಿ. ಅದರ ಫಲವು ಈಗ ನಮಗೆ ಒದಗಿಬಂದಿದೆ.

ಆತ್ಮನೋऽರ್ಥೇ ತ್ವಯಾ ಲೋಕೋ ಯತ್ನತಃ ಸರ್ವ ಆಹೃತಃ ।
ಸ ತೇ ಸಂಶಯಿತಸ್ತಾತ ಆತ್ಮಾ ಚ ಭರತರ್ಷಭ ॥೩೯॥

ಭಾರತೋತ್ತಮನೇ! ನಿನ್ನ ಸ್ವಾರ್ಥಕ್ಕಾಗಿ ಎಲ್ಲರನ್ನೂ ಎಲ್ಲವನ್ನೂ ನೀನು ಪ್ರಯತ್ನಪೂರ್ವಕವಾಗಿ ನಿನ್ನ ಅಂಕೆಯಲ್ಲಿಟ್ಟುಕೊಂಡಿ. ಪ್ರಿಯನೇ! ಆದರೆ ಅಂತಹ ನೀನೇ ಬದುಕುವುದು ಸಂದಿಗ್ಧವಾಗಿದೆ.

ರಕ್ಷ ದುರ್ಯೋಧನಾತ್ಮಾನಮ್ ಆತ್ಮಾ ಸರ್ವಸ್ಯ ಭಾಜನಮ್ ।
ಭಿನ್ನೇ ಹಿ ಭಾಜನೇ ತಾತ ದಿಶೋ ಗಚ್ಛತಿ ತದ್ಗತಮ್ ॥೪೦॥

ದುರ್ಯೋಧನ! ನಿನ್ನನ್ನು ನೀನು ರಕ್ಷಿಸಿಕೊಳ್ಳು. ಪ್ರಿಯ! ಏಕೆಂದರೆ ಎಲ್ಲದಕ್ಕೂ ಮುಖ್ಯ ಪಾತ್ರ. ಪಾತ್ರವೇ ಒಡೆದುಹೋದರೆ ಅದರಲ್ಲಿರುವ ಎಲ್ಲವೂ ದಿಕ್ಕಾಪಾಲಾಗುತ್ತದೆ.

ಹೀಯಮಾನೇನ ಚೇತ್ ಸಂಧಿಃ ಪರ್ಯೇಷ್ಟವ್ಯಃ ಸಮೇನ ಚ ।
ವಿಗ್ರಹೋ ವರ್ಧಮಾನೇನ ನೀತಿರೇಷಾ ಬೃಹಸ್ಪತೇಃ ॥೪೧॥

ಬಲಹೀನನಾಗುವಾಗ ಸಮಾನನಾದವರ ಜೊತೆಗೆ ಸಂಧಿಯನ್ನು ಮಾಡಿಕೊಳ್ಳಬೇಕು. ಬಲವನ್ನು ವೃದ್ಧಿಸಿಕೊಂಡಾಗ ಸಮರೊಂದಿಗೆ ಯುದ್ಧಕ್ಕೆ ಇಳಿಯಬೇಕು. ಇದು ಬೃಹಸ್ಪತಿಯ ನ್ಯಾಯ.

ತೇ ವಯಂ ಪಾಂಡುಪುತ್ರೇಭ್ಯೋ ಹೀನಾಃ ಸ್ಮ ಬಲಶಕ್ತಿತಃ ।
ಅತ್ರ ತೈಃ ಪಾಂಡವೈಃ ಸಾರ್ಧಂ ಸಂಧಿಂ ಮನ್ಯೇ ಕ್ಷಮಂ ಪ್ರಭೋ ॥೪೨॥

ಅಂತಹ ನಾವು ಬಲದಲ್ಲಿ ಪಾಂಡವರಿಂದ ಕೆಳಗಿದ್ದೇವೆ. ಪ್ರಭುವೇ! ಈ ಸಂದರ್ಭದಲ್ಲಿ ಅಂತಹ ಬಲಶಾಲಿಗಳಾದ ಪಾಂಡವರೊಂದಿಗೆ ಸಂಧಿಯು ಯುಕ್ತವಾಗುವುದೆಂದು ನನ್ನ ಅಭಿಪ್ರಾಯ.

ನ ಜಾನೀತೇ ಹಿ ಯಃ ಶ್ರೇಯಃ ಶ್ರೇಯಸಶ್ಚಾವಮನ್ಯತೇ ।
ಸ ಕ್ಷಿಪ್ರಂ ಭ್ರಶ್ಯತೇ ರಾಜ್ಯಾನ್ನ ಚ ಶ್ರೇಯೋऽನುವಿಂದತಿ ॥೪೩॥

ಯಾವನು ಶ್ರೆಯಸ್ಕರವಾದುದನ್ನು ತಿಳಿಯುವುದಿಲ್ಲವೋ, ತಿಳಿದಿದ್ದರೂ ಅವಮಾನಪಡಿಸುತ್ತಾನೆಯೋ, ಅಂತಹವನು ರಾಜ್ಯವನ್ನು ಕಳೆದುಕೊಳ್ಳುತ್ತಾನೆ. ಶ್ರೇಯಸ್ಸನ್ನು ಹೊಂದುವುದೂ ಇಲ್ಲ.

ಪ್ರಣಿಪತ್ಯ ಹಿ ರಾಜಾನಂ ರಾಜ್ಯಂ ಯದಿ ಲಭೇಮಹಿ ।
ಶ್ರೇಯಃ ಸ್ಯಾನ್ನ ತು ಮೌರ್ಖ್ಯೇಣ ರಾಜನ್ ಗಂತುಂ ಪರಾಭವಮ್ ॥

ಧರ್ಮರಾಜನಿಗೆ ನಮಸ್ಕರಿಸಿ ರಾಜ್ಯವನ್ನು ಪಡೆದುಕೊಂಡರೆ ಅದು ಶ್ರೇಯಸ್ಸಿಗೆ ಕಾರಣವಾಗುತ್ತದೆ. ಮೂರ್ಖತನದಿಂದ ಯುದ್ಧಮಾಡಿ ಸೋಲುವುದು ಒಳ್ಳೆಯದಲ್ಲ.

ವೈಚಿತ್ರವೀರ್ಯವಚನಾತ್ ಕೃಪಾಶೀಲೋ ಯುಧಿಷ್ಠಿರಃ ।
ವಿನಿಯುಂಜೀತ ರಾಜ್ಯೇ ತ್ವಾಂ ಗೋವಿಂದವಚನೇನ ಚ ॥೪೫॥

ಕೃಪಾಶೀಲನಾದ ಧರ್ಮರಾಜನು ಧೃತರಾಷ್ಟ್ರ ಮತ್ತು ಶ್ರೀಕೃಷ್ಣನ ಮಾತಿಗೆ ಸರಿಯಾಗಿ ನಿನ್ನನ್ನೂ ರಾಜ್ಯದಲ್ಲಿ ರಾಜನಾಗಿ ನೇಮಿಸುತ್ತಾನೆ.

ಅಜಾತಶತ್ರುಃ ಕೌರವ್ಯೋ ಗುರುಶುಶ್ರೂಷಣೇ ರತಃ ।
ಧೃತರಾಷ್ಟ್ರಸ್ಯ ವಚನಂ ನಾವಮಂಸ್ಯತಿ ಧಾರ್ಮಿಕಃ ।
ಕುರ್ವಂತಿ ಭ್ರಾತರಶ್ಚಾಸ್ಯ ವಚನಂ ನಾತ್ರ ಸಂಶಯಃ ॥೪೬॥

ಹಿರಿಯರ ಮಾತನ್ನು ಗೌರವಿಸುವ ಧರ್ಮರಾಜನು ಮಹಾಧಾರ್ಮಿಕನಾಗಿದ್ದಾನೆ. ಅವನು ಧೃತರಾಷ್ಟ್ರನ ಮಾತನ್ನು ಮೀರುವುದಿಲ್ಲ. ಧರ್ಮರಾಜನ ಮಾತನ್ನು ಅವನ ತಮ್ಮಂದಿರೂ ನಡೆಸಿಕೊಡುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಯದ್ಯದ್ ಬ್ರೂಯಾದ್ ಹೃಷೀಕೇಶೋ ರಾಜಾನಮಪರಾಜಿತಮ್ ।
ಅರ್ಜುನೋ ಭೀಮಸೇನಶ್ಚ ಸರ್ವೇ ಕುರ್ಯುರಸಂಶಯಮ್ ॥೪೭॥

ಸೋಲಿಲ್ಲದ ಧರ್ಮರಾಜನಿಗೆ ಹೃಷೀಕೇಶನು ಏನನ್ನು ಆದೇಶಿಸುತ್ತಾನೆಯೋ ಅದನ್ನು ಅರ್ಜುನ, ಭೀಮಸೇನ ಮತ್ತು ಎಲ್ಲರೂ ನಿಸ್ಸಂಶಯವಾಗಿ ನಡೆಸುತ್ತಾರೆ.

ನಾತಿಕ್ರಾಮತಿ ತತ್ ಕೃಷ್ಣೋ ವಚನಂ ಕೌರವಸ್ಯ ತು ।
ಧೃತರಾಷ್ಟ್ರಸ್ಯ ಮನ್ಯೇಽಹಂ ನಾಪಿ ಕೃಷ್ಣಸ್ಯ ಪಾಂಡವಃ ॥೪೮॥

ಕುರುರಾಜನಾದ ಧೃತರಾಷ್ಟ್ರನ ಮಾತನ್ನು ಕೃಷ್ಣನೂ ಮೀರುವುದಿಲ್ಲ ಎಂಬುದಾಗಿ ಭಾವಿಸುತ್ತೇನೆ. ಕೃಷ್ಣನ ಮಾತನ್ನು ಪಾಂಡವರು ಮೀರುವುದಿಲ್ಲ ಎಂಬುದಾಗಿ ಅಂದುಕೊಂಡಿದ್ದೇನೆ.

ಏತತ್ ಕ್ಷೇಮಮಹಂ ಮನ್ಯೇ ತವ ಪಾರ್ಥೈರವಿಗ್ರಹಮ್ ॥೪೯॥

ಪಾಂಡವರೊಂದಿಗೆ ಯುದ್ಧಮಾಡದಿರುವುದೇ ನಿನಗೆ ಕ್ಷೇಮವೆಂದು ತಿಳಿಯುತ್ತೇನೆ.

ನೈತದ್ ಬ್ರವೀಮಿ ಕಾರ್ಪಣ್ಯಾನ್ನ ಪ್ರಾಣಪರಿರಕ್ಷಣಾತ್ ।
ಪಥ್ಯಂ ರಾಜನ್ ಬ್ರವೀಮಿ ತ್ವಾಂ ತತ್ ಪರಾಸುಃ ಸ್ಮರಿಷ್ಯಸಿ ॥೫೦॥

ಕೃಪಣತೆಯಿಂದಾಗಲೀ ಅಥವಾ ಜೀವರಕ್ಷಣೆಗಾಗಿ ಈ ಮಾತನ್ನು ಹೇಳುತ್ತಿಲ್ಲ. ನಿನಗೆ ಯೋಗ್ಯವಾದುದನ್ನೇ ಹೇಳುತ್ತಿದ್ದೇನೆ. ಸಾಯುವ ಸಂದರ್ಭದಲ್ಲಿ ಇದನ್ನು ಸ್ಮರಿಸಿಕೊಳ್ಳುತ್ತಿ.

ಸಂಜಯಃ

ಇತಿ ವೃದ್ಧೋ ವಿಲಪ್ಯೈತತ್ ಕೃಪಃ ಶಾರದ್ವತೋ ವಚಃ ।
ದೀರ್ಘಮುಷ್ಣಂ ಚ ನಿಃಶ್ವಸ್ಯ ಶುಶೋಚ ಚ ಮುಮೋಹ ಹ ॥೫೧॥

ಸಂಜಯ– ಶರದ್ವಾನನ ಮಗನಾದ ಕೃಪಾಚಾರ್ಯನು ಈ ರೀತಿಯಲ್ಲಿ ವಿಲಪಿಸುತ್ತಾ, ನಿಡಿದಾಗಿ ಬಿಸಿಯುಸಿರನ್ನು ಬಿಡುತ್ತಾ ದುಃಖಪಟ್ಟನು ಮತ್ತು ಮೂರ್ಛೆಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಲ್ಯಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐದನೆಯ ಅಧ್ಯಾಯ

ದುರ್ಯೋಧನನು ಸಕಾರಣವಾಗಿ ಸಂಧಿಗೆ ಒಪ್ಪದಿರುವುದು.

ಸಂಜಯಃ

ಏವಮುಕ್ತಸ್ತತೋ ರಾಜಾ ಗೌತಮೇನ ಮಹಾತ್ಮನಾ ।
ನಿಃಶ್ವಸ್ಯ ದೀರ್ಘಮುಷ್ಣಂ ಚ ತೂಷ್ಣೀಮಾಸೀದ್ ವಿಶಾಂಪತೇ ॥೧॥

ಸಂಜಯ– ಮಹಾರಾಜ! ಮಹಾತ್ಮನಾದ ಕೃಪನು ಹೀಗೆ ಹೇಳಿದಾಗ ರಾಜ ದುರ್ಯೋಧನನು ಬಿಸಿಯಾದ ನಿಟ್ಟುಸಿರನ್ನು ಬಿಟ್ಟುಸುಮ್ಮನೆ ಇದ್ದ.

ತತೋ ಮುಹೂರ್ತಂ ಸ ಧ್ಯಾತ್ವಾ ಪುತ್ರಸ್ತವ ಮಹಾಮನಾಃ ।
ಕೃಪಂ ಶಾರದ್ವತಂ ವಾಕ್ಯಮಿತ್ಯುವಾಚ ಪರಂತಪಃ ॥೨॥

ಅನಂತರ ಸ್ವಲ್ಪಕಾಲ ಆಲೋಚನೆ ಮಾಡಿ ದೃಢಮನಸ್ಕನಾದ ಹಾಗೂ ಶತ್ರುಗಳಿಗೆ ದುಃಖವನ್ನುಂಟುಮಾಡುವ ನಿನ್ನ ಮಗನು ಶರದ್ವಾನನ ಮಗನಾದ ಕೃಪನಿಗೆ ಹೀಗೆ ಹೇಳುತ್ತಾನೆ.

ದುರ್ಯೋಧನಃ

ಯತ್ ಕಿಂಚಿತ್ ಸುಹೃದಾ ವಾಚ್ಯಂ ತತ್ ಸರ್ವಂ ಶ್ರಾವಿತಂ ತ್ವಯಾ ।
ಕೃತಂ ಚ ಭವತಾ ಸರ್ವಂ ಪ್ರಾಣಾನ್ ಸಂತ್ಯಜ್ಯ ಯುಧ್ಯತಾ ॥೩॥

ದುರ್ಯೋಧನ– ನನ್ನ ಬಗ್ಗೆ ಒಳ್ಳೆಯ ಅಭಿಪ್ರಾಯವುಳ್ಳ ಪ್ರಿಯಮಿತ್ರನಾದ ನೀನು ಮಿತ್ರನು ಹೇಳಲೇಬೇಕಾದ ಮಾತನ್ನು ನನಗೆ ಹೇಳಿರುವಿ.ನಿನ್ನ ಕರ್ತವ್ಯಗಳನ್ನೆಲ್ಲಾ ಪೂರೈಸಿರುವಿ. ಪ್ರಾಣದ ಆಸೆಯನ್ನೂ ತ್ಯಜಿಸಿ ನನಗಾಗಿ ಯುದ್ಧಮಾಡಿರುವಿ.

ಗಾಹಮಾನಮನೀಕಾನಿ ಯುಧ್ಯಮಾನಂ ಮಹಾರಥೈಃ ।
ಪಾಂಡವೈರತಿತೇಜೋಭಿಃ ಲೋಕಸ್ತ್ವಾಮನುದೃಷ್ಟವಾನ್ ॥೪॥

ಪಾಂಡವರ ಕಡೆಯ ಬಹಳ ತೇಜೋವಂತರಾದ ಮಹಾರಥರೊಡನೆ ಯುದ್ಧಮಾಡುತ್ತಾ ಸೈನ್ಯವನ್ನು ಪ್ರವೇಶಿಸುತ್ತಿರುವ ನಿನ್ನನ್ನು ಇಡೀ ಲೋಕವೇ ಮತ್ತೆ ಮತ್ತೆ ನೋಡಿದೆ.

ಸುಹೃದಾ ಯದ್ಧಿತಂ ವಾಚ್ಯಂ ಭವತಾ ಶ್ರಾವಿತೋಽಸ್ಮ್ಯಹಮ್ ।
ನಾಭಿನಂದಾಮಿ ತತ್ಸರ್ವಂ ಮುಮೂರ್ಷುರಿವ ಭೇಷಜಮ್ ॥೫॥

ಸಹೃದಯದ ಸ್ನೇಹಿತನು ಹೇಳುವ ಹಿತವಾದ ಮಾತನ್ನು ನೀನು ಹೇಳಿರುವೆ. ನಾನು ಅದನ್ನು ಕೇಳಿದ್ದೇನೆ. ಆದರೆ ನೀನು ಹೇಳಿದ್ದೆಲ್ಲವನ್ನೂ ನಾನು ಅನುಮೋದಿಸಲಾರೆ. ಏಕೆಂದರೆ ಸಾಯಲು ಹೊರಟ ವ್ಯಕ್ತಿಗೆ ಔಷಧಿಯು ಉಚಿತವೆನಿಸುವುದಿಲ್ಲ.

ಹೇತುಕಾರಣಸಂಯುಕ್ತಂ ಹಿತಂ ವಚನಮುತ್ತಮಮ್ ।
ಉಚ್ಯಮಾನಂ ಮಹಾಬಾಹೋ ನ ಮೇ ವಿಪ್ರಾಗ್ರ್ಯ ರೋಚತೇ ॥೬॥

ಮಹಾಬಾಹೋ ! ಬ್ರಾಹ್ಮಣೋತ್ತಮನೇ! ಸಕಾರಣವಾದ ಹಿತವಾದ ನಿನ್ನ ಉತ್ತಮವಾದ ಮಾತುಗಳೂ ನನ್ನ ಪಾಲಿಗೆ ಪ್ರಿಯವೆನಿಸುವುದಿಲ್ಲ.

ರಾಜ್ಯಾದ್ ವಿನಿಷ್ಕೃತೋಽಸ್ಮಾಭಿಃ ಕಥಂ ಸೋಽಸ್ಮಾಸು ವಿಶ್ವಸೇತ್ ॥೭॥

ನಾವು ಪಾಂಡವರನ್ನು ರಾಜ್ಯಭ್ರಷ್ಟರನ್ನಾಗಿ ಮಾಡಿದೆವು. ಅಂಥವರು ನಮ್ಮಲ್ಲಿ ಹೇಗೆ ವಿಶ್ವಾಸವಿರಿಸಲು ಸಾಧ್ಯ?

ಅಕ್ಷದ್ಯೂತೇ ಚ ನೃಪತಿಃ ಜಿತೋಽಸ್ಮಾಭಿಃ ಮಹಾಧನಃ ।
ಸ ಕಥಂ ಮಮ ವಾಕ್ಯಾನಿ ಶ್ರದ್ದಧ್ಯಾದ್ ಭೂಯ ಏವ ತು ॥೮॥

ಸಕಲಸಂಪದ್ಭರಿತನಾದ ರಾಜ ಧರ್ಮರಾಜನು ದ್ಯೂತದಲ್ಲಿ ನಮ್ಮಿಂದ ಸೋತು ಹೋಗಿದ್ದಾನೆ. ಅಂತಹವನು ಮತ್ತೆ ನನ್ನ ಮಾತುಗಳನ್ನು ಹೇಗೆ ನಂಬುವನು?

ತಥಾ ದೌತ್ಯೇನ ಸಂಪ್ರಾಪ್ತಃ ಕೃಷ್ಣಃ ಪಾರ್ಥಹಿತೇ ರತಃ ।
ಪ್ರಕ್ಷುಬ್ಧಶ್ಚ ಹೃಷೀಕೇಶಃ ತಚ್ಚ ಕರ್ಮ ವಿರೋಧಿತಮ್ ॥೯॥

ಸ ಹಿ ಮೇ ವಚನಂ ಬ್ರಹ್ಮನ್ ಕಥಮೇವಾಭಿಮಂಸ್ಯತೇ ॥೧೦॥

ಪಾರ್ಥನ ಕ್ಷೇಮವನ್ನು ಬಯಸಿ ಶ್ರೀಕೃಷ್ಣನು ಶಾಂತಿದೂತನಾಗಿ ಬಂದಾಗ ಆ ಹೃಷೀಕೇಶನಿಗೆ ಮೋಸ ಮಾಡಿದೆ. ಆ ಕಾರ್ಯವು ಲೋಕ-ಧರ್ಮವಿರೋಧಿ ಆಗಿತ್ತು. ಧರ್ಮರಾಜನು ನನ್ನ ಮಾತಲ್ಲಿ ಹೇಗೆ ತಾನೇ ವಿಶ್ವಾಸವಿರಿಸಿಯಾನು?

ವಿಲಲಾಪ ಚ ಯತ್ ಕೃಷ್ಣಾ ಸಭಾಮಧ್ಯೇ ಸಮೇಯುಷೀ ।
ನೈತನ್ಮರ್ಷ್ಯತೇ ಕೃಷ್ಣೋ ನ ರಾಜ್ಯಹರಣಂ ತಥಾ ॥೧೧॥

ತುಂಬಿದ ಸಭೆಯಲ್ಲಿ ಬಲಾತ್ಕಾರದಿಂದ ತರಲ್ಪಟ್ಟ ದ್ರೌಪದಿಯು ಬಹಳವಾಗಿ ದುಃಖದಿಂದ ಗೋಳಿಟ್ಟಳು. ಇದನ್ನು ಹಾಗೂ ಪಾಂಡವರಿಂದ ರಾಜ್ಯವನ್ನು ಕಸಿದುಕೊಂಡಿರುವುದನ್ನು ಕೃಷ್ಣನು ಸಹಿಸಿಕೊಳ್ಳಲಾರನು.

ಏಕಪ್ರಾಣೌ ಹಿ ತೌ ಕೃಷ್ಣಾವನ್ಯೋನ್ಯಮಭಿಸಂಹಿತೌ ।
ಪುರಾ ಯಚ್ಚ್ರುತಮಸ್ಮಾಭಿಃ ಅದ್ಯ ಪಶ್ಯಾಮಿ ತತ್ ಪ್ರಭೋ ॥೧೨॥

ಪ್ರಭೋ! ಪರಸ್ಪರವಾಗಿ ಜೊತೆ-ಜೊತೆಯಾಗಿ ಅವಲಂಬಿತರಾದ ಆ ಕೃಷ್ಣಾರ್ಜುನರು ಇಬ್ಬರು ಎರಡು ದೇಹ ಹಾಗೂ ಒಂದು ಪ್ರಾಣವನ್ನು

ಹೊಂದಿರುವವರು. ಇದನ್ನು ಹಿಂದೆ ನಾನು ಕೇಳಿ ತಿಳಿದುಕೊಂಡಿದ್ದೆ. ಇವತ್ತು ಅದನ್ನು ಕಾಣುತ್ತಿದ್ದೇನೆ.

ಸ್ವಸ್ರೀಯಂ ಚ ಹತಂ ದೃಷ್ಟ್ವಾ ದುಃಖಿಂ ಸ್ವಪಿತಿ ಕೇಶವಃ ।
ಕೃತಾಗಸೋ ವಯಂ ತಸ್ಯ ಸ ಮದರ್ಥೇ ಕಥಂ ಕ್ಷಮೇತ್ ॥೧೩॥

ತನ್ನ ತಂಗಿಯ ಮಗ ಅಭಿಮನ್ಯುವು ಹತನಾಗಿರುವುದನ್ನು ಕಂಡು ಕೇಶವನು ದುಃಖದಿಂದ ಮೂರ್ಛಿತನಾಗಿದ್ದಾನೆ. ಅವನಿಗೆ ಇಂತಹ ಅಪರಾಧವನ್ನು ಮಾಡಿರುವೆವು. ಅಂತಹ ನಮ್ಮ ಮೇಲೆ ಅವನು ಕ್ಷಮೆಯನ್ನು ಹೇಗೆ ತೋರಿಸಿಯಾನು?

ಅಭಿಮನ್ಯೋರ್ವಿನಾಶೇನ ನ ಶರ್ಮ ಲಭತೇऽರ್ಜುನಃ ।
ಸ ಕಥಂ ಮದ್ಧಿತೇ ಯತ್ನಂ ಪ್ರಕರಿಷ್ಯತಿ ಯಾಚಿತಃ ॥೧೪॥

ಅಭಿಮನ್ಯುವಿನ ನಾಶದಿಂದ ಅರ್ಜುನನು ನೆಮ್ಮದಿಯನ್ನು ಕಳೆದುಕೊಂಡಿದ್ದಾನೆ. ನಾವು ಬೇಡಿಕೊಂಡರೂ ಅಂತಹ ಅರ್ಜುನನು ನನ್ನ ಒಳಿತಿಗೆ ಹೇಗೆ ಪ್ರಯತ್ನಿಸಿಯಾನು?

ಮಧ್ಯಮಃ ಪಾಂಡವಸ್ತೀಕ್ಷ್ಣೋ ಭೀಮಸೇನೋ ಮಹಾಬಲಃ ।
ಪ್ರತಿಜ್ಞಾತಂ ಚ ತೇನೋಗ್ರಂ ಭಗ್ನದರ್ಪಃ ಕಥಂ ಕ್ಷಮೇತ್ ॥೧೫॥

ಮಧ್ಯಮಪಾಂಡವನೆನಿಸಿದ ಮಹಾಬಲಶಾಲಿಯಾದ ಅಷ್ಟೇ ಭಯಂಕರನಾದ ಭೀಮಸೇನನು ಕಠಿಣವಾದ ಪ್ರತಿಜ್ಞೆಯನ್ನು ಮಾಡಿದ್ದಾನೆ. ನಮ್ಮಿಂದ ಪರಾಭವವನ್ನು ಅನುಭವಿಸಿದ ಭೀಮನು ನಮ್ಮನ್ನು ಹೇಗೆ ಕ್ಷಮಿಸಿಯಾನು?

ಉಭೌ ಚ ಬದ್ಧನಿಸ್ತ್ರಿಂಶೌ ಕಾಲಾಗ್ನಿಸದೃಶದ್ಯುತೀ ।
ಕೃತವೈರೌ ತು ತೌ ವೀರೌ ಯಮಾವಪಿ ಯಮೋಪಮೌ ॥೧೬॥

ಈ ಅವಳಿಗಳಾದ ನಕುಲ-ಸಹದೇವ ಇವರು ಇಬ್ಬರೂ ನಮ್ಮಲ್ಲಿ ವೈರವನ್ನು ಸಾಧಿಸುತ್ತಿರುತ್ತಾರೆ. ಖಡ್ಗಧಾರಿಗಳಾದ ಇವರು ಪ್ರಳಯಕಾಲದ ಬೆಂಕಿಯಂತೆ ಪ್ರಕಾಶಮಾನರಾಗಿದ್ದಾರೆ. ಅಂತಹ ವೀರರು ಯಮನ ಹಾಗೆ ತೋರುತ್ತಿದ್ದಾರೆ.

ಧೃಷ್ಟದ್ಯುಮ್ನಃ ಶಿಖಂಡೀ ಚ ಕೃತವೈರೌ ಮಯಾ ಸಹ ।
ತೌ ಕಥಂ ಮದ್ಧಿತೇ ಯತ್ನಂ ಕುರ್ಯಾತಾಂ ದ್ವಿಜಸತ್ತಮ ॥೧೭॥

ದ್ವಿಜಶ್ರೇಷ್ಠನೇ! ಧೃಷ್ಟದ್ಯುಮ್ನ ಹಾಗೂ ಶಿಖಂಡಿಯೂ ನನ್ನ ಜೊತೆಗೆ ಶತ್ರುತ್ವವನ್ನು ಸಾಧಿಸುತ್ತಿದ್ದಾರೆ. ಅಂತಹ ಇವರು ನನ್ನ ಹಿತಕ್ಕಾಗಿ ಹೇಗೆ ತಾನೇ ಪ್ರಯತ್ನಿಸಿಯಾರು?

ದುಃಶಾಸನೇನ ಯತ್ ಕೃಷ್ಣಾ ಏಕವಸ್ತ್ರಾ ರಜಸ್ವಲಾ ।
ಪರಿಕ್ಲಿಷ್ಟಾ ಸಭಾಮಧ್ಯೇ ಸರ್ವಲೋಕಸ್ಯ ಪಶ್ಯತಃ ॥೧೮॥

ತಥಾ ವಿವಸನಾಂ ದೀನಾಂ ಸ್ಮರಂತೋऽದ್ಯಾಪಿ ಪಾಂಡವಾಃ ।
ನ ನಿವಾರಯಿತುಂ ಶಕ್ಯಾಃ ಸಂಗ್ರಾಮಾತ್ ತೇ ಪರಂತಪಾಃ ॥೧೯॥

ಎಲ್ಲಾ ಜನರೂ ನೋಡುತ್ತಿರುವಾಗಲೇ ಸಭಾಮಧ್ಯದಲ್ಲಿ ರಜಸ್ವಲೆಯಾಗಿ ಏಕವಸ್ತ್ರಧಾರಿಣಿಯಾದ ದ್ರೌಪದಿಯನ್ನು ದುಃಶಾಸನನು ಬಹಳವಾಗಿ ಖೇದಪಡುವಂತೆ ಮಾಡಿದ. ಅಷ್ಟೇ ಅಲ್ಲದೇ ಅವಳ ವಸ್ತ್ರವನ್ನು ಎಳೆಯಲೂ ಪ್ರಯತ್ನಿಸಿದ. ದುಃಖಿಸುತ್ತಿದ್ದ ಆ ದ್ರೌಪದಿಯನ್ನು ಪಾಂಡವರು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ. ಶತ್ರುಸಂಹಾರಕರಾದ ಅವರನ್ನು ಯುದ್ಧದಿಂದ ಹೊರಹೋಗುವಂತೆ ಮಾಡುವುದು ಅಸಾಧ್ಯವಾದುದು.

ಸದಾ ಚ ದ್ರೌಪದೀ ಕ್ರುದ್ಧಾ ಮದ್ವಿನಾಶಾಯ ದೀಕ್ಷಿತಾ ।
ಉಗ್ರಂ ತೇಪೇ ತಪಃ ಕೃಷ್ಣಾ ಭರ್ತೄಣಾಮರ್ಥಸಿದ್ಧಯೇ ॥೨೦॥

ನನ್ನ ವಿಷಯದಲ್ಲಿ ಬಹಳವಾಗಿ ಕೋಪಿಸಿಕೊಂಡಿರುವ ದ್ರೌಪದಿಯು ನನ್ನ ನಾಶಕ್ಕಾಗಿ ದೀಕ್ಷಿತಳಾಗಿದ್ದಾಳೆ. ತನ್ನ ಗಂಡಂದಿರ ಸಂಪತ್ತು ಮತ್ತೆ ಪ್ರಾಪ್ತಿಯಾಗಲೆಂದು ಕಠಿಣವಾದ ತಪಸ್ಸನ್ನು ಆಚರಿಸಿದ್ದಾಳೆ.

ನಿಃಶ್ವಸಂತೀ ಭೃಶಂ ಶೇತೇ ಯಾವದ್ವೈರಸ್ಯ ಯಾತನಾ ।
ನಿಕ್ಷಿಪ್ಯ ಮಾನಂ ದರ್ಪಂ ಚ ವಾಸುದೇವಸಹೋದರೀ ॥೨೧॥

ಕೃಷ್ಣಾಯಾಃ ಪ್ರೇಷ್ಯವದ್ಭೂತ್ವಾ ಶುಶ್ರೂಷಾಂ ಕುರುತೇ ಸದಾ ।
ಇತಿ ವೈರಂ ಸಮುನ್ನದ್ಧಂ ನ ನಿರ್ವಾತಿ ಕಥಂಚನ ॥೨೨॥

ಅಭಿಮನ್ಯೋರ್ವಿನಾಶೇನ ಸ ಸಂಧೇಯಃ ಕಥಂ ಭವೇತ್ ॥೨೩॥

ವಾಸುದೇವನ ಭಗಿನಿಯಾದ ಸುಭದ್ರೆಯು ಶತ್ರುತ್ವದ ಪ್ರತೀಕಾರ ನಡೆಯುವಲ್ಲಿವರೆಗೂ ನಿಡಿದಾದ ಉಸಿರನ್ನು ಬಿಡುತ್ತಾ, ತನ್ನ ಅಭಿಮಾನವನ್ನೂ

ದರ್ಪವನ್ನೂ ತೊರೆದು ದ್ರೌಪದಿಯ ದಾಸಿಯಾಗಿ ಸೇವೆಯನ್ನು ಮಾಡುತ್ತಿದ್ದಾಳೆ. ಹೀಗೆ ಎದ್ದಿರುವ ಶತ್ರುತ್ವವನ್ನು ಯಾವ ರೀತಿಯಲ್ಲಿಯೂ ನಿವಾರಿಸಲಾಗದು. ಏಕೆಂದರೆ ಅಭಿಮನ್ಯುವಿನ ಹತ್ಯೆಯಿಂದ ದ್ರೌಪದಿಯು ಬಹಳ ದುಃಖಿತಳಾಗಿದ್ದಾಳೆ. ತನ್ನ ಸೇವೆಯನ್ನು ಮಾಡುತ್ತಿರುವ ಸುಭದ್ರೆಯ ಮಗನ ಮರಣವು ತನ್ನ ಮಕ್ಕಳ ನಾಶಕ್ಕಿಂತಲೂ ಅಧಿಕವಾಗಿ ಆಕೆಗೆ ದುಃಖವನ್ನುಂಟುಮಾಡಿದೆ. ಆ ವೈರವನ್ನು ದ್ರೌಪದಿಯು ಯಾವತ್ತೂ ಮರೆಯಲಾರಳು. ಆದ್ದರಿಂದ ಅವಳ ಪತಿಯಾದ ಧರ್ಮರಾಜನೊಂದಿಗೆ ಸಂಧಿಯನ್ನು ಹೇಗೆ ಮಾಡಲು ಸಾಧ್ಯ?

ಕಥಂ ನು ರಾಜಾ ಭುಕ್ತ್ವೇಮಾಂ ಪೃಥಿವೀಂ ಸಾಗರಾಂಬರಾಮ್ ।
ಪಾಂಡವಾನಾಂ ಪ್ರಸಾದೇನ ಸಂಭೋಜ್ಯಂ ರಾಜ್ಯಮಲ್ಪಕಮ್ ॥೨೪॥

ಸಾಗರಪರ್ಯಂತವಾದ ಭೂಮಂಡಲದ ಚಕ್ರವರ್ತಿಯಾಗಿ ಅನುಭವಿಸಿದ ನಾನು ಪಾಂಡವರು ಪ್ರಸಾದರೂಪವಾಗಿ ಕೊಡುವ ಅಲ್ಪರಾಜ್ಯವನ್ನು ಹೇಗೆ ಅನುಭವಿಸಲಿ?

ಉಪರ್ಯುಪರಿ ರಾಜ್ಞಾಂ ವೈ ಜ್ವಲಿತಾ ಭಾಸ್ಕರೋ ಯಥಾ ।
ಯುಧಿಷ್ಠಿರಂ ಕಥಂ ಪಶ್ಚಾದ್ ಅನುಯಾಸ್ಯಾಮಿ ದಾಸವತ್ ॥೨೫॥

ಸೂರ್ಯನು ಎಲ್ಲರಿಗಿಂತಲೂ ಮೇಲೆ ಇದ್ದುಕೊಂಡು ಪ್ರಜ್ವಲಿಸುವಂತೆ ರಾಜರ ಮೇಲೆ ಅಧಿಕಾರ ಚಲಾಯಿಸುತ್ತಿರುವ ನಾನು ದಾಸನಂತೆ ಧರ್ಮರಾಜನನ್ನು ಹೇಗೆ ಅನುಸರಿಸಿಕೊಂಡು ಹೋಗಲಿ?

ಕಥಂ ಭೋಗಾನ್ ಸ್ವಯಂ ಭುಕ್ತ್ವಾ ದತ್ತ್ವಾ ದೇಯಾಂಶ್ಚ ಪುಷ್ಕಲಾನ್ ।
ಕೃಪಣಂ ವರ್ತಯಿಷ್ಯಾಮಿ ಕುನೃಪೈಃ ಸಹ ಜೀವಿಕಾಮ್ ॥೨೬॥

ಸ್ವಯಂ ನಾನೇ ಎಲ್ಲಾ ಸುಖಗಳನ್ನೂ ಅನುಭವಿಸಿ, ಕೈತುಂಬ ದಾನವನ್ನು ಮಾಡಿ, ಕೆಟ್ಟ ರಾಜರಂತೆ ಬದುಕಿಗಾಗಿ ದಯನೀಯ ಜೀವನವನ್ನು ಹೇಗೆ ಬಾಳಲಿ?

ನಾಭ್ಯಸೂಯಾಮಿ ತೇ ವಾಕ್ಯಮುಕ್ತಂ ಸ್ನೇಹಾದಿದಂ ತ್ವಯಾ ।
ನ ತು ಸಂಧಿಮಹಂ ಮನ್ಯೇ ಪ್ರಾಪ್ತಕಾಲಂ ಕಥಂಚನ ॥೨೭॥

ನೀನು ಸ್ನೇಹದಿಂದ ಹೇಳಿದ ಮಾತಲ್ಲಿ ನಾನು ತಪ್ಪನ್ನು ಕಾಣಲಾರೆ. ಆದರೆ ಹೇಗೆ ವಿಚಾರಮಾಡಿದರೂ ಇದು ಸಂಧಿಗೆ ಯೋಗ್ಯವಾದ ಕಾಲವೆಂದು ನಾನು ಭಾವಿಸಲಾರೆ.

ಸುನೀತಮನುಪಶ್ಯಾಮಿ ಸುಯುದ್ಧೇನ ಪರಂತಪ ।
ನಾಯಂ ಕ್ಲೀಬಯಿತುಂ ಕಾಲಃ ಸಂಯೋದ್ಧುಂ ಕಾಲ ಏವ ನಃ ॥೨೮॥

ಹೇ ಶತ್ರುಭಯಂಕರನೇ! ಚೆನ್ನಾಗಿ ಯುದ್ಧಮಾಡುವುದರಲ್ಲೇ ಒಳ್ಳೆಯ ನೀತಿಯನ್ನು ಕಾಣುತ್ತಿದ್ದೇನೆ. ನಪುಂಸಕನಂತಿರಲು ಇದು ಸರಿಯಾದ ಸಂದರ್ಭವಲ್ಲ. ಇದು ನಮಗೆ ಚೆನ್ನಾಗಿ ಯುದ್ಧಮಾಡಲು ಯೋಗ್ಯವಾದ ಕಾಲವಾಗಿದೆ.

ಇಷ್ಟಂ ಮೇ ಬಹುಭಿರ್ಯಜ್ಞೈಃ ದತ್ತಾ ವಿಪ್ರೇಷು ದಕ್ಷಿಣಾಃ ।
ಪ್ರಾಪ್ತಃ ಕ್ರಮೋ ನರೇಂದ್ರಾಣಾಂ ಶತ್ರೂಣಾಂ ಮೂರ್ಧ್ನ್ಯವಸ್ಥಿತಾಮ್ ॥

ಭೃತ್ಯಾ ಮೇ ಸಂಭೃತಾಸ್ತಾತ ದೀನಾಶ್ಚಾಪ್ಯುದ್ಧೃತಾಃ ಜನಾಃ ।
ನೋತ್ಸಹೇಽಹಂ ದ್ವಿಜಶ್ರೇಷ್ಠ ಪಾಂಡವಂ ವಕ್ತುಮೀದೃಶಮ್ ॥೩೦॥

ನಾನು ಅನೇಕ ಯಜ್ಞಗಳನ್ನು ಮಾಡಿರುವೆನು. ಬ್ರಾಹ್ಮಣರಿಗೆ ಬೇಕಾದಷ್ಟು ದಕ್ಷಿಣೆಯನ್ನು ಕೊಟ್ಟಿರುವೆನು. ಸಕಲ ಸೌಭಾಗ್ಯಗಳನ್ನೂ ಅನುಭವಿಸಿರುವೆನು. ವೇದಾಧ್ಯಯನವನ್ನು ಮಾಡಿರುವೆನು. ಶತ್ರುಗಳನ್ನು ಹೆಡೆಮುರಿ ಕಟ್ಟಿರುವೆನು. ಪ್ರಿಯನೇ! ನನ್ನ ಸೇವಕರೂ ನನ್ನಿಂದ ಚೆನ್ನಾಗಿ ಪೋಷಿಸಲ್ಪಟ್ಟಿದ್ದಾರೆ. ದೀನರು ನನ್ನಿಂದ ಉದ್ಧೃತರಾಗಿದ್ದಾರೆ. ದ್ವಿಜೋತ್ತಮನೇ! ಪಾಂಡವನಿಗೆ ನೀನು ಹೇಳಿದಂತೆ ಕೇಳಲು ನಾನು ಉತ್ಸಾಹವನ್ನು ತೋರಿಸಲಾರೆನು.

ಜಿತಾನಿ ಪರರಾಷ್ಟ್ರಾಣಿ ಸ್ವರಾಷ್ಟ್ರಮನುಪಾಲಿತಮ್ ।
ಭುಕ್ತಾಶ್ಚ ವಿವಿಧಾ ಭೋಗಾಃ ತ್ರಿವರ್ಗಾಃ ಸೇವಿತಾ ಮಯಾ ॥೩೧॥

ಪಿತೃಣಾಂ ಗತಮಾನೃಣ್ಯಂ ಕ್ಷತ್ರಧರ್ಮಸ್ಯ ಚೋಭಯೋಃ ॥೩೨॥

ಪರರ ರಾಜ್ಯಗಳನ್ನು ಗೆದ್ದಿದ್ದೇನೆ. ನನ್ನ ರಾಷ್ಟ್ರವನ್ನು ಚೆನ್ನಾಗಿ ರಕ್ಷಣೆ ಮಾಡಿರುವೆನು. ಬೇರೆ ಬೇರೆ ಬಗೆಯ ಸುಖಭೋಗಗಳನ್ನು ಅನುಭವಿಸಿರುವೆನು. ತ್ರಿವರ್ಗವೆನಿಸಿದ ಧರ್ಮ-ಅರ್ಥ-ಕಾಮಗಳನ್ನು ಕೈವಶ ಮಾಡಿಕೊಂಡಿರುವೆನು. ಪಿತೃಋಣವನ್ನು ತೀರಿಸಿಕೊಂಡಿರುವೆನು. ಕ್ಷತ್ರಿಯಧರ್ಮವನ್ನು ಪಾಲಿಸಿ ಆ ಧರ್ಮದ ಋಣವನ್ನೂ ಕಳೆದುಕೊಂಡಿರುವೆನು.

ನ ಧ್ರುವಂ ಸುಖಮಸ್ತೀಹ ಕುತೋ ರಾಜ್ಯಂ ಕುತೋ ಯಶಃ ।
ಇಹ ಕೀರ್ತಿರ್ವಿಚೇತವ್ಯಾ ಸಾ ಚ ಯುದ್ಧೇನ ನಾನ್ಯಥಾ ॥೩೩॥

ಇಲ್ಲಿ ಸುಖವೂ ಶಾಶ್ವತವಲ್ಲ. ಎಲ್ಲಿಯದ್ದು ರಾಜ್ಯ? ಎಲ್ಲಿಯದ್ದು ಕೀರ್ತಿ? ಇಲ್ಲಿ ಭೂಮಿಯಲ್ಲಿ ಒಳ್ಳೆಯ ಕೀರ್ತಿಯನ್ನು ಸಂಪಾದಿಸಬೇಕು. ಅದಕ್ಕಾಗಿ ಇರುವ ಒಂದೇ ದಾರಿಯೆಂದರೆ ಅದು ಯುದ್ಧ ಮಾತ್ರ.

ವೃಥಾ ಚ ಯತ್ ಕ್ಷತ್ರಿಯಸ್ಯ ನಿಧನಂ ತದ್ ವಿಗರ್ಹಿತಮ್ ।
ಅಧರ್ಮಃ ಸುಮಹಾನೇಷ ವಿಣ್ಮೂತ್ರಮರಣಂ ಗೃಹೇ ॥೩೪॥

ಯುದ್ಧಮಾಡದೆ ವ್ಯರ್ಥವಾಗಿ ಕ್ಷತ್ರಿಯನು ಸಾಯುವುದನ್ನು ಶಾಸ್ತ್ರವು ನಿಂದಿಸಿದೆ. ಮಲ-ಮೂತ್ರಗಳ ಮಧ್ಯೆ ಸಾಯುವುದು ಅತ್ಯಂತ ದೊಡ್ಡದಾದ ಅಧರ್ಮ.

ಅರಣ್ಯೇ ಯೋ ವಿಮುಂಚೇತ ಸಂಗ್ರಾಮೇ ವಾ ತನುಂ ನೃಪಃ ।
ಕ್ರತೂನಾಹೃತ್ಯ ಮಹತೋ ಮಹಿಮಾನಂ ಸ ಗಚ್ಛತಿ ॥೩೫॥

ಕಾಡಿನಲ್ಲಿ ಯಾಗ-ಯಜ್ಞರೂಪವಾದ ಸ್ವಧರ್ಮವನ್ನು ಆಚರಿಸಿಯೋ ಅಥವಾ ಯುದ್ಧದಲ್ಲಿಯೋ ಯಾವ ರಾಜನು ಶರೀರವನ್ನು ತ್ಯಜಿಸುತ್ತಾನೆಯೋ ಅಂತಹವನು ದೊಡ್ಡದಾದ ಮಹಿಮೆಯುಳ್ಳವನಾಗುತ್ತಾನೆ.

ಕೃಪಣಂ ವಿಲಪನ್ನಾರ್ತೋ ಜರಯಾ ಚ ಪರಿಪ್ಲುತಃ ।
ಮ್ರಿಯತೇ ರುದತಾಂ ಮಧ್ಯೇ ಜ್ಞಾತೀನಾಂ ನ ಸ ಪೂರುಷಃ ॥೩೬॥

ದುಃಖದಿಂದ ಅಳುತ್ತಾ ದೀನನಾಗಿ, ಮುಪ್ಪಿನಿಂದ ಜರ್ಝರಿತನಾಗಿ ಸುತ್ತ ನಿಂತು ಅಳುತ್ತಿರುವ ಬಂಧುಗಳ ಮಧ್ಯೆ ಸಾಯುವ ಕ್ಷತ್ರಿಯನು ನಿಜವಾದ ಪುರುಷ ಎಂದೆನಿಸುವುದಿಲ್ಲ.

ತ್ಯಕ್ತ್ವಾ ನಾನಾವಿಧಾನ್ ಭೋಗಾನ್ ಪ್ರಾಪ್ತಾನಾಂ ಪರಮಾಂ ಗತಿಮ್ ।
ಅಪೀದಾನೀಂ ಸುಯುದ್ಧೇನ ಗಚ್ಛೇಯಂ ತತ್ಸಲೋಕತಾಮ್ ॥೩೭॥

ಹಿಂದೆ ಎಲ್ಲಾ ಸುಖಭೋಗಗಳನ್ನೂ ತ್ಯಜಿಸಿ ಮರಣಹೊಂದಿ ಉತ್ತಮ ಸ್ಥಾನವನ್ನು ಪಡೆದಿರುವವರ ಲೋಕವನ್ನು ನಾನಿಂದು ಒಳ್ಳೆಯ ಯುದ್ಧದ ಮೂಲಕ ಹೊಂದುವೆನು.

ಶೂರಾಣಾಮಾರ್ಯವೃತ್ತಾನಾಂ ಸಂಗ್ರಾಮೇಷ್ವನಿವರ್ತಿನಾಮ್ ।
ಧೀಮತಾಂ ಸತ್ಯಸಂಧಾನಾಂ ಸರ್ವೇಷಾಂ ಕ್ರತುಯಾಜಿನಾಮ್ ॥೩೮॥

ಶಸ್ತ್ರಾವಭೃಥಮಾಪ್ತಾನಾಂ ಧ್ರುವೋ ವಾಸಸ್ತ್ರಿವಿಷ್ಟಪೇ ॥೩೯॥

ಯಾಗ-ಯಜ್ಞಗಳನ್ನು ಮಾಡುತ್ತಾ, ಯುದ್ಧದಲ್ಲಿ ಹೆದರಿ ಹಿಂತಿರುಗದೆ ಇರುವ ಶೂರರ ಹಾಗೂ ಧರ್ಮಶೀಲರಾದ ಧೈರ್ಯಶಾಲಿಗಳಾದ ಸತ್ಯವಂತರಾದ, ಜೀವನದ ಅವಭೃಥವೆನಿಸಿದ ಮರಣವನ್ನು ಯುದ್ಧದಲ್ಲಿ ಶಸ್ತ್ರದಿಂದಲೇ ಹೊಂದಿದ ಎಲ್ಲರಿಗೂ ಸ್ವರ್ಗದಲ್ಲಿ ವಾಸವು ನಿಶ್ಚಿತವಾಗಿದೆ.

ಮುದಾ ನೂನಂ ಪ್ರಪಶ್ಯಂತಿ ಯೋಧಾನಪ್ಸರಸಾಂ ಗಣಾಃ ॥೪೦॥

ಅಂತಹ ಯೋಧರನ್ನು ಸ್ವರ್ಗದಲ್ಲಿ ಅಪ್ಸರಸ್ತ್ರೀಯರು ಸಂತೋಷದಿಂದ ನೋಡಿಕೊಳ್ಳುತ್ತಾರೆ.

ಪಶ್ಯಂತಿ ನೂನಂ ಪಿತರಃ ಪೂಜಿತಾಃ ಸುರಸಂಸದಿ ।
ಅಪ್ಸರೋಭಿಃ ಪರಿವೃತಾ ಮೋದಮಾನಾಸ್ತ್ರಿವಿಷ್ಟಪೇ ॥೪೧॥

ಇಂತಹ ಯೋಧರು ಸ್ವರ್ಗದಲ್ಲಿ ದೇವತೆಗಳ ಸಭೆಯಲ್ಲಿ ಮಾನಿತರಾಗಿ ಅಪ್ಸರಾಸ್ತ್ರೀಯರೊಡನೆ ಕ್ರೀಡಿಸುವುದನ್ನು ಪಿತೃಗಣಗಳು ನೋಡುತ್ತವೆ.

ಪಂಥಾನಮಮರೈಃ ಪ್ರಾಪ್ತಂ ಶೂರೈಶ್ಚಾಪ್ಯನಿವರ್ತಿಭಿಃ ।
ಅಪಿ ತೈಃ ಸಂಗತಂ ಮಾರ್ಗಂ ವಯಮಧ್ಯಾರುಹೇಮಹಿ ॥೪೨॥

ಪಿತಾಮಹೇನ ವೃದ್ಧೇನ ತಥಾऽऽಚಾರ್ಯೇಣ ಧೀಮತಾ ।
ಜಯದ್ರಥೇನ ಕರ್ಣೇನ ತಥಾ ದುಃಶಾಸನಾದಿಭಿಃ ॥೪೩॥

ದೇವತೆಗಳು ಈಗಾಗಲೇ ಹೊಂದಿರುವ, ಶೂರರಾದ, ಯುದ್ಧದಲ್ಲಿ ಹಿಂತಿರುಗದಿರುವ ಯೋಧರಿಂದ ಪ್ರಾಪ್ತವಾದ ದಾರಿಯನ್ನು ನಾವಿಂದು ತುಳಿಯುವೆವು. ಆ ಮಾರ್ಗವನ್ನು ಪಿತಾಮಹರಾದ ವೃದ್ಧಭೀಷ್ಮಾಚಾರ್ಯರು, ಧೀಮಂತರಾದ ದ್ರೋಣಾಚಾರ್ಯರು, ಜಯದ್ರಥ, ಕರ್ಣ ಹಾಗೂ ದುಃಶಾಸನಾದಿಗಳು ಹೊಂದಿರುತ್ತಾರೆ.

ಘಟಮಾನಾ ಮದರ್ಥೇಽಸ್ಮಿನ್ ಹತಾಃ ಶೂರಾ ಜನಾಧಿಪಾಃ ।
ಶೇರತೇ ಲೋಹಿತಾಕ್ತಾಂಗಾಃ ಪೃಥಿವ್ಯಾಂ ಶರವಿಕ್ಷತಾಃ ॥೪೪॥

ನನಗಾಗಿ ಈ ಯುದ್ಧದಲ್ಲಿ ತೊಡಗಿ ಶೂರರಾದ ರಾಜರೆಲ್ಲರು ಬಾಣದಿಂದ ಹೊಡಿಸಿಕೊಂಡು ರಕ್ತಸಿಕ್ತಶರೀರದೊಂದಿಗೆ ಭೂಮಿಯಲ್ಲಿ ಬಿದ್ದಿದ್ದಾರೆ.

ನಾನಾಶಸ್ತ್ರವೃತಾಃ ಶೂರಾ ಯಥೋಕ್ತಕ್ರತುಯಾಜಿನಃ ।
ತ್ಯಕ್ತ್ವಾ ಪ್ರಾಣಾನ್ ಯಥಾ ನ್ಯಾಯಮಿಮೇ ಸಮಿತಿ ಶೇರತೇ ॥೪೫॥

ವಿವಿಧಶಸ್ತ್ರಧಾರಿಗಳಾದ, ಶಾಸ್ತ್ರೋಕ್ತರೀತಿಯಲ್ಲಿ ಯಾಗ-ಯಜ್ಞಗಳನ್ನು ನಡೆಸುವ ಶೂರರು ನ್ಯಾಯೋಚಿತವಾದ ಯುದ್ಧವನ್ನು ಮಾಡಿ ಪ್ರಾಣವನ್ನು ಕಳೆದುಕೊಂಡು ಸತ್ತು ಬಿದ್ದಿದ್ದಾರೆ.

ಸ್ವೈರಂ ಚ ಚರಿತಃ ಪಂಥಾ ದುರ್ಗಮೋ ಹಿ ಪುನರ್ಭವೇತ್ ।
ಸಂಪತದ್ಭಿರ್ಮಹಾವೇಗೈಃ ಇತೋ ಯಾಸ್ಯಾಮಿ ಸದ್ಗತಿಮ್ ॥೪೬॥

ಈ ವೀರಸ್ವರ್ಗದ ಮಾರ್ಗವನ್ನು ಯೋಧರು ಯಥೇಚ್ಛವಾಗಿ ನಿರ್ಮಿಸಿದ್ದಾರೆ. ಅಸಂಖ್ಯಾತ ವೀರರು ಮರಣಹೊಂದಿ ವೇಗವಾಗಿ ಆ ಮಾರ್ಗದಲ್ಲಿ ಸಂಚರಿಸುತ್ತಿರುವ ಕಾರಣ ಆ ಮಾರ್ಗದಲ್ಲಿ ಹೋಗುವುದೂ ಕಷ್ಟಸಾಧ್ಯವಾಗಿದೆ. ನಾನೂ ಕೂಡ ಇಲ್ಲಿಂದ ಒಳ್ಳೆಯ ಗತಿಯನ್ನು ಹೊಂದುವೆನು.

ಯೇ ಮದರ್ಥಂ ಹತಾಃ ಶೂರಾಃ ತೇಷಾಂ ಕೃತಮನುಸ್ಮರನ್ ।
ಋಣಂ ತತ್ಕೃತಿಮುಂಚಾನೋ ನ ರಾಜ್ಯೇ ಮನ ಆದಧೇ ॥೪೭॥

ಯಾವ ಶೂರರು ನನಗಾಗಿ ಸತ್ತಿದ್ದಾರೆಯೋ ಅಂತಹವರ ಕಾರ್ಯವನ್ನು ನೆನೆಸುತ್ತಾ, ಅವರ ಋಣವನ್ನು ತೀರಿಸುತ್ತಾ ನಾನು ರಾಜ್ಯವನ್ನು ಬಯಸುವುದಿಲ್ಲ.

ಘಾತಯಿತ್ವಾ ವಯಸ್ಯಾಂಶ್ಚ ಭ್ರಾತೄನಥ ಪಿತಾಮಹಾನ್ ।
ಜೀವಿತಂ ಪರಿರಕ್ಷೇಯಂ ಲೋಕೋ ಮಾಂ ಗರ್ಹಯೇದ್ ಧ್ರುವಮ್ ॥

ಒಂದು ವೇಳೆ ನಾನು ಮಿತ್ರರನ್ನು, ಸಹೋದರರನ್ನು, ಪಿತಾಮಹರನ್ನು ಸಾಯಿಸಿ ನನ್ನನ್ನು ಮಾತ್ರ ರಕ್ಷಿಸಿಕೊಂಡರೆ ಲೋಕದ ಜನರು ಖಂಡಿತ ನನ್ನನು ನಿಂದಿಸುತ್ತಾರೆ.

ಕೀದೃಶಂ ಚ ಭವೇದ್ ರಾಜ್ಯಂ ಮಮ ಹೀನಸ್ಯ ಬಂಧುಭಿಃ ।
ಸಖಿಭಿಶ್ಚ ಸುಹೃದ್ಭಿಶ್ಚ ಪ್ರಣಿಪತ್ಯ ಚ ಪಾಂಡವಮ್ ॥೪೯॥

ಬಂಧುಗಳನ್ನೂ, ಸ್ನೇಹಿತರನ್ನೂ ಸಖರನ್ನೂ ಕಳೆದುಕೊಂಡು, ಪಾಂಡವರಿಗೆ ಶರಣಾಗಿ ನನಗೆ ಪ್ರಾಪ್ತವಾಗುವ ರಾಜ್ಯವು ಎಂತಹದ್ದು?

ಸೋಽಹಮೇತಾದೃಶಂ ಕೃತ್ವಾ ಜಗತೋಽಸ್ಯ ಪರಾಭವಮ್ ।
ಸುಯುದ್ಧೇನ ಹತಃ ಸ್ವರ್ಗಂ ಪ್ರಾಪ್ಸ್ಯಾಮಿ ನ ತದನ್ಯಥಾ ॥೫೦॥

ಅಂತಹ ನಾನು ಈ ಜಗತ್ತನ್ನು ಕಡೆಗಣಿಸಿ ಚೆನ್ನಾಗಿ ಯುದ್ಧವನ್ನು ಮಾಡಿ ಸತ್ತು ವೀರಸ್ವರ್ಗವನ್ನು ಹೊಂದುವೆನು. ಇದಕ್ಕೆ ಹೊರತಾಗಿ ಬೇರೇನನ್ನೂ ಮಾಡಲಾರೆ.

ಸಂಜಯಃ

ಏವಂ ದುರ್ಯೋಧನೇನೋಕ್ತಂ ಸರ್ವಂ ಸಂಪೂಜ್ಯ ತದ್ವಚಃ ।
ಸಾಧು ಸಾಧ್ವಿತಿ ರಾಜಾನಂ ಕ್ಷತ್ರಿಯಾಃ ಸಂಬಭಾಷಿರೇ ॥೫೧॥

ಸಂಜಯ– ಹೀಗೆ ದುರ್ಯೋಧನನ ಮಾತನ್ನು ಕೇಳಿ ಕೊಂಡಾಡಿದ ಕ್ಷತ್ರಿಯರು ಅವನನ್ನು ''ಬಹಳ ಸಾಧುವಾಗಿದೆ'' ಎಂದು ಚೆನ್ನಾಗಿ ಹೊಗಳುತ್ತಾರೆ.

ಪರಾಜಯಮಶೋಚಂತಃ ಕೃತಚಿತ್ತಾಶ್ಚ ವಿಕ್ರಮೇ ।
ಸರ್ವೇ ಸುನಿಶ್ಚಿತಾ ಯೋದ್ಧುಮುದಗ್ರಮನಸೋಽಭವನ್ ॥೫೨॥

ಯುದ್ಧದ ಸೋಲಿನಿಂದ ದುಃಖಿತರಾಗದೆ ಜಯದಲ್ಲಿ ದೃಢನಿಶ್ಚಯವುಳ್ಳವರಾಗಿ ಎಲ್ಲರೂ ಯುದ್ಧಮಾಡಲು ಉತ್ಸುಕವಾದ ಮನಸ್ಸುಳ್ಳವರಾದರು.

ಸಮಾಶ್ವಾಸ್ಯ ಚ ರಾಜಾನಂ ಸರ್ವೇ ಯುದ್ಧಾಭಿನಂದಿನಃ ।
ಉದಗ್ದ್ವಿಯೋಜನಂ ಗತ್ವಾ ಪ್ರತ್ಯತಿಷ್ಠಂತ ಕೌರವಾಃ ॥೫೩॥

ಎಲ್ಲಾ ಕೌರವರೂ ಯುದ್ಧವನ್ನೇ ಶ್ಲಾಘಿಸುತ್ತಾ ರಾಜ ದುರ್ಯೋಧನನನ್ನು ಸಮಾಧಾನಪಡಿಸಿ, ಉತ್ತರದಿಕ್ಕಿನಲ್ಲಿ ಎರಡು ಯೋಜನದೂರವನ್ನು ಕ್ರಮಿಸಿ ಡೇರೆಯನ್ನು ಹಾಕಿಕೊಂಡರು.

ಆಕಾಶೇ ವಿದ್ರುಮೇ ಪುಣ್ಯೇ ಪ್ರಸ್ಥೇ ಹಿಮವತಃ ಶುಭೇ ।
ಅರುಣಾಂ ಸರಸ್ವತೀಂ ಪ್ರಾಪ್ಯ ಪಪುಃ ಸಸ್ನುಶ್ಚ ತೇ ಜಲಮ್ ॥೫೪॥

ಮರಗಳಿಲ್ಲದ, ಹಿಮಾಲಯದ ಸಮತಟ್ಟಾದ ಪ್ರದೇಶದಲ್ಲಿ ಮಂಗಳಮಯವಾದ ಶುಭ್ರಾಕಾಶದಿಂದ ಆಚ್ಛಾದಿತವಾದ ಸ್ಥಳದಲ್ಲಿ ಕೆಂಪಾದ ನೀರನ್ನು ಹೊಂದಿದ ಸರಸ್ವತೀನದಿಯನ್ನು ಹೊಂದಿ ನೀರನ್ನು ಕುಡಿದರು, ಸ್ನಾನವನ್ನು ಮಾಡಿದರು.

ತವ ವತ್ಸಾಃ ಕೃತೋತ್ಸಾಹಾಃ ಪರ್ಯವರ್ತಂತ ಭಾರತ ।
ಪರಾಜಯಮಶೋಚಂತಃ ಕೃತಚಿತ್ತಾಶ್ಚ ಯೋಧನೇ ॥೫೫॥

ಭಾರತ! ನಿನ್ನ ಮಕ್ಕಳು ಉತ್ತಮ ಉತ್ಸಾಹದಿಂದ, ಸೋಲಿನಿಂದ ಧೃತಿಗೆಡದೆ ಯುದ್ಧದಲ್ಲಿ ದೃಢನಿಶ್ಚಯವುಳ್ಳವರಾಗಿ ಸಂಚರಿಸಿದರು.

ಪರ್ಯವಸ್ಥಾಪ್ಯ ಚಾತ್ಮಾನಮನ್ಯೋನ್ಯೇನ ಪುನಃ ಪುನಃ ।
ಸರ್ವೇ ರಾಜನ್ ನ್ಯವರ್ತಂತ ಕ್ಷತ್ರಿಯಾಃ ಕಾಲಚೋದಿತಾಃ ॥೫೬॥

ರಾಜನೇ! ಕಾಲದಿಂದ ಪ್ರೇರಿತರಾಗಿ ಪರಸ್ಪರವಾಗಿ ಮತ್ತೆ ಮತ್ತೆ ಹುರಿದುಂಬಿಸಿಕೊಳ್ಳುತ್ತಾ ಎಲ್ಲರೂ ಯುದ್ಧಭೂಮಿಗೆ ಹಿಂತಿರುಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಆರನೆಯ ಅಧ್ಯಾಯ

ದುರ್ಯೋಧನನು ಸೇನಾಧಿಪತ್ಯದ ಬಗ್ಗೆ ವಿಚಾರ ಮಾಡಿದಾಗ ಅಶ್ವತ್ಥಾಮನು ಶಲ್ಯನನ್ನು ಸೂಚಿಸಿದನು. ಆ ಪ್ರಕಾರ ದುರ್ಯೋಧನನು ಶಲ್ಯನನ್ನು ಸೇನಾಪತಿಯಾಗಲು ಪ್ರಾರ್ಥಿಸಿದನು.

ಸಂಜಯಃ

ತಥಾ ಹಿಮವತಃ ಪ್ರಸ್ಥೇ ಸರ್ವೇ ಯುದ್ಧಾಭಿನಂದಿನಃ ।
ಸರ್ವೇ ಏವ ಮಹಾರಾಜ ಯೋಧಾಸ್ತತ್ರ ಸಮಾಗತಾಃ ॥೧॥

ಸಂಜಯ– ಮಹಾರಾಜ! ಹಿಮಾಲಯದ ಸಮತಟ್ಟಾದ ಪ್ರದೇಶದಲ್ಲಿ ಯುದ್ಧದಿಂದಲೇ ಆನಂದವನ್ನು ಪಡೆಯುವ ಎಲ್ಲಾ ಯೋಧರೂ ಬಂದು ಸೇರಿದರು.

ಶಲ್ಯಶ್ಚ ಚಿತ್ರಸೇನಶ್ಚ ಶಕುನಿಶ್ಚ ಮಹಾರಥಃ ।
ಅಶ್ವತ್ಥಾಮಾ ಕೃಪಶ್ಚೈವ ಕೃತವರ್ಮಾ ಚ ಸಾತ್ವತಃ ॥೨॥

ಸುಷೇಣೋऽರಿಷ್ಟಸೇನಶ್ಚ ಧೃತಸೇನಶ್ಚ ವೀರ್ಯವಾನ್ ।
ಜಯತ್ಸೇನಶ್ಚ ರಾಜಾನಃ ತೇ ರಾತ್ರಿಮುಷಿತಾಸ್ತತಃ ॥೩॥

ಶಲ್ಯ, ಚಿತ್ರಸೇನ, ಮಹಾರಥನಾದ ಶಕುನಿ, ಅಶ್ವತ್ಥಾಮ, ಕೃಪ, ಸಾತ್ವತಕುಲೋತ್ಪನ್ನನಾದ ಕೃತವರ್ಮ, ಸುಷೇಣ, ಅರಿಷ್ಟಸೇನ, ವೀರನಾದ ಧೃತಸೇನ, ಜಯತ್ಸೇನ, ಮೊದಲಾದ ರಾಜರು ರಾತ್ರಿಯಲ್ಲಿ ಅಲ್ಲಿಯೇ ತಂಗಿದರು.

ರಣೇ ಕರ್ಣೇ ಹತೇ ವೀರೇ ತ್ರಾಸಿತಾ ಜಿತಕಾಶಿಭಿಃ ।
ನಾಲಭನ್ ಶರ್ಮ ತೇ ಪುತ್ರಾ ಹಿಮವಂತಮೃತೇ ಗಿರಿಮ್ ॥೪॥

ವೀರನಾದ ಕರ್ಣನು ಯುದ್ಧದಲ್ಲಿ ಮಡಿದ ಮೇಲೆ, ಜಯ ಪಡೆಯುವ ಇಚ್ಛೆಯುಳ್ಳ ಪಾಂಡವರಿಂದ ಕಷ್ಟಕ್ಕೊಳಗಾದ ದುರ್ಯೋಧನನನ್ನು ಹೊರತುಪಡಿಸಿ ಉಳಿದ ನಿನ್ನ ಮಕ್ಕಳು ಇತರ ಕೆಲವು ಭಟರೊಡನೆ ಹಿಮಾಲಯ ಪರ್ವತದಲ್ಲಿ ವಾಸಿಸುತ್ತಿದ್ದಾರೆ. ಹಿಮವದ್ಗಿರಿಯಲ್ಲಿ ಅಲ್ಲದೆ ಬೇರೆ ಕಡೆ ನೆಮ್ಮದಿಯನ್ನು ಕಾಣದಾದರು. (ಅಂತಹವರನ್ನು ಕರೆತರಲು ದುರ್ಯೋಧನನು ಅಲ್ಲಿಗೆ ಹೋದ ಎಂದು ಅಭಿಪ್ರಾಯ.)

ತೇऽಬ್ರುವನ್ ಸಹಿತಾಸ್ತತ್ರ ರಾಜಾನಂ ಸೈನ್ಯಸನ್ನಿಧೌ ।
ಕೃತಯತ್ನಾ ರಣೇ ರಾಜನ್ ಸಂಪೂಜ್ಯ ವಿಧಿವದ್ ತದಾ ॥೫॥

ರಾಜನೇ! ಆಗ ಅಂತಹವರೆಲ್ಲಾ ಸೇರಿ ಸೈನ್ಯದ ಎದುರಿನಲ್ಲಿ ವಿಧಿವತ್ತಾಗಿ ಪ್ರಯತ್ನಪೂರ್ವಕ ರಾಜ ದುರ್ಯೋಧನನಿಗೆ ಸತ್ಕಾರವನ್ನು ಮಾಡಿ ಹೀಗೆ ಹೇಳುತ್ತಾರೆ.

ಸೈನಿಕಾಃ

ಕೃತ್ವಾ ಸೇನಾಪ್ರಣೇತಾರಂ ಪರಾಂಸ್ತ್ವಂ ಯೋದ್ಧುಮರ್ಹಸಿ ॥೬॥

ಯೇನಾಭಿಗುಪ್ತಾ ಯಾಸ್ಯಾಮೋ ಜಯೇಮಾಸುಹೃದೋ ವಯಮ್ ॥

ಸೈನಿಕರು– ನೀನು ಸೇನಾಧಿಪತಿಯನ್ನು ನೇಮಿಸಿ ಪರರೊಡನೆ ಯುದ್ಧಮಾಡುವುದು ಯೋಗ್ಯವಾಗಿದೆ. ಅಂತಹ ಸೇನಾಧಿಪತಿಯ ರಕ್ಷಣೆಯಲ್ಲಿ ನಾವು ಯುದ್ಧಕ್ಕೆ ತೆರಳುವೆವು. ಹಾಗೂ ನಾವು ಶತ್ರುಗಳನ್ನು ಸೋಲಿಸಿ ಜಯವನ್ನು ಸಂಪಾದಿಸುವೆವು.

ಸಂಜಯಃ

ತತೋ ದುರ್ಯೋಧನಃ ಸ್ಥಿತ್ವಾ ರಣೇ ರಥವರೋತ್ತಮೇ ।
ಸರ್ವಸತ್ತ್ವವಿಭಾಗಜ್ಞಮಂತಕಪ್ರತಿಮಂ ರಣೇ ॥೮॥

ಸ್ವಾಂಗಪ್ರಚ್ಛನ್ನಶಿರಸಂ ಕಂಬುಗ್ರೀವಂ ಪ್ರಿಯಂವದಮ್ ।
ವ್ಯಾಕೋಚಪದ್ಮಾಭಮುಖಂ ವ್ಯಾಘ್ರಾಸ್ಯಂ ಮೇರುಗೌರವಮ್ ॥೯॥

ಶಂಭೋರ್ವಪುಷ್ಯ ಸದೃಶಂ ಸ್ಕಂಧನೇತ್ರಗತಿಸ್ವರೈಃ ।
ಪುಷ್ಟಶ್ಲಿಷ್ಟಾಯತಭುಜಂ ಸುವಿಸ್ತೀರ್ಣೋರಸಂ ಶುಭಮ್ ॥೧೦॥

ಜವೇ ಬಲೇ ಚ ಸದೃಶಮರುಣಾನುಜವಾತಯೋಃ ।
ಆದಿತ್ಯಸ್ಯ ತ್ವಿಷಾ ತುಲ್ಯಂ ಬುದ್ಧ್ಯಾ ಚೋಶನಸಾ ಸಮಮ್ ॥೧೧॥

ಕಾಂತಿರೂಪಮುಖೈಶ್ವರ್ಯೈಃ ತ್ರಿಭಿಶ್ಚಂದ್ರಮಸೋಪಮಮ್ ।
ಕಾಂಚನೋಪಲಸಂಘಾತಸದೃಶಂ ಕ್ಲಿಷ್ಟಸಂಧಿಕಮ್ ॥೧೨॥

ಸುವೃತ್ತೋರುಕಟೀಜಂಘಂ ಸುಪಾದಂ ಸ್ವಂಗುಲೀಯಕಮ್ ।
ಸೃತ್ವಾ ಸೃತ್ವೈವ ಚ ಗುಣಾನ್ ಧಾತ್ರಾ ಯತ್ನೇನ ನಿರ್ಮಿತಮ್ ॥೧೩॥

ಸರ್ವಲಕ್ಷಣಸಂಪೂರ್ಣಂ ನಿಪುಣಂ ಶ್ರುತಿಸಾಗರಮ್ ।
ಜೇತಾರಂ ತರಸಾऽರೀಣಾಮಜಯ್ಯಂ ಶತ್ರುಭಿರ್ಬಲಾತ್ ॥೧೪॥

ಪ್ರಯೋಗಬಲಸಂಹಾರಪ್ರಾಯಶ್ಚಿತ್ತಂ ಸುಮಂಗಲಮ್ ।
ಪ್ರಯೋಗವಿನಿಯೋಗೌ ಚ ಸೃತಿಂ ಯಸ್ಯ ಗುಣಾನ್ ವಿದುಃ ॥೧೫॥

ದಶಾಂಗಂ ಯಶ್ಚತುಷ್ಪಾದಮಿಷ್ವಸ್ತ್ರಂ ವೇದ ತತ್ತ್ವದಃ ।
ಸಾಂಗಾಂಶ್ಚ ಚತುರೋ ವೇದಾನ್ ಸಮ್ಯಗಾಖ್ಯಾನಪಂಚಮಾನ್ ॥೧೬॥

ಆರಾಧ್ಯ ತ್ರ್ಯಮ್ಬಕಂ ಯತ್ನಾದ್ ವ್ರತೈರುಗ್ರೈರ್ಮಹಾತಪಾಃ ।
ಲಬ್ಧವಾನಸ್ತ್ರಜಾಲಂ ಚ ಶಿಕ್ಷಾಂ ಚ ಶಶಿಶೇಖರಾತ್ ॥೧೭॥

ಅಯೋನಿಜಾಯಾಮುತ್ಪನ್ನೋ ದ್ರೋಣೇನಾಯೋನಿಜೇನ ಯಃ ।
ತಮಪ್ರತಿಮಕರ್ಮಾಣಂ ರೂಪೇಣಾಪ್ರತಿಮಂ ಭುವಿ ॥೧೮॥

ಸಂಜಯ– ತದನಂತರ ದುರ್ಯೋಧನನು ರಣರಂಗದಲ್ಲಿ ಉತ್ತಮವಾದ ರಥದಲ್ಲಿ ನಿಂತು ತನಗೆ ಸಮಾನನಾದ ಅಶ್ವತ್ಥಾಮನ ಸಮೀಪಕ್ಕೆ ಬರುತ್ತಾನೆ. ಅಶ್ವತ್ಥಾಮನು ಎಲ್ಲಾ ಪ್ರಾಣಿಗಳ ಸಾಮರ್ಥ್ಯವಿಭಾಗವನ್ನು ಬಲ್ಲವನು. ಯುದ್ಧದಲ್ಲಿ ಯಮನಿಗೆ ಸದೃಶನಾದವನು. ತನ್ನ ತಲೆಗೂದಲುಗಳಿಂದ ತಲೆಯನ್ನು ಮುಚ್ಚಿಕೊಂಡಿದ್ದಾನೆ. ಶಂಖದಂತೆ ಸುಂದರವಾದ ಕುತ್ತಿಗೆಯುಳ್ಳವನು. ವ್ಯಾಘ್ರದಂತೆ ಮುಖವುಳ್ಳವನು. ಮೇರುವಿನಂತೆ ಗಂಭೀರನಾಗಿದ್ದಾನೆ. ಭುಜ, ಕಣ್ಣು, ನಡೆ ಮತ್ತು ಧ್ವನಿಯಲ್ಲಿ ರುದ್ರನ ವಾಹನವಾದ ವೃಷಭಕ್ಕೆ ಸದೃಶನಾದವನು. ದಷ್ಟಪುಷ್ಟವಾದ ನೀಳತೋಳಿನವನು. ಚೆನ್ನಾಗಿ ವಿಸ್ತೃತವಾದ ಎದೆಯುಳ್ಳವನು. ಮಂಗಳಮಯನಾಗಿದ್ದಾನೆ. ವೇಗದಲ್ಲಿಯೂ ಬಲದಲ್ಲಿಯೂ ಗರುಡ ಮತ್ತು ವಾಯುವಿಗೆ ಸಮಾನನಾಗಿದ್ದಾನೆ. ಪ್ರಕಾಶದಲ್ಲಿ ಸೂರ್ಯನಿಗೆ ಸದೃಶನಾಗಿದ್ದಾನೆ. ಶುಕ್ರನಿಗೆ ಸಮಾನವಾದ ಬುದ್ಧಿಶಕ್ತಿಯನ್ನು ಹೊಂದಿದ್ದಾನೆ. ದೇಹದ ಕಾಂತಿ, ಮುಖ ಹಾಗೂ ಐಶ್ವರ್ಯಗಳಿಂದ ಚಂದ್ರನಿಗೆ ಸದೃಶನಾಗಿದ್ದಾನೆ. ಬಂಗಾರದ ಕಲ್ಲುಗಳ ರಾಶಿಯಂತೆ ಪ್ರಕಾಶಿಸುವ ಶರೀರವನ್ನು ಹೊಂದಿದ್ದಾನೆ. ಅಂಗಾಂಗಗಳ ಸಂಧಿಸ್ಥಾನಗಳು ಸುದೃಢವಾಗಿವೆ. ವೃತ್ತಾಕಾರವಾದ ತೊಡೆ, ಸೊಂಟ ಹಾಗೂ ಮೊಣಕಾಲುಗಳು ಇವನದ್ದು. ಸುಂದರವಾದ ಪಾದವುಳ್ಳವನು. ಬೆರಳುಗಳೂ ಸುಂದರವಾಗಿವೆ. ಚತುರ್ಮುಖಬ್ರಹ್ಮನು ಸದ್ಗುಣಗಳನ್ನು ಮತ್ತೆ ಮತ್ತೆ ಜ್ಞಾಪಿಸಿಕೊಂಡು ಪ್ರಯತ್ನಪೂರ್ವಕವಾಗಿ ಅಶ್ವತ್ಥಾಮನ ಶರೀರವನ್ನು ನಿರ್ಮಿಸಿದ್ದಾನೆ. ಶರೀರದ ಸಕಲಶುಭಲಕ್ಷಣಗಳನ್ನು ಹೊಂದಿದ್ದಾನೆ. ಚತುರನಾಗಿದ್ದಾನೆ. ಸಕಲವೇದಗಳನ್ನು ಬಲ್ಲವನಾಗಿದ್ದಾನೆ. ಶತ್ರುಗಳನ್ನು ಕ್ಷಣಮಾತ್ರದಲ್ಲಿ ಸೋಲಿಸಬಲ್ಲ. ಆದರೆ ಬಲಶಾಲಿಗಳಿಗೂ ಇವನನ್ನು ಗೆಲ್ಲಲು ಸಾಧ್ಯವಿಲ್ಲ. ವ್ರತ, ಪ್ರಾಪ್ತಿ, ಧೃತಿ, ಪುಷ್ಟಿ, ಸ್ಮೃತಿ, ಕ್ಷೇಪ, ಶತ್ರುಭೇದನ, ಚಿಕಿತ್ಸಾ, ಉದ್ದೀಪನ ಮತ್ತು ಕೃಷ್ಟಿ ಎಂಬ ಧನುರ್ವೇದದ ಹತ್ತು ಅಂಗಗಳನ್ನು ಸರಿಯಾಗಿ ಬಲ್ಲವನಾಗಿದ್ದಾನೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ, ಕಲ್ಪ ಎಂಬ ಷಡಂಗೋಪೇತವಾದ ಋಗಾದಿ ನಾಲ್ಕು ವೇದಗಳನ್ನು ಮತ್ತು ಇತಿಹಾಸ-ಪುರಾಣರೂಪವಾದ ಐದನೆಯ ವೇದವನ್ನೂ ತಿಳಿದಿರುತ್ತಾನೆ.

ಮಹಾತಪಸ್ವಿಯಾದ ಅಶ್ವತ್ಥಾಮನು ಉಗ್ರ ತಪಸ್ಸಿನಿಂದ ರುದ್ರನನ್ನು ಆರಾಧಿಸಿ ಒಲಿಸಿಕೊಂಡು ಶಶಿಶೇಖರನಿಂದ ಅಸ್ತ್ರಸಮೂಹವನ್ನೇ ಪಡೆದಿರುತ್ತಾನೆ. ಅವುಗಳ ಪ್ರಯೋಗದ ಶಿಕ್ಷಣವನ್ನೂ ತಿಳಿದುಕೊಂಡಿದ್ದಾನೆ.

ಪಾರಗಂ ಸರ್ವವಿದ್ಯಾನಾಂ ಗುಣವಂತಮನಿಂದಿತಮ್ ।
ತಂ ಸಮೇತ್ಯಾತ್ಮನಸ್ತುಲ್ಯಮಶ್ವತ್ಥಾಮಾನಮಬ್ರವೀತ್ ॥೧೯॥

ಅಯೋನಿಜೆಯಾದ ಕೃಪಿಯಲ್ಲಿ ಅಯೋನಿಜನಾದ ದ್ರೋಣನಿಂದ ಹುಟ್ಟಿರುತ್ತಾನೆ. ಅಸದೃಶವಾದ ಕಾರ್ಯವನ್ನು ಮಾಡುವ ಇವನು ಭೂಮಿಯಲ್ಲಿ ಅಪ್ರತಿಮವಾದ ಸೌಂದರ್ಯವುಳ್ಳವಾಗಿದ್ದಾನೆ. ಸಕಲವಿದ್ಯೆಗಳನ್ನೂ ಚೆನ್ನಾಗಿ ತಿಳಿದುಕೊಂಡಿದ್ದಾನೆ. ಸದ್ಗುಣಭರಿತನಾಗಿದ್ದಾನೆ. ನಿಂದಿತವಾದ ಯಾವ ಅಂಶಗಳೂ ಇವನಲ್ಲಿ ಇಲ್ಲ. ಇಂತಹ ಅಶ್ವತ್ಥಾಮನನ್ನು ಸಮೀಪಿಸಿ ದುರ್ಯೋಧನನು ಹೀಗೆ ಹೇಳುತ್ತಾನೆ.

ದುರ್ಯೋಧನಃ

ಯಂ ಪುರಸ್ಕೃತ್ಯ ಸಹಿತಾ ಯುಧಿ ಜೇಷ್ಯಾಮ ಪಾಂಡವಾನ್ ।
ಗುರುಪುತ್ರೋಽದ್ಯ ಸರ್ವೇಷಾಮಸ್ಮಾಕಂ ಪರಮಾ ಗತಿಃ ॥೨೦॥

ಭವಾಂಸ್ತಸ್ಮಾನ್ನಿಯೋಗಾತ್ ತೇ ಕೋಽಸ್ತು ಸೇನಾಪತಿರ್ಮಮ ॥೨೧॥

ದುರ್ಯೋಧನ– ಯಾರನ್ನು ಮುಂದಿಟ್ಟುಕೊಂಡು ನಾವೆಲ್ಲಾ ಸೇರಿಕೊಂಡು ಯುದ್ಧದಲ್ಲಿ ಪಾಂಡವರ ಮೇಲೆ ಜಯವನ್ನು ಸಾಧಿಸಿಕೊಳ್ಳುವೆವೋ ಅಂತಹ ಗುರುಪುತ್ರನಾದ ಅಶ್ವತ್ಥಾಮನೇ ಇಂದು ನಮಗೆಲ್ಲಾ ಉತ್ತಮವಾದ ಆಶ್ರಯನಾಗಿದ್ದಾನೆ. ಅಶ್ವತ್ಥಾಮ! ನಿನ್ನ ಆದೇಶದಂತೆ ನನ್ನ ಸೇನಾಧಿಪತಿಯನ್ನಾಗಿ ಯಾರನ್ನು ನೇಮಿಸಲಿ?

ದ್ರೌಣಿಃ

ಅಯಂ ಕುಲೇನ ವೀರ್ಯೇಣ ತೇಜಸಾ ಯಶಸಾ ಶ್ರಿಯಾ ।
ಸರ್ವೈರ್ಗುಣೈಃ ಸಮುದಿತಃ ಶಲ್ಯೋ ನೋಽಸ್ತು ಚಮೂಪತಿಃ ॥೨೨॥

ಅಶ್ವತ್ಥಾಮ– ಈ ಶಲ್ಯನು ಕುಲದಿಂದ, ವೀರ್ಯದಿಂದ, ತೇಜಸ್ಸಿನಿಂದ, ಕೀರ್ತಿಯಿಂದ, ಸಂಪತ್ತಿನಿಂದ ಹಾಗೂ ಸರ್ವಗುಣಗಳಿಂದ ಉತ್ಕೃಷ್ಟನಾಗಿದ್ದಾನೆ. ಅಂತಹ ಶಲ್ಯನೇ ನಮಗೆ ಸೇನಾಧಿಪತಿಯಾಗಲಿ.

ಭಾಗಿನೇಯಾನ್ ನಿಜಾಂಸ್ಯಕ್ತ್ವಾ ಕೃತಜ್ಞೋಽಸ್ಮಾನುಪಾಗತಃ ।
ಮಹಾಸೇನೋ ಮಹಾಬಾಹುಃ ಮಹಾಸೇನ ಇವಾಪರಃ ॥೨೩॥

ತನ್ನ ತಂಗಿ ಮಾದ್ರಿಯ ಮಕ್ಕಳನ್ನು ಬಿಟ್ಟು ಕೃತಜ್ಞತೆಯಿಂದ ನಿನ್ನ ಪಕ್ಷಕ್ಕೆ ಬಂದಿರುತ್ತಾನೆ ದ್ವಿತೀಯಸ್ಕಂದನ ಹಾಗೆ ಮಹಾಬಾಹುವಾದ ಈತ ಮಹತ್ತಾದ ಸೈನ್ಯವನ್ನು ಹೊಂದಿ ಮುನ್ನಡೆಸುವವನಾಗಿದ್ದಾನೆ.

ತಂ ತು ಸೇನಾಪತಿಂ ಮನ್ಯೇ ನೃಪತಿಂ ನೃಪಸತ್ತಮ ।
ಶಕ್ಯಃ ಪ್ರಾಪ್ತುಂ ಜಯೋಽಸ್ಮಾಭಿರ್ದೇವೈಃ ಸ್ಕಂದಮಿವೋರ್ಜಿತಮ್ ॥೨೪॥

ರಾಜಶ್ರೇಷ್ಠನೇ! ಈ ಶಲ್ಯರಾಜನನ್ನೇ ನಾನು ಸೇನಾಧಿಪತಿ ಎಂಬುದಾಗಿ ತಿಳಿಯುತ್ತೇನೆ. ಉತ್ಕೃಷ್ಟನಾದ ಸ್ಕಂದನ ಸೇನಾಧಿಪತ್ಯದಲ್ಲಿ ದೇವತೆಗಳು ಜಯವನ್ನು ಹೊಂದಿದಂತೆ ನಾವೂ ಇವನ ಸೇನಾಧಿಪತ್ಯದಲ್ಲಿ ಜಯವನ್ನು ಗಳಿಸಬಹುದು.

ಸಂಜಯಃ

ತಥೋಕ್ತೇ ದ್ರೋಣಪುತ್ರೇಣ ಸರ್ವ ಏವ ನರಾಧಿಪಾಃ ।
ಪರಿವಾರ್ಯ ಸ್ಥಿತಾಃ ಶಲ್ಯಂ ಜಯಶಬ್ದಂ ಚ ಚಕ್ರಿರೇ ॥೨೫॥

ಸಂಜಯ– ಅಶ್ವತ್ಥಾಮನು ಹೀಗೆ ಹೇಳಿದ್ದನ್ನು ಕೇಳಿಸಿಕೊಂಡ ಎಲ್ಲ ರಾಜರೂ ಶಲ್ಯನನ್ನು ಸುತ್ತುವರೆದು ನಿಂತುಕೊಂಡು 'ಶಲ್ಯನಿಗೆ ಜಯವಾಗಲಿ' ಎಂದು ಹೇಳಿದರು.

ಯುದ್ಧಾಯ ಚ ಮನಶ್ಚಕ್ರುರಾವೇಶಂ ಚ ಪರಂ ಯಯುಃ ॥೨೬॥

ಯುದ್ಧಕ್ಕೆ ಮನಸ್ಸನ್ನು ಸಜ್ಜುಗೊಳಿಸಿ ಬಹಳವಾದ ಯುದ್ಧಾವೇಶವನ್ನು ಹೊಂದಿದರು.

ತತೋ ದುರ್ಯೋಧನಃ ಶಲ್ಯಂ ಭೂಮೌ ಸ್ಥಿತ್ವಾ ರಥೇ ಸ್ಥಿತಮ್ ।
ಪ್ರೋವಾಚ ಪ್ರಾಂಜಲಿರ್ಭೂತ್ವಾ ಶಲ್ಯಂ ಭೀಷ್ಮಸಮಂ ರಣೇ ॥೨೭॥

ಅನಂತರ ರಣರಂಗದಲ್ಲಿ ದುರ್ಯೋಧನನು ರಥದಿಂದ ಕೆಳಗಿಳಿದು, ನೆಲದಲ್ಲಿ ನಿಂತುಕೊಂಡು ಯುದ್ಧವಿಷಯದಲ್ಲಿ ಭೀಷ್ಮಾಚಾರ್ಯರಿಗೆ ಸದೃಶನಾದ ಶಲ್ಯನಿಗೆ ಹೀಗೆ ಹೇಳುತ್ತಾನೆ.

ದುರ್ಯೋಧನಃ

ಅಯಂ ಸ ಕಾಲಃ ಸಂಪ್ರಾಪ್ತೋ ಮಿತ್ರಾಣಾಂ ಮಿತ್ರಸತ್ತಮ ।
ಯತ್ರ ಮಿತ್ರಮಮಿತ್ರಂ ವಾ ಪರೀಕ್ಷಂತೇ ಬುಧಾ ಜನಾಃ ॥೨೮॥

ದುರ್ಯೋಧನ– ಉತ್ತಮ ಮಿತ್ರನೇ! ಯಾವ ಸಂದರ್ಭದಲ್ಲಿ ಜ್ಞಾನಿಗಳು ಯಾರು ಮಿತ್ರರು, ಯಾರು ಮಿತ್ರರಲ್ಲ ಎಂಬುದನ್ನು ನಿಶ್ಚಯಿಸುತ್ತಾರೆಯೋ ಅಂತಹ ಈ ಸಂದರ್ಭವು ಮಿತ್ರರಾದ ನಮಗೆ ಪ್ರಾಪ್ತವಾಗಿದೆ.

ಸ ಭವಾನಸ್ತು ನಃ ಶೂರಃ ಪ್ರಣೇತಾ ವಾಹಿನೀಮುಖೇ ॥೨೯॥

ಶೂರನಾದ ನೀನು ನಮ್ಮ ಸೇನೆಗೆ ಮುಖ್ಯ ನೇತಾರನಾಗಬೇಕು.

ರಣಂ ತು ಯಾತೇ ಭವತಿ ಪಾಂಡವಾ ಮಂದಚೇತಸಃ ।
ಭವಿಷ್ಯಂತಿ ಸಹಾಮಾತ್ಯಾಃ ಸಬಲಾ ಅಪಿ ದುರ್ಬಲಾಃ ॥೩೦॥

ನೀನು ಯುದ್ಧಕ್ಕೆ ಹೊರಟರೆ ಪಾಂಡವರು ಮತಿಹೀನರಾಗುತ್ತಾರೆ. ಮಂತ್ರಿಗಳೊಡನೆ ಇದ್ದರೂ, ಸೈನ್ಯವನ್ನು ಹೊಂದಿದ್ದರೂ ದುರ್ಬಲರಾಗುತ್ತಾರೆ.

ಶಲ್ಯಃ

ಯತ್ತು ಮಾಂ ಮನ್ಯಸೇ ರಾಜನ್ ಕುರುರಾಜ ಕರೋಮಿ ತತ್ ।
ತತ್ಪ್ರಿಯಾರ್ಥಂ ಹಿ ಮೇ ಸರ್ವಂ ಪ್ರಾಣಾ ರಾಜ್ಯಂ ಧನಾನಿ ಚ ॥೩೧॥

ಶಲ್ಯ– ರಾಜನೇ! ನಾನು ಯಾವ ರೀತಿಯಲ್ಲಿ ಇರಬೇಕೆಂದು ನೀನು ಅಭಿಪ್ರಾಯ ಪಡುತ್ತೀಯೋ ಹಾಗೆಯೇ ನಾನು ಮಾಡುತ್ತೇನೆ. ನನ್ನ ಪ್ರಾಣ, ರಾಜ್ಯ, ಸಂಪತ್ತು ಎಲ್ಲವೂ ನಿನ್ನ ಕ್ಷೇಮಕ್ಕೇನೇ ಇವೆ.

ದುರ್ಯೋಧನಃ

ಸೇನಾಪತ್ಯಂ ತು ವರಯೇ ತ್ವಾಮಹಂ ಮಾತುಲಾತುಲಮ್ ।
ಸೋಽಸ್ಮಾನ್ ಪಾಹಿ ಯುಧಾಂ ಶ್ರೇಷ್ಠ ಸ್ಕಂದೋ ದೇವಾನಿವಾಹವೇ ॥

ದುರ್ಯೋಧನ– ಮಾವನೇ! ಪರಾಕ್ರಮದಲ್ಲಿ ಅಸದೃಶನಾದ ನಿನ್ನಲ್ಲಿ ಸೇನಾಧಿಪತ್ಯವನ್ನು ವಹಿಸಿಕೊಳ್ಳುವಂತೆ ಕೇಳಿಕೊಳ್ಳುತ್ತೇನೆ. ಯುದ್ಧವಿಶಾರದನೇ! ಸ್ಕಂದನು ದೇವತೆಗಳನ್ನು ಅಸುರಯುದ್ಧದಲ್ಲಿ ಕಾಪಾಡಿದಂತೆ ನೀನು ನಮ್ಮನ್ನು ರಕ್ಷಿಸು.

ಅಭಿಷಿಂಚ(ಚ್ಯ)ಸ್ವ ರಾಜೇಂದ್ರ ದೇವಾನಾಮಿವ ಪಾವಕಿಃ ।
ಜಹಿ ಶತ್ರೂನ್ ರಣೇ ವೀರ ಮಹೇಂದ್ರೋ ದಾನವಾನಿವ ॥೩೩॥

ರಾಜೇಂದ್ರನೇ! ಅಗ್ನಿಪುತ್ರನಾದ ಸ್ಕಂದನು ದೇವತೆಗಳಿಂದ ಸೇನಾಧಿಪತ್ಯದಲ್ಲಿ ಅಭಿಷಿಕ್ತನಾದ ಹಾಗೆ ನನ್ನಿಂದ ನೀನು ಅಭಿಷಿಕ್ತನಾಗು. ವೀರನೇ! ಯುದ್ಧದಲ್ಲಿ ದಾನವರನ್ನು ದೇವೇಂದ್ರನು ಸದೆಬಡಿದಂತೆ ಶತ್ರುಗಳನ್ನು ಸಂಹರಿಸು.''

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ಪ್ರಭಾತಾಯಾಂ ತು ಶರ್ವರ್ಯಾಂ ಗುರುಪುತ್ರಾನುಮೋದಿತಃ ।
ಶಲ್ಯಂ ಸೇನಾಪತಿಂ ಕೃತ್ವಾ ಯೋದ್ಧುಂ ದುರ್ಯೋಧನೋಽಭ್ಯಯಾತ್ ॥

ಆ ರಾತ್ರಿ ಬೆಳಗಾದಾಗ ದುರ್ಯೋಧನ ಅಶ್ವತ್ಥಾಮನ ಸಮ್ಮತಿ ಪಡೆದು ಶಲ್ಯನನ್ನು ಸೇನಾಪತಿಯನ್ನಾಗಿ ಮಾಡಿ ಯುದ್ಧಮಾಡಲು ಹೊರಟನು.

★ ★ ★ ★ ★

ಏಳನೆಯ ಅಧ್ಯಾಯ

ದುರ್ಯೋಧನನು ಶಲ್ಯನನ್ನು ಸೇನಾಪತಿಯನ್ನಾಗಿ ನೇಮಿಸುವುದು.
ಶಲ್ಯನನ್ನು ವಧಿಸುವ ಬಗ್ಗೆ ಶ್ರೀಕೃಷ್ಣನು ಧರ್ಮರಾಜನಿಗೆ ಹೇಳುವುದು.

ಸಂಜಯಃ

ಏತಚ್ಛ್ರುತ್ವಾ ವಚೋ ರಾಜ್ಞೋ ಮದ್ರರಾಜಃ ಪ್ರತಾಪವಾನ್ ।
ದುರ್ಯೋಧನಂ ತದಾ ರಾಜನ್ನಿದಂ ವಚನಮಬ್ರವೀತ್ ॥೧॥

ಸಂಜಯ– ರಾಜನೇ! ಪ್ರತಾಪಶಾಲಿಯಾದ ಮದ್ರರಾಜ ಶಲ್ಯನು ರಾಜ ದುರ್ಯೋಧನನ ಈ ಮಾತನ್ನು ಕೇಳಿದಾಗ ದುರ್ಯೋಧನನನ್ನುದ್ದೇಶಿಸಿ ಈ ಮಾತನ್ನು ಹೇಳುತ್ತಾನೆ.

ಶಲ್ಯಃ

ದುರ್ಯೋಧನ ಮಹಾಬಾಹೋ ಶೃಣು ವಾಕ್ಯಮರಿಂದಮ ।
ಯಾವೇತೌ ಮನ್ಯಸೇ ಕೃಷ್ಣೌ ರಥಸ್ಥೌ ರಥಿನಾಂ ವರೌ ।
ನ ಮೇ ತುಲ್ಯಾವುಭಾವೇತೌ ಬಾಹುವೀರ್ಯೇ ಕಥಂಚನ ॥೨॥

ಶಲ್ಯ– ಶತ್ರುದಮನನಾದ ದುರ್ಯೋಧನನೇ! ಮಹಾಬಾಹೋ! ಈ ಮಾತನ್ನು ಕೇಳು. ರಥದಲ್ಲಿ ಇರುವ ಈ ಯಾವ ಕೃಷ್ಣಾರ್ಜುನರನ್ನು ರಥಿಗಳಲ್ಲೇ ಶ್ರೇಷ್ಠರು ಎಂಬುದಾಗಿ ತಿಳಿದುಕೊಂಡಿದ್ದೀಯೋ, ಅವರಿಬ್ಬರೂ ಯಾವ ರೀತಿಯಲ್ಲಿಯೂ ನನ್ನ ಭುಜಬಲಕ್ಕೆ ಸಮಾನರಾಗಲಾರರು.

ಉದ್ಯತಾಂ ಪೃಥಿವೀಂ ಸರ್ವಾಂ ಸಸುರಾಸುರಮಾನವಾನ್ ।
ಯೋಧಯೇಯಂ ರಣಮುಖೇ ಸಂಕ್ರುದ್ಧಃ ಕಿಮು ಪಾಂಡವಾನ್ ॥೩॥

ದೇವತೆಗಳು, ದಾನವರು ಹಾಗೂ ಮಾನವರನ್ನು ಸೇರಿಸಿಕೊಂಡು ಇಡೀ ಭೂಮಂಡಲವಾಸಿಗಳೂ ಎದ್ದುಬಂದರೂ ರಣರಂಗದಲ್ಲಿ ನಾನು ಕ್ರೋಧಾವೇಶದಿಂದ ಯುದ್ಧಮಾಡಬಲ್ಲೆನು. ಪಾಂಡವರು ಏನು?

ವಿಜೇಷ್ಯೇ ಚ ರಣೇ ಪಾರ್ಥಾನ್ ಸೋಮಕಾಂಶ್ಚ ಸಮಾಗತಾನ್ ॥೪॥

ಯುದ್ಧದಲ್ಲಿ ಬರುವ ಪಾಂಡವರನ್ನೂ ಸೋಮಕರನ್ನೂ ಗೆಲ್ಲುತ್ತೇನೆ.

ಅಹಂ ಸೇನಾಪ್ರಣೇತಾ ವೈ ಭವಿಷ್ಯಾಮಿ ನ ಸಂಶಯಃ ।
ತಂ ಚ ವ್ಯೂಹಂ ವಿಧಾಸ್ಯಾಮಿ ನ ಕರಿಷ್ಯಂತಿ ಯಂ ಪರೇ ॥೫॥

ನಾನು ಸೇನಾಧಿಪತಿಯಾಗುತ್ತೇನೆ. ಇದರಲ್ಲಿ ಸಂಶಯವಿಲ್ಲ. ಬೇರೆ ಯಾರೂ ನಿರ್ಮಿಸದೇ ಇರುವ ಸೇನಾವ್ಯೂಹವನ್ನು ನಾನು ರಚಿಸುತ್ತೇನೆ.

ಅದ್ಯೈವಾಹಂ ರಣೇ ಸರ್ವಾನ್ ಪಾಂಚಾಲಾನ್ ಸಹ ಪಾಂಡವೈಃ ।
ನಿಹನಿಷ್ಯಾಮಿ ರಾಜೇಂದ್ರ ಸ್ವರ್ಗಂ ಯಾಸ್ಯಾಮಿ ವಾ ಹತಃ ॥೬॥

ರಾಜೇಂದ್ರ! ರಣರಂಗದಲ್ಲಿ ಈ ದಿನವೇ ನಾನು ಪಾಂಚಾಲರನ್ನೂ, ಪಾಂಡವರನ್ನೂ ನಾಶಮಾಡುತ್ತೇನೆ. ಅಥವಾ ನಾನೇ ಯುದ್ಧದಲ್ಲಿ ಪ್ರಾಣಕಳೆದುಕೊಂಡು ವೀರಸ್ವರ್ಗಕ್ಕೆ ಹೋಗುತ್ತೇನೆ.

ಅದ್ಯ ಪಶ್ಯಂತು ಮಾಂ ಲೋಕಾ ವಿಚರಂತಮಭೀತವತ್ ।
ಅದ್ಯ ಪಾಂಡುಸುತಾಃ ಸರ್ವೇ ವಾಸುದೇವೋಽಥ ಸಾತ್ಯಕಿಃ ॥೭॥

ಯಾವುದೇ ಭಯವಿಲ್ಲದೆ ರಣರಂಗದಲ್ಲಿ ಸಂಚರಿಸುವ ನನ್ನನ್ನು ಪಾಂಡವರು, ವಾಸುದೇವ, ಸಾತ್ಯಕಿ ಮೊದಲಾದ ಎಲ್ಲರೂ ನೋಡುವಂತಾಗಲಿ.

ಪಾಂಚಾಲಾಶ್ಚೇದಯಶ್ಚೈವ ದ್ರೌಪದೇಯಾಶ್ಚ ಸರ್ವಶಃ ।
ಧೃಷ್ಟದ್ಯುಮ್ನಃ ಶಿಖಂಡೀ ಚ ಸರ್ವೇ ಚಾಪಿ ಪ್ರಭದ್ರಕಾಃ ॥೮॥

ವಿಕ್ರಮಂ ಮಮ ಪಶ್ಯಂತು ಧನುಷಶ್ಚ ಮಹದ್ಬಲಮ್ ।
ಲಾಘವಂ ಚಾಸ್ತ್ರವೀರ್ಯಂ ಚ ಭುಜಯೋಶ್ಚ ಬಲಂ ಯುಧಿ ॥೯॥

ಯುದ್ಧದಲ್ಲಿ ಪಾಂಚಾಲರು, ಚೇದಿದೇಶದ ಯೋಧರು, ದ್ರೌಪದಿಯ ಮಕ್ಕಳು, ಧೃಷ್ಟದ್ಯುಮ್ನ, ಶಿಖಂಡೀ, ಪ್ರಭದ್ರಕರು ಇವರೆಲ್ಲರೂ ನನ್ನ ಪರಾಕ್ರಮವನ್ನೂ, ಮಹಾಬಲವನ್ನೂ, ಲಾಘವಾದಿ ಐಶ್ವರ್ಯವನ್ನೂ, ಅಸ್ತ್ರಸಾಮರ್ಥ್ಯವನ್ನೂ, ಭುಜಬಲವನ್ನೂ ನೋಡಲಿ.

ಅದ್ಯ ಪಶ್ಯಂತು ಮೇ ಪಾರ್ಥಾಃ ಸಿದ್ಧಾಶ್ಚ ಸಹ ಚಾರಣೈಃ ।
ಯಾದೃಶಂ ಮೇ ಬಲಂ ಬಾಹ್ವೋಃ ಸಂಪದಸ್ತ್ರೇಷು ಯಾ ಚ ಮೇ॥೧೦॥

ಪಾರ್ಥರು, ಸಿದ್ಧರು, ಚಾರಣರು ನನ್ನ ಬಾಹುಗಳಲ್ಲಿ ಎಂತಹ ಬಲವಿದೆ, ನನ್ನ ಅಸ್ತ್ರಸಂಪತ್ತು ಎಂತಹದ್ದು ಎಂಬುದನ್ನು ನೋಡಲಿ.

ಅದ್ಯ ಮೇ ವಿಕ್ರಮಂ ದೃಷ್ಟ್ವಾ ಪಾಂಡವಾನಾಂ ಮಹಾರಥಾಃ ।
ಪ್ರತೀಕಾರಪರಾ ಭೂತ್ವಾ ಚೇಷ್ಟಂತಾಂ ವಿವಿಧಾಃ ಕ್ರಿಯಾಃ ॥೧೧॥

ಇವತ್ತು ಪಾಂಡವರ ಸೈನ್ಯದ ಮಹಾರಥರು ನನ್ನ ವಿಕ್ರಮವನ್ನು ನೋಡಿ ಅದಕ್ಕೆ ಪ್ರತಿಯುದ್ಧ ಮಾಡಲು ಬೇಕಾದ ಬೇರೆ ಬೇರೆ ಕ್ರಿಯೆಗಳನ್ನು ಕೈಗೊಳ್ಳಲಿ.

ಅದ್ಯ ಸೈನ್ಯಾನಿ ಪಾಂಡೂನಾಂ ದ್ರಾವಯಿಷ್ಯೇ ಸಮಂತತಃ ।
ಭೀಷ್ಮದ್ರೋಣಾವತಿ ವಿಭೋ ಸೂತಪುತ್ರಂ ಚ ಸಂಯುಗೇ ॥೧೨॥

ವಿಭುವೇ! ಇಂದು ನಾನು ಭೀಷ್ಮ-ದ್ರೋಣ ಹಾಗೂ ಕರ್ಣರು ಮಾಡಿದ್ದಕ್ಕಿಂತಲೂ ಅಧಿಕವಾದ ರೀತಿಯಲ್ಲಿ ಪಾಂಡವರ ಸೇನೆಯನ್ನು ಎಲ್ಲಾ ದಿಕ್ಕುಗಳಿಂದಲೂ ಓಡಿಸುತ್ತೇನೆ.

ವಿಚರಿಷ್ಯೇ ರಣಮುಖೇ ಪ್ರಿಯಾರ್ಥಂ ತವ ಕೌರವ ।
ಇತಿ ಸತ್ಯಂ ಬ್ರವೀಮ್ಯೇತದ್ ದುರ್ಯೋಧನ ನ ಸಂಶಯಃ ॥೧೩॥

ಹೇ ಕೌರವ! ನಿನ್ನ ಸಂತೋಷಕ್ಕಾಗಿ ಯುದ್ಧದ ಮುಂಚೂಣಿಯಲ್ಲಿ ಇರುತ್ತೇನೆ. ದುರ್ಯೋಧನ! ಸತ್ಯವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಇದರಲ್ಲಿ ಸಂಶಯ ಬೇಡ.

ಸಂಜಯಃ

ಏವಮುಕ್ತಸ್ತದಾ ರಾಜಾ ಮದ್ರಾಧಿಪತಿಮಂಜಸಾ ।
ಅಭ್ಯಷಿಂಚಚ್ಚ ಸೇನಾಯಾಂ ಮಧ್ಯೇ ಭಾರತಸತ್ತಮ ॥೧೪॥

ವಿಧಿನಾ ಶಾಸ್ತ್ರದೃಷ್ಟೇನ ಹೃಷ್ಟರೂಪೋ ವಿಶಾಂಪತೇ ।
ಅಭಿಷಿಕ್ತೇ ತತಃ ಶಲ್ಯೇ ಸಿಂಹನಾದೋ ಮಹಾನಭೂತ್ ॥೧೫॥

ಸಂಜಯ– ಭಾರತೋತ್ತಮನೇ! ಶಲ್ಯನ ಈ ಮಾತನ್ನು ಕೇಳಿದ ಸಂತುಷ್ಟನಾದ ರಾಜ ದುರ್ಯೋಧನನು ಮದ್ರರಾಜನನ್ನು ಒಳ್ಳೆಯ ರೀತಿಯಲ್ಲಿ ಸೈನ್ಯದ ಮಧ್ಯದಲ್ಲಿ ಶಾಸ್ತ್ರೋಕ್ತವಿಧಿಯಿಂದ ಸೇನಾಧಿಪತಿಯನ್ನಾಗಿ ಅಭಿಷೇಕ ಮಾಡಿದನು. ಶಲ್ಯನು ಪಟ್ಟಾಭಿಷಿಕ್ತನಾದಾಗ ದೊಡ್ಡದಾದ ಸಿಂಹನಾದವು ಉಂಟಾಯಿತು.

ತವ ಸೈನ್ಯೇಷ್ವವಾದ್ಯಂತ ವಾದಿತ್ರಾಣಿ ಚ ಸಂಘಶಃ ।
ಹೃಷ್ಟಾಶ್ಚಾಸಂಸ್ತದಾ ಯೋಧಾ ಮದ್ರಕಾಶ್ಚ ಮಹಾರಥಾಃ ॥೧೬॥

ತುಷ್ಟುವುಶ್ಚೈವ ರಾಜಾನಂ ಶಲ್ಯಮಾಹವಶೋಭಿನಮ್ ॥೧೭॥

ನಿನ್ನ ಸೈನ್ಯದಲ್ಲಿ ವಾದ್ಯಗಳು ಗುಂಪು - ಗುಂಪಾಗಿ ವಾದಿಸಲ್ಪಟ್ಟವು. ನಿನ್ನ ಸೈನ್ಯದ ಯೋಧರು ಹಾಗೂ ಮದ್ರದೇಶದ ಮಹಾರಥಿಕರೂ ಸಂತೋಷಪಟ್ಟರು. ಹಾಗೂ ಸೇನಾಧಿಪತಿಯಾಗಿ ಯುದ್ಧಕ್ಕೇ ಶೋಭೆಯನ್ನು ತಂದುಕೊಟ್ಟ ತಮ್ಮ ರಾಜನಾದ ಶಲ್ಯನನ್ನು ಸ್ತುತಿಸಿದರು.

ಸೈನಿಕಾಃ

ಜಯ ರಾಜಂಶ್ಚಿರಂ ಜೀವ ಜಹಿ ಶತ್ರೂನ್ ಸಮಾಗತಾನ್ ॥೧೮॥

ತವ ಬಾಹುಬಲಂ ಪ್ರಾಪ್ಯ ಧಾರ್ತರಾಷ್ಟ್ರೋ ಮಹಾಬಲಃ ।
ನಿಖಿಲಾಂ ಪೃಥಿವೀಂ ಸರ್ವಾಂ ಪ್ರಶಾಸ್ತು ನಿಹತದ್ವಿಷಮ್ ॥೧೯॥

ಸೈನಿಕರು– ಹೇ ರಾಜನೇ! ನಿನಗೆ ಜಯವಾಗಲಿ. ಬಾಳಿ ಬದುಕು. ಬಂದಿರುವ ಶತ್ರುಗಳನ್ನು ಸಂಹರಿಸು. ನಿನ್ನ ಬಾಹುಬಲವನ್ನು ಹೊಂದಿದ ಮಹಾಬಲಶಾಲಿಯಾದ ದುರ್ಯೋಧನನು ಶತ್ರುಗಳನ್ನು ಸಂಹರಿಸಿ ಇಡೀ ಭೂಮಂಡಲವನ್ನು ಆಳಲಿ.

ತ್ವಂ ಹಿ ಶಕ್ತೋ ರಣೇ ಜೇತುಂ ದೇವಗಂಧರ್ವದಾನವಾನ್ ।
ಮರ್ತ್ಯಧರ್ಮಾಣ ಇಹ ತು ಕಿಂ ನ ಸೋಮಕಸೃಂಜಯಾನ್ ॥೨೦॥

ನೀನು ಯುದ್ಧದಲ್ಲಿ ದೇವತೆಗಳು, ಗಂಧರ್ವರು ಹಾಗೂ ದಾನವರನ್ನೂ ಗೆಲ್ಲಲು ಸಮರ್ಥನಾಗಿರುವಿ. ಹಾಗಿರುವಾಗ ಮಾನವರಾಗಿರುವ ಈ ಸೋಮಕರು, ಸೃಂಜಯರು ನಿನ್ನಿಂದ ಸೋಲದಿರುತ್ತಾರೆಯೇ?

ಸಂಜಯಃ

ಏವಂ ಸಂಸ್ತೂಯಮಾನಸ್ತು ಮದ್ರಾಣಾಮಧಿಪೋ ಬಲೀ ।
ಹರ್ಷಂ ಪ್ರಾಪ ತದಾ ವೀರೋ ದುಷ್ಪ್ರಾಪಮಕೃತಾತ್ಮಭಿಃ ॥೨೧॥

ಸಂಜಯ– ಹೀಗೆ ಸ್ತುತಿಸುತ್ತಿರಲು ಬಲಶಾಲಿಯಾದ ಶಲ್ಯನು ಬಹಳ ಆನಂದವನ್ನು ಅನುಭವಿಸಿದನು. ಆ ಆನಂದವು ಪ್ರಯತ್ನಶೀಲರಲ್ಲದ ವ್ಯಕ್ತಿಗಳಿಗೆ ಹೊಂದಲು ಕಷ್ಟಸಾಧ್ಯವಾಗಿರುತ್ತದೆ.

ಅದ್ಯ ಜೇಷ್ಯಾಮಿ ಕೌರವ್ಯ ಸರ್ವಾನ್ ಶತ್ರೂನ್ ತವ ಪ್ರಭೋ ।
ಏತಚ್ಛ್ರುತ್ವಾ ಸಿಂಹ(ಸಿಂಹ್ಯ)ನಾದಮಕರೋದ್ ವಾಹಿನೀ ತವ ॥೨೨॥

ಪ್ರಭೋ! ದುರ್ಯೋಧನ! ಇವತ್ತು ನಿನ್ನ ಎಲ್ಲ ಶತ್ರುಗಳನ್ನೂ ಗೆಲ್ಲುತ್ತೇನೆ. ಈ ಮಾತನ್ನು ಕೇಳಿ ನಿನ್ನ ಸೇನೆಯು ಸಿಂಹನಾದವನ್ನು ಮಾಡಿತು.

ಅಭಿಷಿಕ್ತೇ ತದಾ ಶಲ್ಯೇ ತವ ಸೈನ್ಯೇಷು ಮಾನದ ।
ನ ಕರ್ಣವ್ಯಸನಂ ಕಿಂಚಿನ್ಮೇನಿರೇ ತತ್ರ ಭಾರತ ॥೨೩॥

ಗೌರವಪಾತ್ರನಾದ ಧೃತರಾಷ್ಟ್ರನೆ! ಶಲ್ಯನನ್ನು ಸೇನಾಧಿಪತಿಯನ್ನಾಗಿ ನೇಮಿಸಿದಾಗ ಕರ್ಣನ ಅವಸಾನದಿಂದ ಉಂಟಾದ ದುಃಖವನ್ನು ಸ್ವಲ್ಪವೂ ಮನಗಾಣಲಿಲ್ಲ.

ಹೃಷ್ಟಾಃ ಸುಮನಸಶ್ಚೈವ ಬಭೂವುಸ್ತತ್ರ ಸೈನಿಕಾಃ ।
ಮೇನಿರೇ ಚ ತದಾ ಪಾರ್ಥಾನ್ ಮದ್ರರಾಜವಶಂ ಗತಾನ್ ॥೨೪॥

ಸೈನಿಕರು ಸಂತೋಷದಿಂದ ನಿರ್ಮಲ ಮನಸ್ಸುಳ್ಳವರಾದರು. ಪಾಂಡವರೆಲ್ಲರೂ ಶಲ್ಯನ ವಶಕ್ಕೆ ಒಳಗಾಗುವರೆಂದು ಆಗ ಅಂದುಕೊಂಡರು.

ಪ್ರಹರ್ಷಂ ಪ್ರಾಪ್ಯ ಸೇನಾ ತು ತಾವಕೀ ಭರತರ್ಷಭ ।
ತಾಂ ರಾತ್ರಿಂ ಸುಖಿನೀ ಸುಪ್ತಾ ಸ್ವಸ್ಥಚಿತ್ತೇವ ಚಾಭವತ್ ॥೨೫॥

ಭರತಶ್ರೇಷ್ಠನೇ! ನಿನ್ನ ಸೇನೆಯು ಬಹಳವಾಗಿ ಆನಂದವನ್ನು ಹೊಂದಿತು. ಸೈನಿಕರು ಮನದ ಗೊಂದಲಗಳನ್ನೆಲ್ಲಾ ದೂರೀಕರಿಸಿ ಸುಖವಾಗಿ ಆ ರಾತ್ರಿ ಮಲಗಿದರು.

ಸೈನ್ಯಸ್ಯ ತವ ತಂ ಶ್ರುತ್ವಾ ಶಬ್ದಂ ರಾಜಾ ಯುಧಿಷ್ಠಿರಃ ।
ವಾರ್ಷ್ಣೇಯಮಬ್ರವೀದ್ ವಾಕ್ಯಂ ಸರ್ವಕ್ಷತ್ರಸ್ಯ ಪಶ್ಯತಃ ॥೨೬॥

ನಿನ್ನ ಸೈನ್ಯದ ಆ ಸಿಂಹನಾದವನ್ನು ಕೇಳಿದ ಯುಧಿಷ್ಠಿರನು ಎಲ್ಲಾ ಕ್ಷತ್ರಿಯರ ಸಮ್ಮುಖದಲ್ಲಿ ಕೃಷ್ಣನಿಗೆ ಹೀಗೆ ಹೇಳುತ್ತಾನೆ.

ಯುಧಿಷ್ಠಿರಃ

ಮದ್ರರಾಜಃ ಕೃತಃ ಶಲ್ಯೋ ಧಾರ್ತರಾಷ್ಟ್ರೇಣ ಮಾಧವ ।
ಸೇನಾಪತಿರ್ಮಹೇಷ್ವಾಸಃ ಸರ್ವಸೈನ್ಯೇಷು ಪೂಜಿತಃ ॥೨೭॥

ಯುಧಿಷ್ಠಿರ– ಮಾಧವ! ಮದ್ರಾಧಿಪನಾದ ಶಲ್ಯನು ಸೇನಾಧಿಪನಾಗಿದ್ದಾನೆ. ಆ ಶಲ್ಯನು ಮಹಾ ಬಿಲ್ಗಾರನು. ಅವನು ಎಲ್ಲರ ಗೌರವಕ್ಕೂ ಪಾತ್ರನಾಗಿದ್ದಾನೆ.

ಏತಜ್ಜ್ಞಾತ್ವಾ ತಥಾ ಭೂತಂ ಕುರು ಮಾಧವ ನಃ ಕ್ಷಮಮ್ ।
ಭವಾನ್ ನೇತಾ ಚ ಗೋಪ್ತಾ ಚ ವಿಧತ್ಸ್ವ ಯದನಂತರಮ್ ॥೨೮॥

ಮಾಧವ! ಇದನ್ನು ತಿಳಿದು ನಮಗೂ ಶಲ್ಯನ ಹಾಗೆಯೇ ದಕ್ಷನಾದ ಸೇನಾಪತಿಯನ್ನು ನೇಮಿಸು. ನೀನೇ ನಮಗೆ ನಾಯಕ ಹಾಗೂ ರಕ್ಷಕ. ನಿನ್ನಿಂದ ನೇಮಿಸಲ್ಪಡುವವನು ನಿನ್ನ ಅನಂತರದ ಸ್ಥಾನದಲ್ಲಿ ಇರುತ್ತಾನೆ.

ಸಂಜಯಃ

ತಮಬ್ರವೀನ್ಮಹಾರಾಜ ವಾಸುದೇವೋ ಮಹಾರಥಮ್ ॥೨೯॥

ಸಂಜಯ– ಮಹಾರಾಜ! ವಾಸುದೇವನು ಮಹಾರಥನಾದ ಧರ್ಮರಾಜನಿಗೆ ಹೀಗೆ ಹೇಳುತ್ತಾನೆ.

ಶ್ರೀಭಗವಾನ್

ಆರ್ತಾಯನಿಮಹಂ ಜಾನೇ ಯಥಾ ತತ್ತ್ವೇನ ಭಾರತ ।
ವೀರ್ಯವಾಂಶ್ಚ ಮಹೇಷ್ವಾಸೋ ಮಹಾತ್ಮಾ ಚ ವಿಶೇಷತಃ ॥೩೦॥

ಕೃತೀ ಚ ಚಿತ್ರಯೋಧೀ ಚ ಸಂಯುಕ್ತೋ ಲಾಘವೇನ ಚ ॥೩೧॥

ಶ್ರೀಭಗವಾನ್– ಭಾರತ! ಋತಾಯನನ ಮಗನಾದ ಶಲ್ಯನನ್ನು ನಾನು ಚೆನ್ನಾಗಿ ಬಲ್ಲೆ. ಅವನು ವೀರನೂ ಹೌದು. ಮಹಾಬಿಲ್ಲಾರನೂ ಹೌದು. ವಿಶೇಷವಾಗಿ ಮಹಾಧೈರ್ಯಶಾಲಿಯಾಗಿದ್ದಾನೆ. ಮಹಾಕಾರ್ಯಗಳನ್ನು ಮಾಡಿದವನಾಗಿದ್ದಾನೆ. ಚಿತ್ರ-ವಿಚಿತ್ರವಾದ ಯುದ್ಧವನ್ನು ಮಾಡುವವನಾಗಿದ್ದಾನೆ. ನಿರಾಯಾಸವಾಗಿ ಯುದ್ಧ ಮಾಡಬಲ್ಲವನಾಗಿದ್ದಾನೆ.

ಯಾದೃಗ್ಭೀಷ್ಮಸ್ತಥಾ ದ್ರೋಣೋ ಯಾದೃಕ್ ಕರ್ಣಶ್ಚ ಸಂಯುಗೇ ।
ತಾದೃಶಸ್ತದ್ವಿಶಿಷ್ಟೋ ವಾ ಮದ್ರರಾಜೋ ನ ಸಂಶಯಃ ॥೩೨॥

ಈ ಶಲ್ಯನು ಯುದ್ಧದಲ್ಲಿ ಭೀಷ್ಮನ ಹಾಗೆ, ದ್ರೋಣನ ಹಾಗೆ, ಕರ್ಣನ ಹಾಗೆ ಇದ್ದಾನೆ. ಅಥವಾ ಅವರಿಗಿಂತಲೂ ವೈಶಿಷ್ಟ್ಯಪೂರ್ಣನಾಗಿದ್ದಾನೆ.

ಯುಧ್ಯಮಾನಸ್ಯ ತಸ್ಯಾಜೌ ಚಿಂತಯನ್ನೇವ ಭಾರತ ।
ಯೋದ್ಧಾರಂ ನಾಧಿಗಚ್ಛಾಮಿ ತುಲ್ಯರೂಪಂ ಜನಾಧಿಪಮ್ ॥೩೩॥

ಯುಧಿಷ್ಠಿರ! ಯುದ್ಧದಲ್ಲಿ ತೊಡಗಿರುವ ಅವನನ್ನು ನೆನೆಸಿಕೊಂಡಾಗ ಅವನಿಗೆ ಸಮಾನವಾದ ಪರಾಕ್ರಮವುಳ್ಳ ಯುದ್ಧಮಾಡುವ ಇನ್ನೊಬ್ಬ ರಾಜನನ್ನು ತಿಳಿಯದವನಾಗಿದ್ದೇನೆ.

ಶಿಖಂಡ್ಯರ್ಜುನಭೀಮಾನಾಂ ಸಾತ್ವತಸ್ಯ ಚ ಭಾರತ ।
ಧೃಷ್ಟದ್ಯುಮ್ನಸ್ಯ ಚ ತಥಾ ಬಲೇನಾಭ್ಯಧಿಕೋ ರಣೇ ॥೩೪॥

ಭರತಕುಲೋದ್ಭವನೇ! ಈ ಶಲ್ಯನು ಬಲದಲ್ಲಿ ಶಿಖಂಡಿ, ಅರ್ಜುನ, ಭೀಮ ಸಾತ್ಯಕಿ, ಧೃಷ್ಟದ್ಯುಮ್ನ ಇವರೆಲ್ಲರಿಗಿಂತಲೂ ಉತ್ತಮನಾಗಿದ್ದಾನೆ.

ಮದ್ರರಾಜೋ ಮಹಾರಾಜ ಸಿಂಹದ್ವಿರದವಿಕ್ರಮಃ ।
ವಿಚರಿಷ್ಯತ್ಯಭೀಃ ಕಾಲೇ ಕಾಲಃ ಕ್ರುದ್ಧಃ ಪ್ರಜಾಸ್ವಿವ ॥೩೫॥

ಮಹಾರಾಜ! ಶಲ್ಯನು ಸಿಂಹದ ಹಾಗೆ, ಆನೆಯ ಹಾಗೆ ನಿರ್ಭೀತನಾಗಿ ಪ್ರಳಯಕಾಲದಲ್ಲಿ ಕುಪಿತನಾದ ಯಮನು ಜನರ ಮಧ್ಯೆ ಸಂಚರಿಸುವಂತೆ ರಣರಂಗದಲ್ಲಿ ಸಂಚರಿಸುತ್ತಾನೆ.

ತಸ್ಯಾದ್ಯ ನ ಪ್ರಪಶ್ಯಾಮಿ ಪ್ರತಿಯೋದ್ಧಾರಮಾಹವೇ ।
ತ್ವಾಮೃತೇ ಪುರುಷವ್ಯಾಘ್ರ ಶಾರ್ದೂಲಸಮವಿಕ್ರಮಮ್ ॥೩೬॥

ಪುರುಷಶ್ರೇಷ್ಠನೇ! ಸಿಂಹದ ಪರಾಕ್ರಮಕ್ಕೆ ಸದೃಶಪರಾಕ್ರಮವುಳ್ಳ ನಿನ್ನನ್ನು ಬಿಟ್ಟರೆ ಅವನಿಗೆ ವಿರುದ್ಧವಾಗಿ ರಣರಂಗದಲ್ಲಿ ಯುದ್ಧಮಾಡುವವನು ಇನ್ನೊಬ್ಬ ಕಾಣಿಸುವುದಿಲ್ಲ.

ಸ ತ್ವಮೇಕೋ ಹಿ ಲೋಕೇಽಸ್ಮಿನ್ ನಾನ್ಯಸ್ತ್ವತ್ತಃ ಪುಮಾನ್ ಭವೇತ್ ।
ಮದ್ರರಾಜಂ ರಣೇ ಕ್ರುದ್ಧಂ ಯೋ ಹನ್ಯಾತ್ ಕುರುನಂದನ ॥೩೭॥

ಕುರುನಂದನ! ಯುದ್ಧದಲ್ಲಿ ಕ್ರುದ್ಧನಾದ ಮದ್ರರಾಜನನ್ನು ಸಾಯಿಸುವವನು ಇರುವುದಾದರೆ ಲೋಕದಲ್ಲಿ ಅಂಥವನು ನೀನೊಬ್ಬನೇ. ನಿನಗಿಂತ ಬೇರೆಯಾದ ವ್ಯಕ್ತಿಯು ಯಾರೂ ಇಲ್ಲ.

ಅಹನ್ಯಹನಿ ಯುಧ್ಯಂತಂ ಕ್ಷೋಭಯಂತಂ ಬಲಂ ತವ ॥೩೮॥

ತಸ್ಮಾದ್ಧಿ ರಣೇ ಶಲ್ಯಂ ಮಘವಾನಿವ ಶಂಬರಮ್ ।
ಅಜೇಯಶ್ಚಾಪ್ಯಸೌ ವೀರೋ ಧಾರ್ತರಾಷ್ಟ್ರೇಣ ಸತ್ಕೃತಃ ॥೩೯॥

ಆದ್ದರಿಂದ ಪ್ರತಿದಿನವೂ ಯುದ್ಧ ಮಾಡುತ್ತಾ ನಿನ್ನ ಸೈನ್ಯಬಲವನ್ನು ನಾಶಮಾಡುತ್ತಿರುವ ಶಲ್ಯನನ್ನು ಇಂದ್ರನು ಶಂಬರಾಸುರನನ್ನು ಕೊಂದಂತೆ ಯುದ್ಧದಲ್ಲಿ ಸಾಯಿಸು. ಇವನು ಧೃತರಾಷ್ಟ್ರನಿಂದಲೂ ಸತ್ಕೃತನಾದ ಮಹಾವೀರ. ಅವನು ಬೇರೆ ಯಾರಿಂದಲೂ ಸೋಲಲಾರನು.

ತವೈವ ವಿಜಯೋ ನೂನಂ ಹತೋ ಮದ್ರೇಶ್ವರೋ ಭವೇತ್ ।
ತಸ್ಮಿನ್ ಹತೇ ಹತಂ ಸರ್ವಂ ಧಾರ್ತರಾಷ್ಟ್ರಬಲಂ ಮಹತ್ ॥೪೦॥

ನಿಶ್ಚಯವಾಗಿಯೂ ಗೆಲುವು ನಿನ್ನದೇ. ಶಲ್ಯನು ಸಾಯಬೇಕು. ಅವನು ಸತ್ತರೆ ಕೌರವನ ಸೇನೆಯೆಲ್ಲವೂ ಸಾಯುತ್ತದೆ.

ಏತಚ್ಛ್ರುತ್ವಾ ಮಹಾರಾಜ ವಚನಂ ಮಮ ಸಾಂಪ್ರತಮ್ ।
ಪ್ರತ್ಯುದ್ಯಾಹಿ ರಣೇ ಪಾರ್ಥ ಮದ್ರರಾಜಂ ಮಹಾರಥಮ್ ॥೪೧॥

ಮಹಾರಾಜ ಪಾರ್ಥ! ಯುಧಿಷ್ಠಿರ! ಈಗ ನನ್ನ ಈ ಮಾತನ್ನು ಕೇಳಿ ಮಹಾರಥನಾದ ಶಲ್ಯನನ್ನು ಯುದ್ಧದಲ್ಲಿ ಎದುರಿಸು.

ಜಹಿ ಚೈನಂ ಮಹಾಬಾಹೋ ವಾಸವೋ ನಮುಚಿಂ ಯಥಾ ।
ನ ಚೈವಾತ್ರ ದಯಾ ಕಾರ್ಯಾ ಮಾತುಲೋಽಯಂ ಮಮೇತಿ ಚ ॥

ಮಹಾಬಾಹುವೇ! ಇಂದ್ರನು ನಮುಚಿದೈತ್ಯನನ್ನು ಕೊಂದಹಾಗೆ ಈ ಶಲ್ಯನನ್ನೂ ನೀನು ಕೊಲ್ಲು. ಇವನು ನನ್ನ ಸೋದರಮಾವನೆಂಬ ಕಾರಣದಿಂದ ಯಾವ ರೀತಿಯ ದಯೆಯನ್ನೂ ತೋರಬೇಡ.

ಕ್ಷತ್ರಧರ್ಮಂ ಪುರಸ್ಕೃತ್ಯ ಜಹಿ ಮದ್ರಜನೇಶ್ವರಮ್ ॥೪೩॥

ಪ್ರತಿಪಕ್ಷದಲ್ಲಿರುವ ಸಂಬಂಧಿಗಳೂ ವಧಾರ್ಹರೆ ಎಂಬ ಕ್ಷತ್ರಿಯಧರ್ಮವನ್ನು ಮುಂದಿಟ್ಟುಕೊಂಡು ಶಲ್ಯನನ್ನು ಸಂಹರಿಸು.

ದ್ರೋಣಭೀಷ್ಮಾರ್ಣವಂ ತೀರ್ತ್ವಾ ಕರ್ಣಪಾತಾಲಸಂಭವಮ್ ।
ಮಾ ನಿಮಜ್ಜಸ್ವ ಸಗಣಃ ಶಲ್ಯಮಾಸಾದ್ಯ ಗೋಷ್ಪದಮ್ ॥೪೪॥

ನೀನು ದ್ರೋಣ, ಭೀಷ್ಮರೆಂಬ ದೊಡ್ಡಸಮುದ್ರವನ್ನೇ ದಾಟಿರುವಿ. ಕರ್ಣನೆಂಬ ಮಹಾಗರ್ತವನ್ನೂ ದಾಟಿರುವಿ. ಹಸುವಿನ ಪಾದದಷ್ಟು ಚಿಕ್ಕದಾದ ಶಲ್ಯನೆಂಬ ಗುಂಡಿಯಲ್ಲಿ ಸಪರಿವಾರನಾಗಿ ಮುಳುಗಬೇಡ.

ಯಚ್ಚ ವೈ ತಪಸೋ ವೀರ್ಯಂ ಯಚ್ಚ ಕ್ಷತ್ರಬಲಂ ತವ ।
ತದ್ದರ್ಶಯ ರಣೇ ಸರ್ವಂ ಜಹಿ ಚೈನಂ ಮಹಾಬಲಮ್ ॥೪೫॥

ನಿನ್ನ ತಪಸ್ಸಿನ ಸಾಮರ್ಥ್ಯವೇನಿದೆಯೋ, ಕ್ಷತ್ರಿಯಪರಾಕ್ರಮವು ಏನಿದೆಯೋ ಅದನ್ನು ಯುದ್ಧದಲ್ಲಿ ತೋರಿಸು. ಈ ಮಹಾಬಲಶಾಲಿಯಾದ ಶಲ್ಯನನ್ನು ಯುದ್ಧದಲ್ಲಿ ಕೊಂದುಹಾಕು.

ಸಂಜಯಃ

ಏತಾವದುಕ್ತ್ವಾ ವಚನಂ ಕೇಶವಃ ಪರವೀರಹಾ ।
ಜಗಾಮ ಶಿಬಿರಂ ಸಾಯಂ ಪೂಜ್ಯಮಾನೋ ಹಿ ಪಾಂಡವೈಃ ॥೪೬॥

ಸಂಜಯ– ಶತ್ರುವೀರರನ್ನು ಸದೆಬಡಿಯುವ ಕೇಶವನು ಇಷ್ಟು ಮಾತುಗಳನ್ನು ಹೇಳಿ ಸಾಯಂಕಾಲದ ಹೊತ್ತಿನಲ್ಲಿ ಪಾಂಡವರಿಂದ ಪೂಜಿತನಾಗಿ ಶಿಬಿರದ ಕಡೆಗೆ ನಡೆದನು.

ಕೇಶವೇ ತು ತಥಾ ಯಾತೇ ಧರ್ಮರಾಜೋ ಯುಧಿಷ್ಠಿರಃ ।
ವಿಸೃಜ್ಯ ಸರ್ವಾನ್ ಭ್ರಾತೃಂಶ್ಚ ಪಾಂಚಾಲನಥ ಸೋಮಕಾನ್ ॥೪೭॥
ಸುಷ್ವಾಪ ರಜನೀಂ ತಾಂ ತು ವಿಶಲ್ಯ ಇವ ಕುಂಜರಃ ॥೪೮॥

ಧರ್ಮರಾಜ ಯುಧಿಷ್ಠಿರನು ಕೇಶವನು ಹೋದ ಮೇಲೆ ತನ್ನ ಸೋದರರನ್ನೂ, ಪಾಂಚಾಲರನ್ನೂ, ಸೋಮಕರನ್ನೂ ಎಲ್ಲರನ್ನೂ ಬೀಳ್ಕೊಟ್ಟು, ಆ ರಾತ್ರಿಯಲ್ಲಿ ಅಂಕುಶರಹಿತವಾದ ಆನೆಯಂತೆ ಮಲಗಿದನು.

ತೇ ಚ ಸರ್ವೇ ಮಹೇಷ್ವಾಸಾಃ ಪಾಂಚಾಲಃ ಪಾಂಡವಾಸ್ತದಾ ।
ಕರ್ಣಸ್ಯ ನಿಧನೇ ಹೃಷ್ಟಾಃ ಸುಷುಪುಸ್ತಾಂ ನಿಶಾಂ ತದಾ ॥೪೯॥

ಆಗ ಆ ಎಲ್ಲಾ ಮಹಾಬಿಲ್ಲಾರರಾದ ಪಾಂಚಾಲರು, ಪಾಂಡವರು ಕರ್ಣನ ಸಾವಿನಿಂದ ಸಂತುಷ್ಟರಾಗಿ ರಾತ್ರಿ ನಿದ್ದೆಮಾಡಿದರು.

ಗತಜ್ವರಂ ಮಹೇಷ್ವಾಸಂ ತೀರ್ಣಪಾರಂ ಮಹಾರಥಮ್ ।
ಬಭೂವ ಪಾಂಡವೇಯಾನಾಂ ಸೈನ್ಯಂ ಪ್ರಮುದಿತಂ ನಿಶಿ ॥೫೦॥

ಸೂತಪುತ್ರಸ್ಯ ನಿಧನಾದ್ ಜಯಂ ಲಬ್ಧ್ವಾ ಚ ಮಾರಿಷ ॥೫೧॥

ರಾಜನೇ! ಕರ್ಣನ ಮರಣದಿಂದಾಗಿ ಪಾಂಡವರ ಸೈನ್ಯವು ಉದ್ವೇಗವನ್ನು ಕಳೆದುಕೊಂಡಿತು. ಮಹಾಬಿಲ್ಲಾರರನ್ನೂ, ಮಹಾರಥಿಕರನ್ನೂ ಹೊಂದಿದ ಸೈನ್ಯವು ಶತ್ರುಸಾಗರವನ್ನು ದಾಟಿ, ಆ ರಾತ್ರಿಯಲ್ಲಿ ಬಹಳವಾಗಿ ಮುದಗೊಂಡಿತು. ಸೂತಪುತ್ರನಾದ ಕರ್ಣನ ನಿಧನದಿಂದ ಯುದ್ಧದಲ್ಲಿ ಜಯವನ್ನು ಹೊಂದಿದ್ದೂ ಇದಕ್ಕೆ ಕಾರಣವಾಗಿತ್ತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ - ೨೮ನೇ ಅಧ್ಯಾಯ

ತಮಭ್ಯಯುಃ ಪಾಂಡವಾಶ್ಚ ಹೃಷ್ಟಾ ಯುದ್ಧಾಯ ದಂಸಿತಾಃ ।
ತತ್ರಾऽಸೀತ್ ಸುಮಹದ್ ಯುದ್ಧಂ ಪಾಂಡವಾನಾಂ ಪರೈಃ ಸಹ ॥೨॥

ಪಾಂಡವರೂ ಯುದ್ಧಕ್ಕೆ ಸನ್ನದ್ಧರಾಗಿ ಉತ್ಸಾಹಗೊಂಡು ಅವನನ್ನು ಎದುರಿಸಿದರು. ಆಗ ಅವರಿಗೆ ಕೌರವರೊಡನೆ ಬಹಳ ದೊಡ್ಡ ಯುದ್ಧ ನಡೆಯಿತು.

ಅಗ್ರೇ ಭೀಮಃ ಪಾಂಡವಾನಾಂ ಮಧ್ಯೇ ರಾಜಾ ಯುಧಿಷ್ಠಿರಃ ।
ಪೃಷ್ಠೇ ಗಾಂಡೀವಧನ್ವಾऽऽಸೀದ್ ವಾಸುದೇವಾಭಿರಕ್ಷಿತಃ ॥೩॥

ಚಕ್ರರಕ್ಷೌ ಯಮೌ ರಾಜ್ಞೋ ಧೃಷ್ಟದ್ಯುಮ್ನಶ್ಚ ಸಾತ್ಯಕಿಃ ।
ನೃಪಸ್ಯ ಪಾರ್ಶ್ವಯೋರಾಸ್ತಾಮಗ್ರೇऽನ್ಯೇಷಾಂ ಗುರೋಃ ಸುತಃ ॥೪॥

ಮಧ್ಯೇ ಶಲ್ಯಃ ಪೃಷ್ಠತೋಽಭೂದ್ ಭ್ರಾತೃಭಿಶ್ಚ ಸುಯೋಧನಃ ।
ಚಕ್ರರಕ್ಷೌ ತು ಶಲ್ಯಸ್ಯ ಶಕುನಿಸ್ತತ್ಸುತಸ್ತಥಾ ।
ಕೃಪಶ್ಚ ಕೃತವರ್ಮಾ ಚ ಪಾರ್ಶ್ವಯೋಃ ಸಮವಸ್ಥಿತೌ ॥೫॥

ಪಾಂಡವರ ಸೈನ್ಯಕ್ಕೆ ಮುಂಭಾಗದಲ್ಲಿ ಭೀಮನೂ ಮಧ್ಯದಲ್ಲಿ ರಾಜಾ ಯುಧಿಷ್ಠಿರನೂ ಹಿಂಭಾಗದಲ್ಲಿ ಕೃಷ್ಣನ ರಕ್ಷಣೆಯಲ್ಲಿ ಗಾಂಡೀವಧಾರಿ ಅರ್ಜುನನೂ ಇದ್ದನು. ಯುಧಿಷ್ಠಿರನಿಗೆ ಚಕ್ರರಕ್ಷಕರಾಗಿ ನಕುಲ-ಸಹದೇವರಿದ್ದರು. ಧೃಷ್ಟದ್ಯುಮ್ನ ಸಾತ್ಯಕಿಯರು ಅವನ ಪಾರ್ಶ್ವದಲ್ಲಿದ್ದರು. ಕೌರವರ ಸೈನ್ಯಕ್ಕೆ ಮುಂಭಾಗದಲ್ಲಿ ಅಶ್ವತ್ಥಾಮ, ಮಧ್ಯದಲ್ಲಿ ಶಲ್ಯ , ಹಿಂಭಾಗದಲ್ಲಿ ಸೋದರರೊಂದಿಗೆ ದುರ್ಯೋಧನ ನಿಂತಿದ್ದನು. ಶಲ್ಯನಿಗೆ ಚಕ್ರರಕ್ಷಕರಾಗಿ ಶಕುನಿ ಮತ್ತು ಅವನ ಮಗ, ಪಾರ್ಶ್ವಗಳಲ್ಲಿ ಕೃಪ ಮತ್ತು ಕೃತವರ್ಮ ಇದ್ದರು.

ತತ್ರಾಭವನ್ಮಹದ್ ಯುದ್ಧಂ ಭೀಮಸ್ಯ ದ್ರೌಣಿನಾ ಸಹ ।
ರಾಜ್ಞಃ ಶಲ್ಯೇನ ಚ ತಥಾ ಘೋರರೂಪಂ ಭಯಾನಕಮ್ ॥ ೬ ॥

ಆಗ ಭೀಮನಿಗೆ ಅಶ್ವತ್ಥಾಮನೊಡನೆ ದೊಡ್ಡ ಯುದ್ಧ ನಡೆಯಿತು. ಧರ್ಮರಾಜನಿಗೂ ಶಲ್ಯನಿಗೂ ಹಾಗೇ ಭಯಾನಕವಾದ ಘೋರರೂಪದ ಯುದ್ಧ ನಡೆಯಿತು.

ತತ್ರ ನಾತಿಪ್ರಯತ್ನೇನ ದ್ರೌಣಿರ್ಭೀಮೇನ ಸಾಯಕೈಃ ।
ವಿರಥೀಕೃತಸ್ತಥಾ ಧರ್ಮಸೂನುಃ ಶಲ್ಯೇನ ತತ್ಕ್ಷಣಾತ್ ॥ ೭ ॥

ಭೀಮ ಹೆಚ್ಚು ಪ್ರಯತ್ನವಿಲ್ಲದೆ ಅಶ್ವತ್ಥಾಮನನ್ನು ಬಾಣಗಳಿಂದ ವಿರಥನನ್ನಾಗಿ ಮಾಡಿದನು. ಇತ್ತ ಶಲ್ಯನೂ ಧರ್ಮರಾಜನನ್ನು ಕ್ಷಣದಲ್ಲಿ ವಿರಥನನ್ನಾಗಿ ಮಾಡಿದನು.

ಆಸಸಾದ ತದಾ ಶಲ್ಯಂ ಕಪಿಪ್ರವರಕೇತನಃ ।
ತಯೋರಾಸೀನ್ಮಹದ್ ಯುದ್ಧಮದ್ಭುತಂ ರೋಮಹರ್ಷಣಮ್ ॥ ೮ ॥

ಆಗ ಶಲ್ಯನನ್ನು ಅರ್ಜುನ ಎದುರಿಸಿದನು. ಅವರೊಳಗೆ ಅದ್ಭುತ ರೋಮಾಂಚಕರ ಮಹಾಯುದ್ಧವಾಯಿತು.

ರಥಮನ್ಯಂ ಸಮಾಸ್ಥಾಯ ದ್ರೌಣಿರ್ಭೀಮಂ ಸಮಭ್ಯಯಾತ್ ।
ದುರ್ಯೋಧನಶ್ಚ ಭೀಮಸ್ಯ ಶರೈರಾವಾರಯದ್ ದಿಶಃ ॥ ೯ ॥

ಅಶ್ವತ್ಥಾಮ ಇನ್ನೊಂದು ರಥವನ್ನೇರಿ ಭೀಮನನ್ನು ಎದುರಿಸಿದನು. ದುರ್ಯೋಧನನೂ ಬಾಣಗಳಿಂದ ಭೀಮನ ಸುತ್ತ ಎಲ್ಲ ದಿಕ್ಕುಗಳನ್ನು ಆವರಿಸಿದನು.

ತಾವುಭೌ ಶರವರ್ಷೇಣ ವಾರಯಾಮಾಸ ಮಾರುತಿಃ ।
ತಾಭ್ಯಾಂ ತಸ್ಯಾಭವದ್ ಯುದ್ಧಂ ಸುಘೋರಮತಿಮಾನುಷಮ್ ॥

ಅಶ್ವತ್ಥಾಮ ದುರ್ಯೋಧನರಿಬ್ಬರನ್ನೂ ಭೀಮನು ಬಾಣಗಳ ಮಳೆಯಿಂದ ತಡೆದನು. ಅವರೊಡನೆ ಭೀಮನಿಗೆ ಬಲು ಘೋರವಾದ ಅತಿಮಾನುಷವಾದ ಯುದ್ಧ ನಡೆಯಿತು.

ದುರ್ಯೋಧನಸ್ಯಾವರಜಾನ್ ದ್ರೌಪದೇಯಾ ಯುಯುತ್ಸುನಾ ।
ಶಿಖಂಡ್ಯಾದ್ಯೈರ್ಮಾತುಲೈಶ್ಚ ಸಹ ಸರ್ವಾನ್ ನ್ಯವಾರಯನ್ ॥೧೧॥

ದುರ್ಯೋಧನನ ತಮ್ಮಂದಿರೆಲ್ಲರನ್ನೂ ದ್ರೌಪದೀಪುತ್ರರು ಯುಯುತ್ಸುವಿನೊಡನೆ ಮತ್ತು ಶಿಖಂಡಿ ಮುಂತಾದ ಸೋದರಮಾವಂದಿರೊಡನೆ ಕೂಡಿ ಎದುರಿಸಿದರು.

ಸಹದೇವಸ್ತು ಶಕುನಿಮುಲೂಕಂ ನಕುಲಸ್ತಥಾ ।
ಧೃಷ್ಟದ್ಯುಮ್ನಶ್ಚ ಹಾರ್ದಿಕ್ಯಂ ಸಾತ್ಯಕಿಃ ಕೃಪಮೇವ ಚ ॥೧೨॥

ಸಹದೇವ ಶಕುನಿಯನ್ನೂ, ನಕುಲ ಉಲೂಕನನ್ನೂ, ಧೃಷ್ಟದ್ಯುಮ್ನ ಕೃತವರ್ಮನನ್ನೂ ಸಾತ್ಯಕಿ ಕೃಪನನ್ನೂ ಎದುರಿಸಿದರು.

ತೇಷಾಂ ತದಭವದ್ ಯುದ್ಧಂ ಚಿತ್ರಂ ಲಘು ಚ ಸುಷ್ಠು ಚ ।
ಶಲ್ಯಸ್ತು ಶರಸಂಘಾತೈಃ ಪಾರ್ಥಸ್ಯಾವಾರಯದ್ ದಿಶಃ ॥೧೩॥

ಅವರಿಗೆ ವಿಚಿತ್ರ ವೇಗಪೂರ್ಣವಾದ ಒಳ್ಳೆಯ ಯುದ್ಧ ನಡೆಯಿತು. ಶಲ್ಯ ಬಾಣ ಸಮೂಹಗಳಿಂದ ಅರ್ಜುನನ ಸುತ್ತ ಎಲ್ಲ ದಿಕ್ಕುಗಳನ್ನು ಆವರಿಸಿದನು.

ಸೋಽಪಿ ವಿವ್ಯಾಧ ವಿಶಿಖೈಃ ಶಲ್ಯಮಾಹವಶೋಭಿನಮ್ ।
ತಯೋಸ್ತು ಸಮಮೇವಾಽಸೀಚ್ಚಿತ್ರಂ ದೇವಾಸುರೋಪಮಮ್ ॥೧೪॥

ಅರ್ಜುನ ಯುದ್ಧದಲ್ಲಿ ಮೆರೆಯುತ್ತಿದ್ದ ಶಲ್ಯನನ್ನು ಬಾಣಗಳಿಂದ ಹೊಡೆದನು. ಅವರೊಳಗಣ ಯುದ್ಧ ದೇವಾಸುರ ಯುದ್ಧದಂತೆ ಬಹುಕಾಲ ಸಮವೇ ಆಯಿತು.

ತತಃ ಶರಂ ವಜ್ರನಿಭಂ ಮದ್ರರಾಜಃ ಸಮಾದದೇ ।
ತೇನ ವಿವ್ಯಾಧ ಬೀಭತ್ಸುಂ ಹೃದಯೇ ಸ ಮುಮೋಹ ಚ ॥೧೫॥

ಬಳಿಕ ಶಲ್ಯ ವಜ್ರಾಯುಧದಂಥ ಬಾಣವನ್ನೆತ್ತಿಕೊಂಡನು. ಅದರಿಂದ ಅರ್ಜುನನನ್ನು ಎದೆಯಲ್ಲಿ ಹೊಡೆದನು. ಅರ್ಜುನ ಮೂರ್ಛಿತನಾದನು.

ಉಪಲಭ್ಯ ಪುನಃ ಸಂಜ್ಞಾಂ ವಾಸವಿಃ ಶತ್ರುತಾಪನಃ ।
ಚಿಚ್ಛೇದ ಕಾರ್ಮುಕಂ ಸಂಖ್ಯೇ ಮದ್ರರಾಜಸ್ಯ ಧೀಮತಃ ॥೧೬॥

ಶತ್ರುತಾಪಕನಾದ ಅರ್ಜುನ ಪುನಃ ಎಚ್ಚೆತ್ತು ಯುದ್ಧದಲ್ಲಿ ಬುದ್ಧಿವಂತನಾದ ಶಲ್ಯನ ಬಿಲ್ಲನ್ನು ಕಡಿದನು.

ಸೋಽನ್ಯತ್ ಕಾರ್ಮುಕಮಾದಾಯ ಮುಮೋಚಾಸ್ತ್ರಾಣಿ ಫಲ್ಗುನೇ ।
ಸೌರಂ ಯಾಮ್ಯಂ ಚ ಪಾರ್ಜನ್ಯಂ ತಾನ್ಯೈಂದ್ರೇಣ ಜಘಾನ ಸಃ ॥೧೭॥

ಶಲ್ಯ ಇನ್ನೊಂದು ಬಿಲ್ಲನ್ನೆತ್ತಿಕೊಂಡು ಸೂರ್ಯ ಯಮ ಪರ್ಜನ್ಯ ಅಸ್ತ್ರಗಳನ್ನು ಅರ್ಜುನನ ಮೇಲೆ ಎಸೆದನು. ಅರ್ಜುನನು ಅವುಗಳನ್ನು ಇಂದ್ರಾಸ್ತ್ರದಿಂದ ಪರಿಹರಿಸಿದನು.

ಪುನರ್ಮ್ಯಕೃಂತತ್ ತಚ್ಚಾಪಮಿಂದ್ರಸೂನುರಮರ್ಷಿತಃ ।
ಶಲ್ಯೋ ಗದಾಂ ಸಮಾವಿಧ್ಯ ಚಿಕ್ಷೇಪಾರ್ಜುನವಕ್ಷಸಿ ॥೧೮॥

ಅರ್ಜುನನು ಪುನಃ ಕುಪಿತನಾಗಿ ಶಲ್ಯನ ಬಿಲ್ಲನ್ನು ಕತ್ತರಿಸಿದನು. ಶಲ್ಯ ಗದೆಯನ್ನು ಎತ್ತಿಕೊಂಡು ಅರ್ಜುನನ ಎದೆಯ ಮೇಲೆ ಎಸೆದನು.

ತದಾ ಮುಮೋಹ ಬೀಭತ್ಸುಸ್ತತ ಉಚ್ಚುಕ್ರುಶುಃ ಪರೇ ।
ಪ್ರಾಪ್ಯ ಸಂಜ್ಞಾಂ ಪುನಃ ಪಾರ್ಥಃ ಶಲ್ಯಂ ವಿವ್ಯಾಧ ವಕ್ಷಸಿ ।
ಸ ವಿಹ್ವಲಿತಸರ್ವಾಂಗಃ ಶಿಶ್ರಿಯೇ ಧ್ವಜಮುತ್ತಮಮ್ ॥೧೯॥

ಆಗ ಅರ್ಜುನನು ಮೂರ್ಛಿತನಾದನು. ಶತ್ರುಗಳು ಜಯಘೋಷ ಮಾಡಿದರು.

ಸಮಾಶ್ವಸ್ತಃ ಪುನರ್ಬಾಣಂ ಯಮದಂಡನಿಭಂ ರಣೇ ।
ಮುಮೋಚ ಪಾರ್ಥಸ್ಯ ಸ ಚ ನಿರ್ಬಿಭೇದ ಸ್ತನಾಂತರಮ್ ॥೨೦॥

ತೇನ ವಿಹ್ವಲಿತಃ ಪಾರ್ಥೋ ಧ್ವಜಯಷ್ಟಿಂ ಸಮಾಶ್ರಿತಃ ॥೨೧॥

ಶಲ್ಯ ಸಾವರಿಸಿಕೊಂಡು ಪುನಃ ಯಮದಂಡಕ್ಕೆ ಸಮಾನವಾದ ಬಾಣವನ್ನು ಯುದ್ಧದಲ್ಲಿ ಅರ್ಜುನನಿಗೆ ಎಸೆದನು. ಆ ಬಾಣ ಅರ್ಜುನನ ಎದೆಯನ್ನು ಒಡೆಯಿತು. ಅದರಿಂದ ನಡುಗಿದ ಅರ್ಜುನ ಧ್ವಜಸ್ತಂಭವನ್ನು ಆಧರಿಸಿ ನಿಂತನು.

ಸಮಾಶ್ವಸ್ತಃ ಪ್ರಚಿಚ್ಛೇದ ಮದ್ರರಾಜಸ್ಯ ಕಾರ್ಮುಕಮ್ ।
ಛತ್ರಂ ಧ್ವಜಂ ಚ ತರಸಾ ಸಾರಥಿಂ ಚ ನ್ಯಪಾತಯತ್ ॥೨೨॥

ಅರ್ಜುನ ಸಾವರಿಸಿಕೊಂಡು ಶಲ್ಯನ ಬಿಲ್ಲನ್ನು ಕಡಿದನು. ಅವನ ಛತ್ರವನ್ನೂ ಧ್ವಜವನ್ನೂ ಸಾರಥಿಯನ್ನೂ ವೇಗದಿಂದ ಉರುಳಿಸಿದನು.

ತದಾಽನ್ಯಂ ರಥಮಾಸ್ಥಾಯ ಧರ್ಮರಾಜಃ ಶರೋತ್ತಮೈಃ ।
ಚತುರ್ಭಿಶ್ಚತುರೋ ವಾಹಾನ್‌ಶಲ್ಯಸ್ಯ ನಿಜಘಾನ ಹ ॥೨೩॥

ಅಷ್ಟರಲ್ಲಿ ಧರ್ಮರಾಜ ಇನ್ನೊಂದು ರಥವನ್ನೇರಿ ನಾಲ್ಕು ಉತ್ತಮ ಬಾಣಗಳಿಂದ ಶಲ್ಯನ ನಾಲ್ಕು ಕುದುರೆಗಳನ್ನು ಸಂಹರಿಸಿದನು.

ಶಲ್ಯೋಽನ್ಯಂ ರಥಮಾಸ್ಥಾಯ ಸರ್ವಾಂಸ್ತಾನ್ ಶರವೃಷ್ಟಿಭಿಃ ।
ಛಾದಯಾಮಾಸ ರಾಜಾನಂ ವಿರಥಂ ಚ ಚಕಾರ ಹ ॥೨೪॥

ಶಲ್ಯ ಇನ್ನೊಂದು ರಥವನ್ನೇರಿ ಅವರೆಲ್ಲರನ್ನೂ ಬಾಣಗಳ ಮಳೆಗಳಿಂದ ಆವರಿಸಿದ ಮತ್ತು ಧರ್ಮರಾಜನನ್ನು ವಿರಥನನ್ನಾಗಿ ಮಾಡಿದನು.

ನಿಹತ್ಯಾಶ್ವಾನ್ ಸಾತ್ಯಕೇಶ್ಚ ಧೃಷ್ಟದ್ಯುಮ್ನಸ್ಯ ಚಾಭಿಭೂಃ ।
ಚಾಪೇ ಚಿತ್ವಾ ಚ ಯಮಯೋರ್ದಧ್ಮೌ ಶಂಖಂ ಮಹಾಸ್ವನಮ್ ॥೨೫॥

ಶತ್ರುಗಳನ್ನು ಪರಾಭವಗೊಳಿಸುವ ಶಲ್ಯ, ಸಾತ್ಯಕಿ-ಧೃಷ್ಟದ್ಯುಮ್ನರ ಕುದುರೆಗಳನ್ನು ಕೊಂದು, ನಕುಲ-ಸಹದೇವರ ಬಿಲ್ಲುಗಳನ್ನು ಕಡಿದು, ದೊಡ್ಡ ಧ್ವನಿಯ ಶಂಖವನ್ನು ಮೊಳಗಿಸಿದನು.

ತತಸ್ತು ಶಲ್ಯಂ ಸಮುದೀರ್ಯಮಾಣಂ ದೃಷ್ಟ್ವಾ ರಣೇ ಭೀಮಸೇನಸ್ತರಸ್ವೀ ।
ನ್ಯವಾರಯದ್ ಬಾಣವರ್ಷೈರನೇಕೈಶ್ಚಕಾರ ಚೈನಂ ವಿರಥಂ ಕ್ಷಣೇನ ॥೨೬॥

ಬಳಿಕ ಯುದ್ಧದಲ್ಲಿ ದುರ್ಯೋಧನಾದಿಗಳು ಶಲ್ಯನನ್ನು ಅತಿಯಾಗಿ ಹೊಗಳುತ್ತಿದ್ದುದನ್ನು ಕಂಡು ವೇಗಶಾಲಿಯಾದ ಭೀಮಸೇನ ಅನೇಕ ಉತ್ತಮ ಬಾಣಗಳಿಂದ ಅವನನ್ನು ತಡೆದನು. ಕ್ಷಣದಲ್ಲಿ ಅವನನ್ನು ವಿರಥನನ್ನಾಗಿ ಮಾಡಿದನು.

ಆಸ್ಥಾಯ ಚಾನ್ಯಂ ರಥಮಾಪತಂತಂ
ಪುನಶ್ಚ ಶಲ್ಯಂ ಭೃಶಮೇವ ಮರ್ಮಸು ।
ನಿರ್ಭಿದ್ಯ ಬಾಣೈರ್ವಿರಥಂ ಚಕಾರ
ಪುನಸ್ತೃತೀಯಂ ಚ ರಥಂ ರುರೋಜ ॥೨೭॥

ಇನ್ನೊಂದು ರಥವನ್ನೇರಿ ಪುನಃ ಬಂದ ಶಲ್ಯನನ್ನು ಭೀಮಸೇನ ಬಾಣಗಳಿಂದ ಮರ್ಮಗಳಲ್ಲಿ ಚೆನ್ನಾಗಿ ಹೊಡೆದು ವಿರಥನನ್ನಾಗಿ ಮಾಡಿದನು. ತಿರುಗಿ ಅವನ ಮೂರನೆಯ ರಥವನ್ನೂ ಮುರಿದನು.

ಆತ್ತಾನ್ಯಾತ್ತಾನ್ಯಾಯುಧಾನ್ಯಸ್ಯ ಭೀಮಃ
ಸರ್ವಾಣಿ ಚಿಚ್ಛೇದ ಬಿಭೇದ ಚಾಸ್ಯ ।
ಮರ್ಮಾಣಿ ಬಾಣೈರ್ನಿತರಾಂ ಪುನಶ್ಚ
ಸ ಮುಷ್ಟಿಮುದ್ಯಮ್ಯ ಜಗಾಮ ಧರ್ಮಜಮ್ ॥೨೮॥

ಶಲ್ಯ ಎತ್ತಿಕೊಂಡ ಎಲ್ಲ ಆಯುಧಗಳನ್ನೂ ಭೀಮಸೇನ ಕಡಿದನು. ಪುನಃ ಬಾಣಗಳಿಂದ ಅವನ ಮರ್ಮಸ್ಥಲಗಳನ್ನು ಬಹಳ ಗಾಯಗೊಳಿಸಿದನು. ಶಲ್ಯ ಮುಷ್ಟಿಯನ್ನೆತ್ತಿ ಧರ್ಮರಾಜನ ಬಳಿಗೆ ಹೊರಟನು.

ತಂ ಭೀಮಭಿನ್ನಮರ್ಮಾಣಂ ವಿವರ್ಮಾಣಂ ನಿರಾಯುಧಮ್ ।
ಶ್ವಾಸಮಾತ್ರಾವಶಿಷ್ಟಂ ಚ ಮರಣಾಯೈವ ಕೇವಲಮ್ ॥೨೯॥

ಆತ್ಮಾನಮಭಿಗಚ್ಛಂತಂ ದೃಷ್ಟ್ವಾಽನ್ಯಂ ರಥಮಾಸ್ಥಿತಃ ।
ಹಂತುಕಾಮೋ ರಣೇ ವೀರಮಮೋಘಾಂ ಶಕ್ತಿಮಾದದೇ ॥೩೦॥

ಶಲ್ಯನ ಮರ್ಮಸ್ಥಾನಗಳನ್ನು ಮೊದಲೇ ಭೀಮ ಹೊಡೆದಿದ್ದ. ಅವನು ಈಗ ಕವಚರಹಿತ, ನಿರಾಯುಧ. ಶ್ವಾಸಮಾತ್ರ ಉಳಿದಿತ್ತು. ಕೇವಲ ಮರಣ ಹೊಂದುವುದಕ್ಕಾಗಿಯೇ ಧರ್ಮರಾಜನೆದುರಿಗೆ ಬರುತ್ತಿದ್ದ. ಅಂಥ ವೀರ ಶಲ್ಯನನ್ನು ಕಂಡು ಅವನನ್ನು ಯುದ್ಧದಲ್ಲಿ ಕೊಲ್ಲಲು ಬಯಸಿ ಧರ್ಮರಾಜ ಇನ್ನೊಂದು ರಥವೇರಿ ಅಮೋಘವಾದ ಶಕ್ತ್ಯಾಯುಧವನ್ನೆತ್ತಿಕೊಂಡನು.

ದಿವ್ಯಾಸ್ತ್ರೈರಪಿ ಸಂಯೋಜ್ಯ ತಾಂ ತದಾ ಧರ್ಮನಂದನಃ ।
ಸತ್ಯಧರ್ಮಫೈಶ್ಚೈವ ಚಿಕ್ಷೇಪಾಸ್ಯ ಹೃದಿ ತ್ವರನ್ ॥೩೧॥

ಸ ಭಿನ್ನಹೃದಯೋ ಭೂಮೌ ಪಪಾತಾಭಿಮುಖೋ ನೃಪಮ್ ।
ಸತ್ಯಧರ್ಮರತಃ ಶಲ್ಯ ಇಂದ್ರಸ್ಯಾತಿಥಿತಾಮಗಾತ್ ॥೩೨॥

ಧರ್ಮರಾಜ ಶಕ್ತ್ಯಾಯುಧವನ್ನು ದಿವ್ಯ ಅಸ್ತ್ರಗಳಿಂದಲೂ ಸತ್ಯ-ಧರ್ಮಗಳ ಪುಣ್ಯಗಳಿಂದಲೂ ಕೂಡಿದ ಶಲ್ಯನ ಎದೆಯ ಮೇಲೆ ವೇಗವಾಗಿ ಎಸೆದನು. ಶಲ್ಯ ಎದೆ ಒಡೆದು ಧರ್ಮರಾಜನೆದುರಿನಲ್ಲಿ ನೆಲದ ಮೇಲೆ ಬಿದ್ದನು. ಹೀಗೆ ಸತ್ಯ-ಧರ್ಮರತನಾದ ಶಲ್ಯ ಸ್ವರ್ಗದಲ್ಲಿ ಇಂದ್ರನಿಗೆ ಅತಿಥಿಯಾದನು.

★ ★ ★ ★ ★

ಎಂಟನೆಯ ಅಧ್ಯಾಯ

ಎರಡೂ ಕಡೆಯ ಸೈನ್ಯಗಳಿಂದ ವ್ಯೂಹರಚನೆ ಹಾಗೂ ಯುದ್ಧಕ್ಕಾಗಿ ನಿರ್ಗಮನ

ಸಂಜಯಃ

ವ್ಯತೀತಾಯಾಂ ರಜನ್ಯಾಂ ತು ರಾಜಾ ದುರ್ಯೋಧನಸ್ತದಾ ।
ಅಬ್ರವೀತ್ ತಾವಕಾನ್ ಸರ್ವಾನ್ ಸನ್ನಹ್ಯಂತಾಂ ಮಹಾರಥಾಃ ॥೧॥

ರಾತ್ರಿಕಳೆದು ಬೆಳಕು ಹರಿದಾಗ ದುರ್ಯೋಧನನು ತನ್ನ ಕಡೆಯವರಿಗೆ ಹೇಳುತ್ತಾನೆ- ''ಮಹಾರಥಿಕರೇ! ಕವಚಧಾರಣೆಯನ್ನು ಮಾಡಿ ಯುದ್ಧಕ್ಕೆ ತಯಾರಾಗಿ'' ಎಂದು.

ರಾಜ್ಞಸ್ತು ಮತಮಾಸ್ಥಾಯ ಸಮನಹ್ಯತ ಸಾ ಚಮೂಃ ।
ಅಚೋದಯಂಸ್ತದಾ ತೂರ್ಣಂ ಪರ್ಯಧಾವಂಸ್ತಥಾ ಪರಾನ್ ॥೨॥

ರಾಜನ ಅಭಿಪ್ರಾಯವನ್ನು ಅರಿತ ಆ ಸೈನ್ಯವು ಕವಚಧಾರಣೆ ಮಾಡಿ ಯುದ್ಧಕ್ಕೆ ತಯಾರಾಯಿತು. ಶೀಘ್ರವಾಗಿ ಯುದ್ಧಕ್ಕೆ ಪ್ರೇರೇಪಿಸಿದರು. ಕೆಲವರು ಎಲ್ಲಾ ಕಡೆಗೆ ಓಡಲು ತೊಡಗಿದರು.

ಅಕಲ್ಪ್ಯಂತ ಚ ಮಾತಂಗಾನ್ ಸಮನಹ್ಯಂತ ಪತ್ತಯಃ ।
ಹಯಾನಾಸ್ತರಣೋಪೇತಾನ್ ಚಕ್ರುರನ್ಯೇ ಸಹಸ್ರಶಃ ॥೩॥

ಕೆಲವರು ಆನೆಗಳನ್ನು ಯುದ್ಧಕ್ಕೆ ಸಜ್ಜುಗೊಳಿಸಿದರು. ಪದಾತಿಗಳು ಕವಚಧಾರಣೆ ಮಾಡಿಕೊಂಡರು. ಇನ್ನು ಕೆಲವರು ಕುದುರೆಗಳಿಗೆ ಕವಚಗಳನ್ನು ಹಾಕಿದರು.

ವಾದಿತ್ರಾಣಾಂ ಚ ನಿನದಃ ಪ್ರಾದುರಾಸೀದ್ ವಿಶಾಂಪತೇ ।
ಚೋದನಾರ್ಥಂ ಚ ಸೈನ್ಯಾನಾಂ ಯೋಧಾನಾಂ ಚಾಪ್ಯನೇಕಶಃ ॥೪॥

ಪ್ರಜಾಪತಿಯೇ! ಸೈನ್ಯವನ್ನೂ ಯೋಧರನ್ನೂ ಹುರಿದುಂಬಿಸಲು ವಿವಿಧ ವಾದ್ಯಗಳ ನಾದವು ಅನೇಕ ಬಾರಿ ಕೇಳಿಬಂದಿತು.

ತತೋ ಬಲಾನಿ ಸರ್ವಾಣಿ ಹತಶಿಷ್ಟಾನಿ ಭಾರತ ।
ಸನ್ನದ್ಧಾನ್ಯೇವ ದೃಶ್ಯಂತೇ ಮೃತ್ಯುಂ ಕೃತ್ವಾ ನಿವರ್ತನಮ್ ॥೫॥

ಭರತವಂಶೋದ್ಭವನೇ! ಅನಂತರ ಅಳಿದು ಉಳಿದುಕೊಂಡಿರುವ ಎಲ್ಲಾ ಸೈನ್ಯವೂ ಮೃತ್ಯುವನ್ನೂ ಓಡಿಸುವ ರೀತಿಯಲ್ಲಿ ಯುದ್ಧಕ್ಕೆ ಸನ್ನದ್ಧವಾಯಿತು.

ಶಲ್ಯಂ ಸೇನಾಪತಿಂ ಕೃತ್ವಾ ಮದ್ರರಾಜಂ ಮಹಾರಥಮ್ ।
ಪ್ರವಿಭಜ್ಯ ಬಲಂ ಸರ್ವಮನೀಕೇಷು ವ್ಯವಸ್ಥಿತಾಃ ॥೬॥

ಮಹಾರಥಿಯಾದ ಮದ್ರಾಧಿಪತಿಯನ್ನು ಸೇನಾಧಿಪತಿಯನ್ನಾಗಿ ಮಾಡಿಕೊಂಡು ಇಡೀ ಸೇನೆಯು ಬೇರೆ ಬೇರೆ ದಳಗಳಾಗಿ ವಿಭಾಗಿಸಲ್ಪಟ್ಟು ವ್ಯವಸ್ಥೆಗೊಳಿಸಲ್ಪಟ್ಟಿತು.

ತತಃ ಸರ್ವೇ ಸಮಾಗಮ್ಯ ಪುತ್ರೇಣ ತವ ಚೋದಿತಾಃ ।
ಕೃಪಶ್ಚ ಕೃತವರ್ಮಾ ಚ ದ್ರೌಣಿಃ ಶಲ್ಯೋಽಥ ಸೌಬಲಃ ॥೭॥

ಅನ್ಯೇ ಚ ಪಾರ್ಥಿವಾಃ ಸರ್ವೇ ಸಮಯಂ ಚಕ್ರಿರೇ ತದಾ ॥೮॥

ನಿನ್ನ ಮಗನ ಪ್ರೇರಣೆಯಿಂದ ಎಲ್ಲರೂ ಬಂದು ಸೇರಿದರು. ಕೃಪ, ಕೃತವರ್ಮ, ಅಶ್ವತ್ಥಾಮ, ಶಲ್ಯ, ಶಕುನಿ ಹಾಗೂ ಇನ್ನಿತರ ರಾಜರುಗಳು ಬಂದು ಯುದ್ಧ ನಿಯಮಗಳನ್ನು ರಚಿಸಿಕೊಂಡರು.

ಕೌರವಸೈನಿಕಾಃ

ನ ತ್ವೇಕೇನ ಚ ಯೋದ್ಧವ್ಯಂ ಕಥಂಚಿದಿಹ ಪಾಂಡವೈಃ ॥೯॥

ಯೋ ಹ್ಯೇಕಃ ಪಾಂಡವೈರ್ಯುದ್ಧ್ಯೇದ್ ಯೋ ವಾ ಯುಧ್ಯಂತಮುತ್ಸೃಜೇತ್ ।
ಸ ಪಂಚಭಿರ್ಭವೇದ್ಯುಕ್ತಃ ಪಾತಕೈಶ್ಚೋಪಪಾತಕೈಃ ॥೧೦॥

ಕೌರವನ ಸೈನಿಕರು– ''ಪಾಂಡವರ ಜೊತೆಗೆ ಒಬ್ಬನೇ ಯಾವನೂ ಯುದ್ಧ ಮಾಡಬಾರದು. ಯಾವನಾದರೂ ಒಬ್ಬನೇ ಪಾಂಡವರ ಜೊತೆಗೆ ಯುದ್ಧಮಾಡಿದರೆ, ಅಥವಾ ಪಾಂಡವರೊಡನೆ ಏಕಾಂಗಿಯಾಗಿ ಯುದ್ಧಮಾಡುತ್ತಿರುವವನನ್ನು ಬಿಟ್ಟು ಬಿಡುತ್ತಾನೆಯೋ ಅಂತಹವನು ಐದು ತರಹದ ಪಾತಕ-ಉಪಪಾತಕಗಳಿಂದ ಕೂಡಿಕೊಳ್ಳುತ್ತಾನೆ.

ಅದ್ಯಾಚಾರ್ಯಸುತೋ ದ್ರೌಣಿಃ ನೈಕೋ ಯುಧ್ಯೇತ ಶತ್ರುಭಿಃ ।
ಅನ್ಯೋನ್ಯಂ ಪರಿರಕ್ಷದ್ಭಿರ್ಯೋದ್ಧವ್ಯಂ ಸಹಿತೈಶ್ಚ ನಃ ॥೧೧॥

ಇವತ್ತಿನ ಯುದ್ಧದಲ್ಲಿ ಅಶ್ವತ್ಥಾಮನು ಕೂಡ ಒಬ್ಬಂಟಿಯಾಗಿ ಶತ್ರುಗಳೊಡನೆ ಯುದ್ಧ ಮಾಡುವುದಿಲ್ಲ. ನಾವು ಪರಸ್ಪರವಾಗಿ ನಮ್ಮನ್ನು ರಕ್ಷಿಸಿಕೊಳ್ಳುತ್ತಾ ಜೊತೆಯಾಗಿಯೇ ಯುದ್ಧವನ್ನು ಮಾಡಬೇಕು.

ಸಂಜಯಃ

ಏವಂ ತೇ ಸಮಯಂ ಕೃತ್ವಾ ಸರ್ವೇ ತತ್ರ ಮಹಾರಥಾಃ ।
ಮದ್ರಾಧಿಪಂ ಪುರಸ್ಕೃತ್ಯ ತೂರ್ಣಮಭ್ಯದ್ರವನ್ ಪರಾನ್ ॥೧೨॥

ಸಂಜಯ– ಹೀಗೆ ಆ ಎಲ್ಲಾ ಮಹಾಯೋಧರೂ ನಿಯಮಗಳನ್ನು ಮಾಡಿಕೊಂಡು ಶಲ್ಯನನ್ನು ಮುಂದಿರಿಸಿಕೊಂಡು ತಡಮಾಡದೇ ಶತ್ರುಗಳನ್ನು ಎದುರಿಸಿದರು.

ತಥೈವ ಪಾಂಡವಾ ರಾಜನ್ ವ್ಯೂಹ್ಯ ಸೈನ್ಯಂ ಮಹಾರಣೇ ।
ಅಭ್ಯಯುಃ ಕೌರವಾನ್ ಯುದ್ಧೇ ಯೋತ್ಸ್ಯಮಾನಾಃ ಸಮಂತತಃ ॥೧೩॥

ಅದೇ ರೀತಿಯಲ್ಲಿ ಪಾಂಡವರೂ ಯುದ್ಧದಲ್ಲಿ ಸೈನ್ಯದ ವ್ಯೂಹಗಳನ್ನು ರಚಿಸಿಕೊಂಡು ಎಲ್ಲಾ ದಿಕ್ಕುಗಳಿಂದಲೂ ಯುದ್ಧಮಾಡುವವರಾಗಿ ಕೌರವರನ್ನು ಎದುರಿಸಿದರು.

ತದ್ಬಲಂ ಭರತಶ್ರೇಷ್ಠ ಕ್ಷುಬ್ಧಾರ್ಣವಸಮಸ್ವನಮ್ ।
ಸಮುದ್ಧತಪದಾತ್ಯಶ್ವಮುದ್ಧೂತರಥಕುಂಜರಮ್ ॥೧೪॥

ಭರತೋತ್ತಮನೇ! ಪಾಂಡವರ ಸೇನೆಯು ಕ್ಷೋಭೆಗೆ ಒಳಪಟ್ಟ ಸಾಗರದ ಹಾಗೆ ಧ್ವನಿ ಮಾಡುತ್ತಿತ್ತು. ಆ ಸೈನ್ಯದಲ್ಲಿ ಬಲದಿಂದ ದೃಪ್ತರಾದ ಪದಾತಿಗಳೂ ಕುದುರೆ ಆಳುಗಳೂ, ಮದವೇರಿದ ಆನೆಗಳೂ, ಮೇಲೇರಿ ಬರುವ ರಥಗಳೂ ಇದ್ದವು.

ಧೃತರಾಷ್ಟ್ರಃ

ದ್ರೋಣಸ್ಯೇವ ಚ ಭೀಷ್ಮಸ್ಯ ರಾಧೇಯಸ್ಯ ಮಯಾ ಶ್ರುತಮ್ ।
ಪತನಂ ಶಂಸ ಮೇ ಭೂಯಃ ಶಲ್ಯಸ್ಯಾಥ ಸುತಸ್ಯ ಮೇ ॥೧೫॥

ಧೃತರಾಷ್ಟ್ರ– ದ್ರೋಣ, ಭೀಷ್ಮ ಹಾಗೂ ಕರ್ಣನು ಯುದ್ಧದಲ್ಲಿ ಸೋತಿದ್ದನ್ನು ನಾನು ಕೇಳಿದ್ದೆ. ಅದೇ ರೀತಿಯಲ್ಲಿ ಶಲ್ಯನೂ ಹಾಗೂ ನನ್ನ ಮಗನಾದ ದುರ್ಯೋಧನನೂ ಯುದ್ಧದಲ್ಲಿ ಹೇಗೆ ಬಿದ್ದರು ಎಂಬುದನ್ನು ಮತ್ತೆ ಹೇಳು.

ಕಥಂ ರಣೇ ಹತಃ ಶಲ್ಯೋ ಧರ್ಮರಾಜೇನ ಸಂಜಯ ।
ಭೀಮಸೇನೇನ ಬಲಿನಾ ಪುತ್ರೋ ದುರ್ಯೋಧನೋ ಮಮ ॥೧೬॥

ಸಂಜಯನೇ, ಧರ್ಮರಾಜನಿಂದ ಶಲ್ಯನು ಹೇಗೆ ಸಾಯಿಸಲ್ಪಟ್ಟನು? ಬಲಶಾಲಿಯಾದ ಭೀಮಸೇನನು ನನ್ನ ಮಗನಾದ ದುರ್ಯೋಧನನನ್ನು ಹೇಗೆ ಕೊಂದನು? ವಿವರಿಸು.

ಸಂಜಯಃ

ಕ್ಷಯಂ ಮನುಷ್ಯದೇಹಾನಾಂ ರಥನಾಗಾಶ್ವಸಂಕ್ಷಯಮ್ ।
ಶೃಣು ರಾಜನ್ ಸ್ಥಿರೋ ಭೂತ್ವಾ ಸಂಗ್ರಾಮಂ ಶಂಸತೋ ಮಮ॥೧೭॥

ಸಂಜಯ– ರಾಜನೇ! ನಾನು ನಿನಗೆ ಯುದ್ಧಸ್ಥಿತಿಯನ್ನು ವಿವರಿಸುತ್ತಿದ್ದೇನೆ. ಮನುಷ್ಯರು ಯುದ್ಧದಲ್ಲಿ ಹೇಗೆ ಸಾಯುತ್ತಿದ್ದಾರೆ, ರಥಗಳು, ಅಶ್ವಗಳು ಹೇಗೆ ನಾಶವಾಗುತ್ತಿವೆ ಎಂಬುದನ್ನು ನಿನಗೆ ಹೇಳುತ್ತೇನೆ. ಯಾವುದೇ ವಿಕಾರಕ್ಕೆ ಒಳಗಾಗದೆ ಸ್ಥಿರವಾಗಿ ಇದ್ದುಕೊಂಡು ಕೇಳು.

ಆಶಾ ಬಲವತೀ ರಾಜನ್ ಪುತ್ರಾಣಾಂ ತೇऽಭವತ್ ತದಾ ।
ಹತೇ ಭೀಷ್ಮೇ ಹತೇ ದ್ರೋಣೇ ಸೂತಪುತ್ರೇ ಚ ಪಾತಿತೇ ॥೧೮॥

ಶಲ್ಯಃ ಪಾರ್ಥಾನ್ ರಣೇ ಸರ್ವಾನ್ ನಿಹನಿಷ್ಯತಿ ಪಾರ್ಥಿವಃ ।
ತಾಮಾಶಾಂ ಹೃದಯೇ ಕೃತ್ವಾ ಸಮಾಶ್ವಾಸ್ಯ ಚ ಭಾರತ ॥೧೯॥

ರಾಜನೇ! ಭೀಷ್ಮ, ದ್ರೋಣ, ಕರ್ಣರು ಯುದ್ಧದಲ್ಲಿ ಮಡಿದಾಗ ನಿನ್ನ ಮಕ್ಕಳಿಗೆ ಶಲ್ಯರಾಜನು ಎಲ್ಲಾ ಪಾಂಡವರನ್ನು ಯುದ್ಧದಲ್ಲಿ ಸಾಯಿಸುವನು ಎಂಬುದಾಗಿ ಬಲವತ್ತಾದ ಆಸೆಯಿತ್ತು. ಭರತಕುಲೋದ್ಭವನೇ! ಆ ಆಸೆಯಿಂದಲೇ ಅವರು ತಮ್ಮನ್ನು ತಾವು ಸಮಾಧಾನಪಡಿಸಿಕೊಂಡರು.

ಮದ್ರರಾಜಂ ಚ ಸಮರೇ ಸಮಾಶ್ರಿತ್ಯ ಮಹಾರಥಮ್ ।
ನಾಥವಂತಮಿವಾತ್ಮಾನಮ್ ಅಮನ್ಯತ ಸುತಸ್ತವ ॥೨೦॥

ನಿನ್ನ ಮಗ ದುರ್ಯೋಧನನು ಮಹಾರಥನಾದ ಶಲ್ಯನನ್ನು ಆಶ್ರಯಿಸಿಕೊಂಡು ತನಗೆ ರಕ್ಷಕನಿದ್ದಾನೆ ಎಂಬ ವಿಶ್ವಾಸವನ್ನು ಹೊಂದಿದನು.

ಯದಾ ಕರ್ಣೇ ಹತೇ ಪಾರ್ಥಾಃ ಸಿಂಹನಾದಂ ಪ್ರಚಕ್ರಿರೇ ।
ತದಾ ರಾಜನ್ ಧಾರ್ತರಾಷ್ಟ್ರಾನ್ ಆವಿವೇಶ ಮಹದ್ಭಯಮ್ ॥೨೧॥

ರಾಜನೆ! ಹಿಂದೆ ಕರ್ಣನು ಸತ್ತು ಬಿದ್ದಾಗ ಪಾಂಡವರು ಸಂತೋಷದಿಂದ ಸಿಂಹಗರ್ಜನೆಯನ್ನು ಮಾಡಿದ್ದರು. ಅದನ್ನು ಕೇಳಿಸಿಕೊಂಡಾಗ ನಿನ್ನ ಕಡೆಯವರಲ್ಲಿ ಬಹಳವಾದ ಭಯವು ಸೇರಿಕೊಂಡಿತ್ತು.

ತಾನ್ ಸಮಾಶ್ವಾಸಯಾಮಾಸ ಮದ್ರರಾಜೋ ಮಹಾರಥಃ ।
ವ್ಯೂಹ್ಯ ವ್ಯೂಹಂ ಮಹಾರಾಜ ಸರ್ವತೋಭದ್ರಮೃದ್ಧಿಮತ್ ॥೨೨॥

ಅಂತಹ ಭಯಗ್ರಸ್ತರಾದ ನಿನ್ನ ಕಡೆಯವರನ್ನು ಮಹಾರಥನಾದ ಶಲ್ಯನು ಸಮಾಧಾನಪಡಿಸಿದ. ಮಹಾರಾಜ! ಅದಕ್ಕಾಗಿ ಉನ್ನತವಾದ ಬೇರೆ ಬೇರೆ ವ್ಯೂಹಗಳನ್ನು ಎಲ್ಲಾ ಕಡೆಯೂ ರಚಿಸಿದನು.

ಪ್ರತ್ಯುದ್ಯಾತೋ ರಣೇ ಪಾರ್ಥಾನ್ ಮದ್ರರಾಜಃ ಪ್ರತಾಪವಾನ್ ।
ವಿಧೂನ್ವನ್ ಕಾರ್ಮುಕಂ ಚಿತ್ರಂ ಭಾರಸ್ಸಹಂ ವೇಗವತ್ತರಮ್ ॥೨೩॥

ಪ್ರತಾಪಿಯಾದ ಶಲ್ಯನು ಬಹಳವೇಗದಿಂದ ಪ್ರಯೋಗಿಸಬಹುದಾದ, ಎಂತಹ ಹೊಡೆತವನ್ನೂ ಸಹಿಸಿಕೊಳ್ಳುವ ವಿಚಿತ್ರವಾದ ಬಿಲ್ಲನ್ನು ಠೇಂಕರಿಸುತ್ತಾ ಪಾಂಡವರನ್ನು ಎದುರುಗೊಂಡನು.

ರಥಪ್ರವರಮಾಸ್ಥಾಯ ಸೈನ್ಯಪಾರ್ಶ್ವೇ ಮಹಾರಥಃ ।
ತಸ್ಯ ಸೀತಾ ಮಹಾರಾಜ ರಥಸ್ಥಾಶೋಭಯದ್ ರಥಮ್ ॥೨೪॥

ಸೈನ್ಯದ ಒಂದು ಪಾರ್ಶ್ವದಲ್ಲಿ ಮಹಾರಥನಾದ ಶಲ್ಯನು ಶ್ರೇಷ್ಠವಾದ ರಥದಮೇಲೆ ನಿಂತಿದ್ದಾನೆ. ಮಹಾರಾಜನೇ! ಅವನ ರಥದ ಮೇಲೆ ಚಿನ್ನದ ಫಲಕದಲ್ಲಿ ನೇಗಿಲಿನಿಂದ ಕೆತ್ತಿದ ರೇಖೆಗಳು ರಥಕ್ಕೆ ವಿಶೇಷ ಶೋಭೆಯನ್ನು ಉಂಟುಮಾಡುತ್ತಿದ್ದವು.

ಸ ತೇನ ಸಂವೃತೋ ರಾಜಾ ಬಲೇನಾಮಿತ್ರಕರ್ಶನಃ ।
ತಸ್ಥೌ ಶೂರೋ ಮಹಾರಾಜ ಪುತ್ರಾಣಾಂ ತೇ ಭಯಪ್ರಣುತ್ ॥೨೫॥

ಮಹಾರಾಜನೇ! ಶತ್ರುಗಳನ್ನು ಸದೆಬಡಿಯುವ ಶಲ್ಯನು ಸೈನ್ಯದಿಂದ ಸುತ್ತುವರಿಯಲ್ಪಟ್ಟಿದ್ದಾನೆ. ನಿನ್ನ ಮಕ್ಕಳ ಭಯವನ್ನು ಕಳೆಯುವ ಸಾಮರ್ಥ್ಯವುಳ್ಳ ಈ ಶೂರನಾದ ಶಲ್ಯನು ಯುದ್ಧಕ್ಕೆ ಸನ್ನದ್ಧನಾಗಿ ನಿಂತುಕೊಂಡನು.

ಪೂರ್ವತೋ ಮದ್ರರಾಜೋಽಭೂನ್ಮುಖಂ ವ್ಯೂಹಸ್ಯ ದಂಸಿತಃ ।
ಮದ್ರಕೈಃ ಸಹಿತೋ ವೀರೈಃ ಕರ್ಣಪುತ್ರೈಶ್ಚ ರಕ್ಷಿತಃ ॥೨೬॥

ಕವಚಧಾರಿಯಾದ ಶಲ್ಯನು ಸೈನ್ಯದ ವ್ಯೂಹದ ಪೂರ್ವಭಾಗದಲ್ಲಿ ಮುಖಭಾಗದಲ್ಲಿ ನಿಂತುಕೊಂಡನು. ಅವನ ಸುತ್ತ ವೀರರಾದ ಮದ್ರದೇಶದವರು ಹಾಗೂ ಕರ್ಣನ ಮಕ್ಕಳು ರಕ್ಷಣೆಗಾಗಿ ನಿಂತರು.

ಸವ್ಯೇऽಭೂತ್ ಕೃತವರ್ಮಾ ತು ತ್ರಿಗರ್ತೈಃ ಪರಿವಾರಿತಃ ।
ಗೌತಮೋ ದಕ್ಷಿಣೇ ಪಾರ್ಶ್ವೇ ಶಕೈಶ್ಚ ಯವನೈಃ ಸಹ ॥೨೭॥

ತ್ರಿಗರ್ತದೇಶದ ಯೋಧರಿಂದ ಸುತ್ತುವರಿಯಲ್ಪಟ್ಟ ಕೃತವರ್ಮನು ಸೈನ್ಯದ ಎಡಭಾಗದಲ್ಲಿ ನಿಂತನು. ಶಕರು ಮತ್ತು ಯವನರ ಜೊತೆಗೆ ಕೃಪಾಚಾರ್ಯನು ಸೈನ್ಯದ ದಕ್ಷಿಣಭಾಗದಲ್ಲಿ ನಿಂತನು.

ಅಶ್ವತ್ಥಾಮಾ ಪೃಷ್ಠತೋऽಭೂತ್ ಕಾಂಭೋಜೈಃ ಪರಿವಾರಿತಃ ।
ದುರ್ಯೋಧನೋऽಭವನ್ಮಧ್ಯೇ ರಕ್ಷಿತಃ ಕುರುಪುಂಗವೈಃ ॥೨೮॥

ಕಾಂಭೋಜವೀರರ ಜೊತೆಗೆ ಅಶ್ವತ್ಥಾಮನು ಸೈನ್ಯವ್ಯೂಹದ ಹಿಂಬದಿಯಲ್ಲಿ ನಿಂತುಕೊಂಡನು. ಈ ವ್ಯೂಹದ ಮಧ್ಯಭಾಗದಲ್ಲಿ ಕುರುಶ್ರೇಷ್ಠರಿಂದ ರಕ್ಷಿತನಾದ ದುರ್ಯೋಧನನು ಇದ್ದನು.

ಹಯಾನೀಕೇನ ಮಹತಾ ಸೌಬಲಶ್ಚಾಪಿ ಸಂವೃತಃ ।
ಪ್ರಯಯೌ ಸರ್ವಸೈನ್ಯಾನಿ ಕೈತವ್ಯಶ್ಚ ಮಹಾರಥಃ ॥೨೯॥

ಶಕುನಿಯು ಬೃಹತ್ಸಂಖ್ಯೆಯ ಕುದುರೆಯೇರಿದ ಸೈನಿಕರಿಂದ ಸುತ್ತುವರಿಸಿಕೊಂಡು ಯುದ್ಧಕ್ಕೆ ನಡೆದ. ಹಾಗೆಯೇ ಮಹಾರಥನಾದ ಉಲೂಕನು ಎಲ್ಲಾ ಸೇನೆಯ ಜೊತೆಗೆ ಯುದ್ಧದಲ್ಲಿ ಮುನ್ನಡೆದ.

ಪಾಂಡವೇಯಾ ಮಹೇಷ್ವಾಸಾ ವ್ಯೂಹ್ಯ ಸೈನ್ಯಮರಿಂದಮಾಃ ।
ತ್ರಿಧಾ ಭೂತಾ ಮಹಾರಾಜ ತವ ಸೈನ್ಯಮಭಿದ್ರವನ್ ॥೩೦॥

ಮಹಾರಾಜನೇ! ಶತ್ರುಗಳನ್ನು ಬಗ್ಗುಬಡಿಯುವ ಸಾಮರ್ಥ್ಯವುಳ್ಳ ಮಹಾಬಿಲ್ಲಾರರಾದ ಪಾಂಡವರ ಸೈನಿಕರೂ ವ್ಯೂಹವನ್ನು ರಚಿಸಿಕೊಂಡು ಮೂರು ವಿಭಾಗದಲ್ಲಿ ಬೇರ್ಪಟ್ಟು ನಿನ್ನ ಸೈನ್ಯವನ್ನು ಎದುರಿಸಿದರು.

ಧೃಷ್ಟದ್ಯುಮ್ನಃ ಶಿಖಂಡೀ ಚ ಸಾತ್ಯಕಿಶ್ಚ ಮಹಾರಥಃ ।
ಶಲ್ಯಸ್ಯ ವಾಹಿನೀಂ ತೂರ್ಣಮಭಿದುದ್ರುವುರಾಹವೇ ॥೩೧॥

ಆ ಮೂರುವಿಭಾಗಗಳ ನೇತಾರರಾದ ಧೃಷ್ಟದ್ಯುಮ್ನ, ಶಿಖಂಡಿ ಹಾಗೂ ಸಾತ್ಯಕಿ ಇವರು ಕೂಡಲೇ ಯುದ್ಧದಲ್ಲಿ ಶಲ್ಯನ ಸೈನ್ಯವನ್ನು ಎದುರಿಸಲಿಕ್ಕಾಗಿ ಎಲ್ಲ ಕಡೆಗಳಿಂದಲೂ ಆಕ್ರಮಣ ಮಾಡಿದರು.

ತತೋ ಯುಧಿಷ್ಠಿರೋ ರಾಜಾ ಸ್ವೇನಾನೀಕೇನ ಸಂವೃತಃ ।
ಶಲ್ಯಮೇವಾಭಿದುದ್ರಾವ ಜಿಘಾಂಸುರ್ಭರತರ್ಷಭ ॥೩೨॥

ಭಾರತೋತ್ತಮನೇ! ಅನಂತರ ರಾಜನಾದ ಯುಧಿಷ್ಠಿರನು ತನ್ನ ಸೈನ್ಯದಿಂದ ಸುತ್ತುವರಿಯಲ್ಪಟ್ಟವನಾಗಿ ಶಲ್ಯನ ಮೇಲೆಯೇ ಏರಿಬಂದನು. ಅವನಿಗೆ ಶಲ್ಯನನ್ನು ಕೊಲ್ಲಬೇಕೆಂದು ಬಲವಾದ ಇಚ್ಛೆಯು ಉಂಟಾಗಿತ್ತು.

ಹಾರ್ದಿಕ್ಯಂ ತು ಮಹೇಷ್ವಾಸಃ ಅರ್ಜುನಃ ಶತ್ರುಪೂಗಹಾ ।
ಸಂಶಪ್ತಕಗಣಾಂಶ್ಚೈವ ವೇಗಿತೋಽಭಿವಿದುದ್ರುವೇ ॥೩೩॥

ಶತ್ರುಗಳ ಸಮೂಹವನ್ನೂ ಸಾಯಿಸುವ ಅರ್ಜುನನು ಮಹಾ ಬಿಲ್ಗಾರನಾಗಿದ್ದನು. ಅವನು ಕೃತವರ್ಮನನ್ನು ಎದುರಿಸಿದನು. ಹಾಗೆಯೇ ಸಂಶಪ್ತಕಗಣವನ್ನೂ ವೇಗದಿಂದ ಎದುರಿಸಿದನು.

ಗೌತಮಂ ಭೀಮಸೇನೋಽಪಿ ಸೋಮಕಾಶ್ಚ ಮಹಾರಥಾಃ ।
ಅಭ್ಯದ್ರವಂತ ರಾಜೇಂದ್ರ ಜಿಘಾಂಸಂತಃ ಪರಾನ್ ಯುಧಿ ॥೩೪॥

ಕೃಪಾಚಾರ್ಯನನ್ನು ಭೀಮನು ಎದುರಿಸಿದನು. ಭೀಮನ ಜೊತೆಗೆ ಮಹಾರಥರಾದ ಸೋಮಕರೂ ಸೇರಿಕೊಂಡರು. ರಾಜೇಂದ್ರನೇ! ಯುದ್ಧದಲ್ಲಿ ಅವರು ಶತ್ರುಗಳನ್ನು ಹಿಂಸಿಸುತ್ತಿದ್ದರು.

ಮಾದ್ರೀಪುತ್ರೌ ಚ ಶಕುನಿಮುಲೂಕಂ ಚ ಮಹಾರಥಮ್ ।
ಸಸೈನ್ಯೌ ಸಹಸೈವೋಭಾವುಪತಸ್ಥತುರಾಹವೇ ॥೩೫॥

ನಕುಲ-ಸಹದೇವರು ಶಕುನಿ ಮತ್ತು ಉಲೂಕನನ್ನು ಎದುರಿಸಿದರು. ಇಬ್ಬರೂ ಸೈನ್ಯವನ್ನು ಹೊಂದಿದ್ದರು. ಇಬ್ಬರೂ ಒಟ್ಟಿಗೆನೇ ಯುದ್ಧದಲ್ಲಿ ಶತ್ರುಗಳನ್ನು ಎದುರಿಸಿದರು.

ತಥೈವಾಯುತಶೋ ಯೋಧಾಃ ತಾವಕಾಃ ಪಾಂಡವಾನ್ ರಣೇ ।
ಅಭ್ಯದ್ರವಂತ ಸಂಕ್ರುದ್ಧಾ ವಿವಿಧಾಯುಧಪಾಣಯಃ ॥೩೬॥

ನಿನ್ನ ಹತ್ತು ಸಾವಿರದಷ್ಟು ಯೋಧರು ಕೈಗಳಲ್ಲಿ ವಿವಿಧ ಆಯುಧಗಳನ್ನು ಹಿಡಿದುಕೊಂಡು ಬಹಳ ಕುಪಿತರಾಗಿ ಪಾಂಡವರನ್ನು ವೇಗವಾಗಿ ಎದುರಿಸಿದರು.

ಧೃತರಾಷ್ಟ್ರಃ

ಹತೇ ಭೀಷ್ಮೇ ಮಹೇಷ್ವಾಸೇ ದ್ರೋಣೇ ಕರ್ಣೇ ಜಯದ್ರಥೇ ।
ಕುರುಷ್ವಲ್ಪಾವಶಿಷ್ಟೇಷು ಪಾಂಡವೇಷು ಚ ಸಂಯುಗೇ ॥೩೭॥

ಧೃತರಾಷ್ಟ್ರ– ಮಹಾಬಿಲ್ಲಾರನಾದ ಭೀಷ್ಮ, ದ್ರೋಣ, ಕರ್ಣ ಹಾಗೂ ಜಯದ್ರಥ ಇವರೆಲ್ಲರೂ ಸತ್ತ ಮೇಲೆ ರಣರಂಗದಲ್ಲಿ ಕೌರವರ ಮತ್ತು ಪಾಂಡವರ ಸೈನ್ಯಗಳು ಸ್ವಲ್ಪವೇ ಉಳಿದವು.

ಸಂರಬ್ಧೇಷು ಚ ಪಾರ್ಥೇಷು ಪರಾಕ್ರಾಂತೇಷು ಸಂಜಯ ।
ಮಾಮಕಾನಾಂ ಪರೇಷಾಂ ಚ ಕಿಂ ಶಿಷ್ಟಮಭವದ್ ಬಲಮ್ ॥೩೮॥

ಸಂಜಯನೇ! ಪಾಂಡವರು ಕೋಪದಿಂದ ಯುದ್ಧಮಾಡಿ ಪರರ ಮೇಲೆ ಆಕ್ರಮಣ ಮಾಡಿದಾಗ ನಮ್ಮ ಕಡೆಯಲ್ಲಿ ಮತ್ತು ಶತ್ರುಕಡೆಯಲ್ಲಿ ಎಷ್ಟು ಸೈನ್ಯವು ಉಳಿದುಕೊಂಡಿತ್ತು?

ಸಂಜಯಃ

ಯಥಾ ವಯಂ ಪರೈ ರಾಜನ್ ಯುದ್ಧಾಯ ಸಮವಸ್ಥಿತಾಃ ।
ಯಾವಚ್ಚಾಸೀದ್ ಬಲಂ ಶಿಷ್ಟಂ ಸಂಗ್ರಾಮೇ ತನ್ನಿಬೋಧ ಮೇ ॥೩೯॥

ಸಂಜಯ– ರಾಜನೇ! ನಾವು ಶತ್ರುಗಳೊಡನೆ ಯುದ್ಧಕ್ಕಾಗಿ ಸೇರಿದಾಗ ಎಷ್ಟು ಸೈನ್ಯ ಉಳಿಯಿತು ಎಂಬುದನ್ನು ಹೇಳುತ್ತೇನೆ. ಕೇಳು.

ಏಕಾದಶಸಹಸ್ರಾಣಿ ರಥಾನಾಂ ಭರತರ್ಷಭ ।
ದಶ ದಂತಿಸಹಸ್ರಾಣಿ ಸಪ್ತ ಚೈವ ಶತಾನಿ ಚ ॥೪೦॥

ಪೂರ್ಣೇ ಶತಸಹಸ್ರೇ ದ್ವೇ ಹಯಾನಾಂ ಭರತರ್ಷಭ ।
ಪತ್ತಿ ಕೋಟ್ಯಸ್ತಥಾ ತಿಸ್ರೋ ಬಲಮೇತತ್ ತವಾನಘ ॥೪೧॥

ಭರತೋತ್ತಮನೇ! ಪಾಪದೂರನೇ! ಹನ್ನೊಂದು ಸಾವಿರ ರಥಗಳು, ಹತ್ತು ಸಾವಿರದ ಏಳುನೂರು ಆನೆಗಳು, ಇನ್ನೂರು ಸಾವಿರ (೨ ಲಕ್ಷ) ಕುದುರೆಗಳು, ಮೂರುಕೋಟಿಸಂಖ್ಯೆಯ ಪದಾತಿಗಳು- ಇಷ್ಟು ನಿನ್ನ ಕಡೆಯಲ್ಲಿ ಇತ್ತು.

ರಥಾನಾಂ ಷಟ್ ಸಹಸ್ರಾಣಿ ಷಟ್ ಸಹಸ್ರಾಶ್ಚ ಕುಂಜರಾಃ ।
ದಶ ಚಾಶ್ವಸಹಸ್ರಾಣಿ ಪತ್ತಿಕೋಟಿಶತಾನಿ ಚ ॥೪೨॥

ಏತದ್ ಬಲಂ ಪಾಂಡವಾನಾಮಭವಚ್ಛೇಷಮಾಹವೇ ।
ಏತ ಏವ ಸಮಾಜಗ್ಮುರ್ಯುದ್ಧಾಯ ಭರತರ್ಷಭ ॥೪೩॥

ಪಾಂಡವರ ಕಡೆಯಲ್ಲಿ ಆರು ಸಾವಿರ ರಥಗಳು, ಆರು ಸಾವಿರ ಆನೆಗಳು, ಹತ್ತುಸಾವಿರ ಕುದುರೆಗಳು, ನೂರು ಕೋಟಿ ಪದಾತಿಗಳು ಇದ್ದರು. ಇದು ನಮ್ಮ ಮತ್ತು ಪಾಂಡವರ ಕಡೆಯಲ್ಲಿ ಉಳಿದುಕೊಂಡಿರುವ ಸೈನ್ಯದ ಪ್ರಮಾಣ. ಭಾರತೋತ್ತಮನೇ! ಇದೇ ಸೈನ್ಯವು ಯುದ್ಧಕ್ಕೆ ಹೊರಟಿತು.

ಏವಂ ವಿಭಜ್ಯ ರಾಜೇಂದ್ರ ಮದ್ರರಾಜಮತೇ ಸ್ಥಿತಾಃ ।
ಪಾಂಡವಾನ್ ಪ್ರತ್ಯುಪಾಜಗ್ಮುಃ ಜಯಗೃದ್ಧ್ನಾಃ ಪ್ರಮನ್ಯವಃ ॥೪೪॥

ಹೀಗೆ ಶಲ್ಯನ ವಶದಲ್ಲಿ ಇದ್ದ ಸೈನ್ಯವು ವಿಭಾಗಗೊಂಡು ಪಾಂಡವರ ಮೇಲೆ ಆಕ್ರಮಣ ಮಾಡಿತು. ಅವರೆಲ್ಲರೂ ಬಹಳ ಕೋಪಿಷ್ಠರಾಗಿದ್ದರು ಹಾಗೂ ಜಯವನ್ನು ಪಡೆಯಲೇಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ್ದರು.

ತಥೈವ ಪಾಂಡವಾಃ ಶೂರಾಃ ಸಮರೇ ಜಿತಕಾಶಿನಃ ।
ಉಪಯಾತಾ ನರವ್ಯಾಘ್ರಾಃ ಪಾಂಚಾಲಾಶ್ಚ ಯಶಸ್ವಿನಃ ॥೪೫॥

ಅದೇ ರೀತಿಯಲ್ಲಿ ಶೂರರಾದ ಪಾಂಡವರೂ ಜಯವನ್ನು ಅಪೇಕ್ಷಿಸಿಕೊಂಡು ಯುದ್ಧಕ್ಕೆ ಬಂದರು. ಅವರೆಲ್ಲ ಪುರುಷಶ್ರೇಷ್ಠರಾಗಿದ್ದರು. ಕೀರ್ತಿಶಾಲಿಗಳಾದ ಪಾಂಚಾಲರೂ ಯುದ್ಧಕ್ಕೆ ಬಂದರು.

ಏವಮೇತೇ ಬಲೌಘೇನ ಪರಸ್ಪರಜಯೈಷಿಣಃ ।
ಉಪಯಾತಾ ಮಹಾವ್ಯಾಘ್ರಾಃ ಪೂರ್ವಾಂ ಸಂಧ್ಯಾಂ ಪ್ರತಿ ಪ್ರಭೋ ॥

ಪ್ರಭುವೇ! ಪ್ರಾತಃಸಂಧ್ಯೆಯ ಸಮಯದಲ್ಲಿ ಹೀಗೆ ಇವರೆಲ್ಲರೂ ಪರಸ್ಪರವಾಗಿ ಜಯವನ್ನು ಬಯಸುತ್ತಾ, ಸೈನ್ಯದ ಜೊತೆಗೆ ಹತ್ತಿರಕ್ಕೆ ಬಂದರು. ಅವರೆಲ್ಲಾ ಮಹಾವೀರರಾಗಿದ್ದರು.

ತತಃ ಪ್ರವವೃತೇ ಯುದ್ಧಂ ಘೋರರೂಪಂ ಭಯಾನಕಮ್ ।
ತಾವಕಾನಾಂ ಪರೇಷಾಂ ಚ ನಿಘ್ನತಾಮಿತರೇತರಮ್ ॥೪೭॥

ತದನಂತರ ಬಹಳ ಭಯವನ್ನುಂಟುಮಾಡುವ ಘೋರವಾದ ಯುದ್ಧವು ನಡೆಯಿತು. ನಿನ್ನ ಕಡೆಯವರು ಮತ್ತು ಶತ್ರುಕಡೆಯವರು ಪರಸ್ಪರವಾಗಿ ಹೊಡೆದುಕೊಂಡರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಹದಿನೆಂಟನೆಯ ದಿನದ ಯುದ್ಧದ ಆರಂಭ. ಸಂಕುಲಯುದ್ಧ.

ಸಂಜಯಃ

ತತಃ ಪ್ರವವೃತೇ ಯುದ್ಧಂ ಭೀರೂಣಾಂ ಭಯವರ್ಧನಮ್ ।
ಸೃಂಜಯೈಃ ಸಹ ರಾಜೇಂದ್ರ ದೇವಾಸುರರಣೋಪಮಮ್ ॥೧॥

ಸಂಜಯ– ರಾಜೇಂದ್ರನೇ! ಅನಂತರ ಕೌರವರಿಗೂ ಸೃಂಜಯರಿಗೂ ಘೋರವಾದ ಹಾಗೂ ಭಯವನ್ನು ಉಂಟುಮಾಡುವ ಯುದ್ಧವು ಆರಂಭಗೊಂಡಿತು. ಅದು ದೇವತೆಗಳು ಮತ್ತು ಅಸುರರ ನಡುವೆ ನಡೆದ ಯುದ್ಧಕ್ಕೆ ಸಮಾನವಾಗಿತ್ತು.

ನರೌಘಾಶ್ಚ ಗಜೌಘಾಶ್ಚ ವಾಜಿನಶ್ಚ ಸಹಸ್ರಶಃ ।
ಸಾದಿನಶ್ಚ ಪರಾಕ್ರಾಂತಾಃ ಸಮಾಜಗ್ಮುಃ ಪರಸ್ಪರಮ್ ॥೨॥

ಕಾಲಾಳುಗಳು, ಗಜಸೈನ್ಯ, ಹಯಸೈನ್ಯ ಹಾಗೂ ರಥಸೈನ್ಯವು ಸಾವಿರಾರು ಸಂಖ್ಯೆಯಲ್ಲಿ ಪರಸ್ಪರವಾಗಿ ಪರಾಕ್ರಮವನ್ನು ತೋರುತ್ತಾ ಎದುರುಗೊಂಡವು.

ನಾಗಾನಾಂ ಭೀಮರೂಪಾಣಾಂ ದ್ರವತಾಂ ನಿಃಸ್ವನೋ ಮಹಾನ್ ।
ಅಶ್ರೂಯತ ಯಥಾ ಕಾಲೇ ಜಲದಾನಾಂ ನಭಃಸ್ಥಲೇ ॥೩॥

ಭಯವನ್ನುಂಟು ಮಾಡುವ ಆಕಾರವುಳ್ಳ ಗಜಗಳು ಓಡುವಾಗ ದೊಡ್ಡದಾಗಿ ಶಬ್ದವು ಉಂಟಾಗುತ್ತಿತ್ತು. ಅದು ಮಳೆಗಾಲದಲ್ಲಿ ಮೋಡಗಳಿಂದ ಉಂಟಾಗುವ ಧ್ವನಿಯಂತೆ ಇತ್ತು.

ನಾಗೈರಭ್ಯಾಹತಾಃ ಕೇಚಿತ್ ಸರಥಾ ರಥಿನೋ ಭೃಶಮ್ ।
ವ್ಯದ್ರವಂತ ರಣೇ ಭೀತಾ ದ್ರಾವ್ಯಮಾಣಾ ಮದೋತ್ಕಟೈಃ ॥೪॥

ರಥದ ಮೇಲೆ ಕುಳಿತು ಯುದ್ಧಮಾಡುತ್ತಿದ್ದ ಕೆಲವು ಯೋಧರು ಗಜಗಳ ಆಕ್ರಮಣಕ್ಕೆ ಒಳಗಾದರು. ಮದಭರಿತವಾದ ಆನೆಗಳು ಅಟ್ಟಿಸಿಕೊಂಡು ಬರುತ್ತಿರಲು ಇವರು ಹೆದರಿ ರಥಸಹಿತವಾಗಿ ಯುದ್ಧದಿಂದ ಓಡಿ ಹೋದರು.

ಹಯೌಘಾನ್ ಪಾದರಕ್ಷಾಂಶ್ಚ ರಥಿನಸ್ತತ್ರ ಶಿಕ್ಷಿತಾಃ ।
ಶರೈಃ ಸಂಪ್ರೇಷಯಾಮಾಸುಃ ಪರಲೋಕಾಯ ಭಾರತ ॥೫॥

ಭರತಕುಲೋದ್ಭವನೇ! ಆ ಯುದ್ಧಸ್ಥಳದಲ್ಲಿ ಯುದ್ಧದಲ್ಲಿ ಒಳ್ಳೆಯ ನೈಪುಣ್ಯವನ್ನು ಹೊಂದಿದ ರಥಿಕರು ಕುದುರೆ-ಆಳುಗಳನ್ನು ಮತ್ತು ಕಾಲಾಳುಗಳನ್ನು ಕೊಂದು ಪರಲೋಕಕ್ಕೆ ಕಳುಹಿಸಿದರು.

ಸಾದಿನಃ ಶಿಕ್ಷಿತಾ ರಾಜನ್ ಪರಿವಾರ್ಯ ಮಹಾರಥಾನ್ ।
ವಿಚರಂತೋ ರಣೇ ಹ್ಯಘ್ನನ್ ಪ್ರಾಸಶಕ್ತ್ಯಾದಿಭಿಸ್ತದಾ ॥೬॥

ರಾಜನೇ! ಆಗ ಶಿಕ್ಷಿತರಾದ ರಥಿಕರು ರಣರಂಗದಲ್ಲಿ ಸುತ್ತಾಡುತ್ತಾ, ಮಹಾರಥರನ್ನು ಆಕ್ರಮಿಸಿ ತಮ್ಮ ಪ್ರಾಸಾಯುಧ, ಶಕ್ತ್ಯಾಯುಧಗಳಿಂದ ಅವರನ್ನು ಸಾಯಿಸಿದರು.

ಧನ್ವಿನಃ ಪುರುಷಾಃ ಕೇಚಿತ್ ಸನ್ನಿವಾರ್ಯ ಮಹಾರಥಮ್ ।
ಏಕಂ ಬಹವ ಆಸಾದ್ಯ ಪ್ರೈಷಯನ್ ವೈ ಯಮಕ್ಷಯಮ್ ॥೭॥

ಕೆಲವು ಯೋಧರು ಧನುರ್ಧಾರಿಗಳಾಗಿ ಒಬ್ಬ ಮಹಾರಥನನ್ನು ಗುಂಪಾಗಿ ಆಕ್ರಮಿಸಿ ಯಮಪುರಿಗೆ ಕಳುಹಿಸಿದರು.

ನಾಗಂ ರಥಗತಾಶ್ಚಾನ್ಯೇ ಪರಿವಾರ್ಯ ಮಹಾರಥಾಃ ।
ಸೋತ್ತರಾಯುಧಿನಂ ಜಘ್ನುಃ ದ್ರವಮಾಣಾ ಮಹಾರಥಾಃ ॥೮॥

ಕೆಲವು ಮಹಾರಥರು ರಥಗಳನ್ನೇರಿಕೊಂಡು ಆನೆಗಳ ಮೇಲೆ ಆಕ್ರಮಣ ಮಾಡಿದರು. ವೇಗವಾಗಿ ಸಂಚರಿಸುತ್ತಲೇ ತಮ್ಮ ಮುಂದಿದ್ದ ಯೋಧರನ್ನು ಹೊಡೆದರು.

ತಥಾ ವರೂಥಿನಃ ಕ್ರುದ್ಧಾ ವಿಕಿರಂತಃ ಶರಾನ್ ಬಹೂನ್ ।
ನಾಗಾಃ ಜಘ್ನುರ್ಮಹಾರಾಜ ಪರಿವಾರ್ಯ ಸಮಂತತಃ ॥೯॥

ಮಹಾರಾಜನೇ! ಗುಂಪಾಗಿದ್ದ ಯೋಧರು ಕೋಪದಿಂದ ಬಹಳ ಬಾಣಗಳನ್ನು ಬಿಡುತ್ತಾ ಸುತ್ತಲೂ ಸುತ್ತುವರಿದು ಹೊಡೆದರು.

ನಾಗೋ ನಾಗಮಭಿದ್ರುತ್ಯ ರಥೀ ಚ ರಥಿನಂ ರಣೇ ।
ಶಕ್ತಿತೋಮರನಾರಾಚೈಃ ನಿರ್ಜಘ್ನುಃ ತತ್ರ ತತ್ರ ಹ ॥೧೦॥

ಗಜಗಳು ಗಜಗಳನ್ನು ಅಟ್ಟಿಸಿಕೊಂಡು ಹೋಗುತ್ತಿದ್ದವು. ರಥಿಕರು ರಥಿಕರನ್ನು ಹಿಂಬಾಲಿಸಿಕೊಂಡು ಅಲ್ಲಲ್ಲಿ ಶಕ್ತ್ಯಾಯುಧ, ತೋಮರ, ಬಾಣಗಳಿಂದ ಹೊಡೆದಾಡಿಕೊಂಡರು.

ಪಾದಾತಾನವಮರ್ದಂತೋ ರಥವಾರಣವಾಜಿನಃ ।
ರಥಮಧ್ಯೇ ವ್ಯದೃಶ್ಯಂತ ಕುರ್ವಂತೋ ಮಹದಾಕುಲಮ್ ॥೧೧॥

ರಥ, ಆನೆ, ಕುದುರೆಗಳಲ್ಲಿ ಹತ್ತಿಕುಳಿತು ಯುದ್ಧಮಾಡುವವರು ಕಾಲಾಳುಗಳನ್ನು ಹೊಡೆಯುತ್ತಿದ್ದರು. ರಥಗಳ ಸಮೂಹದ ಮಧ್ಯದಲ್ಲಿ ಇಂತಹ ಯೋಧರು ಕಾಣಿಸಿಕೊಂಡು ಬಹಳವಾದ ವ್ಯಾಕುಲತೆಯನ್ನೇ ಉಂಟುಮಾಡಿದರು.

ಹಯಾಶ್ಚ ಪರ್ಯಧಾವಂತ ಚಾಮರೈರುಪಶೋಭಿತಾಃ ।
ಹಂಸಾ ಹಿಮವತಃ ಪ್ರಸ್ಥೇ ಪಿಬಂತ ಇವ ಮೇದಿನೀಮ್ ॥೧೨॥

ಶ್ವೇತವರ್ಣದ ಹಂಸಪಕ್ಷಿಗಳು ಹಿಮಾಲಯದ ಪ್ರದೇಶಗಳಲ್ಲಿ ಎಲ್ಲಾ ಕಡೆಯು ಸಂಚರಿಸುತ್ತಿರುತ್ತವೆ. ಅದೇ ರೀತಿಯಲ್ಲಿ ರಣಭೂಮಿಯಲ್ಲಿ ಎಲ್ಲಾ ದಿಕ್ಕುಗಳಲ್ಲಿಯೂ ಸಂಚರಿಸುತ್ತಿರುವ ಕುದುರೆಗಳು ಕಾಣಿಸಿಕೊಂಡವು. ಅವುಗಳಿಗೆ ಚಾಮರಗಳನ್ನು ಕಟ್ಟಿದ್ದರು. ಇದರಿಂದಾಗಿ ಬಹಳ ಸುಂದರವಾಗಿ ಕಾಣಿಸುತ್ತಿದ್ದವು.

ತೇಷಾಂ ತು ವಾಜಿನಾಂ ಭೂಮಿಃ ಖುರೈಶ್ಚಿತ್ರಾ ವಿಶಾಂಪತೇ ।
ಅಶೋಭತ ಯಥಾ ನಾರೀ ಕರಜೈಃ ಕ್ಷತವಿಕ್ಷತಾ ॥೧೩॥

ರಾಜನೇ! ಕುದುರೆಗಳ ಸಂಚಾರದಿಂದಾಗಿ ಅವುಗಳ ಗೊರಸಿನ ಆಘಾತಕ್ಕೆ ಒಳಗಾದ ಯುದ್ಧಭೂಮಿಯು ಪ್ರಿಯಕರನ ನಖಗಳಿಂದ ಗಾಯಗೊಂಡ ನಾರಿಯಂತೆ ಚಿತ್ರ ವಿಚಿತ್ರವಾಗಿ ಕಾಣಿಸುತ್ತಿತ್ತು.

ವಾಜಿನಾಂ ಖುರಶಬ್ದೇನ ರಥನೇಮಿಸ್ವನೇನ ಚ ।
ಪತ್ತೀನಾಂ ಪದಶಬ್ದೇನ ನಾಗಾನಾಂ ಬೃಂಹಿತೇನ ಚ ॥೧೪॥

ವಾದಿತ್ರಾಣಾಂ ಚ ಘೋಷೇಣ ಶಂಖಾನಾಂ ನಿಃಸ್ವನೇನ ಚ ।
ಅಭವನ್ನಾದಿತಾ ಭೂಮಿಃ ನಿರ್ಘಾತೈರಿವ ಭಾರತ ॥೧೫॥

ಭರತಕುಲೋದ್ಭವನೇ! ಕುದುರೆಗಳ ಕಾಲ್ಗೊರಸಿನ ಧ್ವನಿ, ರಥಗಳ ಗಾಲಿಯಚ್ಚಿನ ಶಬ್ದ, ಪದಾತಿಗಳ ಪಾದಾಘಾತದ ಶಬ್ದ, ಆನೆಗಳ ಘೀಳಿಡುವಿಕೆ, ವಾದ್ಯಗಳ ಘೋಷ, ಶಂಖಗಳ ತೀಕ್ಷ್ಣವಾದ ಧ್ವನಿ- ಇವುಗಳಿಂದ ಭೂಮಿಯು ಗುಡುಗಿನ ಶಬ್ದದಂತೆ ಪ್ರತಿಧ್ವನಿಸುತ್ತಿತ್ತು.

ಧನುಷಾಂ ಕೂಜಮಾನಾನಾಂ ನಿಸ್ತ್ರಿಂಶಾನಾಂ ಚ ದೀಪ್ಯತಾಮ್ ।
ಕವಚಾನಾಂ ಪ್ರಭಾಭಿಶ್ಚ ನ ಪ್ರಾಜ್ಞಾಯತ ಕಿಂಚನ ॥೧೬॥

ಬಿಲ್ಲುಗಳ ಠೇಂಕಾರ, ಪ್ರಜ್ವಲಿಸುವ ಶಸ್ತ್ರಸಮೂಹ, ಹಾಗೂ ಯೋಧರ ಕವಚಗಳ ಪ್ರಕಾಶ - ಇವುಗಳಿಂದಾಗಿ ಬೇರೆ ಯಾವುದೂ ತಿಳಿಯಲ್ಪಡುತ್ತಿರಲಿಲ್ಲ.

ಬಹವೋ ಬಾಹವಶ್ಚಿನ್ನಾ ನಾಗರಾಜಕರೋಪಮಾಃ ।
ಉದ್ವೇಷ್ಟಂತಿ ವಿಚೇಷ್ಟಂತಿ ವೇಗಂ ಕುರ್ವಂತಿ ದಾರುಣಮ್ ॥೧೭॥

ಯುದ್ಧದಲ್ಲಿ ಕತ್ತರಿಸಲ್ಪಟ್ಟ ಕೈಗಳು ಆನೆಯ ಸೊಂಡಿಲಿನಂತೆ ಕಾಣಿಸುತ್ತಿದ್ದವು. ಅವು ಈಗಷ್ಟೇ ಕಡಿದುಬಿದ್ದಿದ್ದರಿಂದ ವಿವಿಧರೀತಿಯ ಚಲನೆಯುಳ್ಳವಾಗಿದ್ದವು. ನೋಡಲು ಈ ದೃಶ್ಯ ಭಯಂಕರವಾಗಿ ಕಾಣುತ್ತಿತ್ತು.

ಶಿರಸಾಂ ಚ ಮಹಾರಾಜ ಪತತಾಂ ವಸುಧಾತಲೇ ।
ಚ್ಯುತಾನಾಮಿವ ತಾಲೇಭ್ಯಃ ಫಲಾನಾಂ ಶ್ರೂಯತೇ ಸ್ವನಃ ॥೧೮॥

ಮಹಾರಾಜ! ತಲೆಗಳು ಕಡಿದು ನೆಲದ ಮೇಲೆ ಬೀಳುವಾಗ ತಾಳೆಮರದಿಂದ ಫಲಗಳು ಬೀಳುವಾಗ ಉಂಟಾಗುವ ಧ್ವನಿಯಂತೆ ಧ್ವನಿಯು ಉಂಟಾಗುತ್ತಿತ್ತು.

ಶಿರೋಭಿಃ ಪತಿತೈರ್ಭಾತಿ ರುಧಿರಾರ್ದ್ರೈರ್ವಸುಂಧರಾ ।
ತಪನೀಯನಿಭೈಃ ಕಾಲೇ ನಲಿನೈರಿವ ಭಾರತ ॥೧೯॥

ಭರತಕುಲೋದ್ಭವನೇ! ಕೆಳಬಿದ್ದ ತಲೆಗಳಿಂದ ಸುರಿಯುತ್ತಿರುವ ರಕ್ತದಿಂದ ಭೂಮಿಯು ಆವೃತವಾಗಿ ಶೋಭಿಸುತ್ತಿತ್ತು. ಬಂಗಾರದ ಕಾಂತಿಯುಳ್ಳ ಕಮಲಗಳಿಂದ ಶೋಭಿಸುವಂತೆ ಇತ್ತು.

ಉದ್ವೃತ್ತನಯನೈಸ್ತೈಸ್ತು ಗತಸತ್ತ್ವೈರ್ಮಹೀ ತದಾ ।
ವ್ಯಭ್ರಾಜತ ಮಹಾರಾಜ ಪುಂಡರೀಕೈರಿವಾವೃತಾ ॥೨೦॥

ಕೆಳಬಿದ್ದ ತಲೆಗಳ ಕಣ್ಣುಗಳು ಮೇಲ್ಮುಖವಾಗಿದ್ದವು. ಕಣ್ಣುಗಳ ಶಕ್ತಿಯು ನಷ್ಟವಾಗಿತ್ತು. ಭೂಮಿಯು ಕಮಲಗಳಿಂದ ಆವರಿಸಲ್ಪಟ್ಟ ಹಾಗೆ ಶೋಭಿಸುತ್ತಿತ್ತು.

ಬಾಹುಭಿಶ್ಚಂದನಾದಿಗ್ಧೈಃ ಸಕೇಯೂರೈರ್ಮಹಾಹವೇ ।
ಪತಿತೈರ್ಭಾತಿ ರಾಜೇಂದ್ರ ಮಹೀ ಶಕ್ರಧ್ವಜೈರಿವ ॥೨೧॥

ಕಡಿದುಬಿದ್ದ ಕೈಗಳಲ್ಲಿ ಹಚ್ಚಿದ ಚಂದನ ಹಾಗೆಯೇ ಇತ್ತು. ಕಟ್ಟಿದ ಭುಜಾಲಂಕಾರಗಳು ಹಾಗೆಯೇ ಇದ್ದವು. ರಾಜೇಂದ್ರ! ಇಂಥ ಕೈಗಳನ್ನು ನೋಡಿದರೆ ಇಂದ್ರನ ಧ್ವಜಗಳು ಭೂಮಿಯಲ್ಲಿ ಬಿದ್ದಿರುವ ಹಾಗೆ ಕಾಣಿಸುತ್ತಿತ್ತು.

ಊರುಭಿಶ್ಚ ನರೇಂದ್ರಾಣಾಂ ವಿನಿಕೃತ್ತೈರ್ಮಹಾಹವೇ ।
ಹಸ್ತಿಹಸ್ತೋಪಮೈರನ್ಯೈಃ ಸಂವೃತಂ ತದ್ರಣಾಂಗಣಮ್ ॥೨೨॥

ಆ ಮಹಾಯುದ್ಧದಲ್ಲಿ ರಾಜರ ಬೃಹತ್ತಾದ ಕೈಗಳು ಕಡಿದು ಕೆಳಬಿದ್ದಿದ್ದವು. ಯುದ್ಧಭೂಮಿಯು ಆನೆಗಳ ಸೊಂಡಿಲುಗಳಿಂದ ಆವೃತವಾದ ಹಾಗೆ ಭಾಸಮಾನವಾಗುತ್ತಿತ್ತು.

ತೇಷಾಂ ತು ವಾಜಿನಾಂ ಭೂಮಿಃ ಖುರೈಶ್ಚಿತ್ರಾ ವಿಶಾಂಪತೇ ।
ಅಶೋಭತ ಯಥಾ ನಾರೀ ಕರಜೈಃ ಕ್ಷತವಿಕ್ಷತಾ ॥೧೩॥

ರಾಜನೇ! ಕುದುರೆಗಳ ಸಂಚಾರದಿಂದಾಗಿ ಅವುಗಳ ಗೊರಸಿನ ಆಘಾತಕ್ಕೆ ಒಳಗಾದ ಯುದ್ಧಭೂಮಿಯು ಪ್ರಿಯಕರನ ನಖಗಳಿಂದ ಗಾಯಗೊಂಡ ನಾರಿಯಂತೆ ಚಿತ್ರ ವಿಚಿತ್ರವಾಗಿ ಕಾಣಿಸುತ್ತಿತ್ತು.

ವಾಜಿನಾಂ ಖುರಶಬ್ದೇನ ರಥನೇಮಿಸ್ವನೇನ ಚ ।
ಪತ್ತೀನಾಂ ಪದಶಬ್ದೇನ ನಾಗಾನಾಂ ಬೃಂಹಿತೇನ ಚ ॥೧೪॥

ವಾದಿತ್ರಾಣಾಂ ಚ ಘೋಷೇಣ ಶಂಖಾನಾಂ ನಿಃಸ್ವನೇನ ಚ ।
ಅಭವನ್ನಾದಿತಾ ಭೂಮಿಃ ನಿರ್ಘಾತೈರಿವ ಭಾರತ ॥೧೫॥

ಭರತಕುಲೋದ್ಭವನೇ! ಕುದುರೆಗಳ ಕಾಲ್ಗೊರಸಿನ ಧ್ವನಿ, ರಥಗಳ ಗಾಲಿಯಚ್ಚಿನ ಶಬ್ದ, ಪದಾತಿಗಳ ಪಾದಾಘಾತದ ಶಬ್ದ, ಆನೆಗಳ ಘೀಳಿಡುವಿಕೆ, ವಾದ್ಯಗಳ ಘೋಷ, ಶಂಖಗಳ ತೀಕ್ಷ್ಣವಾದ ಧ್ವನಿ- ಇವುಗಳಿಂದ ಭೂಮಿಯು ಗುಡುಗಿನ ಶಬ್ದದಂತೆ ಪ್ರತಿಧ್ವನಿಸುತ್ತಿತ್ತು.

ಧನುಷಾಂ ಕೂಜಮಾನಾನಾಂ ನಿಸ್ತ್ರಿಂಶಾನಾಂ ಚ ದೀಪ್ಯತಾಮ್ ।
ಕವಚಾನಾಂ ಪ್ರಭಾಭಿಶ್ಚ ನ ಪ್ರಾಜ್ಞಾಯತ ಕಿಂಚನ ॥೧೬॥

ಬಿಲ್ಲುಗಳ ಠೇಂಕಾರ, ಪ್ರಜ್ವಲಿಸುವ ಶಸ್ತ್ರಸಮೂಹ, ಹಾಗೂ ಯೋಧರ ಕವಚಗಳ ಪ್ರಕಾಶ - ಇವುಗಳಿಂದಾಗಿ ಬೇರೆ ಯಾವುದೂ ತಿಳಿಯಲ್ಪಡುತ್ತಿರಲಿಲ್ಲ.

ಬಹವೋ ಬಾಹವಶ್ಚಿನ್ನಾ ನಾಗರಾಜಕರೋಪಮಾಃ ।
ಉದ್ವೇಷ್ಟಂತಿ ವಿಚೇಷ್ಟಂತಿ ವೇಗಂ ಕುರ್ವಂತಿ ದಾರುಣಮ್ ॥೧೭॥

ಯುದ್ಧದಲ್ಲಿ ಕತ್ತರಿಸಲ್ಪಟ್ಟ ಕೈಗಳು ಆನೆಯ ಸೊಂಡಿಲಿನಂತೆ ಕಾಣಿಸುತ್ತಿದ್ದವು. ಅವು ಈಗಷ್ಟೇ ಕಡಿದುಬಿದ್ದಿದ್ದರಿಂದ ವಿವಿಧರೀತಿಯ ಚಲನೆಯುಳ್ಳವಾಗಿದ್ದವು. ನೋಡಲು ಈ ದೃಶ್ಯ ಭಯಂಕರವಾಗಿ ಕಾಣುತ್ತಿತ್ತು.

ಶಿರಸಾಂ ಚ ಮಹಾರಾಜ ಪತತಾಂ ವಸುಧಾತಲೇ ।
ಚ್ಯುತಾನಾಮಿವ ತಾಲೇಭ್ಯಃ ಫಲಾನಾಂ ಶ್ರೂಯತೇ ಸ್ವನಃ ॥೧೮॥

ಮಹಾರಾಜ! ತಲೆಗಳು ಕಡಿದು ನೆಲದ ಮೇಲೆ ಬೀಳುವಾಗ ತಾಳೆಮರದಿಂದ ಫಲಗಳು ಬೀಳುವಾಗ ಉಂಟಾಗುವ ಧ್ವನಿಯಂತೆ ಧ್ವನಿಯು ಉಂಟಾಗುತ್ತಿತ್ತು.

ಶಿರೋಭಿಃ ಪತಿತೈರ್ಭಾತಿ ರುಧಿರಾರ್ದ್ರೈರ್ವಸುಂಧರಾ ।
ತಪನೀಯನಿಭೈಃ ಕಾಲೇ ನಲಿನೈರಿವ ಭಾರತ ॥೧೯॥

ಭರತಕುಲೋದ್ಭವನೇ! ಕೆಳಬಿದ್ದ ತಲೆಗಳಿಂದ ಸುರಿಯುತ್ತಿರುವ ರಕ್ತದಿಂದ ಭೂಮಿಯು ಆವೃತವಾಗಿ ಶೋಭಿಸುತ್ತಿತ್ತು. ಬಂಗಾರದ ಕಾಂತಿಯುಳ್ಳ ಕಮಲಗಳಿಂದ ಶೋಭಿಸುವಂತೆ ಇತ್ತು.

ಉದ್ವೃತ್ತನಯನೈಸ್ತೈಸ್ತು ಗತಸತ್ತ್ವೈರ್ಮಹೀ ತದಾ ।
ವ್ಯಭ್ರಾಜತ ಮಹಾರಾಜ ಪುಂಡರೀಕೈರಿವಾವೃತಾ ॥೨೦॥

ಕೆಳಬಿದ್ದ ತಲೆಗಳ ಕಣ್ಣುಗಳು ಮೇಲ್ಮುಖವಾಗಿದ್ದವು. ಕಣ್ಣುಗಳ ಶಕ್ತಿಯು ನಷ್ಟವಾಗಿತ್ತು. ಭೂಮಿಯು ಕಮಲಗಳಿಂದ ಆವರಿಸಲ್ಪಟ್ಟ ಹಾಗೆ ಶೋಭಿಸುತ್ತಿತ್ತು.

ಬಾಹುಭಿಶ್ಚಂದನಾದಿಗ್ಧೈಃ ಸಕೇಯೂರೈರ್ಮಹಾಹವೇ ।
ಪತಿತೈರ್ಭಾತಿ ರಾಜೇಂದ್ರ ಮಹೀ ಶಕ್ರಧ್ವಜೈರಿವ ॥೨೧॥

ಕಡಿದುಬಿದ್ದ ಕೈಗಳಲ್ಲಿ ಹಚ್ಚಿದ ಚಂದನ ಹಾಗೆಯೇ ಇತ್ತು. ಕಟ್ಟಿದ ಭುಜಾಲಂಕಾರಗಳು ಹಾಗೆಯೇ ಇದ್ದವು. ರಾಜೇಂದ್ರ! ಇಂಥ ಕೈಗಳನ್ನು ನೋಡಿದರೆ ಇಂದ್ರನ ಧ್ವಜಗಳು ಭೂಮಿಯಲ್ಲಿ ಬಿದ್ದಿರುವ ಹಾಗೆ ಕಾಣಿಸುತ್ತಿತ್ತು.

ಊರುಭಿಶ್ಚ ನರೇಂದ್ರಾಣಾಂ ವಿನಿಕೃತ್ತೈರ್ಮಹಾಹವೇ ।
ಹಸ್ತಿಹಸ್ತೋಪಮೈರನ್ಯೈಃ ಸಂವೃತಂ ತದ್ರಣಾಂಗಣಮ್ ॥೨೨॥

ಆ ಮಹಾಯುದ್ಧದಲ್ಲಿ ರಾಜರ ಬೃಹತ್ತಾದ ಕೈಗಳು ಕಡಿದು ಕೆಳಬಿದ್ದಿದ್ದವು. ಯುದ್ಧಭೂಮಿಯು ಆನೆಗಳ ಸೊಂಡಿಲುಗಳಿಂದ ಆವೃತವಾದ ಹಾಗೆ ಭಾಸಮಾನವಾಗುತ್ತಿತ್ತು.

ಕಬಂಧಶತಸಂಕೀರ್ಣಂ ಛತ್ರಚಾಮರಶೋಭಿತಮ್ ।
ಸೇನಾವನಂ ತಚ್ಛುಶುಭೇ ವನಂ ಪುಷ್ಪಚಿತಂ ಯಥಾ ॥೨೩॥

ತಲೆಕಡಿದ ಶರೀರಗಳು ರಣರಂಗದಲ್ಲಿ ತುಂಬಿಹೋಗಿದ್ದವು. ಕೆಳಗೆ ಬಿದ್ದ ಛತ್ರ-ಚಾಮರಗಳಿಂದ ಯುದ್ಧಭೂಮಿಯು ಶೋಭಿಸುತ್ತಿತ್ತು. ಹೀಗೆ ಸೇನೆಯು ಪುಷ್ಪಭರಿತವಾದ ವಿಶಾಲ ವನದಂತೆ ಪ್ರಕಾಶಿಸುತ್ತಿತ್ತು.

ತತ್ರ ಯೋಧಾ ಮಹಾರಾಜ ವಿಚರಂತೋ ಹ್ಯಭೀತವತ್ ।
ದೃಶ್ಯಂತೇ ರುಧಿರಾರ್ದ್ರಾಂಗಾಃ ಪುಷ್ಪಿತಾ ಇವ ಕಿಂಶುಕಾಃ ॥೨೪॥

ಮಹಾರಾಜ! ಆ ರಣರಂಗದಲ್ಲಿ ಯೋಧರು ರಕ್ತಸಿಕ್ತವಾದ ಶರೀರದೊಂದಿಗೆ ಯಾವುದೇ ಭಯವಿಲ್ಲದೆ ಸಂಚರಿಸುತ್ತಿದ್ದರು. ಪಲಾಶ ವೃಕ್ಷವು ಹೂಬಿಟ್ಟ ಹಾಗೆ ಕಾಣಿಸುತ್ತಿತ್ತು.

ಮಾತಂಗಾಶ್ಚಾಪ್ಯದೃಶ್ಯಂತ ಶರತೋಮರಪೀಡಿತಾಃ ।
ಪತಂತಸ್ತತ್ರ ತತ್ರೈವ ಶ್ವೇತಾಭ್ರಸದೃಶಾ ರಣೇ ॥೨೫॥

ಬಾಣ ಹಾಗೂ ತೋಮರ ಆಯುಧಗಳಿಂದ ಪೆಟ್ಟು ತಿಂದ ಆನೆಗಳು ರಣರಂಗದಲ್ಲಿ ಬಿದ್ದಿವೆ. ಅದು ಬೆಳ್ಳಗಿನ ಮೋಡಗಳೇ ನೆಲದಲ್ಲಿ ಬಿದ್ದ ಹಾಗೆ ಕಾಣುತ್ತಿತ್ತು.

ಗಜಾನೀಕಂ ಮಹಾರಾಜ ವಧ್ಯಮಾನಂ ಮಹಾರಥೈಃ ।
ವ್ಯಕೀರ್ಯತ ದಿಶಃ ಸರ್ವಾ ವಾತನುನ್ನಾ ಘನಾ ಇವ ॥೨೬॥

ಮಹಾರಾಜ! ಮಹಾರಥರು ಗಜಸೈನ್ಯದ ಮೇಲೆ ಆಕ್ರಮಣ ಮಾಡಿದರು. ಆಗ ಗಾಳಿಗೆ ಸಿಲುಕಿದ ಮೋಡಗಳಂತೆ ಎಲ್ಲಾ ದಿಕ್ಕುಗಳಲ್ಲಿಯೂ ಆ ಆನೆಗಳು ಓಡತೊಡಗಿದವು.

ತೇ ಗಜಾ ಗಿರಿಸಂಕಾಶಾಃ ಪೇತುರುರ್ವ್ಯಾಂ ಸಮಂತತಃ ।
ವಜ್ರಭಿನ್ನಾ ಇವ ಬಭುಃ ಪರ್ವತಾ ಯುಗಪರ್ಯಯೇ ॥೨೭॥

ಆಕ್ರಮಣಕ್ಕೆ ಒಳಗಾದ ಆ ಪರ್ವತದಷ್ಟು ದೊಡ್ಡದಾದ ಆನೆಗಳು ಯುಗಾವಸಾನದಲ್ಲಿ ವಜ್ರಾಯುಧದಿಂದ ಪೆಟ್ಟು ತಿಂದ ಪರ್ವತಗಳಂತೆ ಭೂಮಿಯಲ್ಲಿ ಎಲ್ಲೆಂದರಲ್ಲಿ ಬಿದ್ದವು.

ಹಯಾನಾಂ ಸಾದಿಭಿಃ ಸಾರ್ಧಂ ಪತಿತಾನಾಂ ಮಹೀತಲೇ ।
ರಾಶಯಃ ಪ್ರತ್ಯದೃಶ್ಯಂತ ಗಿರಿಮಾತ್ರಾಸ್ತತಸ್ತತಃ ॥೨೮॥

ನೆಲದಲ್ಲಿ ಕುದುರೆ ಮತ್ತು ರಥದ ಜೊತೆಗೆ ಯೋಧರು ಪರ್ವತಾಕಾರದಲ್ಲಿ ರಾಶಿ-ರಾಶಿಯಾಗಿ ಬಿದ್ದಿದ್ದು ಕಂಡುಬಂತು.

ಸಂಜಜ್ಞೇ ರಣಭೂಮೌ ತು ಪರಲೋಕವಹಾ ನದೀ ।
ಶೋಣಿತೋದಾ ರಥಾವರ್ತಾ ಧ್ವಜವೃಕ್ಷಾಸ್ಥಿಶರ್ಕರಾ ॥೨೯॥

ಪರಲೋಕದ ಕಡೆಗೆ ಹರಿಯುವ ನದಿಯೊಂದು ರಣಭೂಮಿಯಲ್ಲಿ ಹುಟ್ಟಿಕೊಂಡಿತು. ರಕ್ತವೇ ಅದರಲ್ಲಿ ಹರಿಯುವ ನೀರು. ರಥಗಳೇ ಆ ನದಿಯಲ್ಲಿ ಕಾಣಿಸುವ ಸುಳಿಗಳು. ಧ್ವಜಗಳೇ ತೀರದಲ್ಲಿ ಇರುವ ವೃಕ್ಷಗಳು. ಎಲುಬುಗಳೇ ಕಲ್ಲು-ಮರಳು.

ಭುಜನಕ್ರಾ ಧನುಃಸ್ರೋತಾ ಹಸ್ತಿಶೈಲಾ ಹಯೋರಗಾ ।
ಮೇದೋಮಜ್ಜಾಕರ್ದಮಿನೀ ಛತ್ರಹಂಸೋಪಶೋಭಿತಾ ॥೩೦॥

ಕೆಳಬಿದ್ದಿರುವ ಕೈಗಳೇ ಮೊಸಳೆಗಳು. ಕೆಳಗೆ ಬಿದ್ದಿರುವ ಬಿಲ್ಲುಗಳೇ ಜಲಸ್ರೋತಸ್ಸುಗಳು. ಆನೆಗಳೇ ನದಿಬದಿಯಲ್ಲಿ ಕಾಣುವ ಪರ್ವತಶಿಖರಗಳು. ಕುದುರೆಗಳೇ ಸರ್ಪಗಳು. ಮೇದಸ್ಸು ಮಜ್ಜಗಳೇ ಕೆಸರು. ರಥದ ಛತ್ರಗಳೇ ಓಡಾಡುವ ಹಂಸಪಕ್ಷಿಗಳು.

ಕವಚೋಷ್ಣೀಷಸಂಛನ್ನಾ ಪತಾಕಾರುಚಿರದ್ರುಮಾ ।
ಚಕ್ರನಕ್ರಾವಲೀಜುಷ್ಟಾ ತ್ರಿವೇಣೂರಗಸಂವೃತಾ ॥೩೧॥

ಕವಚ-ತಲೆಮುಂಡಾಸುಗಳಿಂದ ಈ ನದಿಯು ಆವೃತವಾಗಿದೆ. ಹಾರುವ ಪತಾಕೆಗಳು ಸುಂದರವಾದ ಮರಗಳಂತಿವೆ. ಚಕ್ರಗಳೇ ಚಕ್ರವಾಕಪಕ್ಷಿಗಳು. ತ್ರಿವೇಣುಗಳೆಂಬ ಸರ್ಪಗಳು ಈ ನದಿಯಲ್ಲಿ ತುಂಬಿಕೊಂಡಿವೆ.

ಶೂರಾಣಾಂ ಹರ್ಷಜನನೀ ಭೀರೂಣಾಂ ಭಯವರ್ಧನೀ ।
ಪ್ರಾವರ್ತತ ನದೀ ರೌದ್ರಾ ಕುರುಸೃಂಜಯಸಂಕುಲೇ ॥೩೨॥

ಕಬಂಧಶತಸಂಕೀರ್ಣಂ ಛತ್ರಚಾಮರಶೋಭಿತಮ್ ।
ಸೇನಾವನಂ ತಚ್ಚುಶುಭೇ ವನಂ ಪುಷ್ಪಚಿತಂ ಯಥಾ ॥೨೩॥

ತಲೆಕಡಿದ ಶರೀರಗಳು ರಣರಂಗದಲ್ಲಿ ತುಂಬಿಹೋಗಿದ್ದವು. ಕೆಳಗೆ ಬಿದ್ದ ಛತ್ರ-ಚಾಮರಗಳಿಂದ ಯುದ್ಧಭೂಮಿಯು ಶೋಭಿಸುತ್ತಿತ್ತು. ಹೀಗೆ ಸೇನೆಯು ಪುಷ್ಪಭರಿತವಾದ ವಿಶಾಲ ವನದಂತೆ ಪ್ರಕಾಶಿಸುತ್ತಿತ್ತು.

ತತ್ರ ಯೋಧಾ ಮಹಾರಾಜ ವಿಚರಂತೋ ಹ್ಯಭೀತವತ್ ।
ದೃಶ್ಯಂತೇ ರುಧಿರಾರ್ದ್ರಾಂಗಾಃ ಪುಷ್ಪಿತಾ ಇವ ಕಿಂಶುಕಾಃ ॥೨೪॥

ಮಹಾರಾಜ! ಆ ರಣರಂಗದಲ್ಲಿ ಯೋಧರು ರಕ್ತಸಿಕ್ತವಾದ ಶರೀರದೊಂದಿಗೆ ಯಾವುದೇ ಭಯವಿಲ್ಲದೆ ಸಂಚರಿಸುತ್ತಿದ್ದರು. ಪಲಾಶ ವೃಕ್ಷವು ಹೂಬಿಟ್ಟ ಹಾಗೆ ಕಾಣಿಸುತ್ತಿತ್ತು.

ಮಾತಂಗಾಶ್ಚಾಪ್ಯದೃಶ್ಯಂತ ಶರತೋಮರಪೀಡಿತಾಃ ।
ಪತಂತಸ್ತತ್ರ ತತ್ರೈವ ಶ್ವೇತಾಭ್ರಸದೃಶಾ ರಣೇ ॥೨೫॥

ಬಾಣ ಹಾಗೂ ತೋಮರ ಆಯುಧಗಳಿಂದ ಪೆಟ್ಟು ತಿಂದ ಆನೆಗಳು ರಣರಂಗದಲ್ಲಿ ಬಿದ್ದಿವೆ. ಅದು ಬೆಳ್ಳಗಿನ ಮೋಡಗಳೇ ನೆಲದಲ್ಲಿ ಬಿದ್ದ ಹಾಗೆ ಕಾಣುತ್ತಿತ್ತು.

ಗಜಾನೀಕಂ ಮಹಾರಾಜ ವಧ್ಯಮಾನಂ ಮಹಾರಥೈಃ ।
ವ್ಯಕೀರ್ಯತ ದಿಶಃ ಸರ್ವಾ ವಾತನುನ್ನಾ ಘನಾ ಇವ ॥೨೬॥

ಮಹಾರಾಜ! ಮಹಾರಥರು ಗಜಸೈನ್ಯದ ಮೇಲೆ ಆಕ್ರಮಣ ಮಾಡಿದರು. ಆಗ ಗಾಳಿಗೆ ಸಿಲುಕಿದ ಮೋಡಗಳಂತೆ ಎಲ್ಲಾ ದಿಕ್ಕುಗಳಲ್ಲಿಯೂ ಆ ಆನೆಗಳು ಓಡತೊಡಗಿದವು.

ತೇ ಗಜಾ ಗಿರಿಸಂಕಾಶಾಃ ಪೇತುರುರ್ವ್ಯಾಂ ಸಮಂತತಃ ।
ವಜ್ರಭಿನ್ನಾ ಇವ ಬಭುಃ ಪರ್ವತಾ ಯುಗಪರ್ಯಯೇ ॥೨೭॥

ಆಕ್ರಮಣಕ್ಕೆ ಒಳಗಾದ ಆ ಪರ್ವತದಷ್ಟು ದೊಡ್ಡದಾದ ಆನೆಗಳು ಯುಗಾವಸಾನದಲ್ಲಿ ವಜ್ರಾಯುಧದಿಂದ ಪೆಟ್ಟುತಿಂದ ಪರ್ವತಗಳಂತೆ ಭೂಮಿಯಲ್ಲಿ ಎಲ್ಲೆಂದರಲ್ಲಿ ಬಿದ್ದವು.

ಹಯಾನಾಂ ಸಾದಿಭಿಃ ಸಾರ್ಧಂ ಪತಿತಾನಾಂ ಮಹೀತಳೇ ।
ರಾಶಯಃ ಪ್ರತ್ಯದೃಶ್ಯಂತ ಗಿರಿಮಾತ್ರಾಸ್ತತಸ್ತತಃ ॥೨೮॥

ನೆಲದಲ್ಲಿ ಕುದುರೆ ಮತ್ತು ರಥದ ಜೊತೆಗೆ ಯೋಧರು ಪರ್ವತಾಕಾರದಲ್ಲಿ ರಾಶಿ-ರಾಶಿಯಾಗಿ ಬಿದ್ದಿದ್ದು ಕಂಡುಬಂತು.

ಸಂಜಜ್ಞೇ ರಣಭೂಮೌ ತು ಪರಲೋಕವಹಾ ನದೀ ।
ಶೋಣಿತೋದಾ ರಥಾವರ್ತಾ ಧ್ವಜವೃಕ್ಷಾಸ್ಥಿಶರ್ಕರಾ ॥೨೯॥

ಪರಲೋಕದ ಕಡೆಗೆ ಹರಿಯುವ ನದಿಯೊಂದು ರಣಭೂಮಿಯಲ್ಲಿ ಹುಟ್ಟಿಕೊಂಡಿತು. ರಕ್ತವೇ ಅದರಲ್ಲಿ ಹರಿಯುವ ನೀರು. ರಥಗಳೇ ಆ ನದಿಯಲ್ಲಿ ಕಾಣಿಸುವ ಸುಳಿಗಳು. ಧ್ವಜಗಳೇ ತೀರದಲ್ಲಿ ಇರುವ ವೃಕ್ಷಗಳು. ಎಲುಬುಗಳೇ ಕಲ್ಲು-ಮರಳು.

ಭುಜನಕ್ರಾ ಧನುಃಸ್ರೋತಾ ಹಸ್ತಿಶೈಲಾ ಹಯೋರಗಾ ।
ಮೇದೋಮಜ್ಜಾಕರ್ದಮಿನೀ ಛತ್ರಹಂಸೋಪಶೋಭಿತಾ ॥೩೦॥

ಕೆಳಬಿದ್ದಿರುವ ಕೈಗಳೇ ಮೊಸಳೆಗಳು. ಕೆಳಗೆ ಬಿದ್ದಿರುವ ಬಿಲ್ಲುಗಳೇ ಜಲಸ್ರೋತಸ್ಸುಗಳು. ಆನೆಗಳೇ ನದಿಬದಿಯಲ್ಲಿ ಕಾಣುವ ಪರ್ವತಶಿಖರಗಳು. ಕುದುರೆಗಳೇ ಸರ್ಪಗಳು. ಮೇದಸ್ಸು ಮಜ್ಜಗಳೇ ಕೆಸರು. ರಥದ ಛತ್ರಗಳೇ ಓಡಾಡುವ ಹಂಸಪಕ್ಷಿಗಳು.

ಕವಚೋಷ್ಣೀಷಸಂಛನ್ನಾ ಪತಾಕಾರುಚಿರದ್ರುಮಾ ।
ಚಕ್ರನಕ್ರಾವಲೀಜುಷ್ಟಾ ತ್ರಿವೇಣೂರಗಸಂವೃತಾ ॥೩೧॥

ಕವಚ-ತಲೆಮುಂಡಾಸುಗಳಿಂದ ಈ ನದಿಯು ಆವೃತವಾಗಿದೆ. ಹಾರುವ ಪತಾಕೆಗಳು ಸುಂದರವಾದ ಮರಗಳಂತಿವೆ. ಚಕ್ರಗಳೇ ಚಕ್ರವಾಕಪಕ್ಷಿಗಳು. ತ್ರಿವೇಣುಗಳೆಂಬ ಸರ್ಪಗಳು ಈ ನದಿಯಲ್ಲಿ ತುಂಬಿಕೊಂಡಿವೆ.

ಶೂರಾಣಾಂ ಹರ್ಷಜನನೀ ಭೀರೂಣಾಂ ಭಯವರ್ಧನೀ ।
ಪ್ರಾವರ್ತತ ನದೀ ರೌದ್ರಾ ಕುರುಸೃಂಜಯಸಂಕುಲೇ ॥೩೨॥

ಈ ನದಿಯು ಶೂರರಿಗೆ ಆನಂದವನ್ನುಂಟುಮಾಡುವುದು. ಭೀತರಿಗೆ ಭಯವನ್ನು ಹೆಚ್ಚಿಸುವಂತಹುದು. ಕೌರವರ-ಸೃಂಜಯರ ಯುದ್ಧದಲ್ಲಿ ಘೋರವಾದ ಈ ರಕ್ತದ ನದಿಯು ಹರಿಯಿತು.

ತಾಂ ನದೀಂ ಪಿತೃಲೋಕಾಯ ವಹಂತೀಮತಿಭೈರವಾಮ್ ।
ತೇರುರ್ವಾಹನನೌಭಿಸ್ತೇ ಶೂರಾಃ ಪರಿಘಬಾಹವಃ ॥೩೩॥

ಪಿತೃಲೋಕಕ್ಕೆ ಕರೆದೊಯ್ಯುವ ಆ ಅತಿಭಯಂಕರವಾದ ನದಿಯನ್ನು ಪರಿಘಾಯುಧವನ್ನು ಹಿಡಿದುಕೊಂಡಿರುವ ಶೂರಯೋಧರು ವಾಹನವೆಂಬ ನಾವೆಯಿಂದ ದಾಟಿದರು.

ವರ್ತಮಾನೇ ತಥಾ ಯುದ್ಧೇ ನಿರ್ಮರ್ಯಾದೇ ವಿಶಾಂಪತೇ ।
ಚತುರಂಗಕ್ಷಯೇ ಘೋರೇ ಯುದ್ಧೇ ದೇವಾಸುರೋಪಮೇ ॥೩೪॥

ಆಕ್ರೋಶನ್ ಬಾಂಧವಾಶ್ಚಾನ್ಯೇ ಭಯಾರ್ತಾನಾಂ ನಿವರ್ತನೇ ॥೩೫॥

ರಾಜನೇ! ಮಿತಿಯಿಲ್ಲದೆ ಯುದ್ಧವು ನಡೆಯುತ್ತಿತ್ತು. ದೇವಾಸುರರ ಯುದ್ಧದಂತಿರುವ ಆ ಯುದ್ಧದಲ್ಲಿ ಚತುರಂಗಸೇನೆಯೂ ನಾಶವಾಗುತ್ತಿತ್ತು. ಇಂತಹ ಯುದ್ಧದಲ್ಲಿ ಭಯಗ್ರಸ್ತರಾದವರನ್ನು ಯುದ್ಧಮಾಡದೆ ಹಿಂತಿರುಗಿಬರುವಂತೆ ಕೆಲವು ಬಾಂಧವರು ಕೂಗಿ ಹೇಳುತ್ತಿದ್ದರು.

ನಿರ್ಮರ್ಯಾದೇ ತಥಾ ಯುದ್ಧೇ ವರ್ತಮಾನೇ ಭಯಾನಕೇ ।
ಅರ್ಜುನೋ ಭೀಮಸೇನಶ್ಚ ಮೋಹಯಾಂಚಕ್ರತುಃ ಪರಾನ್ ॥೩೬॥

ಅಮಿತವಾದ ಹಾಗೂ ಭಯಾನಕವಾದ ಯುದ್ಧದಲ್ಲಿ ಅರ್ಜುನ ಮತ್ತು ಭೀಮಸೇನನು ಶತ್ರುಗಳನ್ನು ಮೂರ್ಛೆಬೀಳಿಸಿದರು.

ಸಾ ವಧ್ಯಮಾನಾ ಮಹತೀ ಸೇನಾ ತವ ಜನಾಧಿಪ ।
ಅಮುಹ್ಯತ್ ತತ್ರ ತತ್ರೈವ ಯೋಷಿನ್ಮದವಶಾದಿವ ॥೩೭॥

ಜನನಾಯಕನೇ! ಹೀಗೆ ಆಕ್ರಮಣಕ್ಕೊಳಗಾದ ನಿನ್ನ ಸೈನ್ಯವು ಸ್ತ್ರೀಯರ ಮದಾಸವಕ್ಕೆ ಒಳಗಾಗಿ ಮೂರ್ಛೆ ಹೋದಂತೆ ಮೂರ್ಛೆ ಹೊಂದಿತು.

ಮೋಹಯಿತ್ವಾ ಚ ತಾಂ ಸೇನಾಂ ಭೀಮಸೇನಧನಂಜಯೌ ।
ದಧ್ಮತುರ್ವಾರಿಜೌ ತತ್ರ ಸಿಂಹನಾದಂ ಚ ನೇದತುಃ ॥೩೮॥

ಭೀಮ ಮತ್ತು ಅರ್ಜುನರು ನಿನ್ನ ಸೇನೆಯನ್ನು ಮೋಹಗೊಳಿಸಿ ತಮ್ಮ ತಮ್ಮ ಶಂಖವನ್ನು ಊದುತ್ತಾ ಸಿಂಹನಾದವನ್ನು ಮಾಡಿದರು.

ಶ್ರುತ್ವೈವ ಚ ಮಹಾಶಬ್ದಂ ಧೃಷ್ಟದ್ಯುಮ್ನಶಿಖಂಡಿನೌ ।
ಧರ್ಮರಾಜಂ ಪುರಸ್ಕೃತ್ಯ ಮದ್ರರಾಜಮಭಿದ್ರುತೌ ॥೩೯॥

ಈ ಮಹಾನಾದವನ್ನು ಕೇಳಿದೊಡನೆಯೇ ಧೃಷ್ಟದ್ಯುಮ್ನ ಮತ್ತು ಶಿಖಂಡಿಯು ಧರ್ಮರಾಜರನ್ನು ಮುಂದಿಟ್ಟುಕೊಂಡು ಶಲ್ಯನ ಎದುರು ಯುದ್ಧಕ್ಕೆ ಬಂದರು.

ತತ್ರಾಶ್ಚರ್ಯಮಪಶ್ಯಾಮ ಘೋರರೂಪಂ ವಿಶಾಂಪತೇ ।
ಶಲ್ಯೇನ ಸಂಗತಾಃ ಶೂರಾ ಯದಯುಧ್ಯಂತ ಭಾಗಶಃ ॥೪೦॥

ರಾಜನೇ! ಅಲ್ಲೊಂದು ಭಯಂಕರವಾದ ಆಶ್ಚರ್ಯವು ನಡೆದದ್ದನ್ನು ನೋಡಿದೆವು. ಶಲ್ಯನೊಡನೆ ಸೇರಿಕೊಂಡ ಶೂರರು ಬೇರೆ ಬೇರೆ ವಿಭಾಗಗಳಲ್ಲಿ ಯುದ್ಧಮಾಡಿದರು.

ಮಾದ್ರೀಪುತ್ರೌ ಸರಭಸೌ ಕೃತಾಸ್ತ್ರೌ ಯುದ್ಧದುರ್ಮದೌ ।
ಅಭೀತೌ ತ್ವರಯಾ ಯುಕ್ತೌ ಜಿಗೀಷಂತೌ ಬಲಂ ತವ ॥೪೧॥

ಮಾದ್ರಿಯ ಮಕ್ಕಳಾದ ನಕುಲ-ಸಹದೇವರು ಅಸ್ತ್ರಧಾರಿಗಳಾಗಿ ಯುದ್ಧಕ್ಕೆ ಸನ್ನದ್ಧರಾದರು. ಯುದ್ಧದಲ್ಲಿ ಯಾರೂ ಅವರನ್ನು ಗೆಲ್ಲಲು ಸಾಧ್ಯವಿಲ್ಲ. ಭಯವೆಂಬುದು ಅವರ ಜಾಯಮಾನಗುಣವಲ್ಲ. ಅವರು ನಿನ್ನ ಸೈನ್ಯವನ್ನು ಗೆಲ್ಲುವ ಉದ್ದೇಶದಿಂದ ಶೀಘ್ರವಾಗಿ ಯುದ್ಧದಲ್ಲಿ ಸೇರಿಕೊಂಡರು.

ತತೋಽಭ್ಯವರ್ತತ ಬಲಂ ತಾವಕಂ ಭರತರ್ಷಭ ।
ತತಃ ಶರಪ್ರವೃದ್ಧಶ್ಚ ಪಾಂಡವೈರ್ಜಿತಕಾಶಿಭಿಃ ॥೪೨॥

ಭರತಶ್ರೇಷ್ಠನೇ! ನಿನ್ನ ಸೈನ್ಯವು ಕೂಡ ಧೈರ್ಯದಿಂದ ಯುದ್ಧಕ್ಕೆ ಮುನ್ನುಗ್ಗಿತು. ಜಯವನ್ನು ಹೊಂದುವ ಇಚ್ಛೆಯುಳ್ಳ ಪಾಂಡವರು ಆ ಸೈನ್ಯವನ್ನು ಎದುರಿಸಿದರು.

ವಧ್ಯಮಾನಾ ಚಮೂಃ ಸಾ ತು ಪುತ್ರಾಣಾಂ ಪ್ರೇಕ್ಷತಾಂ ತವ ॥೪೩॥

ನಿನ್ನ ಮಕ್ಕಳು ನೋಡುತ್ತಿದ್ದಂತೆಯೇ ನಿನ್ನ ಆ ಸೈನ್ಯವು ನಾಶ ಹೊಂದಿತು.

ಭೇಜೇ ದಶ ದಿಶೋ ರಾಜನ್ ಪ್ರಣುನ್ನಾ ದೃಢವಿಕ್ರಮೈಃ ॥೪೪॥

ರಾಜನೇ! ಗಟ್ಟಿಯಾದ ವಿಕ್ರಮವುಳ್ಳ ಪಾಂಡವರಿಂದ ದಾಳಿಗೊಳಗಾದ ನಿನ್ನ ಸೈನ್ಯವು ಹತ್ತು ದಿಕ್ಕುಗಳಲ್ಲಿಯೂ ಓಡತೊಡಗಿತು.

ಹಾಹಾಕಾರೋ ಮಹಾನ್ ಜಜ್ಞೇ ಯೋಧಾನಾಂ ತವ ಭಾರತ ॥೪೫॥

ಭರತಕುಲೋದ್ಭವನೇ! ನಿನ್ನಯೋಧರು ಜೋರಾಗಿ ಹಾಹಾಕಾರವನ್ನು ಮಾಡಿದರು.

ತಿಷ್ಠ ತಿಷ್ಠೇತಿ ವಾಗಾಸೀದ್ ದ್ರಾವಿತಾನಾಂ ಮಹಾತ್ಮಭಿಃ ।
ಕ್ಷತ್ರಿಯಾಣಾಂ ತದಾऽನ್ಯೋನ್ಯಂ ಸಂಗ್ರಾಮೇ ಜಯಮಿಚ್ಛತಾಮ್॥೪೬॥

ಮಹಾಪರಾಕ್ರಮಿಗಳಿಂದ ನಿನ್ನ ಸೈನ್ಯವು ಓಡಿಸಲ್ಪಟ್ಟಾಗ ನಿಲ್ಲು! ನಿಲ್ಲು! ಎಂಬ ಮಾತು ಕೇಳಿಬಂದಿತು. ಜಯವನ್ನು ಬಯಸುವ ಕ್ಷತ್ರಿಯರು ಪುನಃ ಪರಸ್ಪರವಾಗಿ ಕಾದಾಡಿದರು.

ಪ್ರಾದ್ರವಂತೇ ಚ ಭಗ್ನಾಸ್ತೇ ಪಾಂಡವೈಸ್ತವ ಸೈನಿಕಾಃ ।
ತ್ಯಕ್ತ್ವಾ ಯುದ್ಧೇ ಪ್ರಿಯಾನ್ ಪುತ್ರಾನ್ ಭ್ರಾತೃನಪಿ ಪಿತಾಮಹಾನ್ ॥

ಪಾಂಡವರಿಂದ ಭಗ್ನರಾದ ನಿನ್ನ ಸೈನಿಕರು ಪ್ರಿಯರಾದ ಮಕ್ಕಳನ್ನು, ಸಹೋದರರನ್ನು ಹಾಗೂ ತಾತಂದಿರನ್ನು ಬಿಟ್ಟು ಓಡಿಹೋದರು.

ಮಾತುಲಾನ್ ಭಾಗಿನೇಯಾಂಶ್ಚ ತಥಾ ಸಂಬಂಧಿಬಾಂಧವಾನ್ ।
ಹಯಾ ದ್ವಿಪಾಶ್ಚ ರಥಿನೋ ಭಿಯಾ ಜಗ್ಮುಃ ಸಮಂತತಃ ॥೪೮॥

ಸೋದರಮಾವಂದಿರನ್ನು, ಸೋದರ ಅಳಿಯಂದಿರನ್ನು, ಸಂಬಂಧಿಗಳನ್ನು, ಬಾಂಧವರನ್ನೂ ಬಿಟ್ಟು ಓಡಿಹೋದರು. ಕುದುರೆಗಳು, ಆನೆಗಳು, ರಥಿಕರು ಎಲ್ಲಾ ಕಡೆಗಳಲ್ಲಿಯೂ ಭಯದಿಂದ ಹೊರಟುಹೋದರು.

ಆತ್ಮತ್ರಾಣಕೃತೋತ್ಸಾಹಾಸ್ತಾವಕಾ ಭರತರ್ಷಭ ॥೪೯॥

ಭರತೋತ್ತಮನೇ! ನಿನ್ನ ಕಡೆಯವರಿಗೆ ತಮ್ಮ ಪ್ರಾಣರಕ್ಷಣೆಯಲ್ಲಿಯೇ ಅತಿಯಾದ ಉತ್ಸಾಹವಿತ್ತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತನೆಯ ಅಧ್ಯಾಯ

ನಕುಲನು ಕರ್ಣನ ಮೂವರು ಮಕ್ಕಳನ್ನೂ ವಧಿಸಿದ್ದು

ಸಂಜಯಃ

ತತ್ ಪ್ರಭಗ್ನಂ ಬಲಂ ದೃಷ್ಟ್ವಾ ತಾವಕಾ ಭರತರ್ಷಭ ।
ಮದ್ರರಾಜಂ ಪುರಸ್ಕೃತ್ಯ ಜಗ್ಮುರ್ಯುದ್ಧಾಯ ಭಾರತ ॥೧॥

ಸಂಜಯ– ಭಾರತೋತ್ತಮನೇ! ನಿನ್ನ ಕಡೆಯವರು ತಮ್ಮ ಸೈನ್ಯವು ನಾಶವಾದುದನ್ನು ಕಂಡು, ಭಾರತ! ಶಲ್ಯನನ್ನು ಮುಂದುಮಾಡಿಕೊಂಡು ಯುದ್ಧಕ್ಕೆ ತೆರಳಿದರು.

ಮದ್ರರಾಜೋ ಮಹಾರಾಜ ಸಾರಥಿಂ ವಾಕ್ಯಮಬ್ರವೀತ್ ॥೨॥

ಮಹಾರಾಜ! ಶಲ್ಯನು ತನ್ನ ಸಾರಥಿಗೆ ಹೀಗೆ ಹೇಳುತ್ತಾನೆ.

ಶಲ್ಯಃ

ಏಷ ತಿಷ್ಠತಿ ವೈ ರಾಜಾ ಪಾಂಡುಪುತ್ರೋ ಯುಧಿಷ್ಠಿರಃ ।
ಛತ್ರೇಣ ಧ್ರಿಯಮಾಣೇನ ಪಾಂಡುರೇಣ ವಿರಾಜತಾ ॥೩॥

ತತ್ರ ಮಾಂ ಪ್ರಾಪಯ ಕ್ಷಿಪ್ರಂ ಸಾರಥೇ ಪಶ್ಯ ಮೇ ಬಲಮ್ ।
ನ ಸಮರ್ಥಾಸ್ತು ಮೇ ಪಾರ್ಥಾಃ ಸ್ಥಾತುಮದ್ಯಾಗ್ರತೋ ಯುಧಿ ॥೪॥

ಶಲ್ಯ– ರಾಜನಾದ ಪಾಂಡುಪುತ್ರಯುಧಿಷ್ಠಿರನು ಬೆಳ್ಳಗಿನ ಛತ್ರದಡಿಯಲ್ಲಿ ನಿಂತಿರುತ್ತಾನೆ. ಸಾರಥಿಯೇ! ಆ ಸ್ಥಳಕ್ಕೆ ಬೇಗನೇ ಕರದುಕೊಂಡು ಹೋಗು. ನನ್ನ

ಬಲ ಮತ್ತು ಸೈನ್ಯವನ್ನು ನೋಡು. ಇಂದಿನ ಯುದ್ಧದಲ್ಲಿ ಪಾಂಡವರು ನನ್ನ ಮುಂದೆ ನಿಲ್ಲಲು ಸಮರ್ಥರಾಗುವುದಿಲ್ಲ.

ಸಂಜಯಃ

ಏವಮುಕ್ತಸ್ತತಃ ಪ್ರಾಯಾನ್ಮದ್ರರಾಜಸ್ಯ ಸಾರಥಿಃ ।
ಯತ್ರ ರಾಜಾ ಧರ್ಮಪುತ್ರಃ ಸತ್ಯಸಂಧೋ ಯುಧಿಷ್ಠಿರಃ ॥೫॥

ಸಂಜಯ– ಇದನ್ನು ಕೇಳಿಸಿಕೊಂಡ ಸಾರಥಿಯು ಸತ್ಯನಿಷ್ಠನಾದ ಯುಧಿಷ್ಠಿರ ಇದ್ದಲ್ಲಿಗೆ ಕರೆದುಕೊಂಡು ಹೋದನು.

ಆಪತತ್ ತಚ್ಚ ಸಹಸಾ ಪಾಂಡವಾನಾಂ ಮಹದ್ಬಲಮ್ ।
ದಧಾರೈಕೋ ರಣೇ ಶಲ್ಯೋ ವೇಲೇವೋದ್ಭೂತಮರ್ಣವಮ್ ॥೬॥

ಕೂಡಲೇ ಪಾಂಡವರ ದೊಡ್ಡದಾದ ಸೇನೆಯು ಕೌರವರ ಸೈನ್ಯದ ಮೇಲೆ ಎರಗಿತು. ಯುದ್ಧದಲ್ಲಿ ಶಲ್ಯನೊಬ್ಬನೇ, ಉಕ್ಕಿಬಂದ ಸಮುದ್ರವನ್ನು ತೀರವು ತಡೆಯುವಂತೆ ತಡೆದನು.

ಪಾಂಡವಾನಾಂ ಬಲೌಘಸ್ತು ಶಲ್ಯಮಾಸಾದ್ಯ ಮಾರಿಷ ।
ವ್ಯತಿಷ್ಠತ ತದಾ ಯುದ್ಧೇ ಸಿಂಧೋರ್ವೇಗ ಇವಾಚಲಮ್ ॥೭॥

ರಾಜನೇ! ಯುದ್ಧದಲ್ಲಿ ಪಾಂಡವರ ಸೈನ್ಯಸಮೂಹವು ಶಲ್ಯನ ಬಳಿ ಬಂದು ನಿಂತು ಬಿಟ್ಟಿತು. ಇದು ಪರ್ವತದ ಬಳಿ ಸಾಗರದ ವೇಗವು ನಿಂತ ಹಾಗೆ ಇತ್ತು.

ಮದ್ರರಾಜಂ ತು ಸಮರೇ ದೃಷ್ಟ್ವಾ ಯುದ್ಧಾಯ ವಿಷ್ಠಿತಮ್ ।
ಕುರವಃ ಸನ್ನ್ಯವರ್ತಂತ ಮೃತ್ಯುಂ ಕೃತ್ವಾ ನಿವರ್ತನಮ್ ॥೮॥

ಶಲ್ಯನು ಯುದ್ಧಮಾಡಲು ರಣರಂಗದಲ್ಲಿ ನಿಂತಿರುವುದನ್ನು ಕಂಡು ಕೌರವರು ಮೃತ್ಯುವನ್ನೇ ಹಿಂದಿಕ್ಕಿ ಯುದ್ಧಕ್ಕೆ ಮರಳಿದರು.

ತೇಷು ರಾಜನ್ನಿವೃತ್ತೇಷು ವ್ಯೂಢಾನೀಕೇಷು ಭಾಗಶಃ ।
ಪ್ರಾವರ್ತತ ಮಹಾರೌದ್ರಃ ಸಂಗ್ರಾಮಃ ಶೋಣಿತೋದಕಃ ॥೯॥

ಹೀಗೆ ಅವರು ಹಿಂತಿರುಗಿ ಬಂದು ಭಾಗ ಭಾಗವಾಗಿ ವ್ಯೂಹಗಳನ್ನು ರಚಿಸಿಕೊಂಡರು. ತದನಂತರ ರಕ್ತವನ್ನು ಚೆಲ್ಲುವ ಮಹಾಘೋರವಾದ ಯುದ್ಧವು ಪ್ರಾರಂಭವಾಯಿತು.

ಸಂಗತಶ್ಚಿತ್ರಸೇನೇನ ನಕುಲೋ ಯುದ್ಧದುರ್ಮದಃ ॥೧೦॥

ಯುದ್ಧದಲ್ಲಿ ಮಣಿಸಲಾಗದ ನಕುಲ ಕರ್ಣಪುತ್ರನಾದ ಚಿತ್ರಸೇನನನ್ನು ಎದುರಿಸಿದನು.

ತೌ ಪರಸ್ಪರಮಾಸಾದ್ಯ ಚಿತ್ರಕಾರ್ಮುಕಯೋಧಿನೌ ।
ಮೇಘಾವಿವ ಯಥೋದ್ಭೂತೌ ದಕ್ಷಿಣೋತ್ತರವರ್ಷಿಣೌ ॥೧೧॥

ಅವರಿಬ್ಬರೂ ಚಿತ್ರ ವಿಚಿತ್ರವಾಗಿ ಬಿಲ್ಲಿನ ಯುದ್ಧವನ್ನು ಮಾಡುವವರು. ಪರಸ್ಪರವಾಗಿ ಯುದ್ಧಕ್ಕೆ ಎದುರಾದರು. ಸಮೃದ್ಧವಾದ ದಕ್ಷಿಣದಿಕ್ಕು ಮತ್ತು ಉತ್ತರದಿಕ್ಕುಗಳಲ್ಲಿ ಮಳೆಯನ್ನು ಸುರಿಸುವ ಮೋಡಗಳು ಎದುರಾದಂತೆ ಇದು ಕಾಣಿಸಿತು.

ಶರತೋಯೈಃ ಸಿಷಿಚತುಃ ತೌ ಪರಸ್ಪರಮಾಹವೇ ॥೧೨॥

ಯುದ್ಧದಲ್ಲಿ ಇವರಿಬ್ಬರೂ ಬಾಣಗಳ ಮಳೆಯನ್ನೇ ಸುರಿಸಿದರು.

ನಾಂತರಂ ತತ್ರ ಪಶ್ಯಾಮಃ ಪಾಂಡವಸ್ಯೇತರಸ್ಯ ವಾ ॥೧೩॥

ನಕುಲ ಮತ್ತು ಚಿತ್ರಸೇನರ ಪರಾಕ್ರಮದಲ್ಲಿ ಸ್ವಲ್ಪವೂ ವ್ಯತ್ಯಾಸವನ್ನು ನೋಡಲು ನಮಗೆ ಸಾಧ್ಯವಾಗಲಿಲ್ಲ.

ಉಭೌ ಕೃತಾಸ್ತ್ರೌ ಬಲಿನೌ ರಥಚರ್ಯಾವಿಶಾರದೌ ।
ಪರಸ್ಪರವಧೇ ಯುಕ್ತೌ ಛಿದ್ರಾನ್ವೇಷಣತತ್ಪರೌ ॥೧೪॥

ಇಬ್ಬರೂ ಬಲಶಾಲಿಗಳು, ಅಸ್ತ್ರಗಳನ್ನು ಕರಗತಮಾಡಿಕೊಂಡವರು. ರಥದ ಪ್ರಯೋಗದಲ್ಲಿಯೂ ನಿಪುಣರು. ಪರಸ್ಪರವಾಗಿ ಕೊಲ್ಲಲು ಪ್ರಯತ್ನಿಸುತ್ತಾ ಅದಕ್ಕೆ ಅವಕಾಶವನ್ನು ಹುಡುಕುತ್ತಿದ್ದರು.

ಚಿತ್ರಸೇನಸ್ತು ಭಲ್ಲೇನ ಪೀತೇನ ನಿಶಿತೇನ ಚ ।
ನಕುಲಸ್ಯ ಮಹಾರಾಜ ಮುಷ್ಟಿದೇಶೇऽಚ್ಛಿನದ್ಧನುಃ ॥೧೫॥

ಮಹಾರಾಜ! ಚಿತ್ರಸೇನನು ಹರಿತವಾದ ಭಲ್ಲಾಯುಧದಿಂದ ನಕುಲನ ಬಿಲ್ಲನ್ನು, ಅದನ್ನು ಮುಷ್ಟಿಯಲ್ಲಿ ಹಿಡಿಯುವ ಸ್ಥಾನದಲ್ಲಿ ಹೊಡೆದು ತುಂಡರಿಸಿದನು.

ಅಥೈನಂ ಛಿನ್ನಧನ್ವಾನಂ ರುಗ್ಮಪುಂಖೈಃ ಶಿಲಾಶಿತೈಃ ।
ತ್ರಿಭಿಃ ಶರೈರಸಂಭ್ರಾಂತೋ ಲಲಾಟೇ ವೈ ಸಮರ್ಪಯತ್ ॥೧೬॥

ಬಿಲ್ಲನ್ನು ಕಳೆದುಕೊಂಡ ನಕುಲನಿಗೆ ಕಲ್ಲಿನಲ್ಲಿ ತೇದು ಹರಿತಗೊಳಿಸಿದ ಹಾಗೂ ಬೆಳ್ಳಿಯ ಹಿಂಬಾಗವುಳ್ಳ ಮೂರು ಬಾಣಗಳಿಂದ ಹಣೆಗೆ ಹೊಡೆದನು.

ಹಯಾಂಶ್ಚಾಸ್ಯ ಶರೈಸ್ತೀಕ್ಷ್ಣೈಃ ಪ್ರೇಷಯಾಮಾಸ ಮೃತ್ಯವೇ ।
ತಥಾ ಧ್ವಜಂ ಸಾರಥಿಂ ಚ ತ್ರಿಭಿಸ್ತ್ರಿಭಿರತಾಡಯತ್ ॥೧೭॥

ಹರಿತವಾದ ಬಾಣಗಳಿಂದ ನಕುಲನ ಕುದುರೆಗಳನ್ನು ಕೊಂದು ಯಮನಿಗೆ ಅರ್ಪಿಸಿದನು. ಪುನಃ ಮೂರು ಮೂರು ಬಾಣಗಳಿಂದ ಧ್ವಜವನ್ನೂ ಸಾರಥಿಯನ್ನು ಹೊಡೆದನು.

ಸ ಶತ್ರುಭುಜನಿರ್ಮುಕ್ತೈಃ ಲಲಾಟಸ್ಥೈಸ್ತ್ರಿಭಿಃ ಶರೈಃ ।
ನಕುಲಃ ಶುಶುಭೇ ರಾಜನ್ ತ್ರಿಶೃಂಗ ಇವ ಪರ್ವತಃ ॥೧೮॥

ಶತ್ರು ಬಿಟ್ಟ ಮೂರು ಬಾಣಗಳು ನಕುಲನ ಹಣೆಯಲ್ಲಿ ಅಂಟಿಕೊಂಡಿವೆ. ರಾಜನೇ! ಮೂರು ಶಿಖರಗಳುಳ್ಳ ಪರ್ವತದಂತೆ ನಕುಲನು ಶೋಭಿಸಿದನು.

ಸಂಛಿನ್ನಧನ್ವಾ ವಿರಥಃ ಖಡ್ಗಮಾದಾಯ ಚರ್ಮ ಚ ।
ರಥಾದವಾತರದ್ ವೀರಃ ಶೈಲಾಗ್ರಾದಿವ ಕೇಸರೀ ॥೧೯॥

ಬಿಲ್ಲನ್ನು, ರಥವನ್ನೂ ಕಳೆದುಕೊಂಡ ನಕುಲನು ಖಡ್ಗ ಮತ್ತು ಚರ್ಮ(ಗುರಾಣಿ)ವನ್ನು ಹಿಡಿದುಕೊಂಡು ಪರ್ವತದ ತುದಿಯಿಂದ ಸಿಂಹವು ಜಿಗಿಯುವಂತೆ ರಥದಿಂದ ಕೆಳಗಿಳಿದನು.

ಪದ್ಭ್ಯಾಮಾಪತತಸ್ತಸ್ಯ ಶರವೃಷ್ಟಿಮವಾಸೃಜತ್ ।
ನಕುಲೋಽಪ್ಯಗ್ರಹೀತ್ ತಾಂ ವೈ ಚರ್ಮಣಾ ಲಘುವಿಕ್ರಮಃ ॥೨೦॥

ಕಾಲಿನಿಂದ ನಡೆಯುತ್ತಾ ಯುದ್ಧಮಾಡುತ್ತಿದ್ದ ಆ ನಕುಲನ ಮೇಲೆ ಚಿತ್ರಸೇನನು ಬಾಣಗಳ ಮಳೆಯನ್ನು ಸುರಿಸಿದನು. ಬಹಳ ವಿಕ್ರಮನಾದ ನಕುಲನು ಆ ಬಾಣಗಳನ್ನು ತನ್ನ ಚರ್ಮದಿಂದ ತಡೆದನು.

ಚಿತ್ರಸೇನರಥಂ ಪ್ರಾಪ್ಯ ಚಿತ್ರಯೋಧೀ ಜಿತಶ್ರಮಃ ।
ಆರುರೋಹ ಮಹಾಬಾಹುಃ ಸರ್ವಸೈನ್ಯಸ್ಯ ಪಶ್ಯತಃ ॥೨೧॥

ವಿಶಿಷ್ಟರೀತಿಯಲ್ಲಿ ಯುದ್ಧಮಾಡುವ ನಕುಲನು ಚಿತ್ರಸೇನನ ರಥವನ್ನು ಸಮೀಪಿಸಿ ಯಾವುದೇ ಆಯಾಸವಿಲ್ಲದೆ, ಎಲ್ಲರೂ ನೋಡುತ್ತಿದ್ದಂತೆಯೇ ಅವನ ರಥದ ಮೇಲೆ ಹತ್ತಿದನು.

ಸಕುಂಡಲಂ ಸಮಕುಟಂ ಸುನಾಸಂ ಸ್ಫಾಯತೇಕ್ಷಣಮ್ ।
ಚಿತ್ರಸೇನಶಿರಃ ಕಾಯಾದ್ ಅಪಾಹರತ ಪಾಂಡವಃ ॥೨೨॥

ನಕುಲನು ಕುಂಡಲ-ಕಿರೀಟಗಳನ್ನು ಧರಿಸಿದ, ಒಳ್ಳೆಯ ನಾಸಿಕ ಹಾಗೂ ವಿಶಾಲವಾದ ಕಣ್ಣುಗಳುಳ್ಳ ಚಿತ್ರಸೇನನ ತಲೆಯನ್ನು ಕಡಿದು ಹಾಕಿದನು.

ಸ ಪಪಾತ ರಥೋಪಸ್ಥಾದ್ ದಿವಾಕರಸಮಪ್ರಭಃ ॥೨೩॥

ಸೂರ್ಯನ ಹಾಗೆ ಪ್ರಕಾಶಿಸುತ್ತಿದ್ದ ಚಿತ್ರಸೇನನು ರಥದಿಂದ ಕೆಳಗೆ ಬಿದ್ದನು.

ಚಿತ್ರಸೇನಶಿರಸ್ತತ್ ತು ದೃಷ್ಟ್ವಾ ತತ್ರ ಮಹಾರಥಾಃ ।
ಸಿಂಹನಾದಸ್ವನಾಂಶ್ಚಕ್ರುಃ ಸಾಧುವಾದಾಂಶ್ಚ ಪುಷ್ಕಲಾನ್ ॥೨೪॥

ಕೆಳಗೆ ಬಿದ್ದ ಚಿತ್ರಸೇನನ ತಲೆಯನ್ನು ನೋಡಿ ಅಲ್ಲಿ ನೆರೆದಿದ್ದ ಮಹಾರಥರು ಸಿಂಹಗರ್ಜನೆಯನ್ನು ಮಾಡುತ್ತಾ ಬಹಳವಾಗಿ ಅಭಿನಂದನೆಯ ಮಾತುಗಳನ್ನು ಹೇಳಿದರು.

ವಿಶಸ್ತಂ ಭ್ರಾತರಂ ದೃಷ್ಟ್ವಾ ಕರ್ಣಪುತ್ರೌ ಮಹಾರಥೌ ।
ಸುಶರ್ಮಾ ಸತ್ಯಸೇನಶ್ಚ ಮುಂಚಂತೌ ನಿಶಿತಾನ್ ಶರಾನ್ ॥೨೫॥

ತತೋಽಭ್ಯಧಾವತಾಂ ತೂರ್ಣಂ ಪಾಂಡವಂ ರಥಿನಾಂ ವರಮ್ ।
ಜಿಘಾಂಸಂತೌ ಯಥಾನಾಗಂ ವ್ಯಾಘ್ರೌ ರಾಜನ್ ಮಹಾವನೇ ॥೨೬॥

ತಮ್ಮ ಸಹೋದರನು ಸತ್ತಿದ್ದನ್ನು ನೋಡಿದ ಕರ್ಣನ ಇನ್ನಿಬ್ಬರು ಪುತ್ರರಾದ ಮಹಾರಥರೂ ಆದ ಸುಶರ್ಮ ಮತ್ತು ಸತ್ಯಸೇನ ಎಂಬವರು ಹರಿತವಾದ ಬಾಣಗಳನ್ನು ಪ್ರಯೋಗಿಸುತ್ತಾ ನಕುಲನನ್ನು ಎದುರುಗೊಂಡರು. ನಕುಲನು ಶ್ರೇಷ್ಠ ರಥಿಕನಾಗಿದ್ದ. ದೊಡ್ಡಕಾಡಿನಲ್ಲಿ ಆನೆಯನ್ನು ಕೊಲ್ಲುವುದಕ್ಕಾಗಿ ಹುಲಿಗಳೆರಡು ಎರಗಿದಂತೆ ಇತ್ತು.

ತಾವಭ್ಯವರ್ಷತಾಂ ತೀಕ್ಷ್ಣೈಃ ದ್ವಾವಪ್ಯೇನಂ ಮಹಾರಥೌ ।
ಶರೌಘಾನ್ ಸಮ್ಯಗಸ್ಯಂತೌ ಜೀಮೂತೌ ಸಲಿಲಂ ಯಥಾ ॥೨೭॥

ಆ ಮಹಾರಥರಾದ ಕರ್ಣಪುತ್ರರೀರ್ವರೂ ಹರಿತವಾದ ಬಾಣಗಳ ಮಳೆಯನ್ನು ಸುರಿಸಿದರು. ಎರಡು ಮೋಡಗಳು ಚೆನ್ನಾಗಿ ಮಳೆ ಸುರಿಸಿದಂತೆ ಇದು ಕಂಡಿತು.

ಸ ಶರೈಃ ಸರ್ವತೋ ವಿದ್ಧಃ ಪ್ರಹೃಷ್ಟಃ ಇವ ಪಾಂಡವಃ ।
ಅನ್ಯತ್ ಕಾರ್ಮುಕಮಾದಾಯ ರಥಮಾರುಹ್ಯ ವೀರ್ಯವಾನ್ ॥೨೮॥

ಬಾಣಗಳಿಂದ ಎಲ್ಲಾ ಕಡೆಯಿಂದಲೂ ಹೊಡೆಯಲ್ಪಟ್ಟ ನಕುಲನು ಬಹಳವಾಗಿ ಸಂತುಷ್ಟನಾದನು. ವೀರನಾದ ಅವನು ಇನ್ನೊಂದು ಬಿಲ್ಲನ್ನು ಕೈಗೆತ್ತಿಕೊಂಡು ರಥವನ್ನು ಹತ್ತಿದನು.

ಅತಿಷ್ಠತ ರಣೇ ವೀರಃ ಕ್ರುದ್ಧರೂಪ ಇವಾಂತಕಃ ॥೨೯॥

ಕುಪಿತನಾದ ಯಮನ ಹಾಗೆ ವೀರನಾದ ನಕುಲನು ಯುದ್ಧಕ್ಕೆ ನಿಂತನು.

ತೌ ತಸ್ಯ ಭ್ರಾತರೌ ವೀರೌ ಶರೈಃ ಸನ್ನತಪರ್ವಭಿಃ ।
ರಥಂ ವಿಶಕಲೀಕರ್ತುಂ ಸಮಾರಬ್ಧೌ ವಿಶಾಂಪತೇ ॥೩೦॥

ರಾಜನೇ! ಆ ವೀರರಾದ ಸಹೋದರರು ಚೆನ್ನಾಗಿ ಬಗ್ಗಿಸಿದ ಸಂಧಿಗಳುಳ್ಳ ಬಾಣಗಳಿಂದ ನಕುಲನ ರಥವನ್ನು ನಾಶಮಾಡಲು ಆರಂಬಿಸಿದರು.

ತತಃ ಪ್ರಸಹ್ಯ ನಕುಲಃ ಚತುರ್ಭಿಶ್ಚತುರೋ ಹಯಾನ್ ।
ಜಘಾನ ನಿಶಿತೈರ್ಬಾಣೈಃ ಸತ್ಯಸೇನಸ್ಯ ಸಂಯುಗೇ ॥೩೧॥

ಅನಂತರ ಯುದ್ಧದಲ್ಲಿ ನಕುಲನು ನಾಲ್ಕು ಬಾಣಗಳನ್ನು ಪ್ರಯೋಗಿಸಿ ಸತ್ಯಸೇನನ ನಾಲ್ಕು ಕುದುರೆಗಳನ್ನು ಕೊಂದನು.

ತತಃ ಸಂಧಾಯ ನಾರಾಚಂ ರುಗ್ಮಪುಂಖಂ ಶಿಲಾಶಿತಮ್ ।
ಧನುಶ್ಚಿಚ್ಛೇದ ರಾಜೇಂದ್ರ ಸತ್ಯಸೇನಸ್ಯ ಪಾಂಡವಃ ॥೩೨॥

ರಾಜೇಂದ್ರ! ನಕುಲನು ಪುನಃ ಬಂಗಾರದ ರೆಕ್ಕೆಗಳುಳ್ಳ, ಕಲ್ಲಿನಲ್ಲಿ ತೇದು ಹರಿತಗೊಳಿಸಿದ ಬಾಣವನ್ನು ಬಿಲ್ಲಿಗೆ ಜೋಡಿಸಿ ಸತ್ಯಸೇನನ ಧನುಸ್ಸನ್ನು ತುಂಡರಿಸಿದನು.

ಅಥಾನ್ಯಂ ರಥಮಾಸ್ಥಾಯ ಧನುರಾದಾಯ ಚಾಪರಮ್ ।
ಸತ್ಯಸೇನಃ ಸುಶರ್ಮಾ ಚ ಪಾಂಡವಂ ಪರ್ಯಧಾವತಾಮ್ ॥೩೩॥

ಅನಂತರ ಸತ್ಯಸೇನನು ಮತ್ತೊಂದು ರಥವನ್ನು ಹತ್ತಿ, ಇನ್ನೊಂದು ಬಿಲ್ಲನ್ನು ಹಿಡಿದುಕೊಂಡು, ಸುಶರ್ಮನ ಜೊತೆಗೂಡಿ ನಕುಲನನ್ನು ಎದುರಿಸಿದನು.

ಅವಿಧ್ಯತ್ ತಾವಸಂಭ್ರಾಂತೌ ಮಾದ್ರೀಪುತ್ರಶ್ಚ ವೀರ್ಯವಾನ್ ।
ದ್ವಾಭ್ಯಾಂ ದ್ವಾಭ್ಯಾಂ ಮಹಾರಾಜ ಶರಾಭ್ಯಾಂ ರಣಮೂರ್ಧನಿ ॥೩೪॥

ಮಹಾರಾಜ! ಯುದ್ಧದಲ್ಲಿ ವೀರನಾದ ನಕುಲನು ಧೃತಿಗೆಡದಿರುವ ಆ ಸಹೋದರರನ್ನು ಎರಡೆರಡು ಬಾಣಗಳಿಂದ ಹೊಡೆದನು.

ಸುಶರ್ಮಾ ತು ತತಃ ಕ್ರುದ್ಧಃ ಪಾಂಡವಸ್ಯ ಮಹದ್ಧನುಃ ।
ಚಿಚ್ಛೇದ ಪ್ರಹಸನ್ ಯುದ್ಧೇ ಕ್ಷುರಪ್ರೇಣ ಮಹಾರಥಃ ॥೩೫॥

ಮಹಾರಥನಾದ ಸುಶರ್ಮನು ಕೋಪಗೊಂಡು ಜೋರಾಗಿ ನಗುತ್ತಾ ಶೀಘ್ರಗಾಮಿಯಾದ ಬಾಣದಿಂದ ನಕುಲನ ದೊಡ್ಡದಾದ ಬಿಲ್ಲನ್ನು ತುಂಡು ಮಾಡಿದನು.

ಅಥಾನ್ಯದ್ಧನುರಾದಾಯ ನಕುಲಃ ಕ್ರೋಧಮೂರ್ಚ್ಛಿತಃ ।
ಸುಶರ್ಮಾಣಂ ತ್ರಿಭಿರ್ವಿದ್ಧ್ವಾ ಧ್ವಜಮೇಕೇನ ಚಿಚ್ಛಿದೇ ॥೩೬॥

ಬಹಳ ಕೋಪಗೊಂಡ ನಕುಲನು ಇನ್ನೊಂದು ಬಿಲ್ಲನ್ನು ಹಿಡಿದುಕೊಂಡು ಮೂರು ಬಾಣಗಳಿಂದ ಸುಶರ್ಮನಿಗೆ ಹೊಡೆದನು. ಒಂದು ಬಾಣವನ್ನು ಪ್ರಯೋಗಿಸಿ ಅವನ ಧ್ವಜವನ್ನು ತುಂಡರಿಸಿದನು.

ಸತ್ಯಸೇನಸ್ಯ ಚ ಧನುರ್ಹಸ್ತಾವಾಪಂ ಚ ಮಾರಿಷ ।
ಚಿಚ್ಛೇದ ತರಸಾ ಯುದ್ಧೇ ತತ ಉಚ್ಚುಕ್ರುಶುರ್ಜನಾಃ ॥೩೮॥

ಮಹಾರಾಜ! ಅನಂತರ ಯುದ್ಧದಲ್ಲಿ ನಕುಲನು ಸತ್ಯಸೇನನ ಧನುಸ್ಸನ್ನು ಮತ್ತು ಹಸ್ತರಕ್ಷಕವನ್ನು ಬೇಗನೇ ಪುಡಿಮಾಡಿದನು. ಅದರಿಂದ ಎಲ್ಲಾ ಜನರು ಜೋರಾಗಿ ಶಬ್ದಮಾಡಿದರು.

ಅಥಾನ್ಯದ್ಧನುರಾದಾಯ ಶತ್ರುಘ್ನಂ ಭಾರಸಾಧನಮ್ ।
ಶರೈಃ ಸಂಛಾದಯಾಮಾಸ ಸಮಂತಾತ್ ಪಾಂಡುನಂದನಮ್ ॥೩೯॥

ಅನಂತರ ಸತ್ಯಸೇನನು ಶತ್ರುಸಂಹಾರಕವಾದ ಬಹಳ ಭಾರವುಳ್ಳ ಇನ್ನೊಂದು ಬಿಲ್ಲನ್ನು ಎತ್ತಿಕೊಂಡು ನಕುಲನ ಮೇಲೆ ಎಲ್ಲಾ ಕಡೆಯಿಂದಲೂ ಬಾಣಗಳಿಂದ ಆಚ್ಛಾದಿಸಿದನು.

ಸನ್ನಿವಾರ್ಯ ತು ತಾನ್ ಬಾಣಾನ್ ನಕುಲಃ ಪರವೀರಹಾ ।
ಸತ್ಯಸೇನಸುಶರ್ಮಾಣೌ ದ್ವಾಭ್ಯಾಂ ದ್ವಾಭ್ಯಾಮವಿಧ್ಯತ ॥೪೦॥

ಶತ್ರುವೀರಸಂಹಾರಕನಾದ ನಕುಲನು ಆ ಬಾಣಗಳನ್ನು ತುಂಡರಿಸಿ ಸತ್ಯಸೇನ ಮತ್ತು ಸುಶರ್ಮರನ್ನು ಎರಡೆರಡು ಬಾಣಗಳಿಂದ ಹೊಡೆದನು.

ತಾವೇನಂ ಪ್ರತ್ಯವಿಧ್ಯೇತಾಂ ಪೃಥಕ್ ಪೃಥಗಜಿಹ್ಮಗೈಃ ।
ಸಾರಥಿಂ ಚಾಸ್ಯ ರಾಜೇಂದ್ರ ಶರೈರ್ವಿವ್ಯಧತುಃ ಶಿತೈಃ ॥೪೧॥

ಆ ಸಹೋದರರೀರ್ವರೂ ಪ್ರತ್ಯೇಕ ಪ್ರತ್ಯೇಕವಾಗಿ ನಕುಲನನ್ನು ಬಾಣಗಳಿಂದ ಹೊಡೆದರು. ರಾಜೇಂದ್ರ! ಹರಿತವಾದ ಬಾಣಗಳಿಂದ ನಕುಲನ ಸಾರಥಿಯನ್ನು ಹೊಡೆದು ಗಾಯಗೊಳಿಸಿದರು.

ಸತ್ಯಸೇನೋ ರಥೇಷಾಂ ತು ನಕುಲಸ್ಯ ಧನುಸ್ತದಾ ।
ಪೃಥಕ್ ಶರಾಭ್ಯಾಂ ಚಿಚ್ಛೇದ ಕೃತಹಸ್ತಃ ಪ್ರತಾಪವಾನ್ ॥೪೨॥

ಯುದ್ಧದಲ್ಲಿ ಸಿದ್ಧಹಸ್ತನಾದ ಪ್ರತಾಪಿ ಸತ್ಯಸೇನನು ಪ್ರತ್ಯೇಕ ಪ್ರತ್ಯೇಕವಾಗಿ ಎರಡೆರಡು ಬಾಣಗಳಿಂದ ನಕುಲನ ಬಿಲ್ಲುಮತ್ತು ರಥದ ನೊಗವನ್ನೂ ತುಂಡರಿಸಿದನು.

ಸ ರಥೇಽತಿರಥಸ್ತಿಷ್ಠನ್ ರಥಶಕ್ತಿಂ ಪರಾಮೃಶನ್ ।
ಸ್ವರ್ಣದಂಡಾಮಕುಂಠಾಗ್ರಾಂ ತೈಲಧೌತಾಂ ಸುನಿರ್ಮಲಾಮ್ ॥೪೩॥

ಲೇಲಿಹಾನಾಂ ಮಹಾಬಾಹೋ ನಾಗಕನ್ಯಾಂ ಮಹಾವಿಷಾಮ್ ।
ಸಮುದ್ಯಮ್ಯ ಪ್ರಚಿಕ್ಷೇಪ ಸತ್ಯಸೇನಸ್ಯ ಸಂಯುಗೇ ॥೪೪॥

ಅನಂತರ ಅತಿರಥನೆನಿಸಿದ ನಕುಲನು ರಥದ ಮೇಲೆ ನಿಂತುಕೊಂಡು ಸ್ವಚ್ಛವಾದ, ಹರಿತವಾದ ಅಗ್ರವುಳ್ಳ, ಎಣ್ಣೆಯಲ್ಲಿ ಅದ್ದಿದ ಬಂಗಾರದ ದಂಡವುಳ್ಳ ರಥದ ಶಕ್ತಿಯನ್ನು ತೆಗೆದುಕೊಂಡನು. ಮಹಾಬಾಹೋ! ಬಹಳವಿಷವುಳ್ಳ ನಾಗಕನ್ಯೆಯಂತೆ ಹೊಳೆಯುತ್ತಿರುವ ಆ ರಥಶಕ್ತಿಯನ್ನು ಎತ್ತಿಕೊಂಡು ಯುದ್ಧದಲ್ಲಿ ಸತ್ಯಸೇನನ ಮೇಲೆ ಎಸೆದನು.

ಸಾ ತಸ್ಯ ಹೃದಯಂ ಸಂಖ್ಯೇ ಬಿಭೇದ ಶತಧಾ ನೃಪ ।
ಸ ಪಪಾತ ರಥಾದ್ ಭೂಮಿಂ ಗತಸತ್ತ್ವೋಽಲ್ಪಚೇತನಃ ॥೪೫॥

ರಾಜನೇ! ಯುದ್ಧದಲ್ಲಿ ಆ ರಥಶಕ್ತಿಯು ಸತ್ಯಸೇನನ ಹೃದಯವನ್ನು ನೂರಾರು ಭಾಗವಾಗಿ ಪುಡಿಮಾಡಿತು. ಅಲ್ಪನಾದ ಸತ್ಯಸೇನನು ಶಕ್ತಿಯನ್ನು ಕಳೆದುಕೊಂಡು ರಥದಿಂದ ಭೂಮಿಯಲ್ಲಿ ಬಿದ್ದನು.

ಭ್ರಾತರಂ ನಿಹತಂ ದೃಷ್ಟ್ವಾ ಸುಶರ್ಮಾ ಕ್ರೋಧಮೂರ್ಚ್ಛಿತಃ ।
ಅಭ್ಯವರ್ಷಚ್ಛರೈಸ್ತೂರ್ಣಂ ಪದಾತಿಂ ಪಾಂಡುನಂದನಮ್ ॥೪೬॥

ಸುಶರ್ಮನು ತನ್ನ ಅಣ್ಣನು ಸತ್ತಿದ್ದನ್ನು ನೋಡಿ ಕೋಪದಿಂದ ಕುದಿಯುತ್ತಾ ನೆಲದ ಮೇಲೆ ನಿಂತಿದ್ದ ನಕುಲನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ನಕುಲಂ ವಿರಥಂ ದೃಷ್ಟ್ವಾ ದ್ರೌಪದೇಯೋ ಮಹಾರಥಃ ।
ಶ್ರುತಸೋಮೋಽಭಿದುದ್ರಾವ ಪರೀಪ್ಸನ್ ಪಿತರಂ ರಣೇ ॥೪೭॥

ನಕುಲನು ರಥವನ್ನು ಕಳೆದುಕೊಂಡಿದ್ದನು. ಅದನ್ನು ನೋಡಿದ ಮಹಾರಥನಾದ ದ್ರೌಪದಿಯ ಪುತ್ರ ಶ್ರುತಸೋಮನು ಯುದ್ಧದಲ್ಲಿ ತನ್ನ ತಂದೆಯನ್ನು ರಕ್ಷಿಸಲಿಕ್ಕಾಗಿ ಓಡಿಬಂದನು,

ತತೋऽಧಿರುಹ್ಯ ನಕುಲಃ ಶ್ರುತಸೋಮಸ್ಯ ತಂ ರಥಮ್ ।
ಶುಶುಭೇ ಭರತಶ್ರೇಷ್ಠೋ ಗಿರಿಸ್ಥ ಇವ ಕೇಸರೀ ॥೪೮॥

ಭರತಶ್ರೇಷ್ಠನಾದ ನಕುಲನು ಶ್ರುತಸೋಮನ ರಥವನ್ನು ಏರಿ ಪರ್ವತದ ಮೇಲೆ ಇರುವ ಸಿಂಹದ ಹಾಗೆ ಶೋಭಿಸಿದನು.

ಸೋऽನ್ಯತ್ ಕಾರ್ಮುಕಮಾದಾಯ ಸುಶರ್ಮಾಣಮಯೋಧಯತ್ ॥

ನಕುಲನು ಇನ್ನೊಂದು ಬಿಲ್ಲನ್ನು ಎತ್ತಿಕೊಂಡು ಸುಶರ್ಮನ ಜೊತೆಗೆ ಕಾದಾಡಿದನು.

ತಾವುಭೌ ಶರವರ್ಷಾಭ್ಯಾಂ ಸಮಾಸಾದ್ಯ ಪರಸ್ಪರಮ್ ।
ಪರಸ್ಪರವಧೇ ಯತ್ನಂ ಚಕ್ರತುಃ ಸುಮಹಾರಥೌ ॥೫೦॥

ಒಳ್ಳೆಯ ಮಹಾರಥರಾದ ಈ ನಕುಲ - ಸುಶರ್ಮರು ಪರಸ್ಪರವಾಗಿ ಬಾಣಗಳ ಮಳೆಗೈಯುತ್ತಾ ಒಬ್ಬರನ್ನೊಬ್ಬರು ಸಾಯಿಸಲು ಯತ್ನಿಸಿದರು.

ಸುಶರ್ಮಾ ತು ಸುಸಂಕ್ರುದ್ಧಃ ಪಾಂಡವಂ ವಿಶಿಖೈಸ್ತ್ರಿಭಿಃ ।
ಶ್ರುತಸೋಮಂ ಚ ವಿಂಶತ್ಯಾ ಬಾಹ್ವೋರುರಸಿ ಚಾರ್ಪಯತ್ ॥೫೧॥

ಬಹಳ ಕ್ರುದ್ಧನಾದ ಸುಶರ್ಮನು ನಕುಲನ ಮೇಲೆ ಹರಿತವಾದ ತುದಿಯುಳ್ಳ ಮೂರು ಬಾಣಗಳಿಂದ ಮತ್ತು ಶ್ರುತಸೇನನ ಮೇಲೆ ಇಪ್ಪತ್ತು ಬಾಣಗಳಿಂದ ಕೈ ಮತ್ತು ಎದೆಯ ಮೇಲೆ ಹೊಡೆದನು.

ತತಃ ಕ್ರುದ್ಧೋ ಮಹಾರಾಜ ನಕುಲಃ ಪರವೀರಹಾ ।
ಶರೈಸ್ತಸ್ಯ ದಿಶಃ ಸರ್ವಾನ್ ಛಾದಯಾಮಾಸ ವೀರ್ಯವಾನ್ ॥೫೨॥

ಮಹಾರಾಜನೇ! ಶತ್ರುಗಳನ್ನು ಸದೆಬಡಿಯುವ ವೀರನಾದ ನಕುಲನು ಬಹಳ ಕೋಪಗೊಂಡು ಸುಶರ್ಮನನ್ನು ಎಲ್ಲಾ ದಿಕ್ಕುಗಳಲ್ಲಿಯೂ ಬಾಣಗಳಿಂದ ಮುಚ್ಚಿಬಿಟ್ಟನು.

ತತೋ ಗೃಹೀತ್ವಾ ತೀಕ್ಷ್ಣಾಗ್ರಮರ್ಧಚಂದ್ರಂ ಸುತೇಜನಮ್ ।
ಸವೇಗಯುಕ್ತಂ ಚಿಕ್ಷೇಪ ಕರ್ಣಪುತ್ರಸ್ಯ ಸಂಯುಗೇ ॥೫೩॥

ಅನಂತರ ಯುದ್ಧದಲ್ಲಿ ಹರಿತವಾದ, ಅರ್ಧಚಂದ್ರಾಕಾರದ, ಬಹಳ ತೇಜಸ್ಸುಳ್ಳ ಆಯುಧವನ್ನು ತೆಗೆದುಕೊಂಡು ಕರ್ಣಪುತ್ರ ಸುಶರ್ಮನ ಕಡೆಗೆ ಬಹಳ ವೇಗವಾಗಿ ಪ್ರಯೋಗಿಸಿದನು.

ತಸ್ಯ ತೇನ ಶಿರಃ ಕಾಯಾದ್ ಜಹಾರ ನೃಪಸತ್ತಮ ।
ಪಶ್ಯತಾಂ ಸರ್ವಸೈನ್ಯಾನಾಂ ತದದ್ಭುತಮಿವಾಭವತ್ ॥೫೪॥

ರಾಜಶ್ರೇಷ್ಠನೇ! ಆ ಅರ್ಧಚಂದ್ರಾಯುಧದಿಂದ ಎಲ್ಲರ ಸಮಕ್ಷಮದಲ್ಲಿ ಸುಶರ್ಮನ ತಲೆಯನ್ನು ಕಡಿದನು. ಇದು ಬಹಳ ಅದ್ಭುತವಾಗಿತ್ತು.

ಸ ಹತಃ ಪ್ರಾಪತದ್ ರಾಜನ್ ನಕುಲೇನ ಮಹಾತ್ಮನಾ ।
ನದೀವೇಗಾದ್ ಯಥಾ ಭಗ್ನಸ್ತೀರಜಃ ಪಾದಪೋ ಮಹಾನ್ ॥೫೫॥

ರಾಜನೇ! ನದಿಯ ರಭಸದ ಪ್ರವಾಹದಿಂದ ತೀರದ ಮರವು ಕೆಳಬೀಳುವಂತೆ ಈ ಸುಶರ್ಮನು ಮಹಾತ್ಮನಾದ ನಕುಲನಿಂದಾಗಿ ಸತ್ತು ಕೆಳಗೆ ಬಿದ್ದನು.

ಕರ್ಣಪುತ್ರವಧಂ ದೃಷ್ಟ್ವಾ ನಕುಲಸ್ಯ ಚ ವಿಕ್ರಮಮ್ ।
ಪ್ರದುದ್ರಾವ ಭಯಾತ್ ಸೇನಾ ತಾವಕೀ ಭರತರ್ಷಭ ॥೫೬॥

ಭಾರತೋತ್ತಮನೇ! ಕರ್ಣಪುತ್ರರು ಸತ್ತಿದ್ದನ್ನು ಮತ್ತು ನಕುಲನ ಪರಾಕ್ರಮವನ್ನು ನೋಡಿದ ನಿನ್ನ ಸೇನೆಯು ಭಯದಿಂದ ಪಲಾಯನ ಮಾಡಿತು.

ತಾಂ ತು ಸೇನಾಂ ಮಹಾರಾಜ ಮದ್ರರಾಜಃ ಪ್ರತಾಪವಾನ್ ।
ಅಪಾಲಯದ್ ರಣೇ ಶೂರಃ ಸೇನಾಪತಿರರಿಂದಮಃ ॥೫೭॥

ಮಹಾರಾಜನೇ! ಹೀಗೆ ಓಡಿಹೋಗುತ್ತಿದ್ದ ಆ ನಿನ್ನ ಸೇನೆಯನ್ನು ಶತ್ರುದಮನನಾದ ಶೂರ ಹಾಗೂ ಪ್ರತಾಪಿಯಾದ ಸೇನಾಧಿಪತಿ ಶಲ್ಯನು ರಕ್ಷಿಸಿದನು.

ವಿಭೀಸ್ತಸ್ಥೌ ಮಹಾರಾಜ ವ್ಯವಸ್ಥಾಪ್ಯ ಚ ವಾಹಿನೀಮ್ ॥೫೮॥

ಮಹಾರಾಜ! ಶಲ್ಯನು ಸೈನ್ಯವನ್ನು ಚೆನ್ನಾಗಿ ನಿಲ್ಲಿಸಿ ನಿರ್ಭೀತನಾಗಿ ನಿಂತುಕೊಂಡನು.

ಸಿಂಹನಾದಂ ಭೃಶಂ ಕೃತ್ವಾ ಧನುಃಶಬ್ದಂ ಚ ದಾರುಣಮ್ ।
ತಾವಕಾಃ ಸಮರೇ ರಾಜನ್ ರಕ್ಷಿತಾ ದೃಢಧನ್ವ(ನ್ವಿ)ನಾ ॥೫೯॥

ರಾಜನೇ! ಬಹಳವಾಗಿ ಸಿಂಹನಾದವನ್ನು ಮಾಡುತ್ತಾ ಭಯಂಕರವಾದ ಧನುಸ್ಸಿನ ಠೇಂಕಾರವನ್ನೂ ಮಾಡುತ್ತಾ ಇದ್ದ ಧನುರ್ಧಾರಿಯಾದ ಶಲ್ಯನು ರಣರಂಗದಲ್ಲಿ ನಿನ್ನವರನ್ನು ರಕ್ಷಿಸಿದನು.

ಪ್ರತ್ಯುದ್ಯಯುರರೀನ್ ಸರ್ವಾನ್ ಸಮಂತಾದ್ ವಿಗತವ್ಯಥಾಃ ।
ಮದ್ರರಾಜಂ ಮಹೇಷ್ವಾಸಂ ಪರಿವಾರ್ಯ ಸಮಂತತಃ ॥೬೦॥

ಎಲ್ಲಾ ದುಃಖಗಳನ್ನೂ ಕಳೆದುಕೊಂಡು ಮಹಾಬಿಲ್ಲಾರನಾದ ಶಲ್ಯನನ್ನು ಎಲ್ಲಾ ಕಡೆಗಳಿಂದ ರಕ್ಷಿಸುತ್ತಾ ಎಲ್ಲಾ ದಿಕ್ಕುಗಳಲ್ಲೂ ಶತ್ರುಗಳನ್ನು ಎದುರಿಸಿದರು.

ಸ್ಥಿತಾ ರಾಜನ್ ಮಹಾಸೇನಾ ಯೋದ್ಧುಕಾಮಾ ಸಮಂತತಃ ।
ಸಾತ್ಯಕಿರ್ಭೀಮಸೇನಶ್ಚ ಮಾದ್ರೀಪುತ್ರೌ ಚ ಪಾಂಡವೌ ॥೬೧॥

ಯುಧಿಷ್ಠಿರಂ ಪುರಸ್ಕೃತ್ಯ ಹ್ರೀನಿಷೇಧಮರಿಂದಮಮ್ ।
ಪರಿವಾರ್ಯ ಮಹೇಷ್ವಾಸಾಃ ಸಿಂಹನಾದಂ ಪ್ರಚಕ್ರಿರೇ ॥೬೨॥

ರಾಜನೇ! ಯುದ್ಧದ ಇಚ್ಛೆಯಿಂದ ದೊಡ್ಡದಾದ ಸೈನ್ಯವು ಎಲ್ಲ ಕಡೆಯೂ ನಿಂತುಕೊಂಡಿತು. ಸಾತ್ಯಕಿ, ಭೀಮಸೇನ, ನಕುಲ-ಸಹದೇವರ ಮೊದಲಾದ ಮಹಾಬಿಲ್ಲಾರರು ಯುಧಿಷ್ಠಿರನನ್ನು ಮುಂದಿಟ್ಟುಕೊಂಡು, ಎದುರಿಸಲು ಅಸಾಧ್ಯನಾದ ಹಾಗೂ ಶತ್ರುಸಂಹಾರಕನಾದ ಯುಧಿಷ್ಠಿರನನ್ನು ಸುತ್ತುವರಿದು ಸಿಂಹನಾದವನ್ನು ಮಾಡಿದರು.

ಬಾಣಶಂಖರವಾಂಶ್ಚೋಗ್ರಾನ್ ಕ್ಷ್ವೇಲಾಂಶ್ಚ ವಿವಿಧಾನ್ ದಧುಃ ॥೬೩॥

ಬಾಣದ ಧ್ವನಿ, ಶಂಖದ ಧ್ವನಿಯನ್ನು ಹಾಗೂ ವಿವಿಧ ಸಿಂಹನಾದವನ್ನು ಮಾಡಿದರು.

ತಥೈವ ತಾವಕಾಃ ಸರ್ವೇ ಮದ್ರಾಧಿಪತಿಮಂಜಸಾ ।
ಪರಿವಾರ್ಯ ಸುಸಂರಬ್ಧಾಃ ಪುನರ್ಯುದ್ಧಮರೋಚಯನ್ ॥೬೪॥

ಅಲ್ಲಿಯೇ ನಿನ್ನವರು ಎಲ್ಲರೂ ಸೇರಿ ಶಲ್ಯನನ್ನು ಸುತ್ತುವರಿದು ಬಹಳವಾದ ತಯಾರಿಯೊಂದಿಗೆ ಮತ್ತೆ ಯುದ್ಧವನ್ನು ಮಾಡಲು ಇಷ್ಟಪಟ್ಟರು.

ತತಃ ಪ್ರವವೃತೇ ಯುದ್ಧಂ ಭೀರೂಣಾಂ ಭಯವರ್ಧನಮ್ ।
ತಾವಕಾನಾಂ ಪರೇಷಾಂ ಚ ಮೃತ್ಯುಂ ಕೃತ್ವಾ ನಿವರ್ತನಮ್ ॥೬೫॥

ಅನಂತರ ಭಯಗೊಳ್ಳುವವರ ಭಯವನ್ನು ಹೆಚ್ಚು ಮಾಡುವ ಯುದ್ಧವು ಆರಂಭವಾಯಿತು. ನಿನ್ನ ಕಡೆಯವರು ಮತ್ತು ಶತ್ರುಕಡೆಯವರು ಮರಣವನ್ನೇ ಹಿಂದಿಕ್ಕಿ ಯುದ್ಧದಲ್ಲಿ ಪಾಲ್ಗೊಂಡರು.

ಯಥಾ ದೈವಾಸುರಂ ಯುದ್ಧಂ ಪೂರ್ವಮಾಸೀದ್ ವಿಶಾಂಪತೇ ।
ಅಭೀತಾನಾಂ ತದಾ ರಾಜನ್ ಯಮರಾಷ್ಟ್ರವಿವರ್ಧನಮ್ ॥೬೬॥

ರಾಜನೇ! ಹಿಂದೆ ದೇವತೆಗಳು ಮತ್ತು ಅಸುರರಿಗೆ ಎಂತಹ ಯುದ್ಧನಡೆಯಿತೋ ಅಂತಹ ಯುದ್ಧವು ಯುದ್ಧದ ಭಯವಿಲ್ಲದ ಯೋಧರ ಮಧ್ಯೆ ನಡೆಯಿತು.

ತತಃ ಕಪಿಧ್ವಜೋ ರಾಜನ್ ಹತ್ವಾ ಸಂಶಪ್ತಕಾನ್ ರಣೇ ।
ಅಭ್ಯದ್ರವತ ತಾಂ ಸೇನಾಂ ಕೌರವೀಂ ಪಾಂಡುನಂದನಃ ॥೬೭॥

ರಾಜನೇ! ಅನಂತರ ಯುದ್ಧದಲ್ಲಿ ಸಂಶಪ್ತಕರನ್ನು ಹೊಡೆದುರುಳಿಸಿದ ಪಾಂಡುಪುತ್ರ ಅರ್ಜುನನು ಕೌರವರ ಸೈನ್ಯವನ್ನು ಎದುರಿಸಿದನು.

ತಥೈವ ಪಾಂಡವಾಃ ಶೇಷಾಃ ಧೃಷ್ಟದ್ಯುಮ್ನಪುರೋಗಮಾಃ ।
ಅಭ್ಯಧಾವಂತ ತಾಂ ಸೇನಾಂ ವಿಸೃಜಂತಃ ಶಿತಾನ್ ಶರಾನ್ ॥೬೮॥

ಹಾಗೆಯೇ ಧೃಷ್ಟದ್ಯುಮ್ನ ಮೊದಲಾದ ಉಳಿದ ಪಾಂಡವರು ಹರಿತವಾದ ಬಾಣಗಳನ್ನು ಪ್ರಯೋಗಿಸುತ್ತಾ ಕೌರವಸೇನೆಯನ್ನು ಎದುರಿಸಿದರು.

ಪಾಂಡವೈರಭಿಕೀರ್ಣಾನಾಂ ಸಮ್ಮೋಹಃ ಸಮಜಾಯತ ।
ನ ವಿಜಾನಂತ್ಯನೀಕಾನಿ ದಿಶೋ ವಾ ಪ್ರದಿಶಸ್ತಥಾ ॥೬೯॥

ಪಾಂಡವರು ಬಾಣಗಳನ್ನು ಪ್ರಯೋಗಿಸಿದಾಗ ಶತ್ರುಗಳಿಗೆ ಮೋಹವು ಉಂಟಾಯಿತು. ಇದರಿಂದಾಗಿ ಸೈನ್ಯವು ದಿಕ್ಕು ಯಾವುದು, ವಿದಿಕ್ಕು ಯಾವುದು ಎಂಬುದನ್ನು ತಿಳಿಯಲಿಲ್ಲ.

ಆಪೂರ್ಯಮಾಣಾನಿ ಶಿತೈಃ ಶರೈಃ ಪಾಂಡವಚೋದಿತೈಃ ॥೭೦॥

ಪಾಂಡವರು ಬಿಟ್ಟ ಹರಿತವಾದ ಬಾಣಗಳು ಕೌರವಸೈನ್ಯವನ್ನು ಚೆನ್ನಾಗಿ ಆವರಿಸಿದವು.

ಹತಪ್ರವೀರಾ ವಿಧ್ವಸ್ತಾ ಕೀರ್ಯಮಾಣಾಃ ಸಮಂತತಃ ।
ಕೌರವ್ಯಾऽವಧ್ಯತ ಚಮೂಃ ಪಾಂಡುಪುತ್ರೈರ್ಮಹಾರಥೈಃ ॥೭೧॥

ಮಹಾರಥರಾದ ಪಾಂಡವರು ಎಲ್ಲಾ ಕಡೆಗಳಿಂದ ಬಾಣಗಳನ್ನು ಪ್ರಯೋಗಿಸಿದಾಗ ಕೌರವರ ಕಡೆಯ ವೀರರು ಸತ್ತುಹೋದರು. ಕೌರವರ ಸೇನೆಯು ಘಾಸಿಗೊಂಡಿತು.

ತಥೈವ ಪಾಂಡವೀ ಸೇನಾ ಶರೈಃ ರಾಜನ್ ಸಮಂತತಃ ।
ರಣೇऽಹನ್ಯತ ಪುತ್ರೈಸ್ತೇ ಶತಶೋऽಥ ಸಹಸ್ರಶಃ ॥೭೨॥

ರಾಜನೇ! ಅದೇ ರೀತಿಯಲ್ಲಿ ನಿನ್ನ ಮಕ್ಕಳೂ ಕೂಡ ಎಲ್ಲ ಕಡೆಗಳಿಂದಲೂ ಬಾಣಗಳನ್ನು ಪ್ರಯೋಗಿಸಿ ಪಾಂಡವರ ಸೈನ್ಯವನ್ನು ನಾಶಮಾಡಿದರು.

ತೇ ಸೇನೇ ಭೃಶಸಂತಪ್ತೇ ವಧ್ಯಮಾನೇ ಪರಸ್ಪರಮ್ ।
ವ್ಯಾಕುಲೇ ಸಮಪದ್ಯೇತಾಂ ವರ್ಷಾಸು ಸರಿತಾವಿವ ॥೭೩॥

ಮಳೆಗಾಲದಲ್ಲಿ ನದಿಗಳು ದಡವನ್ನು ಮೀರುವಂತೆ ಕೌರವರ ಮತ್ತು ಪಾಂಡವರ ಸೈನ್ಯಗಳು ಪರಸ್ಪರವಾಗಿ ಹೊಡೆದುಕೊಂಡು ಬಹಳ ದುಃಖವನ್ನು ಅನುಭವಿಸಿ ವ್ಯಾಕುಲತೆಯನ್ನು ಹೊಂದಿದವು.

ದ್ರವಮಾಣೇಷು ಸೈನ್ಯೇಷು ವಿನದತ್ಸು ಚ ದಂತಿಷು ॥೭೪॥

ಕೂಜತಾಂ ಸ್ತನತಾಂ ಚಾಪಿ ಪದಾತೀನಾಂ ಮಹಾಹವೇ ॥೭೫॥

ವಿದ್ರುತೇಷು ಮಹಾರಾಜ ಹಯೇಷು ಬಹುಧಾ ತದಾ ।
ಸಂಕ್ಷಯೇ ದಾರುಣೇ ಜಾತೇ ಸಂಗರೇ ಸರ್ವದೇಹಿನಾಮ್ ॥೭೬॥

ನಾನಾಶಸ್ತ್ರಸಮಾವಾಪೇ ವ್ಯತಿಷಕ್ತರಥದ್ವಿಪೇ ।
ಹರ್ಷಣೇ ಯುದ್ಧಶೌಂಡಾನಾಂ ಭೀರೂಣಾಂ ಭಯವರ್ಧನೇ ॥೭೭॥

ಗಾಹಮಾನೇಷು ಯೋಧೇಷು ಪರಸ್ಪರವಧೈಷಿಷು ।
ಪ್ರಾಣಾದೇಷು ಮಹಾಘೋರೇ ವರ್ತಮಾನೇ ದುರೋದರೇ ॥೭೮॥

ಸಂಗ್ರಾಮೇ ಘೋರರೂಪೇ ತು ಯಮರಾಷ್ಟ್ರವಿವರ್ಧನೇ ।
ಪಾಂಡವಾಸ್ತಾವಕಂ ಸೈನ್ಯಂ ವ್ಯಧಮನ್ ನಿಶಿತೈಃ ಶರೈಃ ॥೭೯॥

ಸೈನ್ಯವು ಓಡುತ್ತಿತ್ತು. ಆನೆಗಳು ಘೀಳಿಡುತ್ತಿದ್ದವು. ರಣರಂಗದಲ್ಲಿ ಪದಾತಿಗಳು ಜೋರಾಗಿ ಬೊಬ್ಬಿಡುತ್ತಿದ್ದರು. ಮಹಾರಾಜನೇ! ಕುದುರೆಗಳು ಓಡಿಹೋಗುತ್ತಿದ್ದವು. ಯುದ್ಧದಲ್ಲಿ ಎರಡೂ ಕಡೆಯ ಯೋಧರು ನಾಶವಾಗುತ್ತಿದ್ದರು. ಅನೇಕ ವಿಧದ ಶಸ್ತ್ರಗಳು ಬೀಳುತ್ತಿದ್ದವು. ಆನೆಗಳೂ ರಥಗಳೂ ಪರಸ್ಪರ ಹೊಡೆದುಕೊಂಡು ನಾಶವಾಗುತ್ತಿದ್ದವು. ಯುದ್ಧನಿಪುಣರಿಗೆ ಆನಂದವನ್ನು ಉಂಟುಮಾಡುತ್ತಿತ್ತು. ಯುದ್ಧದಿಂದ ಹೆದರುವವರಿಗೆ ಭಯವನ್ನು ಹೆಚ್ಚುಮಾಡುತ್ತಿತ್ತು. ಯೋಧರು ಪರಸ್ಪರವಾಗಿ ಸಂಹರಿಸುವ ಇಚ್ಛೆಯಿಂದ ಯುದ್ಧಕ್ಕೆ ಪ್ರವೇಶಿಸುತ್ತಿದ್ದರು. ಪ್ರಾಣವನ್ನೇ ಒತ್ತೆಯಿಟ್ಟು ಭಯಂಕರವಾದ ಯುದ್ಧವು ಆರಂಭವಾಯಿತು. ಘೋರವಾದ ಯುದ್ಧವು ಯಮನ ರಾಜ್ಯವನ್ನು ವೃದ್ಧಿಗೊಳಿಸುವಂತಿತ್ತು. ಅಂತಹ ಯುದ್ಧದಲ್ಲಿ ಪಾಂಡವರು ಹರಿತವಾದ ಬಾಣಗಳಿಂದ ನಿನ್ನ ಸೈನ್ಯವನ್ನು ನಾಶಮಾಡಿದರು.

ತಥೈವ ತಾವಕಾ ಯೋಧಾ ಜಘ್ನುಃ ಪಾಂಡವಸೈನಿಕಾನ್ ।
ತಸ್ಮಿಂಸ್ತಥಾ ವರ್ತಮಾನೇ ಯುದ್ಧೇ ಭೀರುಭಯಂಕರೇ ॥೮೦॥

ಪೂರ್ವಾಹ್ಣೇ ಚಾಪಿ ಸಂಪ್ರಾಪ್ತೇ ಭಾಸ್ಕರೋದಯನಂ ಪ್ರತಿ ।
ಲಬ್ಧಲಕ್ಷಾಃ ಪರೇ ರಾಜನ್ ರಕ್ಷಿತಾಶ್ಚ ಮಹಾತ್ಮಭಿಃ ॥೮೧॥

ಅಯೋಧಯಂಸ್ತವ ಬಲಂ ಮೃತ್ಯುಂ ಕೃತ್ವಾ ನಿವರ್ತನಮ್ ।
ಬಲಿಭಿಃ ಪಾಂಡವೈರ್ದಪ್ತೈಃ ಲಬ್ಧಲಕ್ಷೈಃ ಪ್ರಹಾರಿಭಿಃ ॥೮೨॥

ಕೌರವ್ಯಸೀದತ್ಪ್ರತನಾ ಗೌರಿವಾಗ್ನಿಸಮಾಕುಲಾ ।
ತಾಂ ದೃಷ್ಟ್ವಾ ಸೀದತೀಂ ಸೇನಾಂ ಪಂಕಗಾಮಿವ ದುರ್ಬಲಾಮ್॥೮೩॥

ಉಜ್ಜಿಹೀರ್ಷುಸ್ತದಾ ಶಲ್ಯಃ ಪ್ರದುದ್ರಾವ ಚಮೂಪತಿಃ ।
ಮದ್ರರಾಜಸ್ತು ಸಂಕ್ರುದ್ಧೋ ಗೃಹೀತ್ವಾ ಧನುರುತ್ತಮಮ್ ॥೮೪॥

ಹಾಗೆಯೇ ನಿನ್ನ ಕಡೆಯ ಯೋಧರು ಪಾಂಡವ ಸೈನಿಕರನ್ನು ನಾಶಮಾಡಿದರು. ಹೀಗೆ ಹೆದರಿಕೆಯುಳ್ಳವರಿಗೆ ಭಯಂಕರವಾಗಿ ಕಾಣಿಸುವ ಯುದ್ಧವು ಪೂರ್ವಾಹ್ಣದ ಸೂರ್ಯೋದಯದ ಸಮಯದಲ್ಲಿ ನಡೆಯಿತು. ರಾಜನೇ! ಮಹಾತ್ಮರಿಂದ ರಕ್ಷಿತರಾದ ಯುದ್ಧಕುಶಲರಾದ ಇತರ ಯೋಧರು ಮೃತ್ಯುವನ್ನೇ ಹಿಮ್ಮೆಟ್ಟಿಸಿ ನಿನ್ನ ಸೈನ್ಯದೊಡನೆ ಹೋರಾಡಿದರು. ಗುರಿಯನ್ನು ಭೇದಿಸುವುದರಲ್ಲಿ ನಿಪುಣರಾದ ಬಲಶಾಲಿಗಳಾದ ಪಾಂಡವರು ಕೌರವಸೈನ್ಯವನ್ನು ಆಕ್ರಮಿಸಿದರು. ಕೌರವನ ಸೇನೆಯು ಬೆಂಕಿಯಿಂದ ಆವರಿಸಲ್ಪಟ್ಟ ಹಸುವಿನಂತೆ ಬಹಳ ಕಷ್ಟವನ್ನು ಅನುಭವಿಸಿತು. ಹೀಗೆ ಕೆಸರಲ್ಲಿ ಸಿಕ್ಕಿಕೊಂಡ ದುರ್ಬಲವ್ಯಕ್ತಿಯಂತೆ ಕಷ್ಟಕ್ಕೊಳಗಾದ ಸೈನ್ಯವನ್ನು ನೋಡಿ ಸೇನಾಪತಿಯಾದ ಶಲ್ಯನು ಆ ಸೈನ್ಯವನ್ನು ರಕ್ಷಿಸುವುದಕ್ಕಾಗಿ ಓಡಿಬಂದನು. ಶಲ್ಯನು ಕೈಯಲ್ಲಿ ಶ್ರೇಷ್ಠವಾದ ಬಿಲ್ಲನ್ನು ಹಿಡಿದುಕೊಂಡಿದ್ದನು.

ಆವಿವೇಶ ತತಸ್ತೀವ್ರಂ ತಾವಕಾನಾಂ ಮಹದ್ಭಯಮ್ ।
ಪಾಂಡವಾನಾಂ ಚ ರಾಜೇಂದ್ರ ತಥಾ ಭೂತೇ ಮಹಾಹವೇ ॥೮೫॥

ರಾಜೇಂದ್ರ! ಹೀಗೆ ನಡೆದ ಯುದ್ಧದಲ್ಲಿ ನಿನ್ನ ಕಡೆಯವರಿಗೆ ಬಹಳವಾದ ಭಯವು ಉಂಟಾಯಿತು. ಪಾಂಡವರೂ ಭಯಗ್ರಸ್ತರಾದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಲ್ಯಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೊಂದನೆಯ ಅಧ್ಯಾಯ

ಶಲ್ಯನ ಪರಾಕ್ರಮ. ಕೌರವ-ಪಾಂಡವರ ದ್ವಂದ್ವಯುದ್ಧ.
ಭೀಮಸೇನನು ಶಲ್ಯನನ್ನು ಸೋಲಿಸಿದ್ದು.

ಸಂಜಯಃ

ತಸ್ಮಿನ್ ವಿಲುಲಿತೇ ಸೈನ್ಯೇ ವಧ್ಯಮಾನೇ ಪರಸ್ಪರಮ್ ।
ಅಭ್ಯದ್ರವತ ಸಂಗ್ರಾಮೇ ಪಾಂಡವಾನಾತತಾಯಿನಃ ॥೧॥

ಸಂಜಯ– ಎರಡೂ ಸೇನೆಗಳು ಪರಸ್ಪರವಾಗಿ ಹೊಡೆದುಕೊಂಡು ನಷ್ಟವಾಗುತ್ತಿರಲು ಆತತಾಯಿಗಳು ಪಾಂಡವರನ್ನು ಯುದ್ಧದಲ್ಲಿ ಎದುರಿಸಿದರು.

ಪಾಂಡವಾಶ್ಚ ಮಹಾರಾಜ ಸಮರೇ ಜಿತಕಾಶಿನಃ ।
ಮದ್ರರಾಜಂ ಸಮಾಸಾದ್ಯ ವಿವ್ಯಧುರ್ನಿಶಿತೈಃ ಶರೈಃ ॥೨॥

ಮಹಾರಾಜ! ಯುದ್ಧದಲ್ಲಿ ಜಯವನ್ನು ಬಯಸುವ ಪಾಂಡವರಾದರೂ ಶಲ್ಯನ ಹತ್ತಿರಕ್ಕೆ ಬಂದು ಹರಿತವಾದ ಬಾಣಗಳಿಂದ ಹೊಡೆದರು.

ತತಃ ಶರಶತೈಸ್ತೀಕ್ಷ್ಣೈಃ ಮದ್ರರಾಜೋ ಮಹಾರಥಃ ।
ಅರ್ದಯಾಮಾಸ ತಾಂ ಸೇನಾಂ ಧರ್ಮರಾಜಸ್ಯ ಪಶ್ಯತಃ ॥೩॥

ಮಹಾರಥನಾದ ಶಲ್ಯನು ಚೂಪಾದ ನೂರು ಬಾಣಗಳಿಂದ ಧರ್ಮರಾಜನು ನೋಡುತ್ತಿದ್ದಂತೆಯೇ ಅವನ ಸೈನ್ಯವನ್ನು ಪುಡಿಮಾಡಿದನು.

ಪ್ರಾದುರಾಸನ್ ನಿಮಿತ್ತಾನಿ ಘೋರರೂಪಾಣ್ಯನೇಕಶಃ ।
ಚಚಾಲ ಶಬ್ದಂ ಕುರ್ವಾಣಾ ಮಹೀ ಚಾಪಿ ಸಪರ್ವತಾ ॥೪॥

ಆಗ ಘೋರರೂಪದ ಅನೇಕ ಶಕುನಗಳು ಕಾಣಿಸಿಕೊಂಡವು. ಪರ್ವತದಿಂದ ಸಹಿತವಾದ ಭೂಮಿಯು ಶಬ್ದವನ್ನು ಉಂಟುಮಾಡುತ್ತಾ ಕಂಪಿಸಿತು.

ಸದಂಡಶೂಲ ದೀಪ್ತಾಗ್ರಾಃ ಶೀರ್ಯಮಾಣಾಃ ಸಮಂತತಃ ।
ಉಲ್ಕಾ ಭೂಮೌ ದಿವಃ ಪೇತುಃ ಆಹತ್ಯ ರವಿಮಂಡಲಮ್ ॥೫॥

ಸೂರ್ಯಮಂಡಲಕ್ಕೆ ತಾಗಿ ಉಲ್ಕೆಗಳು ಆಕಾಶದಿಂದ ಭೂಮಿಗೆ ಎಲ್ಲಾ ಕಡೆಗಳಲ್ಲಿಯೂ ಬೀಳತೊಡಗಿದವು. ಜೊತೆಗೆ ದಂಡಾಕಾರದ ಶೂಲಗಳೂ ಬಿದ್ದವು. ಆ ಶೂಲದ ತುದಿಗಳು ಪ್ರಜ್ವಲಿಸುತ್ತಿದ್ದವು.

ಮೃಗಾಶ್ಚ ಮಹಿಷಾಶ್ಚೈವ ಪಕ್ಷಿಣಶ್ಚ ವಿಶಾಂಪತೇ ।
ಅಪಸವ್ಯಂ ತದಾ ಚಕ್ರುಃ ಸೇನಾಂ ತೇ ಬಹುಶೋ ನೃಪ ॥೬॥

ರಾಜನೇ! ಜಿಂಕೆಗಳು, ಕೋಣಗಳು, ಪಕ್ಷಿಗಳು ನಿನ್ನ ಸೇನೆಗೆ ಎಡದಿಂದ ಸುತ್ತುಬರುತ್ತಿದ್ದವು.

ತತಸ್ತು ಯುದ್ಧಮತ್ಯುಗ್ರಮಭವತ್ ಸಂಪ್ರಹಾರಿಣಾಮ್ ॥೭॥

ಶಸ್ತ್ರಪ್ರಹಾರವನ್ನು ಮಾಡುವ ಯೋಧರ ನಡುವೆ ಬಹಳ ಉಗ್ರವಾದ ಯುದ್ಧವು ನಡೆಯಿತು.

ತತಃ ಸರ್ವಾಣ್ಯನೀಕಾನಿ ಸನ್ನಿಪತ್ಯ ಜನಾಧಿಪ ।
ಅಭ್ಯಯುಃ ಕೌರವಾ ರಾಜನ್ ಪಾಂಡವಾನಾಮನೀಕಿನೀಮ್ ॥೮॥

ಜನನಾಯಕನೇ! ರಾಜನೇ! ಅನಂತರ ಸೈನ್ಯವನ್ನೆಲ್ಲಾ ಒಗ್ಗೂಡಿಸಿ ಕೌರವರು ಪಾಂಡವರ ಸೈನ್ಯವನ್ನು ಎದುರಿಸಿದರು.

ಶಲ್ಯಸ್ತು ಶರವರ್ಷೇಣ ವರ್ಷನ್ನಿವ ಸಹಸ್ರದೃಕ್ ।
ಅಭ್ಯವರ್ಷದದೀನಾತ್ಮಾ ಕುಂತೀಪುತ್ರಂ ಯುಧಿಷ್ಠಿರಮ್ ॥೯॥

ಶಲ್ಯನಾದರೂ ಇಂದ್ರನು ಮಳೆಗೆರೆಯುವಂತೆ ಬಾಣಗಳ ಮಳೆಯನ್ನು ಸುರಿಸುತ್ತಾ ಧೃತಿಗೆಡದೆ ಕುಂತೀಪುತ್ರ ಯುಧಿಷ್ಠಿರನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ಭೀಮಸೇನಂ ಶರೈಶ್ಚಾಪಿ ರುಗ್ಮಪುಂಖೈಃ ಶಿಲಾಶಿತೈಃ ।
ದ್ರೌಪದೇಯಾಂಸ್ತತಃ ಸರ್ವಾನ್ ಮಾದ್ರೀಪುತ್ರೌ ಚ ಪಾಂಡವೌ ॥೧೦॥

ಧೃಷ್ಟದ್ಯುಮ್ನಂ ಸ ಶೈನೇಯಂ ಶಿಖಂಡಿನಮಥಾಹವೇ ।
ಏಕೈಕಂ ದಶಭಿರ್ಬಾಣೈಃ ವಿವ್ಯಾಧ ಚ ಮಹಾಬಲಃ ॥೧೧॥

ಅನಂತರ ಯುದ್ಧದಲ್ಲಿ ಮಹಾಬಲಶಾಲಿಯಾದ ಶಲ್ಯನು ಬಂಗಾರದ ರೆಕ್ಕೆಗಳುಳ್ಳ, ಸಾಣೆಹಿಡಿದ ಬಾಣಗಳಿಂದ ಭೀಮಸೇನನನ್ನೂ, ದ್ರೌಪದಿಯ ಎಲ್ಲಾ ಮಕ್ಕಳನ್ನೂ, ನಕುಲ-ಸಹದೇವರನ್ನೂ, ಧೃಷ್ಟದ್ಯುಮ್ನನನ್ನೂ, ಶೈನೇಯನನ್ನೂ, ಶಿಖಂಡಿಯನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಹತ್ತತ್ತು ಬಾಣಗಳಿಂದ ಹೊಡೆದನು.

ತತೋಽಸೃಜದ್ ಬಾಣವರ್ಷಂ ಘರ್ಮಾಂತೇ ಮಘವಾನಿವ ॥೧೨॥

ಬೇಸಿಗೆಯ ಕೊನೆಗೆ ಇಂದ್ರನು ಮಳೆ ಸುರಿಸುವಂತೆ ಬಾಣಗಳ ಮಳೆಯನ್ನು ಸುರಿಸಿದನು.

ತತಃ ಪ್ರಭದ್ರಕಾ ರಾಜನ್ ಸೋಮಕಾಶ್ಚ ಸಹಸ್ರಶಃ ।
ಪತಿತಾಃ ಪಾತ್ಯಮಾನಾಶ್ಚ ದೃಶ್ಯಂತೇ ತಸ್ಯ ಸಾಯಕೈಃ ॥೧೩॥

ರಾಜನೇ! ಅನಂತರ ಶಲ್ಯನ ಬಾಣಗಳ ಹೊಡೆತದಿಂದ ಪ್ರಭದ್ರಕರು, ಸೋಮಕರು ಸಾವಿರಾರು ಸಂಖ್ಯೆಯಲ್ಲಿ ಕೆಳಗೆ ಬಿದ್ದಿರುವುದು ಕಂಡಿತು.

ಭ್ರಮರಾಣಾಮಿವ ವ್ರಾತಾಃ ಶಲಭಾನಾಮಿವ ವ್ರಜಾಃ ।
ಹ್ರಾದಿನ್ಯ ಇವ ಮೇಘೇಭ್ಯಃ ಶಲ್ಯಸ್ಯ ನ್ಯಪತನ್ ಶರಾಃ ॥೧೪॥

ಶಲ್ಯನು ಬಿಡುತ್ತಿರುವ ಬಾಣಗಳು ದುಂಬಿಗಳ ಸಮೂಹದಂತೆ, ಶಲಭಗಳ ಗುಂಪಿನಂತೆ ಕಾಣಿಸುತ್ತಿದ್ದವು. ಮೋಡಗಳಿಂದ ಹೊರಹೊಮ್ಮುವ ಮಿಂಚಿನಂತೆ ಇದ್ದವು.

ದ್ವಿರದಾಸ್ತುರಗಾಶ್ಚಾರ್ತಾಃ ಪತ್ತಯೋ ರಥಿನಸ್ತಥಾ ।
ಶಲ್ಯಸ್ಯ ಬಾಣೈರ್ನ್ಯಪತನ್ ಬಭ್ರಮುರ್ವ್ಯನದಂಸ್ತಥಾ ॥೧೫॥

ಶಲ್ಯನ ಬಾಣಗಳಿಂದ ಹೊಡೆಯಲ್ಪಟ್ಟ ಆನೆಗಳು, ಕುದುರೆಗಳು, ಪದಾತಿಗಳು ಹಾಗೂ ರಥಿಕರು ನೆಲಕ್ಕೊರಗಿದರು. ಮೂರ್ಛೆಹೋದರು ಮತ್ತು ನೋವಿನಿಂದ ನರಳಿದರು.

ಆವಿಷ್ಟ ಇವ ಮದ್ರೇಶೋ ಮನ್ಯುನಾ ಪೌರುಷೇಣ ಚ ।
ಪ್ರೋತ್ಸಾದಯದರೀನ್ ಸಂಖೇ ಕಾಲಸೃಷ್ಟ ಇವಾಂತಕಃ ॥೧೬॥

ಪ್ರಳಯಕಾಲದ ಯಮನ ಹಾಗೆ ಶಲ್ಯನು ಕೋಪ ಮತ್ತು ಪೌರುಷಗಳಿಂದ ಯುಕ್ತನಾಗಿ ಯುದ್ಧದಲ್ಲಿ ಶತ್ರುಗಳನ್ನು ಸದೆಬಡಿದನು.

ವಿನರ್ದಮಾನೋ ಮದ್ರೇಶೋ ಮೇಘಹ್ರಾದೋ ಮಹಾಬಲಃ ॥೧೭॥

ಮೇಘದಂತೆ ಗಂಭೀರಧ್ವನಿ ಮಾಡುತ್ತಾ ಮಹಾಬಲನಾದ ಶಲ್ಯನು ಶತ್ರುಸೈನ್ಯವನ್ನು ನಾಶಮಾಡಿದನು.

ಸಾ ವಧ್ಯಮಾನಾ ಶಲ್ಯೇನ ಪಾಂಡವಾನಾಮನೀಕಿನೀ ।
ಅಜಾತಶತ್ರುಂ ಕೌಂತೇಯಮಭ್ಯಧಾವದ್ ಯುಧಿಷ್ಠಿರಮ್ ॥೧೮॥

ಶಲ್ಯನಿಂದ ಆಘಾತಕ್ಕೊಳಗಾದ ಪಾಂಡವರ ಆ ಸೈನ್ಯವು ಅಜಾತಶತ್ರುವಾದ ಯುಧಿಷ್ಠಿರನ ಬಳಿಗೆ ಓಡಿಹೋಯಿತು.

ತಾಂ ಸಮಪ್ಯ ತತಃ ಸಂಖೇ ಲಘುಹಸ್ತಃ ಶಿತೈಃ ಶರೈಃ ।
ಶರವರ್ಷೇಣ ಮಹತಾ ಯುಧಿಷ್ಠಿರಮಪೀಡಯತ್ ॥೧೯॥

ಅನಂತರ ಯುದ್ಧದಲ್ಲಿ ವೇಗವಾಗಿ ಶಸ್ತ್ರಪ್ರಯೋಗಮಾಡಬಲ್ಲ ಶಲ್ಯನು ಆ ಪಾಂಡವರ ಸೈನ್ಯವನ್ನು ಘಾಸಿಗೊಳಿಸಿ, ಯುಧಿಷ್ಠಿರನ ಮೇಲೆ ಬಹಳವಾಗಿ ಹರಿತವಾದ ಬಾಣಗಳ ಮಳೆಯನ್ನು ಸುರಿಸಿ ಘಾಸಿಗೊಳಿಸಿದನು.

ತಮಾಪತಂತಂ ಜಾತ್ಯಶ್ವೈಃ ಕ್ರುದ್ಧೋ ರಾಜಾ ಯುಧಿಷ್ಠಿರಃ ।
ಅವಾರಯಚ್ಛರೈಸ್ತೀಕ್ಷ್ಣೈಃ ಮತ್ತದ್ವಿಪಮಿವಾಂಕುಶೈಃ ॥೨೦॥

ಒಳ್ಳೆಯ ಜಾತಿಯ ಆಶ್ವಗಳುಳ್ಳ ರಥದಮೂಲಕ ತನ್ನ ಮೇಲೆ ಎರಗಿದ ಶಲ್ಯನನ್ನು ಕುಪಿತನಾದ ಯುಧಿಷ್ಠಿರನು, ಮದವೇರಿದ ಆನೆಯನ್ನು ಅಂಕುಶದಿಂದ ನಿಗ್ರಹಿಸುವಂತೆ ಹರಿತವಾದ ಬಾಣಗಳಿಂದ ತಡೆದನು.

ತಸ್ಯ ಶಲ್ಯಃ ಶರಂ ಘೋರಂ ಮುಮೋಚಾಶೀವಿಷೋಪಮಮ್ ।
ಸೋಽತಿವಿದ್ಧೋ ಮಹಾತ್ಮಾ ವೈ ವೇಗೇನಾಭ್ಯಪತಚ್ಚ ಗಾಮ್ ॥೨೧॥

ಶಲ್ಯನು ಧರ್ಮರಾಜನ ಮೇಲೆ ಸರ್ಪಕ್ಕೆ ಸದೃಶವಾದ ಘೋರವಾದ ಬಾಣವನ್ನು ಪ್ರಯೋಗಿಸಿದನು. ಅದರ ಹೊಡೆತಕ್ಕೆ ಒಳಗಾದ ಮಹಾತ್ಮನಾದ ಧರ್ಮರಾಜನು ವೇಗದಿಂದ ಭೂಮಿಯಲ್ಲಿ ಬಿದ್ದನು.

ತತೋ ವೃಕೋದರಃ ಕ್ರುದ್ಧಃ ಶಲ್ಯಂ ವಿವ್ಯಾಧ ಸಪ್ತಭಿಃ ।
ಪಂಚಭಿಃ ಸಹದೇವಸ್ತು ನಕುಲೋ ದಶಭಿಃ ಶರೈಃ ॥೨೨॥

ಇದರಿಂದ ಕುಪಿತನಾದ ಭೀಮನು ಶಲ್ಯನ ಮೇಲೆ ಏಳು ಬಾಣಗಳನ್ನು ಬಿಟ್ಟು ಶಲ್ಯನನ್ನು ಗಾಯಗೊಳಿಸಿದನು. ಸಹದೇವನು ಐದು ಹಾಗೂ ನಕುಲನು ಹತ್ತು ಬಾಣಗಳನ್ನು ಬಿಟ್ಟು ಘಾಸಿಗೊಳಿಸಿದರು.

ದ್ರೌಪದೇಯಾಶ್ಚ ಶತ್ರುಘ್ನಂ ಶೂರಮಾರ್ತಾಯನಿಂ ಶರೈಃ ।
ಅಭ್ಯವರ್ಷನ್ ಮಹಾಮೇಘಾ ಮಹೀಧರಮಿವೋನ್ನತಮ್ ॥೨೩॥

ದ್ರೌಪದಿಯ ಮಕ್ಕಳೂ ಕೂಡ ಶತ್ರುಸಂಹಾರಕನಾದ ಶಲ್ಯನ ಮೇಲೆ ಬಾಣಗಳಿಂದ ಮಳೆಯನ್ನೇ ಸುರಿಸಿದರು. ಇದು ದೊಡ್ಡದಾದ ಮೋಡಗಳು ಪರ್ವತದ ಮೇಲೆ ಮಳೆಯನ್ನು ಸುರಿಸಿದಂತೆ ಇತ್ತು.

ತತೋ ದೃಷ್ಟ್ವಾ ವಿನರ್ದಂತಂ ಶಲ್ಯಂ ಪಾರ್ಥೈಃ ಸಮಂತತಃ ।
ಕೃತವರ್ಮಾ ಕೃಪಶ್ಚೈವ ಸಂಕ್ರುದ್ಧಾವಭ್ಯಧಾವತಾಮ್ ॥೨೪॥

ಅನಂತರ ಪಾಂಡವರು ಎಲ್ಲಾ ಕಡೆಯಿಂದಲೂ ಶಲ್ಯನನ್ನು ಘಾಸಿಗೊಳಿಸುವುದನ್ನು ಕಂಡ ಕೃತವರ್ಮ ಮತ್ತು ಕೃಪಾಚಾರ್ಯರು ಕೋಪದಿಂದ ಓಡಿ ಬಂದರು.

ಉಲೂಕಶ್ಚಾಪಿ ಕೌರವ್ಯಃ ಶಕುನಿಶ್ಚಾಪಿ ಸೌಬಲಃ ।
ಸ್ಮಯಮಾನಶ್ಚ ಶನಕೈರಶ್ವತ್ಥಾಮಾ ಮಹಾಬಲಃ ॥೨೫॥

ತವ ಪುತ್ರಾಶ್ಚ ಸಬಲಾ ಜುಗುಪುಃ ಶಲ್ಯಮಾಹವೇ ॥೨೬॥

ಕುರುಕುಲೋದ್ಭವನಾದ ಉಲೂಕ, ಸುಬಲದೇಶದ ಶಕುನಿ, ಮುಗುಳ್ನಗುತ್ತಿದ್ದ ಮಹಾಬಲಶಾಲಿ ಅಶ್ವತ್ಥಾಮ ಹಾಗೂ ನಿನ್ನ ಮಕ್ಕಳು ಯುದ್ಧದಲ್ಲಿ ಶಲ್ಯನನ್ನು ರಕ್ಷಿಸಿದರು.

ಭೀಮಸೇನಂ ತ್ರಿಭಿರ್ವಿದ್ಧ್ವಾ ಕೃತವರ್ಮಾ ಶಿಲೀಮುಖೈಃ ।
ಬಾಣವರ್ಷೇಣ ಮಹತಾ ಕ್ರುದ್ಧರೂಪಮವಾರಯತ್ ॥೨೭॥

ಕೃತವರ್ಮನು ಭೀಮನ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಿ ಹೊಡೆದು, ಬಹಳವಾದ ಬಾಣದ ಮಳೆಯನ್ನೇ ಸುರಿಸಿ ಕ್ರುದ್ಧನಾದ ಭೀಮನನ್ನು ತಡೆದನು.

ಧೃಷ್ಟದ್ಯುಮ್ನಂ ಕೃಪಃ ಕ್ರುದ್ಧೋ ಬಾಣವರ್ಷೈರವರ್ಷಯತ್ ।
ದ್ರೌಪದೇಯಾಂಶ್ಚ ಶಕುನಿರ್ಯಮೌ ಚ ದ್ರೌಣಿರಭ್ಯಯಾತ್ ॥೨೮॥

ಕುಪಿತನಾದ ಕೃಪನು ಧೃಷ್ಟದ್ಯುಮ್ನನನ್ನು ಬಾಣಗಳ ಮಳೆಯಿಂದ ತಡೆದನು. ದ್ರೌಪದಿಯ ಮಕ್ಕಳನ್ನು ಶಕುನಿಯೂ, ನಕುಲ-ಸಹದೇವರನ್ನು ಅಶ್ವತ್ಥಾಮನೂ ಎದುರಿಸಿದರು.

ದುರ್ಯೋಧನೋ ಯುಧಾಂ ಶ್ರೇಷ್ಠೋ ಹ್ಯಾಹವೇ ಕೇಶವಾರ್ಜುನೌ ।
ಸಮಭ್ಯಗಾದುಗ್ರತೇಜಾಃ ಶರೈಶ್ಚಾಭ್ಯಹನದ್ ಯುಧಿ ॥೨೯॥

ಯುದ್ಧದಲ್ಲಿ ಶ್ರೇಷ್ಠನೆನಿಸಿದ ದುರ್ಯೋಧನನು ಉಗ್ರತೇಜಸ್ಸಿನಿಂದ ಕೂಡಿಕೊಂಡು ರಣರಂಗದಲ್ಲಿ ಕೇಶವ ಮತ್ತು ಅರ್ಜುನನನ್ನು ಎದುರಿಸಿದನು. ಮತ್ತು ಬಾಣಗಳಿಂದ ಹೊಡೆದನು.

ಏವಂ ದ್ವಂದ್ವಶತಾನ್ಯಾಸನ್ ತ್ವದೀಯಾನಾಂ ಪರೈಃ ಸಹ ।
ಘೋರರೂಪಾಣಿ ಚಿತ್ರಾಣಿ ತತ್ರ ತತ್ರ ವಿಶಾಂಪತೇ ॥೩೦॥

ಹೀಗೆ ನಿನ್ನ ಕಡೆಯವರು ಪಾಂಡವರೊಂದಿಗೆ ಅನೇಕ ದ್ವಂದ್ವಯುದ್ಧವನ್ನು ಮಾಡಿದರು. ರಾಜನೇ! ಈ ಘೋರವಾದ ದ್ವಂದ್ವಯುದ್ಧವು ಅನೇಕ ಕಡೆಗಳಲ್ಲಿ ನಡೆಯಿತು.

ಋಕ್ಷವರ್ಣಾನ್ ಜಘಾನಾಶ್ವಾನ್ ಭೋಜೋ ಭೀಮಸ್ಯ ಸಂಯುಗೇ ॥

ರಣರಂಗದಲ್ಲಿ ಕೃತವರ್ಮನು ಭೀಮನ ನಕ್ಷತ್ರದ ವರ್ಣವುಳ್ಳ ಕುದುರೆಗಳನ್ನು ಬೀಳಿಸಿದನು.

ಸೋಽವತೀರ್ಯ ರಥೋಪಸ್ಥಾದ್ಧತಾಶ್ವಃ ಪಾಂಡುನಂದನಃ ।
ಕಾಲೋ ದಂಡಮಿವೋದ್ಯಮ್ಯ ಗದಾಪಾಣಿರಯುಧ್ಯತ ॥೩೨॥

ಕುದುರೆಗಳನ್ನು ಕಳೆದುಕೊಂಡ ಭೀಮನು ರಥದಿಂದ ಕೆಳಗಿಳಿದು ಯಮನು ದಂಡವನ್ನು ಹಿಡಿದಂತೆ ಗದೆಯನ್ನು ಹಿಡಿದುಕೊಂಡು ಯುದ್ಧಮಾಡಿದನು.

ಪ್ರಮುಖೇ ಸಹದೇವಸ್ಯ ಜಘಾನಾಶ್ವಾಂಸ್ತು ಮದ್ರರಾಟ್ ।
ತತಃ ಶಲ್ಯಸ್ಯ ತನಯಂ ಸಹದೇವೋಽಸಿನಾಽವಧೀತ್ ॥೩೩॥

ಶಲ್ಯನು ಸಹದೇವನ ಕುದುರೆಗಳನ್ನು ಸಾಯಿಸಿದನು. ಅನಂತರ ಸಹದೇವನು ಶಲ್ಯನ ಮಗನನ್ನು ಕತ್ತಿಯಿಂದ ಕೊಂದನು.

ಗೌತಮಃ ಪುನರಾಚಾರ್ಯೋ ಧೃಷ್ಟದ್ಯುಮ್ನಮಯೋಧಯತ್ ।
ಅಸಂಭ್ರಾಂತೋ ಹ್ಯಸಂಭ್ರಾಂತಂ ಯತ್ನವಾನ್ ಯತ್ನವತ್ತರಮ್ ॥೩೪॥

ಪ್ರಯತ್ನಶೀಲನಾದ ಕೃಪಾಚಾರ್ಯನು ಯಾವುದೇ ಗಾಬರಿಗೊಳಗಾಗದೆ ಧೃಷ್ಟದ್ಯುಮ್ನನೊಡನೆ ಯುದ್ಧ ಮಾಡಿದನು. ಧೃಷ್ಟದ್ಯುಮ್ನನೂ ಹಾಗೆಯೇ ಪ್ರಯತ್ನಶೀಲನಾಗಿದ್ದನು ಹಾಗೂ ಯಾವುದೇ ಗಾಬರಿಗೆ ಒಳಗಾಗಲಿಲ್ಲ.

ದ್ರೌಪದೇಯಾಂಸ್ತಥಾ ವೀರಾನ್ ಏಕೈಕಂ ದಶಭಿಃ ಶರೈಃ ।
ಅವಿಧ್ಯದಾಚಾರ್ಯಸುತೋ ನಾತಿಕ್ರುದ್ಧಃ ಸ್ಮಯನ್ನಿವ ॥೩೫॥

ಅಶ್ವತ್ಥಾಮನು ಬಹಳ ಕೋಪವನ್ನು ತೋರಿಸದೆ ಮುಗುಳ್ನಗುತ್ತಾ ದ್ರೌಪದಿಯ ಮಕ್ಕಳ ಮೇಲೆ ಪ್ರತ್ಯೇಕ ಪ್ರತ್ಯೇಕವಾಗಿ ಹತ್ತತ್ತು ಬಾಣಗಳನ್ನು ಪ್ರಯೋಗಿಸಿದನು.

ಭೋಜಶ್ಚ ಭೀಮಸೇನಸ್ಯ ಜಘಾನಾಶ್ವಾನ್ ಮಹಾಹವೇ ।
ಸೋಽವತೀರ್ಯ ರಥಾತ್ ತೂರ್ಣಂ ಹತಾಶ್ವಃ ಪಾಂಡುನಂದನಃ ॥

ಕಾಲೋ ದಂಡಮಿವೋದ್ಯಮ್ಯ ಗದಾಂ ಕ್ರುದ್ಧೋ ಮಹಾಬಲಃ ।
ಪೋಥಯಾಮಾಸ ತುರಗಾನ್ ರಥಂ ಚ ಕೃತವರ್ಮಣಃ ॥೩೭॥

ಕೃತವರ್ಮನು ಯುದ್ಧದಲ್ಲಿ ಭೀಮಸೇನನ ಕುದುರೆಗಳನ್ನು ಬೀಳಿಸಿದನು. ಕುದುರೆಗಳನ್ನು ಕಳೆದುಕೊಂಡ ಭೀಮಸೇನನು ಕೂಡಲೇ ರಥದಿಂದ ಕೆಳಗಿಳಿದು ಯಮನು ದಂಡವನ್ನೆತ್ತಿಕೊಂಡಂತೆ ಗದೆಯನ್ನು ಹಿಡಿದುಕೊಂಡು ಕೃತವರ್ಮನ ಕುದುರೆಗಳನ್ನೂ, ರಥವನ್ನು ಪುಡಿಮಾಡಿದನು.

ಕೃತವರ್ಮಾ ತ್ವವಪ್ಲುತ್ಯ ರಥಾತ್ ತಸ್ಮಾದಪಾಕ್ರಮತ್ ॥೩೮॥

ಕೃತವರ್ಮನಾದರೂ ರಥದಿಂದ ಕೆಳಗೆ ಧುಮುಕಿ ಓಡಿಹೋದನು.

ಶಲ್ಯೋಽಪಿ ರಾಜನ್ ಸಂಕ್ರುದ್ಧೋ ನಿಘ್ನನ್ ಪಾಂಡವಸೋಮಕಾನ್ ।
ಪುನರೇವ ಶಿತೈರ್ಬಾಣೈರ್ಯುಧಿಷ್ಠಿರಮಪೀಡಯತ್ ॥೩೯॥

ರಾಜನೇ! ಕ್ರುದ್ಧನಾದ ಶಲ್ಯನು ಪಾಂಡವರನ್ನೂ ಸೋಮಕರನ್ನೂ ಹೊಡೆಯುತ್ತಾ ಪುನಃ ಹರಿತವಾದ ಬಾಣಗಳಿಂದ ಯುಧಿಷ್ಠಿರನನ್ನು ಪೀಡಿಸಿದನು.

ತಸ್ಯ ಭೀಮೋ ರಣೇ ಕ್ರುದ್ಧಃ ಸಂದಷ್ಟದಶನಚ್ಛದಃ ।
ವಿನಾಶಾಯಾಭಿಸಂಧಾಯ ಗದಾಮಾದತ್ತ ವೀರ್ಯವಾನ್ ॥೪೦॥

ರಣರಂಗದಲ್ಲಿ ಕೋಪದಿಂದ ಹಲ್ಲುಕಚ್ಚುತ್ತಾ ವೀರ್ಯವಂತನಾದ ಭೀಮನು ಆ ಶಲ್ಯನನ್ನು ಮುಗಿಸಲಿಕ್ಕಾಗಿ ಗದೆಯನ್ನು ಎತ್ತಿಕೊಂಡನು.

ಯಮದಂಡಪ್ರತೀಕಾಶಾಂ ಕಾಲರಾತ್ರಿಮಿವೋದ್ಯತಾಮ್ ।
ಗಜವಾಜಿಮನುಷ್ಯಾಣಾಂ ಪ್ರಾಣಾಂತಕರಣೇಮಪಿ ॥೪೧॥

ಹೇಮಪಟ್ಟಪರಿಕ್ಷಿಪ್ತಾಮುಲ್ಕಾಮಾಪತಿತಾಮಿವ ।
ಶೈಕ್ಯಾಂ ವ್ಯಾಲೀಮಿವಾತ್ಯುಗ್ರಾಂ ವಜ್ರಕಲ್ಪಾಮಯಸ್ಮಯೀಮ್ ॥೪೨॥

ಚಂದನಾಗರುಪಂಕಾಕ್ತಾಂ ಪ್ರಮದಾಮೀಪ್ಸಿತಾಮಿವ ।
ವಸಾಮೇದೋಽಸೃಗಾದಿಗ್ಧಾಂ ಜಿಹ್ವಾಂ ವೈವಸ್ವತೀಮಿವ ॥೪೩॥

ಬದ್ಧಘಂಟಾರವಯುತಾಂ ವಾಸವೀಮಶನೀಮಿವ ।
ನಿರ್ಮುಕ್ತಾಶೀವಿಷಾಕಾರಾಂ ಪೃಕ್ತಾಂ ಗಜಮದೈರಪಿ ॥೪೪॥

ತ್ರಾಸನೀಂ ಪರಸೈನ್ಯಾನಾಂ ಸ್ವಸೈನ್ಯಪರಿಹರ್ಷಿಣೀಮ್ ।
ಮನುಷ್ಯಲೋಕೇ ವಿಖ್ಯಾತಾಂ ಗಿರಿಶೃಂಗವಿದಾರಿಣೀಮ್ ॥೪೫॥

ಯಥಾ ಕೈಲಾಸಶಿಖರೇ ಮಹೇಶ್ವರಸಖಂ ಬಲೀ ।
ಆಹ್ವಯಾಮಾಸ ಕೌಂತೇಯಃ ಸಂಕ್ರುದ್ಧಮಲಕಾಪತಿಮ್ ॥೪೬॥

ಯಥಾ ಮಾಯಾವಿನೋ ದೃಪ್ತಾನ್ ಸುಬಹೂನ್ ಧನದಾಲಯೇ ।
ಜಘಾನ ಗುಹ್ಯಕಾನ್ ಕ್ರುದ್ಧಃ ಕಲ್ಮಾಷಾರ್ಥೇ ಮಹಾಬಲಃ ॥೪೭॥

ನಿವಾರ್ಯಮಾಣೋ ಬಹುಭಿಃ ದ್ರೌಪದ್ಯಾಃ ಪ್ರಿಯಮಾಸ್ಥಿತಃ ॥೪೮॥

ತಾಂ ವಜ್ರಮಣಿರತ್ನಾಂಕಾಮಷ್ಟಾಶ್ರಾಂ ವಜ್ರಗೌರವಾಮ್ ।
ಸಮುದ್ಯಮ್ಯ ಮಹಾಬಾಹುಃ ಶಲ್ಯಮಭ್ಯದ್ರವದ್ ರಣೇ ॥೪೯॥

ಆ ಗದೆಯು ಯಮನ ದಂಡದಂತಿತ್ತು. ಪ್ರಳಯಕಾಲದ ರಾತ್ರಿಯಂತೆ ಕಾಣಿಸುತ್ತಿತ್ತು. ಆನೆ ಕುದುರೆ ಮನುಷ್ಯರ ಪ್ರಾಣವನ್ನು ತೆಗೆಯುವ ಸಾಮರ್ಥ್ಯವನ್ನು ಹೊಂದಿತ್ತು. ಆ ಗದೆಗೆ ಬಂಗಾರದ ಹೊದಿಕೆಯನ್ನು ಹಾಕಲಾಗಿತ್ತು. ಮೇಲಿಂದ ಬೀಳುತ್ತಿರುವ ಉಲ್ಕೆಯಂತೆ ಇತ್ತು. ಬುಟ್ಟಿಯಲ್ಲಿ ಕುಳಿತಿರುವ ಸರ್ಪದಂತೆ ಘೋರವಾಗಿ ಇತ್ತು. ಕಬ್ಬಿಣದಿಂದ ರಚಿತವಾದ ಈ ಗದೆಯು ವಜ್ರಾಯುಧಕ್ಕೆ ಸಮಾನವಾಗಿತ್ತು. ಚಂದನ, ಅಗರುಗಳಿಂದ ಲೇಪಿತವಾಗಿತ್ತು. ಪರಿಮಳದಿಂದಾಗಿ ಅನುರಕ್ತಳಾದ ಸ್ತ್ರೀಯಂತೆ ಇತ್ತು. ರಕ್ತಮಾಂಸಮೇದಸ್ಸುಗಳಿಂದ ಸಿಕ್ತವಾದ ಯಮನ ನಾಲಿಗೆಯಂತೆ

ಕಾಣಿಸುತ್ತಿತ್ತು. ಅದಕ್ಕೆ ಜೋಡಿಸಿದ ಘಂಟೆಯು ಬಹಳ ಶಬ್ದವನ್ನು ಮಾಡುತ್ತಿತ್ತು. ಇಂದ್ರನ ವಜ್ರಾಯುಧದಂತೆ ಇತ್ತು. ಪಂಜರದಿಂದ ಹೊರಬಿಟ್ಟ ಸರ್ಪದ ಆಕಾರವುಳ್ಳದ್ದಾಗಿತ್ತು. ಮದಗಜಗಳಿಗೂ ಭಯವನ್ನುಂಟುಮಾಡುತ್ತಿತ್ತು. ಭೀಮಸೇನನ ಗದೆಯು ಶತ್ರುಗಳಿಗೆ ಭಯವನ್ನೂ ಸ್ವಪಕ್ಷದವರಿಗೆ ಆನಂದವನ್ನೂ ಉಂಟುಮಾಡುತ್ತಿತ್ತು. ಮನುಷ್ಯಲೋಕದಲ್ಲಿ ಬಹಳ ಪ್ರಸಿದ್ಧವಾಗಿದೆ. ಪರ್ವತಗಳ ಶಿಖರಗಳನ್ನೂ ಪುಡಿಮಾಡುವಂತಹದ್ದು. ಯಾವ ಗದೆಯನ್ನು ಹಿಡಿದುಕೊಂಡು ಬಲಶಾಲಿಯಾದ ಭೀಮಸೇನನು ಕೈಲಾಸದಲ್ಲಿರುದ್ರನ ಮಿತ್ರನಾದ ಕ್ರುದ್ಧನಾದ ಕುಬೇರನನ್ನು ಯುದ್ಧಕ್ಕೆ ಆಹ್ವಾನಿಸಿದನೋ ಆ ಗದೆ ಇದೇ ಆಗಿತ್ತು. ಸೌಗಂಧಿಕಾಪುಷ್ಪಹರಣ ಸಂದರ್ಭದಲ್ಲಿ ಯಾವ ಗದೆಯಿಂದ ಅಹಂಕಾರಿಗಳಾದ ಬಹಳ ಮಾಯಾವಿ ಗಂಧರ್ವರನ್ನು, ಗುಹ್ಯಕರನ್ನೂ ಮಹಾಬಲಶಾಲಿಯಾದ ಭೀಮಸೇನನು ಸಂಹರಿಸಿದನೋ ಅದೇ ಗದೆಯು ಇದು ಆಗಿತ್ತು. ದ್ರೌಪದಿಗೆ ಪ್ರಿಯವಾದ ಸೌಗಂಧಿಕಾಪುಷ್ಪ ಹರಣ ಸಂದರ್ಭದಲ್ಲಿ ಅನೇಕರ ವಿರೋಧವನ್ನೂ ಲೆಕ್ಕಿಸಲಿಲ್ಲ. ಅಂತಹ ಗದೆಯನ್ನು ಹಿಡಿದುಕೊಂಡು ಶಲ್ಯನೊಡನೆ ಯುದ್ಧಕ್ಕೆ ಬಂದನು. ಆ ಗದೆಯು ವಜ್ರದ ಮಣಿ, ರತ್ನಾದಿಗಳಿಂದ ಅಲಂಕೃತವಾಗಿತ್ತು. ವಜ್ರಾಯುಧದಷ್ಟು ಭಾರವಾದ ಗದೆಯನ್ನು ಎತ್ತಿ ಯುದ್ಧಕ್ಕೆ ನಡೆದನು.

ಗದಯಾ ಯುದ್ಧಕುಶಲಸ್ತಯಾ ದಾರುಣನಾದಯಾ ।
ಪೋಥಯಾಮಾಸ ಶಲ್ಯಸ್ಯ ಚತುರೋಽಶ್ವಾನ್ ಮಹಾಜವಾನ್ ॥೫೦॥

ಗದಾಯುದ್ಧದಲ್ಲಿ ನಿಪುಣನಾದ ಭೀಮಸೇನನು ಭಯಂಕರ ಶಬ್ದವನ್ನುಂಟು ಮಾಡುವ ಗದೆಯಿಂದ ಶಲ್ಯನ ರಥಕ್ಕೆ ಕಟ್ಟಿದ ಬಹಳ ವೇಗವುಳ್ಳ ನಾಲ್ಕು ಕುದುರೆಗಳನ್ನು ಸಂಹರಿಸಿದನು.

ತತಃ ಶಲ್ಯೋ ರಣೇ ಕ್ರುದ್ಧಃ ಪೀನೇ ವಕ್ಷಸಿ ತೋಮರಮ್ ।
ಚಿಕ್ಷೇಪ ಭೀಮಸೇನಸ್ಯ ಸೋಽಸ್ರವಚ್ಛೋಣಿತಂ ಬಹು ॥೫೧॥

ಅನಂತರ ಶಲ್ಯನು ಯುದ್ಧದಲ್ಲಿ ಭೀಮಸೇನನ ದಷ್ಟಪುಷ್ಟವಾದ ಎದೆಗೆ ತನ್ನ ತೋಮರಾಯುಧವನ್ನು ಬಿಸಾಡಿದನು. ಬಹಳವಾಗಿ ರಕ್ತವು ಸುರಿಯಿತು.

ತಮೇವಾದಾಯ ಭೀಮಸ್ತು ತತಃ ಕೋಪಸಮನ್ವಿತಃ ।
ಯಂತಾರಂ ಮದ್ರರಾಜಸ್ಯ ನಿರ್ಬಿಭೇದ ತದಾ ಹೃದಿ ॥೫೨॥

ಭೀಮನಾದರೂ ಅದೇ ತೋಮರಾಯುಧವನ್ನು ಹಿಡಿದುಕೊಂಡು ಕೋಪದಿಂದ ಶಲ್ಯನ ಸಾರಥಿಯನ್ನು ಸಾಯಿಸಿದನು.

ಸ ಭಿನ್ನವರ್ಮಾ ರುಧಿರಂ ವಮನ್ ವಿತ್ರಸ್ತಮಾನಸಃ ।
ಪಪಾತಾಭಿಮುಖೋ ವೀರೋ ಮದ್ರರಾಜಸ್ತ್ವಾಕ್ರಮತ್ ॥೫೩॥

ಶಲ್ಯನ ಸಾರಥಿಯು ಕವಚವನ್ನು ಕಳೆದುಕೊಂಡು ರಕ್ತವನ್ನು ವಾಂತಿಮಾಡಿದನು. ಮನಸ್ಸಿನ ಸ್ಥಿಮಿತವನ್ನು ಕಳೆದುಕೊಂಡು ಶಲ್ಯನ ಮುಂದೆಯೇ ರಥದಿಂದ ಕೆಳಗೆ ಬಿದ್ದನು. ವೀರನಾದ ಶಲ್ಯನಾದರೂ ಯುದ್ಧದಿಂದ ಓಡಿಹೋದನು.

ಕೃತಪ್ರತಿಕೃತಂ ದೃಷ್ಟ್ವಾ ಶಲ್ಯೋ ವಿಸ್ಮಿತಮಾನಸಃ ।
ಗದಾಮಾಶ್ರಿತ್ಯ ಧೀರಾತ್ಮಾ ಪತ್ಯಮಿತ್ರಮುದೈಕ್ಷತ ॥೫೪॥

ತಾನು ಕೊಟ್ಟ ಪೆಟ್ಟಿಗೆ ಪ್ರತಿಯಾಗಿ ಪೆಟ್ಟನ್ನು ಪಡೆದ ಶಲ್ಯನು ಬಹಳವಾಗಿ ಆಶ್ಚರ್ಯಚಕಿತನಾದನು. ಗದೆಯನ್ನು ಕೈಯಲ್ಲಿ ಹಿಡಿದುಕೊಂಡು ತನ್ನ ಶತ್ರುವಿನ ಕಡೆಗೆ ನೋಡಿದನು.

ತತಃ ಸುಮನಸಃ ಪಾರ್ಥಾ ಭೀಮಸೇನಮಪೂಜಯನ್ ।
ತದ್ ದೃಷ್ಟ್ವಾ ಕರ್ಮ ಸಂಗ್ರಾಮೇ ಘೋರಮಕ್ಲಿಷ್ಟಕರ್ಮಣಃ ॥೫೫॥

ಆಗ ಸಂತುಷ್ಟರಾದ ಪಾಂಡವರು ಭೀಮಸೇನನನ್ನು ಆರಾಧಿಸಿದರು. ಭೀಮನಾದರೂ ಎಂತಹ ಯುದ್ಧವನ್ನೂ ಸುಲಭವಾಗಿ ಮಾಡುವವನು. ಯುದ್ಧದಲ್ಲಿ ಅವನ ಭಯಂಕರವಾದ ಕಾರ್ಯವನ್ನು ನೋಡಿ ಭೀಮನನ್ನು ಪೂಜಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೆರಡನೆಯ ಅಧ್ಯಾಯ

ಶಲ್ಯ ಮತ್ತು ಭೀಮರಲ್ಲಿ ಗದಾಯುದ್ಧ.

ಸಂಜಯಃ

ಪತಿತಂ ಪ್ರೇಕ್ಷ್ಯ ಯಂತಾರಂ ಶಲ್ಯಃ ಶೈಕ್ಯಾಯಸೀಂ ಗದಾಮ್ ।
ಆದಾಯ ತರಸಾ ರಾಜನ್ ತಸ್ಥೌ ಗಿರಿರಿವಾಚಲಃ ॥೧॥

ಸಂಜಯ– ರಾಜನೇ! ಸಾರಥಿಯು ಕೆಳಬಿದ್ದಿದ್ದನ್ನು ನೋಡಿ ಶಲ್ಯನು ಕಬ್ಬಿಣದ ಗದೆಯನ್ನು ಬೇಗನೆ ತೆಗೆದುಕೊಂಡು ಪರ್ವತದ ಹಾಗೆ ಸ್ಥಿರವಾಗಿ ನಿಂತನು.

ತಂ ದೀಪ್ತಮಿವ ಕಾಲಾಗ್ನಿಂ ಪಾಶಹಸ್ತಮಿವಾಂತಕಮ್ ।
ಸಶೃಂಗಮಿವ ಕೈಲಾಸಂ ಸವಜ್ರಮಿವ ವಾಸವಮ್ ॥೨॥

ಸಶೂಲಮಿವ ಹಿ ತ್ರ್ಯಕ್ಷಂ ಸಚಕ್ರಮಿವ ಚಕ್ರಿಣಮ್ ।
ಸಶಕ್ತಿಮಿವ ಸೇನಾನ್ಯಂ ವನೇ ಮತ್ತಮಿವ ದ್ವಿಪಮ್ ॥೩॥

ಜವೇನಾಭ್ಯದ್ರವದ್ ಭೀಮೋ ಪ್ರಗೃಹ್ಯ ಮಹತೀಂ ಗದಾಮ್ ॥೪॥

ಶಲ್ಯನು ಪ್ರಳಯಕಾಲದ ಬೆಂಕಿಯಂತೆ ಪ್ರಕಾಶಿಸುತ್ತಿದ್ದನು. ಪಾಶಾಯುಧವನ್ನು ಹಿಡಿದಿರುವ ಯಮನಂತೆ, ಶಿಖರದಿಂದ ಯುಕ್ತವಾದ ಕೈಲಾಸಪರ್ವತದಂತೆ, ವಜ್ರಾಯುಧವನ್ನು ಹಿಡಿದಿರುವ ಇಂದ್ರನಂತೆ, ಶೂಲವನ್ನು ಧರಿಸಿರುವ ರುದ್ರನಂತೆ, ಚಕ್ರಧಾರಿಯಾದ ವಿಷ್ಣುವಿನಂತೆ, ಶಕ್ತ್ಯಾಯುಧವನ್ನು ಹಿಡಿದಿರುವ ಸ್ಕಂದನಂತೆ, ಕಾಡಿನಲ್ಲಿ ಮದವೇರಿದ ಆನೆಯಂತೆ ಶಲ್ಯನು ಕಾಣುತ್ತಿದ್ದನು. ಅಂತಹ ಶಲ್ಯನನ್ನು ಭೀಮಸೇನನು ದೊಡ್ಡದಾದ ಗದೆಯನ್ನು ಹಿಡಿದುಕೊಂಡು ಎದುರಿಸಿದನು.

ತತಃ ಶಂಖಪ್ರಣಾದಶ್ಚ ತೂರ್ಯಾಣಾಂ ಚ ಸಹಸ್ರಶಃ ।
ಸಿಂಹನಾದಶ್ಚ ಸಂಜಜ್ಞೇ ಶೂರಾಣಾಂ ಹರ್ಷವರ್ಧನಃ ॥೫॥

ಅನಂತರ ಶಂಖದ ನಾದವೂ, ಸಾವಿರಾರು ವಾದ್ಯಗಳ ಶಬ್ದವೂ, ಸಿಂಹನಾದವೂ ಉಂಟಾಯಿತು. ಇದು ಶೂರರ ಆನಂದವನ್ನು ಹೆಚ್ಚಿಸುತ್ತಿತ್ತು.

ಪ್ರೇಕ್ಷಂತೇ ಸರ್ವತಸ್ತೇ ಹಿ ಯೋಧಾ ಮತ್ತಾವಿವ ದ್ವಿಪೌ ।
ತಾವಕಾಶ್ಚ ಪರೇ ಚೈವ ಸಾಧು ಸಾಧ್ವಿತ್ಯಪೂಜಯನ್ ॥೬॥

ಎಲ್ಲಾ ಕಡೆಯಿಂದಲೂ ಯೋಧರು ಮದವೇರಿದ ಆನೆಗಳಂತೆ ಇರುವ ಭೀಮ-ಶಲ್ಯರನ್ನು ನೋಡಿದರು. ನಿನ್ನ ಕಡೆಯವರು ಹಾಗೂ ಎದುರುಕಡೆಯವರೂ ಚೆನ್ನಾಗಿದೆ! ಚೆನ್ನಾಗಿದೆ! ಎಂದು ಕೊಂಡಾಡಿದರು.

ನ ಹಿ ಮದ್ರಾಧಿಪಾದನ್ಯೋ ರಾಮಾದ್ವಾ ಯದುನಂದನಾತ್ ।
ಸೋಢುಮುತ್ಸಹತೇ ವೇಗಂ ಭೀಮಸೇನಸ್ಯ ಸಂಯುಗೇ ॥೭॥

ಶಲ್ಯ, ಪರಶುರಾಮ, ಕೃಷ್ಣ - ಈ ಮೂವರನ್ನು ಬಿಟ್ಟು ಬೇರೆ ಯಾರೂ ಯುದ್ಧದಲ್ಲಿ ಭೀಮಸೇನನ ವೇಗವನ್ನು ಸಹಿಸಲು ಉದ್ಯುಕ್ತರಾಗುವುದಿಲ್ಲ. ಇದು ಪ್ರಸಿದ್ಧ.

ತಥಾ ಮದ್ರಾಧಿಪಸ್ಯಾಪಿ ಗದಾವೇಗಂ ಮಹಾತ್ಮನಃ ।
ಸೋಢುಮುತ್ಸಹತೇ ನಾನ್ಯಃ ಪುಮಾನ್ ಯುಧಿ ವೃಕೋದರಾತ್ ॥೮॥

ಹಾಗೆಯೇ ಯುದ್ಧದಲ್ಲಿ ಮಹಾತ್ಮನಾದ ಶಲ್ಯನ ಗದಾವೇಗವನ್ನು ಸಹಿಸುವವನೂ ಭೀಮನನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ.

ಗೋವೃಷಾವಿವ ನರ್ದಂತೌ ಮಂಡಲಾನಿ ವಿಚೇರತುಃ ।
ಆವಲ್ಗಂತೌ ಗದಾಹಸ್ತೌ ಮದ್ರರಾಜವೃಕೋದರೌ ॥೯॥

ಶಲ್ಯ ಮತ್ತು ಭೀಮಸೇನರು ಎರಡು ಎತ್ತುಗಳಂತೆ ಶಬ್ದಮಾಡುತ್ತಾ ಮಂಡಲಾಕಾರದಲ್ಲಿ ಸಂಚರಿಸಿದರು. ಇಬ್ಬರೂ ಗದೆಗಳನ್ನು ಹಿಡಿದುಕೊಂಡು ಚೆನ್ನಾಗಿ ಸಂಚರಿಸುತ್ತಿದ್ದರು.

ಮಂಡಲಾವರ್ತಮಾರ್ಗೇಷು ಗದಾವಿಹರಣೇಷು ಚ ।
ನಿರ್ವಿಶೇಷಮಭೂದ್ ಯುದ್ಧಂ ತಯೋಃ ಪುರುಷಸಿಂಹಯೋಃ ॥೧೦॥

ಮಂಡಲದಲ್ಲಿ ತಿರುಗುವ ಗತಿಯಲ್ಲಿ ಮತ್ತು ಗದೆಯ ತಿರುಗಿಸುವಿಕೆಯಲ್ಲಿ ಆ ಪುರುಷಶ್ರೇಷ್ಠರಿಗೆ ಸ್ವಲ್ಪವೂ ವ್ಯತ್ಯಾಸವಿರಲಿಲ್ಲ. ಯುದ್ಧದಲ್ಲಿ ಇಬ್ಬರೂ ಸಮಾನರಾಗಿದ್ದರು.

ತಪ್ತಹೇಮಮಯೈಃ ಶುಭ್ರೈಃ ಬಭೂವ ಭಯವರ್ಧಿನೀ ।
ಅಗ್ನಿಜ್ವಾಲೈರಿವಾವಿದ್ಧಾ ಪಟ್ಟೈಃ ಶಲ್ಯಸ್ಯ ಸಾ ಗದಾ ॥೧೧॥

ಶಲ್ಯನ ಗದೆಯ ಪಟ್ಟಿಗಳು ಕಾದ ಬಂಗಾರದಿಂದ ನಿರ್ಮಿತವಾಗಿದ್ದವು. ಬೆಂಕಿಯ ಕೆನ್ನಾಲಿಗೆಯಂತೆ ಈ ಪಟ್ಟಿಗಳು ಇದ್ದವು. ಆ ಗದೆಯು ನೋಡುಗರ ಭಯವನ್ನು ಹೆಚ್ಚಿಸುತ್ತಿತ್ತು.

ತಥೈವ ಚರತೋ ಮಾರ್ಗಾನ್ ಮಂಡಲೇಷು ಮಹಾತ್ಮನಃ ।
ವಿದ್ಯುದಭ್ರಪ್ರತೀಕಾಶಾ ಭೀಮಸ್ಯ ಶುಶುಭೇ ಗದಾ ॥೧೨॥

ಹಾಗೆಯೇ ಮಂಡಲಾಕಾರವಾಗಿ ಗತಿಗಳನ್ನು ಮಾಡುತ್ತಿದ್ದ ಮಹಾತ್ಮ ಭೀಮಸೇನನ ಗದೆಯೂ ಶೋಭಿಸುತ್ತಿತ್ತು. ಅದು ಮಿಂಚುತ್ತಿರುವ ಮೇಘದಂತೆ ಕಾಣಿಸುತ್ತಿತ್ತು.

ತಾಡಿತಾ ಮದ್ರರಾಜಸ್ಯ ಭೀಮಸ್ಯ ಗದಯಾ ಗದಾ ।
ದೀಪ್ಯಮಾನೇವ ಖೇ ರಾಜನ್ ಸಸೃಜೇ ಪಾವಕಾರ್ಚಿಷಃ ॥೧೩॥

ಶಲ್ಯನ ಗದೆಯು ಭೀಮನ ಗದೆಗೆ ತಾಗಿದಾಗ ಆಕಾಶದಲ್ಲಿ ಬೆಂಕಿಯ ಕಿಡಿಗಳು ಹುಟ್ಟುತ್ತಿದ್ದವು.

ತಥಾ ಭೀಮೇನ ಶಲ್ಯಸ್ಯ ತಾಡಿತಾ ಗದಯಾ ಗದಾ ।
ಅಂಗಾರವರ್ಷಂ ಮುಮುಚೇ ತದದ್ಭುತಮಿವಾಭವತ್ ॥೧೪॥

ಹಾಗೆಯೇ ಭೀಮನ ಗದೆಯು ಶಲ್ಯನ ಗದೆಗೆ ತಾಗಿದಾಗ ಕೆಂಡದ ಮಳೆಯನ್ನೇ ಹುಟ್ಟಿಸುತ್ತಿತ್ತು. ಅದು ಬಹಳ ಅದ್ಭುತವಾಗಿತ್ತು.

ದಂತೈರಿವ ಮಹಾನಾಗೌ ಶೃಂಗೈರಿವ ಮಹಾವೃಷೌ ।
ತೌ ವಿರೇಜತುರನ್ಯೋನ್ಯಂ ಗದಾಭ್ಯಾಂ ಸುಪರಿಷ್ಕೃತೌ ॥೧೫॥

ಆನೆಗಳೆರಡು ತಮ್ಮ ದಂತಗಳಿಂದ, ಎರಡು ಗೂಳಿಗಳು ತಮ್ಮ ಕೊಂಬಿನಿಂದ ಕಾದಾಡಿದಂತೆ ಅವರೀರ್ವರೂ ಗದೆಗಳನ್ನು ಹಿಡಿದುಕೊಂಡು ಪರಸ್ಪರ ಗಾಯಗೊಳಿಸುತ್ತಾ ವಿರಾಜಿಸಿದರು.

ತೌ ಗದಾಭಿಹತೈರ್ಗಾತ್ರೈಃ ಕ್ಷಣೇನ ರುಧಿರೋಕ್ಷಿತೌ ।
ಪ್ರೇಕ್ಷಣೀಯತರಾವಾಸ್ತಾಂ ಪುಷ್ಪಿತಾವಿವ ಕಿಂಶುಕೌ ॥೧೬॥

ಇಬ್ಬರ ಶರೀರಕ್ಕೂ ಗದೆಯು ತಗಲಿದಾಗ ಗಾಯಗಳು ಉಂಟಾಗಿ ರಕ್ತ ಸೋರುತ್ತಿತ್ತು. ಇದು ಮುತ್ತುಗದ ವೃಕ್ಷವು ಹೂವು ಬಿಟ್ಟಂತೆ ನೋಡಲು ಸುಂದರವಾಗಿತ್ತು.

ಗದಯಾ ಮದ್ರರಾಜೇನ ಸವ್ಯಂ ದಕ್ಷಿಣಮಾಹತಃ ।
ಭೀಮಸೇನೋ ಮಹಾಬಾಹುಃ ನ ಚಚಾಲಾಚಲೋ ಯಥಾ ॥೧೭॥

ಶಲ್ಯನು ಭೀಮನನ್ನು ಗದೆಯಿಂದ ಎಡ-ಬಲಗಳಲ್ಲಿ ಹೊಡೆದಾಗ ಮಹಾಬಾಹುವಾದ ಭೀಮಸೇನನು ಪರ್ವತದ ಹಾಗೆ ಸ್ಥಿರವಾಗಿ ನಿಂತನು.

ತಥಾ ಭೀಮಗದಾವೇಗೈಃ ತಾಡ್ಯಮಾನೋ ಮಹುರ್ಮುಹುಃ ।
ಶಲ್ಯೋ ನ ವಿವ್ಯಥೇ ಧೀಮಾನ್ ದಂತಿನೇವ ಹತೋ ಗಿರಿಃ ॥೧೮॥

ಹಾಗೆಯೇ ಭೀಮನು ಮತ್ತೆ ಮತ್ತೆ ಗದೆಯಿಂದ ಶಲ್ಯನಿಗೆ ಹೊಡೆದರೂ ಬುದ್ಧಿವಂತನಾದ ಶಲ್ಯನು ಆನೆಯ ಹೊಡೆತಕ್ಕೆ ಸಿಕ್ಕ ಪರ್ವತದಂತೆ ಚಲಿಸದೆ ನಿಂತನು.

ಶುಶ್ರುವೇ ದಿಕ್ಷು ಸರ್ವಾಸು ತಯೋಃ ಪುರುಷಸಿಂಹಯೋಃ ।
ಗದಾನಿಪಾತಸಂಹ್ಲಾದೋ ವಜ್ರಯೋರಿವ ನಿಸ್ವನಃ ॥೧೯॥

ಆ ಪುರುಷಶ್ರೇಷ್ಠರು ಗದಾಯುದ್ಧ ಮಾಡುತ್ತಿದ್ದಾಗ ಗದೆಗಳ ಶಬ್ದವು ಎಲ್ಲಾ ದಿಕ್ಕುಗಳಲ್ಲಿ ಕೇಳಿಸುತ್ತಿತ್ತು. ಅದು ವಜ್ರಾಯುಧದ ಧ್ವನಿಯಂತೆ ಇತ್ತು.

ನಿವೃತ್ಯ ತು ಮಹಾವೀರ್ಯೌ ಸಮುಚ್ಛ್ರಿತಗದಾವುಭೌ ।
ಪುನರಂತರಮಾರ್ಗಸ್ಥೌ ಮಂಡಲಾನಿ ವಿಚೇರತುಃ ॥೨೦॥

ಕೈಯಲ್ಲಿ ಗದೆಗಳನ್ನು ಹಿಡಿದುಕೊಂಡು ಇಬ್ಬರೂ ಸ್ವಲ್ಪ ಹೊತ್ತು ಹಿಂತಿರುಗಿ ಮತ್ತೆ ಪುನಃ ಮಂಡಲದ ಒಳಭಾಗದಲ್ಲಿ ಇದ್ದುಕೊಂಡು ಸಂಚರಿಸಿದರು.

ತದಾಽಭ್ಯೇತ್ಯ ಪದಾನ್ಯಷ್ಟೌ ಸನ್ನಿಪಾತೋಽಭವತ್ ತಯೋಃ ।
ಉದ್ಯಮ್ಯ ಬಾಹುದಂಡಾಭ್ಯಾಮತಿಮಾನುಷಕರ್ಮಣೋಃ ॥೨೧॥

ಅವರಿಬ್ಬರೂ ಎಂಟು ಪಾದದಷ್ಟು ಅಂತರದಲ್ಲಿ ಇದ್ದುಕೊಂಡು, ಮನುಷ್ಯರಿಗೆ ಸಾಧ್ಯವಿಲ್ಲದ ಕೆಲಸವನ್ನು ಮಾಡುವವರಾಗಿ ಬಾಹುಗಳನ್ನು ಎತ್ತಿಕೊಂಡು ಒಬ್ಬರ ಮೇಲೊಬ್ಬರು ಬಿದ್ದರು.

ಪ್ರಾರ್ಥಯಾನೌ ತದಾऽನ್ಯೋನ್ಯಂ ಮಂಡಲಾನಿ ವಿಚೇರತುಃ ।
ಕ್ರಿಯಾವಿಶೇಷಂ ಕೃತಿನೌ ದರ್ಶಯಾಮಾಸತುಸ್ತದಾ ॥೨೨॥

ಆಗ ಮಹಾಪ್ರಯತ್ನಶೀಲರಾದ ಅವರಿಬ್ಬರೂ ಪರಸ್ಪರವಾಗಿ ಹಿಂಸಿಸುತ್ತಾ ಮಂಡಲಾಕಾರದಲ್ಲಿ ಸಂಚರಿಸಿದರು. ವಿಶಿಷ್ಟವಾದ ಕಾರ್ಯವನ್ನು ತೋರಿಸಿಕೊಟ್ಟರು.

ಅಭ್ಯುದ್ಯತಗದೌ ವೀರೌ ಸಶೃಂಗಾವಿವ ಪರ್ವತೌ ।
ತಾವಾಜಘ್ನತುರನ್ಯೋನ್ಯಂ ಯಥಾ ಭೂಮಿಚಲೇऽಚಲೌ ॥೨೩॥

ಗದೆಯನ್ನು ಎತ್ತಿಕೊಂಡಿದ್ದ ಆ ವೀರರು ಶಿಖರವುಳ್ಳ ಪರ್ವತದಂತೆ ಕಾಣಿಸುತ್ತಿದ್ದರು. ಭೂಮಿಯ ಮೇಲೆ ಎರಡು ಪರ್ವತಗಳು ಪರಸ್ಪರ ಹೊಡೆದಾಡಿದಂತೆ ಅವರು ಪರಸ್ಪರವಾಗಿ ಹೊಡೆದಾಡಿದರು.

ತೌ ಪರಸ್ಪರಸಂವೇಗಾದ್ ಗದಾಭ್ಯಾಂ ಚ ಭೃಶಾಹತೌ ।
ಯುಗಪತ್ ಪೇತತುರ್ವೀರಾವುಭಾವಿಂದ್ರಬಲೀ ಇವ ॥೨೪॥

ಬಹಳ ವೇಗವಾಗಿ ಗದೆಯಿಂದ ಹೊಡೆಯುತ್ತ ಅವರಿಬ್ಬರೂ ಏಕಕಾಲದಲ್ಲಿ ನೆಲಕ್ಕೆ ಬಿದ್ದರು. ಇಂದ್ರ ಮತ್ತು ಬಲಿ ಯುದ್ಧಮಾಡಿದಂತೆ ಈ ಗದಾಯುದ್ಧವು ಇತ್ತು.

ಉಭಯೋಃ ಸೇನಯೋಃ ಶಬ್ದಸ್ತದಾ ಹಾಹಾಕೃತೋऽಭವತ್ ।
ಭೃಶಂ ಮರ್ಮಣ್ಯಭಿಹತಾವುಭಾವಾಸ್ತಾಂ ಸುವಿಹ್ವಲೌ ॥೨೫॥

ಆಗ ಎರಡೂ ಸೈನ್ಯದಲ್ಲಿಯೂ ಹಾಹಾಕಾರದ ಶಬ್ದವು ಉಂಟಾಯಿತು. ಮರ್ಮಸ್ಥಾನದಲ್ಲಿ ಚೆನ್ನಾಗಿ ಪೆಟ್ಟುತಿಂದ ಇಬ್ಬರೂ ಬಹಳ ವ್ಯಥೆಗೊಳಗಾದರು.

ತತಃ ಸ್ವರಥಮಾರೋಪ್ಯ ಮದ್ರಾಣಾಮಧಿಪಂ ರಣೇ ।
ಅಪೋವಾಹ ಕೃಪಃ ಶಲ್ಯಂ ತೂರ್ಣಮಾಯೋಧನಾದ್ ಬಹಿಃ ॥೨೬॥

ಆಗ ಕೃಪಾಚಾರ್ಯನು ರಣರಂಗದಲ್ಲಿ ಶಲ್ಯನನ್ನು ತನ್ನ ರಥದಲ್ಲಿ ಹತ್ತಿಸಿಕೊಂಡು ಯುದ್ಧಭೂಮಿಯಿಂದ ಹೊರಭಾಗಕ್ಕೆ ಕರೆದೊಯ್ದನು.

ಜೀವವದ್ ವಿಹ್ವಲತ್ವಾತ್ತ್ ತು ಮಹಾಪಾಣಿರ್ವ್ಯಕೋದರಃ ।
ನಿಮೇಷಾತ್ ಪುನರುತ್ಥಾಯ ಸಮಾಹ್ವಯತ ಮದ್ರಪಮ್ ॥೨೭॥

ಮನುಷ್ಯಜೀವರ ಹಾಗೆ ನೋವಿನ ನಟನೆ ಮಾಡುತ್ತ ಮಹಾಬಾಹುವಾದ ಭೀಮಸೇನನು ನಿಮಿಷಮಾತ್ರದಲ್ಲಿ ಮತ್ತೆ ಎದ್ದು ಶಲ್ಯನನ್ನು ಯುದ್ಧಕ್ಕೆ ಆಹ್ವಾನಿಸಿದನು.

ತತಸ್ತು ತಾವಕಾಃ ಶೂರಾ ನಾನಾದೇಶಸಮಾಗತಾಃ ।
ನಾನಾವಾದಿತ್ರಶಬ್ದೇನ ಪಾಂಡುಸೈನ್ಯಮಯೋಧಯನ್ ॥೨೮॥

ಅನಂತರ ನಿನ್ನ ಪಕ್ಷದ ನಾನಾದೇಶಗಳಿಂದ ಬಂದ ಶೂರರು ವಿವಿಧರೀತಿಯ ವಾದ್ಯಗಳ ಶಬ್ದವನ್ನು ಮಾಡುತ್ತಾ ಪಾಂಡವರ ಸೈನ್ಯದೊಡನೆ ಕಾದಾಡಿದರು.

ಭುಜಾವುದ್ಧೃತ್ಯ ಶಸ್ತ್ರಂ ಚ ಶಬ್ದೇನ ಮಹತಾ ವೃತಾಃ ।
ಅಭ್ಯದ್ರವನ್ ಮಹಾರಾಜ ದುರ್ಯೋಧನಪುರೋಗಮಾಃ ॥೨೯॥

ಮಹಾರಾಜ! ದುರ್ಯೋಧನ ಮೊದಲಾದವರು ಬಹಳವಾದ ಶಬ್ದವನ್ನು ಮಾಡುತ್ತಾ ಭುಜವನ್ನು ಮತ್ತು ಶಸ್ತ್ರವನ್ನು ಮೇಲೆತ್ತಿಕೊಂಡು ಯುದ್ಧಕ್ಕಾಗಿ ಓಡಿಬಂದರು.

ತದನೀಕಮಭಿಪ್ರೇಕ್ಷ್ಯ ತತಸ್ತೇ ಪಾಂಡುನಂದನಾಃ ।
ಆಯಯುಃ ಸಿಂಹನಾದೇನ ದುರ್ಯೋಧನವಧೇಪ್ಸಯಾ ॥೩೦॥

ಅನಂತರ ಪಾಂಡವರು ಆ ಸೈನ್ಯವನ್ನು ನೋಡಿ ದುರ್ಯೋಧನನನ್ನು ಕೊಲ್ಲುವ ಇಚ್ಛೆಯಿಂದ ಸಿಂಹನಾದವನ್ನು ಮಾಡುತ್ತಾ ಬಂದರು.

ತೇಷಾಮಾಪತತಾಂ ತೂರ್ಣಂ ಪುತ್ರಸ್ತೇ ಭರತರ್ಷಭ ।
ಪ್ರಾಸೇನ ಚೇಕಿತಾನಂ ಚ ವಿವ್ಯಾಧ ಹೃದಯೇ ಭೃಶಮ್ ॥೩೧॥

ಭರತೋತ್ತಮನೇ! ಅವರು ಮೇಲೇರಿ ಬರುತ್ತಿರಲು ನಿನ್ನ ಮಗ ದುರ್ಯೋಧನನು ಪ್ರಾಸಾಯುಧದಿಂದ ಚೇಕಿತಾನನ ಹೃದಯಕ್ಕೆ ಚೆನ್ನಾಗಿ ಹೊಡೆದನು.

ಸ ಪಪಾತ ರಥೋಪಸ್ಥಾತ್ ತವ ಪುತ್ರೇಣ ತಾಡಿತಃ ।
ರುಧಿರೌಘಪರಿಕ್ಲಿನ್ನಃ ಪ್ರವಿಶ್ಯ ವಿಪುಲಂ ತಮಃ ॥೩೨॥

ನಿನ್ನ ಮಗನು ಹೊಡೆದಾಗ ಆ ಚೇಕಿತಾನನು ರಥದಿಂದ ಕೆಳಗೆ ಬಿದ್ದನು. ರಕ್ತದಿಂದ ತೊಯ್ದವನಾಗಿ ಮೂರ್ಛೆಯನ್ನು ಹೊಂದಿದನು.

ಚೇಕಿತಾನಂ ಹತಂ ದೃಷ್ಟ್ವಾ ಪಾಂಡವೇಯಾ ಮಹಾರಥಾಃ ।
ಅಸಕ್ತಮಭ್ಯವರ್ಷಂತ ಶರವರ್ಷಾಣಿ ಭಾಗಶಃ ॥೩೩॥

ಚೇಕಿತಾನನು ಸತ್ತಿದ್ದನ್ನು ನೋಡಿದ ಮಹಾರಥರಾದ ಪಾಂಡವರು ಪ್ರತ್ಯೇಕ ಪ್ರತ್ಯೇಕವಾಗಿ ಬಾಣಗಳ ಮಳೆಯನ್ನು ಸುರಿಸಿದರು.

ತಾವಕಾನಾಮನೀಕೇಷು ಪಾಂಡವಾ ಜಿತಕಾಶಿನಃ ।
ವ್ಯಚರಂತ ಮಹಾರಾಜ ಪ್ರೇಕ್ಷಣೀಯಾಃ ಸಮಂತತಃ ॥೩೪॥

ಮಹಾರಾಜ! ಯುದ್ಧದಲ್ಲಿ ಜಯವನ್ನು ಬಯಸುತ್ತಿದ್ದ ಪಾಂಡವರು ನಿನ್ನವರ ಸೈನ್ಯದಲ್ಲಿ ಎಲ್ಲಾ ಕಡೆಯೂ ಸಂಚರಿಸಿದರು. ಅದು ನೋಡಲು ಸುಂದರವಾಗಿತ್ತು.

ಕೃಪಶ್ಚ ಕೃತವರ್ಮಾ ಚ ಸೌಬಲಶ್ಚ ಮಹಾಬಲಃ ।
ಅಯೋಧಯನ್ ಧರ್ಮರಾಜಂ ಮದ್ರರಾಜಪುರಸ್ಕೃತಾಃ ॥೩೫॥

ಕೃಪ, ಕೃತವರ್ಮ, ಮಹಾಬಲಶಾಲಿಯಾದ ಶಕುನಿ ಇವರು ಶಲ್ಯನನ್ನು ಮುಂದಿಟ್ಟುಕೊಂಡು ಧರ್ಮರಾಜನೊಡನೆ ಕಾದಾಡಿದರು.

ಭಾರದ್ವಾಜಸ್ಯ ಹಂತಾರಂ ಭೂರಿವೀರ್ಯಸಮನ್ವಿತಮ್ ।
ದುರ್ಯೋಧನೋ ಮಹಾರಾಜ ಧೃಷ್ಟದ್ಯುಮ್ನಮಯೋಧಯತ್ ॥೩೬॥

ಮಹಾರಾಜ! ದುರ್ಯೋಧನನು ದೃಷ್ಟದ್ಯುಮ್ನನ ಜೊತೆಗೆ ಯುದ್ಧಮಾಡಿದನು. ಈ ದೃಷ್ಟದ್ಯುಮ್ನನು ಮಹಾಪರಾಕ್ರಮಿಯಾದ ದ್ರೋಣಾಚಾರ್ಯರನ್ನು ಕೊಂದಿದ್ದನು.

ತ್ರಿಸಹಸ್ರರಥಾ ರಾಜನ್ ತವ ಪುತ್ರೇಣ ಚೋದಿತಾಃ ।
ಅಯೋಧಯಂತ ವಿಜಯಂ ದ್ರೋಣಪುತ್ರಪುರಸ್ಕೃತಾಃ ॥೩೭॥

ರಾಜನ್! ನಿನ್ನ ಮಗನ ಆದೇಶದಂತೆ ಮೂರುಸಾವಿರ ರಥಿಕರು ಅಶ್ವತ್ಥಾಮನನ್ನು ಮುಂದಿಟ್ಟುಕೊಂಡು ಅರ್ಜುನನ ಜೊತೆಗೆ ಯುದ್ಧ ಮಾಡಿದರು.

ವಿಜಯೇ ಧೃತಸಂಕಲ್ಪಾಃ ಸಮಭಿತ್ಯಕ್ತಜೀವಿತಾಃ ।
ಪ್ರಾವಿಶಂಸ್ತಾವಕಾ ರಾಜನ್ ಹಂಸಾ ಇವ ಮಹತ್ ಸರಃ ॥೩೮॥

ರಾಜನೇ! ನಿನ್ನ ಕಡೆಯವರು ಜಯವನ್ನು ಪಡೆಯಬೇಕೆಂಬ ನಿಶ್ಚಲವಾದ ಇಚ್ಛೆಯಿಂದ ಪ್ರಾಣದ ಆಸೆಯನ್ನೇ ತೊರೆದಿದ್ದರು. ಅವರು ಹಂಸಪಕ್ಷಿಗಳು ದೊಡ್ಡ ಸರೋವರವನ್ನು ಪ್ರವೇಶಿಸುವಂತೆ ಪರಸೈನ್ಯವನ್ನು ಪ್ರವೇಶಿಸಿದರು.

ತತೋ ಯುದ್ಧಮಭೂದ್ ಘೋರಂ ಪರಸ್ಪರವಧೈಷಿಣಾಮ್ ।
ಅನ್ಯೋನ್ಯಸ್ತವಸಂಯುಕ್ತಮನ್ಯೋನ್ಯಪ್ರೀತಿವರ್ಧನಮ್ ॥೩೯॥

ಸ್ವಪಕ್ಷದವರಿಂದ ಸ್ತುತಿಸಲ್ಪಡುತ್ತಾ, ಸ್ವಪಕ್ಷದವರಿಗೆ ಆನಂದವನ್ನುಂಟುಮಾಡುತ್ತಾ ಪರಸ್ಪರವಾಗಿ ಪರಪಕ್ಷದವರನ್ನು ಕೊಲ್ಲುವ ಇಚ್ಛೆಯಿಂದ ಬಹಳ ಘೋರವಾದ ಯುದ್ಧವು ನಡೆಯಿತು.

ತಸ್ಮಿನ್ ಪ್ರವೃತ್ತೇ ಸಂಗ್ರಾಮೇ ರಾಜನ್ ವೀರವರಕ್ಷಯೇ ।
ಅನಿಲೇನೇರಿತಂ ಘೋರಮುತ್ತಸ್ಥೌ ಪಾರ್ಥಿವಂ ರಜಃ ॥೪೦॥

ರಾಜನೇ! ಹೀಗೆ ಪ್ರಾರಂಭವಾದ ಯುದ್ಧದಲ್ಲಿ ಮಹಾ ಮಹಾವೀರರು ಮಡಿಯಲು ಗಾಳಿಯಿಂದಾಗಿ ನೆಲದ ಧೂಳು ಭಯಂಕರವಾಗಿ ಮೇಲೆದ್ದಿತು.

ಶ್ರವಣಾನ್ನಾಮಧೇಯಾನಾಂ ಪಾರ್ಥಿವಾನಾಂ ಚ ಕೀರ್ತನಾತ್ ।
ಪರಾನ್ ವಯಂ ವಿಜಾನೀಮೋ ಯೇ ವಾऽಯುಧ್ಯನ್ನಭೀತವತ್॥೪೧॥

ಯಾರೆಲ್ಲಾ ಭಯವನ್ನು ತೊರೆದು ಯುದ್ಧಮಾಡುತ್ತಿದ್ದಾರೆಯೋ ಅಂತಹ ರಾಜರ ಹೆಸರುಗಳನ್ನು ಕೇಳುವುದರಿಂದ, ಹೇಳುವುದರಿಂದ ನಾವು ಶತ್ರುಗಳನ್ನು ತಿಳಿಯಬಹುದಾಗಿದೆ.

ತದ್ರಜಃ ಪುರುಷವ್ಯಾಘ್ರ ಶೋಣಿತೇನ ಪ್ರಣಾಶಿತಮ್ ।
ದಿಶಶ್ಚ ವಿಮಲಾಃ ಜಾತಾಃ ತಸ್ಮಿನ್ ರಜಸಿ ನಾಶಿತೇ ॥೪೨॥

ಪುರುಷಸಿಂಹನೇ! ಮೇಲೆದ್ದ ಧೂಳನ್ನು ಅಲ್ಲಿ ಹರಿಯುತ್ತಿದ್ದ ರಕ್ತದ ಧಾರೆಗಳು ತಣಿಸಿದವು. ಹೀಗೆ ಧೂಳು ಹೋಗಲು ದಿಕ್ಕುಗಳು ನಿರ್ಮಲವಾದವು.

ತತಃ ಪ್ರವೃತ್ತೇ ಸಂಗ್ರಾಮೇ ಘೋರರೂಪೇ ಸಮಂತತಃ ।
ತಾವಕಾನಾಂ ಪರೇಷಾಂ ಚ ನಾಸೀತ್ ಕಶ್ಚಿತ್ ಪರಾಙ್ಮುಖಃ ॥೪೩॥

ಅನಂತರ ನಡೆದ ಭಯಂಕರವಾದ, ಎಲ್ಲಾ ಕಡೆಯೂ ಹರಡಿದ ಘೋರವಾದ ಯುದ್ಧದಲ್ಲಿ ನಿನ್ನವರಲ್ಲಾಗಲೀ ಅಥವಾ ಶತ್ರುಗಳ ಪಕ್ಷದಲ್ಲಾಗಲೀ ಯಾರೂ ಹಿಂತಿರುಗಲಿಲ್ಲ.

ಬ್ರಹ್ಮಲೋಕಪರಾ ಭೂತ್ವಾ ಪ್ರಾರ್ಥಯಂತೋ ಜಯಂ ಯುಧಿ ।
ಸುಯುದ್ಧೇನ ಪರಾಕ್ರಾಂತಾ ನರಾಃ ಸ್ವರ್ಗಮಭೀಪ್ಸವಃ ॥೪೪॥

ಯುದ್ಧದಲ್ಲಿ ಬ್ರಹ್ಮಲೋಕಪ್ರಾಪ್ತಿಯನ್ನು ಪ್ರಾರ್ಥಿಸುತ್ತಾ, ಜನರು ಸ್ವರ್ಗವನ್ನು ಅಪೇಕ್ಷಿಸುತ್ತಾ ಆಕ್ರಮಣಮಾಡಿ ಚೆನ್ನಾಗಿ ಯುದ್ಧಮಾಡಿದರು.

ಭರ್ತೃಪಿಂಡವಿಮೋಕ್ಷಾರ್ಥಂ ಮಿತ್ರಕಾರ್ಯೇ ಚ ವಿಷ್ಠಿತಾಃ ।
ಸ್ವರ್ಗೇ ಸಂಸಕ್ತಮನಸೋ ಯೋಧಾ ಯುಯುಧಿರೇ ತದಾ ॥೪೫॥

ಯಜಮಾನನ ಅನ್ನದ ಋಣವನ್ನು ತೀರಿಸಲಿಕ್ಕಾಗಿ ಹಾಗೂ ಮಿತ್ರನ ಕೆಲಸದಲ್ಲಿ ವೇತನವನ್ನು ಪಡೆಯುವವರಾಗಿ ಯುದ್ಧಮಾಡಿದರು. ಯೋಧರು ಸ್ವರ್ಗಲೋಕದಲ್ಲಿ ನೆಟ್ಟಮನಸ್ಸುಳ್ಳವರಾಗಿದ್ದರು.

ನಾನಾರೂಪಾಣಿ ಶಸ್ತ್ರಾಣಿ ವಿಸೃಜಂತೋ ಮಹಾರಥಾಃ ।
ಅನ್ಯೋನ್ಯಮಭಿಗರ್ಜಂತಃ ಪ್ರಹರಂತಃ ಪರಸ್ಪರಮ್ ॥೪೬॥

ಹತ ವಧ್ಯತ ಗೃಹ್ಣೀತ ಪ್ರಹರಧ್ವಂ ನಿಕೃಂತತ ॥೪೭॥

ಇತಿ ಸ್ಮ ವಾಚೋಽಶ್ರೂಯಂತ ತವ ತೇಷಾಂ ಚ ವೈ ಬಲೇ ॥೪೮॥

ಮಹಾರಥರು ನಾನಾವಿಧದ ಶಸ್ತ್ರಗಳನ್ನು ಪ್ರಯೋಗಿಸುತ್ತಾ, ಒಬ್ಬರಿಗೊಬ್ಬರು ಗರ್ಜಿಸಿಕೊಂಡು, ಪರಸ್ಪರ ಹೊಡೆದುಕೊಳ್ಳುತ್ತ ''ಕೊಲ್ಲು! ಸಾಯಿಸು! ಹಿಡಿ! ಹೊಡಿ! ಕಿತ್ತುಹಾಕು'' ಎಂಬುದಾಗಿ ನಿನ್ನ ಮತ್ತು ಶತ್ರುಗಳ ಸೈನ್ಯವು ಹೇಳುತ್ತಿತ್ತು.

ತತಃ ಶಲ್ಯೋ ಮಹಾರಾಜ ಧರ್ಮರಾಜಂ ಯುಧಿಷ್ಠಿರಮ್ ।
ವಿವ್ಯಾಧ ನಿಶಿತೈರ್ಬಾಣೈಃ ಹಂತುಕಾಮೋ ಮಹಾರಥಃ ॥೪೯॥

ಮಹಾರಾಜ! ಅನಂತರ ಮಹಾರಥನಾದ ಶಲ್ಯನು ಯುಧಿಷ್ಠಿರನನ್ನು ಕೊಲ್ಲುವ ಉದ್ದೇಶದಿಂದ ಹರಿತವಾದ ಬಾಣಗಳಿಂದ ಅವನಿಗೆ ಹೊಡೆದನು.

ತಸ್ಯ ಪಾರ್ಥೋ ಮಹಾರಾಜ ನಾರಾಚಾನ್ ವೈ ಚತುರ್ದಶ ।
ಮರ್ಮಾಣ್ಯುದ್ದಿಶ್ಯ ಮರ್ಮಜ್ಞೋ ನಿಜಘಾನ ಹಸನ್ನಿವ ॥೫೦॥

ಮಹಾರಾಜ! ಧರ್ಮರಾಜನು ಮುಗುಳ್ನಗುತ್ತಾ, ಯುದ್ಧಮರ್ಮವನ್ನು ತಿಳಿದವನಾಗಿ, ಶಲ್ಯನ ಮರ್ಮಸ್ಥಾನವನ್ನು ಅರಿತುಕೊಂಡು ಹದಿನಾಲ್ಕು ಬಾಣಗಳನ್ನು ಪ್ರಯೋಗಿಸಿದನು.

ಸಂವಾರ್ಯ ಪಾಂಡವಂ ಬಾಣೈಃ ಹಂತುಕಾಮೋ ಮಹಾಯಶಾಃ ।
ವಿವ್ಯಾಧ ಸಮರೇ ಕ್ರುದ್ಧೋ ಬಹುಭಿಃ ಕಂಕಪತ್ರಿಭಿಃ ॥೫೧॥

ಬಹಳ ಕೀರ್ತಿಶಾಲಿಯಾದ ಧರ್ಮರಾಜನು ಧರ್ಮರಾಜನನ್ನು ಕೊಲ್ಲಲಿಕ್ಕಾಗಿ ಬಾಣಗಳಿಂದ ಅವನ್ನು ಆಚ್ಛಾದಿಸಿ ಕೋಪದಿಂದ ಅನೇಕ ಬಾಣಗಳನ್ನು ಪ್ರಯೋಗಿಸಿ ಹೊಡೆದನು.

ಅಥ ಮದ್ರೋ ಮಹಾರಾಜ ಶರೇಣ ನತಪರ್ವಣಾ ।
ಯುಧಿಷ್ಠಿರಂ ಸಮಾಜಘ್ನೇ ಸರ್ವಸೈನ್ಯಸ್ಯ ಪಶ್ಯತಃ ॥೫೨॥

ಮಹಾರಾಜ! ಅನಂತರ ಶಲ್ಯನು ಎಲ್ಲರು ನೋಡುತ್ತಿರುವಂತೆಯೇ ಬಾಗಿದ ಸಂಧಿಗಳುಳ್ಳ ಬಾಣದಿಂದ ಯುಧಿಷ್ಠಿರನನ್ನು ಚೆನ್ನಾಗಿ ಹೊಡೆದನು.

ಧರ್ಮರಾಜೋಽಪಿ ಸಂಕ್ರುದ್ಧೋ ಮದ್ರರಾಜಂ ಮಹಾರಥಮ್ ।
ವಿವ್ಯಾಧ ನಿಶಿತೈರ್ಬಾಣೈಃ ಕಂಕಬರ್ಹಿಣವಾಜಿತೈಃ ॥೫೩॥

ಕುಪಿತನಾದ ಧರ್ಮರಾಜನಾದರೂ ಮಹಾರಥ ಶಲ್ಯನನ್ನು ಹರಿತವಾದ ಹಾಗೂ ಕಂಕ-ಮಯೂರಗಳಿಂದಾಗಿ ಶೋಭಿಸುವ ಬಾಣಗಳಿಂದ ಹೊಡೆದನು.

ಚಂದ್ರಸೇನಂ ಚ ಸಪ್ತತ್ಯಾ ಸೂತಂ ಚ ನವಭಿಃ ಶರೈಃ ।
ದ್ಯುಮತ್ಸೇನಂ ಚತುಃಷಷ್ಟ್ಯಾ ನಿಜಘಾನ ಮಹಾಬಲಃ ॥೫೪॥

ಅನಂತರ ಮಹಾಬಲಶಾಲಿಯಾದ ಯುಧಿಷ್ಠಿರನು ಚಂದ್ರಸೇನನನ್ನು ಎಪ್ಪತ್ತು ಬಾಣಗಳಿಂದ, ಸಾರಥಿಯನ್ನು ಒಂಬತ್ತು ಬಾಣಗಳಿಂದ, ದ್ಯುಮತ್ಸೇನನನ್ನು ಅರವತ್ತನಾಲ್ಕು ಬಾಣಗಳಿಂದಲೂ ಹೊಡೆದನು.

ಚಕ್ರರಕ್ಷೇ ಹತೇ ಶಲ್ಯಃ ಪಾಂಡವೇನ ಮಹಾತ್ಮನಃ ।
ನಿಜಘಾನ ಮಹಾರಾಜ ಚೇದೀನ್ ವೈ ಪಂಚವಿಂಶತಿಮ್ ॥೫೫॥

ಮಹಾರಾಜ! ಹೀಗೆ ಧರ್ಮರಾಜನು ತನ್ನ ಚಕ್ರರಕ್ಷಕರನ್ನು ಸಾಯಿಸಿದಾಗ ಶಲ್ಯನು ಇಪ್ಪತ್ತೈದು ಚೇದಿಗಳನ್ನು ಸಾಯಿಸಿದನು.

ಸಾತ್ಯಕಿಂ ಪಂಚವಿಂಶತ್ಯಾ ಭೀಮಸೇನಂ ಚ ಪಂಚಭಿಃ ।
ಮಾದ್ರೀಪುತ್ರೌ ಚ ವಿಂಶತ್ಯಾ ವಿವ್ಯಾಧ ನಿಶಿತೈಃ ಶರೈಃ ॥೫೬॥

ಹರಿತವಾದ ಇಪ್ಪತ್ತೈದು ಬಾಣಗಳಿಂದ ಸಾತ್ಯಕಿಯನ್ನೂ, ಐದು ಬಾಣಗಳಿಂದ ಭೀಮಸೇನನನ್ನೂ, ಇಪ್ಪತ್ತು ಬಾಣಗಳಿಂದ ನಕುಲ-ಸಹದೇವರನ್ನೂ ಹೊಡೆದನು.

ಏವಂ ವಿಚರತಸ್ತಸ್ಯ ಸಂಗ್ರಾಮೇ ರಾಜಸತ್ತಮ ।
ಸಂಪ್ರೈಷಯಚ್ಚಿತಾನ್ ಪಾರ್ಥಃ ಶರಾನಾಶೀವಿಷೋಪಮಾನ್ ॥೫೭॥

ರಾಜಶ್ರೇಷ್ಠನೇ! ಹೀಗೆ ರಣರಂಗದಲ್ಲಿ ಶಲ್ಯನು ಸಂಚರಿಸುತ್ತಿರಲು ಯುಧಿಷ್ಠಿರನು ಸರ್ಪಸದೃಶವಾದ ಹರಿತವಾದ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು.

ಧ್ವಜಾಗ್ರಂ ಚಾಸ್ಯ ಸಮರೇ ಕುಂತೀಪುತ್ರೋ ಯುಧಿಷ್ಠಿರಃ ।
ಪ್ರಮುಖೇ ಯುಧ್ಯಮಾನಸ್ಯ ಭಲ್ಲೇನಾಪಾಹರದ್ ರಥಾತ್ ॥೫೮॥

ಯುಧಿಷ್ಠಿರನು ಕೌರವರ ಸೈನ್ಯದ ಸೇನಾಧಿಪತಿಯಾಗಿ ಯುದ್ಧಮಾಡುತ್ತಿದ್ದ ಆ ಶಲ್ಯನ ಧ್ವಜದ ತುದಿಭಾಗವನ್ನು ಭಲ್ಲೆಯಿಂದ ಕಿತ್ತುಹಾಕಿದನು.

ಪಾಂಡುಪುತ್ರೇಣ ವೈ ತಸ್ಯ ಕೇತುಶ್ಚಿನ್ನೋ ಮಹಾತ್ಮನಾ ।
ನಿಪತಂತಮಪಶ್ಯಾಮ ಗಿರೇಃ ಶೃಂಗಮಿವಾಹತಮ್ ॥೫೯॥

ಮಹಾತ್ಮನಾದ ಯುಧಿಷ್ಠಿರನು ಶಲ್ಯನ ರಥದ ಪತಾಕೆಯನ್ನು ತುಂಡರಿಸಿದನು. ಇದು ಪರ್ವತದ ಶಿಖರವು ತುಂಡಾದ ಹಾಗೆ ಕಾಣಿಸುತ್ತಿತ್ತು.

ಧ್ವಜಂ ನಿಪತಿತಂ ದೃಷ್ಟ್ವಾ ಪಾಂಡವಂ ಚಾಪ್ಯವಸ್ಥಿತಮ್ ।
ಸಂಕ್ರುದ್ಧೋ ಮದ್ರರಾಜೋಽಭೂದ್ ಶರವರ್ಷಂ ಮುಮೋಚ ಹ ॥

ತನ್ನ ರಥದ ಧ್ವಜವು ಬಿದ್ದಿದ್ದನ್ನು ಶಲ್ಯನು ನೋಡಿದನು. ಎದುರುಗಡೆ ಧರ್ಮರಾಜನು ನಿಂತಿದ್ದನ್ನೂ ಕಂಡನು. ಮಹಾರಾಜನಾದ ಶಲ್ಯನು ಬಹಳ ಕುಪಿತನಾಗಿ ಬಾಣಗಳ ಮಳೆಯನ್ನೇ ಸುರಿಸಿದನು.

ಶಲ್ಯಃ ಸಾಯಕವರ್ಷೇಣ ಪರ್ಜನ್ಯ ಇವ ವೃಷ್ಟಿಮಾನ್ ।
ಅಭ್ಯವರ್ಷದಮೇಯಾತ್ಮಾ ಕ್ಷತ್ರಿಯಂ ಕ್ಷತ್ರಿಯರ್ಷಭಃ ॥೬೧॥

ಪರ್ಜನ್ಯನು (ವರುಣನು) ಮಳೆಯನ್ನು ಸುರಿಸುವಂತೆ ಕ್ಷತ್ರಿಯೋತ್ತಮನಾದ ಹಾಗೂ ಅಪರಿಮಿತ ಆತ್ಮವಿಶ್ವಾಸವನ್ನು ಹೊಂದಿದ ಶಲ್ಯನು ಧರ್ಮರಾಜನ ಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಾನೆ.

ಸಾತ್ಯಕಿಂ ಭೀಮಸೇನಂ ಚ ಮಾದ್ರೀಪುತ್ರೌ ಚ ಪಾಂಡವೌ ।
ಏಕೈಕಂ ದಶಭಿರ್ವಿದ್ಧ್ವಾ ಯುಧಿಷ್ಠಿರಮಪೀಡಯತ್ ॥೬೨॥

ಸಾತ್ಯಕಿಯನ್ನೂ, ಭೀಮಸೇನನನ್ನೂ, ನಕುಲ-ಸಹದೇವರನ್ನೂ ಒಂದೊಂದು ಬಾಣದಿಂದ ಹೊಡೆದು, ಯುಧಿಷ್ಠಿರನನ್ನೂ ಪೀಡಿಸಿದನು.

ತೇನ ಬಾಣಮಯಂ ಜಾಲಂ ವಿಸೃಷ್ಟಂ ಪಾಂಡವೋರಸಿ ।
ಅಪಶ್ಯಾಮ ಮಹಾರಾಜ ಮೇಘಜಾಲಮಿವೋತ್ಥಿತಮ್ ॥೬೩॥

ಮಹಾರಾಜ! ಶಲ್ಯನು ಪಾಂಡವರ ಮೇಲೆ ಬಾಣದ ಬಲೆಯನ್ನೇ ನಿರ್ಮಿಸಿದನು. ಇದು ಮೋಡದ ಬಲೆಯು ಎದ್ದು ಬಂದಂತೆ ಕಾಣಿಸುತ್ತಿತ್ತು.

ತಸ್ಯ ಶಲ್ಯೋ ರಣೇ ಕ್ರುದ್ಧೋ ಬಾಣೈಃ ಸನ್ನತಪರ್ವಭಿಃ ।
ದಿಶಃ ಪ್ರಚ್ಛಾದಯಾಮಾಸ ಪ್ರದಿಶಶ್ಚ ಮಹಾರಥಃ ॥೬೪॥

ಮಹಾರಥನಾದ ಶಲ್ಯನು ಬಹಳ ಕೋಪಗೊಂಡು ಯುದ್ಧದಲ್ಲಿ ಬಾಗಿದ ಸಂಧಿಗಳುಳ್ಳ ಬಾಣಗಳಿಂದ ದಿಕ್ಕು-ವಿದಿಕ್ಕುಗಳನ್ನು ಮುಚ್ಚಿದನು.

ತತೋ ಯುಧಿಷ್ಠಿರೋ ರಾಜಾ ಬಾಣವರ್ಷೇಣ ಪೀಡಿತಃ ।
ಬಭೂವ ಭೃಶವಿಕ್ರಾಂತೋ ಜಂಭೋ ವಜ್ರಭೃತಾ ಯಥಾ ॥೬೫॥

ಅನಂತರ ರಾಜ ಯುಧಿಷ್ಠಿರನು ಬಾಣಗಳಿಂದ ಪೀಡಿತನಾಗಿ ಜಂಭಾಸುರನು ಇಂದ್ರನಿಂದ ಪೀಡಿತನಾದ ಹಾಗೆ ಬಹಳವಾಗಿ ಆಯಾಸಗೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿಮೂರನೆಯ ಅಧ್ಯಾಯ

ಶಲ್ಯನ ಪರಾಕ್ರಮದ ವರ್ಣನೆ

ಸಂಜಯಃ

ಪೀಡಿತೇ ಧರ್ಮರಾಜೇ ತು ಮದ್ರರಾಜೇನ ಮಾರಿಷ ।
ಸಾತ್ಯಕಿರ್ಭೀಮಸೇನಶ್ಚ ಮಾದ್ರೀಪುತ್ರೌ ಚ ದುರ್ಜಯೌ ॥೧॥

ಪರಿವಾರ್ಯ ರಥೈಃ ಶಲ್ಯಂ ಪೀಡಯಾಮಾಸುರಾಹವೇ ॥೨॥

ಸಂಜಯ– ರಾಜನೇ! ಶಲ್ಯನು ಧರ್ಮರಾಜನನ್ನು ಪೀಡಿಸಿದಾಗ ಸಾತ್ಯಕಿ, ಭೀಮಸೇನ ಮತ್ತು ಜಯಿಸಲು ಅಶಕ್ಯರಾದ ನಕುಲ-ಸಹದೇವ ಇವರು ಶಲ್ಯನನ್ನು ಸುತ್ತುವರಿದು ಯುದ್ಧದಲ್ಲಿ ಅವನನ್ನು ಹಿಂಸಿಸಿದರು.

ತಮೇಕಂ ಬಹುಭಿರ್ದೃಷ್ಟ್ವಾ ಪೀಡ್ಯಮಾನಂ ಮಹಾರಥೈಃ ।
ಸಾಧುವಾದೋ ಮಹಾನ್ ಜಜ್ಞೇ ಸಿದ್ಧಾಶ್ಚಾಸನ್ ಪ್ರಹರ್ಷಿತಾಃ ॥೩॥

ಅನೇಕ ಮಹಾರಥರು ಒಬ್ಬನನ್ನು ಹಿಂಸಿಸಿದ್ದನ್ನು ನೋಡಿ ''ಸಾಧು!'' ಎಂಬ ಶಬ್ದವು ದೊಡ್ಡದಾಗಿ ಉಂಟಾಯಿತು. ಸಿದ್ಧಪುರುಷರು ಸಂತೋಷಪಟ್ಟರು.

ಆಶ್ಚರ್ಯಮಿತ್ಯಭಾಷಂತ ಮುನಯಶ್ಚಾಪಿ ಸಂಗತಾಃ ॥೪॥

ಸೇರಿದ ಮುನಿಗಳು 'ಆಶ್ಚರ್ಯ' ಎಂದು ಹೇಳಿದರು.

ಭೀಮಸೇನೋ ರಣೇ ಶಲ್ಯಂ ಶಲ್ಯಭೂತಂ ಪರಾಕ್ರಮೇ ।
ಏಕೇನ ವಿದ್ಧ್ವಾ ಬಾಣೇನ ಪುನರ್ವಿವ್ಯಾಧ ಸಪ್ತಭಿಃ ॥೫॥

ಯುದ್ಧದಲ್ಲಿ ತನ್ನ ಪರಾಕ್ರಮಕ್ಕೆ ಕಂಟಕಪ್ರಾಯನಾದ ಶಲ್ಯನನ್ನು ಭೀಮಸೇನನು ಮೊದಲು ಒಂದು ಬಾಣದಿಂದ ಹೊಡೆದನು. ಪುನಃ ಏಳು ಬಾಣಗಳಿಂದ ಹೊಡೆದನು.

ಸಾತ್ಯಕಿಶ್ಚ ಶತೇನೈನಂ ಧರ್ಮರಾಜಪರೀಪ್ಸಯಾ ।
ಮದ್ರೇಶ್ವರಮವಾಕೀರ್ಯ ಸಿಂಹನಾದಮಥಾನದತ್ ॥೬॥

ಧರ್ಮರಾಜನನ್ನು ರಕ್ಷಿಸುವ ಉದ್ದೇಶದಿಂದ ಸಾತ್ಯಕಿಯು ನೂರು ಬಾಣಗಳಿಂದ ಶಲ್ಯನನ್ನು ಹೊಡೆದನು ಮತ್ತು ಸಿಂಹಗರ್ಜನೆಯನ್ನು ಮಾಡಿದನು.

ನಕುಲಃ ಪಂಚಭಿಶ್ಚೈವ ಸಹದೇವಶ್ಚ ಸಪ್ತಭಿಃ ।
ವಿದ್ಧ್ವಾ ತತ್ರ ತತಸ್ತೂರ್ಣಂ ಪುನರ್ವಿವ್ಯಾಧ ಸಪ್ತಭಿಃ ॥೭॥

ನಕುಲನು ಐದುಬಾಣಗಳನ್ನೂ, ಸಹದೇವನು ಏಳು ಬಾಣಗಳನ್ನೂ ಶೀಘ್ರವಾಗಿ ಪ್ರಯೋಗಿಸಿದರು. ಪುನಃ ಏಳು ಬಾಣಗಳಿಂದ ಹೊಡೆದನು.

ಸ ತು ಶೂರೋ ರಣೇ ಯತ್ತಃ ಪೀಡಿತಸ್ತೈರ್ಮಹಾರಥೈಃ ।
ವಿಕೃಷ್ಯ ಕಾರ್ಮುಕಂ ಘೋರಂ ವೇಗಘ್ನಂ ಭಾರಸಾಧನಮ್ ॥೮॥

ಯುದ್ಧದಲ್ಲಿ ಮಹಾರಥರಿಂದ ಪೀಡಿತನಾದ ಶಲ್ಯನಾದರೂ ಪಯತ್ನಶೀಲನಾಗಿ ಪರರ ಯುದ್ಧವೇಗವನ್ನು ತಡೆಯಬಲ್ಲ ಭಾರವಾದ ಭಯಂಕರವಾದ ಬಿಲ್ಲನ್ನು ಕೈಗೆತ್ತಿಕೊಂಡನು.

ಸಾತ್ಯಕಿಂ ಪಂಚವಿಂಶತ್ಯಾ ಶಲ್ಯೋ ವಿವ್ಯಾಧ ಮಾರಿಷ ॥೯॥

ಮಾರಿಷ! ಶಲ್ಯನು ಸಾತ್ಯಕಿಯ ಮೇಲೆ ಇಪ್ಪತ್ತೈದು ಬಾಣಗಳನ್ನು ಬಿಟ್ಟು ಹೊಡೆದನು.

ಭೀಮಸೇನಂ ತ್ರಿಸಪ್ತತ್ಯಾ ನಕುಲಂ ಪಂಚಭಿಸ್ತಥಾ ॥೧೦॥

ಭೀಮಸೇನನನ್ನು ಎಪ್ಪತ್ತೂರು ಬಾಣಗಳಿಂದಲೂ, ನಕುಲನನ್ನು ಐದು ಬಾಣಗಳಿಂದಲೂ ಪೀಡಿಸಿದನು.

ಸಮ್ಯಕ್ ಸವಿಶಿಖಂ ಚಾಪಂ ಸಹದೇವಸ್ಯ ಧನ್ವಿನಃ ।
ಛಿತ್ತ್ವಾ ಭಲ್ಲೇನ ಸಮರೇ ವಿವ್ಯಾಧೈನಂ ತ್ರಿಸಪ್ತಭಿಃ ॥೧೧॥

ಶಲ್ಯನು ಭಲ್ಲವನ್ನು ಪ್ರಯೋಗಿಸಿ ಧನುರ್ಧಾರಿಯಾದ ಸಹದೇವನ ಕೈಯಲ್ಲಿ ಹೆದೆಯೇರಿಸಿದ್ದ ಬಿಲ್ಲನ್ನು ತುಂಡರಿಸಿದನು ಮತ್ತು ಇಪ್ಪತ್ತೊಂದು ಬಾಣಗಳಿಂದ ಹೊಡೆದನು.

ಸಹದೇವಸ್ತು ಸಮರೇ ಮಾತುಂ ಭೂರಿವರ್ಚಸಮ್ ।
ಸಜ್ಜಮನ್ಯದ್ಧನುಃ ಕೃತ್ವಾ ಪಂಚಭಿಃ ಸಮತಾಡಯತ್ ॥೧೨॥

ಸಹದೇವನು ಇನ್ನೊಂದು ಬಿಲ್ಲನ್ನು ಹೆದೆಏರಿಸಿ ರಣರಂಗದಲ್ಲಿ ಬಹಳ ತೇಜಸ್ಸುಳ್ಳ ತನ್ನ ಮಾವ ಶಲ್ಯನನ್ನು ಐದು ಬಾಣಗಳಿಂದ ಚೆನ್ನಾಗಿ ಹೊಡೆದನು.

ಶರೈರಾಶೀವಿಷಾಕಾರೈರರ್ಕಜ್ವಲನಸನ್ನಿಭೈಃ ।
ಸಾರಥಿಂ ಚಾಸ್ಯ ಸಮರೇ ಶರೇಣಾನತಪರ್ವಣಾ ॥೧೩॥

ಯುದ್ಧದಲ್ಲಿ ಬಗ್ಗಿದ ಸಂಧಿಯುಳ್ಳ ಬಿಲ್ಲಿನಿಂದ ರವಿ ಮತ್ತು ಬೆಂಕಿಗೆ ಸದೃಶವಾದ ಸರ್ಪಾಕಾರದ ಬಾಣಗಳನ್ನು ಪ್ರಯೋಗಿಸಿ ಶಲ್ಯನ ಸಾರಥಿಯನ್ನು ಕೊಂದು ಹಾಕಿದನು.

ವಿವ್ಯಾಧ ಭೃಶಸಂಕ್ರುದ್ಧಸ್ತಂ ಚ ಭೂಯಸ್ತ್ರಿಭಿಃ ಶರೈಃ ।
ಭೀಮಸೇನಃ ತ್ರಿಸಪ್ತತ್ಯಾ ಸಾತ್ಯಕಿರ್ನವಭಿಃ ಶರೈಃ ॥೧೪॥

ಬಹಳ ಕೋಪದಿಂದ ಮತ್ತೆ ಮೂರು ಬಾಣಗಳಿಂದ ಶಲ್ಯನನ್ನೂ ಹೊಡೆದನು.

ಧರ್ಮರಾಜಸ್ತಥಾ ಷಷ್ಟ್ಯಾ ಗಾತ್ರೇ ಶಲ್ಯಂ ಸಮರ್ಪಯತ್ ॥೧೫॥

ಭೀಮಸೇನನು ಎಪ್ಪತ್ತೂರು ಬಾಣಗಳಿಂದ, ಸಾತ್ಯಕಿಯು ಒಂಬತ್ತು ಬಾಣಗಳಿಂದ, ಹಾಗೆಯೇ ಧರ್ಮರಾಜನು ಅರವತ್ತು ಬಾಣಗಳಿಂದ ಶಲ್ಯನ ದೇಹಕ್ಕೆ ಹೊಡೆದರು.

ತತಃ ಶಲ್ಯೋ ಮಹಾರಾಜ ನಿರ್ವಿದ್ಧಸ್ತೈರ್ಮಹಾರಥೈಃ ।
ಸುಸ್ರಾವ ರುಧಿರಂ ಗಾತ್ರೈರ್ಗೈರಿಕಂ ಪರ್ವತೋ ಯಥಾ ॥೧೬॥

ಮಹಾರಾಜ! ಅನಂತರ ಶಲ್ಯನು ಆ ಮಹಾರಥರಿಂದ ಹೊಡೆಯಲ್ಪಟ್ಟವನಾಗಿ ಪರ್ವತದಲ್ಲಿ ಗರಿಕೆಯ ರಸವು ಹೊರಸೂಸಿದಂತೆ ಇವನ ದೇಹದಲ್ಲಿ ಬಹಳವಾಗಿ ರಕ್ತವು ಹರಿಯಿತು.

ತಾಂಶ್ಚ ಸರ್ವಾನ್ ಮಹೇಷ್ವಾಸಾನ್ ಪಂಚಭಿಃ ಪಂಚಭಿಃ ಶರೈಃ ।
ವಿವ್ಯಾಧ ತರಸಾ ರಾಜನ್ ತದದ್ಭುತಮಿವಾಭವತ್ ॥೧೭॥

ರಾಜನೇ! ಶಲ್ಯನು ಇವರೆಲ್ಲರನ್ನೂ ಪ್ರತ್ಯೇಕವಾಗಿ ಐದೈದು ಬಾಣಗಳಿಂದ ಕೂಡಲೇ ಹೊಡೆದನು. ಅದು ಬಹಳ ಅದ್ಭುತವಾಗಿತ್ತು.

ತತೋಽಪರೇಣ ಭಲ್ಲೇನ ಧರ್ಮಪುತ್ರಸ್ಯ ಮಾರಿಷ ।
ಧನುಶ್ಚಿಚ್ಛೇದ ಸಮರೇ ಸಜ್ಯಂ ಸ ಚ ಮಹಾರಥಃ ॥೧೮॥

ಮಾರಿಷನೇ! ಯುದ್ಧದಲ್ಲಿ ಮಹಾರಥನಾದ ಶಲ್ಯನು ಅನಂತರ ಇನ್ನೊಂದು ಭಲ್ಲೆಯಿಂದ ಧರ್ಮರಾಜನ ಹೆದೆಯೇರಿಸಿದ ಬಿಲ್ಲನ್ನು ಮುರಿದನು.

ಅಥಾನ್ಯದ್ ಧನುರಾದಾಯ ಧರ್ಮಪುತ್ರೋ ಮಹಾರಥಃ ।
ಸಾಶ್ವಸೂತಧ್ವಜರಥಂ ಶಲ್ಯಂ ಪ್ರಾಚ್ಛಾದಯಚ್ಛರೈಃ ॥೧೯॥

ಅನಂತರ ಮಹಾರಥನಾದ ಧರ್ಮರಾಜನು ಇನ್ನೊಂದು ಬಿಲ್ಲನ್ನು ತೆಗೆದುಕೊಂಡು ಬಾಣಗಳಿಂದ ಶಲ್ಯನನ್ನೂ, ಅವನ ರಥ, ಸಾರಥಿ, ಕುದುರೆಗಳನ್ನು ಮುಚ್ಚಿಹಾಕಿದನು.

ಪ್ರಚ್ಛಾದ್ಯಮಾನಃ ಸಮರೇ ಧರ್ಮಪುತ್ರಸ್ಯ ಸಾಯಕೈಃ ।
ಯುಧಿಷ್ಠಿರಮಥಾವಿಧ್ಯದ್ ದಶಭಿರ್ನಿಶಿತೈಃ ಶರೈಃ ॥೨೦॥

ಧರ್ಮರಾಜ ಬಾಣಗಳಿಂದ ಆಚ್ಛಾದಿತನಾದ ಶಲ್ಯನು ಆ ಯುದ್ಧದಲ್ಲಿ ಹರಿತವಾದ ಹತ್ತು ಬಾಣಗಳಿಂದ ಧರ್ಮರಾಜನನ್ನು ಹೊಡೆದನು.

ಸಾತ್ಯಕಿಸ್ತು ತತಃ ಕ್ರುದ್ಧೋ ಧರ್ಮಪುತ್ರೇ ಶರಾರ್ದಿತೇ ।
ಮದ್ರಾಣಾಮಧಿಪಂ ಶೂರಂ ಶರೈರ್ವಿವ್ಯಾಧ ಪಂಚಭಿಃ ॥೨೧॥

ಅನಂತರ ಶಲ್ಯನಿಂದ ಧರ್ಮರಾಜನು ಪೀಡಿತನಾಗಲು ಸಾತ್ಯಕಿಯು ಬಹಳ ಕೋಪಗೊಂಡು ಐದು ಬಾಣಗಳಿಂದ ಮದ್ರಾಧಿಪತಿಶಲ್ಯನನ್ನು ಹೊಡೆದನು.

ಸ ಸಾತ್ಯಕೇಶ್ಚ ಚಿಚ್ಛೇದ ಕ್ಷುರಪ್ರೇಣ ಮಹದ್ಧನುಃ ।
ಭೀಮಸೇನಮುಖಾಂಸ್ತಾಂಸ್ತಾನ್ ತ್ರಿಭಿಸ್ತ್ರಿಭಿರತಾಡಯತ್ ॥೨೨॥

ಶಲ್ಯನು ಶೀಘ್ರಗಾಮಿಯಾದ ಕ್ಷುರಪ್ರ ಎಂಬ ಆಯುಧದಿಂದ ಸಾತ್ಯಕಿಯ ದೊಡ್ಡದಾದ ಬಿಲ್ಲನ್ನು ತುಂಡರಿಸಿದನು. ಭೀಮಸೇನ ಮೊದಲಾದವರನ್ನು ಮೂರು ಮೂರು ಬಾಣಗಳಿಂದ ಹೊಡೆದನು.

ತಸ್ಯ ಕ್ರುದ್ಧೋ ಮಹಾರಾಜ ಸಾತ್ಯಕಿಃ ಸತ್ಯವಿಕ್ರಮಃ ।
ತೋಮರಂ ಪ್ರೇಷಯಾಮಾಸ ಸ್ವರ್ಣದಂಡಂ ಮಹಾರಣೇ ॥೨೩॥

ಮಹಾರಾಜ! ಮಹಾವಿಕ್ರಮವುಳ್ಳ ಸಾತ್ಯಕಿಯು ಶಲ್ಯನ ಮೇಲೆ ಕೋಪಿಸಿಕೊಂಡು ಆ ಮಹಾಯುದ್ಧದಲ್ಲಿ ಬಂಗಾರದ ದಂಡವುಳ್ಳ ತೋಮರ ಎಂಬ ಆಯುಧವನ್ನು ಪ್ರಯೋಗಿಸಿದನು.

ಭೀಮಸೇನಃ ಶರಂ ಘೋರಂ ಕಾರ್ತಸ್ವರವಿಭೂಷಿತಮ್ ।
ನಕುಲಃ ಸಮರೇ ಶಕ್ತಿಂ ಸಹದೇವೋ ಗದಾಂ ಶುಭಾಮ್ ॥೨೪॥

ಧರ್ಮರಾಜಃ ಶತಘ್ನೀಂ ತು ಜಿಘಾಂಸುಃ ಶಲ್ಯಮಾಹವೇ ॥೨೫॥

ಶಲ್ಯನನ್ನು ಕೊಲ್ಲುವ ಇಚ್ಛೆಯಿಂದ ಭೀಮಸೇನನು ಬಂಗಾರದಿಂದ ಶೋಬಿಸುವ ಭಯಂಕರವಾದ ಬಾಣವನ್ನೂ, ನಕುಲನು ಶಕ್ತ್ಯಾಯುಧವನ್ನೂ, ಸಹದೇವನು ಮಂಗಳಮಯವಾದ ಗದೆಯನ್ನೂ. ಧರ್ಮರಾಜನು ಶತಘ್ನಿ ಆಯುಧವನ್ನೂ ಪ್ರಯೋಗಿಸಿದರು.

ತಾನಾಪತತ ಏವಾಶು ಪಂಚಾನಾಂ ವೈ ಭುಜಚ್ಯುತಾನ್ ।
ಸಾತ್ಯಕಿಪ್ರಹಿತಂ ಶಲ್ಯೋ ಭಲ್ಲೈಶ್ಚಿಚ್ಛೇದ ತೋಮರಮ್ ॥೨೬॥

ಐವರ ಕೈಗಳಿಂದ ಪ್ರಯುಕ್ತವಾದ ಆ ಆಯುಧಗಳನ್ನು ಶಲ್ಯನು ನಿಗ್ರಹಿಸಿದನು. ಭಲ್ಲೆಯಿಂದ ಸಾತ್ಯಕಿಯ ತೋಮರಾಯುಧವನ್ನು ಪುಡಿಮಾಡಿದನು.

ವೃಕೋದರೇಣ ಪ್ರಹಿತಂ ಶರಂ ಕನಕಭೂಷಿತಮ್ ।
ದ್ವಿಧಾ ಚಿಚ್ಛೇದ ಸಮರೇ ಕೃತಹಸ್ತಃ ಪ್ರತಾಪವಾನ್ ॥೨೭॥

ಯುದ್ಧದಲ್ಲಿ ಸಿದ್ಧಹಸ್ತನಾದ ಮಹಾಪ್ರತಾಪಿ ಶಲ್ಯನು, ಭೀಮನು ಪ್ರಯೋಗಿಸಿದ ಬಂಗಾರದ ಬಾಣವನ್ನು ಎರಡಾಗಿ ತುಂಡರಿಸಿದನು.

ನಕುಲಪ್ರೇಷಿತಾಂ ಶಕ್ತಿಂ ಹೇಮದಂಡಾಂ ಭಯಾವಹಾಮ್ ।
ಗದಾಂ ಚ ಸಹದೇವೇನ ಶರೌಘೈಃ ಸಮವಾರಯತ್ ॥೨೮॥

ನಕುಲನು ಪ್ರಯೋಗಿಸಿದ ಬಂಗಾರದ ಹಿಡಿಯುಳ್ಳ, ಭಯಂಕರವಾದ ಶಕ್ತ್ಯಾಯುಧವನ್ನು, ಸಹದೇವನ ಗದೆಯನ್ನೂ ಬಾಣಗಳನ್ನು ಬಿಟ್ಟು ತಡೆದನು.

ಶರಾಭ್ಯಾಂ ಚ ಶತಘ್ನೀಂ ತಾಂ ರಾಜ್ಞಶ್ಚಿಚ್ಛೇದ ಭಾರತ ।
ಪಶ್ಯತಾಂ ಪಾಂಡುಪುತ್ರಾಣಾಂ ಸಿಂಹನಾದಮನಾದಯತ್ ॥೨೯॥

ಧರ್ಮರಾಜನು ಪ್ರಯೋಗಿಸಿದ ಶತಘ್ನೀ ಆಯುಧವನ್ನು ಪಾಂಡವರ ಸಮ್ಮುಖದಲ್ಲಿಯೇ ತುಂಡರಿಸಿದನು. ಸಿಂಹಗರ್ಜನೆಯನ್ನು ಮಾಡಿದನು.

ನಾಮೃಷ್ಯತ್ ತತ್ತು ಶೈನೇಯಃ ಶತ್ರೋರ್ವಿಜಯಮಾಹವೇ ॥೩೦॥

ಯುದ್ಧದಲ್ಲಿ ಶತ್ರುವಿನ ವಿಜಯವನ್ನು ಸಾತ್ಯಕಿಯು ಸಹಿಸಿಕೊಳ್ಳಲಿಲ್ಲ.

ಅಥಾನ್ಯದ್ ಧನುರಾದಾಯ ಸಾತ್ಯಕಿಃ ಕ್ರೋಧಮೂರ್ಚ್ಛಿತಃ ।
ದ್ವಾಭ್ಯಾಂ ಮದ್ರೇಶ್ವರಂ ವಿದ್ಧ್ವಾ ಸಾರಥಿಂ ಚ ತ್ರಿಭಿಃ ಶರೈಃ ॥೩೧॥

ಸಾತ್ಯಕಿಯು ಬಹಳ ಕೋಪಗೊಂಡವನಾಗಿ ಇನ್ನೊಂದು ಬಿಲ್ಲನ್ನು ತೆಗೆದುಕೊಂಡು ಎರಡು ಬಾಣಗಳಿಂದ ಶಲ್ಯನನ್ನು, ಮೂರು ಬಾಣಗಳಿಂದ ಅವನ ಸಾರಥಿಯನ್ನು ಹೊಡೆದನು.

ತತಃ ಶಲ್ಯೋ ರಣೇ ರಾಜನ್ ಸರ್ವಾಂಸ್ತಾನ್ ದಶಭಿಃ ಶರೈಃ ।
ವಿವ್ಯಾಧ ಸುಭೃಶಂ ಕ್ರುದ್ಧಃ ತೋತ್ತ್ರೈರಿವ ಮಹಾದ್ವಿಪಾನ್ ॥೩೨॥

ರಾಜನೇ! ಅನಂತರ ಯುದ್ಧದಲ್ಲಿ ಶಲ್ಯನು ಬಹಳವಾಗಿ ಕೋಪಗೊಂಡು ಚಾಟಿಯಿಂದ ಮಹಾಗಜಗಳನ್ನು ಹೊಡೆಯುವಂತೆ ಅವರೆಲ್ಲರನ್ನೂ ಹತ್ತತ್ತು ಬಾಣಗಳಿಂದ ಹೊಡೆದನು.

ತೇ ವಾರ್ಯಮಾಣಾಃ ಸಮರೇ ಮದ್ರರಾಜೇನ ಧೀಮತಾ ।
ನ ಶೇಕುಃ ಪ್ರಮುಖೇ ಸ್ಥಾತುಂ ತಸ್ಯ ಶತ್ರುನಿಷೂದನ ॥೩೩॥

ಶತ್ರುಗಳನ್ನು ನಾಶಮಾಡುವವನೇ! ರಣರಂಗದಲ್ಲಿ ಬುದ್ಧಿವಂತನಾದ ಶಲ್ಯನಿಂದ ನಿವಾರಿಸಲ್ಪಟ್ಟ ಅವರೆಲ್ಲರೂ ಶಲ್ಯನ ಮುಂದೆ ನಿಲ್ಲಲು ಸಮರ್ಥರಾಗಲಿಲ್ಲ.

ತತೋ ದುರ್ಯೋಧನೋ ರಾಜಾ ದೃಷ್ಟ್ವಾ ಶಲ್ಯಸ್ಯ ವಿಕ್ರಮಮ್ ।
ನಿಹತಾನ್ ಪಾಂಡವಾನ್ ಮೇನೇ ಪಾಂಚಾಲಾಂಶ್ಚ ಸಸೃಂಜಯಾನ್ ॥

ಅನಂತರ ರಾಜನಾದ ದುರ್ಯೋಧನನು ಶಲ್ಯನ ಯುದ್ಧವಿಕ್ರಮವನ್ನು ನೋಡಿ ಪಾಂಡವರು, ಸೃಂಜಯರು, ಪಾಂಚಾಲರು ಸತ್ತರು ಎಂದು ಭಾವಿಸಿದನು.

ತಥಾವಿಧಂ ಮಹಾರಾಜ ಮದ್ರರಾಜಸ್ಯ ವಿಕ್ರಮಮ್ ।
ಅಸಹ್ಯಂ ಮಾನವೈರ್ಯುದ್ಧೇ ತದ್ ಬಭೂವ ನರರ್ಷಭ ॥೩೫॥

ಮಹಾರಾಜ! ನರೋತ್ತಮ! ಶಲ್ಯನ ಅಂತಹ ವಿಕ್ರಮವು ಮನುಷ್ಯರಿಗೆ ಸಹಿಸಲು ಅಸಾಧ್ಯವಾದುದಾಗಿತ್ತು.

ತತೋ ರಾಜನ್ ಮಹಾಬಾಹುಃ ಭೀಮಸೇನಃ ಪ್ರತಾಪವಾನ್ ।
ಸಂತ್ಯಜ್ಯ ಮನಸಾ ಪ್ರಾಣಾನ್ ಮದ್ರರಾಜಮಯೋಧಯತ್ ॥೩೬॥

ರಾಜನೇ! ಪ್ರತಾಪಿಯಾದ ಮಹಾಬಾಹು ಭೀಮಸೇನನು ಮನದಲ್ಲಿ ಸಾವನ್ನು ನಿಶ್ಚಯಿಸಿಕೊಂಡು ಶಲ್ಯನ ಜೊತೆಗೆ ಹೋರಾಡಿದನು.

ನಕುಲಃ ಸಹದೇವಶ್ಚ ಸಾತ್ಯಕಿಶ್ಚ ಮಹಾರಥಃ ।
ಪರಿವಾರ್ಯ ತದಾ ಶಲ್ಯಂ ಸಮಂತಾದ್ ವ್ಯಕಿರಚ್ಛರೈಃ ॥೩೭॥

ನಕುಲ, ಸಹದೇವ, ಸಾತ್ಯಕಿ ಮೊದಲಾದ ಮಹಾರಥರು ಶಲ್ಯನನ್ನು ಎಲ್ಲಾ ಕಡೆಗಳಿಂದ ಸುತ್ತುವರಿದು ಅವನ ಮೇಲೆ ಬಾಣಗಳನ್ನು ಪ್ರಯೋಗಿಸಿದರು.

ಸ ಚತುರ್ಭಿರ್ಮಹೇಷ್ವಾಸೈಃ ಪಾಂಡವಾನಾಂ ಮಹಾರಥೈಃ ।
ವೃತಸ್ತಾನ್ ಯೋಧಯಾಮಾಸ ಮದ್ರರಾಜಃ ಪ್ರತಾಪವಾನ್ ॥೩೮॥

ಪ್ರತಾಪಿಯಾದ ಶಲ್ಯನು ಮಹಾರಥರು ಹಾಗೂ ಮಹಾಬಿಲ್ಲಾರರಾದ ಆ ನಾಲ್ವರಿಂದ ಸುತ್ತುವರಿಯಲ್ಪಟ್ಟವನಾಗಿದ್ದರೂ ಅವರೊಂದಿಗೆ ಹೋರಾಡಿದನು.

ತಸ್ಯ ಧರ್ಮಸುತೋ ರಾಜನ್ ಕ್ಷುರಪ್ರೇಣ ಮಹಾಹವೇ ।
ಚಕ್ರರಕ್ಷಂ ಜಘಾನಾಶು ಮದ್ರರಾಜಸ್ಯ ಪಶ್ಯತಃ ॥೩೯॥

ರಾಜನೇ! ಶಲ್ಯನು ನೋಡುತ್ತಿದ್ದಂತೆಯೇ ಧರ್ಮರಾಜನು ಕ್ಷುರಪ್ರಾಯುಧದಿಂದ ಅವನ ರಥದ ಚಕ್ರರಕ್ಷಕನನ್ನು ಬೇಗನೇ ಕೊಂದನು.

ತಸ್ಮಿಂಸ್ತು ನಿಹತೇ ಶೂರೇ ಚಕ್ರರಕ್ಷೇ ಮಹಾಬಲೇ ।
ಮದ್ರರಾಜೋಽತಿಬಲವಾನ್ ಸೈನಿಕಾನಾವೃಣೋಚ್ಛರೈಃ ॥೪೦॥

ಮಹಾಬಲಶಾಲಿಯಾದ ಚಕ್ರರಕ್ಷಕನು ಸತ್ತುಹೋಗಲು ಅತಿಬಲಶಾಲಿಯಾದ ಶಲ್ಯನು ಸೈನಿಕರನ್ನು ಬಾಣಗಳಿಂದ ಮುಚ್ಚಿಬಿಟ್ಟನು.

ಸಮಾಚ್ಛನ್ನಾಂಸ್ತತಸ್ತಾಂಸ್ತು ರಾಜನ್ ವೀಕ್ಷ್ಯ ಸ್ವಸೈನಿಕಾನ್ ।
ಚಿಂತಯಾಮಾಸ ಸಮರೇ ಧರ್ಮಪುತ್ರೋ ಯುಧಿಷ್ಠಿರಃ ॥೪೧॥

ರಾಜನೇ! ತನ್ನ ಸೈನಿಕರನ್ನು ಶಲ್ಯನು ಬಾಣಗಳಿಂದ ಮುಚ್ಚಿದ್ದನ್ನು ನೋಡಿದ ಧರ್ಮರಾಜನು ಯುದ್ಧದಲ್ಲಿ ಚಿಂತಿಸತೊಡಗಿದನು.

ಯುಧಿಷ್ಠಿರಃ

ಕಥಂ ನು ನ ಭವೇತ್ ಸತ್ಯಂ ಮಾಧವಸ್ಯ ವಚೋ ಮಹತ್ ।
ಅಭಿಕ್ರುದ್ಧೋ ಮಹಾರಾಜ ಕ್ಷಪಯೇತ ಬಲಂ ಮಮ ॥೪೨॥

ಅಹಂ ಮದ್ಭ್ರಾತರಶ್ಚೈವ ಸಾತ್ಯಕಿಶ್ಚ ಮಹಾರಥಃ ।
ಪಾಂಚಾಲಾಃ ಸೃಂಜಯಾಶ್ಚೈವ ನ ಶಕ್ತಾಃ ಸ್ಮ ಹಿ ಮದ್ರಪಮ್ ॥೪೩॥

ನಿಹನಿಷ್ಯತಿ ಚೈವಾದ್ಯ ಮಾತುಲೋಽಸ್ಮಾನ್ ಮಹಾಬಲಃ ।
ಗೋವಿಂದವಚನಂ ಸತ್ಯಂ ಕಥಂ ಭವತಿ ಕಿಂತ್ವಿದಮ್ ॥೪೪॥

ಯುಧಿಷ್ಠಿರ– ಮಾಧವನ ಹಿರಿದಾದ ಮಾತು ಸತ್ಯವಾಗದಿರಲು ಹೇಗೆ ಸಾಧ್ಯ? ಆದರೆ ಕ್ರುದ್ಧನಾದ ಶಲ್ಯನು ನನ್ನ ಸೇನೆಯನ್ನು ನಾಶಮಾಡುತ್ತಿದ್ದಾನೆ. (ನಾನು, ನನ್ನ ಸಹೋದರರು, ಸಾತ್ಯಕಿ, ಸೃಂಜಯರು, ಪಾಂಚಾಲರು ಯಾರೂ ಕೂಡ ಶಲ್ಯನನ್ನು ನಿಗ್ರಹಿಸಲು ಸಮರ್ಥರಾಗಲಿಲ್ಲ. ಮಹಾಬಲಶಾಲಿಯಾದ ಶಲ್ಯನು ನಮ್ಮನ್ನೆಲ್ಲಾ ಸಾಯಿಸುತ್ತಿದ್ದಾನೆ. ಹಾಗಿದ್ದರೆ ಗೊವಿಂದನ ಮಾತು ಹೇಗೆ ಸತ್ಯವಾದೀತು?)

ಸಂಜಯಃ

ತತಃ ಸರಥನಾಗಾಶ್ವಾಃ ಪಾಂಡವಾಃ ಪಾಂಡುಪೂರ್ವಜ ।
ಮದ್ರೇಶ್ವರಂ ಸಮಾಸೇದುಃ ಪೀಡಯಂತಃ ಸಮಂತತಃ ॥೪೫॥

ಸಂಜಯ– ಪಾಂಡುವಿನ ಅಣ್ಣನೇ! ಅನಂತರ ರಥ ಆನೆ ಅಶ್ವಗಳಿಂದ ಕೂಡಿದ ಪಾಂಡವರು ಶಲ್ಯನನ್ನು ಸುತ್ತಲೂ ಹಿಂಸಿಸುತ್ತಾ ಒಟ್ಟು ಸೇರಿದರು.

ನಾನಾಶಸ್ತ್ರೌಘಬಹುಲಾಂ ಶಸ್ತ್ರವೃಷ್ಟಿಂ ಸಮುತ್ಥಿತಾಮ್ ।
ವ್ಯಧಮತ್ ಸಮರೇ ರಾಜನ್ ಮಹಾಭ್ರಾಣೀವ ಮಾರುತಃ ॥೪೬॥

ರಾಜನೇ! ಗಾಳಿಯು ಮಹಾಮೇಘಗಳನ್ನು ಛಿದ್ರಗೊಳಿಸುವಂತೆ ಶಲ್ಯನು ಯುದ್ಧದಲ್ಲಿ ನಾನಾವಿಧದ ಶಸ್ತ್ರಸಮೂಹಗಳುಳ್ಳ ಶಸ್ತ್ರಗಳ ಮಳೆಯನ್ನು ನಾಶಮಾಡಿದನು.

ತತಃ ಕನಕಪುಂಖಾಂತಾಂ ಶಲ್ಯಕ್ಷಿಪ್ತಾಂ ವಿಯದ್ಗತಾಮ್ ।
ಶರವೃಷ್ಟಿಮಪಶ್ಯಾಮ ಶಲಭಾನಾಮಿವಾಯತಿಮ್ ॥೪೭॥

ಅನಂತರ ಶಲ್ಯನು ಬಂಗಾರದ ರೆಕ್ಕೆಗಳುಳ್ಳ ಬಾಣಗಳ ಮಳೆಯನ್ನು ಆಕಾಶದಲ್ಲಿ ಸುರಿಸಿ ಆಕಾಶವನ್ನು ಬಾಣಗಳಿಂದ ತುಂಬಿದನು. ಅದು ಶಲಭಗಳು ಆಕಾಶವನ್ನು ವ್ಯಾಪಿಸಿದಂತೆ ಕಾಣಿಸಿತು.

ತೇ ಶರಾ ಮದ್ರರಾಜೇನ ಪ್ರೇಷಿತಾ ರಣಮೂರ್ಧನಿ ।
ಸಂಪತಂತಃ ಸ್ಮ ದೃಶ್ಯಂತೇ ಶಲಭಾನಾಂ ವ್ರಜಾ ಇವ ॥೪೮॥

ಮದ್ರರಾಜ ಶಲ್ಯನು ಪ್ರಯೋಗಿಸಿದ ಆ ಬಾಣಗಳು ರಣರಂಗದಲ್ಲಿ ಎಲ್ಲ ಕಡೆಯೂ ಬೀಳಲು ತೊಡಗಿದ್ದನ್ನು ನಾವು ನೋಡಿದೆವು. ಅದು ಶಲಭಗಳು ಬಿದ್ದ ಹಾಗೆ ಕಾಣಿಸುತ್ತಿತ್ತು.

ಮದ್ರರಾಜಧನುರ್ಮುಕ್ತೈಃ ಶರೈಃ ಕನಕಭೂಷಣೈಃ ।
ನಿರಂತರಮಿವಾಕಾಶಂ ಸಂಬಭೂವ ಜನಾಧಿಪ ॥೪೯॥

ಜನನಾಯಕನೇ! ಶಲ್ಯನು ಬಿಟ್ಟ ಬಂಗಾರದಿಂದ ಶೋಭಿಸುವ ಬಾಣಗಳು ಆಕಾಶವನ್ನೆಲ್ಲಾ ತುಂಬಿ ಆಕಾಶದಲ್ಲಿ ಎಡೆಯೇ (ಸ್ಥಳವೇ) ಇಲ್ಲದಂತಾಯಿತು.

ನ ಪಾಂಡವಾನಾಂ ನಾಸ್ಮಾಕಂ ತತ್ರ ಕಶ್ಚಿದ್ ವ್ಯದೃಶ್ಯತ ।
ಬಾಣಾಂಧಕಾರೇ ಮಹತಿ ಕೃತೇ ತತ್ರ ಮಹಾಹವೇ ॥೫೦॥

ನಮಗಾಗಲೀ, ಪಾಂಡವರಿಗಾಗಲೀ ಅಲ್ಲಿ ಯಾರೂ ಕಾಣಿಸಲಿಲ್ಲ. ಆ ಯುದ್ಧದಲ್ಲಿ ಆ ರೀತಿಯಲ್ಲಿ ಬಾಣಗಳಿಂದ ಕತ್ತಲೆ ನಿರ್ಮಿಸಲ್ಪಟ್ಟಿತು.

ಮದ್ರರಾಜೇನ ಬಲಿನಾ ಲಾಘವಾಚ್ಛರವೃಷ್ಟಿಭಿಃ ।
ಲೋಡ್ಯಮಾನಂ ತದಾ ದೃಷ್ಟ್ವಾ ಪಾಂಡವಾನಾಂ ಬಲಾರ್ಣವಮ್ ॥

ಬಲಶಾಲಿಯಾದ ಶಲ್ಯನು ಅನಾಯಾಸವಾಗಿ ಬಾಣಗಳ ಮಳೆಯನ್ನು ಸುರಿಸಿ ಪಾಂಡವರ ಸೈನ್ಯವನ್ನು ಅಲ್ಲೋಲ-ಕಲ್ಲೋಲ ಮಾಡಿದನು.

ವಿಸ್ಮಯಂ ಪರಮಂ ಜಗ್ಮುಃ ದೇವಗಂಧರ್ವದಾನವಾಃ ॥೫೨॥

ಇದನ್ನು ನೋಡಿದ ದೇವತೆಗಳು, ಗಂಧರ್ವರು, ದಾನವರು ಆಶ್ಚರ್ಯವನ್ನು ಹೊಂದಿದರು.

ಸ ತು ತಾನ್ ಸರ್ವತೋ ಯತ್ತಾತ್ ಶರೈಃ ಸಂಪೀಡ್ಯ ಮಾರಿಷ ।
ಧರ್ಮರಾಜಮವಚ್ಛಾದ್ಯ ಸಿಂಹವದ್ ವ್ಯನದನ್ ಮುಹುಃ ॥೫೩॥

ರಾಜನೇ! ಶಲ್ಯನಾದರೂ ಪ್ರಯತ್ನಪೂರ್ವಕವಾಗಿ ಅವರನ್ನು ಬಾಣಗಳಿಂದ ಹಿಂಸಿಸಿ, ಧರ್ಮರಾಜನನ್ನು ಆಚ್ಛಾದಿಸಿ ಪುನಃ ಸಿಂಹನಾದವನ್ನು ಮಾಡಿದನು.

ತೇ ಚ್ಛನ್ನಾಃ ಸಮರೇ ತೇನ ಪಾಂಡವಾನಾಂ ಮಹಾರಥಾಃ ।
ನ ಶೇಕುಸ್ತೇ ತದಾ ಯುದ್ಧೇ ಪ್ರತ್ಯುದ್ಯಾತುಂ ಮಹಾರಥಾಃ ॥೫೪॥

ಮಹಾರಥರಾದ ಪಾಂಡವರು ಯುದ್ಧದಲ್ಲಿ ಹೀಗೆ ಅವನಿಂದ ಮುಚ್ಚಲ್ಪಟ್ಟು ಮಹಾರಥಿಯಾದ ಶಲ್ಯನ ಕಡೆಗೆ ಹೋಗಲು ಸಮರ್ಥರಾಗಲಿಲ್ಲ.

ಧರ್ಮರಾಜಪುರೋಗಾಸ್ತು ಭೀಮಸೇನಮುಖಾ ರಥಾಃ ।
ನಿಜಘ್ನುಃ ಸಮರೇ ಶೂರಂ ಶಲ್ಯಮಾಹವಶೋಭಿನಮ್ ॥೫೫॥

ಧರ್ಮರಾಜನನ್ನು ಮುಂದಿರಿಸಿಕೊಂಡು ಭೀಮಸೇನ ಮೊದಲಾದವರು ಯುದ್ಧದಲ್ಲಿ ಶೋಭಿಸುತ್ತಿರುವ ಶಲ್ಯನನ್ನು ಬಿಟ್ಟೂಬಿಡದೆ ಅಲ್ಲಿಯೇ ಹೊಡೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾಲ್ಕನೆಯ ಅಧ್ಯಾಯ

ಅರ್ಜುನ ಮತ್ತು ಅಶ್ವತ್ಥಾಮರ ಯುದ್ಧ. ಪಾಂಚಾಲವೀರನಾದ ಸುರಥನ ವಧೆ.

ಸಂಜಯಃ

ಅರ್ಜುನೋ ದ್ರೌಣಿನಾ ವಿದ್ಧೋ ಯುದ್ಧೇ ಬಹುಭಿರಾಯಸೈಃ ।
ತಸ್ಯ ಚಾನುಚರೈಃ ಶೂರೈಃ ತ್ರಿಗರ್ತಾನಾಂ ಮಹಾರಥೈಃ ॥೧॥

ದ್ರೌಣಿಂ ವಿವ್ಯಾಧ ಸಮರೇ ತ್ರಿಭಿರೇವ ಶಿಲೀಮುಖೈಃ ।
ತಥೇತರಾನ್ ಮಹೇಷ್ವಾಸಾನ್ ದ್ವಾಭ್ಯಾಂ ದ್ವಾಭ್ಯಾಂ ಸಮಾಚ್ಛಿನತ್ ॥೨॥

ಭೂಯಶ್ಚೈತಾನ್ ಮಹಾಬಾಹುಃ ಶರವರ್ಷೈರವಾಕಿರತ್ ॥೩॥

ಸಂಜಯ– ಇನ್ನೊಂದು ಕಡೆಯಲ್ಲಿ ಯುದ್ಧದಲ್ಲಿ ಅಶ್ವತ್ಥಾಮನು ಮಹಾರಥರಾದ ತ್ರಿಗರ್ತದೇಶದ ಯೋಧರಿಂದ ಕೂಡಿಕೊಂಡು ಕಬ್ಬಿಣದ ಅನೇಕ ಶಸ್ತ್ರಗಳಿಂದ ಅರ್ಜುನನನ್ನು ಹೊಡೆದನು. ಆಗ ಅರ್ಜುನನು ಯುದ್ಧದಲ್ಲಿ ಕೇವಲ ಮೂರೇ ಬಾಣಗಳಿಂದ ಅಶ್ವತ್ಥಾಮನಿಗೆ ಹೊಡೆದನು. ಹಾಗೆಯೇ ಉಳಿದ ಬಿಲ್ಗಾರರನ್ನು ಎರಡೆರಡು ಬಾಣಗಳಿಂದಲೇ ಚೆನ್ನಾಗಿ ಹೊಡೆದನು. ಪುನಃ ಈ ಮಹಾವೀರರ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ಶರಕಂಟಕಿನಸ್ತೇ ತು ತಾವಕಾ ಭರತರ್ಷಭ ।
ನ ಜಹುಃ ಸಮರೇ ಪಾರ್ಥಂ ವಧ್ಯಮಾನಾಃ ಶಿಲೀಮುಖೈಃ ॥೪॥

ಮದ್ರರಾಜಧನುರ್ಮುಕ್ತೈಃ ಶರೈಃ ಕನಕಭೂಷಣೈಃ ।
ನಿರಂತರಮಿವಾಕಾಶಂ ಸಂಬಭೂವ ಜನಾಧಿಪ ॥೪೯॥

ಜನನಾಯಕನೇ! ಶಲ್ಯನು ಬಿಟ್ಟ ಬಂಗಾರದಿಂದ ಶೋಭಿಸುವ ಬಾಣಗಳು ಆಕಾಶವನ್ನೆಲ್ಲಾ ತುಂಬಿ ಆಕಾಶದಲ್ಲಿ ಎಡೆಯೇ (ಸ್ಥಳವೇ) ಇಲ್ಲದಂತಾಯಿತು.

ನ ಪಾಂಡವಾನಾಂ ನಾಸ್ಮಾಕಂ ತತ್ರ ಕಶ್ಚಿದ್ ವ್ಯದೃಶ್ಯತ ।
ಬಾಣಾಂಧಕಾರೇ ಮಹತಿ ಕೃತೇ ತತ್ರ ಮಹಾಹವೇ ॥೫೦॥

ನಮಗಾಗಲೀ, ಪಾಂಡವರಿಗಾಗಲೀ ಅಲ್ಲಿ ಯಾರೂ ಕಾಣಿಸಲಿಲ್ಲ. ಆ ಯುದ್ಧದಲ್ಲಿ ಆ ರೀತಿಯಲ್ಲಿ ಬಾಣಗಳಿಂದ ಕತ್ತಲೆ ನಿರ್ಮಿಸಲ್ಪಟ್ಟಿತು.

ಮದ್ರರಾಜೇನ ಬಲಿನಾ ಲಾಘವಾಚ್ಛರವೃಷ್ಟಿಭಿಃ ।
ಲೋಡ್ಯಮಾನಂ ತದಾ ದೃಷ್ಟ್ವಾ ಪಾಂಡವಾನಾಂ ಬಲಾರ್ಣವಮ್ ॥

ಬಲಶಾಲಿಯಾದ ಶಲ್ಯನು ಅನಾಯಾಸವಾಗಿ ಬಾಣಗಳ ಮಳೆಯನ್ನು ಸುರಿಸಿ ಪಾಂಡವರ ಸೈನ್ಯವನ್ನು ಅಲ್ಲೋಲ-ಕಲ್ಲೋಲ ಮಾಡಿದನು.

ವಿಸ್ಮಯಂ ಪರಮಂ ಜಗ್ಮುಃ ದೇವಗಂಧರ್ವದಾನವಾಃ ॥೫೨॥

ಇದನ್ನು ನೋಡಿದ ದೇವತೆಗಳು, ಗಂಧರ್ವರು, ದಾನವರು ಆಶ್ಚರ್ಯವನ್ನು ಹೊಂದಿದರು.

ಸ ತು ತಾನ್ ಸರ್ವತೋ ಯತ್ತಾತ್ ಶರೈಃ ಸಂಪೀಡ್ಯ ಮಾರಿಷ ।
ಧರ್ಮರಾಜಮವಚ್ಛಾದ್ಯ ಸಿಂಹವದ್ ವ್ಯನದನ್ ಮುಹುಃ ॥೫೩॥

ರಾಜನೇ! ಶಲ್ಯನಾದರೂ ಪ್ರಯತ್ನಪೂರ್ವಕವಾಗಿ ಅವರನ್ನು ಬಾಣಗಳಿಂದ ಹಿಂಸಿಸಿ, ಧರ್ಮರಾಜನನ್ನು ಆಚ್ಛಾದಿಸಿ ಪುನಃ ಸಿಂಹನಾದವನ್ನು ಮಾಡಿದನು.

ತೇ ಚ್ಛನ್ನಾಃ ಸಮರೇ ತೇನ ಪಾಂಡವಾನಾಂ ಮಹಾರಥಾಃ ।
ನ ಶೇಕುಸ್ತೇ ತದಾ ಯುದ್ಧೇ ಪ್ರತ್ಯುದ್ಯಾತುಂ ಮಹಾರಥಾಃ ॥೫೪॥

ಮಹಾರಥರಾದ ಪಾಂಡವರು ಯುದ್ಧದಲ್ಲಿ ಹೀಗೆ ಅವನಿಂದ ಮುಚ್ಚಲ್ಪಟ್ಟು ಮಹಾರಥಿಯಾದ ಶಲ್ಯನ ಕಡೆಗೆ ಹೋಗಲು ಸಮರ್ಥರಾಗಲಿಲ್ಲ.

ಧರ್ಮರಾಜಪುರೋಗಾಸ್ತು ಭೀಮಸೇನಮುಖಾ ರಥಾಃ ।
ನಿಜಘ್ನುಃ ಸಮರೇ ಶೂರಂ ಶಲ್ಯಮಾಹವಶೋಭಿನಮ್ ॥೫೫॥

ಧರ್ಮರಾಜನನ್ನು ಮುಂದಿರಿಸಿಕೊಂಡು ಭೀಮಸೇನ ಮೊದಲಾದವರು ಯುದ್ಧದಲ್ಲಿ ಶೋಭಿಸುತ್ತಿರುವ ಶಲ್ಯನನ್ನು ಬಿಟ್ಟೂಬಿಡದೆ ಅಲ್ಲಿಯೇ ಹೊಡೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾಲ್ಕನೆಯ ಅಧ್ಯಾಯ

ಅರ್ಜುನ ಮತ್ತು ಅಶ್ವತ್ಥಾಮರ ಯುದ್ಧ. ಪಾಂಚಾಲವೀರನಾದ ಸುರಥನ ವಧೆ.

ಸಂಜಯಃ

ಅರ್ಜುನೋ ದ್ರೌಣಿನಾ ವಿದ್ಧೋ ಯುದ್ಧೇ ಬಹುಭಿರಾಯಸೈಃ ।
ತಸ್ಯ ಚಾನುಚರೈಃ ಶೂರೈಃ ತ್ರಿಗರ್ತಾನಾಂ ಮಹಾರಥೈಃ ॥೧॥

ದ್ರೌಣಿಂ ವಿವ್ಯಾಧ ಸಮರೇ ತ್ರಿಭಿರೇವ ಶಿಲೀಮುಖೈಃ ।
ತಥೇತರಾನ್ ಮಹೇಷ್ವಾಸಾನ್ ದ್ವಾಭ್ಯಾಂ ದ್ವಾಭ್ಯಾಂ ಸಮಾಚ್ಛಿನತ್ ॥೨॥

ಭೂಯಶ್ಚೈತಾನ್ ಮಹಾಬಾಹುಃ ಶರವರ್ಷೈರವಾಕಿರತ್ ॥೩॥

ಸಂಜಯ– ಇನ್ನೊಂದು ಕಡೆಯಲ್ಲಿ ಯುದ್ಧದಲ್ಲಿ ಅಶ್ವತ್ಥಾಮನು ಮಹಾರಥರಾದ ತ್ರಿಗರ್ತದೇಶದ ಯೋಧರಿಂದ ಕೂಡಿಕೊಂಡು ಕಬ್ಬಿಣದ ಅನೇಕ ಶಸ್ತ್ರಗಳಿಂದ ಅರ್ಜುನನನ್ನು ಹೊಡೆದನು. ಆಗ ಅರ್ಜುನನು ಯುದ್ಧದಲ್ಲಿ ಕೇವಲ ಮೂರೇ ಬಾಣಗಳಿಂದ ಅಶ್ವತ್ಥಾಮನಿಗೆ ಹೊಡೆದನು. ಹಾಗೆಯೇ ಉಳಿದ ಬಿಲ್ಗಾರರನ್ನು ಎರಡೆರಡು ಬಾಣಗಳಿಂದಲೇ ಚೆನ್ನಾಗಿ ಹೊಡೆದನು. ಪುನಃ ಈ ಮಹಾವೀರರ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ಶರಕಂಟಕಿನಸ್ತೇ ತು ತಾವಕಾ ಭರತರ್ಷಭ ।
ನ ಜಹುಃ ಸಮರೇ ಪಾರ್ಥಂ ವಧ್ಯಮಾನಾಃ ಶಿಲೀಮುಖೈಃ ॥೪॥

ಭಾರತೋತ್ತಮನೇ! ನಿನ್ನವರನ್ನು ಬಾಣಗಳು ಚುಚ್ಚಿಕೊಂಡಿದ್ದರೂ, ಪುನಃ ಮೇಲಿಂದ ಬಾಣಗಳ ಪೆಟ್ಟು ಬೀಳುತ್ತಿದ್ದರೂ ಯುದ್ಧದಲ್ಲಿ ಅರ್ಜುನನ ಜೊತೆಗಿನ ಕಾದಾಟವನ್ನು ಬಿಡಲಿಲ್ಲ.

ಅರ್ಜುನಂ ರಥವಂಶೇನ ದ್ರೋಣಪುತ್ರಪುರೋಗಮಾಃ ।
ಪರಿವಾರ್ಯ ಮುದಾ ಯುಕ್ತಾ ಯೋಧಯಂತಶ್ಚಕಾಶಿರೇ ॥೫॥

ಅಶ್ವತ್ಥಾಮನ ನೇತೃತ್ವದಲ್ಲಿ ನಿನ್ನ ಕಡೆಯ ಯೋಧರು ಆನಂದದಿಂದ ಕೂಡಿದವರಾಗಿ ಯುದ್ಧಮಾಡುತ್ತಾ ರಥಸಮೂಹದಿಂದ ಅರ್ಜುನನನ್ನು ಸುತ್ತುವರಿದರು. ಇದು ನೋಡಲು ಸುಂದರವಾಗಿ ಕಾಣಿಸುತ್ತಿತ್ತು.

ತೈಸ್ತು ಕ್ಷಿಪ್ತಾಃ ಶರಾ ರಾಜನ್ ಕಾರ್ತಸ್ವರವಿಭೂಷಿತಾಃ ।
ಅರ್ಜುನಸ್ಯ ರಥೋಪಸ್ಥಂ ಪೂರಯಾಮಾಸುರಂಜಸಾ ॥೬॥

ರಾಜನೇ! ಅವರು ಪ್ರಯೋಗಿಸಿದ ಬಂಗಾರದಿಂದ ಅಲಂಕೃತವಾದ ಬಾಣಗಳಿಂದ ಅರ್ಜುನನ ರಥವು ಪೂರ್ಣವಾಗಿ ತುಂಬಿಹೋಯಿತು.

ತಥಾ ಕೃಷ್ಣೌ ಮಹೇಷ್ವಾಸೌ ವೃಷಭೌ ಸರ್ವಧನ್ವಿನಾಮ್ ।
ಏವ್ಯಧುಶ್ಚ ಶರೈಘೋರೈಃ ಪ್ರಹೃಷ್ಟಾ ಯುದ್ಧದುರ್ಮದಾಃ ॥೭॥

ಹಾಗೆಯೇ ಮಹಾಬಿಲ್ಲಾರರಾದ ಕೃಷ್ಣ-ಅರ್ಜುನರು ಭಯಂಕರವಾದ ಬಾಣಗಳಿಂದ ಶತ್ರುಗಳನ್ನು ಘಾಸಿಗೊಳಿಸಿದರು. ಅವರೀರ್ವರೂ ಎಲ್ಲಾ ಬಿಲ್ಲಾರರಲ್ಲಿಯೇ ಶೇಷ್ಠರಾಗಿದ್ದರು. ಯುದ್ಧದಲ್ಲಿ ಅವರನ್ನು ನಿಗ್ರಹಿಸಲು ಯಾರಿಗೂ ಸಾಧ್ಯವಿರಲಿಲ್ಲ. ಯುದ್ಧದಿಂದಾಗಿ ಬಹಳ ಸಂತುಷ್ಟರಾಗಿದ್ದರು.

ಕೂಬರಂ ರಥಚಕ್ರಾಣಿ ಈಷಾನ್ ಯೋಕ್ತ್ರಾಣಿ ಚಾಭಿ ಭೋಃ ।
ಯುಗಂ ಚೈವಾನುಕರ್ಷಂ ಚ ಶರಭೂತಮಭೂತ್ ತದಾ ॥೮॥

ಎಲೈ ರಾಜನೇ! ಅರ್ಜುನನ ರಥದ ಗಾಲಿಯಚ್ಚು, ಮುಖ್ಯದಂಡ, ಚಕ್ರಗಳು, ಲಗಾಮುಗಳು, ಕುದುರೆಗಳ ನೊಗ ಇವೆಲ್ಲವೂ ಬಾಣಗಳಿಂದ ತುಂಬಿಹೋಗಿದ್ದವು.

ನೈತಾದೃಶಂ ದೃಷ್ಟಪೂರ್ವಂ ರಾಜನ್ ನೈವ ಚ ಮೇ ಶ್ರುತಮ್ ।
ಯಾದೃಶಂ ತಸ್ಯ ಪಾರ್ಥಸ್ಯ ತಾವಕಾಃ ಸಂಪ್ರಚಕ್ರಿರೇ ॥೯॥

ರಾಜನೆ! ನಿನ್ನ ಪಕ್ಷದವರು ಅರ್ಜುನನ ಮೇಲೆ ಮಾಡಿದ ಆಕ್ರಮಣದ ರೀತಿಯನ್ನು ನಾನು ಹಿಂದೆ ಎಂದೂ ನೋಡಿಯೂ ಇಲ್ಲ, ಎಲ್ಲಿಯೂ ಕೇಳಿಯೂ ಇಲ್ಲ.

ಸ ರಥಃ ಸರ್ವತೋ ಭಾತಿ ರುಗ್ಮಪುಂಖೈಃ ಶಿಲಾಶಿತೈಃ ।
ಉಲ್ಕಾಶತೈಃ ಸಂಪ್ರದೀಪ್ತಂ ವಿಮಾನಮಿವ ಭೂತಳೇ ॥೧೦॥

ಆ ಅರ್ಜುನನ ರಥವು ಬಂಗಾರದ ರೆಕ್ಕೆಯ ಹರಿತವಾದ ಬಾಣಗಳಿಂದಾಗಿ ನೂರಾರು ಉಲ್ಕೆಗಳಿಂದ ಬೆಳಗುತ್ತಿರುವ ವಿಮಾನದ ಹಾಗೆ ಎಲ್ಲಾ ಕಡೆಗಳಿಂದಲೂ ಶೋಭಿಸುತ್ತಿತ್ತು.

ತತೋಽರ್ಜುನೋ ಮಹಾರಾಜ ಶರೈಃ ಸನ್ನತಪರ್ವಭಿಃ ।
ಅವಾಕಿರತ್ ತಾಂ ಪೃತನಾಂ ಮೇಘೋ ವೃಷ್ಟ್ಯಾ ಯಥಾಽಚಲಮ್ ॥

ಮಹಾರಾಜ! ಆನಂತರ ಅರ್ಜುನನು ಚೆನ್ನಾಗಿ ಬಗ್ಗಿದ ಸಂಧಿಗಳುಳ್ಳ ಬಾಣಗಳಿಂದ ಪರರ ಸೈನ್ಯದ ಮೇಲೆ ಮಳೆಗೆರೆದ. ಈ ದೃಶ್ಯ ಮೋಡವು ಪರ್ವತದ ಮೇಲೆ ಮಳೆಗರೆದಂತೆ ಕಾಣಿಸುತ್ತಿತ್ತು.

ತೇ ವಧ್ಯಮಾನಾಃ ಸಮರೇ ಪಾರ್ಥನಾಮಾಂಕಿತೈಃ ಶರೈಃ ।
ಪಾರ್ಥಭೂತಮಮನ್ಯಂತ ಪ್ರೇಕ್ಷಮಾಣಾಸ್ತಥಾವಿಧಮ್ ॥೧೨॥

ಅರ್ಜುನನ ಹೆಸರನ್ನು ಕೆತ್ತಿದ ಬಾಣಗಳು ಶತ್ರುಯೋಧರನ್ನು ಘಾಸಿಗೊಳಿಸುತ್ತಿದ್ದವು. ಇದನ್ನು ನೋಡಿದರೆ ಎಲ್ಲವೂ ಅರ್ಜುನಮಯವಾದಂತೆ ಕಾಣಿಸುತ್ತಿತ್ತು.

ತತೋಽದ್ಭುತಶರಜ್ವಾಲೋ ಧನುಃಶಬ್ದಾನಿಲೋ ಮಹಾನ್ ।
ಸೇನೇಂಧನಂ ದದಾಹಾಶು ತಾವಕಂ ಪಾರ್ಥಪಾವಕಃ ॥೧೩॥

ಆನಂತರ ಅರ್ಜುನನೆಂಬ ಬೆಂಕಿಯು ಸೇನೆ ಎಂಬ ಕಟ್ಟಿಗೆಯನ್ನು ಸುಟ್ಟುಹಾಕಿತು. ಅರ್ಜುನನ ಅದ್ಭುತವಾದ ಬಾಣಗಳೇ ಬೆಂಕಿಯ ಜ್ವಾಲೆಗಳು, ಧನುಸ್ಸಿನ ಠೇಂಕಾರವೇ ದೊಡ್ಡದಾದ ಗಾಳಿ. ಈ ಅರ್ಜುನನೆಂಬ ಬೆಂಕಿಯು ನಿನ್ನವರ ಸೈನ್ಯವನ್ನು ಸುಡುತ್ತಿತ್ತು.

ಚಕ್ರಾಣಾಂ ಪತತಾಂ ಚೈವ ಯುಗಾನಾಂ ಚ ಧರಾತಲೇ ।
ತೂಣೀರಾಣಾಂ ಪತಾಕಾನಾಂ ಧ್ವಜಾನಾಂ ಚ ರಥೈಃ ಸಹ ॥೧೪॥

ಈಷಾಣಾಮನುಕರ್ಷಾಣಾಂ ವಿವೇಣೂನಾಂ ಚ ಭಾರತ ।
ಅಕ್ಷಾಣಾಮಥ ಯೋಕ್ತ್ರಾಣಾಂ ಪ್ರತೋದಾನಾಂ ಚ ರಾಶಯಃ ॥೧೫॥

ಶಿರಸಾಂ ಪತತಾಂ ಚೈವ ಕುಂಡಲೋಷ್ಣೀಷಧಾರಿಣಾಮ್ ।
ಭುಜಾನಾಂ ಚ ಮಹಾರಾಜ ಸುಸ್ಕಂಧಾನಾಂ ಸಮಂತತಃ ॥೧೬॥

ಛತ್ರಾಣಾಂ ವ್ಯಜನೈಃ ಸಾರ್ಧಂ ಮಕುಟಾನಾಂ ಚ ರಾಶಯಃ ।
ಸಮದೃಶ್ಯಂತ ಪಾರ್ಥಸ್ಯ ರಥಮಾರ್ಗೇಷು ಸರ್ವಶಃ ॥೧೭॥

ಭರತಕುಲೋದ್ಭವನೇ! ಮಹಾರಾಜ! ಅರ್ಜುನನ ರಥದ ಮಾರ್ಗದಲ್ಲಿ ನೆಲದಲ್ಲಿ ರಥದ ಚಕ್ರಗಳು ಮುರಿದು ರಾಶಿಬಿದ್ದಿದ್ದವು. ರಥದ ನೊಗಗಳು, ಯೋಧರ ಬತ್ತಳಿಕೆಗಳು, ಪತಾಕೆಗಳು, ಧ್ವಜಗಳು, ರಥಗಳು, ರಥದ ಮುಖ್ಯ ಸ್ತಂಭ, ಉಪಸ್ತಂಭಗಳು, ರಥದ ಮುಂಭಾಗಗಳು, ಲಗಾಮುಗಳು, ಚಾವಟಿಗಳು ರಾಶಿಯಾಗಿ ಬಿದ್ದಿದ್ದವು. ಕುಂಡಲ ಮತ್ತು ಶಿರೋऽಲಂಕಾರಸಹಿತವಾದ ತಲೆಗಳು, ಭುಜಗಳು, ಸ್ಕಂಧಗಳು ಎಲ್ಲೆಲ್ಲೂ ಬಿದ್ದಿದ್ದವು. ದಾರಿಯಲ್ಲಿ ಛತ್ರಗಳು, ಧ್ವಜಗಳು, ಕಿರೀಟಗಳು ರಾಶಿಯಾಗಿ ಬಿದ್ದಿದ್ದು ಕಾಣಿಸಿತು.

ತತಃ ಕ್ರುದ್ಧಸ್ಯ ಪಾರ್ಥಸ್ಯ ರಥಮಾರ್ಗೇ ವಿಶಾಂಪತೇ ।
ಅಗಮ್ಯರೂಪಾ ಪೃಥಿವೀ ಮಾಂಸಶೋಣಿತಕರ್ದಮಾ ॥೧೮॥

ಬಭೂವ ಭರತಶ್ರೇಷ್ಠ ರುದ್ರಸ್ಯಾಕ್ರೀಡನಂ ಯಥಾ ॥೧೯॥

ಮಹಾರಾಜ! ಕುಪಿತನಾದ ಅರ್ಜುನನ ಮಾರ್ಗದಲ್ಲಿ ರಕ್ತ-ಮಾಂಸಗಳು ತುಂಬಿದ್ದರಿಂದ ಸಂಚರಿಸಲು ಅಸಾಧ್ಯವಾಗಿತ್ತು. ಭಾರತೋತ್ತಮನೇ! ಆ ಭೂಭಾಗವು ರುದ್ರನ ಕ್ರೀಡಾಸ್ಥಾನದ ಹಾಗೆ ಆಗಿತ್ತು.

ಭೀರೂಣಾಂ ತ್ರಾಸಜನನೀ ಶೂರಾಣಾಂ ಹರ್ಷವರ್ಧನೀ ॥೨೦॥

ಆ ಪ್ರದೇಶವು ಭಯಗ್ರಸ್ಥರಿಗೆ ಬಹಳ ದುಃಖದಾಯಕವೂ, ಶೂರರಿಗೆ ಆನಂದದಾಯಕವೂ ಆಗಿತ್ತು.

ಹತ್ವಾ ತು ಸಮರೇ ಪಾರ್ಥಃ ಸಹಸ್ರೇ ದ್ವೇ ಪರಂತಪಃ ।
ರಥಾನಾಂ ಸವರೂಥಾನಾಂ ವಿಧೂಮೋಽಗ್ನಿರಿವ ಜ್ವಲನ್ ॥೨೧॥

ಶತ್ರುತಾಪಕನಾದ ಅರ್ಜುನನು ಯುದ್ಧದಲ್ಲಿ ಎರಡುಸಾವಿರ ಲೋಹಾವರಣಸಹಿತವಾದ ರಥಗಳನ್ನು ಧೂಮರಹಿತವಾದ ಬೆಂಕಿಯಂತೆ ಸುಟ್ಟುಹಾಕಿದನು.

ಯಥಾ ಹಿ ಭಗವಾನ್ ವಹ್ನಿಃ ಜಗದ್ದಗ್ಧ್ವಾ ಚರಾಚರಮ್ ।
ವಿಧೂಮೋ ದೃಶ್ಯತೇ ರಾಜನ್ ಬಲಮಾನಸ್ತಥಾಽರ್ಜುನಃ ॥೨೨॥

ಷಡ್ಗುಣೈಶ್ವರ್ಯಸಂಪನ್ನನಾದ ವಹ್ನಿಯು ಚರಾಚರ ಜಗತ್ತನ್ನೇ ತಿಂದು ಧೂಮರಹಿತವಾಗಿ ಕಾಣಿಸುವಂತೆ, ರಾಜನೇ! ಅರ್ಜುನನು ಕಾಣಿಸಿದನು.

ದ್ರೌಣಿಸ್ತು ಸಮರೇ ದೃಷ್ಟ್ವಾ ಪಾಂಡವಸ್ಯ ಪರಾಕ್ರಮಮ್ ।
ರಥೇನಾತಿಪತಾಕೇನ ಪಾಂಡವಂ ಪರ್ಯವಾರಯತ್ ॥೨೩॥

ತಾವುಭೌ ಪುರುಷವ್ಯಾಘ್ರೌ ಶ್ವೇತಾಶ್ವೌ ಧನ್ವಿನಾಂ ವರೌ ।
ಸಮೀಯತುಸ್ತದಾ ತೂರ್ಣಂ ಪರಸ್ಪರವಧೈಷಿಣೌ ॥೨೪॥

ಯುದ್ಧದಲ್ಲಿ ಅರ್ಜುನನ ಪರಾಕ್ರಮವನ್ನು ನೋಡಿದ ಅಶ್ವತ್ಥಾಮನು ದೊಡ್ಡಪತಾಕೆಯುಳ್ಳ ರಥವನ್ನೇರಿ ಅರ್ಜುನನನ್ನು ಸುತ್ತುವರಿದನು. ಆ ಇಬ್ಬರೂ ಪುರುಷೋತ್ತಮರು ಬೆಳ್ಳಗಿನ ಅಶ್ವಗಳನ್ನು ಹೊಂದಿದ್ದರು. ಧನುರ್ಧಾರಿಗಳಲ್ಲಿಯೇ ಶ್ರೇಷ್ಠರಾಗಿದ್ದರು. ಒಬ್ಬರನ್ನೊಬ್ಬರು ಸಂಹರಿಸುವ ಇಚ್ಛೆಯಿಂದ ಬೇಗನೆ ಸಮೀಪಕ್ಕೆ ಬಂದರು.

ತಯೋರಾಸೀನ್ಮಹಾರಾಜ ಬಾಣವರ್ಷಂ ಸುದಾರುಣಮ್ ।
ಜೀಮೂತಯೋರ್ಯಥಾ ವೃಷ್ಟಿಃ ತಪಾಂತೇ ಭರತರ್ಷಭ ॥೨೫॥

ಅನ್ಯೋನ್ಯಸ್ಪರ್ಧಿನೌ ತೌ ತು ಶರೈಃ ಸನ್ನತಪರ್ವಭಿಃ ।
ತತಕ್ಷತುರ್ಮೃಧೇಽನ್ಯೋನ್ಯಂ ಶೃಂಗಾಭ್ಯಾಂ ವೃಷಭಾವಿವ ।
ತಯೋರ್ಯುದ್ಧಂ ಮಹಾರಾಜ ಚಿರಂ ಸಮಮಿವಾಭವತ್ ॥೨೬॥

ಮಹಾರಾಜ! ಅವರಿಬ್ಬರೂ ಘೋರವಾದ ಬಾಣಗಳ ಸುರಿಮಳೆಯನ್ನು ಸುರಿಸುತ್ತಿದ್ದರು. ಭಾರತೋತ್ತಮನೇ! ಬೇಸಿಗೆಯ ಕೊನೆಯ ಭಾಗದಲ್ಲಿ ಮೋಡಗಳಿಂದ ಸುರಿಯುವ ಮಳೆಯಂತೆ ಇತ್ತು. ಪರಸ್ಪರ ಸ್ಪರ್ಧಿಗಳಾಗಿದ್ದ ಅವರೀರ್ವರೂ ಚೆನ್ನಾಗಿ ಬಾಗಿದ ಗಂಟುಗಳುಳ್ಳ ಬಾಣಗಳಿಂದ ಗಾಯಗೊಳಿಸಿದರು. ಕೊಂಬುಗಳಿಂದ ಗೂಳಿಗಳೆರಡು ಹೊಡೆದಾಡಿದಂತೆ ಕಾಣಿಸುತ್ತಿತ್ತು. ಮಹಾರಾಜ! ಅವರ ಯುದ್ಧವು ಬಹಳ ಸಮಯದ ತನಕ ಸಮಾನವಾಗಿತ್ತು.

ಅಸ್ತ್ರಾಣಾಂ ಸಂಗಮಶ್ಚೈವ ಘೋರಸ್ತತ್ರಾಭವತ್ ಪುನಃ ॥೨೭॥

ತತೋಽರ್ಜುನಂ ದ್ವಾದಶಭೀ ರುಗ್ಮಪುಂಖೈಃ ಸುತೇಜನೈಃ ।
ವಾಸುದೇವಂ ಚ ದಶಭಿಃ ದ್ರೌಣಿರ್ವಿವ್ಯಾಧ ಭಾರತ ॥೨೮॥

ಪುನಃ ಘೋರವಾದ ಅಸ್ತ್ರಗಳ ಸಂಗಮವು ಉಂಟಾಯಿತು. ಭರತಕುಲೋದ್ಭವನೇ! ಅನಂತರ ಅಶ್ವತ್ಥಾಮನು ಬಂಗಾರದ ರೆಕ್ಕೆಗಳುಳ್ಳ, ತೇಜಸ್ಸಿನಿಂದ ಕೂಡಿದ ಹನ್ನೆರಡು ಬಾಣಗಳಿಂದ ಅರ್ಜುನನನ್ನೂ, ಹತ್ತು ಬಾಣಗಳಿಂದ ಶ್ರೀಕೃಷ್ಣನನ್ನೂ ಹೊಡೆದನು.

ತತಃ ಪ್ರಹಸ್ಯ ಬೀಭತ್ಸುರ್ವಿಕ್ಷಿಪನ್ ಗಾಂಡಿವಂ ಧನುಃ ।
ಮಾನಯಿತ್ವಾ ಮುಹೂರ್ತಂ ತು ಗುರುಪುತ್ರಂ ಮಹಾರಥಮ್ ॥೨೯॥

ವ್ಯಶ್ವಸೂತರಥಂ ಚಕ್ರೇ ಸವ್ಯಸಾಚೀ ಪರಂತಪಃ ।
ಮೃದುಪೂರ್ವಂ ತತಶ್ಚೈನಂ ತ್ರಿಭಿರ್ವಿವ್ಯಾಧ ಸಾಯಕೈಃ ॥೩೦॥

ಅನಂತರ ಚೆನ್ನಾಗಿ ನಕ್ಕು, ಗಾಂಡೀವವನ್ನು ಠೇಂಕರಿಸುತ್ತಾ, ಮಹಾರಥನಾದ ಗುರುಪುತ್ರ ಅಶ್ವತ್ಥಾಮನನ್ನು ಗೌರವಿಸುತ್ತಾ ಸ್ವಲ್ಪ ಕಾಲ ಕಳೆದನು. ತದನಂತರ ಶತ್ರುನಾಶಕನಾದ ಸವ್ಯಸಾಚಿ ಅರ್ಜುನನು ಅಶ್ವತ್ಥಾಮನ ಅಶ್ವಗಳನ್ನೂ ಸಾರಥಿಯನ್ನೂ ನಾಶಮಾಡಿದನು. ಅನಂತರ ನಿಧಾನವಾಗಿ ಮೂರು ಬಾಣಗಳಿಂದ ಈ ಅಶ್ವತ್ಥಾಮನನ್ನು ಹೊಡೆದನು.

ಹತಾಶ್ವೇ ತು ರಥೇ ತಿಷ್ಠನ್ ದ್ರೋಣಪುತ್ರೋಽಪ್ಯವಿಸ್ಮಯನ್ ।
ಮುಸಲಂ ಪಾಂಡುಪುತ್ರಾಯ ಚಿಕ್ಷೇಪ ಪರಿಘೋಪಮಮ್ ॥೩೧॥

ಕುದುರೆಗಳು ಸತ್ತಾಗ ಅಶ್ವತ್ಥಾಮನು ರಥದಲ್ಲೇ ನಿಂತುಕೊಂಡು ಗಾಬರಿಗೊಳ್ಳದೆ ಪರಿಘಾಯುಧಕ್ಕೆ ಸಮಾನವಾದ ಮುಸಲಾಯುಧವನ್ನು (ಒನಕೆ) ಅರ್ಜುನನ ಮೇಲೆ ಬಿಸಾಡಿದನು.

ತಮಾಪತಂತಂ ಸಹಸಾ ಹೇಮಪಟ್ಟವಿಭೂಷಿತಮ್ ।
ಚಿಚ್ಛೇದ ಸಪ್ತಧಾ ವೀರಃ ಪಾರ್ಥಃ ಶತ್ರುನಿಬರ್ಹಣಃ ॥೩೨॥

ಬಂಗಾರದ ಪಟ್ಟಿಗಳಿಂದ ಅಲಂಕೃತವಾದ ಮುಸಲವು ಬೀಳುತ್ತಿರಲು, ಶತ್ರುನಾಶಕನಾದ ವೀರ ಅರ್ಜುನನು ಅದನ್ನು ಏಳು ತುಂಡುಗಳನ್ನಾಗಿ ಮಾಡಿದನು.

ಸಂಛಿನ್ನಂ ಮುಸಲಂ ದೃಷ್ಟ್ವಾ ದ್ರೌಣಿಃ ಪರಮಕೋಪನಃ ।
ಆದದೇ ಪರಿಘಂ ಘೋರಂ ನಗೇಂದ್ರಶಿಖರೋಪಮಮ್ ॥೩೩॥

ಬಹಳ ಕೋಪಿಷ್ಠನಾದ ಅಶ್ವತ್ಥಾಮನು ಮುಸಲವು ತುಂಡಾಗಿದ್ದನ್ನು ನೋಡಿ ಘೋರವಾದ, ಶ್ರೇಷ್ಠಪರ್ವತದ ಶಿಖರದಂತಿರುವ ಪರಿಘಾಯುಧವನ್ನು ತೆಗೆದುಕೊಂಡನು.

ಚಿಕ್ಷೇಪ ಚೈವ ಪಾರ್ಥಾಯ ದ್ರೌಣಿರ್ಯುದ್ಧವಿಶಾರದಃ ॥೩೪॥

ಯುದ್ಧನಿಪುಣನಾದ ಅಶ್ವತ್ಥಾಮನು ಅದನ್ನು ಅರ್ಜುನನ ಮೇಲೆ ಪ್ರಯೋಗಿಸಿ ಬಿಸಾಡಿದನು.

ತಮಂತಕಮಿವ ಕ್ರುದ್ಧಂ ಪರಿಘಂ ಪ್ರೇಕ್ಷ್ಯ ಪಾಂಡವಃ ।
ಅರ್ಜುನಸ್ತ್ವರಿತೋ ಜಘ್ನೇ ಪಂಚಭಿಃ ಸಾಯಕೋತ್ತಮೈಃ ॥೩೫॥

ಪಾಂಡುಪುತ್ರ ಅರ್ಜುನನು ಕೋಪಗೊಂಡ ಯಮನಂತೆ ಮೇಲೆ ಬೀಳುತ್ತಿದ್ದ ಪರಿಘಾಯುಧವನ್ನು ನೋಡಿ ಕೂಡಲೇ ಐದು ಉತ್ತಮ ಬಾಣಗಳಿಂದ ಹೊಡೆದನು.

ಸ ಛಿನ್ನಃ ಪತಿತೋ ಭೂಮೌ ಪಾರ್ಥಬಾಣೈರ್ಮಹಾಹವೇ ।
ದಾರಯನ್ ಪೃಥಿವೀಂದ್ರಾಣಾಂ ಮನಃ ಶಬ್ದೇನ ಭಾರತ ॥೩೬॥

ಭರತಕುಲೋದ್ಭವನೇ! ಯುದ್ಧದಲ್ಲಿ ಅರ್ಜುನನ ಬಾಣಗಳಿಂದಾಗಿ ಪರಿಘಾಯುಧವು ತುಂಡಾಗಿ ಭೂಮಿಯಲ್ಲಿ ಬಿದ್ದಿತು. ಅದರ ಶಬ್ದದಿಂದ ರಾಜರೆಲ್ಲರ ಮನಸ್ಸು ಒಡೆದು ಹೋಯಿತು.

ತತೋಽಪರೈಸ್ತ್ರಿಭಿರ್ಭಲ್ಲೈಃ ದ್ರೌಣಂ ವಿವ್ಯಾಧ ಪಾಂಡವಃ ॥೩೭॥

ಅರ್ಜುನನನ್ನು ತದನಂತರ ಬೇರೆ ಮೂರು ಭಲ್ಲೆಗಳನ್ನು ತೆಗೆದುಕೊಂಡು ಅಶ್ವತ್ಥಾಮನಿಗೆ ಹೊಡೆದನು.

ಸೋಽತಿವಿದ್ಧೋ ಬಲವತಾ ಪಾರ್ಥೇನ ಸುಮಹಾಬಲಃ ।
ನ ಮುಮೋಹ ತದಾ ದ್ರೌಣಿಃ ಪೌರುಷೇ ಸ್ವೇ ವ್ಯವಸ್ಥಿತಃ ॥೩೮॥

ಬಹಳ ಬಲಶಾಲಿಯಾದ ಅಶ್ವತ್ಥಾಮನು ಬಲಶಾಲಿಯಾದ ಅರ್ಜುನನಿಂದ ಪೆಟ್ಟು ತಿಂದರೂ ಮೂರ್ಛೆ ಹೋಗಲಿಲ್ಲ. ಆ ದ್ರೋಣಪುತ್ರನು ತನ್ನ ಪುರುಷಬಲದಿಂದ ಹಾಗೆಯೇ ನಿಂತುಕೊಂಡನು.

ಸುರಥಂ ತು ಮಹಾರಾಜ ಭಾರದ್ವಾಜೋ ಮಹಾರಥಃ ।
ಅವಾಕಿರತ್ ಶರವ್ರಾತೈಃ ಸರ್ವಕ್ಷತ್ರಸ್ಯ ಪಶ್ಯತಃ ॥೩೯॥

ಮಹಾರಾಜ! ಮಹಾರಥನಾದ ಅಶ್ವತ್ಥಾಮನು ಎಲ್ಲರೂ ನೋಡುತ್ತಿದ್ದಂತೆಯೇ ಮಹಾರಥನಾದ ಸುರಥನನ್ನು ಬಾಣಸಮೂಹದಿಂದ ಆಚ್ಛಾದಿತನನ್ನಾಗಿ ಮಾಡಿದನು.

ತತಸ್ತು ಸುರಥೋಽಪ್ಯಾಜೌ ಪಾಂಚಾಲಾನಾಂ ಮಹಾರಥಃ ।
ರಥೇನ ಮೇಘಘೋಷೇಣ ದ್ರೌಣಿಮೇವಾಭ್ಯಧಾವತ ॥೪೦॥

ಪಾಂಚಾಲದೇಶದ ರಾಜನಾದ ಮಹಾರಥ ಸುರಥನು ಯುದ್ಧದಲ್ಲಿ ಮೇಘದಂತೆ ಶಬ್ದವನ್ನು ಮಾಡುವ ರಥದ ಮೇಲೆ ಕುಳಿತವನಾಗಿ ಅಶ್ವತ್ಥಾಮನನ್ನೇ ಎದುರಿಸಿದನು.

ವಿಚಕರ್ಷ ಧನುಃಶ್ರೇಷ್ಠಂ ಸರ್ವಭಾರಸಹಂ ದೃಢಮ್ ।
ಜ್ವಲದಾಶೀವಿಷಸಮೈಃ ಶರೈರಾಚ್ಛಾದಯನ್ ಶಿತೈಃ ॥೪೧॥

ಸಕಲ ಭಾರವನ್ನೂ ಹೊರುವ ಸಾಮರ್ಥ್ಯವುಳ್ಳ ದೃಢವಾದ ಶ್ರೇಷ್ಠ ಬಿಲ್ಲನ್ನು ತೆಗೆದುಕೊಂಡು ಹೆದೆಯೇರಿಸಿದನು. ಸುಡುತ್ತಿರುವ ಸರ್ಪಗಳ ಹಾಗೆ ಇರುವ ಹರಿತವಾದ ಬಾಣಗಳಿಂದ ಶತ್ರುಗಳನ್ನು ಆಚ್ಛಾದಿಸಿದನು.

ಸುರಥಂ ತು ತದಾ ಕ್ರುದ್ಧಮಾಪತಂತಂ ಮಹಾರಥಮ್ ।
ಚುಕೋಪ ಸಮರೇ ದ್ರೌಣಿರ್ದಂಡಾಹತ ಇವೋರಗಃ ॥೪೨॥

ಆಗ ಅಶ್ವತ್ಥಾಮನು ಕ್ರೋಧದಿಂದ ತನ್ನೆಡೆ ಬರುತ್ತಿರುವ ಸುರಥನನ್ನು ನೋಡಿ, ದಂಡದಿಂದ ಹೊಡೆಸಿಕೊಂಡ ಸರ್ಪದ ಹಾಗೆ ಯುದ್ಧದಲ್ಲಿ ಬಹಳ ಕೋಪಗೊಂಡನು.

ತ್ರಿಶಿಖಾಂ ಭ್ರುಕುಟೀಂ ಕೃತ್ವಾ ಸೃಕ್ವಿಣೇ ಪರಿಲೇಲಿಹನ್ ।
ಉದ್ವೀಕ್ಷ್ಯ ಸುರಥಂ ರೋಷಾದ್ ಧನುರ್ಜ್ಯಾಮವಮೃಜ್ಯ ಚ ॥೪೩॥

ಮುಮೋಚ ತೀಕ್ಷ್ಣಂ ನಾರಾಚಂ ಯಮದಂಡಸಮಪ್ರಭಮ್ ॥೪೪॥

ಹುಬ್ಬನ್ನು ಗಂಟಿಕ್ಕುತ್ತಾ, ತುಟಿಗಳನ್ನು ನಾಲಿಗೆಯಿಂದ ಸವರುತ್ತಾ, ಕೋಪದಿಂದ ಸುರಥನನ್ನು ದಿಟ್ಟಿಸಿನೋಡುತ್ತಾ, ಧನುಸ್ಸಿನ ಹಗ್ಗವನ್ನು ಒರೆಸುತ್ತಾ ಹರಿತವಾದ ಯಮನ ದಂಡಕ್ಕೆ ಸದೃಶವಾದ ಬಾಣವನ್ನು ಬಿಟ್ಟನು.

ಸ ತಸ್ಯ ಹೃದಯಂ ಭಿತ್ತ್ವಾ ಪ್ರವಿವೇಶಾತಿವೇಗಿತಃ ।
ಶಕ್ರಾಶನಿರಿವೋತ್ಸೃಷ್ಟೋ ವಿದಾರ್ಯ ಧರಣೀತಳಮ್ ॥೪೫॥

ಆ ಬಾಣವು ಸುರಥನ ಹೃದಯವನ್ನು ಭೇದಿಸಿತು. ಇಂದ್ರನ ವಜ್ರಾಯುಧವು ಭೂಮಿಯನ್ನು ಸೀಳುವಂತೆ ಇತ್ತು.

ತತಃ ಸ ಪತಿತೋ ಭೂಮೌ ನಾರಾಚೇನ ಸಮಾಹತಃ ।
ವಜ್ರೇಣೇವ ಮಹಾಶೃಂಗಂ ಪರ್ವತಸ್ಯ ಮಹಾವನೇ ॥೪೬॥

ದೊಡ್ಡಕಾಡಿನಲ್ಲಿ ವಜ್ರಾಯುಧದ ದೊಡ್ಡದಾದ ಶಿಖರವು ಬೀಳುವಂತೆ ಸುರಥನೂ ಬಾಣದಿಂದ ಬಹಳವಾಗಿ ಹೊಡೆತ ತಿಂದು ಭೂಮಿಯಲ್ಲಿ ಬಿದ್ದನು.

ತಸ್ಮಿಂಸ್ತು ನಿಹತೇ ಶೂರೇ ದ್ರೋಣಪುತ್ರಃ ಪ್ರತಾಪವಾನ್ ।
ಆರುರೋಹ ರಥಂ ತೂರ್ಣಂ ತಮೇವ ರಥಿನಾಂ ವರಃ ॥೪೭॥

ಶೂರನಾದ ಸುರಥನು ಸತ್ತುಹೋಗಲು ಮಹಾಪ್ರತಾಪಿಯಾದ ಅಶ್ವತ್ಥಾಮನು ಅದೇ ರಥವನ್ನು ಬೇಗನೇ ಹತ್ತಿದನು.

ತತಃ ಸದ್ಯೋ ಮಹಾರಾಜ ದ್ರೌಣಿರಾಹವದುರ್ಮದಃ ।
ಅರ್ಜುನಂ ಯೋಧಯಾಮಾಸ ಸಂಶಪ್ತಕವೃತೋ ರಣೇ ॥೪೮॥

ಮಹಾರಾಜ! ಅನಂತರ ಕೂಡಲೇ ಯುದ್ಧದಲ್ಲಿ ನಿಗ್ರಹಿಸಲು ಅಸಾಧ್ಯನಾದ ಅಶ್ವತ್ಥಾಮನು ಸಂಶಪ್ತಕರಿಂದ ಸುತ್ತುವರಿಯಲ್ಪಟ್ಟವನಾಗಿ ಅರ್ಜುನನ ಜೊತೆಗೆ ಯುದ್ಧ ಮಾಡಿದನು.

ತತ್ರ ಯುದ್ಧಂ ಮಹಚ್ಚಾಸೀದ್ ಅರ್ಜುನಸ್ಯ ಪರೈಃ ಸಹ ।
ಮಧ್ಯಂದಿನಗತೇ ಸೂರ್ಯೇ ಯಮರಾಷ್ಟ್ರವಿವರ್ಧನಮ್ ॥೪೯॥

ಅಲ್ಲಿ ಸೂರ್ಯನು ಮಧ್ಯಂದಿನಕ್ಕೆ ಪ್ರವೇಶಿಸುತ್ತಿದ್ದಾಗ, ಅರ್ಜುನನಿಗೂ ಅವನ ಶತ್ರುಗಳಿಗೂ, ಯಮನ ರಾಜ್ಯದಲ್ಲಿ ಜೀವರ ಸಂಖ್ಯೆಯನ್ನು ಅಭಿವೃದ್ಧಿ ಪಡಿಸುವ ದೊಡ್ಡದಾದ ಯುದ್ಧವು ನಡೆಯಿತು.

ತತ್ರಾಶ್ಚರ್ಯಮಪಶ್ಯಾಮ ದೃಷ್ಟ್ವಾ ತೇಷಾಂ ಪರಾಕ್ರಮಮ್ ।
ಯದೇಕೋ ಯುಗಪದ್ವೀರಾನ್ ಸಮಯೋಧಯದರ್ಜುನಃ ॥೫೦॥

ಅಲ್ಲಿ ಅರ್ಜುನನು ಒಂದೇ ಬಾರಿಗೆ ಅನೇಕ ವೀರರೊಡನೆ ಒಬ್ಬಂಟಿಯಾಗಿ ಕಾದಾಡಿದನು. ಅವನ ಪರಾಕ್ರಮವನ್ನು ನೋಡಿ ಬಹಳವಾದ ದೊಡ್ಡ ಅದ್ಭುತವನ್ನು ನೋಡಿದೆವು.

ವಿಮರ್ದಶ್ಚ ಮಹಾನಾಸೀದ್ ಏಕಸ್ಯ ಬಹುಭಿಃ ಸಹ ।
ಶತಕ್ರತೋರ್ಯಥಾ ಪೂರ್ವಂ ಮಹತ್ಯಾ ದೈತ್ಯಸೇನಯಾ ॥೫೧॥

ಹಿಂದೆ ಇಂದ್ರನು ದೊಡ್ಡದಾದ ದೈತ್ಯರ ಸೇನೆಯ ಜೊತೆಗೆ ಹೋರಾಡಿದಂತೆ ಅರ್ಜುನನಿಗೆ ಅನೇಕ ಶತ್ರುಗಳೊಂದಿಗೆ ದೊಡ್ಡದಾದ ಕಾದಾಟವು ನಡೆಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೈದನೆಯ ಅಧ್ಯಾಯ

ಸಂಕುಲಯುದ್ಧ

ಸಂಜಯಃ

ದುರ್ಯೋಧನೋ ಮಹಾರಾಜ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಚಕ್ರತುಃ ಸುಮಹದ್ಯುದ್ಧಂ ಶರಶಕ್ತಿಸಮಾಕುಲಮ್ ॥೧॥

ಸಂಜಯ– ಮಹಾರಾಜ! ದುರ್ಯೋಧನ ಮತ್ತು ದ್ರುಪದನ ಮಗ ಧೃಷ್ಟದ್ಯುಮ್ನ ಇವರೀರ್ವರು ಬಹಳ ವಿಶಿಷ್ಟವಾದ ಯುದ್ಧವನ್ನು ಮಾಡಿದರು. ಆ ಯುದ್ಧದಲ್ಲಿ ಬಾಣಗಳ ಪ್ರಯೋಗವು ಇತ್ತು.

ತಯೋ ರಾಜನ್ ಸಮಾಪೇತುಃ ಶರಧಾರಾಃ ಸಹಸ್ರಶಃ ।
ಅಂಬುದಾನಾಂ ಯಥಾ ಕಾಲೇ ಜಲಧಾರಾಃ ಸಮಂತತಃ ॥೨॥

ರಾಜನೇ! ಮಳೆಗಾಲದಲ್ಲಿ ಮೋಡಗಳಿಂದ ಜಲಧಾರೆಗಳು ಎಲ್ಲಾ ಕಡೆಯೂ ಬೀಳುವಂತೆ ಇವರೀರ್ವರ ಮೇಲೆಯೂ ಸಾವಿರಾರು ಬಾಣಗಳ ಧಾರೆಗಳು ಬಿದ್ದವು.

ರಾಜಾ ತು ಪಾರ್ಷತಂ ವಿದ್ಧ್ವಾ ಶರೈಃ ಸನ್ನತಪರ್ವಭಿಃ ।
ದ್ರೋಣಹಂತಾರಮುಗ್ರೈಸ್ತು ಪುನರ್ವಿವ್ಯಾಧ ಸಪ್ತಭಿಃ ॥೩॥

ದುರ್ಯೋಧನನು ಚೆನ್ನಾಗಿ ಬಾಗಿದ ಸಂಧಿಗಳುಳ್ಳ ಬಾಣಗಳಿಂದ ಧೃಷ್ಟದ್ಯುಮ್ನನಿಗೆ ಹೊಡೆದನು. ಪುನಃ ದ್ರೋಣನನ್ನು ಕೊಂದದ್ದನ್ನು ಸ್ಮರಿಸಿಕೊಂಡು ಏಳು ಬಾಣಗಳಿಂದ ಹೊಡೆದನು.

ಧೃಷ್ಟದ್ಯುಮ್ನಶ್ಚ ಸಮರೇ ಬಲವಾನ್ ದೃಢವಿಕ್ರಮಃ ।
ಸಪ್ತತ್ಯಾ ವಿಶಿಖಾನಾಂ ವೈ ದುರ್ಯೋಧನಮಪೀಡಯತ್ ॥೪॥

ಆ ಯುದ್ಧದಲ್ಲಿ ದೃಢವಾದ ಪರಾಕ್ರಮವುಳ್ಳ ಧೃಷ್ಟದ್ಯುಮ್ನನು ಹರಿತವಾದ ಎಪ್ಪತ್ತು ಬಾಣಗಳಿಂದ ದುರ್ಯೋಧನನನ್ನು ಘಾಸಿಗೊಳಿಸಿದನು.

ಪೀಡಿತಂ ಪ್ರೇಕ್ಷ್ಯ ರಾಜಾನಂ ಸೋದರ್ಯಾ ಭರತರ್ಷಭ ।
ಮಹತ್ಯಾ ಸೇನಯಾ ಸಾರ್ಧಂ ಪರಿವವ್ರುಶ್ಚ ಪಾರ್ಷತಮ್ ॥೫॥

ಭಾರತೋತ್ತಮನೇ! ರಾಜನು ಪೆಟ್ಟುತಿಂದಿದ್ದನ್ನು ನೋಡಿದ ಅವನ ಸಹೋದರರು ದೊಡ್ಡದಾದ ಸೈನ್ಯದೊಂದಿಗೆ ಧೃಷ್ಟದ್ಯುಮ್ನನನ್ನು ಸುತ್ತುವರಿದರು.

ಸ ತೈಃ ಪರಿವೃತಃ ಶೂರೈಃ ಸರ್ವತೋಽತಿರಥೈರ್ಭೃಶಮ್ ।
ವ್ಯಚರತ್ ಸಮರೇ ರಾಜನ್ ದರ್ಶಯನ್ ಹಸ್ತಲಾಘವಮ್ ॥೬॥

ರಾಜನೇ! ಅತಿರಥ-ಶೂರರಿಂದ ಎಲ್ಲೆಡೆಯಿಂದ ಚೆನ್ನಾಗಿ ಸುತ್ತುವರಿಯಲ್ಪಟ್ಟ ಧೃಷ್ಟದ್ಯುಮ್ನನು ಯುದ್ಧದಲ್ಲಿ, ಅಸ್ತ್ರಪ್ರಯೋಗದಲ್ಲಿ ತನ್ನ ಕೈಚಳಕವನ್ನು ತೋರಿಸುತ್ತಾ ಸಂಚರಿಸಿದನು.

ಶಿಖಂಡೀ ಕೃತವರ್ಮಾಣಂ ಗೌತಮಂ ಚ ಮಹಾರಥಮ್ ।
ಪ್ರಭದ್ರಕೈಃ ಸಮಾಯುಕ್ತೋ ಯೋಧಯಾಮಾಸ ಧನ್ವಿನೌ ॥೭॥

ಮತ್ತೊಂದು ಕಡೆ ಶಿಖಂಡಿಯು ಪ್ರಭದ್ರಕಸೇನೆಯನ್ನು ಕೂಡಿಕೊಂಡು ಧನುರ್ಧಾರಿಗಳಾದ ಹಾಗೂ ಮಹಾರಥರೆನಿಸಿರುವ ಕೃತವರ್ಮ ಮತ್ತು ಕೃಪಾಚಾರ್ಯರ ಜೊತೆಗೆ ಯುದ್ಧಮಾಡಿದನು.

ತತಸ್ತೌ ಚ ಮಹಾಯುದ್ಧೇ ಯಮತುಲ್ಯಪರಾಕ್ರಮೌ ।
ಯೋಧಯಾಮಾಸ ಸಮರೇ ವೀರೈರ್ದುರ್ಮಂತ್ರಿತೇ ತವ ॥೮॥

ಅನಂತರ ಆ ಮಹಾಯುದ್ಧದಲ್ಲಿ ಯಮನಿಗೆ ಸದೃಶವಾದ ಪರಾಕ್ರಮವುಳ್ಳ ಈ ಕೃತವರ್ಮ ಮತ್ತು ಕೃಪಾಚಾರ್ಯರು ವೀರಾವೇಶದಿಂದ ಯುದ್ಧಮಾಡಿದರು.

ತತ್ರಾಸೀತ್ ಸುಮಹದ್ಯುದ್ಧಂ ಘೋರರೂಪಂ ವಿಶಾಂಪತೇ ।
ಪ್ರಾಣಾನ್ ಸಂತ್ಯಜತೋರ್ಯುದ್ಧೇ ಪ್ರಾಣದ್ಯೂತಾಭಿದೇವಿನೋಃ ॥೯॥

ರಾಜನೇ! ಅಲ್ಲಿ ಯುದ್ಧದಲ್ಲಿ ಪ್ರಾಣವನ್ನೇ ಒತ್ತೆಯಿಟ್ಟು ಪ್ರಾಣಗಳನ್ನೇ ಬಿಡುತ್ತಿರುವ ಇವರೀರ್ವರ ಮಧ್ಯೆ ಘೋರವಾದ ದೊಡ್ಡಯುದ್ಧವು ನಡೆಯಿತು.

ಶಲ್ಯಸ್ತು ಶರವರ್ಷಾಣಿ ವಿಮುಂಚನ್ ಸರ್ವತೋ ದಿಶಮ್ ।
ಪಾಂಡವಾನ್ ಪೀಡಯಾಮಾಸ ಸಸಾತ್ಯಕಿವೃಕೋದರಾನ್ ॥೧೦॥

ಶಲ್ಯನಾದರೂ ಎಲ್ಲಾ ದಿಕ್ಕುಗಳಲ್ಲಿ ಬಾಣಗಳ ಮಳೆಯನ್ನು ಸುರಿಸುತ್ತಾ ಸಾತ್ಯಕಿ, ಭೀಮಸೇನರಿಂದ ಸಹಿತರಾದ ಪಾಂಡವರನ್ನು ಪೀಡಿಸಿದನು.

ಶಲ್ಯಸಾಯಕಭಿನ್ನಾನಾಂ ಪಾಂಡವಾನಾಂ ಮಹಾಮೃಧೇ ।
ತ್ರಾತಾರಂ ನಾಧ್ಯಗಚ್ಛಂತ ತತ್ರ ಕೇಚಿನ್ಮಹಾರಥಾಃ ॥೧೧॥

ಸಾತ್ಯಕಿಮೊದಲಾದವರು ಪೆಟ್ಟು ತಿಂದಾಗ ಆ ದೊಡ್ಡಯುದ್ಧದಲ್ಲಿ ಕೆಲವು ಮಹಾರಥರಾದ ಪಾಂಡವರಿಗೆ ರಕ್ಷಕರಾಗಿ ಯಾರೂ ಸಿಗದೇ ಹೋದರು.

ತತಸ್ತು ನಕುಲಃ ಶೂರೋ ಧರ್ಮರಾಜೇ ಪ್ರಪೀಡಿತೇ ।
ಅಭಿದುದ್ರಾವ ವೇಗೇನ ಮಾತುಲಂ ಮಾದ್ರಿನಂದನಃ ॥೧೨॥

ಧರ್ಮರಾಜನು ಯುದ್ಧದಲ್ಲಿ ಬಹಳವಾಗಿ ಪೀಡಿತನಾದಾಗ ಮಾದ್ರಿಯ ಪುತ್ರನಾದ ನಕುಲನು ಸೋದರಮಾವ ಶಲ್ಯನನ್ನು ಯುದ್ಧದಲ್ಲಿ ಬಹಳ ವೇಗವಾಗಿ ಓಡಿಸತೊಡಗಿದನು.

ಸಂಛಾದ್ಯ ಸಮರೇ ಶಲ್ಯಂ ನಕುಲಃ ಪರವೀರಹಾ ।
ವಿವ್ಯಾಧ ಚೈನಂ ದಶಭಿಃ ಸ್ಮಯಮಾನಃ ಸ್ತನಾಂತರೇ ॥೧೩॥

ಶತ್ರುವೀರರನ್ನು ಸದೆಬಡಿಯುವ ನಕುಲನು ಯುದ್ಧದಲ್ಲಿ ಶಲ್ಯನನ್ನು ಆಚ್ಛಾದಿಸಿ ನಗುತ್ತಾ ಅವನ ಎದೆಗೆ ಹತ್ತು ಬಾಣಗಳಿಂದ ಹೊಡೆದನು.

ಸರ್ವಪಾರಶವೈರ್ಬಾಣೈಃ ಕರ್ಮಾರಪರಿಮಾರ್ಜಿತೈಃ ।
ಸುವರ್ಣಪುಂಖೈರ್ವಿಶಿಖೈಃ ಧನುರ್ಯಂತ್ರಪ್ರಪೀಡಿತೈಃ ॥೧೪॥

ಆ ಎಲ್ಲಾ ಬಾಣಗಳನ್ನು ಲೋಹಗಳಿಂದ ನಿರ್ಮಿಸಲಾಗಿತ್ತು. ಕರ್ಮಾರರು ಅವುಗಳನ್ನು ಚೆನ್ನಾಗಿ ಶುದ್ಧೀಕರಿಸಿದ್ದರು. ಬಾಣದ ರೆಕ್ಕೆಗಳನ್ನು ಬಂಗಾರದಿಂದ ಮಾಡಲಾಗಿತ್ತು. ತುದಿಗಳು ಬಹಳ ಚೂಪಾಗಿದ್ದವು. ಧನುಸ್ಸೆಂಬ ಯಂತ್ರದಿಂದ ಪ್ರಯೋಗಿಸಲ್ಪಟ್ಟಿದ್ದವು.

ಶಲ್ಯಸ್ತು ಪೀಡಿತಸ್ತೇನ ಸ್ವಸ್ರೀಯೇಣ ತು ಮಾತುಲಃ ।
ನಕುಲಂ ಪೀಡಯಾಮಾಸ ಶರೈಃ ಸನ್ನತಪರ್ವಭಿಃ ॥೧೫॥

ಇಂತಹ ಬಾಣಗಳಿಂದ ಸೋದರಳಿಯ ನಕುಲನು ಸೋದರಮಾವ ಶಲ್ಯನನ್ನು ಹೊಡೆದನು. ಆಗ ಶಲ್ಯನು ಚೆನ್ನಾಗಿ ಬಾಗಿದ ಸಂಧಿಗಳುಳ್ಳ ಬಾಣಗಳಿಂದ ನಕುಲನನ್ನು ಪೀಡಿಸಿದನು.

ತತೋ ಯುಧಿಷ್ಠಿರೋ ರಾಜಾ ಭೀಮಸೇನಶ್ಚ ಸಾತ್ಯಕಿಃ ।
ಸಹದೇವಶ್ಚ ಮಾದ್ರೇಯೋ ಮದ್ರರಾಜಮುಪಾದ್ರವನ್ ॥೧೬॥

ಅನಂತರ ರಾಜ ಯುಧಿಷ್ಠಿರ, ಭೀಮಸೇನ, ಸಾತ್ಯಕಿ, ಮಾದ್ರಿಕುಮಾರ ಸಹದೇವ ಇವರು ಶಲ್ಯನನ್ನು ಸಮೀಪಿಸಿದರು.

ತಾನಾಪತತ ಏವಾಶು ಪೂರಯಾಣಾನ್ ರಥಸ್ವನೈಃ ।
ದಿಶಶ್ಚ ಪ್ರದಿಶಶ್ಚೈವ ಕಂಪಯಾನಾಂಶ್ಚ ಮೇದಿನೀಮ್ ॥೧೭॥

ಪ್ರತಿಜಗ್ರಾಹ ಸಮರೇ ಸೇನಾಪತಿರಮಿತ್ರಜಿತ್ ॥೧೮॥

ಅವರು ಬರುತ್ತಿರುವಾಗ ಅವರ ರಥದ ಧ್ವನಿಯು ದಿಕ್ಕು-ವಿದಿಕ್ಕುಗಳಲ್ಲಿ ಎಲ್ಲೆಡೆ ತುಂಬಿಹೋಯಿತು. ಭೂಮಿಯೇ ನಡುಗುತ್ತಿತ್ತು. ಅಂತಹ ಯುಧಿಷ್ಠಿರಾದಿಗಳನ್ನು ಸೇನಾಧಿಪತಿಯಾದ ಶತ್ರುಗಳನ್ನು ಜಯಿಸುವ ಶಲ್ಯನು ಯುದ್ಧದಲ್ಲಿ ತಡೆದು ನಿಲ್ಲಿಸಿದನು.

ಯುಧಿಷ್ಠಿರಂ ತ್ರಿಭಿರ್ವಿದ್ಧ್ವಾ ಭೀಮಸೇನಂ ಚ ಪಂಚಭಿಃ ।
ಸಾತ್ಯಕಿಂ ಚ ಶತೇನಾಜೌ ಸಹದೇವಂ ತ್ರಿಭಿಃ ಶರೈಃ ॥೧೯॥

ಧರ್ಮರಾಜನ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಿದನು. ಭೀಮಸೇನನ ಮೇಲೆ ಐದು ಬಾಣಗಳನ್ನೂ, ಸಾತ್ಯಕಿಯ ಮೇಲೆ ನೂರು ಬಾಣಗಳನ್ನೂ ಸಹದೇವನ ಮೇಲೆ ಮೂರು ಬಾಣಗಳನ್ನೂ ಪ್ರಯೋಗಿಸಿ ಹೊಡೆದನು.

ತತಸ್ತು ಸಶರಂ ಚಾಪಂ ನಕುಲಸ್ಯ ಮಹಾತ್ಮನಃ ।
ಮದ್ರೇಶ್ವರಃ ಕ್ಷುರಪ್ರೇಣ ಮಧ್ಯೇ ಚಿಚ್ಛೇದ ಮಾರಿಷ ॥೨೦॥

ರಾಜನೇ! ಅನಂತರ ಶಲ್ಯನು ಶೀಘ್ರಗಾಮಿಯಾದ ಬಾಣದಿಂದ ಮಹಾತ್ಮ ನಕುಲನ ಬಾಣಯುಕ್ತವಾದ ಬಿಲ್ಲನ್ನು ಮಧ್ಯದಲ್ಲಿ ತುಂಡರಿಸಿದನು.

ತದಪಾಸ್ಯ ಧನುಶ್ಛಿನ್ನಂ ತತಃ ಶಲ್ಯಸ್ಯ ಸಾಯಕೈಃ ।
ಅಥಾನ್ಯದ್ ಧನುರಾದಾಯ ಮಾದ್ರೀಪುತ್ರೋ ಮಹಾಬಲಃ ॥೨೧॥

ಮದ್ರರಾಜರಥಂ ತೂರ್ಣಂ ಪೂರಯಾಮಾಸ ಪತ್ರಿಭಿಃ ॥೨೨॥

ಶಲ್ಯನ ಬಾಣಗಳಿಂದ ತುಂಡಾದ ಬಿಲ್ಲನ್ನು ಬಿಸಾಕಿ, ಮಹಾಬಲಶಾಲಿ ಸಹದೇವನು ಇನ್ನೊಂದು ಬಿಲ್ಲನ್ನು ಎತ್ತಿಕೊಂಡು, ಬಾಣಗಳನ್ನು ಪ್ರಯೋಗಿಸಿ ಶಲ್ಯನ ರಥವನ್ನು ಬಾಣಗಳಿಂದ ತುಂಬುವಂತೆ ಮಾಡಿದನು.

ಯುಧಿಷ್ಠಿರಸ್ತು ಮದ್ರೇಶಂ ಸಹದೇವಶ್ಚ ಮಾರಿಷ ।
ದಶಭಿರ್ದಶಭಿರ್ಬಾಣೈಃ ಉರಸ್ಯೇನಂ ಅಪೀಡ್ಯತಾಮ್ ॥೨೩॥

ಮಹಾರಾಜನೇ! ಯುಧಿಷ್ಠಿರನಾದರೂ ಹತ್ತು ಬಾಣಗಳನ್ನು ಶಲ್ಯನ ಎದೆಗೆ ಪ್ರಯೋಗಿಸಿ ಶಲ್ಯನನ್ನು ಪೀಡಿಸಿದನು. ಸಹದೇವನೂ ಹತ್ತು ಬಾಣಗಳನ್ನು ಶಲ್ಯನ ಎದೆಗೆ ಬಿಟ್ಟು ಅವನನ್ನು ಪೀಡಿಸಿದನು.

ಭೀಮಸೇನಸ್ತಥಾ ಷಷ್ಟ್ಯಾ ಸಾತ್ಯಕಿರ್ನವಭಿಃ ಶರೈಃ ।
ಮದ್ರರಾಜಮಭಿದ್ರುತ್ಯ ಜಘ್ನತುಃ ಕಂಕಪತ್ರಿಭಿಃ ॥೨೪॥

ಭೀಮಸೇನನು ಮತ್ತು ಸಾತ್ಯಕಿಯು ಶಲ್ಯನನ್ನು ಅಟ್ಟಿಸಿಕೊಂಡು ಹೋಗಿ ಕ್ರಮವಾಗಿ ಅರವತ್ತು ಮತ್ತು ಒಂಬತ್ತು ಕಂಕಪತ್ರಗಳುಳ್ಳ ಬಾಣಗಳಿಂದ ಹೊಡೆದರು.

ಮದ್ರರಾಜಸ್ತತಃ ಕ್ರುದ್ಧಃ ಸಾತ್ಯಕಿಂ ದಶಭಿಃ ಶರೈಃ ।
ವಿವ್ಯಾಧ ಭೂಯಃ ಸಪ್ತತ್ಯಾ ಶರಾಣಾಂ ನತಪರ್ವಣಾಮ್ ॥೨೫॥

ಅನಂತರ ಶಲ್ಯನು ಕೋಪಗೊಂಡು ಸಾತ್ಯಕಿಯನ್ನು ಹತ್ತು ಬಾಣಗಳಿಂದ ಹೊಡೆದನು. ಪುನಃ ಬಾಗಿದ ಸಂಧಿಗಳುಳ್ಳ ಎಪ್ಪತ್ತು ಬಾಣಗಳಿಂದ ಹೊಡೆದನು.

ಅಥಾಸ್ಯ ಸಶರಂ ಚಾಪಂ ಮುಷ್ಟೌ ಚಿಚ್ಛೇದ ಮಾರಿಷ ।
ಹಯಾಂಶ್ಚ ಚತುರಃ ಸಂಖ್ಯೇ ಪ್ರೇಷಯಾಮಾಸ ಮೃತ್ಯವೇ ॥೨೬॥

ರಾಜನೇ! ಅನಂತರ ಸಾತ್ಯಕಿಯ ಬಾಣಸಹಿತವಾದ ಬಿಲ್ಲನ್ನು ಮುಷ್ಟಿದೇಶದಲ್ಲಿ ತುಂಡುಮಾಡಿದನು. ಯುದ್ಧದಲ್ಲಿ ಅವನ ನಾಲ್ಕು ಕುದುರೆಗಳನ್ನು ಕೊಂದು ಯಮನ ಬಳಿಗೆ ಕಳುಹಿಸಿದನು.

ವಿರಥಂ ಸಾತ್ಯಕಿಂ ಕೃತ್ವಾ ಮದ್ರರಾಜೋ ಮಹಾಬಲಃ ।
ವಿಶಿಖಾನಾಂ ಶತೇನೈನಮಾಜಘಾನ ಸಮಂತತಃ ॥೨೭॥

ಮಹಾಬಲಶಾಲಿಯಾದ ಶಲ್ಯನು ಸಾತ್ಯಕಿಯ ರಥವನ್ನೂ ಪುಡಿಮಾಡಿದನು. ಅವನನ್ನು ನೂರು ಬಾಣಗಳಿಂದ ಎಲ್ಲಾ ಕಡೆಗಳಿಂದ ಚೆನ್ನಾಗಿ ಥಳಿಸಿದನು.

ಮಾದ್ರೀಪುತ್ರೌ ಚ ಸಂರಬ್ಧೌ ಭೀಮಸೇನಂ ಚ ಪಾಂಡವಮ್ ।
ಯುಧಿಷ್ಠಿರಂ ಚ ಕೌರವ್ಯ ವಿವ್ಯಾಧ ನಿಶಿತೈಃ ಶರೈಃ ॥೨೮॥

ಕ್ರೋಧಯುಕ್ತರಾದ ನಕುಲ-ಸಹದೇವರನ್ನು, ಭೀಮಸೇನನನ್ನು ಮತ್ತು ಯುಧಿಷ್ಠಿರನನ್ನು ಹರಿತವಾದ ಬಾಣಗಳಿಂದ ಹೊಡೆದನು.

ತತ್ರಾದ್ಭುತಮಪಶ್ಯಾಮ ಮದ್ರರಾಜಸ್ಯ ಪೌರುಷಮ್ ।
ಯದೇನಂ ಸಹಿತಾಃ ಪಾರ್ಥಾ ನಾಭ್ಯವರ್ತಂತ ಸಂಯುಗೇ ॥೨೯॥

ಅಲ್ಲಿ ಶಲ್ಯನ ಅದ್ಭುತವಾದ ಪೌರುಷವನ್ನು ನೋಡಿದೆವು. ಈ ಪೌರುಷವನ್ನು ಪಾಂಡವರೆಲ್ಲರೂ ಸೇರಿದರೂ ಮೀರಲು ಆಗಲಿಲ್ಲ.

ಅಥಾನ್ಯಂ ರಥಮಾಸ್ಥಾಯ ಸಾತ್ಯಕಿಃ ಸತ್ಯವಿಕ್ರಮಃ ।
ಪೀಡಿತಾನ್ ಪಾಂಡವಾನ್ ದೃಷ್ಟ್ವಾ ಮದ್ರರಾಜವಶಂ ಗತಾನ್ ॥೩೦॥
ಅಭಿದುದ್ರಾವ ವೇಗೇನ ಮದ್ರಾಣಾಮಧಿಪಂ ಬಲೀ ॥೩೧॥

ನಿಜವಾಗಿಯೂ ಪರಾಕ್ರಮಿಯಾದ ಸಾತ್ಯಕಿಯು ಇನ್ನೊಂದು ರಥವನ್ನು ಏರಿಕೊಂಡು ಶಲ್ಯನ ವಶಕ್ಕೊಳಗಾಗಿ ಪೀಡಿತರಾದ ಪಾಂಡವರನ್ನು ನೋಡಿದನು. ಕೂಡಲೇ ಬಲಶಾಲಿಯಾದ ಸಾತ್ಯಕಿಯು ವೇಗವಾಗಿ ಶಲ್ಯನೆಡೆಗೆ ಸಾಗಿದನು.

ಆಪತಂತಂ ರಥಂ ತಸ್ಯ ಶಲ್ಯಃ ಸಮಿತಿಶೋಭನಃ ।
ಪ್ರತ್ಯುದ್ಯಯೌ ರಥೇನೈನಂ ಮತ್ತೋ ಮತ್ತಮಿವ ದ್ವಿಪಮ್ ॥೩೨॥

ಯುದ್ಧದಲ್ಲಿ ಶೋಭಿಸುತ್ತಿದ್ದ ಶಲ್ಯನು ಬರುತ್ತಿರುವ ಸಾತ್ಯಕಿಯ ರಥವನ್ನು ಕಂಡು ತಾನೂ ರಥದಲ್ಲೇ ಅವನನ್ನು ಎದುರುಗೊಂಡನು. ಇದು ಮದವೇರಿದ ಒಂದು ಆನೆಯು ಇನ್ನೊಂದು ಮದವೇರಿದ ಆನೆಯನ್ನು ಎದಿರುಗೊಂಡಂತೆ ಇತ್ತು.

ಸ ಸನ್ನಿಪಾತಸ್ತುಮುಲೋ ಬಭೂವಾದ್ಭುತದರ್ಶನಃ ।
ಸಾತ್ಯಕೇಶ್ಚೈವ ಶೂರಸ್ಯ ಮದ್ರಾಣಾಮಧಿಪಸ್ಯ ಚ ॥೩೩॥

ಯಾದೃಶೋ ವೈ ಪುರಾ ವೃತ್ತಃ ಶಂಬರಾಮರರಾಜಯೋಃ ॥೩೪॥

ಶೂರನಾದ ಸಾತ್ಯಕಿ ಮತ್ತು ಮದ್ರಾಧಿಪತಿ ಶಲ್ಯನ ಯುದ್ಧವು ನೋಡಲು ಬಹಳ ಅದ್ಭುತವಾಗಿತ್ತು. ಅವರಿಬ್ಬರ ಯುದ್ಧವು ಶಂಬರಾಸುರ ಮತ್ತು ಇಂದ್ರನ ನಡುವೆ ನಡೆದ ಯುದ್ಧದಂತೆ ಇತ್ತು.

ಸಾತ್ಯಕಿಃ ಪ್ರೇಕ್ಷ್ಯ ಸಮರೇ ಮದ್ರರಾಜಮವಸ್ಥಿತಮ್ ।
ವಿವ್ಯಾಧ ನಿಶಿತೈರ್ಬಾಣೈಃ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೩೫॥

ಯುದ್ಧದಲ್ಲಿ ಸಾತ್ಯಕಿಯು ನಿಂತಿರುವ ಶಲ್ಯನನ್ನು ನೋಡಿ ಹರಿತವಾದ ಬಾಣಗಳಿಂದ ಹೊಡೆದನು ಮತ್ತು ನಿಲ್ಲು! ನಿಲ್ಲು! ಎಂಬುದಾಗಿಯೂ ಹೇಳಿದನು.

ಮದ್ರರಾಜಸ್ತು ಸುಭೃಶಂ ವಿದ್ಧಸ್ತೇನ ಮಹಾತ್ಮನಾ ।
ಸಾತ್ಯಕಿಂ ಪ್ರತಿವಿವ್ಯಾಧ ವಿಂಶತ್ಯಾ ನಿಶಿತೈಃ ಶರೈಃ ॥೩೬॥

ಆ ಮಹಾತ್ಮ ಸಾತ್ಯಕಿಯಿಂದ ಚೆನ್ನಾಗಿ ಪೆಟ್ಟು ತಿಂದ ಶಲ್ಯನು ಇಪ್ಪತ್ತು ಹರಿತವಾದ ಬಾಣಗಳಿಂದ ಸಾತ್ಯಕಿಯನ್ನು ಪ್ರತಿಯಾಗಿ ಹೊಡೆದನು.

ತತಃ ಪಾರ್ಥಾ ಮಹೇಷ್ವಾಸಾಃ ಸಾತ್ವತಾಭಿಮುಖಂ ನೃಪಮ್ ।
ಅಭ್ಯದ್ರವನ್ ರಥೈಸ್ತೂರ್ಣಂ ಮಾತುಲಂ ವಧಕಾಮ್ಯಯಾ ॥೩೭॥

ಅನಂತರ ಮಹಾಬಿಲ್ಲಾರರಾದ ಪಾಂಡವರು ಬೇಗನೇ ರಥವನ್ನು ಹತ್ತಿಕೊಂಡು ಸಾತ್ಯಕಿಯ ಮುಂದೆ ಯುದ್ಧ ಮಾಡುತ್ತಿದ್ದ ಸೋದರಮಾವ ಶಲ್ಯರಾಜನನ್ನು ಬೇಗನೇ ಸಮೀಪಿಸಿದರು.

ತತ ಆಸೀತ್ ಪರಾಮರ್ದಃ ತುಮುಲಃ ಶೋಣಿತೋದಕಃ ।
ಶೂರಾಣಾಂ ಯುಧ್ಯಮಾನಾನಾಂ ಸಿಂಹಾನಾಮಿವ ಗರ್ಜತಾಮ್ ॥

ಅನಂತರ ಶೂರರಾದ ಹಾಗೂ ಮಹಾಬಲರಾದ ಪಾಂಡವರು ಸಿಂಹದಂತೆ ಗರ್ಜಿಸುತ್ತಾ ಯುದ್ಧವನ್ನು ಮಾಡಿದಾಗ ಅವರ ಯುದ್ಧದಲ್ಲಿ ರಕ್ತವು ಹೊಳೆಯಾಗಿ ಹರಿಯುತ್ತಿತ್ತು. ನಿಯಂತ್ರಣಕ್ಕೆ ಸಿಲುಕದ ಕೋಲಾಹಲವು ಉಂಟಾಯಿತು.

ತೇಷಾಮಾಸೀನ್ಮಹಾರಾಜ ವ್ಯತಿಕ್ಷೇಪಃ ಪರಸ್ಪರಮ್ ।
ಸಿಂಹಾನಾಮಾಮಿಷೇಪ್ಸೂನಾಂ ಗರ್ಜತಾಮಿವ ಸಂಯುಗೇ ॥೩೯॥

ಮಹಾರಾಜನೇ! ಆ ಎರಡೂ ಪಕ್ಷದವರಿಗೆ ಪರಸ್ಪರವಾಗಿ ಯುದ್ಧವು ಉಂಟಾಯಿತು. ಮಾಂಸದ ರುಚಿಯನ್ನು ಅಪೇಕ್ಷಿಸುವ ಸಿಂಹಗಳು ಗರ್ಜಿಸುತ್ತಾ ಪರಸ್ಪರವಾಗಿ ಕಾದಾಡುವಂತೆ ಇತ್ತು.

ತೇಷಾಂ ಬಾಣಸಹಸ್ರೌಘೈಃ ಆಕೀರ್ಣಾ ವಸುಧಾऽಭವತ್ ।
ಅಂತರಿಕ್ಷಂ ಚ ಸಹಸಾ ಬಾಣಭೂತಮಭೂತ್ ತದಾ ॥೪೦॥

ಆ ಪಾಂಡವರು ಬಿಟ್ಟ ಬಾಣಸಮೂಹದಿಂದಾಗಿ ಭೂಮಿಯ ಮೇಲ್ಭಾಗವು ತುಂಬಿಹೋಯಿತು. ಆಕಾಶವೂ ಬಾಣಗಳಿಂದ ತುಂಬಿಹೋಗಿತ್ತು.

ಶರಾಂಧಕಾರೇ ಮಹತಿ ಕೃತೇ ತತ್ರ ಸಮಂತತಃ ।
ಅಭ್ರಚ್ಛಾಯೇವ ಸಂಜಜ್ಞೇ ಶರೈಃ ಪೂರ್ಣೈರ್ಮಹಾತ್ಮಭಿಃ ॥೪೧॥

ಅಂತರಿಕ್ಷವು ಬಾಣಗಳಿಂದ ತುಂಬಿರುವುದರಿಂದ ಪೂರ್ಣರಾದ ಮಹಾತ್ಮರಿಂದ ಉಂಟಾದ ಮೋಡದ ನೆರಳಿನಂತೆ ಇತ್ತು.

ತತ್ರ ರಾಜನ್ ಶರೈರ್ಮುಕ್ತೈಃ ನಿರ್ಮುಕ್ತೈರಿವ ಪನ್ನಗೈಃ ।
ರುಗ್ಮಪುಂಖೈಃ ಪ್ರಕಾಶದ್ಭಿಃ ವ್ಯರಾಜಂತ ದಿಶಸ್ತಥಾ ॥೪೨॥

ರಾಜನೇ! ಅಲ್ಲಿ ಪ್ರಯೋಗಿಸಿದ ಬಾಣಗಳು, ಬುಟ್ಟಿಯಿಂದ ಹೊರಬಿಟ್ಟ ಸರ್ಪಗಳಂತೆ ಇದ್ದವು. ಬಂಗಾರದ ರೆಕ್ಕೆಗಳಿಂದ ಪ್ರಕಾಶಿಸುತ್ತಿದ್ದ ಆ ಬಾಣಗಳಿಂದ ದಿಕ್ಕುಗಳು ಶೋಭಿಸುತ್ತಿದ್ದವು.

ತತ್ರಾದ್ಭುತಂ ಪರಂ ಚಕ್ರೇ ಶಲ್ಯಃ ಶತ್ರುನಿಬರ್ಹಣಃ ।
ತದೇಕಃ ಸಮರೇ ಶೂರೋ ಯೋಧಯಾಮಾಸ ವೈ ಬಹೂನ್ ॥೪೩॥

ಶತ್ರುನಾಶಕನಾದ ಶಲ್ಯನು ಅತ್ಯುತ್ತಮವಾದ ಅದ್ಭುತವನ್ನು ಮಾಡಿದನು. ಯುದ್ಧದಲ್ಲಿ ಶೂರನಾದ ಶಲ್ಯನು ಒಬ್ಬನೇ ಅನೇಕರೊಂದಿಗೆ ಯುದ್ಧ ಮಾಡಿದನು.

ಮದ್ರರಾಜಭುಜೋತ್ಸೃಷ್ಟೈಃ ಕಂಕಬರ್ಹಿಣವಾಜಿತೈಃ ।
ಸಂಪತದ್ಭಿಃ ಶರೈಘೋರೈರವಾಕೀರ್ಯತ ಮೇದಿನೀ ॥೪೪॥

ಶಲ್ಯನು ಪ್ರಯೋಗಿಸಿದ ಕಂಕ-ಬರ್ಹಿಗಳಿಂದ ಕೂಡಿದ ಘೋರವಾದ ಬಾಣಗಳಿಂದ ಭೂಮಿಯು ಆವರಿಸಲ್ಪಟ್ಟಿತು.

ತತ್ರ ಶಲ್ಯರಥಂ ಘೋರಂ ವಿಚರಂತಂ ಮಹಾಹವೇ ।
ಅಪಶ್ಯಾಮ ಯಥಾಪೂರ್ವಂ ಶಕ್ರಸ್ಯಾಸುರಸಂಕ್ಷಯೇ ॥೪೫॥

ಹಿಂದೆ ದಾನವರ ಜೊತೆಗೆ ನಡೆದ ಯುದ್ಧದಲ್ಲಿ ಇಂದ್ರನ ರಥವು ವೇಗವಾಗಿ ಸಂಚರಿಸುತ್ತಿದ್ದುದರಿಂದ ಕಾಣಿಸುತ್ತಿರಲಿಲ್ಲ. ಹಾಗೆಯೇ ಈ ಮಹಾಯುದ್ಧದಲ್ಲಿ ಸಂಚರಿಸುತ್ತಿದ್ದ ಶಲ್ಯನ ರಥವೂ ಕಾಣಿಸುತ್ತಿರಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಲ್ಯಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾರನೆಯ ಅಧ್ಯಾಯ

ಶಲ್ಯ ಮತ್ತು ಯುಧಿಷ್ಠಿರನ ಮಧ್ಯ ಯುದ್ಧ

ಸಂಜಯಃ

ತತಃ ಸೇನಾ ತವ ವಿಭೋ ಮದ್ರರಾಜಪುರಸ್ಕೃತಾ ।
ಪುನರಭ್ಯದ್ರವತ್ ಪಾರ್ಥಾನ್ ವೇಗೇನ ಮಹತಾ ರಣೇ ॥೧॥

ಸಂಜಯ– ಪ್ರಭುವೇ! ಅನಂತರ ಯುದ್ಧದಲ್ಲಿ ನಿನ್ನ ಸೇನೆಯು ಶಲ್ಯನ ನೇತೃತ್ವದಲ್ಲಿ ಬಹಳ ವೇಗದಿಂದ ಪಾಂಡವರ ಮೇಲೆ ಏರಿಬಂತು.

ಪೀಡಿತಾಸ್ತಾವಕಾಃ ಸರ್ವೇ ಪ್ರಧಾವಂತೋ ರಣೋತ್ಕಟಾಃ ।
ಕ್ಷಣೇನ ಚೈವ ಪಾರ್ಥಾಸ್ತೇ ಬಹುತ್ವಾತ್ ಸಮಲೋಲಯನ್ ॥೨॥

ನಿನ್ನ ಕಡೆಯ ಯೋಧರು ನಾನಾ ವಿಧದ ಪೀಡೆಗೆ ಒಳಗಾಗಿದ್ದರೂ ಸಂಖ್ಯೆಯಲ್ಲಿ ಪಾಂಡವರಿಗಿಂತ ಅಧಿಕವಾಗಿ ಇರುವ ಕಾರಣದಿಂದ ಯುದ್ಧದಲ್ಲಿ ಉತ್ಕಟ ಉತ್ಸಾಹವುಳ್ಳವರಾಗಿ ಓಡುತ್ತಾ ಒಂದೇ ಕ್ಷಣದಲ್ಲಿ ಪಾಂಡವರನ್ನು ಅಲ್ಲೋಲ-ಕಲ್ಲೋಲರನ್ನಾಗಿ ಮಾಡಿದರು.

ತೈರ್ವಧ್ಯಮಾನಾಃ ಕುರುಭಿಃ ಪಾಂಡವಾನಾವತಸ್ಥಿರೇ ।
ನಿವಾರ್ಯಮಾಣಾ ಭೀಮೇನ ಪಶ್ಯತೋಃ ಕೃಷ್ಣಪಾರ್ಥಯೋಃ ॥೩॥

ಕೌರವರ ಹೊಡೆತಕ್ಕೆ ಒಳಗಾದ ಪಾಂಡವರ ಕಡೆಯವರು ಕೃಷ್ಣಾರ್ಜುನರು ನೋಡುತ್ತಿದ್ದಂತೆಯೇ, ಭೀಮನು ತಡೆಯುತ್ತಿದ್ದರೂ ರಣರಂಗದಲ್ಲಿ ನಿಲ್ಲಲಿಲ್ಲ.

ಕ್ಷಣೇನೈವ ಹಿ ತೇ ರಾಜನ್ ಸಮದೃಶ್ಯಂತ ವಿದ್ರುತಾಃ ॥೪॥

ರಾಜನೇ! ಒಂದೇ ಕ್ಷಣದಲ್ಲಿ ಅವರೆಲ್ಲರೂ ರಣರಂಗದಿಂದ ಓಡಿಹೋದರು.

ತತೋ ಧನಂಜಯಃ ಕ್ರುದ್ಧಃ ಕೃಪಂ ಸಹ ಪದಾನುಗೈಃ ।
ಅವಾರಯಚ್ಛರೌಘೇಣ ಕೃತವರ್ಮಾಣಮೇವ ಚ ॥೫॥

ಅನಂತರ ಕೋಪಗೊಂಡ ಅರ್ಜುನನು ಕೃಪನನ್ನೂ, ಕೃತವರ್ಮನನ್ನು, ಜೊತೆಗಿದ್ದ ಪದಾತಿಗಳನ್ನೂ ತನ್ನ ಬಾಣಗಳ ಸಮೂಹದಿಂದ ತಡೆದನು.

ಶಕುನಿಂ ಸಹದೇವಶ್ಚ ಸಹಸೈನ್ಯಮವಾರಯತ್ ॥೬॥

ಸಹದೇವನು ಸೈನ್ಯಸಮೇತನಾದ ಶಕುನಿಯನ್ನು ತಡೆದನು.

ನಕುಲಃ ಪಾರ್ಶ್ವತಃ ಸ್ಥಿತ್ವಾ ಮದ್ರರಾಜಮಯೋಧಯತ್ ॥೭॥

ನಕುಲನು ಒಂದು ಬದಿಯಲ್ಲಿ ನಿಂತು ಶಲ್ಯನೊಡನೆ ಯುದ್ಧ ಮಾಡಿದನು.

ದ್ರೌಪದೇಯಾ ನರೇಂದ್ರಾಂಶ್ಚ ಭೂಯಿಷ್ಠಾನ್ ಸಮವಾರಯನ್ ।
ದ್ರೋಣಪುತ್ರಂ ಚ ಪಾಂಚಾಲ್ಯಃ ಶಿಖಂಡೀ ಸಮವಾರಯತ್ ॥೮॥

ದ್ರೌಪದಿಯ ಮಕ್ಕಳು ಬಹಳವಾದ ರಾಜರನ್ನು ತಡೆದರು. ದ್ರುಪದನ ಮಗನಾದ ಶಿಖಂಡಿಯು ದ್ರೋಣಪುತ್ರ ಅಶ್ವತ್ಥಾಮನನ್ನು ತಡೆದನು.

ಭೀಮಸೇನಸ್ತು ರಾಜಾನಂ ಗದಾಪಾಣಿರವಾರಯತ್ ।
ಶಲ್ಯಂ ತು ಸಹ ಸೈನ್ಯೇನ ಕುಂತೀಪುತ್ರೋ ಯುಧಿಷ್ಠಿರಃ ॥೯॥

ಭೀಮಸೇನನಾದರೂ ಗದೆಯನ್ನು ಕೈಯಲ್ಲಿ ಹಿಡಿದುಕೊಂಡು ದುರ್ಯೋಧನನನ್ನು ತಡೆದನು. ಸೈನ್ಯಸಮೇತನಾದ ಶಲ್ಯನನ್ನು ಧರ್ಮರಾಜನು ತಡೆದನು.

ತತಃ ಸಮಭವದ್ ಯುದ್ಧಂ ಸಂಸಕ್ತಂ ತತ್ರ ತತ್ರ ಹ ।
ತಾವಕಾನಾಂ ಪರೇಷಾಂ ಚ ಸಂಗ್ರಾಮೇಷ್ವನಿವರ್ತಿನಾಮ್ ॥೧೦॥

ಆನಂತರ ನಿನ್ನ ಕಡೆಯವರಿಗೂ ಪಾಂಡವರಿಗೂ ಅಲ್ಲಲ್ಲಿ ದ್ವಂದ್ವಯುದ್ಧವು ನಡೆಯಿತು. ಆ ಯೋಧರೆಲ್ಲರೂ ಯುದ್ಧದಲ್ಲಿ ಬೆನ್ನುತೋರಿಸುವವರಾಗಿರಲಿಲ್ಲ.

ತತ್ರ ಪಶ್ಯಾಮಹೇ ಕರ್ಮ ಶಲ್ಯಸ್ಯಾತಿಮಹದ್ರಣೇ ।
ಯದೇಕಃ ಸರ್ವಸೈನ್ಯಾನಿ ಪಾಂಡವಾನಾಮಯುಧ್ಯತ ॥೧೧॥

ಆ ಯುದ್ಧದಲ್ಲಿ ಶಲ್ಯನು ಒಬ್ಬಂಟಿಗನಾಗಿ ಪಾಂಡವರ ಸೈನ್ಯದೊಡನೆ ಯುದ್ಧ ಮಾಡಿದ ಮಹತ್ಕರ್ಮವನ್ನು ನಾವು ನೋಡಿದೆವು.

ವ್ಯದೃಶ್ಯತ ತದಾ ಶಲ್ಯೋ ಯುಧಿಷ್ಠಿರಸಮೀಪತಃ ।
ಕ್ರೂರಶ್ಚಂದ್ರಮಸೋಽಭ್ಯಾಶೇ ಶನೈಶ್ಚರ ಇವ ಗ್ರಹಃ ॥೧೨॥

ಆಗ ಶಲ್ಯನು ಯುಧಿಷ್ಠಿರನ ಸಮೀಪದಲ್ಲಿ ಕಾಣಿಸಿಕೊಂಡನು. ಅದು ಚಂದ್ರನ ಸನಿಹದಲ್ಲಿ ಕ್ರೂರಸ್ವಭಾವದ ಶನಿಗ್ರಹವು ಕಾಣಿಸಿದ ಹಾಗೆ ಇತ್ತು.

ಪೀಡಯಿತ್ವಾ ತು ರಾಜಾನಂ ಶರೈರಾಶೀವಿಷೋಪಮೈಃ ।
ಅಭ್ಯಧಾವತ್ ಪುನರ್ಭೀಮಂ ಶರವರ್ಷೈರವಾಕಿರತ್ ॥೧೩॥

ಶಲ್ಯನು ಧರ್ಮರಾಜನನ್ನು ಸರ್ಪಸದೃಶವಾದ ಬಾಣಗಳಿಂದ ಹೊಡೆದು ಪುನಃ ಭೀಮನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತಸ್ಯ ತಲ್ಲಾಘವಂ ದೃಷ್ಟ್ವಾ ತಥೈವ ಚ ಕೃತಾಸ್ತ್ರತಾಮ್ ।
ಅಪೂಜಯನ್ನನೀಕಾನಿ ಪರೇಷಾಂ ತಾವಕಾನಿ ಚ ॥೧೪॥

ಶಲ್ಯನ ಅಸ್ತ್ರಪರಿಣತಿಯನ್ನೂ ಹಾಗೂ ಯುದ್ಧಕೌಶಲವನ್ನೂ ನೋಡಿದ ಉಭಯ ಪಕ್ಷದ ಸೈನಿಕರೂ ಕೊಂಡಾಡಿದರು.

ಪೀಡ್ಯಮಾನಾಸ್ತು ಶಲ್ಯೇನ ಪಾಂಡವಾ ಭೃಶವಿಕ್ಷತಾಃ ।
ಪ್ರಾದ್ರವಂತ ರಣಂ ಹಿತ್ವಾ ಕ್ರೋಶಮಾನೇ ಯುಧಿಷ್ಠಿರೇ ॥೧೫॥

ಶಲ್ಯನ ಹೊಡೆತಕ್ಕೆ ಒಳಗಾದ ಪಾಂಡವರು ಬಹಳ ಗಾಯಗೊಂಡು ಯುದ್ಧವನ್ನು ನಿಲ್ಲಿಸಿ ದಿಕ್ಕಾಪಾಲಾಗಿ ಓಡಿಹೋದರು. ಯುಧಿಷ್ಠಿರನು ಕೂಗಿ ಕರೆಯುತ್ತಿದ್ದರೂ ಯಾರೂ ನಿಲ್ಲಲಿಲ್ಲ.

ವಧ್ಯಮಾನೇಷ್ವನೀಕೇಷು ಮದ್ರರಾಜೇನ ಪಾಂಡವಃ ।
ಅಮರ್ಷವಶಮಾಪನ್ನೋ ಧರ್ಮರಾಜೋ ಯುಧಿಷ್ಠಿರಃ ॥೧೬॥

ಶಲ್ಯನು ಪಾಂಡವರ ಸೈನ್ಯವನ್ನು ಘಾಸಿಗೊಳಿಸಿದಾಗ ಧರ್ಮರಾಜ ಯುಧಿಷ್ಠಿರನು ಬಹಳ ಅಸಹನೆಯನ್ನು ಅನುಭವಿಸಿದನು.

ತತಃ ಪೌರುಷಮಾಸ್ಥಾಯ ಮದ್ರರಾಜಮಪೀಡಯತ್ ।
ಜಯೋ ವಾऽಸ್ತು ವಧೋ ವೇತಿ ಕೃತಬುದ್ಧಿರ್ಮಹಾರಥಃ ॥೧೭॥

ಸಮಾಹೂಯಾಬ್ರವೀತ್ ಸರ್ವಾನ್ ಭ್ರಾತೃನ್ ಕೃಷ್ಣಂ ಚ ಪಾಂಡವಃ ॥

ಅನಂತರ ಮಹಾರಥನಾದ ಯುಧಿಷ್ಠಿರನು ಪೌರುಷವನ್ನು ಹೊಂದಿ ಶಲ್ಯನನ್ನು ಹೊಡೆದನು. ಜಯವನ್ನು ಪಡೆಯುವುದು ಅಥವಾ ಮರಣವನ್ನು ಹೊಂದುವುದು ಎಂಬುದಾಗಿ ಧರ್ಮರಾಜನು ನಿಶ್ಚಯವನ್ನು ಮಾಡಿಕೊಂಡಿದ್ದನು. ತನ್ನ ಎಲ್ಲಾ ಸಹೋದರರನ್ನೂ ಕೃಷ್ಣನನ್ನೂ ಕರೆದು ಈ ಮಾತನ್ನು ಹೇಳಿದನು.

ಯುಧಿಷ್ಠಿರಃ

ಭೀಷ್ಮೋ ದ್ರೋಣಶ್ಚ ಕರ್ಣಶ್ಚ ಯೇ ಚಾನ್ಯೇ ಪೃಥಿವೀಕ್ಷಿತಃ ।
ಕೌರವಾರ್ಥೇ ಪರಾಕ್ರಾಂತಾಃ ಸಂಗ್ರಾಮೇ ನಿಧನಂ ಗತಾಃ ॥೧೯॥

ಯುಧಿಷ್ಠಿರ– ಭೀಷ್ಮ, ದ್ರೋಣ, ಕರ್ಣ ಹಾಗೂ ಇನ್ನೂ ಬೇರೆ ರಾಜರುಗಳು ದುರ್ಯೋಧನನಿಗಾಗಿ ಯುದ್ಧದಲ್ಲಿ ಪರಾಕ್ರಮವನ್ನು ಮೆರೆದು ಸತ್ತಿದ್ದಾರೆ.

ಯಥಾಭಾಗಂ ಯಥೋತ್ಸಾಹಂ ಭವಂತಃ ಕೃತಪೌರುಷಾಃ ।
ಭಾಗೋಽವಶಿಷ್ಟ ಏವಾಯಂ ಮಮ ಶಲ್ಯೋ ಮಹಾರಥಃ ॥೨೦॥

ನೀವೆಲ್ಲಾ ನಿಮ್ಮ ನಿಮ್ಮ ಯುದ್ಧೋತ್ಸಾಹಕ್ಕೆ ಅನುಗುಣವಾಗಿ ನಿಮ್ಮ ಪೌರುಷವನ್ನು ತೋರಿಸಿದ್ದೀರಿ. ನನ್ನ ಪಾಲು ಉಳಿದಿದ್ದು, ಮಹಾರಥನಾದ ಶಲ್ಯನು ನನ್ನ ಭಾಗವಾಗಿದ್ದಾನೆ.

ಸೋಽಹಮದ್ಯ ಯುಧಾ ಜೇತುಮ್ ಆಶಂಸೇ ಮದ್ರಕೇಶ್ವರಮ್ ।
ಅತ್ರ ಯನ್ಮಾನಸಂ ಸರ್ವಂ ತದ್ಧಿತಂ ನಿಗದಾಮಿ ವಃ ॥೨೧॥

ಅಂತಹ ನಾನು ಇವತ್ತು ಶಲ್ಯನನ್ನು ಯುದ್ಧದಲ್ಲಿ ಗೆಲ್ಲಲು ಬಯಸುತ್ತೇನೆ. ನನ್ನ ಹಿತವಾದ ಮನೋಽಭಿಪ್ರಾಯವನ್ನು ನಿಮ್ಮ ಮುಂದೆ ಹೇಳುತ್ತೇನೆ.

ಚಕ್ರರಕ್ಷಾವಿಮೌ ಶೂರೌ ಮಮ ಮಾದ್ರವತೀಸುತೌ ।
ಅಜಯ್ಯೌ ವಾಸವೇನಾಪಿ ಸಮರೇ ವೀರಸಮ್ಮತೌ ॥೨೨॥

ಮಾದ್ರಿಯ ಪುತ್ರರಾದ ನಕುಲ-ಸಹದೇವರು ನನ್ನ ರಥದ ಚಕ್ರರಕ್ಷಕರಾಗುವರು. ಇವರಿಬ್ಬರನ್ನು ಯುದ್ಧದಲ್ಲಿ ಗೆಲ್ಲಲು ಇಂದ್ರನಿಗೂ ಅಸಾಧ್ಯವಾಗುವುದು ಎಂಬುದಾಗಿ ವೀರರಿಂದ ಪರಿಗಣಿತರಾಗಿದ್ದಾರೆ.

ಸಾಧ್ವಿಮೌ ಮಾತುಲಂ ಯುದ್ಧೇ ಕ್ಷತ್ರಧರ್ಮಪುರಸ್ಕೃತೌ ।
ಮದರ್ಥೇ ಪ್ರತಿಯುಧ್ಯೇತಾಂ ಮಾನಾರ್ಹೌ ಸತ್ಯಸಂಗರೌ ॥೨೩॥

ಸಾಧುಸ್ವಭಾವದ ಇವರೀರ್ವರೂ ಕ್ಷತ್ರಿಯಧರ್ಮವನ್ನು ಗೌರವಿಸಿ, ನನಗಾಗಿ ಸೋದರಮಾವನ ಜೊತೆಗೇ ಯುದ್ಧಕ್ಕೆ ಸಿದ್ಧರಾಗಿದ್ದಾರೆ. ಯಥಾರ್ಥವಾದ ಯುದ್ಧವನ್ನು ಮಾಡುವ ಇವರು ಗೌರವಕ್ಕೆ ಪಾತ್ರರಾಗಿದ್ದಾರೆ.

ಮಾಂ ವಾ ಶಲ್ಯೋ ರಣೇ ಹಂತಾ ತಂ ವಾಽಹಂ ಭದ್ರಮಸ್ತು ವಃ ।
ಇತಿ ಸತ್ಯಾಮಿಮಾಂ ವಾಚಂ ಲೋಕವೀರಾ ನಿಬೋಧತ ॥೨೪॥

ಯುದ್ಧದಲ್ಲಿ ಒಂದೋ ನನ್ನನ್ನು ಶಲ್ಯನು ಕೊಲ್ಲಬೇಕು ಅಥವಾ ನಾನು ಅವನನ್ನು ಕೊಲ್ಲಬೇಕು. ನಿಮಗೆ ಒಳ್ಳೆಯದಾಗಲಿ. ಈ ಸತ್ಯವಾದ ಮಾತನ್ನು ಲೋಕವೀರರೆನಿಸಿದ ನೀವೆಲ್ಲಾ ತಿಳಿದುಕೊಳ್ಳಿ.

ಯೋತ್ಸ್ಯೇಽಹಂ ಮಾತುಲೇನಾದ್ಯ ಕ್ಷತ್ರಧರ್ಮೇಣ ಪಾರ್ಥಿವಾಃ ।
ಸ್ವಮಂಶಮಭಿಸಂಧಾಯ ವಿಜಯಾಯೇತರಾಯ ಚ ॥೨೫॥

ರಾಜರೇ! ನಾನಿವತ್ತು ಕ್ಷತ್ರಿಯಧರ್ಮಕ್ಕನುಸಾರವಾಗಿ ನನ್ನ ಭಾಗದ ಕರ್ತವ್ಯವನ್ನು ಗಮನದಲ್ಲಿಟ್ಟುಕೊಂಡು ನನ್ನ ಸೋದರಮಾವನ ಜೊತೆಗೆ ಹೋರಾಡುತ್ತೇನೆ. ವಿಜಯವೋ ಅಥವಾ ಸೋಲೋ ಆಗಬಹುದು.

ತಸ್ಯ ಹ್ಯಭ್ಯಧಿಕಂ ಶಸ್ತ್ರಂ ಸರ್ವೋಪಕರಣಾನಿ ಚ ।
ಸಂಯುಜ್ಯಂತಾಂ ರಥೇ ಕ್ಷಿಪ್ರಂ ಶಾಸ್ತ್ರವದ್ ರಥಯೋಜಕೈಃ ॥೨೬॥

ರಥವನ್ನು ಸನ್ನದ್ಧಗೊಳಿಸುವವರು ಉತ್ತಮೋತ್ತಮವಾದ ಶಸ್ತ್ರಗಳನ್ನು, ಇತರ ಸಾಮಗ್ರಿಗಳನ್ನು ರಥದಲ್ಲಿ ಶಾಸ್ತ್ರೋಕ್ತರೀತಿಯಲ್ಲಿ ಬೇಗನೆ ಜೋಡಿಸಲಿ.

ಶೈನೇಯೋ ದಕ್ಷಿಣಂ ಪಕ್ಷಂ ಧೃಷ್ಟದ್ಯುಮ್ನಸ್ತಥೋತ್ತರಮ್ ।
ಪೃಷ್ಠಗೋಪೋ ಭವತ್ವದ್ಯ ಮಮ ಪಾರ್ಥೋ ಧನಂಜಯಃ ॥೨೭॥

ಸಾತ್ಯಕಿಯು ನನ್ನ ಬಲಬಾಗದ ರಕ್ಷಕನಾಗಿರಲಿ. ಧೃಷ್ಟದ್ಯುಮ್ನನು ಎಡಭಾಗದ ರಕ್ಷಕನಾಗಿರಲಿ. ಅರ್ಜುನನು ಇಂದು ನನ್ನ ಹಿಂಭಾಗದ ರಕ್ಷಕನಾಗಲಿ.

ಪುರಸ್ಸರೋ ಮಮಾದ್ಯಾಸ್ತು ಭೀಮಃ ಶಸ್ತ್ರಭೃತಾಂ ವರಃ ।
ಏವಮಭ್ಯಧಿಕಃ ಶಲ್ಯಾದ್ ಭವಿಷ್ಯಾಮಿ ಮಹಾಮೃಧೇ ॥೨೮॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಭೀಮಸೇನನು ಎದುರುಗಡೆ ಇರಲಿ. ಹೀಗೆ ನಾನು ಈ ಮಹಾಯುದ್ಧದಲ್ಲಿ ಶಲ್ಯನಿಗಿಂತ ಅಧಿಕನಾಗುತ್ತೇನೆ.

ಸಂಜಯಃ

ಏವಮುಕ್ತಾಸ್ತಥಾ ಚಕ್ರುಃ ತತೋ ರಾಜ್ಞಃ ಪ್ರಿಯೈಷಿಣಃ ॥೨೯॥

ಸಂಜಯ– ಹೀಗೆ ರಾಜನು ಹೇಳಿದಾಗ ಅವನಿಗೆ ಪ್ರಿಯವಾದುದನ್ನು ಮಾಡುವವರಾಗಿ ಹಾಗೆಯೇ ಮಾಡಿದರು.

ತತಃ ಪ್ರಹರ್ಷಃ ಸೈನ್ಯಾನಾಂ ಪುನರಾಸೀತ್ ತದಾ ನೃಪ ।
ಪಾಂಚಾಲಾನಾಂ ಸೋಮಕಾನಾಂ ಮತ್ಸ್ಯಾನಾಂ ಚ ಮಹಾತ್ಮನಾಮ್ ॥

ರಾಜನೇ! ಅನಂತರ ಮಹಾತ್ಮರಾದ ಪಾಂಚಾಲರ, ಸೋಮಕರ, ಮಾತ್ಸ್ಯರ ಸೈನ್ಯಗಳಲ್ಲಿ ಪುನಃ ಸಂತೋಷವು ಉಂಟಾಯಿತು.

ಪ್ರತಿಜ್ಞಾತಂ ಚ ಸಂಗ್ರಾಮೇ ಧರ್ಮರಾಜಸ್ಯ ಪೂಜಯನ್ ॥೩೧॥

ಅವರೆಲ್ಲರೂ ರಣರಂಗದಲ್ಲಿ ಧರ್ಮರಾಜನು ಮಾಡಿದ ಪ್ರತಿಜ್ಞೆಯನ್ನು ಸ್ವೀಕರಿಸಿದರು.

ತತಃ ಶಂಖಾಂಶ್ಚ ಭೇರೀಶ್ಚ ಶತಶಶ್ಚೈವ ಪುಷ್ಕರಾನ್ ।
ಅವಾದಯಂತ ಪಾಂಚಾಲಾಃ ಸಿಂಹನಾದಾಂಶ್ಚ ನೇದಿರೇ ॥೩೨॥

ಅನಂತರ ಪಾಂಚಾಲರು ಶಂಖಗಳನ್ನೂ, ಭೇರಿಗಳನ್ನೂ, ಪುಷ್ಕರ ವಾದ್ಯಗಳನ್ನೂ ನುಡಿಸಿದರು ಮತ್ತು ಸಿಂಹನಾದವನ್ನು ಮಾಡಿದರು.

ತೇऽಭ್ಯಧಾವಂಶ್ಚ ಸಂರಬ್ಧಾ ಮದ್ರರಾಜಂ ತರಸ್ವಿನಮ್ ॥೩೩॥

ಮಹತಾ ಹರ್ಷಜೇನಾಥ ನಾದೇನ ಕುರುನಂದನ ।
ಹ್ರಾದೇನ ಗಜಘಂಟಾನಾಂ ಶಂಖಾನಾಂ ನಿನದೇನ ಚ ॥೩೪॥

ತೂರ್ಯಶಬ್ದೇನ ಮಹತಾ ನಾದಯಂತಶ್ಚ ಮೇದಿನೀಮ್ ॥೩೫॥

ಅವರು ರೋಷಯುಕ್ತರಾಗಿ ವೇಗವುಳ್ಳ ಶಲ್ಯನ ಮೇಲೆ ಎರಗಿದರು. ಕುರುನಂದನನೇ! ಮಹಾ ಆನಂದದ ಶಬ್ದದಿಂದ, ಆನೆಗಳ ಗಂಟೆಗಳ ಸ್ವರದಿಂದ, ಶಂಖಗಳ ಧ್ವನಿಯಿಂದ ಉಂಟಾದ ಬಹಳವಾದ ವಾದ್ಯಗಳ ಘೋಷದಿಂದ ಭೂಮಿಯನ್ನೆಲ್ಲಾ ನಾದಮಯವನ್ನಾಗಿ ಮಾಡುತ್ತಾ ಶಲ್ಯನನ್ನು ಎದುರಿಸಿದರು.

ತಾನ್ ಪ್ರತ್ಯಗೃಹ್ಣಾತ್ ಪುತ್ರಸ್ತೇ ಮದ್ರರಾಜಶ್ಚ ವೀರ್ಯವಾನ್ ।
ಮಹಾಮೇಘಾನಿವ ಬಹೂನ್ ಶೈಲೌ ದ್ವೌ ತೋಯದಾಗಮೇ ॥೩೬॥

ಹಾಗೆ ಬಂದ ಪಾಂಡವರ ಸೈನ್ಯವನ್ನು ನಿನ್ನ ಮಗನಾದ ದುರ್ಯೋಧನ ಮತ್ತು ಶಲ್ಯನು ತಡೆಹಿಡಿದರು. ಮಳೆಗಾಲದ ಮಹಾಮೇಘಗಳನ್ನು ಎರಡು ಪರ್ವತಗಳು ತಡೆದಂತೆ ಇತ್ತು.

ಶಲ್ಯಸ್ತು ಸಮರಶ್ಲಾಘೀ ಧರ್ಮರಾಜಮರಿಂದಮಮ್ ।
ವವರ್ಷ ಶರವರ್ಷೇಣ ಮಘವಾನಿವ ಪರ್ವತಮ್ ॥೩೭॥

ಯುದ್ಧದಲ್ಲಿ ಪರಮಾಸಕ್ತನಾದ ಶಲ್ಯನಾದರೂ ಶತ್ರುನಾಶಕನಾದ ಧರ್ಮರಾಜನ ಮೇಲೆ ಬಾಣಗಳ ಮಳೆಗೆರೆದನು. ಇಂದ್ರನು ಪರ್ವತಗಳ ಮೇಲೆ ಮಳೆಸುರಿಸಿದಂತಿತ್ತು.

ತಥೈವ ಕುರುರಾಜೋಽಪಿ ಪ್ರಗೃಹ್ಯ ರುಚಿರಂ ಧನುಃ ।
ದ್ರೋಣೋಪದೇಶಾನ್ ವಿವಿಧಾನ್ ದರ್ಶಯಾನೋ ಮಹಾಮನಾಃ ॥

ವವರ್ಷ ಶರವರ್ಷಾಣಿ ಚಿತ್ರಂ ಲಘು ಚ ಸುಷ್ಠು ಚ ॥೩೯॥

ಹಾಗೆಯೇ ಬಹಳ ಮನೋಸ್ಥೈರ್ಯವುಳ್ಳ ಯುಧಿಷ್ಠಿರನೂ ಸುಂದರವಾದ ಬಿಲ್ಲನ್ನು ಎತ್ತಿಕೊಂಡು ದ್ರೋಣಾಚಾರ್ಯರು ಕಲಿಸಿಕೊಟ್ಟ ಅನೇಕ ಅಸ್ತ್ರವಿದ್ಯೆಗಳನ್ನು ತೋರಿಸಿದನು. ಸುಂದರವಾದ ಚಿತ್ರವಿಚಿತ್ರವಾದ ಶೀಘ್ರಗಾಮಿಗಳಾದ ಬಾಣಗಳ ಮಳೆಯನ್ನೇ ಸುರಿಸಿದನು.

ನ ಚಾಸ್ಯ ವಿವರಂ ಕಶ್ಚಿದ್ ದದರ್ಶ ಚರತೋ ರಣೇ ॥೪೦॥

ರಣರಂಗದಲ್ಲಿ ಸಂಚರಿಸುತ್ತಿದ್ದ ಯುಧಿಷ್ಠಿರನ ಯುದ್ಧದಲ್ಲಿ ಯಾರಿಗೂ ಸ್ವಲ್ಪ ಲೋಪವೂ ಕಾಣಿಸಲಿಲ್ಲ. ನಿರಂತರವಾಗಿ ಯುದ್ಧ ಮಾಡುತ್ತಿದ್ದನು.

ತಾವುಭೌ ವಿವಿಧೈರ್ಬಾಣೈಃ ತತಕ್ಷಾತೇ ಪರಸ್ಪರಮ್ ।
ಶಾರ್ದೂಲಾವಾಮಿಷಪ್ರೇಪ್ಸೂ ಪರಾಕ್ರಾಂತಾವಿವಾಹವೇ ॥೪೧॥

ಮಾಂಸವನ್ನು ಬಯಸಿರುವ ಎರಡು ಸಿಂಹಗಳಂತೆ ಅವರಿಬ್ಬರೂ ವಿವಿಧ ರೀತಿಯ ಬಾಣಗಳಿಂದ ಪರಸ್ಪರವಾಗಿ ಗಾಯಗೊಳಿಸಿದರು. ಅವರಿಬ್ಬರೂ ಯುದ್ಧದಲ್ಲಿ ಮಹಾಪರಾಕ್ರಮವನ್ನು ತೋರಿಸುತ್ತಿದ್ದರು.

ಭೀಮಸ್ತು ರಣಶೌಂಡೇನ ತವ ಪುತ್ರೇಣ ಸಂಗತಃ ॥೪೨॥

ಯುದ್ಧನಿಪುಣನಾದ ನಿನ್ನ ಮಗ ದುರ್ಯೋಧನನ ಜೊತೆಗೆ ಭೀಮನು ಯುದ್ಧದಲ್ಲಿ ಒಟ್ಟಾದನು.

ಪಾಂಚಾಲ್ಯಃ ಸಾತ್ಯಕಿಶ್ಚೈವ ತಥಾ ಮಾದ್ರೀಸುತಾವುಭೌ ।
ಶಕುನಿಪ್ರಮುಖಾನ್ ವೀರಾನ್ ಪ್ರತ್ಯಗೃಹ್ಣನ್ ಸಮಂತತಃ ॥೪೩॥

ಧೃಷ್ಟದ್ಯುಮ್ನ, ಸಾತ್ಯಕಿ ಮತ್ತು ನಕುಲ-ಸಹದೇವರು ಶಕುನಿ ಮೊದಲಾದ ವೀರರನ್ನು ಸುತ್ತಲೂ ಎದುರುಗೊಂಡರು.

ತದಾऽऽಸೀತ್ ತುಮುಲಂ ಯುದ್ಧಂ ಪುನರೇವ ಜಯೈಷಿಣಾಮ್ ।
ತಾವಕಾನಾಂ ಪರೇಷಾಂ ಚ ರಾಜನ್ ದುರ್ಮಂತ್ರಿತೇ ತವ ॥೪೪॥

ಆಗ ಮತ್ತೆ ಜಯಕಾಂಕ್ಷಿಗಳಾದ ಅವರಲ್ಲಿ ಘೋರವಾದ ಯುದ್ಧವು ನಡೆಯಿತು. ರಾಜನೇ! ನಿನ್ನ ದುರಾಲೋಚನೆಯಿಂದ ಆರಬ್ಧವಾದ ಯುದ್ಧವು ನಿನ್ನವರು ಮತ್ತು ಪಾಂಡವರ ಮಧ್ಯೆ ಘೋರವಾಗಿ ನಡೆಯಿತು.

ದುರ್ಯೋಧನಸ್ತು ಭೀಮಸ್ಯ ಶರೇಣಾನತಪರ್ವಣಾ ।
ಚಿಚ್ಛೇದೋದ್ದಿಶ್ಯ ಸಂಗ್ರಾಮೇ ಧ್ವಜಂ ಹೇಮವಿಭೂಷಿತಮ್ ॥೪೫॥

ಯುದ್ಧದಲ್ಲಿ ದುರ್ಯೋಧನನು ಬಗ್ಗಿದ ಸಂಧಿಗಳುಳ್ಳ ಬಾಣದಿಂದ ಭೀಮನ ಬಂಗಾರದಿಂದ ಅಲಂಕೃತವಾದ ಧ್ವಜವನ್ನು ತುಂಡರಿಸಿದನು.

ಸಕಿಂಕಿಣೀಕಜಾಲೇನ ಮಹತಾ ಚಾರುದರ್ಶನಃ ।
ಪಪಾತ ರುಚಿರಃ ಸಿಂಹೋ ಭೀಮಸೇನಸ್ಯ ಪಶ್ಯತಃ ॥೪೬॥

ಯುದ್ಧದಲ್ಲಿ ಭೀಮನು ನೋಡುತ್ತಿದ್ದಂತೆಯೇ ಸುಂದರವಾದ ಧ್ವಜವು ಸುಂದರವಾಗಿ ಸಿಂಹದಂತೆ ಶಬ್ದಮಾಡುತ್ತಿದ್ದ ಘಂಟೆಗಳ ಜೊತೆಗೆ ಕೆಳಗೆ ಬಿತ್ತು.

ಪುನಶ್ಚಾಸ್ಯ ಧನುಶ್ಚಿತ್ರಂ ಗಜರಾಜಕರೋಪಮಮ್ ।
ಕ್ಷುರೇಣ ಶಿತಧಾರೇಣ ಪ್ರಚಕರ್ತ ನರಾಧಿಪಃ ॥೪೭॥

ರಾಜ ದುರ್ಯೋಧನನು ಮತ್ತೆ ಪುನಃ ಭೀಮನ ಆನೆಯ ಸೊಂಡಿಲಿನಂತಿದ್ದ ಸುಂದರವಾದ ಬಿಲ್ಲನ್ನು ಹರಿತವಾದ ಅಲಗುಗಳುಳ್ಳ ಕತ್ತಿಯಿಂದ ಕತ್ತರಿಸಿದನು.

ಸಂಛಿನ್ನಧನ್ವಾ ತೇಜಸ್ವೀ ರಥಶಕ್ತ್ಯಾ ಸುತಂ ತವ ।
ಬಿಭೇದೋರಸಿ ವಿಕ್ರಮ್ಯ ರಥೋಪಸ್ಥ ಉಪಾವಿಶತ್ ॥೪೮॥

ಬಿಲ್ಲು ಮುರಿದುಹೋಗಲು ತೇಜಸ್ವಿಯಾದ ಭೀಮನು ಪರಾಕ್ರಮದಿಂದ ರಥಶಕ್ತಿ ಎಂಬ ಆಯುಧದಿಂದ ನಿನ್ನ ಮಗನಾದ ದುರ್ಯೋಧನನ ಎದೆಗೆ ಹೊಡೆದನು. ದುರ್ಯೋಧನನು ರಥದ ಮೇಲೆಯೇ ಕುಸಿದುಬಿದ್ದನು.

ತಸ್ಮಿನ್ ಮೋಹಮನುಪ್ರಾಪ್ತೇ ಪುನರೇವ ವೃಕೋದರಃ ।
ಯಂತುರೇವ ಶಿರಃ ಕಾಯಾತ್ ಕ್ಷುರಪ್ರೇಣಾಹರತ್ ತದಾ ॥೪೯॥

ದುರ್ಯೋಧನನು ಮೂರ್ಛೆಹೊಂದಿದಾಗ ಭೀಮನು ಪುನಃ ಕ್ಷುರಪ್ರ ಸಾಧನದಿಂದ ಸಾರಥಿಯ ತಲೆಯನ್ನು ಕಡಿದನು.

ಹತಸೂತಾ ಹಯಾಸ್ತಸ್ಯ ರಥಮಾದಾಯ ಭಾರತ ।
ವ್ಯದ್ರವಂತ ದಿಶೋ ರಾಜನ್ ಹಾಹಾಕಾರಸ್ತತೋಽಭವತ್ ॥೫೦॥

ಭಾರತನೇ! ರಾಜನೇ! ಸಾರಥಿಯು ಸತ್ತುಬಿದ್ದಾಗ ರಥದ ಕುದುರೆಗಳು ರಥವನ್ನು ಎಳೆದುಕೊಂಡು ದಿಕ್ಕಾಪಾಲಾಗಿ ಓಡಿದವು. ಅದರಿಂದ ಹಾಹಾಕಾರವು ಉಂಟಾಯಿತು.

ತಮಭ್ಯಧಾವಂಸ್ತ್ರಾಣಾರ್ಥಂ ದ್ರೋಣಪುತ್ರೋ ಮಹಾರಥಃ ।
ಕೃಪಶ್ಚ ಕೃತವರ್ಮಾ ಚ ಪುತ್ರಂ ತೇಽಭಿಪರೀಪ್ಸವಃ ॥೫೧॥

ಅವನ ರಕ್ಷಣೆಗಾಗಿ ಮಹಾರಥನಾದ ಅಶ್ವತ್ಥಾಮನು ಓಡಿಬಂದನು. ನಿನ್ನ ಮಗನನ್ನು ರಕ್ಷಿಸುವ ಇಚ್ಛೆಯಿಂದ ಕೃಪ, ಕೃತವರ್ಮ ಮೊದಲಾದವರು ಬಂದರು.

ತಸ್ಮಿನ್ ವಿಲುಲಿತೇ ಸೈನ್ಯೇ ತ್ರಸ್ತಾಸ್ತಸ್ಯ ಪದಾನುಗಾಃ ।
ಗಾಂಡೀವಧನ್ವಾ ವಿಷ್ಫಾರ್ಯ ಧನುಸ್ತಾನಹನಚ್ಛರೈಃ ॥೫೨॥

ಆ ದಿಕ್ಕಾಪಾಲಾದ ಸೈನ್ಯದಲ್ಲಿ ದುರ್ಯೋಧನನ ಪದಾತಿಗಳು ಬಹಳ ಭಯಗ್ರಸ್ಥರಾದರು. ಹೀಗೆ ಹೆದರಿದ ಪದಾತಿಗಳನ್ನು ಗಾಂಡೀವಧಾರಿಯಾದ ಅರ್ಜುನನು ತನ್ನ ಧನುಸ್ಸನ್ನು ಠೇಂಕರಿಸಿ ಬಾಣಗಳನ್ನು ಬಿಟ್ಟು ಸಾಯಿಸಿದನು.

ಯುಧಿಷ್ಠಿರಸ್ತು ಮದ್ರೇಶಮಭ್ಯಧಾವದಮರ್ಷಿತಃ ।
ಸ್ವಯಂ ಸಂಚೋದಯನ್ನಶ್ವಾನ್ ದಂತವರ್ಣಾನ್ ಮನೋಜವಾನ್ ॥

ಸಹನೆ ಕಳೆದುಕೊಂಡಿದ್ದ ಯುಧಿಷ್ಠಿರನು ಶಲ್ಯನನ್ನು ಎದುರಿಸಿದನು. ದಂತದ ಹಾಗೆ ಶ್ವೇತವರ್ಣದ ಮನೋವೇಗವುಳ್ಳ ಕುದುರೆಗಳನ್ನು ಶಲ್ಯನ ರಥದ ಸನಿಹಕ್ಕೆ ಕಳುಹಿಸು ಎಂಬುದಾಗಿ ತನ್ನ ಸಾರಥಿಗೆ ಆದೇಶ ಮಾಡುತ್ತಾ ಶಲ್ಯನ ಸಮೀಪಕ್ಕೆ ಬಂದನು.

ತತ್ರಾದ್ಭುತಮಪಶ್ಯಾಮ ಕುಂತೀಪುತ್ರೋ ಯುಧಿಷ್ಠಿರಃ ।
ಪುರಾ ಭೂತ್ವಾ ಮೃದುರ್ದಾಂತೋ ಯತ್ ತದಾ ದಾರುಣೋಭವತ್ ॥

ನಾವು ಅಲ್ಲೊಂದು ಅದ್ಭುತವನ್ನು ನೋಡಿದೆವು. ಹಿಂದೆ ಮೃದುಸ್ವಭಾವದವನಾಗಿ ಇಂದ್ರಿಯನಿಗ್ರಹವನ್ನು ಕಾಪಾಡಿಕೊಂಡಿದ್ದ ಯುಧಿಷ್ಠಿರನು ಶಲ್ಯನ ಸಮೀಪಕ್ಕೆ ಬಂದಾಗ ಬಹಳ ಕ್ರೂರಿಯಾದನು. ಇದೇ ಆ ಅದ್ಭುತ.

ವಿವೃತಾಕ್ಷಸ್ತು ಕೌಂತೇಯೋ ದೀಪ್ಯಮಾನಸ್ತು ಮನ್ಯುನಾ ।
ಚಿಚ್ಛೇದ ಯೋಧಾನ್ ನಿಶಿತೈಃ ಶರೈಃ ಶತಸಹಸ್ರಶಃ ॥೫೫॥

ಧರ್ಮರಾಜನು ಕೋಪದಿಂದ ಕಣ್ಣುಗಳನ್ನು ತಿರುಗಿಸುತ್ತಾ ಪ್ರಕಾಶಿಸುತ್ತಿದ್ದನು. ಹರಿತವಾದ ಬಾಣಗಳನ್ನು ಪ್ರಯೋಗಿಸಿ ನೂರಾರು-ಸಾವಿರಾರು ಸಂಖ್ಯೆಯಲ್ಲಿ ಯೋಧರನ್ನು ಸಂಹರಿಸಿದನು.

ಯಾಂ ಯಾಂ ಪ್ರತ್ಯುದ್ಯಯೌ ಸೇನಾಂ ತಾಂ ತಾಂ ಜ್ಯೇಷ್ಠಸ್ತು ಪಾಂಡವಃ।
ಶರೈರಪಾತಯದ್ ರಾಜನ್ ಗಿರೀನ್ ವಜ್ರೈರಿವೋತ್ತಮೈಃ ॥೫೬॥

ರಾಜನೇ! ಇಂದ್ರನು ಎದುರಿಗೆ ಬಂದ ಪರ್ವತಗಳನ್ನೆಲ್ಲಾ ತನ್ನ ವಜ್ರಾಯುಧದಿಂದ ಪುಡಿಮಾಡಿದ. ಅದೇ ರೀತಿಯಲ್ಲಿ ಧರ್ಮರಾಜನೂ ಕೂಡ ಯಾವ ಯಾವ ಸೈನ್ಯವು ಎದುರಿಗೆ ಬರುತ್ತಿತ್ತೋ ಆ ಆ ಸೇನೆಯನ್ನು ಬಾಣಗಳಿಂದ ಕೆಳಗೆ ಬೀಳಿಸಿದನು.

ಸಾಶ್ವಸೂತಧ್ವಜವರಾನ್ ರಥಿನೋಽಪಾತಯದ್ ಬಹೂನ್ ।
ಆಕ್ರೀಡದೇಕೋ ಬಲವಾನ್ ಪವನಸ್ತೋಯದೈರಿವ ॥೫೭॥

ಯುಧಿಷ್ಠಿರನು ಒಬ್ಬಂಟಿಯಾಗಿಯೇ ಅಶ್ವ-ಸಾರಥಿ-ಧ್ವಜ ಸಹಿತವಾಗಿ ಅನೇಕ ರಥಿಕಯೋಧರನ್ನು ಸಾಯಿಸಿದ. ಹೀಗೆ ಜೋರಾದ ಗಾಳಿಯು ಮೋಡಗಳೊಡನೆ ಆಟ ಆಡುವಂತೆ ತಾನೂ ಆಟವಾಡಿದ.

ಸಾಶ್ವಾರೋಹಾಂಶ್ಚ ತುರಗಾನ್ ಪತ್ತೀನ್ ನೈಕಸಹಸ್ರಶಃ ।
ವ್ಯಪೋಥಯತ ಸಂಗ್ರಾಮೇ ಕ್ರುದ್ಧೋ ರುದ್ರಃ ಪಶೂನಿವ ॥೫೮॥

ಹಾಗೆಯೇ ಕ್ರುದ್ಧನಾದ ಯುಧಿಷ್ಠಿರನು ಅನೇಕ ಸಂಖ್ಯೆಯ ಅಶ್ವಾರೋಹಿಗಳನ್ನು, ಕುದುರೆಗಳನ್ನು, ಪದಾತಿಗಳನ್ನು ಯುದ್ಧದಲ್ಲಿ ಪುಡಿಗೈದ. ಇದು ಕ್ರುದ್ಧನಾದ ರುದ್ರನು ಪಶುಗಳನ್ನು ಸದೆಬಡಿಯುವಂತೆ ಇತ್ತು.

ಶೂನ್ಯಮಾಯೋಧನಂ ಕೃತ್ವಾ ಶರವರ್ಷೈಃ ಸಮಂತತಃ ।
ಅಭ್ಯಧಾವತ ಮದ್ರೇಶಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೫೯॥

ಹೀಗೆ ಎಲ್ಲಾ ಕಡೆಯೂ ಬಾಣಗಳ ಮಳೆಯನ್ನು ಸುರಿಸಿ, ರಣರಂಗವನ್ನು ಖಾಲಿಮಾಡಿ, ಶಲ್ಯ! ನಿಲ್ಲು! ಎಂದು ಹೇಳುತ್ತಾ ಶಲ್ಯನ ಕಡೆಗೆ ಧಾವಿಸಿದನು.

ತಸ್ಯ ತಚ್ಚರಿತಂ ದೃಷ್ಟ್ವಾ ಸಂಗ್ರಾಮೇ ಭೀಮಕರ್ಮಣಃ ।
ವಿತ್ರೇಸುಸ್ತಾವಕಾಃ ಸರ್ವೇ ಶಲ್ಯಸ್ತ್ವೇನಂ ಸಮಭ್ಯಯಾತ್ ॥೬೦॥

ಭಯಂಕರವಾಗಿ ಹೋರಾಡುತ್ತಿದ್ದ ಯುಧಿಷ್ಠಿರನ ಯುದ್ಧದಲ್ಲಿ ಆ ಕಾರ್ಯವನ್ನು ನೋಡಿ ನಿನ್ನ ಕಡೆಯವರೆಲ್ಲಾ ಭಯಗ್ರಸ್ಥರಾದರು. ಇಂತಹ ಧರ್ಮರಾಜನನ್ನು ಶಲ್ಯನು ಎದುರಿಸಿದನು.

ತತಸ್ತು ತೌ ಸುಸಂರಬ್ಧೌ ಪ್ರಧ್ಮಾಪ್ಯ ಸಲಿಲೋದ್ಭವೌ ।
ಸಮಾಹೂಯ ತದಾಽನ್ಯೋನ್ಯಂ ಭರ್ತ್ಸಯಂತೌ ಸಮೀಯತುಃ ॥೬೧॥

ಅನಂತರ ಮಹಾಗರ್ವಿಷ್ಠರಾದ ಶಲ್ಯ-ಯುಧಿಷ್ಠಿರರು ಶಂಖನಾದವನ್ನು ಮಾಡಿದರು. ಪರಸ್ಪರ ಸಂಬೋಧಿಸಿಕೊಂಡು ಬೈಯ್ದುಕೊಳ್ಳುತ್ತಾ ಸಮೀಪಿಸಿದರು.

ಶಲ್ಯಸ್ತು ಶರವರ್ಷೇಣ ಯುಧಿಷ್ಠಿರಮಪೀಡಯತ್ ।
ಮದ್ರರಾಜಂ ಚ ಕೌಂತೇಯಃ ಶರವರ್ಷೈರವಾಕಿರತ್ ॥೬೨॥

ಶಲ್ಯನಾದರೂ ಬಾಣಗಳ ಮಳೆಗೆರೆದು ಯುಧಿಷ್ಠಿರನನ್ನು ಪೀಡಿಸಿದನು. ಹಾಗೆಯೇ ಯುಧಿಷ್ಠಿರನೂ ಶಲ್ಯನ ಮೇಲೆ ಬಾಣಗಳ ಸುರಿಮಳೆಯನ್ನು ಸುರಿಸಿದನು.

ವ್ಯದೃಶ್ಯೇತಾಂ ತದಾ ರಾಜನ್ ಕಂಕಪತ್ರಿಭಿರಾಹವೇ ।
ಉದ್ಭಿನ್ನರುಧಿರೌ ತತ್ರ ಮದ್ರರಾಜಯುಧಿಷ್ಠಿರೌ ॥೬೩॥

ರಾಜನೇ! ಆಗ ಯುದ್ಧದಲ್ಲಿ ಕಂಕಪತ್ರವುಳ್ಳ ಬಾಣಗಳಿಂದಾಗಿ ಧರ್ಮರಾಜ ಮತ್ತು ಶಲ್ಯರಿಬ್ಬರ ದೇಹದಿಂದಲೂ ರಕ್ತವು ಕೋಡಿ ಹರಿಯಿತು.

ಪುಷ್ಪಿತಾವಿವ ರಾಜಂತೌ ವನೇ ಶಾಲ್ಮಲಿಕಿಂಶುಕೌ ।
ದೀಪ್ಯಮಾನೌ ಮಹಾತ್ಮಾನೌ ಪ್ರಾಣದ್ಯೂತೇಷು ದುರ್ಮದೌ ॥೬೪॥

ಕಾಡಿನಲ್ಲಿ ಹೂಬಿಟ್ಟ ಶಾಲ್ಮಲೀ ವೃಕ್ಷ ಮತ್ತು ಪಲಾಶವೃಕ್ಷದ ಹಾಗೆ ಶೋಭಿಸುತ್ತಿದ್ದರು. ಪ್ರಾಣವನ್ನೇ ಒತ್ತೆಯಿಟ್ಟು ಗರ್ವದಿಂದ ಹೋರಾಡುತ್ತಿದ್ದ ಆ ಮಹಾತ್ಮರು ಆ ರೀತಿಯಲ್ಲಿ ಪ್ರಕಾಶಿಸುತ್ತಿದ್ದರು.

ದೃಷ್ಟ್ವಾ ಸೈನ್ಯಾನಿ ಸರ್ವಾಣಿ ನಾಧ್ಯವಸ್ಯಂಸ್ತಯೋರ್ಜಯಮ್ ।
ಹತ್ವಾ ಮದ್ರಾಧಿಪಂ ಪಾರ್ಥೋ ಭೋಕ್ಷ್ಯತೇऽದ್ಯ ವಸುಂಧರಾಮ್ ॥

ಶಲ್ಯೋ ವಾ ಪಾಂಡವಂ ಹತ್ವಾ ದದ್ಯಾದ್ ದುರ್ಯೋಧನಾಯ ಗಾಮ್ ।
ಇತಿ ವಾ ನಿಶ್ಚಯೋ ನಾಭೂದ್ ಯೋಧಾನಾಂ ತತ್ರ ಭಾರತ ॥೬೬॥

ಭರತವಂಶೋದ್ಭವನೇ! ಎಲ್ಲಾ ಸೈನ್ಯಗಳು ಈ ಯುದ್ಧವನ್ನು ನೋಡಿ ಅವರಿಬ್ಬರಲ್ಲಿ ಜಯವನ್ನು ನಿರ್ಣಯಿಸಲು ಅಸಮರ್ಥವಾದವು. ಯುಧಿಷ್ಠಿರನು ಶಲ್ಯನನ್ನು ಕೊಂದು ಭೂಮಿಯನ್ನು ಭೋಗಿಸುತ್ತಾನೋ? ಅಥವಾ ಶಲ್ಯನೇ ಧರ್ಮರಾಜನನ್ನು ಸಾಯಿಸಿ ದುರ್ಯೋಧನನಿಗೆ ಭೂಮಿಯನ್ನು ಕೊಡಿಸುತ್ತಾನೆಯೋ? ಈ ರೀತಿಯಲ್ಲಿ ಯೋಧರು ಯಾವುದನ್ನೂ ನಿರ್ಣಯ ಮಾಡಲು ಅಸಮರ್ಥರಾದರು.

ಪ್ರದಕ್ಷಿಣಮಭೂತ್ ಸರ್ವಂ ಧರ್ಮರಾಜಸ್ಯ ಯುಧ್ಯತಃ ।
ತತಃ ಶರಶತಂ ಶಲ್ಯೋ ಮುಮೋಚಾಶು ಯುಧಿಷ್ಠಿರೇ ॥೬೭॥

ಯುದ್ಧಮಾಡುತ್ತಿದ್ದ ಧರ್ಮರಾಜನಿಗೆ ಎಲ್ಲಾ ವಿಷಯಗಳು ಹಾಗೂ ಪರಿಸ್ಥಿತಿಯು ಅನುಕೂಲಕರವಾಗಿದ್ದವು. ಅನಂತರ ಶಲ್ಯನು ಯುಧಿಷ್ಠಿರನ ಮೇಲೆ ನೂರು ಬಾಣಗಳನ್ನು ಬೇಗನೇ ಪ್ರಯೋಗಿಸಿದನು.

ಧನುಶ್ಚಾಸ್ಯ ಶಿತಾಗ್ರೇಣ ಬಾಣೇನ ನಿರಕೃಂತತ ॥೬೮॥

ಯುಧಿಷ್ಠಿರನ ಬಿಲ್ಲನ್ನು ಹರಿತವಾದ ಅಗ್ರವುಳ್ಳ ಬಾಣದಿಂದ ತುಂಡರಿಸಿದನು.

ಸೋಽನ್ಯತ್ ಕಾರ್ಮುಕಮಾದಾಯ ಶಲ್ಯಂ ಶರಶತೈಸ್ತ್ರಿಭಿಃ ।
ಅವಿಧ್ಯತ್ ಕಾರ್ಮುಕಂ ತಸ್ಯ ಕ್ಷುರಪ್ರೇಣ ನ್ಯಕೃಂತತ ॥೬೯॥

ಧರ್ಮರಾಜನು ಮತ್ತೊಂದು ಬಿಲ್ಲನ್ನು ತೆಗೆದುಕೊಂಡು ಶಲ್ಯನ ಮೇಲೆ ಮುನ್ನೂರು ಬಾಣಗಳನ್ನು ಪ್ರಯೋಗಿಸಿದನು. ಹಾಗೂ ಶಲ್ಯನ ಬಿಲ್ಲನ್ನು ಕ್ಷುರಪ್ರದಿಂದ ತುಂಡರಿಸಿದನು.

ಅಥಾಸ್ಯ ನಿಜಘಾನಾಶ್ವಾನ್ ಚತುರೋ ನತಪರ್ವಭಿಃ ।
ದ್ವಾಭ್ಯಾಮಥ ಶಿತಾಗ್ರಾಭ್ಯಾಮುಭೌ ವೈ ಪಾರ್ಷ್ಣಿಸಾರಥೀ ॥೭೦॥

ಅನಂತರ ಬಗ್ಗಿದ ಸಂಧಿಗಳುಳ್ಳ ಬಾಣಗಳಿಂದ ಅವನ ರಥದ ನಾಲ್ಕು ಕುದುರೆಗಳನ್ನು ಸಾಯಿಸಿದನು. ಚೂಪಾದ ಅಗ್ರವುಳ್ಳ ಎರಡು ಬಾಣಗಳಿಂದ ಪಾರ್ಶ್ವರಕ್ಷಕರನ್ನು ಮತ್ತು ಸಾರಥಿಯನ್ನು ಸಾಯಿಸಿದನು.

ತತೋಽಸ್ಯ ದೀಪ್ಯಮಾನೇನ ಪೀತೇನ ನಿಶಿತೇನ ಚ ।
ಪ್ರಮುಖೇ ವರ್ತಮಾನಸ್ಯ ಭಲ್ಲೇನಾಪಾಹರದ್ ಧ್ವಜಮ್ ॥೭೧॥

ಅನಂತರ ಪ್ರಕಾಶಿಸುತ್ತಿರುವ ಹಳದಿಬಣ್ಣದ ಹರಿತವಾದ ಭಲ್ಲೆಯಿಂದ ಮುಂದುಗಡೆ ಇದ್ದ ಶಲ್ಯನ ಧ್ವಜವನ್ನು ತುಂಡರಿಸಿದನು.

ತತಃ ಪ್ರಭಗ್ನಂ ತತ್ಸೈನ್ಯಂ ಧಾರ್ತರಾಷ್ಟ್ರಮರಿಂದಮ ॥೭೨॥

ಶತ್ರುಸಂಹಾರಕನೇ! ಅನಂತರ ಕೌರವರ ಸೈನ್ಯವು ನಾಶವಾಯಿತು.

ತತೋ ಮದ್ರಾಧಿಪಂ ದ್ರೌಣಿರಭ್ಯಧಾವತ್ ತಥಾ ಕೃತಮ್ ।
ಆರೋಪ್ಯ ಚೈನಂ ಸ್ವರಥಂ ತ್ವರಮಾಣಃ ಪ್ರದುದ್ರುವೇ ॥೭೩॥

ಹೀಗೆ ಮಾಡಲ್ಪಟ್ಟ ಶಲ್ಯನನ್ನು ಅಶ್ವತ್ಥಾಮನು ಸಮೀಪಿಸಿ, ತನ್ನ ರಥದಲ್ಲಿ ಏರಿಸಿಕೊಂಡು ಬೇಗನೇ ಅಲ್ಲಿಂದ ಓಡಿಹೋದನು.

ಮುಹೂರ್ತಮಿವ ತಾನ್ ಹತ್ವಾ ನರ್ದಮಾನೇ ಯುಧಿಷ್ಠಿರೇ ।
ಸ್ಥಿತ್ವಾ ತತೋ ಮದ್ರಪತಿರನ್ಯಂ ಸ್ಯಂದನಮಾಸ್ಥಿತಃ ॥೭೪॥

ಧರ್ಮರಾಜನು ಕೌರವಸೇನೆಯನ್ನು ಕೊಂದು ವೀರನಾದವನ್ನು ಮಾಡುತ್ತಿರಲು ಶಲ್ಯನು ಒಂದು ಮುಹೂರ್ತಕಾಲ ಸುಮ್ಮನಿದ್ದು, ಅನಂತರ ಮತ್ತೊಂದು ರಥವನ್ನು ಏರಿ ಯುದ್ಧಕ್ಕೆ ಸನ್ನದ್ಧನಾಗಿ ನಿಂತನು.

ವಿಧಿವತ್ ಕಲ್ಪಿತಂ ಶುಭ್ರಂ ಮಹಾಂಬುದನಿನಾದಿನಮ್ ।
ನ್ಯಸ್ತಯಂತ್ರೋಪಕರಣಂ ದ್ವಿಷತಾಂ ರೋಮಹರ್ಷಣಮ್ ॥೭೫॥

ಆ ರಥವು ಶಾಸ್ತ್ರೋಕ್ತರೀತಿಯಲ್ಲಿ ನಿರ್ಮಿತವಾಗಿತ್ತು. ಶುಭ್ರವಾದ ಆ ರಥವು ದೊಡ್ಡ ಮೇಘದ ಧ್ವನಿಯನ್ನು ಹುಟ್ಟಿಸುತ್ತಿತ್ತು. ಯುದ್ಧಕ್ಕೆ ಬೇಕಾದ ಸಾಮಗ್ರಿಗಳು ಹಾಗೂ ಬಿಡಿಭಾಗಗಳು ಚೆನ್ನಾಗಿ ಜೋಡಿಸಲ್ಪಟ್ಟಿದ್ದವು. ಹೀಗೆ ಈ ರಥವು ಶತ್ರುಗಳಿಗೆ ಭಯದಿಂದ ರೋಮಾಂಚನವನ್ನುಂಟು ಮಾಡುತ್ತಿತ್ತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಲ್ಯಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೇಳನೆಯ ಅಧ್ಯಾಯ

ಯುಧಿಷ್ಠಿರ-ಶಲ್ಯರ ಯುದ್ಧ, ಯುಧಿಷ್ಠಿರನಿಂದ ಶಲ್ಯನ ವಧೆ

ಸಂಜಯಃ

ಸುಕೂಬರಂ ಸುಚಕ್ರಾಕ್ಷಂ ವಿಧೇಯಾಶ್ವಂ ಸುಸಾರಥಿಮ್ ॥೧॥

ಅಥಾನ್ಯದ್ ಧನುರಾದಾಯ ಬಲವದ್ವೇಗವತ್ತರಮ್ ।
ಯುಧಿಷ್ಠಿರಂ ಮದ್ರಪತಿಃ ವಿದ್ಧ್ವಾ ಸಿಂಹ ಇವಾನದತ್ ॥೨॥

ಸಂಜಯ– ಮದ್ರರಾಜ ಶಲ್ಯನ ರಥದ ಯುಗಬಂಧನಸ್ಥಾನ, ಚಕ್ರ, ಚಕ್ರದ ಆಚ್ಚು ಅಶ್ವಗಳು, ಸಾರಥಿ ಇವೆಲ್ಲವೂ ಸನ್ನದ್ಧವಾಗಿದ್ದವು. ಇಂತಹ ರಥದಲ್ಲಿ ಇದ್ದುಕೊಂಡು

ಶಲ್ಯನು ಇನ್ನೊಂದು ಬಿಲ್ಲನ್ನು ಎತ್ತಿಕೊಂಡು ಬಲಶಾಲಿ ಯುಧಿಷ್ಠಿರನನ್ನು ಹೊಡೆದನು. ಸಿಂಹಗರ್ಜನೆಯನ್ನು ಮಾಡಿದನು.

ತತಃ ಸ ಶರವರ್ಷೇಣ ಪರ್ಜನ್ಯ ಇವ ವೃಷ್ಟಿಮಾನ್ ।
ಅಭ್ಯವರ್ಷದಮೇಯಾತ್ಮಾ ಕ್ಷತ್ರಿಯಾನ್ ಕ್ಷತ್ರಿಯರ್ಷಭಃ ॥೩॥

ಕ್ಷತ್ರಿಯೋತ್ತಮನಾದ ಶಲ್ಯನು, ಪರ್ಜನ್ಯನು ಮಳೆಗರೆಯುವಂತೆ ಬಾಣಗಳ ಮಳೆಯನ್ನು ಸುರಿಸಿ, ಕ್ಷತ್ರಿಯರ ಮೇಲೆ ಬಾಣಪ್ರಯೋಗವನ್ನು ಮಾಡಿದನು. ಅವನ ಸಾಮರ್ಥ್ಯವು ಎಣಿಕೆಗೆ ನಿಲುಕಲಾಗದ್ದು.

ಸಾತ್ಯಕಿಂ ದಶಭಿರ್ವಿದ್ಧ್ವಾ ಭೀಮಸೇನಂ ತ್ರಿಭಿಃ ಶರೈಃ ।
ಸಹದೇವಂ ತ್ರಿಭಿರ್ವಿದ್ಧ್ವಾ ಯುಧಿಷ್ಠಿರಮಪೀಡಯತ್ ॥೪॥

ಹತ್ತು ಬಾಣಗಳಿಂದ ಸಾತ್ಯಕಿಯನ್ನೂ, ಮೂರು ಬಾಣಗಳಿಂದ ಭೀಮನನ್ನೂ, ಮೂರು ಬಾಣಗಳಿಂದ ಸಹದೇವನನ್ನೂ ಹೊಡೆದು ಧರ್ಮರಾಜನನ್ನು ಪೀಡಿಸಿದನು.

ತಾಂಸ್ತಾನನ್ಯಾನ್ ಮಹೇಷ್ವಾಸಾನ್ ಸಾಶ್ವಾನ್ ಸರಥಕುಂಜರಾನ್ ।
ಅರ್ದಯಾಮಾಸ ವಿಶಿಖೈಃ ಮದ್ರರಾಜಃ ಪ್ರತಾಪವಾನ್ ॥೫॥

ಪ್ರತಾಪಿಯಾದ ಶಲ್ಯನು ಸಾತ್ಯಕಿ ಮೊದಲಾದವರು ಹಾಗೂ ಬೇರೆ ಬಿಲ್ಗಾರರನ್ನೂ ಹರಿತವಾದ ಬಾಣಗಳಿಂದ ಅಶ್ವ-ರಥಸಹಿತವಾಗಿ ಹೊಡೆದುರುಳಿಸಿದನು.

ಕುಂಜರಾನ್ ಕುಂಜರಾರೋಹಾನ್ ಅಶ್ವಾನಶ್ವಪ್ರಧಾವಿನಃ ।
ರಥಾಂಶ್ಚ ರಥಿಭಿಃ ಸಾರ್ಧಂ ಜಘಾನ ರಥಿನಾಂ ವರಃ ॥೬॥

ರಥಿಕರಲ್ಲೇ ಶ್ರೇಷ್ಠನಾದ ಶಲ್ಯನು ಆನೆಗಳನ್ನೂ, ಆನೆಸವಾರರನ್ನೂ, ಅಶ್ವಗಳನ್ನೂ ಅಶ್ವಾರೋಹಿಗಳನ್ನೂ, ರಥಗಳನ್ನೂ, ರಥಿಕರನ್ನೂ ನಾಶಮಾಡಿದನು.

ಬಾಹೂಂಶ್ಚ ಚಿಚ್ಛೇದ ತದಾ ಸಾಯುಧಾನ್ ಕೇತನಾನಿ ಚ ।
ಚಕಾರ ಚ ಮಹೀಂ ಯೋಧೈಸ್ತೀರ್ಣಾಂ ವೇದೀಂ ಕುಶೈರಿವ ॥೭॥

ಆ ಯುದ್ಧದಲ್ಲಿ ಆಯುಧಧಾರಿಗಳ ಕೈಗಳನ್ನು ಆಯುಧಸಮೇತವಾಗಿ ತುಂಡರಿಸಿದ. ಹಾಗೆಯೇ ಧ್ವಜಗಳನ್ನೂ ತುಂಡು ಮಾಡಿದನು. ನೆಲದ ಮೇಲೆಲ್ಲಾ ಯೋಧರು ಸತ್ತು ಬಿದ್ದಿದ್ದು ನೋಡಿದರೆ ಯಜ್ಞವೇದಿಕೆಯು ದರ್ಭೆಯಿಂದ ಹಾಸಲ್ಪಟ್ಟಂತಿತ್ತು.

ತಥಾ ತಮರಿಸೈನ್ಯಾನಿ ಘ್ನಂತಂ ಮೃತ್ಯುಮಿವಾಂತಕಮ್ ।
ಪರಿವವ್ರುರ್ಭೃಶಂ ಕ್ರುದ್ಧಾಃ ಪಾಂಡುಪಾಂಚಾಲಸೋಮಕಾಃ ॥೮॥

ಹೀಗೆ ಶತ್ರುಸೈನ್ಯಗಳನ್ನು ನಾಶಮಾಡುತ್ತಿರುವ, ಯಮನಂತೆ ಇರುವ ಶಲ್ಯನನ್ನು ಪಾಂಡವರು, ಪಾಂಚಾಲರು ಮತ್ತು ಸೋಮಕರು ಬಹಳ ಕೋಪದಿಂದ ಸುತ್ತುವರಿದರು.

ಸಂಜಯಃ

ತಂ ಭೀಮಸೇನಶ್ಚ ಶಿನೇಶ್ಚ ನಪ್ತಾ
ಮಾದ್ರ್ಯಾಶ್ಚ ಪುತ್ರೌ ಪುರುಷಪ್ರವೀರೌ ।
ಸಮಾಪತನ್ ಭೀಮಬಲೇನ ರಾಜನ್
ಪರ್ಯಾಪುರನ್ಯೋನ್ಯಮಥಾಹ್ವಯಂತಃ ॥೯॥

ಸಂಜಯ– ರಾಜನೇ! ಆ ಶಲ್ಯನನ್ನು ಭೀಮಸೇನ, ಶಿನಿಯ ಮೊಮ್ಮಗ ಸಾತ್ಯಕಿ, ಮಾದ್ರಿಯ ಕುಮಾರರಾದ, ಪುರುಷೋತ್ತಮರಾದ ನಕುಲ-ಸಹದೇವ ಇವರೆಲ್ಲರೂ ಭಯಂಕರವಾದ ಬಲದೊಂದಿಗೆ ಎದುರಿಸಿ ಬಂದರು. ಶಲ್ಯನೊಡನೆ ದ್ವಂದ್ವಯುದ್ಧಕ್ಕೆ ಆಹ್ವಾನವನ್ನು ಕೊಟ್ಟರು.

ತತಸ್ತು ಶೂರಾಃ ಸಮರೇ ನರೇಂದ್ರಾ
ಮದ್ರೇಶ್ವರಂ ಪ್ರಾಪ್ಯ ಯುಧಾಂ ವರಿಷ್ಠಮ್ ।
ಆವಾರ್ಯ ಚೈನಂ ಸಮರೇ ನೃವೀರಾ
ಜಘ್ನುಃ ಶಿತೈಃ ಪತ್ರಿಭಿರುಗ್ರವೇಗೈಃ ॥೧೦॥

ಅನಂತರ ಶೂರರಾದ ರಾಜರುಗಳು ಯುದ್ಧದಲ್ಲಿ ಶ್ರೇಷ್ಠನಾದ ಶಲ್ಯನ ಬಳಿಗೆ ಬಂದು ಅವನನ್ನು ಸುತ್ತುವರಿದರು ಮತ್ತು ಹರಿತವಾದ ಹಾಗೂ ಬಹು ವೇಗವುಳ್ಳ ಬಾಣಗಳಿಂದ ಹೊಡೆದರು.

ಸಂರಕ್ಷಿತೋ ಭೀಮಸೇನೇನ ರಾಜಾ
ಮಾದ್ರೀಸುತಾಭ್ಯಾಮಥ ಮಾಧವೇನ ।
ಮದ್ರಾಧಿಪಂ ಪತ್ರಿಭಿರುಗ್ರವೇಗೈಃ
ಸ್ತನಾಂತರೇ ಧರ್ಮಸುತೋ ನಿಜಘ್ನೇ ॥೧೧॥

ಭೀಮಸೇನ, ನಕುಲ-ಸಹದೇವ ಹಾಗೂ ಸಾತ್ಯಕಿಯ ರಕ್ಷಣೆಯಲ್ಲಿ ಇದ್ದ ಧರ್ಮರಾಜನು ಉಗ್ರವೇಗವುಳ್ಳ ಬಾಣಗಳಿಂದ ಶಲ್ಯನ ಎದೆಗೆ ಚೆನ್ನಾಗಿ ಹೊಡೆದನು.

ಸರ್ವೇऽಪಿ ಭೀಮಪ್ರಮುಖಾಶ್ಚ ವೀರಾಃ
ಶಲ್ಯಂ ಸಮಭ್ಯೇತ್ಯ ತತೋ ನಿಜಘ್ನುಃ ॥೧೨॥

ಅನಂತರ ಭೀಮಸೇನ ಮೊದಲಾದ ಎಲ್ಲಾ ವೀರರೂ ಶಲ್ಯನನ್ನು ಹೊಡೆದರು.

ತತೋ ರಣೇ ತಾವಕಾನಾಂ ರಥೌಘಾಃ
ಸಮೀಕ್ಷ್ಯ ಮದ್ರಾಧಿಪತಿಂ ಶರಾರ್ತಮ್ ।
ಪರ್ಯಾವವ್ರುಃ ಪ್ರವರಾಃ ಸರ್ವಯೋಧಾ
ದುರ್ಯೋಧನಸ್ಯಾನುಮತೇ ಸಮಂತಾತ್ ॥೧೩॥

ಅನಂತರ ಯುದ್ಧದಲ್ಲಿ ಶಲ್ಯನು ಬಾಣಗಳಿಂದ ಘಾಸಿಗೊಂಡಿದ್ದನ್ನು ನೋಡಿದ ನಿನ್ನ ಕಡೆಯ ರಥಸಮೂಹ ಹಾಗೂ ಉತ್ತಮ ಯೋಧರು ದುರ್ಯೋಧನನ ಆದೇಶದಂತೆ ಎಲ್ಲಾ ಕಡೆಗಳಿಂದ ಸುತ್ತುವರಿದರು.

ತತೋ ದ್ರುತಂ ಮದ್ರಜನಾಧಿಪೋ ರಣೇ
ಯುಧಿಷ್ಠಿರಂ ಸಪ್ತಭಿಃ ಪ್ರತ್ಯವಿಧ್ಯತ್ ।
ತಂ ಚಾಪಿ ಪಾರ್ಥೋ ನವಭಿಃ ಪೃಷತ್ಕೈಃ
ವಿವ್ಯಾಧ ರಾಜಂಸ್ತುಮುಲೇ ಮಹಾತ್ಮಾ ॥೧೪॥

ಅನಂತರ ಯುದ್ಧದಲ್ಲಿ ಶಲ್ಯನು ಬೇಗನೇ ಯುಧಿಷ್ಠಿರನನ್ನು ಏಳು ಬಾಣಗಳಿಂದ ಹೊಡೆದನು. ರಾಜನೆ! ಆ ದ್ವಂದ್ವಯುದ್ಧದಲ್ಲಿ ಮಹಾತ್ಮನಾದ ಧರ್ಮರಾಜನೂ ಒಂಬತ್ತು ಬಾಣಗಳಿಂದ ಶಲ್ಯನನ್ನು ಹೊಡೆದನು.

ಆಕರ್ಣಪೂರ್ಣಾಯತಸಂಪ್ರಯುಕ್ತೈಃ
ಶರೈಸ್ತದಾ ಸಂಯತಿ ತೈಲಧೌತೈಃ ।
ಅನ್ಯೋನ್ಯಮಾಚ್ಛಾದಯತಾಂ ಮಹಾರಥೌ
ಮದ್ರಾಧಿಪಶ್ಚಾಪಿ ಯುಧಿಷ್ಠಿರಶ್ಚ ॥೧೫॥

ಮಹಾರಥರಾದ ಶಲ್ಯ ಮತ್ತು ಯುಧಿಷ್ಠಿರರು ಪರಸ್ಪರವಾಗಿ ದ್ವಂದ್ವಯುದ್ಧದಲ್ಲಿ ತೊಡಗಿದ್ದರು. ಆ ಯುದ್ಧದಲ್ಲಿ ಇಬ್ಬರೂ ತೈಲವನ್ನು ಲೇಪಿಸಿದ ಶರಗಳನ್ನು ಬಿಲ್ಲಿನ ಹಗ್ಗವನ್ನು ಕಿವಿಯ ತನಕ ಎಳೆದು ಪ್ರಯೋಗಿಸಿ ಪರಸ್ಪರವಾಗಿ ಬಾಣಗಳಿಂದ ಆಚ್ಛಾದಿಸಿದರು.

ತತಸ್ತು ತೂರ್ಣಂ ಸಮರೇ ಮಹಾರಥೌ
ಪರಸ್ಪರಸ್ಯಾಂತರಮೀಕ್ಷಮಾಣೌ ।
ಶರೈರ್ಭೃಶಂ ವಿವ್ಯಧತುರ್ನರೋತ್ತಮೌ
ಮಹಾಬಲೌ ಶತ್ರುಭಿರಪ್ರಧೃಷ್ಯೌ ॥೧೬॥

ಅನಂತರ ಯುದ್ಧದಲ್ಲಿ ಮಹಾರಥರಾದ, ನೃಪಶ್ರೇಷ್ಠರೂ ಆದ ಅವರಿಬ್ಬರೂ ಪರಸ್ಪರವಾಗಿ ಹೊಡೆಯಲು ಅವಕಾಶವನ್ನು ನಿರೀಕ್ಷಿಸುತ್ತಿದ್ದರು. ಬಲಶಾಲಿಗಳಾದ ಅವರು ಶತ್ರುಗಳಿಗೆ ವಶರಾಗಲು ಅಸಾಧ್ಯರು. ಅವರು ಪರಸ್ಪರವಾಗಿ ಬಾಣಗಳಿಂದ ಗುರಿ ಇಟ್ಟು ಹೊಡೆದರು.

ತತೋ ಧನುರ್ಜ್ಯಾತಲನಿಃಸ್ವನೋ ಮಹಾನ್
ಮಹೇಂದ್ರವಜ್ರಾಶನಿತುಲ್ಯನಿಃಸ್ವನಃ ।
ಪರಸ್ಪರಂ ಬಾಣಶತೈರ್ಮಹಾತ್ಮನೋಃ
ಪ್ರವರ್ಷತೋರ್ಮದ್ರಪಪಾಂಡವಾಗ್ರ್ಯಯೋಃ ॥೧೭॥

ಅನಂತರ ಬಿಲ್ಲಿನ ಹಗ್ಗವನ್ನು ಎಳೆಯುವ ಧ್ವನಿಯು ಇಂದ್ರನ ವಜ್ರಾಯುಧದ ಧ್ವನಿಯಂತೆ ಜೋರಾಗಿತ್ತು. ಶಲ್ಯ ಮತ್ತು ಯುಧಿಷ್ಠಿರರು ಪರಸ್ಪರವಾಗಿ ನೂರಾರು ಬಾಣಗಳ ಮಳೆಯನ್ನು ಸುರಿಸುತ್ತಿದ್ದಾಗ ಇಂತಹ ಧ್ವನಿಯು ಕೇಳಿಸುತ್ತಿತ್ತು.

ತೌ ಚೇರತುರ್ವ್ಯಾಘ್ರಶಿಶುಪ್ರಕಾಶೌ
ಮಹಾಹವೇಷ್ವಾಮಿಷಗರ್ಧಿನಾವಿವ ।
ವಿಷಾಣಿನೌ ನಾಗವರಾವಿವೋಲ್ಬಣೌ
ತತಕ್ಷತುಃ ಸಂಯುಗಜಾತದರ್ಪೌ ॥೧೮॥

ಮಾಂಸದ ಆಸೆಯುಳ್ಳ ಸಿಂಹದ ಮರಿಗಳಂತೆ ಅವರಿಬ್ಬರೂ ಮಹಾಯುದ್ಧದಲ್ಲಿ ಸಂಚರಿಸುತ್ತಿದ್ದರು. ಯುದ್ಧದ ಮದವೇರಿಸಿಕೊಂಡ ಅವರಿಬ್ಬರೂ ಭಯಂಕರವಾದ ದಂತವುಳ್ಳ ಆನೆಗಳಂತೆ ಪರಸ್ಪರ ಹೊಡೆದುಕೊಂಡರು.

ತತಶ್ಚ ಮದ್ರಾಧಿಪತಿರ್ಮಹಾತ್ಮಾ
ಯುಧಿಷ್ಠಿರಂ ಭೀಮಬಲಂ ಪ್ರಸಹ್ಯ ।
ವಿವ್ಯಾಧ ಗಾಢಂ ಹೃದಿ ಸಂಶಿತೇನ
ಶರೇಣ ಸೂರ್ಯಾಗ್ನಿಸಮಪ್ರಭೇಣ ॥೧೯॥

ಅನಂತರ ಮಹಾತ್ಮನಾದ ಶಲ್ಯನು ಭಯಂಕರ ಬಲವುಳ್ಳ ಯುಧಿಷ್ಠಿರನನ್ನು ನಿಗ್ರಹಿಸಿ ಅವನ ಹೃದಯಕ್ಕೆ ಬಹಳ ಹರಿತವಾದ ಹಾಗೂ ಸೂರ್ಯನಂತೆ, ಬೆಂಕಿಯಂತೆ ಕಾಂತಿಯುಳ್ಳ ಬಾಣದಿಂದ ಚೆನ್ನಾಗಿ ಹೊಡೆದನು.

ತತೋಽತಿವಿದ್ಧೋಽಥ ಯುಧಿಷ್ಠಿರೋಽಪಿ
ಸುಸಂಪ್ರಯುಕ್ತೇನ ಶರೇಣ ರಾಜನ್ ।
ಜಘಾನ ಮದ್ರಾಧಿಪತಿಂ ಮಹಾತ್ಮಾ
ಮುದಂ ಚ ಲೇಭೇ ವೃಷಭಃ ಕುರೂಣಾಮ್ ॥೨೦॥

ರಾಜನೇ! ಇದಾದ ನಂತರ ಚೆನ್ನಾಗಿ ಹೊಡೆತಕ್ಕೊಳಗಾದ ಯುಧಿಷ್ಠಿರನು ಬಾಣವನ್ನು ಚೆನ್ನಾಗಿ ಪ್ರಯೋಗಿಸಿ ಶಲ್ಯನನ್ನು ಹೊಡೆದನು. ಮಹಾತ್ಮನಾದ ಕುರುಶ್ರೇಷ್ಠ ಧರ್ಮರಾಜನು ಇದರಿಂದ ಒಳ್ಳೆಯ ಆನಂದವನ್ನು ಅನುಭವಿಸಿದನು.

ತತೋ ಮುಹೂರ್ತಾದಿವ ಪಾರ್ಥಿವೇಂದ್ರೋ
ಲಬ್ಧ್ವಾ ಸಂಜ್ಞಂ ಕ್ರೋಧಸಂರಕ್ತನೇತ್ರಃ ।
ಶರೇಣ ಪಾರ್ಥಂ ತ್ವರಿತೋ ಜಘಾನ
ಸಹಸ್ರನೇತ್ರಪ್ರತಿಮಪ್ರಭಾವಃ ॥೨೧॥

ಸ್ವಲ್ಪಕಾಲದಲ್ಲಿಯೇ ಎಚ್ಚರಗೊಂಡ ಶಲ್ಯನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಬೇಗನೇ ಯುಧಿಷ್ಠಿರನ ಮೇಲೆ ಬಾಣವನ್ನು ಪ್ರಯೋಗಿಸಿದನು. ಪರಾಕ್ರಮದಲ್ಲಿ ಶಲ್ಯನು ಇಂದ್ರನ ಹಾಗೆ ಶೋಭಿಸುತ್ತಿದ್ದನು.

ತ್ವರಂಸ್ತತೋ ಧರ್ಮಸುತೋ ಮಹಾತ್ಮಾ
ಶಲ್ಯಸ್ಯ ರುಷ್ಟೋ ನವಭಿಃ ಪೃಷತ್ಕೈಃ ।
ಭಿತ್ತ್ವಾ ಹ್ಯುರಸ್ತಪನೀಯಂ ಚ ವರ್ಮ
ಜಘಾನ ಷಡ್ಭಿಸ್ತ್ವಪರೈಃ ಪೃಷತ್ಕೈಃ ॥೨೨॥

ಮಹಾತ್ಮನಾದ ಧರ್ಮರಾಜನು ಕೂಡಲೇ ಕುಪಿತನಾಗಿ ಒಂಬತ್ತು ಬಾಣಗಳಿಂದ ಶಲ್ಯನ ಎದೆಗೆ ಹೊಡೆದನು. ಬೇರೆ ಆರು ಬಾಣಗಳಿಂದ ಅವನ ಬಂಗಾರದ ಎದೆಕವಚವನ್ನು ಸೀಳಿದನು.

ತತಸ್ತು ಮದ್ರಾಧಿಪತಿಃ ಪ್ರಹೃಷ್ಟೋ
ಧನುಃ ಪ್ರಗೃಹ್ಯ ವ್ಯಸೃಜತ್ ಪೃಷತ್ಕಾನ್ ।
ದ್ವಾಭ್ಯಾಂ ಶರಾಭ್ಯಾಂ ಚ ತಥೈವ ರಾಜನ್
ಚಿಚ್ಛೇದ ಚಾಪಂ ಕುರುಪುಂಗವಸ್ಯ ॥೨೩॥

ಶಲ್ಯ ಸಂತೋಷದಿಂದ ಬಿಲ್ಲನ್ನು ಎತ್ತಿಕೊಂಡು ಬಾಣಗಳನ್ನು ಪ್ರಯೋಗಿಸಿದನು. ರಾಜನೇ, ಎರಡು ಬಾಣಗಳಿಂದ ಧರ್ಮರಾಜನ ಬಿಲ್ಲನ್ನು ಮುರಿದನು.

ನವಂ ತತೋಽನ್ಯತ್ ಸಮರೇ ಪ್ರಗೃಹ್ಯ
ರಾಜಾ ಧನುಷ್ಟೋರತರಂ ಮಹಾತ್ಮಾ ।
ಶಲ್ಯಂ ತು ವಿವ್ಯಾಧ ಶರೈಃ ಸಮಂತಾದ್
ಯಥಾ ಮಹೇಂದ್ರೋ ನಮುಚಿಂ ಶಿತಾಗ್ರೈಃ ॥೨೪॥

ಯುದ್ಧದಲ್ಲಿ ಧರ್ಮರಾಜನು ಇನ್ನೊಂದು ಹೊಸದಾದ ಬಿಲ್ಲನ್ನು ಎತ್ತಿಕೊಂಡು ಶಲ್ಯನಿಗೆ ಎಲ್ಲಾ ಕಡೆಗಳಿಂದಲೂ ಬಾಣಗಳನ್ನು ಪ್ರಯೋಗಿಸಿದನು. ನಮುಚಿ ಅಸುರನನ್ನು ಇಂದ್ರನು ಹರಿತವಾದ ಬಾಣಗಳಿಂದ ಆಕ್ರಮಿಸಿದಂತೆ ಇದು ಇತ್ತು.

ತತಸ್ತು ಶಲ್ಯೋ ನವಭಿಃ ಪೃಷತ್ಕೈಃ
ಭೀಮಸ್ಯ ರಾಜ್ಞಶ್ಚ ಯುಧಿಷ್ಠಿರಸ್ಯ ।
ನಿಕೃತ್ಯ ರೌಗ್ಮೇ ವರವರ್ಮಣೀ ತಯೋಃ
ವಿದಾರಯಾಮಾಸ ಚ ತೌ ಮಹಾತ್ಮಾ ॥೨೫॥

ಮಹಾತ್ಮನಾದ ಶಲ್ಯನು ಒಂಬತ್ತು ಬಾಣಗಳಿಂದ ಭೀಮನ ಹಾಗೂ ಧರ್ಮರಾಜನ ಉತ್ತಮವಾದ ಬಂಗಾರದ ಕವಚಗಳನ್ನು ಕಿತ್ತು ತುಂಡರಿಸಿದನು.

ತತೋಽಪರೇಣ ಜ್ವಲನೋಗ್ರತೇಜಸಾ
ಕ್ಷುರೇಣ ರಾಜ್ಞೋ ಧನುರುನ್ಮಮಾಥ ।
ಕೃಪಶ್ಚ ತಸ್ಯೈವ ಜಘಾನ ಸೂತಂ
ಷಡ್ಭಿಃ ಶರೈಃ ಸೋಽಭಿಮುಖಃ ಪಪಾತ ॥೨೬॥

ಅನಂತರ ಬೆಂಕಿಯಂತೆ ಭಯಂಕರ ತೇಜಸ್ಸುಳ್ಳ ಇನ್ನೊಂದು ಕತ್ತಿಯಿಂದ ಧರ್ಮರಾಜನ ಬಿಲ್ಲನ್ನು ತುಂಡರಿಸಿದನು. ಕೃಪಾಚಾರ್ಯನು ಕೂಡಲೇ ಆರು ಬಾಣಗಳಿಂದ ಶಲ್ಯನ ಸಾರಥಿಯನ್ನು ಕೊಂದನು. ಸಾರಥಿಯು ಶಲ್ಯನ ಮುಂದೆಯೇ ನೆಲಕ್ಕೆ ಬಿದ್ದನು.

ಮದ್ರಾಧಿಪಶ್ಚಾಪಿ ಯುಧಿಷ್ಠಿರಸ್ಯ
ಶರೈಶ್ಚತುರ್ಭಿರ್ನಿಜಘಾನ ವಾಹಾನ್ ।
ವಾಹಾಂಶ್ಚ ಹತ್ವಾಽಪ್ಯಕರೋನ್ಮಹಾತ್ಮಾ
ಯೋಧಕ್ಷಯಂ ಧರ್ಮಸುತಸ್ಯ ರಾಜ್ಞಃ ॥೨೭॥

ಶಲ್ಯನು ನಾಲ್ಕು ಬಾಣಗಳಿಂದ ಯುಧಿಷ್ಠಿರನ ರಥದ ನಾಲ್ಕು ಕುದುರೆಗಳನ್ನು ಬೀಳಿಸಿದನು. ಹೀಗೆ ಕುದುರೆಗಳನ್ನು ಕೊಂದು ಧರ್ಮರಾಜನ ಯೋಧರನ್ನು ನಾಶಮಾಡಿದನು.

ಯದದ್ಭುತಂ ಕರ್ಮ ನ ಶಕ್ಯಮನ್ಯೈಃ
ಸುದುಃಸಹಂ ತತ್ ಕೃತವಂತಮೇಕಮ್ ।
ಶಲ್ಯಂ ನರೇಂದ್ರಶ್ಚ ವಿಷಣ್ಣಭಾವಾದ್
ವಿಚಿಂತಯಾಮಾಸ ಮೃದಂಗಕೇತುಃ ॥೨೮॥

ಯಾವ ಇಂತಹ ಅದ್ಭುತಕೆಲಸವನ್ನು ಇನ್ನೊಬ್ಬ ಮಾಡುವುದು ಅಸಾಧ್ಯವೋ ಅಂತಹ ಕೆಲಸವನ್ನು ಮಾಡಿದ ಏಕೈಕ ವ್ಯಕ್ತಿ ಶಲ್ಯನನ್ನು ನೋಡಿ ಮೃದಂಗದ ಚಿಹ್ನೆಯ ಧ್ವಜವನ್ನು ಹೊಂದಿದ ಧರ್ಮರಾಜನು ವಿಷಾದ ಮನಸ್ಸಿನಿಂದ ಹೀಗೆ ಆಲೋಚಿಸಿದನು.

ಕಿಮೇತದಿಂದ್ರಾವರಜಸ್ಯ ವಾಕ್ಯಂ
ಮೋಘಂ ಭವತ್ಯದ್ಯ ವಿಧಿರ್ಬಲೀನ ।
ಜಹೀತಿ ಶಲ್ಯಂ ಹ್ಯವದತ್ ತದಾಜೌ
ನ ಲೋಕನಾಥಸ್ಯ ವಚೋಽನ್ಯಥಾ ಸ್ಯಾತ್ ॥೨೯॥

ಉಪೇಂದ್ರಕೃಷ್ಣನ ಮಾತು ಇಂದು ಸುಳ್ಳಾಗುತ್ತಿದೆ. ವಿಧಿಬಲವೇ ಇದಕ್ಕೆ ಕಾರಣ. ಯುದ್ಧದಲ್ಲಿ ಶಲ್ಯನನ್ನು ಕೊಲ್ಲು ಎಂದು ಅವನು ನನಗೆ ಆದೇಶ ಕೊಟ್ಟಿದ್ದ. ಲೋಕಸ್ವಾಮಿಯಾದ ಶ್ರೀಕೃಷ್ಣನ ಮಾತು ಸುಳ್ಳಾಗುವುದಿಲ್ಲ.

ತಥಾऽऽತುರೇ ರಾಜನಿ ಭೀಮಸೇನೋ
ಮದ್ರಾಧಿಪಸ್ಯಾಶು ತತೋ ಮಹಾತ್ಮಾ ।
ಛಿತ್ವಾ ಧನುರ್ವೇಗವತಾ ಶರೇಣ
ದ್ವಾಭ್ಯಾಮವಿಧ್ಯತ್ ಸುಭೃಶಂ ನರೇಂದ್ರಮ್ ॥೩೦॥

ಹೀಗೆ ಧರ್ಮರಾಜನು ದುಃಖಿತನಾಗಿರಲು ಮಹಾತ್ಮನಾದ ಭೀಮಸೇನನು ವೇಗವಾದ ಬಾಣದಿಂದ ಬೇಗನೇ ಶಲ್ಯನ ಬಿಲ್ಲನ್ನು ತುಂಡುಮಾಡಿದನು. ಎರಡು ಬಾಣಗಳಿಂದ ಶಲ್ಯನನ್ನು ಚೆನ್ನಾಗಿ ಹೊಡೆದನು.

ತಥಾऽಪರೇಣಾಸ್ಯ ಜಹಾರ ಯಂತುಃ
ಕಾಯಾಚ್ಛಿರಃ ಸನ್ನಹನೀಯಮಧ್ಯಾತ್ ।
ಜಘಾನ ಚಾಶ್ವಾಂಶ್ಚತುರಃ ಸುಶೀಘ್ರಾನ್
ತಥಾ ಧ್ವಜಂ ವೈ ಕುಪಿತೋ ವೃಕೋದರಃ ॥೩೧॥

ಹಾಗೆಯೇ ಸನ್ನದ್ಧವಾದ ಯುದ್ಧದ ಮಧ್ಯದಲ್ಲಿ ಇನ್ನೊಂದು ಬಾಣದಿಂದ ಶಲ್ಯನ ಸಾರಥಿಯ ತಲೆಯನ್ನು ಕಡಿದನು. ಕುಪಿತನಾದ ಭೀಮಸೇನನು ಶಲ್ಯನ ರಥದ ಶೀಘ್ರಗಾಮಿಗಳಾದ ನಾಲ್ಕು ಕುದುರೆಗಳನ್ನು ಕೊಂದನು. ಹಾಗೆಯೇ ಧ್ವಜವನ್ನೂ ತುಂಡರಿಸಿದನು.

ತಮಗ್ರಣೀಃ ಸರ್ವಧನುರ್ಧರಾಣಾಮ್
ಏಕಂ ಚರಂತಂ ಸಮರೇऽತಿವೇಗಮ್ ।

ಭೀಮಃಶತೇನಾವಿಕರಚ್ಛರಾಣಾಂ
ಮಾದ್ರೀಸುತಃ ಸಹದೇವಸ್ತಥೈವ ॥೩೨॥

ಧನುರ್ಧಾರಿಗಳಲ್ಲೇ ಶ್ರೇಷ್ಠನಾದ ಭೀಮನು ಯುದ್ಧದಲ್ಲಿ ಒಬ್ಬಂಟಿಗನಾಗಿ ವೇಗದಿಂದ ಸಂಚರಿಸುತ್ತಿದ್ದ ಶಲ್ಯನ ಮೇಲೆ ನೂರು ಬಾಣಗಳ ಮಳೆಯನ್ನು ಸುರಿಸಿದನು. ಹಾಗೆಯೇ ಸಹದೇವನೂ ಬಾಣಗಳ ಮಳೆಯನ್ನು ಸುರಿಸಿದನು.

ತೈಃ ಸಾಯಕೈರ್ಮೋಹಿತಂ ಈಕ್ಷ್ಯ ಶಲ್ಯಂ
ಭೀಮಃಶರೈರಸ್ಯ ಚಕರ್ತ ವರ್ಮ ।
ಸ ಭೀಮಸೇನೇನ ನಿಕೃತ್ತವರ್ಮಾ
ಮದ್ರಾಧಿಪಶ್ಚರ್ಮಸಹಸ್ರಧಾರಮ್ ॥೩೩॥

ಪ್ರಗೃಹ್ಯ ಖಡ್ಗಂ ರಥಾನ್ಮಹಾತ್ಮಾ
ಪ್ರಸ್ಕಂದ್ಯ ಕುಂತೀಸುತಮಭ್ಯಧಾವತ್ ।
ಛಿತ್ತ್ವಾ ರಥೇಷಾಂ ನಕುಲಸ್ಯ ಸೋಽಥ
ಯುಧಿಷ್ಠಿರಂ ಭೀಮಬಲೋಭ್ಯಧಾವತ್ ॥೩೪॥

ಆ ಬಾಣಗಳಿಂದ ಶಲ್ಯನು ಮೂರ್ಛೆಹೊಂದಿದನು. ಅದನ್ನು ನೋಡಿದ ಭೀಮನು ಬಾಣಗಳನ್ನು ಪ್ರಯೋಗಿಸಿ ಅವನ ಕವಚವನ್ನು ತುಂಡರಿಸಿದನು. ಭೀಮಸೇನನಿಂದ ಕವಚವನ್ನು ಕಳೆದುಕೊಂಡ ಶಲ್ಯನು ಸಾವಿರಧಾರೆಗಳುಳ್ಳ ಚರ್ಮಾಯುಧ ಹಾಗೂ ಖಡ್ಗವನ್ನು ತೆಗೆದುಕೊಂಡು ರಥದಿಂದ ಕೆಳಗೆ ಧುಮುಕಿದನು ಮತ್ತು ಭೀಮಸೇನನ ಮೇಲೆ ಏರಿಬಂದನು. ನಕುಲನ ರಥದ ಈಷಾವನ್ನು (ಆಧಾರ) ತುಂಡರಿಸಿ ಅನಂತರ ಧರ್ಮರಾಜನನ್ನು ಎದುರಿಸಿದನು.

ತಂ ಚಾಪಿ ರಾಜಾನಮಥೋತ್ಪತಂತಂ
ಕ್ರುದ್ಧಂ ಯಥೈವಾಂತಕಮಾಪತಂತಮ್ ।
ಧೃಷ್ಟದ್ಯುಮ್ನೋ ದ್ರೌಪದೇಯಾಃ ಶಿಖಂಡೀ
ಶಿನೇಶ್ಚ ನಪ್ತಾ ಸಹಸಾ ಪರೀಯುಃ ॥೩೫॥

ಅನಂತರ ಕೋಪದಿಂದ ಯಮನ ಹಾಗೆ ಹಾರಿಕೊಂಡು ಬರುತ್ತಿರುವ ಶಲ್ಯನನ್ನು ನೋಡಿ ಧೃಷ್ಟದ್ಯುಮ್ನ, ದ್ರೌಪದಿಯ ಮಕ್ಕಳು, ಶಿಖಂಡಿ ಹಾಗೂ ಸಾತ್ಯಕಿ ಕೂಡಲೇ ಶಲ್ಯನಿಗೆ ಮುತ್ತಿಗೆ ಹಾಕಿದರು.

ಅಥಾಸ್ಯ ಚರ್ಮಾಪ್ರತಿಮಂ ನ್ಯಕೃಂತದ್
ಭೀಮೋ ಮಹಾತ್ಮಾ ದಶಭಿಃ ಪೃಷತ್ಕೈಃ ।
ಖಡ್ಗಂ ಚ ಭಲ್ಲೇನ ನಿಕೃತ್ಯ ಮುಷ್ಟೌ
ನದನ್ ಪ್ರಹೃಷ್ಟಸ್ತವ ಸೈನ್ಯಮಧ್ಯೇ ॥೩೬॥

ಮಹಾತ್ಮನಾದ ಭೀಮನು ಹತ್ತು ಬಾಣಗಳನ್ನು ಪ್ರಯೋಗಿಸಿ ಶಲ್ಯನ ಚರ್ಮಾಯುಧವನ್ನು ತುಂಡರಿಸಿದನು. ಭೀಮನು ಆನಂದದಿಂದ ಸೈನ್ಯದ ಮಧ್ಯೆ ಕುಣಿಯುತ್ತಾ ಭಲ್ಲೆಯಿಂದ ಹೊಡೆದು ಅವನ ಖಡ್ಗವನ್ನೂ ಮುಷ್ಟಿಸಹಿತವಾಗಿ ತುಂಡರಿಸಿದನು.

ತತ್ಕರ್ಮ ಭೀಮಸ್ಯ ಸಮೀಕ್ಷ್ಯ ಹೃಷ್ಟಾಃ
ತೇ ಪಾಂಡವಾನಾಂ ಪ್ರವರಾ ರಥೌಘಾಃ ।
ನಾದಂ ಪ್ರಚಕ್ರುರ್ಭೃಶಮುತ್ಸ್ಮಯಂತಃ
ಶಂಖಾಂಶ್ಚ ದಧ್ಮುಃ ಶಶಿಸನ್ನಿಕಾಶಾನ್ ॥೩೭॥

ಭೀಮನ ಆ ಕಾರ್ಯವನ್ನು ನೋಡಿ ಪಾಂಡವರ ಸೈನ್ಯದ ಶ್ರೇಷ್ಠ ರಥಿಕರು ಆನಂದವನ್ನು ಹೊಂದಿದರು. ಬಹಳವಾಗಿ ನಗುತ್ತಾ ಜಯಘೋಷವನ್ನು ಮಾಡಿದರು. ಚಂದ್ರನ ಹಾಗೆ ಬೆಳ್ಳಗಿರುವ ಶಂಖಗಳನ್ನು ಊದಿದರು.

ತೇನಾಥ ಶಬ್ದೇನ ಸುಭೀಷಣೇನ
ತವಾಭಿತಪ್ತಂ ಬಲಮಪ್ರಧೃಷ್ಯಮ್ ।
ಸ್ವೇದಾಭಿಭೂತಂ ರುಧಿರೋಕ್ಷಿತಾಂಗಂ
ವಿಸಂಜ್ಞಕಲ್ಪಂ ಚ ತಥಾ ವಿಷಣ್ಣಮ್ ॥೩೮॥

ಆ ಭಯಂಕರವಾದ ಶಬ್ದದಿಂದ ನಿನ್ನ ಅಜೇಯವಾದ ಸೈನ್ಯವು ಬಹಳವಾಗಿ ದುಃಖವನ್ನು ಅನುಭವಿಸಿತು. ಸೈನಿಕರ ರಕ್ತಸಿಕ್ತವಾದ ಶರೀರಗಳು ಬೆವರಿನಿಂದ ತೊಯ್ದುಹೋದವು. ಎಲ್ಲರೂ ಮೂರ್ಛೆಹೋದವರಂತೆ ವಿಷಾದಕ್ಕೊಳಗಾದರು.

ಸ ಮದ್ರರಾಜಃ ಸಹಸಾ ವಿಕೀರ್ಯೋ
ಭೀಮಾಗ್ರಗೈಃ ಪಾಂಡವಯೋಧಮುಖ್ಯೈಃ ।
ಯುಧಿಷ್ಠಿರಸ್ಯಾಭಿಮುಖೋ ಜವೇನ
ಸಿಂಹೋ ಯಥಾ ಮೃಗಹೇತೋಃ ಪ್ರಯಾತಃ ॥೩೯॥

ಭೀಮನ ನೇತೃತ್ವದಲ್ಲಿ ಪಾಂಡವಯೋಧರ ಬಾಣಗಳಿಂದ ಮುಚ್ಚಲ್ಪಟ್ಟ ಶಲ್ಯನು ಕೂಡಲೇ ಎದ್ದು ವೇಗವಾಗಿ ಯುಧಿಷ್ಠಿರನ ಎದುರು ಬಂದನು. ಜಿಂಕೆಯನ್ನು ಕೊಲ್ಲಲು ಸಿಂಹವು ಬಂದ ಹಾಗೆ ಶಲ್ಯನು ಧರ್ಮರಾಜನ ಬಳಿಗೆ ಬಂದನು.

ಸ ಧರ್ಮರಾಜೋ ನಿಹತಾಶ್ವಸೂತಃ
ಕ್ರೋಧೇನ ದೀಪ್ತಜ್ವಲನಪ್ರಕಾಶಃ ।
ದೃಷ್ಟ್ವಾ ಚ ಮದ್ರಾಧಿಪತಿಂ ಸತೂರ್ಣಂ
ಸಮಭ್ಯಧಾವತ್ ತಮರಿಂ ಬಲೇನ ॥೪೦॥

ಕುದುರೆ ಮತ್ತು ಸಾರಥಿಯರನ್ನು ಕಳೆದುಕೊಂಡಿದ್ದ ಧರ್ಮರಾಜನು ಕೋಪದಿಂದ ಉರಿಯುತ್ತಿರುವ ಬೆಂಕಿಯಂತೆ ಕಾಣಿಸುತ್ತಿದ್ದನು. ಶಲ್ಯನನ್ನು ಕಂಡು ಕೂಡಲೇ ಬಲದಿಂದ ಶತ್ರುವನ್ನು ಎದುರಿಸಿದನು.

ಗೋವಿಂದವಾಕ್ಯಂ ತ್ವರಿತೋ ವಿಚಿಂತ್ಯ
ದಧ್ರೇ ಮತಿಂ ಶಲ್ಯವಿನಾಶನಾಯ ।
ಸ ಧರ್ಮರಾಜೋ ನಿಹತಾಶ್ವಸೂತೋ
ರಥೇऽತಿಷ್ಠಚ್ಛಕ್ತಿಮೇವಾಭಿಕಾಂಕ್ಷನ್ ॥೪೧॥

ಶ್ರೀಕೃಷ್ಣನ ಮಾತನ್ನು ಬೇಗನೆ ಚಿಂತನೆಗೆ ತಂದುಕೊಂಡು ಶಲ್ಯನನ್ನು ಕೊಲ್ಲುವ ನಿರ್ಧಾರವನ್ನು ಮಾಡಿದನು. ಅಂತಹ ಧರ್ಮರಾಜನು ಅಶ್ವ ಮತ್ತು ಸೂತರು ಇಲ್ಲದಿದ್ದರೂ ಶಕ್ತಿ ಆಯುಧವನ್ನು ಅಪೇಕ್ಷಿಸಿಕೊಂಡು ರಥದ ಮೇಲೆಯೇ ನಿಂತನು.

ತಚ್ಚಾಪಿ ಶಲ್ಯಸ್ಯ ನಿಶಾಮ್ಯ ಕರ್ಮ
ತಮಾತ್ಮನೋ ಭಾಗಮಥಾವಶಿಷ್ಟಮ್ ।
ಕೃತ್ವಾ ಮನಃ ಶತ್ರುವಧೇ ಮಹಾತ್ಮಾ
ಯಥೋಕ್ತಮಿಂದ್ರಾವರಜಸ್ಯ ಚಕ್ರೇ ॥೪೨॥

ಜೊತೆಗೆ ಶಲ್ಯನ ಆ ಅದ್ಭುತ ಯುದ್ಧಕರ್ಮವನ್ನು ನೋಡಿದ ಧರ್ಮರಾಜನು ಈ ಶಲ್ಯನು ತನ್ನ ಪಾಲಿನ ಭಾಗವಾಗಿ ಉಳಿದುಕೊಂಡಿದ್ದಾನೆ ಎಂಬುದಾಗಿ ಅರಿತುಕೊಂಡು, ಮಹಾತ್ಮನಾದ ಧರ್ಮರಾಜನು ಉಪೇಂದ್ರಕೃಷ್ಣನ ಮಾತನ್ನು ನಡೆಸಲಿಕ್ಕಾಗಿ ಶತ್ರುವಾದ ಶಲ್ಯನ ವಧೆಗಾಗಿ ಮನಸ್ಸನ್ನು ಮಾಡಿದನು.

ಸ ಧರ್ಮರಾಜೋ ಮಣಿಹೇಮದಂಡಾಂ
ಜಗ್ರಾಹ ಶಕ್ತಿಂ ಜ್ವಲನಪ್ರಕಾಶಾಮ್ ।
ನೇತ್ರೇ ಚ ದೀಪ್ತೇ ಸಹಸಾ ವಿವೃತ್ಯ
ಮದ್ರಾಧಿಪಂ ಕ್ರುದ್ಧಮನಾ ನಿರೈಕ್ಷತ್ ॥೪೩॥

ಆ ಧರ್ಮರಾಜನು ಮಣಿ ಮತ್ತು ಬಂಗಾರದ ದಂಡವುಳ್ಳ ಶಕ್ತ್ಯಾಯುಧವನ್ನು ತೆಗೆದುಕೊಂಡನು. ಅದು ಬೆಂಕಿಯಂತೆ ಪ್ರಕಾಶಿಸುತ್ತಿತ್ತು. ಪ್ರಕಾಶಿಸುತ್ತಿರುವ ತನ್ನ ಕಣ್ಣುಗಳನ್ನು ತಿರುಗಿಸುತ್ತಾ ಕೋಪದಿಂದ ಶಲ್ಯನನ್ನು ನೋಡಿದನು.

ನಿರೀಕ್ಷಿತೋ ಧರ್ಮಸುತೇನ ರಾಜ್ಞಾ
ಪೂತಾತ್ಮನಾ ನಿರ್ಹೃತಕಲ್ಮಷೇಣ ।
ಅಭೂನ್ನ ಯದ್ಭಸ್ಮ ಸ ಮದ್ರರಾಜಃ
ತದದ್ಭುತಂ ಮೇ ಪ್ರತಿಭಾತಿ ರಾಜನ್ ॥೪೪॥

ರಾಜನೇ! ಯಾವುದೇ ದೋಷಗಳಿಲ್ಲದ, ಪವಿತ್ರಸ್ವರೂಪನಾದ ಧರ್ಮರಾಜನು ದಿಟ್ಟಿಸಿ ನೋಡುತ್ತಿದ್ದರೂ ಶಲ್ಯನು ಭಸ್ಮವಾಗಲಿಲ್ಲ. ಇದು ದೊಡ್ಡ ಅದ್ಭುತವೆಂದು ನನಗೆ ತೋರುತ್ತದೆ. ಏಕೆಂದರೆ ಧರ್ಮರಾಜನ ದೃಷ್ಟಿಗೆ ಅಷ್ಟು ಸಾಮರ್ಥ್ಯವಿದೆ.

ತತಸ್ತು ಶಕ್ತಿಂ ರುಚಿರೋಗ್ರದಂಡಾಂ
ಮಣಿಪ್ರಬದ್ಧಾಂ ಜ್ವಲಿತಾಂ ಪ್ರದೀಪ್ತಾಮ್ ।
ಚಿಕ್ಷೇಪ ವೇಗಾತ್ ಸುಭೃಶಂ ಮಹಾತ್ಮಾ
ಮದ್ರಾಧಿಪಾಯ ಪ್ರವರಃ ಕುರೂಣಾಮ್ ॥೪೫॥

ದೀಪ್ತಾಮಥೈನಾಂ ಮಹತಾ ಬಲೇನ
ಮದ್ರಾಧಿಪಸ್ಯಾಶು ವಿನಾಶನಾಯ ॥೪೬॥

ಅನಂತರ ಕುರುಶ್ರೇಷ್ಠನಾದ ಧರ್ಮರಾಜನು ಶಲ್ಯನನ್ನು ಬೇಗನೆ ಕೊಲ್ಲಲಿಕ್ಕಾಗಿ ಅವನ ಮೇಲೆ ಶಕ್ತ್ಯಾಯುಧವನ್ನು ಬಹಳ ಬಲವನ್ನು ಉಪಯೋಗಿಸಿ ವೇಗವಾಗಿ ಪ್ರಯೋಗಿಸುತ್ತಾನೆ. ಆ ಶಕ್ತ್ಯಾಯುಧದ ದಂಡವು ಬಹಳ ಸುಂದರವಾಗಿತ್ತು. ಅದರಲ್ಲಿ ಮಣಿಗಳು ಜೋಡಿಸಲ್ಪಟ್ಟಿದ್ದವು. ಬೆಂಕಿಯಂತೆ ಪ್ರಜ್ವಲಿಸುತ್ತಿತ್ತು. ಅಂತಹ ಶಕ್ತ್ಯಾಯುಧವನ್ನು ವೇಗವಾಗಿ ಬಿಸಾಡುತ್ತಾನೆ.

ಸ ವಿಷ್ಫುಲಿಂಗಾಂ ಸಹಸಾ ಪತಂತೀಂ
ಪ್ರೈಕ್ಷಂತ ಸರ್ವೇ ಕುರವಃ ಸಮೇತಾಃ ।
ಯಥಾ ಯುಗಾಂತೇ ಮಹತೀಮಿವೋಲ್ಕಾಂ
ತಾಂ ಕಾಲರಾತ್ರೀಮಿವ ಪಾಶಹಸ್ತಾಮ್ ॥೪೭॥

ಕಿಡಿಗಳನ್ನು ಕಾರುತ್ತಾ ವೇಗವಾಗಿ ಬೀಳುತ್ತಿದ್ದ ಆ ಶಕ್ತ್ಯಾಯುಧವನ್ನು ಎಲ್ಲಾ ಕುರುಗಳು ನೋಡಿದರು. ಯುಗದ ಕೊನೆಯಲ್ಲಿ ಉಲ್ಕಾಪಾತವಾದಂತೆ ಇತ್ತು. ಪಾಶವನ್ನು ಹಿಡಿದುಕೊಂಡು ಬರುತ್ತಿದ್ದ ಕಾಲರಾತ್ರಿಯಂತೆ ಕಾಣಿಸುತ್ತಿತ್ತು.

ಸಬ್ರಹ್ಮದಂಡಪ್ರತಿಮಾಮಮೋಘಾಂ
ಸಸರ್ಜ ಯತ್ತೋ ಯುಧಿ ಧರ್ಮರಾಜಃ ॥೪೮॥

ಬ್ರಹ್ಮದಂಡದ ಹಾಗೆ ಎಂದೂ ವ್ಯರ್ಥವಾಗದ ಶಕ್ತ್ಯಾಯುಧವನ್ನು ಯುದ್ಧದಲ್ಲಿ ಪ್ರಯತ್ನಪೂರ್ವಕವಾಗಿ ಧರ್ಮರಾಜನು ಪ್ರಯೋಗಿಸಿದ್ದಾನೆ.

ಗಂಧಸ್ರಗಗ್ರ್ಯಾಶನಪಾನಭಕ್ಷೈಃ
ಅಭ್ಯರ್ಚಿತಾಂ ಪಾಂಡುಸುತೈಃ ಪ್ರಯತ್ನಾತ್ ।
ಸಂವರ್ತಕಾಗ್ನಿಪ್ರತಿಮಾಂ ಜ್ವಲಂತೀಂ
ಕೃತ್ಯಾಮಥರ್ವಾಂಗಿರಸೀಮಿವೋಗ್ರಾಮ್ ॥೪೯॥

ಶಕ್ತ್ಯಾಯುಧವನ್ನು ಪಾಂಡವರು ಗಂಧ-ಮಾಲೆ-ನೈವೇದ್ಯ-ಪಾನ-ಭಕ್ಷಗಳನ್ನು ಅರ್ಪಿಸಿ ಪ್ರಯತ್ನಪೂರ್ವಕವಾಗಿ ಅರ್ಚಿಸಿದ್ದರು. ಆ ಆಯುಧವು ಪ್ರಳಯಕಾಲದ ಸಂವರ್ತಕಾಗ್ನಿಯಂತೆ ಜ್ವಲಿಸುತ್ತಿತ್ತು. ಅಥರ್ವಾಂಗಿರಸ ಮಾಟದ ಕೃತ್ಯದ ಹಾಗೆ ಇತ್ತು.

ಈಶಾನಹೇತೋಃ ಪ್ರತಿನಿರ್ಮಿತಾಂ ತಾಂ
ತ್ವಷ್ಟಾ ರಿಪೂಣಾಮಸುದೇಹಭಕ್ಷಾಮ್ ।
ಭೂಮ್ಯಂತರಿಕ್ಷಾದ್ರಿಜಲಾಶ್ರಯಾಣಿ
ಪ್ರಸಹ್ಯ ಭೂತಾನಿ ನಿಹಂತುಮೀಶಾಮ್ ॥೫೦॥

ಆ ಆಯುಧವನ್ನು ಈಶಾನದೇವತೆಗಾಗಿ ತ್ವಷ್ಟ್ರಪ್ರಜಾಪತಿಯು(ವಿಶ್ವಕರ್ಮನು) ನಿರ್ಮಿಸಿದ್ದನು. ಶತ್ರುಗಳ ಪ್ರಾಣವನ್ನೂ ಶರೀರವನ್ನೂ ಭಕ್ಷಿಸುವಂತಹದ್ದು. ಭೂಮಿ, ಅಂತರಿಕ್ಷ, ಪರ್ವತಗಳು, ಸಮುದ್ರಮೊದಲಾದ ಜಲಾಶಯಗಳು ಮತ್ತು ಎಲ್ಲಾ ಪ್ರಾಣಿಗಳು- ಇವೆಲ್ಲವನ್ನೂ ನುಂಗಿಹಾಕುವ ಸಾಮರ್ಥ್ಯ ಈ ಶಕ್ತ್ಯಾಯುಧಕ್ಕಿದೆ.

ಘಂಟಾಪತಾಕಾಮಣಿವಜ್ರಭೂಷಿತಾಂ
ವೈಡೂರ್ಯಚಿತ್ರಾಂ ತಪನೀಯದಂಡಾಮ್ ।
ತ್ವಷ್ಟಾ ಪ್ರಯತ್ನಾನ್ನಿಯಮೇನ ಕ್ಲಪ್ತಾಂ
ಬ್ರಹ್ಮದ್ವಿಷಾಮಂತಕರೀಮಮೋಘಾಮ್ ॥೫೧॥

ಘಂಟೆ, ಪತಾಕೆ, ಮಣಿ, ವಜ್ರಗಳಿಂದ ಅಲಂಕೃತವಾಗಿತ್ತು. ವೈಡೂರ್ಯದ ಚಿಹ್ನೆಯನ್ನು ಹೊಂದಿತ್ತು. ದಂಡವು ಬಂಗಾರದ್ದಾಗಿತ್ತು. ವಿಶ್ವಕರ್ಮನು ಪ್ರಯತ್ನಪೂರ್ವಕವಾಗಿ ನಿಯಮದಿಂದ ಮಾಡಿದ್ದಾಗಿತ್ತು. ಬ್ರಹ್ಮದ್ವೇಷಿಗಳನ್ನು ನಾಶಮಾಡುವಂತಹದ್ದು. ಅದು ಎಂದೂ ವ್ಯರ್ಥವಾಗುವಂತಹದ್ದಲ್ಲ.

ಬಲಪ್ರಯತ್ನಾದನಿರೋಧವೇಗಾಂ
ಮಂತ್ರೈಶ್ಚ ಘೋರೈರಭಿಮಂತ್ರ್ಯ ಯತ್ನಾತ್ ।
ಸಸರ್ಜ ಮಾರ್ಗೇಣ ಸ ಚಾಂಬರೇಣ
ವಧಾಯ ಮದ್ರಾಧಿಪತೇಸ್ತದಾನೀಮ್ ॥೫೨॥

ಬಲದಲ್ಲಾಗಲೀ ಪ್ರಯೋಗದಲ್ಲಾಗಲೀ ಎದುರಿಸಲಾಗದ ವೇಗವನ್ನು ಹೊಂದಿತ್ತು. ಘೋರವಾದ ಮಂತ್ರಗಳಿಂದ ಅಭಿಮಂತ್ರಿತವಾಗಿ ಪ್ರಯೋಗಿಸಲ್ಪಟ್ಟಿತ್ತು. ಅದನ್ನು ಧರ್ಮರಾಜನು ಶಲ್ಯನ ವಧೆಗಾಗಿ ಆಕಾಶಮಾರ್ಗದಲ್ಲಿ ಪ್ರಯೋಗಿಸಿದ್ದಾನೆ.

ಅನಂತರ ಕುರುಶ್ರೇಷ್ಠನಾದ ಧರ್ಮರಾಜನು ಶಲ್ಯನನ್ನು ಬೇಗನೆ ಕೊಲ್ಲಲಿಕ್ಕಾಗಿ ಅವನ ಮೇಲೆ ಶಕ್ತ್ಯಾಯುಧವನ್ನು ಬಹಳ ಬಲವನ್ನು ಉಪಯೋಗಿಸಿ ವೇಗವಾಗಿ ಪ್ರಯೋಗಿಸುತ್ತಾನೆ. ಆ ಶಕ್ತ್ಯಾಯುಧದ ದಂಡವು ಬಹಳ ಸುಂದರವಾಗಿತ್ತು. ಅದರಲ್ಲಿ ಮಣಿಗಳು ಜೋಡಿಸಲ್ಪಟ್ಟಿದ್ದವು. ಬೆಂಕಿಯಂತೆ ಪ್ರಜ್ವಲಿಸುತ್ತಿತ್ತು. ಅಂತಹ ಶಕ್ತ್ಯಾಯುಧವನ್ನು ವೇಗವಾಗಿ ಬಿಸಾಡುತ್ತಾನೆ.

ಸ ವಿಷ್ಫುಲಿಂಗಾಂ ಸಹಸಾ ಪತಂತೀಂ
ಪ್ರೈಕ್ಷಂತ ಸರ್ವೇ ಕುರವಃ ಸಮೇತಾಃ ।
ಯಥಾ ಯುಗಾಂತೇ ಮಹತೀಮಿವೋಲ್ಕಾಂ
ತಾಂ ಕಾಲರಾತ್ರೀಮಿವ ಪಾಶಹಸ್ತಾಮ್ ॥೪೭॥

ಕಿಡಿಗಳನ್ನು ಕಾರುತ್ತಾ ವೇಗವಾಗಿ ಬೀಳುತ್ತಿದ್ದ ಆ ಶಕ್ತ್ಯಾಯುಧವನ್ನು ಎಲ್ಲಾ ಕುರುಗಳು ನೋಡಿದರು. ಯುಗದ ಕೊನೆಯಲ್ಲಿ ಉಲ್ಕಾಪಾತವಾದಂತೆ ಇತ್ತು. ಪಾಶವನ್ನು ಹಿಡಿದುಕೊಂಡು ಬರುತ್ತಿದ್ದ ಕಾಲರಾತ್ರಿಯಂತೆ ಕಾಣಿಸುತ್ತಿತ್ತು.

ಸಬ್ರಹ್ಮದಂಡಪ್ರತಿಮಾಮಮೋಘಾಂ
ಸಸರ್ಜ ಯತ್ತೋ ಯುಧಿ ಧರ್ಮರಾಜಃ ॥೪೮॥

ಬ್ರಹ್ಮದಂಡದ ಹಾಗೆ ಎಂದೂ ವ್ಯರ್ಥವಾಗದ ಶಕ್ತ್ಯಾಯುಧವನ್ನು ಯುದ್ಧದಲ್ಲಿ ಪ್ರಯತ್ನಪೂರ್ವಕವಾಗಿ ಧರ್ಮರಾಜನು ಪ್ರಯೋಗಿಸಿದ್ದಾನೆ.

ಗಂಧಸ್ರಗಗ್ರ್ಯಾಶನಪಾನಭಕ್ಷ್ಯೈಃ
ಅಭ್ಯರ್ಚಿತಾಂ ಪಾಂಡುಸುತೈಃ ಪ್ರಯತ್ನಾತ್ ।
ಸಂವರ್ತಕಾಗ್ನಿಪ್ರತಿಮಾಂ ಜ್ವಲಂತೀಂ
ಕೃತ್ಯಾಮಥರ್ವಾಂಗಿರಸೀಮಿವೋಗ್ರಾಮ್ ॥೪೯॥

ಶಕ್ತ್ಯಾಯುಧವನ್ನು ಪಾಂಡವರು ಗಂಧ-ಮಾಲೆ-ನೈವೇದ್ಯ-ಪಾನ-ಭಕ್ಷಗಳನ್ನು ಅರ್ಪಿಸಿ ಪ್ರಯತ್ನಪೂರ್ವಕವಾಗಿ ಅರ್ಚಿಸಿದ್ದರು. ಆ ಆಯುಧವು ಪ್ರಳಯಕಾಲದ ಸಂವರ್ತಕಾಗ್ನಿಯಂತೆ ಜ್ವಲಿಸುತ್ತಿತ್ತು. ಅಥರ್ವಾಂಗಿರಸ ಮಾಟದ ಕೃತ್ಯದ ಹಾಗೆ ಇತ್ತು.

ಈಶಾನಹೇತೋಃ ಪ್ರತಿನಿರ್ಮಿತಾಂ ತಾಂ
ತ್ವಷ್ಟಾ ರಿಪೂಣಾಮಸುದೇಹಭಕ್ಷಾಮ್ ।
ಭೂಮ್ಯಂತರಿಕ್ಷಾದ್ರಿಜಲಾಶ್ರಯಾಣಿ
ಪ್ರಸಹ್ಯ ಭೂತಾನಿ ನಿಹಂತುಮೀಶಾಮ್ ॥೫೦॥

ಆ ಆಯುಧವನ್ನು ಈಶಾನದೇವತೆಗಾಗಿ ತ್ವಷ್ಟ್ರಪ್ರಜಾಪತಿಯು(ವಿಶ್ವಕರ್ಮನು) ನಿರ್ಮಿಸಿದ್ದನು. ಶತ್ರುಗಳ ಪ್ರಾಣವನ್ನೂ ಶರೀರವನ್ನೂ ಭಕ್ಷಿಸುವಂತಹದ್ದು. ಭೂಮಿ, ಅಂತರಿಕ್ಷ, ಪರ್ವತಗಳು, ಸಮುದ್ರಮೊದಲಾದ ಜಲಾಶಯಗಳು ಮತ್ತು ಎಲ್ಲಾ ಪ್ರಾಣಿಗಳು- ಇವೆಲ್ಲವನ್ನೂ ನುಂಗಿಹಾಕುವ ಸಾಮರ್ಥ್ಯ ಈ ಶಕ್ತ್ಯಾಯುಧಕ್ಕಿದೆ.

ಘಂಟಾಪತಾಕಾಮಣಿವಜ್ರಭೂಷಿತಾಂ
ವೈಡೂರ್ಯಚಿತ್ರಾಂ ತಪನೀಯದಂಡಾಮ್ ।
ತ್ವಷ್ಟಾ ಪ್ರಯತ್ನಾನ್ನಿಯಮೇನ ಕಲ್ಪಾಂ
ಬ್ರಹ್ಮದ್ವಿಷಾಮಂತಕರೀಮಮೋಘಾಮ್ ॥೫೧॥

ಘಂಟೆ, ಪತಾಕೆ, ಮಣಿ, ವಜ್ರಗಳಿಂದ ಅಲಂಕೃತವಾಗಿತ್ತು. ವೈಡೂರ್ಯದ ಚಿಹ್ನೆಯನ್ನು ಹೊಂದಿತ್ತು. ದಂಡವು ಬಂಗಾರದ್ದಾಗಿತ್ತು. ವಿಶ್ವಕರ್ಮನು ಪ್ರಯತ್ನಪೂರ್ವಕವಾಗಿ ನಿಯಮದಿಂದ ಮಾಡಿದ್ದಾಗಿತ್ತು. ಬ್ರಹ್ಮದ್ವೇಷಿಗಳನ್ನು ನಾಶಮಾಡುವಂತಹದ್ದು. ಅದು ಎಂದೂ ವ್ಯರ್ಥವಾಗುವಂತಹದ್ದಲ್ಲ.

ಬಲಪ್ರಯತ್ನಾದನಿರೋಧವೇಗಾಂ
ಮಂತ್ರೈಶ್ಚ ಘೋರೈರಭಿಮಂತ್ರ್ಯ ಯತ್ನಾತ್ ।
ಸಸರ್ಜ ಮಾರ್ಗೇಣ ಸ ಚಾಂಬರೇಣ
ವಧಾಯ ಮದ್ರಾಧಿಪತೇಸ್ತದಾನೀಮ್ ॥೫೨॥

ಬಲದಲ್ಲಾಗಲೀ ಪ್ರಯೋಗದಲ್ಲಾಗಲೀ ಎದುರಿಸಲಾಗದ ವೇಗವನ್ನು ಹೊಂದಿತ್ತು. ಘೋರವಾದ ಮಂತ್ರಗಳಿಂದ ಅಭಿಮಂತ್ರಿತವಾಗಿ ಪ್ರಯೋಗಿಸಲ್ಪಟ್ಟಿತ್ತು. ಅದನ್ನು ಧರ್ಮರಾಜನು ಶಲ್ಯನ ವಧೆಗಾಗಿ ಆಕಾಶಮಾರ್ಗದಲ್ಲಿ ಪ್ರಯೋಗಿಸಿದ್ದಾನೆ.

ಹತೋ ಹ್ಯಸಾವಿತ್ಯಭಿಗರ್ಜಮಾನೋ
ರುದ್ರೋಽಂಧಕಾಯಾಂತಕರಂ ಯಥೇಷುಮ್ ।
ಪ್ರಸಾರ್ಯ ಬಾಹುಂ ಸುದೃಢಂ ಸುಪಾಣಿಂ
ಕ್ರೋಧೇನ ನೃತ್ಯನ್ನಿವ ದರ್ಪಹಂತಾ ॥೫೩॥

ರುದ್ರನು ಅಂಧಕಾಸುರನ ಮೇಲೆ ಬಾಣವನ್ನು ಪ್ರಯೋಗಿಸಿದಂತೆ ಶತ್ರುವಿನ ದರ್ಪವನ್ನು ನಾಶಮಾಡುವ ಧರ್ಮರಾಜನು ಒಳ್ಳೆಯ ಹಸ್ತಗಳುಳ್ಳ ತನ್ನ ದೃಢವಾದ ಬಾಹುಗಳನ್ನು ಮುಂದೆ ಚಾಚಿ, ಕೋಪದಿಂದ ನೃತ್ಯವನ್ನು ಮಾಡುತ್ತಾ ಈ ಶಲ್ಯನು ಸತ್ತೇ ಹೋದ! ಎಂಬುದಾಗಿ ಗರ್ಜಿಸುತ್ತಾ ಶಕ್ತ್ಯಾಯುಧವನ್ನು ಪ್ರಯೋಗಿಸಿದನು.

ಸ್ಫುರತ್ ಪ್ರಭಾಮಂಡಲಮಂಶುಜಾಲೈಃ
ಧರ್ಮಾತ್ಮನೋ ಮದ್ರವಿನಾಶಕಾಲೇ ।
ಪುರತ್ರಯಪ್ರೋತ್ಸರಣೇ ಪುರಸ್ತಾ-
ನ್ಮಾಹೇಶ್ವರಂ ರೂಪಮಭೂತ್ ತದಾನೀಮ್ ॥೫೪॥

ಶಲ್ಯನನ್ನು ಕೊಲ್ಲುವ ಆ ಸಂದರ್ಭದಲ್ಲಿ ಕಾಂತಿಯಿಂದ ತುಂಬಿದ ಧರ್ಮರಾಜನು ತ್ರಿಪುರವನ್ನು ನಾಶಮಾಡುವಾಗಿನ ರುದ್ರನ ರೂಪವನ್ನು ಪಡೆದನು.

ಆವರ್ತನಾಕುಂಚಿತಬಾಹುದಂಡಃ
ಸಂಧ್ಯಾವಿಹಾರೀ ತನುವೃತ್ತಮಧ್ಯಃ ।
ವಿಶಾಲವಕ್ಷಾ ಭಗವಾನ್ ಹರೋ ಯಥಾ
ಸುದುರ್ನಿರೀಕ್ಷ್ಯೋಽಭವದರ್ಜುನಾಗ್ರಜಃ ॥೫೫॥

ಆಯುಧವನ್ನು ತಿರುಗಿಸುವುದಕ್ಕಾಗಿ ಬಾಹುಗಳನ್ನು ಬಗ್ಗಿಸಿಕೊಂಡಿರುವ, ತೆಳ್ಳಗಿನ ನಡುಬಾಗವುಳ್ಳ, ವಿಶಾಲವಾದ ಎದೆಯುಳ್ಳ ಭಗವಾನ್ ರುದ್ರನು ಸಂಧ್ಯಾಕಾಲದಲ್ಲಿ ಧರ್ಮರಕ್ಷಣೆಗಾಗಿ ಶೂಲವನ್ನು ಹಿಡಿದುಕೊಂಡು ಹೇಗಿದ್ದನೋ ಹಾಗೆ ಅರ್ಜುನನ ಅಗ್ರಜನಾದ ಧರ್ಮರಾಜನು ಭಯಂಕರರೂಪದಿಂದಾಗಿ ನೋಡಲಿಕ್ಕೇ ಅಸಾಧ್ಯನಾಗಿದ್ದನು.

ತಾಂ ಸರ್ವಶಕ್ತ್ಯಾ ಪ್ರಹಿತಾಂ ಸಶಕ್ತಿಂ
ಯುಧಿಷ್ಠಿರೇಣಾಪ್ರತಿವಾರ್ಯವೀರ್ಯಾಮ್ ।
ಪ್ರತಿಗ್ರಹಾಯಾಭಿನನಂದ ಶಲ್ಯಃ
ಸಮ್ಯಗ್ಹುತಾಮಗ್ನಿರಿವಾಜ್ಯಧಾರಾಮ್ ॥೫೬॥

ಯುಧಿಷ್ಠಿರನು ತನ್ನೆಲ್ಲಾ ಶಕ್ತಿಯನ್ನು ಉಪಯೋಗಿಸಿ ತಡೆಯಲಾದ ಸಾಮರ್ಥ್ಯವುಳ್ಳ ಶಕ್ತ್ಯಾಯುಧವನ್ನು ಪ್ರಯೋಗಿಸಿದ್ದಾನೆ. ಅಂತಹ ಆಯುಧವನ್ನು ಸ್ವೀಕರಿಸಲು ಶಲ್ಯನಿಗೆ ಬಹಳ ಸಂತೋಷವಾಯಿತು. ಆಜ್ಯಧಾರೆಯನ್ನು ಸ್ವೀಕರಿಸಲು ಮುನ್ನುಗ್ಗುವ ಹುತಾಶನ ಅಗ್ನಿಯಂತೆ ಸ್ವೀಕರಿಸಲು ಉದ್ಯುಕ್ತನಾದನು.

ಸಾ ತಸ್ಯ ಮರ್ಮಾಣಿ ವಿದಾರ್ಯ ಶುಭ್ರಮ್
ಉರೋ ವಿಶಾಲಂ ಚ ತಥೈವ ಭಿತ್ತ್ವಾ ।
ವಿವೇಶ ಗಾಂ ತೋಯಮಿವಾಪ್ರಸಕ್ತಾ
ಯಶೋ ವಿಶಾಲಂ ನೃಪತೇರ್ಹರಂತೀ ॥೫೭॥

ಆ ಶಕ್ತ್ಯಾಯುಧವು ಶಲ್ಯನ ಶುಭ್ರವಾದ ಮರ್ಮಸ್ಥಾನವನ್ನು ಸೀಳಿ ವಿಶಾಲವಾದ ಎದೆಯನ್ನೂ ಸೀಳಿತು. ನೀರು ವೇಗವಾಗಿ ಭೂಮಿಯನ್ನು ಪ್ರವೇಶಿಸುವಂತೆ ರಾಜನ ಸರ್ವತ್ರ ವಿಸ್ತೃತವಾದ ಕೀರ್ತಿಯನ್ನು ನಾಶಮಾಡಿತು.

ನಾಸಾಕ್ಷಿಕರ್ಣಾಸ್ಯವಿನಿಃಸೃತೇನ
ಪ್ರಸ್ಯಂದತಾ ಚ ವ್ರಣಸಂಭವೇನ ।
ಸಂಸಿಕ್ತಗಾತ್ರೋ ರುಧಿರೇಣ ಸೋಽಭೂತ್
ಕ್ರೌಂಚೋ ಯಥಾ ಸ್ಕಂದಹತೋ ಮಹಾದ್ರಿಃ ॥೫೮॥

ಮೂಗು, ಕಣ್ಣು, ಕಿವಿ, ಬಾಯಿಗಳಲ್ಲಿ ಗಾಯಗೊಂಡು ರಕ್ತವನ್ನು ಸುರಿಸುತ್ತಾ ಶಲ್ಯನ ಮೈಯೆಲ್ಲಾ ರಕ್ತದಿಂದ ತೊಯ್ದು ಹೋಯಿತು. ಸ್ಕಂದನಿಂದ ಪುಡಿಯಾಗಿ ತನ್ನಲ್ಲಿನ ಗೈರಿಕಾದಿ ಧಾತುಗಳಿಂದ ರಕ್ತವರ್ಣಕ್ಕೆ ತಿರುಗಿದ ಕ್ರೌಂಚಪರ್ವತದ ಹಾಗೆ ಶಲ್ಯನು ಕಾಣಿಸಿಕೊಂಡನು.

ಪ್ರಸಾರ್ಯ ಬಾಹೂ ಸ ರಥಾದ್ಗತೋ ಗಾಂ
ಸಂಛಿನ್ನವರ್ಮಾ ಕುರುನಂದನೇನ ।
ಮಹೇಂದ್ರವೀರ್ಯಪ್ರತಿಮೋ ಮಹಾತ್ಮಾ
ವಜ್ರಾಹತಂ ಶೃಂಗಮಿವಾಚಲಸ್ಯ ॥೫೯॥

ಧರ್ಮರಾಜನು ಶಲ್ಯನ ಕವಚವನ್ನು ತುಂಡರಿಸಿದಾಗ ಶಲ್ಯನು ಕೈಗಳನ್ನು ಚಾಚಿಕೊಂಡು ರಥದಿಂದ ನೆಲದ ಮೇಲೆ ಬಂದನು. ದೇವೇಂದ್ರನ ಸದೃಶವಾದ ಪರಾಕ್ರಮವುಳ್ಳ ಮಹಾತ್ಮ ಶಲ್ಯನು ವಜ್ರಾಯುಧದಿಂದ ಪುಡಿಯಾದ ಪರ್ವತದ ಶಿಖರದಂತೆ ಕಂಡನು.

ತತೋ ನಿಪತಿತೋ ಭೂಮಾವಿಂದ್ರಧ್ವಜ ಇವೋಚ್ಛ್ರಿತಃ ।
ಬಾಹೂ ಪ್ರಸಾರ್ಯಾಭಿಮುಖೋ ಧರ್ಮರಾಜಸ್ಯ ಮದ್ರರಾಟ್ ॥೬೦॥

ನೆಲದ ಮೇಲೆ ಬಿದ್ದ ಶಲ್ಯನು ಎತ್ತರವಾದ ಇಂದ್ರಧ್ವಜದಂತೆ ಕಂಡನು. ಎರಡು ಕೈಗಳನ್ನು ಚಾಚಿಕೊಂಡು ಧರ್ಮರಾಜನ ಎದುರುಗಡೆ ಬಂದನು.

ಶಕ್ತ್ಯಾ ವಿಭಿನ್ನಹೃದಯೋ ವಿಪ್ರಯುಕ್ತಾಯುಧಧ್ವಜಃ ।
ಹತೋ ನಿಪತಿತೋ ಭೂಮಾವಿಂದ್ರಧ್ವಜ ಇವ ಸ್ಥಿತಃ ॥೬೧॥

ಶಕ್ತ್ಯಾಯುಧದಿಂದ ಶಲ್ಯನ ಎದೆ ಒಡೆದಿದೆ. ಆಯುಧ-ಧ್ವಜಗಳು ಮುರಿದು ಹೋಗಿವೆ. ಇಂದ್ರನ ಧ್ವಜದ ಹಾಗೆ ಶೋಭಿಸುತ್ತಿದ್ದ ಶಲ್ಯನು ಭೂಮಿಯಲ್ಲಿ ಸತ್ತುಬಿದ್ದನು.

ಸ ತಥಾ ಭಿನ್ನಸರ್ವಾಂಗೋ ರುಧಿರೇಣ ಸಮುಕ್ಷಿತಃ ।
ಪ್ರತ್ಯುದ್ಗತ ಇವ ಪ್ರೇಮ್ಣಾ ಭೂಮ್ಯಾ ಸ ನರಪುಂಗವಃ ॥೬೨॥

ಹೀಗೆ ಎದೆ ಒಡೆದು ರಕ್ತಸಿಕ್ತನಾದ ಶಲ್ಯನು ನೆಲದ ಮೇಲೆ ಬಿದ್ದಿದ್ದಾನೆ. ಈ ದೃಶ್ಯ ಭೂಮಿಯು ತನ್ನ ಪ್ರಿಯನಾದ ರಾಜನನ್ನು ಪ್ರೀತಿಯಿಂದ ಸ್ವಾಗತಿಸಿದಂತೆ ಇತ್ತು.

ಪ್ರಿಯಯಾ ಕಾಂತಯಾ ಕಾಂತಃ ಪತಮಾನ ಇವೋರಸಿ ।
ಚಿರಂ ಭುಕ್ತ್ವಾ ವಸುಮತೀಂ ಪ್ರಿಯಾಂ ಕಾಂತಾಮಿವ ಪ್ರಭುಃ ॥೬೩॥

ಸರ್ವೈರಂಗೈಃ ಸಮಾಶ್ಲಿಷ್ಯ ಪ್ರಸುಪ್ತ ಇವ ಸೋಽಭವತ್ ।
ಧರ್ಮ್ಯೇ ಧರ್ಮಾತ್ಮನಾ ಯುದ್ಧೇ ನಿಹತೋ ಧರ್ಮಸೂನುನಾ ॥೬೪॥

ಪ್ರಿಯತಮನು ತನ್ನ ಪ್ರಿಯೆಯ ಎದೆಯಲ್ಲಿ ತಲೆಯಿಟ್ಟು ಬೀಳುವಂತೆ ಭೂಮಿಯನ್ನು ಬಹಳ ಸಮಯದಿಂದ ಆಳಿ ಭೂಮಿಯ ಮೇಲೆಯೇ ಬಿದ್ದಿದ್ದಾನೆ. ಅಂಗಾತ ಮಲಗಿದ ಶಲ್ಯನನ್ನು ನೋಡಿದರೆ ತನ್ನ ಎಲ್ಲಾ ಅಂಗಗಳಿಂದಲೂ ಪ್ರಿಯತಮೆಯನ್ನು ಆಲಿಂಗಿಸಿಕೊಂಡು ಮಲಗಿದಂತೆ ಇತ್ತು. ಧರ್ಮಯುದ್ಧದಲ್ಲಿ ಧರ್ಮಾವತಾರಿಯಾದ ಯುಧಿಷ್ಠಿರನು ಶಲ್ಯನನ್ನು ಕೊಂದಿದ್ದಾನೆ.

ಸಮ್ಯಗ್ ಹುತ ಇವೋತ್ಸೃಷ್ಟಃ ಪ್ರಶಾಂತೋಽಗ್ನಿರಿವಾಧ್ವರೇ ॥೬೫॥

ಯಜ್ಞದಲ್ಲಿ ಚೆನ್ನಾಗಿ ಹುತವಾಗಿ, ಕೊನೆಗೆ ಸ್ವಿಷ್ಟಕೃತ್ ಆಹುತಿಯನ್ನೂ ಸ್ವೀಕರಿಸಿ, ಯಾಗಾಗ್ನಿಯು ನಂದಿಹೋಗುವಂತೆ ಶಲ್ಯನು ಪ್ರಾಣತ್ಯಾಗ ಮಾಡಿದನು.

ತಂ ಶಾಂತಮಪಿ ಮದ್ರೇಶಂ ಲಕ್ಷ್ಮೀರ್ನೈವ ವ್ಯಮುಂಚತ ॥೬೬॥

ಹೀಗೆ ಪ್ರಾಣಬಿಟ್ಟ ಶಲ್ಯನನ್ನು ಲಕ್ಷ್ಮಿಯು ಬಿಡಲಿಲ್ಲ. (ಭೂಮಿಯಲ್ಲಿಯೇ ಬಿದ್ದಿರುವ ಕಾರಣ ಲಕ್ಷ್ಮಿಯು ಅವನ ಜೊತೆಗೇ ಇದ್ದಳು.)

ತತೋ ಯುಧಿಷ್ಠಿರಶ್ಚಾಪಮಾದಾಯೇಂದ್ರಧನುಷ್ಪ್ರಭಮ್ ।
ವ್ಯಧಮದ್ ದ್ವಿಷತಃ ಸಂಖ್ಯೇ ಖಗರಾಡಿವ ಪನ್ನಗಾನ್ ॥೬೭॥

ಶಲ್ಯನು ಬಿದ್ದಮೇಲೆ ಯುಧಿಷ್ಠಿರನು ಇಂದ್ರಧನುಸ್ಸಿನ ಕಾಂತಿಯುಳ್ಳ ಬಿಲ್ಲನ್ನುಹಿಡಿದು ರಣರಂಗದಲ್ಲಿ ಶತ್ರುಗಳನ್ನು ನಾಶ ಮಾಡಿದನು. ಈ ದೃಶ್ಯವು ಗರುಡನು ಸರ್ಪಗಳನ್ನು ನಾಶ ಮಾಡಿದಂತೆ ಇತ್ತು.

ದೇಹಾಂಸ್ತು ನಿಶಿತೈರ್ಭಲ್ಲೈ ರಿಪೂಣಾಂ ನಾಶಯತ್ ಕ್ಷಣಾತ್ ॥೬೮॥

ಶತ್ರುಗಳ ಶರೀರಗಳನ್ನು ಭಲ್ಲೆಯಿಂದ ಕ್ಷಣದಲ್ಲಿ ಧರ್ಮಜನು ನಾಶಮಾಡಿದನು.

ತತಃ ಪಾರ್ಥಸ್ಯ ಬಾಣೌಘೈರಾವೃತಾಃ ಸೈನಿಕಾಸ್ತವ ।
ನಿಮೀಲಿತಾಕ್ಷಾಃ ಕೂಜಂತಿ ಭೃಶಮನ್ಯೋನ್ಯಕರ್ಶಿತಾಃ ॥೬೯॥

ಇತ್ತ ಅರ್ಜುನನು ನಿನ್ನ ಕಡೆಯ ಸೈನಿಕರ ಮೇಲೆ ಬಾಣಗಳನ್ನು ಪುಂಖಾನುಪುಂಖವಾಗಿ ಪ್ರಯೋಗಿಸಿದ್ದಾನೆ. ಇದರಿಂದಾಗಿ ಸೈನಿಕರಿಗೆ ಕಣ್ಣು ಬಿಡಲೂ ಆಗುತ್ತಿರಲಿಲ್ಲ. ಪರಸ್ಪರ ತಾವು ತಾವೇ ಎಳೆದಾಡಿಕೊಳ್ಳುತ್ತಿದ್ದರು.

ಸಂತಪ್ತಾ ಬಭ್ರಮುಶ್ಚೈವ ವಿಶಸ್ತಾಯುಧಜೀವಿತಾಃ ॥೭೦॥

ಆಯುಧಗಳಿಂದಲೇ ಬದುಕಬಲ್ಲ ಆ ನಿನ್ನ ಸೈನಿಕರು ಬಾಣಗಳ ಆಘಾತದಿಂದಾಗಿ ಬಹಳ ದುಃಖಪಟ್ಟರು ಮತ್ತು ಭ್ರಮೆಗೆ ಒಳಗಾದರು.

ತತಃ ಶಲ್ಯೇ ನಿಪತಿತೇ ಮದ್ರರಾಜಾನುಜೋ ಯುವಾ ।
ಭ್ರಾತುಃ ಸರ್ವೈರ್ಗುಣೈರ್ಯುಕ್ತೋ ರಥೀ ಪಾಂಡವಮಭ್ಯಯಾತ್॥೭೧॥

ಶಲ್ಯನು ಸತ್ತ ಅನಂತರ ಅವನ ತಮ್ಮನು ಪಾಂಡವರನ್ನು ಎದುರಿಸಿದನು. ಯುವಕನಾದ ಈತನು ಎಲ್ಲಾ ಗುಣಗಳಿಂದಲೂ ಶಲ್ಯನಿಗೆ ಸಮಾನನಾಗಿದ್ದನು. ಮಹಾರಥಿಯೂ ಆಗಿದ್ದನು.

ವಿವ್ಯಾಧ ಚ ನರಶ್ರೇಷ್ಠೋ ನಾರಾಚೈರ್ಬಹುಭಿಸ್ತ್ವರನ್ ।
ಹತಸ್ಯಾಪಚಿತಿಂ ಭ್ರಾತುಃ ಚಿಕೀರ್ಷನ್ ಯುದ್ಧದುರ್ಮದಃ ॥೭೨॥

ಯುದ್ಧದಲ್ಲಿ ಯಾರಿಂದಲೂ ಮಣಿಸಲಾಗದ ರಾಜನು ಸತ್ತು ಹೋದ ಅಣ್ಣನಿಗೆ ಔರ್ಧ್ವದೈಹಿಕ ಆರಾಧನೆ ಮಾಡುವ ಇಚ್ಛೆಯುಳ್ಳವನಾಗಿ ಬಾಣಗಳಿಂದ ಬಹಳವಾಗಿ ಪಾಂಡವರನ್ನು ಬೇಗನೇ ಹೊಡೆದನು.

ತಂ ವಿವ್ಯಾಧಾಶುಗೈಃ ಷಡ್ಭಿರ್ಧರ್ಮರಾಜಸ್ತ್ವರನ್ನಿವ ।
ಕಾರ್ಮುಕಂ ಚಾಸ್ಯ ಚಿಚ್ಛೇದ ಕ್ಷುರಾಭ್ಯಾಂ ಧ್ವಜಮೇವ ಚ ॥೭೩॥

ಕೂಡಲೇ ಧರ್ಮರಾಜನು ಆರು ಬಾಣಗಳಿಂದ ಶಲ್ಯನ ತಮ್ಮನನ್ನು ಹೊಡೆದನು. ಎರಡು ಕತ್ತಿಗಳಿಂದ ಅವನ ಬಿಲ್ಲನ್ನೂ, ರಥದ ಧ್ವಜವನ್ನೂ ತುಂಡರಿಸಿದನು.

ತತೋಽಸ್ಯ ದೀಪ್ಯಮಾನೇನ ಸುದೃಢೇನ ಶಿತೇನ ಚ ।
ಪ್ರಮುಖೇ ವರ್ತಮಾನಸ್ಯ ಭಲ್ಲೇನಾಪಾಹರಚ್ಛಿರಃ ॥೭೪॥

ಅನಂತರ ಧರ್ಮರಾಜನು ಗಟ್ಟಿಯಾದ ಹರಿತವಾದ ಪ್ರಕಾಶಿಸುತ್ತಿದ್ದ ಭಲ್ಲೆಯಿಂದ ಶತ್ರುಸೇನೆಯ ಮುಂಭಾಗದಲ್ಲಿರುವ ಶಲ್ಯನ ಸಹೋದರನ ತಲೆಯನ್ನು ಕಡಿದನು.

ಸಕುಂಡಲಂ ತದ್ ದದೃಶೇ ಪತಮಾನಂ ಶಿರೋ ರಣೇ ।
ಪುಣ್ಯಕ್ಷಯಮಿವ ಪ್ರಾಪ್ಯ ಪುನಃ ಸ್ವರ್ಗಾದಿವ ಚ್ಯುತಃ ॥೭೫॥

ಸ್ವರ್ಗಕ್ಕೆ ಹೋದವನು ಪುಣ್ಯಹ್ರಾಸವಾದಾಗ ಕೆಳಗೆ ಬೀಳುತ್ತಾನೆ. ಹಾಗೆಯೇ ಕರ್ಣಕುಂಡಲಸಹಿತವಾದ ತಲೆ ರಣರಂಗದಲ್ಲಿ ಕೆಳಗೆ ಬಿತ್ತು.

ತಸ್ಯಾಪಕೃಷ್ಟಶೀರ್ಷಂ ತತ್ ಶರೀರಮಪತದ್ ರಥಾತ್ ।
ರುಧಿರೇಣಾವಸಿಕ್ತಾಂಗಂ ದೃಷ್ಟ್ವಾ ಸೈನ್ಯಮಭಜ್ಯತ ॥೭೬॥

ತಲೆಕಡಿದ ಅವನ ಶರೀರವು ರಕ್ತದಿಂದ ಸಿಕ್ತವಾಗಿ ಕೆಳಗೆ ಬಿತ್ತು. ಅದನ್ನು ನೋಡಿದ ಸೈನ್ಯವು ದಿಕ್ಕಾಪಾಲಾಯಿತು.

ವಿಚಿತ್ರಕವಚೇ ತಸ್ಮಿನ್ ಹತೇ ಮದ್ರಾಧಿಪಾನುಜೇ ।
ಹಾಹಾಕಾರಂ ವಿಕುರ್ವಾಣಾಃ ಕುರವೋ ವಿಪ್ರದುದ್ರುವುಃ ॥೭೭॥

ವಿಚಿತ್ರಕವಚವನ್ನು ಧಾರಣೆ ಮಾಡಿದ್ದ ಶಲ್ಯನ ತಮ್ಮನು ಸತ್ತಾಗ ಕುರುಸೈನಿಕರು ಹಾಹಾಕಾರವನ್ನು ಮಾಡುತ್ತಾ ಎಲ್ಲಾ ಕಡೆ ಓಡಿದರು.

ಶಲ್ಯಾನುಜಂ ಹತಂ ದೃಷ್ಟ್ವಾ ತಾವಕಾಸ್ಯಕ್ತಜೀವಿತಾಃ ।
ವಿತ್ರೇಸುಃ ಪಾಂಡವಭಯಾತ್ ಸರ್ವೇ ಧ್ವಸ್ತಾಸ್ತದಾ ಭೃಶಮ್ ॥೭೮॥

ಶಲ್ಯನ ತಮ್ಮನು ಸತ್ತಿದ್ದನ್ನು ನೋಡಿದ ನಿನ್ನ ಕಡೆಯವರು ಪ್ರಾಣ ಕಳೆದುಕೊಂಡ ಹಾಗೆ ಭಯಗೊಂಡರು. ಆಗ ಪಾಂಡವರ ಭಯದಿಂದಲೇ ಎಲ್ಲರೂ ನಾಶವಾದರು.

ತಾಂಸ್ತಥಾ ಭಜ್ಯಮಾನಾಂಸ್ತು ಕೌರವಾನ್ ಭರತರ್ಷಭ ।
ಶಿನೇರ್ನಪ್ತಾ ಕಿರನ್ ಬಾಣೈರಭ್ಯವರ್ತತ ಸಾತ್ಯಕಿಃ ॥೭೯॥

ಭಾರತೋತ್ತಮನೇ! ಹೀಗೆ ಎಲ್ಲ ಕಡೆಯೂ ಬೇರೆ ಬೇರೆಯಾಗಿ ಓಡುತ್ತಿದ್ದ ಕೌರವರ ಮೇಲೆ ಶಿನಿಯ ಮೊಮ್ಮಗನಾದ ಸಾತ್ಯಕಿಯು ಬಾಣಗಳ ಮಳೆಯನ್ನು ಸುರಿಸಿದನು.

ತಮಾಯಾಂತಂ ಮಹೇಷ್ವಾಸಮಪ್ರಮತ್ತಂ ದುರಾಸದಮ್ ।
ಹಾರ್ದಿಕ್ಯಸ್ತ್ವರಿತೋ ರಾಜನ್ ಪ್ರತ್ಯಗೃಹ್ಣಾದಭೀತವತ್ ॥೮೦॥

ರಾಜನೇ! ದೊಡ್ಡ ಬಿಲ್ಗಾರನಾದ, ಗಾಬರಿಗೆ ಒಳಗಾಗದ, ಎದುರಿಸಲು ಅಶಕ್ಯನಾದ ಸಾತ್ಯಕಿಯನ್ನು ಕೃತವರ್ಮನು ಭಯಗೊಳ್ಳದೆ ಕೂಡಲೇ ತಡೆದನು.

ತೌ ಸಮೇತೌ ಮಹಾತ್ಮಾನೌ ವಾರ್ಷ್ಣೇಯಾವಪರಾಜಿತೌ ।
ಹಾರ್ದಿಕ್ಯಃ ಸಾತ್ಯಕಿಶ್ಚೈವ ಸಿಂಹಾವಿವ ಬಲೋತ್ಕಟೌ ॥೮೧॥

ವೃಷ್ಣಿವಂಶದಲ್ಲಿ ಜನಿಸಿದ ಮಹಾತ್ಮರಾದ ಅವರಿಬ್ಬರೂ ಸೋಲುವವರಲ್ಲ. ಹಾರ್ದಿಕ್ಯಪುತ್ರನಾದ ಕೃತವರ್ಮ ಮತ್ತು ಸಾತ್ಯಕಿ ಇವರಿಬ್ಬರೂ ಬಲಶಾಲಿಗಳಾದ ಸಿಂಹಗಳ ಹಾಗೆ ಯುದ್ಧದಲ್ಲಿ ಎದುರಾದರು.

ಇಷುಭಿರ್ವಿಮಲಾಭಾಸ್ಯೈಃ ಛಾದಯಂತೌ ಪರಸ್ಪರಮ್ ।
ಅರ್ಚಿರ್ಭಿರಿವ ಸೂರ್ಯಸ್ಯ ದಿವಾಕರಸಮಪ್ರಭೌ ॥೮೨॥

ದಿವಾಕರ ಸಮಾನವಾದ ಪ್ರಭೆಯುಳ್ಳ ಇಬ್ಬರೂ ಸೂರ್ಯನ ಕಿರಣಗಳಂತೆ ಶುಭ್ರಕಾಂತಿಯುಳ್ಳ ಬಾಣಗಳಿಂದ ಪರಸ್ಪರವಾಗಿ ಆಚ್ಛಾದಿಸಿಕೊಂಡರು.

ಚಾಪಮಾರ್ಗಬಲೋದ್ಧೂತಾನ್ ಮಾರ್ಗಣಾನ್ ವೃಷ್ಣಿಸಿಂಹಯೋಃ ।
ಆಕಾಶೇ ಸಮಪಶ್ಯಾಮ ಪತಂಗಾನಿವ ಶೀಘ್ರಗಾನ್ ॥೮೩॥

ವೃಷ್ಣಿವಂಶದ ಶ್ರೇಷ್ಠರಾದ ಕೃತವರ್ಮ-ಸಾತ್ಯಕಿಯರ ಬಿಲ್ಲಿನಿಂದ ವೇಗವಾಗಿ ಪ್ರಯುಕ್ತವಾದ ಬಾಣಗಳು ಆಕಾಶದಲ್ಲಿ ಶೀಘ್ರಗಾಮಿಗಳಾದ ಪತಂಗಗಳ ಹಾಗೆ ನಮಗೆ ಕಂಡವು.

ಸಾತ್ಯಕಿಂ ದಶಭಿರ್ವಿದ್ಧ್ವಾ ಹಯಾಂಶ್ಚಾಸ್ಯ ತ್ರಿಭಿಃ ಶರೈಃ ।
ಚಾಪಮೇಕೇನ ಚಿಚ್ಛೇದ ಹಾರ್ದಿಕ್ಯೋ ನತಪರ್ವಣಾ ॥೮೪॥

ಕೃತವರ್ಮನು ಬಾಗಿದ ಸಂಧಿಗಳುಳ್ಳ ಹತ್ತುಬಾಣಗಳಿಂದ ಸಾತ್ಯಕಿಯನ್ನು ಹೊಡೆದನು. ಮೂರು ಬಾಣಗಳಿಂದ ಅವನ ಕುದುರೆಗಳನ್ನು ಹೊಡೆದನು. ಒಂದು ಬಾಣದಿಂದ ಅವನ ಬಿಲ್ಲನ್ನು ಮುರಿದನು.

ತನ್ನಿಕೃತ್ತಂ ಧನುಃಶ್ರೇಷ್ಠಮಪಾಸ್ಯ ಶಿನಿಪುಂಗವಃ ।
ಅನ್ಯದಾದತ್ತ ವೇಗೇನ ಧನುರ್ಜಲದನಿಃಸ್ವನಮ್ ॥೮೫॥

ಸಾತ್ಯಕಿಯು ಮುರಿದ ಬಿಲ್ಲನ್ನು ಬಿಸಾಕಿ, ಕೂಡಲೇ ಗುಡುಗಿನ ಧ್ವನಿಯನ್ನು ಉಂಟುಮಾಡುವ ಇನ್ನೊಂದು ಬಿಲ್ಲನ್ನು ತೆಗೆದುಕೊಂಡನು.

ತದಾದಾಯ ಧನುಃಶ್ರೇಷ್ಠಂ ವರಿಷ್ಠಃ ಸರ್ವಧನ್ವಿನಾಮ್ ।
ಹಾರ್ದಿಕ್ಯಂ ದಶಭಿರ್ಬಾಣೈಃ ಪ್ರತ್ಯವಿಧ್ಯತ್ ಸ್ತನಾಂತರೇ ॥೮೬॥

ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಸಾತ್ಯಕಿಯು ಆ ಉತ್ತಮವಾದ ಬಿಲ್ಲನ್ನು ಹಿಡಿದುಕೊಂಡು ಹತ್ತು ಬಾಣಗಳಿಂದ ಕೃತವರ್ಮನ ಎದೆಗೆ ಗುರಿಯಿಟ್ಟುಹೊಡೆದನು.

ತತೋ ಯುಗಂ ರಥೇಷಾಂ ಚ ಛಿತ್ವಾ ಭಲ್ಲೈಃ ಸುಸಂಶಿತೈಃ ।
ಅಶ್ವಾಂಶ್ಚಾಸ್ಯಾವಧೀತ್ ತೂರ್ಣಂ ತಥೋಭೌ ಪಾರ್ಷ್ಣಿಸಾರಥೀ ॥೮೭॥

ಅನಂತರ ರಥದ ಯುಗ, ರಥದ ಈಷಾದಂಡ ಇವುಗಳನ್ನೂ ಭಲ್ಲೆಯಿಂದ ತುಂಡರಿಸಿ, ಕೂಡಲೇ ಅವನ ಕುದುರೆಗಳನ್ನೂ ಸಾಯಿಸಿದನು. ಹೀಗೆ ಕೃತವರ್ಮ-ಸಾತ್ಯಕಿಯರು ಪರಸ್ಪರವಾಗಿ ಯುದ್ಧಮಾಡಿದರು.

ಹಾರ್ದಿಕ್ಯಂ ವಿರಥಂ ದೃಷ್ಟ್ವಾ ಕೃಪಃ ಶಾರದ್ವತಃ ಪ್ರಭೋ ।
ಅಪೋವಾಹ ತತಃ ಕ್ಷಿಪ್ರಂ ರಥಮಾರೋಪ್ಯ ವೀರ್ಯವಾನ್ ॥೮೮॥

ಪ್ರಭುವೇ! ಕೃತವರ್ಮನು ರಥವನ್ನು ಕಳೆದುಕೊಂಡಿದ್ದನ್ನು ನೋಡಿದ ವೀರನಾದ ಕೃಪಾಚಾರ್ಯನು ಅವನನ್ನು ಕೂಡಲೇ ತನ್ನ ರಥದ ಮೇಲೆ ಹತ್ತಿಸಿಕೊಂಡು ಅಲ್ಲಿಂದ ಕರೆದುಕೊಂಡು ಹೋದನು.

ಮದ್ರರಾಜೇ ಹತೇ ರಾಜನ್ ವಿರಥೇ ಕೃತವರ್ಮಣಿ ।
ದುರ್ಯೋಧನಬಲಂ ಸರ್ವಂ ಪುನರಾಸೀತ್ ಪರಾಙ್ಮುಖಮ್ ॥೮೯॥

ಶಲ್ಯನು ಸತ್ತು, ಕೃತವರ್ಮನು ರಥಕಳೆದುಕೊಂಡಾಗ ದುರ್ಯೋಧನನ ಸೈನ್ಯವು ಪುನಃ ಸೋತುಹೋಯಿತು.

ಸ್ವೇ ಪರೇ ನಾವಬುಧ್ಯಂತ ಸೈನ್ಯೇ ತು ರಜಸಾ ವೃತೇ ।
ಬಲಂ ತು ಹತಭೂಯಿಷ್ಠಂ ತ್ರಸ್ತಮಾಸೀತ್ ಪರಾಙ್ಮುಖಮ್ ॥೯೦॥

ಎಲ್ಲಾ ಕಡೆಯೂ ಧೂಳು ತುಂಬಿದ್ದರಿಂದ ತನ್ನವರು ಯಾರು, ಪರರು ಯಾರು ಎಂಬುದನ್ನು ಸೈನಿಕರು ಗುರುತಿಸದಾದರು. ಹೆಚ್ಚಿನವರು ಸತ್ತಿದ್ದರಿಂದ ಕೌರವಸೈನ್ಯವು ಭಯಗೊಂಡು ಓಡಿ ಹೋಯಿತು.

ತತೋ ಮುಹೂರ್ತಾತ್ ತೇऽಪಶ್ಯನ್ ರಜೋ ಭೌಮಂ ಸಮುತ್ಥಿತಮ್ ।
ವಿವಿಧೈಃ ಶೋಣಿತಸ್ರಾವೈಃ ಪ್ರಶಾಂತಂ ಭರತರ್ಷಭ ॥೯೧॥

ಭರತಶ್ರೇಷ್ಠನೇ! ರಣರಂಗದಲ್ಲಿ ಭೂಮಿಯಿಂದ ಎದ್ದ ಧೂಳು ಅಲ್ಲಿ ಹರಿದ ರಕ್ತದ ಧಾರೆಗಳಿಂದ ತೊಯ್ದು, ಕ್ಷಣಮಾತ್ರದಲ್ಲಿ ಶಾಂತವಾದುದನ್ನು ಅವರು ನೋಡಿದರು.

ತತೋ ದುರ್ಯೋಧನೋ ದೃಷ್ಟ್ವಾ ಭಗ್ನಂ ಸ್ವಬಲಮಂತಿಕಾತ್ ।
ಜವೇನಾಪತತಃ ಪಾರ್ಥಾನ್ ಏಕಃ ಸರ್ವಾನವಾರಯತ್ ॥೯೨॥

ತನ್ನ ಸೈನ್ಯವೆಲ್ಲಾ ನಾಶವಾದುದನ್ನು ಹತ್ತಿರದಿಂದ ನೋಡಿದ ದುರ್ಯೋಧನನು ವೇಗದಿಂದ ಮುಂಬರುತ್ತಿದ್ದ ಪಾಂಡವರನ್ನು ಒಬ್ಬಂಟಿಯಾಗಿ ಎದುರಿಸಿದನು.

ತತೋ ಮುಹೂರ್ತಾತ್ ತೇऽಪಶ್ಯನ್ ತವ ಯೋಧಾಃ ಸಮಾಗತಾನ್॥
ಪಾಂಡವಾನ್ ಸರಥಾನ್ ದೃಷ್ಟ್ವಾ ಧೃಷ್ಟದ್ಯುಮ್ನಂ ಚ ಪಾರ್ಷತಮ್ ॥
ಆನರ್ತಂ ಚ ದುರಾಧರ್ಷಂ ಶಿತೈರ್ಬಾಣೈರವಾರಯತ್ ।
ತಂ ಪರೇ ನಾತ್ಯವರ್ತಂತ ಮರ್ತ್ಯಾ ಮೃತ್ಯುಮಿವಾಗತಮ್ ॥೯೫॥

ರಥಗಳ ಮೇಲೆ ಬರುತ್ತಿರುವ ಪಾಂಡವರನ್ನೂ, ಧೃಷ್ಟದ್ಯುಮ್ನನನ್ನೂ, ದುರ್ಜಯನಾದ ಆನರ್ತಾಧಿಪತಿಯನ್ನೂ ಹರಿತವಾದ ಬಾಣಗಳಿಂದ ತಡೆದನು. ಮರಣಶೀಲರಾದ ಮಾನವರು ಮೃತ್ಯುವನ್ನು ಮೀರಿಹೋಗಲು ಸಾಧ್ಯವಿಲ್ಲ. ಹಾಗೆಯೇ ದುರ್ಯೋಧನನನ್ನೂ ಯಾರಿಗೂ ಮೀರಿ ಹೋಗಲು ಆಗಲಿಲ್ಲ.

ಅಥಾನ್ಯಂ ರಥಮಾಸ್ಥಾಯ ಹಾರ್ದಿಕ್ಯೋಽಪಿ ನ್ಯವರ್ತತ ॥೯೬॥

ಅಷ್ಟರಲ್ಲಿ ಕೃತವರ್ಮನೂ ಇನ್ನೊಂದು ರಥವನ್ನು ಹತ್ತಿ ಯುದ್ಧಕ್ಕೆ ಬಂದನು.

ತತೋ ಯುಧಿಷ್ಠಿರೋ ರಾಜಾ ತ್ವರಮಾಣೋ ಮಹಾರಥಃ ।
ಚತುರ್ಭಿರ್ನಿಜಘಾನಾಶ್ವಾನ್ ಪತ್ರಿಭಿಃ ಕೃತವರ್ಮಣಃ ॥೯೭॥

ಕೂಡಲೇ ಧರ್ಮರಾಜನು ನಾಲ್ಕು ಬಾಣಗಳಿಂದ ಕೃತವರ್ಮನ ರಥದ ಕುದುರೆಗಳನ್ನು ಸಾಯಿಸಿದನು.

ವಿವ್ಯಾಧ ಗೌತಮಂ ಚಾಪಿ ಷಡ್ಭಿರ್ಭಲ್ಲೈಃ ಸುತೇಜನೈಃ ॥೯೮॥

ಒಳ್ಳೆಯ ತೇಜಸ್ಸುಳ್ಳ ಆರು ಭಲ್ಲೆಗಳಿಂದ ಕೃಪನನ್ನು ಹೊಡೆದನು.

ಅಶ್ವತ್ಥಾಮಾ ತತೋ ರಾಜ್ಞಾ ಹತಾಶ್ವಂ ವಿರಥೀಕೃತಮ್ ।
ಸಮಪೋವಾಹ ಹಾರ್ದಿಕ್ಯಂ ಸ್ವರಥೇನ ಯುಧಿಷ್ಠಿರಾತ್ ॥೯೯॥

ಅನಂತರ ಅಶ್ವತ್ಥಾಮನು ರಥರಹಿತನಾದ ಕೃತವರ್ಮನನ್ನು ತನ್ನ ರಥದಲ್ಲಿ ಹತ್ತಿಸಿಕೊಂಡು ಯುಧಿಷ್ಠಿರನ ಬಳಿಯಿಂದ ಬೇರೆಡೆಗೆ ಕರೆದೊಯ್ದನು.

ತತಃ ಶಾರದ್ವತೋಽಷ್ಟಾಭಿಃ ಪ್ರತ್ಯವಿಧ್ಯದ್ಯುಧಿಷ್ಠಿರಮ್ ।
ವಿವ್ಯಾಧ ಚಾಶ್ವಾನ್ ನಿಶಿತೈಃ ತಸ್ಯಾಷ್ಟಾಭಿಃ ಶಿಲೀಮುಖೈಃ ॥೧೦೦॥

ಕೃಪಾಚಾರ್ಯನು ಎಂಟು ಬಾಣಗಳಿಂದ ಧರ್ಮರಾಜನನ್ನು ಹೊಡೆದನು. ಮತ್ತೆ ಹರಿತವಾದ ಎಂಟು ಬಾಣಗಳಿಂದ ಅವನ ಕುದುರೆಗಳನ್ನೂ ಹೊಡೆದನು.

ಏವಮೇತನ್ಮಹಾರಾಜ ಯುದ್ಧಶೇಷಮವರ್ತತ ।
ತವ ದುರ್ಮಂತ್ರಿತೇ ಘೋರಂ ತವ ಪುತ್ರಸ್ಯ ಭಾರತ ॥೧೦೧॥

ಮಹಾರಾಜ! ಭರತಕುಲೋದ್ಭವನೇ! ನಿನ್ನ ಕುಬುದ್ಧಿಯಿಂದ ಪ್ರಾರಂಭವಾದ ಯುದ್ಧದಲ್ಲಿ ಕೊನೆಯ ಭಾಗದ ಯುದ್ಧವು ಹೀಗೆ ನಡೆಯಿತು.

ತಸ್ಮಿನ್ ಮಹೇಷ್ವಾಸವರೇ ವಿಶಸ್ತೇ
ಸಂಗ್ರಾಮಮಧ್ಯೇ ಕುರುಪುಂಗವೇನ ।

ಪಾರ್ಥಾಃ ಸಮಸ್ತಾಃ ಪರಮಪ್ರಹೃಷ್ಟಾಃ
ಶಂಖಾಂಶ್ಚ ದಧ್ಮುರ್ಹತಮೀಕ್ಷ್ಯ ಶಲ್ಯಮ್ ॥೧೦೨॥

ಹೀಗೆ ಮಹಾಬಿಲ್ಲಾರರಲ್ಲಿಯೇ ಶ್ರೇಷ್ಠನಾದ ಶಲ್ಯನು ರಣರಂಗದ ಮಧ್ಯದಲ್ಲಿ ಸತ್ತುಹೋಗಲು ಎಲ್ಲಾ ಪಾಂಡವರು ಬಹಳ ಸಂತೋಷಪಟ್ಟರು. ಸತ್ತುಹೋದ ಶಲ್ಯನನ್ನು ಕಂಡು ಆನಂದದಿಂದ ಶಂಖನಾದವನ್ನು ಮಾಡಿದರು.

ಯುಧಿಷ್ಠಿರಂ ಚ ಪ್ರಶಶಂಸುರಾಜೌ
ಸುರಾಃ ಪುರಾ ವೃತ್ರವಧೇ ಯಥೇಂದ್ರಮ್ ।
ಚಕ್ರುಶ್ಚ ನಾನಾವಿಧವಾದ್ಯಶಬ್ದಾನ್
ನಿನಾದಯಂತೋ ವಸುಧಾಂ ಸಮಂತಾತ್ ॥೧೦೩॥

ಹಿಂದೆ ವೃತ್ರಾಸುರನನ್ನು ಕೊಂದ ಇಂದ್ರನನ್ನು ದೇವತೆಗಳು ಕೊಂಡಾಡಿದಂತೆ ಪಾಂಡವರು ಯುದ್ಧದಲ್ಲಿ ಗೆದ್ದ ಧರ್ಮರಾಜನನ್ನು ಹೊಗಳಿದರು. ಬೇರೆ ಬೇರೆ ರೀತಿಯ ವಾದ್ಯಘೋಷಗಳನ್ನು ಉಂಟುಮಾಡುತ್ತಾ ಭೂಮಿಯನ್ನು ನಾದದಿಂದ ತುಂಬಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಸಪ್ತದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೆಂಟನೆಯ ಅಧ್ಯಾಯ

ಸಂಕುಲಯುದ್ಧ

ಸಂಜಯಃ

ಶಲ್ಯೇ ತು ನಿಹತೇ ರಾಜನ್ ಮದ್ರರಾಜಪದಾನುಗಾಃ ।
ರಥಾಃ ಸಪ್ತಶತಂ ವೀರಾ ನಿರ್ಯಯುರ್ಮಹತೋ ಬಲಾತ್ ॥೧॥

ಸಂಜಯ– ಸೇನಾಧಿಪತಿಯಾದ ಶಲ್ಯನು ಸತ್ತ ನಂತರ ಅವನ ಸಹಚರರಾದ ಏಳು ನೂರು ರಥಿಕವೀರರು ಕೌರವರ ಸೇನೆಯಿಂದ ಹೊರ ಹೊರಟರು.

ದುರ್ಯೋಧನಸ್ತು ದ್ವಿರದಮಾರುಹ್ಯಾಚಲಸನ್ನಿಭಮ್ ।
ಛತ್ರೇಣ ಧ್ರಿಯಮಾಣೇನ ವೀಜ್ಯಮಾನಶ್ಚ ಚಾಮರೈಃ ॥೨॥

ದುರ್ಯೋಧನನು ಪರ್ವತಸದೃಶವಾದ ಆನೆಯ ಮೇಲೇರಿ ಬಂದನು. ಅವನ ತಲೆಯ ಮೇಲೆ ಛತ್ರವನ್ನು ಹಿಡಿದಿದ್ದರು. ಚಾಮರಗಳಿಂದ ಗಾಳಿ ಬೀಸುತ್ತಿದ್ದರು.

ನ ಗಂತವ್ಯಂ ನ ಗಂತವ್ಯಮಿತಿ ಮದ್ರಾನವಾರಯತ್ ॥೩॥

ಹೊರಹೋಗುತ್ತಿರುವ ಮದ್ರದೇಶದ ಯೋಧರನ್ನು ದುರ್ಯೋಧನನು ಹೋಗಬೇಡಿ! ಹೋಗಬೇಡಿ! ಎಂಬುದಾಗಿ ತಡೆದನು.

ದುರ್ಯೋಧನೇನ ತೇ ವೀರಾ ವಾರ್ಯಮಾಣಾಃ ಪುನಃ ಪುನಃ ॥೪॥

ಯುಧಿಷ್ಠಿರಂ ಜಿಘಾಂಸಂತಃ ಪಾಂಡೂನಾಂ ಪ್ರಾವಿಶನ್ ಬಲಮ್ ॥೫॥

ದುರ್ಯೋಧನನಿಂದ ಮತ್ತೆ ಮತ್ತೆ ತಡೆಯಲ್ಪಟ್ಟ ಆ ವೀರರು ಯುಧಿಷ್ಠಿರನನ್ನು ಕೊಲ್ಲುವ ಇಚ್ಛೆಯಿಂದ ಪಾಂಡವರ ಸೈನ್ಯವನ್ನು ಪ್ರವೇಶಿಸಿದರು.

ತೇ ತು ಶೂರಾ ಮಹಾರಾಜ ಕೃತಚಿತ್ತಾಃ ಸ್ಮ ಯೋಧನೇ ।
ಧನುಃಶಬ್ದಂ ಮಹತ್ ಕೃತ್ವಾ ಸಹಾಯುಧ್ಯಂತ ಪಾಂಡವೈಃ ॥೬॥

ಯುದ್ಧಮಾಡುವುದರಲ್ಲಿ ದೃಢನಿಶ್ಚಯವನ್ನು ಮಾಡಿಕೊಂಡ ಆ ಮದ್ರದೇಶದ ಯೋಧರು ಬಿಲ್ಲಿನ ಠೇಂಕಾರವನ್ನು ಜೋರಾಗಿ ಮಾಡುತ್ತಾ ಪಾಂಡವರೊಂದಿಗೆ ಯುದ್ಧವನ್ನು ಮಾಡಿದರು.

ದೃಷ್ಟ್ವಾ ತು ನಿಹತಂ ಶಲ್ಯಂ ಧರ್ಮಪುತ್ರಂ ಚ ಪೀಡಿತಮ್ ।
ಮದ್ರರಾಜಪ್ರಿಯೇ ಯುಕ್ತೈಃ ಮದ್ರಕಾಣಾಂ ಮಹಾರಥೈಃ ॥೭॥

ಆಜಗಾಮ ತತಃ ಪಾರ್ಥೋ ಗಾಂಡೀವಂ ವಿಕ್ಷಿಪನ್ ಧನುಃ ।
ಪೂರಯನ್ ರಥಘೋಷೇಣ ದಿಶಃ ಸರ್ವಾ ಮಹಾರಥಃ ॥೮॥

ಶಲ್ಯನು ಸತ್ತು ಬಿದ್ದಿದ್ದಾನೆ. ಶಲ್ಯನಿಗೆ ಇಷ್ಟವಾದುದನ್ನು ಮಾಡಲು ಉದ್ಯುಕ್ತರಾದ ಮದ್ರದೇಶದ ಮಹಾರಥರು ಧರ್ಮರಾಜನನ್ನು ಬಹಳವಾಗಿ ಪೀಡಿಸಿದ್ದಾರೆ. ಇದನ್ನು

ನೋಡಿದ ಅರ್ಜುನನು ಗಾಂಡೀವಧನುಸ್ಸನ್ನು ಠೇಂಕರಿಸುತ್ತಾ ಬಂದನು. ಮಹಾರಥನಾದ ಅರ್ಜುನನು ರಥಘೋಷದಿಂದ ದಿಕ್ಕುಗಳನ್ನೆಲ್ಲಾ ತುಂಬಿದನು.

ತತೋಽರ್ಜುನಶ್ಚ ಭೀಮಶ್ಚ ಮಾದ್ರೀಪುತ್ರೌ ಚ ಪಾಂಡವೌ ।
ಸಾತ್ಯಕಿಶ್ಚ ನರವ್ಯಾಘ್ರೋ ದ್ರೌಪದೇಯಾಶ್ಚ ಸರ್ವಶಃ ॥೯॥

ಧೃಷ್ಟದ್ಯುಮ್ನಃ ಶಿಖಂಡೀ ಚ ಪಾಂಚಾಲ್ಯೈಃ ಸಹ ಸೋಮಕೈಃ ।
ಯುಧಿಷ್ಠಿರಂ ಪರೀಪ್ಸಂತಃ ಸಮಂತಾತ್ ಪರ್ಯವಾರಯನ್ ॥೧೦॥

ಅನಂತರ ಅರ್ಜುನ, ಭೀಮ, ನಕುಲ-ಸಹದೇವರು, ಮನುಷ್ಯಶ್ರೇಷ್ಠನಾದ ಸಾತ್ಯಕಿ, ದ್ರೌಪದಿಯ ಎಲ್ಲಾ ಮಕ್ಕಳು, ಧೃಷ್ಟದ್ಯುಮ್ನ, ಶಿಖಂಡಿ, ಪಾಂಚಾಲರು, ಸೋಮಕರು ಇವರೆಲ್ಲಾ ಯುಧಿಷ್ಠಿರನನ್ನು ರಕ್ಷಿಸುವವರಾಗಿ ಸುತ್ತಲೂ ನೆರೆದು, ಬಂದಿರುವ ಶತ್ರುಗಳನ್ನು ತಡೆದರು.

ತೇ ಸಮಂತಾತ್ ಪರಿವೃತಾಃ ಪಾಂಡವೈಃ ಪುರುಷರ್ಷಭೈಃ ।
ಕ್ಷೋಭಯಂತಿ ಸ್ಮ ತಾಂ ಸೇನಾಂ ಮಕರಾಃ ಸಾಗರಂ ಯಥಾ ॥೧೧॥

ಪುರುಷಶ್ರೇಷ್ಠರಾದ ಪಾಂಡವರೆಲ್ಲರೂ ಸುತ್ತುವರಿದಿರಲು ಮದ್ರದೇಶದ ಯೋಧರು ಮೊಸಳೆಗಳು ಸಮುದ್ರವನ್ನು ಕ್ಷೋಭೆಗೊಳಿಸುವಂತೆ ಪಾಂಡವಸೇನೆಯನ್ನು ಕ್ಷೋಭೆಗೊಳಿಸಿದರು.

ಪುರೋವಾತೇನ ಗಂಗೇವ ಕ್ಷೋಭ್ಯಮಾಣಾ ಮಹಾನದೀ ।
ಅಕ್ಷೋಭ್ಯತ ಮಹಾರಾಜ ಪಾಂಡೂನಾಂ ಧ್ವಜಿನೀ ಪುನಃ ॥೧೨॥

ವಿರುದ್ಧದಿಕ್ಕಿನಲ್ಲಿ ಬೀಸುವ ಗಾಳಿಯಿಂದ ಗಂಗಾನದಿಯು ಕ್ಷೋಭಿಸುವಂತೆ ಮಹಾರಾಜ! ಪಾಂಡವರ ಸೈನ್ಯವು ಮತ್ತೊಮ್ಮೆ ಕ್ಷೋಭೆಗೊಳಗಾಯಿತು.

ಪ್ರಸ್ಕಂದ್ಯ ಮಹತೀಂ ಸೇನಾಂ ತ್ಯಕ್ತಾತ್ಮಾನೋ ಮಹಾರಥಾಃ ।
ವೃಕ್ಷಾನಿವ ಮಹಾವಾತಾಃ ಕಂಪಯಂತಿ ಸ್ಮ ತಾವಕಾಃ ॥೧೩॥

ಮಹಾತ್ಮರಾದ, ಪ್ರಾಣದ ಆಸೆಯನ್ನು ತೊರೆದಿರುವ ನಿನ್ನಕಡೆಯ ಆ ಮಹಾರಥರು ಪಾಂಡವಸೇನೆಯನ್ನು ಬಿರುಗಾಳಿಯು ಮರಗಳನ್ನು ತಿರುಗಿಸಿ ಬೀಳಿಸುವಂತೆ ಮಥಿಸಿದರು.

ಬಹವಶ್ಚುಕ್ರುಶುಸ್ತತ್ರ ಕ್ವ ಚ ರಾಜಾ ಯುಧಿಷ್ಠಿರಃ ।
ಭ್ರಾತರೋ ವಾऽಸ್ಯ ತೇ ಶೂರಾ ದೃಶ್ಯಂತೇ ನೇಹ ಕೇಚನ ॥೧೪॥

ಪಾಂಚಾಲಾನಾಂ ಮಹಾವೀರ್ಯಃ ಶಿಖಂಡೀ ಚ ಮಹಾರಥಃ ॥೧೫॥

ಧೃಷ್ಟದ್ಯುಮ್ನೋऽಥ ಶೈನೇಯೋ ದ್ರೌಪದೇಯಾಶ್ಚ ಸರ್ವಶಃ ।
ಏವಂ ತಾನ್ ವಾದಿನಃ ಶೂರಾ ದ್ರೌಪದೇಯಾ ಮಹಾರಥಾಃ ॥೧೬॥

ಅನೇಕ ಮಂದಿ ಅಲ್ಲಿ ರಾಜ ಯುಧಿಷ್ಠಿರನು ಎಲ್ಲಿ ಇದ್ದಾನೆ? ಅವನ ಸಹೋದರರು ಎಲ್ಲಿ? ಯಾರೂ ಕಾಣಿಸುತ್ತಿಲ್ಲ ಏಕೆ? ಪಾಂಚಾಲರಲ್ಲಿ ಮಹಾವೀರನಾದ ಸಾತ್ಯಕಿ, ಮಹಾರಥನಾದ ಶಿಖಂಡಿ, ಧೃಷ್ಟದ್ಯುಮ್ನ, ಶೈನೇಯ, ದ್ರೌಪದಿಯ ಮಕ್ಕಳು ಇವರೆಲ್ಲಾ ಎಲ್ಲಿದ್ದಾರೆ ಎಂಬುದಾಗಿ ಜೋರಾಗಿ ಕೂಗಿಕೊಂಡರು.

ಅಭ್ಯಘ್ನನ್ ಯುಯುಧುಶ್ಚೈವ ಮದ್ರರಾಜಪದಾನುಗಾನ್ ॥೧೭॥

ಹೀಗೆ ಕೂಗುತ್ತಿದ್ದ ವೈರಿಗಳನ್ನು ಮಹಾರಥರಾದ ದ್ರೌಪದಿಪುತ್ರರು ತಡೆದರು ಮತ್ತು ಅವರೊಂದಿಗೆ ಯುದ್ಧವನ್ನು ಮಾಡಿದರು.

ಚಕ್ರೈರ್ವಿಮಥಿತೈಃ ಕೇಚಿತ್ ಕೇಚಿಚ್ಛಿನ್ನೈರ್ಮಹಾರಥೈಃ ।
ಪ್ರಾದೃಶ್ಯಂತೈವ ಸಮರೇ ತಾವಕಾ ನಿಹತಾ ಪರೈಃ ॥೧೮॥

ಯುದ್ಧದಲ್ಲಿ ನಿನ್ನ ಪಕ್ಷದ ಯೋಧರು ಅವರ ಪ್ರತಿಸ್ಪರ್ಧಿಗಳಿಂದ ಹೊಡಿಸಿಕೊಂಡು ಕೆಲವರು ಚಕ್ರಗಳ ಅಡಿಗೆ ಸಿಲುಕಿದ್ದರು. ಕೆಲವರು ಮಹಾರಥರಿಂದ ಸಾಯಿಸಲ್ಪಟ್ಟವರಾಗಿ ಕಂಡುಬಂದರು.

ಆಲೋಕ್ಯ ಪಾಂಡವಾನ್ ಯುದ್ಧೇ ಯೋಧಾ ರಾಜನ್ ಸಮಂತತಃ ।
ವಾರ್ಯಮಾಣಾ ಯಯುಃ ಸರ್ವೇ ತವ ಪುತ್ರೇಣ ಭಾರತ ॥೧೯॥

ರಾಜನೇ! ಯುದ್ಧದಲ್ಲಿ ಎಲ್ಲಾ ಕಡೆಯೂ ಪಾಂಡವರು ಇರುವುದನ್ನು ನೋಡಿದ ಎಲ್ಲಾ ಯೋಧರು ನಿನ್ನ ಮಗ ದುರ್ಯೋಧನನು ತಡೆಯುತ್ತಿದ್ದರೂ ಹೊರಟು ಹೋದರು.

ದುರ್ಯೋಧನಸ್ತು ತಾನ್ ವೀರಾನ್ ವಾರಯಾಮಾಸ ಸಾಂತ್ವಯನ್ ।
ನ ಚಾಸ್ಯ ಶಾಸನಂ ಕಶ್ಚಿತ್ ತತ್ರ ಚಕ್ರೇ ಮಹಾರಥಃ ॥೨೦॥

ದುರ್ಯೋಧನನು ಆ ವೀರರನ್ನು ಸಮಾಧಾನಪಡಿಸುತ್ತಾ ಹೋಗದಂತೆ ತಡೆದನು. ಆದರೆ ಯಾವ ಒಬ್ಬ ಮಹಾರಥನೂ ದುರ್ಯೋಧನನ ಆಜ್ಞೆಯನ್ನು ಪಾಲಿಸಲಿಲ್ಲ.

ತತೋ ಗಾಂಧಾರರಾಜಸ್ಯ ಪುತ್ರಃ ಶಕುನಿರಬ್ರವೀತ್ ।
ದುರ್ಯೋಧನಂ ಮಹಾರಾಜ ವಚನಂ ವಚನಕ್ಷಮಮ್ ॥೨೧॥

ಮಹಾರಾಜ! ಅನಂತರ ಗಾಂಧಾರರಾಜನ ಮಗನಾದ ಒಳ್ಳೆಯ ಮಾತುಗಾರನಾದ ಶಕುನಿಯು ದುರ್ಯೋಧನನಿಗೆ ಈ ಮಾತುಗಳನ್ನು ಹೇಳುತ್ತಾನೆ.

ಶಕುನಿಃ

ಕಿಂ ನಃ ಸಂಪ್ರೇಕ್ಷಮಾಣಾನಾಂ ಮದ್ರಾಣಾಂ ಹನ್ಯತೇ ಬಲಮ್ ।
ನ ಯುಕ್ತಮೇತತ್ ಸಮರೇ ತ್ವಯಿ ತಿಷ್ಠತಿ ಭಾರತ ॥೨೨॥

ಶಕುನಿ– ಭರತಕುಲೋದ್ಭವನೇ! ನಾವೆಲ್ಲರು ನೋಡುತ್ತಿದ್ದ ಹಾಗೆಯೇ ಮದ್ರದೇಶದ ಯೋಧರ ಸೈನ್ಯವೆಲ್ಲವೂ ನಾಶವಾಗುತ್ತಿದೆ. ಇದು ಯಾಕೆ ಹೀಗಾಗುತ್ತಿದೆ? ಯುದ್ಧದಲ್ಲಿ ನೀನು ನಿಂತಿರಬೇಕಾದರೆ ಇದು ಸರಿಯಲ್ಲ.

ಸಹಿತೈರ್ನಾಮ ಯೋದ್ಧವ್ಯಮಿತ್ಯೇವಂ ಸಮಯಃ ಕೃತಃ ।
ಅಥ ಕಸ್ಮಾತ್ ಪರಾನೇವಂ ಘ್ನತೋ ಮರ್ಷಯಸೇಽನಘ ॥೨೩॥

ನಾವು ಮತ್ತು ಮದ್ರದೇಶದ ಯೋಧರು ಸೇರಿಯೇ ಯುದ್ಧ ಮಾಡುವುದೆಂಬುದಾಗಿ ಒಪ್ಪಂದ ಮಾಡಿಕೊಂಡಿದ್ದೆವು. ದೋಷದೂರನಾದ ದುರ್ಯೋಧನನೇ! ಹಾಗಿರುವಾಗ ಅವರು ಹೊಡೆತ ತಿನ್ನುತ್ತಿದ್ದರೂ ನೀನು ಹೇಗೆ ಸಹಿಸಿಕೊಂಡಿರುವಿ?

ದುರ್ಯೋಧನಃ

ವಾರ್ಯಮಾಣಾ ಮಯಾ ಪೂರ್ವಂ ನೈತೇ ಕುರ್ವಂತಿ ಶಾಸನಮ್ ।
ಏತೇ ಹಿ ನಿಹತಾಃ ಸರ್ವೇ ಪ್ರಸ್ಕಂದಂತೋಽರಿವಾಹಿನೀಮ್ ॥೨೪॥

ದುರ್ಯೋಧನ– ನಾನು ನೀವು ಯುದ್ಧಕ್ಕೆ ಹೋಗಬೇಡಿ! ಎಂದು ತಡೆಯುತ್ತಿದ್ದರೂ ನನ್ನ ಆಜ್ಞೆಯನ್ನು ನಡೆಸಿಕೊಡಲಿಲ್ಲ. ಅವರೆಲ್ಲರೂ ಶತ್ರುಗಳ ಸೈನ್ಯವನ್ನು ಕೆರಳಿಸಲು ಹೋಗಿ ನಾಶವಾಗಿದ್ದಾರೆ.

ಶಕುನಿಃ

ನ ಭರ್ತುಃ ಶಾಸನಂ ಶೂರಾ ರಣೇ ಕುರ್ವಂತ್ಯಮರ್ಷಿತಾಃ ।
ಅಲಂ ರೋದ್ಧುಂ ತವೈತೇಷಾಂ ನಾಯಂ ಕಾಲ ಉಪೇಕ್ಷಿತುಮ್ ।
ಯಾಮಃ ಸರ್ವೇಽತ್ರ ಸಂಭೂಯ ಸವಾಜಿರಥಕುಂಜರಾಃ ॥೨೫॥

ಶಕುನಿ– ಅಸಹನೆಗೊಳಗಾದ ಶೂರರು ಯುದ್ಧದಲ್ಲಿ ಯಜಮಾನನ ಶಾಸನವನ್ನು ಮನ್ನಿಸುವುದಿಲ್ಲ. ಅವರನ್ನು ತಡೆಯುತ್ತಾ ಕಾಲಹರಣಮಾಡುವುದು ಸಾಕು. ಪಾಂಡವರ ಬಗ್ಗೆ ಔದಾಸೀನ್ಯವನ್ನು ಮಾಡುವ ಕಾಲ ಇದಲ್ಲ. ಆದ್ದರಿಂದ ನಾವೇ ಯುದ್ಧಕ್ಕೆ ಹೋಗೋಣ.

ಪರಿತ್ರಾತುಂ ಮಹೇಷ್ವಾಸಾನ್ ಮದ್ರರಾಜಪದಾನುಗಾನ್ ॥೨೬॥

ಶಲ್ಯನ ಸಹವರ್ತಿಗಳಾದ ಯೋಧರನ್ನು ರಕ್ಷಿಸಲು ನಾವೇ ಮುನ್ನುಗ್ಗೋಣ.

ಅನ್ಯೋನ್ಯಂ ಪರಿರಕ್ಷಾಮೋ ಯತ್ನೇನ ಮಹತಾ ನೃಪ ।
ಏವಂ ಸರ್ವೇ ತು ಸಂಚಿಂತ್ಯ ಪ್ರಯಾಮೋ ಯತ್ರ ಸೈನಿಕಾಃ ॥೨೭॥

ರಾಜನೇ! ಬಹಳವಾದ ಪ್ರಯತ್ನದಿಂದ ನಮ್ಮನ್ನು ನಾವೇ ಪರಸ್ಪರವಾಗಿ ರಕ್ಷಿಸಿಕೊಳ್ಳೋಣ. ಹೀಗೆ ಎಲ್ಲರೂ ನಿಶ್ಚಯಮಾಡಿಕೊಂಡು ಸೈನಿಕರಿದ್ದಲ್ಲಿಗೆ ಯುದ್ಧವನ್ನು ಮಾಡುವುದಕ್ಕಾಗಿ ಹೋಗೋಣ!

ಸಂಜಯಃ

ಏವಮುಕ್ತಸ್ತತೋ ರಾಜಾ ಸೈನ್ಯೇನ ಮಹತಾ ವೃತಃ ।
ಪ್ರಯಯೌ ಸಿಂಹನಾದೇನ ಕಂಪಯಾನೋ ವಸುಂಧರಾಮ್ ॥೨೮॥

ಸಂಜಯ– ಶಕುನಿ ಹೀಗೆ ಹೇಳಲು ದುರ್ಯೋಧನನು ದೊಡ್ಡದಾದ ತನ್ನ ಸೇನೆಯ ಜೊತೆಗೆ ಸೇರಿಕೊಂಡು ಸಿಂಹನಾದವನ್ನು ಮಾಡುತ್ತಾ, ಭೂಮಂಡಲವನ್ನೇ ನಡುಗಿಸುತ್ತಾ ಹೋದನು.

ಘ್ನತ ಗೃಹ್ಣೀತ ಯುಧ್ಯಧ್ವಂ ಪ್ರಹರಧ್ವಂ ನಿಕೃಂತತ ।
ಇತ್ಯಾಸೀತ್ ತುಮುಲಃಶಬ್ದಃ ತವ ಸೈನ್ಯಸ್ಯ ಭಾರತ ॥೨೯॥

ಭಾರತ! ಕೊಲ್ಲಿರಿ! ಹಿಡಿಯಿರಿ! ಯುದ್ಧಮಾಡಿ! ಹೊಡೆಯಿರಿ! ತುಂಡರಿಸಿ! ಇಂತಹ ಗೊಂದಲಯುಕ್ತವಾದ ಶಬ್ದಗಳು ನಿನ್ನ ಸೈನ್ಯದಲ್ಲಿ ಕೇಳಿ ಬಂದವು.

ಪಾಂಡವಾಶ್ಚ ರಣೇ ದೃಷ್ಟ್ವಾ ಮದ್ರರಾಜಪದಾನುಗಾನ್ ।
ಅಭ್ಯವರ್ತಂತ ಸಂಗ್ರಾಮೇ ಗುಲ್ಮಮಾಸ್ಥಾಯ ಮಧ್ಯಮಮ್ ॥೩೦॥

ಪಾಂಡವರು ಯುದ್ಧದಲ್ಲಿ ಮದ್ರರಾಜನ ಅನುಚರರನ್ನು ನೋಡಿ ಮಧ್ಯಮ ಸೇನೆಯ ಮುಖ್ಯಭಾಗವನ್ನು ಆಶ್ರಯಿಸಿಕೊಂಡು ಯುದ್ಧದಲ್ಲಿ ಅವರನ್ನು ಎದುರಿಸಿದರು. (ಸೇನಾಮುಖಂ ಗುಲ್ಮಗಣೌ - ಇತ್ಯಮರಃ)

ತೇ ಮುಹೂರ್ತಾದ್ ರಣೇ ವೀರಾ ಹಸ್ತಾಹಸ್ತಂ ವಿಶಾಂಪತೇ ।
ನಿಹತಾಃ ಪ್ರತ್ಯದೃಶ್ಯಂತ ಮದ್ರರಾಜಪದಾನುಗಾಃ ॥೩೧॥

ರಾಜನೇ! ಆ ಮದ್ರರಾಜನ ಅನುಚರ ವೀರರು ಕೈ-ಕೈ ಮಿಲಾಯಿಸಿ ಒಂದು ಮುಹೂರ್ತಕಾಲದಲ್ಲಿಯೇ ವಧಿಸಲ್ಪಟ್ಟರು.

ತತೋ ನಃ ಸಂಪ್ರಯಾತಾನಾಂ ಹತಾಮಿತ್ರಾಸ್ತರಸ್ವಿನಃ ।
ಹೃಷ್ಟಾಃ ಕಿಲಕಿಲಾಶಬ್ದಮಕುರ್ವನ್ ಸಹಿತಾಃ ಪರೇ ॥೩೨॥

ನಾವು ಅಲ್ಲಿ ತಲುಪುವಷ್ಟರಲ್ಲಿ ಬಹಳ ವೇಗವುಳ್ಳ ಶತ್ರುಪಕ್ಷದ ಪಾಂಡವರ ಕಡೆಯವರು ಯುದ್ಧದಲ್ಲಿ ಜಯವನ್ನು ಸಂಪಾದಿಸಿಕೊಂಡಿದ್ದರು. ಸಂತೋಷದಿಂದ ಕಿಲಿ-ಕಿಲ ಶಬ್ದವನ್ನು ಮಾಡುತ್ತಾ ಒಟ್ಟಾಗಿದ್ದರು.

ಅಥೋತ್ಥಿತಾನಿ ಮುಂಡಾನಿ ಸಮದೃಶ್ಯಂತ ಸರ್ವಶಃ ।
ಪಪಾತ ಮಹತೀ ಚೋಲ್ಕಾ ಮಧ್ಯೇನಾದಿತ್ಯಮಂಡಲಾತ್ ॥೩೩॥

ಎಲ್ಲೆಡೆ ಸತ್ತುಬಿದ್ದ ಶರೀರಗಳ ರಾಶಿಗಳು ಕಂಡವು.ಸೂರ್ಯಮಂಡಲದ ಮಧ್ಯದಿಂದ ದೊಡ್ಡದಾದ ಉಲ್ಕೆಯೊಂದು ಕೆಳಗೆ ಬಿತ್ತು.

ರಥೈರ್ಭಗ್ನೈರ್ಯುಗಾಕ್ಷೈಶ್ಚ ನಿಹತೈಶ್ಚ ಮಹಾರಥೈಃ ।
ಅಶ್ವೈರ್ನಿಪಾತಿತೈಶ್ಚೈವ ದೃಶ್ಯಂತೇ ಸ್ಮ ಸಮಂತತಃ ॥೩೪॥

ಮುರಿದು ಬಿದ್ದ ರಥಗಳು, ರಥದ ನೊಗಸಂಧಿಗಳು, ರಥದ ಗಾಲಿಯಚ್ಚುಗಳು, ಸತ್ತುಬಿದ್ದ ಮಹಾರಥರು, ಕೆಳಗೆ ಬಿದ್ದ ಕುದುರೆಗಳು ಇವೆಲ್ಲಾ ಎಲ್ಲಾ ಕಡೆಯೂ ಕಾಣಿಸಿಗುತ್ತಿದ್ದವು.

ವಾತಾಯಮಾನೈಸ್ತುರಗೈಃ ಯುಗಾಸಕ್ತೈಃ ಸಮಂತತಃ ।
ಅಕೃಷ್ಯಂತ ಮಹಾರಾಜ ಯೋಧಾಸ್ತತ್ರ ರಣಾಜಿರೇ ॥೩೫॥

ರಥದ ನೊಗಕ್ಕೆ ಕಟ್ಟಿದ ಕುದುರೆಗಳು ನೊಗದ ಜೊತೆಗೆ ವಾಯುವೇಗದಿಂದ ಸಂಚರಿಸುತ್ತಾ ರಣರಂಗದಲ್ಲಿ ಯೋಧರನ್ನು ಆ ಕಡೆ-ಈ ಕಡೆ ಎಳೆದಾಡಿದವು.

ಭಗ್ನಚಕ್ರಾನ್ ರಥಾನ್ ಕೇಚಿದ್ ಅವಹಂಸ್ತುರಗಾ ರಣೇ ।
ರಥಾರ್ಧಂ ಕೇಚಿದಾದಾಯ ದಿಶೋ ದಶ ವಿಬಭ್ರಮುಃ ॥೩೬॥

ಯುದ್ಧಾಂಗಣದಲ್ಲಿ ಕೆಲವು ಕುದುರೆಗಳು ಚಕ್ರ ಮುರಿದ ರಥಗಳನ್ನು ತಮ್ಮೊಂದಿಗೆ ಒಯ್ಯುತ್ತಿದ್ದವು. ಕೆಲವು ಕುದುರೆಗಳು ತುಂಡಾದ ಅರ್ಧರಥವನ್ನೇ ತಮ್ಮೊಡನೆ ತೆಗೆದುಕೊಂಡು ಹತ್ತು ದಿಕ್ಕುಗಳಲ್ಲಿಯೂ ತಿರುಗಾಡಿದವು.

ತತ್ರ ತತ್ರ ಚ ದೃಶ್ಯಂತೇ ಯೋಕ್ತ್ರೈಃ ಶ್ಲಿಷ್ಟಾಃ ಸ್ಮ ವಾಜಿನಃ ॥೩೭॥

ಸಾರಥಿಗಳಿಂದ ರಕ್ಷಿಸಲ್ಪಟ್ಟ ಕುದುರೆಗಳು ಅಲ್ಲಲ್ಲಿ ಕಂಡುಬಂದವು.

ರಥಿನಃ ಪಾತ್ಯಮಾನಾಶ್ಚ ವ್ಯದೃಶ್ಯಂತ ನರೋತ್ತಮ ।
ಗಗನಾತ್ ಪ್ರಚ್ಯುತಾಃ ಸಿದ್ಧಾಃ ಪುಣ್ಯಾನಾಮಿವ ಸಂಕ್ಷಯೇ ॥೩೮॥

ನರೋತ್ತಮನೇ! ಕೆಳಬಿದ್ದಿರುವ ಲೆಕ್ಕವಿಲ್ಲದಷ್ಟು ರಥಿಕರು ಕಂಡುಬಂದರು. ಪುಣ್ಯಕಳೆದುಕೊಂಡು ಆಕಾಶದಿಂದ ಕೆಳಬಿದ್ದ ಸಿದ್ಧಪುರುಷರಂತೆ ಕಂಡುಬಂದರು.

ನಿಹತೇಷು ಚ ಶೂರೇಷು ಮದ್ರರಾಜಾನುಗೇಷು ಚ ।
ಅಸ್ಮಾನಾಪತತಶ್ಚಾಪಿ ದೃಷ್ಟ್ವಾ ಪಾರ್ಥಾ ಮಹಾರಥಾಃ ॥೩೯॥

ಅಭ್ಯವರ್ತಂತ ವೇಗೇನ ಜಯಗೃಧ್ನಾಃ ಪ್ರಹಾರಿಣಃ ।
ಬಾಣಶಬ್ದರವಾನ್ ಕೃತ್ವಾ ವಿಮಿಶ್ರಾನ್ ಶಂಖನಿಃಸ್ವನೈಃ ॥೪೦॥

ಶೂರರಾದ ಮದ್ರರಾಜನ ಅನುಚರರು ಸತ್ತಾಗ ಹಾಗೂ ನಾವು ಯುದ್ಧದಲ್ಲಿ ಆಕ್ರಮಣಮಾಡುತ್ತಿರುವುದನ್ನು ನೋಡಿದ ಪಾಂಡವರ ಮಹಾರಥರು ಜಯದ ಅಭಿಲಾಷೆಯುಳ್ಳವರಾಗಿ ವೇಗದಿಂದ ಪ್ರಹಾರ ಮಾಡುತ್ತಾ ಎದುರಿಸಿದರು. ಶಂಖನಾದವನ್ನು ಮಾಡುತ್ತಾ ಅದರೊಂದಿಗೆ ಬಾಣಶಬ್ದವನ್ನೂ ಉಂಟುಮಾಡುತ್ತಿದ್ದರು.

ಅಸ್ಮಾಂಸ್ತು ಪುನರಾಸಾದ್ಯ ಲಬ್ಧಲಕ್ಷಾಃ ಪ್ರಹಾರಿಣಃ ।
ಶರಾಸನಾನಿ ಧೂನ್ವಾನಾಃ ಸಿಂಹನಾದಾನ್ ಪ್ರಚಕ್ರಿರೇ ॥೪೧॥

ನಮ್ಮನ್ನು ಎದುರಿಸಿ, ಮತ್ತೆ ಪುನಃ ನಮ್ಮನ್ನು ಗುರಿಯಿಟ್ಟು ಹೊಡೆಯುತ್ತಿದ್ದರು. ಬಿಲ್ಲುಗಳನ್ನು ಠೇಂಕರಿಸುತ್ತಾ ಸಿಂಹಗರ್ಜನೆಯನ್ನು ಮಾಡಿದರು.

ತತೋ ಹತಮಭಿಪ್ರೇಕ್ಷ್ಯ ಮದ್ರರಾಜಬಲಂ ಮಹತ್ ।
ಮದ್ರರಾಜಂ ಚ ಸಮರೇ ದೃಷ್ಟ್ವಾ ಶೂರಂ ನಿಪಾತಿತಮ್ ॥೪೨॥

ದುರ್ಯೋಧನಬಲಂ ಸರ್ವಂ ಪುನರಾಸೀತ್ ಪರಾಙ್ಮುಖಮ್ ॥೪೩॥

ಅನಂತರ ದೊಡ್ಡದಾದ ಮದ್ರರಾಜನ ಸೇನೆಯೂ ನಾಶವಾದದ್ದನ್ನು ಮತ್ತು ಶೂರನಾದ ಶಲ್ಯನು ಸತ್ತುಬಿದ್ದಿದ್ದನ್ನು ನೋಡಿ ದುರ್ಯೋಧನನ ಎಲ್ಲಾ ಸೇನೆಯೂ ಯುದ್ಧದಿಂದ ವಿಮುಖವಾಗಿ ಹಿಂತಿರುಗಿತು.

ವಧ್ಯಮಾನಂ ಮಹಾರಾಜ ಪಾಂಡವೈರ್ಜಿತಕಾಶಿಭಿಃ ।
ದಿಶೋ ಭೇಜೇ ಚ ಸಂಭ್ರಾಂತಂ ತ್ರಾಸಿತಂ ದೃಢಧನ್ವಿಭಿಃ ॥೪೪॥

ಮಹಾರಾಜನೇ! ವಿಜಯದ ಲಕ್ಷ್ಯವುಳ್ಳ ಪಾಂಡವರ ಹೊಡೆತಕ್ಕೆ ಒಳಗಾದ ಕೌರವಸೇನೆಯು ಕರ್ತವ್ಯಮೂಢವಾಗಿ ದಿಕ್ಕಾಪಾಲಾಗಿ ಓಡುತ್ತಿತ್ತು ಮತ್ತು ಬಿಲ್ಗಾರರಿಂದ ದಾಳಿಗೆ ಒಳಗಾಗಿ ದುಃಖವನ್ನು ಅನುಭವಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಅಷ್ಟಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತೊಂಬತ್ತನೆಯ ಅಧ್ಯಾಯ

ಸಂಕುಲಯುದ್ಧ

ಸಂಜಯಃ

ಪಾತಿತೇ ಯುಧಿ ದುರ್ಧರ್ಷೇ ಮದ್ರರಾಜೇ ಮಹಾರಥೇ ।
ಹತಪ್ರವೀರಾ ವಿಧ್ವಸ್ತಾ ನಿಕೃತ್ತಾ ನಿಶಿತೈಃ ಶರೈಃ ॥೧॥

ಸಂಜಯ– ಯುದ್ಧದಲ್ಲಿ ಮದ್ರರಾಜನಾದ ಶಲ್ಯನು ಸತ್ತು ಬಿದ್ದಿದ್ದಾನೆ. ಅವನು ಮಹಾರಥನಾಗಿದ್ದನು ಹಾಗೂ ಯಾರಿಗೂ ಅವನನ್ನು ಎದುರಿಸುವುದು ಕಷ್ಟಸಾಧ್ಯವಾಗಿತ್ತು. ಜೊತೆಗೆ ಮಹಾವೀರರು ಹರಿತವಾದ ಬಾಣಗಳಿಂದ ಸತ್ತಿದ್ದಾರೆ.

ತಾವಕಾಸ್ತವ ಪುತ್ರಾಶ್ಚ ಪ್ರಾಯಶೋ ವಿಮುಖಾ ಭವನ್ ।
ವಣಿಜೋ ನಾವಿ ಭಿನ್ನಾಯಾಂ ಯಥಾऽಗಾಧೇ ಮಹಾರ್ಣವೇ ॥೨॥

ಅಗಾಧವಾದ ಮಹಾಸಮುದ್ರದಲ್ಲಿ ನಾವೆಯು ಒಡೆದುಹೋದಾಗ ವ್ಯಾಪಾರಿಗಳು ತಮ್ಮ ವ್ಯಾಪಾರದಿಂದ ಹಿಂತಿರುಗುವಂತೆ ನಿನ್ನ ಕಡೆಯವರು ಹಾಗೂ ನಿನ್ನ ಮಕ್ಕಳು ಬಹುಶಃ ಯುದ್ಧದಿಂದ ವಿಮುಖರಾದರು.

ಅಪಾರೇ ಪಾರಮಿಚ್ಛಂತೋ ಹತೇ ಶೂರೇ ಮಹಾತ್ಮನಿ ।
ಮದ್ರರಾಜೇ ಮಹಾರಾಜ ವಿತ್ರೇಸುಃ ಶರವಿಕ್ಷತಾಃ ॥೩॥

ಮಹಾರಾಜನೇ! ಶೂರನಾದ ಮಹಾತ್ಮಶಲ್ಯನು ಸತ್ತಬಳಿಕ ಅಪಾರವಾದ ಯುದ್ಧದ ಕೊನೆಯನ್ನು ಬಯಸುತ್ತಿದ್ದ ನಿನ್ನ ಪಕ್ಷದವರು ಬಾಣಗಳಿಂದ ಗಾಯಗೊಂಡು ಬಹಳವಾಗಿ ಭಯಪಟ್ಟರು.

ಅನಾಥಾ ನಾಥಮಿಚ್ಛಂತೋ ಮೃಗಾಃ ಸಿಂಹಾರ್ದಿತಾ ಇವ ।
ವೃಷಾ ಯಥಾ ಭಗ್ನಶೃಂಗಾಃ ಶೀರ್ಣದಂತಾ ಗಜಾ ಇವ ॥೪॥

ಸಿಂಹದ ಆಕ್ರಮಣಕ್ಕೊಳಗಾದ ರಕ್ಷಕರಿಲ್ಲದ ಜಿಂಕೆಗಳು ರಕ್ಷಕರನ್ನು ಬಯಸುವಂತೆ, ಕೊಂಬುಮುರಿದ ಎತ್ತುಗಳಂತೆ, ದಂತವನ್ನು ಕಳೆದುಕೊಂಡ ಆನೆಗಳಂತೆ ನಿನ್ನವರು ಬಹಳವಾಗಿ ಭಯಗೊಂಡರು.

ಮಧ್ಯಾಹ್ನೇ ಪ್ರತ್ಯಪಾಯಾತಾ ನಿರ್ಜಿತಾ ಧರ್ಮಸೂನುನಾ ।
ನ ಸಂಧಾತುಮನೀಕಾನಿ ನ ಚ ರಾಜನ್ ಪರಾಕ್ರಮೇ ॥೫॥

ಆಸೀದ್ ಬುದ್ಧಿರ್ಹತೇ ಶಲ್ಯೇ ತವ ಯೋಧಸ್ಯ ಕಸ್ಯಚಿತ್ ।
ಭೀಷ್ಮೇ ದ್ರೋಣೇ ಚ ನಿಹತೇ ಸೂತಪುತ್ರೇ ಚ ಭಾರತ ॥೬॥

ಯದ್ದುಃಖಂ ತವ ಯೋಧಾನಾಂ ಭಯಂ ಚಾಸೀದ್ ವಿಶಾಂಪತೇ ।
ತದ್ಭಯಂ ಸ ಚ ನಃ ಶೋಕೋ ಭೂಯ ಏವಾಭ್ಯವರ್ಧತ ॥೭॥

ಧರ್ಮರಾಜನಿಂದ ಸೋತು ಹೋದ ಇವರು ಮಧ್ಯಾಹ್ನದ ಹೊತ್ತಿಗೇನೇ ಯುದ್ಧದಿಂದ ಪಲಾಯನ ಮಾಡಿದರು. ರಾಜನೇ! ಶಲ್ಯನು ಸತ್ತಾಗ ಯಾವ ಯೋಧನಿಗೂ ಕೂಡ ಸೈನ್ಯವನ್ನು ಸೇರಿಸುವ ಅಥವಾ ಪರಾಕ್ರಮವನ್ನು ತೋರಿಸುವ ಮನಸ್ಸು ಉಂಟಾಗಲಿಲ್ಲ. ಭರತಕುಲೋದ್ಭವನೇ! ಭೀಷ್ಮ, ದ್ರೋಣ, ಕರ್ಣ ಇವರೆಲ್ಲಾ ಯುದ್ಧದಲ್ಲಿ ಮಡಿದಾಗ ನಿನ್ನ ಕಡೆಯ ಯೋಧರಿಗೆ ಯಾವ ದುಃಖವು ಉಂಟಾಗಿತ್ತೋ, ಯಾವ ಭಯ ಅವರನ್ನು ಆವರಿಸಿತ್ತೋ ಆ ಎಲ್ಲಾ ದುಃಖ ಮತ್ತು ಭಯವು ನಮಗೆ ಮತ್ತೆ ಹೆಚ್ಚಾಯಿತು.

ನಿರಾಶಾಶ್ಚ ಜಯೇ ತಸ್ಮಿನ್ ಹತೇ ಶಲ್ಯೇ ಮಹಾರಥೇ ।
ಹತಪ್ರವೀರಾ ವಿಧ್ವಸ್ತಾ ನಿಕೃತ್ತಾ ನಿಹಿತೈಃ ಶರೈಃ ॥೮॥

ಮಹಾರಥನಾದ ಶಲ್ಯನು ಸತ್ತಾಗ ಜಯದ ಆಸೆಯು ನಾಶವಾಯಿತು. ಹರಿತವಾದ ಬಾಣಗಳಿಂದ ಯೋಧರು ಪ್ರಾಣತ್ಯಾಗವನ್ನು ಮಾಡಿದ್ದಾರೆ.

ಮದ್ರರಾಜೇ ಹತೇ ರಾಜನ್ ಯೋಧಾಸ್ತೇ ಪ್ರಾದ್ರವನ್ ಭಯಾತ್ ॥೯॥

ರಾಜನೇ! ಶಲ್ಯನು ಸತ್ತಮೇಲೆ ಎಲ್ಲಾ ಯೋಧರು ಭಯಗೊಂಡು ಪಲಾಯನ ಮಾಡಿದ್ದಾರೆ.

ಅಶ್ವಾನನ್ಯೇ ಗಜಾನನ್ಯೇ ರಥಾನನ್ಯೇ ಮಹಾರಥಾಃ ।
ಆರುಹ್ಯ ಜವಸಂಪನ್ನಾಃ ಪದಾತಾಃ ಪ್ರಾದ್ರವನ್ ಭಯಾತ್ ॥೧೦॥

ಭಯಪಟ್ಟ ಯೋಧರಲ್ಲಿ ಕೆಲವರು ಕುದುರೆಗಳನ್ನೇರಿ, ಕೆಲವರು ಆನೆಗಳನ್ನೇರಿ, ಕೆಲವರು ರಥಗಳನ್ನೇರಿ, ಪದಾತಿಗಳು ಕಾಲುಗಳಿಂದಲೇ ಬಹಳ ವೇಗದಿಂದ ಓಡಿಹೋದರು.

ದ್ವಿಸಾಹಸ್ರಂ ಚ ಮಾತಂಗಾ ಗಿರಿರೂಪಾಃ ಪ್ರಹಾರಿಣಃ ।
ಸಂಪ್ರಾದ್ರವನ್ ಹತೇ ಶಲ್ಯೇ ಅಂಕುಶಾಂಗುಷ್ಠಚೋದಿತಾಃ ॥೧೧॥

ಶಲ್ಯನು ಸತ್ತಾಗ ಪರ್ವತದ ಹಾಗೆ ಆಕಾರವುಳ್ಳ, ಚೆನ್ನಾಗಿ ಹೊಡೆಯುವ ಸಾಮರ್ಥ್ಯವುಳ್ಳ ಎರಡುಸಾವಿರ ಆನೆಗಳು ಅಂಕುಶ ಹಾಗೂ ಕಾಲಿನ ಹೆಬ್ಬೆರಳಿನ ತಿವಿತಕ್ಕೊಳಗಾಗಿ ಚೆನ್ನಾಗಿ ಪಲಾಯನಗೈದವು.

ತೇ ರಣಾದ್ ಭರತಶ್ರೇಷ್ಠ ತಾವಕಾಃ ಪ್ರಾದ್ರವನ್ ದಿಶಃ ।
ಧಾವಂತಶ್ಚಾಪ್ಯದೃಶ್ಯಂತ ಶ್ವಸಮಾನಾಃ ಶರಾತುರಾಃ ॥೧೨॥

ಭಾರತೋತ್ತಮನೇ! ಬಾಣದ ಹೊಡೆತದಿಂದ ದುಃಖಿತರಾದ ನಿನ್ನ ಕಡೆಯವರು ಜೋರಾಗಿ ಉಸಿರಾಡುತ್ತಾ ದಿಕ್ಕಾಪಾಲಾಗಿ ಓಡಿಹೋಗುವುದು ಕಂಡುಬಂತು.

ತಾನ್ ಪ್ರಭಗ್ನಾನ್ ದ್ರುತಾನ್ ದೃಷ್ಟ್ವಾ ಹತೋತ್ಸಾಹಾನ್ ಪರಾಜಿತಾನ್।
ಅಭ್ಯದ್ರವಂತ ಪಾಂಚಾಲಾಃ ಪಾಂಡವಾಶ್ಚ ಜಯೈಷಿಣಃ ॥೧೩॥

ಹೀಗೆ ಚೆನ್ನಾಗಿ ಹೊಡೆತ ತಿಂದು, ಯುದ್ಧದ ಉತ್ಸಾಹವನ್ನು ಕಳೆದುಕೊಂಡು, ಸೋತು ಓಡಿಹೋಗುತ್ತಿರುವ ನಿನ್ನ ಯೋಧರನ್ನು ನೋಡಿ ಜಯವನ್ನೇ ಬಯಸುವ ಪಾಂಡವರು ಮತ್ತು ಪಾಂಚಾಲರು ಅವರನ್ನು ಅಟ್ಟಿಸಿಕೊಂಡು ಹೋದರು.

ಬಾಣಶಬ್ದರವಶ್ಚಾಪಿ ಸಿಂಹನಾದಶ್ಚ ಪುಷ್ಕಲಃ ।
ಶಂಖಶಬ್ದಶ್ಚ ಶೂರಾಣಾಂ ದಾರುಣಃ ಸಮಪದ್ಯತ ॥೧೪॥

ಬಾಣಗಳ (ಸೊಂಯ್ ಎನ್ನುವ) ಶಬ್ದ ಶೂರರು ಉಂಟುಮಾಡುವ ಬಹಳವಾದ ಸಿಂಹಗರ್ಜನೆ ಹಾಗೂ ಶಂಖಗಳ ಧ್ವನಿಯು ಬಹಳ ಕ್ರೂರವಾಗಿ ಕೇಳಿಸುತ್ತಿತ್ತು.

ದೃಷ್ಟ್ವಾ ತು ತಾವಕಂ ಸೈನ್ಯಂ ಭಯತ್ರಸ್ತಂ ಪ್ರವಿದ್ರುತಮ್ ।
ಅನ್ಯೋನ್ಯಂ ಸಮಭಾಷಂತ ಪಾಂಚಾಲಾಃ ಪಾಂಡವೈಃ ಸಹ ॥೧೫॥

ಭಯಗೊಂಡು ಓಡುತ್ತಿರುವ ನಿನ್ನ ಕಡೆಯ ಸೈನ್ಯವನ್ನು ನೋಡಿ ಪಾಂಚಾಲರು ಮತ್ತು ಪಾಂಡವರು ಪರಸ್ಪರವಾಗಿ ಮಾತನಾಡಿಕೊಂಡರು.

ಪಾಂಚಾಲಾಃ

ಅದ್ಯ ರಾಜಾ ಸತ್ಯಧೃತಿರ್ಹತಾಮಿತ್ರೋ ಯುಧಿಷ್ಠಿರಃ ।
ಅದ್ಯ ದುರ್ಯೋಧನೋ ಹೀನೋ ದೀಪ್ತಯಾ ನೃಪತಿಶ್ರಿಯಾ ॥೧೬॥

ಪಾಂಚಾಲರು– ನಿಜವಾದ ಧೈರ್ಯಶಾಲಿಯಾದ ಯುಧಿಷ್ಠಿರನು ಇಂದು ಶತ್ರುಗಳನ್ನು ಕೊಂದಿದ್ದಾನೆ. ಇಂದು ದುರ್ಯೋಧನನು ಪ್ರಕಾಶಮಾನವಾದ ರಾಜತೇಜಸ್ಸನ್ನು ಕಳೆದುಕೊಂಡಿದ್ದಾನೆ.

ಅದ್ಯ ಶ್ರುತ್ವಾ ಹತಂ ಪುತ್ರಂ ಧೃತರಾಷ್ಟ್ರೋ ಜನೇಶ್ವರಃ ।
ನಿಃಸಂಜ್ಞಃ ಪತಿತೋ ಭೂಮೌ ಕಶ್ಮಲಂ ಪ್ರತಿಪತ್ಸ್ಯತೇ ॥೧೭॥

ಇವತ್ತು ಮಗನ ಸಾವಿನ ವಾರ್ತೆಯನ್ನು ಕೇಳಿ ರಾಜ ಧೃತರಾಷ್ಟ್ರನು ನಿಶ್ಚೇಷ್ಟನಾಗಿ ನೆಲಕ್ಕೆ ಬಿದ್ದು ಮೂರ್ಛೆ ಹೋಗುತ್ತಾನೆ.

ಅದ್ಯ ಜಾನಾತಿ ಕೌಂತೇಯಂ ಸಮರ್ಥಂ ಸರ್ವಧನ್ವಿನಾಮ್ ।
ಅದ್ಯಾತ್ಮಾನಂ ಚ ದುರ್ಮೇಧಾ ಗರ್ಹಯಿಷ್ಯತಿ ಪಾಪಕೃತ್ ॥೧೮॥

ಇವತ್ತು ಧರ್ಮರಾಜನು ಸರ್ವಧನುರ್ಧಾರಿಗಳಲ್ಲಿ ಶ್ರೇಷ್ಠನು ಎಂಬುದನ್ನು ಒಪ್ಪಿಕೊಳ್ಳುತ್ತಾನೆ. ಕೆಟ್ಟ ಆಲೋಚನೆಗಳುಳ್ಳ ಪಾಪಿಯಾದ ಧೃತರಾಷ್ಟ್ರನು ಇವತ್ತು ತನ್ನನ್ನು ತಾನೇ ನಿಂದಿಸಿಕೊಳ್ಳುತ್ತಾನೆ.

ಅದ್ಯ ಕ್ಷತ್ತುರ್ವಚಃ ಸತ್ಯಂ ಸ್ಮರತಾಂ ಬ್ರುವತೋ ಹಿತಮ್ ॥೧೯॥

ಹಿತವಾದ ಮಾತನ್ನು ಹೇಳುತ್ತಿದ್ದ ವಿದುರನ ಮಾತುಗಳನ್ನು ಸ್ಮರಿಸಿಕೊಳ್ಳುವವರು ಇವತ್ತು ಅದು ಸತ್ಯವಾಗಿರುವುದನ್ನು ಮನಗಾಣುತ್ತಾರೆ.

ಅದ್ಯಪ್ರಭೃತಿ ಪಾರ್ಥಸ್ಯ ಪ್ರೇಷ್ಯಭೂತೋ ಹ್ಯುಪಾಚರನ್ ।
ವಿಜಾನಾತು ನೃಪೋ ದುಃಖಂ ಯತ್ ಪ್ರಾಪ್ತಂ ಪಾಂಡುನಂದನೈಃ॥೨೦॥

ಇವತ್ತಿನಿಂದ ಧರ್ಮರಾಜನ ಸೇವಕನಾಗಿ, ಅವನ ಸೇವೆಮಾಡಲಿರುವ ರಾಜನು ಪಾಂಡುವಿನ ಮಕ್ಕಳು ಹಿಂದೆ ಅನುಭವಿಸಿದ ದುಃಖವನ್ನು ತಿಳಿದುಕೊಳ್ಳಲಿ.

ಅದ್ಯ ಕೃಷ್ಣಸ್ಯ ಮಾಹಾತ್ಮ್ಯಂ ಜಾನಾತು ಸ ಮಹೀಪತಿಃ ।
ಅದ್ಯಾರ್ಜುನಧನುಷ್ಫೋರ್ಷಂ ಘೋರಂ ಜಾನಾತು ಸಂಯುಗೇ ॥೨೧॥

ಅಸ್ತ್ರಾಣಾಂ ಚ ಬಲಂ ಸರ್ವಂ ಬಾಹ್ವೋಶ್ಚ ಬಲಮಾಹವೇ ।
ಪುತ್ರಾಣಾಂ ಚ ವಧಂ ಘೋರಂ ಭೀಮೇನ ಶ್ರೋಷ್ಯತೇ ನೃಪಃ ॥೨೨॥

ರಾಜನು ಇವತ್ತು ಶ್ರೀಕೃಷ್ಣನ ಮಹಿಮೆಯನ್ನು ತಿಳಿದುಕೊಳ್ಳಲಿ. ಅರ್ಜುನನ ಗಾಂಡೀವದ ಕಠೋರವಾದ ಠೇಂಕಾರವು ಯುದ್ಧದಲ್ಲಿ ಹೇಗಿದೆ ಎಂಬುದನ್ನು ಅರಿಯಲಿ. ಅರ್ಜುನನ ಅಸ್ತ್ರಬಲ, ಬಾಹುಬಲವನ್ನೂ ತಿಳಿದುಕೊಳ್ಳಲಿ.

ಅದ್ಯ ಜ್ಞಾಸ್ಯತಿ ಭೀಮಸ್ಯ ಬಲಂ ಘೋರಂ ಮಹಾತ್ಮನಃ ।
ಹತೇ ದುರ್ಯೋಧನೇ ಯುದ್ಧೇ ಶಕ್ರೇಣೇವ ತು ಶಂಬರೇ ॥೨೩॥

ಯುದ್ಧದಲ್ಲಿ ಇಂದ್ರನಿಂದ ಶಂಬರಾಸುರನು ಸತ್ತಹಾಗೆ ಇವತ್ತು ದುರ್ಯೋಧನನು ಭೀಮನ ಕೈಯಲ್ಲಿ ಸತ್ತಾಗ ರಾಜನು ಭೀಮನ ಘೋರವಾದ ಬಲವೇನೆಂಬುದನ್ನು ತಿಳಿಯುತ್ತಾನೆ.

ಯತ್ ಕೃತಂ ಭೀಮಸೇನೇನ ದುಃಶಾಸನವಧೇ ತದಾ ।
ಕೋಽನ್ಯಃ ಕರ್ತಾಽಸ್ತಿ ತಲ್ಲೋಕೇ ಋತೇ ಭೀಮಂ ಮಹಾಬಲಮ್ ॥

ಭೀಮಸೇನನು ದುಃಶಾಸನನನ್ನು ಕೊಲ್ಲುವಾಗ ಯಾವ ಬಲಕಾರ್ಯವನ್ನು ತೋರಿಸಿದ್ದನೋ ಲೋಕದಲ್ಲಿ ಅಂತಹ ಕಾರ್ಯವನ್ನು ಮಾಡಲು ಭೀಮನಲ್ಲದೆ ಬೇರೆ ಯಾರೂ ಮಾಡಲು ಸಾಧ್ಯವಿಲ್ಲ.

ಜಾನೀತಾಮದ್ಯ ಜ್ಯೇಷ್ಠಸ್ಯ ಪಾಂಡವಸ್ಯ ಪರಾಕ್ರಮಮ್ ।
ಮದ್ರರಾಜಂ ಹತಂ ಶ್ರುತ್ವಾ ದೇವೈರಪಿ ಸುದುಃಸಹಮ್ ॥೨೫॥

ದೇವತೆಗಳಿಗೂ ಸಾಯಿಸಲು ಅಸಾಧ್ಯನೆನಿಸಿದ ಶಲ್ಯನನ್ನು ಧರ್ಮರಾಜನು ಇಂದು ಕೊಂದಿದ್ದಾನೆ. ಇದನ್ನು ಕೇಳಿ ರಾಜನಿಗೆ ಧರ್ಮರಾಜನ ಪರಾಕ್ರಮದ ಅರಿವಾಗಲಿ.

ಅದ್ಯ ಜ್ಞಾಸ್ಯತಿ ಸಂಗ್ರಾಮೇ ಮಾದ್ರೀಪುತ್ರೌ ಮಹಾಬಲೌ ।
ನಿಹತೇ ಸೌಬಲೇ ವೀರೇ ಗಾಂಧಾರೇಷು ಚ ಸರ್ವಶಃ ॥೨೬॥

ಶಕುನಿ ಮತ್ತು ಗಾಂಧಾರದೇಶದ ಎಲ್ಲಾ ಯೋಧರನ್ನು ನಕುಲ-ಸಹದೇವರು ಕೊಂದಿದ್ದಾರೆ. ಇದರಿಂದಾಗಿ ರಾಜನಿಗೆ ಇಂದು ನಕುಲ-ಸಹದೇವರ ಮಹತ್ತಾದ ಬಲವೇನೆಂಬುದನ್ನು ತಿಳಿಯುವದು.

ಕಥಂ ತೇಷಾಂ ಜಯೋ ನ ಸ್ಯಾದ್ ಯೇಷಾಂ ಯೋದ್ಧಾ ಧನಂಜಯಃ ।
ಸಾತ್ಯಕಿರ್ಭೀಮಸೇನಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ॥೨೭॥

ಯಾರ ಪಕ್ಷದಲ್ಲಿ ಅರ್ಜುನ, ಸಾತ್ಯಕಿ, ಭೀಮಸೇನ ಮತ್ತು ಧೃಷ್ಟದ್ಯುಮ್ನರು ಇರುತ್ತಾರೆಯೋ ಅವರಿಗೆ ಜಯವು ನಿಶ್ಚಿತ. ವಿಜಯವು ಉಂಟಾಗದಿರಲು ಹೇಗೆ ಸಾಧ್ಯ?

ದ್ರೌಪದ್ಯಾಸ್ತನಯಾಃ ಪಂಚ ಮಾದ್ರೀಪುತ್ರೌ ಚ ಪಾಂಡವೌ ।
ಶಿಖಂಡೀ ಚ ಮಹೇಷ್ವಾಸೋ ರಾಜಾ ಚೈವ ಯುಧಿಷ್ಠಿರಃ ॥೨೮॥

ಯೇಷಾಂ ಚ ಜಗತಾಂ ನಾಥೋ ನಾಥಃ ಕೃಷ್ಣೋ ಜನಾರ್ದನಃ ।
ಕಥಂ ತೇಷಾಂ ಜಯೋ ನ ಸ್ಯಾದ್ ಯೇಷಾಂ ಧರ್ಮೋ ವ್ಯಪಾಶ್ರಯಃ ॥

ದ್ರೌಪದಿಯ ಐದು ಮಕ್ಕಳು, ಮಾದ್ರಿಯ ಮಕ್ಕಳಾದ ನಕುಲ-ಸಹದೇವರು, ಮಹಾಬಿಲ್ಲಾರನಾದ ಶಿಖಂಡೀ, ರಾಜ ಯುಧಿಷ್ಠಿರ ಇವರು ಯಾವ ಪಕ್ಷದಲ್ಲಿ ಇದ್ದಾರೆಯೋ, ಜಗನ್ನಾಥನಾದ ಶ್ರೀಕೃಷ್ಣನೇ ಯಾವ ಪಕ್ಷಕ್ಕೆ ರಕ್ಷಕನಾಗಿದ್ದಾನೋ, ಯಾರ ಧರ್ಮವು ಶಾಸ್ತ್ರಸಮ್ಮತವಾಗಿದ್ದವೋ ಅಂತಹ ಪಾಂಡವರ ಪಕ್ಷಕ್ಕೆ ಜಯವುಂಟಾಗದಿರಲು ಸಾಧ್ಯವಿಲ್ಲ.

ಲಾಭಸ್ತೇಷಾಂ ಜಯಸ್ತೇಷಾಂ ಕುತಸ್ತೇಷಾಂ ಪರಾಭವಃ ।
ಯೇಷಾಂ ನಾಥೋ ಹೃಷೀಕೇಶಃ ಸರ್ವಲೋಕವಿಭುರ್ಹರಿಃ ॥೩೦॥

ಸಕಲಲೋಕಸ್ವಾಮಿಯಾದ ಶ್ರೀಹರಿ ಯಾರಿಗೆ ರಕ್ಷಕನಾಗಿದ್ದಾನೆಯೋ ಅಂತಹವರಿಗೆ ದ್ರವ್ಯಲಾಭ, ಜಯಲಾಭಗಳು ಸಂಭವಿಸುತ್ತವೆ. ಅವರಿಗೆ ಸೋಲೆಂಬುದು ಇಲ್ಲವೇ ಇಲ್ಲ.

ಭೀಷ್ಮಂ ದ್ರೋಣಂ ಚ ಕರ್ಣಂ ಚ ಮದ್ರರಾಜಾನಮೇವ ಚ ।
ತಥಾಽನ್ಯಾನ್ ನೃಪತೀನ್ ವೀರಾನ್ ಶತಶೋಽಥ ಸಹಸ್ರಶಃ ॥೩೧॥

ಕೋಽನ್ಯಃ ಶಕ್ತೋ ರಣೇ ಜೇತುಮ್ ಋತೇ ಪಾರ್ಥಂ ಯುಧಿಷ್ಠಿರಮ್ ।
ಯಸ್ಯ ನಾಥೋ ಹೃಷೀಕೇಶಃ ಸದಾ ಸತ್ಯಯಶೋನಿಧಿಃ ॥೩೨॥

ಭೀಷ್ಮನನ್ನು, ದ್ರೋಣನನ್ನು, ಕರ್ಣನನ್ನು, ಶಲ್ಯನನ್ನು ಹಾಗೂ ನೂರಾರು ಸಾವಿರಾರು ಬೇರೆ ವೀರರಾದ ರಾಜರನ್ನು ಯುದ್ಧದಲ್ಲಿ ಗೆಲ್ಲುವುದು ಯುಧಿಷ್ಠಿರನಿಗೆ ಹೊರತಾಗಿ ಬೇರೆ ಯಾರಿಗೂ ಸಾಧ್ಯವಿಲ್ಲ. ಈ ಯುಧಿಷ್ಠಿರನಿಗೆ ವಂಚನೆಯಿಲ್ಲದ ಶುಭ್ರಕೀರ್ತಿಯ ಗಣಿಯಾದ ಶ್ರೀಕೃಷ್ಣನೇ ರಕ್ಷಕನಾಗಿದ್ದಾನೆ.

ಸಂಜಯಃ

ಇತ್ಯೇವಂ ವದಮಾನಾಸ್ತೇ ಹರ್ಷೇಣ ಮಹತಾ ಯುತಾಃ ।
ಪ್ರಭಿನ್ನಾಂಸ್ತಾವಕಾನ್ ರಾಜನ್ ಸೃಂಜಯಾಃ ಪೃಷ್ಠತೋಽನ್ವಯುಃ ॥೩೩॥

ಸಂಜಯ– ರಾಜನೇ! ಈ ರೀತಿಯಾಗಿ ಮಾತನಾಡುತ್ತಾ ಬಹಳವಾದ ಸಂತೋಷದಿಂದ ಕೂಡಿದವರಾಗಿ ಸೃಂಜಯರು ಪೆಟ್ಟುತಿಂದು ಓಡಿಹೋಗುತ್ತಿರುವ ನಿನ್ನವರನ್ನು ಬೆನ್ನಟ್ಟಿ ಹೋದರು.

ಧನಂಜಯೋ ರಥಾನೀಕಮಭ್ಯವರ್ತತ ವೀರ್ಯವಾನ್ ।
ಮಾದ್ರೀಪುತ್ರೌ ಚ ಶಕುನಿಂ ಸಾತ್ಯಕಿಶ್ಚ ಮಹಾರಥಃ ॥೩೪॥

ವೀರ್ಯವಂತನಾದ ಅರ್ಜುನನು ರಥಸೈನ್ಯದ ಮೇಲೆ ದಾಳಿಮಾಡಿದನು. ನಕುಲ-ಸಹದೇವರು ಮತ್ತು ಮಹಾರಥನಾದ ಸಾತ್ಯಕಿಯು ಶಕುನಿಯ ಮೇಲೆ ಆಕ್ರಮಣ ಮಾಡಿದರು.

ತಾನ್ ಪ್ರೇಕ್ಷ್ಯ ದ್ರವತಃ ಸರ್ವಾನ್ ಭೀಮಸೇನಭಯಾರ್ದಿತಾನ್ ।
ದುರ್ಯೋಧನಸ್ತದಾ ಸೂತಮಬ್ರವೀದ್ ವಿಸ್ಮಯನ್ನಿವ ॥೩೫॥

ಭೀಮಸೇನನ ಭಯದಿಂದ ಹೆದರಿ ಓಡಿಹೋಗುತ್ತಿದ್ದ ಅವರೆಲ್ಲರನ್ನು ನೋಡಿ ದುರ್ಯೋಧನನು ತನ್ನ ಸಾರಥಿಗೆ ಹೀಗೆ ಹೇಳುತ್ತಾನೆ

ದುರ್ಯೋಧನಃ

ನ ಮಾऽತಿಕ್ರಮತೇ ಪಾರ್ಥೋ ಧನುಷ್ಪಾಣಿಮವಸ್ಥಿತಮ್ ।
ಜಹಿ ನೇ ಸರ್ವಸೈನ್ಯಾನಾಂ ಶನೈರಶ್ವಾನ್ ಪ್ರಚೋದಯ ॥೩೬॥

ದುರ್ಯೋಧನ– ಧನುರ್ಧಾರಿಯಾಗಿ ಸಕಲಸೈನ್ಯದ ಪೃಷ್ಠಭಾಗದಲ್ಲಿ ಇರುವ ನನ್ನನ್ನು ಯುಧಿಷ್ಠಿರನು ಅತಿಕ್ರಮಿಸಲು ಸಾಧ್ಯವಿಲ್ಲ. ಆದ್ದರಿಂದ ಕುದುರೆಗಳನ್ನು ನಿಧಾನವಾಗಿ ಓಡಿಸು.

ಜಹಿ ನೇ ಯುಧ್ಯಮಾನಂ ಹಿ ಕೌಂತೇಯೋ ಮಾಂ ಧನಂಜಯಃ ।
ನೋತ್ಸಹೇತ ವ್ಯತಿಕ್ರಾಂತುಂ ವೇಲಾಮಿವ ಮಹೋದಧಿಃ ॥೩೭॥

ಸೈನ್ಯದ ಹಿಂಭಾಗದಲ್ಲಿ ಯುದ್ಧಮಾಡುತ್ತಿರುವ ನನ್ನನ್ನು ಅರ್ಜುನನೂ ಮೀರಿಹೋಗಲು ಸಾಧ್ಯವಿಲ್ಲ. ಏಕೆಂದರೆ ಸಮುದ್ರವು ತೀರವನ್ನು ಮೀರುವುದಿಲ್ಲ. ಹಾಗೆಯೇ ನಾನು ನನ್ನ ಸೈನ್ಯವನ್ನು ರಕ್ಷಿಸುತ್ತಿದ್ದೇನೆ.

ಪಶ್ಯ ಸೈನ್ಯಂ ಮಹತ್ಸೂತ ಪಾಂಡವೈಃ ಸಮಭಿದ್ರುತಮ್ ।
ಸೈನ್ಯರೇಣುಂ ಸಮುದ್ಧೂತಂ ಪಶ್ಯ ಚೈನಂ ಸಮಂತತಃ ॥೩೮॥

ಸೂತನೇ! ಪಾಂಡವರಿಂದಾಗಿ ಓಡಿಹೋಗುತ್ತಿರುವ ನಮ್ಮ ದೊಡ್ಡದಾದ ಸೈನ್ಯವನ್ನು ನೋಡು! ಎಲ್ಲೆಡೆ ಧೂಳು ಎದ್ದಿದೆ. ಅದನ್ನೂ ನೋಡು.

ಸಿಂಹನಾದಾಂಶ್ಚ ಬಹುಶಃ ಶೃಣು ಘೋರಾನ್ ಭಯಾನಕಾನ್ ।
ತಸ್ಮಾದ್ ಯಾಹಿ ಶನೈಃ ಸೂತ ಜಘನಂ ಪರಿಪಾಲಯ ॥೩೯॥

ಭಯವನ್ನು ಹುಟ್ಟಿಸುವ ಘೋರವಾದ ಸಿಂಹನಾದವನ್ನು ಕೇಳು. ಆದ್ದರಿಂದ ನಿಧಾನವಾಗಿ ಹೋಗು. ಆ ಮೂಲಕ ಸೈನ್ಯದ ಹಿಂಭಾಗವನ್ನಾದರೂ ರಕ್ಷಿಸೋಣ.

ಮಯಿ ಸ್ಥಿತೇ ಚ ಸಮರೇ ನಿರುದ್ವೇಷು ಚ ಪಾಂಡುಷು ।
ಪುನರಾವರ್ತತೇ ತೂರ್ಣಂ ಮಾಮಕಂ ಬಲಮೋಜಸಾ ॥೪೦॥

ನಾನು ಯುದ್ಧದಲ್ಲಿ ನಿಂತು ಪಾಂಡವರನ್ನು ನಿಗ್ರಹಿಸಿದರೆ ನನ್ನ ಸೈನ್ಯವು ಹೊಸಸಾಮರ್ಥ್ಯವನ್ನು ಮೈಗೂಡಿಸಿಕೊಂಡು ಬೇಗನೆ ಯುದ್ಧಕ್ಕೆ ಹಿಂತಿರುಗುತ್ತದೆ.

ಸಂಜಯಃ

ತಚ್ಛ್ರುತ್ವಾ ತವ ಪುತ್ರಸ್ಯ ಭಾಷತೋ ಮಧುರಂ ವಚಃ ।
ಸಾರಥಿರ್ಹೇಮಸಂಛನ್ನಾನ್ ಶನೈರಶ್ವಾನಚೋದಯತ್ ॥೪೧॥

ಸಂಜಯ– ನಿನ್ನಮಗನು ಆಡಿದ ಮಧುರವಾದ ಮಾತನ್ನು ಕೇಳಿದ ಸಾರಥಿಯು ಬಂಗಾರದ ಕವಚವನ್ನು ಹೊಂದಿದ ಕುದುರೆಗಳನ್ನು ನಿಧಾನವಾಗಿ ನಡೆಸಿದನು.

ಗಜಾಶ್ವರಥಿಭಿರ್ಭಿನ್ನಾಃ ತ್ಯಕ್ತಾತ್ಮಾನಃ ಪದಾತಯಃ ।
ಏಕವಿಂಶತಿಸಾಹಸ್ರಾಃ ಸಂಯುಗಾಯಾವತಸ್ಥಿರೇ ॥೪೨॥

ತಮ್ಮ ಪ್ರಾಣದ ಮೇಲೆ ಆಶೆಯನ್ನು ಬಿಟ್ಟಿರುವ, ಆನೆ ಕುದುರೆ ರಥಗಳಿಂದಾಗಿ ಹೊಡೆತವನ್ನು ತಿಂದಿರುವ ಇಪ್ಪತ್ತೊಂದು ಸಾವಿರ ಸಂಖ್ಯೆಯಲ್ಲಿ ಇದ್ದ ಕಾಲಾಳುಗಳು ಯುದ್ಧಕ್ಕಾಗಿ ಮತ್ತೆ ಬಂದರು.

ನಾನಾದೇಶಸಮುದ್ಭೂತಾ ನಾನಾರಂಜಿತವಾಸಸಃ ।
ಅವಸ್ಥಿತಾಸ್ತದಾ ಯೋಧಾಃ ಪ್ರಾರ್ಥಯಂತೋ ಮಹದ್ಯಶಃ ॥೪೩॥

ಆಗ ನಾನಾದೇಶಗಳಿಂದ ಭಿನ್ನ-ಭಿನ್ನವಾದ ಬಟ್ಟೆಗಳನ್ನು ಧರಿಸಿರುವ ಯೋಧರು ದೊಡ್ಡ ಯಶಸ್ಸನ್ನು ಪ್ರಾರ್ಥಿಸುತ್ತಾ ನಿಂತರು.

ತೇಷಾಮಾಪತತಾಂ ತತ್ರ ಸಂಸೃಷ್ಟಾನಾಂ ಪರಸ್ಪರಮ್ ।
ಸಮ್ಮರ್ದಸ್ತು ಮಹಾನ್ ಜಜ್ಞೇ ಘೋರರೂಪೋ ಭಯಂಕರಃ ॥೪೪॥

ಯುದ್ಧದಲ್ಲಿ ತೊಡಗಿದ, ಪರಸ್ಪರ ಮೇಲೆ ಬೀಳುತ್ತಿರುವ ಆ ಯೋಧರ ಮಧ್ಯದಲ್ಲಿ ಘೋರಸ್ವರೂಪದ ದೊಡ್ಡ ಯುದ್ಧವು ನಡೆಯಿತು.

ಭೀಮಸೇನಂ ತದಾ ರಾಜನ್ ಧೃಷ್ಟದ್ಯುಮ್ನಂ ಚ ಪಾರ್ಷತಮ್ ।
ಬಲೇನ ಚತುರಂಗೇಣ ನಾನಾದೇಶ್ಯಾ ನ್ಯವಾರಯನ್ ॥೪೫॥

ರಾಜನೇ! ಭೀಮನನ್ನು ಮತ್ತು ಧೃಷ್ಟದ್ಯುಮ್ನನನ್ನು ಚತುರಂಗಬಲದೊಂದಿಗೆ ನಾನಾದೇಶದ ಯೋಧರು ತಡೆದರು.

ಭೀಮಮೇವಾಭ್ಯವರ್ತಂತ ರಣೇऽನ್ಯೇ ತು ಪದಾತಯಃ ।
ಪ್ರಕ್ಷ್ವೇಲ್ಯಾಸ್ಫೋಟ್ಯ ಸಂಹೃಷ್ಟಾ ವೀರಲೋಕಮಿಯಾಸವಃ ॥೪೬॥

ಇನ್ನೊಂದು ಭಾಗದಿಂದ ಪದಾತಿಗಳು ಭೀಮನನ್ನೊಬ್ಬನನ್ನೇ ಆಕ್ರಮಿಸಿದರು. ಅವರು ಸಂತೋಷದಿಂದ ಭುಜವನ್ನು ತಟ್ಟಿಕೊಳ್ಳುತ್ತಾ ವೀರಲೋಕಕ್ಕೆ ಹೋಗುವ ಇಚ್ಛೆಯುಳ್ಳವರಾಗಿದ್ದರು.

ಆಸಾದ್ಯ ಭೀಮಸೇನಂ ತು ಸಂಕ್ರುದ್ಧಾ ಯುದ್ಧದುರ್ಮದಾಃ ।
ಧಾರ್ತರಾಷ್ಟ್ರಾಸ್ತದಾ ನೇದುರ್ನಾನ್ಯಮಕಥಯನ್ ಕಥಾಮ್ ॥೪೭॥

ಯುದ್ಧದಲ್ಲಿ ಮಣಿಸಲು ಕಷ್ಟಸಾಧ್ಯವಾದ ಹಾಗೂ ಕೋಪಭರಿತವಾದ ಧಾರ್ತರಾಷ್ಟ್ರ ಸೇನೆಯು ಭೀಮಸೇನನ ಬಳಿಗೆ ಬಂದು ಜೋರಾಗಿ ಶಬ್ದವನ್ನುಂಟುಮಾಡಿತು. ಬೇರೆ ಯಾವುದೇ ವಿಷಯದ ಬಗ್ಗೆ ಮಾತನಾಡುತ್ತಿರಲಿಲ್ಲ.

ಪರಿವಾರ್ಯ ರಣೇ ಭೀಮಂ ನಿಜಘ್ನುಸ್ತೇ ಸಮಂತತಃ ॥೪೮॥

ಯುದ್ಧದಲ್ಲಿ ಭೀಮನನ್ನು ಸುತ್ತುವರಿದು ಎಲ್ಲಾ ಕಡೆಯಿಂದಲೂ ಹೊಡೆದರು.

ಸ ವಧ್ಯಮಾನಃ ಸಮರೇ ಪದಾತಿಗಣಸಂವೃತಃ ।
ನ ಚಚಾಲ ರಥೋಪಸ್ಥೇ ಮೈನಾಕ ಇವ ಪರ್ವತಃ ॥೪೯॥

ಪದಾತಿಗಳ ಸಮೂಹವು ಸುತ್ತ ನೆರೆದು, ಯುದ್ಧದಲ್ಲಿ ಭೀಮನಿಗೆ ಹೊಡೆಯುತ್ತಿದ್ದರೂ ಭೀಮಸೇನನು ಮೈನಾಕ ಪರ್ವತದ ಹಾಗೆ ಅಚಲನಾಗಿ ರಥದ ಆಸನದಿಂದ ಚಲಿಸಲಿಲ್ಲ.

ತೇ ತು ಕ್ರುದ್ಧಾ ಮಹಾರಾಜ ಪಾಂಡವಸ್ಯ ಮಹಾರಥಾಃ ।
ನಿಗೃಹೀತುಂ ಪ್ರಚಕ್ರುರ್ಹಿ ಯೋಧಾಶ್ಚಾನ್ಯೇ ನ್ಯವಾರಯನ್ ॥೫೦॥

ಮಹಾರಾಜನೇ! ಪಾಂಡವರ ಮಹಾರಥರು ಬಹಳ ಕೋಪಿಸಿಕೊಂಡು ಆ ಪದಾತಿಗಳನ್ನು ಹಿಡಿಯಲು ತೊಡಗಿದರು. ಆಗ ಬೇರೆ ಯೋಧರು ಅವರನ್ನು ತಡೆದರು.

ಅಕ್ರುಧ್ಯತ ರಣೇ ಭೀಮಃ ತೈಸ್ತದಾ ಪರ್ಯವಸ್ಥಿತೈಃ ॥೫೧॥

ಯುದ್ಧದಲ್ಲಿ ಸುತ್ತಲೂ ನೆರೆದ ಯೋಧರ ಮೇಲೆ ಭೀಮನು ಕೋಪಿಸಿಕೊಂಡನು.

ಸೋಽವತೀರ್ಯ ರಥಾತ್ ತೂರ್ಣಂ ಪದಾತಿಃ ಸಮವಸ್ಥಿತಃ ।
ಜಾತರೂಪಪರಿಚ್ಛನ್ನಾಂ ಪ್ರಗೃಹ್ಯ ಮಹತೀಂ ಗದಾಮ್ ॥೫೨॥

ತಕ್ಷಣ ಭೀಮನು ರಥದಿಂದ ಕೆಳಗಿಳಿದು ಕಾಲುಗಳಲ್ಲಿಯೇ ನಿಂತನು. ಬಂಗಾರದ ಲೇಪವುಳ್ಳ ದೊಡ್ಡ ಗದೆಯನ್ನು ಕೈಯಲ್ಲಿ ಹಿಡಿದುಕೊಂಡನು.

ಅವಧೀತ್ ತಾವಕಾನ್ ಯೋಧಾನ್ ದಂಡಪಾಣಿರಿವಾಂತಕಃ ॥೫೩॥

ದಂಡಧಾರಿಯಾದ ಯಮನಂತೆ ಭೀಮನು ಆ ಗದೆಯಿಂದ ನಿನ್ನ ಕಡೆಯ ಯೋಧರನ್ನು ಹೊಡೆದನು.

ವಿಪ್ರಹೀಣರಥಾಶ್ವಾಂಸ್ತಾನ್ ನರಾನ್ ಸ ಪುರುಷರ್ಷಭಃ ।
ರಥಾಶ್ಚ ದ್ವಿಪಹೀನಾಸ್ತು ತಾನ್ ಭೀಮೋ ಗದಯಾ ಬಲೀ ॥೫೪॥

ಪುರುಷಶ್ರೇಷ್ಠನಾದ ಬಲಶಾಲಿ ಭೀಮನು ರಥ-ಕುದುರೆಗಳನ್ನು ಕಳೆದುಕೊಂಡಿರುವ ಪದಾತಿಗಳನ್ನು ಗದೆಯಿಂದ ಹೊಡೆದನು. ರಥಗಳನ್ನೂ ಹೊಡೆದನು. ಆನೆಗಳನ್ನು ಕಳೆದುಕೊಂಡಿರುವ ಗಜವಾಹಿಗಳನ್ನೂ ಕೊಂದನು.

ಏಕವಿಂಶತಿಸಾಹಸ್ರಾನ್ ಪದಾತೀನವಪೋಥಯತ್ ॥೫೫॥

ಇಪ್ಪತ್ತೊಂದು ಸಾವಿರ ಪದಾತಿಗಳನ್ನು ಮರ್ದಿಸಿದನು.

ಹತ್ವಾ ತತ್ ಪುರುಷಾನೀಕಂ ಭೀಮಃ ಸತ್ಯಪರಾಕ್ರಮಃ ।
ಧೃಷ್ಟದ್ಯುಮ್ನಂ ಪುರಸ್ಕೃತ್ಯ ನಚಿರಾತ್ ಪ್ರತ್ಯದೃಶ್ಯತ ॥೫೬॥

ಯಥಾರ್ಥವಾದ ಪರಾಕ್ರಮವುಳ್ಳ ಭೀಮಸೇನನು ಪುರುಷಸೈನ್ಯವನ್ನು ಕೊಂದು ಧೃಷ್ಟದ್ಯುಮ್ನನ ಜೊತೆಗೆ ಬೇಗನೇ ಕಾಣಿಸಿಕೊಂಡನು.

ಪಾದಾತಾ ನಿಹತಾ ಭೂಮೌ ಶಿಶ್ಯಿರೇ ರುಧಿರೋಕ್ಷಿತಾಃ ।
ಪ್ರಭಗ್ನಾ ಇವ ವಾತೇನ ಕರ್ಣಿಕಾರಾಃ ಸುಪುಷ್ಪಿತಾಃ ॥೫೭॥

ಬಿರುಗಾಳಿಗೆ ಮುರಿದು ಕೆಳಬಿದ್ದ ಹೂಬಿಟ್ಟ ಕರ್ಣಿಕಾರ(ಕಣಗಿಲೆ) ಮರಗಳಂತೆ ರಕ್ತಸಿಕ್ತದೇಹವುಳ್ಳ ಪದಾತಿಗಳು ಭೂಮಿಯಲ್ಲಿ ಮಲಗಿದ್ದರು.

ನಾನಾಶಸ್ತ್ರಸಮಾಯುಕ್ತಾ ನಾನಾಕುಂಡಲಧಾರಿಣಃ ।
ನಾನಾಜಾತ್ಯಾ ಹತಾಸ್ತತ್ರ ನಾನಾದೇಶಸಮಾಗತಾಃ ॥೫೮॥

ನಾನಾವಿಧದ ಶಸ್ತ್ರಗಳನ್ನು ಹಿಡಿದಿರುವ, ನಾನಾವಿಧದ ಕುಂಡಲವನ್ನು ಧರಿಸಿರುವ, ನಾನಾಜಾತಿಯವರಾದ, ನಾನಾದೇಶಗಳಿಂದ ಬಂದಿರುವ ಯೋಧರು ಅಲ್ಲಿ ಸತ್ತಿದ್ದರು.

ಪತಾಕಾಧ್ವಜಸಂಪನ್ನಂ ಪದಾತೀನಾಂ ಮಹದ್ಬಲಮ್ ।
ನಿಕೃತ್ತಂ ವಿಬಭೌ ತತ್ರ ಛಿನ್ನಂ ತಾಲವನಂ ಯಥಾ ॥೫೯॥

ಪತಾಕೆ ಹಾಗೂ ಧ್ವಜಗಳನ್ನು ಹೊಂದಿದ ಆ ಪದಾತಿಗಳ ಸೇನೆಯು ಸತ್ತು ಕೆಳಬಿದ್ದಿತು. ಇದು ತಾಲವೃಕ್ಷಗಳ ವನವು ತುಂಡರಿಸಿ ಬಿದ್ದ ಹಾಗೆ ಇತ್ತು.

ಯುಧಿಷ್ಠಿರಪುರೋಗಾಸ್ತು ಸಹಸೈನ್ಯಾ ಮಹಾರಥಾಃ ।
ಅಭ್ಯಧಾವನ್ ಮಹಾತ್ಮಾನಃ ಪುತ್ರಂ ದುರ್ಯೋಧನಂ ತವ ॥೬೦॥

ಯುಧಿಷ್ಠಿರನೇ ಮೊದಲಾದ ಮಹಾತ್ಮರಾದ ಮಹಾರಥರು ಸೈನ್ಯಸಮೇತವಾಗಿ ನಿನ್ನ ಮಗ ದುರ್ಯೋಧನನಿಗೆ ಮುತ್ತಿಗೆ ಹಾಕಿದರು.

ತೇ ಸರ್ವೇ ತಾವಕಾನ್ ದೃಷ್ಟ್ವಾ ಮಹೇಷ್ವಾಸಾನ್ ಪರಾಙ್ಮುಖಾನ್ ।
ನಾತ್ಯವರ್ತಂತ ತೇ ಪುತ್ರಂ ವೇಲಾಮಿವ ಮಹೋರ್ಮಯಃ ॥೬೧॥

ಆ ಪಾಂಡವರ ಯೋಧರೆಲ್ಲರೂ ನಿನ್ನ ಪಕ್ಷದ ಮಹಾಬಿಲ್ಲಾರರು ಯುದ್ಧದಿಂದ ಪಲಾಯನಮಾಡಿದ್ದನ್ನು ಕಂಡು ಸೈನ್ಯದ ಹಿಂಭಾಗದಲ್ಲಿ ಇದ್ದ ನಿನ್ನ ಮಗನನ್ನು ಮೀರಿ ಹೋಗಲಿಲ್ಲ. ಸಮುದ್ರವು ತೀರವನ್ನು ಮೀರದಿರುವಂತೆ ಪಾಂಡವರು ದುರ್ಯೋಧನನನ್ನು ದಾಟಿ ಹೋಗಲಿಲ್ಲ.

ತದದ್ಭುತಮಪಶ್ಯಾಮ ತವ ಪುತ್ರಸ್ಯ ವಿಕ್ರಮಮ್ ।
ಯದೇಕಂ ಸಹಿತಾಃ ಪಾರ್ಥಾ ನ ಶೇಕುರತಿವರ್ತಿತುಮ್ ॥೬೨॥

ಪಾಂಡವರ ಕಡೆಯವರು ಎಲ್ಲರು ಸೇರಿದ್ದರೂ ದುರ್ಯೋಧನನು ಒಬ್ಬನೇ ಅವರನ್ನು ತಡೆಹಿಡಿದನು. ನಿನ್ನ ಮಗನ ಈ ಪರಾಕ್ರಮವು ಬಹಳ ಅದ್ಭುತವಾಗಿತ್ತು.

ನಾತಿದೂರೇऽಪಯಾತಂ ತಂ ಕೃತಬುದ್ಧಿಂ ಪಲಾಯನೇ ।
ದುರ್ಯೋಧನಃ ಸ್ವಕಂ ಸೈನ್ಯಮಬ್ರವೀದ್ ಭೃಶವಿಕ್ಷತಮ್ ॥೬೩॥

ಬಹಳವಾಗಿ ಗಾಯಗೊಂಡು ಯುದ್ಧದಿಂದ ಪಲಾಯನ ಮಾಡುವ ನಿಶ್ಚಯವನ್ನು ಮಾಡಿಕೊಂಡು ಹತ್ತಿರದಲ್ಲಿಯೇ ಇರುವ ತನ್ನ ಸೈನ್ಯವನ್ನು ಕುರಿತು ದುರ್ಯೋಧನನು ಹೀಗೆ ಹೇಳುತ್ತಾನೆ.

ದುರ್ಯೋಧನಃ

ನ ತಂ ದೇಶಂ ಪ್ರಪಶ್ಯಾಮಿ ಪೃಥಿವ್ಯಾಂ ಪರ್ವತೇಷು ವಾ ।
ಯತ್ರ ಯಾತಾನ್ ನ ವೋ ಹನ್ಯುಃ ಪಾಂಡವಾಃ ಕಿಂ ದ್ರುತೇನ ವಃ ॥

ದುರ್ಯೋಧನ– ನೀವು ಇಲ್ಲಿಂದ ಓಡಿಹೋದರೂ ಪಾಂಡವರ ಕೈಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಪಾಂಡವರ ಆಕ್ರಮಣಕ್ಕೆ ಒಳಗಾಗದ ಪ್ರದೇಶವು ಪೃಥಿವಿಯಲ್ಲಾಗಲೀ, ಪರ್ವತಗಳಲ್ಲಾಗಲೀ ಎಲ್ಲಿಯೂ ಇಲ್ಲ. ಆದ್ದರಿಂದ ನೀವು ಓಡುವುದರಿಂದ ಏನು ಪ್ರಯೋಜನ?

ಅಲ್ಪಂ ಚ ಬಲಮೇತೇಷಾಂ ಕೃಷ್ಣೌ ಚ ಭೃಶದುಃಖಿತೌ ।
ಯದಿ ಸರ್ವೇ ಪ್ರತಿಷ್ಠಾಮೋ ಧ್ರುವಂ ನೋ ವಿಜಯೋ ಭವೇತ್॥೬೫॥

ಪಾಂಡವರ ಸೇನೆಯು ಸಂಖ್ಯೆಯಲ್ಲಿ ಕಡಿಮೆಯಾಗಿದೆ. ಶ್ರೀಕೃಷ್ಣ-ಅರ್ಜುನರೂ ಕೂಡ ಬಹಳವಾಗಿ ಬಳಲಿದ್ದಾರೆ. ಆದ್ದರಿಂದ ಒಂದು ವೇಳೆ ನಾವು ಎಲ್ಲರು ನಿಂತು ಯುದ್ಧ ಮಾಡಿದರೆ ಜಯವು ನಿಶ್ಚಯವಾಗಿಯೂ ನಮ್ಮದಾಗುವುದು.

ವಿಪ್ರಯಾತಾಂಸ್ತು ನೋ ಭಿನ್ನಾನ್ ಪಾಂಡವಾಃ ಕೃತಕಿಲ್ಬಿಷಾನ್ ।
ಅನುವ್ರಜ್ಯ ಹನಿಷ್ಯಂತಿ ಶ್ರೇಯೋ ನಃ ಸಮರೇ ಸ್ಥಿತಿಃ ॥೬೬॥

ಅಪರಾಧ ಮಾಡಿ ನಾವು ಬೇರೆ ಬೇರೆ ದಿಕ್ಕುಗಳಲ್ಲಿ ಓಡಿಹೋದರೆ ಪಾಂಡವರು ಹಿಂಬಾಲಿಸಿಕೊಂಡು ಬಂದು ಸಾಯಿಸುತ್ತಾರೆ. ಅದಕ್ಕಿಂತ ಯುದ್ಧದಲ್ಲಿ ನಿಲ್ಲುವುದೇ ಶ್ರೇಯಸ್ಕರ.

ಶೃಣ್ವಂತು ಕ್ಷತ್ರಿಯಾಃ ಸರ್ವೇ ಯಾವಂತಃ ಸ್ಥ ಸಮಾಗತಾಃ ॥೬೭॥

ಕ್ಷತ್ರಿಯವೀರರೇ! ಎಲ್ಲರೂ ಕೇಳಿಸಿಕೊಳ್ಳಿ! ಬಂದಿರುವ ನೀವೆಲ್ಲರೂ ಯುದ್ಧದಲ್ಲಿ ನಿಲ್ಲಿ.

ಯದಿ ಶೂರಂ ಚ ಭೀಮಂ ಚ ಮಾನಯತ್ಯಂತಕಃ ಸದಾ ।
ಕೋ ನು ಮೂಢೋ ನ ಯುಧ್ಯೇತ ಪುರುಷಃ ಕ್ಷತ್ರಿಯರ್ಷಭಃ ॥೬೮॥

ಒಂದು ವೇಳೆ ಶೂರನಾದ ಭೀಮನನ್ನು ಎದುರಿಸಿದರೆ ಯಮನೂ ಕೂಡ ಗೌರವಿಸುತ್ತಾನೆ. ಕ್ಷತ್ರಿಯೋತ್ತಮನಾದ ಯಾವ ಪುರುಷನೂ ಯುದ್ಧ ಮಾಡದಿರಲಾರನು.

ಶ್ರೇಯೋ ನೋ ಭೀಮಸೇನಸ್ಯ ಕ್ರುದ್ಧಸ್ಯ ಪ್ರಮುಖೇ ಸ್ಥಿತಿಃ ॥೬೯॥

ಏಕೆಂದರೆ ಯುದ್ಧದಲ್ಲಿ ಕ್ರುದ್ಧನಾದ ಭೀಮನ ಮುಂದೆ ಯುದ್ಧಕ್ಕೆ ನಿಲ್ಲುವುದರಿಂದಲೇ ನಮಗೆ ಶ್ರೇಯಸ್ಸು ಉಂಟಾಗುತ್ತದೆ.

ಮುಖ್ಯಃ ಸಾಂಗ್ರಾಮಿಕೋ ಮೃತ್ಯುರ್ದುಃಖೋ ವ್ಯಾಧಿಜರಾದಿಭಿಃ ।
ಮರ್ತ್ಯೇನಾವಶ್ಯಂ ಮರ್ತವ್ಯಂ ಗೃಹೇಷ್ವಪಿ ಕದಾಚನ ॥೭೦॥

ಕ್ಷತ್ರಿಯನಿಗೆ ಯುದ್ಧದಲ್ಲಿ ಬರುವ ಮರಣವು ಶ್ರೇಷ್ಠವಾಗಿದೆ. ರೋಗ-ಮುಪ್ಪುಗಳಿಂದ ಬರುವ ಮರಣವು ಅವನಿಗೆ ದುಃಖದಾಯಕ. ಮನುಷ್ಯನು ಯಾವತ್ತಾದರೂ ಮನೆಯಲ್ಲಿಯಾದರೂ ಅವಶ್ಯವಾಗಿ ಸಾಯಲೇಬೇಕು.

ಯುಧ್ಯತಃ ಕ್ಷತ್ರಧರ್ಮೇಣ ಮೃತ್ಯುರೇಷ ಸನಾತನಃ ॥೭೧॥

ಕ್ಷತ್ರಿಯಧರ್ಮಕ್ಕನುಸಾರವಾಗಿ ಯುದ್ಧಮಾಡಿಕೊಂಡು ಸಾಯುವುದು ಯಾವತ್ತೂ ಉಳಿಯುವಂತಹದ್ದು.

ಜಿತ್ವಾ ವಾ ಸುಖಮಾಪ್ನೋತಿ ಹತಃ ಪ್ರೇತ್ಯ ಮಹದ್ಯಶಃ ।
ನ ಯುದ್ಧಧರ್ಮಾಚ್ಛ್ರೇಯಾನ್ ವೈ ಪಂಥಾಃ ಸ್ವರ್ಗಸ್ಯ ಕೌರವಾಃ ॥೭೨॥

ಗೆದ್ದರೆ ಸುಖವನ್ನು ಹೊಂದುವನು. ಸತ್ತರೆ ಬಹಳವಾದ ಕೀರ್ತಿಯನ್ನು ಹೊಂದುವನು. ಕೌರವರೇ! ಸ್ವರ್ಗವನ್ನು ಪಡೆಯಲು ಯುದ್ಧಕ್ಕಿಂತ ಬೇರೆಯಾದ ಮಾರ್ಗವು ಇಲ್ಲ.

ಅಚಿರೇಣ ಜಿತಾಲ್ಲೋಕಾನ್ ಹತೋ ಯುಧಿ ಸಮಶ್ನುತೇ ॥೭೩॥

ಯುದ್ಧದಲ್ಲಿ ಮರಣವನ್ನು ಹೊಂದಿದರೆ ಬೇಗನೆ ವೀರಸ್ವರ್ಗವನ್ನು ಹೊಂದುವನು.

ಸಂಜಯಃ

ಶ್ರುತ್ವಾ ತು ವಚನಂ ತಸ್ಯ ಪೂಜಯಿತ್ವಾ ತು ಪಾರ್ಥಿವಾಃ ।
ಪುನರೇವಾಭ್ಯವರ್ತಂತ ಪಾಂಡವಾನಾತತಾಯಿನಃ ॥೭೪॥

ಸಂಜಯ– ದುರ್ಯೋಧನ ಆಡಿದ ಮಾತುಗಳನ್ನು ಕೇಳಿ, ಗೌರವಿಸಿ ಆತತಾಯಿಗಳಾದ ರಾಜರುಗಳು ಪುನಃ ಪಾಂಡವರನ್ನು ಎದುರಿಸಿದರು.

ತಾನಾಪತತ ಏವಾಶು ವ್ಯೂಢಾನೀಕಾಃ ಪ್ರಹಾರಿಣಃ ।
ಪ್ರತ್ಯುದ್ಯಯುಸ್ತದಾ ಪಾರ್ಥಾ ಜಯಗೃಧ್ನಾಃ ಪ್ರಮನ್ಯವಃ ॥೭೫॥

ಹೀಗೆ ಮೇಲೇರಿ ಬಂದ ಕೌರವಯೋಧರನ್ನು ಸೈನ್ಯದ ವ್ಯೂಹಗಳಲ್ಲಿ ಯುದ್ಧಸನ್ನದ್ಧರಾದ ಪಾಂಡವಯೋಧರು ಎದುರಿಸಿದರು. ಪಾಂಡವಯೋಧರು ಜಯವನ್ನೇ ಅಪೇಕ್ಷಿಸುತ್ತಿದ್ದರು ಮತ್ತು ಬಹಳವಾಗಿ ಕೋಪಿಸಿಕೊಂಡಿದ್ದರು.

ಧನಂಜಯೋ ರಥೇನಾಜಾವಭ್ಯವರ್ತತ ವೀರ್ಯವಾನ್ ।
ವಿಶ್ರುತಂ ತ್ರಿಷು ಲೋಕೇಷು ಗಾಂಡೀವಂ ವಿಕ್ಷಿಪನ್ ಧನುಃ ॥೭೬॥

ವೀರನಾದ ಅರ್ಜುನನು ಮೂರುಲೋಕಗಳಲ್ಲಿ ಪ್ರಸಿದ್ಧವಾದ ತನ್ನ ಗಾಂಡೀವ ಧನುಸ್ಸನ್ನು ಠೇಂಕರಿಸುತ್ತಾ ರಥದಲ್ಲಿದ್ದುಕೊಂಡು ಯುದ್ಧದಲ್ಲಿ ಶತ್ರುಗಳನ್ನು ಎದುರಿಸಿದನು.

ಮಾದ್ರೀಪುತ್ರೌ ಚ ಶಕುನಿಂ ಸಾತ್ಯಕಿಶ್ಚ ಮಹಾಬಲಃ ।
ಜವೇನಾಭ್ಯಪತನ್ ಹೃಷ್ಟಾ ಯತ್ತಾ ವೈ ತಾವಕಂ ಬಲಮ್ ॥೭೭॥

ನಕುಲ-ಸಹದೇವರು ಮತ್ತು ಬಲಶಾಲಿಯಾದ ಸಾತ್ಯಕಿಯು ಶಕುನಿಯನ್ನು ಎದುರಿಸಿ ಕಾದಾಡಿದರು. ಅವರೆಲ್ಲರೂ ಸಂತೋಷದಿಂದ ಸಾವಧಾನದಿಂದ ನಿನ್ನ ಸೈನ್ಯವನ್ನು ಎದುರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಏಕೋನವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತನೆಯ ಅಧ್ಯಾಯ

ಸಾತ್ಯಕಿಯಿಂದ ಸಾಲ್ವನ ವಧೆ

ಸಂಜಯಃ

ಸನ್ನಿವೃತ್ತೇ ಬಲೌಘೇ ತು ಸಾಲ್ವೋ ಮ್ಲೇಚ್ಛಗಣಾಧಿಪಃ ।
ಅಭ್ಯವರ್ತತ ಸಂಕ್ರುದ್ಧಃ ಪಾಂಡೂನಾಂ ಸುಮಹದ್ಬಲಮ್ ॥೧॥

ಸಂಜಯ– ಹೀಗೆ ಕೌರವನ ಸೇನೆಯು ಯುದ್ಧದಿಂದ ಹಿಂತಿರುಗಿದಾಗ ಮ್ಲೇಚ್ಛಸೈನ್ಯದ ನೇತಾರನಾದ ಸಾಲ್ವನು ಬಹಳ ಕೋಪದಿಂದ ಪಾಂಡವರ ಅಗಾಧವಾದ ಸೈನ್ಯವನ್ನು ಎದುರಿಸಿದನು.

ಆಸ್ಥಾಯ ಚ ಮಹಾನಾಗಂ ಪ್ರಭಿನ್ನಂ ಪರ್ವತೋಪಮಮ್ ।
ದೃಪ್ತಮೈರಾವತಪ್ರಖ್ಯಮಮಿತ್ರಗಣಮರ್ದನಮ್ ॥೨॥

ಅನೇಕ ಶಿಖರಗಳಿಂದ ವಿಸ್ತಾರವಾದ ಪರ್ವತಕ್ಕೆ ಸದೃಶವಾದ ಆನೆಯ ಮೇಲೆ ಕುಳಿತುಕೊಂಡು ಸಾಲ್ವನು ಪಾಂಡವರನ್ನು ಎದುರಿಸಿದನು. ಆ ಆನೆಯು ಮದವೇರಿದ ಐರಾವತದ ಹಾಗೆ ಶತ್ರುಗಳನ್ನು ಸದೆಬಡಿಯುತ್ತಿತ್ತು.

ಯೋಽಸೌ ಮಹಾಭದ್ರಕುಲಪ್ರಸೂತಃ
ಸಂಪೂಜಿತೋ ಧಾರ್ತರಾಷ್ಟ್ರೇಣ ನಿತ್ಯಮ್ ।
ಸುಕಲ್ಪಿತಃ ಶಾಸ್ತ್ರವಿನಿಶ್ಚಯಜ್ಞೈಃ
ಸದೌಪವಾಹ್ಯಃ ಸತತಂ ಚ ರಾಜ್ಞಃ ॥೩॥

ಆ ಆನೆಯು ದೊಡ್ಡದಾದ ಮಂಗಳವಾದ ಕುಲದಲ್ಲಿ ಹುಟ್ಟಿದ್ದಾಗಿತ್ತು. ದುರ್ಯೋಧನನು ಅದನ್ನು ನಿತ್ಯವೂ ಪೂಜಿಸುತ್ತಿದ್ದನು. ಪ್ರಾಣಿಶಾಸ್ತ್ರ ಹಾಗೂ ಯುದ್ಧಶಾಸ್ತ್ರವೇತ್ತರಿಂದ ಮಾಡಲ್ಪಟ್ಟಿದ್ದ ಒಳ್ಳೆಯ ವ್ಯವಸ್ಥೆಯನ್ನು ಹೊಂದಿತ್ತು. ಯಾವಾಗಲೂ ರಾಜನನ್ನು ಹೊರಲು ಉಪಯೋಗಿಸಲ್ಪಡುತ್ತಿತ್ತು.

ಐರಾವತಂ ದೈತ್ಯಗಣಾನ್ ವಿಮೃದ್ನನ್
ಶಕ್ರೋ ಯಥಾ ಸಂಜನಯನ್ ಭಯಾನಿ ।
ತಮಾಸ್ಥಿತೋ ರಾಜವರೋ ಬಭೂವ
ಯಥೋದಯಸ್ಥಃ ಸವಿತಾ ಕ್ಷಪಾಂತೇ ॥೪॥

ಇಂದ್ರನು ಯಾವ ರೀತಿಯಲ್ಲಿ ಐರಾವತದ ಮೇಲೆ ಏರಿಬಂದು ದೈತ್ಯಸಮೂಹವನ್ನು ಭಯಗ್ರಸ್ತವನ್ನಾಗಿರಿಸಿದನೋ, ಯಾವ ರೀತಿಯಲ್ಲಿ ರಾತ್ರಿಕಳೆದು ಉದಯಕಾಲದಲ್ಲಿ ಉದಯಾಚಲದಲ್ಲಿ ರವಿಯು ಕಂಡುಬರುತ್ತಾನೆಯೋ ಹಾಗೆ ರಾಜಶ್ರೇಷ್ಠನಾದ ಸಾಲ್ವನು ಆನೆಯನ್ನು ಏರಿ ಯುದ್ಧಕ್ಕೆ ಬಂದನು.

ಸ ತೇನ ನಾಗಪ್ರವರೇಣ ರಾಜನ್
ಅಭ್ಯುದ್ಯಯೌ ಪಾಂಡುಸುತಾನ್ ಸಮಸ್ತಾನ್ ।
ಶಿತೈಃ ಪೃಷತ್ಕೈರ್ವಿದದಾರ ಚಾಪಿ
ಮಹೇಂದ್ರವಜ್ರಪ್ರತಿಮೈಃ ಸುಘೋರೈಃ ॥೫॥

ರಾಜನೇ! ಅಂತಹ ಶ್ರೇಷ್ಠ ಆನೆಯನ್ನು ಹತ್ತಿಕೊಂಡು ಸಾಲ್ವನು ಎಲ್ಲಾ ಕಡೆಯಿಂದಲೂ ಪಾಂಡವರನ್ನು ಎದುರಿಸಿದನು ಮತ್ತು ಹರಿತವಾದ, ಇಂದ್ರನ ವಜ್ರಾಯುಧಕ್ಕೆ ಸದೃಶವಾದ ಬಾಣಗಳಿಂದ ಪಾಂಡುಸುತರನ್ನು ಗಾಯಗೊಳಿಸಿದನು.

ತತಃ ಶರಾನ್ ವೈ ಸೃಜತೋ ಮಹಾರಣೇ
ಯೋಧಾಂಶ್ಚ ರಾಜನ್ ನಯತೋ ಯಮಕ್ಷಯಮ್ ।
ನಾಸ್ಯಾಂತರಂ ದದೃಶುಃ ಸ್ವೇ ಪರೇ ವಾ
ಯಥಾ ಪುರಾ ವಜ್ರಧರಸ್ಯ ದೈತ್ಯಾಃ ॥೬॥

ರಾಜನೇ! ಮಹಾಯುದ್ಧದಲ್ಲಿ ಬಾಣಗಳನ್ನು ಪ್ರಯೋಗಿಸುತ್ತಾ ಯೋಧರನ್ನು ಯಮಪುರಿಗೆ ಕಳುಹಿಸಿಕೊಡುತ್ತಿದ್ದನು. ಇವನು ಯುದ್ಧದಲ್ಲಿ ವಿಶ್ರಾಂತಿಯನ್ನು ಸ್ವಲ್ಪವೂ ಪಡೆಯುತ್ತಲೇ ಇರಲಿಲ್ಲ. ಹಿಂದೆ ದೈತ್ಯರೂ ಕೂಡ ಇಂದ್ರನ ಯುದ್ಧದಲ್ಲಿ ಶೂನ್ಯಾವಕಾಶವನ್ನು ಕಾಣಲು ಸಾಧ್ಯವಾಗಲಿಲ್ಲ. ಹಾಗೆಯೇ ಸಾಲ್ವನ ಯುದ್ಧದಲ್ಲಿಯೂ ವಿರಾಮಾವಕಾಶವನ್ನು ಕಾಣದಾದರು.

ತೇ ಪಾಂಡವಾಃ ಸೃಂಜಯಾಃ ಸೋಮಕಾಶ್ಚ
ತಮೇವ ನಾಗಂ ದದೃಶುಃ ಸಮಂತಾತ್ ।
ಸಹಸ್ರಶೋ ವೈ ವಿಚರಂತಮೇಕಂ
ಯಥಾ ಮಹೇಂದ್ರಸ್ಯ ಗಜಂ ಸಮೀಕೇ ॥೭॥

ಹಿಂದೆ ಇಂದ್ರನ ಐರಾವತವು ವೇಗವಾಗಿ ಸಂಚಾರಮಾಡುತ್ತಾ ಸಾವಿರಾರು ಆನೆಗಳು ಇದ್ದ ಹಾಗೆ ಎಲ್ಲೆಡೆಯೂ ಕಾಣಿಸುತ್ತಿತ್ತು. ಹಾಗೆಯೇ ಸಾಲ್ವನ ಆನೆಯೂ ಎಲ್ಲಾ ಕಡೆಯೂ ಸಂಚರಿಸುತ್ತಾ ಇರುವುದನ್ನು ಪಾಂಡವರು, ಸೃಂಜಯರು, ಸೋಮಕರು ನೋಡಿದರು. ವೇಗವಾಗಿ ತಿರುಗುತ್ತಿದ್ದ ಒಂದೇ ಆನೆಯು ರಣರಂಗದಲ್ಲಿ ಸಾವಿರಾರು ಆನೆಗಳು ಇದ್ದ ಹಾಗೆ ಕಾಣಿಸುವಂತೆ ಮಾಡಿತು.

ಸಂದ್ರಾವ್ಯಮಾಣಂ ತು ಬಲಂ ಪರೇಷಾಂ
ಪರೇತಕಲ್ಪಂ ವಿಬಭೌ ಸಮಂತಾತ್ ।
ನೈವಾವತಸ್ಥೇ ಸಮರೇ ಭೃಶಂ ಭಯಾದ್
ವಿಮರ್ದಮಾನಂ ತು ಪರಸ್ಪರಂ ತದಾ ॥೮॥

ಆನೆಯಿಂದಾಗಿ ಶತ್ರುಪಕ್ಷದ ಸೈನಿಕರೆಲ್ಲರೂ ದಿಕ್ಕಾಪಾಲಾಗಿ ಓಡಿಹೋದರು. ಸೈನ್ಯವೆಲ್ಲವೂ ನಾಶವಾದಂತೆ ಭಾಸಮಾನವಾಗುತ್ತಿತ್ತು. ಆಗ ಪರಸ್ಪರವಾಗಿ ಹೊಡೆದುಕೊಳ್ಳುತ್ತಿದ್ದ ಸೈನಿಕರು ಭಯಗೊಂಡು ಯುದ್ಧದಲ್ಲಿ ನಿಲ್ಲದೆ ಪಲಾಯನ ಮಾಡಿದರು.

ತತಃ ಪ್ರಭಗ್ನಾ ಸಹಸಾ ಮಹಾಚಮೂಃ
ಸಾ ಪಾಂಡವೀ ತೇನ ಜನಾಧಿಪೇನ ।

ದಿಶಶ್ಚತಸ್ರಃ ಸಹಸಾ ಪ್ರಧಾವಿತಾ
ಗಜೇಂದ್ರವೇಗಂ ತಮಪಾರಯಂತೀ ॥೯॥

ಆ ಸಾಲ್ವರಾಜನಿಂದಾಗಿ ನಾಶಹೊಂದಿದ ಪಾಂಡವರ ಸೇನೆಯು ಗಜೇಂದ್ರನ ವೇಗವನ್ನು ತಪ್ಪಿಸಿಕೊಳ್ಳಲಿಕ್ಕಾಗಿ ನಾಲ್ಕೂ ದಿಕ್ಕುಗಳಲ್ಲಿ ಕೂಡಲೇ ಓಡಿಹೋಯಿತು.

ದೃಷ್ಟ್ವಾ ತು ತಾಂ ವೇಗವತಾ ಪ್ರಭಗ್ನಾಂ
ಸರ್ವೇ ತ್ವದೀಯಾ ಯುಧಿ ಯೋಧಮುಖ್ಯಾಃ ।
ಅಪೂಜಯಂಸ್ತತ್ರ ನರಾಧಿಪಂ ತಂ
ದಧ್ಮುಶ್ಚ ಶಂಖಾನ್ ಶಶಿಸನ್ನಿಕಾಶಾನ್ ॥೧೦॥

ಹೀಗೆ ಯುದ್ಧದಲ್ಲಿ ವೇಗವಾಗಿ ನಾಶವಾದ ಪಾಂಡವರ ಸೈನ್ಯವನ್ನು ನೋಡಿ ನಿನ್ನ ಪಕ್ಷದ ಯೋಧರು ಮ್ಲೇಚ್ಛರಾಜ ಸಾಲ್ವನನ್ನು ಕೊಂಡಾಡಿದರು. ಮತ್ತು ಚಂದ್ರನ ಹಾಗೆ ಶೋಭಿಸುತ್ತಿದ್ದ ಶಂಖಗಳನ್ನು ಊದಿದರು.

ಶ್ರುತ್ವಾ ನಿನಾದಂ ತ್ವಥ ಕೌರವಾಣಾಂ
ಹರ್ಷಾದ್ ಏಮುಕ್ತಂ ಸಹ ಶಂಖನಾದ್ಯೈಃ ।
ಸೇನಾಪತಿಃ ಪಾಂಡವಸೃಂಜಯಾನಾಂ
ಪಾಂಚಾಲಪುತ್ರೋ ಮಮೃಷೇ ನ ರೋಷಾತ್ ॥೧೧॥

ಹೀಗೆ ಕೌರವರ ಆನಂದದಿಂದುಂಟಾದ ಜಯದ ಶಬ್ದವನ್ನು ಮತ್ತು ಶಂಖನಾದವನ್ನು ಕೇಳಿ ಕೋಪಗೊಂಡ ಪಾಂಡವರು ಮತ್ತು ಸೃಂಜಯರ ಸೇನಾಧಿಪತಿಯಾದ ಧೃಷ್ಟದ್ಯುಮ್ನನು ಇದನ್ನು ಸಹಿಸಿಕೊಳ್ಳಲಿಲ್ಲ.

ತತಸ್ತಮೇವ ದ್ವಿರದಂ ಮಹಾತ್ಮಾ
ಪ್ರತ್ಯುದ್ಯಯೌ ತ್ವರಮಾಣೋ ಜಯಾಯ ।
ಜಂಭೋ ಯಥಾ ಶಕ್ರಸಮಾಸ್ಥಿತಂ ವೈ
ನಾಗೇಂದ್ರಮೈರಾವತಮಿಂದ್ರವಾಹ್ಯಮ್ ॥೧೨॥

ಅನಂತರ ಮಹಾತ್ಮನಾದ ಧೃಷ್ಟದ್ಯುಮ್ನನು ಕೂಡಲೇ ಅದೇ ಆನೆಯನ್ನು ಎದುರಿಸಿದನು. ಇದು ಇಂದ್ರನ ಜೊತೆಗೆ ಯುದ್ಧಮಾಡುವ ಸಂದರ್ಭದಲ್ಲಿ

ಜಂಭಾಸುರನು ಇಂದ್ರನು ಐರಾವತದ ಮೇಲೆ ಕೂತಿರುವಾಗಲೇ ಇಂದ್ರನ ವಾಹನವಾದ ಐರಾವತವನ್ನು ಎದುರಿಸಿದಂತೆ ಇತ್ತು.

ತಮಾಪತಂತಂ ಸಹಸಾ ತು ದೃಷ್ಟ್ವಾ
ಪಾಂಚಾಲರಾಜಂ ಯುಧಿ ರಾಜಸಿಂಹಮ್ ।
ತಂ ವೈ ದ್ವಿಪಂ ಪ್ರೇಷಯಾಮಾಸ ತೂರ್ಣಂ
ವಧಾಯ ರಾಜನ್ ದ್ರುಪದಾತ್ಮಜಸ್ಯ ॥೧೩॥

ರಾಜನೇ! ಬೇಗನೇ ಬರುತ್ತಿರುವ ಪಾಂಚಾಲದೇಶದ ನೃಪಶ್ರೇಷ್ಠನಾದ ಧೃಷ್ಟದ್ಯುಮ್ನನನ್ನು ನೋಡಿ ಸಾಲ್ವನು ಕೂಡಲೇ ಆನೆಯನ್ನು ಧೃಷ್ಟದ್ಯುಮ್ನನ ಮೇಲೆ ಏರಿ ಹೋಗುವಂತೆ ಪ್ರೇರೇಪಿಸಿದನು.

ಸ ತಂ ದ್ವಿಪಂ ಸಹಸಾಽಭ್ಯಾಪತಂತಂ
ಹ್ಯವಿಧ್ಯದರ್ಕಪ್ರತಿಮೈಃ ಪೃಷತ್ಕೈಃ ।
ತಂ ತೈಲಧೌತೈರ್ನಿಶಿತೈರ್ಜ್ವಲದ್ಭಿಃ
ನಾರಾಚಮುಖ್ಯೈಸ್ತ್ರಿಭಿರುಗ್ರಹಸ್ತಮ್ ॥೧೪॥

ಧೃಷ್ಟದ್ಯುಮ್ನನು ತನ್ನ ಮೇಲೆ ಏರಿ ಬರುತ್ತಿರುವ ಭಯಂಕರವಾದ ಸೊಂಡಿಲಿನ ಆ ಆನೆಯ ಮೇಲೆ ಎಣ್ಣೆಯಲ್ಲಿ ಅದ್ದಿದ, ಹರಿತವಾದ ಹಾಗೂ ಕಾಂತಿಯಿಂದ ಪ್ರಜ್ವಲಿಸುತ್ತಿರುವ ಶ್ರೇಷ್ಠ ಬಾಣಗಳನ್ನು ಪ್ರಯೋಗಿಸಿ ಆನೆಯನ್ನು ಹೊಡೆದನು. ಆ ಬಾಣಗಳು ಸೂರ್ಯನಂತೆ ಹೊಳೆಯುತ್ತಿದ್ದವು.

ತತೋಽಪರಾನ್ ಪಂಚಶತಾನ್ ಮಹಾತ್ಮಾ
ನಾರಾಚಮುಖ್ಯಾನ್ ವಿಸಸರ್ಜ ಕುಂಭೇ ।
ಸ ತೈಸ್ತು ವಿದ್ಧಃ ಪರಮದ್ವಿಪೋ ರಣೇ
ನದನ್ ಪರಾವೃತ್ಯ ಭೃಶಂ ಪ್ರದುದ್ರುವೇ ॥೧೫॥

ಮಹಾತ್ಮನಾದ ಧೃಷ್ಟದ್ಯುಮ್ನನು ಆನೆಯ ಕುಂಭಸ್ಥಳದ ಮೇಲೆ ಐನೂರು ಉತ್ತಮ ಬಾಣಗಳನ್ನು ಪ್ರಯೋಗಿಸಿದನು. ಆ ಬಾಣಗಳಿಂದ ಚೆನ್ನಾಗಿ ಹೊಡೆತಕ್ಕೆ ಒಳಗಾದ ಆನೆಯು ಘೀಳಿಡುತ್ತಾ ಯುದ್ಧದಿಂದ ಹಿಂತಿರುಗಿ ಜೋರಾಗಿ ಓಡಲು ಆರಂಭಿಸಿತು.

ತಂ ನಾಗರಾಜಂ ಸಹಸಾ ಪ್ರಣುನ್ನಂ
ವಿದ್ರಾವ್ಯಮಾಣಂ ಚ ನಿಗೃಹ್ಯ ಸಾಲ್ವಃ ।
ತೋತ್ರಾಂಕುರೈಃ ಪ್ರೇಷಯಾಮಾಸ ತೂರ್ಣಂ
ಪಾಂಚಾಲರಾಜಸ್ಯ ಸುತಂ ಪ್ರದರ್ಶ್ಯ ॥೧೬॥

ಹೀಗೆ ಬಾಣಗಳ ಪೆಟ್ಟು ತಿಂದು ಓಡುತ್ತಿರುವ ಆನೆಯನ್ನು ಸಾಲ್ವರಾಜನು ನಿಗ್ರಹಿಸಿ ಬೆತ್ತ ಮತ್ತು ಅಂಕುಶಗಳಿಂದ ಅದನ್ನು ತಿವಿದು ಧೃಷ್ಟದ್ಯುಮ್ನನನ್ನು ತೋರಿಸಿ ಅವನೆಡೆಗೆ ಹೋಗುವಂತೆ ಮಾಡಿದನು.

ದೃಷ್ಟ್ವಾऽऽಪತಂತಂ ಸಹಸಾ ಗಜೇಂದ್ರಂ
ಧೃಷ್ಟದ್ಯುಮ್ನಃ ಸ್ವರಥಾಚ್ಛೀಘ್ರಮೇವ ।
ಗದಾಂ ಗೃಹೀತ್ವಾ ಸುಜವೇನ ವೀರೋ
ಭೂಮಿಂ ಪ್ರಪನ್ನೋ ಭಯವಿಹ್ವಲಾಂಗಃ ॥೧೭॥

ವೇಗವಾಗಿ ತನ್ನಮೇಲೆ ದಾಳಿಮಾಡುತ್ತಿರುವ ಆನೆಯನ್ನು ನೋಡಿ ಧೃಷ್ಟದ್ಯುಮ್ನನು ಬೇಗನೇ ಗದೆಯನ್ನು ಹಿಡಿದುಕೊಂಡು, ಒಳ್ಳೆಯ ವೇಗದಿಂದ ನೆಲಕ್ಕೆ ಜಿಗಿದಿದ್ದಾನೆ. ಆನೆಯ ಭಯದಿಂದ ಅಂಗಾಂಗಗಳ ಶಕ್ತಿಯನ್ನು ಕಳೆದುಕೊಂಡವನಾದನು.

ಸ ತಂ ರಥಂ ಹೇಮವಿಭೂಷಿತಾಂಗಂ
ಸಾಶ್ವಂ ಸಸೂತಂ ಸಹಸಾ ವಿಮೃದ್ಯ ।
ಉತ್ಕ್ಷಿಪ್ಯ ಹಸ್ತೇನ ತದಾ ಮಹಾದ್ವಿಪಃ
ತಂ ಪೋಥಯಾಮಾಸ ವಸುಂಧರಾತಳೇ ॥೧೮॥

ಆ ದೊಡ್ಡದಾದ ಆನೆಯು ಬಂಗಾರದ ಅಲಂಕಾರವನ್ನು ಹೊಂದಿದ ರಥವನ್ನು ಸಾರಥಿ ಮತ್ತು ಅಶ್ವಗಳ ಜೊತೆಗೆ ಪುಡಿಮಾಡಿ, ತನ್ನ ಸೊಂಡಿಲಿನಲ್ಲಿ ಎತ್ತಿ ನೆಲಕ್ಕೆ ಅಪ್ಪಳಿಸಿತು.

ಪಾಂಚಾಲರಾಜಸ್ಯ ಸುತಂ ತು ದೃಷ್ಟ್ವಾ
ತದಾऽರ್ದಿತಂ ನಾಗವರೇಣ ತೇನ ।
ತಮಭ್ಯಧಾವತ್ ಸಹಸಾ ಜವೇನ
ಭೀಮಃ ಶಿಖಂಡೀ ಚ ಶಿನೇಶ್ಚ ನಪ್ತಾ ॥೧೯॥

ಧೃಷ್ಟದ್ಯುಮ್ನನು ಆನೆಯ ದಾಳಿಗೆ ಒಳಗಾಗಿದ್ದನ್ನು ನೋಡಿದ ಭೀಮ, ಶಿಖಂಡಿ ಮತ್ತು ಸಾತ್ಯಕಿಯರು ಕೂಡಲೇ ವೇಗವಾಗಿ ಧಾವಿಸಿ ಬಂದರು.

ಶರೈಶ್ಚ ವೇಗಂ ಸಹಸಾ ನಿಗೃಹ್ಯ
ತಸ್ಯಾಭಿತೋ ಹ್ಯಾಪತತೋ ಗಜಸ್ಯ ।
ಸ ಸಂಗ್ರಹೀತೋ ರಥಿಭಿರ್ಗಜೋ ವೈ
ಚಚಾಲ ತೈರ್ವಾರ್ಯಮಾಣಶ್ಚ ಸಂಖೇ ॥೨೦॥

ಮೇಲೇರಿ ಬರುತ್ತಿದ್ದ ಆನೆಯಮೇಲೆ ಎಲ್ಲಾ ಕಡೆಗಳಿಂದ ಬಾಣಗಳನ್ನು ಪ್ರಯೋಗಿಸಿ ಆನೆಯನ್ನು ನಿಗ್ರಹಿಸಿದರು. ಹೀಗೆ ಮಹಾರಥರಿಂದ ನಿರ್ಬಂಧಕ್ಕೊಳಗಾದ ಆನೆಯು ಯುದ್ಧದಲ್ಲಿ ಅವರು ತಡೆದಾಗ ವಿಚಲಿತವಾಯಿತು.

ತತಃ ಪೃಷತ್ಕಾನ್ ಪ್ರವವರ್ಷ ರಾಜಾ
ಸೂರ್ಯೋ ಯಥಾ ರಶ್ಮಿಜಾಲೈಃ ಸಮಂತಾತ್ ।
ತೈರಾಶುಗೈರ್ವಧ್ಯಮಾನಾ ರಥೌಘಾಃ
ಪ್ರದುದ್ರುವುಸ್ತತ್ರ ತತಃ ಸ್ಮ ಸರ್ವೇ ॥೨೧॥

ಅನಂತರ ಸೂರ್ಯನು ತನ್ನ ಕಿರಣಗಳನ್ನು ಎಲ್ಲಾ ಕಡೆಯೂ ಬೀಳಿಸುವಂತೆ ಸಾಲ್ವರಾಜನು ಬಾಣಗಳನ್ನು ಎಲ್ಲೆಡೆ ಬೀಳಿಸಿದನು. ಆ ಬಾಣಗಳ ಹೊಡೆತಕ್ಕೆ ಸಿಲುಕಿದ ರಥಯೋಧರ ಸಮೂಹವು ಯುದ್ಧದಿಂದ ಬೇಗನೆ ಓಡಿಹೋಯಿತು.

ತತ್ ಕರ್ಮ ಸಾಲ್ವಸ್ಯ ಸಮೀಕ್ಷ್ಯ ಸರ್ವೇ
ಪಾಂಚಾಲಮತ್ಸ್ಯಾ ನೃಪ ಸೃಂಜಯಾಶ್ಚ ।
ಹಾಹಾಕಾರೈರ್ನಾದಯಂತಸ್ತು ಯುದ್ಧೇ
ದ್ವಿಪಂ ಸಮಂತಾದ್ ರುರುಧುರ್ನರಾಗ್ರ್ಯಾಃ ॥೨೨॥

ರಾಜನೇ! ಸಾಲ್ವನ ಆ ಕಾರ್ಯವನ್ನು ನೋಡಿ ಪಾಂಚಾಲರು, ಮತ್ಸ್ಯರು, ಸೃಂಜಯರು ಮೊದಲಾದ ಶ್ರೇಷ್ಠವೀರರು ಜೋರಾಗಿ ಕೂಗಿಕೊಳ್ಳುತ್ತಾ ಯುದ್ಧದಲ್ಲಿ ಆನೆಯನ್ನು ಸುತ್ತಲೂ ತಡೆದರು.

ಪಾಂಚಾಲರಾಜಸ್ತ್ವರಿತಸ್ತು ಶೂರೋ
ಗದಾಂ ಪ್ರಗೃಹ್ಯಾಚಲಶೃಂಗಕಲ್ಪಾಮ್ ।
ಅಸಂಭ್ರಮಂ ಭಾರತ ಶತ್ರುಘಾತೀ
ಜವೇನ ವೀರೋಽನುಸಸಾರ ನಾಗಮ್ ॥೨೩॥

ಭಾರತನೇ! ಶೂರನಾದ ಧೃಷ್ಟದ್ಯುಮ್ನನು ಬೇಗನೇ ಪರ್ವತಶಿಖರದಂತಿರುವ ಗದೆಯನ್ನು ಹಿಡಿದುಕೊಂಡು ಆನೆಯನ್ನು ಬೆನ್ನಟ್ಟಿ ಹೋದನು. ಧೃಷ್ಟದ್ಯುಮ್ನನು ಯಾವುದೇ ಗಾಬರಿಗೊಳಗಾಗದೆ ಶತ್ರುಗಳನ್ನು ಸದೆಬಡಿಯುವ ಸಾಮರ್ಥ್ಯ ಉಳ್ಳವನಾಗಿದ್ದನು.

ತತೋಽಥ ನಾಗಂ ಧರಣೀಧರಾಭಂ
ಮದಂ ಸ್ರವಂತಂ ಜಲದಪ್ರಕಾಶಮ್ ।
ಗದಾಂ ಸಮಾವಿಧ್ಯ ಭೃಶಂ ಜಘಾನ
ಪಾಂಚಾಲರಾಜಸ್ಯ ಸುತಸ್ತರಸ್ವೀ ॥೨೪॥

ಪರ್ವತಾಕಾರದ ಆನೆಯು ತನ್ನ ಗಂಡಸ್ಥಳದಿಂದ ಮೋಡಗಳು ಮಳೆಸುರಿಸುವಂತೆ ಮದರಸವನ್ನು ಸುರಿಸುತ್ತಿತ್ತು. ಅಂತಹ ಆನೆಯ ಮೇಲೆ ಧೃಷ್ಟದ್ಯುಮ್ನನು ಗದಾಪ್ರಯೋಗವನ್ನು ಮಾಡಿ ಚೆನ್ನಾಗಿ ಹೊಡೆದನು.

ಸ ಭಿನ್ನಕುಂಭಃ ಸಹಸಾ ವಿನದ್ಯ
ಮುಖಾತ್ ಪ್ರಭೂತಂ ಕ್ಷತಜಂ ವಿಮುಂಚನ್ ।
ಪಪಾತ ನಾಗೋ ಧರಣೀಧರಾಭಃ
ಕ್ಷಿತಿಪ್ರಕಂಪಾಚ್ಚಲಿತೋ ಯಥಾಽದ್ರಿಃ ॥೨೫॥

ಆನೆಯ ಕುಂಭಸ್ಥಳವು ಒಡೆದು ಹೋದಾಗ ಆನೆಯು ಜೋರಾಗಿ ಬೊಬ್ಬಿಡುತ್ತಾ ಬಾಯಿಯಿಂದ ರಕ್ತವನ್ನು ಕಾರಲು ಪ್ರಾರಂಭಿಸಿತು. ಭೂಕಂಪದಿಂದ ಪರ್ವತಗಳು ತುಂಡರಿಸಿದ ಹಾಗೆ ಪರ್ವತಾಕಾರದ ಆನೆಯು ಭೂಮಿಯಲ್ಲಿ ಬಿದ್ದಿತು.

ನಿಪಾತ್ಯಮಾನೇ ತು ತದಾ ಗಜೇಂದ್ರೇ
ಹಾಹಾಕೃತೇ ತವ ಪುತ್ರಸ್ಯ ಸೈನ್ಯೇ ।

ಸಾಲ್ವಸ್ಯ ರಾಜ್ಞಸ್ತು ಶಿನಿಪ್ರವೀರೋ
ಜಹಾರ ಭಲ್ಲೇನ ಶಿರಃಶಿತೇನ ॥೨೬॥

ಗಜರಾಜನು ಸತ್ತು ಬಿದ್ದಾಗ ನಿನ್ನ ಮಗನ ಸೈನ್ಯದಲ್ಲಿ ಹಾಹಾಕಾರ ಉಂಟಾಯಿತು. ಶಿನಿವೀರನಾದ ಸಾತ್ಯಕಿಯು ಹರಿತವಾದ ಭಲ್ಲೆಯಿಂದ ಸಾಲ್ವನ ತಲೆಯನ್ನು ಕಡಿದು ಹಾಕಿದನು.

ಹೃತೋತ್ತಮಾಂಗೋ ಯುಧಿ ಸಾತ್ವತೇನ
ಪಪಾತ ಭೂಮೌ ಸಹನಾಗರಾಜಃ ।
ಯಥಾದ್ರಿಶೃಂಗಂ ಸುಮಹತ್ ಪ್ರಣುನ್ನಂ
ವಜ್ರೇಣ ದೇವಾಧಿಪಚೋದಿತೇನ ॥೨೭॥

ಸಾತ್ಯಕಿಯು ಸಾಲ್ವನ ತಲೆಯನ್ನು ಕಡಿದಾಗ ಸಾಲ್ವನು ಕೂಡಲೇ ವೇಗವಾಗಿ ಭೂಮಿಯಲ್ಲಿ ಬಿದ್ದನು. ದೇವೇಂದ್ರನು ಪ್ರಯೋಗಿಸಿದ ವಜ್ರಾಯುಧದಿಂದ ದೊಡ್ಡದಾದ ಪರ್ವತಶಿಖರವು ಬಿದ್ದ ಹಾಗೆ ಕಾಣಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂದನೆಯ ಅಧ್ಯಾಯ

ಸಾತ್ಯಕಿಯಿಂದ ಕೃತವರ್ಮನ ಪರಾಜಯ

ಸಂಜಯಃ

ತಸ್ಮಿಂಸ್ತು ನಿಹತೇ ಸಾಲ್ವೇ ಶೂರೇ ಸಮಿತಿಶೋಭನೇ ।
ತವಾಭಜ್ಯದ್ಬಲಂ ವೇಗಾದ್ ವಾತೇನೇವ ಮಹಾದ್ರುಮಃ ॥೧॥

ಸಂಜಯ– ಮಹಾಭಾರತದ ಯುದ್ಧದಲ್ಲಿ ಬಹಳವಾಗಿ ಪ್ರಕಾಶಿಸುತ್ತಿದ್ದ ಸಾಲ್ವನು ಸತ್ತಿದ್ದಾನೆ. ಆಗ ಗಾಳಿಗೆ ಸಿಕ್ಕಿ ನೆಲಕ್ಕುರುಳಿದ ಮರದಂತೆ ನಿನ್ನ ಮಹಾಸೇನೆಯು ನಾಶವನ್ನು ಹೊಂದಿತು.

ತತ್ ಪ್ರಭಗ್ನಂ ಬಲಂ ದೃಷ್ಟ್ವಾ ಕೃತವರ್ಮಾ ಮಹಾರಥಃ ।
ದಧಾರ ಸಮರೇ ಶೂರಃ ಶತ್ರುಸೇನಾಂ ಮಹಾಬಲಃ ॥೨॥

ಹೀಗೆ ತನ್ನ ಸೈನ್ಯವು ನಾಶವಾಗಿದ್ದನ್ನು ನೋಡಿದ ಶೂರನಾದ ಮಹಾರಥ ಕೃತವರ್ಮನು ಯುದ್ಧದಲ್ಲಿ ಶತ್ರುಸೇನೆಯನ್ನು ಮುಂದೆ ಹೋಗದಂತೆ ಹಿಡಿದಿಟ್ಟನು.

ಸನ್ನಿವೃತ್ತಾಸ್ತು ತೇ ವೀರಾ ದೃಷ್ಟ್ವಾ ಸಾತ್ತ್ವತಮಾಹವೇ ।
ಶೈಲೋಪಮಂ ಸ್ಥಿತಂ ರಾಜನ್ ವಿಕಿರಂತಂ ಶರಾನ್ ಯುಧಿ ॥೩॥

ರಾಜನೇ! ಯುದ್ಧದಲ್ಲಿ ಬಾಣಗಳನ್ನು ಪ್ರಯೋಗಿಸುತ್ತಾ ಕಲ್ಲಿನಂತೆ ನಿಂತಿರುವ ಕೃತವರ್ಮನನ್ನು ನೋಡಿ ಕೌರವವೀರರು ಮತ್ತೆ ಯುದ್ಧಕ್ಕೆ ಹಿಂತಿರುಗಿದರು.

ತತಃ ಪ್ರವವೃತೇ ಯುದ್ಧಂ ಕುರೂಣಾಂ ಪಾಂಡವೈಃ ಸಹ ।
ನಿವೃತ್ತಾನಾಂ ಮಹಾರಾಜ ಮೃತ್ಯುಂ ಕೃತ್ವಾ ನಿವರ್ತನಮ್ ॥೪॥

ಮಹಾರಾಜ! ಅನಂತರ ಕುರುಗಳಿಗೂ ಪಾಂಡವರಿಗೂ ಯುದ್ಧವು ನಡೆಯಿತು. ಅವರೆಲ್ಲಾ ಮೃತ್ಯುವನ್ನೇ ಹಿಮ್ಮೆಟ್ಟಿ ಯುದ್ಧಕ್ಕೆ ಹಿಂತಿರುಗಿದ್ದರು.

ತತ್ರಾಶ್ಚರ್ಯಮಭೂದ್ಯುದ್ಧಂ ಸಾತ್ವತಸ್ಯ ಪರೈಃ ಸಹ ।
ಯದೇಕೋ ವಾರಯಾಮಾಸ ಪಾಂಡುಸೇನಾಂ ದುರಾಸದಾಮ್ ॥೫॥

ಅಲ್ಲಿ ಕೃತವರ್ಮನು ಏಕಾಕಿಯಾಗಿ ಶತ್ರುಗಳೊಂದಿಗೆ ಹೋರಾಡಿದನು. ಸಾಮಾನ್ಯದವರಿಗೆ ಎದುರಿಸಲಾಗದ ಪಾಂಡವಸೇನೆಯನ್ನು ಕೃತವರ್ಮನು ಏಕಾಕಿಯಾಗಿ ನಿಂತು ತಡೆದದ್ದು ಬಹಳ ಆಶ್ಚರ್ಯಜನಕವಾಗಿತ್ತು.

ತೇಷಾಮನ್ಯೋನ್ಯಸುಹೃದಾಂ ಕೃತೇ ಕರ್ಮಣಿ ದುಷ್ಕರೇ ।
ಸಿಂಹನಾದಃ ಪ್ರಹೃಷ್ಟಾನಾಂ ದಿವಿಸ್ಪೃಕ್ ಸುಮಹಾನಭೂತ್ ॥೬॥

ಕೃತವರ್ಮನು ಇಂತಹ ಶ್ರೇಷ್ಠ ಕರ್ಮವನ್ನು ಮಾಡಿದಾಗ ಪರಸ್ಪರವಾಗಿ ಹಿತವನ್ನು ಬಯಸುವ ಕೌರವರ ಸೈನಿಕರು ಆನಂದದಿಂದ ಸಿಂಹನಾದವನ್ನು ಮಾಡಿದರು. ಆ ಧ್ವನಿಯು ದಿಗಂತವನ್ನು ತಲುಪುವಷ್ಟು ಜೋರಾಗಿತ್ತು.

ತೇನ ಶಬ್ದೇನ ವಿತ್ರಸ್ತಾನ್ ಪಾಂಚಾಲಾನ್ ಭರತರ್ಷಭ ।
ಶಿನೇರ್ನಪ್ತಾ ಮಹಾಬಾಹುರನ್ವಪದ್ಯತ ಸಾತ್ಯಕಿಃ ॥೭॥

ಭಾರತೋತ್ತಮನೇ! ಕೌರವಸೈನ್ಯದ ಆ ಸಿಂಹನಾದದಿಂದ ಪಾಂಚಾಲರು ಭಯಗ್ರಸ್ಥರಾದರು. ಆಗ ಶಿನಿಯ ಮೊಮ್ಮಗನಾದ ಮಹಾಬಾಹುಶಾಲಿ ಸಾತ್ಯಕಿಯು ಶತ್ರುಸೈನ್ಯವನ್ನು ಎದುರಿಸಿದನು.

ಸ ಸಮಾಸಾದ್ಯ ರಾಜಾನಂ ಕ್ಷೇಮಧೂರ್ತಿಂ ಮಹಾಬಲಮ್ ।
ಸಪ್ತಭಿರ್ನಿಶಿತೈರ್ಬಾಣೈರನಯದ್ ಯಮಸಾದನಮ್ ॥೮॥

ಸಾತ್ಯಕಿಯು ಮಹಾಬಲಶಾಲಿಯಾದ ಕ್ಷೇಮಧೂರ್ತಿ ರಾಜನನ್ನು ಹರಿತವಾದ ಏಳು ಬಾಣಗಳಿಂದ ಹೊಡೆದು ಸಾಯಿಸಿ ಯಮಪುರಕ್ಕೆ ಕಳುಹಿಸಿದನು.

ತಮಾಯಾಂತಂ ಮಹಾಬಾಹುಂ ಪ್ರವರ್ಷಂತಂ ಶರಾನ್ ಬಹೂನ್ ।
ಜವೇನಾಭ್ಯಪತದ್ಧೀಮಾನ್ ಹಾರ್ದಿಕಃ ಶಿನಿಪುಂಗವಮ್ ॥೯॥

ಹೀಗೆ ಬಾಣಗಳ ಮಳೆಯನ್ನು ಸುರಿಸುತ್ತಾ ಬರುತ್ತಿದ್ದ ಸಾತ್ಯಕಿಯನ್ನು ಬುದ್ಧಿವಂತನಾದ ಕೃತವರ್ಮನು ವೇಗವಾಗಿ ಎದುರಿಸಿದನು.

ತೌ ಸಿಂಹಾವಿವ ನರ್ದಂತೌ ಧನ್ವಿನೌ ರಥಿನಾಂ ವರೌ ।
ಅನ್ಯೋನ್ಯಮಭ್ಯಧಾವೇತಾಂ ಶಸ್ತ್ರಪ್ರವರಧಾರಿಣೌ ॥೧೦॥

ಧನುರ್ಧಾರಿಗಳಲ್ಲಿಯೂ, ರಥಿಕರಲ್ಲಿಯೂ ಶ್ರೇಷ್ಠರಾದ ಸಾತ್ಯಕಿ-ಕೃತವರ್ಮರು ಉತ್ತಮವಾದ ಶಸ್ತ್ರಗಳನ್ನು ಹಿಡಿದುಕೊಂಡು ಎರಡು ಸಿಂಹಗಳಂತೆ ಯುದ್ಧದಲ್ಲಿ ಪರಸ್ಪರವಾಗಿ ಎದುರುಗೊಂಡರು.

ಪಾಂಡವಾಃ ಸಹ ಪಾಂಚಾಲೈರ್ಯೋಧಾಶ್ಚಾನ್ಯೇ ನೃಪೋತ್ತಮ ।
ಪ್ರೇಕ್ಷಕಾಃ ಸಮಪದ್ಯಂತ ತಯೋಃ ಘೋರೇ ಸಮಾಗಮೇ ॥೧೧॥

ನೃಪಶ್ರೇಷ್ಠನೇ! ಅವರಿಬ್ಬರ ಘೋರವಾದ ಯುದ್ಧದಲ್ಲಿ ಪಾಂಚಾಲರು, ಪಾಂಡವರು ಮತ್ತು ಉಳಿದ ಯೋಧರು ಪ್ರೇಕ್ಷಕರಾದರು.

ನಾರಾಚೈರ್ವತ್ಸದಂತೈಶ್ಚ ವೃಷ್ಣ್ಯಂಧಕಮಹಾರಥೌ ।
ಅಭಿಜಘ್ನತುರನ್ಯೋನ್ಯಂ ಪ್ರಹೃಷ್ಟಾವಿವ ಕುಂಜರೌ ॥೧೨॥

ವೃಷ್ಣಿವಂಶ ಮತ್ತು ಅಂಧಕವಂಶದ ವೀರರಾದ ಸಾತ್ಯಕಿ ಮತ್ತು ಕೃತವರ್ಮರು ಬಾಣಗಳಿಂದ ಮತ್ತು ಕರುವಿನ ಹಲ್ಲಿನ ಆಕಾರದ ಆಯುಧಗಳಿಂದ ಮದವೇರಿದ ಆನೆಗಳಂತೆ ಪರಸ್ಪರವಾಗಿ ಹೊಡೆದುಕೊಂಡರು.

ಚರಂತೌ ವಿವಿಧಾನ್ ಮಾರ್ಗಾನ್ ಹಾರ್ದಿಕ್ಯಶಿನಿಪುಂಗವೌ ।
ಮುಹುರಂತರ್ದಧಾತೇ ತೌ ಬಾಣವೃಷ್ಟ್ಯಾ ಪರಸ್ಪರಮ್ ॥೧೩॥

ಕೃತವರ್ಮ ಮತ್ತು ಸಾತ್ಯಕಿಯರು ವಿವಿಧ ರೀತಿಯ ಯುದ್ಧವರಸೆಗಳನ್ನು ತೋರಿಸುತ್ತಾ ಪುನಃ ಬಾಣಗಳ ಮಳೆಯಿಂದ ಪರಸ್ಪರವಾಗಿ ಮುಚ್ಚಿಹಾಕಿದರು.

ಚಾಪವೇಗಬಲೋದ್ಧೂತಾನ್ ಮಾರ್ಗಣಾನ್ ವೃಷ್ಣಿಸಿಂಹಯೋಃ ।
ಆಕಾಶೇ ಸಮಪಶ್ಯಾಮ ಪತಂಗಾನಿವ ಶೀಘ್ರಗಾನ್ ॥೧೪॥

ವೃಷ್ಣಿವಂಶದ ಶ್ರೇಷ್ಠ ಯೋಧರಾದ ಇವರಿಬ್ಬರೂ ಬಿಲ್ಲಿನಿಂದ ಬಾಣಗಳನ್ನು ವೇಗವಾಗಿ ಪ್ರಯೋಗಿಸುತ್ತಿದ್ದರು. ಆಕಾಶದಲ್ಲಿ ಆ ಬಾಣಗಳು ಹಾರುತ್ತಿದ್ದಾಗ ವೇಗವಾಗಿ ಪತಂಗಗಳು ಹಾರುತ್ತಿರುವಂತೆ ಭಾಸಮಾನವಾಗುತ್ತಿತ್ತು.

ತಮೇಕಂ ಸತ್ಯಕರ್ಮಾಣಮಾಸಾದ್ಯ ಹೃದಿಕಾತ್ಮಜಃ ।
ಅವಿಧ್ಯನ್ನಿಶಿತೈರ್ಬಾಣೈಶ್ಚತುರ್ಭಿಶ್ಚತುರೋ ಹಯಾನ್ ॥೧೫॥

ಸ ದೀರ್ಘಬಾಹುಃ ಸಂಕ್ರುದ್ಧಸ್ತೋತ್ರಾರ್ದಿತ ಇವ ದ್ವಿಪಃ ।
ಅಷ್ಟಾಭಿಃ ಕೃತವರ್ಮಾಣಮವಿಧ್ಯತ್ ಪರಮೇಷುಭಿಃ ॥೧೬॥

ಹೃದಿಕನ ಮಗನಾದ ಕೃತವರ್ಮನು ಸಾತ್ಯಕಿಗೆ ನಾಲ್ಕು ಬಾಣಗಳನ್ನೂ ಮತ್ತು ಅವನ ಕುದುರೆಗಳಿಗೆ ನಾಲ್ಕು ಬಾಣಗಳನ್ನೂ ಹೊಡೆದನು. ದೀರ್ಘಬಾಹುವಾದ ಸಾತ್ಯಕಿಯು ಚಾಟಿಯ ಏಟುತಿಂದ ಆನೆಯಂತೆ ಕೋಪಗೊಂಡು ಉತ್ತಮವಾದ ಎಂಟು ಬಾಣಗಳಿಂದ ಕೃತವರ್ಮನನ್ನು ಹೊಡೆದನು.

ತತಃ ಪೂರ್ಣಾಯತೋತ್ಸೃಷ್ಟೈಃ ಕೃತವರ್ಮಾ ಶಿಲೀಮುಖೈಃ ।
ಸಾತ್ಯಕಿಂ ತ್ರಿಭಿರಾಹತ್ಯ ಧನುರೇಕೇನ ಚಿಚ್ಛಿದೇ ॥೧೭॥

ಅನಂತರ ಕೃತವರ್ಮನು ಪೂರ್ಣಬಲಪ್ರಯೋಗಮಾಡಿ ಮೂರು ಬಾಣಗಳನ್ನು ಸಾತ್ಯಕಿಯ ಮೇಲೆ ಪ್ರಯೋಗಿಸಿದನು. ಒಂದು ಬಾಣದಿಂದ ಅವನ ಬಿಲ್ಲನ್ನು ಮುರಿದನು.

ನಿಕೃತ್ತಂ ತದ್ಧನುಃಶ್ರೇಷ್ಠಮಪಾಸ್ಯ ಶಿನಿಪುಂಗವಃ ।
ಅನ್ಯದಾದತ್ತ ವೇಗೇನ ಶೈನೇಯಃ ಸಶರಂ ಧನುಃ ॥೧೮॥

ಸಾತ್ಯಕಿಯು ತುಂಡಾದ ಆ ಉತ್ತಮ ಬಿಲ್ಲನ್ನು ಬಿಸಾಡಿ, ಇನ್ನೊಂದು ಬಾಣಸಹಿತವಾದ ಬಿಲ್ಲನ್ನು ಶೀಘ್ರವಾಗಿ ತೆಗೆದುಕೊಂಡನು.

ತದಾದಾಯ ಧನುಃಶ್ರೇಷ್ಠಂ ವರಿಷ್ಠಂ ಸರ್ವಧನ್ವಿನಾಮ್ ।
ಆರೋಪ್ಯ ಚ ಮಹಾವೀರ್ಯೋ ಮಹಾಬುದ್ಧಿರ್ಮಹಾಬಲಃ ॥೧೯॥

ಅಮೃಷ್ಯಮಾಣೋ ಧನುಷಃ ಛೇದನಂ ಕೃತವರ್ಮಣಃ ।
ಕುಪಿತೋಽತಿರಥಃ ಶೀಘ್ರಂ ಕೃತವರ್ಮಾಣಮಭ್ಯಯಾತ್ ॥೨೦॥

ಎಲ್ಲಾ ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಸಾತ್ಯಕಿಯು ಆ ಉತ್ತಮ ಬಿಲ್ಲನ್ನು ಹಿಡಿದುಕೊಂಡನು. ಸಾತ್ಯಕಿಯು ಮಹಾಬುದ್ಧಿವಂತ, ಮಹಾಬಲಶಾಲಿ ಹಾಗೂ ಮಹಾವೀರನೂ ಆಗಿದ್ದನು. ಕೃತವರ್ಮನು ತನ್ನ ಬಿಲ್ಲನ್ನು ತುಂಡರಿಸಿದ್ದನ್ನು ಸಹಿಸಲಿಲ್ಲ. ಕೋಪಗೊಂಡು ಕೂಡಲೇ ಬಿಲ್ಲಿಗೆ ಹೆದೆಯೇರಿಸಿ ಕೃತವರ್ಮನನ್ನು ಎದುರಿಸಿದನು.

ತತಃ ಸ ದಶಭಿರ್ಬಾಣೈರ್ನಿಶಿತೈಃ ನತಪರ್ವಭಿಃ ।
ಜಘಾನ ಚಾಶ್ವಾನ್ ಸೂತಂ ಚ ಧ್ವಜಂ ಚ ಕೃತವರ್ಮಣಃ ॥೨೧॥

ಅನಂತರ ಸಾತ್ಯಕಿಯು ಬಾಗಿದ ಸಂಧಿಗಳುಳ್ಳ ಹರಿತವಾದ ಹತ್ತುಬಾಣಗಳಿಂದ ಕೃತವರ್ಮನ ಕುದುರೆಗಳನ್ನೂ, ಸಾರಥಿಯನ್ನೂ, ರಥದ ಧ್ವಜವನ್ನೂ ಬೀಳಿಸಿದನು.

ತತೋ ರಾಜನ್ ಮಹೇಷ್ವಾಸಃ ಕೃತವರ್ಮಾ ಮಹಾರಥಃ ।
ಹತಾಶ್ವಸೂತಂ ಸಂಪ್ರೇಕ್ಷ್ಯ ರಥಂ ಹೇಮಪರಿಷ್ಕೃತಮ್ ॥೨೨॥

ರೋಷೇಣ ಮಹತಾಽಽವಿಷ್ಟಃ ಶೂಲಮುದ್ಯಮ್ಯ ಮಾರಿಷ ।
ಚಿಕ್ಷೇಪ ಭುಜವೇಗೇನ ಜಿಘಾಂಸುಃ ಶಿನಿಪುಂಗವಮ್ ॥೨೩॥

ರಾಜನೇ! ಒಳ್ಳೆಯ ಬಿಲ್ಗಾರನಾದ ಮಹಾರಥ ಕೃತವರ್ಮನು ಬಂಗಾರದಿಂದ ಸುಂದರವಾದ ತನ್ನ ರಥವು ಕುದುರೆ ಮತ್ತು ಸಾರಥಿಯ ಜೊತೆಗೆ ನಾಶವಾಗಿದ್ದನ್ನು ಕಂಡು ಬಹಳ ಕೋಪಗೊಂಡನು. ರಾಜನೇ! ಕುಪಿತನಾದ ಕೃತವರ್ಮನು ಶೂಲವನ್ನು ಹಿಡಿದುಕೊಂಡು ಸಾತ್ಯಕಿಯನ್ನು ಕೊಲ್ಲುವ ಇಚ್ಛೆಯುಳ್ಳವನಾಗಿ ಬಾಹುಬಲವನ್ನು ಉಪಯೋಗಿಸಿ ಸಾತ್ಯಕಿಯ ಮೇಲೆ ಬಿಸಾಕಿದನು.

ತಚ್ಛೂಲಂ ಸಾತ್ವತೋಽಪ್ಯಾಜೌ ನಿರ್ಭಿದ್ಯ ನಿಶಿತೈಃ ಶರೈಃ ।
ಚೂರ್ಣಿತಂ ಪಾತಯಾಮಾಸ ಮೋಹಯನ್ನಿವ ಮಾಧವಃ ॥೨೪॥

ಆ ಶೂಲವನ್ನು ಸಾತ್ಯಕಿಯು ಹರಿತವಾದ ಬಾಣಗಳಿಂದ ಕತ್ತರಿಸಿಹಾಕಿದನು. ತನ್ನ ಆಯುಧವು ಪುಡಿಯಾದುದನ್ನು ಕಂಡು ಕೃತವರ್ಮನು ಮೂರ್ಛೆಹೊಂದುವ ರೀತಿಯಲ್ಲಿ ಮಾಡಿದನು.

ತತೋಽಪರೇಣ ಭಲ್ಲೇನ ಹೃದ್ಯೇನಂ ಸಮತಾಡಯತ್ ॥೨೫॥

ಅನಂತರ ಇನ್ನೊಂದು ಭಲ್ಲೆಯಿಂದ ಕೃತವರ್ಮನ ಎದೆಗೆ ಚೆನ್ನಾಗಿ ಹೊಡೆದನು.

ಸ ಯುದ್ಧೇ ಯುಯುಧಾನೇನ ಹತಾಶ್ವೋ ಹತಸಾರಥಿಃ ।
ಕೃತವರ್ಮಾ ಕೃತಾಸ್ತ್ರೇಣ ಧರಣೀಮನ್ವಪದ್ಯತ ॥೨೬॥

ಅಸ್ತ್ರವೇತ್ತನಾದ ಸಾತ್ಯಕಿಯು ಯುದ್ಧದಲ್ಲಿ ಕೃತವರ್ಮನ ಅಶ್ವ-ಸಾರಥಿಗಳನ್ನು ಕೊಂದಿದ್ದ. ಹೀಗೆ ಕೃತವರ್ಮನು ನೆಲದಲ್ಲಿ ನಿಲ್ಲುವಂತೆ ಮಾಡಿದನು.

ತಸ್ಮಿನ್ ಸಾತ್ಯಕಿನಾ ವೀರೇ ದ್ವೈರಥೇ ವಿರಥೀಕೃತೇ ।
ಸಮಪದ್ಯತ ಸರ್ವೇಷಾಂ ಸೈನ್ಯಾನಾಂ ಸುಮಹದ್ಭಯಮ್ ॥೨೭॥

ರಥಗಳ ದ್ವಂದ್ವಯುದ್ಧದಲ್ಲಿ ಸಾತ್ಯಕಿಯು ಕೃತವರ್ಮನನ್ನು ರಥರಹಿತನನ್ನಾಗಿ ಮಾಡಿದಾಗ ಎಲ್ಲಾ ಸೈನ್ಯಗಳೂ ಬಹಳವಾಗಿ ಭಯಗೊಂಡವು.

ಪುತ್ರಸ್ಯ ತವ ಚಾತ್ಯರ್ಥಂ ವಿಷಾದಃ ಸಮಪದ್ಯತ ॥೨೮॥

ನಿನ್ನ ಮಗನಾದ ದುರ್ಯೋಧನನು ತುಂಬಾ ದುಃಖಪಟ್ಟನು.

ಹತಸೂತೇ ಹತಾಶ್ವೇ ಚ ವಿರಥೇ ಕೃತವರ್ಮಣಿ ।
ಹತಾಶ್ವಂ ಚ ಸಮಾಲಕ್ಷ್ಯ ಹತಸೂತಮರಿಂದಮಮ್ ॥೨೯॥

ಅಭ್ಯಧಾವತ್ ಕೃಪೋ ರಾಜನ್ ಜಿಘಾಂಸುಃ ಶಿನಿಪುಂಗವಮ್ ॥೩೦॥

ಕೃತವರ್ಮನ ಸಾರಥಿಯು ಸತ್ತಿದ್ದಾನೆ. ಅಶ್ವಗಳು ಸತ್ತಿವೆ. ರಥವನ್ನು ಕಳೆದುಕೊಂಡಿದ್ದಾನೆ. ರಾಜನೇ! ಇಂತಹ ಶತ್ರುಮಾರಕನಾದ ಕೃತವರ್ಮನನ್ನು ನೋಡಿದ ಕೃಪಾಚಾರ್ಯನು ಸಾತ್ಯಕಿಯನ್ನು ಕೊಲ್ಲುವುದಕ್ಕಾಗಿ ಬಂದನು.

ತಮಾರೋಪ್ಯ ರಥೋಪಸ್ಥೇ ಮಿಷತಾಂ ಸರ್ವಧನ್ವಿನಾಮ್ ।
ಅಪೋವಾಹ ಮಹಾರಾಜ ತೂರ್ಣಮಾಯೋಧನಾದಪಿ ॥೩೧॥

ರಾಜನೇ! ಸಕಲಧನುರ್ಧಾರಿಗಳು ನೋಡುತ್ತಿದ್ದಾಗಲೇ ಕೃಪಾಚಾರ್ಯನು ಕೃತವರ್ಮನನ್ನು ತನ್ನ ರಥದಲ್ಲಿ ಹತ್ತಿಸಿಕೊಂಡು ರಣರಂಗದಿಂದ ಬೇಗನೇ ಕರೆದೊಯ್ದನು.

ಶೈನೇಯೇಽಧಿಷ್ಠಿತೇ ರಾಜನ್ ವಿರಥೇ ಕೃತವರ್ಮಣಿ ।
ದುರ್ಯೋಧನಬಲಂ ಸರ್ವಂ ಪುನರಾಸೀತ್ ಪರಾಙ್ಮುಖಮ್ ॥೩೨॥

ರಾಜನೇ! ಸಾತ್ಯಕಿಯು ಯುದ್ಧದಲ್ಲಿ ಜಯವನ್ನು ಗಳಿಸಿದ್ದಾನೆ. ಕೃತವರ್ಮನು ವಿರಥನಾಗಿದ್ದಾನೆ. ಹೀಗಾದಾಗ ದುರ್ಯೋಧನ ಸೈನ್ಯವು ಸೋತು ಪುನಃ ಯುದ್ಧದಿಂದ ಹಿಂದೆ ಸರಿಯಿತು.

ತತ್ ಪರೇ ನಾನ್ವಬುಧ್ಯಂತ ಸೈನ್ಯೇ ಚ ರಜಸಾ ವೃತೇ ।
ತಾವದ್ ವಿಪ್ರದ್ರುತಂ ರಾಜನ್ ದುರ್ಯೋಧನಮೃತೇ ನೃಪ ॥೩೩॥

ರಾಜನೇ! ದುರ್ಯೋಧನನೊಬ್ಬನನ್ನು ಬಿಟ್ಟು ಕೌರವರ ಎಲ್ಲಾ ಸೈನ್ಯವು ಸೋತು ಓಡುತ್ತಿರಲು ಬಹಳವಾಗಿ ಎದ್ದ ಧೂಳು ಸೈನ್ಯವನ್ನೆಲ್ಲಾ ಆವರಿಸಿತು. ಆ ಧೂಳಿನಿಂದಾಗಿ ಯಾರಿಗೂ ಏನೂ ಕಾಣಿಸದಂತಾಯಿತು.

ದುರ್ಯೋಧನಸ್ತು ಸಂಪ್ರೇಕ್ಷ್ಯ ಭಗ್ನಂ ಸ್ವಬಲಮಂತಿಕಾತ್ ।
ಜವೇನಾಭ್ಯಪತತ್ ತೂರ್ಣಂ ಸರ್ವಾಂಶ್ಚೈಕೋ ನ್ಯವಾರಯತ್ ॥೩೪॥

ದುರ್ಯೋಧನನು ತನ್ನ ಸೈನ್ಯವು ನಾಶವಾಗಿರುವುದನ್ನು ಹತ್ತಿರದಿಂದ ನೋಡಿದನು. ಕೂಡಲೇ ವೇಗದಿಂದ ಧಾವಿಸಿ ಒಬ್ಬನೇ ಓಡಿಹೋಗುತ್ತಿದ್ದ ಎಲ್ಲರನ್ನೂ ತಡೆದು ನಿಲ್ಲಿಸಿದನು.

ಪಾಂಡವಾನ್ ಸಮರೇ ಕ್ರುದ್ಧೋ ಧೃಷ್ಟದ್ಯುಮ್ನಂ ಚ ಪಾರ್ಷತಮ್ ।
ಶಿಖಂಡಿನಂ ದ್ರೌಪದೇಯಾನ್ ಪಾಂಚಾಲಾನಾಂ ಚ ಯೇ ಗಣಾಃ ॥
ಕೇಕಯಾನ್ ಸೋಮಕಾಂಶ್ಚೈವ ಯೋಧಯಾಮಾಸ ಮಾರಿಷ ॥೩೬॥

ರಾಜನೇ! ಯುದ್ಧದಲ್ಲಿ ಪಾಂಡವರನ್ನು, ಧೃಷ್ಟದ್ಯುಮ್ನನನ್ನು, ಶಿಖಂಡಿಯನ್ನು, ದ್ರೌಪದಿಯ ಮಕ್ಕಳನ್ನು, ಪಾಂಚಾಲರನ್ನು, ಕೇಕಯರನ್ನು ಮತ್ತು ಸೋಮಕರನ್ನು ಎದುರಿಸಿ ಹೋರಾಡಿದನು.

ಅಸಂಭ್ರಮಂ ದುರಾಧರ್ಷಃ ಶಿತೈರಸ್ತ್ರೈರವಾಕಿರತ್ ।
ಅತಿಷ್ಠದಾಹವೇ ಯತ್ತಃ ಪುತ್ರಸ್ತವ ಮಹಾಬಲಃ ॥೩೭॥

ಯುದ್ಧದಲ್ಲಿ ಎದುರಿಸಲು ಅಶಕ್ಯನಾದ ಮಹಾಬಲಶಾಲಿಯಾದ ನಿನ್ನ ಮಗನು ಯಾವುದೇ ರೀತಿಯ ಕಳವಳಕ್ಕೆ ಒಳಗಾಗದೆ ಶತ್ರುಗಳ ಮೇಲೆ ಹರಿತವಾದ ಬಾಣಗಳ ಮಳೆಯನ್ನು ಸುರಿಸುತ್ತಾ ಧೈರ್ಯದಿಂದ ನಿಂತನು.

ಯಥಾ ಯಜ್ಞೇ ಮಹಾನಗ್ನಿರ್ಮಂತ್ರಪೂತಃ ಪ್ರಕಾಶತೇ ॥೩೮॥

ಯಜ್ಞದಲ್ಲಿ ಮಂತ್ರಪೂತವಾದ ಅಗ್ನಿಯಂತೆ ದುರ್ಯೋಧನನು ಪ್ರಜ್ವಲಿಸುತ್ತಿದ್ದನು.

ತಂ ಪರೇ ನಾತ್ಯವರ್ತಂತ ಮರ್ತ್ಯಾ ಮೃತ್ಯುಮಿವಾಹವೇ ।
ಅಥಾನ್ಯಂ ರಥಮಾಸ್ಥಾಯ ಹಾರ್ದಿಕ್ಯಃ ಸಮವರ್ತತ ॥೩೯॥

ಮನುಷ್ಯರು ಯಮನನ್ನು ಮೀರಿಹೋಗಲಾರರು. ಹಾಗೆಯೇ ಬೇರೆ ಯಾರಿಗೂ ದುರ್ಯೋಧನನನ್ನು ಮೀರಿ ಹೋಗಲು ಆಗಲಿಲ್ಲ. ಅಷ್ಟು ಸಮಯಕ್ಕೆ ಕೃತವರ್ಮನು ಇನ್ನೊಂದು ರಥವನ್ನು ಏರಿ ಯುದ್ಧಕ್ಕೆ ಹಿಂತಿರುಗಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತಸೂತೇ ಹತಾಶ್ವೇ ಚ ವಿರಥೇ ಕೃತವರ್ಮಣಿ ।
ಹತಾಶ್ವಂ ಚ ಸಮಾಲಕ್ಷ್ಯ ಹತಸೂತಮರಿಂದಮಮ್ ॥೨೯॥

ಅಭ್ಯಧಾವತ್ ಕೃಪೋ ರಾಜನ್ ಜಿಘಾಂಸುಃ ಶಿನಿಪುಂಗವಮ್ ॥೩೦॥

ಕೃತವರ್ಮನ ಸಾರಥಿಯು ಸತ್ತಿದ್ದಾನೆ. ಅಶ್ವಗಳು ಸತ್ತಿವೆ. ರಥವನ್ನು ಕಳೆದುಕೊಂಡಿದ್ದಾನೆ. ರಾಜನೇ! ಇಂತಹ ಶತ್ರುಮಾರಕನಾದ ಕೃತವರ್ಮನನ್ನು ನೋಡಿದ ಕೃಪಾಚಾರ್ಯನು ಸಾತ್ಯಕಿಯನ್ನು ಕೊಲ್ಲುವುದಕ್ಕಾಗಿ ಬಂದನು.

ತಮಾರೋಪ್ಯ ರಥೋಪಸ್ಥೇ ಮಿಷತಾಂ ಸರ್ವಧನ್ವಿನಾಮ್ ।
ಅಪೋವಾಹ ಮಹಾರಾಜ ತೂರ್ಣಮಾಯೋಧನಾದಪಿ ॥೩೧॥

ರಾಜನೇ! ಸಕಲಧನುರ್ಧಾರಿಗಳು ನೋಡುತ್ತಿದ್ದಾಗಲೇ ಕೃಪಾಚಾರ್ಯನು ಕೃತವರ್ಮನನ್ನು ತನ್ನ ರಥದಲ್ಲಿ ಹತ್ತಿಸಿಕೊಂಡು ರಣರಂಗದಿಂದ ಬೇಗನೇ ಕರೆದೊಯ್ದನು.

ಶೈನೇಯೇಽಧಿಷ್ಠಿತೇ ರಾಜನ್ ವಿರಥೇ ಕೃತವರ್ಮಣಿ ।
ದುರ್ಯೋಧನಬಲಂ ಸರ್ವಂ ಪುನರಾಸೀತ್ ಪರಾಙ್ಮುಖಮ್ ॥೩೨॥

ರಾಜನೇ! ಸಾತ್ಯಕಿಯು ಯುದ್ಧದಲ್ಲಿ ಜಯವನ್ನು ಗಳಿಸಿದ್ದಾನೆ. ಕೃತವರ್ಮನು ವಿರಥನಾಗಿದ್ದಾನೆ. ಹೀಗಾದಾಗ ದುರ್ಯೋಧನ ಸೈನ್ಯವು ಸೋತು ಪುನಃ ಯುದ್ಧದಿಂದ ಹಿಂದೆ ಸರಿಯಿತು.

ತತ್ ಪರೇ ನಾನ್ವಬುಧ್ಯಂತ ಸೈನ್ಯೇ ಚ ರಜಸಾ ವೃತೇ ।
ತಾವದ್ ವಿಪ್ರದ್ರುತಂ ರಾಜನ್ ದುರ್ಯೋಧನಮೃತೇ ನೃಪ ॥೩೩॥

ರಾಜನೇ! ದುರ್ಯೋಧನನೊಬ್ಬನನ್ನು ಬಿಟ್ಟು ಕೌರವರ ಎಲ್ಲಾ ಸೈನ್ಯವು ಸೋತು ಓಡುತ್ತಿರಲು ಬಹಳವಾಗಿ ಎದ್ದ ಧೂಳು ಸೈನ್ಯವನ್ನೆಲ್ಲಾ ಆವರಿಸಿತು. ಆ ಧೂಳಿನಿಂದಾಗಿ ಯಾರಿಗೂ ಏನೂ ಕಾಣಿಸದಂತಾಯಿತು.

ದುರ್ಯೋಧನಸ್ತು ಸಂಪ್ರೇಕ್ಷ್ಯ ಭಗ್ನಂ ಸ್ವಬಲಮಂತಿಕಾತ್ ।
ಜವೇನಾಭ್ಯಪತತ್ ತೂರ್ಣಂ ಸರ್ವಾಂಶ್ಚೈಕೋ ನ್ಯವಾರಯತ್ ॥೩೪॥

ದುರ್ಯೋಧನನು ತನ್ನ ಸೈನ್ಯವು ನಾಶವಾಗಿರುವುದನ್ನು ಹತ್ತಿರದಿಂದ ನೋಡಿದನು. ಕೂಡಲೇ ವೇಗದಿಂದ ಧಾವಿಸಿ ಒಬ್ಬನೇ ಓಡಿಹೋಗುತ್ತಿದ್ದ ಎಲ್ಲರನ್ನೂ ತಡೆದು ನಿಲ್ಲಿಸಿದನು.

ಪಾಂಡವಾನ್ ಸಮರೇ ಕ್ರುದ್ಧೋ ಧೃಷ್ಟದ್ಯುಮ್ನಂ ಚ ಪಾರ್ಷತಮ್ ।
ಶಿಖಂಡಿನಂ ದ್ರೌಪದೇಯಾನ್ ಪಾಂಚಾಲಾನಾಂ ಚ ಯೇ ಗಣಾಃ ॥
ಕೇಕಯಾನ್ ಸೋಮಕಾಂಶ್ಚೈವ ಯೋಧಯಾಮಾಸ ಮಾರಿಷ ॥೩೬॥

ರಾಜನೇ! ಯುದ್ಧದಲ್ಲಿ ಪಾಂಡವರನ್ನು, ಧೃಷ್ಟದ್ಯುಮ್ನನನ್ನು, ಶಿಖಂಡಿಯನ್ನು, ದ್ರೌಪದಿಯ ಮಕ್ಕಳನ್ನು, ಪಾಂಚಾಲರನ್ನು, ಕೇಕಯರನ್ನು ಮತ್ತು ಸೋಮಕರನ್ನು ಎದುರಿಸಿ ಹೋರಾಡಿದನು.

ಅಸಂಭ್ರಮಂ ದುರಾಧರ್ಷಃ ಶಿತೈರಸ್ತ್ರೈರವಾಕಿರತ್ ।
ಅತಿಷ್ಠದಾಹವೇ ಯತ್ತಃ ಪುತ್ರಸ್ತವ ಮಹಾಬಲಃ ॥೩೭॥

ಯುದ್ಧದಲ್ಲಿ ಎದುರಿಸಲು ಅಶಕ್ಯನಾದ ಮಹಾಬಲಶಾಲಿಯಾದ ನಿನ್ನ ಮಗನು ಯಾವುದೇ ರೀತಿಯ ಕಳವಳಕ್ಕೆ ಒಳಗಾಗದೆ ಶತ್ರುಗಳ ಮೇಲೆ ಹರಿತವಾದ ಬಾಣಗಳ ಮಳೆಯನ್ನು ಸುರಿಸುತ್ತಾ ಧೈರ್ಯದಿಂದ ನಿಂತನು.

ಯಥಾ ಯಜ್ಞೇ ಮಹಾನಗ್ನಿರ್ಮಂತ್ರಪೂತಃ ಪ್ರಕಾಶತೇ ॥೩೮॥

ಯಜ್ಞದಲ್ಲಿ ಮಂತ್ರಪೂತವಾದ ಅಗ್ನಿಯಂತೆ ದುರ್ಯೋಧನನು ಪ್ರಜ್ವಲಿಸುತ್ತಿದ್ದನು.

ತಂ ಪರೇ ನಾತ್ಯವರ್ತಂತ ಮರ್ತ್ಯಾ ಮೃತ್ಯುಮಿವಾಹವೇ ।
ಅಥಾನ್ಯಂ ರಥಮಾಸ್ಥಾಯ ಹಾರ್ದಿಕ್ಯಃ ಸಮವರ್ತತ ॥೩೯॥

ಮನುಷ್ಯರು ಯಮನನ್ನು ಮೀರಿಹೋಗಲಾರರು. ಹಾಗೆಯೇ ಬೇರೆ ಯಾರಿಗೂ ದುರ್ಯೋಧನನನ್ನು ಮೀರಿ ಹೋಗಲು ಆಗಲಿಲ್ಲ. ಅಷ್ಟು ಸಮಯಕ್ಕೆ ಕೃತವರ್ಮನು ಇನ್ನೊಂದು ರಥವನ್ನು ಏರಿ ಯುದ್ಧಕ್ಕೆ ಹಿಂತಿರುಗಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

ದುರ್ಯೋಧನನ ಪರಾಕ್ರಮ.
ಎರಡೂ ಕಡೆಯ ಸೇನೆಯ ಘೋರವಾದ ಯುದ್ಧ.

ಸಂಜಯಃ

ಪುತ್ರಸ್ತು ತೇ ಮಹಾರಾಜ ರಥಸ್ಥೋ ರಥಿನಾಂ ವರಃ ।
ದುರಾಧರ್ಷೋ ಬಭೌ ಯುದ್ಧೇ ಯಥಾ ರುದ್ರಃ ಪ್ರತಾಪವಾನ್ ॥೧॥

ಸಂಜಯ– ಮಹಾರಾಜ! ನಿನ್ನ ಮಗನಾದ ಮಹಾರಥ ದುರ್ಯೋಧನನು ಯುದ್ಧದಲ್ಲಿ ರಥದ ಮೇಲೆ ಇದ್ದುಕೊಂಡು ಶೋಭಿಸುತ್ತಿದ್ದನು. ಅವನನ್ನು ಎದುರಿಸುವುದು ಕಷ್ಟಸಾಧ್ಯವಾಗಿತ್ತು. ವಿರೋಧಿಗಳನ್ನು ಸುಡುವ ರುದ್ರನ ಹಾಗೆ ಕಾಣಿಸುತ್ತಿದ್ದನು.

ತಸ್ಯ ಬಾಣಸಹಸ್ರೈಸ್ತು ಪ್ರಚ್ಛನ್ನಾ ಹ್ಯಭವನ್ಮಹೀ ।
ಪರಾಂಶ್ಚ ಸಿಷಿಚೇ ಬಾಣೈರ್ಧಾರಾಭಿರಿವ ಪರ್ವತಾನ್ ॥೨॥

ಸಾವಿರಾರು ಬಾಣಗಳಿಂದ ಭೂಮಿಯನ್ನು ಆಚ್ಛಾದಿಸಿದ್ದನು. ಪರ್ವತದ ಮೇಲೆ ಮಳೆಯ ನೀರಧಾರೆಗಳು ಬೀಳುವಂತೆ ಶತ್ರುಗಳನ್ನು ಗುಂಪುಗುಂಪಾದ ಬಾಣಗಳಿಂದ ಘಾಸಿಗೊಳಿಸಿದನು.

ನ ಚ ಸೋಽಸ್ತಿ ಪುಮಾನ್ ಕಶ್ಚಿತ್ ಪಾಂಡವಾನಾಂ ಬಲಾರ್ಣವೇ ।
ಹತೋ ಗಜೋ ರಥೋ ವಾಽಪಿ ಯೋಽಸ್ಯ ಬಾಣೈರವಿಕ್ಷತಃ ॥೩॥

ಪಾಂಡವರ ದೊಡ್ಡದಾದ ಸೈನ್ಯದಲ್ಲಿ ದುರ್ಯೋಧನನ ಬಾಣದ ಹೊಡೆತವನ್ನು ತಪ್ಪಿಸಿಕೊಂಡವರು ಯಾರೂ ಇರಲಿಲ್ಲ. ಕುದುರೆ, ಆನೆ, ರಥಗಳೆಲ್ಲವೂ ಬಾಣಗಳ ಹೊಡೆತಕ್ಕೆ ಒಳಗಾಗಿದ್ದವು.

ಯಂ ಯಂ ಹಿ ಸಮರೇ ಯೋಧಂ ಪ್ರಪಶ್ಯಾಮಿ ವಿಶಾಂಪತೇ ।
ಸ ಸ ಬಾಣೈಶ್ಚಿತ್ತೋಽಭೂದ್ವೈ ತವ ಪುತ್ರೇಣ ಭಾರತ ॥೪॥

ರಾಜನೇ! ಭರತಕುಲೋದ್ಭವನೇ! ಯುದ್ಧದಲ್ಲಿ ಯಾರನ್ನೆಲ್ಲಾ ನೋಡುತ್ತೇನೆಯೋ ಅವರೆಲ್ಲರೂ ನಿನ್ನ ಮಗನ ಬಾಣಗಳ ಪೆಟ್ಟನ್ನು ತಿಂದವರೇ.

ಯಥಾ ಸೈನ್ಯೇನ ರಜಸಾ ಸಮುದ್ಧೂತೇನ ವಾಹಿನೀ ।
ಪ್ರತ್ಯದೃಶ್ಯತ ಸಂಛನ್ನಾ ತಥಾ ಬಾಣೈರ್ಮಹಾತ್ಮನಃ ॥೫॥

ಸೈನ್ಯದ ಓಡಾಟದಿಂದ ಬಹಳವಾದ ಧೂಳು ಸೈನ್ಯದ ಮೇಲೆಲ್ಲಾ ವ್ಯಾಪಿಸಿತ್ತು. ಅದೇ ರೀತಿ ಮಹಾತ್ಮನಾದ ದುರ್ಯೋಧನನು ಬಿಟ್ಟ ಬಾಣಗಳು ಇಡೀ ಸೈನ್ಯಗಳನ್ನೆ ಮುಚ್ಚಿಹಾಕಿದ್ದವು.

ಬಾಣಭೂತಾಮಪಶ್ಯಾಮ ಪೃಥಿವೀಂ ಪೃಥಿವೀಪತೇ ।
ದುರ್ಯೋಧನೇನಾಪತತಾ ಕ್ಷಿಪ್ರಹಸ್ತೇನ ಧನ್ವಿನಾ ॥೬॥

ರಾಜನೇ! ಬಾಣಗಳಿಂದ ಆವೃತವಾದ ನೆಲವು ಬಾಣಮಯವಾಗಿತ್ತು. ಧನುರ್ಧಾರಿಯಾದ ದುರ್ಯೋಧನನು ಈ ಬಾಣಗಳನ್ನು ಪ್ರಯೋಗಿಸಿದ್ದನು.

ತೇಷು ಯೋಧಸಹಸ್ರೇಷು ತಾವಕೇಷು ಪರೇಷು ಚ ।
ಏಕೋ ದುರ್ಯೋಧನಶ್ಚಾಸೀತ್ ತತ್ರ ತತ್ರ ಮತಿರ್ಮಮ ॥೭॥

ನಿನ್ನ ಕಡೆಯ ಹಾಗೂ ಶತ್ರುಕಡೆಯ ಸಾವಿರಾರು ಯೋಧರು ಯುದ್ಧ ಮಾಡುತ್ತಿದ್ದರು. ಅವರಲ್ಲಿ ದುರ್ಯೋಧನನೊಬ್ಬನೇ ಮುಖ್ಯ ಯೋಧನಾಗಿದ್ದನು.

ಅತ್ರಾದ್ಭುತಮಪಶ್ಯಾಮ ತವ ಪುತ್ರಸ್ಯ ವಿಕ್ರಮಮ್ ।
ಯದೇಕಂ ಸಹಿತಾಃ ಪಾರ್ಥಾ ನಾತ್ಯವರ್ತಂತ ಭಾರತ ॥೮॥

ಭರತಕುಲೋದ್ಭವನೇ! ಒಬ್ಬಂಟಿಯಾದ ನಿನ್ನ ಮಗನನ್ನು ಪಾಂಡವರು ಎಲ್ಲರು ಸೇರಿಯೂ ಮೀರಲು ಆಗಲಿಲ್ಲ. ನಿನ್ನ ಮಗನ ಇಂತಹ ಅದ್ಭುತವಾದ ಪರಾಕ್ರಮವನ್ನು ನಾವು ನೋಡಿದೆವು.

ಯುಧಿಷ್ಠಿರಂ ಶತೇನಾಜೌ ವಿವ್ಯಾಧ ಭರತರ್ಷಭ ।
ಭೀಮಸೇನಂ ತ್ರಿಸಪ್ತತ್ಯಾ ಸಹದೇವಂ ಚ ಪಂಚಭಿಃ ॥೯॥

ಭರತಶ್ರೇಷ್ಠನೇ! ಯುದ್ಧದಲ್ಲಿ ದುರ್ಯೋಧನನು ಯುಧಿಷ್ಠಿರನನ್ನು ನೂರು ಬಾಣಗಳಿಂದ ಹೊಡೆದನು. ಭೀಮನನ್ನು ಎಪ್ಪತ್ತಮೂರು ಬಾಣಗಳಿಂದ ಹಾಗೂ ಸಹದೇವನನ್ನು ಐದು ಬಾಣಗಳಿಂದ ಹೊಡೆದನು.

ಇಪ್ಪತ್ತೆರಡನೆಯ ಅಧ್ಯಾಯ

ದುರ್ಯೋಧನನ ಪರಾಕ್ರಮ.
ಎರಡೂ ಕಡೆಯ ಸೇನೆಯ ಘೋರವಾದ ಯುದ್ಧ.

ಸಂಜಯಃ

ಪುತ್ರಸ್ತು ತೇ ಮಹಾರಾಜ ರಥಸ್ಥೋ ರಥಿನಾಂ ವರಃ ।
ದುರಾಧರ್ಷೋ ಬಭೌ ಯುದ್ಧೇ ಯಥಾ ರುದ್ರಃ ಪ್ರತಾಪವಾನ್ ॥೧॥

ಸಂಜಯ– ಮಹಾರಾಜ! ನಿನ್ನ ಮಗನಾದ ಮಹಾರಥ ದುರ್ಯೋಧನನು ಯುದ್ಧದಲ್ಲಿ ರಥದ ಮೇಲೆ ಇದ್ದುಕೊಂಡು ಶೋಭಿಸುತ್ತಿದ್ದನು. ಅವನನ್ನು ಎದುರಿಸುವುದು ಕಷ್ಟಸಾಧ್ಯವಾಗಿತ್ತು. ವಿರೋಧಿಗಳನ್ನು ಸುಡುವ ರುದ್ರನ ಹಾಗೆ ಕಾಣಿಸುತ್ತಿದ್ದನು.

ತಸ್ಯ ಬಾಣಸಹಸ್ರೈಸ್ತು ಪ್ರಚ್ಛನ್ನಾ ಹ್ಯಭವನ್ಮಹೀ ।
ಪರಾಂಶ್ಚ ಸಿಷಿಚೇ ಬಾಣೈರ್ಧಾರಾಭಿರಿವ ಪರ್ವತಾನ್ ॥೨॥

ಸಾವಿರಾರು ಬಾಣಗಳಿಂದ ಭೂಮಿಯನ್ನು ಆಚ್ಛಾದಿಸಿದ್ದನು. ಪರ್ವತದ ಮೇಲೆ ಮಳೆಯ ನೀರಧಾರೆಗಳು ಬೀಳುವಂತೆ ಶತ್ರುಗಳನ್ನು ಗುಂಪುಗುಂಪಾದ ಬಾಣಗಳಿಂದ ಘಾಸಿಗೊಳಿಸಿದನು.

ನ ಚ ಸೋಽಸ್ತಿ ಪುಮಾನ್ ಕಶ್ಚಿತ್ ಪಾಂಡವಾನಾಂ ಬಲಾರ್ಣವೇ ।
ಹತೋ ಗಜೋ ರಥೋ ವಾಽಪಿ ಯೋಽಸ್ಯ ಬಾಣೈರವಿಕ್ಷತಃ ॥೩॥

ಪಾಂಡವರ ದೊಡ್ಡದಾದ ಸೈನ್ಯದಲ್ಲಿ ದುರ್ಯೋಧನನ ಬಾಣದ ಹೊಡೆತವನ್ನು ತಪ್ಪಿಸಿಕೊಂಡವರು ಯಾರೂ ಇರಲಿಲ್ಲ. ಕುದುರೆ, ಆನೆ, ರಥಗಳೆಲ್ಲವೂ ಬಾಣಗಳ ಹೊಡೆತಕ್ಕೆ ಒಳಗಾಗಿದ್ದವು.

ಯಂ ಯಂ ಹಿ ಸಮರೇ ಯೋಧಂ ಪ್ರಪಶ್ಯಾಮಿ ವಿಶಾಂಪತೇ ।
ಸ ಸ ಬಾಣೈಶ್ಚಿತ್ತೋಽಭೂದ್ವೈ ತವ ಪುತ್ರೇಣ ಭಾರತ ॥೪॥

ರಾಜನೇ! ಭರತಕುಲೋದ್ಭವನೇ! ಯುದ್ಧದಲ್ಲಿ ಯಾರನ್ನೆಲ್ಲಾ ನೋಡುತ್ತೇನೆಯೋ ಅವರೆಲ್ಲರೂ ನಿನ್ನ ಮಗನ ಬಾಣಗಳ ಪೆಟ್ಟನ್ನು ತಿಂದವರೇ.

ಯಥಾ ಸೈನ್ಯೇನ ರಜಸಾ ಸಮುದ್ಧೂತೇನ ವಾಹಿನೀ ।
ಪ್ರತ್ಯದೃಶ್ಯತ ಸಂಛನ್ನಾ ತಥಾ ಬಾಣೈರ್ಮಹಾತ್ಮನಃ ॥೫॥

ಸೈನ್ಯದ ಓಡಾಟದಿಂದ ಬಹಳವಾದ ಧೂಳು ಸೈನ್ಯದ ಮೇಲೆಲ್ಲಾ ವ್ಯಾಪಿಸಿತ್ತು. ಅದೇ ರೀತಿ ಮಹಾತ್ಮನಾದ ದುರ್ಯೋಧನನು ಬಿಟ್ಟ ಬಾಣಗಳು ಇಡೀ ಸೈನ್ಯಗಳನ್ನೆ ಮುಚ್ಚಿಹಾಕಿದ್ದವು.

ಬಾಣಭೂತಾಮಪಶ್ಯಾಮ ಪೃಥಿವೀಂ ಪೃಥಿವೀಪತೇ ।
ದುರ್ಯೋಧನೇನಾಪತತಾ ಕ್ಷಿಪ್ರಹಸ್ತೇನ ಧನ್ವಿನಾ ॥೬॥

ರಾಜನೇ! ಬಾಣಗಳಿಂದ ಆವೃತವಾದ ನೆಲವು ಬಾಣಮಯವಾಗಿತ್ತು. ಧನುರ್ಧಾರಿಯಾದ ದುರ್ಯೋಧನನು ಈ ಬಾಣಗಳನ್ನು ಪ್ರಯೋಗಿಸಿದ್ದನು.

ತೇಷು ಯೋಧಸಹಸ್ರೇಷು ತಾವಕೇಷು ಪರೇಷು ಚ ।
ಏಕೋ ದುರ್ಯೋಧನಶ್ಚಾಸೀತ್ ತತ್ರ ತತ್ರ ಮತಿರ್ಮಮ ॥೭॥

ನಿನ್ನ ಕಡೆಯ ಹಾಗೂ ಶತ್ರುಕಡೆಯ ಸಾವಿರಾರು ಯೋಧರು ಯುದ್ಧ ಮಾಡುತ್ತಿದ್ದರು. ಅವರಲ್ಲಿ ದುರ್ಯೋಧನನೊಬ್ಬನೇ ಮುಖ್ಯ ಯೋಧನಾಗಿದ್ದನು.

ಅತ್ರಾದ್ಭುತಮಪಶ್ಯಾಮ ತವ ಪುತ್ರಸ್ಯ ವಿಕ್ರಮಮ್ ।
ಯದೇಕಂ ಸಹಿತಾಃ ಪಾರ್ಥಾ ನಾತ್ಯವರ್ತಂತ ಭಾರತ ॥೮॥

ಭರತಕುಲೋದ್ಭವನೇ! ಒಬ್ಬಂಟಿಯಾದ ನಿನ್ನ ಮಗನನ್ನು ಪಾಂಡವರು ಎಲ್ಲರು ಸೇರಿಯೂ ಮೀರಲು ಆಗಲಿಲ್ಲ. ನಿನ್ನ ಮಗನ ಇಂತಹ ಅದ್ಭುತವಾದ ಪರಾಕ್ರಮವನ್ನು ನಾವು ನೋಡಿದೆವು.

ಯುಧಿಷ್ಠಿರಂ ಶತೇನಾಜೌ ವಿವ್ಯಾಧ ಭರತರ್ಷಭ ।
ಭೀಮಸೇನಂ ತ್ರಿಸಪ್ತತ್ಯಾ ಸಹದೇವಂ ಚ ಪಂಚಭಿಃ ॥೯॥

ಭರತಶ್ರೇಷ್ಠನೇ! ಯುದ್ಧದಲ್ಲಿ ದುರ್ಯೋಧನನು ಯುಧಿಷ್ಠಿರನನ್ನು ನೂರು ಬಾಣಗಳಿಂದ ಹೊಡೆದನು. ಭೀಮನನ್ನು ಎಪ್ಪತ್ತಮೂರು ಬಾಣಗಳಿಂದ ಹಾಗೂ ಸಹದೇವನನ್ನು ಐದು ಬಾಣಗಳಿಂದ ಹೊಡೆದನು.

ನಕುಲಂ ಚ ಚತುಃಷಷ್ಟ್ಯಾ ಧೃಷ್ಟದ್ಯುಮ್ನಂ ಚ ಪಂಚಭಿಃ ।
ಸಪ್ತಭಿರ್ದ್ರೌಪದೇಯಾಂಶ್ಚ ತ್ರಿಭಿರ್ವಿವ್ಯಾಧ ಸಾತ್ಯಕಿಮ್ ॥೧೦॥

ನಕುಲನ ಮೇಲೆ ಅರವತ್ತನಾಲ್ಕು, ಧೃಷ್ಟದ್ಯುಮನ ಮೇಲೆ ಐದು, ದ್ರೌಪದಿಯ ಮಕ್ಕಳ ಮೇಲೆ ಏಳು, ಸಾತ್ಯಕಿಯ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಿ ಹೊಡೆದನು.

ಧನುಶ್ಚಿಚ್ಛೇದ ಭಲ್ಲೇನ ಸಹದೇವಸ್ಯ ಭಾರತ ॥೧೧॥

ಭಾರತ! ದುರ್ಯೋಧನನು ಸಹದೇವನ ಬಿಲ್ಲನ್ನು ಮುರಿದು ಹಾಕಿದನು.

ತದಪಾಸ್ಯ ಧನುಶ್ಛಿನ್ನಂ ಮಾದ್ರೀಪುತ್ರಃ ಪ್ರತಾಪವಾನ್ ।
ಅಭ್ಯಧಾವತ ರಾಜಾನಂ ಪ್ರಗೃಹ್ಯ ಸುಮಹದ್ಧನುಃ ॥೧೨॥

ಪ್ರತಾಪಿಯಾದ ಸಹದೇವನು ಮುರಿದ ಬಿಲ್ಲನ್ನು ಬಿಸಾಡಿ, ಇನ್ನೊಂದು ದೊಡ್ಡಬಿಲ್ಲನ್ನು ಎತ್ತಿಕೊಂಡು ದುರ್ಯೋಧನನನ್ನು ಎದುರಿಸಿದನು.

ತತೋ ದುರ್ಯೋಧನಂ ಸಂಖ್ಯೇ ವಿವ್ಯಾಧ ದಶಭಿಃ ಶರೈಃ ।
ನಕುಲಶ್ಚ ತತೋ ವೀರೋ ರಾಜಾನಂ ನವಭಿಃ ಪುನಃ ॥೧೩॥

ಯುದ್ಧದಲ್ಲಿ ಸಹದೇವನು ಹತ್ತು ಬಾಣಗಳಿಂದ ದುರ್ಯೋಧನನನ್ನು ಹೊಡೆದನು. ವೀರನಾದ ನಕುಲನು ಒಂಬತ್ತು ಬಾಣಗಳಿಂದ ದುರ್ಯೋಧನನನ್ನು ಹೊಡೆದನು.

ಘೋರರೂಪೈರ್ಮಹೇಷ್ವಾಸೋ ವಿವ್ಯಾಧ ಚ ನನಾದ ಚ ॥೧೪॥

ದೊಡ್ಡಬಿಲ್ಗಾರರಾದ ಅವರು ಭಯಂಕರವಾಗಿ ಹೊಡೆದರು ಮತ್ತು ಸಿಂಹನಾದವನ್ನು ಮಾಡಿದರು.

ಸಾತ್ಯಕಿಶ್ಚಾಪಿ ರಾಜಾನಂ ಶರೇಣ ನತಪರ್ವಣಾ ।
ದ್ರೌಪದೇಯಾಸ್ತ್ರಿಸಪ್ತತ್ಯಾ ಧರ್ಮರಾಜಶ್ಚ ಪಂಚಭಿಃ ॥೧೫॥

ಸಾತ್ಯಕಿಯೂ ಕೂಡ ಬಾಗಿದ ಸಂಧಿಯುಳ್ಳ ಬಾಣದಿಂದ ರಾಜನನ್ನು ಹೊಡೆದನು. ದ್ರೌಪದಿಯ ಮಕ್ಕಳು ಎಪ್ಪತ್ತಮೂರು ಬಾಣಗಳಿಂದ ಮತ್ತು ಧರ್ಮರಾಜನು ಐದು ಬಾಣಗಳಿಂದ ದುರ್ಯೋಧನನನ್ನು ಹೊಡೆದರು.

ಅಶೀತ್ಯಾ ಭೀಮಸೇನಶ್ಚ ಶರೈಃ ರಾಜಾನಮರ್ದಯನ್ ॥೧೬॥

ಭೀಮಸೇನನು ಎಂಬತ್ತು ಬಾಣಗಳಿಂದ ರಾಜನನ್ನು ಥಳಿಸಿದನು.

ಸಮಂತಾತ್ ಕೀರ್ಯಮಾಣಸ್ತು ಬಾಣಸಂಘೈರ್ಮಹಾತ್ಮಭಿಃ ।
ನ ಚಚಾಲ ಮಹಾರಾಜ ಸರ್ವಸೈನ್ಯಸ್ಯ ಪಶ್ಯತಃ ॥೧೭॥

ಎಲ್ಲಾ ಕಡೆಯಿಂದಲೂ ಮಹಾತ್ಮರಾದ ಪಾಂಡವರು ಬಾಣಗಳನ್ನು ಪ್ರಯೋಗಿಸುತ್ತಿದ್ದರೂ ಮಹಾರಾಜನೇ! ಎಲ್ಲ ಸೈನ್ಯ ನೋಡುತ್ತಿದ್ದರೂ ದುರ್ಯೋಧನನು ಸ್ವಲ್ಪವೂ ವಿಚಲಿತನಾಗಲಿಲ್ಲ.

ಲಾಘವಾತ್ ಸೌಷ್ಠವಾಚ್ಚಾಪಿ ವೀರ್ಯಾಚ್ಚಾಪಿ ಮಹಾತ್ಮನಃ ।
ಅತಿ ಸರ್ವಾಣಿ ಭೂತಾನಿ ದದೃಶುಃ ಸರ್ವಮಾನವಾಃ ॥೧೮॥

ದುರ್ಯೋಧನನು ಅನಾಯಾಸವಾಗಿ, ಕುಶಲತೆಯಿಂದ ಮತ್ತು ವೀರತನದಿಂದ ಎಲ್ಲರನ್ನೂ ಮೀರಿರುವುದನ್ನು ಎಲ್ಲಾ ಪ್ರಾಣಿಗಳೂ ಹಾಗೂ ಎಲ್ಲಾ ಮನುಷ್ಯರು ನೋಡಿದರು.

ಧಾರ್ತರಾಷ್ಟ್ರಸ್ಯ ರಾಜೇಂದ್ರ ಯಾತ್ವಾ ಹಿ ಸ್ವಲ್ಪಮಂತರಮ್ ।
ಅಪಶ್ಯಮಾನಾ ರಾಜಾನಂ ಪರ್ಯಧಾವಂತ ದಂಸಿತಾಃ ॥೧೯॥

ರಾಜೇಂದ್ರನೇ! ಕವಚಧಾರಿಗಳಾದ ಕೌರವಯೋಧರು ದುರ್ಯೋಧನನಿಗೆ ಸ್ವಲ್ಪವೇ ಅಂತರದಲ್ಲಿ (ಅತೀ ಸಮೀಪದಲ್ಲಿ) ಅವಕಾಶವಿಲ್ಲದಂತೆ ರಾಜನನ್ನು ಸುತ್ತುವರಿದು ನಿಂತರು.

ತೇಷಾಮಾಪತತಾಂ ಘೋಷಃ ತುಮುಲಃ ಸಮಜಾಯತ ।
ಕ್ಷುಬ್ಧಸ್ಯ ಹಿ ಸಮುದ್ರಸ್ಯ ಪ್ರಾವೃಟ್ಕಾಲೇ ಯಥಾ ನಿಶಿ ॥೨೦॥

ಮಳೆಗಾಲದಲ್ಲಿ ರಾತ್ರಿಯ ಸಮಯದಲ್ಲಿ ಕ್ಷೋಭೆಗೊಳಗಾದ ಸಮುದ್ರದ ಭೋರ್ಗರೆತ ಬಹಳವಾಗಿರುತ್ತದೆ. ರಣರಂಗದಲ್ಲಿ ಪರಸ್ಪರವಾಗಿ ಆಕ್ರಮಿಸುತ್ತಿರುವ ಯೋಧರಲ್ಲಿ ಅಂತಹ ಘೋಷವು ಉಂಟಾಯಿತು.

ಸಮಾಸಾದ್ಯ ರಣೇ ತೇ ತು ರಾಜಾನಮಪರಾಜಿತಮ್ ।
ಪ್ರತ್ಯುದ್ಯಯುರ್ಮಹೇಷ್ವಾಸಾಃ ಪಾಂಡವಾನಾತತಾಯಿನಃ ॥೨೧॥

ಯುದ್ಧದಲ್ಲಿ ಸೋಲಿಲ್ಲದ ರಾಜ ದುರ್ಯೋಧನನನ್ನು ಸಮೀಪಿಸಿದ್ದ ಆತತಾಯಿಗಳಾದ ಕೌರವಯೋಧರು ಧನುರ್ಧಾರಿಗಳಾಗಿ ಪಾಂಡವರನ್ನು ಎದುರಿಸಿದರು.

ಭೀಮಸೇನಂ ರಣೇ ಕ್ರುದ್ಧಂ ದ್ರೋಣಪುತ್ರೋ ನ್ಯವಾರಯತ್ ॥೨೨॥

ಯುದ್ಧದಲ್ಲಿ ಕ್ರುದ್ಧನಾಗಿದ್ದ ಭೀಮಸೇನನನ್ನು ಅಶ್ವತ್ಥಾಮನು ತಡೆದನು.

ತತೋ ಬಾಣೈರ್ಮಹಾರಾಜ ಪ್ರಮುಕ್ತೈಃ ಸರ್ವತೋ ದಿಶಮ್ ।
ನಾಜ್ಞಾಯಂತ ರಣೇ ವೀರಾ ನ ದಿಶಃ ಪ್ರದಿಶಸ್ತಥಾ ॥೨೩॥

ಮಹಾರಾಜನೆ! ಯುದ್ಧದಲ್ಲಿ ಎಲ್ಲಾ ದಿಕ್ಕುಗಳಲ್ಲಿ ಪ್ರಯೋಗಿಸಲ್ಪಟ್ಟ ಬಾಣಗಳಿಂದಾಗಿ ವೀರರಿಗೆ ದಿಕ್ಕುಗಳು ಯಾವುವು? ವಿದಿಕ್ಕುಗಳು ಯಾವುವು? ಎಂದು ಗುರುತಿಸಲು ಆಗಲಿಲ್ಲ.

ತಾವುಭೌ ಕೃತಕರ್ಮಾಣಾವುಭೌ ಭಾರತ ದುಃಸಹೌ ।
ಘೋರರೂಪಮಯುಧ್ಯೇತಾಂ ಕೃತಪ್ರತಿಕೃತೈಷಿಣೌ ॥೨೪॥

ಭರತವಂಶೋದ್ಭವನೇ! ಬಹಳವಾದ ಮಹತ್ಕಾರ್ಯಗಳನ್ನು ಮಾಡಿರುವ, ಯುದ್ಧದಲ್ಲಿ ಎದುರಿಸಲು ಅಶಕ್ಯರಾದ ಆ ಭೀಮ-ಅಶ್ವತ್ಥಾಮರು ಪರಸ್ಪರವಾಗಿ ಬಾಣಗಳಿಂದಲೇ ಉತ್ತರ ಕೊಡುತ್ತಿದ್ದರು. ಅವರಿಬ್ಬರ ಮಧ್ಯೆ ಘೋರವಾದ ಯುದ್ಧವು ನಡೆಯಿತು.

ತ್ರಾಸಯಂತೌ ಜಗತ್ ಸರ್ವಂ ಜ್ಯಾಕ್ಷೇಪವಿಹತತ್ವಚೌ ॥೨೫॥

ಬಿಲ್ಲಿನ ಹಗ್ಗವನ್ನು ಎಳೆಯುವುದರಿಂದ ಚರ್ಮ ಹರಿದುಹೋಗಿತ್ತು. ಇಡೀ ಜಗತ್ತನ್ನೇ ಆತಂಕಕ್ಕೆ ಒಳಪಡಿಸಿದ್ದರು.

ಶಕುನಿಶ್ಚ ಧನುಶ್ಛಿತ್ತ್ವಾ ಯುಧಿಷ್ಠಿರಮಪೀಡಯತ್ ॥೨೬॥

ಶಕುನಿಯು ಧರ್ಮರಾಜನ ಬಿಲ್ಲನ್ನು ಮುರಿದು ಅವನನ್ನು ಪೀಡಿಸಿದನು.

ತಸ್ಯಾಶ್ವಾಂಶ್ಚತುರೋ ಹತ್ವಾ ಸುಬಲಸ್ಯ ಸುತೋ ವಿಭುಃ ।
ನಾದಂ ಚಕಾರ ಬಲವಾನ್ ಸರ್ವಸೈನ್ಯಾನಿ ಕಂಪಯನ್ ॥೨೭॥

ಶಕುನಿಯು ಧರ್ಮರಾಜನ ನಾಲ್ಕು ಕುದುರೆಗಳನ್ನು ಕೊಂದುಹಾಕಿದನು. ಬಲಶಾಲಿಯಾದ ಶಕುನಿಯು ಜೋರಾಗಿ ನಾದವನ್ನು ಮಾಡಿದ. ಅದನ್ನು ಕೇಳಿ ಎಲ್ಲಾ ಸೈನ್ಯವು ಕಂಪಿಸಿತು.

ಏತಸ್ಮಿನ್ನಂತರೇ ವೀರೋ ರಾಜಾನಮಪರಾಜಿತಮ್ ।
ಅಪೋವಾಹ ರಥೇನಾಜೌ ಸಹದೇವಃ ಪ್ರತಾಪವಾನ್ ॥೨೮॥

ಈ ಮಧ್ಯದಲ್ಲಿ ವೀರನಾದ ಪ್ರತಾಪಿ ಸಹದೇವನು ಧರ್ಮರಾಜನನ್ನು ರಥದಲ್ಲಿ ಹತ್ತಿಸಿಕೊಂಡು ರಣರಂಗದಿಂದ ಕರೆದುಕೊಂಡು ಹೋದನು.

ಅಥಾನ್ಯಂ ರಥಮಾಸ್ಥಾಯ ಧರ್ಮರಾಜೋ ಯುಧಿಷ್ಠಿರಃ ।
ಶಕುನಿಂ ನವಭಿರ್ವಿದ್ಧ್ವಾ ಪುನರ್ವಿವ್ಯಾಧ ಪಂಚಭಿಃ ॥೨೯॥

ಯುಧಿಷ್ಠಿರನು ಇನ್ನೊಂದು ರಥವನ್ನು ಏರಿಕೊಂಡು ಬಂದು ಶಕುನಿಯ ಮೇಲೆ ಒಂಬತ್ತು ಬಾಣಗಳನ್ನು ಪ್ರಯೋಗಿಸಿದನು. ಪುನಃ ಐದು ಬಾಣಗಳಿಂದ ಹೊಡೆದನು.

ನನಾದ ಚ ಮಹಾನಾದಂ ಪ್ರವರಃ ಸರ್ವಧನ್ವಿನಾಮ್ ।
ತದ್ ಯುದ್ಧಮಭವಚ್ಚಿತ್ರಂ ಘೋರರೂಪಂ ಚ ಮಾರಿಷ ॥೩೦॥

ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಧರ್ಮರಾಜನು ಜೋರಾಗಿ ಶಬ್ದವನ್ನು ಮಾಡಿದನು. ರಾಜನೇ! ಭಯಂಕರವಾದ, ವಿಚಿತ್ರವಾದ ಯುದ್ಧವು ನಡೆಯಿತು.

ಈಕ್ಷಿತೃಪ್ರೀತಿಜನನಂ ಸಿದ್ಧಚಾರಣಸೇವಿತಮ್ ॥೩೧॥

ಆ ಯುದ್ಧವನ್ನು ನೋಡಿದವರಿಗೆ ಬಹಳ ಸಂತೋಷವಾಗುತ್ತಿತ್ತು. ಸಿದ್ಧರು, ಚಾರಣರು ಕೊಂಡಾಡುತ್ತಿದ್ದರು.

ಉಲೂಕಸ್ತು ಮಹೇಷ್ವಾಸೋ ನಕುಲಂ ಯುದ್ಧದುರ್ಮದಮ್ ।
ಅಭ್ಯದ್ರವದಮೇಯಾತ್ಮಾ ಶರವರ್ಷೈಃ ಸಮಂತತಃ ॥೩೨॥

ಧನುರ್ಧಾರಿಯಾದ ಮಹಾತ್ಮ ಉಲೂಕನು ಬಾಣಗಳ ಮಳೆಯನ್ನು ಸುರಿಸುತ್ತಾ ಯುದ್ಧದುರ್ಮದನಾದ ನಕುಲನನ್ನು ಎದುರಿಸಿದನು.

ತಥೈವ ನಕುಲಃ ಶೂರಃ ಸೌಬಲಸ್ಯ ಸುತಂ ರಣೇ ।
ಶರವರ್ಷೇಣ ಮಹತಾ ಸಮಂತಾತ್ ಪರ್ಯವಾರಯತ್ ॥೩೩॥

ಅದೇ ರೀತಿಯಲ್ಲಿ ಶೂರನಾದ ನಕುಲನು ಎಲ್ಲಾ ಕಡೆಗಳಿಂದ ಬಾಣಗಳ ಮಳೆಯನ್ನು ಸುರಿಸುತ್ತಾ ಶಕುನಿಯ ಮಗನನ್ನು ಎದುರಿಸಿ ತಡೆದನು.

ತೌ ತತ್ರ ಸಮರೇ ವೀರೌ ಕುಲಪುತ್ರೌ ಮಹಾರಥೌ ।
ಯೋಧಯಂತಾವದೃಶ್ಯೇತಾಂ ಪರಸ್ಪರಕೃತಾಗಸೌ ॥೩೪॥

ಆ ಯುದ್ಧದಲ್ಲಿ ಸತ್ಕುಲಪ್ರಸೂತರಾದ ಆ ವೀರರಿಬ್ಬರೂ ಪರಸ್ಪರವಾಗಿ ಪ್ರಹಾರ ಮಾಡಿಕೊಂಡು ಯುದ್ಧಮಾಡುತ್ತಿರುವುದು ಕಂಡುಬಂದಿತು.

ತಥೈವ ಕೃತವರ್ಮಾ ತು ಶೈನೇಯಂ ಶತ್ರುತಾಪನಮ್ ।
ಯೋಧಯನ್ ಶುಶುಭೇ ರಾಜನ್ ಬಲಿಃ ಶಕ್ರಮಿವಾಹವೇ ॥೩೫॥

ಕೃತವರ್ಮನು ಶತ್ರುತಾಪಕನಾದ ಸಾತ್ಯಕಿಯೊಡನೆ ಯುದ್ಧಮಾಡಿದನು. ರಾಜನೇ! ಯುದ್ಧದಲ್ಲಿ ಬಲಿಯು ಇಂದ್ರನನ್ನು ಎದುರಿಸಿ ಶೋಭಿಸಿದಂತೆ ಕೃತವರ್ಮನು ಶೋಭಿಸುತ್ತಿದ್ದನು.

ದುರ್ಯೋಧನೋ ಧನುಶ್ಛಿತ್ತ್ವಾ ಧೃಷ್ಟದ್ಯುಮ್ನಶ್ಚ ಸಂಯುಗೇ ।
ಅಥೈನಂ ಛಿನ್ನಧನ್ವಾನಂ ವಿವ್ಯಾಧ ನಿಶಿತೈಃ ಶರೈಃ ॥೩೬॥

ಇನ್ನೊಂದೆಡೆ ಯುದ್ಧದಲ್ಲಿ ದುರ್ಯೋಧನನು ಧೃಷ್ಟದ್ಯುಮ್ನನ ಬಿಲ್ಲನ್ನು ಮುರಿದು ಹರಿತವಾದ ಬಾಣಗಳಿಂದ ಹೊಡೆದನು.

ಧೃಷ್ಟದ್ಯುಮ್ನೋಽಪಿ ಸಮರೇ ಪ್ರಗೃಹ್ಯ ಸುಮಹಾಯುಧಮ್ ।
ರಾಜಾನಂ ಯೋಧಯಾಮಾಸ ಪಶ್ಯತಾಂ ಸರ್ವಧನ್ವಿನಾಮ್ ॥೩೭॥

ಧೃಷ್ಟದ್ಯುಮ್ನನೂ ಕೂಡ ರಣರಂಗದಲ್ಲಿ ದೊಡ್ಡದಾದ ಆಯುಧವನ್ನು ಹಿಡಿದುಕೊಂಡು, ಎಲ್ಲಾ ಧನುರ್ಧಾರಿಯೋಧರ ಮುಂದೆಯೇ ದುರ್ಯೋಧನನ ಜೊತೆ ಹೋರಾಡಿದನು.

ತಯೋರ್ಯುದ್ಧಂ ಮಹಚ್ಚಾಸೀತ್ ಸಂಕ್ರಂದೇ ಭರತರ್ಷಭ ।
ಪ್ರಭಿನ್ನಯೋರ್ಯಥಾ ಸಕ್ತಂ ಮತ್ತಯೋರ್ವನಹಸ್ತಿನೋಃ ॥೩೮॥

ಭಾರತೋತ್ತಮನೇ! ರಣರಂಗದಲ್ಲಿ ಅವರಿಬ್ಬರ ಯುದ್ಧವು ಮಹತ್ತರವಾಗಿತ್ತು. ಮದವೇರಿದ ಕಾಡಾನೆಗಳು ಕಾದಾಡಿದಂತೆ ಅವರೀರ್ವರೂ ಕಾದಾಡಿದರು.

ಗೌತಮಸ್ತು ರಣೇ ಕ್ರುದ್ಧೋ ದ್ರೌಪದೇಯಾನ್ ಮಹಾಬಲಾನ್ ।
ವಿವ್ಯಾಧ ಬಹುಭಿಘೋರೈಃ ಶರೈಃ ಸನ್ನತಪರ್ವಭಿಃ ॥೩೯॥

ಮತ್ತೊಂದೆಡೆ ಕೃಪಾಚಾರ್ಯನು ಕೋಪದಿಂದ, ಮಹಾಬಲಶಾಲಿಗಳಾದ ದ್ರೌಪದಿಯ ಮಕ್ಕಳನ್ನು ಬಾಗಿದ ಸಂಧಿಗಳುಳ್ಳ ಘೋರವಾದ ಬಾಣಗಳಿಂದ ಹೊಡೆದನು.

ತಸ್ಯ ತೈರಭವದ್ ಯುದ್ಧಮಿಂದ್ರಿಯೈರಿವ ದೇಹಿನಃ ।
ಘೋರರೂಪಮಸಂಹಾರ್ಯಂ ನಿರ್ಮರ್ಯಾದಮತೀವ ಚ ॥೪೦॥

ಶರೀರದಲ್ಲಿ ಜೀವಾತ್ಮನೊಡನೆ ಪಂಚೇಂದ್ರಿಯಗಳು ಹೊಡೆದಾಡುವಂತೆ ದ್ರೌಪದಿಯ ಐದು ಜನ ಮಕ್ಕಳು ಕೃಪಾಚಾರ್ಯನ ಜೊತೆಗೆ ಹೋರಾಡುತ್ತಿದ್ದರು. ಆ ಯುದ್ಧವು ಯುದ್ಧದ ಎಲ್ಲೆಯನ್ನು ಮೀರುತ್ತಿತ್ತು. ಅದನ್ನು ನಿಲ್ಲಿಸಲೂ ಆಗದಷ್ಟು ಘೋರರೂಪವಾಗಿತ್ತು.

ತೇ ಚ ತಂ ಪೀಡಯಾಮಾಸುರಿಂದ್ರಿಯಾಣೀವ ಬಾಲಿಶಮ್ ॥೪೧॥

ಇಂದ್ರಿಯಗಳು ಬಾಲಿಶನಾದ ಜೀವನನ್ನು ಪೀಡಿಸುವಂತೆ ಆ ದ್ರೌಪದಿಪುತ್ರರು ಕೃಪಾಚಾರ್ಯನನ್ನು ಯುದ್ಧದಲ್ಲಿ ಚೆನ್ನಾಗಿ ಪೀಡಿಸಿದರು.

ಸ ಚ ತಾನ್ ಪ್ರತಿಸಂರಬ್ಧಃ ಪ್ರತ್ಯಯೋಧಯದಾಹವೇ ।
ಏವಂ ಚಿತ್ರಮಭೂದ್ ಯುದ್ಧಂ ತಸ್ಯ ತೈಃ ಸಹ ಭಾರತ ॥೪೨॥

ಕೃಪಾಚಾರ್ಯನೂ ಕೂಡ ಆ ಯುದ್ಧದಲ್ಲಿ ಬಹಳ ಕೋಪಗೊಂಡು ಪ್ರತಿಯುದ್ಧವನ್ನು ಮಾಡಿದನು. ಭರತಕುಲೋದ್ಭವನೇ, ಹೀಗೆ ಅವರಿಗೂ ಕೃಪಾಚಾರ್ಯನಿಗೂ ವಿಚಿತ್ರವಾದ ಯುದ್ಧವು ನಡೆಯಿತು.

ಉತ್ಥಾಯೋತ್ಥಾಯ ಹಿ ಯಥಾ ದೇಹಿನಾಮಿಂದ್ರಿಯೈರ್ವಿಭೋ ॥೪೩॥

ಮನುಷ್ಯರ ಇಂದ್ರಿಯಗಳು ಮತೆ ಮತ್ತೆ ಜಾಗೃತವಾಗಿ ಜೀವನನ್ನು ಆಕ್ರಮಿಸುವಂತೆ ದ್ರೌಪದಿಯ ಮಕ್ಕಳು ಕೃಪಾಚಾರ್ಯನ ಮೇಲೆ ಮತ್ತೆ ಮತ್ತೆ ದಾಳಿಮಾಡಿದರು.

ನರಾಶ್ಚೈವ ನರೈಃ ಸಾರ್ಧಂ ದಂತಿನೋ ದಂತಿಭಿಸ್ತಥಾ ।
ಹಯಾ ಹಯೈಃ ಸಮಾಸಕ್ತಾ ರಥಿನೋ ರಥಿಭಿಸ್ತಥಾ ।
ಸಂಕುಲಂ ಚಾಭವದ್ ಭೂಯೋ ಘೋರರೂಪಂ ವಿಶಾಂಪತೇ ॥೪೪॥

ಇದಂ ಚಿತ್ರಮಿದಂ ಘೋರಮಿದಂ ರೌದ್ರಮಿತಿ ಪ್ರಭೋ ।
ಯುದ್ಧಾನ್ಯಾಸನ್ ಮಹಾರಾಜ ಘೋರಾಣಿ ಚ ಬಹೂನಿ ಚ ॥೪೫॥

ಪದಾತಿಗಳು ಪದಾತಿಗಳೊಡನೆ, ಆನೆಗಳು ಆನೆಗಳ ಜೊತೆಗೆ, ಕುದುರೆಗಳು ಕುದುರೆಗಳೊಡನೆ, ರಥಿಕರು ರಥಿಕರ ಜೊತೆಗೆ ದ್ವಂದ್ವಯುದ್ಧವನ್ನು ಮಾಡುತ್ತಿದ್ದರು. ರಾಜನೇ! ಈ ಸಂಕುಲಯುದ್ಧವು ಬಹಳ ಘೋರವಾಗಿತ್ತು, ವಿಚಿತ್ರವಾಗಿತ್ತು, ಭಯಾನಕವಾಗಿತ್ತು. ಮಹಾರಾಜನೇ! ಹೀಗೆ ಈ ಅನೇಕ ಯುದ್ಧಗಳು ಭಯವನ್ನು ಹುಟ್ಟಿಸುವಂತಿದ್ದವು.

ತೇ ಸಮಾಸಾದ್ಯ ಸಮರೇ ಪರಸ್ಪರಮರಿಂದಮಾಃ ।
ವಿವ್ಯಧುಶ್ಚೈವ ಜಘ್ನುಶ್ಚ ಸಮಾಭಾಷ್ಯ ಮಹಾಬಲಾಃ ॥೪೬॥

ರಣರಂಗದಲ್ಲಿ ಶತ್ರುಗಳನ್ನು ಮಣಿಸುವ ಮಹಾಬಲಶಾಲಿಗಳಾದ ಅವರು ಪರಸ್ಪರವಾಗಿ ಎದುರುಗೊಂಡು, ಚೆನ್ನಾಗಿ ಮಾತನಾಡುತ್ತಾ, ಒಬ್ಬರಿಗೊಬ್ಬರು ಹೊಡೆದುಕೊಂಡರು ಮತ್ತು ಒಬ್ಬರಿಗೊಬ್ಬರು ತಿವಿದುಕೊಂಡರು.

ತೇಷಾಂ ರಥಸಮುದ್ಭೂತಂ ರಜಸ್ತೀವ್ರಮದೃಶ್ಯತ ।
ಪ್ರವಾತೇನೋದ್ಧತಂ ರಾಜನ್ ಧಾವದ್ಭಿಶ್ಚಾಶ್ವಸಾದಿಭಿಃ ॥೪೭॥

ರಾಜನೇ! ಅವರ ರಥಗಳಿಂದಾಗಿ ಮೇಲೆದ್ದ ಧೂಳು ಬಹಳವಾಗಿ ಕಂಡುಬಂದಿತು. ಹಾಗೆಯೇ ಓಡುತ್ತಿರುವ ಕುದುರೆಸವಾರರಿಂದಾಗಿ ಎದ್ದ ಧೂಳು ಬೀಸುವ ಗಾಳಿಗೆ ಸಿಲುಕಿ ಎಲ್ಲೆಡೆ ವ್ಯಾಪಿಸಿಕೊಂಡಿತು.

ರಥನೇಮಿಸಮುದ್ಭೂತಂ ನಿಃಶ್ವಾಸೈಶ್ಚಾಪಿ ದಂತಿನಾಮ್ ।
ರಜಃಸಂಧ್ಯಾಭ್ರಕಲಿಲಂ ದಿವಾಕರಪಥಂ ಯಯೌ ॥೪೮॥

ರಥಗಳ ಚಕ್ರದಿಂದ ಎದ್ದ ಧೂಳು, ಆನೆಗಳ ಉಸಿರಾಟದಿಂದಾಗಿ ಎದ್ದ ಧೂಳು ಸಂಧ್ಯಾಕಾಲದ ಮೋಡದ ಜೊತೆಗೆ ಸೇರಿಕೊಂಡು ಸೂರ್ಯಮಾರ್ಗದ ತನಕ ಹೋಯಿತು.

ರಜಸಾ ತೇನ ಸಂಪೃಕ್ತೇ ಭಾಸ್ಕರೇ ನಿಷ್ಪ್ರಭೀಕೃತೇ ।
ಸಂಛಾದಿತಾऽಭವದ್ ಭೂಮಿಸ್ತೇ ಚ ಶೂರಾ ಮಹಾರಥಾಃ ॥೪೯॥

ಆ ಧೂಳಿನ ಸಂಪರ್ಕಕ್ಕೊಳಗಾದ ಸೂರ್ಯನು ತನ್ನ ಕಾಂತಿಯನ್ನು ಕಳೆದುಕೊಂಡನು. ಭೂಮಿಯೂ ಕೂಡ ಆ ಧೂಳಿನಿಂದ ಮುಚ್ಚಿಹೋಯಿತು. ಹಾಗೆಯೇ ಶೂರರಾದ ಮಹಾರಥರೂ ಕೂಡ ಧೂಳಿನಿಂದ ಮುಚ್ಚಲ್ಪಟ್ಟರು.

ಮುಹೂರ್ತಮಿವ ಸಂಪೃಕ್ತಂ ವಿರಜಸ್ಕಂ ಸಮಂತತಃ ।
ವೀರಶೋಣಿತಸಿಕ್ತಾಯಾಂ ಭೂಮೌ ಭರತಸತ್ತಮ ॥೫೦॥

ಭಾರತೋತ್ತಮನೇ! ಒಂದೇ ಮುಹೂರ್ತದಲ್ಲಿ ವೀರರ ರಕ್ತದಿಂದ ಸಿಕ್ತವಾದ ಭೂಮಿಯಲ್ಲಿ ಎಲ್ಲಾ ಕಡೆಯ ಧೂಳು ನಂದಿಹೋಯಿತು.

ಉಪಾಶಾಮ್ಯತ್ ತತಸ್ತೀವ್ರಂ ತದ್ರಜೋ ಘೋರದರ್ಶನಮ್ ।
ತತೋऽಪಶ್ಯಂ ಮಹಾರಾಜ ದ್ವಂದ್ವಯುದ್ಧಾನಿ ಭಾರತ ॥೫೧॥

ಪ್ರಗ್ರಹಂ ಚ ಯಥಾ ಶ್ರೇಷ್ಠಂ ಮಧ್ಯಾಹ್ನೇ ವೈ ಸುದಾರುಣೇ ।
ವರ್ಮಣಾಂ ತತ್ರ ರಾಜೇಂದ್ರ ವ್ಯದೃಶ್ಯಂತೋಜ್ಜ್ವಲತ್ಪ್ರಭಾಃ ॥೫೨॥

ಅನಂತರ ಅಲ್ಲಿತನಕ ಘೋರವಾಗಿ ಮೇಲೆದ್ದ ಆ ಧೂಳು ಉಪಶಮನಗೊಂಡಿತು. ಭರತಕುಲೋದ್ಭವನೇ! ಮಹಾರಾಜನೇ! ಧೂಳು ಹೋದ ಮೇಲೆ ಅಲ್ಲಿ ದಾರುಣವಾದ ಆ ಮಧ್ಯಾಹ್ನದಲ್ಲಿ ದ್ವಂದ್ವಯುದ್ಧವು ನಡೆಯುವುದನ್ನು ನೋಡಿದೆ. ಆ ದ್ವಂದ್ವಯುದ್ಧವು ಬಹಳ ಉತ್ತಮವಾಗಿತ್ತು. ರಾಜೇಂದ್ರನೇ! ಯೋಧರ ಕವಚಗಳ ಪ್ರಭೆಯು ಚೆನ್ನಾಗಿ ಕಾಣಿಸುತ್ತಿತ್ತು.

ಶಬ್ದಸ್ತು ತುಮುಲಸಂಖೇ ಶರಾಣಾಂ ಪತತಾಮಭೂತ್ ।
ಮಹಾವೇಣುವನಸ್ಯೇವ ದಹ್ಯಮಾನಸ್ಯ ಪರ್ವತೇ ॥೫೩॥

ಆ ಯುದ್ಧದಲ್ಲಿ ಬಾಣಗಳು ಬೀಳುತ್ತಿರುವಾಗ ಕೋಲಾಹಲಯುಕ್ತವಾದ ಶಬ್ದವು ಉಂಟಾಯಿತು. ಪರ್ವತದಲ್ಲಿ ಬಿದಿರಿನ ಕಾಡಿಗೆ ಬೆಂಕಿ ಬಿದ್ದಾಗ ಉಂಟಾಗುವ ಶಬ್ದದಂತೆ ಈ ಶಬ್ದವು ಕೇಳಿಬರುತ್ತಿತ್ತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ಮೂರನೆಯ ಅಧ್ಯಾಯ

ಕೌರವ ಸೇನೆಯ ಮಹಾರಥರ ವಧೆ. ಎರಡೂ ಸೇನೆಗಳ ಮಧ್ಯೆ ಎಲ್ಲೆ ಮೀರಿದ ಯುದ್ಧ. ಶಕುನಿಯ ಯುದ್ಧ ಮತ್ತು ಅವನ ಪರಾಜಯ.

ಸಂಜಯಃ

ವರ್ತಮಾನೇ ಮಹಾಯುದ್ಧೇ ಘೋರರೂಪೇ ಭಯಾನಕೇ ।
ಅಭಜ್ಯತ ಬಲಂ ತತ್ರ ತವ ಪುತ್ರಸ್ಯ ಪಾಂಡವೈಃ ॥೧॥

ಸಂಜಯ– ಆ ರಣರಂಗದಲ್ಲಿ ಭಯವನ್ನು ಉಂಟುಮಾಡುವ ಘೋರವಾದ ಯುದ್ಧ ನಡೆಯಿತು. ಅಲ್ಲಿ ನಿನ್ನ ಮಗ ದುರ್ಯೋಧನನ ಸೈನ್ಯವನ್ನು ಪಾಂಡವರು ನಾಶಮಾಡಿದರು.

ತಾಂಸ್ತು ಯತ್ನೇನ ಮಹತಾ ಸನ್ನಿವರ್ತ್ಯ ಮಹಾರಥಾನ್ ।
ಪುತ್ರಾಸ್ತೇ ಯೋಧಯಾಮಾಸುಃ ಪಾಂಡವಾನಾಮನೀಕಿನೀಮ್ ॥೨॥

ನಿನ್ನ ಮಕ್ಕಳು ಯುದ್ಧದಿಂದ ಪಲಾಯನಮಾಡುತ್ತಿದ್ದ ಮಹಾರಥ ಯೋಧರನ್ನು ಬಹಳ ಪ್ರಯತ್ನಪಟ್ಟು ಹಿಂತಿರುಗುವಂತೆ ಮಾಡಿ ಪಾಂಡವರ ಸೈನ್ಯದ ಜೊತೆಗೆ ಯುದ್ಧ ಮಾಡಿದರು.

ನಿವೃತ್ತಾಃ ಸಹಸಾ ಯೋಧಾಃ ತವ ಪುತ್ರಪ್ರಿಯೈಷಿಣಃ ।
ಸನ್ನಿವೃತ್ತೇಷು ತೇಷ್ವೇವ ಯುದ್ಧಮಾಸೀತ್ ಸುದಾರುಣಮ್ ॥೩॥

ದುರ್ಯೋಧನನಿಗೆ ಪ್ರಿಯವನ್ನೇ ಬಯಸುವ ಆ ಯೋಧರು ಕೂಡಲೇ ಹಿಂತಿರುಗಿ ಯುದ್ಧಕ್ಕೆ ಬಂದರು. ಅವರು ಮತ್ತೆ ಯುದ್ಧಕ್ಕೆ ಹಿಂತಿರುಗಿದಾಗ ಬಹಳ ದಾರುಣವಾದ ಯುದ್ಧವು ನಡೆಯಿತು.

ತಾವಕಾನಾಂ ಪರೇಷಾಂ ಚ ಸುರಾಸುರರಣೋಪಮಮ್ ।
ಪರೇಷಾಂ ತವ ಸೈನ್ಯೇ ವಾ ನಾಸ್ತಿ ಕಶ್ಚಿತ್ ಪರಾಙ್ಮುಖಃ ॥೪॥

ನಿನ್ನವರಿಗೂ ಮತ್ತು ಶತ್ರುಪಕ್ಷದವರಿಗೂ ನಡೆದ ಯುದ್ಧವು ದೇವಾಸುರರ ಯುದ್ಧದ ಹಾಗೆ ಇತ್ತು. ಎರಡೂ ಕಡೆಯ ಸೈನ್ಯದಲ್ಲಿಯೂ ಯಾವನು ಕೂಡ ಯುದ್ಧದಿಂದ ವಿಮುಖನಾಗಲಿಲ್ಲ.

ಅನುಮಾನೇನ ಯುಧ್ಯಂತೇ ಸಂಜ್ಞಾಭಿಶ್ಚ ಪರಸ್ಪರಮ್ ।
ತೇಷಾಂ ಕ್ಷಯೋ ಮಹಾನಾಸೀದ್ ಯುಧ್ಯತಾಮಿತರೇತರಮ್ ॥೫॥

ಅನುಮಾನದಿಂದ ಮತ್ತು ಹೆಸರು ಕರೆಯುವುದರಿಂದ ಪರಸ್ಪರವಾಗಿ ಗುರುತಿಸಿಕೊಂಡು, ಎರಡೂ ಪಕ್ಷದವರೂ ಯುದ್ಧ ಮಾಡುತ್ತಿದ್ದರು. ಪರಸ್ಪರವಾಗಿ ಯುದ್ಧ ಮಾಡುತ್ತಿದ್ದ ಎರಡೂ ಪಕ್ಷದವರೂ ತುಂಬ ನಾಶವನ್ನು ಹೊಂದಿದರು.

ತತೋ ಯುಧಿಷ್ಠಿರೋ ರಾಜಾ ಕ್ರೋಧೇನ ಮಹತಾ ವೃತಃ ।
ಜಿಗೀಷಮಾಣಃ ಸಂಗ್ರಾಮೇ ಧಾರ್ತರಾಷ್ಟ್ರಾನ್ ಸರಾಜಕಾನ್ ॥೬॥

ತ್ರಿಭಿಃ ಶಾರದ್ವತಂ ವಿದ್ಧ್ವಾ ರುಗ್ಮಪುಂಖೈಃ ಶಿಲಾಶಿತೈಃ ।
ಚತುರ್ಭಿರ್ನಿಜಘಾನಾಶ್ವಾನ್ ನಾರಾಚೈಃ ಕೃತವರ್ಮಣಃ ॥೭॥

ಅನಂತರ ಯುಧಿಷ್ಠಿರನು ಬಹಳ ಕೋಪದಿಂದ ಆವಿಷ್ಟನಾಗಿ, ಧೃತರಾಷ್ಟ್ರನ ಮಕ್ಕಳನ್ನೂ, ಅವರ ಕಡೆಯ ಬೇರೆ ರಾಜರನ್ನೂ ಗೆಲ್ಲುವ ಅಭಿಪ್ರಾಯವುಳ್ಳವನಾಗಿ ಕೃತವರ್ಮನ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸುತ್ತಾನೆ. ಆ ಬಾಣಗಳು ಸಾಣೆಗಲ್ಲಿನಲ್ಲಿ ಹರಿತಗೊಳಿಸಲ್ಪಟ್ಟಿದ್ದವು ಮತ್ತು ಬಂಗಾರದ ರೆಕ್ಕೆಗಳನ್ನು ಹೊಂದಿದ್ದವು.

ಮತ್ತೆ ಅಂತಹದ್ದೇ ನಾಲ್ಕು ಬಾಣಗಳನ್ನು ಪ್ರಯೋಗಿಸಿ ಕೃತವರ್ಮನ ನಾಲ್ಕು ಕುದುರೆಗಳನ್ನು ಹೊಡೆದುರುಳಿಸಿದನು.

ಅಶ್ವತ್ಥಾಮಾ ತು ಹಾರ್ದಿಕ್ಯಮಪೋವಾಹ ಯಶಸ್ವಿನಮ್ ॥೮॥

ಆಗ ಅಶ್ವತ್ಥಾಮನು ಯಶೋವಂತನಾದ ಕೃತವರ್ಮನನ್ನು ರಣರಂಗದಿಂದ ಹೊರಗೆ ಕರೆದೊಯ್ದನು.

ಅಥ ಶಾರದ್ವತೋಽಷ್ಟಾಭಿಃ ಪ್ರತ್ಯಯುಧ್ಯದ್ಯುಧಿಷ್ಠಿರಮ್ ॥೯॥

ಅನಂತರ ಪುನಃ ಕೃತವರ್ಮನು ಯುಧಿಷ್ಠಿರನನ್ನು ಎದುರಿಸಿದನು.

ತತೋ ದುರ್ಯೋಧನೋ ರಾಜಾ ರಥಾನ್ ಸಪ್ತಶತಾನ್ ರಣೇ ।
ಪ್ರೈಷಯದ್ಯತ್ರ ರಾಜಾಽಸೌ ಧರ್ಮಪುತ್ರೋ ಯುಧಿಷ್ಠಿರಃ ॥೧೦॥

ರಾಜನಾದ ದುರ್ಯೋಧನನು ರಣರಂಗದಲ್ಲಿ ಯುಧಿಷ್ಠಿರ ಇದ್ದ ಕಡೆಗೆ ಏಳುನೂರು ರಥಗಳನ್ನು ಯುದ್ಧಕ್ಕಾಗಿ ಕಳುಹಿಸಿದನು.

ತೇ ರಥಾ ರಥಿಭಿರ್ಯುಕ್ತಾ ಮನೋಮಾರುತರಂಹಸಃ ।
ಅಭ್ಯದ್ರವಂತ ಸಂಗ್ರಾಮೇ ಕೌಂತೇಯಸ್ಯ ರಥಂ ಪ್ರತಿ ॥೧೧॥

ದುರ್ಯೋಧನನು ಕಳುಹಿಸಿದ ರಥಗಳು ರಥಿಕರನ್ನು ಕೂಡಿಕೊಂಡು ಮನೋವೇಗ ಮತ್ತು ವಾಯುವೇಗದಿಂದ ಧರ್ಮರಾಜ ರಥದ ಬಳಿಗೆ ಧಾವಿಸಿ ಬಂದವು.

ತೇ ಸಮಂತಾನ್ಮಹಾರಾಜ ಪರಿವಾರ್ಯ ಯುಧಿಷ್ಠಿರಮ್ ।
ಅದೃಶ್ಯಂ ಸಾಯಕೈಶ್ಚಕ್ರುಃ ಮೇಘಾ ಇವ ದಿವಾಕರಮ್ ॥೧೨॥

ಆ ರಥವೇರಿ ಬಂದ ಯೋಧರು ಧರ್ಮರಾಜನನ್ನು ಸುತ್ತುವರಿದರು. ಬಾಣಗಳನ್ನು ಪ್ರಯೋಗಿಸಿ ಧರ್ಮರಾಜನು ಕಾಣಿಸದಂತೆ ಅವನನ್ನು ಮುಚ್ಚಿಹಾಕಿದರು. ಇದು ಮೋಡಗಳು ಸೂರ್ಯನನ್ನು ಮುಚ್ಚಿದಂತೆ ಆಗಿತ್ತು.

ತಂ ದೃಷ್ಟ್ವಾ ಧರ್ಮರಾಜಾನಂ ಕೌರವೈಸ್ತೈಃ ಸಮಾವೃತಮ್ ।
ನಾಮೃಷ್ಯಂತ ಸುಸಂಕ್ರುದ್ಧಾಃ ಶಿಖಂಡಿಪ್ರಮುಖಾ ರಥಾಃ ॥೧೩॥

ಕೌರವರು ಧರ್ಮರಾಜನನ್ನು ಹೀಗೆ ಸುತ್ತುವರಿದು ಆಕ್ರಮಿಸಿದ್ದನ್ನು ನೋಡಿ ಶಿಖಂಡಿ ಮೊದಲಾದ ಮಹಾರಥರು ಸಹಿಸಲಿಲ್ಲ.

ರಥೈರಶ್ವವರೈರ್ಯುಕ್ತೈಃ ಕಿಂಕಿಣೀಜಾಲಸಂವೃತೈಃ ।
ಆಜಗ್ಮುರಭಿರಕ್ಷಂತಃ ಕುಂತೀಪುತ್ರಂ ಯುಧಿಷ್ಠಿರಮ್ ॥೧೪॥

ಕಿಂಕಿಣೀ ಮಣಿಗಳಿಂದ ಅಲಂಕೃತವಾದ, ಉತ್ತಮ ಅಶ್ವಗಳನ್ನು ಹೊಂದಿದ ರಥಗಳನ್ನು ಏರಿ ಯುಧಿಷ್ಠಿರನನ್ನು ರಕ್ಷಿಸಲಿಕ್ಕಾಗಿ ಬೇಗನೆ ಅಲ್ಲಿಗೆ ಬಂದರು.

ತತಃ ಪ್ರವವೃತೇ ಘೋರಃ ಸಂಗ್ರಾಮಃ ಶೋಣಿತೋದಕಃ ।
ಪಾಂಡವಾನಾಂ ಕುರೂಣಾಂ ಚ ಯಮರಾಷ್ಟ್ರವಿವರ್ಧನಃ ॥೧೫॥

ಆಗ ಅಲ್ಲಿ ರಕ್ತದ ಪ್ರವಾಹವನ್ನೇ ಹರಿಸುವ ಘೋರವಾದ ಯುದ್ಧವು ನಡೆಯಿತು. ಪಾಂಡವರಿಗೂ ಕೌರವರಿಗೂ ನಡೆದ ಆ ಯುದ್ಧವು ಯಮನ ಪಟ್ಟಣದಲ್ಲಿ ಜೀವರ ಸಂಖ್ಯೆಯನ್ನು ಹೆಚ್ಚಿಸುತ್ತಿತ್ತು.

ರಥಾನ್ ಸಪ್ತದಶಾನ್ ಹತ್ವಾ ಕುರೂಣಾಮಾತತಾಯಿನಾಮ್ ।
ಪಾಂಡವಾಃ ಸಹ ಪಾಂಚಾಲ್ಯೈಃ ಪುನರೇವಾಭ್ಯವಾರಯನ್ ॥೧೬॥

ಪಾಂಡವರು ಪಾಂಚಾಲರ ಜೊತೆಗೆ ಸೇರಿ ಆತತಾಯಿಗಳಾದ ಕೌರವರ ಹದಿನೇಳು ರಥಗಳನ್ನು ನಾಶಮಾಡಿ, ಅದರಲ್ಲಿದ್ದ ಯೋಧರನ್ನು ಕೊಂದು ಅವರನ್ನು ತಡೆದರು.

ತತ್ರ ಯುದ್ಧಂ ಮಹಚ್ಚಾಸೀತ್ ತವ ಪುತ್ರಸ್ಯ ಪಾಂಡವೈಃ ।
ನ ಚ ತತ್ತಾದೃಶಂ ದೃಷ್ಟಂ ನೈವ ಚಾಪಿ ಪರಿಶ್ರುತಮ್ ॥೧೭॥

ಪಾಂಡವರಿಗೂ ನಿನ್ನ ಮಗನಿಗೂ ನಡೆದ ಯುದ್ಧವು ಎಷ್ಟು ದೊಡ್ಡದಾಗಿತ್ತೆಂದರೆ ಅಂತಹ ಯುದ್ಧವನ್ನು ಹಿಂದೆ ಯಾರೂ ನೋಡಿದ್ದೂ ಇಲ್ಲ, ಕೇಳಿದ್ದೂ ಇಲ್ಲ.

ವರ್ತಮಾನೇ ಮಹಾಯುದ್ಧೇ ನಿರ್ಮರ್ಯಾದೇ ಸಮಂತತಃ ।
ವಧ್ಯಮಾನೇಷು ಯೋಧೇಷು ತಾವಕೇಷ್ವಿತರೇಷು ಚ ॥೧೮॥

ನಿನದತ್ಸು ಚ ವೀರೇಷು ಶಂಖಿವರ್ಯೈಶ್ಚ ಪೂರಿತೈಃ ।
ಉತ್ಕೃಷ್ಟೈಃ ಸಿಂಹನಾದೈಶ್ಚ ಗರ್ಜಿತೇನ ಚ ಧನ್ವಿನಾಮ್ ॥೧೯॥

ಹೀಗೆ ಅಪರಿಮಿತವಾಗಿ ಎಲ್ಲಾ ಕಡೆಯಲ್ಲೂ ನಡೆಯುತ್ತಿದ್ದ ಆ ಮಹಾಯುದ್ಧದಲ್ಲಿ ನಿನ್ನಕಡೆಯ ಮತ್ತು ಪರಪಕ್ಷದ ಯೋಧರು ಸಾಯುತ್ತಿದ್ದರು. ವೀರರು ಗರ್ಜಿಸುತ್ತಾ, ಶಂಖನಾದವನ್ನು ಮಾಡುತ್ತಿರಲು ಎಲ್ಲಾ ಕಡೆಯೂ ಧನುರ್ಧಾರಿಗಳ ಸಿಂಹನಾದವು ತುಂಬಿಹೋಯಿತು.

ಅತಿಪ್ರವೃದ್ಧೇ ಯುದ್ಧೇ ಚ ಭಿದ್ಯಮಾನೇಷು ಮರ್ಮಸು ।
ವಧ್ಯಮಾನೇಷು ಯೋಧೇಷು ಜಯಗೃಧ್ನೇಷು ಭಾರತ ॥೨೦॥

ಭರತಕುಲಪ್ರಸೂತನೇ! ಮರ್ಮತಾಡನದಿಂದ ಕೂಡಿದ ಬಹಳವಾಗಿ ವೃದ್ಧಿಸಿದ ಆ ಯುದ್ಧದಲ್ಲಿ ಜಯವನ್ನೇ ಬಯಸಿ ಹೋರಾಡುತ್ತಿದ್ದ ಯೋಧರು ಸಾಯುತ್ತಿದ್ದರು.

ಸಂಹಾರೇ ಸರ್ವತೋ ಜಾತೇ ಪೃಥಿವ್ಯಾಂ ಘೋರಸಂಭವೇ ।
ಬಹ್ವೀನಾಮುತ್ತಮಸ್ತ್ರೀಣಾಂ ಸೀಮಂತೋದ್ಧರಣೇ ಕೃತೇ ॥೨೧॥

ಘೋರವಾದ ಯುದ್ಧದಿಂದಾಗಿ ಭೂಮಿಯಲ್ಲಿ ಅನೇಕರು ಸಾಯುತ್ತಿರಲು ಅವರ ಪತ್ನಿಯರಾದ ಉತ್ತಮಸ್ತ್ರೀಯರು ತಮ್ಮ ಕೇಶವಿನ್ಯಾಸವನ್ನು ಕಳೆದುಕೊಂಡು ವಿಧವೆಯರಾಗುತ್ತಿದ್ದರು.

ನಿರ್ಮರ್ಯಾದೇ ಮಹಾಯುದ್ಧೇ ವರ್ತಮಾನೇ ಸುದಾರುಣೇ ।
ಪ್ರಾದುರಾಸನ್ ವಿನಾಶಾಯ ತದೋತ್ಪಾತಾಃ ಸುದಾರುಣಾಃ ॥೨೨॥

ಹೀಗೆ ಮಹಾಯುದ್ಧವು ಎಲ್ಲೆಮೀರಿ ನಡೆಯುತ್ತಿರಲು ಜಗತ್ತಿಗೇ ವಿನಾಶವನ್ನು ಸೂಚಿಸುವ ದುಃಖಕರವಾದ ಶಕುನಗಳು ಕಾಣಿಸಿಕೊಂಡವು.

ಚಚಾಲ ಶಬ್ದಂ ಕುರ್ವಾಣಾ ಸಪರ್ವತವನಾ ಮಹೀ ।
ಸದಂಡಾಶ್ಚೋಲ್ಮುಕಾ ರಾಜನ್ ನಿಪತಂತಿ ಸಮಂತತಃ ॥೨೩॥

ಪರ್ವತ, ಕಾಡುಗಳಿಂದ ಸಹಿತವಾದ ಭೂಮಿಯು ಜೋರಾದ ಶಬ್ದದೊಂದಿಗೆ ಕಂಪಿಸಿತು. ರಾಜನೇ! ದಂಡಸಹಿತವಾದ ಉಲ್ಕೆಗಳು ಎಲ್ಲಾ ಕಡೆ ಬೀಳತೊಡಗಿದವು.

ಉಲ್ಕಾಃ ಪೇತುರ್ದಿವೋ ಭೂಮಾವಾಹತ್ಯ ರವಿಮಂಡಲಮ್ ।
ವಿಷ್ವಗ್ವಾತಾಃ ಪ್ರಾದುರಾಸನ್ ನೀಚೈಃ ಶರ್ಕರವರ್ಷಿಣಃ ॥೨೪॥

ಆಕಾಶದಿಂದ ಸೂರ್ಯಮಂಡಲಕ್ಕೆ ತಾಗಿಕೊಂಡು ಉಲ್ಕೆಗಳು ಭೂಮಿಗೆ ಅಪ್ಪಳಿಸುತ್ತಿದ್ದವು. ಕೆಳಗಿನಿಂದ ಮರಳನ್ನು ಎರಚುತ್ತಾ ಸುಂಟರಗಾಳಿಯು ಎದ್ದಿತು.

ಅಶ್ರೂಣಿ ಮುಮುಚುರ್ನಾಗಾಃ ವೇಪಥುಶ್ಚಾವಿಶದ್ ಭೃಶಮ್ ॥೨೫॥

ಆನೆಗಳು ಕಣ್ಣೀರು ಸುರಿಸಿದವು. ಮೈಯ್ಯಲ್ಲೆಲ್ಲಾ ನಡುಕವುಂಟಾಯಿತು.

ಏತಾನ್ ಘೋರಾನನಾದೃತ್ಯ ಸಮುತ್ಪಾತಾನ್ ಸುದಾರುಣಾನ್ ।
ಪುನರ್ಯುದ್ಧಾಯ ಸಮ್ಮಂತ್ರ್ಯ ಕ್ಷತ್ರಿಯಾಸ್ತಸ್ಥುರವ್ಯಥಾಃ ॥೨೬॥

ರಮಣೀಯೇ ಕುರುಕ್ಷೇತ್ರೇ ಪುಣ್ಯೇ ಸ್ವರ್ಗಯಿಯಾಸವಃ ।
ತತೋ ಗಾಂಧಾರರಾಜಸ್ಯ ಪುತ್ರಃ ಶಕುನಿರಬ್ರವೀತ್ ॥೨೭॥

ಇಷ್ಟೆಲ್ಲಾ ಘೋರವಾದ ಶಕುನಗಳು ಕಾಣಿಸುತ್ತಿದ್ದರೂ ಅವುಗಳನ್ನು ಕಡೆಗಣಿಸಿ ಕ್ಷತ್ರಿಯವೀರರು ಯಾವುದೇ ದುಃಖಕ್ಕೆ ಒಳಗಾಗದೇ ಮತ್ತೆ ಯುದ್ಧಕ್ಕೆ ಆಹ್ವಾನಿಸುತ್ತಾ ನಿಂತುಕೊಂಡರು. ಅವರೆಲ್ಲರೂ ಸುಂದರವಾದ ಹಾಗೂ ಪುಣ್ಯಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಹೋರಾಡಿ ಸ್ವರ್ಗಕ್ಕೆ ಹೋಗುವ ಇಚ್ಛೆಯುಳ್ಳವರಾಗಿದ್ದರು. ಆಗ ಗಾಂಧಾರದೇಶದ ರಾಜಪುತ್ರನಾದ ಶಕುನಿಯು ಹೀಗೆ ಹೇಳುತ್ತಾನೆ.

ಶಕುನಿಃ

ಯುಧ್ಯಧ್ವಮಗ್ರತೋ ಯಾವತ್ ಪೃಷ್ಠತೋ ಹನ್ಮಿ ಪಾಂಡವಾನ್ ॥೨೮॥

ಶಕುನಿ– ನೀವೆಲ್ಲಾ ಮುಂದುಗಡೆಯಿಂದ ಯುದ್ಧವನ್ನು ಮಾಡುತ್ತಿರಿ. ನಾನು ಹಿಂದುಗಡೆಯಿಂದ ಪಾಂಡವರನ್ನು ಕೊಲ್ಲುತ್ತೇನೆ.

ಸಂಜಯಃ

ತತೋऽಭ್ಯಧಾವಂಸ್ತ್ವರಿತಾ ಮದ್ರಯೋಧಾಸ್ತರಸ್ವಿನಃ ।
ಹೃಷ್ಟಾಃ ಕಿಲಕಿಲಶಬ್ದಾನ್ ಅಕುರ್ವನ್ನಪರೇ ತಥಾ ॥೨೯॥

ಆಗ ಬಹಳ ವೇಗವುಳ್ಳ ಮದ್ರದೇಶದ ಯೋಧರು ಕೂಡಲೇ ಕಿಲಕಿಲಶಬ್ದವನ್ನು ಮಾಡುತ್ತಾ ಬರುತ್ತಾರೆ. ಹಾಗೆಯೇ ಬೇರೆ ಯೋಧರೂ ಬರುತ್ತಾರೆ.

ತೇऽಸ್ಮಾಂಸ್ತು ಪುನರಾಸಾದ್ಯ ಲಬ್ಧಲಕ್ಷಾ ದುರಾಸದಾಃ ।
ಶರಾಸನಾನಿ ಧೂನ್ವಾನಾಃ ಶರವರ್ಷೈರವಾಕಿರನ್ ॥೩೦॥

ಎದುರಿಸಲು ಅಶಕ್ಯರಾದ, ಗುರಿಯಿಟ್ಟು ಯುದ್ಧಮಾಡುವುದರಲ್ಲಿ ನಿಪುಣರಾದ ಪಾಂಡವರು ಮತ್ತೆ ನಮ್ಮ ಮೇಲೆ ಆಕ್ರಮಣವನ್ನು ಮಾಡಿ, ಬಿಲ್ಲುಗಳನ್ನು ಠೇಂಕರಿಸುತ್ತಾ ನಮ್ಮವರ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ತತೋ ಹತಂ ಪರೈಸ್ತತ್ರ ಮದ್ರರಾಜಬಲಂ ತದಾ ।
ದುರ್ಯೋಧನಬಲಂ ದೃಷ್ಟ್ವಾ ಪುನರಾಸೀತ್ ಪರಾಙ್ಮುಖಮ್ ॥೩೧॥

ಆಗ ಪಾಂಡವರು ಮದ್ರಸೈನ್ಯವನ್ನು ನಾಶಮಾಡಿದ್ದನ್ನು ನೋಡಿದ ದುರ್ಯೋಧನನ ಸೈನ್ಯವು ಪುನಃ ಯುದ್ಧದಿಂದ ಹಿಮ್ಮೆಟ್ಟಿತು.

ಗಾಂಧಾರರಾಜಸ್ತು ಪುನರ್ವಾಕ್ಯಮಾಹ ತತೋ ಬಲೀ ॥೩೨॥

ಅನಂತರ ಬಲಶಾಲಿಯಾದ ಶಕುನಿಯು ಈ ವಾಕ್ಯವನ್ನು ಹೇಳುತ್ತಾನೆ.

ಶಕುನಿಃ

ನಿವರ್ತಧ್ವಮಧರ್ಮಜ್ಞಾ ಯುಧ್ಯಧ್ವಂ ಕಿಂ ದ್ರುತೇನ ವಃ ॥೩೩॥

ಶಕುನಿ– ಯುದ್ಧಧರ್ಮವನ್ನು ತಿಳಿಯದ ಯೋಧರೇ! ಯುದ್ಧಕ್ಕೆ ಬೆನ್ನುಹಾಕಿ ಓಡುವುದರಿಂದ ಏನು ಪ್ರಯೋಜನ? ಯುದ್ಧಕ್ಕೆ ಮರಳಿ ಯುದ್ಧಮಾಡಿರಿ.

ಸಂಜಯಃ

ಅನೀಕಂ ದಶಸಾಹಸ್ರಮಶ್ವಾನಾಂ ಭರತರ್ಷಭ ।
ಆಸೀದ್ ಗಾಂಧಾರರಾಜಸ್ಯ ವಿಮಲಪ್ರಾಸಯೋಧಿನಾಮ್ ॥೩೪॥

ಸಂಜಯ– ಭರತಕುಲಶ್ರೇಷ್ಠನೇ! ಶಕುನಿಯ ಸೈನ್ಯದಲ್ಲಿ ಶುಭ್ರವಾದ ಪ್ರಾಸಾಯುಧದಿಂದ ಯುದ್ಧಮಾಡುವ ಹತ್ತುಸಾವಿರ ಅಶ್ವಾರೋಹಿಗಳು ಇದ್ದರು.

ಬಲೇನ ತೇನ ವಿಕ್ರಮ್ಯ ವರ್ತಮಾನೇ ಜನಕ್ಷಯೇ ।
ಪೃಷ್ಠತಃ ಪಾಂಡವಾನೀಕಮಭ್ಯಘ್ನನ್ ನಿಶಿತೈಃ ಶರೈಃ ॥೩೫॥

ಆ ಸೈನ್ಯವು ಯುದ್ಧಮಾಡುತ್ತಾ ಯೋಧರನ್ನು ನಾಶಮಾಡುತ್ತಿರುವಾಗ ಹಿಂಭಾಗದಿಂದ ಶಕುನಿಯು ಹರಿತವಾದ ಬಾಣಗಳಿಂದ ಪಾಂಡವರ ಸೈನ್ಯವನ್ನು ನಾಶಮಾಡಿದನು.

ತದಭ್ರಮಿವ ವಾತೇನ ಕ್ಷಿಪ್ಯಮಾಣಂ ಸಮಂತತಃ ।
ಅಭಜ್ಯತ ಮಹಾರಾಜ ಪಾಂಡವಾನಾಂ ಮಹದ್ಬಲಮ್ ॥೩೬॥

ಮಹಾರಾಜನೇ! ಗಾಳಿಯ ಹೊಡೆತಕ್ಕೆ ಸಿಲುಕಿ ನುಚ್ಚುನೂರಾದ ಮೋಡದಂತೆ ಪಾಂಡವರ ಮಹಾಸೇನೆಯೂ ಛಿದ್ರ-ವಿಚ್ಛಿದ್ರವಾಯಿತು.

ತತೋ ಯುಧಿಷ್ಠಿರಃ ಪ್ರೇಕ್ಷ್ಯ ಭಗ್ನಂ ಸ್ವಬಲಮಂತಿಕಾತ್ ।
ಅಭ್ಯಚೋದಯದವ್ಯಗ್ರಃ ಸಹದೇವಂ ಮಹಾಬಲಮ್ ॥೩೭॥

ಆಗ ಧರ್ಮರಾಜನು ತನ್ನ ಸೈನ್ಯವು ನಾಶವಾಗುವುದನ್ನು ಹತ್ತಿರದಿಂದಲೇ ನೋಡಿ ತಾನು ಯಾವುದೇ ಕಳವಳಕ್ಕೆ ಒಳಗಾಗದೆ ಮಹಾಬಲಶಾಲಿಯಾದ ಸಹದೇವನಿಗೆ ಹೀಗೆ ಆದೇಶಿಸುತ್ತಾನೆ.

ಯುಧಿಷ್ಠಿರಃ

ಅಸೌ ಸುಬಲಪುತ್ರೋ ನೋ ಜಘ್ನೇ ಪಶ್ಯ ದಂಸಿತಃ ।
ಸೇನಾಂ ನಿಷೂದಯತ್ಯೇಷ ಪಶ್ಯ ಪಾಂಡವ ದುರ್ಮತಿಮ್ ॥೩೮॥

ಯುಧಿಷ್ಠಿರ– ಸಹದೇವನೇ! ಈ ಶಕುನಿಯು ಕವಚಧಾರಿಯಾಗಿ ನಮ್ಮ ಹಿಂಭಾಗದಲ್ಲಿ ಸೈನ್ಯವನ್ನು ನಾಶಮಾಡುತ್ತಿದ್ದಾನೆ. ಇಂತಹ ಕಪಟಿಯನ್ನು ನೋಡು.

ಗಚ್ಛ ತ್ವಂ ದ್ರೌಪದೇಯೈಶ್ಚ ಶಕುನಿಂ ಸೌಬಲಂ ಜಹಿ ॥೩೯॥

ನೀನು ದ್ರೌಪದಿಯ ಪುತ್ರರೊಡನೆ ಸೇರಿಕೊಂಡು ಆ ಶಕುನಿಯನ್ನು ಕೊಲ್ಲು.

ರಥಾನೀಕೇನ ಯುದ್ಧ್ಯೇಽಹಂ ಪಾಂಚಾಲೈಃ ಸಹಿತೋಽನಘ ।
ಗಚ್ಛಂತು ಕುಂಜರಾಃ ಸರ್ವೇ ವಾಜಿನಶ್ಚ ಮಹಾಜವಾಃ ॥೪೦॥

ಪಾದಾತಾಶ್ಚ ತ್ರಿಸಾಹಸ್ರಾಃ ಶಕುನಿಂ ತೈರ್ವೃತೋ ಜಹಿ ॥೪೧॥

ದೋಷರಹಿತನೇ! ನಾನು ಪಾಂಚಾಲರನ್ನು ಕೂಡಿಕೊಂಡು ರಥಸೈನ್ಯಮೂಲಕ ಯುದ್ಧಮಾಡುತ್ತೇನೆ. ಎಲ್ಲಾ ಆನೆಗಳು, ಎಲ್ಲಾ ವೇಗಗಾಮಿಗಳಾದ ಕುದುರೆಗಳು, ಮೂರು ಸಾವಿರ ಪದಾತಿಗಳೂ ಶಕುನಿಯ ಕಡೆಗೆ ಹೋಗಲಿ. ಅವರು ಶಕುನಿಯನ್ನು ಸುತ್ತಲೂ ಆಕ್ರಮಿಸಿದಾಗ ನೀನು ಶಕುನಿಯನ್ನು ಕೊಲ್ಲು.

ಸಂಜಯಃ

ತತೋ ಗಜಾಃ ಸಪ್ತಶತಂ ಚಾಪಪಾಣಿಭಿರಾವೃತಾಃ ।
ಪಂಚ ಚಾಶ್ವಸಹಸ್ರಾಣಿ ಸಹದೇವಶ್ಚ ವೀರ್ಯವಾನ್ ॥೪೨॥

ಪಾದಾತಾಶ್ಚ ತ್ರಿಸಾಹಸ್ರಾ ದ್ರೌಪದೇಯಾಶ್ಚ ಸರ್ವಶಃ ।
ರಣೇ ವಾऽಭ್ಯದ್ರವಂತೇ ತು ಶಕುನಿಂ ಯುದ್ಧದುರ್ಮದಮ್ ॥೪೩॥

ಸಂಜಯ– ಅನಂತರ ಧನುರ್ಧಾರಿಗಳನ್ನು ಹೊಂದಿರುವ ಏಳುನೂರು ಆನೆಗಳು, ಐದುಸಾವಿರ ಕುದುರೆಗಳು, ವೀರನಾದ ಸಹದೇವನು, ಮೂರುಸಾವಿರ ಪದಾತಿಗಳು, ದ್ರೌಪದಿಯ ಎಲ್ಲಾ ಮಕ್ಕಳೂ ಯುದ್ಧಮದವನ್ನು ಏರಿಸಿಕೊಂಡಿರುವ ಶಕುನಿಯನ್ನು ಎದುರಿಸಿದರು.

ತತಸ್ತು ಸೌಬಲೋ ರಾಜನ್ನಭ್ಯತಿಕ್ರಮ್ಯ ಪಾಂಡವಾನ್ ।
ಜಘಾನ ಪೃಷ್ಠತಃ ಸೇನಾಂ ಜಯಗೃಧ್ನುಃ ಪ್ರತಾಪವಾನ್ ॥೪೪॥

ರಾಜನೇ! ಜಯದ ಮೇಲೆ ಕಣ್ಣಿಟ್ಟಿರುವ ಮಹಾಪ್ರತಾಪಿ ಶಕುನಿಯು ಪಾಂಡವರನ್ನೆಲ್ಲಾ ಮೀರಿ ಹಿಂಭಾಗದಿಂದ ಸೈನ್ಯವನ್ನು ನಾಶಮಾಡಿದನು.

ಅಶ್ವಾರೋಹಾಃ ಸಮಾರಬ್ಧಾಃ ಪಾಂಡವಾನಾಂ ತರಸ್ವಿನಾಮ್ ।
ಪ್ರಾವಿಶನ್ ಸೌಬಲಾನೀಕಮಭ್ಯತಿಕ್ರಮ್ಯ ತಾನ್ ರಥಾನ್ ॥೪೫॥

ಯುದ್ಧಸನ್ನದ್ಧರಾದ ವೇಗಶಾಲಿಗಳಾದ ಪಾಂಡವರ ಅಶ್ವಾರೋಹಿಗಳು ಶಕುನಿಯ ರಥಗಳನ್ನೂ ಮೀರಿ ಅವನ ಸೈನ್ಯವನ್ನು ಪ್ರವೇಶಿಸಿದವು.

ತೇ ತತ್ರ ಸಾದಿನಃ ಶೂರಾಃ ಸೌಬಲಸ್ಯ ಮಹದ್ಬಲಮ್ ।
ಗಜಮಧ್ಯೇ ವ್ಯವಸ್ಥಾಪ್ಯ ಶರವರ್ಷೈರವಾಕಿರನ್ ॥೪೬॥

ಆ ಅಶ್ವಾರೋಹಿ ಶೂರರು ಶಕುನಿಯ ದೊಡ್ಡದಾದ ಸೇನೆಯನ್ನು ಆನೆಗಳ ಮಧ್ಯೆ ನಿಲ್ಲಿಸಿ ಅದರ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ತದುದ್ಯತಗದಾಪ್ರಾಸಂ ಮಹಾಪುರುಷಸೇವಿತಮ್ ।
ಪ್ರಾವರ್ತತ ಮಹದ್ಯುದ್ಧಂ ರಾಜನ್ ದುರ್ಮಂತ್ರಿತೇ ತವ ॥೪೭॥

ರಾಜನೇ! ನಿನ್ನ ದುರಾಲೋಚನೆಯಿಂದ ನಡೆದ ಯುದ್ಧದಲ್ಲಿ ದೊಡ್ಡದಾದ ಕಾದಾಟವು ಏರ್ಪಟ್ಟಿತ್ತು. ಮಹಾಯೋಧರು ಗದಾಯುಧ, ಪ್ರಾಸಾಯುಧಗಳನ್ನು ಎತ್ತಿ ಯುದ್ಧಮಾಡುತ್ತಿದ್ದರು.

ಉಪಾರಮಂತ ನಿಃಶಬ್ದಾಃ ಪ್ರೇಕ್ಷಕಾ ರಥಿನೋಽಭವನ್ ।
ನ ಹಿ ಸ್ವೇಷಾಂ ಪರೇಷಾಂ ಚ ವಿಶೇಷಃ ಸಮದೃಶ್ಯತ ॥೪೮॥

ಆಗ ಶಕುನಿಯ ಸೈನ್ಯದ ರಥಿಕರು ನಿಶ್ಶಬ್ದರಾಗಿ ಯುದ್ಧವನ್ನು ನಿಲ್ಲಿಸಿ ಮೂಕಪ್ರೇಕ್ಷಕರಾದರು. ನಮ್ಮವರಿಗೂ ಶತ್ರುಗಳಿಗೂ ಪರಾಕ್ರಮದ ವಿಷಯದಲ್ಲಿ ಯಾವುದೇ ವ್ಯತ್ಯಾಸವು ಕಾಣಿಸಲಿಲ್ಲ.

ಶೂರಬಾಹುವಿಸೃಷ್ಟಾನಾಂ ಶರಾಣಾಂ ಭರತರ್ಷಭ ।
ಜ್ಯೋತಿಷಾಮಿವ ಸಂಪಾತಮಪಶ್ಯನ್ ಕುರುಪಾಂಡವಾಃ ॥೪೯॥

ಭಾರತೋತ್ತಮನೇ! ಶೂರರು ಪ್ರಯೋಗಿಸಿದ ಬಾಣಗಳು ನಕ್ಷತ್ರಗಳ ಹಾಗೆ ಬೀಳುತ್ತಿರುವುದನ್ನು ಕುರುಗಳು ಮತ್ತು ಪಾಂಡವರು ನೋಡಿದರು.

ಶಕ್ತಿಭಿರ್ವಿಮಲಾಭಿಶ್ಚ ತತ್ರ ತತ್ರ ವಿಶಾಂಪತೇ ।
ಸಂಪತಂತೀಭಿರಾಕಾಶಮಾವೃತಂ ಬಹ್ವಶೋಭತ ॥೫೦॥

ರಾಜನೇ! ಪರಿಶುಭ್ರವಾದ ಶಕ್ತ್ಯಾಯುಧಗಳು ರಣರಂಗದಲ್ಲಿ ಅಲ್ಲಲ್ಲಿ ಬೀಳುತ್ತಿರುವಾಗ ಆಕಾಶವು ಬಹಳವಾಗಿ ಶೋಭಿಸಿತು.

ಪ್ರಾಸಾನಾಂ ಪತತಾಂ ರಾಜನ್ ರೂಪಮಾಸೀತ್ ಸಮಂತತಃ ।
ಶಲಭಾನಾಮಿವಾಕಾಶೇ ತದಾ ಭರತಸತ್ತಮ ॥೫೧॥

ರಾಜನೇ! ಭರತೋತ್ತಮನೇ! ಪ್ರಾಸಾಯುಧಗಳು ಆಕಾಶದಲ್ಲಿ ಎಲ್ಲಾ ಕಡೆಯಿಂದ ಬೀಳುತ್ತಿರುವುದನ್ನು ನೋಡಿದರೆ ಶಲಭಗಳು ಬೀಳುತ್ತಿರುವಂತೆ ಕಾಣಿಸುತ್ತಿತ್ತು.

ರುಧಿರೋಕ್ಷಿತಸರ್ವಾಂಗೈರ್ವಿಪ್ರವಿದ್ಧೈರ್ನಿಯಂತೃಭಿಃ ।
ಹಯಾಃ ಪರಿಪತಂತಿ ಸ್ಮ ಶತಶೋಽಥ ಸಹಸ್ರಶಃ ॥೫೨॥

ಕುದುರೆಗಳ ಮೈಯೆಲ್ಲಾ ಗಾಯವಾಗಿತ್ತು. ಅಶ್ವಾರೋಹಿಗಳು ಬಲವಾಗಿ ಅವುಗಳನ್ನು ನಿಯಂತ್ರಿಸುತ್ತಿದ್ದರು. ಇಂತಹ ನೂರಾರು ಸಾವಿರಾರು ಕುದುರೆಗಳು ದುಃಖಪಡುತ್ತಿದ್ದವು.

ಅನ್ಯೋನ್ಯಂ ಪ್ರತಿವಿದ್ಧಾಶ್ಚ ಸಮಾಸಾದ್ಯ ಪರಸ್ಪರಮ್ ।
ಪರಿಕ್ಷತಾಃ ಸ್ಮ ದೃಶ್ಯಂತೇ ವಮಂತೋ ರುಧಿರಂ ಮುಖೈಃ ॥೫೩॥

ಪರಸ್ಪರವಾಗಿ ಒಂದರ ಮೇಲೊಂದು ಹೊಡೆದಾಡಿದ ಕುದುರೆಗಳು ಗಾಯಗೊಂಡು ಬಾಯಿಯಿಂದ ರಕ್ತವನ್ನು ವಾಂತಿಮಾಡುತ್ತಿದ್ದವು.

ತತೋಽಭವತ್ ತಮೋ ಘೋರಂ ಸೈನ್ಯೇನ ರಜಸಾ ವೃತಮ್ ।
ತಾನಪಾಕ್ರಮತೋಽದ್ರಾಕ್ಷಂ ತಸ್ಮಾದ್ದೇಶಾದರಿಂದಮಾನ್ ॥೫೪॥

ಆಗ ಸೈನ್ಯವು ಧೂಳಿನಿಂದ ಆವೃತಗೊಂಡು ಭಯಂಕರವಾದ ಕತ್ತಲೆಯು ಉಂಟಾಯಿತು. ಅಲ್ಲಿ ಆಕ್ರಮಿಸುತ್ತಿರುವ ಶತ್ರುಸಂಹಾರಕರಾದ ಯೋಧರನ್ನು ನೋಡಿದೆನು.

ಅಶ್ವಾನ್ ಗಜಾನ್ ಮನುಷ್ಯಾಂಶ್ಚ ರಜಸಾ ಸಂವೃತೇ ಸತಿ ।
ಭೂಮೌ ನಿಪತಿತಾಶ್ಚಾನ್ಯೇ ವಮಂತೋ ರುಧಿರಂ ಬಹು ॥೫೫॥

ಕುದುರೆಗಳನ್ನು, ಆನೆಗಳನ್ನು, ಪದಾತಿಗಳನ್ನು ಧೂಳು ಆವರಿಸಿ ಮುಚ್ಚಿಹಾಕಿದಾಗ ಉಳಿದವರು ರಕ್ತವನ್ನು ಕಾರುತ್ತಾ ನೆಲಕ್ಕುರುಳಿದರು.

ಕೇಶಾಕೇಶಿ ಸಮಾಲಗ್ನಾ ನ ಶೇಕುಶ್ಚೇಷ್ಟಿತುಂ ನರಾಃ ।
ಅನ್ಯೋನ್ಯಮಶ್ವಪೃಷ್ಠೇಭ್ಯೋ ವಿಕರ್ಷಂತೋ ಮಹಾಬಲಾಃ ॥೫೬॥

ಯೋಧರು ಪರಸ್ಪರವಾಗಿ ಜುಟ್ಟನ್ನು ಹಿಡಿದುಕೊಂಡು ಎಳೆದಾಡಿದಾಗ ಯಾರಿಗೂ ಅಲ್ಲಾಡಲೂ ಸಾಧ್ಯವಾಗಲಿಲ್ಲ. ಮಹಾಬಲಶಾಲಿಗಳು ಪರಸ್ಪರವಾಗಿ ಒಬ್ಬರನ್ನೊಬ್ಬರು ಕುದುರೆಯಿಂದ ಕೆಳಗೆ ಎಳೆಯುತ್ತಿದ್ದರು.

ಮಲ್ಲಾ ಇವ ಸಮಾಸಕ್ತಾ ನಿಜಘ್ನುರಿತರೇತರಮ್ ।
ಅಶ್ವಾಶ್ಚ ವ್ಯಪಕೃಷ್ಯಂತ ಬಹವೋಽತ್ರ ಗತಾಸವಃ ॥೫೭॥

ಪರಸ್ಪರವಾಗಿ ಮಲ್ಲರ ಹಾಗೆ ಹೊಡೆದಾಡಿಕೊಂಡರು. ಅನೇಕ ಕುದುರೆಗಳು ಪ್ರಾಣ ಕಳೆದುಕೊಂಡು ಎಳೆದು ಹಾಕಲ್ಪಟ್ಟವು.

ಭೂಮೌ ನಿಪತಿತಾಶ್ಚಾನ್ಯೇ ಬಹವೋಽಥ ಜಿಗೀಷವಃ ।
ತತ್ರ ತತ್ರ ವ್ಯದೃಶ್ಯಂತ ಪುರುಷಾಃ ಶೂರಮಾನಿನಃ ॥೫೮॥

ಜಯದ ಬಯಕೆಯನ್ನು ಹೊಂದಿದ ಅನೇಕರು ಪ್ರಾಣಬಿಟ್ಟು ಭೂಮಿಯಲ್ಲಿ ಬಿದ್ದರು. ಅವರೆಲ್ಲರೂ ತಮ್ಮನ್ನು ತಾವೇ ಮಹಾಶೂರರೆಂದು ತಿಳಿದುಕೊಂಡಿದ್ದರು.

ರಕ್ತೋಕ್ಷಿತೈಶ್ಛಿನ್ನಭುಜೈಃ ಅಪಕೃಷ್ಟಶಿರೋಧರೈಃ ।
ವ್ಯದೃಶ್ಯತ ಮಹೀ ಕೀರ್ಣಾ ಶತಶೋಽಥ ಸಹಸ್ರಶಃ ॥೫೯॥

ಕೆಲವು ದೇಹಗಳು ರಕ್ತಸಿಕ್ತವಾಗಿದ್ದವು. ಕೆಲವದರ ಕೈಗಳು ಕಡಿದುಹೋಗಿದ್ದವು. ಕೆಲವದರ ಕುತ್ತಿಗೆ ಸೀಳಲ್ಪಟ್ಟಿತ್ತು. ಇಂತಹ ನೂರಾರು ಸಾವಿರಾರು ದೇಹಗಳಿಂದ ರಣಭೂಮಿಯು ತುಂಬಿಹೋಗಿತ್ತು.

ಅನ್ಯೋನ್ಯಂ ಪ್ರತಿವಿದ್ಧಾಶ್ಚ ಸಮಾಸಾದ್ಯ ಪರಸ್ಪರಮ್ ॥೬೦॥

ಯೋಧರು ಪರಸ್ಪರ ಒಬ್ಬರನ್ನೊಬ್ಬರು ಹೊಡೆದುಕೊಳ್ಳುತ್ತಿದ್ದರು.

ದೂರಂ ನ ಶಕ್ಯಂ ತತ್ರಾಸೀದ್ ಗಂತುಮಶ್ವೇನ ಕೇನಚಿತ್ ।
ಸಾರೋಹೈರ್ನಿಹತೈರಶ್ವೈರಾವೃತೇ ವಸುಧಾತಳೇ ॥೬೧॥

ಭೂಮಿಯ ಮೇಲೆ ಆರೋಹಿಗಳ ಜೊತೆಗೆನೇ ಕುದುರೆಗಳು ಸತ್ತು ರಾಶಿ ಬಿದ್ದ ಕಾರಣದಿಂದ ಯಾವುದೇ ಕುದುರೆಗಳಿಗೂ ಸ್ವಲ್ಪದೂರ ಹೋಗಲೂ ಸಾಧ್ಯವಾಗುತ್ತಿರಲಿಲ್ಲ.

ರುಧಿರೋಕ್ಷಿತಸರ್ವಾಂಗೈರಾತ್ತಶಸ್ತ್ರೈರುದಾಯುಧೈಃ ।
ನಾನಾಪ್ರಹರಣೈಘೋರೈಃ ಪರಸ್ಪರವಧೈಷಿಭಿಃ ॥೬೨॥

ಸುಸನ್ನಿವಿಷ್ಟೇ ಸಂಗ್ರಾಮೇ ಹತಭೂಯಿಷ್ಠಸೈನಿಕೇ ।
ಸ ಮುಹೂರ್ತಂ ತದಾ ಯುದ್ಧ್ವಾ ಸರ್ವಯೋಧವಧೇ ಕೃತೇ ॥೬೩॥

ಷಟ್‌ಸಹಸ್ರೈರ್ಹಯೈಃ ಶಿಷ್ಟೈರಪಾಯಾಚ್ಛಕುನಿಸ್ತತಃ ॥೬೪॥

ಯೋಧರ ಮೈಯೆಲ್ಲಾ ಗಾಯವಾಗಿ ರಕ್ತ ಸುರಿಯುತ್ತಿತ್ತು. ಆದರೂ ಶಸ್ತ್ರಮತ್ತು ಆಯುಧಗಳನ್ನು ಹಿಡಿದುಕೊಂಡು ಹೋರಾಡುತ್ತಿದ್ದರು. ಒಬ್ಬರನ್ನೊಬ್ಬರು ಸಾಯಿಸುವ ಇಚ್ಛೆಯುಳ್ಳವರಾಗಿ ಘೋರವಾದ ಅನೇಕ ರೀತಿಯ ಹೊಡೆದಾಟದಲ್ಲಿ ತೊಡಗಿದ್ದರು. ಅಂತಹ ಯುದ್ಧದಲ್ಲಿ ತನ್ನ ಕಡೆಯ ಅನೇಕ ಸೈನಿಕರು ಮತ್ತು ಮಹಾಯೋಧರು ಸತ್ತುಹೋದಾಗ ಶಕುನಿಯು ಒಂದು ಮುಹೂರ್ತದಷ್ಟು ಸಮಯ ಯುದ್ಧಮಾಡಿ ಉಳಿದ ಆರುಸಾವಿರ ಕುದುರೆಗಳೊಡನೆ ರಣರಂಗದಿಂದ ಪಲಾಯನ ಮಾಡಿದನು.

ತಥೈವ ಪಾಂಡವಾನೀಕಂ ರುಧಿರೇಣ ಸಮುಕ್ಷಿತಮ್ ।
ತ್ರಿಸಾಹಸ್ರೈ ರಥೈಃ ಶಿಷ್ಟೈರಪಾಯಾಚ್ಛ್ರಾಂತವಾಹನಮ್ ॥೬೫॥

ಅದೇ ರೀತಿಯಲ್ಲಿ ಪಾಂಡವರ ಸೈನ್ಯವೂ ಬಹಳವಾಗಿ ಗಾಯಗೊಂಡು ರಕ್ತದಿಂದ ಸಿಕ್ತವಾಗಿತ್ತು. ರಥದ ಕುದುರೆಗಳು ಬಹಳ ದಣಿದಿದ್ದವು. ಆಗ ಉಳಿದ ಮೂರುಸಾವಿರ ರಥಗಳೊಡನೆ ಪಾಂಡವರ ಸೈನ್ಯವೂ ಯುದ್ಧದಿಂದ ಹಿಂತಿರುಗಿತು.

ಅಶ್ವಾರೋಹಾಸ್ತು ಪಾಂಡೂನಾಮಬ್ರುವನ್ ರುಧಿರೋಕ್ಷಿತಾಃ ।
ಸುಸನ್ನಿವಿಷ್ಟೇ ಸಂಗ್ರಾಮೇ ಭೂಯಿಷ್ಠಂ ತ್ಯಕ್ತಜೀವಿತಾಃ ॥೬೬॥

ರಕಸಿಕ್ತರಾದ ಪಾಂಡವರ ಅಶ್ವಾರೋಹಿಗಳು ಪ್ರಾಣದ ಆಸೆಯನ್ನು ತೊರೆದು, ಚೆನ್ನಾಗಿ ನಡೆಯುತ್ತಿದ್ದ ಆ ಯುದ್ಧದಲ್ಲಿ ಹೀಗೆ ಹೇಳುತ್ತಾರೆ.

ಪಾಂಡವಸಾದಿನಃ

ನ ಹಿ ಶಕ್ಯಂ ರಥೈರ್ಯೋದ್ಧುಂ ಕುತ ಏವ ಮಹಾಗಜೈಃ ।
ರಥಾನೇವ ರಥಾ ಯಾಂತು ಕುಂಜರಾಃ ಕುಂಜರಾನಪಿ ॥೬೭॥

ಪಾಂಡವ ಆಶ್ವಾರೋಹಿಗಳು– ರಥದ ಮೇಲಿದ್ದುಕೊಂಡು ಶತ್ರುಗಳನ್ನು ತಡೆಯುವುದೇ ಅಸಾಧ್ಯವಾಗಿದೆ. ಹಾಗಿರುವಾಗ ಆನೆಗಳಿಂದ ತಡೆಯುವುದು ಹೇಗೆ ಸಾಧ್ಯವಾದೀತು? ಆದ್ದರಿಂದ ರಥಗಳು ರಥಗಳನ್ನೇ ತಡೆದು ನಿಲ್ಲಿಸಲಿ. ಆನೆಗಳು ಆನೆಗಳನ್ನು ತಡೆಯಲಿ.

ಪ್ರತಿಯಾತೋಽಪಿ ಶಕುನಿಃ ಸ್ವಮನೀಕಮವಸ್ಥಿತಃ ।
ಸ ಪುನಃ ಸೌಬಲೋ ರಾಜಾ ಯುದ್ಧಮಭ್ಯಾಗಮಿಷ್ಯತಿ ॥೬೮॥

ಶಕುನಿಯು ಈಗ ಯುದ್ಧವನ್ನು ಬಿಟ್ಟು ಹೋಗಿದ್ದರೂ ತನ್ನ ಸೈನ್ಯವನ್ನು ಪುನಃ ಸಜ್ಜುಗೊಳಿಸಿ ಮತ್ತೆ ಯುದ್ಧಕ್ಕೆ ಬರುವವನಿದ್ದಾನೆ.

ಸಂಜಯಃ

ತತಶ್ಚ ದ್ರೌಪದೇಯಾಸ್ತು ತೇ ಚ ಮತ್ತಾ ಮಹಾಗಜಾಃ ।
ಪ್ರಯಯುರ್ಯತ್ರ ಪಾಂಚಾಲ್ಯೋ ಧೃಷ್ಟದ್ಯುಮ್ನೋ ಮಹಾರಥಃ ॥೬೯॥

ಸಂಜಯ– ಅನಂತರ ದ್ರೌಪದಿಪುತ್ರರು ಮತ್ತು ಆ ಮದವೇರಿದ ಮಹಾಗಜಗಳು, ಮಹಾರಥನಾದ ಧೃಷ್ಟದ್ಯುಮ್ನನು ಇದ್ದಲ್ಲಿಗೆ ಬಂದರು.

ಸಹದೇವೋಽಪಿ ಕೌರವ್ಯ ರಜೋಮೇಘೇ ಸಮುತ್ಥಿತೇ ।
ಏಕಾಕೀ ಪ್ರಯಯೌ ತತ್ರ ಯತ್ರ ರಾಜಾ ಯುಧಿಷ್ಠಿರಃ ॥೭೦॥

ಕುರುವಂಶೋದ್ಭವನೇ! ಎಲ್ಲೆಡೆ ಧೂಳು ತುಂಬಿಕೊಂಡಾಗ ಸಹದೇವನೂ ಕೂಡ ಒಬ್ಬಂಟಿಯಾಗಿ ಯುಧಿಷ್ಠಿರನಿದ್ದಲ್ಲಿಗೆ ಬೇಗನೇ ಹೋದನು.

ತತ್ರ ತೇಷು ಪ್ರಯಾತೇಷು ಶಕುನಿಃ ಸೌಬಲಃ ಪುನಃ ।
ಪಾರ್ಶ್ವತೋಽಭ್ಯಹನತ್ ಕ್ರುದ್ಧೋ ಧೃಷ್ಟದ್ಯುಮ್ನಸ್ಯ ವಾಹಿನೀಮ್ ॥೭೧॥

ಅವರೆಲ್ಲರೂ ಹೊರಟುಹೋದಾಗ ಶಕುನಿಯು ಬದಿಯಲ್ಲಿ ನಿಂತುಕೊಂಡು ಕೋಪದಿಂದ ಧೃಷ್ಟದ್ಯುಮ್ನನ ಸೈನ್ಯದ ಮೇಲೆ ಆಕ್ರಮಣವನ್ನು ಮಾಡಿದನು.

ತತ್ ಪುನಸ್ತುಮುಲಂ ಯುದ್ಧಂ ಪ್ರಾಣಾಂಸ್ಯಕ್ತ್ವಾಽಭ್ಯವರ್ತತ ।
ತಾವಕಾನಾಂ ಪರೇಷಾಂ ಚ ಪರಸ್ಪರವಧೈಷಿಣಾಮ್ ॥೭೨॥

ಆಗ ಮತ್ತೆ ಘೋರವಾದ ಯುದ್ಧವು ನಡೆಯಿತು. ನಿನ್ನವರು ಮತ್ತು ಪರಪಕ್ಷದವರು ಜಯಕ್ಕಾಗಿ ಪ್ರಾಣವನ್ನೇ ಒತ್ತೆಯಿಟ್ಟು ಹೋರಾಡುತ್ತಿದ್ದರು.

ತೇ ಹ್ಯನ್ಯೋನ್ಯಮತಕ್ಷಂತ ತಸ್ಮಿನ್ ವೀರಸಮಾಗಮೇ ।
ಯೋಧಾಃ ಪರ್ಯಪತನ್ ರಾಜನ್ ಶತಶೋಽಥ ಸಹಸ್ರಶಃ ॥೭೩॥

ರಾಜನೇ! ವೀರರು ಸೇರಿದ್ದ ಆ ಯುದ್ಧದಲ್ಲಿ ಯೋಧರು ಒಬ್ಬರನ್ನೊಬ್ಬರು ಗಾಯಗೊಳಿಸುತ್ತಾ ನೂರಾರು, ಸಾವಿರಾರು ಸಂಖ್ಯೆಯಲ್ಲಿ ಸತ್ತು ಬೀಳುತ್ತಿದ್ದರು.

ಅಸಿಭಿಶ್ಚಿದ್ಯಮಾನಾನಾಂ ಶಿರಸಾಂ ಲೋಕಸಂಕ್ಷಯೇ ।
ಪ್ರಾದುರಾಸೀನ್ಮಹಾಶಬ್ದಃ ಸಾಲಾನಾಂ ಪತತಾಮಿವ ॥೭೪॥

ಲೋಕವೇ ನಾಶವಾಗುವ ರೀತಿಯಲ್ಲಿ ಕತ್ತಿಗಳಿಂದ ತಲೆಗಳು ಕಡಿದು ನೆಲಕ್ಕುರುಳುತ್ತಿದ್ದಾಗ ಬಹಳ ಶಬ್ದವು ಉಂಟಾಯಿತು. ಆ ಶಬ್ದವು ತಾಳೆಮರಗಳಿಂದ ತಾಳೆಹಣ್ಣುಗಳು ಕೆಳಗೆ ಬೀಳುವಾಗ ಉಂಟಾಗುವ ಶಬ್ದದಂತೆ ಇತ್ತು.

ವಿಮುಕ್ತಾನಾಂ ಶರೀರಾಣಾಂ ಭಿನ್ನಾನಾಂ ಪತತಾಂ ಭುವಿ ।
ಸಾಯುಧಾನಾಂ ಚ ಬಾಹೂನಾಂ ವೀರಾಣಾಂ ಚ ವಿಶಾಂಪತೇ ॥೭೫॥

ರಾಜನೇ! ಯುದ್ಧದಲ್ಲಿ ಅನೇಕ ವೀರರ ದೇಹಗಳು ತುಂಡಾಗಿ ಬೀಳುತ್ತಿದ್ದವು. ಕೆಲವರ ಬಾಹುಗಳು ಆಯುಧಸಮೇತವಾಗಿ ಕಡಿದು ಬೀಳುತ್ತಿದ್ದವು.

ಆಸೀತ್ ಕಟಕಟಾಶಬ್ದಃ ಸುಮಹಾನ್ ರೋಮಹರ್ಷಣಃ ।
ನಿಘ್ನಂತೋ ನಿಶಿತೈಃ ಶಸ್ತ್ರೈಃ ಭ್ರಾತೄನ್ ಪುತ್ರಾನ್ ಸಖೀನಪಿ ॥೭೬॥

ಯೋಧರು ಹರಿತವಾದ ಬಾಣಗಳಿಂದ ಸಹೋದರರನ್ನೂ, ಪುತ್ರರನ್ನೂ ಸ್ನೇಹಿತರನ್ನೂ ಸಾಯಿಸುತ್ತಿದ್ದರು. ಆಗ ಉಂಟಾದ ಕಟಕಟ ಧ್ವನಿಯು ರೋಮಾಂಚನವನ್ನುಂಟು ಮಾಡುತ್ತಿತ್ತು.

ಯೋಧಾಃ ಪರಿಪತಂತಿ ಸ್ಮ ಯಥಾಽಽಮಿಷಕೃತೇ ಖಗಾಃ ॥೭೭॥

ಮಾಂಸಕ್ಕಾಗಿ ಹಪಹಪಿಸುವ ಪಕ್ಷಿಗಳಂತೆ ಯೋಧರು ಜಯಕ್ಕಾಗಿ ಪರಿತಪಿಸುತ್ತಿದ್ದರು.

ಅನ್ಯೋನ್ಯಂ ಪ್ರತಿಸಂರಬ್ಧಾಃ ಪರಸ್ಪರವಧೈಷಿಣಃ ।
ಅಹಂ ಪೂರ್ವಮಹಂ ಪೂರ್ವಮಿತ್ಯಭ್ಯಘ್ನನ್ ಸಹಸ್ರಶಃ ॥೭೮॥

ಒಬ್ಬರು ಇನ್ನೊಬ್ಬರ ಮೇಲೆ ಕೋಪಿಸಿಕೊಂಡು, ಎದುರಾಳಿಗಳನ್ನು ಕೊಲ್ಲುವ ಅಭಿಪ್ರಾಯವುಳ್ಳವರಾಗಿ ಸಾವಿರಾರು ಯೋಧರು 'ನಾ ಮುಂದು ನಾ ಮುಂದು' ಎಂಬುದಾಗಿ ಪರಸ್ಪರವಾಗಿ ಹೊಡೆದುಕೊಂಡರು.

ಸಂಘಾತೈರಾಸನಾದ್ ಭ್ರಷ್ಟೈರಶ್ವಾರೋಹೈರ್ಗತಾಸುಭಿಃ ।
ಹಯಾಃ ಪರಿತಪಂತಿ ಸ್ಮ ಶತಶೋಽಥ ಸಹಸ್ರಶಃ ॥೭೯॥

ಯುದ್ಧದಲ್ಲಿ ಅಶ್ವಾರೋಹಿಗಳು ಕುದುರೆಯ ಮೇಲಿನ ಆಸನದಿಂದ ಕೆಳಗೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾರೆ. ಆಗ ಇಂತಹ ನೂರಾರು, ಸಾವಿರಾರು ಕುದುರೆಗಳು ಯಜಮಾನರಿಗಾಗಿ ದುಃಖಿಸುತ್ತಿದ್ದವು.

ಸ್ಫುರತಾಂ ಪ್ರತಿವಿಷ್ಟಾನಾಮಶ್ವಾನಾಂ ಶೀಘ್ರಸಾರಿಣಾಮ್ ।
ಸ್ತನತಾಂ ಚ ಮನುಷ್ಯಾಣಾಂ ಪತತಾಂ ಚ ವಿಶಾಂಪತೇ ॥೮೦॥

ಶಕ್ತ್ಯೃಷ್ಟಿಪ್ರಾಸಶಬ್ದಶ್ಚ ತುಮಲಃ ಸಮಜಾಯತ ।
ಭಿಂದಂತಃ ಪರಮರ್ಮಾಣಿ ರಾಜನ್ ದುರ್ಮಂತ್ರಿತೇ ತವ ॥೮೧॥

ಪ್ರಜಾಪಾಲಕನೇ! ರಾಜನೇ! ನಿನ್ನ ಕುಬುದ್ಧಿಯಿಂದ ನಡೆದ ಯುದ್ಧದಲ್ಲಿ ಶೀಘ್ರಗಾಮಿಗಳಾದ ಕುದುರೆಗಳು ಶೋಭಿಸುತ್ತಾ ಕೆಳಬೀಳುತ್ತಿದ್ದವು. ಸಿಂಹಗರ್ಜನೆ ಮಾಡುತ್ತಾ ಮನುಷ್ಯರು ನೆಲಕ್ಕೊರಗುತ್ತಿದ್ದರು. ಶಕ್ತಿ, ಋಷ್ಟಿ, ಪ್ರಾಸ ಮೊದಲಾದ ಆಯುಧಗಳ ಧ್ವನಿಯು ಗೊಂದಲಮಯವಾಗಿ ಉಂಟಾಯಿತು. ಆ ಮೂಲಕ ಯೋಧರು ಎದುರಾಳಿಗಳ ಮರ್ಮಸ್ಥಾನವನ್ನು ಭೇದಿಸುತ್ತಿದ್ದರು.

ನಿಹತಾಶ್ಚ ಶಿತೈಃ ಶಸ್ತ್ರೈಃ ನ ನ್ಯವರ್ತಂತ ತಾವಕಾಃ ।
ಮತ್ತಾಃ ರುಧಿರಗಂಧೇನ ಬಹವೋ ಗತಚೇತಸಃ ॥೮೨॥

ಜಘ್ನುಃ ಪರಾನ್ ಸ್ವಕಾಂಶ್ಚೈವ ಪ್ರಾಪ್ತಾನ್ ಪ್ರಾಪ್ತಾನನಂತರಾನ್ ।
ಬಹವಶ್ಚ ಗತಪ್ರಾಣಾಃ ಕ್ಷತ್ರಿಯಾಃ ಜಯಗೃಧ್ನಿನಃ ॥೮೩॥

ನಿನ್ನ ಕಡೆಯ ಯೋಧರು ಹರಿತವಾದ ಆಯುಧಗಳಿಂದ ಪ್ರಾಣಕಳೆದುಕೊಂಡು ಮತ್ತೆ ಬದುಕಿ ಹಿಂತಿರುಗಲಿಲ್ಲ. ತುಂಬಾ ಜನ ಯೋಧರು ರಕ್ತದ ವಾಸನೆಯಿಂದ ಮತ್ತರಾಗಿ ಮನಸ್ಸಿನ ಮೇಲಿನ ಹತೋಟಿಯನ್ನು ಕಳೆದುಕೊಂಡರು. ಅದರ ಪರಿಣಾಮವಾಗಿ ಎದುರಿಗೆ ಯಾರು ಬಂದರೂ ಅವರು ತಮ್ಮವರೋ ಅಥವಾ ಶತ್ರುಪಕ್ಷದವರೋ ಎಂಬುದಾಗಿ ವಿಚಾರ ಮಾಡದೆ ಸಾಯಿಸುತ್ತಿದ್ದರು. ಹೀಗೆ ಜಯವನ್ನೇ ಗಮದಲ್ಲಿರಿಸಿಕೊಂಡು ಹೋರಾಡಿದ ಅನೇಕ ಕ್ಷತ್ರಿಯರು ಪ್ರಾಣತ್ಯಾಗ ಮಾಡಿದರು.

ಏವಂ ಹಿ ಯೋಧಾಃ ಸಂರಬ್ಧಾಃ ಪರಸ್ಪರಸಮಾಹತಾಃ ।
ಭೂಮಾವಭ್ಯಪತನ್ ರಾಜನ್ ಶರಶಕ್ತಿಭಿರಾಹತಾಃ ॥೮೪॥

ರಾಜನೇ! ಈ ರೀತಿಯಲ್ಲಿ ಯುದ್ಧದಲ್ಲಿ ಯೋಧರು ಬಹಳ ರೋಷವುಳ್ಳವರಾಗಿ ಪರಸ್ಪರವಾಗಿ ಬಾಣ ಶಕ್ತ್ಯಾಯುಧಗಳಿಂದ ಹೊಡೆದುಕೊಂಡು ಪ್ರಾಣಕಳೆದುಕೊಂಡು ನೆಲದಲ್ಲಿ ಬಿದ್ದರು.

ವೃಕಗೃಧ್ರಶ್ವಕಾಕಾನಾಮತುಲೇ ಮೋದಕೇ ಸತಿ ।
ಆಸೀದ್ ಬಲಕ್ಷಯೋ ಘೋರಸ್ತವ ಪುತ್ರಸ್ಯ ಪಶ್ಯತಃ ॥೮೫॥

ಹೀಗೆ ಹೆಣಗಳ ರಾಶಿಗಳು ಬಿದ್ದಾಗ ತೋಳ, ಹದ್ದು, ನಾಯಿ, ಕಾಗೆಗಳಿಗೆ ಬಹಳ ಆನಂದ ಉಂಟಾಯಿತು. ನಿನ್ನ ಮಗನು ನೋಡುತ್ತಿದ್ದಂತೆಯೇ ಘೋರವಾಗಿ ಸೈನ್ಯವು ಕ್ಷೀಣಿಸಿತು.

ನರಾಶ್ವಕಾಯೈಃ ಸಂಛನ್ನಾ ಭೂಮಿರಾಸೀದ್ ವಿಶಾಂಪತೇ ।
ರುಧಿರೋದಕಚಿತ್ರಾ ಚ ಭೀರೂಣಾಂ ಭಯವರ್ಧಿನೀ ॥೮೬॥

ರಾಜನೇ! ಮನುಷ್ಯರು ಮತ್ತು ಕುದುರೆಗಳ ಶರೀರಗಳಿಂದ ಭೂಮಿಯು ಮುಚ್ಚಿಹೋಗಿತ್ತು. ಅಲ್ಲಲ್ಲಿ ರಕ್ತದ ಹೊಳೆಯಿಂದಾಗಿ ರಣರಂಗವು ಚಿತ್ರ-ವಿಚಿತ್ರವಾಗಿ ಕಾಣಿಸುತ್ತಿತ್ತು. ಸ್ವಭಾವತಃ ಭಯಸ್ವಭಾವದ ವ್ಯಕ್ತಿಗಳಿಗೆ ಮತ್ತೂ ಭಯವನ್ನು ಅಧಿಕಮಾಡುತ್ತಿತ್ತು.

ಅಸಿಭಿಃ ಪಟ್ಟಸೈಃ ಶೂಲೈಃ ತಕ್ಷಮಾಣಾಃ ಪುನಃ ಪುನಃ ।
ತಾವಕಾಃ ಪಾಂಡವೇಯಾಂಶ್ಚ ನಾತ್ಯವರ್ತಂತ ಭಾರತ ॥೮೭॥

ರಾಜನೇ! ನಿನ್ನವರು ಮತ್ತು ಪಾಂಡವರು ಕತ್ತಿ, ಪಟ್ಟಸ, ಶೂಲ ಮೊದಲಾದವುಗಳಿಂದ ಮತ್ತೆ ಮತ್ತೆ ಹೊಡೆಯುತ್ತಾ ಇದ್ದರು. ಯಾರೂ ಯುದ್ಧದಿಂದ ಹಿಂದೆ ಸರಿಯಲಿಲ್ಲ.

ಪ್ರಹರಂತೋ ಯಥಾಶಕ್ತಿ ಯಾವತ್ ಪ್ರಾಣಸ್ಯ ಧಾರಣಾ ।
ಯೋಧಾಃ ಪರಿತಪಂತಿ ಸ್ಮ ವಮಂತೋ ರುಧಿರಂ ಮುಖೈಃ ॥೮೮॥

ಯೋಧರು ದೇಹದಲ್ಲಿ ಪ್ರಾಣವು ಇರುವಲ್ಲಿಯವರೆಗೆ ತಮ್ಮ ತಮ್ಮ ಶಕ್ತಿಗೆ ಅನುಸಾರವಾಗಿ ಹೊಡೆದಾಡುತ್ತಿದ್ದರು. ಬಾಯಿಯಿಂದ ರಕ್ತವನ್ನು ವಾಂತಿಮಾಡುತ್ತಾ ಬಹಳವಾಗಿ ಕಷ್ಟಪಡುತ್ತಿದ್ದರು.

ಶಿರೋ ಗೃಹೀತ್ವಾ ಕೇಶೇಷು ಕಬಂಧಃ ಪ್ರತ್ಯದೃಶ್ಯತ ।
ಉದ್ಯಮ್ಯ ನಿಶಿತಂ ಖಡ್ಗಂ ರುಧಿರೇಣ ಸಮುಕ್ಷಿತಮ್ ॥೮೯॥

ತಲೆಯ ಜುಟ್ಟನ್ನು ಹಿಡಿದುಕೊಂಡು ಹರಿತವಾದ ಖಡ್ಗದಿಂದ ಕಡಿದು ದೇಹವನ್ನು ರಕ್ತಸಿಕ್ತವನ್ನಾಗಿ ಮಾಡುತ್ತಿದ್ದರು.

ಅಥೋತ್ಥಿತೇಷು ಕಬಂಧೇಷು ಯುದ್ಧೇ ತಸ್ಮಿನ್ ಜನಾಧಿಪ ।
ತದಾ ರುಧಿರಗಂಧೇನ ಯೋಧಾಃ ಕಶ್ಮಲಮಾವಿಶನ್ ॥೯೦॥

ರಕ್ತಸಿಕ್ತವಾಗಿ ಕೆಳಬಿದ್ದ ದೇಹಗಳು ಎಲ್ಲೆಲ್ಲೂ ಎದ್ದು ಕಾಣಿಸುತ್ತಿದ್ದವು. ಜನನಾಯಕನೇ! ಆ ರಕ್ತದ ವಾಸನೆಯಿಂದಾಗಿ ಯೋಧರು ಮೂರ್ಛೆ ಹೋದರು.

ಮಂದೀಭೂತೇ ತತಃ ಶಬ್ದೇ ಪಾಂಡವಾನಾಂ ಮಹದ್ಬಲಮ್ ।
ಅಲ್ಪಾವಶಿಷ್ಟೈಸ್ತುರಗೈರಭ್ಯವರ್ತತ ಸೌಬಲಃ ॥೯೧॥

ಯುದ್ಧದ ತುಮುಲ ಶಬ್ದವು ಕಡಿಮೆಯಾದಾಗ ಶಕುನಿ ಅಳಿದುಳಿದ ಕುದುರೆಸೈನ್ಯದ ಜೊತೆಗೆ ಬಂದು ಪಾಂಡವರ ದೊಡ್ಡದಾದ ಸೇನೆಯನ್ನು ಎದುರಿಸಿದನು.

ತತೋಽಭ್ಯಧಾವಂಸ್ತ್ವರಿತಾಃ ಪಾಂಡವಾ ಜಯಗೃದ್ಧಿನಃ ।
ಪದಾತಯಶ್ಚ ನಾಗಾಶ್ಚ ಸಾದಿನಶ್ಚೋದ್ಯತಾಯುಧಾಃ ॥೯೨॥

ಕೋಷ್ಠೀಕೃತ್ಯ ತದಾ ಹ್ಯೇನಂ ಪರಿಕ್ಷಿಪ್ಯ ಚ ಸರ್ವಶಃ ।
ಶಸ್ತ್ರೈರ್ನಾನಾವಿಧೈರ್ಜಘ್ನುರ್ಯುದ್ಧಪಾರಂ ತಿತೀರ್ಷವಃ ॥೯೩॥

ಆಗ ಜಯಾಕಾಂಕ್ಷಿಗಳಾದ ಪಾಂಡವರು, ಅವರ ಪದಾತಿಗಳು, ಆನೆಗಳು, ಅಶ್ವಾರೋಹಿಗಳು ಕೂಡಲೇ ಆಯುಧದಾರಿಗಳಾಗಿ ಶಕುನಿಯನ್ನು ಒತ್ತಟ್ಟಿಗೆ ಸೇರಿಸಿ ಎಲ್ಲಾ ಕಡೆಯಿಂದ ಆಕ್ರಮಿಸಿದರು. ಯುದ್ಧದ ಕೊನೆಯನ್ನು ತಲುಪುವ ಇಚ್ಛೆಯುಳ್ಳ, ಆ ಮೂಲಕ ಯುದ್ಧವನ್ನು ಪರಿಸಮಾಪ್ತಿಗೊಳಿಸುವ ಉದ್ದೇಶದಿಂದ ಶಕುನಿಯನ್ನು ನಾನಾವಿಧದ ಶಸ್ತ್ರಗಳಿಂದ ಹೊಡೆದರು.

ತ್ವದೀಯಾಂಸ್ತಂ ತು ಸಂಪ್ರೇಕ್ಷ್ಯ ಸರ್ವಶಃ ಸಮಭಿದ್ರುತಮ್ ।
ಸಾಶ್ವಪತ್ತಿದ್ವಿಪರಥಾಃ ಪಾಂಡವಾನಭಿದುದ್ರುವುಃ ॥೯೪॥

ಹೀಗೆ ಎಲ್ಲಾ ಕಡೆಯಿಂದ ಆಕ್ರಮಣಕ್ಕೆ ಒಳಗಾದ ಶಕುನಿಯನ್ನು ನೋಡಿದ ನಿನ್ನವರು ಕುದುರೆ ಪದಾತಿ ಆನೆ ರಥಗಳಿಂದ ಕೂಡಿಕೊಂಡು ಪಾಂಡವರನ್ನು ಎದುರಿಸಿದರು.

ಕೇಚಿತ್ ಪದಾತಯಃ ಪದ್ಭಿರ್ಮುಷ್ಟಿಭಿಶ್ಚ ಪರಸ್ಪರಮ್ ।
ನಿಜಘ್ನುಃ ಸಮರೇ ಶೂರಾಃ ಕ್ಷೀಣಶಸ್ತ್ರಾಸ್ತತೋಪತನ್ ॥೯೫॥

ಸೈನ್ಯದಲ್ಲಿ ಶಸ್ತ್ರಸಂಗ್ರಹ ಕ್ಷೀಣಿಸಿದಾಗ ಕೆಲವು ಪದಾತಿಗಳು ಕಾಲಿನಿಂದ, ಮುಷ್ಟಿಯಿಂದ ಪರಸ್ಪರವಾಗಿ ಹೊಡೆದುಕೊಂಡು ಸತ್ತು ಬಿದ್ದರು.

ರಥೇಭ್ಯೋ ರಥಿನಃ ಪೇತುರ್ದ್ವಿಪೇಭ್ಯೋ ಹಸ್ತಿಸಾದಿನಃ ।
ವಿಮಾನೇಭ್ಯಃ ಪರಿಭ್ರಷ್ಟಾಃ ಸಿದ್ಧಾಃ ಪುಣ್ಯಕ್ಷಯೇ ಯಥಾ ॥೯೬॥

ರಥದ ಮೇಲೆ ಕುಳಿತ ಯೋಧರು ರಥಗಳಿಂದ ಕೆಳಗೆ ಬಿದ್ದರು. ಆನೆಗಳನ್ನೇರಿಕುಳಿತವರು ಆನೆಗಳಿಂದ ಕೆಳಗೆ ಬಿದ್ದರು. ಅಶ್ವಾರೋಹಿಗಳು ಕುದುರೆಗಳ ಮೇಲಿಂದ ಕೆಳಗೆ ಬಿದ್ದರು. ಹೀಗೆ ಬೀಳುತ್ತಿದ್ದ ಯೋಧರು ಪುಣ್ಯಹ್ರಾಸವಾದಾಗ ವಿಮಾನದಿಂದ ಕೆಳಬಿದ್ದ ಸಿದ್ಧಪುರುಷರಂತೆ ಕಂಡರು.

ಏವಮನ್ಯೋನ್ಯಮಾಯತ್ತಾ ಯೋಧಾ ಜಘ್ನುರ್ಮಹಾಮೃಧೇ ।
ಪಿತೄನ್ ಭ್ರಾತೄನ್ ವಯಸ್ಯಾಂಶ್ಚ ಪುತ್ರಾನಪಿ ತಥಾऽಪರೇ ॥೯೭॥

ಹೀಗೆ ಮಹಾಯುದ್ಧದಲ್ಲಿ ಯೋಧರು ಪರಸ್ಪರವಾಗಿ ಆಕ್ರಮಿಸಿ ಪಿತೃಗಳನ್ನು, ಸಹೋದರರನ್ನು, ಸ್ನೇಹಿತರನ್ನು, ಪುತ್ರರನ್ನು ಕೊಂದರು.

ಏವಮಾಸೀದಮರ್ಯಾದಂ ಯುದ್ಧಂ ಭರತಸತ್ತಮ ।
ಪ್ರಾಸಾಸಿಬಾಣಕಲಿಲೇ ವರ್ತಮಾನೇ ಸುದಾರುಣೇ ॥೯೮॥

ಭರತೋತ್ತಮನೇ! ನಡೆಯುತ್ತಿದ್ದ ಯುದ್ಧವು ಈ ರೀತಿಯಲ್ಲಿ ಪ್ರಾಸ, ಕತ್ತಿ, ಬಾಣಗಳಿಂದ ಕೂಡಿಕೊಂಡು ಭಯಂಕರವಾಗಿ ಎಲ್ಲೆಮೀರಿ ನಡೆಯುತ್ತಿತ್ತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ತ್ರಯೋವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ನಾಲ್ಕನೆಯ ಅಧ್ಯಾಯ

ಶ್ರೀಕೃಷ್ಣನ ಮುಂದೆ ಅರ್ಜುನನು ದುರ್ಯೋಧನನ ದುರಾಗ್ರಹವನ್ನು ನಿಂದಿಸುವುದು. ರಥಸೇನೆಯ ಸಂಹಾರ.

ಸಂಜಯಃ

ತಸ್ಮಿನ್ ಶಬ್ದೇ ಮೃದೌ ಜಾತೇ ಪಾಂಡವೈರ್ನಿಹತೇ ಬಲೇ ।
ಅಶ್ವೈಃ ಸಪ್ತಶತೈಃ ಶಿಷ್ಟೈಃ ಉಪಾವರ್ತತ ಸೌಬಲಃ ॥೧॥

ಸಂಜಯ– ಶಸ್ತ್ರಗಳ ಶಬ್ದವು ಕ್ಷೀಣಿಸಿತು. ಪಾಂಡವರು ಕೌರವರ ಸೇನೆಯನ್ನು ನಾಶ ಮಾಡಿದ್ದಾರೆ. ಆಗ ಶಕುನಿಯು ಉಳಿದ ಏಳುನೂರು ಕುದುರೆಗಳೊಂದಿಗೆ ಕೌರವಸೇನೆಯನ್ನು ಸಮೀಪಿಸಿದನು.

ಸ ಗತ್ವಾ ವಾಹಿನೀಂ ತೂರ್ಣಂ ಚೋದಯಾನಃ ಸ್ವಕಾನ್ ಯುಧಿ ।
ಯುಧ್ಯಧ್ವಮಿತಿ ಸಂಹೃಷ್ಟಃ ಪುನಃ ಪುನರರಿಂದಮಃ ॥೨॥

ಅಪೃಚ್ಛತ್ ಕ್ಷತ್ರಿಯಾಂಶ್ಚಾತ್ರ ಕ್ವ ಸ ರಾಜಾ ಸುಯೋಧನಃ ।
ಶಕುನೇಸ್ತು ವಚಃ ಶ್ರುತ್ವಾ ತ ಊಚುರ್ಭರತರ್ಷಭ ॥೩॥

ಸೈನ್ಯದ ಸಮೀಪಕ್ಕೆ ಹೋದ ಶಕುನಿಯು ಯುದ್ಧದಲ್ಲಿ ತನ್ನವರನ್ನು ಪ್ರೇರೇಪಿಸಿದನು. ''ಯುದ್ಧ ಮಾಡಿ'' ಎಂಬುದಾಗಿ ಸಂತೋಷದಿಂದ ಮತ್ತೆ ಮತ್ತೆ ಹೇಳುತ್ತಿದ್ದನು. ಶತ್ರುನಾಶಕನಾದ ಶಕುನಿಯು ಅಲ್ಲಿದ್ದ ಕ್ಷತ್ರಿಯರನ್ನು ಕೇಳುತ್ತಾನೆ ''ಆ ನಮ್ಮ ರಾಜ ದುರ್ಯೋಧನನು ಎಲ್ಲಿ ಇದ್ದಾನೆ?'' ಶಕುನಿಯ ಮಾತನ್ನು ಕೇಳಿದ ಸೈನಿಕರು ಹೀಗೆ ಉತ್ತರಿಸುತ್ತಾರೆ.

ಸೈನಿಕಾಃ

ಅಸೌ ತಿಷ್ಠತಿ ಕೌರವ್ಯೋ ರಣಮಧ್ಯೇ ಮಹಾರಥಃ ।
ಯತ್ಸೈತತ್ ಸುಮಹಚ್ಛತ್ರಂ ಪೂರ್ಣಚಂದ್ರಸಮಪ್ರಭಮ್ ॥೪॥

ಸೈನಿಕರು– ಕುರುವಂಶಸಂಜಾತನಾದ ಮಹಾರಥ ದುರ್ಯೋಧನನು ರಣರಂಗದ ಮಧ್ಯದಲ್ಲಿ ನಿಂತಿದ್ದಾನೆ. ಅಲ್ಲಿ ಪೂರ್ಣಚಂದ್ರನ ಕಾಂತಿಯುಳ್ಳ ದೊಡ್ಡದಾದ ಛತ್ರವು ಶೋಭಿಸುತ್ತಿದೆ.

ಯತ್ಸೈತೇ ಸಕಲತ್ರಾಣಾ ರಥಾಸ್ತಿಷ್ಠಂತಿ ದಂಸಿತಾಃ ।
ಯತ್ಸೈಷ ಶಬ್ದಸ್ತುಮುಲಃ ಪರ್ಜನ್ಯನಿನದೋಪಮಃ ॥೫॥

ಅಲ್ಲಿ ರಥಗಳಲ್ಲಿ ಶರೀರರಕ್ಷಕವಾದ ಕವಚಗಳು ಮತ್ತು ಆವರಣಸಾಧನಗಳು ಸುಸಜ್ಜಿತವಾಗಿವೆ. ಮೋಡಗಳ ಗರ್ಜನೆಯಂತೆ ಭಯಾನಕ ಶಬ್ದವು ಕೇಳಿಸುತ್ತಿದೆ.

ತತ್ರ ಗಚ್ಛ ದ್ರುತಂ ರಾಜನ್ ತತೋ ದ್ರಕ್ಷ್ಯಸಿ ಕೌರವಮ್ ॥೬॥

ಎಲೈ ಶಕುನಿಮಹಾರಾಜನೇ! ಅಲ್ಲಿಗೆ ಬೇಗನೇ ಹೋಗು. ಅಲ್ಲಿ ದುರ್ಯೋಧನನನ್ನು ನೋಡುವಿ.

ಸಂಜಯಃ

ಏವಮುಕ್ತಸ್ತು ತೈಃ ಶೂರೈಃ ಶಕುನಿಃ ಸೌಬಲಸ್ತದಾ ।
ಪ್ರಯಯೌ ತತ್ರ ಯತ್ರಾಸೌ ಪುತ್ರಸ್ತವ ಜನಾಧಿಪ ॥೭॥

ಜನನಾಯಕನೇ! ಶೂರಸೈನಿಕರು ಹೇಳಿದ ಈ ಮಾತನ್ನು ಕೇಳಿದ ಶಕುನಿಯು ನಿನ್ನ ಮಗನಿದ್ದಲ್ಲಿಗೆ ಬೇಗನೆ ಹೋದನು.

ಸರ್ವತಃ ಸಂವೃತೋ ವೀರೈಃ ಸಮರೇಷ್ವನಿವರ್ತಿಭಿಃ ॥೮॥

ದುರ್ಯೋಧನನ ಸುತ್ತಲೂ ವೀರರು ಸುತ್ತುವರಿದಿದ್ದರು. ಆ ವೀರರು ಯುದ್ಧದಿಂದ ಯಾವತ್ತೂ ಹಿಂತಿರುಗಿದವರಲ್ಲ.

ತತೋ ದುರ್ಯೋಧನಂ ದೃಷ್ಟ್ವಾ ರಥಾನೀಕೇ ವ್ಯವಸ್ಥಿತಮ್ ।
ಸರಥಾಂಸ್ತಾವಕಾನ್ ಸರ್ವಾನ್ ಹರ್ಷಯನ್ ಶಕುನಿಸ್ತತಃ ॥೯॥

ದುರ್ಯೋಧನಮಿದಂ ವಾಕ್ಯಂ ಹೃಷ್ಟರೂಪೋ ವಿಶಾಂಪತೇ ।
ಕೃತಕಾರ್ಯಮಿವಾತ್ಮಾನಂ ಮನ್ಯಮಾನೋऽಬ್ರವೀನ್ನೃಪಮ್ ॥೧೦॥

ರಾಜನೇ! ರಥಸೈನ್ಯದ ಮಧ್ಯದಲ್ಲಿ ಇದ್ದ ದುರ್ಯೋಧನನನ್ನು ನೋಡಿದ ಶಕುನಿಯು ನಿನ್ನ ಪಕ್ಷದ ಸಕಲ ರಥಿಕರನ್ನು ಸಂತೋಷಪಡಿಸುತ್ತಾ, ತನ್ನನ್ನು ಕೃತಕೃತ್ಯನಾಗಿ ತಿಳಿದುಕೊಂಡಿದ್ದ ದುರ್ಯೋಧನನಿಗೆ ಈ ಮಾತನ್ನು ಹೇಳಿದನು.

ಶಕುನಿಃ

ಜಹಿ ರಾಜನ್ ರಥಾನೀಕಮಶ್ವಾಃ ಸರ್ವೇ ಹತಾ ಮಯಾ ।
ನಾತ್ಯಕ್ತ್ವಾ ಜೀವಿತಂ ಸಂಖೇ ಶಕ್ಯೋ ಜೇತುಂ ಯುಧಿಷ್ಠಿರಃ ॥೧೧॥

ಶಕುನಿ– ರಾಜನೇ! ನೀನು ಶತ್ರುಗಳ ರಥಸೈನ್ಯವನ್ನು ನಾಶ ಮಾಡು. ನಾನು ಎಲ್ಲಾ ಅಶ್ವಗಳನ್ನು ಕೊಂದಿರುವೆನು. ಯುಧಿಷ್ಠಿರನು ಯುದ್ಧದಲ್ಲಿ ಪ್ರಾಣಗಳನ್ನು ಬಿಡದ ಹೊರತು ಗೆಲ್ಲಲು ಸಾಧ್ಯವಿಲ್ಲ.

ಹತೇ ತಸ್ಮಿನ್ ರಥಾನೀಕೇ ಪಾಂಡವೇನಾಭಿಪಾಲಿತೇ ।
ಗಜಾನೇತಾನ್ ಹನಿಷ್ಯಾಮಃ ಪದಾತೀಂಶ್ಚೇತರಾನ್ ಬಹೂನ್ ॥೧೨॥

ಯುಧಿಷ್ಠಿರನು ಸತ್ತ ನಂತರ ಅವನ ರಕ್ಷಣೆಯಲ್ಲಿದ್ದ ರಥಸೇನೆಯನ್ನೂ ನಾಶಮಾಡಲಾಗುತ್ತದೆ. ಅನಂತರ ಬಹಳವಾಗಿರುವ ಈ ಆನೆಗಳನ್ನೂ ಪದಾತಿಗಳನ್ನೂ ಸಂಹರಿಸುತ್ತೇವೆ.

ಸಂಜಯಃ

ಶ್ರುತ್ವಾ ತು ವಚನಂ ತಸ್ಯ ತಾವಕಾ ಜಯಗೃಧ್ನವಃ ।
ಜವೇನಾಭ್ಯಪತನ್ ಹೃಷ್ಟಾಃ ಪಾಂಡವಾನಾಮನೀಕಿನೀಮ್ ॥೧೩॥

ಸಂಜಯ– ಶಕುನಿಯ ಮಾತನ್ನು ಕೇಳಿದ ನಿನ್ನ ಪಕ್ಷದವರು ಜಯವನ್ನು ಅಪೇಕ್ಷಿಸಿಕೊಂಡು ಸಂತೋಷದಿಂದ ಪಾಂಡವರ ಸೈನ್ಯದ ಮೇಲೆ ವೇಗವಾಗಿ ಆಕ್ರಮಣ ಮಾಡಿದರು.

ಬದ್ಧನಿಸ್ತ್ರಿಂಶತೂಣೀರಾಃ ಪ್ರಗೃಹೀತಶರಾಸನಾಃ ।
ಶರಾಸನಾನಿ ಧೂನ್ವಾನಾಃ ಸಿಂಹನಾದಾನ್ ಪ್ರಚಕ್ರಿರೇ ॥೧೪॥

ತುಂಬಿದ ಬತ್ತಳಿಕೆಗಳನ್ನು ಕಟ್ಟಿಕೊಂಡು, ಕೈಯಲ್ಲಿ ಬಿಲ್ಲನ್ನು ಹಿಡಿದು, ಬಿಲ್ಲಿನ ಠೇಂಕಾರವನ್ನು ಮಾಡುತ್ತಾ ಸಿಂಹನಾದವನ್ನು ಮಾಡಿದರು.

ತತೋ ಜ್ಯಾತಳನಿಷ್ಫೋಷಃ ಪುನರಾಸೀದ್ ವಿಶಾಂಪತೇ ।
ಪ್ರಾದುರಾಸೀತ್ ಶರಾಣಾಂ ಚ ಪ್ರಮುಕ್ತಾನಾಂ ಸುದಾರುಣಃ ॥೧೫॥

ಬಿಲ್ಲಿನ ಹಗ್ಗವನ್ನು ಹಿಡಿದೆಳೆಯುತ್ತಾ ಶಬ್ದವನ್ನು ಉಂಟುಮಾಡುತ್ತಿದ್ದರು. ಆ ಶಬ್ದದ ಜೊತೆಗೆ ಬಾಣಗಳನ್ನು ಪ್ರಯೋಗಿಸುವಾಗ ದಾರುಣವಾದ ಶಬ್ದವು ಉಂಟಾಯಿತು.

ತಾನ್ ಸಮೀಪಗತಾನ್ ದೃಷ್ಟ್ವಾ ಜವೇನೋದ್ಯತಕಾರ್ಮುಕಾನ್ ।
ಉವಾಚ ದೇವಕೀಪುತ್ರಂ ಕುಂತೀಪುತ್ರೋ ಧನಂಜಯಃ ॥೧೬॥

ಹೀಗೆ ಬಿಲ್ಲುಗಳನ್ನು ಎತ್ತಿಹಿಡಿಯುತ್ತಾ ಹತ್ತಿರ ಬರುತ್ತಿರುವ ಆ ಯೋಧರನ್ನು ನೋಡಿ ಅರ್ಜುನನು ಶ್ರೀಕೃಷ್ಣನಿಗೆ ಹೀಗೆ ಹೇಳಿದನು.

ಅರ್ಜುನಃ

ಚೋದಯಾಶ್ವಾನಸಂಭ್ರಾಂತಃ ಪ್ರವಿಶೈತದ್ ಬಲಾರ್ಣವಮ್ ।
ಅಂತಮದ್ಯ ಗಮಿಷ್ಯಾಮಿ ಶತ್ರೂಣಾಂ ನಿಶಿತೈಃ ಶರೈಃ ॥೧೭॥

ಅರ್ಜುನ– ಯಾವುದೇ ಕಳವಳಕ್ಕೆ ಒಳಗಾಗದೆ ಕುದುರೆಗಳನ್ನು ಓಡಿಸು. ಈ ಸೈನ್ಯಸಾಗರವನ್ನು ಪ್ರವೇಶಿಸು, ಹರಿತವಾದ ಬಾಣಗಳಿಂದ ಶತ್ರುಗಳನ್ನು ಕೊನೆಗಾಣಿಸುತ್ತೇನೆ.

ಅಷ್ಟಾದಶ ದಿನಾನ್ಯದ್ಯ ಯುದ್ಧಸ್ಯಾಸ್ಯ ಜನಾರ್ದನ ।
ವರ್ತಮಾನಸ್ಯ ಮಹತಃ ಸಮಾಸಾದ್ಯ ಪರಸ್ಪರಮ್ ॥೧೮॥

ಜನಾರ್ದನನೇ! ದೊಡ್ಡದಾಗಿ ನಡೆಯುತ್ತಿರುವ ಈ ಯುದ್ಧಕ್ಕಾಗಿ ಪರಸ್ಪರವಾಗಿ ಎದುರುಗೊಂಡು ಇಂದಿಗೆ ಹದಿನೆಂಟು ದಿನಗಳು ಆದವು.

ಅನಂತಕಲ್ಪಾ ಧ್ವಜಿನೀ ಹತಾ ಹ್ಯೇಷಾಂ ಮಹಾತ್ಮನಾಮ್ ।
ಕ್ಷಯಮದ್ಯ ಗತಾ ಯುದ್ಧೇ ಪಶ್ಯ ದೈವಂ ಯಥಾವಿಧಮ್ ॥೧೯॥

ಯಥಾಯೋಗ್ಯವಾದ ಅದೃಷ್ಟವನ್ನು ನೋಡು. ಮಹಾತ್ಮರಾದ ಕೌರವರ ಕೊನೆಯಿಲ್ಲದಂತಿದ್ದ ಸೈನ್ಯವು ನಷ್ಟವಾಗಿದೆ.

ಸಮುದ್ರಕಲ್ಪಂ ತು ಬಲಂ ಧಾರ್ತರಾಷ್ಟ್ರಸ್ಯ ಮಾಧವ ।
ಅಸ್ಮಾನಾಸಾದ್ಯ ಸಂಜಲಿತಂ ಗೋಷ್ಪದೋಪಮಮಚ್ಯುತ ॥೨೦॥

ಮಾಧವನೇ! ಕೌರವನ ಸೈನ್ಯವು ಆರಂಭದಲ್ಲಿ ಸಮುದ್ರದ ಹಾಗೆ ಬಹಳ ವಿಸ್ತೃತವಾಗಿತ್ತು. ಅಚ್ಯುತ! ನಮ್ಮೊಡನೆ ಯುದ್ಧಕ್ಕೆ ನಿಂತು ಅದು ಹಸುವಿನ ಪಾದಗಾತ್ರಕ್ಕೆ ಕ್ಷೀಣಿಸಿದೆ.

ಹತೇ ಭೀಷ್ಮೇ ತು ಸಂದಧ್ಯಾತ್ ಶಿವಂ ಸ್ಯಾದಿತಿ ಮಾಧವ ।
ನ ಚ ತತ್ ಕೃತವಾನ್ ಮೂಢೋ ಧಾರ್ತರಾಷ್ಟ್ರಃ ಸುಬಾಲಿಶಃ ॥೨೧॥

ಮಾಧವ! ಭೀಷ್ಮನು ಸತ್ತಾಗ ನಮ್ಮೊಡನೆ ಸಂಧಿ ಮಾಡಿಕೊಂಡಿದ್ದರೆ ಮಂಗಳವಾಗುತ್ತಿತ್ತು. ಆದರೆ ಮೂಢನಾದ ಬಾಲಿಶಬುದ್ಧಿಯ ದುರ್ಯೋಧನನು ಹಾಗೆ ಮಾಡಲಿಲ್ಲ.

ಉಕ್ತಂ ಭೀಷ್ಮೇಣ ಯದ್ವಾಕ್ಯಂ ಹಿತಂ ಪಥ್ಯಂ ಚ ಮಾಧವ ।
ತಚ್ಚಾಪಿ ನಾಸೌ ಕೃತವಾನ್ ಹೀನಬುದ್ಧಿಃ ಸುಯೋಧನಃ ॥೨೨॥

ಮಾಧವ! ಭೀಷ್ಮನು ನುಡಿದ ಹಿತವಾದ ಹಾಗೂ ಅನುಕರಣೀಯವಾದ ಮಾತನ್ನೂ ಹೀನಬುದ್ಧಿಯ ದುರ್ಯೋಧನನು ನಡೆಸಲಿಲ್ಲ.

ತಸ್ಮಿಂಸ್ತು ನಿಹತೇ ಭೀಷ್ಮೇ ಪ್ರಚ್ಯುತೇ ಪೃಥಿವೀಪತೌ ।
ನ ಜಾನೇ ಕಾರಣಂ ಕಿನ್ನು ಯೇನ ಯುದ್ಧಮವರ್ತತ ॥೨೩॥

ಭೀಷ್ಮನು ಸತ್ತಾಗ ರಾಜನು ಎಲ್ಲದರಿಂದಲೂ ಚ್ಯುತನಾದ. ಆದರೂ ಯುದ್ಧವು ಮುಂದುವರಿಯಲು ಕಾರಣವೇನೆಂದು ನಾನೂ ತಿಳಿಯದಾದೆನು.

ಮೂಢಾಂಸ್ತು ಸರ್ವಥಾ ಮನ್ಯೇ ಧಾರ್ತರಾಷ್ಟ್ರಾನ್ ಸುಬಾಲಿಶಾನ್ ।
ಪತಿತೇ ಶಂತನೋಃ ಪುತ್ರೇ ಯೇऽಕಾರ್ಷುಃ ಸಂಗರಂ ಪುನಃ ॥೨೪॥

ಈ ಧೃತರಾಷ್ಟ್ರನ ಮಕ್ಕಳು ಮೂಢರು ಮತ್ತು ಬಾಲಬುದ್ಧಿಯವರೆಂದು ನಾನು ತಿಳಿಯುತ್ತೇನೆ. ಏಕೆಂದರೆ ಶಂತನುವಿನ ಮಗನಾದ ಭೀಷ್ಮನು ಯುದ್ಧದಲ್ಲಿ ಬಿದ್ದಮೇಲೆ ಪುನಃ ಯುದ್ಧವನ್ನು ಯಾರು ಮಾಡಿಯಾರು?

ಅನಂತರಂ ಚ ನಿಹತೇ ದ್ರೋಣೇ ಬ್ರಹ್ಮವಿದಾಂ ವರೇ ।
ರಾಧೇಯೇ ಚ ವಿಕರ್ಣೇ ಚ ನೈವ ಶಾಮ್ಯತಿ ವೈಶಸಮ್ ॥೨೫॥

ಅನಂತರ ಬ್ರಹ್ಮಜ್ಞಾನಿಗಳಲ್ಲಿ ಶೇಷ್ಠನಾದ ದ್ರೋಣನು ಸತ್ತ. ಕರ್ಣ, ವಿಕರ್ಣರೂ ಸತ್ತರು. ಆದರೂ ಈ ಯುದ್ಧದ ಹಿಂಸೆಯು ಕೊನೆಗೊಳ್ಳಲಿಲ್ಲ.

ಅಲ್ಪಾವಶಿಷ್ಟೇ ಸೈನ್ಯೇऽಸ್ಮಿನ್ ಸೂತಪುತ್ರೇ ನಿಪಾತಿತೇ ।
ಸಹಪುತ್ರೇ ನರವ್ಯಾಘ್ರೇ ನೈವ ಶಾಮ್ಯತಿ ವೈಶಸಮ್ ॥೨೬॥

ಸೂತಪುತ್ರ ಕರ್ಣನು ಮಡಿದ ನಂತರ ಅವನ ಮಗನೂ ಸತ್ತುಹೋದ. ಸೈನ್ಯವೂ ಸ್ವಲ್ಪವಷ್ಟೇ ಉಳಿಯಿತು. ಆದರೂ ಈ ವೈರವು ನಾಶವಾಗಲಿಲ್ಲ.

ಭೂರಿಶ್ರವಸಿ ಶಲ್ಯೇ ಚ ಸಾಲ್ವೇ ಚೈವ ಜನಾರ್ದನ ।
ಆವಂತ್ಯೇಷು ಚ ಶೂರೇಷು ನೈವ ಶಾಮ್ಯತಿ ವೈಶಸಮ್ ॥೨೭॥

ಜನಾರ್ದನನೇ! ಭೂರಿಶ್ರವಸ್ಸು, ಶಲ್ಯ, ಸಾಲ್ವ, ಅವಂತಿದೇಶದ ಶೂರರು, ಇವರೆಲ್ಲಾ ಸತ್ತರೂ ಯುದ್ಧದ ಕಾವು ಆರಲಿಲ್ಲ.

ಭಗದತ್ತೇ ಹತೇ ಶೂರೇ ಕಾಂಭೋಜೇ ಚ ಸುದಕ್ಷಿಣೇ ।
ದುಃಶಾಸನೇ ಚ ನಿಹತೇ ನೈವ ಶಾಮ್ಯತಿ ವೈಶಸಮ್ ॥೨೮॥

ಭಗದತ್ತ, ಶೂರನಾದ ಕಾಂಭೋಜರಾಜ ಸುದಕ್ಷಿಣ, ದುಃಶಾಸನ ಇವರೆಲ್ಲರೂ ಸತ್ತರೂ ಯುದ್ಧವು ನಿಲ್ಲಲೇ ಇಲ್ಲ.

ದೃಷ್ಟ್ವಾ ಚ ನಿಹತಾನ್ ಶೂರಾನ್ ಪರಾನ್ ಮಾಂಡಲಿಕಾನ್ ನೃಪಾನ್।
ಬಲಿನಶ್ಚ ರಣೇ ಕೃಷ್ಣ ನೈವ ಶಾಮ್ಯತಿ ವೈಶಸಮ್ ॥೨೯॥

ಕೃಷ್ಣನೇ! ಶೂರರೂ ಸತ್ತರು. ಬೇರೆ ಮಾಂಡಲಿಕ ರಾಜರೂ ಸತ್ತುಹೋದರು. ಬಲಶಾಲಿಗಳಾದ ಯೋಧರೂ ಸತ್ತರು. ಇದನ್ನು ನೋಡಿಯೂ ಯುದ್ಧದ ಹಿಂಸೆಯು ನಿಲ್ಲಲಿಲ್ಲ.

ಅಕ್ಷೋಹಿಣೀಂ ಹತಾಂ ದೃಷ್ಟ್ವಾ ಭೀಮಸೇನೇನ ಸಂಯುಗೇ ।
ಮೋಹಾದ್ವಾ ಯದಿ ವಾ ಲೋಭಾನ್ನೈವ ಶಾಮ್ಯತಿ ವೈಶಸಮ್ ॥೩೦॥

ಯುದ್ಧದಲ್ಲಿ ಭೀಮಸೇನನು ಅಕ್ಷೌಹಿಣಿಸೈನ್ಯವನ್ನು ಸದೆಬಡಿದನು. ಮೋಹದಿಂದಲೋ, ಲೋಭದಿಂದಲೋ ಯುದ್ಧವು ನಿಲ್ಲಲೇ ಇಲ್ಲ.

ಕೋ ನು ರಾಜಾ ಕುಲೇ ಜಾತಃ ಕೌರವೇಯೋ ವಿಶೇಷತಃ ।
ನಿರರ್ಥಕಂ ಮಹದ್ವೈರಂ ಕುರ್ಯಾದನ್ಯಃ ಸುಯೋಧನಾತ್ ॥೩೧॥

ಕುರುವಂಶದಲ್ಲಿ ದುರ್ಯೋಧನನನ್ನು ಬಿಟ್ಟರೆ ಬೇರೆ ಯಾವ ರಾಜನು ತಾನೇ ಹೀಗೆ ನಿಷ್ಪಯೋಜಕವಾದ, ದೀರ್ಘವಾದ ವೈರವನ್ನು ಮಾಡಿಯಾನು?

ಗುಣತೋಽಭ್ಯಧಿಕಾನ್ ಶ್ರುತ್ವಾ ಬಲತಃ ಶೌರ್ಯತೋಽಪಿ ವಾ ।
ಅಮೂಢಃ ಕೋ ನು ಯುದ್ಧ್ಯೇತ ಜಾನನ್ ಪ್ರಾಜ್ಞೋ ಹಿತಾಹಿತಮ್॥

ಒಳಿತು-ಕೆಡುಕುಗಳನ್ನು ವಿಚಾರ ಮಾಡುವ ಬುದ್ಧಿವಂತ ಜ್ಞಾನಿಗಳಾದ ಯಾರೂ ಕೂಡ ಗುಣದಲ್ಲಿ, ಬಲದಲ್ಲಿ ಮತ್ತು ಶೌರ್ಯದಲ್ಲಿ ಅಧಿಕರಾದವರೊಂದಿಗೆ ಎಂದೂ ಯುದ್ಧವನ್ನು ಮಾಡುವುದಿಲ್ಲ.

ಯತ್ತು(ಯತ್ರ) ತಸ್ಯ ಮನೋ ಹ್ಯಾಸೀತ್ ತ್ವಯೋಕ್ತಸ್ಯ ಹಿತಂ ವಚಃ ।
ಪ್ರಶಮೇ ಪಾಂಡವೈಃ ಸಾರ್ಧಂ ಸೋಽನ್ಯಸ್ಯ ಶೃಣುಯಾತ್ ಕಥಮ್ ॥

ತಸ್ಮಿಂಸ್ತು ನಿಹತೇ ಭೀಷ್ಮೇ ಪ್ರಚ್ಯುತೇ ಪೃಥಿವೀಪತೌ ।
ನ ಜಾನೇ ಕಾರಣಂ ಕಿನ್ನು ಯೇನ ಯುದ್ಧಮವರ್ತತ ॥೨೩॥

ಭೀಷ್ಮನು ಸತ್ತಾಗ ರಾಜನು ಎಲ್ಲದರಿಂದಲೂ ಚ್ಯುತನಾದ. ಆದರೂ ಯುದ್ಧವು ಮುಂದುವರಿಯಲು ಕಾರಣವೇನೆಂದು ನಾನೂ ತಿಳಿಯದಾದೆನು.

ಮೂಢಾಂಸ್ತು ಸರ್ವಥಾ ಮನ್ಯೇ ಧಾರ್ತರಾಷ್ಟ್ರಾನ್ ಸುಬಾಲಿಶಾನ್ ।
ಪತಿತೇ ಶಂತನೋಃ ಪುತ್ರೇ ಯೇಽಕಾರ್ಷುಃ ಸಂಗರಂ ಪುನಃ ॥೨೪॥

ಈ ಧೃತರಾಷ್ಟ್ರನ ಮಕ್ಕಳು ಮೂಢರು ಮತ್ತು ಬಾಲಬುದ್ಧಿಯವರೆಂದು ನಾನು ತಿಳಿಯುತ್ತೇನೆ. ಏಕೆಂದರೆ ಶಂತನುವಿನ ಮಗನಾದ ಭೀಷ್ಮನು ಯುದ್ಧದಲ್ಲಿ ಬಿದ್ದಮೇಲೆ ಪುನಃ ಯುದ್ಧವನ್ನು ಯಾರು ಮಾಡಿಯಾರು?

ಅನಂತರಂ ಚ ನಿಹತೇ ದ್ರೋಣೇ ಬ್ರಹ್ಮವಿದಾಂ ವರೇ ।
ರಾಧೇಯೇ ಚ ವಿಕರ್ಣೇ ಚ ನೈವ ಶಾಮ್ಯತಿ ವೈಶಸಮ್ ॥೨೫॥

ಅನಂತರ ಬ್ರಹ್ಮಜ್ಞಾನಿಗಳಲ್ಲಿ ಶೇಷ್ಠನಾದ ದ್ರೋಣನು ಸತ್ತ. ಕರ್ಣ, ವಿಕರ್ಣರೂ ಸತ್ತರು. ಆದರೂ ಈ ಯುದ್ಧದ ಹಿಂಸೆಯು ಕೊನೆಗೊಳ್ಳಲಿಲ್ಲ.

ಅಲ್ಪಾವಶಿಷ್ಟೇ ಸೈನ್ಯೇಽಸ್ಮಿನ್ ಸೂತಪುತ್ರೇ ನಿಪಾತಿತೇ ।
ಸಹಪುತ್ರೇ ನರವ್ಯಾಘ್ರೇ ನೈವ ಶಾಮ್ಯತಿ ವೈಶಸಮ್ ॥೨೬॥

ಸೂತಪುತ್ರ ಕರ್ಣನು ಮಡಿದ ನಂತರ ಅವನ ಮಗನೂ ಸತ್ತುಹೋದ. ಸೈನ್ಯವೂ ಸ್ವಲ್ಪವಷ್ಟೇ ಉಳಿಯಿತು. ಆದರೂ ಈ ವೈರವು ನಾಶವಾಗಲಿಲ್ಲ.

ಭೂರಿಶ್ರವಸಿ ಶಲ್ಯೇ ಚ ಸಾಲ್ವೇ ಚೈವ ಜನಾರ್ದನ ।
ಆವಂತ್ಯೇಷು ಚ ಶೂರೇಷು ನೈವ ಶಾಮ್ಯತಿ ವೈಶಸಮ್ ॥೨೭॥

ಜನಾರ್ದನನೇ! ಭೂರಿಶ್ರವಸ್ಸು, ಶಲ್ಯ, ಸಾಲ್ವ, ಅವಂತಿದೇಶದ ಶೂರರು, ಇವರೆಲ್ಲಾ ಸತ್ತರೂ ಯುದ್ಧದ ಕಾವು ಆರಲಿಲ್ಲ.

ಭಗದತ್ತೇ ಹತೇ ಶೂರೇ ಕಾಂಭೋಜೇ ಚ ಸುದಕ್ಷಿಣೇ ।
ದುಃಶಾಸನೇ ಚ ನಿಹತೇ ನೈವ ಶಾಮ್ಯತಿ ವೈಶಸಮ್ ॥೨೮॥

ಭಗದತ್ತ, ಶೂರನಾದ ಕಾಂಭೋಜರಾಜ ಸುದಕ್ಷಿಣ, ದುಃಶಾಸನ ಇವರೆಲ್ಲರೂ ಸತ್ತರೂ ಯುದ್ಧವು ನಿಲ್ಲಲೇ ಇಲ್ಲ.

ದೃಷ್ಟ್ವಾ ಚ ನಿಹತಾನ್ ಶೂರಾನ್ ಪರಾನ್ ಮಾಂಡಲಿಕಾನ್ ನೃಪಾನ್।
ಬಲಿನಶ್ಚ ರಣೇ ಕೃಷ್ಣ ನೈವ ಶಾಮ್ಯತಿ ವೈಶಸಮ್ ॥೨೯॥

ಕೃಷ್ಣನೇ! ಶೂರರೂ ಸತ್ತರು. ಬೇರೆ ಮಾಂಡಲಿಕ ರಾಜರೂ ಸತ್ತುಹೋದರು. ಬಲಶಾಲಿಗಳಾದ ಯೋಧರೂ ಸತ್ತರು. ಇದನ್ನು ನೋಡಿಯೂ ಯುದ್ಧದ ಹಿಂಸೆಯು ನಿಲ್ಲಲಿಲ್ಲ.

ಅಕ್ಷೋಹಿಣೀಂ ಹತಾಂ ದೃಷ್ಟ್ವಾ ಭೀಮಸೇನೇನ ಸಂಯುಗೇ ।
ಮೋಹಾದ್ವಾ ಯದಿ ವಾ ಲೋಭಾನ್ನೈವ ಶಾಮ್ಯತಿ ವೈಶಸಮ್ ॥೩೦॥

ಯುದ್ಧದಲ್ಲಿ ಭೀಮಸೇನನು ಅಕ್ಷೌಹಿಣಿಸೈನ್ಯವನ್ನು ಸದೆಬಡಿದನು. ಮೋಹದಿಂದಲೋ, ಲೋಭದಿಂದಲೋ ಯುದ್ಧವು ನಿಲ್ಲಲೇ ಇಲ್ಲ.

ಕೋ ನು ರಾಜಾ ಕುಲೇ ಜಾತಃ ಕೌರವೇಯೋ ವಿಶೇಷತಃ ।
ನಿರರ್ಥಕಂ ಮಹದ್ವೈರಂ ಕುರ್ಯಾದನ್ಯಃ ಸುಯೋಧನಾತ್ ॥೩೧॥

ಕುರುವಂಶದಲ್ಲಿ ದುರ್ಯೋಧನನನ್ನು ಬಿಟ್ಟರೆ ಬೇರೆ ಯಾವ ರಾಜನು ತಾನೇ ಹೀಗೆ ನಿಷ್ಪ್ರಯೋಜಕವಾದ, ದೀರ್ಘವಾದ ವೈರವನ್ನು ಮಾಡಿಯಾನು?

ಗುಣತೋಽಭ್ಯಧಿಕಾನ್ ಶ್ರುತ್ವಾ ಬಲತಃ ಶೌರ್ಯತೋಽಪಿ ವಾ ।
ಅಮೂಢಃ ಕೋ ನು ಯುದ್ಧ್ಯೇತ ಜಾನನ್ ಪ್ರಾಜ್ಞೋ ಹಿತಾಹಿತಮ್॥

ಒಳಿತು-ಕೆಡುಕುಗಳನ್ನು ವಿಚಾರ ಮಾಡುವ ಬುದ್ಧಿವಂತ ಜ್ಞಾನಿಗಳಾದ ಯಾರೂ ಕೂಡ ಗುಣದಲ್ಲಿ, ಬಲದಲ್ಲಿ ಮತ್ತು ಶೌರ್ಯದಲ್ಲಿ ಅಧಿಕರಾದವರೊಂದಿಗೆ ಎಂದೂ ಯುದ್ಧವನ್ನು ಮಾಡುವುದಿಲ್ಲ.

ಯತ್ತು(ಯತ್ರ) ತಸ್ಯ ಮನೋ ಹ್ಯಾಸೀತ್ ತ್ವಯೋಕ್ತಸ್ಯ ಹಿತಂ ವಚಃ ।
ಪ್ರಶಮೇ ಪಾಂಡವೈಃ ಸಾರ್ಧಂ ಸೋಽನ್ಯಸ್ಯ ಶೃಣುಯಾತ್ ಕಥಮ್ ॥

ಯೇನ ಶಾಂತನವೋ ಭೀಷ್ಮೋ ದ್ರೋಣೋ ವಿದುರ ಏವ ಚ ।
ಪ್ರತ್ಯಾಖ್ಯಾತಾಃ ಶಮಸ್ಯಾರ್ಥೇ ಕಿನ್ನು ತಸ್ಯಾಸ್ತಿ ಭೇಷಜಮ್ ॥೩೪॥

ನಿನ್ನ ಹಿತವಾದ ಮಾತನ್ನು ಕೇಳಿಯೂ ಯಾವನ ಮನಸ್ಸು ಪಾಂಡವರೊಂದಿಗೆ ಸಂಧಿಮಾಡಲು ಉದ್ಯುಕ್ತವಾಗಲಿಲ್ಲವೋ ಅಂತಹವನು ಬೇರೆಯವರ ಮಾತನ್ನು ಹೇಗೆ ಕೇಳಿಯಾನು? ಯಾವ ದುರ್ಯೋಧನನು ಸಂಧಿಯ ವಿಚಾರದಲ್ಲಿ ಭೀಷ್ಮನನ್ನು, ದ್ರೋಣನನ್ನು, ವಿದುರನನ್ನು ತಿರಸ್ಕರಿಸಿದನೋ ಅಂತಹವನಿಗೆ ಬೇರೆ ಯಾವ ಔಷಧಿ ಇದ್ದೀತು?

ಮೋಹಾದ್ಯೇನ ಪಿತಾ ವೃದ್ಧಃ ಪ್ರತ್ಯಾಖ್ಯಾತೋ ಜನಾರ್ದನ ।
ತಥಾ ಮಾತಾ ಹಿತಂ ವಾಕ್ಯಂ ಭಾಷಮಾಣಾ ಹಿತೈಷಿಣೀ ॥೩೫॥

ಪ್ರತ್ಯಾಖ್ಯಾತಾ ಹ್ಯಸತ್ಕೃತ್ಯ ಕಸ್ಮಾದ್ ರೋಚಯತೇ ವಚಃ ॥೩೬॥

ಜನಾರ್ದನನೇ! ಯಾವ ದುರ್ಯೋಧನನು ರಾಜ್ಯಮೋಹದಿಂದ ವೃದ್ಧನಾದ ತಂದೆಯ ಹಾಗೂ ತಾಯಿಯ ಹಿತವಾದ ಮಾತನ್ನು ತಿರಸ್ಕರಿಸಿದನೋ ಅಂಥವನಿಗೆ ಬೇರೆ ಯಾವ ವಾಕ್ಯವು ಹಿತವೆನಿಸಲು ಸಾಧ್ಯ?

ಕುಲಾಂತಕರಣೋ ವ್ಯಕ್ತಂ ಜಾತ ಏಷ ಜನಾರ್ದನ ।
ಯಥಾಸ್ಯ ದೃಶ್ಯತೇ ಚೇಷ್ಟಾ ನೀತಿಶ್ಚೈವ ವಿಶಾಂಪತೇ ॥೩೭॥

ಜನಾರ್ದನನೇ! ಇವನು ಕೌರವಕುಲನಾಶಮಾಡಲೆಂದೇ ಹುಟ್ಟಿದವನು ಎಂಬುದು ಅವನ ನಡವಳಿಕೆಗಳು ಮತ್ತು ನೀತಿಗಳನ್ನು ನೋಡಿದಾಗ ಸ್ಪಷ್ಟವಾಗಿ ಗೋಚರಿಸುತ್ತಿದೆ.

ನೈಷ ದಾಸ್ಯತಿ ನೋ ರಾಜ್ಯಮಿತಿ ಮೇ ಮತಿರಚ್ಯುತ ॥೩೮॥

ಅಚ್ಯುತನೇ! ಅವನು ರಾಜ್ಯವನ್ನು ಕೊಡಲಾರ ಎಂದು ನನಗೆ ತೋರುತ್ತದೆ.

ಉಕ್ತೋ ಹಿ ಬಹುಶಸ್ತಾತ ವಿದುರೇಣ ಮಹಾತ್ಮನಾ ।
ನ ಜೀವನ್ ದಾಸ್ಯತೇ ಭಾಗಂ ಧಾರ್ತರಾಷ್ಟ್ರಃ ಕಥಂಚನ ॥೩೯॥

ಯಾವತ್ ಪ್ರಾಣಾ ಧರಿಷ್ಯಂತಿ ಧಾರ್ತರಾಷ್ಟ್ರೇಽಪಿ ಮಾನದ ।
ತಾವದ್ಯುಷ್ಮಾಸ್ವಪಾಪೇಷು ಪ್ರಕರಿಷ್ಯಂತಿ ಪಾಪಕಮ್ ॥೪೦॥

ನ ಚ ಶಕ್ಯೋಽನ್ಯಥಾ ಜೇತುಮ್ ಋತೇ ಯುದ್ಧೇನ ಮಾಧವ ।
ಇತ್ಯಬ್ರವೀತ್ ಸದಾ ಮಾಂ ಹಿ ವಿದುರಃ ಸತ್ಯದರ್ಶನಃ ॥೪೧॥

ಪ್ರಿಯನೇ! ಮಾಧವನೇ! ಸತ್ಯದರ್ಶನನಾದ ವಿದುರನು ನನಗೆ ಅನೇಕ ಬಾರಿ ಹೀಗೆ ಹೇಳಿದ್ದ- ದುರ್ಯೋಧನನು ಜೀವ ಇರುವಲ್ಲಿವರೆಗೆ ರಾಜ್ಯದ ಭಾಗವನ್ನು ಯಾವ ರೀತಿಯಲ್ಲಿಯೂ ಕೊಡುವುದಿಲ್ಲ. ಮಾನವಂತ ಅರ್ಜುನನೇ! ದುರ್ಯೋಧನನು ದೇಹದಲ್ಲಿ ಪ್ರಾಣ ಇರುವಲ್ಲಿಯ ತನಕ ತಪ್ಪು ಮಾಡದ ನಿಮ್ಮಲ್ಲಿ ಪಾಪಕೆಲಸಗಳನ್ನು ಮಾಡುತ್ತಲೇ ಇರುತ್ತಾನೆ. ಅವನನ್ನು ಮಣಿಸಲು ಯುದ್ಧವಲ್ಲದೆ ಬೇರೆ ದಾರಿಯೇ ಇಲ್ಲ.

ತತ್ ಸರ್ವಮದ್ಯ ಜಾನಾಮಿ ವ್ಯವಸಾಯಂ ದುರಾತ್ಮನಃ ।
ಯದುಕ್ತಂ ವಚನಂ ತೇನ ವಿದುರೇಣ ಮಹಾತ್ಮನಾ ॥೪೨॥

ಮಹಾತ್ಮನಾದ ವಿದುರನು ಯಾವ ಮಾತನ್ನು ಹೇಳಿದ್ದನೋ ಆ ಎಲ್ಲಪ್ರಯತ್ನಗಳನ್ನು ದುರಾತ್ಮನಾದ ದುರ್ಯೋಧನನು ಮಾಡುತ್ತಿರುವುದನ್ನು ಇಂದು ನಾನು ನೋಡಿ ತಿಳಿಯುತ್ತಿದ್ದೇನೆ.

ಯೋ ಹಿ ಶ್ರುತ್ವಾ ವಚಃ ಪಥ್ಯಂ ಧಾರ್ತರಾಷ್ಟ್ರೋ ಯಥಾತಥಮ್ ।
ನಾಕರೋದ್ ವಿದುರಸ್ಯಾತೋ ಧ್ರುವಂ ನಾಶ ಉಪಸ್ಥಿತಃ ॥೪೩॥

ಯಾವ ದುರ್ಯೋಧನನು ವಿದುರನ ಪಥ್ಯವಾದ ಹಿತನುಡಿಗಳನ್ನು ಕೇಳಿ ಅದರಂತೆ ನಡೆಯಲಿಲ್ಲವೋ, ಆ ಕಾರಣದಿಂದ ಖಂಡಿತವಾಗಿಯೂ ಅವನ ನಾಶವು ಸಮೀಪಿಸುತ್ತಿದೆ.

ಉಕ್ತಂ ಹಿ ಬಹುಭಿಃ ಸಿದ್ಧೈರ್ಜಾತಮಾತ್ರೇ ಸುಯೋಧನೇ ।
ಏನಂ ಪ್ರಾಪ್ಯ ದುರಾತ್ಮಾನಂ ಕ್ಷಯಂ ಕ್ಷತ್ರಂ ಗಮಿಷ್ಯತಿ ॥೪೪॥

ಈ ದುರ್ಯೋಧನನು ಹುಟ್ಟಿದಾಕ್ಷಣ ಅನೇಕ ಸಿದ್ಧಪುರುಷರು ಹೇಳಿದ್ದರು ''ದುಷ್ಟನಾದ ಇವನನ್ನು ಪಡೆದ ಕುಲವೇ ನಿರ್ವಂಶವಾಗುತ್ತದೆ'' ಎಂದು.

ತದಿದಂ ವಚನಂ ತೇಷಾಂ ಸತ್ಕರಿಷ್ಯಾಮಿ ಮಾಧವ ॥೪೫॥

ಮಾಧವ! ಇವರ ಮಾತನ್ನು ನಾನಿಂದು ಸತ್ಯವನ್ನಾಗಿ ಮಾಡುತ್ತೇನೆ.

ಕ್ಷತ್ರಿಯೇಷು ಹತೇಷ್ವಾಶು ಶೂನ್ಯೇ ಚ ಶಿಬಿರೇ ಕೃತೇ ।
ವಧಾಯ ಚಾತ್ಮನೋಽಸ್ಮಾಭಿಃ ಸಂಯುಗಂ ರೋಚಯಿಷ್ಯತಿ ॥೪೬॥

ಕ್ಷತ್ರಿಯವೀರರು ಸತ್ತು ಸೇನಾಶಿಬಿರಗಳು ಬರಿದಾದಾಗ ದುರ್ಯೋಧನನು ತನ್ನ ನಾಶಕ್ಕಾಗಿ ನಮ್ಮೊಂದಿಗೆ ಯುದ್ಧವನ್ನು ಬಯಸುತ್ತಾನೆ.

ತದಂತಂ ಹಿ ಭವೇದ್ ವೈರಮನುಮಾನೇನ ಮಾಧವ ॥೪೭॥

ಮಾಧವ! ಹೀಗೆ ಅವನು ಸತ್ತಮೇಲೆ ಅವನ ದ್ವೇಷವು ಉಪಶಮನಗೊಳ್ಳುತ್ತದೆ ಎಂಬುದಾಗಿ ನಾನು ಊಹಿಸುತ್ತೇನೆ.

ಏವಂ ಪಶ್ಯಾಮಿ ವಾರ್ಷ್ಣೇಯ ಚಿಂತಯನ್ ಪ್ರಜ್ಞಯಾ ಸ್ವಯಮ್ ।
ವಿದುರಸ್ಯ ಚ ವಾಕ್ಯೇನ ಚೇಷ್ಟಯಾ ಚ ದುರಾತ್ಮನಃ ॥೪೮॥

ವಾರ್ಷ್ಣೇಯ! ಹೀಗೆ ನನ್ನ ಅಂತಃಪ್ರಜ್ಞೆಯಿಂದ, ವಿದುರನ ವಾಕ್ಯದಿಂದ ಹಾಗೂ ದುಷ್ಟನಾದ ದುರ್ಯೋಧನನ ಚೇಷ್ಟೆಯಿಂದ ಮುಂದೆ ನಡೆಯುವುದನ್ನು ಊಹಿಸಿ ನೋಡುತ್ತೇನೆ.

ತಸ್ಮಾದ್ ಯಾಹಿ ಚಮೂಂ ವೀರ ಯಾವದ್ದನ್ಮಿ ಶಿತೈಃ ಶರೈಃ ।
ದುರ್ಯೋಧನಂ ದುರಾತ್ಮಾನಂ ವಾಹಿನೀಂ ಚಾಸ್ಯ ಸಂಯುಗೇ ॥೪೯॥

ಆದ್ದರಿಂದ ಹರಿತವಾದ ಬಾಣಗಳಿಂದ ಅವನ ಸೈನ್ಯವನ್ನು ಕೊಲ್ಲಲು ಅನುಕೂಲವಾಗುವ ರೀತಿಯಲ್ಲಿ ರಥವನ್ನು ನಡೆಸು. ದುಷ್ಟನಾದ ದುರ್ಯೋಧನನನ್ನೂ ಅವನ ಸೈನ್ಯವನ್ನೂ ಯುದ್ಧದಲ್ಲಿ ಕೊಲ್ಲಲು ಯೋಗ್ಯವಾದ ಸ್ಥಳಕ್ಕೆ ಕರೆದುಕೊಂಡು ಹೋಗು.

ಕ್ಷೇಮಮದ್ಯ ಕರಿಷ್ಯಾಮಿ ಧರ್ಮರಾಜಸ್ಯ ಮಾಧವ ।
ಹತ್ವೇತದ್ ದುರ್ಬಲಂ ಸೈನ್ಯಂ ಧಾರ್ತರಾಷ್ಟ್ರಸ್ಯ ಪಶ್ಯತಃ ॥೫೦॥

ಮಾಧವನೇ! ಇವತ್ತು ದುರ್ಯೋಧನನ ದುರ್ಬಲವಾದ ಈ ಸೈನ್ಯವನ್ನು ಅವನ ಸಮ್ಮುಖದಲ್ಲಿಯೇ ಕೊಂದು, ಆ ಮೂಲಕ ಧರ್ಮರಾಜನಿಗೆ ಮಂಗಳವನ್ನು ಉಂಟುಮಾಡುತ್ತೇನೆ.

ಸಂಜಯಃ

ಅಭೀಶುಹಸ್ತೋ ದಾಶಾರ್ಹಸ್ತಥೋಕ್ತಃ ಸವ್ಯಸಾಚಿನಾ ।
ತಂ ಬಲೌಘಮಮಿತ್ರಾಣಾಂ ತೂರ್ಣಂ ಸಂಪ್ರಾವಿಶದ್ ರಣೇ ॥೫೧॥

ಸಂಜಯ– ಅರ್ಜುನನು ಹೀಗೆ ಹೇಳಲು ಶ್ರೀಕೃಷ್ಣನು ಕುದುರೆಲಗಾಮನ್ನು ಕೈಯಲ್ಲಿ ಹಿಡಿದುಕೊಂಡು ಬೇಗನೇ ಶತ್ರುಗಳ ಸೈನ್ಯದ ಒಳಗೆ ಪ್ರವೇಶ ಮಾಡಿದನು.

ಶರಾಸನವರಂ ಘೋರಂ ಶಕ್ತಿಕಂಟಕಸಂವೃತಮ್ ।
ಗದಾಪರಿಘಪಾಷಾಣಂ ರಥನಾಗಮಹಾದ್ರುಮಮ್ ॥೫೨॥

ಹಯಪತ್ತಿಸಮಾಕೀರ್ಣಂ ಗಾಹಮಾನೋ ಮಹಾಯಶಾಃ ।
ವ್ಯಚರತ್ ತತ್ರ ಗೋವಿಂದಃ ಸ್ವರಥೇನಾಶುಪಾತಿನಾ ॥೫೩॥

ರಣರಂಗದಲ್ಲಿ ಬಿಲ್ಲು, ಶಕ್ತಿ, ಕಂಟಕ ಮೊದಲಾದವು ಎಲ್ಲಾ ಕಡೆಯೂ ಬಿದ್ದಿದ್ದವು. ಅಲ್ಲಿ ಬಿದ್ದಿರುವ ಶಕ್ತ್ಯಾಯುಧಗಳೇ ಕಂಟಕಗಳು. ಗದೆ ಮತ್ತು ಪರಿಘಾಯುಧಗಳೇ ಅಲ್ಲಿರುವ ಕಲ್ಲುಗಳು. ರಥ ಮತ್ತು ಆನೆಗಳೇ ದೊಡ್ಡ ಮರಗಳು. ಕುದುರೆಗಳು ಮತ್ತು ಪದಾತಿಗಳು ತುಂಬಿಹೋಗಿದ್ದರು. ಅಂತಹ ಸೈನ್ಯವನ್ನು ಪ್ರವೇಶಿಸಿ, ಶ್ರೀಕೃಷ್ಣನು ಶೀಘ್ರವಾಗಿ ಚಲಿಸುವ ತನ್ನ ರಥದ ಮೇಲೆ ಕುಳಿತು ಸಂಚರಿಸಿದನು.

ತೇ ಹಯಾಃ ಪಾಂಡರಾ ರಾಜನ್ ವಹಂತೋಽರ್ಜುನಮಾಹವೇ ।
ದಿಕ್ಷು ಸರ್ವಾಸ್ವದೃಶ್ಯಂತ ದಾಶಾರ್ಹೇಣ ಪ್ರಚೋದಿತಾಃ ॥೫೪॥

ರಾಜನೇ! ಶ್ರೀಕೃಷ್ಣನಿಂದ ಪ್ರೇರಿತವಾದ ಬೆಳ್ಳಗಿನ ಕುದುರೆಗಳು ಯುದ್ಧದಲ್ಲಿ ಅರ್ಜುನನನ್ನು ಎಲ್ಲಾ ದಿಕ್ಕುಗಳಲ್ಲಿಯೂ ಕರೆದೊಯ್ದವು.

ತತಃ ಪ್ರಾಯಾದ್ ರಥೇನಾಜೌ ಸವ್ಯಸಾಚೀ ಪರಂತಪಃ ।
ಕಿರನ್ ಶರಶತಾಂಸ್ತೀಕ್ಷ್ಣಾನ್ ವಾರಿಧಾರಾ ಇವಾಂಬುದಃ ॥೫೫॥

ಶತ್ರುತಾಪಕನಾದ ಅರ್ಜುನನು ರಥದ ಮೂಲಕ ಯುದ್ಧಕ್ಕೆ ತೆರಳಿದನು. ಮೋಡವು ಮಳೆಯನ್ನು ಸುರಿಸುವಂತೆ ಅರ್ಜುನನು ನೂರಾರು ತೀಕ್ಷ್ಣವಾದ ಬಾಣಗಳ ಮಳೆಗರೆದನು.

ಪ್ರಾದುರಾಸೀನ್ಮಹಾಶಬ್ದಃ ಶರಾಣಾಂ ನತಪರ್ವಣಾಮ್ ।
ಇಷುಭಿಶ್ಚಾದ್ಯಮಾನಾನಾಂ ಸಂಗ್ರಾಮೇ ಸವ್ಯಸಾಚಿನಾ ॥೫೬॥

ಅರ್ಜುನನು ಬಾಗಿದ ಸಂಧಿಯುಳ್ಳ ಬಾಣಗಳಿಂದ ಎಲ್ಲರನ್ನೂ ಮುಚ್ಚಿಹಾಕಿದನು. ಆಗ ಬಾಣಗಳಿಂದ ದೊಡ್ಡ ಶಬ್ದವು ಉಂಟಾಯಿತು.

ಅಸಜ್ಜಂತಸ್ತನುತ್ರೇಷು ಶರೌಘಾಃ ಪ್ರಾಪತನ್ ಭುವಿ ।
ಇಂದ್ರಾಶನಿಸಮಸ್ಪರ್ಶಾ ಗಾಂಡೀವಪ್ರೇಷಿತಾಃ ಶರಾಃ ॥೫೭॥

ಇಂದ್ರನ ವಜ್ರಾಯುಧದ ಸ್ಪರ್ಶಕ್ಕೆ ಸದೃಶವಾದ, ಗಾಂಡೀವಧನುಸ್ಸಿನಿಂದ ಹೊರಟ ಬಾಣಗಳು ಯೋಧರ ದೇಹದ ಕವಚದಲ್ಲಿ ಸಿಕ್ಕಿಕೊಳ್ಳದೆ, ಅವುಗಳಿಗೆ ತಾಗಿ ಕೆಳಗೆ ಬಿದ್ದವು.

ನರಾನ್ ನಾಗಾನ್ ಸಮಾಹತ್ಯ ಹಯಾಂಶ್ಚಾಪಿ ವಿಶಾಂಪತೇ ।
ಅಪತಂಸ್ತು ರಣೇ ಬಾಣಾಃ ಪತಂಗಾ ಇವ ಫೋಷಿಣಃ ॥೫೮॥

ರಾಜನೇ! ಮನುಷ್ಯರನ್ನು, ಆನೆಗಳನ್ನು, ಕುದುರೆಗಳನ್ನು ಹೊಡೆದು ಕೆಳಗೆ ಬೀಳುತ್ತಿರುವ ಬಾಣಗಳು ರಣರಂಗದಲ್ಲಿ ಪತಂಗಗಳು ಬೀಳುವಂತೆ ಬೀಳುತ್ತಿದ್ದವು.

ಆಸೀತ್ ಸರ್ವಮವಚ್ಛನ್ನಂ ಗಾಂಡೀವಪ್ರೇಷಿತೈಃ ಶರೈಃ ।
ನ ಪ್ರಾಜ್ಞಾಯಂತ ಸಂಗ್ರಾಮೇ ದಿಶೋ ವಾ ಪ್ರದಿಶೋಽಪಿ ವಾ ॥೫೯॥

ಗಾಂಡೀವ ಧನುಸ್ಸಿನಿಂದ ಪ್ರಯುಕ್ತವಾದ ಬಾಣಗಳು ಎಲ್ಲವನ್ನೂ ಮುಚ್ಚಿಹಾಕಿದವು. ಆಗ ಯುದ್ಧಾಂಗಣದಲ್ಲಿ ದಿಕ್ಕುಗಳನ್ನು ಮತ್ತು ವಿದಿಕ್ಕುಗಳನ್ನು ತಿಳಿಯುವುದೇ ಸಾಧ್ಯವಾಗಲಿಲ್ಲ.

ಸರ್ವಮಾಸೀಜ್ಜಗತ್ ಪೂರ್ಣಂ ಪಾರ್ಥನಾಮಾಂಕಿತೈಃ ಶರೈಃ ।
ರುಗ್ಮಪುಂಖೈಃ ಶಿತೈರ್ಬಾಣೈಃ ಕರ್ಮಾರಪರಿಮಾರ್ಜಿತೈಃ ॥೬೦॥

ಕಮ್ಮಾರನು ಚೆನ್ನಾಗಿ ಶುಭ್ರಗೊಳಿಸಿದ, ಬಂಗಾರದ ರೆಕ್ಕೆಗಳುಳ್ಳ ಹಾಗೂ ಪಾಂಡವರ ರಾಜಮುದ್ರೆಯನ್ನು ಹೊಂದಿದ ಹರಿತವಾದ ಬಾಣಗಳಿಂದ ಇಡೀ ಪ್ರಪಂಚವೇ ತುಂಬಿಹೋಯಿತು.

ತೇ ದಹ್ಯಮಾನಾಃ ಪಾರ್ಥೇನ ಪಾವಕೇನೇವ ಕುಂಜರಾಃ ।
ಸಮಾಸೀದಂಸ್ತು ಕೌರವ್ಯ ವಧ್ಯಮಾನಾಃ ಶಿತೈಃ ಶರೈಃ ॥೬೧॥

ಅರ್ಜುನನ ಹರಿತವಾದ ಬಾಣಗಳಿಂದ ಹೊಡೆಯಲ್ಪಟ್ಟ ಆನೆಗಳು ಬೆಂಕಿಯಿಂದ ಸುಟ್ಟುಹೋಗುವಂತೆ ಸುಟ್ಟುಹೋಗುತ್ತಿದ್ದವು ಮತ್ತು ಬಹಳ ದುಃಖವನ್ನು ಅನುಭವಿಸುತ್ತಿದ್ದವು.

ಶರಚಾಪಧರಃ ಪಾರ್ಥಃ ಪ್ರಜ್ವಲನ್ನಿವ ಭಾರತ ।
ದದಾಹ ಸಮರೇ ಯೋಧಾನ್ ಕಕ್ಷಮಗ್ನಿರಿವ ಜ್ವಲನ್ ॥೬೨॥

ಭರತಕುಲೋದ್ಭವನೇ! ಬಾಣ-ಬಿಲ್ಲುಗಳನ್ನು ಧರಿಸಿರುವ ಅರ್ಜುನನು ಪ್ರಜ್ವಲಿಸುತ್ತಾ, ಅಗ್ನಿಯು ಕಾಡನ್ನು ಸುಡುವಂತೆ ಯುದ್ಧದಲ್ಲಿ ಯೋಧರನ್ನು ಸುಟ್ಟುಹಾಕಿದನು.

ಯಥಾ ವನಾಂತೇ ವನಜೈರ್ವಿಸೃಷ್ಟಃ
ಕಕ್ಷಂ ದಹೇತ್ ಕೃಷ್ಣಗತಿಃ ಸುಘೋರಃ ।
ಭೂರಿದ್ರುಮಂ ಶುಷ್ಕಲತಾಪ್ರತಾನಂ
ಭೃಶಂ ಸಮಿದ್ಧೋ ಜ್ವಲನಃ ಪ್ರತಾಪೀ ॥೬೩॥

ಕಾಡಿನಲ್ಲಿಯೇ ಬೆಳೆದ ಬಿದಿರುಗಳಿಂದ ಉಂಟಾದ ಕಾಡ್ಗಿಚ್ಚು ಕಪ್ಪಾದ ಹೊಗೆಯನ್ನು ಉಗುಳುತ್ತಾ, ಭಯಂಕರವಾಗಿ ಹಬ್ಬಿ, ಎತ್ತರವಾಗಿ ಬೆಳೆದ ಮರಗಳುಳ್ಳ, ಒಣಗಿದ ಲತೆಗಳಿಂದ ಪೂರ್ಣವಾದ ಕಾಡನ್ನು ಸುಟ್ಟುಹಾಕುತ್ತದೆ. ಅದರಿಂದ ಮತ್ತೂ ಪ್ರಜ್ವಲಿಸಿ ತನ್ನ ಪ್ರತಾಪವನ್ನು ತೋರಿಸುತ್ತದೆ.

ಏವಂ ಸ ನಾರಾಚಗಣಪ್ರತಾಪೀ
ಶರಾಗ್ನಿರುಚ್ಚಾವಚತಿಗ್ಮತೇಜಾಃ ।
ದದಾಹ ಸರ್ವಾಂ ತವ ಪುತ್ರಸೇನಾಮ್
ಅಮೃಷ್ಯಮಾಣಸ್ತರಸಾ ತರಸ್ವೀ ॥೬೪॥

ಹಾಗೆಯೇ ಆ ಬಾಣಗಳನ್ನು ಬಿಡುವುದರಲ್ಲಿ ಪ್ರತಾಪವುಳ್ಳ, ಮೇಲೆ ಕೆಳಗೆ ಹರಡಿದ ಕಠೋರವಾದ ತೇಜಸ್ಸುಳ್ಳ ಅರ್ಜುನನ ಬಾಣದ ಅಗ್ನಿಯು ಸಹನೆಯನ್ನು ಕಳೆದುಕೊಂಡು ನಿನ್ನ ಮಗನ ಎಲ್ಲಾ ಸೈನ್ಯವನ್ನು ಸುಟ್ಟುಹಾಕಿತು.

ತಸ್ಯೇಷವಃ ಪ್ರಾಣಹರಾಃ ಸುಮುಕ್ತಾ
ನ ಸಜ್ಜಂತೇ ವರ್ಮಸು ರುಗ್ಮಪಂಖಾಃ ।
ನ ಚ ದ್ವಿತೀಯಂ ಪ್ರಮುಮೋಚ ಕಾಂಡಮ್
ನರೇ ಹಯೇ ವಾಽಪಿ ರಥೇ ದ್ವಿಪೇ ವಾ ॥೬೫॥

ಅರ್ಜುನನು ಪ್ರಯೋಗಿಸಿದ ಬಾಣಗಳು ಪ್ರಾಣವನ್ನೇ ತೆಗೆಯುವ ಸಾಮರ್ಥ್ಯವುಳ್ಳವು. ಅವು ಕವಚಗಳಲ್ಲಿ ಅಂಟಿಕೊಳ್ಳಲಿಲ್ಲ, ಕವಚಗಳನ್ನೇ ಸೀಳಿ ಆ ಕಡೆ ಬರುತ್ತಿದ್ದವು. ಅರ್ಜುನನು ಮತ್ತೆ ಬಾಣವನ್ನು ಪ್ರಯೋಗಿಸುತ್ತಿರಲಿಲ್ಲ, ಅವನ ಒಂದೇ ಬಾಣದಿಂದ ಶತ್ರುಗಳು ನಾಶವಾಗುತ್ತಿದ್ದರು.

ಅನೇಕರೂಪಾಕೃತಿಭಿಶ್ಚ ಬಾಣೈಃ
ಮಹಾರಥಾನೀಕಮನುಪ್ರವಿಶ್ಯ ।
ಸ ಏವಮೇಕಂ ತವ ಪುತ್ರಸೇನಾಂ
ಜಘಾನ ದೈತ್ಯಾನಿವ ವಜ್ರಪಾಣಿಃ ॥೬೬॥

ವಜ್ರಪಾಣಿಯಾದ ದೇವೇಂದ್ರನು ದೈತ್ಯರನ್ನು ಕೊಂದುಹಾಕಿದಂತೆ ಅರ್ಜುನನು ಅನೇಕ ರೂಪ, ಅನೇಕ ಆಕೃತಿಯುಳ್ಳ ಬಾಣಗಳಿಂದ ಮಹಾರಥರ ಸೇನೆಯನ್ನು ಪ್ರವೇಶಿಸಿ, ಏಕಾಕಿಯಾಗಿ ನಿನ್ನ ಮಗನ ಸೇನೆಯನ್ನು ನಾಶಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೈದನೆಯ ಅಧ್ಯಾಯ

ಧೃಷ್ಟದ್ಯುಮ್ನನಿಂದ ಸೋತ ದುರ್ಯೋಧನನ ಪಲಾಯನ.
ಅಶ್ವತ್ಥಾಮಾದಿಗಳಿಂದ ಅವನ ಹುಡುಕಾಟ

ಸಂಜಯಃ

ಅಸ್ಯ(ಪಶ್ಯ)ತಾಂ ಯತಮಾನಾನಾಂ ಶೂರಾಣಾಮನಿವರ್ತಿನಾಮ್ ।
ಸಂಕಲ್ಪಮಕರೋನ್ಮೋಘಂ ಗಾಂಡೀವೇನ ಧನಂಜಯಃ ॥೧॥

ಸಂಜಯ– ಕೌರವಸೈನ್ಯದ ಶೂರರು ಯುದ್ಧದಿಂದ ಯಾವತ್ತೂ ಹಿಂತಿರುಗುವವರಲ್ಲ. ಆದರೆ ಅವರು ನೋಡುತ್ತಿದ್ದಂತೆಯೇ ಅರ್ಜುನನು ತನ್ನ ಗಾಂಡೀವಧನುಸ್ಸಿನಿಂದ ಅವರ ಸಂಕಲ್ಪವನ್ನು ಸುಳ್ಳು ಮಾಡಿದನು.

ಇಂದ್ರಾಶನಿಸಮಸ್ಪರ್ಶಾನ್ ಅವಿಷಹ್ಯಾನ್ ಮನೋಜವಾನ್ ।
ವಿಸೃಜನ್ ದೃಶ್ಯತೇ ಬಾಣಾನ್ ಧಾರಾ ಮುಂಚನ್ನಿವಾಂಬುದಃ ॥೨॥

ಮೋಡಗಳು ಮಳೆಯ ಧಾರೆಗಳನ್ನು ಸುರಿಸುವಂತೆ ಅರ್ಜುನನು ಬಾಣಗಳನ್ನು ಬೀಳಿಸುತ್ತಿರುವುದು ಕಂಡುಬಂದಿತು. ಆ ಬಾಣಗಳು ದೇವೇಂದ್ರನ ವಜ್ರಾಯುಧಕ್ಕೆ ಸಮಾನವಾದ ಸ್ಪರ್ಶವುಳ್ಳವು ಮತ್ತು ಸಹಿಸಲು ಅಸಾಧ್ಯವಾದ ಮನೋವೇಗವುಳ್ಳವು.

ತತ್ಸೈನ್ಯಂ ಭರತಶ್ರೇಷ್ಠ ವಧ್ಯಮಾನಂ ಕಿರೀಟಿನಾ ।
ಸಂಪ್ರದುದ್ರಾವ ಸಂಗ್ರಾಮಾನ್ ತವ ಪುತ್ರಸ್ಯ ಪಶ್ಯತಃ ॥೩॥

ಭರತಶ್ರೇಷ್ಠನೇ! ಅರ್ಜುನನು ನಿನ್ನ ಸೈನ್ಯವನ್ನು ಹೊಡೆಯುತ್ತಿದ್ದಾಗ ನಿನ್ನ ಮಗನ ಸಮ್ಮುಖದಲ್ಲಿಯೇ ಸೈನ್ಯವು ಯುದ್ಧದಿಂದ ಪಲಾಯನ ಮಾಡಿತು.

ಹತಧುರ್ಯರಥಾಃ ಕೇಚಿದ್ಧತಸೂತಾಸ್ತಥಾ ಪರೇ ।
ಭಗ್ನಾಕ್ಷಯುಗಚಕ್ರೇಷಾಃ ಕೇಚಿದಾಸನ್ ವಿಶಾಂಪತೇ ॥೪॥

ರಾಜನೇ! ಕೆಲವರ ರಥದ ನೊಗವು ಮತ್ತು ಕೆಲವರ ರಥಗಳೇ ಪುಡಿಯಾದವು. ಕೆಲವರ ಸಾರಥಿಗಳು ಹತರಾದರು. ಕೆಲವರ ರಥದ ಚಕ್ರದ ಆಚ್ಚು, ಕೆಲವರ ರಥದ ಚಕ್ರ, ಕೆಲವರ ರಥದ ಯುಗಗಳು ತುಂಡಾದವು.

ಅನ್ಯೇಷಾಂ ಸಾಯಕಾಃ ಕ್ಷೀಣಾಸ್ತಥಾऽನ್ಯೇ ಶರಪೀಡಿತಾಃ ।
ಅಕ್ಷತಾ ಯುಗಪತ್ ಕೇಚಿತ್ ಪ್ರಾದ್ರವನ್ ಭಯಪೀಡಿತಾಃ ॥೫॥

ಕೆಲವರ ಬತ್ತಳಿಕೆಯಲ್ಲಿನ ಬಾಣಗಳು ಖಾಲಿಯಾದವು. ಕೆಲವರು ಬಾಣದಿಂದ ಪೀಡಿತರಾದರು. ಕೆಲವರು ಗಾಯಗೊಳ್ಳದಿದ್ದರೂ ಭಯದಿಂದ ಓಡಿಹೋದರು.

ಕೇಚಿತ್ ಪುತ್ರಾನುಪಾದಾಯ ಹತಭೂಯಿಷ್ಠವಾಹನಾಃ ।
ವಿಚುಕ್ರುಶುಃ ಪಿತೄನನ್ಯೇ ಸಹಾಯಾನಪರೇ ಪುನಃ ॥೬॥

ಕೆಲವರು ತಮ್ಮ ವಾಹನವನ್ನು ಕಳೆದುಕೊಂಡು ಮಕ್ಕಳನ್ನು ಕರೆದುಕೊಂಡು ಓಡಿಹೋದರು. ಕೆಲವರು ಪಿತೃಗಳನ್ನು ಹಿಡಿದುಕೊಂಡು ಜೋರಾಗಿ ಬೊಬ್ಬಿಡುತ್ತಿದ್ದರು. ಕೆಲವರು ತಮ್ಮ ಸಹಾಯಕರನ್ನು ಹಿಡಿದುಕೊಂಡು ಗೋಳಿಡುತ್ತಿದ್ದರು.

ಬಾಂಧವಾಂಶ್ಚ ನರವ್ಯಾಘ್ರ ಭ್ರಾತೄನ್ ಸಂಬಂಧಿನಸ್ತಥಾ ।
ದುದ್ರುವುಃ ಕೇಚಿದುತ್ಸೃಜ್ಯ ತತ್ರ ತತ್ರ ವಿಶಾಂಪತೇ ॥೭॥

ನರೋತ್ತಮನೇ! ಜನಾಧಿಪತಿಯೇ! ಕೆಲವರು ತಮ್ಮ ಬಾಂಧವರನ್ನು, ಸಹೋದರರನ್ನು, ಸಂಬಂಧಿಗಳನ್ನು ಅಲ್ಲಲ್ಲಿಯೇ ಬಿಟ್ಟು ತಾವು ಮಾತ್ರ ಓಡಿಹೋದರು.

ಬಹವೋಽತ್ರ ಭೃಶಂ ವಿದ್ಧ್ವಾ ಮುಹ್ಯಮಾನಾ ಮಹಾರಥಾಃ ।
ನಷ್ಟಸಂಜ್ಞಾಃ ಸ್ಮ ದೃಶ್ಯಂತೇ ಪಾರ್ಥಬಾಣಹತಾ ನರಾಃ ॥೮॥

ಅನೇಕ ಮಹಾರಥಯೋಧರು ಬಾಣಗಳಿಂದ ಚೆನ್ನಾಗಿ ಪೆಟ್ಟು ತಿಂದು ಭ್ರಮೆಗೊಳಗಾದರು ಮತ್ತು ಮೂರ್ಛೆ ಹೋದರು. ಯೋಧರು ಅರ್ಜುನನ ಬಾಣಗಳಿಂದ ಸಾಯುತ್ತಿದ್ದರು.

ತಾನನ್ಯೇ ರಥಮಾರೋಪ್ಯ ಸಮಾಶ್ವಾಸ್ಯ ಮುಹೂರ್ತಕಮ್ ।
ವಿಶ್ರಾಂತಾಶ್ಚ ವಿತೃಷ್ಣಾಶ್ಚ ಪುನರ್ಯುದ್ಧಾಯ ಜಗ್ಮಿರೇ ॥೯॥

ಕೆಲವರು ಅಂತಹವರನ್ನು ರಥದ ಮೇಲೆ ಹತ್ತಿಸಿಕೊಂಡು ಸ್ವಲ್ಪಸಮಯ ಉಪಚಾರ ಮಾಡಿದರು. ಉಪಚಾರವನ್ನು ಪಡೆದ ಯೋಧರು ಶ್ರಮವನ್ನು ಕಳೆದುಕೊಂಡು, ನೀರಡಿಕೆಯಿಂದ ಮುಕ್ತರಾಗಿ ಪುನಃ ಯುದ್ಧಕ್ಕೆ ಹೋದರು.

ತಾನಪಾಸ್ಯ ಗತಾಃ ಕೇಚಿತ್ ಪುನರೇವ ಯುಯುತ್ಸವಃ ।
ಕುರ್ವಂತಸ್ತವ ಪುತ್ರಸ್ಯ ಶಾಸನಂ ಯುದ್ಧದುರ್ಮದಾಃ ॥೧೦॥

ಕೆಲವರು ರಣರಂಗದಲ್ಲಿ ಬಿದ್ದಿರುವ ಗಾಯಾಳುಗಳನ್ನು ಅಲ್ಲಿಯೇ ಬಿಟ್ಟು ಯುದ್ಧಮಾಡುವ ಹುಮ್ಮಸ್ಸಿನಿಂದ, ದುರ್ಯೋಧನನ ಆಜ್ಞೆಯನ್ನು ಪಾಲಿಸುವವರಾಗಿ ಪುನಃ ಯುದ್ಧಕ್ಕೆ ತೊಡಗಿದರು.

ಪಾನೀಯಮಪರೇ ಪೀತ್ವಾ ಸಮಾಶ್ವಾಸ್ಯ ಚ ವಾಹನಾನ್ ।
ವರ್ಮಾಣಿ ಚ ಸಮಾರೋಪ್ಯ ಜಗ್ಮುರ್ಭರತಸತ್ತಮ ॥೧೧॥

ಭರತೋತ್ತಮನೇ! ಕೆಲವರು ಪಾನೀಯವನ್ನು ಕುಡಿದು, ತಮ್ಮ ವಾಹನಗಳಾದ ಆನೆ-ಕುದುರೆಗಳನ್ನು ಸಮಾಧಾನಪಡಿಸಿ, ಕವಚಗಳನ್ನು ಸರಿಪಡಿಸಿಕೊಂಡು ಪುನಃ ಯುದ್ಧಕ್ಕೆ ನಡೆದರು.

ಸಮಾಶ್ವಾಸ್ಯ ಪರೇ ಭ್ರಾತ್಄ನ್ ನಿಕ್ಷಿಪ್ಯ ಶಿಬಿರೇಽಪಿ ಚ ।
ಪುತ್ರಾನನ್ಯೇ ಪಿತ್಄ನನ್ಯೇ ಪುನರ್ಯುದ್ಧಮರೋಚಯನ್ ॥೧೨॥

ಕೆಲವರು ಗಾಯಗೊಂಡ ಸಹೋದರರನ್ನು, ಪಿತೃಗಳನ್ನು, ಮಕ್ಕಳನ್ನು ಶಿಬಿರದಲ್ಲಿ ಇರಿಸಿ, ತಾವು ಪುನಃ ಯುದ್ಧಕ್ಕೆ ತೆರಳಿದರು. ಅವರಿಗೆ ಯುದ್ಧವು ಬಹಳ ಇಷ್ಟವಾಗಿತ್ತು.

ಸಜ್ಜಯಿತ್ವಾ ರಥಾನ್ ಕೇಚಿತ್ ಯಥಾಮುಖ್ಯಂ ವಿಶಾಂಪತೇ ।
ಆಪ್ಲುತ್ಯ ಪಾಂಡವಾನೀಕಂ ಪುನರ್ಯುದ್ಧಮರೋಚಯನ್ ॥೧೩॥

ರಾಜನೇ! ಕೆಲವರು ಸೇನಾಧಿಪತಿಯ ಆಣತಿಗೆ ಅನುಸಾರವಾಗಿ ರಥಗಳನ್ನು ಸಜ್ಜುಗೊಳಿಸಿ, ಪಾಂಡವರ ಸೇನೆಯ ಮೇಲೆ ಧುಮುಕಿ, ಪುನಃ ಯುದ್ಧದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರಿಗೂ ಹೋರಾಟವು ಹರ್ಷದಾಯಕವಾಗಿತ್ತು.

ತೇ ಶೂರಾಃ ಕಿಂಕಿಣೀಜಾಲೈಃ ಸಮಾಚ್ಛನ್ನಾ ಬಭಾಸಿರೇ ।
ತ್ರೈಲೋಕ್ಯಸಮರೇ ಯುಕ್ತಾ ಯಥಾ ದೈವತದಾನವಾಃ ॥೧೪॥

ಆ ಶೂರರು ರಥದ ಕಿಂಕಿಣೀಸಮೂಹದಿಂದ ಆವೃತರಾಗಿ ಶೋಭಿಸುತ್ತಿದ್ದರು. ಮೂರುಲೋಕದ ಯುದ್ಧದಲ್ಲಿ ದೇವತೆಗಳು, ದಾನವರು ಶೋಭಿಸುವಂತೆ ಇತ್ತು.

ಆಗಮ್ಯ ಸಹಸಾ ಕೇಚಿದ್ ರಥೈಃ ಸ್ವರ್ಣವಿಭೂಷಿತೈಃ ।
ಪಾಂಡವಾನಾಮನೀಕೇಷು ಧೃಷ್ಟದ್ಯುಮ್ನಮಯೋಧಯನ್ ॥೧೫॥

ಕೆಲವರು ಬಂಗಾರ ವಿಭೂಷಣವುಳ್ಳ ರಥಗಳಲ್ಲಿ ಕೂಡಲೇ ಬಂದು ಪಾಂಡವರ ಸೈನ್ಯದಲ್ಲಿದ್ದ ಧೃಷ್ಟದ್ಯುಮ್ನನೊಡನೆ ಹೋರಾಡಿದರು.

ಧೃಷ್ಟದ್ಯುಮ್ನೋಽಪಿ ಪಾಂಚಾಲ್ಯಃ ಶಿಖಂಡೀ ಚ ಮಹಾರಥಃ ।
ನಾಕುಲಿಶ್ಚ ಶತಾನೀಕೋ ರಥಾನೀಕಮಯೋಧಯನ್ ॥೧೬॥

ಧೃಷ್ಟದ್ಯುಮ್ನ, ಮಹಾರಥನಾದ ಶಿಖಂಡಿ, ನಕುಲನ ಮಗ ಶತಾನೀಕ ಇವರೆಲ್ಲರೂ ರಥಸೇನೆಯನ್ನು ಎದುರಿಸಿದರು.

ಪಾಂಚಾಲ್ಯಸ್ತು ತತಃ ಕ್ರುದ್ಧಃ ಸೈನ್ಯೇನ ಮಹತಾ ವೃತಃ ।
ಅಭ್ಯದ್ರವತ್ ಸುಸಂರಬ್ಧಾನ್ ತಾವಕಾನ್ ಹಂತುಮುದ್ಯತಃ ॥೧೭॥

ಧೃಷ್ಟದ್ಯುಮ್ನನಾದರೂ ಬಹಳ ಕೋಪಗೊಂಡು ದೊಡ್ಡದಾದ ಸೈನ್ಯವನ್ನು ಕೂಡಿಕೊಂಡು ನಿನ್ನ ಕಡೆಯವರನ್ನು ಕೊಲ್ಲಲು ಉದ್ಯುಕ್ತನಾದ ಮತ್ತು ಯುದ್ಧಸನ್ನದ್ಧರಾದ ನಿನ್ನವರನ್ನು ಅಟ್ಟಿಸಿಕೊಂಡು ಹೋದನು.

ತತಸ್ತಾವತತಸ್ತಸ್ಯ ತವ ಪುತ್ರೋ ಜನಾಧಿಪಃ ।
ಬಾಣಸಂಘಾನನೇಕಾನ್ ವೈ ಪ್ರೇಷಯಾಮಾಸ ಭಾರತ ॥೧೮॥

ಭರತಕುಲೋದ್ಭವನೇ! ಧೃಷ್ಟದ್ಯುಮ್ನನು ಬರುತ್ತಿರಲು ನಿನ್ನ ಮಗನಾದ ದುರ್ಯೋಧನನು ಅನೇಕ ಬಾಣಸಮೂಹಗಳನ್ನು ಪ್ರಯೋಗಿಸಿದನು.

ಧೃಷ್ಟದ್ಯುಮ್ನಸ್ತತೋ ರಾಜನ್ ತವ ಪುತ್ರೇಣ ಧನ್ವಿನಾ ।
ನಾರಾಚೈರ್ಬಹುಭಿಃ ಕ್ಷಿಪ್ರಂ ಬಾಹ್ವೋರುರಸಿ ಚಾರ್ದಿತಃ ॥೧೯॥

ರಾಜನೇ! ಧನುರ್ಧಾರಿಯಾದ ನಿನ್ನ ಮಗನು ಪ್ರಯೋಗಿಸಿದ ಅನೇಕ ಬಾಣಗಳು ಬೇಗನೆ ಧೃಷ್ಟದ್ಯುಮ್ನನ ಬಾಹುಗಳಿಗೆ ಮತ್ತು ಎದೆಗೆ ನೋವನ್ನು ಮಾಡಿದವು.

ಸೋಽತಿವಿದ್ಧೋ ಮಹೇಷ್ವಾಸಃ ತೋತ್ರಾರ್ದಿತ ಇವ ದ್ವಿಪಃ ।
ತಸ್ಯಾಶ್ವಾಂಶ್ಚತುರೋ ಬಾಣೈಃ ಪ್ರೇಷಯಾಮಾಸ ಮೃತ್ಯವೇ ॥೨೦॥

ಆ ಬಾಣಗಳ ಹೊಡೆತದಿಂದ ಮಹಾಬಿಲ್ಲಾರನಾದ ಧೃಷ್ಟದ್ಯುಮ್ನನು ಚಾವಟಿಯಿಂದ ಹೊಡೆಯಲ್ಪಟ್ಟ ಆನೆಯಂತೆ ಬಹಳವಾಗಿ ಪೆಟ್ಟುತಿಂದನು. ಧೃಷ್ಟದ್ಯಮ್ನನು ನಾಲ್ಕು ಬಾಣಗಳನ್ನು ಪ್ರಯೋಗಿಸಿ ದುರ್ಯೋಧನನ ನಾಲ್ಕು ಕುದುರೆಗಳನ್ನು ಕೊಂದನು.

ಸಾರಥೇಶ್ಚಾಸ್ಯ ಭಲ್ಲೇನ ಶಿರಃ ಕಾಯಾದಪಾಹರತ್ ॥೨೧॥

ಭಲ್ಲೆಯಿಂದ ದುರ್ಯೋಧನನ ಸಾರಥಿಯ ತಲೆಯನ್ನು ಕಡಿದನು.

ತತೋ ದುರ್ಯೋಧನೋ ರಾಜಾ ಪೃಷ್ಠಮಾರುಹ್ಯ ವಾಜಿನಃ ।
ಅಪಾಕ್ರಾಮದ್ ಹತರಥೋ ನಾತಿದೂರಮರಿಂದಮಃ ॥೨೨॥

ಅನಂತರ ರಥವನ್ನು ಕಳೆದುಕೊಂಡ, ಶತ್ರುಮಾರಕನಾದ ದುರ್ಯೋಧನನು ಕುದುರೆಯ ಬೆನ್ನಿನ ಮೇಲೆ ಹತ್ತಿಕೊಂಡು ಅಲ್ಲಿಂದ ಹೊರಗೋಡಿದನು.

ದೃಷ್ಟ್ವಾ ತು ಹತಭೂಯಿಷ್ಠಂ ಸ್ವಮನೀಕಮಮರ್ಷಣಃ ।
ತವ ಪುತ್ರೋ ಮಹಾರಾಜ ಪ್ರಯಯೌ ಯತ್ರ ಸೌಬಲಃ ॥೨೩॥

ಮಹಾರಾಜನೇ! ದುರ್ಯೋಧನನು ತನ್ನ ಸೈನ್ಯವು ಬಹಳವಾಗಿ ನಾಶವಾಗಿರುವುದನ್ನು ನೋಡಿ ಶಕುನಿಯಿದ್ದಲ್ಲಿಗೆ ಬೇಗನೇ ಹೋದನು.

ತತೋ ರಥೇಷು ಭಗ್ನೇಷು ತ್ರಿಸಾಹಸ್ರಾ ಮಹಾದ್ವಿಪಾಃ ।
ಪಾಂಡವಾನ್ ರಥಿನಃ ಪಂಚ ಸಮಂತಾತ್ ಪರ್ಯವಾರಯನ್ ॥೨೪॥

ರಥಗಳೆಲ್ಲಾ ಪುಡಿಯಾದಾಗ ಮೂರುಸಾವಿರ ಮಹಾಗಜಗಳು ಐದು ಜನ ಮಹಾರಥರಾದ ಪಾಂಡವರನ್ನು ಸುತ್ತಲೂ ಸುತ್ತುವರಿದವು.

ತೇ ವೃತಾಃ ಸಮರೇ ಪಂಚ ಗಜಾನೀಕೇನ ಭಾರತ ।
ಅಶೋಭಂತ ನರವ್ಯಾಘ್ರಾ ಗ್ರಹಾಸ್ತಾರಾಗಣೈರಿವ ॥೨೫॥

ಭರತಕುಲೋದ್ಭವನೇ! ಯುದ್ಧದಲ್ಲಿ ಗಜಸೈನ್ಯದಿಂದ ಸುತ್ತುವರಿಯಲ್ಪಟ್ಟ ಪಂಚಪಾಂಡವರು ನಕ್ಷತ್ರಗಳಿಂದ ಸುತ್ತುವರಿಯಲ್ಪಟ್ಟ ಗ್ರಹಗಳಂತೆ ಕಂಡುಬಂದರು.

ತತೋಽರ್ಜುನೋ ಮಹಾರಾಜ ಲಬ್ಧಲಕ್ಷೋ ಮಹಾಭುಜಃ ।
ವಿನಿರ್ಯಯೌ ರಥೇನೈವ ಶ್ವೇತಾಶ್ವಃ ಕೃಷ್ಣಸಾರಥಿಃ ॥೨೬॥

ಮಹಾರಾಜನೇ! ಅನಂತರ ಮಹಾಭುಜನಾದ, ಕೃಷ್ಣಸಾರಥಿಯಾದ, ಬೆಳ್ಳಗಿನ ಅಶ್ವಗಳನ್ನು ಹೊಂದಿದ್ದ ಅರ್ಜುನನು ಗುರಿಯನ್ನು ನಿಶ್ಚಯಿಸಿಕೊಂಡು, ರಥದ ಮೂಲಕವೇ ಹೊರನಡೆದನು.

ಧೃಷ್ಟದ್ಯುಮ್ನೋಽಪಿ ಪಾಂಚಾಲ್ಯಃ ಶಿಖಂಡೀ ಚ ಮಹಾರಥಃ ।
ನಾಕುಲಿಶ್ಚ ಶತಾನೀಕೋ ರಥಾನೀಕಮಯೋಧಯನ್ ॥೧೬॥

ಧೃಷ್ಟದ್ಯುಮ್ನ, ಮಹಾರಥನಾದ ಶಿಖಂಡಿ, ನಕುಲನ ಮಗ ಶತಾನೀಕ ಇವರೆಲ್ಲರೂ ರಥಸೇನೆಯನ್ನು ಎದುರಿಸಿದರು.

ಪಾಂಚಾಲ್ಯಸ್ತು ತತಃ ಕ್ರುದ್ಧಃ ಸೈನ್ಯೇನ ಮಹತಾ ವೃತಃ ।
ಅಭ್ಯದ್ರವತ್ ಸುಸಂರಬ್ಧಾನ್ ತಾವಕಾನ್ ಹಂತುಮುದ್ಯತಃ ॥೧೭॥

ಧೃಷ್ಟದ್ಯುಮ್ನನಾದರೂ ಬಹಳ ಕೋಪಗೊಂಡು ದೊಡ್ಡದಾದ ಸೈನ್ಯವನ್ನು ಕೂಡಿಕೊಂಡು ನಿನ್ನ ಕಡೆಯವರನ್ನು ಕೊಲ್ಲಲು ಉದ್ಯುಕ್ತನಾದ ಮತ್ತು ಯುದ್ಧಸನ್ನದ್ಧರಾದ ನಿನ್ನವರನ್ನು ಅಟ್ಟಿಸಿಕೊಂಡು ಹೋದನು.

ತತಸ್ತಾವತತಸ್ತಸ್ಯ ತವ ಪುತ್ರೋ ಜನಾಧಿಪಃ ।
ಬಾಣಸಂಘಾನನೇಕಾನ್ ವೈ ಪ್ರೇಷಯಾಮಾಸ ಭಾರತ ॥೧೮॥

ಭರತಕುಲೋದ್ಭವನೇ! ಧೃಷ್ಟದ್ಯುಮ್ನನು ಬರುತ್ತಿರಲು ನಿನ್ನ ಮಗನಾದ ದುರ್ಯೋಧನನು ಅನೇಕ ಬಾಣಸಮೂಹಗಳನ್ನು ಪ್ರಯೋಗಿಸಿದನು.

ಧೃಷ್ಟದ್ಯುಮ್ನಸ್ತತೋ ರಾಜನ್ ತವ ಪುತ್ರೇಣ ಧನ್ವಿನಾ ।
ನಾರಾಚೈರ್ಬಹುಭಿಃ ಕ್ಷಿಪ್ರಂ ಬಾಹ್ವೋರುರಸಿ ಚಾರ್ದಿತಃ ॥೧೯॥

ರಾಜನೇ! ಧನುರ್ಧಾರಿಯಾದ ನಿನ್ನ ಮಗನು ಪ್ರಯೋಗಿಸಿದ ಅನೇಕ ಬಾಣಗಳು ಬೇಗನೆ ಧೃಷ್ಟದ್ಯುಮ್ನನ ಬಾಹುಗಳಿಗೆ ಮತ್ತು ಎದೆಗೆ ನೋವನ್ನು ಮಾಡಿದವು.

ಸೋಽತಿವಿದ್ಧೋ ಮಹೇಷ್ವಾಸಃ ತೋತ್ರಾರ್ದಿತ ಇವ ದ್ವಿಪಃ ।
ತಸ್ಯಾಶ್ವಾಂಶ್ಚತುರೋ ಬಾಣೈಃ ಪ್ರೇಷಯಾಮಾಸ ಮೃತ್ಯವೇ ॥೨೦॥

ಆ ಬಾಣಗಳ ಹೊಡೆತದಿಂದ ಮಹಾಬಿಲ್ಲಾರನಾದ ಧೃಷ್ಟದ್ಯುಮ್ನನು ಚಾವಟಿಯಿಂದ ಹೊಡೆಯಲ್ಪಟ್ಟ ಆನೆಯಂತೆ ಬಹಳವಾಗಿ ಪೆಟ್ಟುತ್ತಿಂದನು. ಧೃಷ್ಟದ್ಯಮ್ನನು ನಾಲ್ಕು ಬಾಣಗಳನ್ನು ಪ್ರಯೋಗಿಸಿ ದುರ್ಯೋಧನನ ನಾಲ್ಕು ಕುದುರೆಗಳನ್ನು ಕೊಂದನು.

ಸಾರಥೇಶ್ಚಾಸ್ಯ ಭಲ್ಲೇನ ಶಿರಃ ಕಾಯಾದಪಾಹರತ್ ॥೨೧॥

ಭಲ್ಲೆಯಿಂದ ದುರ್ಯೋಧನನ ಸಾರಥಿಯ ತಲೆಯನ್ನು ಕಡಿದನು.

ತತೋ ದುರ್ಯೋಧನೋ ರಾಜಾ ಪೃಷ್ಠಮಾರುಹ್ಯ ವಾಜಿನಃ ।
ಅಪಾಕ್ರಾಮದ್ ಹತರಥೋ ನಾತಿದೂರಮರಿಂದಮಃ ॥೨೨॥

ಅನಂತರ ರಥವನ್ನು ಕಳೆದುಕೊಂಡ, ಶತ್ರುಮಾರಕನಾದ ದುರ್ಯೋಧನನು ಕುದುರೆಯ ಬೆನ್ನಿನ ಮೇಲೆ ಹತ್ತಿಕೊಂಡು ಅಲ್ಲಿಂದ ಹೊರಗೋಡಿದನು.

ದೃಷ್ಟ್ವಾ ತು ಹತಭೂಯಿಷ್ಠಂ ಸ್ವಮನೀಕಮಮರ್ಷಣಃ ।
ತವ ಪುತ್ರೋ ಮಹಾರಾಜ ಪ್ರಯಯೌ ಯತ್ರ ಸೌಬಲಃ ॥೨೩॥

ಮಹಾರಾಜನೇ! ದುರ್ಯೋಧನನು ತನ್ನ ಸೈನ್ಯವು ಬಹಳವಾಗಿ ನಾಶವಾಗಿರುವುದನ್ನು ನೋಡಿ ಶಕುನಿಯಿದ್ದಲ್ಲಿಗೆ ಬೇಗನೇ ಹೋದನು.

ತತೋ ರಥೇಷು ಭಗ್ನೇಷು ತ್ರಿಸಾಹಸ್ರಾ ಮಹಾದ್ವಿಪಾಃ ।
ಪಾಂಡವಾನ್ ರಥಿನಃ ಪಂಚ ಸಮಂತಾತ್ ಪರ್ಯವಾರಯನ್ ॥೨೪॥

ರಥಗಳೆಲ್ಲಾ ಪುಡಿಯಾದಾಗ ಮೂರುಸಾವಿರ ಮಹಾಗಜಗಳು ಐದು ಜನ ಮಹಾರಥರಾದ ಪಾಂಡವರನ್ನು ಸುತ್ತಲೂ ಸುತ್ತುವರಿದವು.

ತೇ ವೃತಾಃ ಸಮರೇ ಪಂಚ ಗಜಾನೀಕೇನ ಭಾರತ ।
ಅಶೋಭಂತ ನರವ್ಯಾಘ್ರಾ ಗ್ರಹಾಸ್ತಾರಾಗಣೈರಿವ ॥೨೫॥

ಭರತಕುಲೋದ್ಭವನೇ! ಯುದ್ಧದಲ್ಲಿ ಗಜಸೈನ್ಯದಿಂದ ಸುತ್ತುವರಿಯಲ್ಪಟ್ಟ ಪಂಚಪಾಂಡವರು ನಕ್ಷತ್ರಗಳಿಂದ ಸುತ್ತುವರಿಯಲ್ಪಟ್ಟ ಗ್ರಹಗಳಂತೆ ಕಂಡುಬಂದರು.

ತತೋಽರ್ಜುನೋ ಮಹಾರಾಜ ಲಬ್ಧಲಕ್ಷೋ ಮಹಾಭುಜಃ ।
ವಿನಿರ್ಯಯೌ ರಥೇನೈವ ಶ್ವೇತಾಶ್ವಃ ಕೃಷ್ಣಸಾರಥಿಃ ॥೨೬॥

ಮಹಾರಾಜನೇ! ಅನಂತರ ಮಹಾಭುಜನಾದ, ಕೃಷ್ಣಸಾರಥಿಯಾದ, ಬೆಳ್ಳಗಿನ ಅಶ್ವಗಳನ್ನು ಹೊಂದಿದ್ದ ಅರ್ಜುನನು ಗುರಿಯನ್ನು ನಿಶ್ಚಯಿಸಿಕೊಂಡು, ರಥದ ಮೂಲಕವೇ ಹೊರನಡೆದನು.

ತೈಃ ಸಮಂತಾತ್ ಪರಿವೃತಃ ಕುಂಜರೈಃ ಪರ್ವತೋಪಮೈಃ ।
ನಾರಾಚೈರ್ವಿವಿಧೈಸ್ತೀಕ್ಷ್ಣೈರ್ಗಜಾನೀಕಮಯೋಧಯನ್ ॥೨೭॥

ಪರ್ವತಾಕಾರದ ಆನೆಗಳು ಅರ್ಜುನನ ಸುತ್ತಲೂ ಸುತ್ತುವರಿದು ಇದ್ದವು. ಅರ್ಜುನನು ಹರಿತವಾದ ವಿವಿಧ ಬಾಣಗಳಿಂದ ಗಜಸೈನ್ಯವನ್ನು ಎದುರಿಸಿ ಯುದ್ಧಮಾಡಿದನು.

ತತ್ಕೈಕಬಾಣನಿಹತಾನ್ ಅಪಶ್ಯಾಮ ಮಹಾಗಜಾನ್ ।
ಪತಿತಾನ್ ಪಾತ್ಯಮಾನಾಂಶ್ಚ ಪ್ರಭಗ್ನಾನ್ ಸವ್ಯಸಾಚಿನಾ ॥೨೮॥

ಅರ್ಜುನನು ಪ್ರಯೋಗಿಸಿದ ಒಂದೊಂದೇ ಬಾಣದಿಂದ ಅನೇಕ ಮಹಾಗಜಗಳು ಬೀಳುತ್ತಿದ್ದವು. ಅನೇಕ ಗಜಗಳು ಸಾಯುತ್ತಿದ್ದವು. ಅನೇಕ ಮಹಾಗಜಗಳು ನೆಲಕ್ಕುರುಳುತ್ತಿದ್ದವು. ಇದನ್ನು ನಾವು ನೋಡಿದೆವು.

ಭೀಮಸೇನಸ್ತು ತಾನ್ ದೃಷ್ಟ್ವಾ ನಾಗಾನ್ ವೈ ಪರ್ವತೋಪಮಾನ್ ।
ಕರೇಣ ಗೃಹ್ಯ ಮಹತೀಂ ಗದಾಮಭ್ಯದ್ರವದ್ ಬಲೀ ॥೨೯॥

ಅವಪ್ಲುತ್ಯ ರಥಾತ್ ತೂರ್ಣಂ ದಂಡಪಾಣಿರಿವಾಂತಕಃ ॥೩೦॥

ಪರ್ವತಸದೃಶವಾದ ಆ ಆನೆಗಳನ್ನು ನೋಡಿದ ಬಲಶಾಲಿಯಾದ ಭೀಮಸೇನನು ಕೈಯಲ್ಲಿ ದೊಡ್ಡ ಗದೆಯನ್ನು ಹಿಡಿದುಕೊಂಡು ಅವನ್ನು ಎದುರಿಸಿದನು. ಕೂಡಲೇ ರಥದಿಂದ ಕೆಳಕ್ಕೆ ಹಾರಿ ದಂಡವನ್ನು ಹಿಡಿದಿರುವ ಯಮನಂತೆ ಕಂಡುಬಂದನು.

ತಮುದ್ಯತಗದಂ ದೃಷ್ಟ್ವಾ ಪಾಂಡವಾನಾಂ ಮಹಾರಥಮ್ ।
ವಿತ್ರೇಸುಸ್ತಾವಕಾ ಯೋಧಾಃ ಶಕೃನ್ಮೂತ್ರಂ ಚ ಸುಸ್ರುವುಃ ॥೩೧॥

ಗದೆಯನ್ನು ಎತ್ತಿಹಿಡಿದಿರುವ ಪಾಂಡವರ ಮಹಾರಥನಾದ ಭೀಮನನ್ನು ನೋಡಿ ನಿನ್ನ ಕಡೆಯ ಯೋಧರು ಬಹಳವಾಗಿ ಭಯಪಟ್ಟರು. ಭಯದಿಂದ ಮಲ-ಮೂತ್ರಗಳನ್ನು ವಿಸರ್ಜಿಸಿದರು.

ಆವಿಗ್ನಂ ಚ ಬಲಂ ಸರ್ವಂ ಗದಾಹಸ್ತೇ ವೃಕೋದರೇ ॥೩೨॥

ಭೀಮಸೇನನು ಕೈಯಲ್ಲಿ ಗದೆಯನ್ನು ಹಿಡಿಕೊಂಡಾಗ ಎಲ್ಲಾ ಸೇನೆಗಳೂ ಉದ್ವೇಗಕ್ಕೊಳಗಾದವು.

ಗದಯಾ ಭೀಮಸೇನೇನ ಭಿನ್ನಕುಂಭಾನ್ ಕೃತವ್ರಣಾನ್ ।
ಧಾವಮಾನಾನಪಶ್ಯಾಮ ಕುಂಜರಾನ್ ಪರ್ವತೋಪಮಾನ್ ॥೩೩॥

ಭೀಮನು ಗದೆಯಿಂದ ಆನೆಗಳ ಕುಂಭಸ್ಥಳವನ್ನು ಸೀಳಿದನು. ಆನೆಗಳ ಮೈಯಲ್ಲೆಲ್ಲಾ ಗಾಯಗಳುಂಟಾದವು. ಅಂತಹ ಪರ್ವತಸದೃಶವಾದ ಆನೆಗಳು ಓಡುತ್ತಿರುವುದನ್ನು ನಾವು ನೋಡಿದೆವು.

ಪ್ರಧಾವ್ಯ ಕುಂಜರಾಸ್ತೇ ತು ಭೀಮಸೇನಗದಾಹತಾಃ ।
ಪೇತುರಾರ್ತಸ್ವರಂ ಕೃತ್ವಾ ಛಿನ್ನಪಕ್ಷಾ ಇವಾದ್ರಯಃ ॥೩೪॥

ಭೀಮಸೇನನ ಗದೆಯಿಂದ ಪೆಟ್ಟು ತಿಂದ ಆ ಆನೆಗಳು ಬಹಳವಾಗಿ ಓಡಿ ನೋವಿನಿಂದ ಶಬ್ದಮಾಡುತ್ತಾ ರೆಕ್ಕೆ ತುಂಡಾದ ಪರ್ವತಗಳ ಹಾಗೆ ನೆಲಕ್ಕೆ ಬಿದ್ದವು.

ತಾನ್ ಭಿನ್ನಕುಂಭಾಸ್ತು ಬಹೂನ್ ದ್ರವಮಾಣಾನಿತಸ್ತತಃ ।
ಪತಮಾನಾಂಸ್ತು ಸಂಪ್ರೇಕ್ಷ್ಯ ವಿತ್ರೇಸುಸ್ತವ ಸೈನಿಕಾಃ ॥೩೫॥

ಸೀಳಿದ ಕುಂಭಸ್ಥಳವುಳ್ಳ ಆನೆಗಳು ರಣರಂಗದಲ್ಲಿ ಅಲ್ಲಿಂದಿಲ್ಲಿಗೆ ಓಡುತ್ತಾ, ಅಲ್ಲಲ್ಲಿ ಬೀಳುತ್ತಿರುವುದನ್ನು ನೋಡಿದ ಸೈನಿಕರು ಬಹಳವಾಗಿ ಭಯವನ್ನು ಹೊಂದಿದರು.

ಯುಧಿಷ್ಠಿರೋಽಪಿ ಸಂಕ್ರುದ್ಧೋ ಮಾದ್ರೀಪುತ್ರೌ ಚ ಪಾಂಡವೌ ।
ಗಾರ್ಧ್ರ(ಪತ್ರೈ)ಪಕ್ಷೈಃ ಶಿತೈರ್ಬಾಣೈರ್ಜಘ್ನುರ್ವೈ ಗಜಯೋಧಿನಃ ॥೩೬॥

ಕ್ರುದ್ಧನಾದ ಯುಧಿಷ್ಠಿರ, ನಕುಲ-ಸಹದೇವರು ಕೂಡ ಹದ್ದಿನ ರೆಕ್ಕೆಯುಳ್ಳ ಹರಿತವಾದ ಬಾಣಗಳಿಂದ ಗಜಾರೋಹಿಗಳನ್ನು ಕೊಂದರು.

ಧೃಷ್ಟದ್ಯುಮ್ನಸ್ತು ಸಮರೇ ಪರಾಜಿತ್ಯ ನರಾಧಿಪಮ್ ।
ಅಪಕ್ರಾಂತೇ ತವ ಸುತೇ ಹಯಪೃಷ್ಠಂ ಸಮಾಶ್ರಿತೇ ॥೩೭॥

ದೃಷ್ಟ್ವಾ ಚ ಪಾಂಡವಾನ್ ಸರ್ವಾನ್ ಕುಂಜರೈಃ ಪರಿವಾರಿತಾನ್ ।
ಧೃಷ್ಟದ್ಯುಮ್ನೋ ಮಹಾರಾಜ ಸಹ ಸರ್ವೈಃ ಪ್ರಭದ್ರಕೈಃ ॥೩೮॥

ಪುತ್ರಃ ಪಾಂಚಾಲರಾಜಸ್ಯ ಜಿಘಾಂಸುಃ ಕೌರವಾನ್ ಯಯೌ ॥೩೯॥

ನಿನ್ನ ಮಗ ದುರ್ಯೋಧನನು ಕುದುರೆಯನ್ನೇರಿ ಓಡಿಹೋದ ಮೇಲೆ, ಯುದ್ಧದಲ್ಲಿ ದುರ್ಯೋಧನನನ್ನು ಸೋಲಿಸಿದ ಧೃಷ್ಟದ್ಯುಮ್ನನು ಪಾಂಡವರನ್ನು ಗಜಸೇನೆಯು ಸುತ್ತುವರಿದಿರುವುದನ್ನು ನೋಡಿದನು. ಮಹಾರಾಜನೇ! ಪಾಂಚಾಲರಾಜನ ಮಗನಾದ ಧೃಷ್ಟದ್ಯುಮ್ನನು ಪ್ರಭದ್ರಕರೊಡನೆ ಸೇರಿಕೊಂಡು ಕೌರವರನ್ನು ಕೊಲ್ಲಲು ನಡೆದನು.

ಅದೃಷ್ಟ್ವಾ ತು ರಥಾನೀಕೇ ದುರ್ಯೋಧನಮರಿಂದಮಮ್ ।
ಅಶ್ವತ್ಥಾಮಾ ಕೃಪಶ್ಚೈವ ಕೃತವರ್ಮಾ ಚ ಸಾತ್ವತಃ ॥೪೦॥

ಅಪೃಚ್ಛನ್ ಕ್ಷತ್ರಿಯಾಂಸ್ತತ್ರ ಕ್ವ ನೋ ದುರ್ಯೋಧನೋ ಗತಃ ॥೪೧॥

ರಥಸೈನ್ಯದಲ್ಲಿ ಶತ್ರುಸಂಹಾರಕನಾದ ದುರ್ಯೋಧನನನ್ನು ನೋಡದೆ ಅಶ್ವತ್ಥಾಮ, ಕೃಪ ಮತ್ತು ಸಾತ್ವತವಂಶದ ಕೃತವರ್ಮ ಇವರು ದುರ್ಯೋಧನನು ಎಲ್ಲಿಗೆ ಹೋದನು ಎಂದು ಅಲ್ಲಿದ್ದ ಕ್ಷತ್ರಿಯರನ್ನು ಕೇಳುತ್ತಾರೆ.

ಅಪಶ್ಯಮಾನಾ ರಾಜಾನಂ ವರ್ತಮಾನೇ ಜನಕ್ಷಯೇ ॥೪೨॥

ಮನ್ವಾನಾ ನಿಹತಂ ತತ್ರ ತವ ಪುತ್ರಂ ಮಹಾರಥಾಃ ।
ವಿಷಣ್ಣವದನಾ ಭೂತ್ವಾ ಪರ್ಯಪೃಚ್ಛಂತ ತೇ ಸುತಮ್ ॥೪೩॥

ನಡೆಯುತ್ತಿರುವ ಜನಸಂಹಾರದಲ್ಲಿ ರಾಜನನ್ನು ಎಲ್ಲಿಯೂ ಕಾಣದೆ ನಿನ್ನ ಮಗನು ಸತ್ತಿದ್ದಾನೆ ಎಂದು ಆ ಮಹಾರಥರು ತಿಳಿದು ದುಃಖದಿಂದ ಬಾಡಿದ ಮುಖವುಳ್ಳವರಾಗಿ ನಿನ್ನ ಮಗನ ಬಗ್ಗೆ ಕೇಳಿದರು.

ಆಹುಃ ಕೇಚಿದ್ಧತೇ ಸೂತೇ ಪ್ರಯಾತೋ ಯತ್ರ ಸೌಬಲಃ ।
ಹಿತ್ವಾ ಪಾಂಚಾಲರಾಜಸ್ಯ ತದನೀಕಂ ದುರುತ್ಸಹಮ್ ॥೪೪॥

ತನ್ನ ಸಾರಥಿ ಸತ್ತನಂತರ ದುರ್ಯೋಧನನು, ಧೃಷ್ಟದ್ಯುಮ್ನನ ಬಹಳವಾದ ಉತ್ಸಾಹವುಳ್ಳ ಸೈನ್ಯವನ್ನು ಬಿಟ್ಟು ಶಕುನಿಯ ಬಳಿಗೆ ಹೋದನು ಎಂದು ಕೆಲವರು ಹೇಳಿದರು.

ಅಪರೇ ತ್ವಬ್ರುವಂಸ್ತತ್ರ ಕ್ಷತ್ರಿಯಾ ಭೃಶವಿಕ್ಷತಾಃ ॥೪೫॥

ತುಂಬಾ ಗಾಯಗೊಂಡಿದ್ದ ಬೇರೆ ಕೆಲವು ಕ್ಷತ್ರಿಯರೂ ಹೀಗೆ ಹೇಳುತ್ತಾರೆ

ಕ್ಷತ್ರಿಯಾಃ

ದುರ್ಯೋಧನೇನ ಕಿಂ ಕಾರ್ಯಂ ದ್ರಕ್ಷ್ಯಧ್ವಂ ಯದಿ ಜೀವತಿ ।
ಯುಧ್ಯಧ್ವಂ ಸಹಿತಾಃ ಸರ್ವೇ ಕಿಂ ವಾ ರಾಜಾ ಕರಿಷ್ಯತಿ ॥೪೬॥

ಕ್ಷತ್ರಿಯರು– ದುರ್ಯೋಧನನಿಂದ ಆಗಬೇಕಾದ ಕೆಲಸ ಏನಿದೆ? ಒಂದು ವೇಳೆ ಅವನು ಬದುಕಿದ್ದರೆ ಅವನನ್ನು ನೋಡುವಿರಿ. ಈಗ ಎಲ್ಲರೂ ಸೇರಿ ಯುದ್ಧಮಾಡಿ. ರಾಜನು ಏನು ಮಾಡಿಯಾನು?

ಸಂಜಯಃ

ತೇ ಕ್ಷತ್ರಿಯಾಃ ಕ್ಷತೈರ್ಗಾತ್ರೈಃ ಹತಭೂಯಿಷ್ಠವಾಹನಾಃ ।
ಶರೈಃ ಸಂಪೀಡ್ಯಮಾನಾಶ್ಚ ನಾತಿವ್ಯಕ್ತಮಿವಾಬ್ರುವನ್ ॥೪೭॥

ಸಂಜಯ– ಆ ಕ್ಷತ್ರಿಯರು ತಮ್ಮ ವಾಹನಗಳನ್ನು ಕಳೆದುಕೊಂಡಿದ್ದರು. ಮೈಯೆಲ್ಲಾ ಗಾಯಗೊಂಡಿದ್ದರು. ಬಾಣಗಳಿಂದ ಬಹಳವಾಗಿ ನೋವನ್ನು ಅನುಭವಿಸುತ್ತಿದ್ದರು. ಆದ್ದರಿಂದ ಅಸ್ಪಷ್ಟವಾಗಿ ಹೇಳುತ್ತಿದ್ದರು.

ಕ್ಷತ್ರಿಯಾಃ

ಇದಂ ಸರ್ವಂ ಬಲಂ ಹನ್ಮೋ ಯೇನ ಸ್ಮ ಪರಿವಾರಿತಾಃ ।
ಏತೇ ಸರ್ವೇ ಗಜಾನ್ ಹತ್ವಾ ಉಪಯಾಂತಿ ಸ್ಮ ಪಾಂಡವಾಃ ॥೪೮॥

ಕ್ಷತ್ರಿಯರು– ಯಾವ ಸೈನ್ಯವು ನಮ್ಮನ್ನು ಮುತ್ತಿಗೆ ಹಾಕಿದೆಯೋ ಅಂತಹ ಸೈನ್ಯವನ್ನು ನಾವು ನಾಶಮಾಡುತ್ತೇವೆ. ಈ ಪಾಂಡವರು ಆನೆಗಳನ್ನು ಕೊಂದು ಹತ್ತಿರಕ್ಕೆ ಬರುತ್ತಿದ್ದಾರೆ.

ಶ್ರುತ್ವಾ ತು ವಚನಂ ತೇಷಾಮಶ್ವತ್ಥಾಮಾ ಮಹಾಬಲಃ ।
ಭಿತ್ತ್ವಾ ಪಾಂಚಾಲರಾಜಸ್ಯ ತದನೀಕಂ ದುರಾಸದಮ್ ॥೪೯॥

ಕೃಪಶ್ಚ ಕೃತವರ್ಮಾ ಚ ಪ್ರಯಯುರ್ಯತ್ರ ಸೌಬಲಃ ।
ರಥಾನೀಕಂ ಪರಿತ್ಯಜ್ಯ ಶೂರಾಃ ಸುದೃಢಧನ್ವಿನಃ ॥೫೦॥

ಅವರ ಮಾತನ್ನು ಕೇಳಿದ ಮಹಾಬಲಶಾಲಿಯಾದ ಅಶ್ವತ್ಥಾಮನು, ಕೃಪ ಮತ್ತು ಕೃತವರ್ಮರು, ದೃಢವಾದ ಧನುಸ್ಸನ್ನು ಹೊಂದಿದ ಪಾಂಚಾಲರಾಜನನ್ನೆದುರಿಸಲು

ಅಸಾಧ್ಯವಾದ ಸೇನಾವ್ಯೂಹವನ್ನು ಸೀಳಿ, ರಥಸೇನೆಯನ್ನೂ ಬಿಟ್ಟು ಶಕುನಿ ಇದ್ದಲ್ಲಿಗೆ ಹೋದರು.

ತತಸ್ತೇಷು ಪ್ರಯಾತೇಷು ಧೃಷ್ಟದ್ಯುಮ್ನಪುರಸ್ಕೃತಾಃ ।
ಆಯಯುಃ ಪಾಂಡವಾ ರಾಜನ್ ವಿನಿಘ್ನಂತಶ್ಚ ತಾವಕಾನ್ ॥೫೧॥

ರಾಜನೇ! ಅವರು ಹೊರಟುಹೋದಮೇಲೆ ಧೃಷ್ಟದ್ಯುಮ್ನಮೊದಲಾದ ಪಾಂಡವರು ನಿನ್ನ ಕಡೆಯವರನ್ನು ಸಾಯಿಸುತ್ತಾ ಬಂದರು.

ದೃಷ್ಟ್ವಾ ತು ತಾನಾಪತತಃ ಸಂಪ್ರಹೃಷ್ಟಾನ್ ಮಹಾರಥಾನ್ ।
ಪರಾಕ್ರಾಂತಾಂಸ್ತತೋ ದೃಷ್ಟ್ವಾ ನಿರಾಶಾ ಜೀವಿತೇऽಭವನ್ ॥೫೨॥

ಬಹಳ ಆನಂದದಿಂದ ತಮ್ಮ ಮೇಲೆ ಆಕ್ರಮಣ ಮಾಡುತ್ತಿರುವ ಆ ಮಹಾರಥರನ್ನು ನೋಡಿ ನಿನ್ನವರು ಜೀವನದಲ್ಲಿ ನಿರಾಶೆಯನ್ನು ಹೊಂದಿದರು.

ವಿವರ್ಣಮುಖಭೂಯಿಷ್ಠಮಭವತ್ ತಾವಕಂ ಬಲಮ್ ॥೫೩॥

ನಿನ್ನ ಸೇನೆಯಲ್ಲಿ ಎಲ್ಲರ ಮುಖವು ಕಳೆಗುಂದಿ ಕಪ್ಪಾಯಿತು.

ಪರಿಕ್ಷೀಣಾಯುಧಾನ್ ದೃಷ್ಟ್ವಾ ತಾನಹಂ ಪರಿವಾರಿತಾನ್ ।
ರಾಜನ್ ಬಲೇನ ತ್ರ್ಯಂಗೇನ ತ್ಯಕ್ತ್ವಾ ಜೀವಿತಮಾತ್ಮನಃ ॥೫೪॥

ಆತ್ಮನಾ ಪಂಚಮೋऽಯುಧ್ಯಂ ಪಾಂಚಾಲಸ್ಯ ಮಹಾಬಲಮ್ ॥೫೫॥

ರಾಜನೆ! ನಿನ್ನ ಸೈನಿಕರ ಆಯುಧಗಳು ಮುಗಿಯುತ್ತಿರುವುದನ್ನು ಮತ್ತು ಅವರು ಶತ್ರುಗಳಿಂದ ಸುತ್ತುವರಿದುದನ್ನು ನೋಡಿ ನಾನು ನನ್ನ ಜೀವದ ಆಸೆಯನ್ನು ತೊರೆದು ಕುದುರೆ, ಆನೆ ಮತ್ತು ಪದಾತಿಗಳೆಂಬ ಮೂರು ಅಂಗವುಳ್ಳ ಸೈನ್ಯವನ್ನು ಕೂಡಿಕೊಂಡು ದುರ್ಯೋಧನ, ಕೃಪ, ಕೃತವರ್ಮ, ಅಶ್ವತ್ಥಾಮರ ನಂತರ ಐದನೆಯವನಾಗಿ ಪಾಂಚಾಲರ ಮಹಾಸೈನ್ಯವನ್ನು ಎದುರಿಸಿದೆನು.

ತಸ್ಮಿನ್ ದೇಶೇ ವ್ಯವಸ್ಥಾಪ್ಯ ತತ್ರ ಶಾರದ್ವತಃ ಸ್ಥಿತಃ ।
ಪ್ರದುದ್ರುವುಃ ತದಾ ಯೋಧಾಃ ಕಿರೀಟಿಶರಪೀಡಿತಾಃ ॥೫೬॥

ಅಲ್ಲಿ ಕೃಪನು ನಿಂತು ಯುದ್ಧಮಾಡುತ್ತಿದ್ದ ಸ್ಥಳದಲ್ಲಿ ನಾನೂ ಹೋಗಿ ಚೆನ್ನಾಗಿ ಸನ್ನದ್ಧನಾಗಿ ಯುದ್ಧವನ್ನು ಮಾಡಿದೆನು. ಆ ಸಂದರ್ಭದಲ್ಲಿ ಅರ್ಜುನನ ಬಾಣಗಳಿಂದ ಪೀಡಿತರಾದ ಯೋಧರು ಓಡುತ್ತಿದ್ದರು.

ಧೃಷ್ಟದ್ಯುಮ್ನಸ್ಯ ಚಾನೀಕೇ ತತ್ರ ನೋಽಭೂದ್ ರಣೋ ಮಹಾನ್ ।
ನಿರ್ಜಿತಾಸ್ತೇ ವಯಂ ಸರ್ವೇ ವ್ಯಪಯಾತಾ ರಣಾತ್ ತತಃ ॥೫೭॥

ಅಲ್ಲಿ ಧೃಷ್ಟದ್ಯುಮ್ನನ ಸೈನ್ಯದೊಂದಿಗೆ ನಮಗೆ ದೊಡ್ಡ ಕಾದಾಟ ನಡೆಯಿತು. ಅನಂತರ ಯುದ್ಧದಲ್ಲಿ ಅವರಿಂದ ಸೋತ ನಾವೆಲ್ಲ ರಣರಂಗದಿಂದ ಹಿಂತಿರುಗಿದೆವು.

ಅಥಾಪಶ್ಯಂ ಸಾತ್ಯಕಿಂ ತಮುಪಯಾಂತಂ ಮಹಾರಥಮ್ ।
ರಥೈಶ್ಚತುಃಶತೈರ್ವೀರೋ ಮಾಂ ಚಾಭ್ಯದ್ರವದಾಹವೇ ॥೫೮॥

ಆಗ ನಾನು ಮಹಾರಥನಾದ ಸಾತ್ಯಕಿಯು ನನ್ನ ಸಮೀಪಕ್ಕೆ ಬರುತ್ತಿರುವುದನ್ನು ನೋಡಿದೆ. ವೀರನಾದ ಸಾತ್ಯಕಿಯು ನಾಲ್ಕುನೂರು ರಥಗಳಿಂದ ಕೂಡಿಕೊಂಡು ನನ್ನ ಮೇಲೆ ಆಕ್ರಮಣ ಮಾಡಿದನು.

ಧೃಷ್ಟದ್ಯುಮ್ನಾದಹಂ ಮುಕ್ತಃ ಕಥಂಚಿಚ್ಛ್ರಾಂತವಾಹನಃ ।
ಪತಿತೋ ಮಾಧವಾನೀಕೇ ದುಷ್ಕೃತೀ ನರಕೇ ಯಥಾ ॥೫೯॥

ಧೃಷ್ಟದ್ಯುಮ್ನನ ಕೈಯಿಂದ ನಾನು ಹೇಗೋ ಕಷ್ಟಪಟ್ಟು ತಪ್ಪಿಸಿಕೊಂಡೆನು. ಆದರೆ ನನ್ನ ವಾಹನವು ಆಯಾಸಗೊಂಡಿದ್ದರಿಂದ ಪಾಪಿಯು ನರಕದಲ್ಲಿ ಬೀಳುವಂತೆ ಸಾತ್ಯಕಿಯ ಸೈನ್ಯದ ಮಧ್ಯೆ ಸಿಕ್ಕಿಹಾಕಿಕೊಂಡೆನು.

ತತ್ರ ಯುದ್ಧಮಭೂದ್ ಘೋರಂ ಮುಹೂರ್ತಮತಿದಾರುಣಮ್ ॥

ಅಲ್ಲಿ ಒಂದು ಮುಹೂರ್ತದ ಕಾಲ ದುಃಖದಾಯಕವಾದ ಘೋರವಾದ ಯುದ್ಧವು ನಡೆಯಿತು.

ಸಾತ್ಯಕಿಸ್ತು ಮಹಾಬಾಹುರ್ಮಮ ಹತ್ವಾ ಪರಿಚ್ಛದಮ್ ।
ಜೀವಗ್ರಾಹಮಗೃಹ್ಣನ್ಮಾಂ ಮೂರ್ಚ್ಛಿತಂ ಪತಿತಂ ಭುವಿ ॥೬೧॥

ಮಹಾಬಾಹುವಾದ ಸಾತ್ಯಕಿಯಾದರೂ ನನ್ನ ಸಕಲಯುದ್ಧಸಾಮಗ್ರಿಗಳನ್ನು ನಾಶಮಾಡಿದನು. ಭೂಮಿಯಲ್ಲಿ ಮೂರ್ಛೆತಪ್ಪಿ ಬಿದ್ದ ನನ್ನನ್ನು ಜೀವಸಹಿತವಾಗಿ ಹಿಡಿದನು.

ತದಾ ಮುಹೂರ್ತಾದೇವಾಥ ಗಜಾನೀಕಮವಧ್ಯತ ।
ಗದಯಾ ಭೀಮಸೇನೇನ ನಾರಾಚೈರರ್ಜುನೇನ ಚ ॥೬೨॥

ಆಗ ಭೀಮಸೇನನ ಗದೆಯಿಂದ ಮತ್ತು ಅರ್ಜುನನ ಬಾಣಗಳಿಂದ ಒಂದೇ ಮುಹೂರ್ತದಲ್ಲಿ ಗಜಪಡೆಯು ನಾಶವಾಯಿತು.

ಅಭಿಪಿಷ್ಟೈರ್ಮಹಾನಾಗೈಃ ಸಮಂತಾತ್ ಪರ್ವತೋಪಮೈಃ ।
ನಾತಿಪ್ರಸಿದ್ಧೈವ ಗತಿಃ ಪಾಂಡವಾನಾಮಜಾಯತ ॥೬೩॥

ಪರ್ವತಸದೃಶವಾದ ಆನೆಗಳು ಪುಡಿಪುಡಿಯಾಗಿ ಎಲ್ಲಾ ಕಡೆಯೂ ಬಿದ್ದಿದ್ದವು. ಇದರಿಂದಾಗಿ ಪಾಂಡವರಿಗೆ ರಣರಂಗದಲ್ಲಿ ನಡೆದಾಡುವ ದಾರಿಯು ಗೋಚರಿಸದೆ ಅವರಿಗೆ ನಡೆದಾಡಲು ತುಂಬಾ ಕಷ್ಟವಾಯಿತು.

ರಥಮಾರ್ಗಂ ತತಶ್ಚಕ್ರೇ ಭೀಮಸೇನೋ ಮಹಾಬಲಃ ।
ಪಾಂಡವಾನಾಂ ಮಹಾರಾಜ ವ್ಯಪಕರ್ಷನ್ ಮಹಾಗಜಾನ್ ॥೬೪॥

ಮಹಾರಾಜನೇ! ಅನಂತರ ಮಹಾಬಲಶಾಲಿಯಾದ ಭೀಮಸೇನನು ಮಹಾಗಜಗಳನ್ನು ದಾರಿಯಿಂದ ಎಳೆದು, ಪಾಂಡವರ ಸಂಚಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ರಥಮಾರ್ಗವನ್ನು ಮಾಡಿಕೊಟ್ಟನು.

ಅಶ್ವತ್ಥಾಮಾ ಕೃಪಶ್ಚೈವ ಕೃತವರ್ಮಾ ಚ ಸಾತ್ವತಃ ।
ಅಪಶ್ಯಂತೋ ಗಜಾನೀಕೇ ದುರ್ಯೋಧನಮರಿಂದಮಮ್ ॥೬೫॥

ರಾಜಾನಂ ಮೃಗಯಾಮಾಸುಃ ತವ ಪುತ್ರಂ ಮಹಾರಥಮ್ ॥೬೬॥

ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರು ಗಜಪಡೆಯಲ್ಲಿ ಶತ್ರುಸಂಹಾರಕನಾದ ದುರ್ಯೋಧನನನ್ನು ಕಾಣದೆ ಮಹಾರಥನಾದ ನಿನ್ನ ಮಗನನ್ನು ಹುಡುಕತೊಡಗಿದರು.

ಪರಿತ್ಯಜ್ಯ ಚ ಪಾಂಚಾಲ್ಯಂ ಪ್ರಯಾತಾ ಯತ್ರ ಸೌಬಲಃ ।
ರಾಜ್ಞೋಽದರ್ಶನಸಂವಿಗ್ನಾ ವರ್ತಮಾನೇ ಜನಕ್ಷಯೇ ॥೬೭॥

ದುರ್ಯೋಧನನು ಕಾಣಿಸದಿದ್ದುದರಿಂದ ಉದ್ವಿಗ್ನರಾದ ಅವರು ನಡೆಯುತ್ತಿರುವ ಜನಸಂಹಾರದಲ್ಲಿ ಧೃಷ್ಟದ್ಯುಮ್ನನನ್ನು ಬಿಟ್ಟು ಶಕುನಿ ಇದ್ದಲ್ಲಿಗೆ ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಲ್ಯಪರ್ವಣಿ ಸಂಜಯಜೀವಗ್ರಹಣಂ ನಾಮ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾರನೆಯ ಅಧ್ಯಾಯ

ಭೀಮನು ಉಳಿದ ದುರ್ಯೋಧನನ ಸಹೋದರರನ್ನು ಕೊಲ್ಲುವುದು.

ಸಂಜಯಃ

ಗಜಾನೀಕೇ ಹತೇ ತಸ್ಮಿನ್ ಪಾಂಡುಪುತ್ರೇಣ ಭಾರತ ।
ವಧ್ಯಮಾನೇ ಬಲೇ ರಾಜನ್ ಭೀಮಸೇನೇನ ಸರ್ವಶಃ ॥೧॥

ವಿಚರಂತಮಪಶ್ಯಾಮ ಭೀಮಸೇನಂ ರಣಾಜಿರೇ ।
ದಂಡಹಸ್ತಮಿವ ಕ್ರುದ್ಧಮಂತಕಂ ಪ್ರಾಣಹಾರಿಣಮ್ ॥೨॥

ಸಂಜಯ– ಭರತಕುಲಜಾತನೇ! ರಾಜನೇ! ಗಜಸೈನ್ಯವನ್ನು ಭೀಮನು ಕೊಂದಿದ್ದಾನೆ. ಎಲ್ಲಾ ಸೈನ್ಯವನ್ನು ನಾಶಮಾಡಿದ್ದಾನೆ. ಇಂತಹ ಭೀಮನು ರಣರಂಗದಲ್ಲಿ ಸಂಚರಿಸುತ್ತಿದ್ದರೆ ಜೀವರ ಪ್ರಾಣವನ್ನು ತೆಗೆಯುವ ಯಮನು ಕೋಪದಿಂದ ದಂಡವನ್ನು ಹಿಡಿದುಕೊಂಡು ಸಂಚರಿಸುತ್ತಿದ್ದಂತೆ ನಮಗೆ ಕಾಣಿಸುತ್ತಿತ್ತು.

ಸಮೇತ್ಯ ಚ ಮಹಾರಾಜ ಹತಶೇಷಾಃ ಸುತಾಸ್ತವ ।
ಅದೃಶ್ಯಮಾನೇ ಕೌರವ್ಯೇ ಪುತ್ರೇ ದುರ್ಯೋಧನೇ ತವ ॥೩॥

ಸೋದರ್ಯಾಃ ಸಹಿತಾ ಭೂತ್ವಾ ಭೀಮಸೇನಮುಪಾದ್ರವನ್ ॥೪॥

ಮಹಾರಾಜನೇ! ನಿನ್ನ ಮಗನಾದ ದುರ್ಯೋಧನನು ಎಲ್ಲಿಯೂ ಕಾಣಿಸದೇ ಇದ್ದಾಗ ನಿನ್ನ ಬದುಕಿ ಉಳಿದ ಬೇರೆ ಮಕ್ಕಳು ಒಟ್ಟಾಗಿ ಭೀಮಸೇನನನ್ನು ಎದುರಿಸಿದರು.

ದುರ್ಮರ್ಷಣೋ ಮಹಾರಾಜ ಜೈತ್ರೋ ಭೂರಿಬಲೋ ನಲಃ ।
ಸುನಾಭೋ ಜಯಸೇನಶ್ಚ ದುರ್ವಿಷಹ್ಯಸ್ತಥೈವ ಚ ॥೫॥

ದುಷ್ಪ್ರಧರ್ಷಸುಜಾತೌ ಚ ಪುತ್ರಾವಭಿಮತೌ ತವ ।
ದುರ್ವಿಮೋಚನನಾಮಾ ಚ ಶ್ರುತವಾ ಚ ಮಹಾಬಲಃ ॥೬॥

ಇತ್ಯೇತೇ ಸಹಿತಾ ಭೂತ್ವಾ ತವ ಪುತ್ರಾಃ ಸಮಂತತಃ ॥೭॥

ಭೀಮಸೇನಮಭಿದ್ರುತ್ಯ ರುರುಧುಃ ಸರ್ವತೋ ದಿಶಃ ॥೮॥

ಮಹಾರಾಜನೇ! ದುರ್ಮರ್ಷಣ, ಜೈತ್ರ, ಭೂರಿಬಲ, ನಲ, ಸುನಾಭ, ಜಯಸೇನ, ದುರ್ವಿಷಹ್ಯ, ದುಷ್ಪ್ರಧರ್ಷ, ಸುಜಾತ, ದುರ್ವಿಮೋಚನ, ಮಹಾಬಲಶಾಲಿಯಾದ ಶ್ರುತರ್ವಾ - ಈ ನಿನ್ನ ಮಕ್ಕಳು ಎಲ್ಲರೂ ಒಟ್ಟಾಗಿ ಭೀಮಸೇನನ ಬಳಿಗೆ ಧಾವಿಸಿ ಬಂದು ಎಲ್ಲಾ ದಿಕ್ಕುಗಳಲ್ಲಿಯೂ ಅವನನ್ನು ತಡೆದರು.

ತತೋ ಭೀಮೋ ಮಹಾರಾಜ ಸ್ವರಥಂ ಪುನರಾಸ್ಥಿತಃ ।
ಮುಮೋಚ ನಿಶಿತಾನ್ ಬಾಣಾನ್ ಪುತ್ರಾಣಾಂ ತವ ಮರ್ಮಸು ॥೯॥

ಮಹಾರಾಜನೆ! ಆನಂತರ ಭೀಮನು ತನ್ನ ರಥವನ್ನು ಪುನಃ ಏರಿ ನಿನ್ನ ಮಕ್ಕಳ ಮರ್ಮಸ್ಥಾನಕ್ಕೆ ಬಾಣಗಳನ್ನು ಬಿಟ್ಟನು.

ತೇ ಕೀರ್ಯಮಾಣಾ ಭೀಮೇನ ಪುತ್ರಾಸ್ತವ ಮಹಾರಣೇ ।
ಭೀಮಸೇನಮವಾಸೇಧನ್ ಪ್ರವಣಾದಿವ ಕುಂಜರಮ್ ॥೧೦॥

ಮಹಾಯುದ್ಧದಲ್ಲಿ ಭೀಮನಿಂದ ಈ ರೀತಿಯಲ್ಲಿ ಬಾಣಗಳಿಂದ ಪ್ರಹಾರಕ್ಕೆ ಒಳಗಾದ ನಿನ್ನ ಮಕ್ಕಳು ಆನೆಯನ್ನು ಬೇಟೆಗಾರರು ಕೆಳಗಿನಿಂದ ಎಳೆಯುವಂತೆ ಭೀಮನನ್ನು ಸ್ವಲ್ಪದೂರಕ್ಕೆ ಎಳೆದೊಯ್ದರು.

ತತಃ ಕ್ರುದ್ಧೋ ರಣೇ ಭೀಮಃ ಶಿರೋ ದುರ್ಮರ್ಷಣಸ್ಯ ಚ ।
ಕ್ಷುರಪ್ರೇಣ ಪ್ರಮಥ್ಯಾಶು ಪಾತಯಾಮಾಸ ಭೂತಳೇ ॥೧೧॥

ಇದರಿಂದ ಕೋಪಗೊಂಡ ಭೀಮನು ಯುದ್ಧದಲ್ಲಿ ಕ್ಷುರಪ್ರದಿಂದ ದುರ್ಮರ್ಷಣನ ತಲೆಯನ್ನು ಪುಡಿಮಾಡಿ ನೆಲಕ್ಕೆ ಬೀಳಿಸಿದನು.

ತತೋಽಪರೇಣ ಭಲ್ಲೇನ ಸರ್ವಾವರಣಭೇದಿನಾ ।
ಶ್ರುತಾಂತಮವಧೀದ್ ಭೀಮಃ ತವ ಪುತ್ರಂ ಮಹಾರಥಮ್ ॥೧೨॥

ಅನಂತರ ಎಲ್ಲಾ ಕವಚಗಳನ್ನೂ ಭೇದಿಸುವ ಇನ್ನೊಂದು ಭಲ್ಲೆಯಿಂದ ನಿನ್ನ ಮಗನಾದ ಮಹಾರಥ ಶ್ರುತಾಂತನನ್ನು ಕೊಂದನು.

ಜಯತ್ಸೇನಂ ತತೋ ವಿದ್ಧ್ವಾ ನಾರಾಚೇನ ಹಸನ್ನಿವ ।
ಪಾತಯಾಮಾಸ ಕೌರವ್ಯಂ ರಥೋಪಸ್ಥಾದರಿಂದಮಃ ॥೧೩॥

ತದನಂತರ ಶತ್ರುಸಂಹಾರಕನಾದ ಭೀಮನು ನಗುತ್ತಾ ಬಾಣದಿಂದ ಕುರುಪುತ್ರ ಜಯತ್ಸೇನನನ್ನು ಕೊಂದು ರಥದ ಮೇಲಿನಿಂದ ಕೆಳಗೆ ಬೀಳಿಸಿದನು.

ಸ ಪಪಾತ ರಥಾದ್ ರಾಜನ್ ಭೂಮೌ ತೂರ್ಣಂ ಮಮಾರ ಚ ॥

ರಥದಿಂದ ನೆಲಕ್ಕೆ ಬಿದ್ದ ಜಯತ್ಸೇನನು ಕೂಡಲೇ ಸತ್ತುಹೋದನು.

ಶ್ರುತರ್ವಾ ತು ತತೋ ಭೀಮಂ ಕ್ರುದ್ಧೋ ವಿವ್ಯಾಧ ಮಾರಿಷ ।
ಶತೇನ ಗೃಧ್ರವಾಜಾನಾಂ ಶರಾಣಾಂ ನತಪರ್ವಣಾಮ್ ॥೧೫॥

ರಾಜನೇ! ಕೋಪಗೊಂಡ ಶ್ರುತರ್ವನು ಬಾಗಿದ ಸಂಧಿಗಳುಳ್ಳ, ಹದ್ದಿನ ರೆಕ್ಕೆಗಳುಳ್ಳ ನೂರು ಬಾಣಗಳಿಂದ ಭೀಮನಿಗೆ ಹೊಡೆದನು.

ತತಃ ಕ್ರುದ್ಧೋ ರಣೇ ಭೀಮೋ ಜೈತ್ರಂ ಭೂರಿಬಲಂ ನಲಮ್ ।
ತ್ರೀನೇತಾಂಸ್ತ್ರಿಭಿರಾನರ್ಚ್ಛದ್ ವಿಷಾಗ್ನಿಪ್ರತಿಮೈಃ ಶರೈಃ ॥೧೬॥

ಇದರಿಂದ ಕೋಪಗೊಂಡ ಭೀಮನು ವಿಷದ ಹಾಗೆ ಪ್ರಾಣಹಾರಿಯಾದ, ಅಗ್ನಿಯಂತೆ ಸುಡುವ ಮೂರು ಬಾಣಗಳಿಂದ ಜೈತ್ರನನ್ನು, ಭೂರಿಬಲನನ್ನು ಮತ್ತು ನಲನನ್ನು ಹೊಡೆದನು.

ತೇ ಹತಾ ನ್ಯಪತನ್ ಭೂಮೌ ಸ್ಯಂದನೇಭ್ಯೋ ಮಹಾರಥಾಃ ।
ವಸಂತೇ ಪುಷ್ಪಶಬಲಾ ನಿಕೃತ್ತಾ ಇವ ಕಿಂಶುಕಾಃ ॥೧೭॥

ಆ ಮೂವರೂ ಮಹಾರಥರು ಸತ್ತು, ರಥಗಳಿಂದ ನೆಲಕ್ಕೆ ಬಿದ್ದರು. ಅವರು ವಸಂತ ಕಾಲದಲ್ಲಿ ಹೂವುಗಳಿಂದ ಮಿಶ್ರವರ್ಣಕ್ಕೆ ತಿರುಗಿದ ಪಲಾಶ (ಮುತ್ತುಗ) ವೃಕ್ಷಗಳು ಕಡಿದು ನೆಲಕ್ಕೆ ಬಿದ್ದ ಹಾಗೆ ಕಾಣಿಸಿಕೊಂಡರು.

ತತೋಽಪರೇಣ ತೀಕ್ಷ್ಣೇನ ನಾರಾಚೇನ ಪರಂತಪ ।
ದುರ್ವಿಮೋಚನಮಾಹತ್ಯ ಪ್ರೇಷಯಾಮಾಸ ಮೃತ್ಯವೇ ॥೧೮॥

ಶತ್ರುತಾಪಕನೇ! ಅನಂತರ ಭೀಮನು ಇನ್ನೊಂದು ಬಾಣದಿಂದ ದುರ್ವಿಮೋಚನನನ್ನು ಕೊಂದು ಯಮನಿಗೆ ಕಳುಹಿಸಿಕೊಟ್ಟನು.

ಸ ಹತಃ ಪ್ರಾಪತದ್ ಭೂಮೌ ಸ್ವರಥಾತ್ ರಥಿನಾಂ ವರಃ ।
ಗಿರೇಸ್ತು ಕೂಟಜೋ ವೃಕ್ಷೋ ಮಾರುತೇನೇವ ಪಾತಿತಃ ॥೧೯॥

ಪರ್ವತಶಿಖರದಲ್ಲಿ ಹುಟ್ಟಿದ ಮರವು ಗಾಳಿಯ ಹೊಡೆತಕ್ಕೆ ಸಿಲುಕಿ ನೆಲಕ್ಕೆ ಬಿದ್ದಹಾಗೆ ರಥಿಕರಲ್ಲಿಯೇ ಶ್ರೇಷ್ಠನಾದ ದುರ್ವಿಮೋಚನನೂ ಸತ್ತು ತನ್ನ ರಥದಿಂದ ನೆಲಕ್ಕೆ ಬಿದ್ದನು.

ದುಷ್ಪ್ರಧರ್ಷಂ ತತಶ್ಚೈವ ಸುಜಾತಂ ಚ ಸುತೌ ತವ ।
ಏಕೈಕಂ ಹ್ಯವಧೀತ್ ಸಂಖೇ ದ್ವಾಭ್ಯಾಂ ದ್ವಾಭ್ಯಾಂ ಮಹಾಬಲಃ ॥೨೦॥

ಮಹಾಬಲನಾದ ಭೀಮನು ನಿನ್ನ ಮತ್ತಿಬ್ಬರ ಮಕ್ಕಳಾದ ದುಷ್ಪ್ರಧರ್ಷ ಮತ್ತು ಸುಜಾತನನ್ನು ಒಬ್ಬೊಬ್ಬರಿಗೆ ಎರಡೆರಡು ಬಾಣಗಳನ್ನು ಪ್ರಯೋಗಿಸಿ, ಯುದ್ಧದಲ್ಲಿ ಹೊಡೆದನು.

ತೌ ಶಿಲೀಮುಖವಿದ್ಧಾಂಗೌ ಪೇತತೂ ರಥಸತ್ತಮೌ ॥೨೧॥

ಮಹಾರಥರಾದ ಅವರಿಬ್ಬರೂ ಬಾಣಗಳಿಂದ ತಮ್ಮ ಅವಯವಗಳನ್ನು ಕಳೆದುಕೊಂಡು ಕೆಳಗೆ ಬಿದ್ದರು.

ತತೋ ಯತಂತಮಪರಮಭಿವೀಕ್ಷ್ಯ ಸುತಂ ತವ ।
ಭಲ್ಲೇನ ಯುಧಿ ವಿವ್ಯಾಧ ಭೀಮೋ ದುರ್ವಿಷಹಂ ರಣೇ ॥೨೨॥

ನಂತರ ಭೀಮನು ಯುದ್ಧಪ್ರಯತ್ನದಲ್ಲಿ ತೊಡಗಿದ ನಿನ್ನ ಇನ್ನೊಬ್ಬ ಮಗ ದುರ್ವಿಷಹನನ್ನು ನೋಡಿ ಭಲ್ಲೆಯಿಂದ ಹೊಡೆದನು.

ಸ ಪಪಾತ ರಣೇ ರಾಜನ್ ಪಶ್ಯತಾಂ ಸರ್ವಧನ್ವಿನಾಮ್ ॥೨೩॥

ರಾಜನೇ! ರಣರಂಗದಲ್ಲಿ ಎಲ್ಲಾ ಧನುರ್ಧಾರಿಗಳು ನೋಡುತ್ತಿದ್ದಂತೆಯೇ ಆ ದುರ್ವಿಷಹನು ಕೆಳಕ್ಕೆ ಬಿದ್ದನು.

ದೃಷ್ಟ್ವಾ ತು ನಿಹತಾನ್ ಭ್ರಾತೄನ್ ಬಹೂನೇಕೇನ ಸಂಯುಗೇ ।
ಅಮರ್ಷವಶಮಾಪನ್ನಃ ಶ್ರುತರ್ವಾ ಭೀಮಮಭ್ಯಯಾತ್ ॥೨೪॥

ಯುದ್ಧದಲ್ಲಿ ಭೀಮಸೇನನು ಒಬ್ಬನೇ ಅನೇಕ ಮಂದಿ ತನ್ನ ಸಹೋದರರನ್ನು ಕೊಂದಿದ್ದನ್ನು ಸಹಿಸಲಾಗದೆ ಶ್ರುತರ್ವನು ಭೀಮನನ್ನು ಎದುರಿಸಿದನು.

ವಿಕ್ಷಿಪಂಸ್ತು ಮಹಚ್ಚಾಪಂ ಕಾರ್ತಸ್ವರವಿಭೂಷಿತಮ್ ।
ವಿಸೃಜನ್ ಸಾಯಕಾಂಶ್ಚೈವ ವಿಷಾಗ್ನಿಪ್ರತಿಮಾನ್ ಬಹೂನ್ ॥೨೫॥

ಬಂಗಾರದಿಂದ ಅಲಂಕೃತವಾದ ತನ್ನ ದೊಡ್ಡಬಿಲ್ಲನ್ನು ಎಳೆದು ಹಿಡಿದುಕೊಂಡು ವಿಷಸದೃಶವಾದ, ಬೆಂಕಿಯಂತಿರುವ ಅನೇಕ ಬಾಣಗಳನ್ನು ಪ್ರಯೋಗಿಸಿದನು.

ಸ ತು ರಾಜನ್ ಧನುಶ್ಛಿತ್ವಾ ಪಾಂಡವಸ್ಯ ಮಹಾಮೃಧೇ ।
ಅಥೈನಂ ಛಿನ್ನಧನ್ವಾನಂ ವಿಂಶತ್ಯಾ ಸಮವಾಕಿರತ್ ॥೨೬॥

ರಾಜನೇ! ಆ ಮಹಾಯುದ್ಧದಲ್ಲಿ ಶ್ರುತರ್ವನು ಭೀಮನ ಧನುಸ್ಸನ್ನು ಮುರಿದನು. ಅನಂತರ ಬಿಲ್ಲು ಮುರಿದುಕೊಂಡ ಭೀಮನ ಮೇಲೆ ಇಪ್ಪತ್ತು ಬಾಣಗಳನ್ನು ಪ್ರಯೋಗಿಸಿದನು.

ತತೋಽನ್ಯದ್ಧನುರಾದಾಯ ಭೀಮಸೇನೋ ಮಹಾರಥಃ ।
ಅವಾಕಿರತ್ ತವ ಸುತಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೨೭॥

ಮಹಾರಥನಾದ ಭೀಮನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು, ಬಾಣಗಳ ಮಳೆಯನ್ನು ಸುರಿಸುತ್ತಾ ನಿಲ್ಲು! ನಿಲ್ಲು! ಎಂದು ಹೇಳಿದನು.

ಮಹದಾಸೀತ್ ತಯೋರ್ಯುದ್ಧಂ ಚಿತ್ರರೂಪಂ ಭಯಾನಕಮ್ ।
ಯಾದೃಶಃ ಸಮರಃ ಪೂರ್ವಂ ಜಂಭವಾಸವಯೋರಭೂತ್ ॥೨೮॥

ಶ್ರುತರ್ವ ಮತ್ತು ಭೀಮಸೇನರ ಮಧ್ಯ ಭಯವನ್ನು ಹುಟ್ಟಿಸುವ, ವಿಚಿತ್ರವಾದ ಯುದ್ಧವು ನಡೆಯಿತು. ಈ ದೃಶ್ಯ ಹಿಂದೆ ಜಂಭಾಸುರ ಮತ್ತು ಇಂದ್ರನ ನಡುವೆ ನಡೆದ ಯುದ್ಧದ ಹಾಗೆ ಇತ್ತು.

ತಯೋಸ್ತತ್ರ ಶರೈರ್ಮುಕ್ತೈರ್ಯಮದಂಡನಿಭೈಃ ಶಿತೈಃ ।
ಸಮಾಚ್ಛನ್ನಾ ಧರಾ ಸರ್ವಾ ಖಂ ಚ ಸರ್ವಾ ದಿಶಸ್ತಥಾ ॥೨೯॥

ರಣರಂಗದಲ್ಲಿ ಅವರಿಬ್ಬರು ಪ್ರಯೋಗಿಸಿದ ಹರಿತವಾದ, ಯಮನ ದಂಡಕ್ಕೆ ಸದೃಶವಾದ ಬಾಣಗಳಿಂದ ಭೂಮಿ, ಆಕಾಶ ಮತ್ತು ಎಲ್ಲಾ ದಿಕ್ಕುಗಳೂ ಮುಚ್ಚಹೋದವು.

ತತಃ ಶ್ರುತರ್ವಾ ಸಂಕ್ರುದ್ಧೋ ಧನುರಾಯಮ್ಯ ಸಾಯಕೈಃ ।
ಭೀಮಸೇನಂ ರಣೇ ರಾಜನ್ ಬಾಹ್ವೋರುರಸಿ ಚಾಪರ್ಯತ್ ॥೩೦॥

ರಾಜನೇ! ಅನಂತರ ಕೋಪಗೊಂಡ ಶ್ರುತರ್ವನು ಧನುಸ್ಸನ್ನು ಚೆನ್ನಾಗಿ ಬಗ್ಗಿಸಿ ಭೀಮನ ಬಾಹುಗಳು ಮತ್ತು ಎದೆಗೆ ಬಾಣಗಳನ್ನು ಬಿಟ್ಟನು.

ಸೋಽತಿವಿದ್ಧೋ ಮಹಾರಾಜ ತವ ಪುತ್ರೇಣ ಧನ್ವಿನಾ ।
ಭೀಮಃ ಸಂಚುಕ್ಷುಭೇ ಕ್ರುದ್ಧಃ ಪರ್ವಣೀವ ಮಹೋದಧಿಃ ॥೩೧॥

ಧನುರ್ಧಾರಿಯಾದ ನಿನ್ನ ಮಗನು ಬಿಟ್ಟ ಬಾಣಗಳಿಂದ ಬಹಳವಾಗಿ ಪೆಟ್ಟುತಿಂದ ಭೀಮನು ಕೋಪಗೊಂಡು ಪರ್ವಕಾಲದಲ್ಲಿ ಉಕ್ಕೇರುವ ಮಹಾಸಮುದ್ರದ ಹಾಗೆ ಕ್ಷೋಭೆಗೊಳಗಾದನು.

ತತೋ ಭೀಮೋ ರುಷಾವಿಷ್ಟಃ ಪುತ್ರಸ್ಯ ತವ ಭಾರತ ।
ಸಾರಥಿಂ ಚತುರೋಽಶ್ವಾಂಶ್ಚ ಶರೈರ್ನಿನ್ಯೇ ಯಮಕ್ಷಯಮ್ ॥೩೨॥

ಭರತಕುಲೋದ್ಭವನೇ! ರೋಷದಿಂದ ಕೂಡಿದ ಭೀಮನು ನಿನ್ನ ಮಗನ ಸಾರಥಿಯನ್ನು ಮತ್ತು ನಾಲ್ಕು ಕುದುರೆಗಳನ್ನು ಬಾಣಗಳಿಂದ ಕೊಂದು ಯಮಪುರಿಗೆ ಅಟ್ಟಿದನು.

ವಿರಥಂ ತಂ ಸಮಾಲಕ್ಷ್ಯ ವಿಶಿಖೈರ್ಭೀಮವಾಪಿಭಿಃ ।
ಅವಾಕಿರದಮೇಯಾತ್ಮಾ ದರ್ಶಯನ್ ಪಾಣಿಲಾಘವಮ್ ॥೩೩॥

ರಥವನ್ನು ಕಳೆದುಕೊಂಡ ಶ್ರುತರ್ವನನ್ನು ನೋಡಿದ ಭೀಮನು ತನ್ನ ಹಸ್ತಚಾತುರ್ಯವನ್ನು ತೋರಿಸುತ್ತಾ, ರೋಮರಂಧ್ರಗಳನ್ನು ಭೇದಿಸುವಂಥ ಹರಿತವಾದ ಬಾಣಗಳ ಮಳೆಯನ್ನು ಸುರಿಸುತ್ತಾನೆ.

ಶ್ರುತರ್ವಾ ವಿರಥೋ ರಾಜನ್ ನಾದದೇ ಖಡ್ಗಚರ್ಮಣೇ ॥೩೪॥

ರಾಜನೇ! ರಥವನ್ನು ಕಳೆದುಕೊಂಡ ಶ್ರುತರ್ವನು ಖಡ್ಗ ಮತ್ತು ಚರ್ಮ (ಗುರಾಣಿ)ವನ್ನು ತೆಗೆದುಕೊಂಡನು.

ಅಥಾಸ್ಯಾದದತಃ ಖಡ್ಗಂ ಶತಚಂದ್ರಂ ಚ ಭಾನುಮತ್ ।
ಕ್ಷುರಪ್ರೇಣ ಶಿರಃ ಕಾಯಾತ್ ಪಾತಯಾಮಾಸ ಪಾಂಡವಃ ॥೩೫॥

ನೂರು ಚಂದ್ರರ ಚಿಹ್ನೆಗಳುಳ್ಳ ಮತ್ತು ಒಳ್ಳೆಯ ಕಾಂತಿಯುಳ್ಳ ಖಡ್ಗವನ್ನು ಹಿಡಿದುಕೊಳ್ಳುತ್ತಿರುವಾಗಲೇ ಭೀಮನು ಕ್ಷುರಪ್ರದಿಂದ ಅವನ ತಲೆಯನ್ನು ಕಡಿದು ಕೆಳಗೆ ಬೀಳಿಸಿದನು.

ಛಿನ್ನೋತ್ತಮಾಂಗಸ್ಯ ತತಃ ಕ್ಷುರಪ್ರೇಣ ಮಹಾತ್ಮನಾ ।
ಪಪಾತ ಕಾಯಃ ಸ್ವರಥಾದ್ ವಸುಧಾಮನುನಾದಯನ್ ॥೩೬॥

ಮಹಾತ್ಮನಾದ ಭೀಮನು ಕ್ಷುರಪ್ರದಿಂದ ತಲೆಯನ್ನು ಕಡಿದಾಗ ಶ್ರುತರ್ವನ ದೇಹವು ಅವನ ರಥದಿಂದ ಜೋರಾಗಿ ಶಬ್ದವನ್ನು ಉಂಟುಮಾಡುತ್ತಾ ನೆಲಕ್ಕೆ ಬಿದ್ದಿತು.

ತಸ್ಮಿನ್ನಿಪತಿತೇ ವೀರೇ ತಾವಕಾ ಭಯಮೋಹಿತಾಃ ।
ಅಭ್ಯದ್ರವಂತ ಸಂಗ್ರಾಮೇ ಭೀಮಸೇನಂ ಯುಯುತ್ಸವಃ ॥೩೭॥

ಶ್ರುತರ್ವನು ಬಿದ್ದಾಗ ನಿನ್ನ ಕಡೆಯವರು ಭಯದಿಂದಾಗಿ ಮೂಢರಾಗಿ, ಭೀಮನೊಡನೆ ಯುದ್ಧಮಾಡುವ ಇಚ್ಛೆಯಿಂದ ರಣರಂಗದಲ್ಲಿ ಭೀಮನೆಡೆಗೆ ಧಾವಿಸಿ ಬಂದರು.

ತಾನಾಪತತ ಏವಾಶು ಹತಶೇಷಾನ್ ಮಹಾಬಲಾನ್ ।
ದಂಸಿತಃ ಪ್ರತಿಜಗ್ರಾಹ ಭೀಮಸೇನಃ ಪ್ರತಾಪವಾನ್ ॥೩೮॥

ತನ್ನ ಮೇಲೆ ಬೇಗನೇ ಆಕ್ರಮಣಮಾಡುತ್ತಿದ್ದ ಅಳಿದುಳಿದ ಮಹಾಬಲಶಾಲಿಗಳಾದ ಆ ಯೋಧರನ್ನು ಕವಚಧಾರಿಯಾದ, ಮಹಾಪ್ರತಾಪಿಯಾದ ಭೀಮನು ತಡೆಹಿಡಿದನು.

ತೇ ತು ತಂ ವೈ ಸಮಾಸಾದ್ಯ ಪರಿವವ್ರುಃ ಸಮಂತತಃ ॥೩೯॥

ಅವರೆಲ್ಲರೂ ಭೀಮನ ಬಳಿಗೆ ಬಂದು ಸುತ್ತಲೂ ಸುತ್ತುವರಿದರು.

ತತಸ್ತು ಸಂವೃತೋ ಭೀಮಃ ತಾವಕೈರ್ನಿಶಿತೈಃ ಶರೈಃ ।
ಪೀಡಯಾಮಾಸ ತಾನ್ ಸರ್ವಾನ್ ಸಹಸ್ರಾಕ್ಷ ಇವಾಸುರಾನ್ ॥೪೦॥

ನಿನ್ನ ಪಕ್ಷದವರಿಂದ ಸುತ್ತುವರಿಯಲ್ಪಟ್ಟ ಭೀಮನು, ದೇವೇಂದ್ರನು ಅಸುರರನ್ನು ಪೀಡಿಸುವಂತೆ ಹರಿತವಾದ ಬಾಣಗಳಿಂದ ಅವರೆಲ್ಲರನ್ನೂ ಪೀಡಿಸಿದನು.

ತತಃ ಪಂಚಶತಾನ್ ಹತ್ವಾ ಸ್ವವರೂಥಾನ್ ಮಹಾರಥಾನ್ ।
ಜಘಾನ ಕುಂಜರಾನೀಕಂ ಪುನಃ ಸಪ್ತಶತಂ ಯುಧಿ ॥೪೧॥

ಅನಂತರ ಭೀಮನು ಆವರಣಸಹಿತರಾದ ಐದುನೂರು ಮಹಾರಥರನ್ನು ಕೊಂದನು. ಪುನಃ ಯುದ್ಧದಲ್ಲಿ ಏಳುನೂರು ಗಜಪಡೆಯನ್ನೂ ಸಾಯಿಸಿದನು.

ಹತ್ವಾ ದಶ ಸಹಸ್ರಾಣಿ ಪತ್ತೀನಾಂ ಪರಮೇಷುಭಿಃ ।
ವಾಜಿನಾಂ ಚ ಶತಾನ್ಯಷ್ಟೌ ಪಾಂಡವಃ ಸ ವಿರಾಜತೇ ॥೪೨॥

ಉತ್ತಮವಾದ ಬಾಣಗಳಿಂದ ಹತ್ತು ಸಾವಿರ ಪದಾತಿಗಳನ್ನು ವಧಿಸಿದನು. ಎಂಟುನೂರು ಅಶ್ವಾರೋಹಿಗಳನ್ನು ಕೊಂದನು. ಹೀಗೆ ಭೀಮನು ವಿರಾಜಮಾನನಾಗಿದ್ದನು.

ಭೀಮಸೇನಸ್ತು ಕೌಂತೇಯೋ ಹತ್ವಾ ಯುದ್ಧೇ ಸುತಾಂಸ್ತವ ।
ಮೇನೇ ಕೃತಾರ್ಥಮಾತ್ಮಾನಂ ಸಫಲಂ ಜನ್ಮ ಚ ಪ್ರಭೋ ॥೪೩॥

ಪ್ರಭುವೇ! ಕುಂತೀಪುತ್ರನಾದ ಭೀಮನು ಯುದ್ಧದಲ್ಲಿ ನಿನ್ನ ಮಕ್ಕಳನ್ನು ಕೊಂದು ತನ್ನನ್ನು ಕೃತಕೃತ್ಯನನ್ನಾಗಿಯೂ, ತನ್ನ ಜನ್ಮವನ್ನು ಸಾರ್ಥಕವನ್ನಾಗಿಯೂ ತಿಳಿದುಕೊಂಡನು.

ತಂ ತಥಾ ಯುಧ್ಯಮಾನಂ ಚ ವಿನಿಘ್ನಂತಂ ಚ ತಾವಕಾನ್ ।
ಈಕ್ಷಿತುಂ ನೋತ್ಸಹಂತೇ ಸ್ಮ ತವ ಸೈನ್ಯಾ ನರಾಧಿಪ ॥೪೪॥

ಜನನಾಯಕನೇ! ಹೀಗೆ ಯುದ್ಧಮಾಡುತ್ತಾ ನಿನ್ನ ಕಡೆಯವರನ್ನು ಸಾಯಿಸುತ್ತಿರುವ ಭೀಮನನ್ನು ನೋಡಲೂ ನಿನ್ನ ಸೈನಿಕರಿಗೆ ಸಾಧ್ಯವಾಗಲಿಲ್ಲ.

ವಿದ್ರಾವ್ಯ ತು ಕುರೂನ್ ಸರ್ವಾನ್ ತಾಂಶ್ಚ ಹತ್ವಾ ಪದಾನುಗಾನ್ ।
ದೋರ್ಭ್ಯಾಂ ಶಬ್ದಂ ತತಶ್ಚಕ್ರೇ ತ್ರಾಸಯಾನೋ ಹಯದ್ವಿಪಾನ್ ॥೪೫॥

ಕುರುಯೋಧರನ್ನೆಲ್ಲಾ ಯುದ್ಧದಿಂದ ಓಡಿಸಿ, ಪದಾತಿಗಳನ್ನೆಲ್ಲಾ ಕೊಂದು, ಆನೆ ಮತ್ತು ಕುದುರೆಗಳಿಗೆ ಭಯವನ್ನು ಹುಟ್ಟಿಸುವಂಥ ಶಬ್ದವನ್ನು ತನ್ನ ಕೈಗಳಿಂದ ಮಾಡಿದನು.

ಹತಭೂಯಿಷ್ಠಯೋಧಾ ತು ತವ ಸೇನಾ ವಿಶಾಂಪತೇ ।
ಕಿಂಚಿಚ್ಛೇಷಾ ಮಹಾರಾಜ ಕೃಪಣಾ ಸಮಪದ್ಯತ ॥೪೬॥

ರಾಜನೇ! ನಿನ್ನ ಸೈನ್ಯದ ಹೆಚ್ಚಿನ ಯೋಧರು ಸತ್ತುಹೋದರು. ಮಹಾರಾಜ! ಉಳಿದ ಕೆಲವೇ ಜನರೂ ದಯನೀಯ ಸ್ಥಿತಿಯನ್ನು ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಲ್ಯಪರ್ವಣಿ ಗಜಯುದ್ಧಂ ನಾಮ ಷಟ್‌ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೇಳನೆಯ ಅಧ್ಯಾಯ

ಕೃಷ್ಣಾರ್ಜುನರ ಸಂವಾದ, ಸಂಕುಲಯುದ್ಧ, ಭೀಮನಿಂದ
ಧೃತರಾಷ್ಟ್ರಪುತ್ರ ಸುದರ್ಶನನ ವಧೆ.

ಸಂಜಯಃ

ದುರ್ಯೋಧನೋ ಮಹಾರಾಜ ಸುದರ್ಶಶ್ಚಾಪಿ ತೇ ಸುತಃ ।
ಹತಶೇಷೌ ತದಾ ಸಂಖ್ಯೇ ವಾಜಿಮಧ್ಯೇ ವ್ಯವಸ್ಥಿತೌ ॥೧॥

ಸಂಜಯ– ಮಹಾರಾಜನೇ! ದುರ್ಯೋಧನ ಮತ್ತು ನಿನ್ನ ಇನ್ನೊಬ್ಬ ಮಗ ಸುದರ್ಶನರು ಯುದ್ಧದಲ್ಲಿ ಆಗ ಉಳಿದುಕೊಂಡಿದ್ದರು. ಅವರು ಅಶ್ವಗಳ ಮಧ್ಯೆ ಇದ್ದರು.

ತತೋ ದುರ್ಯೋಧನಂ ದೃಷ್ಟ್ವಾ ವಾಜಿಮಧ್ಯೇ ವ್ಯವಸ್ಥಿತಮ್ ।
ಉವಾಚ ದೇವಕೀಪುತ್ರಃ ಕುಂತೀಪುತ್ರಂ ಧನಂಜಯಮ್ ॥೨॥

ಅನಂತರ ಕುದುರೆಗಳಲ್ಲಿ ಇದ್ದ ದುರ್ಯೋಧನನನ್ನು ನೋಡಿದ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಹೇಳಿದನು.

ಶ್ರೀಭಗವಾನ್

ಶತ್ರವೋ ಹತಭೂಯಿಷ್ಠಾಃ ಜ್ಞಾತಯಃ ಪರಿಪಾಲಿತಾಃ ।
ಗೃಹೀತ್ವಾ ಸಂಜಯಂ ಚಾಸೌ ನಿವೃತ್ತಃ ಶಿನಿಪುಂಗವಃ ॥೩॥

ಶ್ರೀಭಗವಾನ್– ಹೆಚ್ಚಿನ ಶತ್ರುಗಳು ಸತ್ತುಹೋದರು. ನಮ್ಮ ಸಂಬಂಧಿಗಳನ್ನು ರಕ್ಷಿಸಲಾಗಿದೆ. ಸಾತ್ಯಕಿಯು ಸಂಜಯನನ್ನು ಬಂಧಿಸಿ ಎಳೆದೊಯ್ದಿದ್ದಾನೆ.

ಪರಿಶ್ರಾಂತಶ್ಚ ನಕುಲಃ ಸಹದೇವಶ್ಚ ಭಾರತ ।
ಯೋಧಯಿತ್ವಾ ರಣೇ ಪಾಪಾನ್ ಧಾರ್ತರಾಷ್ಟ್ರಪದಾನುಗಾನ್ ॥೪॥

ಭರತಕುಲೋದ್ಭವನೇ! ನಕುಲ ಮತ್ತು ಸಹದೇವನು ದುರ್ಯೋಧನನ ಅನುಯಾಯಿಗಳಾದ ಪಾಪಿಗಳೊಡನೆ ಯುದ್ಧ ಮಾಡಿ, ಬಹಳವಾಗಿ ಆಯಾಸಗೊಂಡಿದ್ದಾರೆ.

ಸುಯೋಧನಂ ಪರಿತ್ಯಜ್ಯ ತ್ರಯ ಏತೇ ವ್ಯವಸ್ಥಿತಾಃ ।
ಕೃಪಶ್ಚ ಕೃತವರ್ಮಾ ಚ ದ್ರೌಣಿಶ್ಚೈವ ಮಹಾರಥಃ ॥೫॥

ದುರ್ಯೋಧನನನ್ನು ಬಿಟ್ಟು ಕೃಪ, ಕೃತವರ್ಮ ಮತ್ತು ಅಶ್ವತ್ಥಾಮ ಈ ಮೂವರು ಇದ್ದಾರೆ.

ಅಸೌ ತಿಷ್ಠತಿ ಪಾಂಚಾಲ್ಯಃ ಶ್ರಿಯಾ ಪರಮಯಾ ಯುತಃ ।
ದುರ್ಯೋಧನಬಲಂ ಹತ್ವಾ ಸಹಸರ್ವೈಃ ಪ್ರಭದ್ರಕೈಃ ॥೬॥

ಈ ಪಾಂಚಾಲರಾಜ ಧೃಷ್ಟದ್ಯುಮ್ನನು ಎಲ್ಲಾ ಪ್ರಭದ್ರಕರೊಡಗೂಡಿ ದುರ್ಯೋಧನನ ಸೈನ್ಯವನ್ನು ನಾಶಮಾಡಿದ್ದಾನೆ. ಇದರಿಂದಾಗಿ ವಿಶಿಷ್ಟವಾದ ಕಾಂತಿಯಿಂದ ಯುಕ್ತನಾಗಿದ್ದಾನೆ.

ಅಸೌ ದುರ್ಯೋಧನಃ ಪಾರ್ಥ ವಾಜಿಮಧ್ಯೇ ವ್ಯವಸ್ಥಿತಃ ।
ಛತ್ರೇಣ ಧ್ರಿಯಮಾಣೇನ ಪ್ರೇಕ್ಷಮಾಣೋ ಮುಹುರ್ಮುಹುಃ ॥೭॥

ಪಾರ್ಥನೇ! ಈ ದುರ್ಯೋಧನನು ಅಶ್ವಗಳ ಮಧ್ಯದಲ್ಲಿ ನಿಂತಿದ್ದಾನೆ. ಅಲ್ಲಿಯೂ ಅವನಿಗೆ ರಾಜಮರ್ಯಾದೆಯ ಛತ್ರವನ್ನು ಹಿಡಿದಿದ್ದಾರೆ. ಅವನು ಪುನಃ ಪುನಃ ಸುತ್ತ ಮುತ್ತ ನೋಡುತ್ತಿದ್ದಾನೆ.

ಪ್ರತಿವ್ಯೂಹ್ಯ ಬಲಂ ಸರ್ವಂ ರಣಮಧ್ಯೇ ವ್ಯವಸ್ಥಿತಃ ।
ಏನಂ ಹತ್ವಾ ಶಿತೈರ್ಬಾಣೈಃ ಕೃತಕೃತ್ಯೋ ಭವಿಷ್ಯಸಿ ॥೮॥

ರಣರಂಗದ ಮಧ್ಯದಲ್ಲಿ ತನ್ನೆಲ್ಲಾ ಸೈನ್ಯವನ್ನು ವ್ಯೂಹದಲ್ಲಿ ನಿಲ್ಲಿಸಿ, ತಾನು ನಿಂತುಕೊಂಡಿದ್ದಾನೆ. ಅವನನ್ನು ಹರಿತವಾದ ಬಾಣಗಳಿಂದ ಕೊಂದು ನೀನು ಕೃತಕೃತ್ಯನಾಗುವಿ.

ಗಜಾನೀಕಂ ಹತಂ ದೃಷ್ಟ್ವಾ ತ್ವಾಂ ಚ ಪ್ರಾಪ್ತಮರಿಂದಮಮ್ ।
ಯಾವನ್ನಾಭ್ಯತಿವರ್ತೇತ ತಾವಜ್ಜಹಿ ಸುಯೋಧನಮ್ ॥೯॥

ಗಜಪಡೆಯು ನಾಶವಾಗಿದೆ. ನೀನು ಅವನನ್ನು ಸಮೀಪಿಸುತ್ತಿದ್ದಿ. ಇದನ್ನು ನೋಡಿ ಅವನು ಮತ್ತೆ ಯುದ್ಧವನ್ನು ಮೀರಿ ಪಲಾಯನ ಮಾಡುವುದಕ್ಕಿಂತ ಮೊದಲೇ ಆ ದುರ್ಯೋಧನನನ್ನು ಸಾಯಿಸು.

ಯಾತು ಕಶ್ಚಿತ್ತು ಪಾಂಚಾಲ್ಯಂ ಕ್ಷಿಪ್ರಮಾಗಮ್ಯತಾಮಿತಿ ।
ಪರಿಶ್ರಾಂತಬಲಸ್ತಾತ ನೈಷ ಮುಚ್ಯೇತ ಕಿಲ್ಬಿಷೀ ॥೧೦॥

ಯಾರಾದರೊಬ್ಬರನ್ನು ಧೃಷ್ಟದ್ಯುಮ್ನನ ಬಳಿಗೆ ಹೇಳಿ ಕಳುಹಿಸು 'ನೀನು ಬೇಗನೇ ಇಲ್ಲಿಗೆ ಬಾ' ಎಂದು. ಪ್ರಿಯನೇ! ಈ ದುರ್ಯೋಧನನ ಸೈನ್ಯವು ಬಹಳ ಆಯಾಸಗೊಂಡಿದೆ. ಆದ್ದರಿಂದ ಪಾಪಿಯಾದ ಅವನು ಬದುಕುಳಿಯಲು ಸಾಧ್ಯವಿಲ್ಲ.

ಸಂಜಯ– ಮಹಾರಾಜನೇ! ದುರ್ಯೋಧನ ಮತ್ತು ನಿನ್ನ ಇನ್ನೊಬ್ಬ ಮಗ ಸುದರ್ಶನರು ಯುದ್ಧದಲ್ಲಿ ಆಗ ಉಳಿದುಕೊಂಡಿದ್ದರು. ಅವರು ಅಶ್ವಗಳ ಮಧ್ಯೆ ಇದ್ದರು.

ತತೋ ದುರ್ಯೋಧನಂ ದೃಷ್ಟ್ವಾ ವಾಜಿಮಧ್ಯೇ ವ್ಯವಸ್ಥಿತಮ್ ।
ಉವಾಚ ದೇವಕೀಪುತ್ರಃ ಕುಂತೀಪುತ್ರಂ ಧನಂಜಯಮ್ ॥೨॥

ಅನಂತರ ಕುದುರೆಗಳಲ್ಲಿ ಇದ್ದ ದುರ್ಯೋಧನನನ್ನು ನೋಡಿದ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಹೇಳಿದನು.

ಶ್ರೀಭಗವಾನ್

ಶತ್ರವೋ ಹತಭೂಯಿಷ್ಠಾಃ ಜ್ಞಾತಯಃ ಪರಿಪಾಲಿತಾಃ ।
ಗೃಹೀತ್ವಾ ಸಂಜಯಂ ಚಾಸೌ ನಿವೃತ್ತಃ ಶಿನಿಪುಂಗವಃ ॥೩॥

ಶ್ರೀಭಗವಾನ್– ಹೆಚ್ಚಿನ ಶತ್ರುಗಳು ಸತ್ತುಹೋದರು. ನಮ್ಮ ಸಂಬಂಧಿಗಳನ್ನು ರಕ್ಷಿಸಲಾಗಿದೆ. ಸಾತ್ಯಕಿಯು ಸಂಜಯನನ್ನು ಬಂಧಿಸಿ ಎಳೆದೊಯ್ದಿದ್ದಾನೆ.

ಪರಿಶ್ರಾಂತಶ್ಚ ನಕುಲಃ ಸಹದೇವಶ್ಚ ಭಾರತ ।
ಯೋಧಯಿತ್ವಾ ರಣೇ ಪಾಪಾನ್ ಧಾರ್ತರಾಷ್ಟ್ರಪದಾನುಗಾನ್ ॥೪॥

ಭರತಕುಲೋದ್ಭವನೇ! ನಕುಲ ಮತ್ತು ಸಹದೇವನು ದುರ್ಯೋಧನನ ಅನುಯಾಯಿಗಳಾದ ಪಾಪಿಗಳೊಡನೆ ಯುದ್ಧ ಮಾಡಿ, ಬಹಳವಾಗಿ ಆಯಾಸಗೊಂಡಿದ್ದಾರೆ.

ಸುಯೋಧನಂ ಪರಿತ್ಯಜ್ಯ ತ್ರಯ ಏತೇ ವ್ಯವಸ್ಥಿತಾಃ ।
ಕೃಪಶ್ಚ ಕೃತವರ್ಮಾ ಚ ದ್ರೌಣಿಶ್ಚೈವ ಮಹಾರಥಃ ॥೫॥

ದುರ್ಯೋಧನನನ್ನು ಬಿಟ್ಟು ಕೃಪ, ಕೃತವರ್ಮ ಮತ್ತು ಅಶ್ವತ್ಥಾಮ ಈ ಮೂವರು ಇದ್ದಾರೆ.

ಅಸೌ ತಿಷ್ಠತಿ ಪಾಂಚಾಲ್ಯಃ ಶ್ರಿಯಾ ಪರಮಯಾ ಯುತಃ ।
ದುರ್ಯೋಧನಬಲಂ ಹತ್ವಾ ಸಹಸರ್ವೈಃ ಪ್ರಭದ್ರಕೈಃ ॥೬॥

ಈ ಪಾಂಚಾಲರಾಜ ಧೃಷ್ಟದ್ಯುಮ್ನನು ಎಲ್ಲಾ ಪ್ರಭದ್ರಕರೊಡಗೂಡಿ ದುರ್ಯೋಧನನ ಸೈನ್ಯವನ್ನು ನಾಶಮಾಡಿದ್ದಾನೆ. ಇದರಿಂದಾಗಿ ವಿಶಿಷ್ಟವಾದ ಕಾಂತಿಯಿಂದ ಯುಕ್ತನಾಗಿದ್ದಾನೆ.

ಅಸೌ ದುರ್ಯೋಧನಃ ಪಾರ್ಥ ವಾಜಿಮಧ್ಯೇ ವ್ಯವಸ್ಥಿತಃ ।
ಛತ್ರೇಣ ಧ್ರಿಯಮಾಣೇನ ಪ್ರೇಕ್ಷಮಾಣೋ ಮುಹುರ್ಮುಹುಃ ॥೭॥

ಪಾರ್ಥನೇ! ಈ ದುರ್ಯೋಧನನು ಅಶ್ವಗಳ ಮಧ್ಯದಲ್ಲಿ ನಿಂತಿದ್ದಾನೆ. ಅಲ್ಲಿಯೂ ಅವನಿಗೆ ರಾಜಮರ್ಯಾದೆಯ ಛತ್ರವನ್ನು ಹಿಡಿದಿದ್ದಾರೆ. ಅವನು ಪುನಃ ಪುನಃ ಸುತ್ತ ಮುತ್ತ ನೋಡುತ್ತಿದ್ದಾನೆ.

ಪ್ರತಿವ್ಯೂಹ್ಯ ಬಲಂ ಸರ್ವಂ ರಣಮಧ್ಯೇ ವ್ಯವಸ್ಥಿತಃ ।
ಏನಂ ಹತ್ವಾ ಶಿತೈರ್ಬಾಣೈಃ ಕೃತಕೃತ್ಯೋ ಭವಿಷ್ಯಸಿ ॥೮॥

ರಣರಂಗದ ಮಧ್ಯದಲ್ಲಿ ತನ್ನೆಲ್ಲಾ ಸೈನ್ಯವನ್ನು ವ್ಯೂಹದಲ್ಲಿ ನಿಲ್ಲಿಸಿ, ತಾನು ನಿಂತುಕೊಂಡಿದ್ದಾನೆ. ಅವನನ್ನು ಹರಿತವಾದ ಬಾಣಗಳಿಂದ ಕೊಂದು ನೀನು ಕೃತಕೃತ್ಯನಾಗುವಿ.

ಗಜಾನೀಕಂ ಹತಂ ದೃಷ್ಟ್ವಾ ತ್ವಾಂ ಚ ಪ್ರಾಪ್ತಮರಿಂದಮಮ್ ।
ಯಾವನ್ನಾಭ್ಯತಿವರ್ತೇತ ತಾವಜ್ಜಹಿ ಸುಯೋಧನಮ್ ॥೯॥

ಗಜಪಡೆಯು ನಾಶವಾಗಿದೆ. ನೀನು ಅವನನ್ನು ಸಮೀಪಿಸುತ್ತಿದ್ದಿ. ಇದನ್ನು ನೋಡಿ ಅವನು ಮತ್ತೆ ಯುದ್ಧವನ್ನು ಮೀರಿ ಪಲಾಯನ ಮಾಡುವುದಕ್ಕಿಂತ ಮೊದಲೇ ಆ ದುರ್ಯೋಧನನನ್ನು ಸಾಯಿಸು.

ಯಾತು ಕಶ್ಚಿತ್ತು ಪಾಂಚಾಲ್ಯಂ ಕ್ಷಿಪ್ರಮಾಗಮ್ಯತಾಮಿತಿ ।
ಪರಿಶ್ರಾಂತಬಲಸ್ತಾತ ನೈಷ ಮುಚ್ಯೇತ ಕಿಲ್ಬಿಷೀ ॥೧೦॥

ಯಾರಾದರೊಬ್ಬರನ್ನು ಧೃಷ್ಟದ್ಯುಮ್ನನ ಬಳಿಗೆ ಹೇಳಿ ಕಳುಹಿಸು 'ನೀನು ಬೇಗನೇ ಇಲ್ಲಿಗೆ ಬಾ' ಎಂದು. ಪ್ರಿಯನೇ! ಈ ದುರ್ಯೋಧನನ ಸೈನ್ಯವು ಬಹಳ ಆಯಾಸಗೊಂಡಿದೆ. ಆದ್ದರಿಂದ ಪಾಪಿಯಾದ ಅವನು ಬದುಕುಳಿಯಲು ಸಾಧ್ಯವಿಲ್ಲ.

ತವ ಹತ್ವಾ ಬಲಂ ಸರ್ವಂ ಸಂಗ್ರಾಮೇ ಧೃತರಾಷ್ಟ್ರಜಃ ।
ಜಿತಾನ್ ಪಾಂಡುಸುತಾನ್ ಮತ್ವಾ ರೂಪಂ ಧಾರಯತೇ ಮಹತ್ ॥

ಈ ದುರ್ಯೋಧನನು ಯುದ್ಧದಲ್ಲಿ ನಿನ್ನ ಎಲ್ಲಾ ಸೈನ್ಯವನ್ನು ನಾಶಮಾಡಿ ಪಾಂಡವರನ್ನು ಗೆಲ್ಲುತ್ತೇನೆ ಎಂದು ತಿಳಿದುಕೊಂಡು ಉಗ್ರರೂಪವನ್ನು ತಾಳಿದ್ದಾನೆ.

ನಿಹತಂ ಸ್ವಬಲಂ ದೃಷ್ಟ್ವಾ ಪೀಡಿತಂ ಚಾಪಿ ಪಾಂಡವೈಃ ।
ಧ್ರುವಮೇಷ್ಯತಿ ಸಂಗ್ರಾಮೇ ವಧಾಯೈವಾತ್ಮನೋ ನೃಪಃ ॥೧೨॥

ಅಷ್ಟೇ ಅಲ್ಲದೆ ಯುದ್ಧದಲ್ಲಿ ಪಾಂಡವರು ತನ್ನ ಸೈನ್ಯವನ್ನು ಕೊಂದಿರುವುದನ್ನೂ, ಉಳಿದ ಸೈನ್ಯವು ಪೆಟ್ಟುತಿಂದಿರುವುದನ್ನೂ ಅವನು ನೋಡಿದ್ದಾನೆ. ಆದ್ದರಿಂದ ಖಂಡಿತವಾಗಿ ಮತ್ತೆ ಯುದ್ಧಕ್ಕೆ ಬರುತ್ತಾನೆ. ಆದರೆ ಅದು ಅವನ ಸಾವಿಗೇ ಕಾರಣವಾಗುವುದು.

ಸಂಜಯಃ

ಏವಮುಕ್ತಃ ಫಲ್ಗುನಸ್ತು ಕೃಷ್ಣಂ ವಚನಮಬ್ರವೀತ್ ॥೧೩॥

ಸಂಜಯ– ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಹೇಳಿದಾಗ ಕೇಳಿಸಿಕೊಂಡ ಅರ್ಜುನನು ಹೀಗೆ ಹೇಳುತ್ತಾನೆ.

ಅರ್ಜುನಃ

ಧೃತರಾಷ್ಟ್ರಸುತಾಃ ಸರ್ವೇ ಹತಾ ಭೀಮೇನ ಮಾನದ ॥೧೪॥

ಅರ್ಜುನ– ಪೂಜ್ಯನೇ! ಭೀಮನು ಧೃತರಾಷ್ಟ್ರನ ಎಲ್ಲಾ ಮಕ್ಕಳನ್ನೂ ಕೊಂದಿದ್ದಾನೆ.

ಯಾವೇತಾವಸ್ಥಿತೌ ಕೃಷ್ಣ ತಾವದ್ಯ ನ ಭವಿಷ್ಯತಃ ।
ಹತೋ ಭೀಷ್ಮೋ ಹತೋ ದ್ರೋಣಃ ಕರ್ಣೋ ವೈಕರ್ತನೋ ಹತಃ ॥

ಮದ್ರರಾಜೋ ಹತಃ ಶಲ್ಯೋ ಹತಃ ಕೃಷ್ಣಜಯದ್ರಥಃ ।
ಹಯಾಃ ಪಂಚಶತಾಃ ಶಿಷ್ಟಾಃ ಶಕುನೇಃ ಸೌಬಲಸ್ಯ ಚ ॥೧೬॥

ರಥಾನಾಂ ಚ ಶತೇ ಶಿಷ್ಟೇ ದ್ವೇ ಏವ ತು ಜನಾರ್ದನ ।
ದಂತಿನಾಂ ಚ ಶತಂ ಸಾಗ್ರಂ ತ್ರಿಸಹಸ್ರಂ ಚ ಪತ್ತಯಃ ॥೧೭॥

ಕೃಷ್ಣನೇ! ಇವರಿಬ್ಬರು ಈಗ ಉಳಿದಿದ್ದಾರೆ. ಅವರೂ ಇವತ್ತು ಇಲ್ಲವಾಗುತ್ತಾರೆ. ಭೀಷ್ಮನು ಸತ್ತಿದ್ದಾನೆ. ದ್ರೋಣನೂ ಸತ್ತಿದ್ದಾನೆ. ಕರ್ಣನೂ ಮಡಿದಿದ್ದಾನೆ. ಮದ್ರರಾಜ ಶಲ್ಯನು ಸತ್ತಿದ್ದಾನೆ. ಶ್ರೀಕೃಷ್ಣನೇ! ಜಯದ್ರಥನೂ ಸತ್ತಿದ್ದಾನೆ. ಈಗ ಶಕುನಿಯ ಬಳಿ ಐನೂರು ಅಶ್ವಾರೋಹಿಗಳು ಉಳಿದುಕೊಂಡಿದ್ದಾರೆ. ಜನಾರ್ದನನೇ! ಇನ್ನೂರು ರಥಗಳು ಉಳಿದುಕೊಂಡಿವೆ, ನೂರಕ್ಕಿಂತ ಸ್ವಲ್ಪ ಹೆಚ್ಚು ಆನೆಗಳು ಇವೆ. ಮೂರುಸಾವಿರ ಪದಾತಿಗಳು ಇದ್ದಾರೆ.

ಅಶ್ವತ್ಥಾಮಾ ಕೃಪಶ್ಚೈವ ತ್ರಿಗರ್ತಾಧಿಪತಿಸ್ತಥಾ ।
ಉಲೂಕಃ ಶಕುನಿಶ್ಚೈವ ಕೃತವರ್ಮಾ ಚ ಸಾತ್ವತಃ ॥೧೮॥

ಅಶ್ವತ್ಥಾಮ, ಕೃಪ ಮತ್ತು ತ್ರಿಗರ್ತಾಧಿಪತಿಯಾದ ಸುಶರ್ಮ, ಉಲೂಕ, ಶಕುನಿ, ಸಾತ್ವತನಾದ ಕೃತವರ್ಮ ಇವರಿಷ್ಟು ಮಂದಿ ಉಳಿದಿದ್ದಾರೆ.

ಏತದ್ ಬಲಮಭೂಚ್ಛೇಷಂ ಧಾರ್ತರಾಷ್ಟ್ರಸ್ಯ ಮಾಧವ ।
ಮೋಕ್ಷೋ ನ ನೂನಂ ಕಾಲಾದ್ಧಿ ವಿದ್ಯತೇ ಭುವಿ ಕಸ್ಯಚಿತ್ ॥೧೯॥

ಮಾಧವನೇ! ದುರ್ಯೋಧನನ ಬಳಿ ಈಗ ಇಷ್ಟು ಸೈನ್ಯ ಉಳಿದಿದೆ. ಭೂಮಿಯಲ್ಲಿ ಯಾರೂ ಕೂಡ ಕಾಲದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ತಥಾ ವಿನಿಹತೇ ಸೈನ್ಯೇ ಪಶ್ಯ ದುರ್ಯೋಧನಂ ಸ್ಥಿತಮ್ ।
ಅದ್ಯಾಹ್ನಾ ಹಿ ಮಹಾರಾಜೋ ಹತಾಮಿತ್ರೋ ಭವಿಷ್ಯತಿ ॥೨೦॥

ಹೀಗೆ ತನ್ನ ಸೈನ್ಯವು ನಾಶವಾಗಿರುವಾಗಲೂ ಇರುವ ದುರ್ಯೋಧನನನ್ನು ನೋಡು. ಈ ದಿನ ನಮ್ಮ ರಾಜನಾದ ಧರ್ಮರಾಜನು ತನ್ನೆಲ್ಲಾ ಶತ್ರುಗಳನ್ನು ಕಳೆದುಕೊಳ್ಳುವನು.

ನ ಹಿ ಮೇ ಮೋಕ್ಷ್ಯತೇ ಕಶ್ಚಿತ್ ಪರೇಷಾಮಿತಿ ನಿಶ್ಚಯಃ ।
ಯೇ ತ್ವದ್ಯ ಸಮರಂ ಕೃಷ್ಣ ನ ಹಾಸ್ಯಂತಿ ರಣೋತ್ಕಟಾಃ ॥೨೧॥

ಕೃಷ್ಣನೇ! ಯಾವ ಶತ್ರುಯೋಧರು ಯುದ್ಧದಲ್ಲಿ ಪರಮಾಸಕ್ತರಾಗಿ ಯುದ್ಧವನ್ನು ಬಿಟ್ಟು ಹೋಗುವುದಿಲ್ಲವೋ, ಅವರು ಯಾರೂ ಕೂಡ ನನ್ನ ಕೈಯಿಂದ ತಪ್ಪಿಸಿಕೊಳ್ಳಲಾರರು ಎಂಬುದು ನನ್ನ ನಿಶ್ಚಯ.

ತಾನ್ ವೈ ಸರ್ವಾನ್ ಹನಿಷ್ಯಾಮಿ ಯದ್ಯಪಿ ಸ್ಯುರಮಾನುಷಾಃ ॥೨೨॥

ಯದ್ಯಪಿ ಅವರೆಲ್ಲರೂ ಮನುಷ್ಯರಿಗೂ ಮೀರಿದ ಪರಾಕ್ರಮಿಗಳು. ಆದರೂ ಅವರನ್ನೆಲ್ಲರನ್ನೂ ಕೊಲ್ಲುವೆನು.

ಅದ್ಯ ಯುದ್ಧೇ ಸಮುನ್ನದ್ಧಂ ದೀರ್ಘಂ ರಾಜ್ಞಃ ಪ್ರಜಾಗರಮ್ ।
ಅಪನೇಷ್ಯಾಮಿ ಗಾಂಧಾರಂ ಪಾತಯಿತ್ವಾ ಶಿತೈಃ ಶರೈಃ ॥೨೩॥

ಧರ್ಮರಾಜನಿಗೆ ದೀರ್ಘಕಾಲದಿಂದ ನಿದ್ದೆ ಕೆಡಿಸಿದ, ಇಂದು ಯುದ್ಧದಲ್ಲಿ ಬಹಳವಾಗಿ ಮೆರೆಯುತ್ತಿರುವ ಶಕುನಿಯನ್ನು ಹರಿತವಾದ ಬಾಣಗಳಿಂದ ಬೀಳಿಸಿ ವಧೆ ಮಾಡುವೆನು.

ನಿಕೃತ್ಯಾ ವೈ ದುರಾಚಾರೋ ಯಾನಿ ರತ್ನಾನಿ ಸೌಬಲಃ ।
ಸಭಾಯಾಮಾಹರದ್ ದ್ಯೂತೇ ಪುನಸ್ತಾನ್ಯಾಹರಾಮ್ಯಹಮ್ ॥೨೪॥

ಯಾವ ದುರಾಚಾರಿಯಾದ ಶಕುನಿಯು ದ್ಯೂತಸಭೆಯಲ್ಲಿ ಕಪಟದಿಂದ ನಮ್ಮ ಯಾವ ರತ್ನಾಭರಣಗಳನ್ನು ಅಪಹರಿಸಿದ್ದಾನೋ ಅವೆಲ್ಲವನ್ನೂ ಪುನಃ ಕಸಿದುಕೊಳ್ಳುವೆನು.

ಅದ್ಯ ವೇತ್ಸ್ಯಂತಿ ಮಚ್ಛಕ್ತಿಂ ಸರ್ವಾ ನಾಗಪುರಸ್ತ್ರಿಯಃ ।
ಶ್ರುತ್ವಾ ಪತೀಂಶ್ಚ ಪುತ್ರಾಂಶ್ಚ ಪಾಂಡವೈರ್ನಿಹತಾನ್ ಯುಧಿ ॥೨೫॥

ಇಂದು ಯುದ್ಧದಲ್ಲಿ ತಮ್ಮ ಪತಿಗಳು ಮಕ್ಕಳು ಪಾಂಡವರಿಂದ ಸತ್ತಿರುವುದನ್ನು ಕೇಳಿ ತಿಳಿದು ಹಸ್ತಿನಾವತಿಯ ಎಲ್ಲಾ ಸ್ತ್ರೀಯರು ನಮ್ಮ ಶಕ್ತಿ- ಸಾಮರ್ಥ್ಯವೇನೆಂಬುದನ್ನು ತಿಳಿಯುವರು.

ಸಮಾಪ್ತಮದ್ಯ ವೈ ಕೃಷ್ಣಃ ಸರ್ವಂ ಕರ್ಮ ಭವಿಷ್ಯತಿ ॥೨೬॥

ಕೃಷ್ಣನೇ! ಇವತ್ತು ನಮ್ಮೆಲ್ಲ ಕಾರ್ಯಗಳೂ ಕೊನೆಗೊಳ್ಳುವವು.

ಅದ್ಯ ದುರ್ಯೋಧನೋ ದೀಪ್ತಾಂ ಶ್ರಿಯಂ ಪ್ರಾಣಾನಪಿ ತ್ಯಜೇತ್ ।
ನಾಪಯಾತಿ ಭಯಾತ್ ಕೃಷ್ಣ ಸಂಗ್ರಾಮಾದ್ ಯದಿ ಚೇನ್ಮಮ ॥೨೭॥

ಇವತ್ತು ದುರ್ಯೋಧನನು ತನ್ನ ಪ್ರಕಾಶಮಾನವಾದ ಕಾಂತಿಯನ್ನೂ, ಪ್ರಾಣವನ್ನೂ ಬಿಡುವನು. ಒಂದು ವೇಳೆ ನನ್ನ ಭಯದಿಂದಾಗಿ ದುರ್ಯೋಧನನು ಯುದ್ಧದಿಂದ

ಪಲಾಯನ ಮಾಡದಿದ್ದರೆ, ಶ್ರೀಕೃಷ್ಣನೇ! ತುಂಬಾ ಬಾಲಿಶವಾಗಿ ವ್ಯವಹರಿಸುವ ದುರ್ಯೋಧನನು ಸತ್ತುಹೋದ ಎಂಬುದಾಗಿ ತಿಳಿ.

ನಿಹತಂ ವಿದ್ಧಿ ವಾರ್ಷ್ಣೇಯ ಧಾರ್ತರಾಷ್ಟ್ರಂ ಸುಬಾಲಿಶಮ್ ॥೨೮॥

ಮಮ ಹ್ಯೇತದಪರ್ಯಾಪ್ತಂ ವಾಜಿಬೃಂದಮರಿಂದಮ ।
ಸೋಢುಂ ಜ್ಯಾತಳನಿರ್ಘೋಷಾನ್ ಯಾಹಿ ಯಾವನ್ನಿಹನ್ಮ್ಯಹಮ್ ॥

ಶತ್ರುನಾಶಕನೇ! ಈ ಅಶ್ವಸಮೂಹವು ನನ್ನ ಬಿಲ್ಲಿನ ಹಗ್ಗದ ಶಬ್ದವನ್ನು ಸಹಿಸಲು ಶಕ್ತವಾಗುವುದಿಲ್ಲ. ನಾನು ದುರ್ಯೋಧನನನ್ನು ಕೊಲ್ಲುವ ಹಾಗೆ ರಥವನ್ನು ತೆಗೆದುಕೊಂಡು ಹೋಗು.

ಸಂಜಯಃ

ಏವಮುಕ್ತಸ್ತು ದಾಶಾರ್ಹಃ ಪಾಂಡವೇನ ಯಶಸ್ವಿನಾ ।
ಅಚೋದಯದ್ ಹಯಾನ್ ರಾಜನ್ ದುರ್ಯೋಧನಬಲಂ ಪ್ರತಿ ॥

ಸಂಜಯ– ಯಶೋವಂತನಾದ ಅರ್ಜುನನು ಶ್ರೀಕೃಷ್ಣನಿಗೆ ಹೀಗೆ ಹೇಳಿದಾಗ ಶ್ರೀಕೃಷ್ಣನು ದುರ್ಯೋಧನನ ಸೈನ್ಯದ ಕಡೆಗೆ ಹೋಗುವಂತೆ ತನ್ನ ರಥದ ಕುದುರೆಗಳನ್ನು ಪ್ರಚೋದಿಸಿದನು.

ತದನೀಕಮಭಿಪ್ರೇಕ್ಷ್ಯ ತ್ರಯಃ ಸಜ್ಜಾ ಮಹಾರಥಾಃ ।
ಭೀಮಸೇನೋऽರ್ಜುನಶ್ಚೈವ ಸಹದೇವಶ್ಚ ಮಾರಿಷ ॥೩೧॥

ರಾಜನೆ! ಕೌರವರ ಆ ಸೈನ್ಯವನ್ನು ನೋಡಿ ಮಹಾರಥರಾದ ಭೀಮಸೇನ, ಅರ್ಜುನ ಮತ್ತು ಸಹದೇವ ಇವರು ಯುದ್ಧಕ್ಕೆ ಸನ್ನದ್ಧರಾದರು.

ಪ್ರಯಯುಃ ಸಿಂಹನಾದೇನ ದುರ್ಯೋಧನಜಿಘಾಂಸಯಾ ॥೩೨॥

ದುರ್ಯೋಧನನನ್ನು ಸಾಯಿಸುವ ಇಚ್ಛೆಯಿಂದ ಸಿಂಹಗರ್ಜನೆಯನ್ನು ಮಾಡುತ್ತಾ ಹೋದರು.

ತಾನ್ ಸಮೀಕ್ಷ್ಯ ತತಃ ಸರ್ವಾನ್ ಜವೇನೋದ್ಯತಕಾರ್ಮುಕಾನ್ ।
ಸೌಬಲೋऽಭ್ಯದ್ರವದ್ ಯುದ್ಧೇ ಪಾಂಡವಾನಾತತಾಯಿನಃ ॥೩೩॥

ಅನಂತರ ವೇಗವಾಗಿ ಬಿಲ್ಲನ್ನು ಹಿಡಿದುಕೊಂಡು ಬರುತ್ತಿರುವ ಭೀಮಸೇನಾದಿಗಳನ್ನು ನೋಡಿದ ಶಕುನಿಯು ಯುದ್ಧದಲ್ಲಿ ಆತತಾಯಿಗಳಾದ ಪಾಂಡವರನ್ನು ಎದುರಿಸಿದನು.

ಸುದರ್ಶನಸ್ತವ ಸುತೋ ಭೀಮಸೇನಂ ಸಮಭ್ಯಯಾತ್ ।
ಸುಶರ್ಮಾ ಶಕುನಿಶ್ಚೈವ ಯುಯುಧಾತೇ ಕಿರೀಟಿನಾ ॥೩೪॥

ನಿನ್ನ ಮಗನಾದ ಸುದರ್ಶನನು ಭೀಮಸೇನನನ್ನು ಎದುರಿಸಿದನು. ಸುಶರ್ಮ ಮತ್ತು ಶಕುನಿಯು ಅರ್ಜುನನನ್ನು ಎದುರಿಸಿದರು.

ಸಹದೇವಂ ತವ ಸುತೋ ಹಯಪೃಷ್ಠಗತೋಽಭ್ಯಯಾತ್ ॥೩೫॥

ನಿನ್ನ ಮಗನಾದ ದುರ್ಯೋಧನನು ಕುದುರೆಯ ಏರಿ ಸಹದೇವನನ್ನು ಎದುರಿಸಿದನು.

ತತೋಽಭ್ಯಾಪತತಃ ಕ್ಷಿಪ್ರಂ ತವ ಪುತ್ರೋ ಜನಾಧಿಪ ।
ಸಹದೇವಸ್ಯ ಶಿರಸಿ ಪ್ರಾಸೇನ ಪ್ರಾಹರದ್ ಭೃಶಮ್ ॥೩೬॥

ಜನಾಧಿಪತಿಯೇ! ನಿನ್ನ ಮಗನು ಮೇಲೇರಿ ಬರುತ್ತಿದ್ದ ಸಹದೇವನ ತಲೆಯ ಮೇಲೆ ಪ್ರಾಸಾಯುಧದಿಂದ ಬಹಳ ಜೋರಾಗಿ ಹೊಡೆದನು.

ಸೋಪಾವಿಶದ್ ರಥೋಪಸ್ಥೇ ತವ ಪುತ್ರೇಣ ಘಾತಿತಃ ।
ರುಧಿರಾಪ್ಲುತಸರ್ವಾಂಗೋ ಆಶೀವಿಷ ಇವ ಶ್ವಸನ್ ॥೩೭॥

ನಿನ್ನ ಮಗನಿಂದ ಪೆಟ್ಟುತಿಂದ ಸಹದೇವನು ರಥದ ಮೇಲೆಯೇ ಕುಸಿದು ಕುಳಿತನು. ಅವನ ಮೈಯೆಲ್ಲ ರಕ್ತದಿಂದ ತೊಯ್ದುಹೋಗಿತ್ತು. ಹಾವಿನಂತೆ ಭುಸುಗುಟ್ಟುತ್ತಿದ್ದನು.

ಪ್ರತಿಲಭ್ಯ ತತಃ ಸಂಜ್ಞಾಂ ಸಹದೇವೋ ವಿಶಾಂಪತೇ ।
ದುರ್ಯೋಧನಂ ಶರೈಸ್ತೀಕ್ಷ್ಣೈಃ ಸಂಕ್ರುದ್ಧಃ ಸಮವಾಕಿರತ್ ॥೩೮॥

ರಾಜನೇ! ಸಹದೇವನು ಎಚ್ಚರಗೊಂಡು ಬಹಳ ಕೋಪದಿಂದ ದುರ್ಯೋಧನನ ಮೇಲೆ ತೀಕ್ಷ್ಣವಾದ ಬಾಣಗಳ ಮಳೆಯನ್ನು ಸುರಿಸಿದನು.

ಪಾರ್ಥೋ೯ऽಪಿ ಯುಧಿ ವಿಕ್ರಮ್ಯ ಕುಂತೀಪುತ್ರೋ ಧನಂಜಯಃ ।
ಶೂರಾಣಾಮಶ್ವಪೃಷ್ಠೇಭ್ಯಃ ಶಿರಾಂಸಿ ನಿಚಕರ್ತ ಹ ॥೩೯॥

ಯುದ್ಧದಲ್ಲಿ ಅರ್ಜುನನೂ ಪರಾಕ್ರಮದಿಂದ ಅಶ್ವಾರೋಹಿಗಳ ತಲೆಗಳನ್ನು ಕಡಿದುಹಾಕಿದನು. ಅದು ಬಹಳ ಅದ್ಭುತವಾಗಿತ್ತು!

ತದನೀಕಂ ತದಾ ಪಾರ್ಥೋ ವ್ಯಧಮದ್ ಬಹುಭಿಃ ಶರೈಃ ।
ಪಾತಯಿತ್ವಾ ಹಯಾನ್ ಸರ್ವಾಃ ತ್ರಿಗರ್ತಾನಾಂ ರಥಾನ್ಯಯೌ ॥೪೦॥

ಅರ್ಜುನನು ಆ ಕೌರವಸೈನ್ಯವನ್ನು ಅನೇಕ ಬಾಣಗಳಿಂದ ಪುಡಿಗೈದನು. ತ್ರಿಗರ್ತರ ಎಲ್ಲಾ ಅಶ್ವಸೈನ್ಯವನ್ನು ಬೀಳಿಸಿ ರಥಸೈನ್ಯದ ಮೇಲೆ ದಾಳಿ ಮಾಡಿದನು.

ತತಸ್ತೇ ಸಹಿತಾಃ ಸರ್ವೇ ತ್ರಿಗರ್ತಾನಾಂ ಮಹಾರಥಾಃ ।
ಅರ್ಜುನಂ ವಾಸುದೇವಂ ಚ ಶರವರ್ಷೈರವಾಕಿರನ್ ॥೪೧॥

ಆಗ ತ್ರಿಗರ್ತದೇಶದ ಎಲ್ಲಾ ಮಹಾರಥರೂ ಒಟ್ಟಾಗಿ ಅರ್ಜುನ ಮತ್ತು ಶ್ರೀಕೃಷ್ಣನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ಸತ್ಯಕರ್ಮಾಣಮಾಕ್ಷಿಪ್ಯ ಕ್ಷುರಪ್ರೇಣ ಮಹಾಯಶಾಃ ।
ತತೋ೭ಸ್ಯ ಸ್ಯಂದನಸ್ಯೈಷಾಂ ಚಿಚ್ಛೇದ ಪಾಂಡುನಂದನಃ ॥೪೨॥

ಮಹಾಕೀರ್ತಿಶಾಲಿಯಾದ ಅರ್ಜುನನು ಕ್ಷುರಪ್ರದಿಂದ ಸತ್ಯಕರ್ಮನನ್ನು ಹೊಡೆದನು. ಅವನ ರಥದ ಈಷಾಯಂತ್ರವನ್ನು ತುಂಡು ಮಾಡಿದನು.

ಶಿಲಾಶಿತೇನ ಚ ವಿಭೋ ಕ್ಷುರಪ್ರೇಣ ಮಹಾರಥಃ ।
ಶಿರಶ್ಚಿಚ್ಛೇದ ಸಹಸಾ ತಪ್ತಕುಂಡಲಭೂಷಿತಮ್ ॥೪೩॥

ಮಹಾರಥನಾದ ಅರ್ಜುನನು ಸಾಣೆಕಲ್ಲಿಗೆ ತಿಕ್ಕಿ ಹರಿತಗೊಳಿಸಿದ್ದ ಕ್ಷುರಪ್ರದಿಂದ ಹೊಳೆಯುವ ಬಂಗಾರದ ಕರ್ಣಕುಂಡಲದಿಂದ ಶೋಭಿಸುವ ಸತ್ಯಕರ್ಮನ ತಲೆಯನ್ನು ಕೂಡಲೇ ಕಡಿದನು.

ಅನ್ಯೇಷುಮಥ ಚಾದತ್ತ ಯೋಧಾನಾಂ ಮಿಷತಾಂ ತತಃ ।
ಯಥಾ ಸಿಂಹೋ ವನೇ ರಾಜನ್ ಮೃಗಾನ್ ಪ್ರತಿ ಬುಭುಕ್ಷಿತಃ ॥೪೪॥

ರಾಜನೇ! ವನದಲ್ಲಿ ಹಸಿದ ಸಿಂಹವು ಜಿಂಕೆಗಳ ಮೇಲೆ ದಾಳಿಮಾಡುವಂತೆ, ಯೋಧರು ನೋಡುತ್ತಿರುವಾಗಲೇ ಅರ್ಜುನನು ಸತ್ಯೇಷುವಿನ ಪ್ರಾಣವನ್ನು ತೆಗೆದನು.

ತಂ ನಿಹತ್ಯ ತತಃ ಪಾರ್ಥಃ ಸುಶರ್ಮಾಣಂ ತ್ರಿಭಿಃ ಶರೈಃ ।
ವಿದ್ಧ್ವಾ ಚ ನ್ಯಹನತ್ ಸರ್ವಾನ್ ರಥಾನ್ ರುಗ್ಮವಿಭೂಷಿತಾನ್ ॥೪೫॥

ಅವನನ್ನು ಕೊಂದ ನಂತರ ಅರ್ಜುನನು ಸುಶರ್ಮನನ್ನು ಮೂರು ಬಾಣಗಳಿಂದ ಹೊಡೆದು ಸಾಯಿಸಿದನು. ಹಾಗೆಯೇ ಬಂಗಾರದಿಂದ ಅಲಂಕೃತವಾದ ಎಲ್ಲ ರಥಗಳನ್ನು ನಾಶಮಾಡಿದನು.

ತತಸ್ತು ಪ್ರವರಃ ಪಾರ್ಥೋ ದೀರ್ಘಕಾಲಸುಸಂಭೃತಮ್ ।
ಮುಂಚನ್ ಕ್ರೋಧವಿಷಂ ತೀವ್ರಂ ತ್ರಿಗರ್ತಾಧಿಪತಿಂ ಪ್ರತಿ ॥೪೬॥

ಅನಂತರ ಶ್ರೇಷ್ಠನಾದ ಅರ್ಜುನನು ಬಹಳ ಕಾಲದಿಂದ ಧಾರಣೆಮಾಡಿಕೊಂಡಿದ್ದ ಬಹಳ ತೀಕ್ಷ್ಣವಾದ ಕೋಪವೆಂಬ ವಿಷವನ್ನು ತ್ರಿಗರ್ತಾಧಿಪತಿ ಸುಶರ್ಮನ ಮೇಲೆ ಪ್ರಯೋಗಿಸಿದನು.

ತಮರ್ಜುನಃ ಪೃಷತ್ಕಾನಾಂ ಶತೇನ ನತಪರ್ವಣಾಮ್ ।
ಪೂರಯಿತ್ವಾ ತತೋ ವಾಹಾನ್ ನ್ಯಹನತ್ ತತ್ರ ಧನ್ವಿನಃ ॥೪೭॥

ಅರ್ಜುನನು ಬಾಗಿದ ಸಂಧಿಗಳುಳ್ಳ ನೂರು ಬಾಣಗಳಿಂದ ಧನುರ್ಧಾರಿಗಳಾದ ವೀರರ ಅಶ್ವಗಳ ಮೇಲೆ ಪ್ರಯೋಗಿಸಿ ಅವುಗಳನ್ನು ಕೊಂದನು.

ತತಃ ಶರಂ ಸಮಾದಾಯ ಯಮದಂಡೋಪಮಂ ಮಹತ್ ।
ಸುಶರ್ಮಾಣಂ ಸಮುದ್ದಿಶ್ಯ ಚಿಕ್ಷೇಪಾಶು ಹಸನ್ನಿವ ॥೪೮॥

ಅನಂತರ ಅರ್ಜುನನು ಯಮದಂಡಸದೃಶವಾದ ದೊಡ್ಡದಾದ ಬಾಣವನ್ನು ತೆಗೆದುಕೊಂಡು ಸುಶರ್ಮನ ಮೇಲೆ ನಗುತ್ತಾ ಕೂಡಲೇ ಪ್ರಯೋಗಿಸಿದನು.

ಸ ಶರಃ ಪ್ರೇಷಿತಸ್ತೇನ ಕ್ರೋಧದೀಪ್ತೇನ ಧನ್ವಿನಾ ।
ಸುಶರ್ಮಾಣಂ ಸಮಾಸಾದ್ಯ ಬಿಭೇದ ಹೃದಯಂ ರಣೇ ॥೪೯॥

ಕೋಪದಿಂದ ಪ್ರಕಾಶಿಸುತ್ತಿದ್ದ ಅರ್ಜುನನು ಬಿಟ್ಟ ಆ ಬಾಣವು ಸುಶರ್ಮನ ಹೃದಯವನ್ನು ಭೇದಿಸಿತು.

ಸ ಗತಾಸುರ್ಮಹಾರಾಜ ನಿಪಪಾತ ಮಹೀತಳೇ ।
ನಂದಯನ್ ಪಾಂಡವಾನ್ ಸರ್ವಾನ್ ವ್ಯಥಯಂಶ್ಚೈವ ತಾವಕಾನ್ ॥

ಮಹಾರಾಜನೇ! ಸುಶರ್ಮನು ಪ್ರಾಣವನ್ನು ಕಳೆದುಕೊಂಡು ನೆಲಕ್ಕೆ ಬಿದ್ದನು. ಹೀಗೆ ಎಲ್ಲಾ ಪಾಂಡವರಿಗೆ ಸಂತೋಷವನ್ನೂ, ನಿನ್ನ ಕಡೆಯವರಿಗೆ ದುಃಖವನ್ನೂ ಉಂಟುಮಾಡಿದನು.

ಸುಶರ್ಮಾಣಂ ರಣೇ ಹತ್ವಾ ಪುತ್ರಾನಸ್ಯ ಮಹಾರಥಾನ್ ।
ಸಪ್ತ ಚಾಷ್ಟೌ ಚ ದಶ ಚ ಸಾಯಕೈರನಯತ್ ಕ್ಷಯಮ್ ॥೫೧॥

ಯುದ್ಧದಲ್ಲಿ ಸುಶರ್ಮನನ್ನು ಕೊಂದು ಮಹಾರಥರಾದ ಅವನ ಮಕ್ಕಳನ್ನು ಕ್ರಮವಾಗಿ ಏಳು, ಎಂಟು ಮತ್ತು ಹತ್ತು ಬಾಣಗಳಿಂದ ಕೊಂದು ಹಾಕಿದನು.

ತತೋಽಸ್ಯ ನಿಶಿತೈರ್ಬಾಣೈಃ ಸರ್ವಾನ್ ಹತ್ವಾ ಪದಾನುಗಾನ್ ।
ಅಗಚ್ಛತ್ ಭಾರತೀಂ ಸೇನಾಂ ಹತಶೇಷಾನ್ ಮಹಾರಥಾನ್ ॥೫೨॥

ಅನಂತರ ಹರಿತವಾದ ಬಾಣಗಳಿಂದ ಎಲ್ಲಾ ಪದಾತಿಗಳನ್ನು ಕೊಂದುಹಾಕಿ, ಸ್ವಲ್ಪವೇ ಮಹಾರಥ ಯೋಧರನ್ನು ಹೊಂದಿರುವ ಕೌರವರ ಸೈನ್ಯದ ಮೇಲೆ ಆಕ್ರಮಣವನ್ನು ಮಾಡಿದನು.

ಭೀಮಸ್ತು ಸಮರೇ ಕ್ರುದ್ಧಃ ಪುತ್ರಂ ತವ ಜನಾಧಿಪ ।
ಸುದರ್ಶನಮದೃಶ್ಯಂ ತು ಶರೈಶ್ಚಕ್ರೇ ಹಸನ್ನಿವ ॥೫೩॥

ಜನಾಧಿಪತಿಯೇ! ಭೀಮನು ಯುದ್ಧದಲ್ಲಿ ಬಹಳ ಕೋಪದಿಂದ ಯುಕ್ತನಾಗಿ ನಗುತ್ತಾ ಬಾಣಗಳಿಂದ ನಿನ್ನ ಮಗ ಸುದರ್ಶನನನ್ನು ಮುಚ್ಚಿ ಅವನು ಕಾಣದ ರೀತಿಯಲ್ಲಿ ಮಾಡಿದನು.

ತತೋಽಸ್ಯ ಪ್ರಹಸನ್ ಕ್ರುದ್ಧಃ ಶಿರಃ ಕಾಯಾದಪಾಹರತ್ ।
ಕ್ಷುರಪ್ರೇಣ ಸುತೀಕ್ಷ್ಣೇನ ಸ ಹತಃ ಪ್ರಾಪತದ್ ಭುವಿ ॥೫೪॥

ಕ್ರುದ್ಧನಾದ ಭೀಮನು ನಗುತ್ತಾ ಬಹಳ ತೀಕ್ಷ್ಣವಾದ ಕ್ಷುರಪ್ರದಿಂದ ಸುದರ್ಶನನ ತಲೆಯನ್ನು ಕಡಿದನು. ತಲೆ ಕಡಿಸಿಕೊಂಡ ಸುದರ್ಶನನು ಸತ್ತು ನೆಲಕ್ಕೆ ಬಿದ್ದನು.

ತಸ್ಮಿಂಸ್ತು ನಿಹತೇ ವೀರೇ ತತಸ್ತಸ್ಯ ಪದಾನುಗಾಃ ।
ಪರಿವವ್ರು ರಣೇ ಭೀಮಂ ಕಿರಂತೋ ವಿಶಿಖಾನ್ ಶಿತಾನ್ ॥೫೫॥

ವೀರನಾದ ಸುದರ್ಶನನು ಸತ್ತಾಗ ಅವನ ಬೆಂಬಲಕ್ಕೆ ಇದ್ದ ಪದಾತಿಗಳು ಹರಿತವಾದ ಬಾಣಗಳನ್ನು ಭೀಮನ ಮೇಲೆ ಪ್ರಯೋಗಿಸುತ್ತಾ, ರಣರಂಗದಲ್ಲಿ ಭೀಮನನ್ನು ಸುತ್ತುವರಿದರು.

ತತಸ್ತು ನಿಶಿತೈರ್ಬಾಣೈಃ ತದನೀಕಂ ವೃಕೋದರಃ ।
ಇಂದ್ರಾಶನಿಸಮಸ್ಪರ್ಶೈಃ ಸಮಂತಾತ್ ಪರ್ಯವಾಕಿರತ್ ॥೫೬॥

ಆಗ ಭೀಮಸೇನನು ಆ ಸೈನ್ಯದ ಮೇಲೆ ಇಂದ್ರನ ವಜ್ರಾಯುಧಕ್ಕೆ ಸದೃಶವಾದ ಪೆಟ್ಟು ಕೊಡುವ ಹರಿತವಾದ ಬಾಣಗಳ ಮಳೆಯನ್ನು ಸುರಿಸಿದನು.

ತತಃ ಕ್ಷಣೇನ ತಾನ್ ಭೀಮೋ ನ್ಯಹನದ್ ಭರತರ್ಷಭ ॥೫೭॥

ಭರತೋತ್ತಮನೇ! ಭೀಮನು ಕ್ಷಣಮಾತ್ರದಲ್ಲಿ ಅವರನ್ನೆಲ್ಲರನ್ನೂ ಕೊಂದನು.

ತೇಷು ತೂತ್ಸಾದ್ಯಮಾನೇಷು ಸೇನಾಧ್ಯಕ್ಷಾ ಮಹಾಬಲಾಃ ।
ಭೀಮಸೇನಂ ಸಮಾಸಾದ್ಯ ತತೋಽಯುಧ್ಯಂತ ಭಾರತ ॥೫೮॥

ಭಾರತನೇ! ಸೈನಿಕರು ಸತ್ತಾಗ ಮಹಾಬಲರಾದ ಸೇನಾಧ್ಯಕ್ಷರು ಭೀಮನನ್ನು ಎದುರಿಸಿ ಯುದ್ಧಮಾಡಿದರು.

ತಾಂಸ್ತು ಸರ್ವಾನ್ ಶರೈಘೋರೈರವಾಕಿರತ ಪಾಂಡವಃ ॥೫೯॥

ಭೀಮನು ಅವರೆಲ್ಲರ ಮೇಲೆ ಘೋರವಾದ ಬಾಣಗಳನ್ನು ಪ್ರಯೋಗಿಸಿದನು.

ತಥೈವ ತಾವಕಾ ರಾಜನ್ ಪಾಂಡವೇಯಾನ್ ಮಹಾರಥಾನ್ ।
ಶರವರ್ಷೇಣ ಮಹತಾ ಸಮಂತಾತ್ ಪರ್ಯವಾರಯನ್ ॥೬೦॥

ರಾಜನೇ! ಅದೇರೀತಿಯಲ್ಲಿ ನಿನ್ನ ಕಡೆಯವರೂ ಪಾಂಡವರ ಮಹಾರಥಯೋಧರ ಮೇಲೆ ಬಹಳವಾದ ಬಾಣಗಳ ಮಳೆಯನ್ನು ಸುರಿಸುತ್ತಾ ಸುತ್ತುವರಿದರು.

ವ್ಯಾಕುಲಂ ತದಭೂತ್ ಸರ್ವಂ ಪಾಂಡವಾನಾಂ ಪರೈಃ ಸಹ ।
ತಾವಕಾನಾಂ ಚ ಸಮರೇ ಪಾಂಡವೇಯೈರ್ಯುಯುತ್ಸತಾಮ್ ॥೬೧॥

ಪಾಂಡವರು ಶತ್ರುಗಳೊಡನೆ ಮತ್ತು ನಿನ್ನವರು ಪಾಂಡವರ ಜೊತೆ ಕಾದಾಡುವ ಇಚ್ಛೆಯುಳ್ಳವರಾದ್ದರಿಂದ ಪರಸ್ಪರವಾಗಿ ಎಲ್ಲವೂ ವ್ಯಾಕುಲಗೊಂಡಿತು. (ಕಲಸುಮೇಲೋಗರವಾಯಿತು.)

ತತ್ರ ಯೋಧಾಸ್ತದಾ ಪೇತುಃ ಪರಸ್ಪರಸಮಾಹತಾಃ ।.
ಉಭಯೋಃ ಸೇನಯೋ ರಾಜನ್ ಸಂಶೋಚಂತಿ ಸ್ಮ ಬಾಂಧವಾನ್ ॥

ರಾಜನೇ! ರಣರಂಗದಲ್ಲಿ ಆಗ ಪರಸ್ಪರವಾಗಿ ಹೊಡೆದಾಡುತ್ತಾ ಎರಡೂ ಸೈನ್ಯದ ಯೋಧರು ಸತ್ತು ಬಿದ್ದರು. ತನ್ಮೂಲಕ ಬಾಂಧವರು ದುಃಖಪಡುವಂತೆ ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಲ್ಯಪರ್ವಣಿ ಸುಶರ್ಮವಧೋ ನಾಮ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆಂಟನೆಯ ಅಧ್ಯಾಯ

ಸಹದೇವನು ಶಕುನಿ ಮತ್ತು ಉಲೂಕನನ್ನು ವಧಿಸುವುದು.

ಸಂಜಯಃ

ತಸ್ಮಿನ್ ಪ್ರವೃತ್ತೇ ಸಂಗ್ರಾಮೇ ಗಜವಾಜಿನರಕ್ಷಯೇ ।
ಶಕುನಿಃ ಸೌಬಲೋ ರಾಜನ್ ಸಹದೇವಂ ಸಮಭ್ಯಯಾತ್ ॥೧॥

ಸಂಜಯ– ರಾಜನೇ! ಆನೆ ಕುದುರೆ ಮನುಷ್ಯರು ನಾಶವಾಗುತ್ತಿರುವ ಆ ಸಂಗ್ರಾಮದಲ್ಲಿ ಸೌಬಲದೇಶದ ರಾಜ ಶಕುನಿಯು ಸಹದೇವನನ್ನು ಚೆನ್ನಾಗಿ ಎದುರಿಸಿದನು.

ತತೋಽಸ್ಯಾಪತತಸ್ತೂರ್ಣಂ ಸಹದೇವಃ ಪ್ರತಾಪವಾನ್ ।
ಶರೌಘಾನ್ ಪ್ರೇಷಯಾಮಾಸ ಪತಂಗಾನಿವ ಶೀಘ್ರಗಾನ್ ॥೨॥

ಅನಂತರ ಶಕುನಿಯು ವೇಗವಾಗಿ ಮೇಲೇರಿ ಬರುತ್ತಿರುವಾಗ ಪ್ರತಾಪಿಯಾದ ಸಹದೇವನು ಪತಂಗಗಳ ಹಾಗೆ ಬೇಗನೆ ಹಾರುವ ಬಾಣಗಳನ್ನು ಗುಂಪು ಗುಂಪಾಗಿ ಶಕುನಿಯ ಮೇಲೆ ಬೀಳಿಸುತ್ತಾನೆ.

ಉಲೂಕಃ ಸಮರೇ ಭೀಮಂ ವಿವ್ಯಾಧ ದಶಭಿಃ ಶರೈಃ ।
ಶಕುನಿಸ್ತು ಮಹಾರಾಜ ಭೀಮಂ ವಿದ್ಧ್ವಾ ತ್ರಿಭಿಃ ಶರೈಃ ॥೩॥

ಯುದ್ಧದಲ್ಲಿ ಉಲೂಕನು ಭೀಮನ ಮೇಲೆ ಹತ್ತು ಬಾಣಗಳನ್ನು ಪ್ರಯೋಗಿಸುತ್ತಾನೆ. ಮಹಾರಾಜನೇ! ಶಕುನಿಯು ಭೀಮನನ್ನು ಮೂರು ಬಾಣಗಳಿಂದ ಹೊಡೆಯುತ್ತಾನೆ.

ಸಾಯಕಾನಾಂ ನವತ್ಯಾ ವೈ ಸಹದೇವಂ ಸಮಾಕಿರತ್ ॥೪॥

ಸಹದೇವನ ಮೇಲೆ ತೊಂಬತ್ತುಬಾಣಗಳ ಮಳೆಯನ್ನು ಸುರಿಸುತ್ತಾನೆ.

ತೇ ಶೂರಾಃ ಸಮರೇ ರಾಜನ್ ಸಮಾಸಾದ್ಯ ಪರಸ್ಪರಮ್ ।
ವಿವ್ಯಧುರ್ನಿಶಿತೈರ್ಬಾಣೈಃ ಕಂಕಬರ್ಹಿಣವಾಜಿತೈಃ ॥೫॥

ರಾಜನೇ! ಯುದ್ಧದಲ್ಲಿ ಆ ಶೂರರು ಪರಸ್ಪರ ಎದುರುಗೊಂಡು ಕಂಕ ಮತ್ತು ನವಿಲುಗಳ ಗರಿಯಂತೆ ರೆಕ್ಕೆಯುಳ್ಳ ಹರಿತವಾದ ಬಾಣಗಳಿಂದ ಒಬ್ಬರನ್ನೊಬ್ಬರು ಹೊಡೆದುಕೊಂಡರು.

ಸ್ವರ್ಣಪುಂಖೈಃ ಶಿಲಾಧೌತೈರಾಕರ್ಣಾತ್ ಪ್ರಹಿತೈಃ ಶರೈಃ ॥೬॥

ಆ ಬಾಣಗಳನ್ನು ಎಣ್ಣೆಯಲ್ಲಿ ಅದ್ದಲಾಗಿತ್ತು. ಸಾಣೆಕಲ್ಲುಗಳಲ್ಲಿ ತೇದು ಹರಿತಗೊಳಿಸಲಾಗಿತ್ತು ಮತ್ತು ಅವುಗಳನ್ನು ಪ್ರಯೋಗಿಸುವಾಗ ಬಿಲ್ಲಿನ ಹಗ್ಗವನ್ನು ಕಿವಿಯವರೆಗೆ ಎಳೆದು ಬಿಡಲಾಗುತ್ತಿತ್ತು.

ತೇಷಾಂ ಚಾಪಭುಜೋತ್ಸೃಷ್ಟಾ ಶರವೃಷ್ಟಿರ್ವಿಶಾಂಪತೇ ।
ಪ್ರಾಚ್ಛಾದಯದ್ ದಿಶಃ ಸರ್ವಾ ಧಾರಾಭಿರಿವ ತೋಯದಃ ॥೭॥

ರಾಜನೇ! ಆ ಯೋಧರು ತಮ್ಮ ಬಿಲ್ಲಿನಿಂದ ಸುರಿಸಿದ ಬಾಣಗಳ ಮಳೆಯಿಂದಾಗಿ ಎಲ್ಲಾ ದಿಕ್ಕುಗಳು ಮೋಡಗಳಿಂದ ಸುರಿಸಲ್ಪಟ್ಟ ಜಲಧಾರೆಯಿಂದ ಮುಚ್ಚಿಹೋದಂತೆ ಮುಚ್ಚಲ್ಪಟ್ಟಿದ್ದವು.

ತತಃ ಕ್ರುದ್ಧೋ ರಣೇ ಭೀಮಃ ಸಹದೇವಶ್ಚ ಭಾರತ ।
ಚೇರತುಃ ಕದನಂ ಸಂಖೇ ಪ್ರಕುರ್ವಂತೌ ಮಹಾಬಲೌ ॥೮॥

ಭರತಕುಲಜಾತನೇ! ಅನಂತರ ಮಹಾಬಲಶಾಲಿಗಳಾದ ಭೀಮ ಮತ್ತು ಸಹದೇವರು ಕೋಪಗೊಂಡು ಯುದ್ಧದಲ್ಲಿ ಕಾದಾಟವನ್ನು ಮಾಡುತ್ತಾ ಸಂಚರಿಸಿದರು.

ತಾಭ್ಯಾಂ ಶರಶತೈಶ್ಚಿನ್ನಂ ತದ್ಬಲಂ ಭರತರ್ಷಭ ।
ಅಂಧಕಾರಮಿವಾಕಾಶಮಭವತ್ ತತ್ರ ತತ್ರ ಹ ॥೯॥

ಭರತೋತ್ತಮನೇ! ಅವರು ಪ್ರಯೋಗಿಸಿದ ಹರಿತವಾದ ಬಾಣಗಳು ಕೌರವಸೈನ್ಯವನ್ನು ಪುಡಿ ಮಾಡಿದವು. ಬಾಣಗಳಿಂದಾಗಿ ಅಲ್ಲಿ ಕತ್ತಲೆಯು ಆವರಿಸಿದಂತಾಯಿತು.

ಅಶ್ವೈರ್ವಿಪರಿಧಾವದ್ಭಿಃ ಶರೈಶ್ಚಿನ್ನೈರ್ವಿಶಾಂಪತೇ ।
ತತ್ರ ತತ್ರ ಕೃತೋ ಮಾರ್ಗೋ ವಿಕರ್ಷದ್ಭಿರ್ಹತಾನ್ ಬಹೂನ್ ॥೧೦॥

ರಾಜನೇ! ಬಾಣಗಳಿಂದ ಪೆಟ್ಟು ತಿಂದ ಕುದುರೆಗಳು ವಿಪರೀತವಾಗಿ ಓಡಲಾರಂಭಿಸಿದವು. ಆಗ ಸತ್ತು ಬಿದ್ದವರನ್ನು ಎಳೆದೊಯ್ದದ್ದರಿಂದ ಅಲ್ಲಲ್ಲಿ ಮಾರ್ಗಗಳು ತಯಾರಾದವು.

ನಿಹತಾನಾಂ ಹಯಾನಾಂ ಚ ಸಹೈವ ಹಯಯೋಧಿಭಿಃ ।
ವರ್ಮಭಿರ್ವಿನಿಕೃತ್ತೈಶ್ಚ ಪ್ರಾಸೈಶ್ಚಿನ್ನೈಶ್ಚ ಮಾರಿಷ ॥೧೧॥

ಅಸಿಭಿಃ ಶಕ್ತಿಭಿಶ್ಚೈವ ತೋಮರೈಶ್ಚ ಪರಂತಪ ।
ಸಂಛನ್ನಾ ವಸುಧಾ ತೈಸ್ತು ಕುಸುಮೈಃ ಶಬಲಾ ಇವ ॥೧೨॥

ರಾಜನೇ! ಅಶ್ವಗಳು ಸತ್ತುಬಿದ್ದಿದ್ದವು. ಅಶ್ವಾರೋಹಿಗಳೂ ಸತ್ತುಬಿದ್ದಿದ್ದರು. ಹರಿದ ಕವಚಗಳು ನೆಲಕ್ಕೆ ಬಿದ್ದಿದ್ದವು. ತುಂಡಾದ ಪ್ರಾಸಾಯುಧಗಳು, ಕತ್ತಿಗಳು, ಶಕ್ತ್ಯಾಯುಧಗಳು, ತೋಮರಗಳು ಇವೆಲ್ಲಾ ನೆಲದ ಮೇಲೆ ಬಿದ್ದಿದ್ದವು. ಭೂಮಿಯು ಬಣ್ಣಬಣ್ಣದ ಹೂವುಗಳಿಂದ ಆವೃತವಾದಂತೆ ಕಾಣಿಸುತ್ತಿತ್ತು.

ಅನಂತರ ಶಕುನಿಯು ವೇಗವಾಗಿ ಮೇಲೇರಿ ಬರುತ್ತಿರುವಾಗ ಪ್ರತಾಪಿಯಾದ ಸಹದೇವನು ಪತಂಗಗಳ ಹಾಗೆ ಬೇಗನೆ ಹಾರುವ ಬಾಣಗಳನ್ನು ಗುಂಪು ಗುಂಪಾಗಿ ಶಕುನಿಯ ಮೇಲೆ ಬೀಳಿಸುತ್ತಾನೆ.

ಉಲೂಕಃ ಸಮರೇ ಭೀಮಂ ವಿವ್ಯಾಧ ದಶಭಿಃ ಶರೈಃ ।
ಶಕುನಿಸ್ತು ಮಹಾರಾಜ ಭೀಮಂ ವಿದ್ಧ್ವಾ ತ್ರಿಭಿಃ ಶರೈಃ ॥೩॥

ಯುದ್ಧದಲ್ಲಿ ಉಲೂಕನು ಭೀಮನ ಮೇಲೆ ಹತ್ತು ಬಾಣಗಳನ್ನು ಪ್ರಯೋಗಿಸುತ್ತಾನೆ. ಮಹಾರಾಜನೇ! ಶಕುನಿಯು ಭೀಮನನ್ನು ಮೂರು ಬಾಣಗಳಿಂದ ಹೊಡೆಯುತ್ತಾನೆ.

ಸಾಯಕಾನಾಂ ನವತ್ಯಾ ವೈ ಸಹದೇವಂ ಸಮಾಕಿರತ್ ॥೪॥

ಸಹದೇವನ ಮೇಲೆ ತೊಂಬತ್ತುಬಾಣಗಳ ಮಳೆಯನ್ನು ಸುರಿಸುತ್ತಾನೆ.

ತೇ ಶೂರಾಃ ಸಮರೇ ರಾಜನ್ ಸಮಾಸಾದ್ಯ ಪರಸ್ಪರಮ್ ।
ವಿವ್ಯಧುರ್ನಿಶಿತೈರ್ಬಾಣೈಃ ಕಂಕಬರ್ಹಿಣವಾಜಿತೈಃ ॥೫॥

ರಾಜನೇ! ಯುದ್ಧದಲ್ಲಿ ಆ ಶೂರರು ಪರಸ್ಪರ ಎದುರುಗೊಂಡು ಕಂಕ ಮತ್ತು ನವಿಲುಗಳ ಗರಿಯಂತೆ ರೆಕ್ಕೆಯುಳ್ಳ ಹರಿತವಾದ ಬಾಣಗಳಿಂದ ಒಬ್ಬರನ್ನೊಬ್ಬರು ಹೊಡೆದುಕೊಂಡರು.

ಸ್ವರ್ಣಪುಂಖೈಃ ಶಿಲಾಧೌತೈರಾಕರ್ಣಾತ್ ಪ್ರಹಿತೈಃ ಶರೈಃ ॥೬॥

ಆ ಬಾಣಗಳನ್ನು ಎಣ್ಣೆಯಲ್ಲಿ ಅದ್ದಲಾಗಿತ್ತು. ಸಾಣೆಕಲ್ಲುಗಳಲ್ಲಿ ತೇದು ಹರಿತಗೊಳಿಸಲಾಗಿತ್ತು ಮತ್ತು ಅವುಗಳನ್ನು ಪ್ರಯೋಗಿಸುವಾಗ ಬಿಲ್ಲಿನ ಹಗ್ಗವನ್ನು ಕಿವಿಯವರೆಗೆ ಎಳೆದು ಬಿಡಲಾಗುತ್ತಿತ್ತು.

ತೇಷಾಂ ಚಾಪಭುಜೋತ್ಸೃಷ್ಟಾ ಶರವೃಷ್ಟಿರ್ವಿಶಾಂಪತೇ ।
ಪ್ರಾಚ್ಛಾದಯದ್ ದಿಶಃ ಸರ್ವಾ ಧಾರಾಭಿರಿವ ತೋಯದಃ ॥೭॥

ರಾಜನೇ! ಆ ಯೋಧರು ತಮ್ಮ ಬಿಲ್ಲಿನಿಂದ ಸುರಿಸಿದ ಬಾಣಗಳ ಮಳೆಯಿಂದಾಗಿ ಎಲ್ಲಾ ದಿಕ್ಕುಗಳು ಮೋಡಗಳಿಂದ ಸುರಿಸಲ್ಪಟ್ಟ ಜಲಧಾರೆಯಿಂದ ಮುಚ್ಚಿಹೋದಂತೆ ಮುಚ್ಚಲ್ಪಟ್ಟಿದ್ದವು.

ತತಃ ಕ್ರುದ್ಧೋ ರಣೇ ಭೀಮಃ ಸಹದೇವಶ್ಚ ಭಾರತ ।
ಚೇರತುಃ ಕದನಂ ಸಂಖೇ ಪ್ರಕುರ್ವಂತೌ ಮಹಾಬಲೌ ॥೮॥

ಭರತಕುಲಜಾತನೇ! ಅನಂತರ ಮಹಾಬಲಶಾಲಿಗಳಾದ ಭೀಮ ಮತ್ತು ಸಹದೇವರು ಕೋಪಗೊಂಡು ಯುದ್ಧದಲ್ಲಿ ಕಾದಾಟವನ್ನು ಮಾಡುತ್ತಾ ಸಂಚರಿಸಿದರು.

ತಾಭ್ಯಾಂ ಶರಶತೈಶ್ಚಿನ್ನಂ ತದ್ಬಲಂ ಭರತರ್ಷಭ ।
ಅಂಧಕಾರಮಿವಾಕಾಶಮಭವತ್ ತತ್ರ ತತ್ರ ಹ ॥೯॥

ಭರತೋತ್ತಮನೇ! ಅವರು ಪ್ರಯೋಗಿಸಿದ ಹರಿತವಾದ ಬಾಣಗಳು ಕೌರವಸೈನ್ಯವನ್ನು ಪುಡಿ ಮಾಡಿದವು. ಬಾಣಗಳಿಂದಾಗಿ ಅಲ್ಲಿ ಕತ್ತಲೆಯು ಆವರಿಸಿದಂತಾಯಿತು.

ಅಶ್ವೈರ್ವಿಪರಿಧಾವದ್ಭಿಃ ಶರೈಶ್ಚಿನ್ನೈರ್ವಿಶಾಂಪತೇ ।
ತತ್ರ ತತ್ರ ಕೃತೋ ಮಾರ್ಗೋ ವಿಕರ್ಷದ್ಭಿರ್ಹತಾನ್ ಬಹೂನ್ ॥೧೦॥

ರಾಜನೇ! ಬಾಣಗಳಿಂದ ಪೆಟ್ಟು ತಿಂದ ಕುದುರೆಗಳು ವಿಪರೀತವಾಗಿ ಓಡಲಾರಂಭಿಸಿದವು. ಆಗ ಸತ್ತು ಬಿದ್ದವರನ್ನು ಎಳೆದೊಯ್ದದ್ದರಿಂದ ಅಲ್ಲಲ್ಲಿ ಮಾರ್ಗಗಳು ತಯಾರಾದವು.

ನಿಹತಾನಾಂ ಹಯಾನಾಂ ಚ ಸಹೈವ ಹಯಯೋಧಿಭಿಃ ।
ವರ್ಮಭಿರ್ವಿನಿಕೃತ್ತೈಶ್ಚ ಪ್ರಾಸೈಶ್ಚಿನ್ನೈಶ್ಚ ಮಾರಿಷ ॥೧೧॥

ಅಸಿಭಿಃ ಶಕ್ತಿಭಿಶ್ಚೈವ ತೋಮರೈಶ್ಚ ಪರಂತಪ ।
ಸಂಛನ್ನಾ ವಸುಧಾ ತೈಸ್ತು ಕುಸುಮೈಃ ಶಬಲಾ ಇವ ॥೧೨॥

ರಾಜನೇ! ಅಶ್ವಗಳು ಸತ್ತುಬಿದ್ದಿದ್ದವು. ಅಶ್ವಾರೋಹಿಗಳೂ ಸತ್ತುಬಿದ್ದಿದ್ದರು. ಹರಿದ ಕವಚಗಳು ನೆಲಕ್ಕೆ ಬಿದ್ದಿದ್ದವು. ತುಂಡಾದ ಪ್ರಾಸಾಯುಧಗಳು, ಕತ್ತಿಗಳು, ಶಕ್ತ್ಯಾಯುಧಗಳು, ತೋಮರಗಳು ಇವೆಲ್ಲಾ ನೆಲದ ಮೇಲೆ ಬಿದ್ದಿದ್ದವು. ಭೂಮಿಯು ಬಣ್ಣಬಣ್ಣದ ಹೂವುಗಳಿಂದ ಆವೃತವಾದಂತೆ ಕಾಣಿಸುತ್ತಿತ್ತು.

ಯೋಧಾಸ್ತತ್ರ ಮಹಾರಾಜ ಸಮಾಸಾದ್ಯ ಪರಸ್ಪರಮ್ ।
ವ್ಯಚರಂತ ರಣೇ ಕ್ರುದ್ಧಾ ನಿನಿಘ್ನತುಃ ಪರಸ್ಪರಮ್ ॥೧೩॥

ಮಹಾರಾಜನೇ! ರಣರಂಗದಲ್ಲಿ ಯೋಧರು ಪರಸ್ಪರವಾಗಿ ಎದುರುಗೊಂಡು, ಕೋಪಗೊಂಡವರಾಗಿ ಸಂಚರಿಸುತ್ತಿದ್ದರು ಮತ್ತು ಪರಸ್ಪರ ಹೊಡೆದುಕೊಂಡರು.

ಉದ್ವೃತ್ತನಯನೈ ರೋಷಾತ್ ಸಂದಷ್ಟೋಷ್ಠಪುಟೈರ್ಮುಖೈಃ ।
ಸಕುಂಡಲೈರ್ಮಹೀ ಚ್ಛನ್ನಾ ಪದ್ಮಕಿಂಜಲ್ಕಸನ್ನಿಭೈಃ ॥೧೪॥

ಕೆಳಗೆಬಿದ್ದ ತಲೆಗಳಲ್ಲಿ ಕಣ್ಣುಗಳು ಕೋಪದಿಂದಾಗಿ ಮೇಲೆ ಬಂದಿದ್ದವು. ಹಲ್ಲುಗಳು ಕಚ್ಚಿಕೊಂಡಿದ್ದವು. ಕಿವಿಯಲ್ಲಿ ಕುಂಡಲಗಳು ಶೋಭಿಸುತ್ತಿದ್ದವು. ಇಂತಹ ತಲೆಗಳಿಂದಾಗಿ ಭೂಮಿಯು ಪದ್ಮದ ಕೇಸರದಿಂದ ಆವೃತವಾದಂತೆ ಇತ್ತು.

ಭುಜೈಶ್ಛಿನ್ನೈರ್ಮಹಾರಾಜ ನಾಗರಾಜಕರೋಪಮೈಃ ।
ಸಗದೈಃ ಸತಲತ್ರೈಶ್ಚ ಸಾಸಿಪ್ರಾಸಪರಶ್ವಧೈಃ ॥೧೫॥

ಕಬಂಧೈರುತ್ಥಿತೈಶ್ಚೈವ ನೃತ್ಯದ್ಭಿಶ್ಚಾಪರೈರ್ಯುಧಿ ।
ಕ್ರವ್ಯಾದಗಣಸಂಪೂರ್ಣಾ ಘೋರಾऽಭೂತ್ ಪೃಥಿವೀ ವಿಭೋ ॥೧೬॥

ಮಹಾರಾಜನೇ! ತುಂಡರಿಸಿದ ಭುಜಗಳು ಆನೆಯ ಸೊಂಡಿಲಿನಂತಿದ್ದವು. ಆ ಭುಜಗಳು ಗದೆ, ಗುರಾಣಿ, ಕತ್ತಿ, ಕೊಡಲಿಗಳನ್ನು ಹಿಡಿದುಕೊಂಡಿದ್ದವು. ದೇಹಗಳು ಸುತ್ತ ಇವೆಯೇನೋ ಎಂಬಂತೆ ಕಂಡವು. ಮಾಂಸವನ್ನು ತಿನ್ನುವ ಭೂತಗಳಿಂದ ತುಂಬಿದ ಯುದ್ಧಭೂಮಿಯು ತುಂಬ ಘೋರವಾಗಿತ್ತು.

ಅಲ್ಪಾವಶಿಷ್ಟೇ ಸೈನ್ಯೇ ತು ಕೌರವೇಯಾನ್ ಮಹಾಹವೇ ।
ಪ್ರಹೃಷ್ಟಾಃ ಪಾಂಡವಾ ಭೂತ್ವಾ ನಿನ್ಯಿರೇ ಯಮಸಾದನಮ್ ॥೧೭॥

ಮಹಾಯುದ್ಧದಲ್ಲಿ ಸಂತುಷ್ಟರಾದ ಪಾಂಡವರು ಸ್ವಲ್ಪವೇ ಉಳಿದ ಕೌರವಸೈನ್ಯವನ್ನು ಕೊಂದು ಯಮಪುರಿಗೆ ಕಳುಹಿಸಿದರು.

ಏತಸ್ಮಿನ್ನಂತರೇ ಶೂರಃ ಸೌಬಲೇಯಃ ಪ್ರತಾಪವಾನ್ ।
ಪ್ರಾಸೇನ ಸಹದೇವಸ್ಯ ಶಿರಸಿ ಪ್ರಾಹರದ್ ಭೃಶಮ್ ॥೧೮॥

ಈ ಮಧ್ಯದಲ್ಲಿ ಶೂರನಾದ ಪ್ರತಾಪಿ ಶಕುನಿಯು ಪ್ರಾಸಾಯುಧದಿಂದ ಸಹದೇವನ ತಲೆಗೆ ಬಲವಾಗಿ ಹೊಡೆದನು.

ಸ ವಿಹ್ವಲೋ ಮಹಾರಾಜ ರಥೋಪಸ್ಥ ಉಪಾವಿಶತ್ ॥೧೯॥

ಮಹಾರಾಜನೇ! ಇದರಿಂದ ಬಹಳ ವ್ಯಥೆಗೊಳಗಾದ ಸಹದೇವನು ರಥದಲ್ಲಿಯೇ ಕುಸಿದು ಕುಳಿತನು.

ಸಹದೇವಂ ತಥಾ ದೃಷ್ಟ್ವಾ ಭೀಮಸೇನಃ ಪ್ರತಾಪವಾನ್ ।
ಸರ್ವಸೈನ್ಯಾನಿ ಸಂಕ್ರುದ್ಧೋ ವಾರಯಾಮಾಸ ಭಾರತ ॥೨೦॥

ಭರತಕುಲೋದ್ಭವನೇ! ಸಹದೇವನು ವ್ಯಥೆಗೊಳಗಾದದ್ದನ್ನು ನೋಡಿದ ಪ್ರತಾಪಿ ಭೀಮನು ಕೋಪಗೊಂಡು ಎಲ್ಲಾ ಸೈನ್ಯವನ್ನೂ ತಡೆದು ನಿಲ್ಲಿಸಿದನು.

ನಿರ್ಭಿಭೇದ ಚ ನಾರಾಚೈಃ ಶತಶೋಽಥ ಸಹಸ್ರಶಃ ।
ಸ ನಿರ್ಭಿದ್ಯ ರಣೇ ಚಕ್ರೇ ಸಿಂಹನಾದಮಥಾನದತ್ ॥೨೧॥

ಭೀಮನು ಬಾಣಗಳನ್ನು ಪ್ರಯೋಗಿಸಿ ನೂರಾರು, ಸಾವಿರಾರು ಯೋಧರನ್ನು ಕೊಂದನು. ರಣರಂಗದಲ್ಲಿ ಹೀಗೆ ಎಲ್ಲರನ್ನೂ ಸಾಯಿಸಿ ಸಿಂಹನಾದವನ್ನು ಮಾಡಿದನು.

ತೇನ ಶಬ್ದೇನ ವಿತ್ರಸ್ತಾಃ ಸರ್ವೇ ಸಹಯವಾರಣಾಃ ।
ಪ್ರಾದ್ರವನ್ ಸಹಸಾ ಭೀತಾಃ ಶಕುನೇಶ್ಚ ಪದಾನುಗಾಃ ॥೨೨॥

ಆ ಶಬ್ದವನ್ನು ಕೇಳಿದ ಎಲ್ಲಾ ಕುದುರೆಗಳು, ಆನೆಗಳು, ಶಕುನಿಯ ಸಹಾಯಕ ಸೈನಿಕರೂ ಕೂಡ ಭಯದಿಂದಾಗಿ ಬೇಗನೇ ಪಲಾಯನಗೈದರು.

ಪ್ರಭಗ್ನಾನಥ ತಾನ್ ದೃಷ್ಟ್ವಾ ರಾಜಾ ದುರ್ಯೋಧನೋಽಬ್ರವೀತ್ ॥

ಕೈ-ಕಾಲು ಮುರಿದುಕೊಂಡ ಆ ಸೈನಿಕರನ್ನು ನೋಡಿದ ದುರ್ಯೋಧನನು ಹೀಗೆ ಹೇಳಿದನು

ದುರ್ಯೋಧನಃ

ನಿವರ್ತಧ್ವಮಧರ್ಮಜ್ಞಾ ಯುಧ್ಯಧ್ವಂ ಕಿಂ ದ್ರುತೇನ ವಃ ।
ಇಹ ಕೀರ್ತಿಂ ಸಮಾಧಾಯ ಪ್ರೇತ್ಯ ಲೋಕಾನ್ ಸಮಶ್ನುತೇ ॥೨೪॥

ಯೋಧಾಸ್ತತ್ರ ಮಹಾರಾಜ ಸಮಾಸಾದ್ಯ ಪರಸ್ಪರಮ್ ।
ವ್ಯಚರಂತ ರಣೇ ಕ್ರುದ್ಧಾ ನಿನಿಘ್ನತುಃ ಪರಸ್ಪರಮ್ ॥೧೩॥

ಮಹಾರಾಜನೇ! ರಣರಂಗದಲ್ಲಿ ಯೋಧರು ಪರಸ್ಪರವಾಗಿ ಎದುರುಗೊಂಡು, ಕೋಪಗೊಂಡವರಾಗಿ ಸಂಚರಿಸುತ್ತಿದ್ದರು ಮತ್ತು ಪರಸ್ಪರ ಹೊಡೆದುಕೊಂಡರು.

ಉದ್ವೃತ್ತನಯನೈ ರೋಷಾತ್ ಸಂದಷ್ಟೌಷ್ಠಪುಟೈರ್ಮುಖೈಃ ।
ಸಕುಂಡಲೈರ್ಮಹೀ ಚ್ಛನ್ನಾ ಪದ್ಮಕಿಂಜಲ್ಕಸನ್ನಿಭೈಃ ॥೧೪॥

ಕೆಳಗೆಬಿದ್ದ ತಲೆಗಳಲ್ಲಿ ಕಣ್ಣುಗಳು ಕೋಪದಿಂದಾಗಿ ಮೇಲೆ ಬಂದಿದ್ದವು. ಹಲ್ಲುಗಳು ಕಚ್ಚಿಕೊಂಡಿದ್ದವು. ಕಿವಿಯಲ್ಲಿ ಕುಂಡಲಗಳು ಶೋಭಿಸುತ್ತಿದ್ದವು. ಇಂತಹ ತಲೆಗಳಿಂದಾಗಿ ಭೂಮಿಯು ಪದ್ಮದ ಕೇಸರದಿಂದ ಆವೃತವಾದಂತೆ ಇತ್ತು.

ಭುಜೈಶ್ಛಿನ್ನೈರ್ಮಹಾರಾಜ ನಾಗರಾಜಕರೋಪಮೈಃ ।
ಸಗದೈಃ ಸತಲತ್ರೈಶ್ಚ ಸಾಸಿಪ್ರಾಸಪರಶ್ವಧೈಃ ॥೧೫॥

ಕಬಂಧೈರುತ್ಥಿತೈಶ್ಚೈವ ನೃತ್ಯದ್ಭಿಶ್ಚಾಪರೈರ್ಯುಧಿ ।
ಕ್ರವ್ಯಾದಗಣಸಂಪೂರ್ಣಾ ಘೋರಾऽಭೂತ್ ಪೃಥಿವೀ ವಿಭೋ ॥೧೬॥

ಮಹಾರಾಜನೇ! ತುಂಡರಿಸಿದ ಭುಜಗಳು ಆನೆಯ ಸೊಂಡಿಲಿನಂತಿದ್ದವು. ಆ ಭುಜಗಳು ಗದೆ, ಗುರಾಣಿ, ಕತ್ತಿ, ಕೊಡಲಿಗಳನ್ನು ಹಿಡಿದುಕೊಂಡಿದ್ದವು. ದೇಹಗಳು ಸುತ್ತ ಇವೆಯೇನೋ ಎಂಬಂತೆ ಕಂಡವು. ಮಾಂಸವನ್ನು ತಿನ್ನುವ ಭೂತಗಳಿಂದ ತುಂಬಿದ ಯುದ್ಧಭೂಮಿಯು ತುಂಬ ಘೋರವಾಗಿತ್ತು.

ಅಲ್ಪಾವಶಿಷ್ಟೇ ಸೈನ್ಯೇ ತು ಕೌರವೇಯಾನ್ ಮಹಾಹವೇ ।
ಪ್ರಹೃಷ್ಟಾಃ ಪಾಂಡವಾ ಭೂತ್ವಾ ನಿನ್ಯಿರೇ ಯಮಸಾದನಮ್ ॥೧೭॥

ಮಹಾಯುದ್ಧದಲ್ಲಿ ಸಂತುಷ್ಟರಾದ ಪಾಂಡವರು ಸ್ವಲ್ಪವೇ ಉಳಿದ ಕೌರವಸೈನ್ಯವನ್ನು ಕೊಂದು ಯಮಪುರಿಗೆ ಕಳುಹಿಸಿದರು.

ಏತಸ್ಮಿನ್ನಂತರೇ ಶೂರಃ ಸೌಬಲೇಯಃ ಪ್ರತಾಪವಾನ್ ।
ಪ್ರಾಸೇನ ಸಹದೇವಸ್ಯ ಶಿರಸಿ ಪ್ರಾಹರದ್ ಭೃಶಮ್ ॥೧೮॥

ಈ ಮಧ್ಯದಲ್ಲಿ ಶೂರನಾದ ಪ್ರತಾಪಿ ಶಕುನಿಯು ಪ್ರಾಸಾಯುಧದಿಂದ ಸಹದೇವನ ತಲೆಗೆ ಬಲವಾಗಿ ಹೊಡೆದನು.

ಸ ವಿಹ್ವಲೋ ಮಹಾರಾಜ ರಥೋಪಸ್ಥ ಉಪಾವಿಶತ್ ॥೧೯॥

ಮಹಾರಾಜನೇ! ಇದರಿಂದ ಬಹಳ ವ್ಯಥೆಗೊಳಗಾದ ಸಹದೇವನು ರಥದಲ್ಲಿಯೇ ಕುಸಿದು ಕುಳಿತನು.

ಸಹದೇವಂ ತಥಾ ದೃಷ್ಟ್ವಾ ಭೀಮಸೇನಃ ಪ್ರತಾಪವಾನ್ ।
ಸರ್ವಸೈನ್ಯಾನಿ ಸಂಕ್ರುದ್ಧೋ ವಾರಯಾಮಾಸ ಭಾರತ ॥೨೦॥

ಭರತಕುಲೋದ್ಭವನೇ! ಸಹದೇವನು ವ್ಯಥೆಗೊಳಗಾದದ್ದನ್ನು ನೋಡಿದ ಪ್ರತಾಪಿ ಭೀಮನು ಕೋಪಗೊಂಡು ಎಲ್ಲಾ ಸೈನ್ಯವನ್ನೂ ತಡೆದು ನಿಲ್ಲಿಸಿದನು.

ನಿರ್ಭಿಭೇದ ಚ ನಾರಾಚೈಃ ಶತಶೋಽಥ ಸಹಸ್ರಶಃ ।
ಸ ನಿರ್ಭಿದ್ಯ ರಣೇ ಚಕ್ರೇ ಸಿಂಹನಾದಮಥಾನದತ್ ॥೨೧॥

ಭೀಮನು ಬಾಣಗಳನ್ನು ಪ್ರಯೋಗಿಸಿ ನೂರಾರು, ಸಾವಿರಾರು ಯೋಧರನ್ನು ಕೊಂದನು. ರಣರಂಗದಲ್ಲಿ ಹೀಗೆ ಎಲ್ಲರನ್ನೂ ಸಾಯಿಸಿ ಸಿಂಹನಾದವನ್ನು ಮಾಡಿದನು.

ತೇನ ಶಬ್ದೇನ ವಿತ್ರಸ್ತಾಃ ಸರ್ವೇ ಸಹಯವಾರಣಾಃ ।
ಪ್ರಾದ್ರವನ್ ಸಹಸಾ ಭೀತಾಃ ಶಕುನೇಶ್ಚ ಪದಾನುಗಾಃ ॥೨೨॥

ಆ ಶಬ್ದವನ್ನು ಕೇಳಿದ ಎಲ್ಲಾ ಕುದುರೆಗಳು, ಆನೆಗಳು, ಶಕುನಿಯ ಸಹಾಯಕ ಸೈನಿಕರೂ ಕೂಡ ಭಯದಿಂದಾಗಿ ಬೇಗನೇ ಪಲಾಯನಗೈದರು.

ಪ್ರಭಗ್ನಾನಥ ತಾನ್ ದೃಷ್ಟ್ವಾ ರಾಜಾ ದುರ್ಯೋಧನೋಽಬ್ರವೀತ್ ॥

ಕೈ-ಕಾಲು ಮುರಿದುಕೊಂಡ ಆ ಸೈನಿಕರನ್ನು ನೋಡಿದ ದುರ್ಯೋಧನನು ಹೀಗೆ ಹೇಳಿದನು

ದುರ್ಯೋಧನಃ

ನಿವರ್ತಧ್ವಮಧರ್ಮಜ್ಞಾ ಯುಧ್ಯಧ್ವಂ ಕಿಂ ದ್ರುತೇನ ವಃ ।
ಇಹ ಕೀರ್ತಿಂ ಸಮಾಧಾಯ ಪ್ರೇತ್ಯ ಲೋಕಾನ್ ಸಮಶ್ನುತೇ ॥೨೪॥

ಪ್ರಾಣಾನ್ ಜಹಾತಿ ಯೋ ವೀರೋ ಯುಧಿ ಪೃಷ್ಠಮದರ್ಶಯನ್ ॥

ದುರ್ಯೋಧನ– ಓಡುವುದರಿಂದ ಏನು ಪ್ರಯೋಜನ? ಧರ್ಮವನ್ನು ತಿಳಿಯದ ಮೂಢರೇ! ಮತ್ತೆ ಯುದ್ಧಕ್ಕೆ ಹಿಂತಿರುಗಿರಿ. ಯಾವ ವೀರನು ಯುದ್ಧದಲ್ಲಿ ಬೆನ್ನು ತೋರಿಸದೆ ಪ್ರಾಣತ್ಯಾಗಮಾಡುತ್ತಾನೆಯೋ ಅವನು ಇಲ್ಲಿ ಕೀರ್ತಿಯನ್ನೂ, ಸತ್ತು ಉತ್ತಮ ಲೋಕಗಳನ್ನೂ ಹೊಂದುವನು.

ಸಂಜಯಃ

ಏವಮುಕ್ತಾಸ್ತತೋ ರಾಜ್ಞಾ ಸೌಬಲಸ್ಯ ಪದಾನುಗಾಃ ।
ಪಾಂಡವಾನಭ್ಯವರ್ತಂತ ಮೃತ್ಯುಂ ಕೃತ್ವಾ ನಿವರ್ತನಮ್ ॥೨೬॥

ದುರ್ಯೋಧನನು ಹೀಗೆ ಹೇಳಿದಾಗ ಶಕುನಿಯ ಪದಾತಿಗಳು ಮರಣವನ್ನೇ ಹಿಮ್ಮೆಟ್ಟಿ ಅರ್ಜುನನನ್ನು ಎದುರಿಸಿದರು.

ದ್ರವದ್ಭಿಸ್ತು ತತೋ ರಾಜನ್ ಕೃತಃ ಶಬ್ದೋऽತಿದಾರುಣಃ ।
ಕ್ಷುಬ್ಧಸಾಗರಸಂಕಾಶಃ ಕ್ಷುಭಿತೈಃ ಸರ್ವತೋ ದಿಶಮ್ ॥೨೭॥

ರಾಜನೇ! ಯುದ್ಧದ ಉನ್ಮಾದದಿಂದ ಕ್ಷೋಭೆಗೊಳಗಾಗಿ ಎಲ್ಲಾ ದಿಕ್ಕುಗಳಲ್ಲಿ ಓಡುತ್ತಿರುವಾಗ ಕ್ಷೋಭೆಗೊಳಗಾದ ಸಾಗರದಿಂದ ಬರುವ ಶಬ್ದದ ಹಾಗೆ ಬಹಳ ದುಃಖದಾಯಕವಾದ ಘೋರಶಬ್ದವು ಉಂಟಾಯಿತು.

ತಾಂಸ್ತಥಾऽऽಪತತೋ ದೃಷ್ಟ್ವಾ ಸೌಬಲಸ್ಯ ಪದಾನುಗಾನ್ ।
ಪ್ರತ್ಯುದ್ಯಯುರ್ಮಹಾರಾಜ ಪಾಂಡವಾ ವಿಜಯೇ ಧೃತಾಃ ॥೨೮॥

ಮಹಾರಾಜನೇ! ಯುದ್ಧದಲ್ಲಿ ಜಯವನ್ನು ನಿಶ್ಚಯಿಸಿಕೊಂಡ ಪಾಂಡವರು ಹೀಗೆ ಓಡಿ ಬಂದು ಆಕ್ರಮಣ ಮಾಡುತ್ತಿರುವ ಶಕುನಿಯ ಪದಾತಿಗಳನ್ನು ಎದುರಿಸಿದರು.

ಪ್ರತ್ಯಾಶ್ವಸ್ಯ ಚ ದುರ್ಧರ್ಷಃ ಸಹದೇವೋ ವಿಶಾಂಪತೇ ।
ಶಕುನಿಂ ದಶಭಿರ್ವಿದ್ಧ್ವಾ ಹಯಾಂಶ್ಚಾಸ್ಯ ತ್ರಿಭಿಃ ಶರೈಃ ॥೨೯॥

ಚಕ್ರವರ್ತಿಯೇ! ಯುದ್ಧದಲ್ಲಿ ಎದುರಿಸಲು ಅಶಕ್ಯನಾದ ಸಹದೇವನು ಸುಧಾರಿಸಿಕೊಂಡು, ಶಕುನಿಗೆ ಹತ್ತು ಬಾಣಗಳಿಂದ ಹೊಡೆದನು ಮತ್ತು ಅವನ ಕುದುರೆಗಳಿಗೆ ಮೂರು ಬಾಣಗಳಿಂದ ಹೊಡೆದನು.

ಧನುಶ್ಚಿಚ್ಛೇದ ಚ ಶರೈಃ ಸೌಬಲಸ್ಯ ಹಸನ್ನಿವ ॥೩೦॥

ನಗುತ್ತಾ ಬಾಣಗಳಿಂದ ಶಕುನಿಯ ಬಿಲ್ಲನ್ನು ತುಂಡರಿಸಿದನು.

ಅಥಾನ್ಯದ್ಧನುರಾದಾಯ ಶಕುನಿರ್ಯುದ್ಧದುರ್ಮದಃ ।
ವಿವ್ಯಾಧ ನಕುಲಂ ಷಷ್ಟ್ಯಾ ಭೀಮಸೇನಂ ಚ ಸಪ್ತಭಿಃ ॥೩೧॥

ಯುದ್ಧದ ಮದವೇರಿಸಿಕೊಂಡ ಶಕುನಿಯು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ನಕುಲನ ಮೇಲೆ ಅರವತ್ತು ಬಾಣಗಳನ್ನೂ, ಭೀಮಸೇನನ ಮೇಲೆ ಏಳು ಬಾಣಗಳನ್ನೂ ಪ್ರಯೋಗಿಸಿದನು.

ಉಲೂಕಸ್ತು ಮಹಾರಾಜ ಭೀಮಂ ವಿವ್ಯಾಧ ಸಪ್ತಭಿಃ ।
ಸಹದೇವಂ ಚ ಸಪ್ತತ್ಯಾ ಪರೀಪ್ಸನ್ ಪಿತರಂ ರಣೇ ॥೩೨॥

ಮಹಾರಾಜನೇ! ಉಲೂಕನು ಏಳು ಬಾಣಗಳಿಂದ ಭೀಮನನ್ನು ಹೊಡೆದನು. ತನ್ನ ತಂದೆಯನ್ನು ರಕ್ಷಿಸಲಿಕ್ಕಾಗಿ ಸಹದೇವನ ಮೇಲೆ ಎಪ್ಪತ್ತು ಬಾಣಗಳನ್ನು ಬಿಟ್ಟನು.

ತಂ ಭೀಮಸೇನಃ ಸಮರೇ ವಿವ್ಯಾಧ ನಿಶಿತೈಃ ಶರೈಃ ।
ಶಕುನಿಂ ಚ ಚತುಷ್ಷಷ್ಟ್ಯಾ ಪಾರ್ಶ್ವಪಾಂಶ್ಚ ತ್ರಿಭಿಸ್ತ್ರಿಭಿಃ ॥೩೩॥

ಉಲೂಕನ ಮೇಲೆ ಭೀಮಸೇನನು ಯುದ್ಧದಲ್ಲಿ ಹರಿತವಾದ ಬಾಣಗಳನ್ನು ಪ್ರಯೋಗಿಸಿ ಘಾಸಿಪಡಿಸಿದನು. ಶಕುನಿಗೆ ಅರವತ್ತನಾಲ್ಕು ಮತ್ತು ಅವನ ಆಕಡೆ ಈಕಡೆ ಇರುವ ಯೋಧರಿಗೆ ಮೂರು ಮೂರು ಬಾಣಗಳನ್ನು ಬಿಟ್ಟನು.

ತೇ ಹನ್ಯಮಾನಾ ಭೀಮೇನ ನಾರಾಚೈಸ್ತೈಲಪಾಯಿತೈಃ ।
ಸಹದೇವಂ ರಣೇ ಕ್ರುದ್ಧಃ ಛಾದಯನ್ ಶರವೃಷ್ಟಿಭಿಃ ॥೩೪॥

ಪರ್ವತಂ ವಾರಿಧಾರಾಭಿಃ ಸವಿದ್ಯುತ ಇವಾಂಬುದಾಃ ।
ತತೋ ಹ್ಯಾಪತತಸ್ತೂರ್ಣಂ ಸಹದೇವಃ ಪ್ರತಾಪವಾನ್ ॥೩೫॥

ಭೀಮನಿಂದ ಎಣ್ಣೆಯಲ್ಲಿ ಅದ್ದಿದ ಬಾಣಗಳ ಪೆಟ್ಟು ತಿಂದ ಯೋಧರು ಕೋಪಗೊಂಡು ಬಾಣಗಳ ಮಳೆಯನ್ನು ಸುರಿಸಿ, ಸಹದೇವನನ್ನು ಬಾಣಗಳಿಂದ

ಮುಚ್ಚಿಹಾಕಿದರು. ಇದು ಮೋಡಗಳು ಮಿಂಚುಸಹಿತವಾಗಿ ಮಳೆಸುರಿಸಿ ಪರ್ವತವನ್ನು ಮುಚ್ಚಿದಂತೆ ಇತ್ತು.

ಉಲೂಕಸ್ಯ ಮಹಾರಾಜ ಭಲ್ಲೇನಾಪಹರಚ್ಛಿರಃ ।
ಸ ಜಗಾಮ ರಥಾದ್ ಭೂಮಿಂ ಸಹದೇವೇನ ಪಾತಿತಃ ॥೩೬॥

ಮಹಾರಾಜನೇ! ಆಗ ಪ್ರತಾಪಿಯಾದ ಸಹದೇವನು ತನ್ನ ಮೇಲೆ ಆಕ್ರಮಣ ಮಾಡುತ್ತಿರುವ ಉಲೂಕನ ತಲೆಯನ್ನು ಭಲ್ಲೆಯಿಂದ ಕಡಿದನು. ಸಹದೇವನಿಂದ ಹೊಡೆಯಲ್ಪಟ್ಟ ಉಲೂಕನು ರಥದಿಂದ ಕೆಳಗೆ ಬಿದ್ದನು.

ರುಧಿರಾಪ್ಲುತಸರ್ವಾಂಗೋ ನಂದಯನ್ ಪಾಂಡವಾನ್ ರಣೇ ।
ಪುತ್ರಂ ತು ನಿಹತಂ ದೃಷ್ಟ್ವಾ ಶಕುನಿಸ್ತತ್ರ ಭಾರತ ॥೩೭॥

ಸಾಸ್ರಕಂಠೋ ವಿನಿಃಶ್ವಸ್ಯ ಕ್ಷತ್ತುರ್ವಾಕ್ಯಮನುಸ್ಮರನ್ ।
ಚಿಂತಯಿತ್ವಾ ಮುಹೂರ್ತಂ ತು ಬಾಷ್ಪಪೂರ್ಣೇಕ್ಷಣಃ ಶ್ವಸನ್ ॥೩೮॥

ಉಲೂಕನ ಶರೀರವೆಲ್ಲವೂ ರಕ್ತದಿಂದ ತೊಯ್ದುಹೋಗಿತ್ತು. ಇದು ಪಾಂಡವರಿಗೆ ಆನಂದವನ್ನುಂಟುಮಾಡಿತು. ಭರತಕುಲೋದ್ಭವನೇ! ತನ್ನ ಮಗ ಉಲೂಕನು ಸತ್ತಿದ್ದನ್ನು ನೋಡಿದ ಶಕುನಿಗೆ ಕಣ್ಣೀರುತುಂಬಿಕೊಂಡು ಗಂಟಲು ಕಟ್ಟಿತು. ನಿಟ್ಟುಸಿರು ಬಿಡುತ್ತಾ ಸ್ವಲ್ಪಕಾಲ ಆಲೋಚಿಸಿ ವಿದುರನು ಹೇಳಿದ ಮಾತನ್ನು ಸ್ಮರಿಸಿಕೊಳ್ಳುತ್ತಾನೆ.

ಸಹದೇವಂ ಸಮಾಸಾದ್ಯ ವಿವ್ಯಾಧ ತ್ರಿಭಿರಾಶುಗೈಃ ॥೩೯॥

ಸಹದೇವನ ಸಮೀಪಕ್ಕೆ ಬಂದು ಬೇಗನೆ ಹೋಗುವ ಮೂರು ಬಾಣಗಳಿಂದ ಸಹದೇವನನ್ನು ಹೊಡೆಯುತ್ತಾನೆ.

ತಾನಪಾಸ್ಯ ಶರಾನ್ ಮುಕ್ತಾನ್ ಶರಸಂಘೈಃ ಪ್ರತಾಪವಾನ್ ।
ಸಹದೇವೋ ಮಹಾರಾಜ ಧನುಶ್ಚಿಚ್ಛೇದ ಸಂಯುಗೇ ॥೪೦॥

ಮಹಾರಾಜನೇ! ಪ್ರತಾಪಿಯಾದ ಸಹದೇವನು ಶಕುನಿಯು ಬಿಟ್ಟ ಬಾಣಗಳನ್ನು ತುಂಡರಿಸಿ, ಯುದ್ಧದಲ್ಲಿ ಶಕುನಿಯ ಬಿಲ್ಲನ್ನು ತುಂಡರಿಸುತ್ತಾನೆ.

ಛಿನ್ನೇ ಧನುಷಿ ರಾಜೇಂದ್ರ ಶಕುನಿಃ ಸೌಬಲಸ್ತದಾ ।
ಪ್ರಗೃಹ್ಯ ವಿಮಲಂ ಖಡ್ಗಂ ಸಹದೇವಾಯ ಪ್ರಾಹಿಣೋತ್ ॥೪೧॥

ರಾಜೇಂದ್ರನೇ! ತನ್ನ ಬಿಲ್ಲು ತುಂಡಾದಾಗ ಶಕುನಿಯು ಶುಭ್ರವಾದ ಖಡ್ಗವನ್ನು ಎತ್ತಿಕೊಂಡು ಸಹದೇವನಿಗೆ ಗುರಿಯಿಟ್ಟು ಬಿಸಾಡುತ್ತಾನೆ.

ತಮಾಪತಂತಂ ಸಹಸಾ ಘೋರರೂಪಂ ವಿಶಾಂಪತೇ ।
ದ್ವಿಧಾ ಚಿಚ್ಛೇದ ರಾಜೇಂದ್ರ ಸೌಬಲಸ್ಯ ಹಸನ್ನಿವ ॥೪೨॥

ಜನನಾಯಕನೇ! ರಾಜೇಂದ್ರನೇ! ಸಹದೇವನು ತನ್ನೆಡೆಗೆ ಬೀಳುತ್ತಾ ಇದ್ದ ಶಕುನಿಯ ಘೋರರೂಪವಾದ ಖಡ್ಗವನ್ನು ಕೂಡಲೇ ನಗುತ್ತಾ ಎರಡಾಗಿ ತುಂಡುಮಾಡಿದನು.

ಅಸಿಂ ದೃಷ್ಟ್ವಾ ದ್ವಿಧಾ ಛಿನ್ನಂ ಪ್ರಗೃಹ್ಯ ಮಹತೀಂ ಗದಾಮ್ ।
ಪ್ರಾಹಿಣೋತ್ ಸಹದೇವಾಯ ಸಾ ಮೋಘಾ ನ್ಯಪತದ್ ಭುವಿ ॥೪೩॥

ಕತ್ತಿಯು ಎರಡಾಗಿ ತುಂಡಾಗಿದ್ದನ್ನು ನೋಡಿದ ಶಕುನಿಯು ದೊಡ್ಡದಾದ ಗದೆಯನ್ನು ಎತ್ತಿಕೊಂಡು ಸಹದೇವನೆಡೆ ಬಿಸಾಡುತ್ತಾನೆ. ಆದರೆ ಆ ಗದೆಯೂ ವ್ಯರ್ಥವಾಗಿ ಭೂಮಿಗೆ ಬಿತ್ತು.

ತತಃ ಶಕ್ತಿಂ ಮಹಾಘೋರಂ ಕಾಲರಾತ್ರಿಮಿವೋದ್ಯತಾಮ್ ।
ಪ್ರೇಷಯಾಮಾಸ ಸಂಕ್ರುದ್ಧಃ ಪಾಂಡವಂ ಪ್ರತಿ ಸೌಬಲಃ ॥೪೪॥

ಅನಂತರ ಕೋಪಗೊಂಡ ಶಕುನಿಯು ಸಹದೇವನ ಮೇಲೆ ಯೋಧರಿಗೆ ಕಾಳರಾತ್ರಿಯಂತೆ ಭಯಂಕರವಾದ, ತುಂಬ ಘೋರರೂಪದ ಶಕ್ತ್ಯಾಯುಧವನ್ನು ಪ್ರಯೋಗಿಸಿ ಕಳುಹಿಸುತ್ತಾನೆ.

ತಾಮಾಪತಂತೀಂ ಸಹಸಾ ಶರೈಃ ಕಾಂಚನಭೂಷಣೈಃ ।
ತ್ರಿಧಾ ಚಿಚ್ಛೇದ ಸಮರೇ ಸಹದೇವೋ ಹಸನ್ನಿವ ॥೪೫॥

ತನ್ನ ಮೇಲೆ ಬೀಳುತ್ತಿರುವ ಆ ಶಕ್ತ್ಯಾಯುಧವನ್ನು ಸಹದೇವನು ನಗುತ್ತಾ ಬಂಗಾರ ಅಲಂಕಾರವುಳ್ಳ ಬಾಣಗಳಿಂದ ಕೂಡಲೇ ಮೂರಾಗಿ ತುಂಡರಿಸುತ್ತಾನೆ.

ಸಾ ಪಪಾತ ತ್ರಿಧಾ ಛಿನ್ನಾ ಭೂಮೌ ಕನಕಭೂಷಣಾ ।
ಶೀರ್ಯಮಾಣಾ ಯಥಾ ದೀಪ್ತಾ ಗಗನಾದ್ ವೈ ಶತಹ್ರದಾ ॥೪೬॥

ಮೂರು ಭಾಗವಾಗಿ ತುಂಡಾದ ಬಂಗಾರದ ಅಲಂಕಾರವನ್ನು ಹೊಂದಿರುವ ಶಕ್ತ್ಯಾಯುಧವು ಆಕಾಶದಿಂದ ಹೊಳೆಯುವ ಮಿಂಚು ನೆಲಕ್ಕೆ ಬೀಳುವಂತೆ ಭೂಮಿಗೆ ಬಿತ್ತು.

ಶಕ್ತಿಂ ವಿನಿಹತಾಂ ದೃಷ್ಟ್ವಾ ಸೌಬಲಂ ಚ ಭಯಾರ್ದಿತಮ್ ।
ದುದ್ರುವುಸ್ತಾವಕಾಃ ಸರ್ವೇ ಭಯೇ ಜಾತೇ ಸಸೌಬಲಾಃ ॥೪೭॥

ಶಕ್ತ್ಯಾಯುಧವು ನಾಶವಾಗಿದ್ದನ್ನು ನೋಡಿದ ಶಕುನಿಯು ಭಯಗೊಂಡಿದ್ದಾನೆ. ಇವೆರಡನ್ನೂ ನೋಡಿದ ನಿನ್ನ ಕಡೆಯವರು ಮತ್ತು ಶಕುನಿಯ ಕಡೆಯವರು ಭಯದಿಂದಾಗಿ ಓಡಿಹೋದರು.

ಅಥೋತ್ಕೃಷ್ಟಂ ಮಹಚ್ಚಾಸೀತ್ ಪಾಂಡವೈರ್ಜಿತಕಾಶಿಭಿಃ ।
ಧಾರ್ತರಾಷ್ಟ್ರಾಃ ತತಃ ಸರ್ವೇ ಪ್ರಾಯಶೋ ವಿಮುಖಾ ಭವನ್ ॥೪೮॥

ಜಯವನ್ನೇ ಬಯಸುವ ಪಾಂಡವರು ಮಾಡಿದ ಯುದ್ಧವು ಬಹಳ ಉತ್ತಮವಾಗಿತ್ತು. ಅನಂತರ ದುರ್ಯೋಧನನ ಎಲ್ಲಾ ಸೈನ್ಯವೂ ಬಹುಪಾಲು ಯುದ್ಧದಿಂದ ಹಿಂತಿರುಗಿತು.

ತಾನ್ ವೈ ವಿಮನಸೋ ದೃಷ್ಟ್ವಾ ಮಾದ್ರೀಪುತ್ರಃ ಪ್ರತಾಪವಾನ್ ।
ಶರೈರನೇಕಸಾಹಸ್ರೈಃ ವಾರಯಾಮಾಸ ಸಂಯುಗೇ ॥೪೯॥

ಯುದ್ಧದಲ್ಲಿ ಉತ್ಸಾಹವನ್ನು ಕಳೆದುಕೊಂಡ ಆ ಸೈನ್ಯವನ್ನು ಪ್ರತಾಪಿಯಾದ ಸಹದೇವನು ಅನೇಕ ಸಾವಿರ ಬಾಣಗಳನ್ನು ಬಿಟ್ಟು ತಡೆಯುತ್ತಾನೆ.

ತತೋ ಗಾಂಧಾರಕೈರ್ಗುಪ್ತಂ ಶ್ರೇಷ್ಠೈರಶ್ವೈರ್ಜಯೇ ಧೃತಮ್ ।
ಆಸಸಾದ ರಣೇ ಯಾಂತಂ ಸಹದೇವೋಽಥ ಸೌಬಲಮ್ ॥೫೦॥

ಅನಂತರ ಯುದ್ಧದಲ್ಲಿ ಗಾಂಧಾರದೇಶದ ಶ್ರೇಷ್ಠ ಅಶ್ವಾರೋಹಿ ಯೋಧರಿಂದ ರಕ್ಷಿತನಾಗಿ ಹೋಗುತ್ತಿರುವ ಶಕುನಿಯನ್ನು ಸಹದೇವನು ಸಮೀಪಿಸಿದನು.

ಸ್ವಮಂಶಮವಶಿಷ್ಟಂ ಸ ಸಂಸ್ಮೃತ್ಯ ಶಕುನಿಂ ನೃಪ ।
ರಥೇನ ಕಾಂಚನಾಂಗೇನ ಸಹದೇವಃ ಸಮಭ್ಯಯಾತ್ ॥೫೧॥

ರಾಜನೇ! ಶಕುನಿಯನ್ನು ತನ್ನ ಭಾಗವಾಗಿ ಉಳಿದುಕೊಂಡಿರುವುದನ್ನು ಸ್ಮರಿಸಿಕೊಂಡ ಸಹದೇವನು ಬಂಗಾರದ ಅವಯವಗಳುಳ್ಳ ರಥದ ಮೇಲಿದ್ದುಕೊಂಡು ಬಂದನು.

ಅಧಿಜ್ಯಂ ಬಲವತ್ ಕೃತ್ವಾ ವ್ಯಾಕ್ಷಿಪನ್ ಸಶರಂ ಧನುಃ ।
ಸ ಸೌಬಲಮಭಿದ್ರುತ್ಯ ಗೃಧ್ರಪಕ್ಷೈಃ ಶಿಲಾಸಿತೈಃ ॥೫೨॥

ಭೃಶಮಭ್ಯಹನತ್ ಕ್ರುದ್ಧಃ ತೋತ್ತ್ರೈರಿವ ಮಹಾದ್ವಿಪಮ್ ।
ಉವಾಚ ಚೈನಂ ಮೇಧಾವೀ ನಿಗೃಹ್ಯ ಸ್ಮಾರಯನ್ನಿವ ॥೫೩॥

ತನ್ನ ದೊಡ್ಡದಾದ ಬಿಲ್ಲಿನ ಹಗ್ಗವನ್ನು ಶಬ್ದಮಾಡುತ್ತಾ ಕಟ್ಟಿಕೊಂಡು, ಬಾಣಸಹಿತವಾದ ಬಿಲ್ಲನ್ನು ಪ್ರಯೋಗಿಸುತ್ತಾ, ಶಕುನಿಯ ಮೇಲೆ ಸಾಣೆಕಲ್ಲಿನಲ್ಲಿ ಹರಿತಗೊಳಿಸಿದ ಬಾಣಗಳನ್ನು ಬಿಡುತ್ತಾ, ಶಕುನಿಯನ್ನು ಅಟ್ಟಿಸಿಕೊಂಡು ಹೋದನು. ಆ ಬಾಣಗಳಿಗೆ ಗಿಡುಗನ ರೆಕ್ಕೆಗಳಿದ್ದವು. ಕ್ರುದ್ಧನಾದ ಸಹದೇವನು ದೊಡ್ಡದಾದ ಆನೆಯನ್ನು ಚಾಟಿಗಳಿಂದ ಹೊಡೆಯುವಂತೆ ಬಾಣಗಳಿಂದ ಶಕುನಿಯನ್ನು ಚೆನ್ನಾಗಿ ಹೊಡೆಯುತ್ತಾನೆ. ಮೇಧಾವಿಯಾದ ಸಹದೇವನು ಶಕುನಿಯನ್ನು ತಡೆಹಿಡಿದುಕೊಂಡು ಅವನಿಗೆ ಹಿಂದಿನ ಘಟನೆಗಳನ್ನು ಸ್ಮರಣೆಗೆ ತಂದುಕೊಡುತ್ತಾ ಹೀಗೆ ಹೇಳುತ್ತಾನೆ.

ಸಹದೇವಃ

ಕ್ಷತ್ರಧರ್ಮೇ ಸ್ಥಿತೋ ಭೂತ್ವಾ ಯುಧ್ಯಸ್ವ ಪುರುಷೋ ಭವ ।
ಯತ್ ತದಾ ಭಾಷಸೇ ಮೂಢ ಗೃಹ್ಣನ್ತಕ್ಷಾನ್ ಸಭಾತಳೇ ॥೫೪॥

ಫಲಮದ್ಯ ಪ್ರಪದ್ಯಸ್ವ ಕರ್ಮಣಸ್ತಸ್ಯ ದುರ್ಮತೇ ।
ನಿಹತಾಸ್ತೇ ದುರಾತ್ಮಾನೋ ಯೇಽಸ್ಮಾನಪ್ಯಹಸನ್ ಪುರಾ ॥೫೫॥

ಸಹದೇವ– ಮೂಢನಾದ ಶಕುನಿಯೇ! ಕ್ಷತ್ರಿಯಧರ್ಮಕ್ಕನುಸಾರವಾಗಿ ನಿಂತುಕೊಂಡು ಯುದ್ಧ ಮಾಡು. ದುಷ್ಟಬುದ್ಧಿಯವನೇ! ದ್ಯೂತಸಭೆಯಲ್ಲಿ ಏನು ಹೇಳಿದ್ದಿಯೋ ಆ ಕರ್ಮದ ಫಲವನ್ನು ಇಂದು ಅನುಭವಿಸು. ಹಿಂದೆ ದ್ಯೂತದಲ್ಲಿ

ಸೋತ ನಮ್ಮನ್ನು ನೋಡಿ ಯಾರೆಲ್ಲಾ ನಕ್ಕಿದ್ದರೋ ದುಷ್ಪರಾದ ಅವರೆಲ್ಲಾ ಇಂದು ಸತ್ತುಹೋಗಿದ್ದಾರೆ.

ದುರ್ಯೋಧನಃ ಕುಲಾಂಗಾರಃ ಶಿಷ್ಟಸ್ತ್ವಂ ತಸ್ಯ ಮಾತುಲಃ ॥೫೬॥

ದುರ್ನಡತೆಯ ದುರ್ಯೋಧನ ಮತ್ತು ಅವನ ಸೋದರಮಾವನಾದ ನೀನು ಮಾತ್ರ ಉಳಿದುಕೊಂಡಿದ್ದೀರಿ.

ಅದ್ಯ ತೇ ಪಾತಯಿಷ್ಯಾಮಿ ಶರೇಣ ಗ್ರಥಿತಂ ಶಿರಃ ।
ವೃಕ್ಷಾತ್ ಫಲಮಿವೋದ್ಧತ್ಯ ಲಗುಡೇನ ಪ್ರಮಾಥಿನಾ ॥೫೭॥

ಮರದಿಂದ ಹಣ್ಣನ್ನು ಕೋಲಿನಿಂದ ಬಡಿದು ಬೀಳಿಸುವಂತೆ ಇವತ್ತು ಬಾಣದಿಂದ ನಿನ್ನ ತಲೆಯನ್ನು ಕೆಳಗೆ ಬೀಳಿಸುತ್ತೇನೆ.

ಏವಮುಕ್ತ್ವಾ ಮಹಾರಾಜ ಸಹದೇವೋ ಮಹಾಬಲಃ ।
ಸಂಕ್ರುದ್ಧೋ ನರಶಾರ್ದೂಲೋ ವೇಗೇನಾಭಿಜಗಾಮ ಹ ॥೫೮॥

ಮಹಾರಾಜನೇ! ಹೀಗೆ ಹೇಳಿದ ನರೋತ್ತಮನಾದ ಸಹದೇವನು ಕೋಪದಿಂದ ವೇಗವಾಗಿ ಶಕುನಿಯ ಎದುರುಗಡೆ ಬಂದನು.

ಅಭಿಗಮ್ಯ ತು ದುರ್ಧರ್ಷಃ ಸಹದೇವೋ ವಿಶಾಂಪತೇ ।
ವಿಕೃಷ್ಯ ಬಲವಚ್ಚಾಪಂ ಕ್ರೋಧೇನ ಪ್ರದಹನ್ನಿವ ॥೫೯॥

ಶಕುನಿಂ ದಶಭಿರ್ವಿದ್ಧ್ವಾ ಚತುರ್ಭಿಶ್ಚಾಸ್ಯ ವಾಜಿನಃ ।
ಛತ್ರಂ ಧ್ವಜಂ ಧನುಶ್ಚಾಸ್ಯ ಛಿತ್ತ್ವಾ ಸಿಂಹ ಇವಾನದತ್ ॥೬೦॥

ರಾಜನೇ! ಎದುರಿಸಲು ಅಶಕ್ಯನಾದ ಸಹದೇವನು ಎದುರು ಬಂದು ಗಟ್ಟಿಯಾದ ತನ್ನ ಬಿಲ್ಲನ್ನು ಎಳೆದು ನಗುತ್ತಾ, ಶಕುನಿಯ ಮೇಲೆ ಹತ್ತು ಬಾಣಗಳನ್ನು ಪ್ರಯೋಗಿಸಿದನು. ನಾಲ್ಕು ಬಾಣಗಳಿಂದ ಶಕುನಿಯ ಕುದುರೆಗಳನ್ನು ಹೊಡೆದನು. ಶಕುನಿಯ ರಥದ ಧ್ವಜ, ಛತ್ರ ಮತ್ತು ಬಿಲ್ಲನ್ನು ತುಂಡರಿಸಿ ಸಿಂಹದಂತೆ ಘರ್ಜಿಸಿದನು.

ಛಿನ್ನಧ್ವಜಧನುಶ್ಛತ್ರಃ ಸಹದೇವೇನ ಸೌಬಲಃ ।
ಕೃತೋ ವಿದ್ಧಶ್ಚ ಬಹುಭಿಃ ಸರ್ವಮರ್ಮಸು ಸಾಯಕೈಃ ॥೬೧॥

ಶಕುನಿಯು ತನ್ನ ಧ್ವಜ, ಬಿಲ್ಲುಗಳನ್ನು ಕಳೆದುಕೊಂಡಿದ್ದಾನೆ. ಸಹದೇವನು ಪ್ರಯೋಗಿಸಿದ ಅನೇಕ ಬಾಣಗಳಿಂದ ಎಲ್ಲಾ ಮರ್ಮಸ್ಥಾನಗಳಲ್ಲಿ ಪೆಟ್ಟುತಿಂದು ಗಾಯಗೊಂಡಿದ್ದಾನೆ.

ತತೋ ಭೂಯೋ ಮಹಾಬಾಹುಃ ಸಹದೇವಃ ಪ್ರತಾಪವಾನ್ ।
ಶಕುನೇಃ ಪ್ರೇಷಯಾಮಾಸ ಶರವೃಷ್ಟಿಂ ದುರಾಸದಾಮ್ ॥೬೨॥

ಅನಂತರ ಪ್ರತಾಪಿಯಾದ ಸಹದೇವನು ಪುನಃ ಶಕುನಿಯ ಮೇಲೆ ಬಾಣಗಳ ಮಳೆಯನ್ನೇ ಸುರಿಸುತ್ತಾನೆ.

ತತಸ್ತು ಕ್ರುದ್ಧಃ ಸುಬಲಸ್ಯ ಪುತ್ರೋ
ಮಾದ್ರೀಸುತಂ ಸಹದೇವಂ ವಿಮರ್ದೇ ।
ಪ್ರಾಸೇನ ಜಾಂಬೂನದಭೂಷಣೇನ
ಜಿಘಾಂಸುರೇಕೋऽಭಿಪಪಾತ ಶೀಘ್ರಮ್ ॥೬೩॥

ಕುಪಿತನಾದ ಶಕುನಿಯು ಯುದ್ಧದಲ್ಲಿ ಸಹದೇವನನ್ನು ಕೊಲ್ಲುವ ಇಚ್ಛೆಯಿಂದ ಬಂಗಾರದ ಅಲಂಕಾರವುಳ್ಳ ಪ್ರಾಸಾಯುಧವನ್ನು ವೇಗವಾಗಿ ಸಹದೇವನ ಮೇಲೆ ಬೀಳಿಸಿದನು.

ಮಾದ್ರೀಸುತಸ್ತಸ್ಯ ಸಮುದ್ಯತಂ ತಂ
ಪ್ರಾಸಂ ಸುವೃತ್ತೌ ಚ ಭುಜೌ ರಣಾಗ್ರೇ ।
ಭಲ್ಲೈಸ್ತ್ರಿಭಿರ್ಯುಗಪತ್ ಸಂಚಕರ್ತ
ನನಾದ ಚೋಚ್ಚೈಸ್ತರಸಾऽऽಜಿಮಧ್ಯೇ ॥೬೪॥

ಯುದ್ಧದ ಮುಂಚೂಣಿಯಲ್ಲಿದ್ದ ಸಹದೇವನು ಭಲ್ಲೆಯಿಂದ ಶಕುನಿಯ ಪ್ರಾಸಾಯುಧವನ್ನೂ, ಎರಡು ಕೈಗಳನ್ನೂ ಏಕಕಾಲದಲ್ಲಿ ತುಂಡರಿಸಿದನು. ಮತ್ತು ರಣರಂಗದ ಮಧ್ಯದಲ್ಲಿ ಜೋರಾಗಿ ಶಬ್ದವನ್ನು ಮಾಡಿದನು.

ತಸ್ಯಾಶುಕಾರೀ ಸುಸಮಾಹಿತೇನ
ಸುವರ್ಣಪುಂಖೇನ ದೃಢಾಯಸೇನ ।
ಭಲ್ಲೇನ ಸರ್ವಾವರಣಾತಿಗೇನ
ಶಿರಃ ಶರೀರಾತ್ ಪ್ರಮಮಾಥ ಭೂಯಃ ॥೬೫॥

ವೇಗವಾಗಿ ಯುದ್ಧಮಾಡುತ್ತಿದ್ದ ಸಹದೇವನು ಗಟ್ಟಿಯಾದ ಕಬ್ಬಿಣದಿಂದ ರಚಿತವಾದ, ಬಂಗಾರದ ರೆಕ್ಕೆಗಳುಳ್ಳ ಭಲ್ಲೆಯನ್ನು ಚೆನ್ನಾಗಿ ಪ್ರಯೋಗಿಸಿದನು. ಆ ಭಲ್ಲೆಯು ಎಲ್ಲಾ ಕವಚಗಳನ್ನೂ ಸೀಳಿ ಒಳಹೋಗುವಂತಹದ್ದು. ಅದರಿಂದ ಶಕುನಿಯ ತಲೆಯನ್ನು ಚೆನ್ನಾಗಿ ಮತ್ತೆ ಮತ್ತೆ ಥಳಿಸಿದನು.

ಶರೇಣ ಕಾರ್ತಸ್ವರಭೂಷಿತೇನ
ದಿವಾಕರಾಭೇಣ ಸುಸಂಶಿತೇನ ।
ಹೃತೋತ್ತಮಾಂಗೋ ಯುಧಿ ಪಾಂಡವೇನ
ಪಪಾತ ಭೂಮೌ ಸುಬಲಸ್ಯ ಪುತ್ರಃ ॥೬೬॥

ಸೂರ್ಯನ ಪ್ರಭೆಯುಳ್ಳ, ಬಂಗಾರದ ಅಲಂಕಾರವುಳ್ಳ ಹರಿತವಾದ ಬಾಣಗಳಿಂದ ಸಹದೇವನು ಶಕುನಿಯ ತಲೆಯನ್ನು ಕಡಿದನು. ಯುದ್ಧದಲ್ಲಿ ತಲೆಯನ್ನು ಕಳೆದುಕೊಂಡ ಶಕುನಿಯು ಭೂಮಿಗೆ ಬಿದ್ದನು.

ಶತ್ರೋಃ ಶಿರೋ ವೇಗವತಾ ಶರೇಣ
ಸುವರ್ಣಪುಂಖೇನ ಶಿಲಾಶಿತೇನ ।
ಪ್ರಾವೇಪಯತ್ ಕುಪಿತಃ ಪಾಂಡುಪುತ್ರೋ
ಯತ್ತತ್ಕುರೂಣಾಮನಯಸ್ಯ ಮೂಲಮ್ ॥೬೭॥

ಕುಪಿತನಾದ ಸಹದೇವನು ಕೌರವರ ಅನ್ಯಾಯಕ್ಕೆ ಮೂಲವಾದ ಶಕುನಿಯ ತಲೆಯನ್ನು ಸುವರ್ಣಪುಂಖವುಳ್ಳ, ಸಾಣೆಕಲ್ಲಿನಲ್ಲಿ ಹರಿತಗೊಳಿಸಿದ ಬಾಣದಿಂದ ಅತ್ತಿಂದಿತ್ತ ಹೊರಳಾಡಿಸಿದನು.

ಮರ್ಮಚ್ಛಿದಾ ವೇಗವತಾ ಶರೇಣ
ತಸ್ಯೋತ್ತಮಾಂಗಂ ಚ ಭುಜೌ ಸುವೃತ್ತೌ ।
ಶಕ್ತಿಶ್ಚ ಭೂಮೌ ನಿಪಪಾತ ಪೂರ್ವಂ
ಪಶ್ಚಾತ್ ಕಬಂಧಂ ರುಧಿರಾವಸಿಕ್ತಮ್ ॥೬೮॥

ರಾಜನೇ! ಮರ್ಮಾಘಾತಿಯಾದ ವೇಗವಾದ ಬಾಣವು ತಾಗಿ ಮೊದಲು ಶಕುನಿಯ ತಲೆಯು ನೆಲಕ್ಕೆ ಬಿತ್ತು. ಅನಂತರ ಅವನ ರಕ್ತಸಿಕ್ತವಾದ ಹಾಗೂ

ನಡುಗುತ್ತಿರುವ ದೇಹವು ರಥದಿಂದ ಕೆಳಕ್ಕೆ ಜೋರಾಗಿ ಬಿದ್ದಿತು. ದೇಹದಲ್ಲಿ ಬಂಗಾರದ ನಕ್ಷತ್ರಗಳ ಆಭರಣಗಳು ಅಲಂಕಾರವಾಗಿದ್ದವು. ಆಗ ಮಹಾತ್ಮನಾದ ಸಹದೇವನು ಸಿಂಹನಾದವನ್ನು ಮಾಡಿದನು.

ವಿಷ್ಯಂದಮಾನಂ ನಿಪಪಾತ ಘೋರಂ
ರಥೋತ್ತಮಾತ್ ಪಾರ್ಥಿವ ಪಾರ್ಥಿವಸ್ಯ ।
ಸುವರ್ಣತಾರಾಗಣಭೂಷಿತಾಂಗಂ
ಸ ಸಿಂಹನಾದಂ ವಿನದನ್ ಮಹಾತ್ಮಾ ॥೬೯॥

ನಿಹತ್ಯ ಪಾಪಂ ಸುಬಲಸ್ಯ ಪುತ್ರಂ
ಜಾತಂ ಕುರೂಣಾಮನಯಸ್ಯ ಮೂಲಮ್ ।
ಸುವರ್ಣಪುಂಖೈರಿಷುಭಿಃ ಪತಂತಮ್
ಪ್ರಾವೇಶಯತ್ ಕುಪಿತಃ ಪಾಂಡುಪುತ್ರಃ ॥೭೦॥

ಕುಪಿತನಾದ ಸಹದೇವನು ಕೌರವರ ದುರ್ನಡತೆಗೆ ಮೂಲಪ್ರೇರಕನಾದ ಪಾಪಿ ಶಕುನಿಯನ್ನು ಬಂಗಾರದ ರೆಕ್ಕೆಗಳುಳ್ಳ ಬಾಣಗಳಿಂದ ಕೆಳಗೆ ಬೀಳಿಸಿ ಮೃತ್ಯುವಿನ ಹೊಟ್ಟೆಯೊಳಗೆ ಪ್ರವೇಶಿಸುವಂತೆ ಮಾಡಿದನು.

ತಂ ಪಾಂಡುಪುತ್ರಂ ಪ್ರತಿಪೂಜಯಂತೋ
ಹೃಷ್ಟಾ ಬ್ರುವಾಣಾಃ ಸಹದೇವಮಾಜೌ ।
ದಿಷ್ಟ್ಯಾ ಹತೋ ನೈಕೃತಿಕೋ ದುರಾತ್ಮಾ
ಸಹಾತ್ಮಜೋ ವೀರ ರಣೇ ತ್ವಯೇತಿ ॥೭೧॥

ರಣರಂಗದಲ್ಲಿ ಎಲ್ಲರೂ ಸಹದೇವನ ಪ್ರತಾಪದಿಂದ ಸಂತುಷ್ಟರಾಗಿ ಅವನನ್ನು ಕೊಂಡಾಡಿ ಪೂಜಿಸುತ್ತಾರೆ. ವೀರನಾದ ಸಹದೇವನೇ! ದುಷ್ಟನಾದ ಶಕುನಿಯನ್ನೂ ಅವನ ಮಗನನ್ನೂ ಯುದ್ಧದಲ್ಲಿ ಕೊಂದಿದ್ದಿ. ಇದು ನಮ್ಮ ಅದೃಷ್ಟ! ಎಂದು ಅವನನ್ನು ಹೊಗಳುತ್ತಾರೆ.

ಹೃತೋತ್ತಮಾಂಗಂ ಶಕುನಿಂ ಸಮೀಕ್ಷ್ಯ
ಭೂಮೌ ಶಯಾನಂ ರುಧಿರಾರ್ದ್ರಗಾತ್ರಮ್ ।

ಯೋಧಾಸ್ತ್ವದೀಯಾ ಭಯನಷ್ಟಸತ್ತ್ವಾ
ದಿಶಃ ಪ್ರಜಗ್ಮುಃ ಪ್ರಗೃಹೀತಶಸ್ತ್ರಾಃ ॥೭೨॥

ತಲೆಕಡಿದು ರಕ್ತಸಿಕ್ತವಾದ ದೇಹದೊಡನೆ ನೆಲದಲ್ಲಿ ಮಲಗಿರುವ ಶಕುನಿಯನ್ನು ನೋಡಿದ ನಿನ್ನ ಕಡೆಯ ಯೋಧರು ಭಯದಿಂದಾಗಿ ತಮ್ಮೆಲ್ಲಾ ಶಕ್ತಿಯನ್ನು ಕಳೆದುಕೊಂಡವರಾಗಿ, ತಮ್ಮ ಆಯುಧಗಳನ್ನು ಹಿಡಿದುಕೊಂಡು ಎಲ್ಲಾ ದಿಕ್ಕುಗಳಲ್ಲಿಯೂ ಓಡಿಹೋದರು.

ವಿಪ್ರದ್ರುತಾಃ ಶುಷ್ಕಮುಖಾ ವಿಸಂಜ್ಞಾ
ಗಾಂಡೀವಘೋಷೇಣ ಸಮಾಹತಾಶ್ಚ ।
ಇತಸ್ತತೋ ಭಗ್ನರಥಾಶ್ವನಾಗಾಃ
ಪದಾತಯಶ್ಚೈವ ಸಧಾರ್ತರಾಷ್ಟ್ರಾಃ ॥೭೩॥

ಮತ್ತೊಂದೆಡೆ ಕುದುರೆ ಆನೆ ರಥಗಳನ್ನು ಕಳೆದುಕೊಂಡಿರುವ ಪದಾತಿಗಳು ಗಾಂಡೀವಧನುಸ್ಸಿನ ಶಬ್ದದಿಂದಾಗಿ ಭಯಗೊಂಡು ಕಳೆಗುಂದಿದ ಮುಖದೊಂದಿಗೆ ವಿವೇಕಹೀನರಾಗಿ ಅಲ್ಲಲ್ಲಿ ಓಡಿಹೋದರು.

ತತೋ ರಥಾಚ್ಛಕುನಿಂ ಪಾತಯಿತ್ವಾ
ಮುದಾಽನ್ವಿತಾ ಭಾರತ ಪಾಂಡವೇಯಾಃ ।
ಶಂಖಾನ್ ಪ್ರದಧ್ಮುಃ ಸಮರೇ ಪ್ರಹೃಷ್ಟಾಃ
ಸಕೇಶವಾಃ ಸೈನಿಕಾನ್ ಹರ್ಷಯಂತಃ ॥೭೪॥

ಭರತಕುಲೋದ್ಭವನೇ! ಶಕುನಿಯನ್ನು ರಥದಿಂದ ಕೆಳಕ್ಕೆ ಬೀಳಿಸಿ, ಆನಂದ ಪೂರ್ಣರಾದ ಪಾಂಡವರು ಶ್ರೀಕೃಷ್ಣನೊಡನೆ ಸಂತೋಷದಿಂದ ಶಂಖನಾದವನ್ನು ಮಾಡಿ ತಮ್ಮ ಸೈನಿಕರಿಗೂ ಸಂತೋಷವನ್ನು ಉಂಟುಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಲ್ಯಪರ್ವಣಿ ಶಕುನಿವಧೋ ನಾಮ ಅಷ್ಟಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಶಲ್ಯವಧಪರ್ವ ॥

★ ★ ★ ★ ★

೨. ಹ್ರದಪ್ರವೇಶಪರ್ವ

ಇಪ್ಪತ್ತೊಂಬತ್ತನೆಯ ಅಧ್ಯಾಯ

ಉಳಿದ ಕೌರವಸೇನೆಯ ನಾಶ. ಸಂಜಯನನ್ನು ಬಂಧಿಸದೆ ಬಿಟ್ಟಿದ್ದು. ದುರ್ಯೋಧನನು ಸರೋವರವನ್ನು ಪ್ರವೇಶಿಸಿದ್ದು. ಯುಯುತ್ಸುವು ಅರಮನೆಯ ಸ್ತ್ರೀಯರನ್ನು ಕರೆದುಕೊಂಡು ಹಸ್ತಿನಾಪುರಕ್ಕೆ ಹೋಗಿದ್ದು.

ಸಂಜಯಃ

ತತಃ ಕ್ರುದ್ಧಾ ಮಹಾರಾಜ ಸೌಬಲಸ್ಯ ಪದಾನುಗಾಃ ।
ತ್ಯಕ್ತ್ವಾ ಜೀವಿತಮಾಕ್ರಂದೇ ಪಾಂಡವಾನ್ ಪರ್ಯವಾರಯನ್ ॥೧॥

ಸಂಜಯ– ಮಹಾರಾಜನೇ! ಅನಂತರ ಕೋಪಗೊಂಡ ಶಕುನಿಯ ಪದಾತಿಗಳು ಪ್ರಾಣವನ್ನು ಬಿಡುವವರಾಗಿ ಯುದ್ಧದಲ್ಲಿ ಪಾಂಡವರನ್ನು ಸುತ್ತುವರಿದರು.

ತಾನರ್ಜುನಃ ಪ್ರತ್ಯಗೃಹ್ಣಾದ್ ಸಹದೇವಜಯೇ ಧೃತಃ ।
ಭೀಮಸೇನಶ್ಚ ತೇಜಸ್ವೀ ಕ್ರುದ್ಧಾಶೀವಿಷದರ್ಶನಃ ॥೨॥

ಸಹದೇವನಿಗೆ ಜಯ ತಂದುಕೊಡಲು ನಿಶ್ಚಯಿಸಿಕೊಂಡಿದ್ದ ಅರ್ಜುನನು ಆ ಪದಾತಿಗಳನ್ನು ತಡೆಹಿಡಿದನು. ಕುಪಿತಗೊಂಡ ಹಾವಿನ ಹಾಗೆ ಕಾಣಿಸುವ ಭೀಮನೂ ಅವರನ್ನು ತಡೆಹಿಡಿದನು.

ಶಕ್ತ್ಯೃಷ್ಟಿಪ್ರಾಸಹಸ್ತಾನಾಂ ಸಹದೇವಂ ಜಿಘಾಂಸತಾಮ್ ।
ಸಂಕಲ್ಪಮಕರೋನ್ಮೋಘಂ ಗಾಂಡೀವೇನ ಧನಂಜಯಃ ॥೩॥

ಶಕ್ತಿ, ಋಷ್ಟಿ, ಪ್ರಾಸ ಆಯುಧಗಳನ್ನು ಕೈಯಲ್ಲಿ ಹಿಡಿದುಕೊಂಡು ಸಹದೇವನ ಮೇಲೆ ಆಕ್ರಮಣ ಮಾಡುವ ಇಚ್ಛೆಯುಳ್ಳ ಆ ಪದಾತಿಗಳ ಸಂಕಲ್ಪವನ್ನು ಅರ್ಜುನನು ತನ್ನ ಗಾಂಡೀವಧನುಸ್ಸಿನಿಂದ ಸುಳ್ಳಾಗಿ ಮಾಡಿದನು.

ಪ್ರಗೃಹೀತಾಯುಧಾನ್ ಬಾಹೂನ್ ಯೋಧಾನಾಮಭಿಧಾವತಾಮ್ ।
ಭಲ್ಲೈಶ್ಚಿಚ್ಛೇದ ಬೀಭತ್ಸುಃ ಶಿರಾಂಸ್ಯಪಿ ಭುಜಾನಪಿ ॥೪॥

ಓಡಿಕೊಂಡು ಎದುರಿಸುತ್ತಿದ್ದ ಆ ಪದಾತಿಗಳ ಕೈಗಳನ್ನು ಆಯುಧಸಮೇತವಾಗಿ ಭಲ್ಲೆಯಿಂದ ಅರ್ಜುನನು ತುಂಡರಿಸಿದನು. ಹಾಗೆಯೇ ತಲೆಗಳನ್ನೂ ಭುಜಗಳನ್ನೂ ಕತ್ತರಿಸಿದನು.

ತೇ ಹತಾಃ ಪ್ರತ್ಯಪದ್ಯಂತ ವಸುಧಾಂ ವಿಗತಾಸವಃ ।
ತ್ವರತಾ ಲೋಕವೀರೇಣ ನಿಹತಾಃ ಸವ್ಯಸಾಚಿನಾ ॥೫॥

ಲೋಕವೀರನಾದ, ಶೀಘ್ರವಾಗಿ ಯುದ್ಧಮಾಡುವ ಸವ್ಯಸಾಚಿ ಅರ್ಜುನನಿಂದ ಹತರಾದವರು ಪ್ರಾಣಗಳನ್ನು ಕಳೆದುಕೊಂಡು ಭೂಮಿಯಲ್ಲಿ ಬಿದ್ದರು.

ತತೋ ದುರ್ಯೋಧನೋ ರಾಜಾ ದೃಷ್ಟ್ವಾ ಸ್ವಬಲಸಂಕ್ಷಯಮ್ ।
ಹತಶೇಷಾನ್ ಸಮಾನೀಯ ರಥಾನ್ ನವಶತಾನ್ ವಿಭೋ ॥೬॥

ಕುಂಜರಾಂಶ್ಚ ಹಯಾಂಶ್ಚೈವ ಪಾದಾತಾಂಶ್ಚ ಪರಂತಪಃ ।
ಉವಾಚ ದುಃಖಿತಾನ್ ಸರ್ವಾನ್ ಧಾರ್ತರಾಷ್ಟ್ರೋ ಮಹೀಪತಿಃ ॥೭॥

ಅನಂತರ ರಾಜ ದುರ್ಯೋಧನನು ತನ್ನ ಸೈನ್ಯವು ಕ್ಷೀಣಿಸುವುದನ್ನು ನೋಡಿ ಉಳಿದ ಒಂಬೈನೂರು ರಥಗಳನ್ನು, ಆನೆಗಳನ್ನು, ಕುದುರೆಗಳನ್ನು ಹಾಗೂ ಪದಾತಿಗಳನ್ನು ಒಟ್ಟು ಸೇರಿಸಿದನು. ಶತ್ರುತಾಪಕನಾದ ರಾಜ ದುರ್ಯೋಧನನು ದುಃಖಿತರಾದ ಅವರನ್ನು ಕುರಿತು ಹೀಗೆ ಹೇಳುತ್ತಾನೆ.

ದುರ್ಯೋಧನಃ

ಸಮಾಸಾದ್ಯ ರಣೇ ಸರ್ವಾನ್ ಪಾಂಡವಾನ್ ಸಸುಹೃದ್ಗಣಾನ್ ।
ಪಾಂಚಾಲ್ಯಂ ಚಾಪಿ ಸಬಲಂ ಹತ್ವಾ ಶೀಘ್ರಂ ನಿವರ್ತತ ॥೮॥

ದುರ್ಯೋಧನ– ಯುದ್ಧದಲ್ಲಿ ಎಲ್ಲಾ ಪಾಂಡವರನ್ನೂ, ಅವರ ಸ್ನೇಹಿತರನ್ನೂ, ಸೈನ್ಯಸಮೇತನಾದ ಧೃಷ್ಟದ್ಯುಮ್ನನನ್ನು ಎದುರಿಸಿ, ಅವರೆಲ್ಲರನ್ನೂ ಕೊಂದು ಬೇಗನೇ ಹಿಂತಿರುಗಿ ಬನ್ನಿ.

ಸಂಜಯಃ

ತಸ್ಯೈತೇ ಶಿರಸಾ ಗೃಹ್ಯ ಶಾಸನಂ ಯುದ್ಧದುರ್ಮದಾಃ ।
ಪ್ರತ್ಯುದ್ಯಯೂ ರಣೇ ಪಾರ್ಥಾನ್ ತವ ಪುತ್ರಸ್ಯ ಶಾಸನಾತ್ ॥೯॥

ಸಂಜಯ– ಯುದ್ಧಮದವನ್ನು ಹೊಂದಿದ ಅವರೆಲ್ಲರೂ ದುರ್ಯೋಧನನ ಆ ಆಜ್ಞೆಯನ್ನು ತಲೆಬಾಗಿ ಸ್ವೀಕರಿಸಿ, ನಿನ್ನ ಮಗನ ಅಪ್ಪಣೆಯ ಪ್ರಕಾರ ಯುದ್ಧದಲ್ಲಿ ಪಾಂಡವರನ್ನು ಎದುರಿಸಿದರು.

ತಾನಭ್ಯಾಪತತಃ ಶೀಘ್ರಂ ಹತಶೇಷಾನ್ ಮಹಾರಣೇ ।
ಶರೈರಾಶೀವಿಷಾಕಾರೈಃ ಪಾಂಡವಾಃ ಸಮವಾಕಿರನ್ ॥೧೦॥

ಆ ಮಹಾಯುದ್ಧದಲ್ಲಿ ಅಳಿದುಳಿದ ಕೌರವಯೋಧರು ತಮ್ಮ ಮೇಲೆ ಆಕ್ರಮಿಸಿದಾಗ ಪಾಂಡವರು ಅವರ ಮೇಲೆ ಹಾವಿನ ಆಕಾರದ ಬಾಣಗಳನ್ನು ಶೀಘ್ರದಲ್ಲಿ ಚೆನ್ನಾಗಿ ಬೀಳಿಸಿದರು.

ತತಃ ಸೈನ್ಯಂ ಸಮರೇ ತಸ್ಮಿನ್ ಮುಹೂರ್ತೇನ ಮಹಾತ್ಮಭಿಃ ।
ಅವಿಧ್ಯತ ರಣಂ ಪ್ರಾಪ್ಯ ತ್ರಾತಾರಂ ನಾಭ್ಯವಿಂದತ ॥೧೧॥

ಆ ಯುದ್ಧದಲ್ಲಿ ಒಂದು ಮುಹೂರ್ತಕಾಲದಲ್ಲಿಯೇ ಮಹಾತ್ಮರಾದ ಪಾಂಡವರಿಂದ ಕೌರವಸೈನ್ಯವೆಲ್ಲವೂ ಪೆಟ್ಟುತಿಂದು ಜರ್ಝರಿತವಾಯಿತು. ಯುದ್ಧಕ್ಕೆ ಬಂದ ಆ ಸೈನ್ಯಕ್ಕೆ ಯಾವ ರಕ್ಷಕರೂ ಇಲ್ಲವಾದರು.

ಪಲಾಯಮಾನಂ ತು ಭಯಾನ್ನಾವತಿಷ್ಠತಿ ದಂಸಿತಮ್ ॥೧೨॥

ಯುದ್ಧಕ್ಕಾಗಿ ಕವಚಧಾರಣೆ ಮಾಡಿಕೊಂಡಿದ್ದರೂ ಭಯದಿಂದಾಗಿ ಓಡುತ್ತಿರುವ ಕೌರವಸೈನ್ಯವು ಯುದ್ಧದಲ್ಲಿ ನಿಲ್ಲಲಿಲ್ಲ.

ಅಶ್ವೈರ್ವಿಪರಿಧಾವದ್ಭಿಃ ಸೈನ್ಯೇನ ರಜಸಾ ವೃತೇ ।
ನ ಪ್ರಾಜ್ಞಾಯಂತ ಸಮರೇ ದಿಶಶ್ಚ ಪ್ರದಿಶಸ್ತಥಾ ॥೧೩॥

ದಿಕ್ಕಾಪಾಲಾಗಿ ಓಡುತ್ತಿದ್ದ ಕುದುರೆಗಳು ಹಾಗೂ ಸೈನ್ಯದಿಂದಾಗಿ ಎದ್ದ ಧೂಳು ಎಲ್ಲವನ್ನೂ ಮರೆಮಾಚಿತು. ಅದರಿಂದಾಗಿ ದಿಕ್ಕು-ವಿದಿಕ್ಕುಗಳು ಯಾರಿಗೂ ಗೋಚರಿಸಲಿಲ್ಲ.

ತತಸ್ತು ಪಾಂಡವಾನೀಕಾನ್ನಿಃಸೃತ್ಯ ಬಹವೋ ಜನಾಃ ।
ಅಭ್ಯಘ್ನನ್ ತಾವಕಾನ್ ಯುದ್ಧೇ ಮುಹೂರ್ತಾದಿವ ಭಾರತ ॥೧೪॥

ಭರತಕುಲೋದ್ಭವನೇ! ಅನಂತರ ಅನೇಕ ಯೋಧರು ಪಾಂಡವರ ಸೈನ್ಯದಿಂದ ಹೊರಬಂದು ನಿನ್ನವರನ್ನು ಮುಹೂರ್ತಮಾತ್ರದಲ್ಲಿ ಹೊಡೆದುರುಳಿಸಿದರು.

ತತೋ ನಿಃಶೇಷಮಭವತ್ ತವ ಸೈನ್ಯಂ ವಿಶಾಂಪತೇ ॥೧೫॥

ರಾಜನೇ! ಅದರಿಂದ ನಿನ್ನ ಸೈನ್ಯವು ಸಂಪೂರ್ಣವಾಗಿ ನಾಶವಾಯಿತು.

ಅಕ್ಷೋಹಿಣ್ಯಃ ಸಮೇತಾಸ್ತು ತವ ಪುತ್ರಸ್ಯ ಭಾರತ ।
ಏಕಾದಶ ಹತಾ ಯುದ್ಧೇ ತಾಃ ಪ್ರಭೋ ಪಾಂಡುಸೃಂಜಯೈಃ ॥೧೬॥

ಭಾರತನೇ! ಮಹಾಯುದ್ಧದಲ್ಲಿ ಒಟ್ಟುಸೇರಿದ ನಿನ್ನ ಮಗನ ಕಡೆಯ ಹನ್ನೊಂದು ಅಕ್ಷೌಹಿಣೀ ಸೈನ್ಯವನ್ನು ಪಾಂಡವರು ಮತ್ತು ಸೃಂಜಯರು ನಾಶಮಾಡಿದರು.

ತೇಷು ರಾಜಸಹಸ್ರೇಷು ತಾವಕೇಷು ಮಹಾತ್ಮಸು ।
ಏಕೋ ದುರ್ಯೋಧನೋ ರಾಜನ್ನದೃಶ್ಯತ ಭೃಶಂ ಕ್ಷತಃ ॥೧೭॥

ರಾಜನೇ! ನಿನ್ನ ಪಕ್ಷದಲ್ಲಿದ್ದ ಮಹಾತ್ಮರಾದ ರಾಜರೆಲ್ಲರಲ್ಲಿ ದುರ್ಯೋಧನನೊಬ್ಬನು ಉಳಿದವನಾಗಿ ಬಹಳವಾಗಿ ಗಾಯಗೊಂಡು ಕಾಣಿಸಿಕೊಂಡನು.

ತತೋ ವೀಕ್ಷ್ಯ ದಿಶಃ ಸರ್ವಾ ದೃಷ್ಟ್ವಾ ಶೂನ್ಯಾಂ ಚ ಮೇದಿನೀಮ್ ।
ವಿಹೀನಃ ಸರ್ವಯೋಧೈಶ್ಚ ಪಾಂಡವಾನ್ ವೀಕ್ಷ್ಯ ಸಂಯುಗೇ ॥೧೮॥

ಮುದಿತಾನ್ ಸರ್ವಸಿದ್ಧಾರ್ಥಾನ್ ನರ್ದಮಾನಾನ್ ಸಮಂತತಃ ।
ಬಾಣಶಬ್ದರವಾಂಶ್ಚೈವ ಶ್ರುತ್ವಾ ತೇಷಾಂ ಮಹಾತ್ಮನಾಮ್ ॥೧೯॥

ದುರ್ಯೋಧನೋ ಮಹಾರಾಜ ಕಲ್ಮಶೀನಾಭಿಸಂವೃತಃ ।
ಅಪಯಾನೇ ಮನಶ್ಚಕ್ರೇ ವಿಹೀನಬಲವಾಹನಃ ॥೨೦॥

ಎಲ್ಲಾ ಕಡೆಯೂ ನೋಡಿದ ದುರ್ಯೋಧನನು ಸಮಸ್ತ ಭೂಮಿಯನ್ನು ತನ್ನ ಮಟ್ಟಿಗೆ ಶೂನ್ಯವನ್ನಾಗಿ ನೋಡಿದನು. ದುರ್ಯೋಧನನು ತನ್ನೆಲ್ಲಾ ಯೋಧರನ್ನು ಕಳೆದುಕೊಂಡಿದ್ದನು. ಯುದ್ಧದಲ್ಲಿ ಪಾಂಡವರು ಜಯವನ್ನು ಪಡೆದು ರಾಜ್ಯವನ್ನು ಹೊಂದಿದವರಾಗಿ ಸಂತುಷ್ಟರಾಗಿದ್ದಾರೆ. ಎಲ್ಲೆಡೆಯೂ ಜಯದ ಘೋಷ ಕೇಳಿಸುತ್ತಿತ್ತು. ಮಹಾತ್ಮರಾದ ಪಾಂಡವರ ಬಾಣಗಳ ಶಬ್ದವೂ ಕೇಳಿಸುತ್ತಿತ್ತು. ಇವೆಲ್ಲವನ್ನೂ ಕೇಳಿಸಿಕೊಂಡ ದುರ್ಯೋಧನನು ಬಹಳವಾಗಿ ದುಃಖವನ್ನು ಅನುಭವಿಸಿದನು. ಮಹಾರಾಜ, ಸೈನ್ಯ-ವಾಹನಗಳನ್ನು ಕಳೆದುಕೊಂಡ ದುರ್ಯೋಧನನು ತಪ್ಪಿಸಿಕೊಂಡು ಹೋಗುವ ನಿರ್ಧಾರವನ್ನು ಮಾಡಿದನು.

ಧೃತರಾಷ್ಟ್ರಃ

ನಿಹತೇ ಮಾಮಕೇ ಸೈನ್ಯೇ ನಿಃಶೇಷೇ ಶಿಬಿರೇ ಕೃತೇ ।
ಪಾಂಡವಾನಾಂ ಬಲಂ ಸೂತ ಕಿಂ ಶೇಷಮಭವತ್ ತದಾ ॥೨೧॥

ಧೃತರಾಷ್ಟ್ರ– ಸಂಜಯ! ನನ್ನ ಕಡೆಯ ಸೈನ್ಯವು ನಿಃಶೇಷವಾಗಿ ನಾಶವಾದಾಗ ಮತ್ತು ನಮ್ಮವರ ಶಿಬಿರವೆಲ್ಲವೂ ಬರಿದಾದಾಗ ಪಾಂಡವರ ಕಡೆಯಲ್ಲಿ ಎಷ್ಟು ಸೈನ್ಯವು ಉಳಿದಿತ್ತು?

ಏತನ್ಮೇ ಪೃಚ್ಛತೋ ಬ್ರೂಹಿ ಕುಶಲೋ ಹ್ಯಸಿ ಸಂಜಯ ॥೨೨॥

ಸಂಜಯನೇ! ಇದನ್ನು ನೀನು ಹೇಳು. ಏಕೆಂದರೆ ನೀನು ಬಹಳ ನಿಪುಣನಾಗಿರುವಿ.

ಯಶ್ಚ ದುರ್ಯೋಧನೋ ಮಂದಃ ಕೃತವಾಂಸ್ತನಯೋ ಮಮ ।
ಬಲಕ್ಷಯಂ ತದಾ ದೃಷ್ಟ್ವಾಽಕುಶಲಃ ಪೃಥಿವೀಪತಿಃ ॥೨೩॥

ತನ್ನ ಸೈನ್ಯವೆಲ್ಲವೂ ನಾಶವಾಗಿದ್ದುದನ್ನು ನೋಡಿ ಅಕುಶಲನಾದ ಹಾಗೂ ಮೂಢನಾದ ನನ್ನ ಮಗ ದುರ್ಯೋಧನನು ಏನನ್ನು ಮಾಡಿದನು?

ಸಂಜಯಃ

ದ್ವೇ ಸಹಸ್ರೇ ರಥಾನಾಂ ತು ಸಪ್ತ ನಾಗಶತಾನಿ ಚ ।
ಪಂಚ ಚಾಶ್ವಸಹಸ್ರಾಣಿ ಪತ್ತೀನಾಮಯುತಂ ತಥಾ ॥೨೪॥

ಏತಚ್ಛೇಷಮಭೂದ್ ರಾಜನ್ ಪಾಂಡವಾನಾಂ ಬಲಂ ತದಾ ।
ಪರಿಗೃಹ್ಯ ಹಿ ಯದ್ಯುದ್ಧೇ ಧೃಷ್ಟದ್ಯುಮ್ನೋ ವ್ಯವಸ್ಥಿತಃ ॥೨೫॥

ಸಂಜಯ– ರಾಜನೇ! ಪಾಂಡವರ ಬಳಿಯಲ್ಲಿ ಆಗ ಎರಡು ಸಾವಿರ ರಥಗಳು, ಏಳು ನೂರು ಆನೆಗಳು, ಐದುಸಾವಿರ ಕುದುರೆಗಳು ಮತ್ತು ಹತ್ತುಸಾವಿರ ಪದಾತಿಗಳು ಇರುವ ಸೈನ್ಯವು ಉಳಿದಿತ್ತು. ಇವಿಷ್ಟನ್ನು ಧೃಷ್ಟದ್ಯುಮ್ನನು ತನ್ನ ಹತೋಟಿಯಲ್ಲಿ ಇಟ್ಟುಕೊಂಡಿದ್ದ.

ಏಕಾಕೀ ಭರತಶ್ರೇಷ್ಠ ತತೋ ದುರ್ಯೋಧನೋ ನೃಪಃ ।
ನಾಪಶ್ಯತ್ ಸಮರೇ ಕಂಚಿತ್ ಸಹಾಯಂ ರಥಿನಾಂ ವರಃ ॥೨೬॥

ಅನಂತರ ದುರ್ಯೋಧನನು ಒಬ್ಬಂಟಿಯಾಗಿ ಇದ್ದನು. ಯುದ್ಧದಲ್ಲಿ ಅವನಿಗೆ ಸಹಾಯ ಮಾಡುವವರು ಯಾರೂ ಕಾಣಿಸಲಿಲ್ಲ.

ನರ್ದಮಾನಾನ್ ಪರಾನ್ ದೃಷ್ಟ್ವಾ ಸ್ವಬಲಸ್ಯ ಚ ಸಂಕ್ಷಯಮ್ ।
ದೃಷ್ಟ್ವಾ ಭರತಶಾರ್ದೂಲ ಕಶ್ಮಲೇನಾಭಿಸಂವೃತಃ ॥೨೭॥

ಭರತಕುಲಶ್ರೇಷ್ಠನೇ! ಜಯದ ಕೇಕೆಯನ್ನು ಹಾಕುತ್ತಿರುವ ಪಾಂಡವರನ್ನು ಮತ್ತು ನಾಶವಾಗಿರುವ ತನ್ನ ಸೈನ್ಯವನ್ನು ನೋಡಿದ ದುರ್ಯೋಧನನು ಬಹಳ ದುಃಖಕ್ಕೊಳಗಾದನು.

ಹತಂ ಸ್ವಹಯಮುತ್ಸೃಜ್ಯ ಪ್ರೋತ್ಪ್ಲುತ್ಯ ಪ್ರಾದ್ರವದ್ ಭಯಾತ್ ॥೨೮॥

ತನ್ನ ಕುದುರೆಯೂ ಸತ್ತಿರುವುದರಿಂದ ಅದನ್ನು ಬಿಟ್ಟು ತಾನು ಹಾರಿ ಭಯದಿಂದ ಜೋರಾಗಿ ಓಡಿದನು.

ಏಕಾದಶ ಚಮೂಭರ್ತಾ ಪುತ್ರೋ ದುರ್ಯೋಧನಸ್ತವ ।
ಗದಾಮಾದಾಯ ತೇಜಸ್ವೀ ಪದಾತಿಃ ಪ್ರಸ್ಥಿತೋ ಹ್ರದಮ್ ॥೨೯॥

ಒಂದುಕಾಲದಲ್ಲಿ ಹನ್ನೊಂದು ಅಕ್ಷೌಹಿಣಿಸೇನೆಗೆ ಒಡೆಯನಾದ, ನಿನ್ನ ಮಗ ತೇಜಸ್ವಿಯಾದ ದುರ್ಯೋಧನನು ಕೈಯಲ್ಲಿ ಗದೆಯನ್ನು ಹಿಡಿದುಕೊಂಡು ಬರಿಗಾಲಿನಿಂದ ಸರೋವರದೆಡೆಗೆ ನಡೆಯತೊಡಗಿದನು.

ನಾತಿದೂರಂ ತತೋ ಗತ್ವಾ ಪದ್ಭ್ಯಾಮೇವ ಜನಾಧಿಪಃ ।
ಸಸ್ಮಾರ ವಚನಂ ಕ್ಷತ್ತುಃ ಧರ್ಮಶೀಲಸ್ಯ ಧೀಮತಃ ॥೩೦॥

ರಾಜನಾದ ದುರ್ಯೋಧನನು ಕಾಲುಗಳಿಂದಲೇ ಸ್ವಲ್ಪದೂರ ನಡೆದು, ಬುದ್ಧಿವಂತನಾದ ಧಾರ್ಮಿಕ ವಿದುರನ ಮಾತನ್ನು ಸ್ಮರಿಸಿಕೊಳ್ಳುತ್ತಾನೆ.

ದುರ್ಯೋಧನಃ

ಇದಂ ನೂನಂ ಮಹಾಪ್ರಾಜ್ಞೋ ವಿದುರೋ ದೃಷ್ಟವಾನ್ ಪುರಾ ।
ಮಹದ್ವ್ಯಸನಮಸ್ಮಾಕಂ ಕ್ಷತ್ರಿಯಾಣಾಂ ಚ ಸರ್ವಶಃ ॥೩೧॥

ದುರ್ಯೋಧನ– ನಮಗೆ ಬಂದಿರುವ ಈ ದೊಡ್ಡದಾದ ದುಃಖ, ಕ್ಷತ್ರಿಯರ ನಾಶ ಇವೆಲ್ಲವನ್ನೂ ಮಹಾಜ್ಞಾನಿಯಾದ ವಿದುರನು ಮೊದಲೇ ನೋಡಿದ್ದ (ತಿಳಿದಿದ್ದ).

ಸಂಜಯಃ

ಏವಂ ವಿಚಿಂತಯಾನಶ್ಚ ಪ್ರವಿವೇಶ ಹ್ರದಂ ನೃಪ ।
ದುಃಖಸಂತಪ್ತಹೃದಯೋ ದೃಷ್ಟ್ವಾ ರಾಜನ್ ಬಲಕ್ಷಯಮ್ ॥೩೨॥

ಸಂಜಯ– ರಾಜನೇ! ಹೀಗೆ ಚಿಂತಿಸುತ್ತಾ ತನ್ನ ಸೈನ್ಯಬಲವೆಲ್ಲಾ ನಾಶವಾಗಿದ್ದುದನ್ನು ನೋಡಿ, ಮನಸ್ಸಿನಲ್ಲಿ ಬಹಳವಾದ ದುಃಖದ ತಾಪವನ್ನು ಅನುಭವಿಸುತ್ತಾ ಸರೋವರವನ್ನು ಪ್ರವೇಶಿಸಿದನು.

ದಶೈಕಾಕ್ಷೌಹಿಣೀಭರ್ತಾ ಸ್ವಯಂ ದುರ್ಯೋಧನೋಽಪಿ ಸನ್ ।
ಪ್ರಾಪ್ತವಾನ್ ವ್ಯಸನಂ ತೀವ್ರಂ ದೈವಂ ಹಿ ಬಲವತ್ತರಮ್ ॥೩೩॥

ಹನ್ನೊಂದು ಅಕ್ಷೌಹಿಣಿ ಸೈನ್ಯವನ್ನು ಸ್ವಂತಕ್ಕೆ ಹೊಂದಿದ್ದ ದುರ್ಯೋಧನನೂ ಬಹಳವಾದ ದುಃಖವನ್ನು ಪಡೆದನು. ವಿಧಿಯೇ ತುಂಬ ಬಲಶಾಲಿಯಾದದ್ದು. ಇದು ಪ್ರಸಿದ್ಧ.

ಪಾಂಡವಾಃ ತು ಮಹಾರಾಜ ಧೃಷ್ಟದ್ಯುಮ್ನಪುರೋಗಮಾಃ ।
ಅಭ್ಯಧಾವಂತ ಸಂಕ್ರುದ್ಧಾಃ ತವ ರಾಜನ್ ಬಲಂ ಪ್ರತಿ ॥೩೪॥

ಮಹಾರಾಜನೇ! ಧೃಷ್ಟದ್ಯುಮ್ನ ಮೊದಲಾದ ಪಾಂಡವರು ಕುಪಿತರಾಗಿ ನಿನ್ನ ಕಡೆಯ ಸೈನ್ಯದ ಮೇಲೆ ಆಕ್ರಮಣ ಮಾಡಿದರು.

ಶಕ್ತ್ಯೃಷ್ಟಿಪ್ರಾಸಹಸ್ತಾನಾಂ ಯೋಧಾನಾಮಭಿಗರ್ಜತಾಮ್ ।
ಸಂಕಲ್ಪಮಕರೋನ್ಮೋಘಂ ಗಾಂಡೀವೇನ ಧನಂಜಯಃ ॥೩೫॥

ಶಕ್ತಿ, ಋಷ್ಟಿ, ಪ್ರಾಸ ಮೊದಲಾದ ಆಯುಧಗಳನ್ನು ಧರಿಸಿಕೊಂಡು ಜೋರಾಗಿ ಗರ್ಜನೆ ಮಾಡುತ್ತಿದ್ದ ಕೌರವಯೋಧರ ಸಂಕಲ್ಪವನ್ನು ಅರ್ಜುನನು ತನ್ನ ಗಾಂಡೀವದಿಂದ ಸುಳ್ಳಾಗಿ ಮಾಡಿದನು.

ತಾನ್ ಹತ್ವಾ ನಿಶಿತೈರ್ಬಾಣೈಃ ಸಾಮಾತ್ಯಾನ್ ಸಹ ಬಂಧುಭಿಃ ।
ರಥೇ ಶ್ವೇತಹಯೇ ತಿಷ್ಠನ್ನರ್ಜುನೋ ಬಹ್ವಶೋಭತ ॥೩೬॥

ಆ ಕೌರವಯೋಧರನ್ನು, ಅವರ ಮುಖಂಡರು ಮತ್ತು ಬಂಧುಗಳನ್ನೂ ಹರಿತವಾದ ಬಾಣಗಳಿಂದ ಕೊಂದು, ಬೆಳ್ಳಗಿನ ಕುದುರೆಗಳುಳ್ಳ ತನ್ನ ರಥದಲ್ಲಿ ಅರ್ಜುನನು ಚೆನ್ನಾಗಿ ಪ್ರಕಾಶಿಸುತ್ತಿದ್ದನು.

ಸುಬಲಸ್ಯ ಹತೇ ಪುತ್ರೇ ಸವಾಜಿರಥಕುಂಜರೇ ।
ಮಹಾವನಮಿವ ಚ್ಛಿನ್ನಮಭವತ್ ತಾವಕಂ ಬಲಮ್ ॥೩೭॥

ಶಕುನಿಯು ತನ್ನ ಅಶ್ವಸೈನ್ಯ, ಗಜಸೈನ್ಯ ಮತ್ತು ರಥಸೈನ್ಯದೊಡನೆ ನಾಶವಾದಾಗ ನಿನ್ನ ಸೈನ್ಯವೆಲ್ಲವೂ ದೊಡ್ಡ ಕಾಡು ಕಡಿದು ಬಿದ್ದಂತೆ ಛಿದ್ರಗೊಂಡಿತು.

ಅನೇಕಶತಸಾಹಸ್ರೇ ಬಲೇ ದುರ್ಯೋಧನಾರ್ಜಿತೇ ।
ನಾನ್ಯೋ ಮಹಾರಥೋ ರಾಜನ್ ಜೀವಮಾನೋऽಪ್ಯದೃಶ್ಯತ ॥೩೮॥

ಅನೇಕ ನೂರುಸಾವಿರದಷ್ಟು ಸೈನ್ಯವನ್ನು ದುರ್ಯೋಧನನು ಒಟ್ಟುಮಾಡಿದ್ದ. ರಾಜನೇ! ಒಬ್ಬ ಮಹಾರಥನೂ ಈಗ ಬದುಕಿದ್ದು ಕಾಣಿಸುವುದಿಲ್ಲ.

ದ್ರೋಣಪುತ್ರಾದೃತೇ ವೀರಾನ್ ತಥೈವ ಕೃತವರ್ಮಣಃ ।
ಕೃಪಾಚ್ಚ ಗೌತಮಾದ್ ರಾಜನ್ ಪಾರ್ಥಿವಾಚ್ಚ ತವಾತ್ಮಜಾತ್ ॥೩೯॥

ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರನ್ನು ಹಾಗೂ ನಿನ್ನ ಮಗ ದುರ್ಯೋಧನನನ್ನು ಬಿಟ್ಟು ಯಾರೂ ಕೂಡ ಮಹಾರಥರು ಬದುಕುಳಿಯಲಿಲ್ಲ.

ಧೃಷ್ಟದ್ಯುಮ್ನಸ್ತು ಮಾಂ ದೃಷ್ಟ್ವಾ ಹಸನ್ ಸಾತ್ಯಕಿಮಬ್ರವೀತ್ ॥೪೦॥

ಧೃಷ್ಟದ್ಯುಮ್ನನು ನನ್ನನ್ನು ನೋಡಿ ನಗುತ್ತಾ ಸಾತ್ಯಕಿಗೆ ಹೇಳಿದನು

ಧೃಷ್ಟದ್ಯುಮ್ನಃ

ಕಿಮನೇನ ಗೃಹೀತೇನ ನಾನೇನಾರ್ಥೋಽಸ್ತಿ ಜೀವತಾ ॥೪೧॥

ಧೃಷ್ಟದ್ಯುಮ್ನ- ಇವನನ್ನು ಹಿಡಿದು ಏನು ಪ್ರಯೋಜನ? ಇವನು ಬದುಕಿದ್ದರೂ ಪ್ರಯೋಜನವಿಲ್ಲ.

ಸಂಜಯಃ

ಧೃಷ್ಟದ್ಯುಮ್ನವಚಃ ಶ್ರುತ್ವಾ ಶಿನೇರ್ನಪ್ತಾ ಮಹಾರಥಃ ।
ಉದ್ಯಮ್ಯ ನಿಶಿತಂ ಖಡ್ಗಂ ಹಂತುಂ ಮಾಮುದ್ಯತಸ್ತದಾ ॥೪೨॥

ಸಂಜಯ- ಧೃಷ್ಟದ್ಯುಮ್ನನ ಮಾತನ್ನು ಕೇಳಿ ಮಹಾರಥನಾದ ಸಾತ್ಯಕಿಯು ಹರಿತವಾದ ಖಡ್ಗವನ್ನು ಮೇಲೆತ್ತಿ ನನ್ನನ್ನು ಕೊಲ್ಲಲು ಉದ್ಯುಕ್ತನಾದನು.

ತದಾಽಽಗಮ್ಯ ಮಹಾಪ್ರಾಜ್ಞಃ ಕೃಷ್ಣದ್ವೈಪಾಯನೋಽಬ್ರವೀತ್ ॥೪೩॥

ಆಗ ಬಂದ ಮಹಾಜ್ಞಾನಿಯಾದ ವೇದವ್ಯಾಸದೇವರು ಹೀಗೆ ಹೇಳಿದರು.

ವ್ಯಾಸಃ

ಮುಚ್ಯತಾಂ ಸಂಜಯೋ ಜೀವನ್ ನ ಹಂತವ್ಯಃ ಕಥಂಚನ ॥೪೪॥

ವ್ಯಾಸಃ- ಸಂಜಯನನ್ನು ಜೀವಸಹಿತವಾಗಿ ಬಿಟ್ಟುಬಿಡಿ. ಅವನನ್ನು ಯಾವ ರೀತಿಯಲ್ಲಿಯೂ ಕೊಲ್ಲಬೇಡಿ.

ಪಾಂಡವಾಃ ತು ಮಹಾರಾಜ ಧೃಷ್ಟದ್ಯುಮ್ನಪುರೋಗಮಾಃ ।
ಅಭ್ಯಧಾವಂತ ಸಂಕ್ರುದ್ಧಾಃ ತವ ರಾಜನ್ ಬಲಂ ಪ್ರತಿ ॥೩೪॥

ಮಹಾರಾಜನೇ! ಧೃಷ್ಟದ್ಯುಮ್ನ ಮೊದಲಾದ ಪಾಂಡವರು ಕುಪಿತರಾಗಿ ನಿನ್ನ ಕಡೆಯ ಸೈನ್ಯದ ಮೇಲೆ ಆಕ್ರಮಣ ಮಾಡಿದರು.

ಶಕ್ತ್ಯೃಷ್ಟಿಪ್ರಾಸಹಸ್ತಾನಾಂ ಯೋಧಾನಾಮಭಿಗರ್ಜತಾಮ್ ।
ಸಂಕಲ್ಪಮಕರೋನ್ಮೋಘಂ ಗಾಂಡೀವೇನ ಧನಂಜಯಃ ॥೩೫॥

ಶಕ್ತಿ, ಋಷ್ಟಿ ಪ್ರಾಸ ಮೊದಲಾದ ಆಯುಧಗಳನ್ನು ಧರಿಸಿಕೊಂಡು ಜೋರಾಗಿ ಗರ್ಜನೆ ಮಾಡುತ್ತಿದ್ದ ಕೌರವಯೋಧರ ಸಂಕಲ್ಪವನ್ನು ಅರ್ಜುನನು ತನ್ನ ಗಾಂಡೀವದಿಂದ ಸುಳ್ಳಾಗಿ ಮಾಡಿದನು.

ತಾನ್ ಹತ್ವಾ ನಿಶಿತೈರ್ಬಾಣೈಃ ಸಾಮಾತ್ಯಾನ್ ಸಹ ಬಂಧುಭಿಃ ।
ರಥೇ ಶ್ವೇತಹಯೇ ತಿಷ್ಠನ್ನರ್ಜುನೋ ಬಹ್ವಶೋಭತ ॥೩೬॥

ಆ ಕೌರವಯೋಧರನ್ನು, ಅವರ ಮುಖಂಡರು ಮತ್ತು ಬಂಧುಗಳನ್ನೂ ಹರಿತವಾದ ಬಾಣಗಳಿಂದ ಕೊಂದು, ಬೆಳ್ಳಗಿನ ಕುದುರೆಗಳುಳ್ಳ ತನ್ನ ರಥದಲ್ಲಿ ಅರ್ಜುನನು ಚೆನ್ನಾಗಿ ಪ್ರಕಾಶಿಸುತ್ತಿದ್ದನು.

ಸುಬಲಸ್ಯ ಹತೇ ಪುತ್ರೇ ಸವಾಜಿರಥಕುಂಜರೇ ।
ಮಹಾವನಮಿವ ಚ್ಛಿನ್ನಮಭವತ್ ತಾವಕಂ ಬಲಮ್ ॥೩೭॥

ಶಕುನಿಯು ತನ್ನ ಅಶ್ವಸೈನ್ಯ, ಗಜಸೈನ್ಯ ಮತ್ತು ರಥಸೈನ್ಯದೊಡನೆ ನಾಶವಾದಾಗ ನಿನ್ನ ಸೈನ್ಯವೆಲ್ಲವೂ ದೊಡ್ಡ ಕಾಡು ಕಡಿದು ಬಿದ್ದಂತೆ ಛಿದ್ರಗೊಂಡಿತು.

ಅನೇಕಶತಸಾಹಸ್ರೇ ಬಲೇ ದುರ್ಯೋಧನಾರ್ಜಿತೇ ।
ನಾನ್ಯೋ ಮಹಾರಥೋ ರಾಜನ್ ಜೀವಮಾನೋऽಪ್ಯದೃಶ್ಯತ ॥೩೮॥

ಅನೇಕ ನೂರುಸಾವಿರದಷ್ಟು ಸೈನ್ಯವನ್ನು ದುರ್ಯೋಧನನು ಒಟ್ಟುಮಾಡಿದ್ದ. ರಾಜನೇ! ಒಬ್ಬ ಮಹಾರಥನೂ ಈಗ ಬದುಕಿದ್ದು ಕಾಣಿಸುವುದಿಲ್ಲ.

ದ್ರೋಣಪುತ್ರಾದೃತೇ ವೀರಾನ್ ತಥೈವ ಕೃತವರ್ಮಣಃ ।
ಕೃಪಾಚ್ಚ ಗೌತಮಾದ್ ರಾಜನ್ ಪಾರ್ಥಿವಾಚ್ಚ ತವಾತ್ಮಜಾತ್ ॥೩೯॥

ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರನ್ನು ಹಾಗೂ ನಿನ್ನ ಮಗ ದುರ್ಯೋಧನನನ್ನು ಬಿಟ್ಟು ಯಾರೂ ಕೂಡ ಮಹಾರಥರು ಬದುಕುಳಿಯಲಿಲ್ಲ.

ಧೃಷ್ಟದ್ಯುಮ್ನಸ್ತು ಮಾಂ ದೃಷ್ಟ್ವಾ ಹಸನ್ ಸಾತ್ಯಕಿಮಬ್ರವೀತ್ ॥೪೦॥

ಧೃಷ್ಟದ್ಯುಮ್ನನು ನನ್ನನ್ನು ನೋಡಿ ನಗುತ್ತಾ ಸಾತ್ಯಕಿಗೆ ಹೇಳಿದನು

ಧೃಷ್ಟದ್ಯುಮ್ನಃ

ಕಿಮನೇನ ಗೃಹೀತೇನ ನಾನೇನಾರ್ಥೋಽಸ್ತಿ ಜೀವತಾ ॥೪೧॥

ಧೃಷ್ಟದ್ಯುಮ್ನ– ಇವನನ್ನು ಹಿಡಿದು ಏನು ಪ್ರಯೋಜನ? ಇವನು ಬದುಕಿದ್ದರೂ ಪ್ರಯೋಜನವಿಲ್ಲ.

ಸಂಜಯಃ

ಧೃಷ್ಟದ್ಯುಮ್ನವಚಃ ಶ್ರುತ್ವಾ ಶಿನೇರ್ನಪ್ತಾ ಮಹಾರಥಃ ।
ಉದ್ಯಮ್ಯ ನಿಶಿತಂ ಖಡ್ಗಂ ಹಂತುಂ ಮಾಮುದ್ಯತಸ್ತದಾ ॥೪೨॥

ಸಂಜಯ– ಧೃಷ್ಟದ್ಯುಮ್ನನ ಮಾತನ್ನು ಕೇಳಿ ಮಹಾರಥನಾದ ಸಾತ್ಯಕಿಯು ಹರಿತವಾದ ಖಡ್ಗವನ್ನು ಮೇಲೆತ್ತಿ ನನ್ನನ್ನು ಕೊಲ್ಲಲು ಉದ್ಯುಕ್ತನಾದನು.

ತದಾಽಽಗಮ್ಯ ಮಹಾಪ್ರಾಜ್ಞಃ ಕೃಷ್ಣದ್ವೈಪಾಯನೋಽಬ್ರವೀತ್ ॥೪೩॥

ಆಗ ಬಂದ ಮಹಾಜ್ಞಾನಿಯಾದ ವೇದವ್ಯಾಸದೇವರು ಹೀಗೆ ಹೇಳಿದರು.

ವ್ಯಾಸಃ

ಮುಚ್ಯತಾಂ ಸಂಜಯೋ ಜೀವನ್ ನ ಹಂತವ್ಯಃ ಕಥಂಚನ ॥೪೪॥

ವ್ಯಾಸಃ– ಸಂಜಯನನ್ನು ಜೀವಸಹಿತವಾಗಿ ಬಿಟ್ಟುಬಿಡಿ. ಅವನನ್ನು ಯಾವ ರೀತಿಯಲ್ಲಿಯೂ ಕೊಲ್ಲಬೇಡಿ.

ಸಂಜಯಃ

ದ್ವೈಪಾಯನವಚಃ ಶ್ರುತ್ವಾ ಶಿನೇರ್ನಪ್ತಾ ಕೃತಾಂಜಲಿಃ ।
ತತೋ ಮಾಮಬ್ರವೀನ್ಮಾಕ್ತ್ವಾ ಸ್ವಸ್ತಿ ಸಂಜಯ ಸಾಧಯ ॥೪೫॥

ಸಂಜಯ– ವೇದವ್ಯಾಸರ ಮಾತನ್ನು ಕೇಳಿ ಸಾತ್ಯಕಿಯು ಕೈಗಳನ್ನು ಜೋಡಿಸಿದನು. ನಂತರ ನನಗೆ ಹೇಳಿದ- ಸಂಜಯನೇ! ನಿನಗೆ ಮಂಗಳವಾಗಲಿ. ಮಂಗಳವನ್ನೇ ಸಾಧಿಸು.

ಅನುಜ್ಞಾತೋ ಹ್ಯಹಂ ತೇನ ನ್ಯಸ್ತವರ್ಮಾ ನಿರಾಯುಧಃ ।
ಪ್ರಾತಿಷ್ಠಂ ಯೇನ ನಗರಂ ಸಾಯಾಹ್ನೇ ರುಧಿರೋಕ್ಷಿತಃ ॥೪೬॥

ಅವನ ಆಜ್ಞೆಯನ್ನು ಪಡೆದು ಕವಚ ಮತ್ತು ಆಯುಧಗಳನ್ನು ಕಳಚಿಟ್ಟು ರಕ್ತದಿಂದ ಲೇಪಿತನಾಗಿ ನಾನು ಸಾಯಂಕಾಲದಲ್ಲಿ ಪಟ್ಟಣಕ್ಕೆ ಹೊರಟೆನು.

ಕ್ರೋಶಮಾತ್ರಮಪಕ್ರಾಂತಂ ಗದಾಪಾಣಿಮವಸ್ಥಿತಮ್ ।
ಏಕಂ ದುರ್ಯೋಧನಂ ರಾಜನ್ನಪಶ್ಯಂ ಭೃಶವಿಕ್ಷತಮ್ ॥೪೭॥

ರಾಜನೇ! ಒಂದು ಕ್ರೋಶದಷ್ಟು ದೂರ ಬಂದಾಗ ಕೈಯಲ್ಲಿ ಬಹಳವಾಗಿ ಗಾಯಗೊಂಡ ಹಾಗೂ ಗದೆಯನ್ನು ಹಿಡಿದ ದುರ್ಯೋಧನನನ್ನು ನೋಡಿದೆನು.

ಸ ತು ಮಾಮಶ್ರುಪೂರ್ಣಾಕ್ಷೋ ನಾಶಕ್ನೋದಭಿವೀಕ್ಷಿತುಮ್ ।
ಉಪಪ್ರೈಕ್ಷತ ಮಾಂ ದೃಷ್ಟ್ವಾ ತದಾ ದೀನಮುಪಸ್ಥಿತಮ್ ॥೪೮॥

ಕಣ್ಣುಗಳಲ್ಲಿ ನೀರುತುಂಬಿಕೊಂಡಿದ್ದ ದುರ್ಯೋಧನನಿಗೆ ನನ್ನನ್ನು ನೋಡಲೂ ಆಗಲಿಲ್ಲ. ದುಃಖಿತನಾಗಿದ್ದ ನನ್ನನ್ನು ಹತ್ತಿರಕ್ಕೆ ಬಂದು ನೋಡಿದನು.

ತಂ ಚಾಹಮನುಶೋಚಾನೋ ದೃಷ್ಟ್ವೈಕಾಕಿನಮಾಹವೇ ।
ಮುಹೂರ್ತಂ ನಾಶಕಂ ವಕ್ತುಂ ಕಿಂಚಿದ್ ದುಃಖಿಪರಿಪ್ಲುತಃ ॥೪೯॥

ಯುದ್ಧದಲ್ಲಿ ಏಕಾಕಿಯಾಗಿ ಇದ್ದ ದುರ್ಯೋಧನನನ್ನು ನೋಡಿ ನಾನು ಕೂಡ ಬಹಳ ದುಃಖಪಟ್ಟೆನು. ದುಃಖದಿಂದ ತುಂಬಿದ ನಾನು ಒಂದು ಮುಹೂರ್ತದಷ್ಟು ಕಾಲ ಏನು ಮಾತನಾಡಲೂ ಶಕ್ತನಾಗಲಿಲ್ಲ.

ಯಸ್ಯ ಮೂರ್ಧಾಭಿಷಿಕ್ತಾನಾಂ ಸಹಸ್ರಂ ಮಣಿಮೌಲಿನಾಮ್ ।
ಆಹೃತ್ಯ ಚ ಕರಂ ಸರ್ವಂ ಸ್ವಸ್ಯ ವೈ ವಶಮಾಗತಮ್ ॥೫೦॥

ಕಿರೀಟದಲ್ಲಿ ಮಣಿಗಳನ್ನು ಧರಿಸಿರುವ ಪಟ್ಟಾಭಿಷಿಕ್ತ ಸಾವಿರಾರು ರಾಜರು ಯಾರಿಗೆ ಕರವನ್ನು ಕೊಟ್ಟು ಯಾರ ವಶರಾಗಿದ್ದರೋ ಅಂತಹ ದುರ್ಯೋಧನನಿಗೆ ಯಾರಿಗೂ ಬರದ ಆಪತ್ತು ಬಂದಿದೆ. ಆದ್ದರಿಂದ ವಿಧಿಯೇ ಬಲಶಾಲಿಯಾದುದು.

ಚತುಃಸಾಗರಪರ್ಯಂತಾ ಪೃಥಿವೀ ರತ್ನಭೂಷಿತಾ ।
ಕರ್ಣೇನೈಕೇನ ಯಸ್ಯಾರ್ಥೇ ಕರಮಾಹಾರಿತಾ ಪುರಾ ॥೫೧॥

ಯಸ್ಯಾಜ್ಞಾ ಪರರಾಷ್ಟ್ರೇಷು ಕರ್ಣೇನೈವ ಪ್ರಸಾರಿತಾ ।
ನಾಭವದ್ ಯಸ್ಯ ಶಸ್ತ್ರೇಷು ಖೇದೋ ರಾಜ್ಞಃ ಪ್ರಶಾಸತಃ ॥೫೨॥

ಹಿಂದೆ ಕರ್ಣನೊಬ್ಬನೇ ನಾಲ್ಕು ಸಾಗರಗಳ ತನಕ ವ್ಯಾಪ್ತವಾದ ರತ್ನತುಂಬಿದ ಭೂಭಾಗವನ್ನೇ ಗೆದ್ದು, ಕಪ್ಪವಾಗಿ ಈ ದುರ್ಯೋಧನನಿಗೆ ಒಪ್ಪಿಸಿದ್ದನು. ಇವನ ಶಾಸನಗಳನ್ನು ಕರ್ಣನೇ ಪರದೇಶಗಳಲ್ಲಿ ಚಲಾವಣೆಗೆ ತರುತ್ತಿದ್ದ. ರಾಜ್ಯಭಾರ ಮಾಡುತ್ತಿದ್ದ ಈ ದುರ್ಯೋಧನನಿಗೆ ಶಸ್ತ್ರಗಳನ್ನು ಪ್ರಯೋಗಿಸುವ ಕ್ಲೇಶವೇ ಉಂಟಾಗಿರಲಿಲ್ಲ.

ಆಸೀನೋ ಹಸ್ತಿನಾಪುರೇ ಕ್ಷೇಮಂ ರಾಜ್ಯಮಕಂಟಕಮ್ ।
ಅನ್ವಪಾಲಯದೈಶ್ವರ್ಯಾತ್ ಕುಬೇರಮಪಿ ನಾಸ್ಮರತ್ ॥೫೩॥

ಹಸ್ತಿನಪುರದಲ್ಲಿಯೇ ಇದ್ದುಕೊಂಡು ಯಾವುದೇ ತೊಂದರೆಗಳಿಲ್ಲದೆ ಕ್ಷೇಮದಿಂದ ರಾಜ್ಯಭಾರವನ್ನು ಮಾಡುತ್ತಿದ್ದ. ಇವನ ಐಶ್ವರ್ಯವನ್ನು ಕಂಡು ಐಶ್ವರ್ಯಾಧಿಪತಿ ಕುಬೇರನನ್ನೂ ಎಲ್ಲರೂ ಮರೆತರು.

ಭವನಾದ್ ಭವನಂ ರಾಜನ್ ಪ್ರಯಾತುಃ ಪೃಥಿವೀಪತೇ ।
ದೇವಾಲಯಪ್ರವೇಶೇ ಚ ಪಂಥಾ ಯಸ್ಯ ಹಿರಣ್ಮಯಃ ॥೫೪॥

ರಾಜನೇ! ದುರ್ಯೋಧನನು ಮನೆಯೊಳಗಿರುವ ದೇವಮಂದಿರಕ್ಕೆ ಹೋಗುವ ಸಂದರ್ಭದಲ್ಲಿ ಅರಮನೆಯ ಒಳಗಿರುವ ಒಂದು ಭವನದಿಂದ ಇನ್ನೊಂದು ಭವನಕ್ಕೆ ಹೋಗುವ ದಾರಿ ಬಂಗಾರಮಯವಾಗಿತ್ತು.

ಪತಾಕಾವೃತಸೂರ್ಯಾಂಶುಃ ತೋರಣೋಚ್ಛ್ರಿತಶೋಭನಃ ।
ಪ್ರಯಾಣೇ ಪೃಥಿವೀಭರ್ತುರ್ಧನ್ಯಾನಾಮಭವನ್ ಗೃಹಾಃ ॥೫೫॥

ಅವನು ಸಂಚರಿಸುತ್ತಿರುವಾಗ ದಾರಿಯಲ್ಲಿ ಸಜ್ಜನರ ಮನೆಗಳನ್ನು ಪತಾಕೆಗಳಿಂದ ಅಲಂಕರಿಸಲಾಗುತ್ತಿತ್ತು. ಪತಾಕೆಗಳಿಂದಾಗಿ ಸೂರ್ಯಕಿರಣಗಳು ಮರೆಯಾಗುತ್ತಿದ್ದವು. ತೋರಣಗಳನ್ನು ಕಟ್ಟಿದ್ದರಿಂದ ಮಾಂಗಲ್ಯವು ಶೋಭಿಸುತ್ತಿತ್ತು.

ಆರುಹ್ಯೈರಾವತಪ್ರಖ್ಯಂ ನಾಗಮಿಂದ್ರಸಮೋ ಬಲೀ ।
ವಿಭೂತ್ಯಾ ಸುಮಹತ್ಯಾ ಯಃ ಪ್ರಯಾತಿ ಪೃಥಿವೀಪತಿಃ ॥೫೬॥

ಬಲದಲ್ಲಿ ದೇವೇಂದ್ರನಿಗೆ ಸಮಾನನಾದ ದುರ್ಯೋಧನನು ಐರಾವತಸದೃಶವಾದ ಆನೆಯನ್ನು ಹತ್ತಿಕೊಂಡು, ಬಹಳವಾದ ಕಾಂತಿಯಿಂದ ಕೂಡಿಕೊಂಡು ಸಂಚರಿಸುತ್ತಿದ್ದನು.

ತಂ ಭೃಶಕ್ಷತಮಿಂದ್ರಾಭಂ ಪದ್ಭ್ಯಾಮೇವ ಧರಾತಳೇ ।
ತಿಷ್ಠಂತಮೇಕಂ ದೃಷ್ಟ್ವಾ ತು ಮಮಾಭೂತ್ ಕ್ಲೇಶ ಉತ್ತಮಃ ॥೫೭॥

ಇಂತಹ ದುರ್ಯೋಧನನು ಬಹಳವಾಗಿ ಗಾಯಗೊಂಡು ನೆಲದಲ್ಲಿ ಬರಿಗಾಲಲ್ಲಿ ನಿಂತಿರುವುದನ್ನು ಕಂಡು ನನಗೆ ಬಹಳ ದುಃಖ ಉಂಟಾಯಿತು.

ತಸ್ಯ ಚೈವಂವಿಧಸ್ಯಾಸ್ಯ ಜಗನ್ನಾಥಸ್ಯ ಭೂಪತೇಃ ।
ವಿಪದಪ್ರತಿಮಾಭೂದ್ಯಾ ಬಲೀಯಾನ್ ವಿಧಿರೇವ ಹಿ ॥೫೮॥

ಹಿಂದೆ ಹೇಳಿದ ರೀತಿಯಲ್ಲಿ ಜಗತ್ತಿಗೇನೇ ಒಡೆಯನಾದ ದುರ್ಯೋಧನನಿಗೆ ಇಂಥ ಮಹತ್ತರವಾದ ಆಪತ್ತು ಬಂದಿದೆ. ಆದ್ದರಿಂದ ಅದೃಷ್ಟವೇ ಎಲ್ಲಕ್ಕಿಂತಲೂ ಬಲಶಾಲಿಯಾದದ್ದು.

ತತೋಽಸ್ಯ ತದಹಂ ಸರ್ವಮುಕ್ತವಾನ್ ನೃಪತೇಸ್ತದಾ ।
ದ್ವೈಪಾಯನಪ್ರಸಾದಾಚ್ಚ ಜೀವತೋ ಮೋಕ್ಷಮಾಹವೇ ॥೫೯॥

ಅನಂತರ ಆಗ ನಾನು, ಯುದ್ಧದಲ್ಲಿ ವೇದವ್ಯಾಸರ ಅನುಗ್ರಹದಿಂದಾಗಿ ನಾನು ಬದುಕಿರುವ ವಿಷಯವನ್ನೆಲ್ಲ ಅವನಿಗೆ ಹೇಳಿದೆ.

ಸ ಮುಹೂರ್ತಮಿವ ಧ್ಯಾತ್ವಾ ಪ್ರತಿಲಭ್ಯ ಚ ಚೇತನಾಮ್ ।
ಭ್ರಾತೄಂಶ್ಚ ಸರ್ವಸೈನ್ಯಾಂಶ್ಚ ಪರ್ಯಪೃಚ್ಛತ ಮಾಂ ತತಃ ॥೬೦॥

ದುರ್ಯೋಧನನು ಸ್ವಲ್ಪಕಾಲ ಆಲೋಚಿಸಿ, ಚೈತನ್ಯವನ್ನು ಹೊಂದಿ ತನ್ನ ಸಹೋದರರ ಬಗ್ಗೆ ಮತ್ತು ತನ್ನ ಎಲ್ಲಾ ಸೈನ್ಯದ ಬಗ್ಗೆ ನನ್ನನ್ನು ಕೇಳಿದನು.

ತಸ್ಮೈ ತದಹಮಾಚಕ್ಷೇ ಸರ್ವಂ ಪ್ರತ್ಯಕ್ಷದರ್ಶಿವಾನ್ ।
ಭ್ರಾತೄಣಾಂ ನಿಧನಂ ಸರ್ವಂ ಸೈನ್ಯಾನಾಂ ಚ ನಿಪಾತನಮ್ ॥೬೧॥

ಎಲ್ಲಾ ಘಟನೆಗಳನ್ನು ಪ್ರತ್ಯಕ್ಷವಾಗಿ ನೋಡಿದ್ದ ನಾನು ಎಲ್ಲವನ್ನೂ ಅವನಿಗೆ ಹೇಳಿದೆ. ಅವನ ಸಹೋದರರ ಮರಣ ಮತ್ತು ಎಲ್ಲಾ ಸೈನ್ಯಗಳ ನಾಶವನ್ನೂ ಹೇಳಿದೆ.

ತ್ರಯಃ ಕಿಲ ರಥಾಃ ಶಿಷ್ಟಾಃ ತಾವಕಾನಾಂ ನರಾಧಿಪ ।
ಇತಿ ಪ್ರಸ್ಥಾನಕಾಲೇ ಮಾಂ ಕೃಷ್ಣದ್ವೈಪಾಯನೋಽಬ್ರವೀತ್ ॥೬೨॥

ರಾಜನೇ! ನಿನ್ನ ಕಡೆಯ ಮೂರು ಮಹಾರಥರು ಉಳಿದುಕೊಂಡಿದ್ದಾರೆ ಎಂದು ವೇದವ್ಯಾಸರು ಹೊರಡುವ ಸಂದರ್ಭದಲ್ಲಿ ನನಗೆ ಹೇಳಿದ್ದರು.

ಸ ದೀರ್ಘಮಿವ ನಿಃಶ್ವಸ್ಯ ಸಂಪ್ರೇಕ್ಷ್ಯ ಚ ಪುನಃ ಪುನಃ ।
ಅಂಸೇ ಮಾಂ ಪಾಣಿನಾ ಗೃಹ್ಯ ಪುತ್ರಸ್ತೇ ಪರ್ಯಭಾಷತ ॥೬೩॥

ಇದನ್ನು ಕೇಳಿದ ನಿನ್ನ ಮಗ ದುರ್ಯೋಧನನು ದೀರ್ಘವಾಗಿ ಉಸಿರುಬಿಡುತ್ತಾ ಮತ್ತೆ ಮತ್ತೆ ನನ್ನನ್ನು ನೋಡುತ್ತಾ ನನ್ನ ಕೈಯನ್ನು ಹಿಡಿದುಕೊಂಡು ಹೀಗೆ ಹೇಳಿದನು.

ದುರ್ಯೋಧನಃ

ತ್ವದನ್ಯೋ ನೇಹ ಸಂಗ್ರಾಮೇ ಕಶ್ಚಿಜ್ಜೀವತಿ ಸಂಜಯ ।
ದ್ವಿತೀಯಂ ನೈವ ಪಶ್ಯಾಮಿ ಸಸಹಾಯಾಶ್ಚ ಪಾಂಡವಾಃ ॥೬೪॥

ದುರ್ಯೋಧನ– ಸಂಜಯನೇ! ನಿನ್ನನ್ನು ಬಿಟ್ಟು ಬೇರೆ ಯಾರೂ ಈ ಯುದ್ಧದಲ್ಲಿ ಉಳಿದಿಲ್ಲ. ನೀನಲ್ಲದೆ ಎರಡನೆಯ ಬೇರೊಬ್ಬ ವ್ಯಕ್ತಿಯನ್ನು ನಾನು ನೋಡುತ್ತಿಲ್ಲ. ಆದರೆ ಪಾಂಡವರಿಗೆ ಸಹಾಯಕರು ತುಂಬಾ ಜನರು ಇದ್ದಾರೆ.

ಬ್ರೂಯಾಃ ಸಂಜಯ ರಾಜಾನಂ ಪ್ರಜ್ಞಾಚಕ್ಷುಷಮೀಶ್ವರಮ್ ।
ದುರ್ಯೋಧನಸ್ತವ ಪುತ್ರಃ ಪ್ರವಿಷ್ಟೋ ಹ್ರದಮಿತ್ಯುತ ॥೬೫॥

ಸಂಜಯ! ಜ್ಞಾನಚಕ್ಷುವಾದ, ನಮ್ಮೆಲ್ಲರ ಸ್ವಾಮಿಯಾದ ರಾಜಧೃತರಾಷ್ಟ್ರನಿಗೆ ಹೇಳು, ನಿನ್ನ ಮಗನಾದ ದುರ್ಯೋಧನನು ಸರೋವರವನ್ನು ಪ್ರವೇಶಿಸಿದ್ದಾನೆ ಎಂದು.

ಸುಹೃದ್ಭಿಸ್ತಾವಶೈರ್ಹೀನಃ ಪುತ್ರೈರ್ಭ್ರಾತೃಭಿರೇವ ಚ ।
ಪಾಂಡವೈಶ್ಚ ಹೃತೇ ರಾಜ್ಯೇ ಕೋ ನು ಜೀವೇತ ಮಾದೃಶಃ ॥೬೬॥

ಅಂತಹ ಸ್ನೇಹಿತರೂ ಇಲ್ಲ, ಮಕ್ಕಳೂ ಇಲ್ಲ, ಸಹೋದರರೂ ಇಲ್ಲ. ಹೀಗಿರುವಾಗ ಪಾಂಡವರು ನನ್ನ ರಾಜ್ಯವನ್ನು ಕಸಿದುಕೊಂಡಿದ್ದಾರೆ. ನನ್ನಂತಹವರು ಹೇಗೆ ತಾನೇ ಜೀವದಿಂದಿರಲು ಸಾಧ್ಯ?

ಆಚಕ್ಷೇಥಾಃ ಸರ್ವಮಿದಂ ಮಾಂ ಚ ಮುಕ್ತಂ ಮಹಾಭಯಾತ್ ।
ಅಸ್ಮಿಂಸ್ತೋಯಹ್ರದೇ ಸುಪ್ತಂ ಜೀವಂತಂ ಭೃಶವಿಕ್ಷತಮ್ ॥೬೭॥

ಈ ಎಲ್ಲವನ್ನೂ ಧೃತರಾಷ್ಟ್ರನಿಗೆ ಹೇಳು. ನಾನು ಮರಣಭಯದಿಂದ ಮುಕ್ತನಾಗಿರುವುದನ್ನೂ ಹೇಳು. ಬಹಳವಾಗಿ ಗಾಯಗೊಂಡಿರುವ ನಾನು ಈ ಸರೋವರದಲ್ಲಿ ಬದುಕಿದ್ದು ನಿದ್ದೆಮಾಡುತ್ತಿರುವೆನು ಎಂದೂ ಹೇಳು.

ಸಂಜಯಃ

ಏವಮುಕ್ತ್ವಾ ಮಹಾರಾಜ ಪ್ರಾವಿಶತ್ ತಂ ಹ್ರದಂ ನೃಪ ।
ಅಸ್ತಂಭಯತ ತೋಯಂ ಚ ಮಾಯಯಾ ಮನುಜಾಧಿಪಃ ॥೬೮॥

ಸಂಜಯ– ರಾಜನೇ! ಹೀಗೆ ಹೇಳಿ ದುರ್ಯೋಧನನು ಸರೋವರವನ್ನು ಪ್ರವೇಶಿಸುತ್ತಾನೆ. ಜನನಾಯಕನಾದ ಆತನು ಮಾಯಾವಿದ್ಯೆಯಿಂದ ಜಲಸ್ತಂಭನವನ್ನು ಮಾಡಿಕೊಂಡನು.

ತಸ್ಮಿನ್ ಹ್ರದಂ ಪ್ರವಿಷ್ಟೇ ತು ತ್ರೀನ್ ರಥಾನ್ ಶ್ರಾಂತವಾಹನಾನ್ ।
ಅಪಶ್ಯಂ ಸಹಿತಾನೇಕಃ ತಂ ದೇಶಂ ಸಮುಪೇಯುಷಃ ॥೬೯॥

ದುರ್ಯೋಧನನು ಸರೋವರದಲ್ಲಿ ಇಳಿದಮೇಲೆ ಏಕಾಕಿಯಾದ ನಾನು ಆ ಜಾಗಕ್ಕೆ ಒಟ್ಟಾಗಿ ಬರುತ್ತಿದ್ದ ಮೂರು ಮಹಾರಥವೀರರನ್ನು ಕಂಡೆನು. ಅವರ ವಾಹನದ ಕುದುರೆಗಳೂ ಆಯಾಸಗೊಂಡಿದ್ದವು.

ಕೃಪಂ ಶಾರದ್ವತಂ ವೀರಂ ದ್ರೌಣಿಂ ಚ ರಥಿನಾಂ ವರಮ್ ।
ಭೋಜಂ ಚ ಕೃತವರ್ಮಾಣಂ ಸಹಿತಾನ್ ಶರವಿಕ್ಷತಾನ್ ॥೭೦॥

ಶರದ್ವಾನ್ ವಂಶದ ವೀರ ಕೃಪ, ರಥಿಕರಲ್ಲಿಯೇ ಶ್ರೇಷ್ಠನಾದ ಅಶ್ವತ್ಥಾಮ, ಭೋಜವಂಶದ ಕೃತವರ್ಮ- ಇವರೇ ಆ ಮೂವರು ವೀರರು. ಅವರೆಲ್ಲರೂ ಬಾಣಗಳಿಂದ ಬಹಳ ಗಾಯವನ್ನು ಹೊಂದಿದ್ದರು.

ತೇ ಸರ್ವೇ ಮಾಮಭಿಪ್ರೇಕ್ಷ್ಯ ತೂರ್ಣಮಶ್ವಾನಚೋದಯನ್ ।
ಉಪೇತ್ಯ ಚೈವ ಮಾಮೂಚುರ್ದಿಷ್ಟ್ಯಾ ಜೀವಸಿ ಸಂಜಯ ॥೭೧॥

ಅವರೆಲ್ಲರೂ ನನ್ನನ್ನು ನೋಡಿ ಕೂಡಲೇ ತಮ್ಮ ಕುದುರೆಗಳನ್ನು ನನ್ನೆಡೆಗೆ ನಡೆಸಿದರು. ನನ್ನ ಹತ್ತಿರ ಬಂದು, ಸಂಜಯನೇ! ಅದೃಷ್ಟದಿಂದ ನೀನು ಬದುಕಿ ಉಳಿದಿದ್ದಿ ಎಂದು ಹೇಳಿದರು.

ಅಪೃಚ್ಛಂಶ್ಚೈವ ಮಾಂ ಸರ್ವೇ ಪುತ್ರಂ ತವ ಜನಾಧಿಪಮ್ ।
ಕಚ್ಚಿದ್ ದುರ್ಯೋಧನೋ ರಾಜಾ ಸ ನೋ ಜೀವತಿ ಸಂಜಯ ॥೭೨॥

ಅವರೆಲ್ಲರೂ ನನ್ನಲ್ಲಿ ನಿನ್ನ ಮಗನ ಬಗ್ಗೆ ಪ್ರಶ್ನಿಸಿದರು. ಸಂಜಯನೇ! ನಮ್ಮ ರಾಜನಾದ ದುರ್ಯೋಧನನು ಬದುಕಿದ್ದಾನೆಯಾ? ಎಂದು.

ಆಖ್ಯಾತವಾನಹಂ ತೇಭ್ಯಃ ತದಾ ಕುಶಲಿನಂ ನೃಪಮ್ ।
ತಚ್ಚೈವ ಸರ್ವಮಾಚಕ್ಷೇ ಯನ್ಮಾಂ ದುರ್ಯೋಧನೋಽಬ್ರವೀತ್ ॥೭೩॥

ಆಗ ನಾನು ರಾಜನು ಸೌಖ್ಯವಾಗಿದ್ದಾನೆ ಎಂದು ಹೇಳಿದೆನು. ಮತ್ತು ದುರ್ಯೋಧನನು ನನ್ನಲ್ಲಿ ಏನೆಲ್ಲಾ ಹೇಳಿದ್ದನೋ ಅದೆಲ್ಲವನ್ನೂ ಅವರಿಗೆ ಹೇಳಿದೆನು.

ಹ್ರದಂ ಚೈವಾಚಚಕ್ಷೇಽಹಂ ಯಂ ಪ್ರವಿಷ್ಟೋ ಜನಾಧಿಪಃ ॥೭೪॥

ರಾಜನು ಯಾವ ಸರೋವರದೊಳಗೆ ಇದ್ದನೋ ಆ ಸರೋವರವನ್ನೂ ಅವರಿಗೆ ತಿಳಿಸಿದೆ.

ಅಶ್ವತ್ಥಾಮಾ ತು ತದ್ ರಾಜನ್ ನಿಶಮ್ಯ ವಚನಂ ಮಮ ।
ಹ್ರದಪ್ರವೇಶಂ ಶ್ರುತ್ವಾ ಚ ಕರುಣಂ ಪರ್ಯದೇವಯತ್ ॥೭೫॥

ಅಶ್ವತ್ಥಾಮನು ನಾನು ಹೇಳಿದ ಮಾತನ್ನು ಕೇಳಿ, ರಾಜನು ಸರೋವರದಲ್ಲಿ ಇದ್ದಾನೆ ಎಂಬುದನ್ನು ತಿಳಿದು ಕರುಣೆಯಿಂದ ಬಹಳ ಮರುಕಪಟ್ಟನು.

ಅಹೋ ಧಿಕ್ ಸ ನ ಜಾನಾತಿ ಜೀವತೋಽಸ್ಮಾನ್ ನರಾಧಿಪಃ ।
ಪರ್ಯಾಪ್ತಾ ಹಿ ವಯಂ ತೇನ ಸಹ ಯೋಧಯಿತುಂ ಪರಾನ್ ॥೭೬॥

ಅಯ್ಯೋ! ಧಿಕ್ಕಾರವಿರಲಿ! ನಾವು ಬದುಕಿರುವ ವಿಷಯವನ್ನು ರಾಜನು ತಿಳಿದಿಲ್ಲ. ಅವನೊಡನೆ ಸೇರಿಕೊಂಡು ಶತ್ರುಗಳ ವಿರುದ್ಧ ಹೋರಾಟ ಮುಂದುವರಿಸಲು ನಾವು ಸಾಕಾಗುತ್ತಿದ್ದೆವು.

ತೇ ತು ತತ್ರ ಚಿರಂ ಕಾಲಂ ವಿಲಪ್ಯ ಚ ಮಹಾರಥಾಃ ।
ಪ್ರಾದ್ರವನ್ ರಥಿನಾಂ ಶ್ರೇಷ್ಠಾ ದೃಷ್ಟ್ವಾ ಪಾಂಡುಸುತಾನ್ ರಣೇ ॥

ಆ ಮೂವರು ಅಲ್ಲಿ ಬಹಳ ಹೊತ್ತಿನವರೆಗೆ ಅಳುತ್ತಿದ್ದರು. ರಣರಂಗದಲ್ಲಿ ಪಾಂಡವರನ್ನು ನೋಡಿದೊಡನೆ ಓಡಿದರು.

ತೇ ತು ಮಾಂ ರಥಮಾರೋಪ್ಯ ಕೃಪಸ್ಯ ತು ಪರಿಕ್ಷತಮ್ ।
ಸೇನಾನಿವೇಶಮಾಜಗ್ಮುರ್ಹತಶೇಷಾಸ್ತ್ರಯೋ ರಥಾಃ ॥೭೮॥

ಅವರು ನನ್ನನ್ನೂ ರಥದಲ್ಲಿ ಹತ್ತಿಸಿಕೊಂಡು ಕೃಪನ ಮುರಿದುಹೋದ ಸೇನಾಶಿಬಿರಕ್ಕೆ ಕರೆದೊಯ್ದರು. ಆ ಮೂರು ಮಹಾರಥರ ಅಸ್ತ್ರಗಳೂ ನಷ್ಟವಾಗಿದ್ದವು.

ತತ್ರ ಗುಲ್ಮಾಃ ಪರಿಕ್ಷಿಪ್ತಾಃ ಸೂರ್ಯೇ ಚಾಸ್ತಮಿತೇ ಸತಿ ।
ಸರ್ವೇ ವಿಚುಕ್ರುಶುಃ ಶ್ರುತ್ವಾ ಪುತ್ರಾಣಾಂ ತವ ಸಂಕ್ಷಯಮ್ ॥೭೯॥

ಅಲ್ಲಿ ಸೂರ್ಯಾಸ್ತವಾಗಲು ಪಹರೆದಾರರು ಗೊಂದಲಕ್ಕೊಳಗಾದರು. ನಿನ್ನ ಮಗನ ಸಮಾಚಾರವನ್ನು ಕೇಳಿ ಎಲ್ಲರೂ ದುಃಖದಿಂದ ಬೊಬ್ಬಿಟ್ಟರು.

ತತೋ ವೃದ್ಧಾ ಮಹಾರಾಜ ಯೋಷಿತಾಂ ರಕ್ಷಣೇ ರತಾಃ ।
ರಾಜದಾರಾನುಪಾದಾಯ ಪ್ರಯಯುರ್ನಗರಂ ಪ್ರತಿ ॥೮೦॥

ಮಹಾರಾಜನೇ! ವೃದ್ಧರಾದವರು ಸ್ತ್ರೀಯರ ರಕ್ಷಣೆಯಲ್ಲಿ ತೊಡಗಿದರು. ರಾಣಿಯರನ್ನು ಕರೆದುಕೊಂಡು ನಗರಗಳಿಗೆ ತೆರಳಿದರು.

ತತ್ರ ಏಕ್ರೋಶತೀನಾಂ ಚ ರುದಂತೀನಾಂ ಚ ನಿಃಸ್ವನಃ ।
ಪ್ರಾದುರಾಸೀನ್ಮಹಾಘೋರಃ ಶ್ರುತ್ವಾ ತಂ ಬಲಸಂಕ್ಷಯಮ್ ॥೮೧॥

ದುರ್ಯೋಧನನ ಬಲದ ಅವಸಾನವನ್ನು ಕೇಳಿ ಎಲ್ಲರೂ ದುಃಖದಿಂದ ಜೋರಾಗಿ ಅಳುತ್ತಿದ್ದರು. ಆ ಅಳುವಿನ ಧ್ವನಿಯು ಕರ್ಣಕಠೋರವಾಗಿತ್ತು.

ತತಸ್ತು ಯೋಷಿತೋ ರಾಜನ್ ಕ್ರಂದಂತ್ಯೋ ವೈ ಮುಹುರ್ಮುಹುಃ ।
ಕುರರ್ಯ ಇವ ಶಬ್ದೇನ ನಾದಯಂತ್ಯೋ ಮಹೀತಳಮ್ ॥೮೨॥

ರಾಜನೇ! ರಾಜಸ್ತ್ರೀಯರು ಮತ್ತೆ ಮತ್ತೆ ಅಳುತ್ತಾ, ಕುರರಪಕ್ಷಿಗಳಂತೆ ಭೂಮಿಯಲ್ಲೆಲ್ಲ ಶಬ್ದವನ್ನು ಹರಡಿದರು.

ಆಜಘ್ನುಃ ಕರಜೈಶ್ಚಾಪಿ ಪಾಣಿಭಿಶ್ಚ ಶಿರಾಂಸ್ಯುತ ।
ಲುಲುವುಶ್ಚ ತದಾ ಕೇಶಾನ್ ಕ್ರೋಶಂತ್ಯಸ್ತ್ರ ತತ್ರ ಹ ॥೮೩॥

ದುಃಖದಿಂದಾಗಿ ತಮ್ಮ ತಲೆಯನ್ನು ಉಗುರುಗಳಿಂದ ಕೆರೆದುಕೊಂಡರು. ಕೈಗಳಿಂದ ತಲೆಗೆ ಹೊಡೆದುಕೊಂಡರು. ಜೋರಾಗಿ ಬೊಬ್ಬಿಡುತ್ತಾ ತಮ್ಮ ತಲೆಗೂದಲನ್ನು ಕೀಳುತ್ತಿದ್ದರು.

ಹಾಹಾಕಾರಂ ವಿಕುರ್ವಾಣಾ ವಿನಿಘ್ನಂತ್ಯ ಉರಾಂಸಿ ಚ ।
ಕ್ರೋಶಂತ್ಯಸ್ತ್ರ ರುರುದುಃ ಕ್ರಂದಮಾನಾ ವಿಶಾಂಪತೇ ॥೮೪॥

ಹಾಹಾಕಾರವನ್ನು ಮಾಡುತ್ತಾ ತಮ್ಮ ಎದೆಗೆ ಬಡಿದುಕೊಳ್ಳುತ್ತಿದ್ದರು. ರಾಜನೇ! ಕಿರುಚುತ್ತಾ, ಬೊಬ್ಬಿಡುತ್ತಾ ಅಳುತ್ತಿದ್ದರು.

ತತೋ ದುರ್ಯೋಧನಾಮಾತ್ಯಾಃ ಸಾಸ್ರಕಂಠಾ ಭೃಶಾತುರಾಃ ।
ರಾಜದಾರಾನುಪಾದಾಯ ಪ್ರಯಯುರ್ನಗರಂ ಪ್ರತಿ ॥೮೫॥

ಅನಂತರ ದುರ್ಯೋಧನನ ಮಂತ್ರಿಗಳು ದುಃಖದಿಂದ ಗಂಟಲುಕಟ್ಟಿದವರಾಗಿ, ಬಹಳವಾಗಿ ಅಳುತ್ತಿದ್ದರು. ಅವರು ರಾಜಸ್ತ್ರೀಯರನ್ನು ಕರೆದುಕೊಂಡು ನಗರಕ್ಕೆ ಹೋದರು.

ವೇತ್ರಝರ್ಝರಹಸ್ತಾಶ್ಚ ದ್ವಾರಾಧ್ಯಕ್ಷಾ ವಿಶಾಂಪತೇ ।
ಶಯನೀಯಾನಿ ಶುಭ್ರಾಣಿ ಮೃದ್ವಾಸ್ತರಣವಂತಿ ಚ ॥೮೬॥

ಸಮಾದಾಯ ಯಯುಸ್ತೂರ್ಣಂ ನಗರಂ ಜನರಕ್ಷಿಣಃ ॥೮೭॥

ರಾಜನೇ! ದ್ವಾರಪಾಲಕರು ಚಾಟಿಯನ್ನು ಕೈಯಿಂದ ಬೀಸುತ್ತಾ ಶುಭ್ರವಾದ ಹಾಸಿಗೆ ಮತ್ತು ಮೃದುವಾದ ಹೊದಿಕೆಗಳನ್ನು ತೆಗೆದುಕೊಂಡು ನಗರದ ಕಡೆಗೆ ಬೇಗನೇ ನಡೆದರು.

ಆಸ್ಥಾಯಾಶ್ವತರೀಯುಕ್ತಾನ್ ಸ್ಯಂದನಾನಪರೇ ಪುನಃ ।
ಸ್ವಾನ್ ಸ್ವಾನ್ ದಾರಾನುಪಾದಾಯ ಪ್ರಯಯುರ್ನಗರಂ ಪ್ರತಿ ॥೮೮॥

ಮತ್ತೆ ಕೆಲವರು ಒಳ್ಳೆಯ ಕುದುರೆಗಳುಳ್ಳ ರಥಗಳನ್ನು ಹತ್ತಿ, ತಮ್ಮ ತಮ್ಮ ಪತ್ನಿಯರನ್ನು ಕರೆದುಕೊಂಡು ನಗರದ ಕಡೆಗೆ ಹೋದರು.

ಅದೃಷ್ಟಪೂರ್ವಾ ಯಾ ನಾರ್ಯೋ ಭಾಸ್ಕರೇಣಾಪಿ ವೇಶ್ಮಸು ।
ದದೃಶುಸ್ತಾ ಮಹಾರಾಜ ಜನಾ ಯಾಂತೀಃ ಪುರಂ ಪ್ರತಿ ॥೮೯॥

ಯಾವ ರಾಜಸ್ತ್ರೀಯರು ಸೂರ್ಯನ ದರ್ಶನವನ್ನೂ ಮಾಡದೆ ಬಹಳ ಜತನದಿಂದ ಅರಮನೆಯೊಳಗೆಯೇ ಇರುತ್ತಿದ್ದರೋ ಅಂತಹವರು ಪಟ್ಟಣಕ್ಕೆ ಹೋಗುತ್ತಿರುವುದನ್ನು ಎಲ್ಲರೂ ನೋಡಿದರು.

ತಾಃ ಸ್ತ್ರಿಯೋ ಭರತಶ್ರೇಷ್ಠ ಸೌಕುಮಾರ್ಯಸಮನ್ವಿತಾಃ ।
ಪ್ರಯಯುರ್ನಗರಂ ತೂರ್ಣಂ ಹತಸ್ವಜನಬಾಂಧವಾಃ ॥೯೦॥

ಭರತೋತ್ತಮನೇ! ಬಹಳ ಕೋಮಲತೆಯನ್ನು ಹೊಂದಿದ ಆ ಸ್ತ್ರೀಯರು ತಮ್ಮ ಸ್ವಂತದ ಬಾಂಧವರನ್ನು ಕಳೆದುಕೊಂಡು ನಗರಕ್ಕೆ ಬೇಗನೇ ಹೋದರು.

ಆಗೋಪಾಲಾವಿಪಾಲೇಭ್ಯೋ ದ್ರವಂತೋ ನಗರಂ ಪ್ರತಿ ।
ಯಯುರ್ಮನುಷ್ಯಾಃ ಸಂಭ್ರಾಂತಾ ಭೀಮಸೇನಭಯಾರ್ದಿತಾಃ ॥೯೧॥

ಗೋವುಗಳನ್ನು ಮೇಯಿಸುವ, ಆಡುಗಳನ್ನು ಮೇಯಿಸುವ ಜನರವರೆಗೆ ಎಲ್ಲರೂ ನಗರದ ಕಡೆಗೆ ಓಡುತ್ತಿದ್ದರು. ಅವರೆಲ್ಲರೂ ಭೀಮಸೇನನಿಗೆ ಭಯಪಟ್ಟು ಕಾರ್ಯಾಕಾರ್ಯವಿವೇಕವನ್ನು ಕಳೆದುಕೊಂಡರು.

ಅಪಿ ಚೈಷಾಂ ಭಯಂ ತೀವ್ರಂ ಪಾರ್ಥೇಭ್ಯೋಽಭೂತ್ ಸುದಾರುಣಮ್ ।
ಪ್ರೇಕ್ಷಮಾಣಸ್ತದಾಽನ್ಯೋನ್ಯಮಧಾವನ್ ನಗರಂ ಪ್ರತಿ ॥೯೨॥

ಪಾಂಡವರಿಂದ ಅವರಿಗೆ ಬಹಳದುಃಖದಾಯಕವಾದ ಭಯವು ಉಂಟಾಯಿತು. ಒಬ್ಬರಿಗೊಬ್ಬರು ಮುಖವನ್ನು ನೋಡುತ್ತಾ ನಗರದ ಕಡೆಗೆ ಧಾವಿಸಿದರು.

ತಸ್ಮಿಂಸ್ತದಾ ವರ್ತಮಾನೇ ವಿಪ್ಲವೇ ಭೃಶದಾರುಣೇ ।
ಯುಯುತ್ಸುಃ ಶೋಕಸಮ್ಮೂಢಃ ಪ್ರಾಪ್ತಕಾಲಮಚಿಂತಯನ್ ॥೯೩॥

ಹೀಗೆ ಆಗ ಭಯಂಕರವಾದ ಗೊಂದಲವು ಏರ್ಪಡುತ್ತಿರಲು ಶೋಕದಿಂದ ಮೂಢನಾದ ಯುಯುತ್ಸುವು ಕಾಲಕ್ಕೆ ಅನುಗುಣವಾಗಿ ಆಲೋಚಿಸಿದನು.

ಯುಯುತ್ಸುಃ

ಜಿತೋ ದುರ್ಯೋಧನಃ ಸಂಖೇ ಪಾಂಡವೈರ್ಭೀಮವಿಕ್ರಮೈಃ ।
ಏಕಾದಶಚಮೂಭರ್ತಾ ಭ್ರಾತರಶ್ಚಾಸ್ಯ ಸೂದಿತಾಃ ॥೯೪॥

ಯುಯುತ್ಸು– ಭಯಂಕರ ಪರಾಕ್ರಮಿಗಳಾದ ಪಾಂಡವರಿಂದ ಹನ್ನೊಂದು ಅಕ್ಷೌಹಿಣಿಸೇನೆಗೆ ಅಧಿಪತಿಯಾದ ದುರ್ಯೋಧನನು ಸೋತಿದ್ದಾನೆ. ಅವನ ಸಹೋದರರೆಲ್ಲರೂ ಸತ್ತಿದ್ದಾರೆ.

ಹತಾಶ್ಚ ಕುರವಃ ಸರ್ವೇ ಭೀಷ್ಮದ್ರೋಣಪುರಃಸರಾಃ ।
ಅಹಮೇಕೋ ವಿಮುಕ್ತಶ್ಚ ಭಾಗ್ಯಯೋಗಾದ್ ಯದೃಚ್ಛಯಾ ॥೯೫॥

ಭೀಷ್ಮ-ದ್ರೋಣಾದಿ ಎಲ್ಲಾ ಕುರುವೀರರು ಯುದ್ಧದಲ್ಲಿ ಪ್ರಾಣತ್ಯಾಗ ಮಾಡಿದ್ದಾರೆ. ಭಗವಂತನ ಇಚ್ಛೆಯಿಂದ ಅದೃಷ್ಟವಶಾತ್ ನಾನೊಬ್ಬನೇ ಮುಕ್ತನಾಗಿದ್ದೇನೆ.

ವಿದ್ರುತಾನಿ ಚ ಸೈನ್ಯಾನಿ ಶಿಬಿರಾದ್ ವೈ ಸಮಂತತಃ ॥೯೬॥

ಶಿಬಿರಗಳಲ್ಲಿದ್ದ ಸೈನ್ಯಗಳೂ ಎಲ್ಲಾ ಕಡೆಗೆ ಓಡತೊಡಗಿದವು.

ದುರ್ಯೋಧನಸ್ಯ ಸಚಿವಾ ಯೇ ಕೇಚಿದವಶೇಷಿತಾಃ ।
ರಾಜದಾರಾನುಪಾದಾಯ ವ್ಯಧಾವನ್ ನಗರಂ ಪ್ರತಿ ॥೯೭॥

ಯುದ್ಧದಲ್ಲಿ ಅಳಿದುಳಿದ ಕೆಲವು ದುರ್ಯೋಧನ ಸಚಿವರು ರಾಜಸ್ತ್ರೀಯರನ್ನು ಕರೆದುಕೊಡು ನಗರಕ್ಕೆ ಬೇಗನೇ ಸಾಗಿದರು.

ಪ್ರಾಪ್ತಕಾಲಮಹಂ ಮನ್ಯೇ ಪ್ರವೇಶಂ ತೈಃ ಸಹಾಭಿ ಭೋ ।
ಯುಧಿಷ್ಠಿರಮನುಜ್ಞಾಪ್ಯ ವಾಸುದೇವಂ ತಥೈವ ಚ ॥೯೮॥

ನಾನೀಗ ಈ ಮಂತ್ರಿಗಳ ಜೊತೆಗೆ ಸೇರುವುದು ಒಳ್ಳೆಯದು ಎಂದು ಅಂದುಕೊಳ್ಳುತ್ತೇನೆ. ಈ ವಿಷಯದಲ್ಲಿ ಧರ್ಮರಾಜನ ಮತ್ತು ಶ್ರೀಕೃಷ್ಣನ ಅಪ್ಪಣೆಯನ್ನು ಪಡೆಯುತ್ತೇನೆ.

ಸಂಜಯಃ

ಏವಮೇತನ್ಮಹಾಬಾಹುರುಭಯೋಃ ಸನ್ನ್ಯವೇದಯತ್ ॥೯೯॥

ಸಂಜಯ– ಮಹಾಬಾಹುವಾದ ಯುಯುತ್ಸುವು ಆ ಇಬ್ಬರಲ್ಲಿಯೂ ಈ ರೀತಿಯಲ್ಲಿ ನಿವೇದಿಸಿಕೊಂಡನು.

ತಸ್ಯ ಪ್ರೀತೋಽಭವದ್ ರಾಜಾ ನಿತ್ಯಂ ಕರುಣವೇದಿನಃ ।
ಪರಿಷ್ವಜ್ಯ ಮಹಾಬಾಹುರ್ವೈಶ್ಯಾಪುತ್ರಂ ವ್ಯಸರ್ಜಯತ್ ॥೧೦೦॥

ಕರುಣೆಯನ್ನು ನಿತ್ಯವೂ ಅನುಭವಿಸುವ ಧರ್ಮರಾಜನು ಯುಯುತ್ಸುವಿನ ಬಗ್ಗೆ ಪ್ರೀತನಾಗಿ ಅವನನ್ನು ಆಲಿಂಗಿಸಿ ವೇಶ್ಯಾಪುತ್ರನಾದ ಯುಯುತ್ಸುವನ್ನು ಬೀಳ್ಕೊಡುತ್ತಾನೆ.

ತತಃ ಸ ರಥಮಾಸ್ಥಾಯ ದ್ರುತಮಶ್ವಾನಚೋದಯತ್ ।
ಸಂಭಾವಯಿತ್ವಾ ತಾಂಶ್ಚಾಪಿ ರಾಜದಾರಾನ್ ಪುರಂ ಪ್ರತಿ ॥೧೦೧॥

ಅನಂತರ ಯುಯುತ್ಸುವು ರಥವನ್ನು ಹತ್ತಿ ಕುದುರೆಗಳನ್ನು ಬೇಗನೇ ಓಡಿಸುತ್ತಾನೆ. ಜೊತೆಗೆ ರಾಜಪತ್ನಿಯರನ್ನೂ ನಗರಕ್ಕೆ ಕರೆದೊಯ್ಯುತ್ತಾನೆ.

ತೈಶ್ಚೈವ ಸಹಿತಃ ಕ್ಷಿಪ್ರಮಸ್ತಂ ಗಚ್ಛತಿ ಭಾಸ್ಕರೇ ।
ಪ್ರವಿಷ್ಟೋ ಹಸ್ತಿನಪುರಂ ಬಾಷ್ಪಕಂಠಾಶ್ರುಲೋಚನಃ ॥೧೦೨॥

ಸೂರ್ಯಾಸ್ತಮಾನವಾಗುತ್ತಿರಲು ಯುಯುತ್ಸುವು ಆ ಕ್ಷತ್ರಿಯಸ್ತ್ರೀಯರ ಜೊತೆಗೆ ಬೇಗನೆ ಹಸ್ತಿನಪುರವನ್ನು ಪ್ರವೇಶಿಸುತ್ತಾನೆ. ಅವನ ಕಂಠ ದ್ರವಯುಕ್ತವಾಗಿತ್ತು ಮತ್ತು ಕಣ್ಣುಗಳು ಕಣ್ಣೀರಿನಿಂದ ತುಂಬಿದ್ದವು.

ಅಪಶ್ಯಚ್ಚ ಮಹಾಪ್ರಾಜ್ಞಂ ವಿದುರಂ ಸಾಶ್ರುಲೋಚನಮ್ ।
ರಾಜ್ಞಃ ಸಮೀಪಾನ್ನಿಷ್ಕ್ರಾಂತಂ ಶೋಕೋಪಹತಚೇತಸಮ್ ॥೧೦೩॥

ಮತ್ತು ಅಲ್ಲಿ ರಾಜಧೃತರಾಷ್ಟ್ರನ ಹತ್ತಿರದಿಂದ ನಿರ್ಗಮಿಸುತ್ತಿದ್ದ ಮಹಾಜ್ಞಾನಿ ವಿದುರನನ್ನು ನೋಡಿದನು. ವಿದುರನೂ ಕೂಡ ಮನಸ್ಸಿನಲ್ಲಿಯೇ ದುಃಖಿಸುತ್ತಾ ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡಿದ್ದನು.

ತಮಬ್ರವೀತ್ ಸತ್ಯಧೃತಿಃ ಪ್ರಣತಂ ತ್ವಗ್ರತಃ ಸ್ಥಿತಮ್ ॥೧೦೪॥

ಸತ್ಯನಿಷ್ಠೆಯುಳ್ಳ ವಿದುರನು ಎದುರಿಗೆ ನಿಂತು ನಮಸ್ಕರಿಸಿದ ಯುಯುತ್ಸುವಿಗೆ ಹೀಗೆ ಹೇಳುತ್ತಾನೆ.

ವಿದುರಃ

ಅಸ್ಮಿನ್ ಕುರುಕ್ಷಯೇ ವೃತ್ತೇ ದಿಷ್ಟ್ಯಾ ತ್ವಂ ಪುತ್ರ ಜೀವಸಿ ।
ವಿನಾ ರಾಜ್ಞಃ ಪ್ರವೇಶಾದ್ವೈ ಕಿಮಸಿ ತ್ವಮಿಹಾಗತಃ ॥೧೦೫॥

ವಿದುರ– ಇಲ್ಲಿ ಕುರುಗಳೆಲ್ಲಾ ಯುದ್ಧದಲ್ಲಿ ನಾಶವಾದಾಗ ನೀನೊಬ್ಬನೇ ಅದೃಷ್ಟವಶಾತ್ ಬದುಕಿ ಉಳಿದಿರುವಿ. ರಾಜನಾದ ಯುಧಿಷ್ಠಿರನು ಹಸ್ತಿನಪುರವನ್ನು ಪ್ರವೇಶಿಸುವುದಕ್ಕಿಂತ ಮೊದಲೇ ನೀನು ಯಾವ ಕಾರಣದಿಂದ ಇಲ್ಲಿಗೆ ಬಂದಿರುವಿ?

ಏತದ್ ವೈ ಕಾರಣಂ ಸರ್ವಂ ವಿಸ್ತರೇಣ ನಿವೇದಯ ॥೧೦೬॥

ಇದಕ್ಕೆ ಏನು ಕಾರಣವೆಂಬುದನ್ನು ನನಗೆ ವಿಸ್ತಾರವಾಗಿ ತಿಳಿಸು.

ಯುಯುತ್ಸುಃ

ನಿಹತೇ ಶಕುನೌ ತಾತ ಸಜ್ಞಾತಿಸುತಬಾಂಧವೇ ।
ಹತಶೇಷಪರೀವಾರೋ ರಾಜಾ ದುರ್ಯೋಧನಸ್ತತಃ ॥೧೦೭॥

ಯುಯುತ್ಸು– ತಾತನೇ! ಬಂಧುಬಾಂಧವರು ಮತ್ತು ಮಕ್ಕಳೊಂದಿಗೆ ಶಕುನಿಯು ಯುದ್ಧದಲ್ಲಿ ಮರಣಹೊಂದಿದ ಮೇಲೆ ದುರ್ಯೋಧನನು ಉಳಿದ ಸೈನ್ಯವನ್ನು ತನ್ನ ಸುತ್ತಲೂ ನೇಮಿಸಿಕೊಂಡನು.

ಸ್ವಕಂ ಹಯಂ ಸಮುತ್ಸೃಜ್ಯ ಪ್ರಾಙ್ಮುಖಿಃ ಪ್ರಾದ್ರವದ್ ಭಯಾತ್॥೧೦೮॥

ಭಯಗೊಂಡ ದುರ್ಯೋಧನನು ತನ್ನ ಕುದುರೆಗಳ ಕಟ್ಟನ್ನು ಬಿಚ್ಚಿ ತಾನು ಪೂರ್ವದಿಕ್ಕಿಗೆ ಪಲಾಯನ ಮಾಡಿದನು.

ಅಪಕ್ರಾಂತೇ ತು ನೃಪತೌ ಸ್ಕಂಧಾವಾರನಿವೇಶನಾತ್ ।
ಭಯವ್ಯಾಕುಲಿತಂ ಸೈನ್ಯಂ ಪ್ರಾದ್ರವನ್ನಗರಂ ಪ್ರತಿ ॥೧೦೯॥

ರಾಜನಾದ ದುರ್ಯೋಧನನು ಕಾವಲುಗೋಪುರದಿಂದ ಹಾರಿ ತಪ್ಪಿಸಿಕೊಂಡು ಹೋದ ನಂತರ ಭಯದಿಂದ ಗಲಿಬಿಲಿಗೊಂಡ ಸೈನ್ಯವು ಹಸ್ತಿನಪುರಕ್ಕೆ ಓಡಿಹೋಯಿತು.

ತತೋ ರಾಜ್ಞಃ ಕಳತ್ರಾಣಿ ಭ್ರಾತೄಣಾಂ ಚಾಪಿ ಸರ್ವಶಃ ।
ವಾಹನೇಷು ಸಮಾರೋಪ್ಯ ಸ್ತ್ರೈಧ್ಯಕ್ಷಾಃ ಪ್ರಾದ್ರವನ್ ಭಯಾತ್॥೧೧೦॥

ಅನಂತರ ಮೂರೂ ಸೈನ್ಯಗಳ ಮುಖ್ಯಾಳುಗಳು ರಾಜನ ಮತ್ತು ಅವನ ಸಹೋದರರ ಪತ್ನಿಯರನ್ನು ವಾಹನಗಳಲ್ಲಿ ಹತ್ತಿಸಿ ಭಯದಿಂದ ಬೇಗನೇ ಓಡಿದರು.

ತತೋಽಹಂ ಸಮನುಜ್ಞಾಪ್ಯ ರಾಜಾನಂ ಸಹಕೇಶವಮ್ ।
ಪ್ರವಿಷ್ಟೋ ಹಸ್ತಿನಪುರಂ ರಕ್ಷನ್ ಲೋಕಸ್ಯ ವಾಚ್ಯತಾಮ್ ॥೧೧೧॥

ಅನಂತರ ನಾನು ಧರ್ಮರಾಜನ ಮತ್ತು ಶ್ರೀಕೃಷ್ಣನ ಅಪ್ಪಣೆಯನ್ನು ಪಡೆದುಕೊಂಡು ಲೋಕವಾರ್ತೆಯನ್ನು ರಕ್ಷಿಸುವವನಾಗಿ ಹಸ್ತಿನಪುರವನ್ನು ಪ್ರವೇಶಿಸಿದೆನು.

ಸಂಜಯಃ

ಏತಚ್ಛ್ರುತ್ವಾ ತು ವಚನಂ ವೈಶ್ಯಾಪುತ್ರೇಣ ಭಾಷಿತಮ್ ।
ಪ್ರಾಪ್ತಕಾಲಮಿತಿ ಜ್ಞಾತ್ವಾ ವಿದುರಃ ಸರ್ವಧರ್ಮವಿತ್ ॥೧೧೨॥

ಅಪೂಜಯದಮೇಯಾತ್ಮಾ ಯುಯುತ್ಸುಂ ವಾಕ್ಯಕೋವಿದಮ್ ॥೧೧೩॥

ಸಂಜಯ– ವೇಶ್ಯಾಪುತ್ರ ಯುಯುತ್ಸುವು ಹೇಳಿದ ಮಾತುಗಳನ್ನು ಕೇಳಿಸಿಕೊಂಡ, ಸಕಲಧರ್ಮಗಳನ್ನು ತಿಳಿದಿರುವ ವಿದುರನು, ಇದೆಲ್ಲವೂ ಕಾಲಪ್ರೇರಕನಾದ ನಾರಾಯಣನಿಂದ ಆಯಿತೆಂದು ಅರಿತುಕೊಂಡನು, ವಿದುರನು ಚೆನ್ನಾಗಿ ಮಾತನಾಡುವ ಯುಯುತ್ಸುವನ್ನು ಗೌರವಿಸಿದನು.

ವಿದುರಃ

ಪ್ರಾಪ್ತಕಾಲಮಿದಂ ಸರ್ವಂ ಭವತೋ ಭರತಕ್ಷಯೇ ।
ಸಂಸ್ಮೃತಃ ಕುಲಧರ್ಮಶ್ಚ ಸಾನುಕ್ರೋಶತಯಾ ತದಾ ॥೧೧೪॥

ವಿದುರ– ಭರತವಂಶವು ನಾಶವಾಗುತ್ತಿರುವ ಈ ಸಂದರ್ಭದಲ್ಲಿ ನಿನ್ನ ಮಟ್ಟಿಗೆ ನಡೆದದ್ದೆಲ್ಲವೂ ಕಾಲನಿಯಾಮಕನಾದ ಶ್ರೀಹರಿಯಿಂದಲೇ. ನೀನು ದಯೆಯಿಂದ ಯುಕ್ತನಾದವನಾಗಿ ಕುಲಧರ್ಮಗಳನ್ನು ನೆನಪಿಸಿಕೊಳ್ಳುತ್ತಾ ಅವನ್ನು ರಕ್ಷಿಸುತ್ತಿರುವಿ.

ಅದ್ಯಾಹಮಪಿ ವಿಶ್ರಾಂತಃ ಶ್ವೋ ಗಂತಾಸ್ಮಿ ಯುಧಿಷ್ಠಿರಮ್ ॥೧೧೫॥

ಇವತ್ತು ನಾನೂ ಕೂಡ ಬಹಳ ಆಯಾಸಗೊಂಡಿದ್ದೇನೆ. ನಾಳೆ ಯುಧಿಷ್ಠಿರನ ಬಳಿಗೆ ಹೋಗುತ್ತೇನೆ.

ಸಂಜಯಃ

ಏತಾವದುಕ್ತ್ವಾ ವಚನಂ ವಿದುರಃ ಸರ್ವಧರ್ಮವಿತ್ ।
ಯುಯುತ್ಸುಂ ಸಮನುಜ್ಞಾಪ್ಯ ವಿವೇಶ ನೃಪತೇಃ ಕ್ಷಯಮ್ ॥೧೧೬॥

ಸಂಜಯ– ಸಕಲಧರ್ಮಸೂಕ್ಷ್ಮಗಳನ್ನು ತಿಳಿದುಕೊಂಡ ವಿದುರನು ಇಷ್ಟು ಹೇಳಿ ಸುಮ್ಮನಾಗುತ್ತಾನೆ. ಯುಯುತ್ಸುವಿನ ಒಪ್ಪಿಗೆಯನ್ನು ಪಡೆದು ರಾಜನ ಮನೆಯನ್ನು ಪ್ರವೇಶಿಸುತ್ತಾನೆ.

ಪೌರಜಾನಪದೈರ್ದುಃಖಾದ್ ಹಾಹೇತಿ ಭೃಶನಾದಿತಮ್ ।
ನಿರಾನಂದಂ ಗತಶ್ರೀಕಂ ಹೃತನಾಗಮಿವಾಶಯಮ್ ॥೧೧೭॥

ಶೂನ್ಯರೂಪಮವಧ್ವಸ್ತಂ ದೃಷ್ಟ್ವಾ ಧೃತರಾಷ್ಟ್ರತೋಽಭವತ್ ॥೧೧೮॥

ಆ ಅರಮನೆಯಲ್ಲಿ ಪುರವಾಸಿಗಳು, ಗ್ರಾಮವಾಸಿಗಳು ಹಾ ಎಂದು ಬಹಳ ಶಬ್ದವನ್ನು ಮಾಡುತ್ತಿದ್ದರು. ಯಾರಿಗೂ ಆನಂದವು ಇಲ್ಲದಾಯಿತು. ಸಂಪತ್ತು ಹೊರಟುಹೋಯಿತು. ಆ ಅಂತಃಪುರವು ಶೂನ್ಯವಾಗಿತ್ತು. ಇದನ್ನು ನೋಡಿ ವಿದುರನು ಮತ್ತೂ ದುಃಖಿತನಾದನು.

ವಿದುರಃ ಸರ್ವಧರ್ಮಜ್ಞೋ ವ್ಯಾಕುಲೇನಾಂತರಾತ್ಮನಾ ।
ವಿವೇಶ ನೃಪತೇರ್ವೇಶ್ಮ ನಿಶಶ್ವಾಸ ಶನೈಃ ಶನೈಃ ॥೧೧೯॥

ಸರ್ವಧರ್ಮಜ್ಞನಾದ ವಿದುರನು ಮನಸ್ಸಿನಿಂದ ತುಂಬಾ ವ್ಯಥೆಯನ್ನು ಅನುಭವಿಸುತ್ತಾ ರಾಜನ ಮನೆಯೊಳಗೆ ಪ್ರವೇಶಿಸಿದನು ಮತ್ತು ನಿಧಾನವಾಗಿ ಉಸಿರಾಡಿದನು.

ಯುಯುತ್ಸುರಪಿ ತಾಂ ರಾತ್ರಿಂ ಸ್ವಗೃಹೇ ನ್ಯವಸತ್ ತದಾ ॥೧೨೦॥

ಯುಯುತ್ಸುವೂ ಆದಿನದ ರಾತ್ರಿಯಲ್ಲಿ ತನ್ನ ಮನೆಯಲ್ಲಿಯೇ ವಾಸಮಾಡಿದನು.

ವಂದ್ಯಮಾನಃ ಸ್ವಕೈಶ್ಚಾಪಿ ನಾಭ್ಯನಂದತ್ ಸುದುಃಖಿತಃ ।
ಚಿಂತಯಾನೋ ಮಹಾರಾಜ ಹತಾನಾಂ ಚ ಪರಸ್ಪರಮ್ ॥೧೨೧॥

ತನ್ನವರು ತನಗೆ ನಮಸ್ಕರಿಸುತ್ತಿದ್ದರೂ ಬಹಳ ದುಃಖಿತನಾದ ಯುಯುತ್ಸು ಅದರಿಂದ ಸಂತುಷ್ಟನಾಗಲಿಲ್ಲ. ಮಹಾರಾಜನೇ! ಅವನು ಮಹಾಯುದ್ಧದಲ್ಲಿ ಪರಸ್ಪರ ಕಾದಾಡಿ ಸತ್ತವರ ಬಗ್ಗೆಯೇ ಚಿಂತಿಸುತ್ತಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಲ್ಯಪರ್ವಣಿ ಶಕುನಿವಧೋ ನಾಮ ಏಕೋನತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಲ್ಯಪರ್ವದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಹ್ರದಪ್ರವೇಶಪರ್ವ ॥

॥ ಸಮಾಪ್ತಂ ಶಲ್ಯಪರ್ವ ॥

★ ★ ★ ★ ★

ಮಹಾಭಾರತ

ಗದಾಪರ್ವ

ಒಂದನೆಯ ಅಧ್ಯಾಯ

ಕೃಪ, ಕೃತವರ್ಮ ಮತ್ತು ಅಶ್ವತ್ಥಾಮರು ದ್ವೈಪಾಯನ ಸರೋವರದ ಹತ್ತಿರ ದುರ್ಯೋಧನನ ಜೊತೆಗೆ ಮಾತನಾಡುತ್ತಿರುವಾಗ ಯದೃಚ್ಛಯಾ ಅಲ್ಲಿಗೆ ಬೇಟೆಗಾರರು ಬಂದುದು. ಬೇಟೆಗಾರರ ಮಾತಿನಂತೆ ಪರಿವಾರಸಮೇತರಾದ ಪಾಂಡವರು ಸರೋವರದ ಹತ್ತಿರ ಬರುವುದು, ಅವರನ್ನು ನೋಡಿ ದುರ್ಯೋಧನನ ಒಪ್ಪಿಗೆಯಿಂದ ಕೃಪಾದಿಗಳು ದೂರ ಹೋಗಿ ಆಲದ ಮರದ ಕೆಳಗೆ ಕುಳಿತುಕೊಂಡಿದ್ದು. ದುರ್ಯೋಧನನು ಪುನಃ ಜಲಸ್ತಂಭನ ಮಾಡಿ ಸರೋವರವನ್ನು ಪ್ರವೇಶಿಸಿದ್ದು.

ಸಂಜಯಃ

ಮುಹೂರ್ತಾದಿವ ರಾಜೇಂದ್ರ ಸರ್ವಂ ಶೂನ್ಯಮದೃಶ್ಯತ ।
ಮತ್ತವಾರಣಸಂಘುಷ್ಟಂ ಶಿಬಿರಂ ವಿದ್ಯತೇ ಬಲೇ ॥೧॥

ಸಂಜಯ– ರಾಜೇಂದ್ರನೇ! ಸೈನ್ಯಬಲವೆಲ್ಲವೂ ಓಡಿಹೋದಾಗ ಮದವೇರಿದ ಆನೆಗಳಿಂದ ಪೂರ್ಣವಾಗಿದ್ದ ಸೇನಾಶಿಬಿರಗಳು ಎಲ್ಲವೂ ಒಂದು ಮುಹೂರ್ತದಲ್ಲಿಯೇ ಶೂನ್ಯವಾಗಿ ಕಂಡಿತು.

ಯತ್ರ ಶಬ್ದೇನ ಮಹತಾ ಅಬುಧ್ಯಂತ ಮಹಾರಥಾಃ ।
ತತ್ರ ಶಬ್ದಂ ನ ಶೃಣುಮೋ ಮನುಷ್ಯಸ್ಯಾಪಿ ಕಸ್ಯಚಿತ್ ॥೨॥

ಯಾವ ಶಿಬಿರದಲ್ಲಿ ಜೋರಾಗಿ ಕೇಳಿಸುತ್ತಿದ್ದ ಧ್ವನಿಯಿಂದಾಗಿಯೇ ಮಹಾರಥರ ಯೋಧರ ಇರುವಿಕೆಯು ತಿಳಿಯಲ್ಪಡುತ್ತಿತ್ತೋ, ಅಂತಹ ಸ್ಥಳದಲ್ಲಿ ಮನುಷ್ಯರದ್ದಾಗಲೀ, ಬೇರೆ ಯಾವುದೇ ಪ್ರಾಣಿಗಳದ್ದಾಗಲೀ ಶಬ್ದವು ಕೇಳಿಸುತ್ತಿರಲಿಲ್ಲ.

ಧೃತರಾಷ್ಟ್ರಃ

ಹತೇಷು ತೇಷು ಸೈನ್ಯೇಷು ಪಾಂಡುಪುತ್ರೈ ರಣಾಜಿರೇ ।
ಮಾಮಕಾ ಹ್ಯವಶಿಷ್ಟಾಸ್ತೇ ಕಿಮಕುರ್ವತ ಸಂಜಯ ॥೩॥

ಧೃತರಾಷ್ಟ್ರ– ಸಂಜಯನೇ! ರಣರಂಗದಲ್ಲಿ ಪಾಂಡವರು ನನ್ನ ಮಕ್ಕಳನ್ನೆಲ್ಲಾ ಕೊಂದ ಮೇಲೆ, ಉಳಿದ ನನ್ನ ಕಡೆಯವರು ಏನು ಮಾಡಿದರು?

ಕೃಪಶ್ಚ ಕೃತವರ್ಮಾ ಚ ದ್ರೋಣಪುತ್ರಶ್ಚ ವೀರ್ಯವಾನ್ ।
ದುರ್ಯೋಧನಶ್ಚ ಮಂದಾತ್ಮಾ ರಾಜಾ ಕಿಮಕರೋತ್ ತದಾ ॥೪॥

ಕೃಪ, ಕೃತವರ್ಮ, ದ್ರೋಣಪುತ್ರನಾದ, ವೀರನಾದ ಅಶ್ವತ್ಥಾಮ ಮತ್ತು ಮಬ್ಬು ಕವಿದ ಬುದ್ಧಿಯುಳ್ಳ ರಾಜ ದುರ್ಯೋಧನ ಇವರು ಏನು ಮಾಡಿದರು?

ಸಂಜಯಃ

ಸಂಪ್ರಾದ್ರವತ್ಸು ದಾರೇಷು ಕ್ಷತ್ರಿಯಾಣಾಂ ಮಹಾತ್ಮನಾಮ್ ।
ವಿದ್ರುತೇ ಶಿಬಿರೇ ಶೂನ್ಯೇ ಭಯೋದ್ವಿಗ್ನಾಸ್ತ್ರಯೋ ರಥಾಃ ॥೫॥

ನಿಶಮ್ಯ ಪಾಂಡುಪುತ್ರಾಣಾಂ ಜಯಿನಾಂ ಸುಮಹಾಸ್ವನಮ್ ॥೬॥

ಸಂಜಯ– ಪಾಂಡವರ ಜಯಕಾರದ ಜೋರಾದ ಧ್ವನಿಯು ಕೇಳಿಸುತ್ತಿತ್ತು. ಮಹಾತ್ಮರಾದ ಕ್ಷತ್ರಿಯರ ಪತ್ನಿಯರು ನಗರದ ಕಡೆ ಧಾವಿಸಿ ಓಡುತ್ತಿದ್ದರು. ಕೌರವಸೇನಾಶಿಬಿರವೆಲ್ಲವೂ ಬರಿದಾಗಿದೆ. ಇದನ್ನೆಲ್ಲ ನೋಡಿ ಮಹಾರಥರಾದ ಕೃಪ, ಕೃತವರ್ಮ ಮತ್ತು ಅಶ್ವತ್ಥಾಮರು ಭಯದಿಂದ ಕಂಗಾಲಾದರು.

ಸಂಜಯಃ

ವಿದ್ರುತಂ ಶಿಬಿರಂ ದೃಷ್ಟ್ವಾ ಸಾಯಾಹ್ನೇ ರಾಜಗರ್ಧಿನಃ ॥೭॥
ಸ್ಥಾನಂ ನಾರೋಚಯಂಸ್ತತ್ರ ತತಸ್ತಂ ಹ್ರದಮಭ್ಯಯುಃ ॥೮॥

ಸಂಜಯ– ರಾಜನಾದ ದುರ್ಯೋಧನನನ್ನು ಅಪೇಕ್ಷಿಸಿ ತಿರುಗುತ್ತಿದ್ದ ಆ ಮೂವರು ಸಾಯಂಕಾಲದ ಸಮಯದಲ್ಲಿ ಬರಿದಾದ ಶಿಬಿರಗಳನ್ನು ಕಂಡು, ಆ ಜಾಗದಲ್ಲಿ ಇರಲು ಇಷ್ಟಪಡಲಿಲ್ಲ. ಅನಂತರ ಅವರು ಸರೋವರದ ಕಡೆಗೆ ಹೋದರು.

ಯುಧಿಷ್ಠಿರೋಽಪಿ ಕೌಂತೇಯೋ ಭ್ರಾತೃಭಿಃ ಸಹಿತೋ ರಣೇ ।
ಹೃಷ್ಟಃ ಪರ್ಯತಪದ್ ರಾಜನ್ ದುರ್ಯೋಧನವಧೇಪ್ಸಯಾ ॥೯॥

ರಾಜನೇ! ಸಹೋದರರನ್ನು ಕೂಡಿಕೊಂಡ ಧರ್ಮರಾಜನೂ ಕೂಡ ಯುದ್ಧದ ಜಯದಿಂದ ಸಂತುಷ್ಟನಾಗಿ, ದುರ್ಯೋಧನನನ್ನು ಕೊಲ್ಲುವ ಇಚ್ಛೆಯಿಂದ ಆಲೋಚನಾಮಗ್ನನಾದನು. (ಸುತ್ತಲೂ ಸಂಚರಿಸಿದನು.)

ಮಾರ್ಗಮಾಣಾಸ್ತು ಸಂಕ್ರುದ್ಧಾಸ್ತವ ಪುತ್ರಂ ಜಿಘಾಂಸವಃ ।
ಯತ್ನತೋಽನ್ವೇಷಮಾಣಾಶ್ಚ ನೈವಾಪಶ್ಯನ್ ನರಾಧಿಪಮ್ ॥೧೦॥

ನಿನ್ನ ಮಗನನ್ನು ಕೊಲ್ಲುವ ಬಯಕೆಯಿಂದ ಕುಪಿತರಾಗಿ ಹುಡುಕುತ್ತಿದ್ದ ಪಾಂಡವರು ಬಹಳ ಪ್ರಯತ್ನಪಟ್ಟು ಹುಡುಕಾಡಿದರೂ ದುರ್ಯೋಧನನನ್ನು ನೋಡಲಾಗಲಿಲ್ಲ.

ಸ ತು ತೀವ್ರೇಣ ವೇಗೇನ ಗದಾಪಾಣಿರಪಾಕ್ರಮತ್ ।
ತಂ ಹ್ರದಂ ಪ್ರಾವಿಶಚ್ಚಾಪಿ ವಿಷ್ಟಭ್ಯಾಪಃ ಸ್ವಮಾಯಯಾ ॥೧೧॥

ರಾಜ ದುರ್ಯೋಧನನಾದರೂ ಗದೆಯನ್ನು ಹಿಡಿದುಕೊಂಡು ಬಹಳವೇಗವಾಗಿ ತನ್ನ ಮಾಯೆಯಿಂದ ಜಲವನ್ನು ಸ್ತಂಭನಗೊಳಿಸಿ ಸರೋವರದ ಒಳಗೆ ಪ್ರವೇಶಿಸಿದನು.

ತದಾ ತು ಪಾಂಡವಾಃ ಸರ್ವೇ ಸುಪರಿಶ್ರಾಂತವಾಹನಾಃ ।
ತತಸ್ತೇ ಶಿಬಿರಂ ಪ್ರಾಪ್ಯ ವ್ಯತಿಷ್ಠನ್ ಸಹಸೈನಿಕಾಃ ॥೧೨॥

ಆ ಸಂದರ್ಭದಲ್ಲಿ ಪಾಂಡವರ ರಥದ ಕುದುರೆಗಳು ಬಹಳ ಬಳಲಿದ್ದವು. ಎಲ್ಲಾ ಪಾಂಡವರು ತಮ್ಮ ಸೈನಿಕರೊಡನೆ ಶಿಬಿರಕ್ಕೆ ಹೋಗಿ ವಿಶ್ರಾಂತಿ ಪಡೆದರು.

ತತಃ ಕೃಪಶ್ಚ ದ್ರೌಣಿಶ್ಚ ಕೃತವರ್ಮಾ ಚ ಸಾತ್ವತಃ ।
ಸನ್ನಿವಿಷ್ಟೇಷು ಪಾರ್ಥೇಷು ಪ್ರಯಯುಸ್ತಂ ಹ್ರದಂ ಶನೈಃ ॥೧೩॥

ಪಾಂಡವರು ಅಲ್ಲಿಂದ ಹೊರಟನಂತರ ಕೃಪ, ಕೃತವರ್ಮ ಮತ್ತು ಅಶ್ವತ್ಥಾಮರು ನಿಧಾನವಾಗಿ ಆ ಸರೋವರದ ಹತ್ತಿರ ಬರುತ್ತಾರೆ.

ತೇ ತಂ ಹ್ರದಂ ಸಮಾಸಾದ್ಯ ಯತ್ರ ಶೇತೇ ನರಾಧಿಪಃ ।
ಅಭ್ಯಭಾಷಂತ ದುರ್ಧರ್ಷಂ ರಾಜಾನಂ ಸುಪ್ತಮಂಭಸಿ ॥೧೪॥

ದುರ್ಯೋಧನನು ಯಾವ ಸರೋವರದಲ್ಲಿ ಮಲಗಿದ್ದನೋ ಆ ಸರೋವರಕ್ಕೆ ಬಂದ ಕೃಪ ಮೊದಲಾದವರು ನೀರೊಳಗೆ ಮಲಗಿದ್ದ ಪರರಿಗೆ ಎದುರಿಸಲಾಗದ ದುರ್ಯೋಧನನಿಗೆ ಹೀಗೆ ಹೇಳುತ್ತಾರೆ.

ಕೃಪಾದಯಃ

ರಾಜನ್ನುತ್ತಿಷ್ಠ ಯುಧ್ಯಸ್ವ ಸಹಾಸ್ಮಾಭಿರ್ಯುಧಿಷ್ಠಿರಮ್ ।
ಜಿತ್ವಾ ವಾ ಪೃಥಿವೀಂ ಭುಂಕ್ಷ್ವ ಹತೋ ವಾ ಸ್ವರ್ಗಮಾಪ್ನುಹಿ ॥೧೫॥

ಕೃಪಾದಿಗಳು– ರಾಜನೇ! ಎದ್ದೇಳು! ನಮ್ಮೊಡನೆ ಸೇರಿ ಯುದ್ಧ ಮಾಡು. ಧರ್ಮರಾಜನನ್ನು ಗೆದ್ದು ಭೂಮಂಡಲವನ್ನು ಅನುಭವಿಸು. ಅಥವಾ ಸತ್ತು ವೀರಸ್ವರ್ಗವನ್ನು ಹೊಂದು.

ತೇಷಾಮಪಿ ಬಲಂ ಸರ್ವಂ ಹತಂ ದುರ್ಯೋಧನ ತ್ವಯಾ ।
ಪ್ರತಿರುದ್ಧಾಶ್ಚ ಭೂಯಿಷ್ಠಂ ಯೇ ಶಿಷ್ಟಾಸ್ತತ್ರ ಸೈನಿಕಾಃ ॥೧೬॥

ದುರ್ಯೋಧನನೇ! ಅವರ ಎಲ್ಲಾ ಸೈನ್ಯವು ಕೂಡ ನಿನ್ನಿಂದ ನಾಶವಾಗಿದೆ. ಉಳಿದ ಸೈನಿಕರು ಗಾಯಗೊಂಡು ಯುದ್ಧಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ.

ನ ತೇ ವೇಗಂ ವಿಷಹಿತುಂ ಶಕ್ತಾಸ್ತವ ವಿಶಾಂಪತೇ ।
ಅಸ್ಮಾಭಿರಭಿಗುಪ್ತಸ್ಯ ತಸ್ಮಾದುತ್ತಿಷ್ಠ ಭಾರತ ॥೧೭॥

ಭರತಕುಲೋದ್ಭವನೇ! ರಾಜನೇ! ನಮ್ಮ ರಕ್ಷಣೆಯಲ್ಲಿರುವ ನಿನ್ನ ಯುದ್ಧವೇಗವನ್ನು ಸಹಿಸಲು ಅವರು ಶಕ್ತರಾಗುವುದಿಲ್ಲ.

ದುರ್ಯೋಧನಃ

ದಿಷ್ಟ್ಯಾ ಪಶ್ಯಾಮಿ ವೋ ಮುಕ್ತಾನ್ ಈದೃಶಾಜ್ಜನಸಂಕ್ಷಯಾತ್ ।
ಪಾಂಡುಕೌರವಸಮ್ಮರ್ದೇ ಜೀವಮಾನಾನ್ ನರರ್ಷಭಾನ್ ॥೧೮॥

ದುರ್ಯೋಧನ– ಯುದ್ಧದಿಂದ ಈ ರೀತಿಯಾಗಿ ಜನರ ನಾಶವು ನಡೆಯುತ್ತಿದ್ದರೂ ನೀವು ಅದೃಷ್ಟದಿಂದಾಗಿ ಬದುಕುಳಿದಿದ್ದೀರಿ ಎಂಬುದಾಗಿ ನಾನು ಭಾವಿಸುತ್ತೇನೆ.

ವಿಜೇಷ್ಯಾಮೋ ವಯಂ ಸರ್ವೇ ವಿಶ್ರಾಂತಾ ವಿಗತಕ್ಲಮಾಃ ।
ಭವಂತಶ್ಚ ಪರಿಶ್ರಾಂತಾ ಅಹಂ ಚ ಭೃಶವಿಕ್ಷತಃ ॥೧೯॥

ನೀವೂ ಎಲ್ಲರೂ ಬಹಳ ಆಯಾಸಗೊಂಡಿರುವಿರಿ. ನಾನೂ ಬಹಳವಾಗಿ ಗಾಯಗೊಂಡಿರುವೆನು. ಆದ್ದರಿಂದ ನಾವೆಲ್ಲಾ ವಿಶ್ರಾಂತಿಯನ್ನು ತೆಗೆದುಕೊಂಡು, ಆಯಾಸದ ದುಃಖವನ್ನು ಕಳೆದುಕೊಂಡು, ಅನಂತರ ಶತ್ರುಗಳನ್ನು ಗೆಲ್ಲೋಣ.

ಉದೀರ್ಣಂ ಚ ಬಲಂ ತೇಷಾಂ ತೇನ ಯುದ್ಧಂ ನ ರೋಚಯೇ॥೨೦॥

ಅಷ್ಟೇ ಅಲ್ಲದೆ ಅವರ ಸೈನ್ಯಬಲವು ಈಗ ಬಹಳ ಹೆಚ್ಚಾಗಿ ಇದೆ. ಆದ್ದರಿಂದಲೂ ಈಗ ಯುದ್ಧವನ್ನು ನಾನು ಇಷ್ಟಪಡುವುದಿಲ್ಲ.

ಭವತಾಮದ್ಭುತಂ ವೀರಾ ಯುದ್ಧೇ ಮಹದಿದಂ ಮನಃ ।
ಅಸ್ಮಾಸು ಚ ಪರಾ ಭಕ್ತಿರ್ದರ್ಶಿತಾ ಕಾರ್ಯಗೌರವಾತ್ ॥೨೧॥

ವಿಶ್ರಾಮ್ಯೈಕಾಂ ನಿಶಾಮದ್ಯ ಭವದ್ಭಿಃ ಸಹಿತೋ ರಣೇ ।
ಪ್ರತಿಯೋದ್ಧಾಸ್ಮಿ ತಾನ್ ಶತ್ರೂನ್ ಶ್ವೋ ವಾ ನ ಸ್ಯಾಚ್ಛ್ರಮೋ ಮಮ ॥

ವೀರರೇ! ನಿಮಗೆ ಯುದ್ಧದಲ್ಲಿ ಬಹಳವಾದ ಮನಸ್ಸಿದೆಯೆಂಬುದು ಬಹಳ ಅದ್ಭುತವಾಗಿದೆ. ನನ್ನಲ್ಲಿ ಬಹಳವಾದ ಭಕ್ತಿಯನ್ನೂ ತೋರಿಸಿದ್ದೀರಿ. ಮಾಡುವ ಕೆಲಸವು ಬಹಳವಾಗಿರುವುದರಿಂದ ಒಂದು ರಾತ್ರಿ ವಿಶ್ರಾಂತಿಯನ್ನು ಪಡೆದು ಅನಂತರ ನಿಮ್ಮ ಜೊತೆಗೆ ಸೇರಿ ಶತ್ರುಗಳನ್ನು ಎದುರಿಸಿ ಯುದ್ಧವನ್ನು ಮಾಡುವೆನು. ನಾಳೆ ನನಗೆ ಆಯಾಸವಿರದು.

ಸಂಜಯಃ

ಏವಮುಕ್ತೋಽಬ್ರವೀದ್ ದ್ರೌಣೇ ರಾಜಾನಂ ಯುದ್ಧದುರ್ಮದಮ್ ॥

ಸಂಜಯ– ಯುದ್ಧದ ಮದವನ್ನೇರಿಸಿಕೊಂಡಿರುವ ದುರ್ಯೋಧನನಿಗೆ ಅಶ್ವತ್ಥಾಮನು ಹೀಗೆ ಹೇಳುತ್ತಾನೆ.

ಅಶ್ವತ್ಥಾಮಾ

ಉತ್ತಿಷ್ಠ ರಾಜನ್ ಭದ್ರಂ ತೇ ವಿಜೇಷ್ಯಾಮೋ ರಣೇ ಪರಾನ್ ॥೨೪॥

ಅಶ್ವತ್ಥಾಮ– ರಾಜನೇ! ಎದ್ದು ಬಾ! ನಿನಗೆ ಮಂಗಳವಾಗಲಿ. ಯುದ್ಧದಲ್ಲಿ ಶತ್ರುಗಳನ್ನು ನಾವು ಗೆಲ್ಲುವೆವು.

ಇಷ್ಟಾಪೂರ್ತೇನ ಸತ್ಯೇನ ದಾನೇನ ಚ ಜಪೇನ ಚ ।
ಶಪೇ ರಾಜನ್ ಯಥಾ ಹ್ಯದ್ಯ ನಿಹನಿಷ್ಯಾಮಿ ಸೋಮಕಾನ್ ॥೨೫॥

ರಾಜನೇ! ನನ್ನ ಇಷ್ಟಾಪೂರ್ತಾದಿ ಸತ್ಕರ್ಮಗಳು, ಸತ್ಯ, ದಾನ ಹಾಗೂ ಜಪದ ಆಧಾರದಲ್ಲಿ ಶಪಥವನ್ನು ಮಾಡುತ್ತೇನೆ. ಇವತ್ತು ಸೋಮಕರನ್ನು ನಾಶಮಾಡುತ್ತೇನೆ.

ಮಾ ಸ್ಮ ಯಜ್ಞಕೃತಾಲ್ಲೋಕಾನ್ ಪ್ರಾಪ್ನುಯಾಂ ಸಜ್ಜನೋಚಿತಾನ್ ।
ಯದೀಮಾಂ ರಜನೀಂ ವ್ಯುಷ್ಟಾಂ ನ ಹಿ ಹನ್ಮಿ ಪರಾನ್ ರಣೇ ॥೨೬॥

ಒಂದು ಪಕ್ಷ ಈ ರಾತ್ರಿ ಕಳೆದು ಬೆಳಗಾದ ನಂತರ ಯುದ್ಧದಲ್ಲಿ ಶತ್ರುಗಳನ್ನು ನಾಶ ಮಾಡದಿದ್ದರೆ ಯಜ್ಞಮಾಡಿ ಸಜ್ಜನರು ಪಡೆಯುವ ಲೋಕಗಳಿಗೆ ನಾನು ಹೋಗಲಾರೆನು. ನನಗೆ ಆ ಲೋಕಗಳು ಬೇಡವೇ ಬೇಡ.

ನಾಹತ್ವಾ ಸರ್ವಪಾಂಚಾಲಾನ್ ವಿಮೋಕ್ಷ್ಯೇ ಕವಚಂ ವಿಭೋ ।
ಇತಿ ಸತ್ಯಂ ಬ್ರವೀಮ್ಯೇತತ್ ತನ್ಮೇ ಶೃಣು ಜನಾಧಿಪ ॥೨೭॥

ವಿಭುವೇ! ಎಲ್ಲಾ ಪಾಂಚಾಲರನ್ನು ಕೊಲ್ಲದೆ ನನ್ನ ಕವಚವನ್ನು ಬಿಚ್ಚಲಾರೆ. ರಾಜನೇ! ಇದು ಸತ್ಯ. ನನ್ನ ಮಾತನ್ನು ಕೇಳು.

ಸಂಜಯಃ

ತೇಷು ಸಂಭಾಷಮಾಣೇಷು ವ್ಯಾಧಾಸ್ತಂ ದೇಶಮಾಗಮನ್ ।
ಮಾಂಸಭಾರಪರಿಶ್ರಾಂತಾಃ ಪಾನೀಯಾರ್ಥಂ ಯದೃಚ್ಛಯಾ ॥೨೮॥

ಸಂಜಯ– ಹೀಗೆ ಅವರೆಲ್ಲಾ ಮಾತನಾಡುತ್ತಿರಲು ಯದೃಚ್ಛಯಾ ಬೇಟೆಗಾರರು ಆ ಸ್ಥಳಕ್ಕೆ ಬಂದರು. ಮಾಂಸವನ್ನು ಹೊತ್ತು ಒಯ್ಯುವಾಗ ಬಳಲಿದ ಅವರು ನೀರನ್ನು ಕುಡಿಯಲಿಕ್ಕಾಗಿ ಅಲ್ಲಿಗೆ ಬಂದರು.

ತೇ ಹಿ ನಿತ್ಯಂ ಮಹಾರಾಜ ಭೀಮಸೇನಸ್ಯ ಲುಬ್ಧಕಾಃ ।
ಮಾಂಸಭಾರಾನುಪಾಜಹ್ರುಃ ಭಕ್ತ್ಯಾ ಪರಮಯಾ ಯುತಾಃ ॥೨೯॥

ಮಹಾರಾಜ! ಆ ವ್ಯಾಧರು ಭೀಮಸೇನನ ಮೇಲಿನ ಬಹಳವಾದ ಭಕ್ತಿಯಿಂದ ನಿತ್ಯವೂ ಮಾಂಸವನ್ನು ಅರ್ಪಿಸುತ್ತಿದ್ದರು.

ತೇ ತತ್ರ ವಿಷ್ಠಿತಾಸ್ತೇಷಾಂ ಸರ್ವಂ ತದ್ವಚನಂ ರಹಃ ।
ದುರ್ಯೋಧನವಚಶ್ಚೈವ ಶುಶ್ರುವುಃ ಸಂಗತಾ ಮಿಥಃ ॥೩೦॥

ಅವರು ಆ ಪ್ರದೇಶದಲ್ಲಿ ಮರೆಯಲ್ಲಿ ನಿಂತುಕೊಂಡು, ಅಲ್ಲಿ ನಡೆದ ಎಲ್ಲಾ ಮಾತುಕತೆಗಳನ್ನು ಕೇಳಿಸಿಕೊಂಡರು. ದುರ್ಯೋಧನನು ಆಡಿದ ಮಾತನ್ನೂ ಕೇಳಿಸಿಕೊಂಡರು.

ತೇ ಹಿ ಸರ್ವೇ ಮಹೇಷ್ವಾಸಾ ಅಯುದ್ಧಾರ್ಥಿನಿ ಕೌರವೇ ।
ನಿರ್ಬಂಧಂ ಪರಮಂ ಚಕ್ರುಃ ಸುಭೃಶಂ ಯುದ್ಧಕಾಂಕ್ಷಿಣಃ ॥೩೧॥

ಕೃಪ ಮೊದಲಾದ ಮಹಾಧನುರ್ಧಾರಿಗಳು ಯುದ್ಧವನ್ನು ಇಷ್ಟಪಡದ ದುರ್ಯೋಧನನನ್ನು ಯುದ್ಧಕ್ಕಾಗಿ ನಿರ್ಬಂಧಗೊಳಿಸಿದರು. ಅವರೆಲ್ಲಾ ಯುದ್ಧವನ್ನು ಬಹಳವಾಗಿ ಅಪೇಕ್ಷಿಸುವವರಾಗಿದ್ದರು.

ತಾಂಸ್ತಥಾ ತೇ ಸಮುದ್ವೀಕ್ಷ್ಯ ಕೌರವಾಣಾಂ ಮಹಾರಥಾನ್ ।
ಅಯುದ್ಧಮನಸಂ ಚೈವ ರಾಜಾನಂ ಸ್ಥಿತಮಂಭಸಿ ॥೩೨॥

ವ್ಯಾಧರು ಇಂತಹ ಮನಸ್ಥಿತಿಯುಳ್ಳ ಕೌರವವೀರರು ಹೀಗೆ ಇರುವುದನ್ನು ನೋಡಿದರು. ಯುದ್ಧದಲ್ಲಿ ಆಸಕ್ತಿಯನ್ನು ಕಳೆದುಕೊಂಡು ನೀರಿನೊಳಗೆ ಇರುವ ದುರ್ಯೋಧನನನ್ನೂ ನೋಡಿದರು.

ತೇಷಾಂ ಶ್ರುತ್ವಾ ಚ ಸಂವಾದಂ ರಾಜ್ಞಶ್ಚ ಸಲಿಲೇ ಸತಃ ।
ವ್ಯಾಧಾ ವ್ಯಜಾನನ್ ರಾಜೇಂದ್ರ ಸಲಿಲಸ್ಥಂ ಸುಯೋಧನಮ್ ॥೩೩॥

ರಾಜೇಂದ್ರನೇ! ಅನಂತರ ಅಲ್ಲಿಮೇಲೆ ಇರುವ ಅವರಿಗೆ ಮತ್ತು ನೀರಿನೊಳಗೆ ಸೇರಿಕೊಂಡ ದುರ್ಯೋಧನನಿಗೆ ನಡೆದ ಸಂವಾದವನ್ನು ಕೇಳಿದ ವ್ಯಾಧರು ದುರ್ಯೋಧನನು ನೀರೊಳಗೆ ಇದ್ದಾನೆ ಎಂದು ತಿಳಿದುಕೊಂಡರು.

ತೇ ಪೂರ್ವಂ ಪಾಂಡುಪುತ್ರೇಣ ಪೃಷ್ಟಾ ಹ್ಯಾಸನ್ ಸುತಂ ತವ ।
ಯದೃಚ್ಛಯಾ ಗತಾಸ್ತತ್ರ ರಾಜಾನಂ ಪರಿಮಾರ್ಗಿತುಮ್ ॥೩೪॥

ಅಕಸ್ಮಾತ್ತಾಗಿ ಬಂದ ಇದೇ ವ್ಯಾಧರನ್ನು ಹಿಂದೆ ರಾಜನನ್ನು ಹುಡುಕುತ್ತಿದ್ದ ಪಾಂಡವರು ನಿನ್ನ ಮಗನ ಬಗ್ಗೆ ಕೇಳಿದ್ದರು.

ತತಸ್ತೇ ಪಾಂಡುಪುತ್ರಸ್ಯ ಸ್ಮೃತ್ವಾ ತದ್ಭಾಷಿತಂ ತದಾ ।
ಅನ್ಯೋನ್ಯಮಬ್ರುವನ್ ರಾಜನ್ ಮೃಗವ್ಯಾಧಾಃ ಶನೈರಿದಮ್ ॥೩೫॥

ಅನಂತರ ಧರ್ಮರಾಜನು ಹೇಳಿದ್ದ ಮಾತನ್ನು ಸ್ಮರಿಸಿಕೊಂಡ ವ್ಯಾಧರು ತಮ್ಮ ತಮ್ಮಲ್ಲೇ ಮೆಲ್ಲನೆ ಮಾತನಾಡಿಕೊಂಡರು.

ವ್ಯಾಧಾಃ

ದುರ್ಯೋಧನಂ ಖ್ಯಾಪಯಾಮೋ ಧನಂ ದಾಸ್ಯತಿ ಪಾಂಡವಃ ।
ಸುವ್ಯಕ್ತಮಿಹ ನಃ ಖ್ಯಾತೋ ಹ್ರದೇ ದುರ್ಯೋಧನೋ ನೃಪಃ ॥೩೬॥

ವ್ಯಾಧರು– ರಾಜ ದುರ್ಯೋಧನನು ಈ ಸರೋವರದಲ್ಲಿ ಇರುವುದು ನಮಗೆ ಚೆನ್ನಾಗಿ ತಿಳಿದಿದೆ. ಇದನ್ನು ಧರ್ಮರಾಜನಿಗೆ ಹೇಳೋಣ. ಆಗ ಧರ್ಮರಾಜನು ನಮಗೆ ಹಣವನ್ನು ಕೊಡುವನು.

ತಸ್ಮಾದ್ ಗಚ್ಛಾಮಹೇ ಸರ್ವೇ ಯತ್ರ ರಾಜಾ ಯುಧಿಷ್ಠಿರಃ ।
ಆಖ್ಯಾತುಂ ಸಲಿಲೇ ಸುಪ್ತಂ ದುರ್ಯೋಧನಮಮರ್ಷಣಮ್ ॥೩೭॥

ಆದ್ದರಿಂದ ಎಲ್ಲಿ ಯುಧಿಷ್ಠಿರ ಇದ್ದಾನೆಯೋ ಅಲ್ಲಿಗೆ ಹೋಗೋಣ. ಸರೋವರದಲ್ಲಿ ಅಸಹನೆಯಿಂದ ಮಲಗಿದ್ದ ದುರ್ಯೋಧನನ ಬಗ್ಗೆ ತಿಳಿಸೋಣ.

ಧೃತರಾಷ್ಟ್ರಾತ್ಮಜಂ ತಸ್ಮೈ ಭೀಮಸೇನಾಯ ಧೀಮತೇ ।
ಶಯಾನಂ ಸಲಿಲೇ ಸರ್ವೇ ಕಥಯಾಮೋ ಧನುರ್ಭೃತೇ ॥೩೮॥

ಬುದ್ಧಿವಂತನಾದ ಧನುರ್ಧಾರಿ ಭೀಮಸೇನನಿಗೆ ನೀರಿನಲ್ಲಿ ಮಲಗಿರುವ ದುರ್ಯೋಧನನ ಬಗ್ಗೆ ಹೇಳೋಣ.

ಸ ನೋ ದಾಸ್ಯತಿ ಧರ್ಮಾತ್ಮಾ ಧನಾನಿ ಬಹುಲಾನ್ಯುತ ।
ಕಿಂ ನೋ ಮಾಂಸೇನ ಶುಷ್ಕೇಣ ಪರಿಕ್ಲಿಷ್ಟೇನ ಶೋಷಿಣಾ ॥೩೯॥

ಭೀಮನಾದರೂ ಖಂಡಿತವಾಗಿಯೂ ನಮಗೆ ಬಹಳ ಹಣವನ್ನು ಕೊಡುತ್ತಾನೆ. ಈ ಒಣಗಿದ ಹಾಗೂ ಕಷ್ಟದಾಯಕವಾದ ಮಾಂಸದಿಂದ ಏನಾಗಬೇಕಾಗಿದೆ?

ಸಂಜಯಃ

ಏವಮುಕ್ತ್ವಾ ತು ತೇ ವ್ಯಾಧಾಃ ಸಂಪ್ರಹೃಷ್ಟಾಃ ಧನಾರ್ಥಿನಃ ।
ಮಾಂಸಭಾರಾನುಪಾದಾಯ ಪ್ರಯಯುಃ ಶಿಬಿರಂ ಪ್ರತಿ ॥೪೦॥

ಸಂಜಯ– ಹಣದ ಆಸೆಯುಳ್ಳ ಆ ವ್ಯಾಧರು ಹೀಗೆ ಹೇಳಿ ಬಹಳ ಸಂತೋಷದಿಂದ ಮಾಂಸದ ಮೂಟೆಗಳನ್ನು ಹಿಡಿದುಕೊಂಡು ಪಾಂಡವರ ಶಿಬಿರದೆಡೆಗೆ ತೆರಳಿದರು.

ಪಾಂಡವಾಶ್ಚ ಮಹಾರಾಜ ಲಬ್ಧಲಕ್ಷಾಃ ಪ್ರಹಾರಿಣಃ ।
ಅಪಶ್ಯಮಾನಾಃ ಸಮರೇ ದುರ್ಯೋಧನಮವಸ್ಥಿತಮ್ ॥೪೧॥

ನಿಕೃತೇಸ್ತಸ್ಯ ಪಾಪಸ್ಯ ಯುದ್ಧಾಭಿಗಮನೇಪ್ಸಯಾ ।
ಚಾರಾನ್ ಸಂಪ್ರೇಷಯಾಮಾಸುಃ ಸಮಂತಾತ್ ತದ್ ರಣಾಜಿರಾತ್ ॥

ಮಹಾರಾಜ! ಗುರಿಯಿಟ್ಟು ಹೊಡೆಯುವ ನೈಪುಣ್ಯವನ್ನು ಪಡೆದಿರುವ ಪಾಂಡವರು ರಣರಂಗದಲ್ಲಿ ದುರ್ಯೋಧನನನ್ನು ಕಾಣದೆ, ದುರ್ಯೋಧನನ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಲಿಕ್ಕಾಗಿ, ಅವನನ್ನು ಮತ್ತೆ ಯುದ್ಧಕ್ಕೆ ಬರುವಂತೆ ಮಾಡಲು ರಣರಂಗದಿಂದ ಎಲ್ಲಾ ಕಡೆಯೂ ಗೂಢಚಾರರನ್ನು ಕಳುಹಿಸಿದರು.

ಆಗತ್ಯ ತು ತತಃ ಸರ್ವೇ ನಷ್ಟಂ ದುರ್ಯೋಧನಂ ನೃಪಮ್ ।
ನ್ಯವೇದಯಂತ ಸಹಿತಾ ಧರ್ಮರಾಜಸ್ಯ ಸೈನಿಕಾಃ ॥೪೩॥

ಆ ಎಲ್ಲಾ ಗೂಢಚಾರರು ಒಟ್ಟಾಗಿ ಬಂದು ದುರ್ಯೋಧನನು ಸತ್ತುಹೋಗಿದ್ದಾನೆ ಎಂದು ಧರ್ಮರಾಜನಿಗೆ ನಿವೇದಿಸಿಕೊಂಡರು.

ತೇಷಾಂ ತದ್ವಚನಂ ಶ್ರುತ್ವಾ ಚಾರಾಣಾಂ ಭರತರ್ಷಭ ।
ಚಿಂತಾಮಭ್ಯಗಮತ್ ತೀವ್ರಂ ನಿಶಶ್ವಾಸ ಚ ಪಾರ್ಥಿವಃ ॥೪೪॥

ಭಾರತೋತ್ತಮನೇ! ಗೂಢಚಾರರ ಆ ಮಾತನ್ನು ಕೇಳಿದ ರಾಜನು ಚಿಂತಗೊಳಗಾದನು ಮತ್ತು ವೇಗವಾಗಿ ಉಸಿರುಬಿಟ್ಟನು.

ಯುಧಿಷ್ಠಿರಃ

ಅರಿಶೇಷೇ ಜೀವತಿ ತು ಸಂದಿಗ್ಧೋ ವಿಜಯೋ ಭವೇತ್ ।
ರಾಜ್ಯಂ ಕಥಂ ಲಭೇ ತದ್ಧಿ ಪೂಜಿತಂ ವಿಜಯಾದಿಭಿಃ ॥೪೫॥

ಯುಧಿಷ್ಠಿರ– ಶತ್ರುಗಳಲ್ಲಿ ಸ್ವಲ್ಪ ಶೇಷವು ಉಳಿದಿರುವಾಗ ಯುದ್ಧದ ಜಯವು ನಿಶ್ಚಿತವಾಗುವುದಿಲ್ಲ, ಆದ್ದರಿಂದ ವಿಜಯೋತ್ಸವವನ್ನು ಆಚರಿಸಿ ರಾಜ್ಯವನ್ನು ಹೇಗೆ ಪಡೆಯಲು ಸಾಧ್ಯ?

ಸಂಜಯಃ

ಅಥ ಸ್ಥಿತಾನಾಂ ಪಾಂಡೂನಾಂ ದೀನಾನಾಂ ಭರತರ್ಷಭ ।
ತಸ್ಮಾದ್ ದೇಶಾದಪಾಕ್ರಮ್ಯ ತ್ವರಿತಾ ಲುಬ್ಧಕಾ ವಿಭೋ ॥೪೬॥

ಆಜಗ್ಮುಃ ಶಿಬಿರಂ ಹೃಷ್ಟಾ ದೃಷ್ಟ್ವಾ ದುರ್ಯೋಧನಂ ನೃಪಮ್ ।
ವಾರ್ಯಮಾಣಾಃ ಪ್ರವಿಷ್ಟಾಶ್ಚ ಭೀಮಸೇನಂ ದಿದೃಕ್ಷವಃ ॥೪೭॥

ಸಂಜಯ– ಭರತರ್ಷಭನೇ! ಹೀಗೆ ಪಾಂಡವರು ದುಃಖಿತರಾಗಿ ಇರಲು ವ್ಯಾಧರು ಸರೋವರದ ಪ್ರದೇಶದಿಂದ ಹೊರಟು ಪಾಂಡವರ ಶಿಬಿರಕ್ಕೆ ಬಂದರು. ಬಹಳ ಸಂತುಷ್ಟರಾದ ಅವರು ದುರ್ಯೋಧನನನ್ನು ನೋಡಿದ್ದರು. ದ್ವಾರಪಾಲಕರು ತಡೆಯುತ್ತಿದ್ದರೂ ಭೀಮನನ್ನು ನೋಡುವ ಇಚ್ಛೆಯಿಂದ ಬಂದಿದ್ದರು.

ತೇ ತು ಪಾಂಡವಮಾಸಾದ್ಯ ಭೀಮಸೇನಂ ಮಹಾಬಲಮ್ ।
ತಸ್ಮೈ ತತ್ ಸರ್ವಮಾಚಖ್ಯುರ್ಯದ್ ವೃತ್ತಂ ಯಚ್ಚ ವೈ ಶ್ರುತಮ್ ॥

ಬೇಟೆಗಾರರು ಮಹಾಬಲಶಾಲಿಯಾದ ಭೀಮನ ಹತ್ತಿರ ಬಂದು ನಡೆದ ಎಲ್ಲಾ ಸಮಾಚಾರಗಳನ್ನು ಮತ್ತು ತಾವು ಕೇಳಿಸಿಕೊಂಡ ವಿಷಯಗಳನ್ನು ಭೀಮನಿಗೆ ಹೇಳಿದರು.

ತತೋ ವೃಕೋದರೋ ರಾಜನ್ ದತ್ತ್ವಾ ತೇಷಾಂ ಧನಂ ಬಹು ।
ಧರ್ಮರಾಜಾಯ ತತ್ಸರ್ವಮಾಚಚಕ್ಷೇ ಪರಂತಪಃ ॥೪೯॥

ರಾಜನೇ! ಅನಂತರ ಶತ್ರುತಾಪಕನಾದ ಭೀಮನು ಅವರಿಗೆ ಬಹಳ ಹಣವನ್ನು ಕೊಟ್ಟು ಎಲ್ಲಾ ಸಮಾಚಾರವನ್ನು ಧರ್ಮರಾಜನಿಗೆ ಹೇಳಿದನು.

ಭೀಮಃ

ಅಸೌ ದುರ್ಯೋಧನೋ ರಾಜನ್ ವಿಜ್ಞಾತೋ ಮಮ ಲುಬ್ಧಕೈಃ ।
ಸಂಸ್ತಭ್ಯ ಸಲಿಲಂ ಶೇತೇ ಯಸ್ಯಾರ್ಥೇ ಪರಿತಪ್ಯಸೇ ॥೫೦॥

ಭೀಮ– ರಾಜನೇ! ನನ್ನ ಈ ವ್ಯಾಧರು ದುರ್ಯೋಧನನನ್ನು ಕಂಡುಹಿಡಿದಿದ್ದಾರೆ. ಯಾರಿಗಾಗಿ ನೀನು ಪರಿತಾಪ ಪಡುತ್ತಿದ್ದಿಯೋ ಆ ದುರ್ಯೋಧನನು ಜಲಸ್ತಂಭಮಾಡಿ ನೀರಿನೊಳಗೆ ಮಲಗಿದ್ದಾನೆ.

ಸಂಜಯಃ

ತದ್ವಚೋ ಭೀಮಸೇನಸ್ಯ ಪ್ರಿಯಂ ಶ್ರುತ್ವಾ ವಿಶಾಂಪತೇ ।
ಅಜಾತಶತ್ರುಃ ಕೌಂತೇಯೋ ಹೃಷ್ಟೋऽಭೂತ್ ಸಹ ಸೋದರೈಃ ॥೫೧॥

ಸಂಜಯ– ರಾಜನೇ! ಭೀಮನಾಡಿದ ಪ್ರಿಯವಾದ ಮಾತನ್ನು ಕೇಳಿದ ಅಜಾತಶತ್ರು ಧರ್ಮರಾಜನು ಸಂತೋಷಪಟ್ಟ, ಜೊತೆಗೆ ಅವನ ತಮ್ಮಂದಿರೂ ಸಂತುಷ್ಟರಾದರು.

ತಂ ಚ ಶ್ರುತ್ವಾ ಮಹೇಷ್ವಾಸಾಃ ಪ್ರವಿಷ್ಟಂ ಸಲಿಲಹ್ರದೇ ।
ಕ್ಷಿಪ್ರಮೇವ ತತೋऽಗಚ್ಛನ್ ಪುರಸ್ಕೃತ್ಯ ಜನಾರ್ದನಮ್ ॥೫೨॥

ದುರ್ಯೋಧನನು ಸರೋವರದಲ್ಲಿ ಪ್ರವೇಶಿಸಿರುವುದನ್ನು ಕೇಳಿದ ಮಹಾಬಿಲ್ಲಾರರಾದ ಪಾಂಡವರು ಕೃಷ್ಣನನ್ನು ಮುಂದಿಟ್ಟುಕೊಂಡು ಬೇಗನೇ ಅಲ್ಲಿಗೆ ಹೋದರು.

ತತಃ ಕಿಲಕಿಲಾಶಬ್ದಃ ಪ್ರಾದುರಾಸೀದ್ ವಿಶಾಂಪತೇ ।
ಪಾಂಡವಾನಾಂ ಪ್ರಹೃಷ್ಟಾನಾಂ ಪಾಂಚಾಲಾನಾಂ ಚ ಸರ್ವಶಃ ॥೫೩॥

ರಾಜನೇ! ಸಂತೋಷವನ್ನು ಹೊಂದಿದ ಪಾಂಡವರು ಮತ್ತು ಪಾಂಚಾಲರಲ್ಲಿ ಎಲ್ಲೆಡೆ ಕಿಲಕಿಲ ಶಬ್ದವು ಉಂಟಾಯಿತು.

ಸಿಂಹನಾದಾಂಸ್ತತಶ್ಚಕ್ರುಃ ಕ್ಷ್ವೇಲಾಂಶ್ಚ ಭರತರ್ಷಭ ।
ತ್ವರಿತಾಃ ಕ್ಷತ್ರಿಯಾ ರಾಜನ್ ಜಗ್ಮುರ್ದ್ವೈಪಾಯನಹ್ರದಮ್ ॥೫೪॥

ಭರತರ್ಷಭನೇ! ಅನಂತರ ಸಿಂಹಗರ್ಜನೆಯನ್ನು ಮಾಡಿದರು. ಯುದ್ಧದ ಅಟ್ಟಹಾಸಧ್ವನಿಯನ್ನು ಮಾಡಿದರು. ರಾಜನೇ! ಕ್ಷತ್ರಿಯರು ಅವಸರದಿಂದ ದ್ವೈಪಾಯನ ಸರೋವರಕ್ಕೆ ಬಂದರು.

ಜ್ಞಾತಃ ಪಾಪೋ ಧಾರ್ತರಾಷ್ಟ್ರೋ ದೃಷ್ಟವೀರ್ಯೋ೯ಸಕೃದ್ ರಣೇ ।
ಪ್ರಾಕ್ರೋಶನ್ ಸೈನಿಕಾಸ್ತತ್ರ ಹೃಷ್ಟರೂಪಾಃ ಸಮಂತತಃ ॥೫೫॥

''ರಣರಂಗದಲ್ಲಿ ಅನೇಕ ಬಾರಿ ತನ್ನ ಪರಾಕ್ರಮವನ್ನು ತೋರಿಸಿದ ಪಾಪಿ ದುರ್ಯೋಧನನು ಎಲ್ಲಿದ್ದಾನೆಂದು ಗೊತ್ತಾಗಿದೆ'' ಹೀಗೆ ಸೈನಿಕರು ಎಲ್ಲಾ ಕಡೆಯೂ ಸಂತೋಷದಿಂದ ಬೊಬ್ಬೆ ಹಾಕಿದರು.

ತೇಷಾಮಾಶು ಪ್ರಯಾತಾನಾಂ ರಥಾನಾರುಹ್ಯ ವೇಗಿನಾಮ್ ।
ಬಭೂವ ತುಮುಲಃಶಬ್ದೋ ದಿವಿಸ್ಪೃಕ್ ಪೃಥಿವೀಪತೇ ॥೫೬॥

ರಥಗಳನ್ನೇರಿ ವೇಗವಾಗಿ ಹೋಗುತ್ತಿದ್ದಾಗ ಗೊಂದಲದ ಶಬ್ದವು ಉಂಟಾಯಿತು. ರಾಜನೇ! ಆ ಶಬ್ದವು ಆಕಾಶದ ತನಕ ಹಬ್ಬಿತು.

ದುರ್ಯೋಧನಂ ಪರೀಪ್ಸಂತಸ್ತತ್ರ ತತ್ರ ಯುಧಿಷ್ಠಿರಮ್ ।
ಅನ್ವಯುಸ್ತ್ವರಿತಾಸ್ತೇ ವೈ ರಾಜಾನಂ ಶ್ರಾಂತವಾಹನಾಃ ॥೫೭॥

ದುರ್ಯೋಧನನನ್ನು ಅಪೇಕ್ಷಿಸಿ ಹೊರಟ ಅವರು ಧರ್ಮರಾಜನನ್ನು ಅನುಸರಿಸಿಕೊಂಡು ಹೋದರು. ಕೆಲವೆಡೆ ಅವರ ರಥದ ಕುದುರೆಗಳು ಆಯಾಸಗೊಂಡವು.

ಅರ್ಜುನೋ ಭೀಮಸೇನಶ್ಚ ಮಾದ್ರೀಪುತ್ರೌ ಚ ಪಾಂಡವೌ ।
ಧೃಷ್ಟದ್ಯುಮ್ನಶ್ಚ ಪಾಂಚಾಲ್ಯಃ ಶಿಖಂಡೀ ಚಾಪರಾಜಿತಃ ॥೫೯॥

ಉತ್ತಮೌಜಾ ಯುಧಾಮನ್ಯುಃ ಸಾತ್ಯಕಿಶ್ಚ ಮಹಾರಥಃ ।
ಪಾಂಚಾಲಾನಾಂ ಚ ಯೇ ಶಿಷ್ಟಾ ದ್ರೌಪದೇಯಾಶ್ಚ ಭಾರತ ॥೫೯॥

ಹಯಾಶ್ಚ ಸರ್ವೇ ನಾಗಾಶ್ಚ ಶತಶಶ್ಚ ಪದಾತಯಃ ॥೬೦॥

ಅರ್ಜುನ, ಭೀಮಸೇನ, ನಕುಲ, ಸಹದೇವ, ಧೃಷ್ಟದ್ಯುಮ್ನ, ಸೋಲಿಲ್ಲದ ಶಿಖಂಡಿ, ಉತ್ತಮೌಜ, ಯುಧಾಮನ್ಯು, ಮಹಾರಥನಾದ ಸಾತ್ಯಕಿ, ಉಳಿದ ಪಾಂಚಾಲದೇಶದ ವೀರರು, ದ್ರೌಪದಿಯ ಮಕ್ಕಳು, ಕುದುರೆಗಳು, ಆನೆಗಳು, ನೂರಾರು ಪದಾತಿಗಳು ಇವರೆಲ್ಲರೂ ಧರ್ಮರಾಜನನ್ನು ಅನುಸರಿಸಿಕೊಂಡು ಹೋದರು.

ತತಃ ಪ್ರಾಪ್ತೋ ಮಹಾರಾಜ ಧರ್ಮಪುತ್ರಃ ಪ್ರತಾಪವಾನ್ ।
ದ್ವೈಪಾಯನಹ್ರದಂ ಖ್ಯಾತಂ ಯತ್ರ ದುರ್ಯೋಧನೋಽಭವತ್ ॥೬೧॥

ಮಹಾರಾಜನೇ! ಪ್ರತಾಪಿಯಾದ ಧರ್ಮರಾಜನು ದುರ್ಯೋಧನನು ಅಡಗಿ ಕುಳಿತಿರುವ ಪ್ರಸಿದ್ಧವಾದ ದ್ವೈಪಾಯನಸರೋವರಕ್ಕೆ ಬಂದನು.

ಶೀತಾಮಲಜಲಂ ಹೃದ್ಯಂ ದ್ವಿತೀಯಮಿವ ಸಾಗರಮ್ ।
ಮಾಯಯಾ ಸಲಿಲಂ ಸ್ತಭ್ಯ ಯತ್ರ ಶೇತೇ ಸುತಸ್ತವ ॥೬೨॥

ತಂಪಾದ ಶುಭ್ರನೀರಿರುವ ಆ ಸರೋವರವು ಸಾಗರದಷ್ಟು ವಿಶಾಲವಾಗಿತ್ತು. ಅಲ್ಲಿ ನಿನ್ನ ಮಗ ದುರ್ಯೋಧನನು ಜಲವನ್ನು ಸ್ತಂಭನಗೊಳಿಸಿ ನೀರಿನೊಳಗೆ ಮಲಗಿದ್ದನು.

ಅತ್ಯದ್ಭುತೇನ ವಿಧಿನಾ ದೈವಯೋಗೇನ ಭಾರತ ।
ಸಲಿಲಾಂತರ್ಗತಃ ಶೇತೇ ದುರ್ದರ್ಶಃ ಕಸ್ಯಚಿದ್ ವಿಭೋ ॥೬೩॥

ಮಾನುಷಸ್ಯ ಮನುಷ್ಯೇಂದ್ರೋ ಗದಾಹಸ್ತೋ ನರಾಧಿಪ ॥೬೪॥

ಪ್ರಭುವೇ! ಭರತಕುಲೋದ್ಭವನೇ! ದುರ್ಯೋಧನನು ದೈವಪ್ರಾಪ್ತವಾದ ಅತ್ಯದ್ಭುತ ಮಾಯಾವಿಧಾನದಿಂದ ನೀರಿನೊಳಗೆ ಮಲಗಿಕೊಂಡಿದ್ದನು. ರಾಜನೇ! ಗದೆಯನ್ನು

ತತಃ ಕಿಲಕಿಲಾಶಬ್ದಃ ಪ್ರಾದುರಾಸೀದ್ ವಿಶಾಂಪತೇ ।
ಪಾಂಡವಾನಾಂ ಪ್ರಹೃಷ್ಟಾನಾಂ ಪಾಂಚಾಲಾನಾಂ ಚ ಸರ್ವಶಃ ॥೫೩॥

ರಾಜನೇ! ಸಂತೋಷವನ್ನು ಹೊಂದಿದ ಪಾಂಡವರು ಮತ್ತು ಪಾಂಚಾಲರಲ್ಲಿ ಎಲ್ಲೆಡೆ ಕಿಲಕಿಲ ಶಬ್ದವು ಉಂಟಾಯಿತು.

ಸಿಂಹನಾದಾಂಸ್ತತಶ್ಚಕ್ರುಃ ಕ್ಷ್ವೇಲಾಂಶ್ಚ ಭರತರ್ಷಭ ।
ತ್ವರಿತಾಃ ಕ್ಷತ್ರಿಯಾ ರಾಜನ್ ಜಗ್ಮುರ್ದ್ವೈಪಾಯನಹ್ರದಮ್ ॥೫೪॥

ಭರತರ್ಷಭನೇ! ಅನಂತರ ಸಿಂಹಗರ್ಜನೆಯನ್ನು ಮಾಡಿದರು. ಯುದ್ಧದ ಅಟ್ಟಹಾಸಧ್ವನಿಯನ್ನು ಮಾಡಿದರು. ರಾಜನೇ! ಕ್ಷತ್ರಿಯರು ಅವಸರದಿಂದ ದ್ವೈಪಾಯನ ಸರೋವರಕ್ಕೆ ಬಂದರು.

ಜ್ಞಾತಃ ಪಾಪೋ ಧಾರ್ತರಾಷ್ಟ್ರೋ ದೃಷ್ಟವೀರ್ಯೋ೭ಸಕೃದ್ ರಣೇ ।
ಪ್ರಾಕ್ರೋಶನ್ ಸೈನಿಕಾಸ್ತತ್ರ ಹೃಷ್ಟರೂಪಾಃ ಸಮಂತತಃ ॥೫೫॥

''ರಣರಂಗದಲ್ಲಿ ಅನೇಕ ಬಾರಿ ತನ್ನ ಪರಾಕ್ರಮವನ್ನು ತೋರಿಸಿದ ಪಾಪಿ ದುರ್ಯೋಧನನು ಎಲ್ಲಿದ್ದಾನೆಂದು ಗೊತ್ತಾಗಿದೆ'' ಹೀಗೆ ಸೈನಿಕರು ಎಲ್ಲಾ ಕಡೆಯೂ ಸಂತೋಷದಿಂದ ಬೊಬ್ಬೆಹಾಕಿದರು.

ತೇಷಾಮಾಶು ಪ್ರಯಾತಾನಾಂ ರಥಾನಾರುಹ್ಯ ವೇಗಿನಾಮ್ ।
ಬಭೂವ ತುಮುಲಃಶಬ್ದೋ ದಿವಿಸ್ಪೃಕ್ ಪೃಥಿವೀಪತೇ ॥೫೬॥

ರಥಗಳನ್ನೇರಿ ವೇಗವಾಗಿ ಹೋಗುತ್ತಿದ್ದಾಗ ಗೊಂದಲದ ಶಬ್ದವು ಉಂಟಾಯಿತು. ರಾಜನೇ! ಆ ಶಬ್ದವು ಆಕಾಶದ ತನಕ ಹಬ್ಬಿತು.

ದುರ್ಯೋಧನಂ ಪರೀಪ್ಸಂತಸ್ತತ್ರ ತತ್ರ ಯುಧಿಷ್ಠಿರಮ್ ।
ಅನ್ವಯುಸ್ತ್ವರಿತಾಸ್ತೇ ವೈ ರಾಜಾನಂ ಶ್ರಾಂತವಾಹನಾಃ ॥೫೭॥

ದುರ್ಯೋಧನನನ್ನು ಅಪೇಕ್ಷಿಸಿ ಹೊರಟ ಅವರು ಧರ್ಮರಾಜನನ್ನು ಅನುಸರಿಸಿಕೊಂಡು ಹೋದರು. ಕೆಲವೆಡೆ ಅವರ ರಥದ ಕುದುರೆಗಳು ಆಯಾಸಗೊಂಡವು.

ಅರ್ಜುನೋ ಭೀಮಸೇನಶ್ಚ ಮಾದ್ರೀಪುತ್ರೌ ಚ ಪಾಂಡವೌ ।
ಧೃಷ್ಟದ್ಯುಮ್ನಶ್ಚ ಪಾಂಚಾಲ್ಯಃ ಶಿಖಂಡೀ ಚಾಪರಾಜಿತಃ ॥೫೯॥

ಉತ್ತಮೌಜಾ ಯುಧಾಮನ್ಯುಃ ಸಾತ್ಯಕಿಶ್ಚ ಮಹಾರಥಃ ।
ಪಾಂಚಾಲಾನಾಂ ಚ ಯೇ ಶಿಷ್ಟಾ ದ್ರೌಪದೇಯಾಶ್ಚ ಭಾರತ ॥೫೯॥

ಹಯಾಶ್ಚ ಸರ್ವೇ ನಾಗಾಶ್ಚ ಶತಶಶ್ಚ ಪದಾತಯಃ ॥೬೦॥

ಅರ್ಜುನ, ಭೀಮಸೇನ, ನಕುಲ, ಸಹದೇವ, ಧೃಷ್ಟದ್ಯುಮ್ನ, ಸೋಲಿಲ್ಲದ ಶಿಖಂಡಿ, ಉತ್ತಮೌಜ, ಯುಧಾಮನ್ಯು, ಮಹಾರಥನಾದ ಸಾತ್ಯಕಿ, ಉಳಿದ ಪಾಂಚಾಲದೇಶದ ವೀರರು, ದ್ರೌಪದಿಯ ಮಕ್ಕಳು, ಕುದುರೆಗಳು, ಆನೆಗಳು, ನೂರಾರು ಪದಾತಿಗಳು ಇವರೆಲ್ಲರೂ ಧರ್ಮರಾಜನನ್ನು ಅನುಸರಿಸಿಕೊಂಡು ಹೋದರು.

ತತಃ ಪ್ರಾಪ್ತೋ ಮಹಾರಾಜ ಧರ್ಮಪುತ್ರಃ ಪ್ರತಾಪವಾನ್ ।
ದ್ವೈಪಾಯನಹ್ರದಂ ಖ್ಯಾತಂ ಯತ್ರ ದುರ್ಯೋಧನೋಽಭವತ್ ॥೬೧॥

ಮಹಾರಾಜನೇ! ಪ್ರತಾಪಿಯಾದ ಧರ್ಮರಾಜನು ದುರ್ಯೋಧನನು ಅಡಗಿ ಕುಳಿತಿರುವ ಪ್ರಸಿದ್ಧವಾದ ದ್ವೈಪಾಯನಸರೋವರಕ್ಕೆ ಬಂದನು.

ಶೀತಾಮಲಜಲಂ ಹೃದ್ಯಂ ದ್ವಿತೀಯಮಿವ ಸಾಗರಮ್ ।
ಮಾಯಯಾ ಸಲಿಲಂ ಸ್ತಭ್ಯ ಯತ್ರ ಶೇತೇ ಸುತಸ್ತವ ॥೬೨॥

ತಂಪಾದ ಶುಭ್ರನೀರಿರುವ ಆ ಸರೋವರವು ಸಾಗರದಷ್ಟು ವಿಶಾಲವಾಗಿತ್ತು. ಅಲ್ಲಿ ನಿನ್ನ ಮಗ ದುರ್ಯೋಧನನು ಜಲವನ್ನು ಸ್ತಂಭನಗೊಳಿಸಿ ನೀರಿನೊಳಗೆ ಮಲಗಿದ್ದನು.

ಅತ್ಯದ್ಭುತೇನ ವಿಧಿನಾ ದೈವಯೋಗೇನ ಭಾರತ ।
ಸಲಿಲಾಂತರ್ಗತಃ ಶೇತೇ ದುರ್ದರ್ಶಃ ಕಸ್ಯಚಿದ್ ವಿಭೋ ॥೬೩॥

ಮಾನುಷಸ್ಯ ಮನುಷ್ಯೇಂದ್ರೋ ಗದಾಹಸ್ತೋ ನರಾಧಿಪ ॥೬೪॥

ಪ್ರಭುವೇ! ಭರತಕುಲೋದ್ಭವನೇ! ದುರ್ಯೋಧನನು ದೈವಪ್ರಾಪ್ತವಾದ ಅತ್ಯದ್ಭುತ ಮಾಯಾವಿಧಾನದಿಂದ ನೀರಿನೊಳಗೆ ಮಲಗಿಕೊಂಡಿದ್ದನು. ರಾಜನೇ! ಗದೆಯನ್ನು

ತತಃ ಕಿಲಕಿಲಾಶಬ್ದಃ ಪ್ರಾದುರಾಸೀದ್ ವಿಶಾಂಪತೇ ।
ಪಾಂಡವಾನಾಂ ಪ್ರಹೃಷ್ಟಾನಾಂ ಪಾಂಚಾಲಾನಾಂ ಚ ಸರ್ವಶಃ ॥೫೩॥

ರಾಜನೇ! ಸಂತೋಷವನ್ನು ಹೊಂದಿದ ಪಾಂಡವರು ಮತ್ತು ಪಾಂಚಾಲರಲ್ಲಿ ಎಲ್ಲೆಡೆ ಕಿಲಕಿಲ ಶಬ್ದವು ಉಂಟಾಯಿತು.

ಸಿಂಹನಾದಾಂಸ್ತತಶ್ಚಕ್ರುಃ ಕ್ಷ್ವೇಲಾಂಶ್ಚ ಭರತರ್ಷಭ ।
ತ್ವರಿತಾಃ ಕ್ಷತ್ರಿಯಾ ರಾಜನ್ ಜಗ್ಮುರ್ದ್ವೈಪಾಯನಹ್ರದಮ್ ॥೫೪॥

ಭರತರ್ಷಭನೇ! ಅನಂತರ ಸಿಂಹಗರ್ಜನೆಯನ್ನು ಮಾಡಿದರು. ಯುದ್ಧದ ಅಟ್ಟಹಾಸಧ್ವನಿಯನ್ನು ಮಾಡಿದರು. ರಾಜನೇ! ಕ್ಷತ್ರಿಯರು ಅವಸರದಿಂದ ದ್ವೈಪಾಯನ ಸರೋವರಕ್ಕೆ ಬಂದರು.

ಜ್ಞಾತಃ ಪಾಪೋ ಧಾರ್ತರಾಷ್ಟ್ರೋ ದೃಷ್ಟವೀರ್ಯೋ೯ಸಕೃದ್ ರಣೇ ।
ಪ್ರಾಕ್ರೋಶನ್ ಸೈನಿಕಾಸ್ತತ್ರ ಹೃಷ್ಟರೂಪಾಃ ಸಮಂತತಃ ॥೫೫॥

''ರಣರಂಗದಲ್ಲಿ ಅನೇಕ ಬಾರಿ ತನ್ನ ಪರಾಕ್ರಮವನ್ನು ತೋರಿಸಿದ ಪಾಪಿ ದುರ್ಯೋಧನನು ಎಲ್ಲಿದ್ದಾನೆಂದು ಗೊತ್ತಾಗಿದೆ'' ಹೀಗೆ ಸೈನಿಕರು ಎಲ್ಲಾ ಕಡೆಯೂ ಸಂತೋಷದಿಂದ ಬೊಬ್ಬೆಹಾಕಿದರು.

ತೇಷಾಮಾಶು ಪ್ರಯಾತಾನಾಂ ರಥಾನಾರುಹ್ಯ ವೇಗಿನಾಮ್ ।
ಬಭೂವ ತುಮುಲಃಶಬ್ದೋ ದಿವಿಸ್ಪೃಕ್ ಪೃಥಿವೀಪತೇ ॥೫೬॥

ರಥಗಳನ್ನೇರಿ ವೇಗವಾಗಿ ಹೋಗುತ್ತಿದ್ದಾಗ ಗೊಂದಲದ ಶಬ್ದವು ಉಂಟಾಯಿತು. ರಾಜನೇ! ಆ ಶಬ್ದವು ಆಕಾಶದ ತನಕ ಹಬ್ಬಿತು.

ದುರ್ಯೋಧನಂ ಪರೀಪ್ಸಂತಸ್ತತ್ರ ತತ್ರ ಯುಧಿಷ್ಠಿರಮ್ ।
ಅನ್ವಯುಸ್ತ್ವರಿತಾಸ್ತೇ ವೈ ರಾಜಾನಂ ಶ್ರಾಂತವಾಹನಾಃ ॥೫೭॥

ದುರ್ಯೋಧನನನ್ನು ಅಪೇಕ್ಷಿಸಿ ಹೊರಟ ಅವರು ಧರ್ಮರಾಜನನ್ನು ಅನುಸರಿಸಿಕೊಂಡು ಹೋದರು. ಕೆಲವೆಡೆ ಅವರ ರಥದ ಕುದುರೆಗಳು ಆಯಾಸಗೊಂಡವು.

ಅರ್ಜುನೋ ಭೀಮಸೇನಶ್ಚ ಮಾದ್ರೀಪುತ್ರೌ ಚ ಪಾಂಡವೌ ।
ಧೃಷ್ಟದ್ಯುಮ್ನಶ್ಚ ಪಾಂಚಾಲ್ಯಃ ಶಿಖಂಡೀ ಚಾಪರಾಜಿತಃ ॥೫೯॥

ಉತ್ತಮೌಜಾ ಯುಧಾಮನ್ಯುಃ ಸಾತ್ಯಕಿಶ್ಚ ಮಹಾರಥಃ ।
ಪಾಂಚಾಲಾನಾಂ ಚ ಯೇ ಶಿಷ್ಟಾ ದ್ರೌಪದೇಯಾಶ್ಚ ಭಾರತ ॥೫೯॥

ಹಯಾಶ್ಚ ಸರ್ವೇ ನಾಗಾಶ್ಚ ಶತಶಶ್ಚ ಪದಾತಯಃ ॥೬೦॥

ಅರ್ಜುನ, ಭೀಮಸೇನ, ನಕುಲ, ಸಹದೇವ, ಧೃಷ್ಟದ್ಯುಮ್ನ, ಸೋಲಿಲ್ಲದ ಶಿಖಂಡಿ, ಉತ್ತಮೌಜ, ಯುಧಾಮನ್ಯು, ಮಹಾರಥನಾದ ಸಾತ್ಯಕಿ, ಉಳಿದ ಪಾಂಚಾಲದೇಶದ ವೀರರು, ದ್ರೌಪದಿಯ ಮಕ್ಕಳು, ಕುದುರೆಗಳು, ಆನೆಗಳು, ನೂರಾರು ಪದಾತಿಗಳು ಇವರೆಲ್ಲರೂ ಧರ್ಮರಾಜನನ್ನು ಅನುಸರಿಸಿಕೊಂಡು ಹೋದರು.

ತತಃ ಪ್ರಾಪ್ತೋ ಮಹಾರಾಜ ಧರ್ಮಪುತ್ರಃ ಪ್ರತಾಪವಾನ್ ।
ದ್ವೈಪಾಯನಹ್ರದಂ ಖ್ಯಾತಂ ಯತ್ರ ದುರ್ಯೋಧನೋಽಭವತ್ ॥೬೧॥

ಮಹಾರಾಜನೇ! ಪ್ರತಾಪಿಯಾದ ಧರ್ಮರಾಜನು ದುರ್ಯೋಧನನು ಅಡಗಿ ಕುಳಿತಿರುವ ಪ್ರಸಿದ್ಧವಾದ ದ್ವೈಪಾಯನಸರೋವರಕ್ಕೆ ಬಂದನು.

ಶೀತಾಮಲಜಲಂ ಹೃದ್ಯಂ ದ್ವಿತೀಯಮಿವ ಸಾಗರಮ್ ।
ಮಾಯಯಾ ಸಲಿಲಂ ಸ್ತಭ್ಯ ಯತ್ರ ಶೇತೇ ಸುತಸ್ತವ ॥೬೨॥

ತಂಪಾದ ಶುಭ್ರನೀರಿರುವ ಆ ಸರೋವರವು ಸಾಗರದಷ್ಟು ವಿಶಾಲವಾಗಿತ್ತು. ಅಲ್ಲಿ ನಿನ್ನ ಮಗ ದುರ್ಯೋಧನನು ಜಲವನ್ನು ಸ್ತಂಭನಗೊಳಿಸಿ ನೀರಿನೊಳಗೆ ಮಲಗಿದ್ದನು.

ಅತ್ಯದ್ಭುತೇನ ವಿಧಿನಾ ದೈವಯೋಗೇನ ಭಾರತ ।
ಸಲಿಲಾಂತರ್ಗತಃ ಶೇತೇ ದುರ್ದರ್ಶಃ ಕಸ್ಯಚಿದ್ ವಿಭೋ ॥೬೩॥

ಮಾನುಷಸ್ಯ ಮನುಷ್ಯೇಂದ್ರೋ ಗದಾಹಸ್ತೋ ನರಾಧಿಪ ॥೬೪॥

ಪ್ರಭುವೇ! ಭರತಕುಲೋದ್ಭವನೇ! ದುರ್ಯೋಧನನು ದೈವಪ್ರಾಪ್ತವಾದ ಅತ್ಯದ್ಭುತ ಮಾಯಾವಿಧಾನದಿಂದ ನೀರಿನೊಳಗೆ ಮಲಗಿಕೊಂಡಿದ್ದನು. ರಾಜನೇ! ಗದೆಯನ್ನು

ಹಿಡಿದುಕೊಂಡು ಮಲಗಿರುವ ಈ ಮನುಷ್ಯೋತ್ತಮನನ್ನು ಯಾವ ಮನುಷ್ಯನೂ ಎದುರಿಸಲು ಸಾಧ್ಯವಾಗದು.

ತತೋ ದುರ್ಯೋಧನೋ ರಾಜಾ ಸಲಿಲಾಂತರ್ಗತೋಽಪಿ ಸನ್ ।
ಶುಶ್ರುವೇ ತುಮುಲಂ ಶಬ್ದಂ ಜಲದೋಪಮನಿಃಸ್ವನಮ್ ॥೬೫॥

ನೀರಿನೊಳಗಿದ್ದರೂ ದುರ್ಯೋಧನನು ಹೊರಗಡೆ ಉಂಟಾದ ತುಮುಲಶಬ್ದವನ್ನು ಕೇಳಿಸಿಕೊಂಡನು. ಆ ಶಬ್ದವು ಗುಡುಗಿನಂತೆ ಕೇಳಿಸುತ್ತಿತ್ತು.

ಯುಧಿಷ್ಠಿರೋಽಪಿ ರಾಜೇಂದ್ರ ಹ್ರದಂ ತೈಃ ಸಹ ಸೋದರೈಃ ।
ಆಜಗಾಮ ಮಹಾರಾಜ ತವ ಪುತ್ರವಧಾಯ ವೈ ॥೬೬॥

ರಾಜೇಂದ್ರನೇ! ಯುಧಿಷ್ಠಿರನೂ ತನ್ನ ತಮ್ಮಂದಿರೊಂದಿಗೆ ನಿನ್ನ ಮಗ ದುರ್ಯೋಧನನನ್ನು ಕೊಲ್ಲಲಿಕ್ಕಾಗಿ ಆ ಸರೋವರದ ಹತ್ತಿರ ಬಂದನು.

ಮಹತಾ ಸಿಂಹನಾದೇನ ರಥನೇಮಿಸ್ವನೇನ ಚ ।
ಧೂನ್ವಂಶ್ಚಾಪಿ ಮಹಾರೇಣುಂ ಕಂಪಯಂಶ್ಚಾಪಿ ಮೇದಿನೀಮ್ ॥೬೭॥

ಬರುತ್ತಿರುವಾಗ ದೊಡ್ಡದಾಗಿ ಸಿಂಹನಾದವನ್ನು ಮಾಡುತ್ತಿದ್ದನು. ರಥದ ಅಚ್ಚುಗಳು ಶಬ್ದ ಮಾಡುತ್ತಿದ್ದವು. ಜೊತೆಗೆ ಧೂಳು ಬಹಳವಾಗಿ ಹಬ್ಬಿತ್ತು. ಬರುತ್ತಿರುವಾಗ ನೆಲವೇ ಕಂಪಿಸುತ್ತಿತ್ತು.

ಯೌಧಿಷ್ಠಿರಸ್ಯ ಸೈನ್ಯಸ್ಯ ಶ್ರುತ್ವಾ ಶಬ್ದಂ ಮಹಾರಥಾಃ ।
ಕೃತವರ್ಮಾ ಕೃಪೋ ದ್ರೌಣೇ ರಾಜಾನಮಿದಬ್ರುವನ್ ॥೬೮॥

ಯುಧಿಷ್ಠಿರನ ಸೈನ್ಯದ ಆ ಧ್ವನಿಯನ್ನು ಕೇಳಿಸಿಕೊಂಡ ಮಹಾರಥರಾದ ಕೃಪ, ಕೃತವರ್ಮ ಮತ್ತು ಅಶ್ವತ್ಥಾಮರು ರಾಜನಿಗೆ ಹೀಗೆ ಹೇಳಿದರು.

ಕೃಪಾದಯಃ

ಇಮೇ ಹ್ಯಾಯಾಂತಿ ಸಂಹೃಷ್ಟಾಃ ಪಾಂಡವಾ ಜಿತಕಾಶಿನಃ ।
ಅಪಯಾಸ್ಯಾಮಹೇ ತಾವದ್ ಅನುಜಾನಾತು ನೋ ಭವಾನ್ ॥೬೯॥

ಕೃಪಾದಿಗಳು– ಜಯವನ್ನು ಅಪೇಕ್ಷಿಸುತ್ತಿರುವ ಈ ಪಾಂಡವರು ಬಹಳ ಸಂತೋಷದಿಂದ ಬರುತ್ತಿದ್ದಾರೆ. ನಾವಾದರೂ ಈಗಲೇ ಇಲ್ಲಿಂದ ಹೊರಡುತ್ತೇವೆ. ನಮಗೆ ಅಪ್ಪಣೆಯನ್ನು ಕೊಡು.

ಸಂಜಯಃ

ದುರ್ಯೋಧನಸ್ತು ತಚ್ಛ್ರುತ್ವಾ ತೇಷಾಂ ಚೈವ ಯಶಸ್ವಿನಾಮ್ ।
ತಥೇತ್ಯುಕ್ತ್ವಾ ಹ್ರದಂ ತಂ ವೈ ಮಾಯಯಾಽಸ್ತಂಭಯತ್ ಪ್ರಭೋ ॥

ಸಂಜಯ– ಪ್ರಭುವೇ! ಕೀರ್ತಿವಂತರಾದ ಅವರ ಮಾತನ್ನು ಕೇಳಿದ ದುರ್ಯೋಧನನು ಹಾಗೆಯೇ ಆಗಲಿ ಎಂದು ಹೇಳಿದನು ಮತ್ತು ತನ್ನ ಮಾಯಾವಿದ್ಯೆಯಿಂದ ಜಲಸ್ತಂಭವನ್ನು ಮಾಡಿ ಸರೋವರದ ಒಳಗೆ ಪ್ರವೇಶಿಸಿದನು.

ತೇ ತ್ವನುಜ್ಞಾಪ್ಯ ರಾಜಾನಂ ಭೃಶಂ ಶೋಕಪರಾಯಣಾಃ ।
ಜಗ್ಮುರ್ದೂರಂ ಮಹಾರಾಜ ಕೃಪಪ್ರಭೃತಯೋ ರಥಾಃ ॥೭೧॥

ಮಹಾರಾಜ! ಆ ಕೃಪಾದಿ ಮಹಾರಥರು ರಾಜನ ಅನುಜ್ಞೆಯನ್ನು ಪಡೆದು ಬಹಳ ದುಃಖಿತರಾಗಿ ತುಂಬ ದೂರ ಹೋದರು.

ತೇ ಗತ್ವಾ ದೂರಮಧ್ವಾನಂ ನ್ಯಗ್ರೋಧಂ ಪ್ರೇಕ್ಷ್ಯ ಮಾರಿಷ ।
ನ್ಯವಿಶಂತ ಭೃಶಂ ಶ್ರಾಂತಾಃ ಚಿಂತಯಂತೋ ನೃಪಂ ಪ್ರತಿ ॥೭೨॥

ರಾಜನೇ! ದೂರದ ತನಕ ಹೋದ ಅವರು ಒಂದು ಆಲದ ಮರವನ್ನು ನೋಡಿ ಬಹಳ ಆಯಾಸಗೊಂಡಿದ್ದರಿಂದ ಅಲ್ಲಿ ಕುಳಿತುಕೊಂಡರು. ದುರ್ಯೋಧನನ ಬಗೆಗೆ ಚಿಂತೆಗೊಳಗಾದರು.

ವಿಷ್ಟಭ್ಯ ಸಲಿಲಂ ಸುಪ್ತೋ ಧಾರ್ತರಾಷ್ಟ್ರೋ ಮಹಾಬಲಃ ।
ಪಾಂಡವಾಶ್ಚಾಪಿ ಸಂಪ್ರಾಪ್ತಾಃ ತಂ ದೇಶಂ ಯುದ್ಧಮೀಪ್ಸವಃ ॥೭೩॥

ಮಹಾಬಲಶಾಲಿಯಾದ ದುರ್ಯೋಧನನು ಜಲವನ್ನು ಪ್ರವೇಶಿಸಿ ಮಲಗಿದನು. ಯುದ್ಧವನ್ನು ಅಪೇಕ್ಷಿಸುವ ಪಾಂಡವರು ಆ ಸ್ಥಳಕ್ಕೆ ಬಂದರು.

ಕೃಪಾದಯಃ

ಕಥಂ ನ ಯುದ್ಧಂ ಭವಿತಾ ಕಥಂ ನು ಸ್ಯಾತ್ ಸ ಪಾರ್ಥಿವಃ ।
ಕಥಂ ನು ಪಾಂಡವಾಶ್ಚಾತ್ರ ಪ್ರತಿಪತ್ಸ್ಯಂತಿ ಕೌರವಮ್ ॥೭೪॥

ಕೃಪಾದಿಗಳು– ಯುದ್ಧವು ನಡೆಯದಿರಲಿಕ್ಕೆ ಹೇಗೆ ತಾನೇ ಸಾಧ್ಯ? ನಮ್ಮ ರಾಜನು ಹೇಗೆ ಇದ್ದಾನು? ಅಲ್ಲಿ ಪಾಂಡವರು ದುರ್ಯೋಧನನನ್ನು ಹೇಗೆ ಕಂಡುಹಿಡಿದಾರು?

ಸಂಜಯಃ

ಇತ್ಯೇವಂ ಚಿಂತಯಂತಸ್ತೇ ರಥೇಭ್ಯೋಽಶ್ವಾನ್ ವಿಮುಚ್ಯ ಚ ।
ತತ್ರಾಸಾಂಚಕ್ರಿರೇ ರಾಜನ್ ಕೃಪಪ್ರಭೃತಯಸ್ತದಾ ॥೭೫॥

ಸಂಜಯ– ರಾಜನೇ! ಈ ರೀತಿಯಲ್ಲಿ ಚಿಂತಿಸುತ್ತಾ ಕೃಪಾದಿಗಳು ತಮ್ಮ ರಥಕ್ಕೆ ಕಟ್ಟಿದ ಕುದುರೆಗಳನ್ನು ಬಿಚ್ಚಿ ಅಲ್ಲಿಯೇ ಕುಳಿತುಕೊಂಡರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ದುರ್ಯೋಧನಸ್ಯ ಹ್ರದಪ್ರವೇಶೋ ನಾಮ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎರಡನೆಯ ಅಧ್ಯಾಯ

ಯುಧಿಷ್ಠಿರನು ಸರೋವರದಲ್ಲಿ ಅಡಗಿದ್ದ ದುರ್ಯೋಧನನಿಗೆ ನಿಷ್ಠುರಮಾತುಗಳಿಂದ ಬೈಯುವುದು. ಯುಧಿಷ್ಠಿರ-ದುರ್ಯೋಧನರ ನಡುವೆ ವಿವಾದ. ಯುಧಿಷ್ಠಿರನ ಕಟುವಾದ ಮಾತುಗಳಿಂದ ಕುಪಿತನಾದ ದುರ್ಯೋಧನನು ಗದೆಯನ್ನು ಹಿಡಿದುಕೊಂಡು ಸರೋವರದಿಂದ ಹೊರಬಂದುದು. ಯುಧಿಷ್ಠಿರ-ದುರ್ಯೋಧನರ ಮಧ್ಯೆ ಪುನಃ ವಿವಾದ.

ಸಂಜಯಃ

ತತಸ್ತೇಷ್ವಪಯಾತೇಷು ರಥೇಷು ತ್ರಿಷು ಪಾಂಡವಾಃ ।
ತಂ ಹ್ರದಂ ಪ್ರತ್ಯಪದ್ಯಂತ ಯತ್ರ ದುರ್ಯೋಧನೋಽಭವತ್ ॥೧॥

ಸಂಜಯ– ಕೃಪಾದಿ ಮಹಾರಥರು ಆ ಸ್ಥಳದಿಂದ ಹೊರಗೆ ಹೋದ ನಂತರ ಪಾಂಡವರು ಎಲ್ಲಿ ದುರ್ಯೋಧನನು ಇದ್ದನೋ ಆ ಸರೋವರದ ಕಡೆಗೆ ಬಂದರು.

ಆಸಾದ್ಯ ತು ಕುರುಶ್ರೇಷ್ಠ ತತ್ರ ದ್ವೈಪಾಯನಂ ಹ್ರದಮ್ ।
ಸ್ತಂಭಿತಂ ಧಾರ್ತರಾಷ್ಟ್ರೇಣ ದೃಷ್ಟ್ವಾ ತಂ ಸಲಿಲಾಶಯಮ್ ॥೨॥

ವಾಸುದೇವಮಿದಂ ವಾಕ್ಯಮಬ್ರವೀತ್ ಕುರುನಂದನಃ ॥೩॥

ಕುರುಶ್ರೇಷ್ಠನೇ! ದ್ವೈಪಾಯನಸರೋವರಕ್ಕೆ ಬಂದ ಧರ್ಮರಾಜನು ಜಲಸ್ತಂಭನ ಮಾಡಿಕೊಂಡು ನೀರೊಳಗೆ ಮಲಗಿದ್ದ ದುರ್ಯೋಧನನನ್ನು ನೋಡಿ ಶ್ರೀಕೃಷ್ಣನಿಗೆ ಈ ಮಾತನ್ನು ಹೇಳುತ್ತಾನೆ.

ಯುಧಿಷ್ಠಿರಃ

ಪಶ್ಯೇಮಾಂ ಧಾರ್ತರಾಷ್ಟ್ರೇಣ ಮಾಯಾಮಪ್ಸು ಪ್ರಯೋಜಿತಾಮ್ ।
ವಿಷ್ಟಭ್ಯ ಸಲಿಲಂ ಶೇತೇ ನಾಸ್ಯ ಮಾನುಷತೋ ಭಯಮ್ ॥೪॥

ಯುಧಿಷ್ಠಿರ– ದುರ್ಯೋಧನನು ನೀರಿನೊಳಗೆ ಪ್ರಯೋಗಿಸಿದ ಈ ಮಾಯೆಯನ್ನು ನೋಡು! ನೀರನ್ನು ಸ್ತಂಭನಗೊಳಿಸಿ ಮಲಗಿದ್ದಾನೆ. ಇವನಿಗೆ ಮನುಷ್ಯರಿಂದ ಭಯವಿಲ್ಲ.

ದೈವೀಂ ಮಾಯಾಮಿಮಾಂ ಕೃತ್ವಾ ಸಲಿಲಾಂತರ್ಗತೋ ಹ್ಯಯಮ್ ।
ನಿಕೃತ್ಯಾ ನಿಕೃತಿಪ್ರಜ್ಞೋ ನ ಸ ಜೀವನ್ ವಿಮೋಕ್ಷ್ಯತೇ ॥೫॥

ಮಾಟ-ಮಂತ್ರಗಳಲ್ಲಿ ನಿಪುಣನಾದ ಈ ದುರ್ಯೋಧನನು ಈ ದೈವಿಕ ಮಾಯೆಯನ್ನು ಪ್ರಯೋಗಿಸಿ ಮಾಟ ಮಾಡಿ ನೀರಿನೊಳಗೆ ಇದ್ದಾನೆ. ಇವನನ್ನು ಬದುಕಿರಲು ಬಿಡಬಾರರು.

ಯದ್ಯಸ್ಯ ಸಮರೇ ಸಾಹ್ಯಂ ಕುರುತೇ ವಾಸವಃ ಸ್ವಯಮ್ ।
ತಥಾಽಪ್ಯೇತಂ ಹತಂ ಯುದ್ಧೇ ಲೋಕಾ ದ್ರಕ್ಷ್ಯಂತಿ ಮಾಧವ ॥೬॥

ಒಂದು ಪಕ್ಷ ಸ್ವತಃ ದೇವೇಂದ್ರನೇ ಇವನಿಗೆ ಸಹಾಯ ಮಾಡಲು ಬಂದರೂ ಯುದ್ಧದಲ್ಲಿ ಇವನು ಸಾಯುವುದನ್ನು ಲೋಕದ ಜನರು ನೋಡುವರು.

ಶ್ರೀಭಗವಾನ್

ಮಾಯಾವಿನ ಇಮಾಂ ಮಾಯಾಂ ಮಾಯಯಾ ಜಹಿ ಭಾರತ ।
ಮಾಯಾವೀ ಮಾಯಯಾ ವಧ್ಯಃ ಸತ್ಯಮೇತದ್ ಯುಧಿಷ್ಠಿರ ॥೭॥

ಶ್ರೀಭಗವಾನ್– ಭರತಕುಲೋದ್ಭವನೇ! ಮಾಯಾವಿಯ ಈ ಮಾಯೆಯನ್ನು ಮಾಯೆಯಿಂದಲೇ ನಾಶ ಮಾಡು. ಯುಧಿಷ್ಠಿರನೇ! ಮಾಯೆಯನ್ನು ಮಾಯೆಯಿಂದಲೇ ಹೋಗಲಾಡಿಸಬೇಕೆಂಬ ನಿಯಮವು ಸತ್ಯವಾಗಿದೆ.

ಕ್ರಿಯಾಭ್ಯುಪಾಯೈರ್ಬಹುಭಿಃ ಮಾಯಾಮಪ್ಸು ಪ್ರಯೋಜ್ಯ ಚ ।
ಜಹಿ ತ್ವಂ ಭರತಶ್ರೇಷ್ಠ ಮಾಯಾತ್ಮಾನಂ ಸುಯೋಧನಮ್ ॥೮॥

ಭರಶ್ರೇಷ್ಠನೇ! ಮಾಯೆಯನ್ನು ನಿವಾರಣೆಮಾಡುವ ಬೇರೆ ಬೇರೆ ಕ್ರಿಯೆಗಳನ್ನು ನೀರಿನಲ್ಲಿಪ್ರಯೋಗಿಸಿ, ಮಾಯಾಸ್ವರೂಪನಾದ ದುರ್ಯೋಧನನನ್ನು ನೀನು ಕೊಲ್ಲು.

ಕ್ರಿಯಾಭ್ಯುಪಾಯೈರಿಂದ್ರೇಣ ನಿಹತಾ ದೈತ್ಯದಾನವಾಃ ।
ಕ್ರಿಯಾಭ್ಯುಪಾಯೈಃ ಪೂರ್ವಂ ಹಿ ಬಲಿರ್ಬದ್ಧೋ ಮಹಾತ್ಮನಾ ॥೯॥

ಮಾಯಾನಿವರ್ತಕವಾದ ಕ್ರಿಯೆಗಳನ್ನು ಮಾಡಿಯೇ ದೈತ್ಯರು ಮತ್ತು ದಾನವರನ್ನು ಕೊಂದಿದ್ದಾನೆ. ಮಹಾತ್ಮನಾದ ವಾಮನನು ಈ ಕ್ರಿಯೆಗಳಿಂದಲೇ ಬಲಿಚಕ್ರವರ್ತಿಯನ್ನು ಬಂಧಿಸಿದನು.

ಕ್ರಿಯಾಭ್ಯುಪಾಯೈಃ ಪೂರ್ವಂ ಹಿ ಹಿರಣ್ಯಾಕ್ಷೋ ಮಹಾಸುರಃ ।
ಹಿರಣ್ಯಕಶಿಪುಶ್ಚೈವ ಕ್ರಿಯಯೈವ ನಿಪಾತಿತಃ ॥೧೦॥

ಇಂತಹ ಕ್ರಿಯೆಗಳ ಪ್ರಯೋಗ ಮಾಡಿಯೇ ಮಾಯಾವಿಯಾದ ಮಹಾಸುರ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಇವರನ್ನು ಪರಮಾತ್ಮನು ನಾಶ ಮಾಡಿದನು.

ವೃತ್ರಶ್ಚ ನಿಹತೋ ರಾಜನ್ ಸಾನುಬಂಧಃ ಸಹಾನುಗಃ ॥೧೧॥

ರಾಜನೇ! ಇಂತಹ ಕ್ರಿಯಾಪ್ರಯೋಗಗಳಿಂದಲೇ ಪರಿವಾರಸಮೇತನಾದ ವೃತ್ರಾಸುರನನ್ನು ಸಾಯಿಸಲಾಯಿತು.

ತಥಾ ಪೌಲಸ್ತ್ಯತನಯೋ ರಾವಣೋ ನಾಮ ರಾಕ್ಷಸಃ ।
ರಾಮೇಣ ನಿಹತೋ ರಾಜನ್ ಸಾನುಬಂಧಃ ಸಹಾನುಗಃ ॥೧೨॥

ರಾಜನೇ! ಅದೇ ರೀತಿಯಲ್ಲಿ ಕ್ರಿಯಾಪ್ರಯೋಗ ಮಾಡಿ ಶ್ರೀರಾಮನು ಪೌಲಸ್ತ್ಯನ ಮಗನಾದ ರಾವಣನೆಂಬ ರಾಕ್ಷಸನನ್ನೂ ಅವನ ಸಹಾನುವರ್ತಿಗಳನ್ನು ಸಂಹರಿಸಿದನು.

ಕ್ರಿಯಯಾ ಯೋಗಮಾಸ್ಥಾಯ ತಥಾ ತ್ವಮಪಿ ವಿಕ್ರಮ ।
ಕ್ರಿಯಾಭ್ಯುಪಾಯೈರ್ನಿಹತೋ ಯಮೋ ನಾಮ ಮಹಾಸುರಃ ॥೧೩॥

ಮಹಾಪರಾಕ್ರಮಿಯೇ! ನೀನೂ ಕೂಡ ಅಂತಹ ಕ್ರಿಯಾಪ್ರಯೋಗಗಳಿಂದಲೇ ನಿನ್ನ ವಿಕ್ರಮವನ್ನು ತೋರಿಸು. ಯಮ ಎಂಬ ದೊಡ್ಡ ಅಸುರನೂ ಹೀಗೆಯೇ ವಧಿಸಲ್ಪಟ್ಟನು.

ನರಕಶ್ಚ ಮಹಾವೀರ್ಯೋ ವಿಪ್ರಚಿತ್ತಿಶ್ಚ ವೀರ್ಯವಾನ್ ।
ವಾತಾಪಿರಿಲ್ವಲಶ್ಚೈವ ತ್ರಿಶಿರಾಶ್ಚ ತಥಾ ವಿಭೋ ॥೧೪॥

ಸುಂದೋಪಸುಂದಾವಸುರೌ ಕ್ರಿಯಯೈವ ನಿಷೂದಿತೌ ।
ತಾರಕಶ್ಚ ಮಹಾದೈತ್ಯೋ ಹ್ಯಂಧಕಶ್ಚ ನಿಷೂದಿತಃ ॥೧೫॥

ಮಹಾವೀರನಾದ ನರಕ, ವೀರನಾದ ವಿಪ್ರಚಿತ್ತಿ, ವಾತಾಪಿ, ಇಲ್ವಲ, ತ್ರಿಶಿರ, ಸುಂದೋಪಸುಂದರು, ತಾರಕಾಸುರ, ಮಹಾದೈತ್ಯನಾದ ಅಂಧಕ ಇವರೆಲ್ಲಾ ಇಂಥ ಕ್ರಿಯಾಪ್ರಯೋಗಗಳಿಂದಲೇ ಕೊಲ್ಲಲ್ಪಟ್ಟರು.

ಕ್ರಿಯಾಭ್ಯುಪಾಯೈರಿಂದ್ರೇಣ ತ್ರಿದಿವಂ ಭುಜ್ಯತೇ ವಿಭೋ ।
ಕ್ರಿಯಾ ಬಲವತೀ ರಾಜನ್ ನಾನ್ಯತ್ ಕಿಂಚಿದ್ ಯುಧಿಷ್ಠಿರ ॥೧೬॥

ವಿಭುವೇ! ಇಂದ್ರನೂ ಇಂತಹ ಕ್ರಿಯೆಗಳಿಂದಲೇ ಮೂರುಲೋಕವನ್ನೂ ಆಳುತ್ತಿದ್ದಾನೆ. ಯುಧಿಷ್ಠಿರರಾಜನೇ! ಕ್ರಿಯಾಪ್ರಯೋಗಗಳು ಬಹಳ ಬಲಶಾಲಿಗಳಾದವು. ಬೇರೆ ಯಾವುದೂ ಅಲ್ಲ.

ದೈತ್ಯಾಶ್ಚ ಬಹವೋ ರಾಜನ್ ರಾಕ್ಷಸಾಃ ಪಾರ್ಥಿವಾಸ್ತಥಾ ।
ಕ್ರಿಯಾಭ್ಯುಪಾಯೈರ್ನಿಹತಾಃ ಕ್ರಿಯಾಂ ತಸ್ಮಾತ್ ಸಮಾಚರ ॥೧೭॥

ಅನೇಕ ದೈತ್ಯರು, ರಾಕ್ಷಸರು, ರಾಜರು, ಇಂಥ ಕ್ರಿಯೆಗಳಿಂದಲೇ ಕೊಲ್ಲಲ್ಪಟ್ಟರು. ಆದ್ದರಿಂದ ರಾಜನೇ! ನೀನೂ ಕೂಡ ಕ್ರಿಯೆಗಳನ್ನು ನಡೆಸು.

ಸಂಜಯಃ

ಇತ್ಯುಕ್ತೋ ವಾಸುದೇವೇನ ಪಾಂಡವಃ ಸಂಶಿತವ್ರತಃ ।
ಜಲಸ್ಥಂ ತಂ ಮಹಾರಾಜ ತವ ಪುತ್ರಂ ಮಹಾರಥಮ್ ॥೧೮॥

ಅಭ್ಯಭಾಷತ ಕೌಂತೇಯಃ ಪ್ರಹಸನ್ನಿವ ಭಾರತ ॥೧೯॥

ಸಂಜಯ– ಕೃಷ್ಣನು ಹೀಗೆ ಹೇಳಿದಾಗ ಯುಧಿಷ್ಠಿರನು ವ್ರತನಿಷ್ಠನಾಗಿ ಜಲದಲ್ಲಿ ಮುಳುಗಿದ್ದ ನಿನ್ನ ಮಗ ಮಹಾರಥ ದುರ್ಯೋಧನನಿಗೆ ನಗುತ್ತಾ ಹೀಗೆ ಹೇಳಿದನು.

ಯುಧಿಷ್ಠಿರಃ

ಸುಯೋಧನ ಕಿಮರ್ಥೋಽಯಮಾರಂಭೋಽಪ್ಸು ಕೃತಸ್ತ್ವಯಾ ।
ಸರ್ವಕ್ಷತ್ರಂ ಘಾತಯಿತ್ವಾ ಸ್ವಜನಂ ಚ ವಿಶಾಂಪತೇ ॥೨೦॥

ಯುಧಿಷ್ಠಿರ– ಹೇ ಮಹಾರಾಜ ಸುಯೋಧನನೇ! ಎಲ್ಲಾ ಕ್ಷತ್ರಿಯರನ್ನೂ, ನಿನ್ನ ಬಾಂಧವರನ್ನೂ ಕೊಂದು ಏಕೆ ಈಗ ನೀರಿನಲ್ಲಿ ಕಾರ್ಯಾರಂಭವನ್ನು ಮಾಡಿರುವಿ?

ಜಲಾಶಯಂ ಪ್ರವಿಷ್ಟೋಽದ್ಯ ವಾಂಛನ್ ಜೀವಿತಮಾತ್ಮನಃ ।
ಉತ್ತಿಷ್ಠ ರಾಜನ್ ಯುದ್ಧಾಯ ಸಹಾಸ್ಮಾಭಿಃ ಸುಯೋಧನ ॥೨೧॥

ಬದುಕುವ ಆಸೆಯಿಂದ ಇವತ್ತು ನೀನು ಜಲಾಶಯವನ್ನು ಪ್ರವೇಶಮಾಡಿರುವಿ. ರಾಜಸುಯೋಧನನೇ! ಎದ್ದು ಮೇಲೆ ಬಾ. ನಮ್ಮೊಡನೆ ಯುದ್ಧವನ್ನು ಮಾಡು.

ಕ್ವ ತೇ ದರ್ಪೋ ನರಶ್ರೇಷ್ಠ ಸ ಚ ಮಾನಃ ಕ್ವ ತೇ ಗತಃ ।
ಯಸ್ತ್ವಂ ಸಂಸ್ತಂಭ್ಯ ಸಲಿಲಂ ರಾಜನ್ ಭೀತೋ ವ್ಯವಸ್ಥಿತಃ ॥೨೨॥

ಹೇ ನರೋತ್ತಮನೇ! ನೀನು ನಮ್ಮಿಂದ ಭಯಗೊಂಡು ಜಲವನ್ನು ಸ್ತಂಭನಗೊಳಿಸಿ ಅಡಗಿ ಕುಳಿತುಕೊಂಡಿದ್ದಿ. ನಿನ್ನ ದರ್ಪ, ಅಹಂಕಾರ ಇವೆಲ್ಲ ಎಲ್ಲಿ ಹೋದವು?

ಸರ್ವೇ ತ್ವಾಂ ಶೂರ ಇತ್ಯೇವಂ ಜನಾ ಜಲ್ಪಂತಿ ಸಂಸದಿ ।
ವ್ಯರ್ಥಂ ತದ್ ಭವತೋ ಮನ್ಯೇ ಶೌರ್ಯಂ ಸಲಿಲಶಾಯಿನಃ ॥೨೩॥

ಸಭೆಗಳಲ್ಲಿ ಎಲ್ಲರೂ ನಿನ್ನನ್ನು ಶೂರ ಎಂಬುದಾಗಿಯೇ ಮಾತನಾಡಿಕೊಳ್ಳುತ್ತಾರೆ. ಈಗ ನೀರಿನಲ್ಲಿ ಮಲಗಿ ಅಡಗಿಕೊಂಡಿರುವ ನಿನ್ನ ಆ ಶೂರತ್ವವು ವ್ಯರ್ಥವೆಂಬುದಾಗಿ ತಿಳಿಯುತ್ತೇನೆ.

ಉತ್ತಿಷ್ಠ ರಾಜನ್ ಯುಧ್ಯಸ್ವ ಕ್ಷತ್ರಿಯೋಽಸಿ ಕುಲೋದ್ಭವಃ ।
ಕೌರವೇಯೋ ವಿಶೇಷೇಣ ಕುಲಂ ಜನ್ಮ ಚ ಸಂಸ್ಮರ ॥೨೪॥

ನೀನು ಕ್ಷತ್ರಿಯಕುಲದಲ್ಲಿ ಹುಟ್ಟಿದವನು. ಅದರಲ್ಲಿಯೂ ವಿಶೇಷವಾಗಿ ಕುರುಕುಲದಲ್ಲಿ ಹುಟ್ಟಿದವನು. ರಾಜನೇ! ನಿನ್ನ ಕುಲವನ್ನೂ, ನಿನ್ನ ಹುಟ್ಟನ್ನೂ ಸ್ಮರಿಸಿಕೊಳ್ಳು! ಎದ್ದೇಳು! ಯುದ್ಧ ಮಾಡು.

ಸ ಕಥಂ ಕೌರವೇ ವಂಶೇ ಪ್ರಶಸ್ತಂ ಜನ್ಮ ಚಾತ್ಮನಃ ।
ಯುದ್ಧ್ವಾ ತ್ರಸ್ತಸ್ತತಸ್ತೋಯಂ ಪ್ರವಿಶ್ಯ ಪ್ರತಿತಿಷ್ಠಸಿ ॥೨೫॥

ಕುರುಕುಲದಲ್ಲಿ ಯೋಗ್ಯವಾದ ಜನ್ಮವು ನಿನಗೆ ಹೇಗೆ ಹೊಂದಿಕೆ ಆದೀತು? ನೀನು ನಮ್ಮೊಡನೆ ಯುದ್ಧಮಾಡಲು ಹೆದರಿ ಈಗ ನೀರಲ್ಲಿ ಪ್ರವೇಶ ಮಾಡಿ ಅಡಗಿ ಕುಳಿತಿರುವಿ.

ಅಯುದ್ಧೇನ ವ್ಯವಸ್ಥಾನಂ ನೈಷ ಧರ್ಮಃ ಸನಾತನಃ ।
ಅನಾರ್ಯಜುಷ್ಟಮಸ್ವರ್ಗ್ಯಂ ರಣಾದ್ ರಾಜ್ಞಃ ಪಲಾಯನಮ್ ॥೨೬॥

ಯುದ್ಧ ಮಾಡದೆ ಇರುವುದು ಸನಾತನವಾದ ಧರ್ಮವಲ್ಲ. ರಾಜನಾದವನು ಯುದ್ಧದಿಂದ ಓಡಿಹೋಗುವುದು ತಿಳಿದವರಿಂದ ಸ್ವೀಕಾರಯೋಗ್ಯವಾದ ಕಾರ್ಯವಲ್ಲ, ಅದು ಸ್ವರ್ಗಕ್ಕೂ ಕಾರಣವಾಗುವುದಿಲ್ಲ.

ಕಥಂ ಪಾರಮಗತ್ವಾ ಹಿ ಯುದ್ಧಂ ತ್ವಂ ವೈ ಜಿಜೀವಿಷುಃ ।
ಇಮಾನ್ ನಿಪತಿತಾನ್ ದೃಷ್ಟ್ವಾ ಪುತ್ರಾನ್ ಭ್ರಾತೄನ್ ಪಿತೄನ್ ಸಖೀನ್ ॥

ರಣರಂಗದಲ್ಲಿ ಸತ್ತು ಬಿದ್ದಿರುವ ನಿನ್ನ ಮಕ್ಕಳು, ಸಹೋದರರು, ಪಿತೃಗಳು, ಸ್ನೇಹಿತರು ಇವರೆಲ್ಲರನ್ನು ನೋಡಿಯೂ ನೀನು ಬದುಕುಳಿಯಬೇಕೆಂಬ ಆಸೆಯಿಂದ ಯುದ್ಧ ಮಾಡದೆ ಇರುವುದು ಹೇಗೆ ಸಾಧ್ಯ?

ಸಂಬಂಧಿನೋ ಬಾಂಧವಾಂಶ್ಚ ವಯಸ್ಯಾನ್ ಮಾತುಲಾಂಸ್ತಥಾ ।
ಘಾತಯಿತ್ವಾ ಕಥಂ ತಾತ ಹ್ರದೇ ತಿಷ್ಠಸಿ ಸಾಂಪ್ರತಮ್ ॥೨೮॥

ಸಂಬಂಧಿಗಳು, ಬಂಧುಗಳು, ಗೆಳೆಯರು, ಸೋದರಮಾವಂದಿರು ಇವರೆಲ್ಲರನ್ನೂ ಯುದ್ಧದಲ್ಲಿ ಸಾಯಿಸಿ, ಈಗ ನೀನು ಸರೋವರದಲ್ಲಿ ಅಡಗಿ ಕುಳಿತುಕೊಳ್ಳುವುದು ಹೇಗೆ ಯುಕ್ತವಾದೀತು?

ಶೂರಮಾನೀ ನ ಶೂರಸ್ತ್ವಂ ಮಿಥ್ಯಾ ವದಸಿ ಕೌರವ ।
ಶೂರೋಽಹಮಿತಿ ದುರ್ಬುದ್ಧೇ ಸರ್ವಲೋಕಸ್ಯ ಪಶ್ಯತಃ ॥೨೯॥

ನೀನು ನಿನ್ನನ್ನು ಶೂರ ಎಂಬುದಾಗಿ ತಿಳಿದುಕೊಂಡಿದ್ದಿ. ಆದರೆ ನೀನು ಶೂರನಲ್ಲ. ಕೌರವ! ಎಲ್ಲರ ಎದುರುಗಡೆ ನಾನು ಶೂರನಾಗಿದ್ದೇನೆ ಎಂದು ನೀನು ಸುಳ್ಳನ್ನು ಹೇಳುತ್ತಾ ಇದ್ದೀಯ.

ನ ಹಿ ಶೂರಾಃ ಪಲಾಯಂತೇ ಶತ್ರೂನ್ ದೃಷ್ಟ್ವಾ ಕಥಂಚನ ।
ಬ್ರೂಹಿ ವಾ ತ್ವಂ ಯಯಾ ವೃತ್ತ್ಯಾ ಶೂರಸ್ಯೃಜಸಿ ಸಂಯುಗಮ್ ॥೩೦॥

ಶೂರರಾದವರು ಶತ್ರುಗಳನ್ನು ನೋಡಿ ಯಾವ ಕಾರಣಕ್ಕೂ ಓಡಿಹೋಗುವುದಿಲ್ಲ. ನೀನು ಯಾವ ಪ್ರವೃತ್ತಿಯನ್ನು ಅವಲಂಬಿಸಿ ಯುದ್ಧವನ್ನು ಬಿಡುತ್ತಿ ಎಂಬುದನ್ನು ಶೂರನಾದ ನೀನು ಹೇಳು.

ಸ ತ್ವಮುತ್ತಿಷ್ಠ ಯುಧ್ಯಸ್ವ ವಿಹಾಯ ಭಯಮಾತ್ಮನಃ ॥೩೧॥

ಆದ್ದರಿಂದ ನಿನ್ನಲ್ಲಿರುವ ಭಯವನ್ನು ಬಿಟ್ಟು ಎದ್ದು ಬಾ. ಯುದ್ಧ ಮಾಡು.

ಪಾತಯಿತ್ವಾ ಸರ್ವಸೈನ್ಯಾನ್ ಭ್ರಾತೄಂಶ್ಚೈವ ಸುಯೋಧನ ।
ನೇದಾನೀಂ ಜೀವಿತೇ ಬುದ್ಧಿಃ ಕಾರ್ಯಾ ಧರ್ಮಚಿಕೀರ್ಷಯಾ ॥೩೨॥

ಕ್ಷತ್ರಧರ್ಮಂ ಸಮಾಶ್ರಿತ್ಯ ತದ್ವಿಧೇನ ಸುಯೋಧನ ॥೩೩॥

ಸುಯೋಧನನೇ! ಎಲ್ಲಾ ಸೈನ್ಯಗಳನ್ನು ಮತ್ತು ಎಲ್ಲಾ ಸಹೋದರರನ್ನೂ ಯುದ್ಧದಲ್ಲಿ ಕೊಲ್ಲಿಸಿ ಈಗ ಬದುಕುವ ವಿಷಯದಲ್ಲಿ ನಿಶ್ಚಯಮಾಡಿಕೊಂಡಿರುವುದು ಯೋಗ್ಯವಲ್ಲ. ದುರ್ಯೋಧನನೇ! ಕ್ಷತ್ರಿಯಧರ್ಮವನ್ನು ಆಶ್ರಯಿಸಿರುವ ನಿನ್ನಂತಹವರು ಹೀಗೆ ಮಾಡುವುದು ಧರ್ಮವನ್ನು ಅನುಸರಿಸುವ ದಾರಿಯಲ್ಲ.

ಯತ್ತು ಕರ್ಣಮುಪಾಶ್ರಿತ್ಯ ಶಕುನಿಂ ಚಾಪಿ ಸೌಬಲಮ್ ।
ದುಃಶಾಸನಂ ಚ ಮೋಹಾತ್ ತ್ವಮಾತ್ಮಾನಂ ನಾವಬುದ್ಧವಾನ್ ॥೩೪॥

ಕರ್ಣ, ಶಕುನಿ ಮೊದಲಾದವರನ್ನು ಆಶ್ರಯಿಸಿದ ನೀನು ನಿನ್ನನ್ನು ಭ್ರಮೆಯಿಂದಾಗಿ ಸಾವಿಲ್ಲದವನು ಎಂಬುದಾಗಿ ಅರಿತಿದ್ದಿ. ನಿನ್ನನ್ನು ನೀನು ಸರಿಯಾಗಿ ತಿಳಿದುಕೊಳ್ಳಲಿಲ್ಲ.

ತತ್ ಪಾಪಂ ಸುಮಹತ್ ಕೃತ್ವಾ ಪ್ರತಿಯುಧ್ಯಸ್ವ ಭಾರತ ॥೩೫॥

ಇಂಥ ಬಹಳ ದೊಡ್ಡದಾದ ಪಾಪವನ್ನು ಮಾಡಿರುವ ಭರತಕುಲೋದ್ಭವನೇ! ನಮ್ಮ ವಿರುದ್ಧವಾಗಿ ಯುದ್ಧ ಮಾಡು.

ಕಥಂ ಹಿ ತ್ವದ್ವಿಧೋ ಮೋಹಾದ್ ರೋಚಯೇತ ಪಲಾಯನಮ್॥೩೬॥

ನಿನ್ನಂತಹವರು ಮೋಹಕ್ಕೆ ಒಳಗಾಗಿ ಯುದ್ಧಮಾಡದೆ ಓಡುವುದು ಹೇಗೆ ಸಾಧ್ಯ?

ಕ್ವ ಚೈತತ್ ಪೌರುಷಂ ಯಾತಂ ಕ್ವ ಚ ಮಾನಃ ಸುಯೋಧನ ।
ಕ್ವ ಚ ವಿಕ್ರಾಂತತಾ ಯಾತಾ ಕಿಂ ನು ಶೇಷೇ ಜಲಾಶಯೇ ॥೩೭॥

ಸುಯೋಧನನೇ! ನಿನ್ನ ಆ ಪೌರುಷ ಎಲ್ಲಿಗೆ ಹೋಯಿತು? ನಿನ್ನ ಅಭಿಮಾನ, ಅಹಂಕಾರಗಳು ಎಲ್ಲಿಗೆ ಹೋದವು? ನಿನ್ನ ಪರಾಕ್ರಮವು ಎಲ್ಲಿಗೆ ಹೋಯಿತು? ಜಲಾಶಯದಲ್ಲಿ ಏಕೆ ಮಲಗಿರುವಿ?

ಸ ತ್ವಮುತ್ತಿಷ್ಠ ಯುಧ್ಯಸ್ವ ಕ್ಷತ್ರಧರ್ಮೇಣ ಭಾರತ ॥೩೮॥

ಭರತಕುಲೋದ್ಭವನೇ! ಅಂತಹ ನೀನು ಕ್ಷತ್ರಿಯಧರ್ಮಕ್ಕನುಸಾರವಾಗಿ ಯುದ್ಧ ಮಾಡು.

ಅಸ್ಮಾನ್ ವಾ ತ್ವಂ ಪರಾಜಿತ್ಯ ಪ್ರಶಾಧಿ ಪೃಥಿವೀಮಿಮಾಮ್ ।
ಅಥವಾ ನಿಹತೋಽಸ್ಮಾಭಿಃ ಭೂಮೌ ಸ್ವಪ್ಸ್ಯಸಿ ಭಾರತ ॥೩೯॥

ದುರ್ಯೋಧನನೇ! ನಮ್ಮನು ಸೋಲಿಸಿ ನೀನು ಈ ಭೂಮಿಯನ್ನು ಆಳು ಅಥವಾ ನಮ್ಮಿಂದ ಹತನಾಗಿ ಭೂಮಿಯಲ್ಲಿ ಮಲಗು.

ಏಷ ತೇ ಪ್ರಥಮೋ ಧರ್ಮಃ ಸೃಷ್ಟೋ ಧಾತ್ರಾ ಮಹಾತ್ಮನಾ ।
ತಂ ಕುರುಷ್ವ ಯಥಾತಥ್ಯಂ ರಾಜಾ ಭವ ಮಹಾರಥ ॥೪೦॥

ಇದು ಮಹಾತ್ಮನಾದ ಚತುರ್ಮುಖನು ನಿನಗೆ ವಿಧಿಸಿದ ಮೊದಲನೆಯ ಧರ್ಮ. ಮಹಾರಥನೇ! ಆ ಧರ್ಮವನ್ನು ಹಾಗೆಯೇ ಆಚರಿಸಿ ರಾಜನಾಗು.

ಸಂಜಯಃ

ಏವಮುಕ್ತೋ ಮಹಾರಾಜ ಧರ್ಮಪುತ್ರೇಣ ಧೀಮತಾ ।
ಸಲಿಲಸ್ಥಸ್ತವ ಸುತ ಇದಂ ವಚನಮಬ್ರವೀತ್ ॥೪೧॥

ಸಂಜಯ– ಮಹಾರಾಜನೇ! ಹೀಗೆ ಧರ್ಮರಾಜನು ಹೇಳಿದ್ದನ್ನು ಕೇಳಿಸಿಕೊಂಡ ನಿನ್ನ ಮಗ ದುರ್ಯೋಧನನು ನೀರಿನಲ್ಲಿದ್ದೇ ಈ ಮಾತನ್ನು ಹೇಳುತ್ತಾನೆ.

ದುರ್ಯೋಧನಃ

ನೈತಚ್ಚಿತ್ರಂ ಮಹಾರಾಜ ಯದ್ ಭೀಃ ಪ್ರಾಣಿನಮಾವಿಶೇತ್ ।
ನ ಚ ಪ್ರಾಣಭಯಾದ್ ಭೀತೋ ವ್ಯಪಯಾತೋಽಸ್ಮಿ ಭಾರತ ॥೪೨॥

ದುರ್ಯೋಧನ– ಮಹಾರಾಜ ಧರ್ಮರಾಜನೇ! ಪ್ರಾಣವುಳ್ಳವರಿಗೆ ಭಯವು ಕಾಣಿಸಿಕೊಳ್ಳುವುದು ಸಹಜ. ಅದರಲ್ಲಿ ವಿಚಿತ್ರವಾದುದು ಯಾವುದೂ ಇಲ್ಲ. ನಾನಾದರೂ ಪ್ರಾಣಭಯದಿಂದ ಹೆದರಲಿಲ್ಲ. ಅಥವಾ ಓಡಿ ಹೋಗಲಿಲ್ಲ.

ವಿರಥಶ್ಚಾನಿಷಂಗೀ ಚ ನಿಹತಃ ಪಾರ್ಷ್ಣಿಸಾರಥಿಃ ।
ಏಕಶ್ಚ ವಿಗಣಃ ಸೋಽಹಂ ಪ್ರತ್ಯಾಶ್ವಾಸಮರೋಚಯಮ್ ॥೪೩॥

ನನ್ನ ರಥ, ಸಾರಥಿ, ಪಾರ್ಶ್ವದಲ್ಲಿದ್ದ ಯೋಧರು, ಇವರೆಲ್ಲಾ ನಾಶವಾಗಿದ್ದಾರೆ. ನನ್ನ ಜೊತೆಗಿದ್ದವರು ಯಾರೂ ಇಲ್ಲ. ಅಂತಹ ನಾನು ವಿಶ್ರಾಂತಿಯನ್ನು ಬಯಸುತ್ತೇನೆ.

ನ ಪ್ರಾಣಹೇತೋರ್ನ ಭಯಾನ್ನ ವಿಷಾದಾದ್ ವಿಶಾಂಪತೇ ।
ಇದಮಂಭಃ ಪ್ರವಿಷ್ಟೋಽಸ್ಮಿ ಶ್ರಮಾತ್ತ್ವಿದಮನುಷ್ಠಿತಮ್ ॥೪೪॥

ರಾಜನೇ! ನಾನು ಪ್ರಾಣಭಯದಿಂದಾಗಲಿ ಪ್ರಾಣವನ್ನು ರಕ್ಷಿಸಿಕೊಳ್ಳಲಿಕ್ಕಾಗಿಯೋ ಅಥವಾ ದುಃಖದಿಂದಲೋ ಈ ಜಲಾಶಯದ ಒಳಗೆ ಪ್ರವೇಶಿಸಲಿಲ್ಲ. ಆದರೆ ನನಗೆ ಶ್ರಮವಾಗಿದ್ದ ಕಾರಣದಿಂದ ಇದನ್ನು ಮಾಡುತ್ತಿದ್ದೇನೆ.

ತ್ವಂ ಚಾಶ್ವಸಿಹಿ ಕೌಂತೇಯ ಯೇ ಚಾಪ್ಯನುಗತಾಸ್ತವ ।
ಅಹಮುತ್ಥಾಯ ವಃ ಸರ್ವಾನ್ ಪ್ರತಿಯೋದ್ಧಾಸ್ಮಿ ಸಂಯುಗೇ ॥೪೫॥

ಕುಂತೀಪುತ್ರ ಯುಧಿಷ್ಠಿರನೇ! ನೀನೂ ಕೂಡ ನಿನ್ನ ಜೊತೆಗಿರುವವರೊಂದಿಗೆ ವಿಶ್ರಾಂತಿ ಪಡೆ. ನಾನು ವಿಶ್ರಾಂತಿಯನ್ನು ಮುಗಿಸಿ ಎದ್ದು ಎಲ್ಲರ ಜೊತೆಗೆ ಯುದ್ಧದಲ್ಲಿ ಹೋರಾಡುವೆನು.

ಯುಧಿಷ್ಠಿರಃ

ಆಶ್ವಸ್ತಾಶ್ಚ ವಯಂ ಸರ್ವೇ ಚಿರಂ ತ್ವಾಂ ಮೃಗಯಾಮಹೇ ।
ತ್ವಮಿದಾನೀಂ ಸಮುತ್ತಿಷ್ಠ ಯುದ್ಧಸ್ವೇಹ ಸುಯೋಧನ ॥೪೬॥

ಯುಧಿಷ್ಠಿರ– ಸುಯೋಧನನೇ! ನಾವೆಲ್ಲರೂ ವಿಶ್ರಾಂತಿಯನ್ನು ಪಡೆದಾಗಿದೆ. ಬಹಳ ಸಮಯದಿಂದ ನಿನ್ನನ್ನು ಹುಡುಕುತ್ತಿದ್ದೇವೆ. ಈಗ ನೀನು ಎದ್ದು ನಮ್ಮೊಡನೆ ಯುದ್ಧವನ್ನು ಮಾಡು.

ಹತ್ವಾ ಚ ಸಮರೇ ಪಾರ್ಥಾನ್ ಸ್ಫೀತಂ ರಾಜ್ಯಮವಾಪ್ನುಹಿ ।
ನಿಹತೋ ವಾ ರಣೇಽಸ್ಮಾಭಿರ್ವೀರಲೋಕಂ ಗಮಿಷ್ಯಸಿ ॥೪೭॥

ಯುದ್ಧದಲ್ಲಿ ಪಾಂಡವರನ್ನು ಕೊಂದು ಸಮೃದ್ಧವಾದ ರಾಜ್ಯವನ್ನು ಹೊಂದು. ಅಥವಾ ಈ ಯುದ್ಧದಲ್ಲಿ ನಮ್ಮಿಂದ ಸತ್ತು ವೀರಸ್ವರ್ಗಕ್ಕೆ ಹೋಗು.

ದುರ್ಯೋಧನಃ

ಯದರ್ಥಂ ರಾಜ್ಯಮಿಚ್ಛೇಯಂ ಕುರೂಣಾಂ ಕುರುನಂದನ ।
ತ ಇಮೇ ನಿಹತಾಃ ಸರ್ವೇ ಭ್ರಾತರೋ ಮೇ ಜನೇಶ್ವರ ॥೪೮॥

ದುರ್ಯೋಧನ– ಕುರುಪುತ್ರನೇ! ಯಾರಿಗಾಗಿ ನಾನು ಕುರುಗಳ ರಾಜ್ಯವನ್ನು ಅಪೇಕ್ಷಿಸಿದ್ದೆನೋ, ಜನಾಧಿಪತಿಯೇ! ನನ್ನ ಆ ಸಹೋದರರೆಲ್ಲರೂ ಸತ್ತಿದ್ದಾರೆ.

ಕ್ಷೀಣರತ್ನಾಂ ಚ ಪೃಥಿವೀಂ ಹತಕ್ಷತ್ರಿಯಪುಂಗವಾಮ್ ।
ನೈತಾಮಿಚ್ಛಾಮ್ಯಹಂ ಭೋಕ್ತುಂ ವಿಧವಾಮಿವ ಯೋಷಿತಮ್ ॥೪೯॥

ಎಲ್ಲಾ ರತ್ನಗಳನ್ನು ಕಳೆದುಕೊಂಡು, ಕ್ಷತ್ರಿಯವೀರರಿಂದ ರಹಿತವಾಗಿರುವ, ವಿಧವಾಸ್ತ್ರೀಯಂತೆ ಇರುವ ಈ ಪೃಥಿವಿಯನ್ನು ಭೋಗಿಸಲು ನಾನು ಇಷ್ಟಪಡುವುದಿಲ್ಲ.

ಅದ್ಯಾಪಿ ತ್ವಹಮಾಶಂಸೇ ತ್ವಾಂ ವಿಜೇತುಂ ಯುಧಿಷ್ಠಿರ ।
ಭುಂಕ್ತ್ವಾ ಪಾಂಚಾಲಪಾಂಡೂನಾಮುತ್ಸಾಹಂ ಭರತರ್ಷಭ ॥೫೦॥

ಭರತಶ್ರೇಷ್ಠ ಯುಧಿಷ್ಠಿರನೇ! ಇಂದಿಗೂ ಕೂಡ ನಾನು ಯುದ್ಧದಲ್ಲಿ ಪಾಂಚಾಲರ ಮತ್ತು ಪಾಂಡವರ ಯುದ್ಧೋತ್ಸಾಹವನ್ನು ಮುರಿದು ನಿನ್ನನ್ನು ಗೆಲ್ಲಬೇಕೆಂದು ಇಚ್ಛಿಸುತ್ತೇನೆ.

ನ ತ್ವಿದಾನೀಮಹಂ ಮನ್ಯೇ ಕಾರ್ಯಂ ಯುದ್ಧೇನ ಕೇನಚಿತ್ ।
ದ್ರೋಣೇ ಕರ್ಣೇ ಚ ಸಂಶಾಂತೇ ನಿಹತೇ ಚ ಪಿತಾಮಹೇ ॥೫೧॥

ದ್ರೋಣ, ಕರ್ಣ, ಪಿತಾಮಹನಾದ ಭೀಷ್ಮ ಇವರೆಲ್ಲಾ ಸತ್ತಮೇಲೆ ಯಾವುದೇ ಯುದ್ಧದಿಂದ ಆಗಬೇಕಾದದ್ದು ಯಾವುದೂ ಇಲ್ಲವೆಂದು ನಾನಿಂದು ತಿಳಿದಿದ್ದೇನೆ.

ಅಸ್ತಿ ತ್ವಿದಾನೀಮಿಯಂ ರಾಜನ್ ಕೇವಲಾ ಪೃಥಿವೀ ತವ ।
ಅಸಹಾಯೋ ಹಿ ಕೋ ರಾಜಾ ರಾಜ್ಯಮಿಚ್ಛೇತ್ ಪ್ರಶಾಸಿತುಮ್ ॥೫೨॥

ರಾಜನ್! ಬರಿದಾದ ಈ ಪೃಥಿವಿಯು ಈಗ ನಿನಗೇ ಇರಲಿ. ಜೊತೆಗೆ ಯಾರೂ ಇಲ್ಲದಿರುವ ಯಾವ ರಾಜನು ರಾಜ್ಯವನ್ನು ಆಳಲು ಅಪೇಕ್ಷಿಸುತ್ತಾನೆ?

ಸುಹೃದಸ್ತಾದೃಶಾನ್ ಹಿತ್ವಾ ಪುತ್ರಾನ್ ಭ್ರಾತೄನ್ ಪಿತೄನಪಿ ।
ಭವದ್ವಿಶ್ಚ ಹೃತೇ ರಾಜ್ಯೇ ಕೋ ನು ಜೀವೇತ ಮಾದೃಶಃ ॥೫೩॥

ಅಂತಹ ಮಿತ್ರರನ್ನು, ಅಂತಹ ಮಕ್ಕಳನ್ನು, ಅಂತಹ ಸಹೋದರರನ್ನು, ಅಂತಹ ಪಿತೃಗಳನ್ನು ಕಳೆದುಕೊಂಡು, ನಿಮ್ಮಿಂದಾಗಿ ರಾಜ್ಯವೂ ಕಳೆದುಹೋದ ಮೇಲೆ ನನ್ನಂತಹವನು ಯಾವನು ತಾನೇ ಬದುಕಿಯಾನು?

ಅಹಂ ವನಂ ಗಮಿಷ್ಯಾಮಿ ಅಜಿನೈಃ ಪರಿವಾರಿತಃ ।
ರತಿರ್ಹಿ ನಾಸ್ತಿ ಮೇ ರಾಜ್ಯೇ ಹತಪಕ್ಷಸ್ಯ ಭಾರತ ॥೫೪॥

ಭಾರತ! ನಾನಾದರೂ ಅಜಿನಧಾರಿಯಾಗಿ ಕಾಡಿಗೆ ಹೋಗುವೆನು. ನನ್ನ ಪಕ್ಷದವರೆಲ್ಲಾ ಸತ್ತಿರುವುದರಿಂದ ನನಗೆ ರಾಜ್ಯದಲ್ಲಿ ಸುಖವೇ (ಆಸಕ್ತಿಯೇ) ಇಲ್ಲ.

ಹತಬಾಂಧವಭೂಯಿಷ್ಠಾ ಹತಾಶ್ವಾ ಹತಕುಂಜರಾ ।
ಏಷಾ ತೇ ಪೃಥಿವೀ ರಾಜನ್ ಭುಂಕ್ಷ್ವೈನಾಂ ವಿಗತಜ್ವರಃ ॥೫೫॥

ಅಧಿಕಾಂಶದಲ್ಲಿ ಸಂಬಂಧಿಗಳೇ ಸತ್ತುಹೋಗಿರುವ, ಆನೆ-ಕುದುರೆಗಳನ್ನು ಕಳೆದುಕೊಂಡಿರುವ ಈ ಪೃಥಿವಿಯನ್ನು ಯಾವುದೇ ಹೆದರಿಕೆಯಿಲ್ಲದೆ ನೀನೇ ಅನುಭವಿಸು.

ವನಮೇವ ಗಮಿಷ್ಯಾಮಿ ವಾಸಿತೋ ಮೃಗಚರ್ಮಣಾ ।
ನ ಹಿ ಮೇ ನಿರ್ಜಿತಸ್ಯಾಸ್ತಿ ಜೀವಿತೇಽದ್ಯ ಸ್ಪೃಹಾ ವಿಭೋ ॥೫೬॥

ವಿಭುವೇ! ನಾನು ಮೃಗಚರ್ಮವನ್ನು ಧರಿಸಿ ಕಾಡಿಗೇ ಹೋಗುವೆನು. ಸೋತುಹೋದ ನನಗೆ ಇಂದು ಜೀವನದಲ್ಲಿ ಆಸೆಯೇ ಇಲ್ಲ.

ಗಚ್ಛ ತ್ವಂ ಭುಂಕ್ಷ್ವ ರಾಜೇಂದ್ರ ಪೃಥಿವೀಂ ನಿಹತದ್ವಿಷಮ್ ।
ಹತಯೋಧಾಂ ನಷ್ಟರತ್ನಾಂ ಶೀರ್ಣಕ್ಷತ್ರಾಂ ಯಥಾಸುಖಮ್ ॥೫೭॥

ಹೋಗು! ರಾಜೇಂದ್ರನೇ! ಶತ್ರುಗಳು ನಾಶವಾಗಿದ್ದಾರೆ. ಯೋಧರು ಸತ್ತಿದ್ದಾರೆ. ಸಂಪತ್ತು ಇಲ್ಲವಾಗಿದೆ. ಕ್ಷತ್ರಿಯರು ಕ್ಷೀಣಿಸಿದ್ದಾರೆ. ಇಂತಹ ಪೃಥಿವಿಯನ್ನು ನಿನಗೆ ಬೇಕಾದ ರೀತಿಯಲ್ಲಿ ಅನುಭವಿಸು.

ಸಂಜಯಃ

ದುರ್ಯೋಧನಂ ತವ ಸುತಂ ಸಲಿಲಸ್ಥಂ ಮಹಾಯಶಾಃ ।
ಶ್ರುತ್ವಾ ತು ಕರುಣಂ ವಾಕ್ಯಮಭಾಷತ ಯುಧಿಷ್ಠಿರಃ ॥೫೮॥

ಸಂಜಯ– ಈ ಕರುಣಾಪೂರ್ಣವಾದ ಮಾತನ್ನು ಕೇಳಿಸಿಕೊಂಡ ಮಹಾಕೀರ್ತಿವಂತನಾದ ಯುಧಿಷ್ಠಿರನು ನೀರಿನೊಳಗಿದ್ದ ನಿನ್ನ ಮಗ ದುರ್ಯೋಧನನಿಗೆ ಹೀಗೆ ಹೇಳುತ್ತಾನೆ.

ಯುಧಿಷ್ಠಿರಃ

ಆರ್ತಪ್ರಲಾಪಂ ಮಾ ತಾತ ಸಲಿಲಸ್ಥಃ ಪ್ರಭಾಷಥಾಃ ।
ನೈತನ್ಮೇ ರೋಚತೇ ರಾಜನ್ ವಾಶಿತಂ ಶಕುನೇರಿವ ॥೫೯॥

ಯುಧಿಷ್ಠಿರ– ಪ್ರಿಯನೇ! ನೀರೊಳಗಿದ್ದುಕೊಂಡು ದುಃಖಿತರು ಮಾಡುವ ಪ್ರಲಾಪವನ್ನು ಮಾಡಬೇಡ. ರಾಜನೇ! ಗುಬ್ಬಿಗಳ ಕಲರವದಂತಿರುವ ಈ ನಿನ್ನ ಮಾತುಗಳು ನನಗೆ ಇಷ್ಟವಾಗುವುದಿಲ್ಲ.

ಯದಿ ವಾऽಪಿ ಸಮರ್ಥಃ ಸ್ಯಾಸ್ತ್ವಂ ದಾನಾಯ ಸುಯೋಧನ ।
ನಾಹಮಿಚ್ಛೇಯಮವನಿಂ ತ್ವಯಾ ದತ್ತಾಂ ಪ್ರಶಾಸಿತುಮ್ ॥೬೦॥

ಒಂದು ಪಕ್ಷದಲ್ಲಿ ನೀನು ನನಗೆ ಭೂಮಿಯನ್ನು ದಾನ ಮಾಡಲು ಸಮರ್ಥನಾಗಿದ್ದರೂ, ನೀನು ದಾನ ಮಾಡಿದ ಭೂಮಿಯನ್ನು ಆಳಲು ನಾನು ಇಚ್ಛಿಸುವುದಿಲ್ಲ.

ಅಧರ್ಮೇಣ ನ ಗೃಹ್ಣೀಯಾಂ ತ್ವಯಾ ದತ್ತಾಂ ಮಹೀಮಿಮಾಮ್ ।
ನ ಹಿ ಧರ್ಮೋ ಭವೇದ್ ರಾಜನ್ ಕ್ಷತ್ರಿಯಸ್ಯ ಪ್ರತಿಗ್ರಹಃ ॥೬೧॥

ದಾನಸ್ವೀಕಾರಮಾಡುವುದು ಕ್ಷತ್ರಿಯನ ಧರ್ಮವಲ್ಲ. ಆದ್ದರಿಂದ ನೀನು ದಾನಮಾಡಿದ ಪೃಥಿವಿಯನ್ನು ಧರ್ಮವಿರುದ್ಧವಾಗಿ ನಾನು ಸ್ವೀಕರಿಸಲಾರೆನು.

ತ್ವಯಾ ದತ್ತಾಂ ನ ಚೇಚ್ಛೇಯಂ ಪೃಥಿವೀಮಖಿಲಾಮಪಿ ।
ತ್ವಾಂ ಚ ಯುದ್ಧೇ ವಿನಿರ್ಜಿತ್ಯ ಭೋಕ್ತಾಸ್ಮಿ ವಸುಧಾಮಿಮಾಮ್ ॥೬೨॥

ನೀನು ದಾನಮಾಡುವ ಸಮಸ್ತಪೃಥಿವಿಯನ್ನೂ ನಾನು ಬಯಸುವುದಿಲ್ಲ. ಯುದ್ಧದಲ್ಲಿನಿನ್ನನ್ನು ಗೆದ್ದು ಈ ಭೂಮಿಯನ್ನು ಅನುಭವಿಸುವೆನು.

ಅನೀಶ್ವರಶ್ಚ ಪೃಥಿವೀಂ ಕಥಂ ತ್ವಂ ದಾತುಮಿಚ್ಛಸಿ ।
ತ್ವಯೈಷಾ ಪೃಥಿವೀ ರಾಜನ್ ಕಿಂ ನ ದತ್ತಾ ತದೈವ ಹಿ ॥೬೩॥

ನೀನೀಗ ರಾಜನಲ್ಲ. ನೀನು ಆಗಲೇ ರಾಜ್ಯವನ್ನು ಕಳೆದುಕೊಂಡದ್ದಾಗಿದೆ. ಸ್ವಾಮಿಯಾಗದವನು ಪೃಥಿವಿಯನ್ನು ದಾನ ಮಾಡಲು ಹೇಗೆ ಬಯಸಬಹುದು?

ಧರ್ಮತೋ ಯಾಚಮಾನಸ್ಯ ಶಮಾರ್ಥಂ ಚ ಕುಲಸ್ಯ ನಃ ।
ವಾರ್ಷ್ಣೇಯಃ ಪ್ರಥಮಂ ರಾಜನ್ ಪ್ರತ್ಯಾಖ್ಯಾತೋ ಮಹಾಬಲಃ ॥೬೪॥

ರಾಜನೇ! ನಮ್ಮ ಕುಲದ ಕ್ಷೇಮಕ್ಕಾಗಿ ಧರ್ಮಮಾರ್ಗದಲ್ಲಿಯೇ ಮೊದಲು ಶ್ರೀಕೃಷ್ಣನು ಬೇಡಿದನು. ಮಹಾಬಲಶಾಲಿಯಾದ ಆ ಕೃಷ್ಣನನ್ನೇ ನೀನು ತಿರಸ್ಕರಿಸಿದಿ.

ಕಿಮಿದಾನೀಂ ದದಾಸ್ಯದ್ಯ ಕೋ ಹಿ ತೇ ಚಿತ್ತವಿಭ್ರಮಃ ।
ಅಭಿಯುಕ್ತೋ ಹಿ ಕೋ ರಾಜನ್ ದಾತುಮಿಚ್ಛತಿ ಮೇದಿನೀಮ್ ॥೬೫॥

ನೀನು ಇವತ್ತು ಏತಕ್ಕಾಗಿ ಕೊಡುತ್ತಿ? ನಿನಗೆ ಎಂತಹ ಬುದ್ಧಿಭ್ರಮಣೆಯುಂಟಾಗಿದೆ! ರಾಜನೇ! ಶತ್ರುಗಳಿಂದ ಆಕ್ರಮಣಕ್ಕೊಳಗಾದ ಯಾವ ಪುರುಷನು ಭೂಮಿಯನ್ನು ದಾನ ಮಾಡಲು ಇಷ್ಟಪಡುವನು?

ನ ತ್ವಮದ್ಯ ಮಹೀಂ ದಾತುಮ್ ಈಶಃ ಕೌರವನಂದನ ।
ಆಚ್ಛೇತ್ತುಂ ವಾ ಬಲಾದ್ ರಾಜನ್ ಸ ಕಥಂ ದಾತುಮಿಚ್ಛಸಿ ॥೬೬॥

ಕೌರವಪುತ್ರನೇ! ಇಂದು ನೀನು ಭೂಮಿಯನ್ನು ದಾನಮಾಡಲು ಶಕ್ತನಾಗುವುದಿಲ್ಲ, ಅಥವಾ ಅದನ್ನು ಕಸಿದುಕೊಳ್ಳಲೂ ಶಕ್ತನಾಗಲಾರೆ. ಹೀಗಿರುವಾಗ ನೀನು ದಾನ ಮಾಡಲು ಹೇಗೆ ಬಯಸುವೆ?

ಮಾಂ ತ್ವಂ ನಿರ್ಜಿತ್ಯ ಸಂಗ್ರಾಮೇ ಪಾಲಯೇಮಾಂ ವಸುಂಧರಾಮ್ ॥

ಯುದ್ಧದಲ್ಲಿ ನನ್ನನ್ನು ಗೆದ್ದು ಈ ಭೂಮಿಯನ್ನು ಆಳು.

ಸೂಚ್ಯಗ್ರೇಣಾಪಿ ಯದ್ ಭೂಮೇರಪಿ ದೀರ್ಯೇತ ಭಾರತ ।
ತನ್ಮಾತ್ರಮಪಿ ವೈ ಮಹ್ಯಂ ನ ದದಾತಿ ಪುರಾ ಭವಾನ್ ॥೬೮॥

ಸ ಕಥಂ ಪೃಥಿವೀಮೇನಾಂ ಪ್ರದದಾಸಿ ವಿಶಾಂಪತೇ ।
ಸೂಚ್ಯಗ್ರಂ ನಾತ್ಯಜಃ ಪೂರ್ವಂ ಸ ಕಥಂ ತ್ಯಜಸಿ ಕ್ಷಿತಿಮ್ ॥೬೯॥

ಭಾರತ! ಹಿಂದೆ ನೀನು ಸೂಜಿಯಮೊನೆಯಿಂದ ವಿಭಾಗ ಮಾಡಬಹುದಾದ ಭೂಮಿಯನ್ನೂ ನನಗೆ ಕೊಡಲಿಲ್ಲ. ರಾಜನೇ! ಅಂತಹ ನೀನು ಪೂರ್ಣಪೃಥಿವಿಯನ್ನು ಹೇಗೆ ದಾನ ಮಾಡುವಿ? ಹಿಂದೆ ಸೂಜಿಯ ಮೊನೆಯಷ್ಟು ಜಾಗವನ್ನೂ ಬಿಡದವನು ಈಗ ಇಡೀ ಭೂಮಿಯನ್ನು ಹೇಗೆ ಬಿಟ್ಟುಕೊಡುತ್ತಿ?

ಏವಮೈಶ್ವರ್ಯಮಾಸಾದ್ಯ ಕೇವಲಂ ಪೃಥಿವೀಪತೇ ।
ಕೋ ನು ಮೂಢೋ ವ್ಯವಸ್ಯೇತ ಶತ್ರೋರ್ದಾತುಂ ವಸುಂಧರಾಮ್ ॥

ರಾಜನೇ! ಇಂತಹ ಸಂಪತ್ತನ್ನು ಹೊಂದಿದ್ದು, ಶತ್ರುವಿಗೆ ಪೃಥಿವಿಯನ್ನು ದಾನ ಮಾಡಲು ಯಾವ ಮೂರ್ಖನು ತಾನೆ ಪ್ರಯತ್ನಪಟ್ಟಾನು?

ತ್ವಂ ತು ಕೇವಲಮೌಖ್ಯೇಣ ವಿಮೂಢೋ ನಾವಬುಧ್ಯಸೇ ।
ಪೃಥಿವೀಂ ದಾತುಕಾಮೋಽಪಿ ಜೀವಂಸ್ತ್ವಂ ನ ವಿಮೋಕ್ಷ್ಯಸೇ ॥೭೧॥

ನೀನು ಕೇವಲ ಮೂರ್ಖತನದಿಂದ ಮೋಹಗೊಂಡು ಯಾವುದನ್ನೂ ತಿಳಿಯಲಾರೆ. ನೀನು ಪೃಥಿವಿಯನ್ನು ದಾನಮಾಡಲು ಇಚ್ಛಿಸಿದರೂ ನಮ್ಮ ಕೈಯಿಂದ ಬದುಕಿ ಉಳಿಯಲಾರೆ.

ಅಸ್ಮಾನ್ ವಾ ತ್ವಂ ಪರಾಜಿತ್ಯ ಪ್ರಶಾಧಿ ಪೃಥಿವೀಮಿಮಾಮ್ ।
ಅಥವಾ ನಿಹತೋಽಸ್ಮಾಭಿರ್ವ್ರಜ ಲೋಕಾನನುತ್ತಮಾನ್ ॥೭೨॥

ನಮ್ಮನ್ನು ಗೆದ್ದು ಈ ಪೃಥಿವಿಯನ್ನು ಆಳು. ಅಥವಾ ಸತ್ತು ಉತ್ತಮಲೋಕವನ್ನು ಹೊಂದು.

ಆವಯೋರ್ಜೀವತೋ ರಾಜನ್ ಮಯಿ ಚ ತ್ವಯಿ ಚ ಧ್ರುವಮ್ ।
ಸಂಶಯಃ ಸರ್ವಭೂತಾನಾಂ ವಿಜಯೇ ನೌ ಭವಿಷ್ಯತಿ ॥೭೩॥

ನಮ್ಮಿಬ್ಬರಲ್ಲಿ ಇಬ್ಬರೂ ಬದುಕಿದ್ದರೆ ಎಲ್ಲರಿಗೂ ನಮ್ಮ ಜಯದ ವಿಷಯದಲ್ಲಿ ಖಂಡಿತವಾಗಿಯೂ ಸಂಶಯವು ಉಂಟಾಗುವುದು.

ಜೀವಿತಂ ತವ ದುಷ್ಪ್ರಾಪಂ ಮಯಿ ಸಂಪ್ರತಿ ವರ್ತತೇ ।
ಜೀವಯೇಯಮಹಂ ಪಾಪ ನ ತ್ವಂ ಜೀವಿತುಮರ್ಹಸಿ ॥೭೪॥

ಈಗ ನಿನ್ನ ಜೀವನವು ಕಷ್ಟದಲ್ಲಿದೆ. ನಾನು ಬದುಕುವೆನು. ಆದರೆ ಪಾಪಿಯೇ! ನೀನು ಜೀವಿಸಲು ಯೋಗ್ಯನಲ್ಲ.

ದಹನೇ ಹಿ ಕೃತೋ ಯತ್ನಃ ತ್ವಯಾಽಸ್ಮಾಸು ವಿಶೇಷತಃ ।
ಆಶೀವಿಷವಿಷೈಶ್ಚಾಪಿ ಜಲೇ ವಾಽಪಿ ಪ್ರವೇಶನೈಃ ॥೭೫॥

ನಮ್ಮನ್ನು ಸುಡಲು ವಿಶೇಷಪ್ರಯತ್ನವನ್ನು ಹಿಂದೆ ಮಾಡಿದ್ದಿ. ಹಾವುಗಳಿಂದ, ವಿಷದಿಂದ, ನೀರಿನಲ್ಲಿ ಕೊಲ್ಲಲು ಪ್ರಯತ್ನಿಸಿದ್ದಿ.

ತ್ವಯಾ ವಿನಿಕೃತಾ ರಾಜನ್ ರಾಜ್ಯಸ್ಯ ಹರಣೇನ ಚ ॥೭೬॥

ದ್ಯೂತದ ಮೂಲಕ ನಮ್ಮ ರಾಜ್ಯವನ್ನು ಕಸಿದುಕೊಂಡು ನಮಗೆ ಮೋಸವನ್ನು ಮಾಡಿದ್ದಿ.

ಅಪ್ರಿಯಾಣಾಂ ಚ ವಚನೈಃ ದ್ರೌಪದ್ಯಾ ಕರ್ಷಣೇನ ಚ ॥೭೭॥

ಅಪ್ರಿಯವಾದ ಮಾತುಗಳಿಂದ, ದ್ರೌಪದಿಯನ್ನು ಎಳೆಯುವ ಮೂಲಕ ನಮಗೆ ಬಹಳ ಅನಿಷ್ಟವನ್ನು ಮಾಡಿದ್ದಿ.

ಏತಸ್ಮಾತ್ ಕಾರಣಾತ್ ಪಾಪ ಜೀವಿತಂ ತೇ ನ ವಿದ್ಯತೇ ।
ಉತ್ತಿಷ್ಠೋತ್ತಿಷ್ಠ ಯುಧ್ಯಸ್ವ ತತ್ತೇ ಶ್ರೇಯೋ ಭವಿಷ್ಯತಿ ॥೭೮॥

ಪಾಪಿಯೇ! ಈ ಎಲ್ಲಾ ಕಾರಣಗಳಿಂದ ನೀನು ಬದುಕಬಾರದು. ಏಳು! ಎದ್ದೇಳು! ಯುದ್ಧ ಮಾಡು. ಅದರಿಂದ ನಿನಗೆ ಶ್ರೇಯಸ್ಸು ಉಂಟಾಗುತ್ತದೆ.

ಸಂಜಯಃ

ಏವಂ ತು ವಿವಿಧಾ ವಾಚೋ ಜಯಯುಕ್ತಾಃ ಪುನಃ ಪುನಃ ।
ಕೀರ್ತಯಂತಿ ಸ್ಮ ತೇ ವೀರಾಃ ತತ್ರ ತತ್ರ ನರಾಧಿಪ ॥೭೯॥

ಸಂಜಯ– ರಾಜನೇ! ಯುದ್ಧದಲ್ಲಿ ಜಯವನ್ನು ಹೊಂದಿದ ಪಾಂಡವವೀರರು ಈ ರೀತಿಯಲ್ಲಿ ವಿವಿಧ ಮಾತುಗಳನ್ನು ಅಲ್ಲಲ್ಲಿ ಹೇಳುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ಯುಧಿಷ್ಠಿರನ ಮಾತಿನಂತೆ ದುರ್ಯೋಧನನು ಸರೋವರದಿಂದ ಹೊರಬಂದು ಯಾವನಾದರೊಬ್ಬ ಪಾಂಡವನ ಜೊತೆಗೆ ಯುದ್ಧಕ್ಕೆ ಸಿದ್ಧನಾಗುವುದು.

ಧೃತರಾಷ್ಟ್ರ:

ಏವಂ ಸಂತರ್ಜ್ಯಮಾನಸ್ತು ಪುತ್ರೋ ಮಮ ಮಹೀಪತಿಃ ।
ಪ್ರಕೃತ್ಯಾ ಮನ್ಯುಮಾನ್ ವೀರಃ ಕಥಮಾಸೀತ್ ಪರಂತಪಃ ॥೧॥

ಧೃತರಾಷ್ಟ್ರ- ಹೀಗೆ ಯುಧಿಷ್ಠಿರಾದಿಗಳಿಂದ ಚೆನ್ನಾಗಿ ನಿಂದನೆಗೊಳಗಾದ ನನ್ನ ಮಗ ರಾಜ ದುರ್ಯೋಧನನು ಏನು ಮಾಡಿದನು? ಅವನು ಸ್ವಭಾವತಃ ಕೋಪಿಷ್ಠ. ವೀರನಾದ ಅವನು ಶತ್ರುಗಳಿಗೆ ತಾಪವನ್ನುಂಟು ಮಾಡುವನು.

ನ ಹಿ ಸಂತರ್ಜನಾ ತೇನ ಶ್ರುತಪೂರ್ವಾ ಕದಾಚನ ।
ರಾಜಭಾವೇನ ಮಾನ್ಯಶ್ಚ ಸರ್ವಲೋಕಸ್ಯ ಸೋಽಭವತ್ ॥೨॥

ಇದಕ್ಕಿಂತ ಮೊದಲು ಯಾವತ್ತೂ ಕೂಡ ಅವನು ನಿಂದನೆಯ ಮಾತುಗಳನ್ನು ಕೇಳಿದವನಲ್ಲ. ಏಕೆಂದರೆ ಅವನು ರಾಜನಾದ್ದರಿಂದ ಎಲ್ಲರಿಗೂ ಪೂಜ್ಯನೇ ಆಗಿದ್ದನು.

ಇದಂ ಚ ಪೃಥಿವೀ ಸರ್ವಾ ಸಮ್ಲೇಚ್ಛಾಟವಿಕಾ ಭೃಶಮ್ ।
ಪ್ರಸಾದಾದ್ಧಿಯತೇ ತಸ್ಯ ಪ್ರತ್ಯಕ್ಷಂ ತವ ಸಂಜಯ ॥೩॥

ಸಂಜಯನೇ! ನಿನಗೆ ಪ್ರತ್ಯಕ್ಷವಾಗಿ ಕಾಣುವ ಮ್ಲೇಚ್ಛಭೂಮಿ, ವನಪ್ರದೇಶಗಳಿಂದ ಸಹಿತವಾದ ಎಲ್ಲಾ ಭೂಭಾಗವೂ ಆ ದುರ್ಯೋಧನನ ಅನುಗ್ರಹದಿಂದಲೇ ಚೆನ್ನಾಗಿ ಇದೆ.

ಸ ತಥಾ ತರ್ಜ್ಯಮಾನಸ್ತು ವಿಷಮಸ್ಥೋ ವಿಶೇಷತಃ ।
ವಿಹೀನಶ್ಚ ಸ್ವಕೈರ್ಭೃತ್ಯೈರ್ವಿಜನೈಶ್ಚ ಧೃತೋ ಭೃಶಮ್ ॥೪॥

ಶ್ರುತ್ವಾ ವಾಚಃ ಸುಕಟುಕಾ ಜಯಯುಕ್ತಾಃ ಪುನಃ ಪುನಃ ।
ಕಿಮಬ್ರವೀತ್ ಪಾಂಡವೇಯಾನ್ ತನ್ಮಮಾಚಕ್ಷ್ವ ಸಂಜಯ ॥೫॥

ತನ್ನ ಸೇವಕರು, ಬಂಧುಜನರು, ಇವರನ್ನೆಲ್ಲ ಕಳೆದುಕೊಂಡು ವಿಷಮಸ್ಥಿತಿಗೆ ತಲಪಿರುವ ದುರ್ಯೋಧನನು ಈಗ ಶತ್ರುಗಳಿಂದ ಬಂಧನಕ್ಕೊಳಗಾಗಿದ್ದಾನೆ. ಯುದ್ಧದಲ್ಲಿ ವಿಜಯವನ್ನು ಸಂಪಾದಿಸಿರುವ ಪಾಂಡವರು ಮತ್ತೆ ಮತ್ತೆ ಆಡಿದ ಕಟುವಾದ ಮಾತುಗಳನ್ನು ಕೇಳಿ ಪಾಂಡವರಿಗೆ ಏನು ಉತ್ತರವನ್ನು ಕೊಟ್ಟ? ಸಂಜಯನೇ! ಅದನ್ನು ನನಗೆ ಹೇಳು.

ಸಂಜಯಃ

ತರ್ಜ್ಯಮಾನಸ್ತದಾ ರಾಜಾ ಉದಕಸ್ಥಸ್ತವಾತ್ಮಜಃ ।
ಯುಧಿಷ್ಠಿರೇಣ ರಾಜೇಂದ್ರ ಭ್ರಾತೃಭಿಃ ಸಹಿತೇನ ಹಿ ॥೬॥

ಶ್ರುತ್ವಾ ತು ಕಟುಕಾ ವಾಚೋ ವಿಷಮಸ್ಥೋ ನರಾಧಿಪಃ ।
ದೀರ್ಘಮುಷ್ಣಂ ಚ ನಿಃಶ್ವಸ್ಯ ಸಲಿಲಸ್ಥೋ ಮುಹುರ್ಮುಹುಃ ॥೭॥

ಸಲಿಲಾಂತರ್ಗತೋ ರಾಜಾ ಧೂನ್ವನ್ ಹಸ್ತೌ ಪುನಃ ಪುನಃ ।
ಮನಶ್ಚಕ್ರೇ ಯುದ್ಧಾಯ ರಾಜಾನಂ ಚಾಭ್ಯಭಾಷತ ॥೮॥

ಸಂಜಯ– ನೀರೊಳಗೆ ಇದ್ದ ನಿನ್ನ ಮಗ ದುರ್ಯೋಧನನು, ತಮ್ಮಂದಿರೊಡನೆ ಸೇರಿಕೊಂಡು ಯುಧಿಷ್ಠಿರನು ಆಡಿದ ತೀಕ್ಷ್ಣವಾದ ನಿಂದನೆಯ ಮಾತುಗಳನ್ನು ಕೇಳಿ ಮನಸ್ಸಿನ ಸ್ಥಿತಿಯಲ್ಲಿ ಏರುಪೇರು ಮಾಡಿಕೊಂಡನು. ನೀರಿನೊಳಗೆಯೇ ಮತ್ತೆ ಮತ್ತೆ ಬಿಸಿಯಾದ ನಿಟ್ಟುಸಿರನ್ನು ಬಿಟ್ಟನು. ನೀರಿನೊಳಗಿಂದಲೇ ತನ್ನ ಕೈಗಳನ್ನು ಕೊಡವುತ್ತಾ ಯುದ್ಧ ಮಾಡುವ ಇಚ್ಛೆಯುಳ್ಳವನಾಗಿ ಧರ್ಮರಾಜನಿಗೆ ಹೀಗೆ ಹೇಳುತ್ತಾನೆ.

ದುರ್ಯೋಧನಃ

ಯೂಯಂ ಸಸುಹೃದಃ ಪಾರ್ಥಾಃ ಸರ್ವೇ ಸಾಯುಧವಾಹನಾಃ ।
ಅಹಮೇಕಃ ಪರಿದ್ಯೂನೋ ವಿರಥೋ ಹತವಾಹನಃ ॥೯॥

ದುರ್ಯೋಧನ– ನೀವು ಪಾಂಡವರು ತುಂಬಾ ಗೆಳೆಯರ ಜೊತೆಗೆ ಇದ್ದೀರಿ. ಆಯುಧ, ವಾಹನಗಳನ್ನೂ ಹೊಂದಿದ್ದೀರಿ. ಆದರೆ ನಾನು ಒಬ್ಬಂಟಿಯಾಗಿದ್ದೇನೆ. ಎಲ್ಲವನ್ನು ಕಳೆದುಕೊಂಡಿದ್ದೇನೆ. ರಥವು ನಾಶವಾಗಿದೆ. ವಾಹನದ ಕುದುರೆಗಳು ಸತ್ತು ಹೋಗಿವೆ.

ಆತ್ತಶಸ್ತ್ರೈ ರಥಗತೈರ್ಬಹುಭಿಃ ಪರಿವಾರಿತಃ ।
ಕಥಮೇಕಃ ಪದಾತಿಃ ಸನ್ನಶಸ್ತ್ರೋ ಯೋದ್ಧುಮುತ್ಸಹೇ ॥೧೦॥

ಕೈಯಲ್ಲಿ ಶಸ್ತ್ರಗಳನ್ನು ಹಿಡಿದು ಅನೇಕರು ಸುತ್ತುವರಿದಿರುವಾಗ ಶಸ್ತ್ರಗಳಿಲ್ಲದ, ಏಕಾಕಿಯಾದ, ನಾನು ನೆಲದಲ್ಲಿ ನಿಂತುಕೊಂಡು ಯುದ್ಧಮಾಡಲು ಹೇಗೆ ಸಾಧ್ಯವಾದೀತು?

ಏಕೈಕಶ್ಚೈವ ಮಾಂ ಯೂಯಂ ಯೋಧಯಧ್ವಂ ಯುಧಿಷ್ಠಿರ ।
ನ ಹ್ಯೇಕೋ ಬಹುಭಿರ್ಯೋದ್ಧೈರ್ನ್ಯಾಯ್ಯಂ ಯೋಧಯಿತುಂ ರಿಪುಃ ॥

ಯುಧಿಷ್ಠಿರನೇ! ನೀವು ಒಬ್ಬೊಬ್ಬರಾಗಿಯೇ ನನ್ನ ಜೊತೆಗೆ ಯುದ್ಧಮಾಡಿ. ಅನೇಕ ಯೋಧರ ಜೊತೆಗೆ ಶತ್ರುವು ಒಬ್ಬಂಟಿಯಾಗಿ ಯುದ್ಧಮಾಡುವುದು ನ್ಯಾಯ ಸಮ್ಮತವಾದುದಲ್ಲ.

ಹೀನಶಸ್ತ್ರೋ ವಿಕವಚಃ ಶ್ರಾಂತಶ್ಚಾಪಃ ಸಮಾಶ್ರಿತಃ ।
ಭೃಶಂ ವಿಕ್ಷತಗಾತ್ರಶ್ಚ ಶ್ರಾಂತವಾಹನಸೈನಿಕಃ ॥೧೨॥

ಶಸ್ತ್ರಗಳು ನಾಶವಾಗಿವೆ. ಕವಚವು ಕಳೆದುಹೋಗಿದೆ. ಆದ್ದರಿಂದಲೇ ಆಯಾಸಗೊಂಡ ನಾನು ನೀರಿನಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿದ್ದೇನೆ. ನನ್ನ ಮೈಯಲ್ಲಿ ಆಳವಾದ ಗಾಯಗಳಾಗಿವೆ. ನನ್ನ ವಾಹನಗಳು, ಸೈನಿಕರು ಯಾವುದೂ ಇಲ್ಲವಾಗಿವೆ.

ನ ಮೇ ತ್ವತ್ತೋ ಭಯಂ ರಾಜನ್ ನ ಚ ಪಾರ್ಥಾದ್ ವೃಕೋದರಾತ್ ।
ಫಲ್ಗುನಾದ್ ವಾಸುದೇವಾದ್ ವಾ ಪಾಂಚಾಲೇಭ್ಯೋಽಥವಾ ಪುನಃ ॥೧೩॥

ಯಮಾಭ್ಯಾಂ ಯುಯುಧಾನಾದ್ವಾ ಯೇ ಚಾನ್ಯೇ ತವ ಸೈನಿಕಾಃ ।
ಏಕಃ ಸರ್ವಾನಹಂ ಕ್ಷುದ್ರಾನ್ ಏತಾನ್ ಯೋದ್ಧುಮಿಹೋತ್ಸಹೇ ॥೧೪॥

ರಾಜನೇ! ನನಗೆ ನಿನ್ನಿಂದಲಾಗಲೀ, ಭೀಮಸೇನನಿಂದಾಗಲೀ, ಅರ್ಜುನನಿಂದಾಗಲೀ, ಕೃಷ್ಣನಿಂದಾಗಲೀ, ಪಾಂಚಾಲರಿಂದಾಗಲೀ, ಅವಳಿಗಳಾದ ನಕುಲ-ಸಹದೇವರಿಂದಾಗಲೀ, ಯುಯುಧಾನನಿಂದಾಗಲೀ ಅಥವಾ ಬೇರೆ ನಿನ್ನ ಸೈನಿಕರಿಂದಾಗಲೀ ಭಯವು ಇಲ್ಲ. ನಾನೊಬ್ಬನೇ ಕ್ಷುದ್ರರಾದ ಇವರೆಲ್ಲರೊಡನೆ ಯುದ್ಧವನ್ನು ಮಾಡಬಲ್ಲೆ.

ಧರ್ಮಮೂಲಂ ಸತಾಂ ಕೀರ್ತಿರ್ಮನುಷ್ಯಾಣಾಂ ಜನಾಧಿಪ ।
ಧರ್ಮಂ ಚೈವೇಹ ಕೀರ್ತಿಂ ಚ ಪಾಲಯನ್ ಪ್ರಬ್ರವೀಮಿ ತೇ ॥೧೫॥

ಜನನಾಯಕನೇ! ಸಜ್ಜನರ ಕೀರ್ತಿಯು ಧರ್ಮಮಾರ್ಗದಲ್ಲಿ ಬರಬೇಕು. ಇಲ್ಲಿ ಧರ್ಮವನ್ನೂ ಕೀರ್ತಿಯನ್ನೂ ರಕ್ಷಿಸುವವನಾಗಿ ನಿನಗೆ ಹೇಳುತ್ತಿದ್ದೇನೆ.

ಅಹಮುತ್ಥಾಯ ವಃ ಸರ್ವಾನ್ ಪ್ರತಿಯೋತ್ಸ್ಯಾಮಿ ಸಂಯುಗೇ ।
ಅನ್ವಭ್ಯಾಶಂ ಗತಾನ್ ಸರ್ವಾನ್ ನಿಹನಿಷ್ಯಾಮಿ ಭಾರತ ॥೧೬॥

ನಾನು ಎದ್ದು ಬಂದು ಯುದ್ಧದಲ್ಲಿ ನಿಮ್ಮೆಲ್ಲರ ಜೊತೆಗೆ ಪ್ರತಿಯುದ್ಧವನ್ನು ಮಾಡುವೆನು. ಭರತಕುಲೋದ್ಭವನೇ! ನನಗೆ ಎದುರಾಗಿ ಬರುವವರನ್ನೆಲ್ಲಾ ಕೊಂದು ಹಾಕುವೆನು.

ಅದ್ಯಃ ವಃ ಸರಥಾನ್ ಸಾಶ್ವಾನ್ ಅಶಸ್ತ್ರೋ ವಿರಥೋಽಪಿ ಸನ್ ।
ನಕ್ಷತ್ರಾಣೀವ ಸರ್ವಾಣಿ ಸವಿತಾ ರಾತ್ರಿಸಂಕ್ಷಯೇ ॥೧೭॥

ತೇಜಸಾ ನಾಶಯಿಷ್ಯಾಮಿ ಸ್ಥಿರೀಭವತ ಪಾಂಡವಾಃ ॥೧೮॥

ಇಂದು ನನ್ನ ಬಳಿ ಶಸ್ತ್ರ-ರಥಗಳು ಇಲ್ಲವಾದರೂ ರಾತ್ರಿ ಕಳೆದು ಬೆಳಗಾದಾಗ ಒಬ್ಬನೇ ಸೂರ್ಯನು ತನ್ನ ತೇಜಸ್ಸಿನಿಂದ ಎಲ್ಲಾ ನಕ್ಷತ್ರಗಳನ್ನು ಕಳೆಗುಂದಿಸುವಂತೆ, ಅಶ್ವ-ರಥಯುಕ್ತರಾದ ನಿಮ್ಮೆಲ್ಲರನ್ನೂ ನನ್ನ ತೇಜಸ್ಸಿನಿಂದ ನಾಶಮಾಡುತ್ತೇನೆ. ಪಾಂಡವರೇ ಯುದ್ಧಕ್ಕೆ ಸನ್ನದ್ಧರಾಗಿರಿ.

ಅದ್ಯಾನೃಣ್ಯಂ ಗಮಿಷ್ಯಾಮಿ ಕ್ಷತ್ರಿಯಾಣಾಂ ಯಶಸ್ವಿನಾಮ್ ।
ಬಾಹ್ಲೀಕದ್ರೋಣಭೀಷ್ಮಾಭ್ಯಾಂ ಕರ್ಣಸ್ಯ ಚ ಮಹಾತ್ಮನಃ ॥೧೯॥

ಜಯದ್ರಥಸ್ಯ ಶೂರಸ್ಯ ಭಗದತ್ತಸ್ಯ ಚೋಭಯೋಃ ।
ಮದ್ರರಾಜಸ್ಯ ಶಲ್ಯಸ್ಯ ಭೂರಿಶ್ರವಸ ಏವ ಚ ॥೨೦॥

ಭ್ರಾತೄಣಾಂ ಭರತಶ್ರೇಷ್ಠ ಶಕುನೇಃ ಸೌಬಲಸ್ಯ ಚ ।
ಮಿತ್ರಾಣಾಂ ಸುಹೃದಾಂ ಚೈವ ಬಾಂಧವಾನಾಂ ಚ ಸರ್ವಶಃ ॥೨೧॥

ಆನೃಣ್ಯಮದ್ಯ ಯಾಸ್ಯಾಮಿ ಹತ್ವಾ ತ್ವಾಂ ಭ್ರಾತೃಭಿಃ ಸಹ ॥೨೨॥

ಕೀರ್ತಿವಂತರಾದ ಬಾಹ್ಲೀಕ, ದ್ರೋಣ, ಭೀಷ್ಮ, ಮಹಾತ್ಮನಾದ ಕರ್ಣ, ಶೂರರಾದ ಜಯದ್ರಥ ಮತ್ತು ಭಗದತ್ತ, ಮದ್ರರಾಜ ಶಲ್ಯ, ಭೂರಿಶ್ರವಸ್ಸು, ನನ್ನ ತಮ್ಮಂದಿರು, ಶಕುನಿ, ನನ್ನ ಮಿತ್ರರು, ಸ್ನೇಹಿತರು, ಬಂಧುಗಳು ಇವರೆಲ್ಲರ ಋಣವನ್ನು ಪರಿಹರಿಸಿಕೊಳ್ಳುತ್ತೇನೆ. ನಿನ್ನನ್ನೂ ನಿನ್ನ ಸಹೋದರರನ್ನೂ ಕೊಂದು ಋಣಮುಕ್ತನು ಆಗುತ್ತೇನೆ.

ಸಂಜಯಃ

ಏವಮುಕ್ತ್ವಾ ತು ವಚನಂ ವಿರರಾಮ ನರಾಧಿಪಃ ।
ಸಲಿಲಾಂತರ್ಗತಃ ಶ್ರೀಮಾನ್ ಪುತ್ರೋ ದುರ್ಯೋಧನಸ್ತವ ॥೨೩॥

ಸಂಜಯ– ನೀರೊಳಗಿದ್ದ ನಿನ್ನ ಮಗ ದುರ್ಯೋಧನನು ಹೀಗೆ ಹೇಳಿ ತನ್ನ ಮಾತನ್ನು ನಿಲ್ಲಿಸಿದನು.

ಯುಧಿಷ್ಠಿರಃ

ದಿಷ್ಟ್ಯಾ ತ್ವಮಪಿ ಜಾನೀಷೇ ಕ್ಷತ್ರಧರ್ಮಂ ಸುಯೋಧನ ।
ದಿಷ್ಟ್ಯಾ ತೇ ವರ್ತತೇ ಬುದ್ಧಿರ್ಯುದ್ಧಾಯೈವ ಮಹಾಭುಜ ॥೨೪॥

ಯುಧಿಷ್ಠಿರ– ಸುಯೋಧನ! ಅದೃಷ್ಟವಶಾತ್ ನೀನೂ ಕೂಡ ಕ್ಷತ್ರಿಯಧರ್ಮವನ್ನು ತಿಳಿದಿದ್ದಿ. ಮಹಾಭುಜನೇ! ಅದೃಷ್ಟವಶಾತ್ ನಿನಗೂ ಯುದ್ಧದಲ್ಲಿ ನಿಶ್ಚಯವು ಉಂಟಾಗಿದೆ.

ದಿಷ್ಟ್ಯಾ ಶೂರೋಽಸಿ ಗಾಂಧಾರೇ ದಿಷ್ಟ್ಯಾ ಜಾನಾಸಿ ಸಂಗರಮ್ ।
ಯಸ್ತ್ವಮೇಕೋಽದ್ಯ ನಃ ಸರ್ವಾನ್ ಸಂಯುಗೇ ಯೋದ್ಧುಮಿಚ್ಛಸಿ ॥

ದುರ್ಯೋಧನನೇ! ಅದೃಷ್ಟವಶಾತ್ ನೀನು ಶೂರನಾಗಿರುವಿ. ಅದೃಷ್ಟವಶಾತ್ ನೀನು ಯುದ್ಧದ ಬಗ್ಗೆ ತಿಳಿದಿರುವಿ. ಏಕೆಂದರೆ ಏಕಾಕಿಯಾದ ನೀನು ನಮ್ಮೆಲ್ಲರೊಡನೆ ಯುದ್ಧದಲ್ಲಿ ಕಾದಾಡಲು ಬಯಸುತ್ತಿರುವಿ.

ಏಕ ಏಕೇನ ಸಂಗಮ್ಯ ಯತ್ತೇ ಸಮ್ಮತಮಾಯುಧಮ್ ।
ತತ್ ತ್ವಮಾದಾಯ ಯುಧ್ಯಸ್ವ ಪ್ರೇಕ್ಷಕಾಸ್ತೇ ವಯಂ ಸ್ಥಿತಾಃ ॥೨೬॥

ನಿನಗೆ ಯಾವ ಆಯುಧದಲ್ಲಿ ಒಪ್ಪಿಗೆ ಇದೆಯೋ, ಆ ಆಯುಧವನ್ನು ಹಿಡಿದು ಒಬ್ಬೊಬ್ಬನ ಜೊತೆಗೆ ಕಾದಾಡು. ಉಳಿದ ನಾವು ಪ್ರೇಕ್ಷಕರಾಗಿರುತ್ತೇವೆ.

ಅಯಮಿಷ್ಟಂ ಚ ತೇ ಕಾಮಂ ವೀರ ಭೂಯೋ ದದಾಮ್ಯಹಮ್ ।
ಹನ್ಯೈಕಂ ಭವ ನೋ ರಾಜಾ ಹತೋ ವಾ ಸ್ವರ್ಗಮಾಪ್ನುಹಿ ॥೨೭॥

ವೀರನೇ! ನಾನು ನಿನಗೆ ಇಷ್ಟವಾದ ಇನ್ನೊಂದು ಕಾಮನೆಯನ್ನೂ ಕೊಡುತ್ತೇನೆ. ನಮ್ಮಲ್ಲಿ ಯಾರಾದರೊಬ್ಬರನ್ನು ಕೊಂದರೂ ನೀನು ರಾಜನಾಗುವಿ ಅಥವಾ ಸತ್ತು ವೀರಸ್ವರ್ಗವನ್ನು ಹೊಂದುವಿ.

ದುರ್ಯೋಧನಃ

ಏಕಶ್ಚೇದ್ ಯೋದ್ಧುಮಾಕ್ರಂದೇ ವರೋಽದ್ಯ ಮಮ ದೀಯತಾಮ್ ।
ಆಯುಧಾನಾಮಿಯಂ ಚಾಪಿ ಮತಾ ಮೇ ಸತತಂ ಗದಾ ॥೨೮॥

ದುರ್ಯೋಧನ– ನಾನು ಒಬ್ಬಂಟಿಯಾಗಿ ಯುದ್ಧ ಮಾಡುವ ವರವನ್ನು ಕೊಡುವುದಾದರೆ ಆಯುಧಗಳಲ್ಲಿ ಈ ಗದೆಯು ನನಗೆ ಸಮ್ಮತವಾಗಿದೆ.

ಭ್ರಾತೄಣಾಂ ಭವತಾಮೇಕಃ ಶಕ್ಯಂ ಮಾಂ ಯೋ ಹಿ ಮನ್ಯತೇ ।
ಪದಾತಿರ್ಗದಯಾ ಸಂಖೇ ಸ ಯುಧ್ಯತು ಮಯಾ ಸಹ ॥೨೯॥

ಅಣ್ಣ-ತಮ್ಮಂದಿರಾದ ನಿಮ್ಮಲ್ಲಿ ಯಾರಿಗಾದರೂ ನನ್ನ ಜೊತೆಗೆ ಕಾದಾಡುವ ಸಾಮರ್ಥ್ಯ ಇದ್ದರೆ ಅಂತಹವನು ಕಾಲಲ್ಲಿನಿಂತುಕೊಂಡು ನನ್ನೊಡನೆ ಯುದ್ಧವನ್ನು ಮಾಡಲಿ.

ವೃತ್ತಾನಿ ರಥಯುದ್ಧಾನಿ ವಿಚಿತ್ರಾಣಿ ಪದೇ ಪದೇ ।
ಇದಂ ತ್ವೇಕಂ ಗದಾಯುದ್ಧಂ ಭವತ್ವದ್ಯಾದ್ಭುತಂ ಮಹತ್ ॥೩೦॥

ವಿಚಿತ್ರವಾದ ರಥಯುದ್ಧಗಳು ಹೆಜ್ಜೆ ಹೆಜ್ಜೆಗೆ ಹಿಂದೆ ನಡೆದಿದ್ದವು. ಇದೊಂದು ಅದ್ಭುತವಾದ ಗದಾಯುದ್ಧವು ಇವತ್ತು ನಡೆಯಲಿ.

ಅರ್ಥಾನಾಮಪಿ ಪರ್ಯಾಯಂ ಭೋಕ್ತುಮಿಚ್ಛಂತಿ ಮಾನವಾಃ ।
ಯುದ್ಧಾನಾಮಪಿ ಪರ್ಯಾಯೋ ಭವತ್ವನುಮತೇ ತವ ॥೩೧॥

ವಿಷಯಪದಾರ್ಥಗಳನ್ನು ಭೋಗಿಸುವಾಗ ಮನುಷ್ಯನು ಭಿನ್ನಭಿನ್ನ ವಿಷಯಪದಾರ್ಥಗಳನ್ನು ಬಯಸುತ್ತಾನೆ. ಹಾಗೆಯೇ ನಿನ್ನ ಅನುಮತಿಯ ಮೇರೆಗೆ ಯುದ್ಧದಲ್ಲಿಯೂ ಬೇರೆ ಬೇರೆ ರೀತಿಯ ಯುದ್ಧಗಳು ನಡೆಯಲಿ.

ಗದಯಾ ತ್ವಾಂ ಮಹಾಬಾಹೋ ವಿಜೇಷ್ಯಾಮಿ ಸಹಾನುಜಮ್ ।
ಪಾಂಚಾಲಾನ್ ಸೃಂಜಯಾಂಶ್ಚೈವ ಯೇ ಚಾನ್ಯೇ ತವ ಬಾಂಧವಾಃ ॥

ಗದೆಯಿಂದಲೆ ನಿನ್ನನ್ನೂ, ನಿನ್ನ ತಮ್ಮಂದಿರನ್ನೂ, ಪಾಂಚಾಲರನ್ನೂ, ಸೃಂಜಯರನ್ನೂ ಹಾಗೂ ನಿನ್ನ ಬಾಂಧವರು ಯಾರಿದ್ದಾರೆಯೋ ಅವರೆಲ್ಲರನ್ನೂ ಗೆಲ್ಲುತ್ತೇನೆ.

ತಿಷ್ಠತು ಪ್ರೇಕ್ಷಕಾಃ ಸರ್ವೇ ಗದಾಯುದ್ಧಂ ಪ್ರವರ್ತತಾಮ್ ।
ನ ಹಿ ಮೇ ಸಂಭ್ರಮೋ ಜಾತು ಶಕ್ರಾದಪಿ ಯುಧಿಷ್ಠಿರ ॥೩೩॥

ಎಲ್ಲರೂ ಪ್ರೇಕ್ಷಕರಾಗಲಿ. ಗದಾಯುದ್ಧವು ನಡೆಯಲಿ. ಯುಧಿಷ್ಠಿರನೇ! ಇಂದ್ರನು ಬಂದರೂ ನಾನು ಕಳವಳಕ್ಕೆ ಒಳಗಾಗುವುದಿಲ್ಲ.

ಶ್ರೀಭೀಮಸೇನಃ

ಉತ್ತಿಷ್ಠೋತ್ತಿಷ್ಠ ಗಾಂಧಾರೇ ಮಾಂ ಯೋಧಯ ಸುಯೋಧನ ।
ಏಕ ಏಕೇನ ಸಂಗಮ್ಯ ಗದಯಾ ಸಂಯುಗೇ ಬಲೀ ॥೩೪॥

ಶ್ರೀಭೀಮಸೇನ– ಸುಯೋಧನನೇ! ಏಳು! ಎದ್ದೇಳು! ನನ್ನೊಡನೆ ಯುದ್ಧಮಾಡು. ಬಲಶಾಲಿಯಾದ ನೀನು ಗದೆಯನ್ನು ಹಿಡಿದು ಒಬ್ಬನ ಜೊತೆಗೆ ಕಾದಾಡು.

ಪುರುಷೋ ಭವ ಗಾಂಧಾರೇ ಯುಧ್ಯಸ್ವ ಸುಸಮಾಹಿತಃ ।
ಅದ್ಯ ತೇ ಜೀವಿತಂ ನಾಸ್ತಿ ಯದಿಂದ್ರೋऽಪಿ ತವಾಶ್ರಯಃ ॥೩೫॥

ಮನಸ್ಸನ್ನು ದೃಢಪಡಿಸಿಕೊಂಡು ಪೌರುಷದಿಂದ ಕಾದಾಡು. ಇಂದ್ರನನ್ನು ಆಶ್ರಯಿಸಿದರೂ ನೀನಿವತ್ತು ಬದುಕುವುದಿಲ್ಲ.

ಸಂಜಯಃ

ಏತತ್ ಸ ನರಶಾರ್ದೂಲೋ ನಾಮೃಷ್ಯತ ತವಾತ್ಮಜಃ ।
ಸಲೀಲಾಂತರ್ಗತಃ ಶ್ವಭ್ರೇ ಮಹಾನಾಗ ಇವ ಶ್ವಸನ್ ॥೩೬॥

ಸಂಜಯ– ನರೋತ್ತಮನಾದ ನಿನ್ನ ಮಗ ದುರ್ಯೋಧನನು ಇದನ್ನು ಸಹಿಸಲಿಲ್ಲ. ಬಿಲದೊಳಗೆ ಸರ್ಪವು ಬುಸುಗುಟ್ಟುವಂತೆ ನೀರಿನೊಳಗಿಂದಲೇ ಅವನು ಉಸಿರು ಬಿಡುತ್ತಿದ್ದನು.

ತತೋಽಸೌ ವಾಕ್ಪತೋದೇನ ತುದ್ಯಮಾನಃ ಪುನಃ ಪುನಃ ।
ವಾಚಂ ನ ಮಮೃಷೇ ಧೀಮಾನ್ ಉತ್ತಮಾಶ್ವಃ ಕಶಾಮಿವ ॥೩೭॥

ಮಾತೆಂಬ ಚಾವಟಿಯಿಂದ ಮತ್ತೆ ಮತ್ತೆ ಹೊಡೆಸಿಕೊಂಡ ಬುದ್ಧಿವಂತನಾದ ದುರ್ಯೋಧನನು, ಚಾಟಿಯ ಏಟನ್ನು ಒಳ್ಳೆಯ ಜಾತಿಯ ಅಶ್ವವು ಸಹಿಸದೆ ಇರುವಂತೆ, ಭೀಮನ ಮಾತುಗಳನ್ನು ಸಹಿಸದಾದನು.

ಸಂಕ್ಷೋಭ್ಯ ಸಲಿಲಂ ವೇಗಾದ್ ಗದಾಮಾದಾಯ ವೀರ್ಯವಾನ್ ।
ಅದ್ರಿಸಾರಮಯೀಂ ಗುರ್ವೀಂ ಜಾತರೂಪಪರಿಷ್ಕೃತಾಮ್ ॥೩೮॥

ಅಂತರ್ಜಲಾತ್ ಸಮುತ್ತಸ್ಥೌ ನಾಗೇಂದ್ರ ಇವ ನಿಃಶ್ವಸನ್ ॥೩೯॥

ವೀರನಾದ ದುರ್ಯೋಧನನು ಆನೆಯಂತೆ ಉಸಿರುಬಿಡುತ್ತಾ ನೀರನ್ನು ವೇಗವಾಗಿ ಅಲ್ಲೋಲಕಲ್ಲೋಲಪಡಿಸಿ ಗದೆಯನ್ನು ಹಿಡಿದುಕೊಂಡು ನೀರಿನ ಒಳಗಿನಿಂದ ಹೊರಬಂದನು. ಆ ಗದೆಯು ಬಂಗಾರದ ಅಲಂಕಾರಗಳಿಂದ ಭೂಷಿತವಾಗಿತ್ತು. ಪರ್ವತದಂತೆ ಬಹಳ ಭಾರವಾಗಿತ್ತು.

ಸ ಹಿತ್ವಾ ಸ್ತಂಭಿತಂ ತೋಯಂ ಸ್ಕಂದೇ ಕೃತ್ವಾಽಽಯಸೀಂ ಗದಾಮ್ ।
ಉದತಿಷ್ಠತ ಪುತ್ರಸ್ತೇ ಪ್ರತಪನ್ ರಶ್ಮಿಮಾನಿವ ॥೪೦॥

ಅಲ್ಲಿ ತನಕ ಸ್ತಂಭನಗೊಳಿಸಿದ ನೀರನ್ನು ಬಿಟ್ಟು ಹೆಗಲ ಮೇಲೆ ಭಾರವಾದ ಕಬ್ಬಿಣದ ಗದೆಯನ್ನು ಇಟ್ಟುಕೊಂಡು ನಿನ್ನ ಮಗನು ಸೂರ್ಯನಂತೆ ತಾಪವನ್ನು ಉಂಟುಮಾಡುತ್ತ ಮೇಲೆದ್ದು ಬಂದನು.

ತತಃ ಶೈಕ್ಯಾಯಸೀಂ ಗುರ್ವೀಂ ಕಾಂಚನಾಂಗದಭೂಷಣಾಮ್ ।
ಗದಾಂ ಪರಾಮೃಶನ್ ಧೀಮಾನ್ ಧಾರ್ತರಾಷ್ಟ್ರೋ ಮಹಾಯಶಾಃ ॥

ಲೋಹದಿಂದ ನಿರ್ಮಿತವಾದ, ಬಂಗಾರದ ಅಲಂಕಾರಗಳುಳ್ಳ, ಭಾರವಾದ ಗದೆಯನ್ನು ಸರಿಪಡಿಸಿಕೊಂಡು ಬುದ್ಧಿವಂತನಾದ, ಮಹಾಯಶೋವಂತನಾದ ದುರ್ಯೋಧನನು ಮೇಲೆದ್ದು ಬಂದನು.

ಗದಾಹಸ್ತಂ ತು ತಂ ದೃಷ್ಟ್ವಾ ಸಶೃಂಗಮಿವ ಪರ್ವತಮ್ ।
ಪ್ರಜಾನಾಮಿವ ಸಂಕ್ರುದ್ಧಂ ಶೂಲಪಾಣಿಮವಸ್ಥಿತಮ್ ॥೪೨॥

ಸಗದೋ ಭಾರತೋ ಭಾತಿ ಪ್ರತಪನ್ ಭಾಸ್ಕರೋ ಯಥಾ ॥೪೩॥

ಜೀವರ ಮೇಲೆ ಕೋಪಗೊಂಡ ಶೂಲಧಾರಿಯಾದ ರುದ್ರನಂತೆ ದುರ್ಯೋಧನನು ಗದೆಯನ್ನು ಕೈಯಲ್ಲಿ ಹಿಡಿದುಕೊಂಡು ಬಂದಾಗ ಶಿಖರದಿಂದ ಕೂಡಿದ ಪರ್ವತದಂತೆ ಕಾಣಿಸುತ್ತಿದ್ದನು. ಗದಾಸಹಿತನಾದ ದುರ್ಯೋಧನನು ಸುಡುತ್ತಿರುವ ಸೂರ್ಯನಂತೆ ಶೋಭಿಸುತ್ತಿದ್ದನು.

ತಮುತ್ತೀರ್ಣಂ ಮಹಾಬಾಹುಂ ಗದಾಹಸ್ತಮರಿಂದಮಮ್ ।
ಮೇನಿರೇ ಸರ್ವಭೂತಾನಿ ದಂಡಹಸ್ತಮಿವಾಂತಕಮ್ ॥೪೪॥

ನೀರಿನಿಂದ ಮೇಲೆದ್ದ, ಶತ್ರುಸಂಹಾರಕನಾದ, ಗದಾಪಾಣಿಯಾದ ಮಹಾಬಾಹು ದುರ್ಯೋಧನನನ್ನು ನೋಡಿದ ಎಲ್ಲರೂ ದಂಡವನ್ನು ಹಿಡಿದಿರುವ ಯಮನೆಂದು ತಿಳಿದರು.

ವಜ್ರಹಸ್ತಂ ಯಥಾ ಶಕ್ರಂ ಶೂಲಹಸ್ತಂ ಯಥಾ ಹರಮ್ ।
ದದೃಶುಃ ಸರ್ವಪಾಂಚಾಲಾಃ ಪುತ್ರಂ ತವ ಜನಾಧಿಪ ॥೪೫॥

ರಾಜನೇ! ಎಲ್ಲಾ ಪಾಂಚಾಲರು ವಜ್ರಧಾರಿಯಾದ ಇಂದ್ರನಂತೆ ಇರುವ, ಶೂಲಧಾರಿಯಾದ ರುದ್ರನಂತಿರುವ ನಿನ್ನ ಮಗನನ್ನು ನೋಡಿದರು.

ತಮುತ್ತೀರ್ಣಂ ತು ಸಂಪ್ರೇಕ್ಷ್ಯ ಸಮಹೃಷ್ಯಂತ ಸರ್ವಶಃ ।
ಪಾಂಚಾಲಾಃ ಪಾಂಡವೇಯಾಶ್ಚ ತೇऽನ್ಯೋನ್ಯಸ್ಯ ತಳಂ ದದುಃ ॥೪೬॥

ದುರ್ಯೋಧನನು ಎದ್ದು ಬಂದಾಗ ಎಲ್ಲರೂ ಸಂತೋಷಪಟ್ಟರು. ಪಾಂಚಾಲರು ಮತ್ತು ಪಾಂಡವರು ಪರಸ್ಪರವಾಗಿ ಕೈಗಳಿಂದ ಚಪ್ಪಾಳೆ ತಟ್ಟಿದರು.

ಅಪಹಾಸಂ ತು ತಂ ಮತ್ವಾ ಪುತ್ರೋ ದುರ್ಯೋಧನಸ್ತವ ।
ಉದ್ಧತ್ಯ ನಯನೇ ಕ್ರೂರೇ ದಿಧಕ್ಷುರಿವ ಪಾಂಡವಾನ್ ॥೪೭॥

ತ್ರಿಶಿಖಾಂ ಭ್ರುಕುಟೀಂ ಕೃತ್ವಾ ಸಂದಷ್ಟದಶನಚ್ಛದಃ ।
ಪ್ರತ್ಯುವಾಚ ತತಸ್ತಾನ್ ವೈ ಪಾಂಡವಾನ್ ಸಹಕೇಶವಾನ್ ॥೪೮॥

ಇದನ್ನು ನೋಡಿದ ನಿನ್ನ ಮಗನು 'ಇವರು ನನ್ನನ್ನು ಅಪಹಾಸ ಮಾಡುತ್ತಿದ್ದಾರೆ' ಎಂದು ತಿಳಿದು ತನ್ನ ಕ್ರೂರವಾದ ದೃಷ್ಟಿಯಿಂದ ಪಾಂಡವರನ್ನು ಸುಟ್ಟುಬಿಡುವಂತೆ ಹುಬ್ಬುಗಂಟಿಕ್ಕಿ, ಹಲ್ಲುಗಳನ್ನು ಕಡಿಯುತ್ತಾ ಕೃಷ್ಣಸಮೇತರಾದ ಪಾಂಡವರಿಗೆ ಪ್ರತ್ಯುತ್ತರವನ್ನು ಕೊಡುತ್ತಾನೆ.

ದುರ್ಯೋಧನಃ

ಅಪಹಾಸಸ್ಯ ವೋಽದ್ಯಾಸ್ಯ ಪ್ರತಿಮೋಕ್ತಾಸ್ಮಿ ಪಾಂಡವಾಃ ।
ಗಮಿಷ್ಯಥ ಹತಾಃ ಸದ್ಯಃ ಸಪಾಂಚಾಲಾ ಯಮಕ್ಷಯಮ್ ॥೪೯॥

ದುರ್ಯೋಧನ– ಪಾಂಡವರೇ! ಇವತ್ತು ಈ ಅಪಹಾಸ್ಯವನ್ನು ನಿಲ್ಲಿಸುವೆನು. ಪಾಂಚಾಲರನ್ನು ಸೇರಿಸಿಕೊಂಡು ನನ್ನಿಂದ ಹತರಾದ ನೀವು ಕೂಡಲೇ ಯಮನ ಸನ್ನಿಧಾನಕ್ಕೆ ಹೋಗುವಿರಿ.

ಸಂಜಯಃ

ಉತ್ಥಿತಸ್ತು ಜಲಾತ್ ತಸ್ಮಾದ್ ಯೋದ್ಧುಕಾಮಃ ಸುತಸ್ತವ ।
ಅತಿಷ್ಠಚ್ಚ ಗದಾಪಾಣೇ ರುಧಿರೇಣ ಸಮುಕ್ಷಿತಃ ॥೫೦॥

ಸಂಜಯ– ನೀರಿನಿಂದ ಮೇಲೆದ್ದ ನಿನ್ನ ಮಗನು ಮೈಯೆಲ್ಲ ರಕ್ತದಿಂದ ತೋಯ್ದವನಾಗಿ, ಯುದ್ಧಮಾಡುವ ಇಚ್ಛೆಯಿಂದ ಕೈಯಲ್ಲಿ ಗದೆಯನ್ನು ಹಿಡಿದುಕೊಂಡು ನಿಂತನು.

ತಸ್ಯ ಶೋಣಿತದಿಗ್ಧಸ್ಯ ಸಲಿಲೇನ ಸಮುಕ್ಷಿತಮ್ ।
ಶರೀರಂ ತು ತದಾ ಭಾತಿ ಸ್ರವನ್ನಿವ ಮಹೀಧರಃ ॥೫೧॥

ಗಾಯಗೊಂಡ ದುರ್ಯೋಧನನ ಗಾಯಗಳಿಂದ ನೀರು ಸುರಿಯುತ್ತಿದ್ದಾಗ ಅವನ ಶರೀರವು ಗೈರಿಕಾದಿ ಧಾತುಗಳನ್ನು ಸುರಿಸುತ್ತಿರುವ ಪರ್ವತದ ಹಾಗೆ ಕಾಣಿಸುತ್ತಿತ್ತು.

ಲೋಹದಿಂದ ನಿರ್ಮಿತವಾದ, ಬಂಗಾರದ ಅಲಂಕಾರಗಳುಳ್ಳ, ಭಾರವಾದ ಗದೆಯನ್ನು ಸರಿಪಡಿಸಿಕೊಂಡು ಬುದ್ಧಿವಂತನಾದ, ಮಹಾಯಶೋವಂತನಾದ ದುರ್ಯೋಧನನು ಮೇಲೆದ್ದು ಬಂದನು.

ಗದಾಹಸ್ತಂ ತು ತಂ ದೃಷ್ಟ್ವಾ ಸಶೃಂಗಮಿವ ಪರ್ವತಮ್ ।
ಪ್ರಜಾನಾಮಿವ ಸಂಕ್ರುದ್ಧಂ ಶೂಲಪಾಣಿಮವಸ್ಥಿತಮ್ ॥೪೨॥

ಸಗದೋ ಭಾರತೋ ಭಾತಿ ಪ್ರತಪನ್ ಭಾಸ್ಕರೋ ಯಥಾ ॥೪೩॥

ಜೀವರ ಮೇಲೆ ಕೋಪಗೊಂಡ ಶೂಲಧಾರಿಯಾದ ರುದ್ರನಂತೆ ದುರ್ಯೋಧನನು ಗದೆಯನ್ನು ಕೈಯಲ್ಲಿ ಹಿಡಿದುಕೊಂಡು ಬಂದಾಗ ಶಿಖರದಿಂದ ಕೂಡಿದ ಪರ್ವತದಂತೆ ಕಾಣಿಸುತ್ತಿದ್ದನು. ಗದಾಸಹಿತನಾದ ದುರ್ಯೋಧನನು ಸುಡುತ್ತಿರುವ ಸೂರ್ಯನಂತೆ ಶೋಭಿಸುತ್ತಿದ್ದನು.

ತಮುತ್ತೀರ್ಣಂ ಮಹಾಬಾಹುಂ ಗದಾಹಸ್ತಮರಿಂದಮಮ್ ।
ಮೇನಿರೇ ಸರ್ವಭೂತಾನಿ ದಂಡಹಸ್ತಮಿವಾಂತಕಮ್ ॥೪೪॥

ನೀರಿನಿಂದ ಮೇಲೆದ್ದ, ಶತ್ರುಸಂಹಾರಕನಾದ, ಗದಾಪಾಣಿಯಾದ ಮಹಾಬಾಹು ದುರ್ಯೋಧನನನ್ನು ನೋಡಿದ ಎಲ್ಲರೂ ದಂಡವನ್ನು ಹಿಡಿದಿರುವ ಯಮನೆಂದು ತಿಳಿದರು.

ವಜ್ರಹಸ್ತಂ ಯಥಾ ಶಕ್ರಂ ಶೂಲಹಸ್ತಂ ಯಥಾ ಹರಮ್ ।
ದದೃಶುಃ ಸರ್ವಪಾಂಚಾಲಾಃ ಪುತ್ರಂ ತವ ಜನಾಧಿಪ ॥೪೫॥

ರಾಜನೇ! ಎಲ್ಲಾ ಪಾಂಚಾಲರು ವಜ್ರಧಾರಿಯಾದ ಇಂದ್ರನಂತೆ ಇರುವ, ಶೂಲಧಾರಿಯಾದ ರುದ್ರನಂತಿರುವ ನಿನ್ನ ಮಗನನ್ನು ನೋಡಿದರು.

ತಮುತ್ತೀರ್ಣಂ ತು ಸಂಪ್ರೇಕ್ಷ್ಯ ಸಮಹೃಷ್ಯಂತ ಸರ್ವಶಃ ।
ಪಾಂಚಾಲಾಃ ಪಾಂಡವೇಯಾಶ್ಚ ತೇऽನ್ಯೋನ್ಯಸ್ಯ ತಳಂ ದದುಃ ॥೪೬॥

ದುರ್ಯೋಧನನು ಎದ್ದು ಬಂದಾಗ ಎಲ್ಲರೂ ಸಂತೋಷಪಟ್ಟರು. ಪಾಂಚಾಲರು ಮತ್ತು ಪಾಂಡವರು ಪರಸ್ಪರವಾಗಿ ಕೈಗಳಿಂದ ಚಪ್ಪಾಳೆ ತಟ್ಟಿದರು.

ಅಪಹಾಸಂ ತು ತಂ ಮತ್ವಾ ಪುತ್ರೋ ದುರ್ಯೋಧನಸ್ತವ ।
ಉದ್ಧತ್ಯ ನಯನೇ ಕ್ರೂರೇ ದಿಧಕ್ಷುರಿವ ಪಾಂಡವಾನ್ ॥೪೭॥

ತ್ರಿಶಿಖಾಂ ಭ್ರುಕುಟೀಂ ಕೃತ್ವಾ ಸಂದಷ್ಟದಶನಚ್ಛದಃ ।
ಪ್ರತ್ಯುವಾಚ ತತಸ್ತಾನ್ ವೈ ಪಾಂಡವಾನ್ ಸಹಕೇಶವಾನ್ ॥೪೮॥

ಇದನ್ನು ನೋಡಿದ ನಿನ್ನ ಮಗನು 'ಇವರು ನನ್ನನ್ನು ಅಪಹಾಸ ಮಾಡುತ್ತಿದ್ದಾರೆ' ಎಂದು ತಿಳಿದು ತನ್ನ ಕ್ರೂರವಾದ ದೃಷ್ಟಿಯಿಂದ ಪಾಂಡವರನ್ನು ಸುಟ್ಟುಬಿಡುವಂತೆ ಹುಬ್ಬುಗಂಟಿಕ್ಕಿ, ಹಲ್ಲುಗಳನ್ನು ಕಡಿಯುತ್ತಾ ಕೃಷ್ಣಸಮೇತರಾದ ಪಾಂಡವರಿಗೆ ಪ್ರತ್ಯುತ್ತರವನ್ನು ಕೊಡುತ್ತಾನೆ.

ದುರ್ಯೋಧನಃ

ಅಪಹಾಸಸ್ಯ ವೋಽದ್ಯಾಸ್ಯ ಪ್ರತಿಮೋಕ್ತಾಸ್ಮಿ ಪಾಂಡವಾಃ ।
ಗಮಿಷ್ಯಥ ಹತಾಃ ಸದ್ಯಃ ಸಪಾಂಚಾಲಾ ಯಮಕ್ಷಯಮ್ ॥೪೯॥

ದುರ್ಯೋಧನ– ಪಾಂಡವರೇ! ಇವತ್ತು ಈ ಅಪಹಾಸ್ಯವನ್ನು ನಿಲ್ಲಿಸುವೆನು. ಪಾಂಚಾಲರನ್ನು ಸೇರಿಸಿಕೊಂಡು ನನ್ನಿಂದ ಹತರಾದ ನೀವು ಕೂಡಲೇ ಯಮನ ಸನ್ನಿಧಾನಕ್ಕೆ ಹೋಗುವಿರಿ.

ಸಂಜಯಃ

ಉತ್ಥಿತಸ್ತು ಜಲಾತ್ ತಸ್ಮಾದ್ ಯೋದ್ಧುಕಾಮಃ ಸುತಸ್ತವ ।
ಅತಿಷ್ಠಚ್ಚ ಗದಾಪಾಣೇ ರುಧಿರೇಣ ಸಮುಕ್ಷಿತಃ ॥೫೦॥

ಸಂಜಯ– ನೀರಿನಿಂದ ಮೇಲೆದ್ದ ನಿನ್ನ ಮಗನು ಮೈಯೆಲ್ಲ ರಕ್ತದಿಂದ ತೋಯ್ದವನಾಗಿ, ಯುದ್ಧಮಾಡುವ ಇಚ್ಛೆಯಿಂದ ಕೈಯಲ್ಲಿ ಗದೆಯನ್ನು ಹಿಡಿದುಕೊಂಡು ನಿಂತನು.

ತಸ್ಯ ಶೋಣಿತದಿಗ್ಧಸ್ಯ ಸಲಿಲೇನ ಸಮುಕ್ಷಿತಮ್ ।
ಶರೀರಂ ತು ತದಾ ಭಾತಿ ಸ್ರವನ್ನಿವ ಮಹೀಧರಃ ॥೫೧॥

ಗಾಯಗೊಂಡ ದುರ್ಯೋಧನನ ಗಾಯಗಳಿಂದ ನೀರು ಸುರಿಯುತ್ತಿದ್ದಾಗ ಅವನ ಶರೀರವು ಗೈರಿಕಾದಿ ಧಾತುಗಳನ್ನು ಸುರಿಸುತ್ತಿರುವ ಪರ್ವತದ ಹಾಗೆ ಕಾಣಿಸುತ್ತಿತ್ತು.

ತಮುದ್ಯತಗದಂ ವೀರಂ ಮೇನಿರೇ ತತ್ರ ಪಾಂಡವಾಃ ।
ವೈವಸ್ವತಮಿವ ಕ್ರುದ್ಧಂ ಶೂಲಪಾಣಿಮವಸ್ಥಿತಮ್ ॥೫೨॥

ಗದೆಯನ್ನೆತ್ತಿಕೊಂಡ ವೀರನಾದ ದುರ್ಯೋಧನನನ್ನು ಪಾಂಡವರು, ಶೂಲವನ್ನು ಹಿಡಿದುಕೊಂಡ ಕ್ರುದ್ಧನಾದ ಯಮನಂತೆ ತಿಳಿದರು.

ಸ ಮೇಘನಿನದೋ ಹರ್ಷಾದ್ ವಿನದನ್ನಿವ ಗೋವೃಷಃ ।
ಆಜುಹಾವ ತದಾ ಪಾರ್ಥಾನ್ ಗದಯಾ ಭೀಮವಿಕ್ರಮಃ ॥೫೩॥

ದುರ್ಯೋಧನನು ಸಂತೋಷದಿಂದ ಮೋಡದಂತೆ ಗುಡುಗುತ್ತಿದ್ದನು. ಎತ್ತಿನ ಹಾಗೆ ಗುಟುರು ಹಾಕುತ್ತಿದ್ದನು. ಭಯಂಕರ ಪರಾಕ್ರಮವುಳ್ಳ ದುರ್ಯೋಧನನು ಗದೆಯನ್ನು ತೋರಿಸಿ ಪಾಂಡವರನ್ನು ಯುದ್ಧಕ್ಕೆ ಕರೆದನು.

ದುರ್ಯೋಧನಃ

ಏಕೈಕಶಶ್ಚ ಮಾಂ ಯೂಯಂ ಯೋಧಯಧ್ವಂ ಯುಧಿಷ್ಠಿರ ।
ನ ಹ್ಯೇಕೋ ಬಹುಭಿರ್ನ್ಯಾಯ್ಯಂ ವೀರ ಯೋಧಯಿತುಂ ರಣೇ ॥೫೪॥

ದುರ್ಯೋಧನ– ಧರ್ಮರಾಜನೇ! ನೀವು ನನ್ನೊಡನೆ ಒಬ್ಬೊಬ್ಬರಾಗಿ ಯುದ್ಧವನ್ನು ಮಾಡಿ. ಯುದ್ಧದಲ್ಲಿ ಒಬ್ಬನು ಅನೇಕ ಜನರೊಡನೆ ಕಾದಾಡುವುದು ಯುಕ್ತಿಯುಕ್ತವಲ್ಲ.

ನ್ಯಸ್ತವರ್ಮಾ ವಿಶೇಷೇಣ ಶ್ರಾಂತಶ್ಚಾಪ್ಸು ಪರಿಪ್ಲುತಃ ।
ಭೃಶಂ ವಿಕ್ಷತಗಾತ್ರಶ್ಚ ಹತವಾಹನಸೈನಿಕಃ ॥೫೫॥

ನಾನು ಕವಚವನ್ನು ಕಳೆದುಕೊಂಡಿದ್ದೇನೆ. ಬಹಳವಾಗಿ ಆಯಾಸಗೊಂಡಿದ್ದರಿಂದ ನೀರಲ್ಲಿ ಇದ್ದೆ. ನನ್ನ ಶರೀರವು ಬಹಳವಾಗಿ ಗಾಯಗೊಂಡಿದೆ. ನನ್ನ ವಾಹನಗಳು, ಸಾರಥಿ ಸತ್ತುಹೋಗಿವೆ.

ಅವಶ್ಯಮೇವ ಯೋದ್ಧವ್ಯಂ ಸರ್ವೈರೇವ ಮಹಾರಥ ।
ಯುಕ್ತಂ ನ ಯುಕ್ತಮಿತ್ಯೇತತ್ ವೇತ್ಸಿ ತ್ವಂ ಚೈವ ಸರ್ವದಾ ॥೫೬॥

ಮಹಾರಥನೇ! ಎಲ್ಲರೊಡನೆ ಅವಶ್ಯವಾಗಿ ಯುದ್ಧಮಾಡಲೇಬೇಕೆಂಬುದರಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನೀನೂ ಕೂಡ ತಿಳಿದುಕೊಂಡಿರುವಿ.

ಯುಧಿಷ್ಠಿರಃ

ಮಾ ಭೂದಿಯಂ ತವ ಪ್ರಜ್ಞಾ ಕಥಮೇಕಂ ಸುಯೋಧನ ।
ಯದಾऽಭಿಮನ್ಯುಂ ಬಹವೋ ಯುಧಿ ಜಘ್ನುರ್ಮಹಾರಥಾಃ ॥೫೭॥

ಯುಧಿಷ್ಠಿರ– ಸುಯೋಧನನೇ! ಯುದ್ಧದಲ್ಲಿ ಅನೇಕ ಮಹಾರಥರು ಒಬ್ಬನೇ ಅಭಿಮನ್ಯುವನ್ನು ಕೊಲ್ಲುವಾಗ ನಿನಗೆ ಈ ಪ್ರಜ್ಞೆಯು ಯಾಕೆ ಉಂಟಾಗಲಿಲ್ಲ?

ಕ್ಷತ್ರಧರ್ಮಂ ಭೃಶಂ ಕ್ರೂರಂ ನಿರಪೇಕ್ಷಂ ಸುನಿರ್ಘೃಣಮ್ ।
ಅನ್ಯಥಾ ತು ಕಥಂ ಹನ್ಯುರಭಿಮನ್ಯುಂ ತಥಾಗತಮ್ ॥೫೮॥

ವಸ್ತುತಃ ಕ್ಷತ್ರಿಯಧರ್ಮವು ಬಹಳವಾಗಿ ಕ್ರೂರವಾದುದು. ಯಾವುದನ್ನೂ ಅಪೇಕ್ಷಿಸುವುದಿಲ್ಲ. ದಯೆಯಿಲ್ಲದ್ದು. ಇಲ್ಲದೇ ಹೋಗಿದ್ದರೆ ಸುಮ್ಮಸುಮ್ಮನೆ ಅಭಿಮನ್ಯುವನ್ನು ಹೇಗೆ ಕೊಂದರು?

ಸರ್ವೇ ಭವಂತೋ ಧರ್ಮಜ್ಞಾಃ ಸರ್ವೇ ಶೂರಾಸ್ತನುತ್ಯಜಃ ।
ನ್ಯಾಯೇನ ಯುಧ್ಯತಾಂ ಪ್ರೋಕ್ತಾ ಶಕ್ರಲೋಕಗತಿಃ ಪರಾ ॥೫೯॥

ನೀವೆಲ್ಲರೂ ಧರ್ಮವನ್ನು ತಿಳಿದವರು, ಶೂರರು. ಯುದ್ಧದಲ್ಲಿ ಶರೀರವನ್ನು ತ್ಯಾಗಮಾಡಲೂ ಸಿದ್ಧರಾದವರು. ಅಂತಹ ನೀವು ಏಕಾಕಿ ಅಭಿಮನ್ಯುವನ್ನು ಹೇಗೆ ಕೊಂದಿರಿ? ನ್ಯಾಯದಿಂದ ಹೋರಾಡುವವರಿಗೇನೆ ಇಂದ್ರನ ಸ್ವರ್ಗವು ಸಿಗುವುದೆಂದು ಶಾಸ್ತ್ರವು ಹೇಳಿದೆ.

ಯದ್ಯೇಕಸ್ತು ನ ಹಂತವ್ಯೋ ಬಹುಭಿರ್ಧರ್ಮ ಏವ ತು ।
ತದಾऽಭಿಮನ್ಯುಂ ಬಹವೋ ನಿಜಘ್ನುಸ್ತನ್ಮತೇ ಕಥಮ್ ॥೬೦॥

ಒಂದು ಪಕ್ಷದಲ್ಲಿ ಒಬ್ಬನನ್ನು ಅನೇಕರು ಕೊಲ್ಲಬಾರದು ಎಂಬುದು ಧರ್ಮವೆಂದಾದರೆ ಅನೇಕರು ಒಬ್ಬಂಟಿಯಾದ ಅಭಿಮನ್ಯುವನ್ನು ಕೊಂದರು ಎಂಬುದು ನಿಮ್ಮ ಮತದಲ್ಲಿ ಹೇಗೆ ಯುಕ್ತವಾಗುತ್ತದೆ?

ಸರ್ವೋ ವಿಮೃಶತೇ ಜಂತುಃ ಕೃಚ್ಛ್ರಸ್ಥೋ ಧರ್ಮದರ್ಶನಮ್ ।
ಯದಸೌ ಪಿಹಿತಂ ದ್ವಾರಂ ಪರಲೋಕಸ್ಯ ಪಶ್ಯತಿ ॥೬೧॥

ತಾವು ಕಷ್ಟದಲ್ಲಿ ಇದ್ದಾಗ ಎಲ್ಲಾ ಪ್ರಾಣಿಗಳೂ ಧರ್ಮದ ವಿಚಾರವನ್ನು ವಿಮರ್ಶಿಸುತ್ತವೆ. ಧರ್ಮವನ್ನು ಸಹಿಸದಿರುವುದು ಪರಲೋಕದ ದ್ವಾರದ ಮುಚ್ಚುವಿಕೆಗೆ ಕಾರಣವಾಗುತ್ತದೆ.

ಆಮುಂಚ ಕವಚಂ ವೀರ ಮೂರ್ಧಜಾನ್ ಯಮಯಸ್ವ ಚ ।
ಯಚ್ಚಾನ್ಯದಪಿ ತೇ ನಾಸ್ತಿ ತದಪ್ಯಾಚಕ್ಷ್ವ ಭಾರತ ॥೬೨॥

ವೀರನೇ, ಭರತಕುಲೋದ್ಭವನೇ! ಕವಚವನ್ನು ಧರಿಸು. ಕೇಶಬಂಧವನ್ನು ಮಾಡಿಕೊ! ಯುದ್ಧಕ್ಕೆ ಬೇಕಾದ ಸಾಮಗ್ರಿಗಳು ನಿನ್ನ ಬಳಿ ಇಲ್ಲವಾದರೆ ನಮ್ಮಿಂದ ಕೇಳಿ ಪಡೆದುಕೊ.

ಇದಮೇಕಂ ಚ ತೇ ಕಾಮಂ ವೀರ ಭೂಯೋ ದದಾಮ್ಯಹಮ್ ॥೬೩॥

ನಿನಗೆ ಈ ಮೂರನೆಯ ವರವನ್ನು ಮತ್ತೆ ಕೊಡುತ್ತಿದ್ದೇನೆ.

ಪಂಚಾನಾಂ ಪಾಂಡವೇಯಾನಾಂ ಯೇನ ಯೋದ್ಧುಮಿಹೇಚ್ಛಸಿ ।
ತಂ ಹತ್ವಾ ಭವ ರಾಜಾ ತ್ವಂ ಹತೋ ವಾ ಸ್ವರ್ಗಮಾಪ್ನುಹಿ ॥೬೪॥

ಪಂಚಪಾಂಡವರಲ್ಲಿ ಇಲ್ಲಿ ಯಾರೊಡನೆ ಯುದ್ಧವನ್ನು ಇಚ್ಛಿಸುತ್ತೇಯೋ, ಅವನನ್ನು ಕೊಂದು ರಾಜನಾಗು ಅಥವಾ ನೀನು ಸತ್ತು ಸ್ವರ್ಗಕ್ಕೆ ಹೋಗು.

ಋತೇ ಚ ಜೀವಿತಂ ವೀರ ಯುದ್ಧೇ ಕಿಂ ಕುರ್ಮಿ ತೇ ಪ್ರಿಯಮ್ ॥

ನಿನ್ನ ಜೀವವೊಂದನ್ನು ಹೊರತುಪಡಿಸಿ ಬೇರೆ ನಿನಗೆ ಪ್ರಿಯವಾದುದನ್ನು ಏನಾದರೂ ಕೇಳು. ಅದನ್ನು ನಡೆಸಿಕೊಡುತ್ತೇನೆ.

ಸಂಜಯಃ

ತತಸ್ತವ ಸುತೋ ರಾಜನ್ ವರ್ಮ ಜಗ್ರಾಹ ಕಾಂಚನಮ್ ।
ವಿಚಿತ್ರಂ ಚ ಶಿರತ್ರಾ(ಸ್ತ್ರಾ)ಣಂ ಜಾಂಬೂನದಪರಿಷ್ಕೃತಮ್ ॥೬೬॥

ಸಂಜಯ– ರಾಜನೇ! ಅನಂತರ ನಿನ್ನ ಮಗನು ಬಂಗಾರದ ಕವಚವನ್ನು ತೆಗೆದುಕೊಂಡನು. ವಿಚಿತ್ರವಾದ ತಲೆರಕ್ಷಕವನ್ನೂ ಸ್ವೀಕರಿಸಿದನು. ಅದಕ್ಕೂ ಬಂಗಾರದ ಪಟ್ಟಿಯನ್ನು ಹಾಕಲಾಗಿತ್ತು.

ಸೋಽವಬದ್ಧಶಿರಸ್ತ್ರಾಣಂ ಶುದ್ಧಕಾಂಚನವರ್ಮಭೃತ್ ।
ರರಾಜ ರಾಜನ್ ಪುತ್ರಸ್ತೇ ಕಾಂಚನಃ ಶೈಲರಾಡಿವ ॥೬೭॥

ರಾಜನೇ! ಹೀಗೆ ಶಿರಸ್ತ್ರಾಣವನ್ನು ಕಟ್ಟಿಕೊಂಡು, ಬಂಗಾರದ ಕವಚವನ್ನು ಧರಿಸಿರುವ ನಿನ್ನ ಮಗನು ಬಂಗಾರದ ಪರ್ವತರಾಜನಂತೆ ಶೋಭಿಸುತ್ತಿದ್ದನು.

ಸನ್ನದ್ಧಃ ಸಗದೋ ರಾಜನ್ ಸಜ್ಜಃ ಸಂಗ್ರಾಮಮೂರ್ಧನಿ ।
ಅಬ್ರವೀತ್ ಪಾಂಡವಾನ್ ರಾಜನ್ ಪುತ್ರೋ ದುರ್ಯೋಧನಸ್ತವ॥೬೮॥

ರಾಜನೇ! ಗದೆಯನ್ನು ಹಿಡಿದುಕೊಂಡು ರಣರಂಗದಲ್ಲಿ ಸನ್ನದ್ಧನಾದ ನಿನ್ನ ಮಗ ದುರ್ಯೋಧನನು ಎಲ್ಲವನ್ನೂ ಸಿದ್ಧಪಡಿಸಿಕೊಂಡು ಪಾಂಡವರನ್ನು ಕುರಿತು ಹೀಗೆ ಹೇಳುತ್ತಾನೆ.

ದುರ್ಯೋಧನಃ

ಭ್ರಾತೄಣಾಂ ಭವತಾಮೇಕೋ ಯುಧ್ಯತಾಂ ಗದಯಾ ಮಯಾ ।
ಸಹದೇವೇನ ವಾ ಯೋತ್ಸ್ಯೇ ಭೀಮೇನ ನಕುಲೇನ ವಾ ॥೬೯॥

ಅಥವಾ ಫಲ್ಗುನೇನಾದ್ಯ ತ್ವಯಾ ವಾ ಭರತರ್ಷಭ ।
ಯೋತ್ಸ್ಯೇಹಂ ಸಂಗರಂ ಪ್ರಾಪ್ಯ ವಿಜೇಷ್ಯೇ ಚ ರಣಾಜಿರೇ ॥೭೦॥

ದುರ್ಯೋಧನ– ನಿಮ್ಮ ಸಹೋದರರಲ್ಲಿ ಒಬ್ಬ ಗದೆಯನ್ನು ತೆಗೆದುಕೊಂಡು ನನ್ನ ಜೊತೆಗೆ ಯುದ್ಧ ಮಾಡಲಿ. ಆ ವ್ಯಕ್ತಿಯು ಸಹದೇವನೋ, ಭೀಮನೋ ಅಥವಾ ನಕುಲನೊ ಆಗಿರಲಿ ಅಥವಾ ಅರ್ಜುನನನೊಡನೆ ನನ್ನ ಯುದ್ಧವು ನಡೆಯಲಿ ಅಥವಾ ಭರತಶ್ರೇಷ್ಠನೇ, ನಿನ್ನ ಜೊತೆಗೆ ಯುದ್ಧವು ನಡೆಯಲಿ. ನಾನು ರಣರಂಗಕ್ಕೆ ಬಂದು ಯುದ್ಧವನ್ನು ಮಾಡುವೆನು. ಅದರಲ್ಲಿ ಜಯವು ನನ್ನ ಪಾಲಿಗೇ ಸಿಗುವುದು.

ಅಹಮದ್ಯ ಗಮಿಷ್ಯಾಮಿ ವೈರಸ್ಯಾಂತಂ ಸುದುರ್ಗಮಮ್ ।
ಗದಯಾ ಪುರುಷವ್ಯಾಘ್ರ ಹೇಮಪಟ್ಟನಿಬದ್ಧಯಾ ॥೭೧॥

ಪುರುಷಸಿಂಹನೇ! ಇವತ್ತು ನಾನು ನಮ್ಮ ನಡುವೆ ಏರ್ಪಟ್ಟಿದ್ದ ವೈರವನ್ನು ಬಿಡುವೆನು. ವೈರದ ಕೊನೆಯನ್ನು ಕಾಣುವುದು ಅಷ್ಟು ಸುಲಭವಲ್ಲ. ನನ್ನ ಕೈಯಲ್ಲಿರುವ ಸುವರ್ಣಪಟ್ಟಿಯುಳ್ಳ ಗದೆಯಿಂದ ಇದನ್ನೆಲ್ಲ ಮಾಡಿ ತೋರಿಸುವೆನು.

ಗದಾಯುದ್ಧೇ ನ ಮೇ ಕಶ್ಚಿತ್ ಸದೃಶೋಽಸ್ತೀತಿ ಚಿಂತಯ ॥೭೨॥

ಗದಾಯುದ್ಧದಲ್ಲಿ ನನಗೆ ಸದೃಶನಾದ ಇನ್ನೊಬ್ಬ ವ್ಯಕ್ತಿಯೇ ಇಲ್ಲ ಎಂಬುದಾಗಿ ತಿಳಿದುಕೊಳ್ಳು.

ಗದಯಾ ಪೋಥಯಿಷ್ಯಾಮಿ ಸರ್ವಾನೇವ ಪೃಥಕ್ ಪೃಥಕ್ ॥೭೩॥

ಈ ಗದೆಯಿಂದ ಎಲ್ಲರನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಪುಡಿ ಮಾಡುವೆನು.

ನ ಮೇ ಸಮರ್ಥಾಃ ಸರ್ವೇ ವೈ ಯೋದ್ಧುಂ ನ್ಯಾಯೇನ ಕೇಚನ ।
ನ ಯುಕ್ತಮಾತ್ಮನಾ ವಕ್ತುಮೇವಂ ಗರ್ವೋದ್ಧತಂ ವಚಃ ॥೭೪॥

ನ್ಯಾಯಪ್ರಕಾರವಾಗಿ ನೋಡುವುದಾದರೆ ಯುದ್ಧದಲ್ಲಿ ನನಗೆ ಸಮಾನನಾಗಿ ಯುದ್ಧ ಮಾಡುವವನು ಯಾವನೂ ಇಲ್ಲ. ನೀನು ಗರ್ವದಿಂದ ಕೂಡಿದ, ಅಯುಕ್ತವಾದ ಮಾತುಗಳನ್ನಾಡುವುದು ಸರಿಯಲ್ಲ.

ಅಥವಾ ಸಫಲಂ ಹ್ಯೇತತ್ಕರಿಷ್ಯೇ ಭವತಾಂ ಪುರಃ ।
ಅಸ್ಮಿನ್ಮುಹೂರ್ತೇ ಸತ್ಯಂ ವಾ ಮಿಥ್ಯಾ ವೈ ತದ್ ಭವಿಷ್ಯತಿ ॥೭೫॥

ಅಥವಾ ಫಲಪ್ರಾಪ್ತಿಗಾಗಿ ನಿನ್ನ ಎದುರಿನಲ್ಲಿಯೇ, ಈ ಮುಹೂರ್ತದಲ್ಲಿಯೇ ಆ ಕೆಲಸವನ್ನು ಮಾಡಿ ಮುಗಿಸುವೆನು. ಅದು ಸತ್ಯವೋ ಮಿಥ್ಯವೋ ಆಗಿರಬಹುದು.

ಗೃಹ್ಯತಾಂ ಚ ಗದಾ ಯೋ ವೈ ಯುಧ್ಯತೇಽದ್ಯ ಮಯಾ ಸಹ ॥೭೬॥

ಇಂದು ನನ್ನೊಡನೆ ಯಾರು ಕಾದಾಡುತ್ತಾರೆಯೋ ಅವರು ಗದೆಯನ್ನು ಹಿಡಿಯಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ತಮ್ಮಲ್ಲಿ ಯಾರನ್ನಾದರೊಬ್ಬರನ್ನು ಸೋಲಿಸಿದರೂ ರಾಜ್ಯವನ್ನು ಪಡೆಯುವಿ ಎಂಬ ಯುಧಿಷ್ಠಿರನ ಬಗ್ಗೆ ಶ್ರೀಕೃಷ್ಣನು ಕೋಪಗೊಂಡಿದ್ದು, ಭೀಮನೂ ಕೂಡ ದುರ್ಯೋಧನನನ್ನು ಸೋಲಿಸುವ ವಿಚಾರದಲ್ಲಿಯೂ ಶ್ರೀಕೃಷ್ಣನು ತನ್ನ ಸಂಶಯವನ್ನು ವ್ಯಕ್ತಪಡಿಸಿದ್ದು. ಕೃಷ್ಣನನ್ನು ಕುರಿತು ತನ್ನ ಸಾಮರ್ಥ್ಯವನ್ನು ಹೇಳಿಕೊಂಡು, ದುರ್ಯೋಧನನನ್ನು ಸಾಯಿಸುವುದು ಸುಲಭ ಎಂದು ಭೀಮನು ಹೇಳಿದಾಗ ಕೃಷ್ಣ ಮೊದಲಾದವರಿಂದ ಭೀಮನ ಪ್ರಶಂಸೆ. ಭೀಮ ಮತ್ತು ದುರ್ಯೋಧನರ ಮಧ್ಯೆ ವೀರೋಚಿತ ಮಾತುಗಳ ಮೂಲಕ ಯುದ್ಧಕ್ಕೆ ತಯಾರಿ.

ಸಂಜಯಃ

ಏವಂ ದುರ್ಯೋಧನೇ ರಾಜನ್ ಗರ್ಜಮಾನೇ ಪುನಃ ಪುನಃ ।
ವಾಸುದೇವೋಽಬ್ರವೀದ್ ಕ್ರುದ್ಧೋ ಯುಧಿಷ್ಠಿರಮಿದಂ ವಚಃ ॥೧॥

ಸಂಜಯ– ರಾಜನೇ! ಹೀಗೆ ದುರ್ಯೋಧನನು ಮತ್ತೆ ಮತ್ತೆ ಗರ್ಜಿಸುತ್ತಿರಲು ಕೋಪಗೊಂಡ ಶ್ರೀಕೃಷ್ಣನು ಯುಧಿಷ್ಠಿರನಿಗೆ ಈ ಮಾತನ್ನು ಹೇಳುತ್ತಾನೆ.

ಶ್ರೀಭಗವಾನ್

ಕಿಮಿದಂ ವ್ಯಾಹೃತಂ ರಾಜನ್ ತ್ವಯಾ ಸಾಹಸಮೀದೃಶಮ್ ।
ಏಕಮೇವ ನಿಹತ್ಯಾಜೌ ಭವ ರಾಜಾ ಕುರುಷ್ವಿತಿ ॥೨॥

ಶ್ರೀಭಗವಾನ್– ರಾಜನೇ! 'ನಮ್ಮಲ್ಲಿ ಯಾರಾದರೂ ಒಬ್ಬನನ್ನು ಯುದ್ಧದಲ್ಲಿ ಕೊಂದು ರಾಜನಾಗು' ಈ ರೀತಿಯ ಸಾಹಸದ ಮಾತನ್ನು ದುರ್ಯೋಧನನಿಗೆ ಏಕೆ ಹೇಳಿದಿ?

ಯದಿ ನಾಮ ಹ್ಯಯಂ ಕ್ರುದ್ಧೋ ವರಯೇತ್ ತ್ವಾಂ ಯುಧಿಷ್ಠಿರ ।
ಅರ್ಜುನಂ ನಕುಲಂ ವಾಽಪಿ ಸಹದೇವಮಥಾಪಿ ವಾ ।
ನ ಸಮರ್ಥಾನಹಂ ಮನ್ಯೇ ಗದಾಹಸ್ತಸ್ಯ ಸಂಯುಗೇ ॥೩॥

ಯುಧಿಷ್ಠಿರನೇ! ಒಂದು ವೇಳೆ ಕ್ರುದ್ಧನಾದ ದುರ್ಯೋಧನನು ನಿನ್ನನ್ನು ಅಥವಾ ಅರ್ಜುನನನ್ನು ಅಥವಾ ನಕುಲ ಅಥವಾ ಸಹದೇವನನ್ನು ಯುದ್ಧಕ್ಕೆ ಕೇಳಿಕೊಂಡರೆ,

ಈ ನೀವು ಯಾರೂ ಯುದ್ಧದಲ್ಲಿ ಗದೆಹಿಡಿದು ಕಾದಾಡಲು ಸಮರ್ಥರೆಂದು ನಾನು ಭಾವಿಸುವುದಿಲ್ಲ.

ಏತೇನ ಹಿ ಕೃತಾ ಯೋಧ್ಯಾ ವರ್ಷಾಣೀಹ ತ್ರಯೋದಶ ।
ಆಯಸೈಃ ಪುರುಷೈ ರಾಜನ್ ಭೀಮಸೇನವಧೇಪ್ಸಯಾ ॥೪॥

ರಾಜನೇ! ಈ ದುರ್ಯೋಧನನು ಭೀಮನನ್ನು ಕೊಲ್ಲಬೇಕೆಂಬ ಇಚ್ಛೆಯಿಂದ ಹದಿಮೂರು ವರ್ಷಗಳ ಕಾಲ ಕಬ್ಬಿಣದ ಪುರುಷಾಕಾರಗಳೊಂದಿಗೆ (ಕಬ್ಬಿಣದಂತೆ ಗಟ್ಟಿಯಾದ ಪುರುಷರೊಂದಿಗೆ) ಕಾದಾಟದ ಕ್ರಿಯೆಗಳ ಅಭ್ಯಾಸವನ್ನು ಮಾಡಿದ್ದಾನೆ.

ಕಥಂ ನಾಮ ಭವೇತ್ ಕಾರ್ಯಮಸ್ಮಾಭಿರ್ಭರತರ್ಷಭ ।
ಸಾಹಸಂ ಕೃತವಾನ್ ಯತ್ ತ್ವಮನುಕ್ರೋಶಾನ್ನೃಪೋತ್ತಮ ॥೫॥

ಭರತಶ್ರೇಷ್ಠನೇ! ನೃಪೋತ್ತಮನೇ! ಕೋಪದಿಂದ ನೀನು ಮಾಡಿದ ಈ ಕಾರ್ಯವನ್ನು ನಮ್ಮಂತಹವರು ಹೇಗೆ ಮಾಡಲು ಸಾಧ್ಯ?

ನ ಚಾನ್ಯಮದ್ಯ ಪಶ್ಯಾಮಿ ಪ್ರತಿಯೋದ್ಧಾರಮಾಹವೇ ।
ಋತೇ ವೃಕೋದರಾತ್ ಪಾರ್ಥಾತ್ ಸ ಚ ನಾತಿಕೃತಶ್ರಮಃ ॥೬॥

ದುರ್ಯೋಧನನಿಗೆ ವಿರುದ್ಧವಾಗಿ ಯುದ್ಧಮಾಡಬಲ್ಲ ಇನ್ನೊಬ್ಬ ವ್ಯಕ್ತಿಯು ಕಾಣಿಸುವುದಿಲ್ಲ. ಭೀಮನೊಬ್ಬನೇ ಸಮರ್ಥ. ಅವನಾದರೂ ಬಹಳ ಅಭ್ಯಾಸವನ್ನು ಮಾಡಿಲ್ಲ.

ತದಿದಂ ದ್ಯೂತಮಾರಬ್ಧಂ ಪುನರೇವ ಯಥಾ ಪುರಾ ।
ವಿಷಮಂ ಶಕುನೇಶ್ಚೈವ ತವ ಚೈವ ವಿಶೇಷತಃ ॥೭॥

ಈ ಪ್ರಕಾರವಾಗಿ ನೀನು ಮತ್ತೆ ಹಿಂದಿನ ಹಾಗೆಯೇ ದ್ಯೂತವನ್ನು (ಜೂಜನ್ನು) ಆಡಲು ಪ್ರಾರಂಭಿಸಿದ್ದಿ. ನಿನ್ನ ಈ ದ್ಯೂತವು ಶಕುನಿಯ ದ್ಯೂತಕ್ಕಿಂತಲೂ ವಿಶೇಷವಾದದ್ದು.

ಬಲೀ ಭೀಮಃ ಸಮರ್ಥಶ್ಚ ಕೃತೀ ರಾಜನ್ ಸುಯೋಧನಃ ।
ಬಲವಾನ್ ವೈ ಕೃತೀ ವೇತಿ ಕೃತೀ ರಾಜನ್ ವಿಶಿಷ್ಯತೇ ॥೮॥

ಭೀಮನು ಬಲಶಾಲಿ ಹಾಗೂ ಸಮರ್ಥನಿದ್ದಾನೆ. ದುರ್ಯೋಧನನು ತುಂಬಾ ಅಭ್ಯಾಸವನ್ನು ಮಾಡಿರುತ್ತಾನೆ. ಬಲಶಾಲಿ ಮತ್ತು ಅಭ್ಯಾಸಶೀಲರಲ್ಲಿ ಅಭ್ಯಾಸನಿರತರಾದವರು ವಿಶಿಷ್ಟರಾಗಿರುತ್ತಾರೆ.

ಸೋಽಯಂ ರಾಜಂಸ್ತ್ವಯಾ ಶತ್ರುಃ ಸಮೇ ಪಥಿ ನಿವೇಶಿತಃ ।
ನ್ಯಸ್ತಶಾತ್ಮಾ ಸುವಿಷಮೇ ಕೃಚ್ಛ್ರಮಾಪಾದಿತಾ ವಯಮ್ ॥೯॥

ರಾಜನೇ! ನೀನು ಶತ್ರುವಿಗೆ ಅನುಕೂಲವಾದ ಮಾರ್ಗವನ್ನು ಮಾಡಿಕೊಟ್ಟಿ. ನಿನಗೆ ಸ್ವತಃ ಅನನುಕೂಲವಾದ ಮಾರ್ಗವನ್ನು ಮಾಡಿಕೊಂಡಿ. ಜೊತೆಗೆ ನಾವೂ ಕೂಡ ಬಹಳ ಸಂಕಟದಲ್ಲಿ ಸಿಲುಕಿಕೊಳ್ಳುವ ಹಾಗೆ ಮಾಡಿದಿ.

ಕೋ ಹಿ ಸರ್ವಾನ್ ವಿನಿರ್ಜಿತ್ಯ ಶತ್ರೂನೇಕೇನ ವೈರಿಣಾ ।
ಪಣಿತ್ವಾ ಚೈಕಪಾಣೇನ ಶೋಚಯೇದೇವಮಾಹವಮ್ ॥೧೦॥

ಕೃಚ್ಛ್ರಪ್ರಾಪ್ತೇನ ಚ ತಥಾ ಹಾರಯೇದ್ ರಾಜ್ಯಮಾಗತಮ್ ॥೧೧॥

ಎಲ್ಲಾ ಶತ್ರುಗಳನ್ನೂ ಗೆದ್ದು, ಒಬ್ಬನೇ ಶತ್ರುವು ಉಳಿದುಕೊಂಡಿದ್ದು, ಅವನೂ ಕಷ್ಟದಲ್ಲಿರುವಾಗ, ಒಬ್ಬನನ್ನು ಗೆದ್ದರೂ ಸಾಕು ಎಂಬ ಪಣವನ್ನು ನಿರ್ಧರಿಸಿ, ಯುದ್ಧವನ್ನು ಸೋಲಲು ಯಾವನು ತಾನೇ ಇಷ್ಟಪಡುವನು? ಕಷ್ಟಪಟ್ಟು ಕೈಗೆ ಬಂದ ರಾಜ್ಯವನ್ನು ಈ ರೀತಿಯಲ್ಲಿ ಯಾವನು ತಾನೇ ಕಳೆದುಕೊಳ್ಳುವನು?

ನ ಹಿ ಪಶ್ಯಾಮಿ ತಲ್ಲೋಕೇ ಯೋಽದ್ಯ ದುರ್ಯೋಧನಂ ರಣೇ ।
ಗದಾಹಸ್ತಂ ವಿಜೇತುಂ ವೈ ಶಕ್ತಃ ಸ್ಯಾದಮರೋಽಪಿ ಹಿ ॥೧೨॥

ಯುದ್ಧದಲ್ಲಿ ಗದಾಧಾರಿಯಾದ ದುರ್ಯೋಧನನನ್ನು ಗೆಲ್ಲುವ ಸಾಮರ್ಥ್ಯವುಳ್ಳವನು ಈ ಲೋಕದಲ್ಲಿ ಯಾವನೂ ಕಾಣಿಸುತ್ತಿಲ್ಲ. ಆ ಸಾಮರ್ಥ್ಯವಿರುವ ದೇವತೆಯೂ ಯಾರೂ ಕಾಣಿಸುವುದಿಲ್ಲ.

ಫಲ್ಗುನೋ ವಾ ಭವಾನ್ ವಾಽಪಿ ಮಾದ್ರೀಪುತ್ರಾವಥಾಪಿ ವಾ ।
ನ ಸಮರ್ಥಾನಹಂ ಮನ್ಯೇ ಗದಾಹಸ್ತಸ್ಯ ಸಂಯುಗೇ ॥೧೩॥

ಗದೆಯನ್ನು ಹಿಡಿದ ದುರ್ಯೋಧನನ ಜೊತೆಗೆ ಯುದ್ಧಮಾಡುವ ಸಾಮರ್ಥ್ಯವು ನಿನಗಾಗಲಿ, ಅರ್ಜುನನಿಗಾಗಲೀ, ನಕುಲನಿಗಾಗಲೀ, ಸಹದೇವನಿಗಾಗಲೀ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ನ ತ್ವಂ ಭೀಮೋ ನ ನಕುಲಃ ಸಹದೇವೋಽಥ ಫಲ್ಗುನಃ ।
ಜೇತುಂ ನ್ಯಾಯೇನ ಶಕ್ತೋ ವೈ ಕೃತೀ ರಾಜಾ ಸುಯೋಧನಃ ॥೧೪॥

ನೀನು, ಭೀಮ, ನಕುಲ, ಸಹದೇವ, ಅರ್ಜುನ ಇವರಿಗೆ ಯಾರಿಗೂ ಕೂಡ ಅಭ್ಯಾಸನಿರತನಾದ ದುರ್ಯೋಧನನನ್ನು ನ್ಯಾಯಮಾರ್ಗದಲ್ಲಿ ಗೆಲ್ಲಲು ಸಾಧ್ಯವಿಲ್ಲ.

ಸ ಕಥಂ ವದಸೇ ಶತ್ರುಂ ಯುಧ್ಯಸ್ವ ಗದಯೇತಿ ಹ ।
ಏಕಂ ವಾ ತ್ವಂ ನಿಹತ್ಯಾಜೌ ಭವ ರಾಜೇತಿ ಭಾರತ ॥೧೫॥

ಗದೆಯಿಂದ ಯುದ್ಧಮಾಡಿ ಒಬ್ಬನನ್ನಾದರೂ ಕೊಂದು ರಾಜನಾಗು ಎಂದು ಶತ್ರುವಿಗೆ ನೀನು ಹೇಳಲು ಹೇಗೆ ಸಾಧ್ಯ?

ನೂನಂ ನ ರಾಜ್ಯಭಾಗೇಷಾ ಪಾಂಡೋಃ ಕುಂತ್ಯಾಶ್ಚ ಸಂತತಿಃ ।
ಅತ್ಯಂತವನವಾಸಾಯ ಸೃಷ್ಟಾ ಭೈಕ್ಷಾಯ ವಾ ಪುನಃ ॥೧೬॥

ಖಂಡಿತವಾಗಿಯೂ ಪಾಂಡುವಿನ ಸಂತತಿಯಾಗಲೀ, ಕುಂತಿಯ ಸಂತತಿಯಾಗಲೀ ರಾಜ್ಯವನ್ನು ಅನುಭವಿಸುವುದಿಲ್ಲ. ಪುನಃ ವನವಾಸಕ್ಕೋ ಅಥವಾ ಭಿಕ್ಷೆ ಬೇಡಲಿಕ್ಕೋ ಈ ಸಂತತಿಯು ಹುಟ್ಟಿದೆ.

ಶ್ರೀಭೀಮಸೇನಃ

ಮಧುಸೂದನ ಮಾ ಕಾರ್ಷೀರ್ವಿಷಾದಂ ಯದುಪುಂಗವ ।
ಅದ್ಯ ಪಾರಂ ಗಮಿಷ್ಯಾಮಿ ವೈರಸ್ಯಾಸ್ಯ ಸುದುರ್ಗಮಮ್ ॥೧೭॥

ಶ್ರೀಭೀಮಸೇನ– ಮಧುಸೂದನನೇ! ಯದುಶ್ರೇಷ್ಠನೇ! ವಿಷಾದ ಪಡಬೇಡ. ಈ ವೈರವನ್ನು ಇಂದು ಕೊನೆಗೊಳಿಸುತ್ತೇನೆ.

ಅಹಂ ಸುಯೋಧನಂ ಸಂಖ್ಯೇ ಹನಿಷ್ಯಾಮಿ ನ ಸಂಶಯಃ ।
ವಿಜಯೋ ವೈ ಧ್ರುವಃ ಕೃಷ್ಣ ಧರ್ಮರಾಜಸ್ಯ ದೃಶ್ಯತೇ ॥೧೮॥

ನಾನು ಸುಯೋಧನನನ್ನು ಯುದ್ಧದಲ್ಲಿ ಸಾಯಿಸುತ್ತೇನೆ. ಸಂಶಯ ಬೇಡ. ನಿಶ್ಚಿತವಾಗಿ ಧರ್ಮರಾಜನಿಗೆ ಜಯವು ಕಾಣಿಸಿಕೊಳ್ಳುತ್ತದೆ.

ಅಧ್ಯ(ತ್ಯ)ರ್ಧೇನ ಗುಣೇನೇಯಂ ಗದಾ ಗುರುತರೀ ಮಮ ।
ನ ತಥಾ ಧಾರ್ತರಾಷ್ಟ್ರಸ್ಯ ಮಾ ಕಾರ್ಷೀರ್ಮಾಧವ ವ್ಯಥಾಮ್ ॥೧೯॥

ನನ್ನ ಗದೆಯು ದುರ್ಯೋಧನನ ಗದೆಗಿಂತ ಒಂದೂವರೆಪಟ್ಟು ಅಧಿಕ ಭಾರವಾಗಿದೆ. ಆದರೆ ದುರ್ಯೋಧನನ ಗದೆಯು ಹಾಗಿಲ್ಲ ಮಾಧವನೇ! ವ್ಯಥೆಯನ್ನು ಮಾಡಬೇಡ.

ಅನಯಾ ಗದಯಾ ಚಾಹಂ ಸಂಯುಗೇ ಯೋದ್ಧುಮುತ್ಸಹೇ ।
ಭವಂತಃ ಪ್ರೇಕ್ಷಕಾಃ ಸರ್ವೇ ಮಮ ಸಂತು ಜನಾರ್ದನ ॥೨೦॥

ಈ ಗದೆಯಿಂದಲೇ ನಾನು ಯುದ್ಧಮಾಡಲು ಬಯಸುತ್ತೇನೆ. ಜನಾರ್ದನನೇ! ನೀವೆಲ್ಲರೂ ನನಗೆ ಪ್ರೇಕ್ಷಕರಾಗಿ ಇರಿ.

ಸಾಮರಾನಪಿ ಲೋಕಾಂಸ್ತ್ರೀನ್ ನಾನಾಶಸ್ತ್ರಧರಾನ್ ಯುಧಿ ।
ಯೋಧಯೇಯಂ ರಣೇ ಕೃಷ್ಣ ಕಿಮುತಾದ್ಯ ಸುಯೋಧನಮ್ ॥೨೧॥

ದೇವತೆಗಳಿಂದ ಕೂಡಿ ಶಸ್ತ್ರಧಾರಿಗಳಾದ ಮೂರೂ ಲೋಕದ ಯೋಧರನ್ನೂ ಯುದ್ಧದಲ್ಲಿ ಎದುರಿಸಿ ಕಾದಾಡಬಲ್ಲೆ. ಶ್ರೀಕೃಷ್ಣನೇ! ಇವತ್ತು ಈ ಸುಯೋಧನನು ಯಾವ ಲೆಕ್ಕಕ್ಕೆ?

ಸಂಜಯಃ

ತಂ ತಥಾ ಭಾಷಮಾಣಂ ತು ವಾಸುದೇವೋ ವೃಕೋದರಮ್ ।
ಹೃಷ್ಟಃ ಸಂಪೂಜಯಾಮಾಸ ವಚನಂ ಚೇದಮಬ್ರವೀತ್ ॥೨೨॥

ಸಂಜಯ– ಹೀಗೆ ಮಾತನಾಡುತ್ತಿದ್ದ ಭೀಮನಿಗೆ ಸಂತುಷ್ಟನಾದ ಶ್ರೀಕೃಷ್ಣನು ಅಭಿನಂದಿಸಿದನು ಮತ್ತು ಈ ಮಾತನ್ನು ಹೇಳಿದನು.

ಶ್ರೀಭಗವಾನ್

ತ್ವಾಮಾಸಾದ್ಯ ಮಹಾಬಾಹೋ ಧರ್ಮರಾಜೋ ಯುಧಿಷ್ಠಿರಃ ।
ನಿಹತಾರಿಃ ಸ್ವಕಾಂ ದೀಪ್ತಾಂ ಶ್ರಿಯಮಾಪ್ನೋತ್ಯಸಂಶಯಮ್ ॥೨೩॥

ಶ್ರೀಭಗವಾನ್– ಮಹಾಬಾಹುವೇ! ನಿನ್ನನ್ನು ಹೊಂದಿ ಧರ್ಮರಾಜ ಯುಧಿಷ್ಠಿರನು ಶತ್ರುಗಳನ್ನೆಲ್ಲಾ ಕೊಂದು, ಪ್ರಕಾಶಮಾನವಾದ ತನ್ನ ಸಂಪತ್ತನ್ನು ನಿಸ್ಸಂಶಯವಾಗಿ ಪಡೆಯುತ್ತಾನೆ.

ತ್ವಯಾ ವಿನಿಹತಾಃ ಸರ್ವೇ ಧೃತರಾಷ್ಟ್ರಸುತಾ ರಣೇ ।
ರಾಜಾನೋ ರಾಜಪುತ್ರಾಶ್ಚ ನಾಗಾಶ್ಚ ವಿನಿಪಾತಿತಾಃ ॥೨೪॥

ರಣರಂಗದಲ್ಲಿ ಧೃತರಾಷ್ಟ್ರನ ಎಲ್ಲಾ ಮಕ್ಕಳೂ ನಿನ್ನಿಂದ ಸತ್ತಿದ್ದಾರೆ. ರಾಜರು, ರಾಜಕುಮಾರರು, ಆನೆಗಳು ಇವೆಲ್ಲವನ್ನೂ ನೀನು ಕೊಂದು ಬೀಳಿಸಿರುವಿ.

ಕಲಿಂಗಮಾಗಧಾಃ ಪ್ರಾಚ್ಯಾ ಗಾಂಧಾರಾಃ ಕುರವಸ್ತಥಾ ।
ತ್ವಾಮಾಸಾದ್ಯ ಮಹಾಯುದ್ಧೇ ನಿಹತಾಃ ಪಾಂಡುನಂದನ ॥೨೫॥

ಪಾಂಡುನಂದನನೇ! ಕಲಿಂಗರು, ಮಾಗಧರು, ಪ್ರಾಚ್ಯರು, ಗಾಂಧಾರರು, ಕುರುಗಳು ಇವರೆಲ್ಲಾ ಮಹಾಯುದ್ಧದಲ್ಲಿ ನಿನ್ನನ್ನು ಎದುರಿಸಿ ತಾವೇ ಸತ್ತುಹೋಗಿದ್ದಾರೆ.

ಹತ್ವಾ ದುರ್ಯೋಧನಂ ಚಾಪಿ ಪ್ರಯಚ್ಛೋರ್ವೀಂ ಸಸಾಗರಾಮ್ ।
ಧರ್ಮರಾಜಾಯ ಕೌಂತೇಯ ಸಶೈಲವನಕಾನನಾಮ್ ॥೨೬॥

ಕೌಂತೇಯನೇ! ದುರ್ಯೋಧನನನ್ನೂ ಕೊಂದು ಸಾಗರಪರ್ಯಂತವಾದ, ಪರ್ವತ ವನ ಕಾನನಗಳಿಂದ ಕೂಡಿದ ಭೂಮಿಯನ್ನು ಧರ್ಮರಾಜನಿಗೆ ಕೊಡು.

ತ್ವಾಂ ತು ಪ್ರಾಪ್ಯ ರಣೇ ಪಾಪೋ ಧಾರ್ತರಾಷ್ಟ್ರೋ ವಿನಶ್ಯತಿ ।
ತ್ವಮಸ್ಯ ಸಕ್ಥಿನೀ ಭಿತ್ವಾ ಪ್ರತಿಜ್ಞಾಂ ಪಾಲಯಿಷ್ಯಸಿ ॥೨೭॥

ಯುದ್ಧದಲ್ಲಿ ನಿನ್ನನ್ನು ಎದುರಾಳಿಯಾಗಿ ಹೊಂದಿ ಪಾಪಿಯಾದ ದುರ್ಯೋಧನನು ನಾಶವಾಗುತ್ತಾನೆ. ಅವನ ತೊಡೆ(ಬೆನ್ನಮೂಳೆಯ ಸಂಧಿ)ಗಳನ್ನು ಮುರಿದು ನಿನ್ನ ಪ್ರತಿಜ್ಞೆಯನ್ನು ಪೂರೈಸು.

ಯತ್ನೇನ ಹಿ ತ್ವಯಾ ಪಾರ್ಥ ಯೋದ್ಧವ್ಯೋ ಧೃತರಾಷ್ಟ್ರಜಃ ।
ಕೃತೀ ಚ ಯುದ್ಧಶೌಂಡಶ್ಚ ಬಲವಾಂಶ್ಚೈವ ಪಾರ್ಥಿವಃ ॥೨೮॥

ಭೀಮಸೇನನೇ! ನೀನಾದರೂ ಬಹಳ ಪ್ರಯತ್ನಪಟ್ಟು ದುರ್ಯೋಧನನ ಜೊತೆಗೆ ಯುದ್ಧ ಮಾಡಬೇಕು. ಏಕೆಂದರೆ ರಾಜ ದುರ್ಯೋಧನನು ತುಂಬಾ ಅಭ್ಯಾಸ ಮಾಡಿರುತ್ತಾನೆ. ಯುದ್ಧದಲ್ಲಿ ನಿಪುಣನಾಗಿದ್ದಾನೆ ಹಾಗೂ ಬಲಶಾಲಿಯಾಗಿದ್ದಾನೆ.

ಸಂಜಯಃ

ತತಸ್ತು ಸಾತ್ಯಕೀ ರಾಜನ್ ಪೂಜಯಾಮಾಸ ಪಾಂಡವಮ್ ।
ವಿವಿಧಾಭರಣಸ್ರಗ್ಭಿರ್ಭೀಮಸೇನಂ ಜನೇಶ್ವರ ॥೨೯॥

ಸಂಜಯ– ರಾಜನೇ! ಅನಂತರ ಸಾತ್ಯಕಿಯು ವಿವಿಧ ಆಭರಣ ಹಾಗೂ ಹಾರಗಳಿಂದ ಭೀಮಸೇನನನ್ನು ಪೂಜಿಸಿ ಗೌರವಿಸುತ್ತಾನೆ.

ಪಾಂಚಾಲಾಃ ಪಾಂಡವೇಯಾಶ್ಚ ಧರ್ಮರಾಜಪುರೋಗಮಾಃ ।
ತದ್ವಚೋ ಭೀಮಸೇನಸ್ಯ ಸರ್ವ ಏವಾಭ್ಯಪೂಜಯನ್ ॥೩೦॥

ಭೀಮಸೇನನ ಮಾತನ್ನು ಪಾಂಚಾಲರು, ಧರ್ಮರಾಜ ಮೊದಲಾದ ಪಾಂಡವರು ಎಲ್ಲರೂ ಒಪ್ಪಿಕೊಂಡು ಅನುಮೋದಿಸುತ್ತಾರೆ.

ತತೋ ಭೀಮಬಲೋ ಭೀಮೋ ಯುಧಿಷ್ಠಿರಮಥಾಬ್ರವೀತ್ ।
ಸೃಂಜಯೈಃ ಸಹ ತಿಷ್ಠಂತಂ ತಪಂತಮಿವ ಭಾಸ್ಕರಮ್ ॥೩೧॥

ಸೂರ್ಯನಂತೆ ಪ್ರಕಾಶಿಸುತ್ತಾ, ಸೃಂಜಯರೊಡನೆ ನಿಂತಿದ್ದ ಯುಧಿಷ್ಠಿರನಿಗೆ ಭಯಂಕರವಾದ ಬಲವುಳ್ಳ ಭೀಮನು ಹೀಗೆ ಹೇಳುತ್ತಾನೆ.

ಭೀಮಃ

ಅಹಮೇತೇನ ಸಂಗಮ್ಯ ಸಂಯುಗೇ ಯೋದ್ಧುಮುತ್ಸಹೇ ।
ನ ಹಿ ಶಕ್ತೋ ರಣೇ ಜೇತುಂ ಮಾಮೇಷ ಪುರುಷಾಧಮಃ ।
ಸುಯೋಧನೇ ಧಾರ್ತರಾಷ್ಟ್ರೇ ಖಾಂಡವೇऽಗ್ನಿಮಿವಾರ್ಜುನಃ ॥೩೨॥

ಭೀಮ– ಯುದ್ಧದಲ್ಲಿ ನಾನು ಈ ದುರ್ಯೋಧನನನ್ನು ಎದುರಿಸಿ ಯುದ್ಧ ಮಾಡಲು ಉದ್ಯುಕ್ತನಾಗಿದ್ದೇನೆ. ಈ ಪುರುಷಾಧಮನು ಯುದ್ಧದಲ್ಲಿ ನನ್ನನ್ನು ಗೆಲ್ಲಲು ಖಂಡಿತವಾಗಿ ಸಮರ್ಥನಾಗುವುದಿಲ್ಲ.

ಅದ್ಯ ಕ್ರೋಧಂ ವಿಮೋಕ್ಷ್ಯಾಮಿ ನಿಹಿತಂ ಹೃಚ್ಛಯಂ ಭೃಶಮ್ ॥೩೩॥

ನನ್ನ ಹೃದಯದೊಳಗೆ ಸುಪ್ತಗೊಳಿಸಿ ಇಟ್ಟುಕೊಂಡಿದ್ದ ಬಹಳವಾದ ಕೋಪವನ್ನು, ಖಾಂಡವವನಕ್ಕೆ ಅರ್ಜುನನು ಬೆಂಕಿಯನ್ನಿಟ್ಟಂತೆ ಇವತ್ತು ಧೃತರಾಷ್ಟ್ರಪುತ್ರ ದುರ್ಯೋಧನನ ಮೇಲೆ ಹಾಕುತ್ತೇನೆ.

ಶಲ್ಯಮದ್ಯೋದ್ಧರಿಷ್ಯಾಮಿ ತವ ಪಾಂಡವ ಹೃದ್ಗತಮ್ ॥೩೪॥

ನಿಹತ್ಯ ಗದಯಾ ಪಾಪಮದ್ಯ ರಾಜನ್ ಸುಖೀ ಭವ ॥೩೫॥

ರಾಜ ಧರ್ಮರಾಜನೇ! ಇಂದು ಈ ಪಾಪಿ ದುರ್ಯೋಧನನನ್ನು ಗದೆಯಿಂದ ಕೊಂದು, ನಿನ್ನ ಹೃದಯಕ್ಕೆ ಅಂಟಿಕೊಂಡಿದ್ದ ಮುಳ್ಳನ್ನು ಕಿತ್ತು ಹಾಕುತ್ತೇನೆ. ನೀನು ಸುಖಿಯಾಗಿರು.

ಅದ್ಯ ಕೀರ್ತಿಮಯೀಂ ಮಾಲಾಂ ಪ್ರತಿಮೋಕ್ಷ್ಯೇ ತವಾನಘ ।
ಪ್ರಾಣಾನ್ ಶ್ರಿಯಂ ಚ ರಾಜ್ಯಂ ಚ ಮೋಕ್ಷ್ಯತೇऽದ್ಯ ಸುಯೋಧನಃ ॥

ಪಾಪದೂರನೇ! ಇವತ್ತು ಕೀರ್ತಿಯ ಮಾಲೆಯನ್ನು ನಿನಗೆ ತೊಡಿಸುತ್ತೇನೆ. ಇವತ್ತು ದುರ್ಯೋಧನನು ಪ್ರಾಣವನ್ನು, ಸಂಪತ್ತನ್ನು, ರಾಜ್ಯವನ್ನು ಕಳೆದುಕೊಳ್ಳುತ್ತಾನೆ.

ರಾಜಾ ತು ಧೃತರಾಷ್ಟ್ರೋऽಥ ಶ್ರುತ್ವಾ ಪುತ್ರಂ ನಿಪಾತಿತಮ್ ।
ಸ್ಮರಿಷ್ಯತ್ಯಶುಭಂ ಕರ್ಮ ಯತ್ತಚ್ಛಕುನಿಬುದ್ಧಿಜಮ್ ॥೩೭॥

ತನ್ನ ಮಗ ಸತ್ತುಬಿದ್ದ ವಿಷಯವನ್ನು ಕೇಳಿ ರಾಜ ಧೃತರಾಷ್ಟ್ರನು, ಶಕುನಿಯ ದುರ್ಬುದ್ಧಿಯಿಂದ ಉಂಟಾದ ಕೆಟ್ಟ ಕರ್ಮಗಳನ್ನು ಸ್ಮರಿಸಿಕೊಳ್ಳುವನು.

ಸಂಜಯಃ

ಇತ್ಯುಕ್ತ್ವಾ ಭರತಶ್ರೇಷ್ಠೋ ಗದಾಮುದ್ಯಮ್ಯ ಭಾರತ ।
ಅವಾತಿಷ್ಠತ ಯುದ್ಧಾಯ ಶಕ್ರೋ ವೃತ್ರಮಿವಾಹ್ವಯನ್ ॥೩೮॥

ಸಂಜಯ– ಭರತಕುಲೋದ್ಭವನೇ! ಭೀಮಸೇನನು ಹೀಗೆ ಹೇಳಿ ಗದೆಯನ್ನು ಎತ್ತಿಕೊಂಡು, ಇಂದ್ರನು ವೃತ್ರಾಸುರನನ್ನು ಯುದ್ಧಕ್ಕೆ ಆಹ್ವಾನಿಸಿದಂತೆ ಯುದ್ಧಕ್ಕೆ ನಿಂತನು.

ತದಾಹ್ವಾನಮಮೃಷ್ಯನ್ ವೈ ತವ ಪುತ್ರೋಽತಿವೀರ್ಯವಾನ್ ।
ಪ್ರತ್ಯುಪಸ್ಥಿತ ಏವಾಶು ಮತ್ತೋ ಮತ್ತಮಿವ ದ್ವಿಪಮ್ ॥೩೯॥

ಆಗ ಬಹಳ ವೀರ್ಯವಂತನಾದ ನಿನ್ನ ಮಗ ದುರ್ಯೋಧನನು ಭೀಮಸೇನನ ಯುದ್ಧಾಹ್ವಾನವನ್ನು ಸಹಿಸಿಕೊಳ್ಳಲಾಗದೆ ಕೂಡಲೇ ಎದುರಿಗೆ ಬಂದು ನಿಂತನು. ಮದವೇರಿದ ಒಂದು ಆನೆಯನ್ನು ಇನ್ನೊಂದು ಮದ್ದಾನೆಯು ಎದುರಿಸಿದಂತೆ ಇತ್ತು.

ಗದಾಹಸ್ತಂ ತವ ಸುತಂ ಯುದ್ಧಾಯ ಸಮುಪಸ್ಥಿತಮ್ ।
ದದೃಶುಃ ಪಾಂಡವಾಃ ಸರ್ವೇ ಕೈಲಾಸಮಿವ ಶೃಂಗಿಣಮ್ ॥೪೦॥

ಗದೆಯನ್ನು ಕೈಯಲ್ಲಿ ಹಿಡಿದುಕೊಂಡು ಯುದ್ಧಕ್ಕೆ ಬಂದು ನಿಂತಿರುವ ನಿನ್ನ ಮಗನನ್ನು ಪಾಂಡವರು ಶಿಖರಸಹಿತವಾದ ಕೈಲಾಸಪರ್ವತದಂತೆ ಕಂಡರು.

ತಮೇಕಾಕಿನಮಾಸಾದ್ಯ ಧಾರ್ತರಾಷ್ಟ್ರಂ ಮಹಾಬಲಮ್ ।
ನಿರ್ಯೂಥಮಿವ ಮಾತಂಗಂ ಸಮಹೃಷ್ಯಂತ ಪಾಂಡವಾಃ ॥೪೧॥

ತನ್ನ ಗುಂಪನ್ನು ಕಳೆದುಕೊಂಡು ಒಬ್ಬಂಟಿಯಾಗಿ ನಿಂತ ಆನೆಯಂತೆ ಏಕಾಕಿಯಾಗಿ ಯುದ್ಧಕ್ಕೆ ತಯಾರಾಗಿ ಬಂದಿರುವ, ಮಹಾಬಲಶಾಲಿಯಾದ ನಿನ್ನ ಮಗ ದುರ್ಯೋಧನನನ್ನು ಕಂಡು ಪಾಂಡವರು ತುಂಬಾ ಸಂತೋಷಪಟ್ಟರು.

ತಮುದ್ಯತಗದಂ ದೃಷ್ಟ್ವಾ ಕೈಲಾಸಮಿವ ಶೃಂಗಿಣಮ್ ।
ಭೀಮಸೇನಸ್ತದಾ ರಾಜನ್ ದುರ್ಯೋಧನಮಥಾಬ್ರವೀತ್ ॥೪೨॥

ರಾಜನೇ! ಶಿಖರಸಹಿತವಾದ ಕೈಲಾಸಪರ್ವತದಂತೆ ಗದೆಯನ್ನೆತ್ತಿ ನಿಂತಿರುವ ದುರ್ಯೋಧನನಿಗೆ ಭೀಮಸೇನನು ಹೀಗೆ ಹೇಳುತ್ತಾನೆ.

ಭೀಮಃ

ರಾಜ್ಞಾ ಚ ಧೃತರಾಷ್ಟ್ರೇಣ ತ್ವಯಾ ಚಾಸ್ಮಾಸು ಯತ್ ಕೃತಮ್ ।
ಸ್ಮರ ತದ್ ದುಷ್ಕೃತಂ ಕರ್ಮ ಯದ್ ವೃತ್ತಂ ವಾರಣಾವತೇ ॥೪೩॥

ಭೀಮ– ರಾಜನಾದ ಧೃತರಾಷ್ಟ್ರ ಮತ್ತು ನೀನು ನಮ್ಮ ಮೇಲೆ ಏನೆಲ್ಲಾ ಕೆಟ್ಟಕೆಲಸಗಳನ್ನು ಮಾಡಿದ್ದೀರೋ, ವಾರಣಾವತದಲ್ಲಿ ಏನೆಲ್ಲಾ ನಡೆಯಿತೋ ಅದೆಲ್ಲವನ್ನೂ ಸ್ಮರಿಸಿಕೊಳ್ಳು.

ದ್ರೌಪದೀ ಸುಪರಿಕ್ಲಿಷ್ಟಾ ಸಭಾಮಧ್ಯೇ ರಜಸ್ವಲಾ ।
ದ್ಯೂತೇ ಚ ವಂಚಿತೋ ರಾಜಾ ಶಕುನೇರ್ಬುದ್ಧಿಲಾಘವಾತ್ ॥೪೪॥

ರಜಸ್ವಲೆಯಾದ ದ್ರೌಪದಿಯು ಸಭೆಯ ಮಧ್ಯದಲ್ಲಿ ಬಹಳ ದುಃಖಕ್ಕೆ ಒಳಗಾದಳು. ಶಕುನಿಯ ಕಪಟಬುದ್ಧಿಯ ಬಲದಿಂದ ನಮ್ಮ ರಾಜನಾದ ಧರ್ಮರಾಜನನ್ನು ದ್ಯೂತದಲ್ಲಿ ಮೋಸಗೊಳಿಸಿದಿರಿ.

ಯಾನಿ ಚಾನ್ಯಾನಿ ದುಷ್ಟಾತ್ಮನ್ ಪಾಪಾನಿ ಕೃತವಾನಸಿ ।
ಅನಾಗತಸ್ಸು ಪಾರ್ಥೇಷು ತಸ್ಯ ಪಶ್ಯ ಮಹತ್ ಫಲಮ್ ॥೪೫॥

ದುಷ್ಟಸ್ವಭಾವದವನೇ! ತಪ್ಪೇ ಮಾಡದ ಪಾಂಡವರ ವಿಷಯದಲ್ಲಿ ಬೇರೆ ಏನೆಲ್ಲಾ ಕೆಟ್ಟಕಾರ್ಯಗಳನ್ನು ಮಾಡಿದ್ದೀಯೋ ಅದರದ್ದೆಲ್ಲಾ ಮಹತ್ತಾದ ಫಲವನ್ನು ನೋಡು.

ತತ್ಪತೇ ನಿಹತಃ ಶೇತೇ ಶರತಲ್ಪೇ ಮಹಾಯಶಾಃ ।
ಗಾಂಗೇಯೋ ಭರತಶ್ರೇಷ್ಠಃ ಸರ್ವೇಷಾಂ ನಃ ಪಿತಾಮಹಃ ॥೪೬॥

ಭರತಕುಲದಲ್ಲಿಯೇ ಶ್ರೇಷ್ಠನಾದ, ನಮ್ಮೆಲ್ಲರ ತಾತನಾದ, ಮಹಾಯಶೋವಂತ ಗಂಗಾಪುತ್ರ ಭೀಷ್ಮನು ನಿನಗಾಗಿ ಯುದ್ಧದಲ್ಲಿ ಪೆಟ್ಟು ತಿಂದು ಈಗ ಶರಮಂಚದಲ್ಲಿ ಮಲಗಿದ್ದಾನೆ.

ಹತೋ ದ್ರೋಣಶ್ಚ ಕರ್ಣಶ್ಚ ಹತಃ ಶಲ್ಯಶ್ಚ ವೀರ್ಯವಾನ್ ।
ವೈರಾಗ್ನೇರಾದಿಕರ್ತಾ ಚ ಶಕುನಿರ್ವಿನಿಪಾತಿತಃ ॥೪೭॥

ಭ್ರಾತರಸ್ತೇ ಹತಾಃ ಶೂರಾ ಪುತ್ರಾಶ್ಚ ಸಹಸೈನಿಕಾಃ ।
ರಾಜಾನಶ್ಚ ಹತಾಃ ಶೂರಾಃ ಸಮರೇಷ್ವನಿವರ್ತಿನಃ ॥೪೮॥

ದ್ರೋಣನು ಸತ್ತ. ಕರ್ಣನು ಸತ್ತ. ವೀರ್ಯವಂತನಾದ ಶಲ್ಯನು ಸತ್ತ. ವೈರಾಗ್ನಿ ಹುಟ್ಟಲು ಮೂಲಕಾರಣನಾದ ಶಕುನಿಯು ಸತ್ತುಬಿದ್ದಿದ್ದಾನೆ. ಶೂರರಾದ ನಿನ್ನ ತಮ್ಮಂದಿರು, ನಿನ್ನ ಮಕ್ಕಳು, ಸೈನಿಕರು, ಶೂರರಾದ ರಾಜರು ಇವರೆಲ್ಲಾ ಸತ್ತಿದ್ದಾರೆ. ಇವರೆಲ್ಲ ಯಾವತ್ತೂ ಯುದ್ಧಕ್ಕೆ ಬೆನ್ನು ಹಾಕಿದವರಲ್ಲ.

ಏತೇ ಚಾನ್ಯೇ ಚ ಬಹವೋ ನಿಹತಾಃ ಕ್ಷತ್ರಿಯರ್ಷಭಾಃ ॥೪೯॥

ಇವರು ಮತ್ತು ಇನ್ನೂ ಅನೇಕ ಉತ್ತಮ ಕ್ಷತ್ರಿಯರು ಯುದ್ಧದಲ್ಲಿ ಸತ್ತಿದ್ದಾರೆ.

ಪ್ರಾತಿಕಾಮೀ ತಥಾ ಪಾಪೋ ದ್ರೌಪದ್ಯಾಃ ಕ್ಲೇಶಕೃದ್ಧತಃ ।
ಅವಶಿಷ್ಟಸ್ತ್ವಮೇವೈಕಃ ಕುಲಘ್ನೋಽಧಮಪೂರುಷಃ ॥೫೦॥

ದ್ರೌಪದಿಗೆ ದುಃಖವನ್ನುಂಟುಮಾಡಿದ ನಿನ್ನ ಸಾರಥಿಯಾದ ಪ್ರಾತಿಕಾಮಿಯೂ ವಧಿಸಲ್ಪಟ್ಟಿದ್ದಾನೆ. ಕುಲವನ್ನೇ ನಾಶಮಾಡಿದ ಕೆಟ್ಟಪುರುಷನಾದ ನೀನೊಬ್ಬನೇ ಉಳಿದುಕೊಂಡಿರುವಿ.

ತ್ವಾಮಪ್ಯದ್ಯ ಹನಿಷ್ಯಾಮಿ ಗದಯಾ ನಾತ್ರ ಸಂಶಯಃ ।
ಅದ್ಯ ತೇಽಹಂ ರಣೇ ದರ್ಪಂ ಸರ್ವಂ ನಾಶಯಿತಾ ನೃಪ ॥೫೧॥

ರಾಜ್ಯಾಶಾಂ ವಿಪುಲಾಂ ಚಾಪಿ ಪಾಂಡವೇಷು ಚ ದುಷ್ಕೃತಮ್ ॥೫೨॥

ನಿನ್ನನ್ನೂ ಕೂಡ ಗದೆಯಿಂದ ಇಂದು ಕೊಲ್ಲುತ್ತೇನೆ. ಇದರಲ್ಲಿ ಸಂಶಯವಿಲ್ಲ. ರಾಜನೇ! ಇವತ್ತು ಯುದ್ಧದಲ್ಲಿ ನಿನ್ನ ಎಲ್ಲಾತರಹದ ದರ್ಪ-ಅಹಂಕಾರವನ್ನು ನಾನು ನಾಶಪಡಿಸುವೆನು. ಜೊತೆಗೆ ನಿನ್ನಲ್ಲಿ ತುಂಬಿರುವ ರಾಜ್ಯದ ಮೇಲಿನ ಅಭಿಲಾಷೆಯನ್ನೂ, ಪಾಂಡವರ ವಿಷಯದಲ್ಲಿ ಮಾಡಿದ ಅನಾಚಾರವನ್ನೂ ಕೊನೆಗೊಳಿಸುವೆನು.

ದುರ್ಯೋಧನಃ

ಕಿಂ ಕತ್ಥನೇನ ಬಹುಧಾ ಯುಧ್ಯಸ್ವಾದ್ಯ ಮಯಾ ಸಹ ।
ಅದ್ಯ ತೇಽಹಂ ವಿನೇಷ್ಯಾಮಿ ಯುದ್ಧಶ್ರದ್ಧಾಂ ವೃಕೋದರ ॥೫೩॥

ದುರ್ಯೋಧನ– ಹೇ ವೃಕೋದರ! ಬಹಳವಾಗಿ ಜಂಭಕೊಚ್ಚಿ ಮಾತನಾಡಿದರೆ ಏನು ಫಲ? ಇವತ್ತು ನನ್ನ ಜೊತೆಗೆ ಯುದ್ಧ ಮಾಡು. ನಿನ್ನಲ್ಲಿರುವ ಯುದ್ಧದ ಶ್ರದ್ಧೆಯನ್ನೆ ಇವತ್ತು ನಾನು ನಾಶ ಮಾಡುತ್ತೇನೆ.

ಕಿಂ ನ ಪಶ್ಯಸಿ ಮಾಂ ಪಾರ್ಥ ಗದಾಪಾಣಿಮವಸ್ಥಿತಮ್ ।
ಹಿಮವಚ್ಛಿಖರಾಕಾರಾಂ ಪ್ರಗೃಹ್ಯ ಮಹತೀಂ ಗದಾಮ್ ॥೫೪॥

ಹೇ ಪಾರ್ಥ! ಹಿಮಾಲಯದ ಶಿಖರದಂತಿರುವ ದೊಡ್ಡದಾದ ಗದೆಯನ್ನು ಕೈಯಲ್ಲಿ ಹಿಡಿದಿರುವ ನನ್ನನ್ನು ನೀನು ನೋಡುತ್ತಿಲ್ಲವೇನು?

ಗದಿನಂ ಕೋऽದ್ಯ ಮಾಂ ಪಾರ್ಥ ಜೇತುಮುತ್ಸಹತೇ ರಿಪುಃ ।
ನ್ಯಾಯತೋ ಯುಧ್ಯಮಾನಶ್ಚ ದೇವೇಷ್ವಪಿ ಪುರಂದರಃ ॥೫೫॥

ಗದೆಯನ್ನು ಹಿಡಿದುಕೊಂಡು ಯುದ್ಧಕ್ಕೆ ನಿಂತಿರುವ ನನ್ನನ್ನು ಗೆಲ್ಲಲು ಯಾವ ಶತ್ರುವು ಉತ್ಸಾಹವನ್ನು ತೋರಿಯಾನು? ನ್ಯಾಯದಿಂದ ಯುದ್ಧಮಾಡುವ ದೇವೇಂದ್ರನೂ ನನ್ನ ವಿಷಯದಲ್ಲಿ ಉತ್ಸಾಹವನ್ನು ತೋರುವುದಿಲ್ಲ.

ಮಾ ವೃಥಾ ಗರ್ಜ ಕೌಂತೇಯ ಶಾರದಾಭ್ರ ಇವಾಜಲಃ ।
ದರ್ಶಯಸ್ವ ಬಲಂ ಯುದ್ಧೇ ಯಾವನ್ನಾಸೂನ್ ನಿಹನ್ಮಿ ತೇ ॥೫೬॥

ಶರತ್ಕಾಲದ ನೀರಿಲ್ಲದ ಮೋಡದಂತೆ ವ್ಯರ್ಥವಾಗಿ ಗರ್ಜನೆ ಮಾಡಬೇಡ. ಯುದ್ಧದಲ್ಲಿ ನಿನ್ನ ಬಲವನ್ನು ಪ್ರದರ್ಶಿಸು. ನಿನ್ನ ಪ್ರಾಣವನ್ನೇ ನಾಶಪಡಿಸುವೆನು.

ಸಂಜಯಃ

ತಸ್ಯ ತದ್ವಚನಂ ಶ್ರುತ್ವಾ ಪಾಂಚಾಲಾಃ ಸಹಸೃಂಜಯಾಃ ।
ಸರ್ವೇ ಸಂಪೂಜಯಾಮಾಸುಃ ತದ್ವಚೋ ವಿಜಿಗೀಷವಃ ॥೫೭॥

ಸಂಜಯ– ದುರ್ಯೋಧನನ ಆ ಮಾತನ್ನು ಕೇಳಿ ಪಾಂಚಾಲರು, ಸೃಂಜಯರು ಇವರೆಲ್ಲರೂ ಯುದ್ಧವನ್ನು ಗೆಲ್ಲುವ ಇಚ್ಛೆಯಿಂದ ಅನುಮೋದಿಸಿದರು.

ತಂ ಮತ್ತಮಿವ ಮಾತಂಗಂ ತಳಶಬ್ದೇನ ಪಾರ್ಥಿವಾಃ ।
ಭೂಯಃ ಸಂಹರ್ಷಯಾಮಾಸುಃ ರಾಜನ್ ದುರ್ಯೋಧನಂ ದ್ವಿಷಃ ॥

ರಾಜನೇ! ಮದವೇರಿದ ಮದ್ದಾನೆಯನ್ನು ಕರತಾಡನದಿಂದ ಹುರಿದುಂಬಿಸುವಂತೆ ಪಾಂಡವಶತ್ರುಗಳಾದ ಕ್ಷತ್ರಿಯ ರಾಜರೆಲ್ಲರು ಕರತಾಡನದಿಂದ ದುರ್ಯೋಧನನನ್ನು ಹುರಿದುಂಬಿಸಿದರು.

ಬೃಹಂತಿ ಕುಂಜರಾ ರಾಜನ್ ಹಯಾ ಹೇ(ಹ್ರೇ)ಷಂತಿ ಚಾಸಕೃತ್ ।
ಶಸ್ತ್ರಾಣಿ ಸಂಪ್ರದೀಪ್ಯಂತೇ ಪಾಂಡವಾನಾಂ ಯಶಸ್ವಿನಾಮ್ ॥೫೯॥

ಆನೆಗಳು ಅನೇಕ ರೀತಿಯಲ್ಲಿ ಘೀಳಿಡುತ್ತಿದ್ದವು. ಕುದುರೆಗಳು ಹೇಷಾರವವನ್ನು ಮಾಡುತ್ತಿದ್ದವು. ಕೀರ್ತಿವಂತರಾದ ಪಾಂಡವರ ಶಸ್ತ್ರಗಳು ಚೆನ್ನಾಗಿ ಶೋಭಿಸುತ್ತಿದ್ದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐದನೆಯ ಅಧ್ಯಾಯ

ಬಲರಾಮನ ಆಗಮನ. ಅವನಿಗೆ ಸ್ವಾಗತ-ಉಪಚಾರ.
ಭೀಮ ಮತ್ತು ದುರ್ಯೋಧನರ ಯುದ್ಧ ಪ್ರಾರಂಭ.

ಸಂಜಯಃ

ತಸ್ಮಿನ್ ಯುದ್ಧೇ ಮಹಾರಾಜ ಸಂಪ್ರವೃತ್ತೇ ಭಯಾನಕೇ ।
ಉಪಾವಿಷ್ಟೇಷು ಸರ್ವೇಷು ಪಾಂಡವೇಷು ಮಹಾತ್ಮಸು ॥೧॥

ತತಸ್ತಾಳಧ್ವಜೋ ರಾಮಸ್ತಯೋರ್ಯುದ್ಧ ಉಪಸ್ಥಿತೇ ।
ಶ್ರುತ್ವಾ ತಚ್ಛಿಷ್ಯಯೋರ್ಯುದ್ಧಮಾಜಗಾಮ ಮಹಾಬಲಃ ॥೨॥

ಸಂಜಯ– ಮಹಾರಾಜನೇ! ಆ ಯುದ್ಧವು ಭಯಾನಕವಾಗಿ ನಡೆಯುತ್ತಿದೆ. ಮಹಾತ್ಮರಾದ ಎಲ್ಲಾ ಪಾಂಡವರು ಕುಳಿತುಕೊಂಡಿದ್ದಾರೆ. ಭೀಮ-ದುರ್ಯೋಧನರಲ್ಲಿ ಯುದ್ಧವು ಪ್ರಾರಂಭವಾಗುತ್ತಿತ್ತು. ಆಗ ತನ್ನ ಶಿಷ್ಯರ ಯುದ್ಧವನ್ನು ಕೇಳಿ ತಿಳಿದ, ತಾಳೆಯ ಮರದ ಚಿಹ್ನೆಯುಳ್ಳ ಧ್ವಜವನ್ನು ಹೊಂದಿರುವ ಬಲರಾಮನು ಆ ಯುದ್ಧವನ್ನು ನೋಡಲು ಬಂದನು.

ತಂ ದೃಷ್ಟ್ವಾ ಪರಮಪ್ರೀತಾಃ ಪೂಜಯಿತ್ವಾ ಮಹಾಬಲಾಃ ।
ಶಿಷ್ಯಯೋಃ ಕೌಶಲಂ ಯುದ್ಧೇ ಪಶ್ಯ ರಾಮೇತಿ ಚಾಬ್ರುವನ್ ॥೩॥

ಅವನನ್ನು ನೋಡಿದ ಮಹಾಬಲಶಾಲಿಗಳಾದ ಪಾಂಡವರು ಬಲರಾಮನನ್ನು ಪೂಜಿಸಿದರು. 'ನಿನ್ನ ಶಿಷ್ಯರ ಯುದ್ಧಕೌಶಲವನ್ನು ನೋಡು' ಎಂದು ಹೇಳಿದರು.

ಅಬ್ರವೀಚ್ಚ ತದಾ ರಾಮೋ ದೃಷ್ಟ್ವಾ ಕೃಷ್ಣಂ ಚ ಪಾಂಡವಮ್ ।
ದುರ್ಯೋಧನಂ ಚ ಕೌರವ್ಯಂ ಗದಾಪಾಣಿಮವಸ್ಥಿತಮ್ ॥೪॥

ಆಗ ಕೃಷ್ಣನನ್ನು, ಪಾಂಡವ ಭೀಮನನ್ನು, ಗದಾಪಾಣಿಯಾದ ಕೌರವ ದುರ್ಯೋಧನನನ್ನೂ ನೋಡಿ ಬಲರಾಮನು ಹೀಗೆ ಹೇಳುತ್ತಾನೆ.

ಬಲರಾಮಃ

ಚತ್ವಾರಿಂಶದ್ ದಿನಾನ್ಯದ್ಯ ದ್ವೇ ಚಾನ್ಯೇ ನಿಃಸೃತಸ್ಯ ಮೇ ।
ಪುಷ್ಯೇಣ ಸಂಪ್ರಯಾತೋಽಸ್ಮಿ ಶ್ರವಣೇ ಪುನರಾಗತಃ ॥೫॥

ಬಲರಾಮ– ನಾನು ಹೊರಟು ನಲವತ್ತೆರಡು ದಿನಗಳು ಕಳೆದವು. ಪುಷ್ಯನಕ್ಷತ್ರದ ದಿನ ಹೊರಟ ನಾನು ಶ್ರವಣನಕ್ಷತ್ರದ ದಿನ ಮತ್ತೆ ಹಿಂತಿರುಗಿ ಬಂದಿದ್ದೇನೆ.

ಶಿಷ್ಯಯೋರ್ವೈ ಗದಾಯುದ್ಧಂ ದ್ರಷ್ಟುಕಾಮೋಽಸ್ಮಿ ಮಾಧವ ॥೬॥

ಮಾಧವನೇ! ನನ್ನ ಇಬ್ಬರು ಶಿಷ್ಯರ ಗದಾಯುದ್ಧವನ್ನು ನೋಡಲು ಬಯಸಿರುವೆನು.

ಸಂಜಯಃ

ತತಸ್ತದಾ ಗದಾಹಸ್ತೌ ದುರ್ಯೋಧನವೃಕೋದರೌ ।
ಯುದ್ಧಭೂಮಿಗತಾ ವೀರಾವುಭಾವೇವ ವಿರೇಜತುಃ ॥೭॥

ಸಂಜಯ– ಆಗ ಗದಾಧಾರಿಗಳಾದ ದುರ್ಯೋಧನ ಮತ್ತು ಭೀಮಸೇನ ಇವರಿಬ್ಬರೂ ಯುದ್ಧಭೂಮಿಗೆ ಬಂದು ಇವರಿಬ್ಬರೇ ಅಲ್ಲಿ ಪ್ರಕಾಶಿಸುತ್ತಿದ್ದರು.

ತತೋ ಯುಧಿಷ್ಠಿರೋ ರಾಜಾ ಪರಿಷ್ವಜ್ಯ ಹಲಾಯುಧಮ್ ।
ಸ್ವಾಗತಂ ಕುಶಲಂ ಚಾಸ್ಮೈ ಪರ್ಯಪೃಚ್ಛದ್ಯಥಾತಥಮ್ ॥೮॥

ಅನಂತರ ರಾಜನಾದ ಯುಧಿಷ್ಠಿರನು ಬಲರಾಮನನ್ನು ಆಲಿಂಗಿಸಿಕೊಂಡು ವಿಧ್ಯುಕ್ತರೀತಿಯಲ್ಲಿ ಸ್ವಾಗತ ಮತ್ತು ಕುಶಲಪ್ರಶ್ನೆಯನ್ನು ಮಾಡಿದನು.

ಕೃಷ್ಣೌ ಚಾಪಿ ಮಹೇಷ್ವಾಸಾವಭಿವಾದ್ಯ ಹಲಾಯುಧಮ್ ।
ಸಸ್ವಜಾತೇ ಪರಂ ಪ್ರೀತ್ಯಾ ಪ್ರೀಯಮಾಣೌ ಯಶಸ್ವಿನೌ ॥೯॥

ಮಹಾಬಿಲ್ಲಾರರಾದ ಕೃಷ್ಣಮತ್ತು ಅರ್ಜುನರು ಕೂಡ ಬಲರಾಮನನ್ನು ನಮಸ್ಕರಿಸಿ, ಪ್ರೀತಿಯಿಂದ ಆನಂದವನ್ನು ಅನುಭವಿಸುತ್ತಾ ಬಲರಾಮನನ್ನು ಆಲಿಂಗಿಸಿಕೊಂಡರು.

ಮಾದ್ರೀಪುತ್ರೌ ತಥಾ ಶೂರೌ ದ್ರೌಪದ್ಯಾಃ ಪಂಚ ಚಾತ್ಮಜಾಃ ।
ಅಭಿವಾದ್ಯ ಸ್ಥಿತಾ ರಾಜನ್ ರೌಹಿಣೇಯಂ ಮಹಾಬಲಮ್ ॥೧೦॥

ಮಾದ್ರಿಯ ಮಕ್ಕಳಾದ ನಕುಲ-ಸಹದೇವರು, ಮತ್ತು ದ್ರೌಪದಿಯ ಐದು ಮಕ್ಕಳು ಕೂಡ ಮಹಾಬಲಶಾಲಿಯಾದ ಬಲರಾಮನಿಗೆ ನಮಸ್ಕರಿಸಿ ನಿಂತುಕೊಂಡರು.

ಭೀಮಸೇನೋಽಪಿ ಬಲವಾನ್ ಪುತ್ರಶ್ಚ ತವ ಭಾರತ ।
ತೌ ತಥೈವೋದ್ಯತಗದೌ ಪೂಜಯೇತಾಂ ಹಲಾಯುಧಮ್ ॥೧೧॥

ಭೀಮಸೇನ ಮತ್ತು ನಿನ್ನ ಮಗ ಬಲಶಾಲಿಯಾದ ದುರ್ಯೋಧನನು ಗದೆಯನ್ನು ಕೈಯಲ್ಲಿ ಹಿಡಿದುಕೊಂಡು ಹಲಾಯುಧನಾದ ಬಲರಾಮನನ್ನು ಪೂಜಿಸಿದರು.

ಸ್ವಾಗತೇನ ಚ ತೇ ತತ್ರ ಪ್ರತಿಪೂಜ್ಯ ಪುನಃ ಪುನಃ ।
ಪಶ್ಯ ಯುದ್ಧಂ ಮಹಾಬಾಹ್ವೋರಿತಿ ತೇ ರಾಮಮಬ್ರುವನ್ ॥೧೨॥

ಏವಮೂಚುರ್ಮಹಾತ್ಮಾನಂ ರೌಹಿಣೇಯಂ ನರಾಧಿಪ ॥೧೩॥

ಅಲ್ಲಿ ನೆರೆದಿದ್ದ ಪಾಂಡವರು ಮತ್ತೆ ಮತ್ತೆ ಬಲರಾಮನಿಗೆ ಸ್ವಾಗತವನ್ನು ಹೇಳಿ, ''ನರಾಧಿಪನೇ! ಈ ಮಹಾಬಾಹುಗಳ ಯುದ್ಧವನ್ನು ನೋಡು'' ಎಂದು ಹೇಳಿದರು.

ಪರಿಷ್ವಜ್ಯ ತದಾ ರಾಮಃ ಪಾಂಡವಾನ್ ಸೃಂಜಯಾನಪಿ ।
ಅಪೃಚ್ಛತ್ ಕುಶಲಂ ಸರ್ವಾನ್ ಪಾಂಡವಾಂಶ್ಚಾಮಿತೌಜಸಃ ॥೧೪॥

ಆಗ ಬಲರಾಮನು ಪಾಂಡವರನ್ನು, ಸೃಂಜಯರನ್ನು ಪ್ರೀತಿಯಿಂದ ಆಲಿಂಗಿಸಿಕೊಂಡನು. ಅಪಾರವಾದ ಓಜಸ್ಸು ಉಳ್ಳ ಪಾಂಡವರನ್ನು ಕುಶಲದ ಬಗ್ಗೆ ವಿಚಾರಿಸಿದನು.

ತಥೈವ ತೇ ಸಮಾಸಾದ್ಯ ಪಪ್ರಚ್ಛುಸ್ತಮನಾಮಯಮ್ ॥೧೫॥

ಅದೇ ರೀತಿಯಲ್ಲಿ ಅವರೂ ಕೂಡ ಬಲರಾಮನ ಆರೋಗ್ಯದ ಬಗ್ಗೆ ವಿಚಾರಿಸಿದರು.

ತಾನ್ ಪ್ರತ್ಯರ್ಚ್ಯ ಹಲೀ ಸರ್ವಾನ್ ಕ್ಷತ್ರಿಯಾಂಶ್ಚಾಮಿತೌಜಸಃ ।
ಕೃತ್ವಾ ಕುಶಲಸಂಪ್ರಶ್ನಂ ಸಂವಿದಂ ಚ ಯಥಾವಯಃ ॥೧೬॥

ಬಲರಾಮನು ಬಹಳ ಓಜಸ್ಸುಳ್ಳ ಎಲ್ಲಾ ಕ್ಷತ್ರಿಯರನ್ನು ತಾನೂ ಗೌರವಿಸಿ, ಅವರ ಆರೋಗ್ಯವನ್ನು ವಿಚಾರಿಸಿದನು. ಮತ್ತು ವಯಸ್ಸಿಗೆ ಅನುಗುಣವಾಗಿ ಅವರೊಂದಿಗೆ ವಿಚಾರವಿನಿಮಯವನ್ನು ಮಾಡಿದನು.

ಜನಾರ್ದನಂ ಸಾತ್ಯಕಿಂ ಚ ಪ್ರೇಮ್ಣಾ ಸಂಪರಿಷಸ್ವಜೇ ॥೧೭॥

ಶ್ರೀಕೃಷ್ಣನನ್ನೂ ಮತ್ತು ಸಾತ್ಯಕಿಯನ್ನು ಪ್ರೀತಿಯಿಂದ ಆಲಿಂಗಿಸಿಕೊಂಡನು.

ಮೂರ್ಧ್ನಿ ಚೈತಾವುಪಾಘ್ರಾಯ ಕುಶಲಂ ಪರ್ಯಪೃಚ್ಛತ ॥೧೮॥

ಅವರ ನೆತ್ತಿಯನ್ನು ಆಘ್ರಾಣಿಸಿ ಕುಶಲಪ್ರಶ್ನೆಯನ್ನು ಮಾಡಿದನು.

ತೌ ಚೈನಂ ವಿಧಿವದ್ ರಾಜನ್ ಪೂಜಯಾಮಾಸತುರ್ಗುರುಮ್ ।
ಬ್ರಹ್ಮಾಣಮಿವ ದೇವೇಶಮಿಂದ್ರೋಪೇಂದ್ರೌ ಮುದಾ ಯುತೌ ॥೧೯॥

ರಾಜನೇ! ಹಿರಿಯನಾದ ಬಲರಾಮನನ್ನು ಅವರೂ ಕೂಡ, ಇಂದ್ರ ಮತ್ತು ಉಪೇಂದ್ರ (ವಾಮನ)ರು ಚತುರ್ಮುಖಬ್ರಹ್ಮನನ್ನು ಪೂಜಿಸಿದಂತೆ ವಿಧಿವತ್ತಾಗಿ ಪೂಜಿಸಿದರು.

ತತೋऽಬ್ರವೀದ್ ಧರ್ಮಸುತೋ ರೌಹಿಣೇಯಮರಿಂದಮಮ್ ।
ಇದಂ ಭ್ರಾತ್ರೋರ್ಮಹಾಯುದ್ಧಂ ಪಶ್ಯ ರಾಮೇತಿ ಭಾರತ ॥೨೦॥

ಭರತಕುಲೋದ್ಭವನೇ! ಅನಂತರ ಧರ್ಮರಾಜನು ಶತ್ರುಸಂಹಾರಕನಾದ ಬಲರಾಮನಿಗೆ ''ಬಲರಾಮನೇ! ಸಹೋದರರ ಮಧ್ಯೆ ನಡೆಯುತ್ತಿರುವ ಮಹಾಯುದ್ಧವನ್ನು ನೋಡು!'' ಎಂದು ಹೇಳಿದನು.

ತೇಷಾಂ ಮಧ್ಯೇ ಮಹಾಬಾಹುಃ ಶ್ರೀಮಾನ್ ಕೇಶವಪೂರ್ವಜಃ ।
ನ್ಯವಿಶತ್ ಪರಮಪ್ರೀತಃ ಪ್ರೀಯಮಾಣೋ ಮಹಾರಥೈಃ ॥೨೧॥

ಕಾಂತಿಮಂತನಾದ ಮಹಾಬಾಹು ಬಲರಾಮನು ಮಹಾರಥರಿಂದ ಪೂಜಿತನಾಗಿ ಬಹಳವಾಗಿ ಸಂಪ್ರೀತನಾಗಿ ಪಾಂಡವರ ಮಧ್ಯದಲ್ಲಿ ಕುಳಿತನು.

ಸ ಬಭೌ ರಾಜಮಧ್ಯಸ್ಥೋ ನೀಲಾವಾಸಾಃ ಸಿತಪ್ರಭಃ ।
ದಿವೀವ ನಕ್ಷತ್ರಗಣೈಃ ಪರಿಕೀರ್ಣೋ ನಿಶಾಕರಃ ॥೨೨॥

ರಾಜರೆಲ್ಲರ ಮಧ್ಯದಲ್ಲಿ ಇದ್ದ, ನೀಲಬಣ್ಣದ ಬಟ್ಟೆಯನ್ನು ಧರಿಸಿರುವ, ಬೆಳ್ಳಗಿನ ಪ್ರಭೆಯನ್ನು ಹೊಂದಿರುವ ಬಲರಾಮನು ಆಕಾಶದಲ್ಲಿ ನಕ್ಷತ್ರಗಳಿಂದ ಸುತ್ತುವರಿಯಲ್ಪಟ್ಟ ಚಂದ್ರನ ಹಾಗೆ ಶೋಭಿಸಿದನು.

ತತಸ್ತಯೋಃ ಸನ್ನಿಪಾತಸ್ತುಮುಲೋ ರೋಮಹರ್ಷಣಃ ।
ಆಸೀದಂತಕರೋ ರಾಜನ್ ವೈರಸ್ಯಾಂತಂ ವಿಧಿತ್ಸತೋಃ ॥೨೩॥

ರಾಜನೇ! ಅನಂತರ ವೈರವನ್ನು ಕೊನೆಗೊಳಿಸುವ ಇಚ್ಛೆಯನ್ನು ಹೊಂದಿರುವ ಆ ಭೀಮ-ದುರ್ಯೋಧನರ ಮಧ್ಯೆ ರೋಮಾಂಚನಕಾರಿಯಾದ ಭಯಂಕರವಾದ ಹೊಡೆದಾಟವು ನಡೆಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಸಾರಸ್ವತಪರ್ವ

ಆರನೆಯ ಅಧ್ಯಾಯ

ಬಲರಾಮನು ಮಾಡಿದ ತೀರ್ಥಯಾತ್ರೆಯ ಬಗ್ಗೆ ವೈಶಂಪಾಯನರಲ್ಲಿ ಜನಮೇಜಯನ ಪ್ರಶ್ನೆ. ವೈಶಂಪಾಯನರು ಅದನ್ನು ಹೇಳುತ್ತಾ ಪ್ರಭಾಸತೀರ್ಥಕ್ಕೆ ಆ ಹೆಸರು ಬರಲು ಕಾರಣವೇನೆಂಬುದನ್ನು ತಿಳಿಸುವುದು. ಚಂದ್ರನು ತನ್ನ ಪತ್ನಿಯರಾದ ಅಶ್ವಿನೀ ಮೊದಲಾದವರನ್ನು ಉಪೇಕ್ಷಿಸಿ ರೋಹಿಣಿಯೊಬ್ಬಳಲ್ಲಿಯೇ ಆಸಕ್ತನಾದಾಗ ಕೋಪಗೊಂಡ ದಕ್ಷನು ಚಂದ್ರನ ಮೇಲೆ ಕ್ಷಯರೋಗವನ್ನು ಹಾಕಿದ್ದು.

ಜನಮೇಜಯಃ

ಪೂರ್ವಮೇವ ಯದಾ ರಾಮೋ ಯುದ್ಧೇ ತಸ್ಮಿನ್ನುಪಸ್ಥಿತೇ ।
ಆಮಂತ್ರ್ಯ ಕೇಶವಂ ಯಾತೋ ವೃಷ್ಣಿಭಿಃ ಸಹಿತಃ ಪ್ರಭುಃ ॥೧॥

ಜನಮೇಜಯ– ಹಿಂದೆಯೇ ಯಾವಾಗ ಯುದ್ಧವು ನಡೆಯುವುದು ನಿಶ್ಚಿತವಾಗಿತ್ತೋ ಆಗ ಪ್ರಭುವಾದ ಬಲರಾಮನು ಶ್ರೀಕೃಷ್ಣನ ಒಪ್ಪಿಗೆಯನ್ನು ಪಡೆದು ವೃಷ್ಣಿಗಳೊಡನೆ ಸೇರಿ ತೀರ್ಥಯಾತ್ರೆಗೆ ಹೋದನು. ಹೋಗುವ ಸಂದರ್ಭದಲ್ಲಿ ಹೀಗೆ ಹೇಳಿದ್ದನು.

ಬಲರಾಮಃ

ಸಾಹಾಯ್ಯಂ ಧಾರ್ತರಾಷ್ಟ್ರಸ್ಯ ನ ಚೇತ್ ಕರ್ತಾಸ್ಮಿ ಕೇಶವ ।
ತಥೈವ ಪಾಂಡುಪುತ್ರಾಣಾಂ ಗಮಿಷ್ಯಾಮಿ ಯಥಾತಥಮ್ ॥೨॥

ಬಲರಾಮ– ಕೇಶವನೇ! ನಾನು ದುರ್ಯೋಧನನಿಗೆ ಯುದ್ಧದಲ್ಲಿ ಸಹಾಯವನ್ನು ಯಾವ ರೀತಿಯಲ್ಲಿ ಮಾಡುವುದಿಲ್ಲವೋ ಅದೇ ರೀತಿಯಲ್ಲಿ ಪಾಂಡವರಿಗೂ ಸಹಾಯ ಮಾಡುವುದಿಲ್ಲ. ನಾನು ತೀರ್ಥಯಾತ್ರೆಗೆ ಹೋಗುವೆನು.

ಜನಮೇಜಯಃ

ಏವಮುಕ್ತ್ವಾ ತದಾ ರಾಮೋ ಯಾತಃ ಶತ್ರುನಿಷೂದನಃ ।
ತಸ್ಯ ಚಾಗಮನಂ ಭೂಯೋ ಬ್ರಹ್ಮನ್ ಬ್ರೂಹ್ಯದ್ಯ ಮೇ ಪ್ರಭೋ ॥೩॥

ಜನಮೇಜಯ– ಶತ್ರುಸಂಹಾರಕನಾದ ಬಲರಾಮನು ಹೀಗೆ ಹೇಳಿ ಹೊರಟುಹೋದನು. ಅವನು ಮತ್ತೆ ಬಂದಿದ್ದಾನೆ. ಜ್ಞಾನಿಯೇ! ಅವನ ಆಗಮನವನ್ನು ನನಗೆ ತಿಳಿಸಿಕೊಡು.

ಆಖ್ಯಾಹಿ ಮೇ ವಿಸ್ತರತಃ ಕಥಂ ರಾಮ ಉಪಸ್ಥಿತಃ ।
ಕಥಂ ಚ ದೃಷ್ಟವಾನ್ ಯುದ್ಧಂ ಕುಶಲೋ ಹ್ಯಸಿ ವೈ ದ್ವಿಜ ॥೪॥

ದ್ವಿಜನೇ! ನೀನು ಬಹಳ ನಿಪುಣನಾಗಿರುವಿ. ರಾಮನು ಹೇಗೆ ಇದ್ದ? ಯುದ್ಧವನ್ನು ಹೇಗೆ ನೋಡಿದ? ಇದೆಲ್ಲವನ್ನೂ ನನಗೆ ವಿಸ್ತಾರವಾಗಿ ಹೇಳು.

ವೈಶಂಪಾಯನಃ

ಉಪಪ್ಲಾವ್ಯೇ ನಿವಿಷ್ಟೇಷು ಪಾಂಡವೇಷು ಮಹಾತ್ಮಸು ।
ಪ್ರೇಷಿತೋ ಧಾರ್ತರಾಷ್ಟ್ರಸ್ಯ ಸಮೀಪಂ ಮಧುಸೂದನಃ ॥೫॥

ಶಮಂ ಪ್ರತಿ ಮಹಾಬಾಹೋ ಹಿತಾರ್ಥಂ ಸರ್ವದೇಹಿನಾಮ್ ।
ಸ ಗತ್ವಾ ಹಸ್ತಿನಪುರಂ ಧೃತರಾಷ್ಟ್ರಂ ಸಮೇತ್ಯ ಚ ॥೬॥

ವೈಶಂಪಾಯನ– ಮಹಾತ್ಮರಾದ ಪಾಂಡವರು ಉಪಪ್ಲಾವ್ಯದಲ್ಲಿ ವಾಸಮಾಡುತ್ತಿರುವಾಗ ಶ್ರೀಕೃಷ್ಣನನ್ನು ದುರ್ಯೋಧನನ ಸಮೀಪಕ್ಕೆ ಸಂಧಾನಕ್ಕಾಗಿ ಕಳುಹಿಸಿಕೊಟ್ಟರು. ಮಹಾಬಾಹುವೇ! ಎಲ್ಲರ ಕ್ಷೇಮವೂ ಅವರ ಉದ್ದೇಶವಾಗಿತ್ತು.

ಉಕ್ತವಾನ್ ವಚನಂ ಪಥ್ಯಂ ಹಿತಂ ಚೈವ ವಿಶಾಂಪತೇ ।
ನ ಚ ತತ್ ಕೃತವಾನ್ ರಾಜಾ ಯಥಾSSSಖ್ಯಾತಂ ಹಿ ತೇ ಪುರಾ ॥೭॥

ಶ್ರೀಕೃಷ್ಣನು ಹಸ್ತಿನಪುರಕ್ಕೆ ಬಂದು ಧೃತರಾಷ್ಟ್ರನನ್ನು ಭೇಟಿಮಾಡಿ ಪಥ್ಯವಾದ ಹಿತವಾದ ಮಾತನ್ನು ಹೇಳಿದನು. ರಾಜನೇ! ರಾಜ ಧೃತರಾಷ್ಟ್ರನು ಅದನ್ನು ಮಾಡಲಿಲ್ಲ. ಇದರ ಬಗ್ಗೆ ನಾನು ನಿನಗೆ ಹಿಂದೆಯೇ ಹೇಳಿದ್ದೆ.

ಅನವಾಪ್ಯ ಶಮಂ ತತ್ರ ಕೃಷ್ಣಃ ಪುರುಷಸತ್ತಮಃ ।
ಆಗಚ್ಛಚ್ಚ ಮಹಾಬಾಹುರುಪಪ್ಲಾವ್ಯಂ ಜನಾಧಿಪ ॥೮॥

ರಾಜನೇ! ಪುರುಷೋತ್ತಮನಾದ ಮಹಾಬಾಹು ಶ್ರೀಕೃಷ್ಣನು ಸಂಧಿಯನ್ನು ಮಾಡಲಾಗದೆ ಮತ್ತೆ ಉಪಪ್ಲಾವ್ಯಕ್ಕೆ ಬಂದನು.

ತತಃ ಪ್ರತ್ಯಾಗತಃ ಕೃಷ್ಣೋ ಧೃತರಾಷ್ಟ್ರವಿಸರ್ಜಿತಃ ।
ಆಜಗಾಮ ನರವ್ಯಾಘ್ರಃ ಪಾಂಡವಾನಾಮನೀಕಿನೀಮ್ ॥೯॥

ಧೃತರಾಷ್ಟ್ರನಿಂದ ಬೀಳ್ಕೊಳ್ಳಲ್ಪಟ್ಟ ಶ್ರೀಕೃಷ್ಣನು ಹಿಂತಿರುಗಿ ಬಂದು ಪಾಂಡವರಿಗೆ ಹೀಗೆ ಹೇಳಿದನು (ಪಾಂಡವರ ಸೈನ್ಯದ ಕಡೆಗೆ ಬಂದನು.)

ಶ್ರೀಭಗವಾನ್

ನ ಕುರ್ವಂತಿ ವಚೋ ಮಹ್ಯಂ ಕುರವಃ ಕಾಲಚೋದಿತಾಃ ।
ನಿರ್ಗಚ್ಛಧ್ವಂ ಪಾಂಡವೇಯಾಃ ಪುಷ್ಯೇಣ ಸಹಿತಾ ಮಯಾ ॥೧೦॥

ಶ್ರೀಭಗವಾನ್– ಕಾಲದ ಪ್ರೇರಣೆಗೆ ಒಳಗಾದ ಕುರುಗಳು ನನ್ನ ಮಾತನ್ನು ನಡೆಸಿಕೊಡುವುದಿಲ್ಲ. ಪಾಂಡವರೇ! ಪುಷ್ಯನಕ್ಷತ್ರದ ದಿನ ನನ್ನೊಡನೆ ಹೊರಡಿ.

ವೈಶಂಪಾಯನಃ

ತತೋ ವಿಭಜ್ಯಮಾನೇಷು ಬಲೇಷು ಬಲಿನಾಂ ವರಃ ।
ಪ್ರೋವಾಚ ಭ್ರಾತರಂ ಕೃಷ್ಣಂ ರೌಹಿಣೇಯಃ ಪ್ರತಾಪವಾನ್ ॥೧೧॥

ಅನಂತರ ವ್ಯೂಹರಚನೆಗಾಗಿ ಸೈನ್ಯಗಳು ವಿಭಾಗಗೊಳ್ಳುತ್ತಿರಲು ಬಲಶಾಲಿಗಳಲ್ಲಿಯೇ ಶ್ರೇಷ್ಠನಾದ ಪ್ರತಾಪಿ ಬಲರಾಮನು ತನ್ನ ತಮ್ಮ ಶ್ರೀಕೃಷ್ಣನಿಗೆ ಹೀಗೆ ಹೇಳುತ್ತಾನೆ.

ತೇಷಾಮಪಿ ಮಹಾಬಾಹೋ ಸಾಹಾಯ್ಯಂ ಮಧುಸೂದನ ।
ಕ್ರಿಯತಾಮಿತಿ ತತ್ ಕೃಷ್ಣೋ ನಾಸ್ಯ ಚಕ್ರೇ ವಚಸ್ತದಾ ॥೧೨॥

ಮಹಾಬಾಹುವಾದ ಮಧುಸೂದನನೇ! ಕೌರವರಿಗೂ ಸಹಾಯವನ್ನು ಮಾಡು. ಎಂದು. ಆಗ ಶ್ರೀಕೃಷ್ಣನು ಬಲರಾಮನ ಮಾತನ್ನು ನಡೆಸಿಕೊಡಲಿಲ್ಲ.

ತತೋ ಮನ್ಯುಪರೀತಾತ್ಮಾ ಜಗಾಮ ಯದುನಂದನಃ ।
ತೀರ್ಥಯಾತ್ರಾಂ ಹಲಧರಃ ಸರಸ್ವತ್ಯಾಂ ಮಹಾಯಶಾಃ ॥೧೩॥

ಆಗ ಹಲಧಾರಿಯಾದ ಮಹಾಯಶೋವಂತ ಬಲರಾಮನು ಕೋಪದಿಂದ ಕೂಡಿದವನಾಗಿ ಸರಸ್ವತೀ ನದಿಗೆ ತೀರ್ಥಯಾತ್ರೆಗೆ ಹೋದನು.

ಮೈತ್ರೇ ನಕ್ಷತ್ರಯೋಗೇ ವೈ ಸಹಿತಃ ಸರ್ವಯಾದವೈಃ ॥೧೪॥

ಆಶ್ರಯಾಮಾಸ ಭೋಜಸ್ತು ದುರ್ಯೋಧನಮರಿಂದಮಮ್ ।
ಯುಯುಧಾನೇನ ಸಹಿತೋ ವಾಸುದೇವಶ್ಚ ಪಾಂಡವಾನ್ ॥೧೫॥

ಶತ್ರುಸಂಹಾರಕನಾದ ಕೃತವರ್ಮನಾದರೂ ಎಲ್ಲಾ ಯಾದವರನ್ನೂ ಸೇರಿಸಿಕೊಂಡು ಅನೂರಾಧಾನಕ್ಷತ್ರದ ಯೋಗವಿದ್ದಾಗ ದುರ್ಯೋಧನನನ್ನು ಆಶ್ರಯಿಸಿದನು. ಯುಯುಧಾನನ ಜೊತೆಗೆ ಶ್ರೀಕೃಷ್ಣನು ಪಾಂಡವರನ್ನು ಆಶ್ರಯಿಸಿದನು.

ರೌಹಿಣೇಯೇ ಗತೇ ಶೂರೇ ಪುಷ್ಯೇಣ ಮಧುಸೂದನಃ ।
ಪಾಂಡವೇಯಾನ್ ಪುರಸ್ಕೃತ್ಯ ಯಯಾವಭಿಮುಖಃ ಕುರೂನ್ ॥೧೬॥

ಗಚ್ಛನ್ನೇವ ಪಥಿಸ್ಥಸ್ತು ರಾಮಃ ಪ್ರೇಷ್ಯಾನುವಾಚ ಹ ॥೧೭॥

ಬಲರಾಮನು ಹೊರಟುಹೋದ ಮೇಲೆ ಪುಷ್ಯಾನಕ್ಷತ್ರದ ದಿನ ಶ್ರೀಕೃಷ್ಣನು ಪಾಂಡವರನ್ನು ಮುಂದಿಟ್ಟುಕೊಂಡು ಕೌರವರನ್ನು ಎದುರಿಸಲು ಹೊರಟನು. ಆಗ ಮಾರ್ಗಮಧ್ಯದಲ್ಲಿ ಬಲರಾಮನು ತನ್ನ ಸೇವಕರಿಗೆ ಹೀಗೆ ಹೇಳಿದನು.

ಬಲರಾಮಃ

ಸಂಭಾರಾಂಸ್ತೀರ್ಥಯಾತ್ರಾಯಾಃ ಸರ್ವೋಪಕರಣಾನಿ ಚ ।
ಆನಯಧ್ವಂ ದ್ವಾರಕಾಯಾ ಅಗ್ನೀನ್ ವೈ ಯಾಜಕಾಂಸ್ತಥಾ ॥೧೮॥

ಬಲರಾಮ– ತೀರ್ಥಯಾತ್ರೆಗೆ ಬೇಕಾದ ಎಲ್ಲ ಸಾಮಗ್ರಿಗಳನ್ನು ದ್ವಾರಕೆಯಿಂದ ತೆಗೆದುಕೊಂಡು ಬನ್ನಿ, ಜೊತೆಗೆ ಯಾಗಕ್ಕೆ ಬೇಕಾದ ಯಾಜ್ಞಿಕರನ್ನೂ ಅಗ್ನಿಯನ್ನೂ ತನ್ನಿ.

ಸುವರ್ಣಂ ರಾಜತಂ ಚೈವ ಧೇನೂರ್ವಾಸಾಂಸಿ ವಾಜಿನಃ ।
ಋತ್ವಿಜಶ್ಚಾನಯಧ್ವಂ ವೈ ಶತಶಶ್ಚ ದ್ವಿಜರ್ಷಭಾನ್ ॥೧೯॥

ಬಂಗಾರ, ಬೆಳ್ಳಿ, ಹಸುಗಳು, ವಸ್ತ್ರಗಳು, ಕುದುರೆಗಳು, ಋತ್ವಿಜರು, ಒಳ್ಳೆಯ ಬ್ರಾಹ್ಮಣರು- ಇವರೆಲ್ಲರನ್ನೂ ತೆಗೆದುಕೊಂಡು ಬನ್ನಿ.

ವೈಶಂಪಾಯನಃ

ಏತಂ ಸಂದಿಶ್ಯ ತು ಪ್ರೇಷ್ಯಾನ್ ಬಲದೇವೋ ಮಹಾಬಲಃ ।
ತೀರ್ಥಯಾತ್ರಾಂ ಗತೋ ರಾಮಃ ಕುರೂಣಾಂ ವೈಶಸೇ ತದಾ ॥೨೦॥

ಸರಸ್ವತ್ಯಾಃ ಪ್ರತಿಸ್ರೋತಃ ಸಮುದ್ರಾದಭಿಜಗ್ಮಿವಾನ್ ।
ರಾಮೋ ಯದೂತ್ತಮಃ ಶ್ರೀಮಾನ್ ತೀರ್ಥಯಾತ್ರಾಮನುಸ್ಮರನ್ ॥

ವೈಶಂಪಾಯನ– ಮಹಾಬಲಶಾಲಿಯಾದ ಬಲರಾಮನು ತನ್ನ ಸೇವಕರಿಗೆ ಹೀಗೆ ಹೇಳಿ, ಕುರುಗಳ ಹಿಂಸಾಸ್ಥಾನವಾದ ಕುರುಕ್ಷೇತ್ರದಿಂದ ತೀರ್ಥಯಾತ್ರೆಗಾಗಿ ಹೋದನು. ಸರಸ್ವತೀ ನದಿಯ ಪ್ರವಾಹಕ್ಕೆ ಪ್ರತಿಯಾಗಿ ಹೊರಟನು. ಯದುಶ್ರೇಷ್ಠನಾದ ಕಾಂತಿವಂತನಾದ ಬಲರಾಮನು ತೀರ್ಥಯಾತ್ರೆಯ ವಿಚಾರವನ್ನೇ ಸ್ಮರಿಸಿಕೊಳ್ಳುತ್ತಿದ್ದನು.

ಋತ್ವಿಗ್ಭಿಶ್ಚ ಸುಹೃದ್ಭಿಶ್ಚ ತಥಾಽನ್ಯೈರ್ದ್ವಿಜಸತ್ತಮೈಃ ।
ರಥೈರ್ನಾಗೈಸ್ತಥಾಶ್ವೈಶ್ಚ ಪ್ರೇಷ್ಯೈಶ್ಚ ಭರತರ್ಷಭ ॥೨೨॥

ತನ್ನ ಜೊತೆಗೆ ಪುರೋಹಿತರನ್ನು, ಸ್ನೇಹಿತರನ್ನು, ಬೇರೆ ಬ್ರಾಹ್ಮಣೋತ್ತಮರನ್ನು, ರಥಗಳನ್ನು, ಆನೆಗಳನ್ನು, ಕುದುರೆಗಳನ್ನು, ಸೇವಕರನ್ನೂ ಕರೆದೊಯ್ದನು.

ಗೋಖರೋಷ್ಟ್ರಪ್ರಯುಕ್ತೈಶ್ಚ ಯಾನೈಶ್ಚ ಬಹುಭಿರ್ನೃಪ ।
ಶ್ರಾಂತಾನಾಂ ಕ್ಲಾಂತಮನಸಾಂ ಶಿಶೂನಾಂ ವಿಪುಲಾಯುಷಾಮ್ ॥೨೩॥

ರಾಜನೇ! ನಡೆದು ಆಯಾಸಗೊಂಡವರನ್ನು, ಮಕ್ಕಳನ್ನು, ವೃದ್ಧರನ್ನು ಕುಳ್ಳಿರಿಸಿ ಎತ್ತು, ಕತ್ತೆ, ಒಂಟೆಗಳು ಎಳೆಯುವ ಅನೇಕ ಬಂಡಿಗಳಲ್ಲಿ ಅವರ ಜೊತೆಗೆ ಬಲರಾಮನು ತೀರ್ಥಯಾತ್ರೆಗೆ ಹೊರಟನು.

ತಾನಿ ಯಾನಾನಿ ದೇಶೇಷು ಪ್ರತೀಕ್ಷಂತೇ ಸ್ಮ ಭಾರತ ।
ಬುಭುಕ್ಷಿತಾನಾಮರ್ಥಾಯ ಕ್ಲೃಪ್ತಂ ರಾಜನ್ ಸಮಂತತಃ ॥೨೪॥

ಭರತಕುಲೋದ್ಭವನೇ! ಯಾವ ಜಾಗದಲ್ಲಿ ಯಾವ ಯಾನಗಳನ್ನು ಜನರು ಎದುರುನೋಡುತ್ತಾರೆಯೋ ಅವೆಲ್ಲವೂ ಅಲ್ಲಿದ್ದವು. ರಾಜನೇ! ಹಸಿದವರಿಗೆ ಬೇಕಾದ ವ್ಯವಸ್ಥೆಯೂ ಅಲ್ಲಿ ಮಾಡಲ್ಪಟ್ಟಿತ್ತು.

ಯೋ ಯೋ ಯತ್ರ ದ್ವಿಜೋ ಭೋಕ್ತುಂ ಕಾಮಂ ಕಾಮಯತೇ ತದಾ ।
ತಸ್ಯ ತಸ್ಯ ತು ತತ್ರೈವ ಉಪಜಹ್ರುಸ್ತಥಾ ನೃಪ ॥೨೫॥

ಯಾವ ಬ್ರಾಹ್ಮಣನು ಎಲ್ಲಿ ಏನನ್ನು ತಿನ್ನಲು ಬಯಸುತ್ತಾನೆಯೋ ಅಂತಹವರಿಗೆ ಅಲ್ಲಿಯೇ ಅವುಗಳನ್ನು ಒದಗಿಸುತ್ತಿದ್ದರು.

ಯತ್ರ ಸ್ಥಿತಾ ನರಾ ರಾಜನ್ ರೌಹಿಣೇಯಸ್ಯ ಶಾಸನಾತ್ ।
ಭಕ್ಷ್ಯಪೇಯಸ್ಯ ಕುರ್ವಂತಿ ರಾಶಿಂ ತತ್ರ ಪೃಥಕ್ ಪೃಥಕ್ ॥೨೬॥

ಬಲರಾಮನ ಅಪ್ಪಣೆಯಿಂದಾಗಿ ಸೇವಕರು ಯಾತ್ರಿಕರಿದ್ದಲ್ಲಿಗೇ ತಿನ್ನುವ ಮತ್ತು ಕುಡಿಯುವ ಪದಾರ್ಥಗಳನ್ನು ಪ್ರತ್ಯೇಕ ಪ್ರತ್ಯೇಕ ರಾಶಿ ಮಾಡಿ ಇಡುತ್ತಿದ್ದರು.

ವಾಸಾಂಸಿ ಚ ಮಹಾರ್ಹಾಣಿ ಪರ್ಯಂಕಾಸ್ತರಣಾನಿ ಚ ।
ಪೂಜಾರ್ಥಂ ತತ್ರ ಕ್ಲೃಪ್ತಾನಿ ವಿಪ್ರಾಣಾಂ ಸುಖಮಿಚ್ಛತಾಮ್ ॥೨೭॥

ಯಾವ ಬ್ರಾಹ್ಮಣರು ಯಾತ್ರೆಯಲ್ಲಿ ಸುಖವಾಗಿ ಇರಲು ಇಷ್ಟಪಡುತ್ತಿದ್ದರೋ ಅವರಿಗಾಗಿ ಬೆಲೆಬಾಳುವ ವಸ್ತ್ರಗಳನ್ನು, ಮಂಚ-ಹಾಸಿಗೆ-ಹೊದಿಕೆಗಳನ್ನು ವ್ಯವಸ್ಥೆ ಮಾಡಿದ್ದನು.

ಯತ್ರೈವ ಸುಷುಪುರ್ವಿಪ್ರಾ ಯೇ ವಾ ಜಾಗ್ರತಿ ಭಾರತ ।
ತತ್ರ ತತ್ರೈವ ಸರ್ವಸ್ಯ ಕ್ಲಪ್ತಂ ಸರ್ವಮದೃಶ್ಯತ ॥೨೮॥

ರಾಜನೇ! ಯಾರು ನಿದ್ದೆಗೆಟ್ಟಿದ್ದರೋ ಅಂತಹ ಬ್ರಾಹ್ಮಣರು ಎಲ್ಲೆಲ್ಲಿ ಮಲಗುತ್ತಿದ್ದರೋ ಆಲ್ಲಲ್ಲಿಯೇ ಅವರಿಗೆ ಬೇಕಾದ ಎಲ್ಲಾ ವ್ಯವಸ್ಥೆಗಳು ಇರುವುದು ಕಂಡುಬಂತು.

ಯಥಾಸುಖಂ ಜನಃ ಸರ್ವಃ ತಿಷ್ಠತೇ ಚ ದಿವಾನಿಶಮ್ ।
ಯಾತುಕಾಮಸ್ಯ ಯಾನಾನಿ ಪಾನಾನಿ ತೃಷಿತಸ್ಯ ಚ ॥೨೯॥

ಹಗಲೂರಾತ್ರಿ ಜನರು ಸುಖವಾಗಿ ಇದ್ದರು. ಹೋಗಲು ಇಚ್ಛಿಸುವವರಿಗೆ ವಾಹನದ ವ್ಯವಸ್ಥೆ, ಬಾಯಾರಿದವರಿಗೆ ಪಾನೀಯದ ವ್ಯವಸ್ಥೆಯೂ ಇತ್ತು.

ಬುಭುಕ್ಷಿತಸ್ಯ ಚಾನ್ನಾನಿ ಸ್ವಾದೂನಿ ಭರತರ್ಷಭ ॥೩೦॥

ಹಸಿದವರಿಗೆ ರುಚಿಯಾದ ಭೋಜನದ ವ್ಯವಸ್ಥೆಯೂ ಇತ್ತು.

ಉಪಜಹ್ರುರ್ನರಾಸ್ತತ್ರ ವಸ್ತ್ರಾಣ್ಯಾಭರಣಾನಿ ಚ ॥೩೧॥

ಬಲರಾಮನ ಜನರು ವಸ್ತ್ರಗಳನ್ನೂ, ಆಭರಣಗಳನ್ನೂ ತಂದುಕೊಡುತ್ತಿದ್ದರು.

ಸ ಪಂಥಾಃ ಪ್ರವವೌ ರಾಜನ್ ಸರ್ವಸ್ಯೈವ ಸುಖಾವಹಃ ।
ಸ್ವರ್ಗೋಪಮಸ್ತದಾ ರಾಜನ್ ನರಾಣಾಂ ತತ್ರ ಗಚ್ಛತಾಮ್ ॥೩೨॥

ಆ ತೀರ್ಥಯಾತ್ರೆಯ ಮಾರ್ಗವು ಎಲ್ಲರಿಗೂ ಸುಖವನ್ನೇ ಕೊಡುತ್ತಿತ್ತು. ಆ ಮಾರ್ಗದಲ್ಲಿ ಹೋಗುವವರಿಗೆ ಆ ದಾರಿಯು ಸ್ವರ್ಗಲೋಕದಂತೆ ಸುಖವನ್ನು ಕೊಡುತ್ತಿತ್ತು.

ನಿತ್ಯಪ್ರಮುದಿತೋಪೇತಃ ಸ್ವಾದುಭಕ್ಷಜಲಾನ್ವಿತಃ ।
ವಿಪಣಾಪಣಪಣ್ಯೈಶ್ಚ ನಾನಾಜನಪದೈರ್ವೃತಃ ॥೩೩॥

ಆ ಮಾರ್ಗದಲ್ಲಿ ಇರುವವರೂ ನಿತ್ಯವೂ ಆನಂದದಿಂದ ಇದ್ದರು. ರುಚಿಯಾದ ಭಕ್ಷ್ಯಗಳು, ನೀರು ಅಲ್ಲಿ ಇರುತ್ತಿದ್ದವು. ಅಂಗಡಿ, ಮುಂಗಟ್ಟುಗಳು ಅಲ್ಲಿ ಇದ್ದವು. ಅನೇಕ ತರಹದ ಗ್ರಾಮಗಳು ಆಲ್ಲಿಸಿಗುತ್ತಿದ್ದವು.

ನಾನಾದ್ರುಮಲತೋಪೇತೋ ನಾನಾರತ್ನವಿಭೂಷಿತಃ ॥೩೪॥

ದಾರಿಬದಿಯಲ್ಲಿ ಅನೇಕ ವಿಧದ ಮರಗಳು, ಬಳ್ಳಿಗಳು ಇದ್ದವು. ರತ್ನಗಳಿಂದ ಅಲಂಕೃತವಾಗಿತ್ತು.

ತತೋ ಮಹಾತ್ಮಾ ನಿಯಮೇ ಸ್ಥಿತಾತ್ಮಾ
ಪುಣ್ಯೇಷು ತೀರ್ಥೇಷು ವಸೂನಿ ರಾಜನ್ ।
ದದೌ ದ್ವಿಜೇಭ್ಯಃ ಕ್ರತುದಕ್ಷಿಣಾಂ ಚ
ಯದುಪ್ರವೀರೋ ಹಲಧೃಕ್ ಪ್ರತೀತಃ ॥೩೫॥

ರಾಜನೇ! ಅನಂತರ ಹಲಧಾರಿಯೆಂದು ಪ್ರಸಿದ್ಧನಾದ, ವ್ರತದಲ್ಲಿ ಇರುವ ಮಹಾತ್ಮ ಬಲರಾಮನು ಪುಣ್ಯಕ್ಷೇತ್ರಗಳಲ್ಲಿ ಬ್ರಾಹ್ಮಣರಿಗೆ ಬೇರೆ ಬೇರೆ ವಿಧದ ವಸ್ತುಗಳನ್ನು ದಾನಮಾಡಿದನು. ಯದುವೀರನಾದ ಬಲರಾಮನು ಯಜ್ಞದ ದಕ್ಷಿಣೆಯನ್ನೂ ಕೊಟ್ಟನು.

ದೋಗ್ಧ್ರೀಶ್ಚ ಧೇನೂಶ್ಚ ಸಹಸ್ರಶೋ ವೈ
ಸುವಾಸಸಃ ಕಾಂಚನಬದ್ಧಶೃಂಗಾಃ ॥೩೬॥

ಒಳ್ಳೆಯ ಬಟ್ಟೆ ಮತ್ತು ಆಭರಣಗಳಿಂದ ಅಲಂಕೃತವಾದ ಹಾಲುಕೊಡುವ ಸಾವಿರಾರು ಹಸುಗಳನ್ನು ದಾನ ಮಾಡಿದನು. ಆ ಹಸುಗಳ ಕೊಂಬಿಗೆ ಬಂಗಾರದ ಶಿಖರಗಳನ್ನು ಇಡಲಾಗಿತ್ತು.

ಹಯಾಂಶ್ಚ ನಾನಾವಿಧದೇಶಜಾತಾನ್
ಯಾನಾನಿ ದಾಸೀಶ್ಚ ಶುಚೀರ್ದ್ವಿಜೇಭ್ಯಃ ॥೩೭॥

ಬ್ರಾಹ್ಮಣರಿಗೆ ನಾನಾವಿಧದೇಶಗಳಿಂದ ತಂದಿರುವ ಕುದುರೆಗಳನ್ನು, ರಥಗಳನ್ನು, ಶುಚಿಯರಾದ ದಾಸಿಯರನ್ನು ಕೊಟ್ಟನು.

ರತ್ನಾನಿ ಮುಕ್ತಾಮಣಿವಿದ್ರುಮಾಂಶ್ಚ
ಶಂಗೀಸುವರ್ಣಂ ರಜತಂ ಚ ಶುದ್ಧಮ್ ।
ಅಯೋಮಯಂ ತಾಮ್ರಮಯಂ ಚ ಭಾಂಡಂ
ದದೌ ದ್ವಿಜಾತಿಪ್ರವರೇಷು ರಾಮಃ ॥೩೮॥

ಬಲರಾಮನು ರತ್ನಗಳನ್ನು, ಮುತ್ತುಗಳನ್ನು, ಮಣಿಗಳನ್ನು, ಹವಳಗಳನ್ನು, ಅಲಂಕಾರಕ್ಕೆ ಬಳಸುವ ಬಂಗಾರವನ್ನು, ಪರಿಶುದ್ಧವಾದ ಬೆಳ್ಳಿಯನ್ನು, ಕಬ್ಬಿಣದ, ತಾಮ್ರದ ಪಾತ್ರೆಗಳನ್ನು ಉತ್ತಮ ಬ್ರಾಹ್ಮಣರಿಗೆ ದಾನ ಮಾಡಿದನು.

ಏವಂ ಸ ವಿತ್ತಂ ಪ್ರದದೌ ಮಹಾತ್ಮಾ
ಸರಸ್ವತೀತೀರ್ಥಗತೇಷು ಭೂರಿ ॥೩೯॥

ಮಹಾತ್ಮನಾದ ಬಲರಾಮನು ಸರಸ್ವತೀ ತೀರಕ್ಕೆ ಬಂದ ಬ್ರಾಹ್ಮಣರಿಗೆ ಬಹಳವಾಗಿ ಹಣವನ್ನು ದಾನ ಮಾಡಿದನು.

ಯಯೌ ಕ್ರಮೇಣಾಪ್ರತಿಮಪ್ರಭಾವಃ
ತತಃ ಕುರುಕ್ಷೇತ್ರಮುದಾರವೃತ್ತಃ ॥೪೦॥

ಸರಿಸಾಟಿಯಿಲ್ಲದ ಪ್ರಭಾವವುಳ್ಳ, ಉದಾರಚರಿತನಾದ ಬಲರಾಮನು ಕುರುಕ್ಷೇತ್ರಕ್ಕೆ ಹೋದನು.

ಜನಮೇಜಯಃ

ಸಾರಸ್ವತೀನಾಂ ತೀರ್ಥಾನಾಂ ಗುಣೋತ್ಪತ್ತಿಂ ವದಸ್ವ ಮೇ ।
ಫಲಂ ಚ ದ್ವಿಪದಾಂ ಶ್ರೇಷ್ಠ ನಿವೃತ್ತಿಮಪಿ ಕರ್ಮಣಾಮ್ ॥೪೧॥

ಜನಮೇಜಯ– ಸರಸ್ವತಿಮೊದಲಾದ ತೀರ್ಥಗಳ ಗುಣೋತ್ಪತ್ತಿಯನ್ನು ನನಗೆ ಹೇಳು. ಮನುಜೋತ್ತಮನೇ! ಅಲ್ಲಿನಡೆಯುವ ದಾನಾದಿಕರ್ಮಗಳು ಫಲವಿಷಯದಲ್ಲಿ ಹೇಗೆ ಕಾರ್ಯಕಾರಿಗಳಾಗುತ್ತವೆ ಎಂಬುದನ್ನೂ ಹೇಳು.

ಯಥಾಕ್ರಮಂ ಚ ಭಗವನ್ ತೀರ್ಥಾನಾಮನುಪೂರ್ವಶಃ ।
ಬ್ರೂಹಿ ಬ್ರಹ್ಮವಿದಾಂ ಶ್ರೇಷ್ಠ ಪರಂ ಕೌತೂಹಲಂ ಹಿ ಮೇ ॥೪೨॥

ಬ್ರಹ್ಮಜ್ಞಾನಿಗಳಲ್ಲಿಯೇ ಶ್ರೇಷ್ಠನಾದವನೇ! ತೀರ್ಥಗಳ ಬಗ್ಗೆ ಕ್ರಮವಾಗಿ ಹೇಳು. ನನಗೆ ಬಹಳ ಕುತೂಹಲವುಂಟಾಗಿದೆ.

ವೈಶಂಪಾಯನಃ

ತೀರ್ಥಾನಾಂ ವಿಸ್ತರಂ ರಾಜನ್ ಗುಣೋತ್ಪತ್ತಿಂ ಚ ಸರ್ವಶಃ ।
ಮಯೋಚ್ಯಮಾನಾಂ ಶೃಣು ಮೇ ಪುಣ್ಯಾಂ ರಾಜೇಂದ್ರ ಪಾವನೀಮ್ ॥

ವೈಶಂಪಾಯನ– ರಾಜೇಂದ್ರನೇ! ತೀರ್ಥಗಳ ಗುಣೋತ್ಪತ್ತಿಯನ್ನೂ, ಅವುಗಳ ವಿಸ್ತಾರವನ್ನೂ ಎಲ್ಲವನ್ನೂ ಹೇಳುತ್ತೇನೆ. ನಾನು ಹೇಳುವುದನ್ನು ಕೇಳು. ಇದು ಬಹಳ ಪುಣ್ಯಪ್ರದ ಹಾಗೂ ಪವಿತ್ರತೆಯನ್ನು ಕೊಡುವಂತಹದ್ದು.

ಪೂರ್ವಂ ಮಹಾರಾಜ ಯದುಪ್ರವೀರ
ಋತ್ವಿಕ್ಪುರೋಹಿತಾಚಾರ್ಯೈಶ್ಚ ಸಾರ್ಧಮ್ ।
ಪುಣ್ಯಂ ಪ್ರಭಾಸಂ ಸಮುಪಾಜಗಾಮ
ಯತ್ರೋಡುರಾಡ್ಯಕ್ಷ್ಮಣಾ ಕ್ಷೀಯಮಾಣಃ ॥೪೪॥

ವಿಮುಕ್ತಶಾಪಃ ಪುನರಾತ್ತತೇಜಾಃ
ಸರ್ವಂ ಜಗದ್ಭಾಸಯತೇ ನರೇಂದ್ರ ॥೪೫॥

ಹಿಂದೆ ಯದುವೀರನಾದ ಬಲರಾಮನು ಪುರೋಹಿತರು, ಸ್ನೇಹಿತರು, ಬ್ರಾಹ್ಮಣರು ಇವರನ್ನು ಕರೆದುಕೊಂಡು ಪುಣ್ಯವಾದ ಪ್ರಭಾಸಕ್ಷೇತ್ರಕ್ಕೆ ಹೋದನು. ಕ್ಷಯದಿಂದ ಕ್ಷೀಣಿಸಿದ್ದ ಚಂದ್ರನು ಆ ಕ್ಷೇತ್ರದಲ್ಲಿ ತನ್ನ ಶಾಪವನ್ನು ಕಳೆದುಕೊಂಡು ಮತ್ತೆ ತನ್ನ ಕಾಂತಿಯನ್ನು ಹೊಂದಿ ಇಡೀ ಜಗತ್ತನ್ನು ಪ್ರಕಾಶಪಡಿಸಿದನು.

ಏತತ್ತು ತೀರ್ಥಪ್ರವರಂ ಪೃಥಿವ್ಯಾಂ
ಪ್ರಭಾಸನಾತ್ ತಸ್ಯ ತತಃ ಪ್ರಭಾಸಃ ॥೪೬॥

ಈ ಕ್ಷೇತ್ರವು ಭೂಮಿಯಲ್ಲಿಯೇ ಚೆನ್ನಾಗಿ ಶೋಭಿಸುವುದರಿಂದ ಇದಕ್ಕೆ ಪ್ರಭಾಸ ಎಂಬ ಹೆಸರು ಬಂತು. (ಪ್ರಭಾಸನಾತ್ ಪ್ರಭಾಸಃ)

ಜನಮೇಜಯಃ

ಕಿಮರ್ಥಂ ಭಗವಾನ್ ಸೋಮೋ ಯಕ್ಷ್ಮಣಾ ಪರ್ಯಗೃಹ್ಯತ ।
ಕಥಂ ಚ ತೀರ್ಥಪ್ರವರೇ ತಸ್ಮಿಂಶ್ಚಂದ್ರೋ ನ್ಯಮಜ್ಜತ ॥೪೭॥

ಜನಮೇಜಯ– ಭಗವಾನ್ ಚಂದ್ರನು ಯಾವ ಕಾರಣದಿಂದ ಕ್ಷಯದಿಂದ ಪೀಡಿತನಾದನು? ಈ ಶ್ರೇಷ್ಠತೀರ್ಥಕ್ಷೇತ್ರದಲ್ಲಿ ಹೇಗೆ ಮುಳುಗಿದನು?

ಕಥಮಾಪ್ಲುತ್ಯ ತಸ್ಮಿಂಶ್ಚ ಪುನರಾಪ್ಯಾಯಿತಃ ಶಶೀ ।
ಏತನ್ಮೇ ಸರ್ವಮಾಚಕ್ಷ್ವ ವಿಸ್ತರೇಣ ಮಹಾಮುನೇ ॥೪೮॥

ಈ ತೀರ್ಥದಲ್ಲಿ ಮುಳುಗಿ, ಶಾಪಮುಕ್ತನಾಗಿ ಮತ್ತೆ ಹೇಗೆ ಹಿಂದಿನಂತಾದ? ಮಹಾಜ್ಞಾನಿಯೇ! ಇವೆಲ್ಲವನ್ನೂ ನನಗೆ ಹೇಳು.

ವೈಶಂಪಾಯನಃ

ದಕ್ಷಸ್ಯ ತನಯಾ ರಾಜನ್ ಪ್ರಾದುರಾಸನ್ ವಿಶಾಂಪತೇ ।
ಸಪ್ತವಿಂಶತ್ತು ತಾಃ ಕನ್ಯಾಃ ಸೋಮಾಯ ಪ್ರದದೌ ಪ್ರಭುಃ ॥೪೯॥

ವೈಶಂಪಾಯನ– ರಾಜನೇ! ದಕ್ಷಪ್ರಜಾಪತಿಗೆ ಇಪ್ಪತ್ತೇಳು ಹೆಣ್ಣುಮಕ್ಕಳು ಹುಟ್ಟಿದರು. ಪ್ರಭುವಾದ ದಕ್ಷನು ಅವರನ್ನು ಚಂದ್ರನಿಗೆ ಮದುವೆ ಮಾಡಿಕೊಟ್ಟನು.

ನಕ್ಷತ್ರಯೋಗನಿರತಾಃ ಸಂಖ್ಯಾನಾರ್ಥಂ ಚ ತಾ ಭವನ್ ।
ಪತ್ನ್ಯೋ ವೈ ತಸ್ಯ ರಾಜೇಂದ್ರ ಸೋಮಸ್ಯ ಶುಭಕರ್ಮಣಃ ॥೫೦॥

ನಕ್ಷತ್ರಗಳೆಂದು ಗುರುತಿಸಲ್ಪಟ್ಟ ಆ ದೇವಿಯರು ಶುಭಾಶುಭಕರ್ಮಗಳನ್ನು ಚೆನ್ನಾಗಿ ಸೂಚಿಸುತ್ತಾ ಇದ್ದರು. ಶುಭಕರ್ಮವನ್ನು ಮಾಡುವ ಚಂದ್ರನ ಮಡದಿಯರಾಗಿದ್ದರು.

ತಾಸ್ತು ಸರ್ವಾ ವಿಶಾಲಾಕ್ಷ್ಯೋ ರೂಪೇಣಾಪ್ರತಿಮಾ ಭವನ್ ।
ಅತ್ಯರಿಚ್ಯತ ತಾಸಾಂ ತು ರೋಹಿಣೀ ರೂಪಸಂಪದಾ ॥೫೧॥

ವಿಶಾಲವಾದ ಕಣ್ಣುಳ್ಳ ಅವರೆಲ್ಲರೂ ರೂಪದಿಂದ ಅಸದೃಶರಾಗಿದ್ದರು. ಅವರಲ್ಲಿಯೂ ರೋಹಿಣಿಯು ತನ್ನ ರೂಪಸಂಪತ್ತಿನಿಂದ ಉಳಿದವರನ್ನು ಮೀರಿದ್ದಳು.

ತತಸ್ತಸ್ಯಾಂ ಸ ಭಗವಾನ್ ಪ್ರೀತಿಂ ಚಕ್ರೇ ನಿಶಾಕರಃ ।
ಸಾऽಸ್ಯ ಹೃದ್ಯಾ ಬಭೂವಾಥ ತಸ್ಮಾತ್ ತಾಂ ಭಜತೇ ಸದಾ ॥೫೨॥

ಆ ಕಾರಣದಿಂದ ಚಂದ್ರನು ಆ ರೋಹಿಣಿಯಲ್ಲಿ ಪ್ರೀತಿಮಾಡಿದನು. ಅವಳು ಅವನಿಗೆ ಬಹಳ ಇಷ್ಟವಾದಳು. ಯಾವಾಗಲೂ ಅವಳನ್ನೇ ಉಪಭೋಗಿಸಿದನು.

ಶಶೀ ಪುರಾ ಹಿ ರಾಜೇಂದ್ರ ರೋಹಿಣ್ಯಾಮವಸಚ್ಚಿರಮ್ ।
ತತೋऽಸ್ಯೈ ಕುಪಿತಾನ್ಯಾಸನ್ ನಕ್ಷತ್ರಾಣಿ ಮಹಾತ್ಮನೇ ॥೫೩॥

ರಾಜನೇ! ಚಂದ್ರನು ರೋಹಿಣಿಯ ಸಮೀಪದಲ್ಲಿಯೇ ಬಹಳ ಕಾಲ ವಾಸಮಾಡಿದನು. ಅದರಿಂದಾಗಿ ಉಳಿದ ನಕ್ಷತ್ರಗಳು ಅವನ ಮೇಲೆ ಕೋಪಗೊಂಡವು.

ತಾ ಗತ್ವಾ ಪಿತರಂ ಪ್ರಾಹುಃ ಪ್ರಜಾಪತಿಮನಿಂದಿತಾಃ ॥೫೪॥

ಯಾವುದೇ ಕಳಂಕವಿಲ್ಲದ ಅವರು ತಂದೆಯಾದ ದಕ್ಷಪ್ರಜಾಪತಿಯ ಬಳಿಗೆ ಬಂದು ಹೀಗೆ ಹೇಳಿದರು.

ತಾರಕಾಃ

ಸೋಮೋ ವಸತಿ ನಾಸ್ಮಾಸು ರೋಹಿಣ್ಯಾಂ ವಸತೇ ಸದಾ ॥೫೫॥

ತಾ ವಯಂ ಸಹಿತಾಃ ಸರ್ವಾಃ ತ್ವತ್ಸಕಾಶಂ ಪ್ರಜೇಶ್ವರ ।
ವತ್ಸ್ಯಾಮೋ ನಿಯತಾಹಾರಾಃ ತಪಶ್ಚರಣತತ್ಪರಾಃ ॥೫೬॥

ನಕ್ಷತ್ರಗಳು– ಚಂದ್ರನು ನಮ್ಮ ಸಮೀಪ ವಾಸ ಮಾಡುತ್ತಿಲ್ಲ. ಯಾವಾಗಲೂ ರೋಹಿಣಿಯ ಸಮೀಪದಲ್ಲಿಯೇ ವಾಸಿಸುತ್ತಾನೆ. ಪ್ರಜಾಪತಿಯೇ! ಅಂತಹ ನಾವೆಲ್ಲ ಸೇರಿ ನಿನ್ನ ಹತ್ತಿರವೇ ವಾಸಮಾಡುತ್ತೇವೆ. ಇಲ್ಲಿ ಇದ್ದುಕೊಂಡು ಆಹಾರನಿಯಮವನ್ನು ಮಾಡಿಕೊಂಡು ತಪಸ್ಸನ್ನು ಆಚರಿಸುತ್ತೇವೆ.

ವೈಶಂಪಾಯನಃ

ಶ್ರುತ್ವಾ ತು ವಚನಂ ತಾಸಾಂ ದಕ್ಷಃ ಸೋಮಮಥಾಬ್ರವೀತ್ ॥೫೭॥

ವೈಶಂಪಾಯನ– ಅವರ ಮಾತನ್ನು ಕೇಳಿ ದಕ್ಷನು ಚಂದ್ರನಿಗೆ ಹೀಗೆ ಹೇಳುತ್ತಾನೆ.

ದಕ್ಷಃ

ಸೋಮ ವರ್ತಸ್ವ ಸರ್ವಾಸು ಮಾ ತ್ವಾಽಧರ್ಮೋ ಮಹಾನ್ ಸ್ಪೃಶೇತ್ ॥

ದಕ್ಷ– ಚಂದ್ರನೇ! ಎಲ್ಲರ ಜೊತೆಗೂ ಇರು. ದೊಡ್ಡ ಪಾಪವು ನಿನಗೆ ತಾಗದಿರಲಿ.

ವೈಶಂಪಾಯನಃ

ತಾಃ ಸರ್ವಾಶ್ಚಾಬ್ರವೀದ್ ದಕ್ಷೋ ಗಚ್ಛಧ್ವಂ ಸೋಮಮಂತಿಕಮ್ ।
ಸಮಂ ವತ್ಸ್ಯತಿ ಸರ್ವಾಸು ಚಂದ್ರಮಾ ಮಮ ಶಾಸನಾತ್ ॥೫೯॥

ವೈಶಂಪಾಯನ– ದಕ್ಷನು ಆ ಎಲ್ಲ ನಕ್ಷತ್ರಗಳಿಗೆ ಹೇಳುತ್ತಾನೆ- 'ಚಂದ್ರನ ಸಮೀಪಕ್ಕೆ ಹೋಗಿರಿ. ನನ್ನ ಆದೇಶದಂತೆ ಚಂದ್ರನು ಎಲ್ಲರ ಹತ್ತಿರವೂ ಸಮಾನವಾಗಿ ವಾಸ ಮಾಡುತ್ತಾನೆ' ಎಂದು.

ವಿಸೃಷ್ಟಾಸ್ತಾಸ್ತದಾ ಜಗ್ಮುಃ ಶೀತಾಂಶೋರ್ಭವನಂ ಪ್ರತಿ ॥೬೦॥

ದಕ್ಷನಿಂದ ಕಳುಹಿಸಲ್ಪಟ್ಟ ಅವರು ಚಂದ್ರನ ಮನೆಗೆ ಹೋದರು.

ತತಸ್ತು ಸೋಮೋ ಭಗವಾನ್ ಪುನರೇವ ಮಹೀಪತೇ ।
ರೋಹಿಣ್ಯಾ ಸಾರ್ಧಮವಸತ್ ಪ್ರೀಯಮಾಣೋ ಮುಹುರ್ಮುಹುಃ ॥

ರಾಜನೇ! ಭಗವಾನ್ ಸೋಮನು ಪುನಃ ರೋಹಿಣಿಯ ಸಮೀಪದಲ್ಲಿಯೇ ಇರತೊಡಗಿದನು. ಅವಳನ್ನೇ ಮತ್ತೆ ಸಂತೋಷಪಡಿಸತೊಡಗಿದನು.

ತತಸ್ತಾಃ ಸಹಿತಾಃ ಸರ್ವಾ ಭೂಯಃ ಪಿತರಮಬ್ರುವನ್ ॥೬೨॥

ಆಗ ಆ ನಕ್ಷತ್ರಗಳು ಎಲ್ಲರೂ ಸೇರಿಕೊಂಡು ಪುನಃ ತಂದೆಗೆ ಹೇಳಿದರು.

ನಕ್ಷತ್ರಾಣಿ

ಸೋಮೋ ವಸತಿ ನಾಸ್ಮಾಸು ನಾಕರೋದ್ ವಚನಂ ತವ ।
ತವ ಶುಶ್ರೂಷಣೇ ಯುಕ್ತಾ ವತ್ಸ್ಯಾಮೋ ಹಿ ತವಾಗ್ರತಃ ॥೬೩॥

ನಕ್ಷತ್ರಗಳು– ಚಂದ್ರನು ನಮ್ಮ ಬಳಿ ವಾಸಮಾಡುತ್ತಿಲ್ಲ. ನಿನ್ನ ಮಾತನ್ನು ನಡೆಸಿಕೊಡುತ್ತಿಲ್ಲ. ನಿನ್ನ ಸೇವೆ ಮಾಡುತ್ತಾ ನಿನ್ನ ಮುಂದೆಯೇ ವಾಸಮಾಡುತ್ತೇವೆ.

ವೈಶಂಪಾಯನಃ

ತಾಸಾಂ ತು ವಚನಂ ಶ್ರುತ್ವಾ ದಕ್ಷಃ ಸೋಮಮಥಾಬ್ರವೀತ್ ॥೬೪॥

ವೈಶಂಪಾಯನ– ಅವರ ಈ ಮಾತನ್ನು ಕೇಳಿದ ದಕ್ಷನು ಸೋಮನಿಗೆ ಹೇಳಿದನು.

ದಕ್ಷಃ

ಸಮಂ ವರ್ತಸ್ವ ಸರ್ವಾಸು ಮಾ ಸ್ಮ ಶಪ್ಸ್ಯೇ ಹ ಚಂದ್ರಮಾಃ ॥೬೫॥

ದಕ್ಷ– ಚಂದ್ರನೇ! ಎಲ್ಲರ ಜೊತೆಗೆ ಸಮಾನವಾಗಿ ಇರು. ಇಲ್ಲದಿದ್ದರೆ ನಿನಗೆ ಶಾಪ ಕೊಡುವೆನು.

ವೈಶಂಪಾಯನಃ

ಅನಾದೃತ್ಯ ತು ತದ್ವಾಕ್ಯಂ ದಕ್ಷಸ್ಯ ಭಗವಾನ್ ಶಶೀ ।
ರೋಹಿಣ್ಯಾ ಸಾರ್ಧಮವಸತ್ ತತಸ್ತಾಃ ಕುಪಿತಾಃ ಪುನಃ ॥೬೬॥

ವೈಶಂಪಾಯನ– ಭಗವಾನ್ ಚಂದ್ರನು ದಕ್ಷನ ಮಾತನ್ನು ಕಡೆಗಣಿಸಿ ರೋಹಿಣಿಯ ಹತ್ತಿರದಲ್ಲಿಯೇ ವಾಸಮಾಡುತ್ತಿದ್ದನು. ಅದರಿಂದ ಉಳಿದ ನಕ್ಷತ್ರಗಳು ಪುನಃ ಕೋಪಗೊಂಡವು.

ಗತ್ವಾ ಚ ವಚನಂ ಪ್ರಾಹುಃ ಶಿರೋಭಿಃ ಪ್ರಣತಾಸ್ತದಾ ॥೬೭॥

ದಕ್ಷನ ಬಳಿಗೆ ಹೋಗಿ ತಲೆಬಾಗಿ ನಮಸ್ಕರಿಸಿ ಹೇಳಿದವು.

ನಕ್ಷತ್ರಾಣಿ

ಸೋಮೋ ವಸತಿ ನಾಸ್ಮಾಸು ತಸ್ಮಾನ್ನಃ ಶರಣಂ ಭವ ।
ರೋಹಿಣ್ಯಾಮೇವ ಭಗವಾನ್ ಸದಾ ವಸತಿ ಚಂದ್ರಮಾಃ ॥೬೮॥

ನಕ್ಷತ್ರಗಳು– ಸೋಮನು ನಮ್ಮ ಬಳಿಯಲ್ಲಿ ವಾಸಿಸುತ್ತಿಲ್ಲ. ಆದ್ದರಿಂದ ನಮಗೆ ನೀನೇ ಆಶ್ರಯವನ್ನು ಕೊಡು. ಭಗವಾನ್ ಚಂದ್ರನು ರೋಹಿಣಿ ಸಮೀಪದಲ್ಲಿಯೇ ಯಾವಾಗಲೂ ವಾಸಿಸುತ್ತಿರುತ್ತಾನೆ.

ತಸ್ಮಾನ್ನಸ್ತ್ರಾಹಿ ಸರ್ವಾ ವೈ ಯಥಾ ನಃ ಸೋಮ ಆವಿಶೇತ್ ॥೬೯॥

ಆದ್ದರಿಂದ ನಮ್ಮನ್ನೆಲ್ಲಾ ರಕ್ಷಿಸು. ಸೋಮನು ನಮ್ಮ ಸಮೀಪದಲ್ಲಿಯೂ ಇರುವಂತೆ ಮಾಡು.

ವೈಶಂಪಾಯನಃ

ತಚ್ಛ್ರುತ್ವಾ ಭಗವಾನ್ ಕ್ರುದ್ಧೋ ಯಕ್ಷ್ಮಾಣಂ ಪೃಥಿವೀಪತೇ ।
ಸಸರ್ಜ ರೋಷಾತ್ ಸೋಮಾಯ ಸ ಚೋಡುಪತಿಮಾವಿಶತ್ ॥೭೦॥

ವೈಶಂಪಾಯನ– ರಾಜನೇ! ಅದನ್ನು ಕೇಳಿದ ಭಗವಾನ್ ದಕ್ಷನು ಕ್ರೋಧದಿಂದ ಯಕ್ಷ್ಮ (ಕ್ಷಯರೋಗವನ್ನು) ಸೃಷ್ಟಿಮಾಡಿದನು. ರೋಷದಿಂದ ಅದನ್ನು ಚಂದ್ರನಿಗೆ ಪ್ರಯೋಗಿಸಿದನು. ಆ ಯಕ್ಷ್ಮವು ಚಂದ್ರನನ್ನು ಪ್ರವೇಶಿಸಿತು.

ಸ ಯಕ್ಷ್ಮಣಾಽಭಿಭೂತಃ ಸನ್ ಕ್ಷೀಯತೇಽಹರಹಃ ಶಶೀ ॥೭೧॥

ಕ್ಷಯಕ್ಕೆ ತುತ್ತಾದ ಚಂದ್ರನು ದಿನೇದಿನೇ ಕ್ಷೀಣಿಸತೊಡಗಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಏಳನೆಯ ಅಧ್ಯಾಯ

ದೇವತೆಗಳಿಂದ ಸಂತುಷ್ಟನಾದ ದಕ್ಷನ ಆದೇಶದಂತೆ ಪ್ರಭಾಸತೀರ್ಥದಲ್ಲಿ ಅವಗಾಹನ ಮಾಡಿ, ಕ್ಷಯವನ್ನು ಪರಿಹರಿಸಿಕೊಂಡಿದ್ದು. ಬಲರಾಮನು ಆ ತೀರ್ಥದಲ್ಲಿ ಮಜ್ಜನಾದಿಗಳನ್ನು ಮಾಡಿದ್ದು.

ವೈಶಂಪಾಯನಃ

ಯತ್ನಂ ಚಾಪ್ಯಕರೋದ್ ರಾಜನ್ ಮೋಕ್ಷಾರ್ಥಂ ತಸ್ಯ ಯಕ್ಷ್ಮಣಃ ॥೧॥

ಇಷ್ಟ್ವೇಷ್ಟಿಭಿರ್ಮಹಾರಾಜ ವಿಚಿತ್ರಾಭಿರ್ನಿಶಾಕರಃ ।
ನ ಚಾಮುಚ್ಯತ ಶಾಪಾದ್ವೈ ಕ್ಷಯಂ ಚೈವಾಧಿಗಚ್ಛತಿ ॥೨॥

ವೈಶಂಪಾಯನ– ರಾಜನೇ! ಚಂದ್ರನು ವಿಚಿತ್ರವಾದ ಅನೇಕ ಯಾಗಗಳನ್ನು ಮಾಡಿ ಆ ಕ್ಷಯದ ಪರಿಹಾರಕ್ಕಾಗಿ ಪ್ರಯತ್ನವನ್ನು ಕೂಡ ಮಾಡಿದನು. ಆದರೆ ದಕ್ಷಶಾಪದಿಂದಾಗಿ ಉಂಟಾದ ಕ್ಷಯವು ಕಳೆದು ಹೋಗಲಿಲ್ಲ.

ಕ್ಷೀಯಮಾಣೇ ತತಃ ಸೋಮೇ ಓಷಧ್ಯೋ ನ ಪ್ರಜಜ್ಞಿರೇ ।
ನಿರಾಸ್ವಾದರಸಾಃ ಸರ್ವಾ ಹೀನವೀರ್ಯಾಶ್ಚ ಸರ್ವಶಃ ॥೩॥

ಚಂದ್ರನು ಕ್ಷೀಣಿಸಿದಾಗ ಓಷಧಿಸಸ್ಯಗಳು ಹುಟ್ಟಲಿಲ್ಲ. ಎಲ್ಲಾ ಮರ-ಗಿಡಗಳ ರಸಗಳೂ ರುಚಿಯನ್ನು ಕಳೆದುಕೊಂಡವು. ಅವುಗಳ ಶಕ್ತಿಯೂ ಕುಂಠಿತವಾಯಿತು.

ಓಷಧೀನಾಂ ಕ್ಷಯೇ ಜಾತೇ ಪ್ರಾಣಿನಾಮಪಿ ಸಂಕ್ಷಯಃ ।
ಕೃಶಾಶ್ಚಾಸನ್ ಪ್ರಜಾಃ ಸರ್ವಾಃ ಕ್ಷೀಯಮಾಣೇ ನಿಶಾಕರೇ ॥೪॥

ಸಸ್ಯ-ಮರಗಳು ಕ್ಷೀಣಿಸಿದಾಗ ಪ್ರಾಣಿಗಳೂ ಕ್ಷೀಣಿಸ ತೊಡಗಿದವು. ಚಂದ್ರನು ಕ್ಷೀಣಿಸಿದಾಗ ಎಲ್ಲಾ ಮನುಷ್ಯರೂ ಕೃಶರಾದರು.

ತತೋ ದೇವಾಃ ಸಮಾಗಮ್ಯ ಸೋಮಮೂಚುರ್ನರಾಧಿಪ ॥೫॥

ರಾಜನೇ! ಆಗ ದೇವತೆಗಳು ಚಂದ್ರನ ಬಳಿಗೆ ಬಂದು ಹೀಗೆ ಹೇಳುತ್ತಾರೆ.

ದೇವಾಃ

ಕಿಮಿದಂ ಭವತೋ ರೂಪಮೀದೃಶಂ ಸಂಪ್ರಕಾಶತೇ ।
ಕಾರಣಂ ಬ್ರೂಹಿ ನಃ ಸರ್ವಂ ಯೇನೇದಂ ತೇ ಮಹದ್ಭಯಮ್ ॥೬॥

ಶ್ರುತ್ವಾ ತು ಕಾರಣಂ ತತ್ತ್ವತೋ ವಿಧಾಸ್ಯಾಮಸ್ತತೋ ವಯಮ್ ॥೭॥

ದೇವತೆಗಳು– ಏನಿದು? ನಿನ್ನ ರೂಪವು ಈ ರೀತಿಯಲ್ಲಿ ತೋರುತ್ತಿದೆ. ಇದಕ್ಕೇನು ಕಾರಣ? ನಿನ್ನನ್ನು ಯಾಕೆ ಈ ಭಯವು ಆವರಿಸಿಕೊಂಡಿದೆ? ಎಲ್ಲವನ್ನೂ ಹೇಳು. ಇದರ ಕಾರಣವನ್ನು ಕೇಳಿ ತಿಳಿದುಕೊಂಡು ಅನಂತರ ನಾವು ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

ವೈಶಂಪಾಯನಃ

ಏವಮುಕ್ತಃ ಪ್ರತ್ಯುವಾಚ ಸರ್ವಾಂಸ್ತಾನ್ ಶಶಲಕ್ಷಣಃ ।
ಶಾಪಸ್ಯ ಕಾರಣಂ ಚೈವ ಯಕ್ಷ್ಮಾಣಂ ಚ ತಥಾऽऽತ್ಮನಃ ॥೮॥

ವೈಶಂಪಾಯನ– ದೇವತೆಗಳ ಮಾತನ್ನು ಕೇಳಿಸಿಕೊಂಡ ಚಂದ್ರನು ಅವರಿಗೆ ಎಲ್ಲವನ್ನೂ ಹೇಳಿದನು. ಶಾಪದ ಕಾರಣವನ್ನೂ, ತನಗೆ ಬಂದ ಕ್ಷಯದ ಬಗ್ಗೆಯೂ ಹೇಳಿದನು.

ದೇವಾಸ್ತಸ್ಯ ವಚಃ ಶ್ರುತ್ವಾ ಗತ್ವಾ ದಕ್ಷಮಥಾಬ್ರುವನ್ ॥೯॥

ದೇವತೆಗಳು ಅವನ ಮಾತನ್ನು ಕೇಳಿ ದಕ್ಷನಲ್ಲಿ ಹೋಗಿ ಅವನಿಗೆ ಹೀಗೆ ಹೇಳುತ್ತಾರೆ.

ದೇವಾಃ

ಪ್ರಸೀದತು ಭವಾನ್ ಸೋಮೇ ಶಾಪೋऽಯಂ ವಿನಿವರ್ತ್ಯತಾಮ್ ।
ಅಸೌ ಹಿ ಚಂದ್ರಮಾ ಕ್ಷೀಣಃ ಕಿಂಚಿಚ್ಛೇಷಶ್ಚ ಲಕ್ಷ್ಯತೇ ॥೧೦॥

ಕ್ಷಯಂ ವ್ರಜತಿ ಶೀತಾಂಶೌ ತತ್ಪ್ರಜಾ ಆಗತಾಃ ಕ್ಷಯಮ್ ।
ವೀರುದೋಷಧಯಶ್ಚೈವ ಬೀಜಾನಿ ವಿವಿಧಾನಿ ಚ ॥೧೧॥

ತೇಷಾಂ ಕ್ಷಯೇ ಕ್ಷಯೋऽಸ್ಮಾಕಮಿತಾಸ್ಮಾಭಿಃ ಜಗಚ್ಚ ಕಿಮ್ ॥೧೨॥

ಇತಿ ಜ್ಞಾತ್ವಾ ಲೋಕಗುರೋ ಪ್ರಸಾದಂ ಕರ್ತುಮರ್ಹಸಿ ॥೧೩॥

ದೇವತೆಗಳು– ನೀನು ಚಂದ್ರನ ವಿಷಯದಲ್ಲಿ ಪ್ರಸನ್ನನಾಗು. ಅವನ ಶಾಪವು ಕಳೆದುಹೋಗಲಿ. ಈ ಚಂದ್ರನು ಬಹಳ ಕ್ಷೀಣಿಸಿದ್ದಾನೆ. ಸ್ವಲ್ಪವಷ್ಟೇ ಉಳಿದುಕೊಂಡಿದ್ದಾನೆ. ಚಂದ್ರನು ಕ್ಷಯಕ್ಕೊಳಗಾದಾಗ ಲೋಕದ ಪ್ರಜೆಗಳೆಲ್ಲರೂ

ಕ್ಷಯಗೊಂಡಿದ್ದಾರೆ. ಮರಗಳು, ಗಿಡಗಳು, ಬೇರೆ ಬೇರೆ ಬೀಜಗಳು ಎಲ್ಲವೂ ಕ್ಷೀಣಿಸಿವೆ. ನಾವೂ ಕ್ಷೀಣಿಸಿದ್ದೇವೆ. ಇನ್ನು ಜಗತ್ತಿನ ಬಗ್ಗೆ ಏನು ಹೇಳುವುದು? ಇದೆಲ್ಲವನ್ನೂ ತಿಳಿದು ಜಗದ್ಗುರುವಾದ ನೀನು ಅನುಗ್ರಹವನ್ನು ಮಾಡು.

ವೈಶಂಪಾಯನಃ

ಏವಮುಕ್ತಸ್ತು ಸಂಚಿಂತ್ಯ ಪ್ರಾಹ ವಾಕ್ಯಂ ಪ್ರಜಾಪತಿಃ ॥೧೪॥

ವೈಶಂಪಾಯನ– ದೇವತೆಗಳು ಹೀಗೆ ಹೇಳಿದಾಗ ದಕ್ಷಪ್ರಜಾಪತಿಯು ಈ ವಾಕ್ಯವನ್ನು ಹೇಳುತ್ತಾನೆ.

ದಕ್ಷಃ

ನೈತಚ್ಚಕ್ಯಂ ಮಮ ವಚೋ ವ್ಯಾವರ್ತಯಿತುಮಂಜಸಾ ।
ಹೇತುನಾ ತು ಮಹಾಭಾಗಾ ನಿವರ್ತಿಷ್ಯತಿ ಕೇನಚಿತ್ ॥೧೫॥

ದಕ್ಷ– ಮಹಾಭಾಗ್ಯವಂತರಾದ ದೇವತೆಗಳೇ! ನನ್ನ ಮಾತು ಪೂರ್ಣವಾಗಿ ಹಿಂತಿರುಗಲು ಸಾಧ್ಯವಿಲ್ಲ. ಯಾವುದಾದರೂ ಕಾರಣದಿಂದ ಅದು ಮರಳಬಹುದು.

ಸಮಂ ವರ್ತೇತ ಸರ್ವಾಸು ಶಶೀ ಭಾರ್ಯಾಸು ಸರ್ವಶಃ ।
ಅಸ್ಮಿಂಸ್ತೀರ್ಥವರೇ ಚಾಪಿ ನಿಮಜ್ಜೇಚ್ಚಶಲಕ್ಷಣಃ ॥೧೬॥

ಚಂದ್ರನು ತನ್ನ ಎಲ್ಲಾ ಪತ್ನಿಯರ ವಿಷಯದಲ್ಲಿ ಎಲ್ಲಾ ರೀತಿಯಲ್ಲಿಯೂ ಸಮವಾಗಿ ವರ್ತಿಸಬೇಕು. ಜೊತೆಗೆ ಚಂದ್ರನು ಈ ಪ್ರಭಾಸತೀರ್ಥದಲ್ಲಿ ಅವಗಾಹ (ಮುಳುಗು) ಸ್ನಾನವನ್ನು ಮಾಡಬೇಕು.

ಪುನರ್ವರ್ಧಿಷ್ಯತೇ ದೇವಾಃ ತದ್ಧಿ ಸತ್ಯಂ ವಚೋ ಮಮ ।
ಮಾಸಾರ್ಧಂ ಚ ಕ್ಷಯಂ ಸೋಮೋ ನಿತ್ಯಮೇವ ಗಮಿಷ್ಯತಿ ॥೧೭॥

ಮಾಸಾರ್ಧಂ ಚ ಪುನರ್ವೃದ್ಧಿಂ ಸತ್ಯಮೇವ ಬ್ರವೀಮಿ ವಃ ॥೧೮॥

ಚಂದ್ರದೇವನು ಪುನಃ ವೃದ್ಧಿಸುತ್ತಾನೆ. ಈ ಮಾತು ಸತ್ಯವಾದುದು. ಮುಂದೆಯೂ ನಿತ್ಯವಾಗಿ ತಿಂಗಳಲ್ಲಿ ಒಂದು ಅರ್ಧಭಾಗದಲ್ಲಿ ಪುನಃ ಕ್ಷಯವನ್ನು ಹೊಂದುತ್ತಾನೆ. ತಿಂಗಳಿನ ಇನ್ನೊಂದು ಅರ್ಧಬಾಗದಲ್ಲಿ ಪುನಃ ವೃದ್ಧಿಯನ್ನು ಹೊಂದುತ್ತಾನೆ. ನಾನು ಸತ್ಯವಾದುದನ್ನೇ ಹೇಳುತ್ತೇನೆ.

ತೀರ್ಥಯಾತ್ರಾಂ ತತಃ ಸೋಮೋ ಜಗಾಮ ಋಷಿಶಾಸನಾತ್ ।
ಪ್ರಭಾಸಂ ಪರಮಂ ತೀರ್ಥಂ ಸರಸ್ವತ್ಯಾಂ ಜಗಾಮ ಹ ॥೧೯॥

ಅನಂತರ ಋಷಿಗಳ ಆದೇಶದಂತೆ ಚಂದ್ರನು ಸರಸ್ವತೀ ನದಿಯು ಇಲ್ಲಿರುವ ಪ್ರಭಾಸತೀರ್ಥಕ್ಕೆ ತೀರ್ಥಯಾತ್ರೆಯನ್ನು ಕೈಗೊಳ್ಳುತ್ತಾನೆ.

ಅಮಾವಾಸ್ಯಾಂ ಮಹಾತೇಜಾಃ ತತ್ರ ಮಜ್ಜನ್ ಮಹಾದ್ಯುತಿಃ ।
ಲೋಕಾನ್ ಪ್ರಭಾಸಯಾಮಾಸ ಶೀತಾಂಶುತ್ವಮವಾಪ ಚ ॥೨೦॥

ಸ್ವಭಾವತಃ ತೇಜೋವಂತನಾದ ಚಂದ್ರನು ಅಮಾವಾಸ್ಯೆಯ ದಿನ ಪ್ರಭಾಸತೀರ್ಥದಲ್ಲಿ ಮುಳುಗಿ ಬಹಳ ಕಾಂತಿಯುಳ್ಳವನಾಗಿ ಲೋಕಗಳನ್ನೆಲ್ಲಾ ಬೆಳಗಿದನು. ತಂಪಾದ ಕಿರಣಗಳನ್ನು ಬೀರಿ ತಾನು ಶೀತಾಂಶು ಎಂಬುದಾಗಿ ಕರೆಯಲ್ಪಟ್ಟನು.

ದೇವಾಶ್ಚ ಸರ್ವೇ ರಾಜೇಂದ್ರ ಪ್ರಸಾದಂ ಪ್ರಾಪ್ಯ ಪುಷ್ಕಲಮ್ ।
ಸೋಮೇನ ಸಹಿತಾ ಭೂತ್ವಾ ದಕ್ಷಸ್ಯ ಪ್ರಮುಖೇ ಸ್ಥಿತಾಃ ॥೨೧॥

ರಾಜೇಂದ್ರನೇ! ಎಲ್ಲಾ ದೇವತೆಗಳು ಬಹಳ ಸಂತೋಷವನ್ನು ಹೊಂದಿ ಚಂದ್ರನೊಡನೆ ದಕ್ಷನ ಸನ್ನಿಧಾನಕ್ಕೆ ಹೋಗಿ ನಿಂತರು.

ತತಃ ಪ್ರಜಾಪತಿರ್ದೇವೋ ವಿಸಸರ್ಜಾಥ ದೇವತಾಃ ।
ಸೋಮಂ ಚ ಭಗವಾನ್ ಭೂಯಃ ಪ್ರೀತೋ ವಚನಮಬ್ರವೀತ್॥೨೨॥

ಅನಂತರ ದಕ್ಷನು ಎಲ್ಲಾ ದೇವತೆಗಳನ್ನು ಬೀಳ್ಕೊಟ್ಟನು. ಸೋಮನ ಮೇಲೆ ಪ್ರೀತನಾದ ದಕ್ಷನು ಅವನಿಗೆ ಹೀಗೆ ಹೇಳಿದನು.

ದಕ್ಷಃ

ಮಾಽವಮಂಸ್ಥಾಃ ಸ್ತ್ರಿಯಃ ಪುತ್ರ ಮಾ ಚ ವಿಪ್ರಾನ್ ಕದಾಚನ ।
ಗಚ್ಛ ಯುಕ್ತಃ ಸದಾ ಭೂತ್ವಾ ಕುರು ತ್ವಂ ಶಾಸನಂ ಮಮ ॥೨೩॥

ದಕ್ಷ- ಪುತ್ರ! ಸ್ತ್ರೀಜನರನ್ನು ಮತ್ತು ಬ್ರಾಹ್ಮಣರನ್ನು ಯಾವತ್ತೂ ಅವಮಾನಿಸಬೇಡ. ಯಾವಾಗಲೂ ಯುಕ್ತವಾದುದನ್ನೇ ಮಾಡುತ್ತಾ ನನ್ನ ಆದೇಶವನ್ನು ಪಾಲಿಸುತ್ತಿರು.

ವೈಶಂಪಾಯನಃ

ಸ ಏಷಪ್ಟೋ ಮಹಾತೇಜಾ ಜಗಾಮಾಥ ಸ್ವಮಾಲಯಮ್ ।
ಪ್ರಜಾಶ್ಚ ಮುದಿತಾ ಭೂತ್ವಾ ಈಜಿರೇ ಚ ಯಥಾಪುರಮ್ ॥೨೪॥

ವೈಶಂಪಾಯನ– ದಕ್ಷನಿಂದ ಬೀಳ್ಕೊಳ್ಳಲ್ಪಟ್ಟ ಒಳ್ಳೆಯ ಪ್ರಕಾಶವುಳ್ಳ ಚಂದ್ರನು ತನ್ನ ಮನೆಗೆ ಬಂದನು. ಜನರು ಸಂತೋಷದಿಂದ ಹಿಂದಿನ ಹಾಗೆಯೇ ಕರ್ತವ್ಯನಿರತರಾಗಿ ಚಂದ್ರನನ್ನು ಪೂಜಿಸಿದರು.

ಏವಂ ತೇ ಸರ್ವಮಾಖ್ಯಾತಂ ಯಥಾ ಶಪ್ತೋ ನಿಶಾಕರಃ ।
ಪ್ರಭಾಸಂ ಚ ಯಥಾ ತೀರ್ಥಂ ತೀರ್ಥಾನಾಂ ಪ್ರವರಂ ಹ್ಯಭೂತ್ ॥

ಚಂದ್ರನು ಯಾವರೀತಿಯಲ್ಲಿ ಶಾಪಕ್ಕೊಳಗಾದನು ಎಂಬುದನ್ನು ಎಲ್ಲವನ್ನೂ ಈ ರೀತಿಯಲ್ಲಿ ಹೇಳಿದೆನು. ಪ್ರಭಾಸತೀರ್ಥವು ತೀರ್ಥಗಳಲ್ಲಿಯೇ ಉತ್ತಮವಾದುದು ಹೇಗಾಯಿತು ಎಂಬುದನ್ನೂ ಹೇಳಿದೆನು.

ಅಮಾವಾಸ್ಯಾಂ ಮಹಾರಾಜ ಸ ನಿತ್ಯಂ ಶಶಲಕ್ಷಣಃ ।
ಸ್ನಾತ್ವಾ ಹ್ಯಾಪ್ಯಾಯತೇ ಶ್ರೀಮಾನ್ ಪ್ರಭಾಸೇ ತೀರ್ಥಸತ್ತಮೇ ॥೨೬॥

ಮಹಾರಾಜನೇ! ಇವತ್ತಿಗೂ ಕೂಡ ಪ್ರತಿ ಅಮಾವಾಸ್ಯೆಯದಿನ ಚಂದ್ರನು ಉತ್ತಮ ತೀರ್ಥವಾದ ಪ್ರಭಾಸತೀರ್ಥದಲ್ಲಿ ಸ್ನಾನಮಾಡಿ ಸಂತುಷ್ಟನಾಗುತ್ತಾನೆ.

ಅತಶ್ಚೈನಂ ಪ್ರಜಾನಂತಿ ಪ್ರಭಾಸಮಿತಿ ಭೂಮಿಪ ।
ಪ್ರಭಾಂ ಹಿ ಪರಮಾಂ ಲೇಭೇ ತಸ್ಮಿನ್ನಾಮಜ್ಯ ಚಂದ್ರಮಾಃ ॥೨೭॥

ರಾಜನೆ! ಈ ತೀರ್ಥದಲ್ಲಿ ಸ್ನಾನಮಾಡಿ ಚಂದ್ರನು ಪ್ರಭೆಯನ್ನು ಹೊಂದಿದನು ಎಂಬುದರಿಂದಾಗಿ ಎಲ್ಲರೂ ಇದನ್ನು ಪ್ರಭಾಸ ಎಂಬುದಾಗಿ ತಿಳಿಯುತ್ತಾರೆ.

ಲೋಕಾನ್ ಪ್ರಭಾಸಯಾಮಾಸ ಪುಪೋಷ ಚ ವಪುಸ್ತದಾ ।
ತತ್ರ ಸ್ನಾತ್ವಾ ಹಲೀ ರಾಮೋ ದತ್ವಾ ಪ್ರೀತೋऽಥ ದಕ್ಷಿಣಾಃ ॥೨೮॥

ಹಲಧಾರಿಯಾದ ಬಲರಾಮನು ಇಲ್ಲಿ ಸ್ನಾನವನ್ನು ಮಾಡಿ, ಸಂತೋಷದಿಂದ ದಕ್ಷಿಣೆಯನ್ನು ಕೊಟ್ಟು, ಲೋಕವನ್ನೆಲ್ಲಾ ಪ್ರಕಾಶಿಸಿದನು. ತನ್ನ ಶರೀರವನ್ನು ಪುಷ್ಟಿಗೊಳಿಸಿದನು.

ತತಸ್ತು ಚಮಸೋದ್ಭೇದಮಭೀತಸ್ತ್ವಗಮದ್ ಬಲೀ ।
ಚಮಸೋದ್ಭೇದ ಇತ್ಯೇವ ಯಂ ಜನೋಽಕಥಯದ್ ಭುವಿ ॥೨೯॥

ಅನಂತರ ಯಾವ ಕ್ಷೇತ್ರವನ್ನು ಜನರು ಚಮಸೋದ್ಭೇದ ಎಂದು ಕರೆಯುತ್ತಾರೆಯೋ ಆ ಚಮಸೋದ್ಭೇದಕ್ಷೇತ್ರಕ್ಕೆ ಬಲರಾಮನು ಭಯರಹಿತನಾಗಿ ಹೋದನು.

ತತ್ರ ದತ್ತ್ವಾ ಚ ದಾನಾನಿ ವಿಶಿಷ್ಟಾನಿ ಹಲಾಯುಧಃ ।
ಉಷಿತ್ವಾ ರಜನೀಮೇಕಾಂ ಸ್ನಾತ್ವಾ ಚ ವಿಧಿವತ್ ತದಾ ॥೩೦॥

ಅಲ್ಲಿಗೆ ಹೋಗಿ ವಿಶಿಷ್ಟವಾದ ದಾನಗಳನ್ನು ಮಾಡಿದನು. ಒಂದು ರಾತ್ರಿ ಅಲ್ಲಿಯೇ ವಾಸಮಾಡಿ ವಿಧಿವತ್ತಾಗಿ ಸ್ನಾನ ಮಾಡಿದನು.

ಉದಪಾನಮಥಾಗಚ್ಛತ್ ತ್ವರಾವಾನ್ ಕೇಶವಾಗ್ರಜಃ ।
ಆದ್ಯಂ ಸ್ವಸ್ತ್ಯಯನಂ ಚೈವ ತತ್ರಾವಾಪ್ಯ ಮಹತ್ಫಲಮ್ ॥೩೧॥

ಶ್ರೀಕೃಷ್ಣನ ಅಣ್ಣನಾದ ಬಲರಾಮನು ಅನಂತರ ಉದಪಾನ ಕ್ಷೇತ್ರಕ್ಕೆ ಶೀಘ್ರವಾಗಿ ಹೋದನು. ಅಲ್ಲಿ ಉತ್ತಮವಾದ ಮಾಂಗಲ್ಯವನ್ನೂ ಮಹಾಫಲವನ್ನೂ ಪಡೆದನು.

ಸ್ನಿಗ್ಧಾನಿ ತತ್ರ ವಸ್ತೂನಿ ದ್ವಿಜೇಭ್ಯಶ್ಚ ತದಾ ದದೌ ।
ತತ್ರ ದತ್ತ್ವಾ ಚ ದಾನಾನಿ ವಾಸಾಂಸಿ ಚ ಸಹಸ್ರಶಃ ॥೩೨॥

ಅಲ್ಲಿ ಸ್ನೇಹಯುಕ್ತವಾದ ದ್ರವಪದಾರ್ಥಗಳನ್ನು ಬ್ರಾಹ್ಮಣರಿಗೆ ದಾನಮಾಡಿದನು. ಸಾವಿರಾರು ವಸ್ತ್ರದಾನವನ್ನೂ ಮಾಡಿದನು.

ಗವಾಂ ತಥಾ ಸಹಸ್ರಾಣಿ ಹೇಮಶೃಂಗವತಾಂ ಪುನಃ ॥೩೩॥

ಬಂಗಾರದ ಕೊಂಬಿನ ಅಲಂಕಾರವುಳ್ಳ ಸಾವಿರಾರು ಹಸುಗಳನ್ನು ದಾನಮಾಡಿದನು.

ಹಯಾಂಶ್ಚ ನಾನಾವಿಧದೇಶಜಾತಾನ್
ಅನ್ಯಾನಿ ದಾನಾನಿ ತದಾ ದ್ವಿಜೇಭ್ಯಃ ।
ರತ್ನಾನಿ ಮುಕ್ತಾಮಣಿ ವಿದ್ರುಮಾಂಶ್ಚ
ಶೃಂಗೀಸುವರ್ಣಂ ರಜತಂ ಚ ಶುದ್ಧಮ್ ॥೩೪॥

ಬೇರೆ ಬೇರೆ ದೇಶಗಳಲ್ಲಿ ಜನಿಸಿದ ಕುದುರೆಗಳನ್ನು, ರತ್ನಗಳನ್ನು, ಮುತ್ತುಗಳನ್ನು, ಮಣಿಗಳನ್ನು, ಹವಳಗಳನ್ನು, ಅಲಂಕಾರಕ್ಕೆ ಬಳಸುವ ಬಂಗಾರವನ್ನು, ಪರಿಶುದ್ಧವಾದ ಬೆಳ್ಳಿಯನ್ನು ಕಬ್ಬಿಣದ, ತಾಮ್ರದ ಪಾತ್ರೆಗಳನ್ನು ಉತ್ತಮ ಬ್ರಾಹ್ಮಣರಿಗೆ ದಾನ ಮಾಡಿದನು.

ಅಯಸ್ಮಯಂ ತಾಮ್ರಮಯಂ ಚ ಭಾಂಡಂ
ದದೌ ದ್ವಿಜಾತಿಪ್ರವರೇಷು ರಾಮಃ ।
ಏವಂ ಸ ವಿತ್ತಂ ಪ್ರದದೌ ಮಹಾತ್ಮಾ ।
ಸಮಸ್ತತೀರ್ಥಪ್ರವರೇಷು ಭೂರಿ ॥೩೫॥

ಬಲರಾಮನು ಉತ್ತಮ ಬ್ರಾಹ್ಮಣರಿಗೆ ಕಬ್ಬಿಣದ ಪಾತ್ರೆಗಳನ್ನು, ತಾಮ್ರದ ಪಾತ್ರೆಗಳನ್ನು ದಾನಮಾಡಿದನು. ಹೀಗೆ ಎಲ್ಲಾ ತೀರ್ಥಕ್ಷೇತ್ರಗಳಲ್ಲಿಯೂ ಬಹಳವಾದ ಸಂಪತ್ತನ್ನು ದಾನಮಾಡಿದನು.

ಯಯೌ ಕ್ರಮೇಣ ಚ ಪುನಃ ಕುರುಕ್ಷೇತ್ರಂ ಮುದಾ ಯುತಃ ॥೩೬॥

ಸ್ನಿಗ್ಧತ್ವಾದೋಷಧೀನಾಂ ಚ ಭೂಮೇಶ್ಚ ಜನಮೇಜಯ ॥೩೭॥

ಜಾನಂತಿ ಸಿದ್ಧಾ ಮುನಯೋ ನಿಗೂಢಾಂ ತಾಂ ಸರಸ್ವತೀಮ್ ॥೩೮॥

ಕ್ರಮವಾಗಿ ಪುನಃ ಕುರುಕ್ಷೇತ್ರಕ್ಕೆ ಹೋದನು. ಅಲ್ಲಿರುವ ಸಸ್ಯಗಳು ತೇವಯುಕ್ತವಾಗಿ ಸ್ನಿಗ್ಧವಾಗಿರುವುದರಿಂದ ಮತ್ತು ಭೂಮಿಯೂ ತೇವಯುಕ್ತವಾಗಿರುವುದರಿಂದ ಅಲ್ಲಿ ಸರಸ್ವತಿಯು ಭೂಮಿಯೊಳಗೆ ಗುಪ್ತಗಾಮಿನಿಯಾಗಿದ್ದಾಳೆ ಎಂದು ಯೋಗಸಿದ್ಧಿಯುಳ್ಳ ಮುನಿಗಳು ತಿಳಿಯುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಗದಾಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ಏಕತ, ದ್ವಿತ, ತ್ರಿತನಾಮಕ ಬ್ರಾಹ್ಮಣರ ಕಥೆ

ವೈಶಂಪಾಯನಃ

ತಸ್ಮಾನ್ನದೀಗತಂ ಚಾಪಿ ಉದಪಾನಂ ಮಹಾತ್ಮನಃ ।
ತ್ರಿತಸ್ಯ ಚ ಮಹಾರಾಜ ಜಗಾಮಾಥ ಹಲಾಯುಧಃ ॥೧॥

ವೈಶಂಪಾಯನ– ಮಹಾರಾಜನೇ! ಅಲ್ಲಿ ನದಿಮಧ್ಯದಲ್ಲಿ ಮಹಾತ್ಮನಾದ ತ್ರಿತ ಎಂಬ ಬ್ರಾಹ್ಮಣನ ನೀರಿನ ಬಾವಿಯಿತ್ತು. ಕುರುಕ್ಷೇತ್ರದಿಂದ ಬಲರಾಮನು ಆ ಉದಪಾನ (ಬಾವಿ) ಇದ್ದಲ್ಲಿಗೆ ಹೋದನು.

ತತ್ರ ದತ್ವಾ ಬಹು ದ್ರವ್ಯಂ ಪೂಜಯಿತ್ವಾ ಚ ವೈ ದ್ವಿಜಾನ್ ।
ಉಪಸ್ಪೃಶ್ಯ ತು ತತ್ರೈವ ಪ್ರಹೃಷ್ಟೋ ಮುಸಲಾಯುಧಃ ॥೨॥

ಅಲ್ಲಿ ಬಲರಾಮನು ಆಚಮನ ಮಾಡಿ, ಬ್ರಾಹ್ಮಣರನ್ನು ಆರಾಧಿಸಿ, ಬಹಳವಾದ ದ್ರವ್ಯಗಳನ್ನು ದಾನಮಾಡಿ ಸಂತುಷ್ಟನಾದನು.

ತತ್ರ ಧರ್ಮಪರೋ ಹ್ಯಾಸೀತ್ ತ್ರಿತಸ್ತು ಸುಮಹಾತಪಾಃ ।
ಕೂಪೇ ಚ ವಸತಾ ತೇನ ಸೋಮಃ ಪೀತೋ ಮಹಾತ್ಮನಾ ॥೩॥

ಮಹಾತಪಸ್ವಿಯಾದ ತ್ರಿತನು ಅಲ್ಲಿ ವಾಸಮಾಡಿದ್ದನು. ಬಾವಿಯಲ್ಲಿ ವಾಸಮಾಡುತ್ತಿದ್ದ ಅವನು ಹಿಂದೆ ಯಾಗದ ಸೋಮರಸವನ್ನು ಪಾನಮಾಡಿದ್ದನು.

ತತ್ರ ಚೈನಂ ಸಮುತ್ಸೃಜ್ಯ ಭ್ರಾತರೌ ಜಗ್ಮತುರ್ಗೃಹಾನ್ ।
ತತಸ್ತು ತೌ ಶಶಾಪಾಥ ತ್ರಿತೋ ಬ್ರಾಹ್ಮಣಪುಂಗವಃ ॥೪॥

ಈ ತ್ರಿತನನ್ನು ಅವನ ಸಹೋದರರಿಬ್ಬರು ಇಲ್ಲಿಯೇ ಬಾವಿಯಲ್ಲಿ ಬಿಟ್ಟು ಮನೆಗೆ ಹೋಗಿದ್ದರು. ಅದಕ್ಕಾಗಿ ಬ್ರಾಹ್ಮಣಶ್ರೇಷ್ಠನಾದ ತ್ರಿತನು ಅವರಿಗೆ ಶಾಪವನ್ನು ಕೊಟ್ಟಿದ್ದನು.

ಜನಮೇಜಯಃ

ಉದಪಾನಂ ಕಥಂ ಬ್ರಹ್ಮನ್ ಕಥಂ ಚ ಸುಮಹಾತಪಾಃ ।
ಪತಿತಃ ಕಿಂಚ ಸಂತ್ಯಕ್ತೋ ಭ್ರಾತೃಭ್ಯಾಂ ದ್ವಿಜಸತ್ತಮ ॥೫॥

ಕೂಪೇ ಕಥಂ ಚ ಹಿತ್ವೈನಂ ಜಗ್ಮತುರ್ಭ್ರಾತರೌ ಗೃಹಾನ್ ।
ಏತದಾಚಕ್ಷ್ವ ಮೇ ಬ್ರಹ್ಮನ್ ಯದಿ ಶ್ರಾವ್ಯಂ ಹಿ ಮನ್ಯಸೇ ॥೬॥

ಜನಮೇಜಯ– ಬ್ರಹ್ಮಜ್ಞಾನಿಯೇ! ವಿಪ್ರೋತ್ತಮನೇ! ಅಲ್ಲಿ ಬಾವಿಯು ಹೇಗೆ ಇತ್ತು? ಮಹಾತಪಸ್ವಿಯಾದ ತ್ರಿತನು ಅದರೊಳಗೆ ಹೇಗೆ ಬಿದ್ದನು? ಮತ್ತು ಅವನನ್ನು ಅವನ ಸಹೋದರರು ಬಾವಿಯಲ್ಲಿಯೇ ಏಕೆ ಬಿಟ್ಟು ಹೋದರು? ಇದೆಲ್ಲವೂ ನನಗೆ ಕೇಳಲು ಯೋಗ್ಯವಾಗಿದೆಯೆಂದು ನೀನು ತಿಳಿಯುವುದಾದರೆ ನನಗೆ ಹೇಳು.

ವೈಶಂಪಾಯನಃ

ಆಸನ್ ಪೂರ್ವಯುಗೇ ರಾಜನ್ ಮುನಯೋ ಭ್ರಾತರಸ್ತ್ರಯಃ ।
ಏಕತಶ್ಚ ದ್ವಿತಶ್ಚೈವ ತ್ರಿತಶ್ಚಾದಿತ್ಯಸನ್ನಿಭಾಃ ॥೭॥

ಸರ್ವೇ ಪ್ರಜಾಪತಿಸಮಾಃ ಪ್ರಜಾಪತಯ ಏವ ಚ ।
ಬ್ರಹ್ಮಲೋಕಜಿತಾಃ ಸರ್ವೇ ತಪಸಾ ಬ್ರಹ್ಮವಾದಿನಃ ॥೮॥

ರಾಜನೇ! ಹಿಂದಿನ ಯುಗದಲ್ಲಿ ಮೂವರು ಸಹೋದರರಾದ ಮುನಿಗಳು ಇದ್ದರು. ಅವರ ಹೆಸರು ಏಕ, ದ್ವಿತ ಮತ್ತು ತ್ರಿತ ಎಂಬುದಾಗಿತ್ತು. ಅವರೆಲ್ಲರೂ ಸೂರ್ಯನ ಹಾಗೆ ಕಾಂತಿಯುಳ್ಳವರಾಗಿದ್ದರು. ಅವರೆಲ್ಲರೂ ಪ್ರಜಾಪತಿಗೆ ಸಮಾನರಾಗಿದ್ದರು. ಒಳ್ಳೆಯ ಸಂತತಿಯನ್ನು ಹೊಂದಿದ್ದರು. ತಪಸ್ಸಿನಿಂದ ಬ್ರಹ್ಮಲೋಕವನ್ನೂ ಹೊಂದಿದ್ದರು. ಎಲ್ಲರೂ ಬ್ರಹ್ಮವಾದಿಗಳು ಆಗಿದ್ದರು.

ತೇಷಾಂ ತು ತಪಸಾ ಪ್ರೀತೋ ನಿಯಮೇನ ಯಮೇನ ಚ ।
ಅಭವದ್ ಗೌತಮೋ ನಿತ್ಯಂ ಪಿತಾ ಧರ್ಮರತಃ ಸದಾ ॥೯॥

ಯಾವಾಗಲೂ ಧರ್ಮದಲ್ಲಿಯೇ ಆಸಕ್ತನಾದ ಅವರ ತಂದೆ ಗೌತಮನು ಅವರ ತಪಸ್ಸು, ಯಮ, ನಿಯಮಗಳಿಂದ ಸಂತುಷ್ಟರಾದನು.

ಸ ತು ದೀರ್ಘೇಣ ಕಾಲೇನ ತೇಷಾಂ ಪ್ರೀತಿಮವಾಪ್ಯ ಚ ।
ಜಗಾಮ ಭಗವನ್ ಸ್ಥಾನಮನುರೂಪಮಿವಾತ್ಮನಃ ॥೧೦॥

ಗೌತಮನಾದರೂ ತುಂಬಾ ಸಮಯದ ತನಕ ಅವರ ಪ್ರೀತಿಯನ್ನು ಪಡೆದು ತನಗೆ ಯೋಗ್ಯ ಸ್ಥಾನವಾದ ಸ್ವರ್ಗಲೋಕಕ್ಕೆ ಹೋದನು.

ರಾಜಾನಸ್ತಸ್ಯ ಯೇ ಚಾಪಿ ಯಾಜ್ಯಾ ಹ್ಯಾಸನ್ ಮಹಾತ್ಮನಃ ।
ತೇ ಸರ್ವೇ ಸ್ವರ್ಗತೇ ತಸ್ಮಿನ್ ತಸ್ಯ ಪುತ್ರಾನಪೂಜಯನ್ ॥೧೧॥

ಆ ಗೌತಮನ ಮಾರ್ಗದರ್ಶನದಲ್ಲಿ ಯಾವ ರಾಜರುಗಳು ಯಾಗ-ಯಜ್ಞವನ್ನು ಮಾಡುತ್ತಿದ್ದರೋ, ಗೌತಮನು ಸ್ವರ್ಗಸ್ಥನಾದ ಮೇಲೆ ಆ ರಾಜರೆಲ್ಲರೂ ಅವನ ಮಕ್ಕಳನ್ನು ಪೂಜಿಸತೊಡಗಿದರು.

ತೇಷಾಂ ತು ಕರ್ಮಣಾ ರಾಜನ್ ತಪಸಾऽಧ್ಯಯನೇನ ಚ ।
ತ್ರಿತಃ ಶ್ರೇಷ್ಠತ್ವಮಾಪೇದೇ ಯಥಾ ಚಾಸ್ಯ ಪಿತಾ ತಥಾ ॥೧೨॥

ರಾಜನೇ! ಆ ಮೂವರಲ್ಲಿ ತ್ರಿತನು ತನ್ನ ಕರ್ಮ, ತಪಸ್ಸು ಮತ್ತು ಅಧ್ಯಯನದಿಂದ ಅವನ ತಂದೆಯಂತೆಯೇ ಶ್ರೇಷ್ಠತ್ವವನ್ನು ಹೊಂದಿದನು.

ತೇ ಸ್ಮ ಸರ್ವೇ ಮಹಾಭಾಗಾ ಮುನಯಃ ಪುಣ್ಯಲಕ್ಷಣಾಃ ।
ಅಪೂಜಯನ್ ಮಹಾಭಾಗಂ ತಥಾ ವಿದ್ವಾಂಸ ಏವ ಚ ॥೧೩॥

ಪುಣ್ಯವಂತರಾದ ಮಹಾಬಾಗ್ಯಶಾಲಿ ಮುನಿಗಳು ಮತ್ತು ವಿದ್ವಾಂಸರು ಆ ಮಹಾಭಾಗ್ಯಶಾಲಿಯಾದ ತ್ರಿತನನ್ನು ಪೂಜಿಸಿದರು.

ಕದಾಚಿದ್ಧಿ ತತೋ ರಾಜನ್ ಭ್ರಾತರಾವೇಕತದ್ವಿತೌ ।
ಯಜ್ಞಾರ್ಥಂ ಚಕ್ರತುಶ್ಚಿಂತಾಂ ಧನಾರ್ಥಂ ಚ ವಿಶೇಷತಃ ॥೧೪॥

ತಯೋಶ್ಚಿಂತಾ ಸಮಭವತ್ ತಂ ಪ್ರಗೃಹ್ಯ ಪರಂತಪ ॥೧೫॥

ರಾಜನೇ! ಅನಂತರ ಒಂದು ಸಲ ಅವನ ಸಹೋದರರಾದ ಏಕ ಮತ್ತು ದ್ವಿತರು ಯಜ್ಞಕ್ಕಾಗಿ ಮತ್ತು ವಿಶೇಷವಾಗಿ ಸಂಪತ್ತಿಗಾಗಿ ಚಿಂತೆಯನ್ನು ಮಾಡಿದರು.

ಯಾಜ್ಯಾನ್ ಸರ್ವಾನುಪಾದಾಯ ಪರಿಗೃಹ್ಯ ಪಶೂಂಸ್ತತಃ ।
ಸೋಮಂ ಪಾಸ್ಯಾಮಹೇ ಹೃಷ್ಟಾಃ ಪ್ರಾಪ್ಯ ಯಜ್ಞಂ ಮಹಾಫಲಮ್ ॥

ಅವರಿಗೆ ಒಂದು ವಿಚಾರವು ಉಂಟಾಯಿತು. ಈ ತ್ರಿತನನ್ನು ಆಶ್ರಯಿಸಿ ಯಾಗ ಮಾಡಿಸುವವರನ್ನು ಸಂಗ್ರಹಿಸೋಣ. ಅವರಿಂದ ಪಶುಗಳನ್ನು ತೆಗೆದುಕೊಂಡು

ಸೋಮಪಾನವನ್ನು ಮಾಡುವೆವು. ಆ ಮೂಲಕ ಯಾಗದ ಮಹತ್ಫಲವನ್ನು ಪಡೆಯುವೆವು.

ಚಕ್ರುಶ್ಚೈವ ತದಾ ರಾಜನ್ ಭ್ರಾತರಸ್ತ್ರಯ ಏವ ಚ ॥೧೭॥

ರಾಜನೇ! ಆ ಮೂರು ಸಹೋದರರು ಹಾಗೆಯೇ ಮಾಡಿದರು.

ತಥಾ ಹಿ ತೇ ಪರಿಕ್ರಮ್ಯ ಯಾಜ್ಯಾನ್ ಸರ್ವಾನ್ ಪಶೂನ್ ಪ್ರತಿ ।
ಯಾಜಯಿತ್ವಾ ತತೋ ಯಾಜ್ಯಾಲ್ಲಬ್ಧ್ವಾ ಚ ಸುಬಹೂನ್ ಪಶೂನ್ ॥

ಆಲೋಚಿಸಿದ ಪ್ರಕಾರವೇ ಯಜಮಾನರಿಗಾಗಿ ಮತ್ತು ಪಶುಗಳಿಗಾಗಿ ಸುತ್ತಾಡಿ ತುಂಬಾ ಯಜಮಾನರನ್ನು ಸಂಪಾದಿಸಿ ಯಾಗಗಳನ್ನು ಮಾಡಿಸಿದರು. ಬಹಳವಾಗಿ ಪಶುಗಳನ್ನೂ ಸಂಪಾದಿಸಿದರು.

ಯಾಜ್ಯೇನ ಕರ್ಮಣಾ ತೇನ ಪ್ರತಿಗೃಹ್ಯ ವಿಧಾನತಃ ।
ಪ್ರಾಚೀಂ ದಿಶಂ ಮಹಾರಾಜ ಆಜಗ್ಮುಸ್ತೇ ಮಹರ್ಷಯಃ ॥೧೯॥

ವಿಧಿಪ್ರಕಾರ ಯಾಗಕರ್ಮಗಳಿಂದ ತಮಗೆ ಬೇಕಾದ ಪಶುಸಂಪತ್ತನ್ನು ಪಡೆದುಕೊಂಡು ಆ ಮಹರ್ಷಿಗಳು ಪೂರ್ವದಿಕ್ಕಿಗೆ ಹೋದರು.

ತ್ರಿತಸ್ತೇಷಾಂ ಮಹಾರಾಜ ಪುರಸ್ತಾದ್ ಯಾತಿ ಹೃಷ್ಟವತ್ ।
ಏಕತಶ್ಚ ದ್ವಿತಶ್ಚೈವ ಪೃಷ್ಠತಃ ಕಾಲಯನ್ ಪಶೂನ್ ॥೨೦॥

ಮಹಾರಾಜನೇ! ಸಂತುಷ್ಟನಾದ ತ್ರಿತನು ಅವರೆಲ್ಲರ ಮುಂದುಗಡೆಯಿಂದ ಹೋಗುತ್ತಿದ್ದನು. ಏಕತ ಮತ್ತು ದ್ವಿತರು ಹಿಂದುಗಡೆಯಿಂದ ಪಶುಗಳನ್ನು ನಿಯಂತ್ರಿಸುತ್ತಾ ಬರುತ್ತಿದ್ದರು.

ತಯೋಶ್ಚಿಂತಾ ಸಮಭವದ್ ಏಕತಸ್ಯ ದ್ವಿತಸ್ಯ ಚ ।
ಕಥಂ ನು ಸ್ಯುರಿಮಾ ಗಾವ ಆವಾಭ್ಯಾಂ ಚ ತ್ರಿತಂ ವಿನಾ ॥೨೧॥

ಅವರಿಬ್ಬರಿಗೆ ಒಂದು ಆಲೋಚನೆ ಬಂತು ಈ ಹಸುಗಳು ನಮ್ಮಿಬ್ಬರ ಬಳಿಯೇ ಇರಬೇಕು. ತ್ರಿತನಿಗೆ ಇವು ಸೇರಬಾರದು. ಇದಕ್ಕೆ ಏನು ಮಾಡಬೇಕು? ಎಂದು.

ತಾವನ್ಯೋನ್ಯಂ ಸಮಾಭಾಷ್ಯ ಏಕತಶ್ಚ ದ್ವಿತಶ್ಚ ಹ ।
ಯದೂಚತುರ್ಮಿಥಃ ಪಾಪೌ ತನ್ನಿಬೋಧ ಜನಾಧಿಪ ॥೨೨॥

ರಾಜನೇ! ಪಾಪಿಗಳಾದ ಏಕತ ಮತ್ತು ದ್ವಿತರು ತಮ್ಮಲ್ಲಿಯೇ ಪರಸ್ಪರವಾಗಿ ಏನನ್ನು ಮಾತಾಡಿಕೊಂಡರೆಂಬುದನ್ನು ಕೇಳು.

ಏಕತದ್ವಿತೌ

ತ್ರಿತೋ ಯಜ್ಞೇಷು ಕುಶಃ ತ್ರಿತೋ ವೇದೇಷು ನಿಷ್ಠಿತಃ ।
ಅನ್ಯಾಸ್ತ್ರಿತೋ ಬಹುತರಾ ಗಾವಃ ಸಮುಪಲಪ್ಸ್ಯತೇ ॥೨೩॥

ಏಕತ-ದ್ವಿತರು– ತ್ರಿತನು ಯಜ್ಞದಲ್ಲಿ ನಿಪುಣನಾಗಿದ್ದಾನೆ. ವೇದಗಳಲ್ಲಿ ನಿಷ್ಣಾತನಾಗಿದ್ದಾನೆ. ತ್ರಿತನು ಬೇರೆ ಇನ್ನೂ ಅನೇಕ ಪಶುಗಳನ್ನು ಪಡೆಯುವನು.

ತೇನಾವಾಂ ಸಹಿತೌ ಭೂತ್ವಾ ಗಾಃ ಪ್ರಗೃಹ್ಯ ಪ್ರಯಾವಹೇ ।
ತ್ರಿತೋಽಪಿ ಗಚ್ಛೇತ್ ತಂ ಕಾಮಂ ಭ್ರಾತೃಭ್ಯಾಂ ವೈ ವಿನಾಕೃತಃ ॥೨೪॥

ಆದ್ದರಿಂದ ನಾವಿಬ್ಬರು ಒಟ್ಟುಸೇರಿ ಈ ಪಶುಗಳನ್ನು ತೆಗೆದುಕೊಂಡು ಹೋಗುವ. ತ್ರಿತನೂ ಕೂಡ ಸಹೋದರರ ಜೊತೆಗೆ ಹೋಗದೆ ನಮ್ಮಿಂದ ಬೇರೆಯಾಗಿ ಇಷ್ಟಬಂದ ದೇಶಕ್ಕೆ ಹೋಗಲಿ.

ವೈಶಂಪಾಯನಃ

ತೇಷಾಮಾಗಚ್ಛತಾಂ ರಾತ್ರೌ ಪಥಿ ಸ್ಥಾನೇ ವೃಕೋಽಭವತ್ ।
ತಥಾ ಕೂಪೋಽವಿದೂರೋಽಭೂತ್ ಸರಸ್ವತ್ಯಾಸ್ತಟೇಗತಃ ॥೨೫॥

ವೈಶಂಪಾಯನ– ರಾತ್ರಿಯ ಹೊತ್ತು ನಡೆದು ಹೋಗುತ್ತಿದ್ದಾಗ ದಾರಿಮಧ್ಯದಲ್ಲಿ ತೋಳವೊಂದು ಬಂದಿತು. ಸರಸ್ವತಿನದೀತೀರದಲ್ಲಿ ಇದ್ದ ಬಾವಿಯೊಂದು ಅವರಿಗೆ ಬಹಳ ಹತ್ತಿರವಾಯಿತು.

ಅಥ ತ್ರಿತೋ ವೃಕಂ ದೃಷ್ಟ್ವಾ ಪಥಿ ತಿಷ್ಠಂತಮಗ್ರತಃ ।
ತದ್ಭಯಾದಪಸರ್ಪನ್ ವೈ ತಸ್ಮಿನ್ ಕೂಪೇ ಪಪಾತ ಹ ॥೨೬॥

ಅಗಾಧೇ ಸುಮಹಾಘೋರೇ ಸರ್ವಭೂತಭಯಂಕರೇ ॥೨೭॥

ಮುಂದುಗಡೆ ದಾರಿಯಲ್ಲಿ ನಿಂತಿರುವ ತೋಳವನ್ನು ನೋಡಿದ ತ್ರಿತನು ಭಯದಿಂದ ಸರಿಯುತ್ತಾ ಇದ್ದಾಗ ಅವಸರವಾಗಿ ಬಾವಿಯಲ್ಲಿ ಬಿದ್ದನು. ಆ ಬಾವಿಯು ಬಹಳ ಆಳವಾಗಿತ್ತು. ಎಲ್ಲಾ ಪ್ರಾಣಿಗಳಿಗೂ ತುಂಬಾ ಭಯವನ್ನು ಹುಟ್ಟಿಸುತ್ತಿತ್ತು. ತುಂಬಾ ಘೋರವಾಗಿದ್ದಿತು.

ತ್ರಿತಸ್ತತೋ ಮಹಾಭಾಗಃ ಕೂಪಸ್ಥೋ ಮುನಿಸತ್ತಮಃ ।
ಆರ್ತನಾದಂ ಮಹಚ್ಚಕ್ರಂ ತತಃ ಶುಶ್ರುವತುರ್ಮುನೀ ॥೨೮॥

ಉತ್ತಮಮುನಿಯಾದ ತ್ರಿತನು ಬಾವಿಯಲ್ಲಿದ್ದುಕೊಂಡು ರಕ್ಷಣೆಗಾಗಿ ಜೋರಾಗಿ ಬೊಬ್ಬೆಯನ್ನು ಹಾಕುತ್ತಾನೆ. ಅದನ್ನು ಉಳಿದಿಬ್ಬರು ಮುನಿಗಳು ಕೇಳಿಸಿಕೊಂಡರು.

ತಂ ಜ್ಞಾತ್ವಾ ಪತಿತಂ ಕೂಪೇ ಭ್ರಾತರಾವೇಕತದ್ವಿತೌ ।
ವೃಕತ್ರಾಸಾಚ್ಚ ಲೋಭಾಚ್ಚ ತಮುತ್ಸೃಜ್ಯ ಪ್ರಜಗ್ಮತುಃ ।
ಭ್ರಾತೃಭ್ಯಾಂ ಪಶುಲುಬ್ಧಾಭ್ಯಾಮುತ್ಸೃಷ್ಟಃ ಸುಮಹಾತಪಾಃ ॥೨೯॥

ತ್ರಿತನು ಬಾವಿಯಲ್ಲಿ ಬಿದ್ದಿರುವುದನ್ನು ತಿಳಿದ ಆ ಏಕತ ಮತ್ತು ದ್ವಿತ ಸಹೋದರರು ತೋಳಕ್ಕೆ ಹೆದರಿ ಮತ್ತು ಪಶುಗಳ ಮೇಲಿನ ಆತ್ಯಾಸೆಯಿಂದಾಗಿ ತ್ರಿತನನ್ನು ಬಿಟ್ಟು ಬೇಗನೇ ಹೋದರು.

ಉದಪಾನೇ ತದಾ ರಾಜನ್ ನಿರ್ಜಲೇ ಪಾಂಸುಸಂವೃತೇ ॥೩೦॥

ತ್ರಿತ ಆತ್ಮಾನಮಾಲಕ್ಷ್ಯ ವೀರುತ್ಗುಂಜತೃಣಾವೃತೇ ।
ನಿಮಗ್ನೋ ಭರತಶ್ರೇಷ್ಠ ಪಾಪಕೃನ್ನರಕೇ ಯಥಾ ॥೩೧॥

ಸ ಬುದ್ಧ್ಯಾಗಣಯತ್ ಪ್ರಾಜ್ಞೋ ಮೃತ್ಯೋರ್ಭೀತೋ ಹ್ಯಸೋಮಪಃ ।
ಸೋಮಃ ಕಥಂ ನು ಪಾತವ್ಯ ಇಹಸ್ಥೇನ ಮಯಾ ಭವೇತ್ ॥೩೨॥

ರಾಜನೇ! ಬಾವಿಯಲ್ಲಿ ನೀರು ಸ್ವಲ್ಪವೂ ಇರಲಿಲ್ಲ. ಧೂಳು ತುಂಬಿಕೊಂಡಿತ್ತು. ಗಿಡಗಂಟಿಗಳು ಪೂರ್ಣವಾಗಿ ಆವರಿಸಿಕೊಂಡಿದ್ದವು. ಸಹೋದರರಿಬ್ಬರೂ ಪಶುಗಳ ಮೇಲಿನ ಲೋಭದಿಂದ ತ್ರಿಕನನ್ನು ಬಿಟ್ಟು ಹೋಗಿದ್ದರು. ಆಗ ಪಾಪಿಯು ನರಕದಲ್ಲಿ ಮುಳುಗುವಂತೆ ತಾನು ಇಂತಹ ಬಾವಿಯಲ್ಲಿ ಮುಳುಗುತ್ತಿರುವುದನ್ನು ತಿಳಿದುಕೊಂಡ

ತ್ರಿಕನಿಗೆ ಪಾನಕ್ಕೆ ಸೋಮವೂ ಸಿಗದಿದ್ದುದರಿಂದ ಮತ್ತು ಮರಣದ ಭಯಕ್ಕೆ ಒಳಗಾಗಿ ತನ್ನ ಬುದ್ಧಿಯಲ್ಲಿ ಹೀಗೆ ಆಲೋಚಿಸಿದನು- ''ನಾನು ಇಲ್ಲಿ ಬಾವಿಯೊಳಗಿದ್ದುಕೊಂಡೇ ಸೋಮವನ್ನು ಹೇಗೆ ಕುಡಿಯಲಿ?'' ಎಂದು

ಸ ಏವಮಭಿಸಂಚಿಂತ್ಯ ತಸ್ಮಿನ್ ಕೂಪೇ ಮಹಾತಪಾಃ ॥೩೩॥

ದದರ್ಶ ವೀರುಧಾಂ ಜಾಲಂ ಲಂಬಮಾನಂ ಯದೃಚ್ಛಯಾ ॥೩೪॥

ಹೀಗೆ ಆಲೋಚಿಸಿದ ಮಹಾತಪಸ್ವಿಯಾದ ತ್ರಿಕನು ಯದೃಚ್ಛಯಾ ಅಲ್ಲಿ ಜೋತು ಬಿದ್ದಿದ್ದ ಬಳ್ಳಿಗಳ ರಾಶಿಯನ್ನು ನೋಡಿದನು.

ಪಾಂಸುಗ್ರಸ್ತೇ ತತಃ ಕೂಪೇ ನ್ಯಖನತ್ ಸಲಿಲಂ ಮುನಿಃ ।
ಅಗ್ನಿಂ ಸಂಕಲ್ಪಯಾಮಾಸ ಹೋತ್ಯಾನಾತ್ಮಾನಮೇವ ಹಿ ॥೩೫॥

ತ್ರಿಕನು ಧೂಳುತುಂಬಿದ ಬಾವಿಯಲ್ಲಿ ಅಗೆದು ನೀರನ್ನು ಪಡೆದನು. ಅಗ್ನಿಯನ್ನೂ ಆಹ್ವಾನಿಸಿದನು. ತನ್ನನ್ನೇ ಹೋತೃವನ್ನಾಗಿ ಸಂಕಲ್ಪಿಸಿಕೊಂಡನು.

ತತಸ್ತಾಂ ವೀರುಧಂ ಸೋಮಂ ಕಲ್ಪಯಿತ್ವಾ ಮಹಾತಪಾಃ ।
ಋಚೋ ಯಜೂಂಷಿ ಸಾಮಾನಿ ಮನಸಾऽಚಿಂತಯನ್ಮುನಿಃ ॥೩೬॥

ಅನಂತರ ಅಲ್ಲಿದ್ದ ಬಳ್ಳಿಗಳನ್ನೇ ಸೋಮಲತೆಯನ್ನಾಗಿ ಸಂಕಲ್ಪಿಸಿಕೊಂಡು, ಸಾಮವೇದದ ಮತ್ತು ಯಜುರ್ವೇದದ ಮಂತ್ರಗಳನ್ನು ಮನಸ್ಸಿನಿಂದಲೇ ಜಪಿಸಿದನು.

ಗ್ರಾವಾಣಃ ಶರ್ಕರಾಃ ಕೃತ್ವಾ ಪ್ರಚಕ್ರೇऽಭಿಷವಂ ನೃಪ ॥೩೭॥

ಆಜ್ಯಂ ಚ ಸಲಿಲಂ ಚಕ್ರೇ ಭಾಗಾಂಶ್ಚ ತ್ರಿದಿವೌಕಸಾಮ್ ।
ಸೋಮಸ್ಯಾಭಿಷವಸ್ಯಾಗ್ರೇ ಪ್ರವೃದ್ಧಸ್ತುಮುಲೋ ಧ್ವನಿಃ ॥೩೮॥

ಅಲ್ಲಿ ಇದ್ದ ಮರಳಿನ ಕಣಗಳನ್ನೇ ಸೋಮಲತೆಯನ್ನು ಜಜ್ಜುವ ಕಲ್ಲನ್ನಾಗಿ ಮಾಡಿಕೊಂಡು ಬಳ್ಳಿಗಳ ರಸವನ್ನು ಹಿಂಡಿಕೊಂಡನು. ಅಲ್ಲಿದ್ದ ನೀರನ್ನೇ ತುಪ್ಪವನ್ನಾಗಿ ಮಾಡಿಕೊಂಡು ದೇವತೆಗಳಿಗೆ ಆಹುತಿಯನ್ನಾಗಿ ಸಮರ್ಪಿಸಿದನು. ಲತೆಗಳಿಂದ ಸೋಮರಸವನ್ನು ಹಿಂಡಿ ತೆಗೆದಾಗ ಜೋರಾಗಿ ಶಬ್ದವು ಉಂಟಾಯಿತು.

ಮುಂದುಗಡೆ ದಾರಿಯಲ್ಲಿ ನಿಂತಿರುವ ತೋಳವನ್ನು ನೋಡಿದ ತ್ರಿತನು ಭಯದಿಂದ ಸರಿಯುತ್ತಾ ಇದ್ದಾಗ ಅವಸರವಾಗಿ ಬಾವಿಯಲ್ಲಿ ಬಿದ್ದನು. ಆ ಬಾವಿಯು ಬಹಳ ಆಳವಾಗಿತ್ತು. ಎಲ್ಲಾ ಪ್ರಾಣಿಗಳಿಗೂ ತುಂಬಾ ಭಯವನ್ನು ಹುಟ್ಟಿಸುತ್ತಿತ್ತು. ತುಂಬಾ ಘೋರವಾಗಿದ್ದಿತು.

ತ್ರಿತಸ್ತತೋ ಮಹಾಭಾಗಃ ಕೂಪಸ್ಥೋ ಮುನಿಸತ್ತಮಃ ।
ಆರ್ತನಾದಂ ಮಹಚ್ಚಕ್ರಂ ತತಃ ಶುಶ್ರುವತುರ್ಮುನೀ ॥೨೮॥

ಉತ್ತಮಮುನಿಯಾದ ತ್ರಿತನು ಬಾವಿಯಲ್ಲಿದ್ದುಕೊಂಡು ರಕ್ಷಣೆಗಾಗಿ ಜೋರಾಗಿ ಬೊಬ್ಬೆಯನ್ನು ಹಾಕುತ್ತಾನೆ. ಅದನ್ನು ಉಳಿದಿಬ್ಬರು ಮುನಿಗಳು ಕೇಳಿಸಿಕೊಂಡರು.

ತಂ ಜ್ಞಾತ್ವಾ ಪತಿತಂ ಕೂಪೇ ಭ್ರಾತರಾವೇಕತದ್ವಿತೌ ।
ವೃಕತ್ರಾಸಾಚ್ಚ ಲೋಭಾಚ್ಚ ತಮುತ್ಸೃಜ್ಯ ಪ್ರಜಗ್ಮತುಃ ।
ಭ್ರಾತೃಭ್ಯಾಂ ಪಶುಲುಬ್ಧಾಭ್ಯಾಮುತ್ಸೃಷ್ಟಃ ಸುಮಹಾತಪಾಃ ॥೨೯॥

ತ್ರಿತನು ಬಾವಿಯಲ್ಲಿ ಬಿದ್ದಿರುವುದನ್ನು ತಿಳಿದ ಆ ಏಕತ ಮತ್ತು ದ್ವಿತ ಸಹೋದರರು ತೋಳಕ್ಕೆ ಹೆದರಿ ಮತ್ತು ಪಶುಗಳ ಮೇಲಿನ ಅತ್ಯಾಸೆಯಿಂದಾಗಿ ತ್ರಿತನನ್ನು ಬಿಟ್ಟು ಬೇಗನೇ ಹೋದರು.

ಉದಪಾನೇ ತದಾ ರಾಜನ್ ನಿರ್ಜಲೇ ಪಾಂಸುಸಂವೃತೇ ॥೩೦॥

ತ್ರಿತ ಆತ್ಮಾನಮಾಲಕ್ಷ್ಯ ವೀರುತ್ಪುಂಜತೃಣಾವೃತೇ ।
ನಿಮಗ್ನೋ ಭರತಶ್ರೇಷ್ಠ ಪಾಪಕೃನ್ನರಕೇ ಯಥಾ ॥೩೧॥

ಸ ಬುದ್ಧ್ಯಾಗಣಯತ್ ಪ್ರಾಜ್ಞೋ ಮೃತ್ಯೋರ್ಭೀತೋ ಹ್ಯಸೋಮಪಃ ।
ಸೋಮಃ ಕಥಂ ನು ಪಾತವ್ಯ ಇಹಸ್ಥೇನ ಮಯಾ ಭವೇತ್ ॥೩೨॥

ರಾಜನೇ! ಬಾವಿಯಲ್ಲಿ ನೀರು ಸ್ವಲ್ಪವೂ ಇರಲಿಲ್ಲ. ಧೂಳು ತುಂಬಿಕೊಂಡಿತ್ತು. ಗಿಡಗಂಟಿಗಳು ಪೂರ್ಣವಾಗಿ ಆವರಿಸಿಕೊಂಡಿದ್ದವು. ಸಹೋದರರಿಬ್ಬರೂ ಪಶುಗಳ ಮೇಲಿನ ಲೋಭದಿಂದ ತ್ರಿಕನನ್ನು ಬಿಟ್ಟು ಹೋಗಿದ್ದರು. ಆಗ ಪಾಪಿಯು ನರಕದಲ್ಲಿ ಮುಳುಗುವಂತೆ ತಾನು ಇಂತಹ ಬಾವಿಯಲ್ಲಿ ಮುಳುಗುತ್ತಿರುವುದನ್ನು ತಿಳಿದುಕೊಂಡ

ತ್ರಿಕನಿಗೆ ಪಾನಕ್ಕೆ ಸೋಮವೂ ಸಿಗದಿದ್ದುದರಿಂದ ಮತ್ತು ಮರಣದ ಭಯಕ್ಕೆ ಒಳಗಾಗಿ ತನ್ನ ಬುದ್ಧಿಯಲ್ಲಿ ಹೀಗೆ ಆಲೋಚಿಸಿದನು- ''ನಾನು ಇಲ್ಲಿ ಬಾವಿಯೊಳಗಿದ್ದುಕೊಂಡೇ ಸೋಮವನ್ನು ಹೇಗೆ ಕುಡಿಯಲಿ?'' ಎಂದು

ಸ ಏವಮಭಿಸಂಚಿಂತ್ಯ ತಸ್ಮಿನ್ ಕೂಪೇ ಮಹಾತಪಾಃ ॥೩೩॥

ದದರ್ಶ ವೀರುಧಾಂ ಜಾಲಂ ಲಂಬಮಾನಂ ಯದೃಚ್ಛಯಾ ॥೩೪॥

ಹೀಗೆ ಆಲೋಚಿಸಿದ ಮಹಾತಪಸ್ವಿಯಾದ ತ್ರಿಕನು ಯದೃಚ್ಛಯಾ ಅಲ್ಲಿ ಜೋತು ಬಿದ್ದಿದ್ದ ಬಳ್ಳಿಗಳ ರಾಶಿಯನ್ನು ನೋಡಿದನು.

ಪಾಂಸುಗ್ರಸ್ತೇ ತತಃ ಕೂಪೇ ನ್ಯಖನತ್ ಸಲಿಲಂ ಮುನಿಃ ।
ಅಗ್ನಿಂ ಸಂಕಲ್ಪಯಾಮಾಸ ಹೋತ್ಯಾನಾತ್ಮಾನಮೇವ ಹಿ ॥೩೫॥

ತ್ರಿಕನು ಧೂಳುತುಂಬಿದ ಬಾವಿಯಲ್ಲಿ ಅಗೆದು ನೀರನ್ನು ಪಡೆದನು. ಅಗ್ನಿಯನ್ನೂ ಆಹ್ವಾನಿಸಿದನು. ತನ್ನನ್ನೇ ಹೋತೃವನ್ನಾಗಿ ಸಂಕಲ್ಪಿಸಿಕೊಂಡನು.

ತತಸ್ತಾಂ ವೀರುಧಂ ಸೋಮಂ ಕಲ್ಪಯಿತ್ವಾ ಮಹಾತಪಾಃ ।
ಋಚೋ ಯಜೂಂಷಿ ಸಾಮಾನಿ ಮನಸಾऽಚಿಂತಯನ್ಮುನಿಃ ॥೩೬॥

ಅನಂತರ ಅಲ್ಲಿದ್ದ ಬಳ್ಳಿಗಳನ್ನೇ ಸೋಮಲತೆಯನ್ನಾಗಿ ಸಂಕಲ್ಪಿಸಿಕೊಂಡು, ಸಾಮವೇದದ ಮತ್ತು ಯಜುರ್ವೇದದ ಮಂತ್ರಗಳನ್ನು ಮನಸ್ಸಿನಿಂದಲೇ ಜಪಿಸಿದನು.

ಗ್ರಾವಾಣಃ ಶರ್ಕರಾಃ ಕೃತ್ವಾ ಪ್ರಚಕ್ರೇऽಭಿಷವಂ ನೃಪ ॥೩೭॥

ಆಜ್ಯಂ ಚ ಸಲಿಲಂ ಚಕ್ರೇ ಭಾಗಾಂಶ್ಚ ತ್ರಿದಿವೌಕಸಾಮ್ ।
ಸೋಮಸ್ಯಾಭಿಷವಸ್ಯಾಗ್ರೇ ಪ್ರವೃದ್ಧಸ್ತುಮುಲೋ ಧ್ವನಿಃ ॥೩೮॥

ಅಲ್ಲಿ ಇದ್ದ ಮರಳಿನ ಕಣಗಳನ್ನೇ ಸೋಮಲತೆಯನ್ನು ಜಜ್ಜುವ ಕಲ್ಲನ್ನಾಗಿ ಮಾಡಿಕೊಂಡು ಬಳ್ಳಿಗಳ ರಸವನ್ನು ಹಿಂಡಿಕೊಂಡನು. ಅಲ್ಲಿದ್ದ ನೀರನ್ನೇ ತುಪ್ಪವನ್ನಾಗಿ ಮಾಡಿಕೊಂಡು ದೇವತೆಗಳಿಗೆ ಆಹುತಿಯನ್ನಾಗಿ ಸಮರ್ಪಿಸಿದನು. ಲತೆಗಳಿಂದ ಸೋಮರಸವನ್ನು ಹಿಂಡಿ ತೆಗೆದಾಗ ಜೋರಾಗಿ ಶಬ್ದವು ಉಂಟಾಯಿತು.

ಸ ಚಾವಿಶದ್ ದಿವಂ ರಾಜನ್ ಸ್ವರಶ್ಚೈವ ತ್ರಿತಸ್ಯ ವೈ ।
ಸಮವಾಪ ಚ ತಂ ಯಜ್ಞಂ ಯಥೋಕ್ತಂ ಬ್ರಹ್ಮವಾದಿಭಿಃ ॥೩೯॥

ರಾಜನೇ! ತ್ರಿತನಿಂದ ಹೊರಟ ಆ ಧ್ವನಿಯು ದೇವಲೋಕಕ್ಕೆ ತಲುಪಿತು. ಆ ಯಜ್ಞವು ಬ್ರಹ್ಮಜ್ಞಾನಿಗಳು ಮಾಡುವ ಯಾಗವಾಯಿತು.

ವರ್ತಮಾನೇ ತಥಾ ಯಜ್ಞೇ ತ್ರಿತಸ್ಯ ಸುಮಹಾತ್ಮನಃ ।
ಆವಿಗ್ನಂ ತ್ರಿದಿವಂ ಸರ್ವಂ ಕಾರಣಂ ನ ಚ ಬುದ್ಧ್ಯತೇ ॥೪೦॥

ಮಹಾತ್ಮನಾದ ತ್ರಿತನು ಯಜ್ಞವನ್ನು ಮಾಡುತ್ತಿದ್ದಾಗ ಸ್ವರ್ಗದಲ್ಲಿ ಭಯವು ಆವರಿಸಿಕೊಂಡಿತು. ಆದರೆ ಅದಕ್ಕೆ ಕಾರಣವೇನೆಂದು ಗೊತ್ತಾಗಲಿಲ್ಲ.

ತತಸ್ತು ತುಮುಲಂ ಶಬ್ದಂ ಶುಶ್ರಾವ ಸ ಬೃಹಸ್ಪತಿಃ ।
ಶ್ರುತ್ವೈವ ಚಾಬ್ರವೀದ್ ದೇವಾನ್ ಸರ್ವಾನ್ ದೇವಪುರೋಹಿತಃ॥೪೧॥

ಆನಂತರ ದೇವತೆಗಳ ಪುರೋಹಿತನಾದ ಬೃಹಸ್ಪತಿಯು ಆ ಭಯಂಕರ ಶಬ್ದವನ್ನು ಕೇಳಿಸಿಕೊಂಡನು. ಕೇಳಿದ ಕೂಡಲೇ ಎಲ್ಲಾ ದೇವತೆಗಳಿಗೂ ಹೀಗೆ ಹೇಳಿದನು

ಬೃಹಸ್ಪತಿಃ

ಸ ತಸ್ಯ ವರ್ತತೇ ಯಜ್ಞಃ ತತ್ರ ಗಚ್ಛಾಮಹೇ ಸುರಾಃ ।
ಸ ಹಿ ಕ್ರುದ್ಧಃ ಸೃಜೇದನ್ಯಾನ್ ದೇವಾನಪಿ ಮಹಾತಪಾಃ ॥೪೨॥

ಬೃಹಸ್ಪತಿ– ದೇವತೆಗಳೇ! ಅದು ಆ ತ್ರಿತನು ಮಾಡುವ ಯಜ್ಞ. ನಾವು ಅಲ್ಲಿಗೆ ಹೋಗೋಣ. ಇಲ್ಲದಿದ್ದರೆ ಕೋಪದಿಂದ ಮಹಾತಪಸ್ವಿಯಾದ ಅವನು ಬೇರೆ ದೇವತೆಗಳನ್ನೂ ಸೃಷ್ಟಿಮಾಡಿಕೊಂಡಾನು.

ವೈಶಂಪಾಯನಃ

ತಚ್ಛ್ರುತ್ವಾ ವಚನಂ ತಸ್ಯ ಸಹಿತಾಃ ಸರ್ವದೇವತಾಃ ।
ಪ್ರಯಯುಸ್ತತ್ರ ಯತ್ರಾಸ್ತೇ ತ್ರಿತೋ ಯಜ್ಞಶ್ಚ ವರ್ತತೇ ॥೪೩॥

ವೈಶಂಪಾಯನ– ಬೃಹಸ್ಪತಿಯು ಹೇಳಿದ ಮಾತನ್ನು ಕೇಳಿದ ಎಲ್ಲಾ ದೇವತೆಗಳು ಒಟ್ಟಾಗಿ ತ್ರಿತನ ಯಜ್ಞ ನಡೆಯುವಲ್ಲಿಗೆ ಬಂದರು.

ತೇ ತತ್ರ ಗತ್ವಾ ವಿಬುಧಾಸ್ತಂ ಕೂಪಂ ಯತ್ರ ಸ ತ್ರಿತಃ ।
ದದೃಶುಸ್ತಂ ಮಹಾತ್ಮಾನಂ ದೀಕ್ಷಿತಂ ಯಜ್ಞಕರ್ಮಣಿ ॥೪೪॥

ಆ ದೇವತೆಗಳು ಯಾವ ಬಾವಿಯೊಳಗೆ ತ್ರಿತನು ಇದ್ದನೋ ಆ ಬಾವಿಗೆ ಹೋದರು. ಅಲ್ಲಿ ಯಜ್ಞದ ಕಾರ್ಯದಲ್ಲಿ ದೀಕ್ಷಿತನಾದ ತ್ರಿತನನ್ನು ನೋಡಿದರು.

ದೃಷ್ಟ್ವಾ ಚೈನಂ ಮಹಾತ್ಮಾನಂ ಶ್ರಿಯಾ ಪರಮಯಾ ಯುತಮ್ ।
ಊಚುಶ್ಚೈನಂ ಮಹಾರಾಜ ಪ್ರಾಪ್ತಾ ಭಾಗಾರ್ಥಿನೋ ವಯಮ್ ॥೪೫॥

ಮಹಾರಾಜನೇ! ಒಳ್ಳೆಯ ಕಾಂತಿಯನ್ನು ಹೊಂದಿರುವ ಆ ಮಹಾತ್ಮನನ್ನು ನೋಡಿ ಆ ದೇವತೆಗಳು ''ಯಜ್ಞಭಾಗವನ್ನು ಸ್ವೀಕರಿಸಲು ನಾವು ಬಂದಿದ್ದೇವೆ'' ಎಂದು ಹೇಳಿದರು.

ಅಥಾಬ್ರವೀದ್ ಋಷಿರ್ದೇವಾನ್ ಪಶ್ಯಧ್ವಂ ತ್ರಿದಿವೌಕಸಃ ।
ಅಸ್ಮಿನ್ ಪ್ರತಿಭಯೇ ಕೂಪೇ ನಿಮಗ್ನಂ ನಷ್ಟಚೇತಸಮ್ ॥೪೬॥

ಅನಂತರ ಋಷಿ ತ್ರಿತನು ಹೀಗೆ ಹೇಳುತ್ತಾನೆ- 'ದೇವತೆಗಳೇ! ನೋಡಿ. ಭರವಸೆಯನ್ನೇ ಕಳೆದುಕೊಂಡು ಭಯಂಕರವಾದ ಬಾವಿಯಲ್ಲಿ ಬಿದ್ದಿರುವ ನನ್ನನ್ನು ನೋಡಿರಿ'.

ತತಸ್ತ್ರಿತೋ ಮಹಾರಾಜ ಭಾಗಾಂಸ್ತೇಷಾಂ ಯಥಾವಿಧಿ ।
ಮಂತ್ರಯುಕ್ತಾನ್ ಸಮಾಜಹ್ರೇ ತೇನ ಪ್ರೀತಾಸ್ತತೋಽಭವನ್ ॥೪೭॥

ಮಹಾರಾಜನೇ! ಯಜ್ಞದಲ್ಲಿ ತ್ರಿತನು ವಿಧಿವತ್ತಾಗಿ ದೇವತೆಗಳ ಭಾಗವನ್ನು ಮಂತ್ರಸಹಿತವಾಗಿ ಸಮರ್ಪಿಸಿರುತ್ತಾನೆ. ಅದರಿಂದ ದೇವತೆಗಳು ಸಂತುಷ್ಟರಾಗುತ್ತಾರೆ.

ತತೋ ಯಥಾವಿಧಿ ಪ್ರಾಪ್ತಾನ್ ಭಾಗಾನ್ ಪ್ರಾಪ್ಯ ದಿವೌಕಸಃ ।
ಪ್ರೀತಾತ್ಮಾನೋ ದದುಸ್ತಸ್ಮೈ ವರಾನ್ ಯಾನ್ ಮನಸೇಚ್ಛತಿ ॥೪೮॥

ತ್ರಿತನು ವಿಧಿವತ್ತಾಗಿ ಸಮರ್ಪಿಸಿದ ಆಹುತಿಗಳನ್ನು ಸ್ವೀಕರಿಸಿದ ದೇವತೆಗಳು ಸಂತುಷ್ಟರಾಗಿ ಅವನು ಮನಸ್ಸಿನಲ್ಲಿ ಇಚ್ಛಿಸಿದ ಎಲ್ಲಾ ವರಗಳನ್ನು ಕೊಡುತ್ತಾರೆ.

ಸ ತು ವವ್ರೇ ವರಂ ದೇವಾನ್ ತ್ರಾತುಮರ್ಹಥ ಮಾಮಿಹ ।
ಯಶ್ಚೇಹಾಪಃ ಸ್ಪೃಶೇತ್ ಕೂಪೇ ಸ ಸೋಮಪಗತಿಂ ಲಭೇತ್ ॥೪೯॥

ತ್ರಿತನು ದೇವತೆಗಳಲ್ಲಿ 'ನನ್ನನ್ನು ಈ ಬಾವಿಯಿಂದ ರಕ್ಷಿಸಿರಿ. ಈ ಬಾವಿಯ ನೀರನ್ನು ಕುಡಿದವರು ಸೋಮಪಾನಕ್ಕೆ ಯೋಗ್ಯವಾದ ಲೋಕಕ್ಕೆ ಹೋಗಲಿ' ಎಂಬ ವರವನ್ನು ಬೇಡಿದನು.

ತತ್ರ ಚೋರ್ಮಿಮತೀ ರಾಜನ್ನುತ್ಪಪಾತ ಸರಸ್ವತೀ ।
ತಯೋತ್ಕ್ಷಿಪ್ತಸ್ತತಸ್ತೋಯೈಃ ಪೂಜಯಂಸ್ತ್ರಿದಿವೌಕಸಃ ॥೫೦॥

ರಾಜನೇ! ಅಲ್ಲಿ ಸರಸ್ವತಿಯು ದೊಡ್ಡ ತೆರೆಗಳೊಂದಿಗೆ ಎದ್ದು ಹರಿದಳು. ಆ ನೀರಿನ ಪ್ರವಾಹದಿಂದಾಗಿ ತ್ರಿತನು ಮೇಲೆದ್ದು ದೇವತೆಗಳನ್ನು ಪೂಜಿಸಿದನು.

ತಥೇತಿ ಚೋಕ್ತ್ವಾ ವಿಬುಧಾ ಜಗ್ಮುಃ ರಾಜನ್ ಯಥಾಗತಮ್ ।
ತ್ರಿತಶ್ಚಾಪ್ಯಗಮತ್ ಪ್ರೀತಃ ಸ್ವಮೇವ ಭವನಂ ತದಾ ॥೫೧॥

'ಹಾಗೆಯೇ ಆಗಲಿ' ಎಂದು ಹೇಳಿ ದೇವತೆಗಳು ಬಂದಹಾಗೆಯೇ ಹೊರಟು ಹೋದರು. ತ್ರಿತನು ಸಂತುಷ್ಟನಾಗಿ ತಾನೇ ಸ್ವತಃ ತನ್ನ ಮನೆಗೆ ಹೋದನು.

ಕ್ರುದ್ಧಃ ಸ ತು ಸಮಾಸಾದ್ಯ ತಾವೃಷೀ ಭ್ರಾತರೌ ತದಾ ।
ಉವಾಚ ಪರುಷಂ ವಾಕ್ಯಂ ಶಶಾಪ ಚ ಪರಂತಪ ॥೫೨॥

ಆಗ ಕೋಪಗೊಂಡ ತ್ರಿತನು ತನ್ನ ಸಹೋದರರಾದ ಏಕತ ಮತ್ತು ದ್ವಿತರನ್ನು ಶಪಿಸಿದನು ಮತ್ತು ಕಠೋರವಾದ ಮಾತನ್ನು ಆಡಿದನು.

ತ್ರಿತಃ

ಪಶುಲುಬ್ಧೌ ಯುವಾಂ ಯಸ್ಮಾನ್ಮಾಮುತ್ಸೃಜ್ಯ ಪ್ರಧಾವಿತೌ ।
ತಸ್ಮಾದ್ ರೂಪೇಣ ತಾಸಾಂ ವೈ ದಂಷ್ಟ್ರಿಣಾಮಭಿತಶ್ಚರೌ ॥೫೩॥

ಭವಿತಾರೌ ಮಯಾ ಶಪ್ತೌ ಪ್ರಾಪ್ತೇನಾನೇನ ಕರ್ಮಣಾ ।
ಪಶವಶ್ಚೈವ ಯುವಯೋಗೋರ್ಲಾಂಗೂಲರ್ಕ್ಷವಾನರಾಃ ॥೫೪॥

ತ್ರಿತ– ಯಾವ ಕಾರಣದಿಂದ ಪಶುಗಳ ಮೇಲಿನ ಲೋಭದಿಂದ ನನ್ನನ್ನು ಬಿಟ್ಟು ಓಡಿಹೋದಿರೋ ಆ ಕಾರಣದಿಂದ ಪಶುಗಳ ರೂಪವನ್ನು ಪಡೆದು, ಕ್ರೂರವಾದ ಹಲ್ಲುಗಳ ಸಹಿತ ಎಲ್ಲೆಲ್ಲೂ ಸಂಚರಿಸಿ. ನಿಮ್ಮ ಕೆಟ್ಟಕೆಲಸದಿಂದಾಗಿ ನೀವಿಬ್ಬರೂ ನನ್ನ ಈ ಶಾಪಕ್ಕೆ ಒಳಗಾಗಿ. ನಿಮ್ಮ ಈ ಪಶುಗಳು ಬಾಲ ಮತ್ತು ಕಪ್ಪುಮೂತಿಗಳುಳ್ಳ ಕೋತಿಗಳಾಗಲಿ.

ವೈಶಂಪಾಯನಃ

ಇತ್ಯುಕ್ತೇऽಥ ತದಾ ತೇನ ಕ್ಷಣಾದೇವ ವಿಶಾಂಪತೇ ।
ತಥಾಭೂತಾವದೃಶ್ಯೇತಾಂ ವಚನಾತ್ ಸತ್ಯವಾದಿನಃ ॥೫೫॥

ವೈಶಂಪಾಯನ– ರಾಜನೇ! ತ್ರಿತನು ಹೇಳಿದ ಮರುಕ್ಷಣದಲ್ಲಿಯೇ ಸತ್ಯವಾದಿಯಾದ ತ್ರಿತನ ಮಾತಿನಿಂದ ಹಾಗೆಯೇ ಕಾಣಿಸಿಕೊಂಡರು.

ತತ್ರಾಪ್ಯಮಿತವಿಕ್ರಾಂತಃ ಸ್ಪಷ್ಟ್ವಾ ತೋಯಂ ಹಲಾಯುಧಃ ।
ದತ್ತ್ವಾ ಚ ವಿವಿಧಾನ್ ದೇಯಾನ್ ಪೂಜಯಿತ್ವಾ ಚ ವೈ ದ್ವಿಜಾನ್॥೫೬॥

ಬಹಳ ಪರಾಕ್ರಮಿಯಾದ ಬಲರಾಮನು ಉದಪಾನದ ತೀರ್ಥದಲ್ಲಿ ಸ್ನಾನಾದಿಗಳನ್ನು ಮಾಡಿದನು. ಬ್ರಾಹ್ಮಣರನ್ನು ಪೂಜಿಸಿ ವಿವಿಧ ದ್ರವ್ಯಗಳನ್ನು ದಾನ ಮಾಡಿದನು.

ಉದಪಾನಂ ಚ ತದ್ ದೃಷ್ಟ್ವಾ ಪ್ರಶಸ್ಯ ಚ ಪುನಃ ಪುನಃ ।
ನದೀಗತಮಮೇಯಾತ್ಮಾ ಪ್ರಾಪ್ತೋ ವಿನಶನಂ ತದಾ ॥೫೭॥

ನದಿಯಲ್ಲಿರುವ ಆ ಉದಪಾನವನ್ನು ನೋಡಿ ಮತ್ತೆ ಮತ್ತೆ ಅದರ ಮಹಿಮೆಯನ್ನು ಕೊಂಡಾಡುತ್ತಾ ಅಲ್ಲಿಂದ ವಿನಶನಕ್ಷೇತ್ರಕ್ಕೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಬಲಭದ್ರಸ್ಯ ತೀರ್ಥಯಾತ್ರಾವರ್ಣನಂ ನಾಮ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಬಲರಾಮನು ಸರಸ್ವತೀತೀರದಲ್ಲಿರುವ ಅನೇಕ ತೀರ್ಥಕ್ಷೇತ್ರಗಳಿಗೆ ಯಾತ್ರೆ ಮಾಡಿದ್ದರ ವರ್ಣನೆ. ಆ ತೀರ್ಥಗಳ ಮಹಿಮೆಗಳ ವರ್ಣನೆ

ವೈಶಂಪಾಯನಃ

ತತೋ ವಿನಶನಂ ರಾಜನ್ ಆಜಗಾಮ ಹಲಾಯುಧಃ ।
ಶೂದ್ರಾಭೀರಾನ್ ಪ್ರತಿ ದ್ವೇಷಾದ್ ಯತ್ರ ನಷ್ಟಾ ಸರಸ್ವತೀ ॥೧॥

ವೈಶಂಪಾಯನ– ರಾಜನೇ! ಅನಂತರ ಬಲರಾಮನು ವಿನಶನ ಕ್ಷೇತ್ರಕ್ಕೆ ಬಂದನು. ದುಷ್ಟರಾದ ಕೆಲವು ಶೂದ್ರರಿಂದ ಮತ್ತು ಸಂಕರಜಾತಿಯವರ ಮೇಲಿನ ದ್ವೇಷದಿಂದಾಗಿ ಸರಸ್ವತೀನದಿಯು ಗುಪ್ತಗಾಮಿನಿಯಾದದ್ದು ಈ ಸ್ಥಳದಲ್ಲಿಯೇ.

ಯಸ್ಮಾತ್ ಸಾ ಭರತಶ್ರೇಷ್ಠ ಶೂದ್ರದ್ವೇಷ್ಯಾ ಸರಸ್ವತೀ ।
ತಸ್ಮಾತ್ ತಾಮೃಷಯೋ ನಿತ್ಯಮಾಹುರ್ವಿನಶನೇತಿ ಹ ॥೨॥

ಯಾವಕಾರಣದಿಂದ ಸರಸ್ವತಿಯು ಶೂದ್ರದ್ವೇಷಿಯಾಗಿದ್ದಳೋ ಆ ಕಾರಣದಿಂದ ಋಷಿಗಳು ಅವಳನ್ನು ನಿತ್ಯವಾಗಿಯೂ ವಿನಶನಾ ಎಂದು ಕರೆಯುತ್ತಿದ್ದರು.

ತಚ್ಚಾಪ್ಯತಿಕ್ರಮ್ಯ ಬಲವಾನ್ ಸರಸ್ವತ್ಯಾಂ ಮಹಾತಪಾಃ ।
ಅಭೂಮಿಕಂ ತತೋಽಗಚ್ಛತ್ ಸರಸ್ವತ್ಯಾಸ್ತಟಂ ಪರಮ್ ॥೩॥

ಮಹಾತಪಸ್ವಿಯಾದ ಬಲರಾಮನು ಅಲ್ಲಿಯೂ ಜಲದಿಂದ ಆಚಮನಾದಿಗಳನ್ನು ಮಾಡಿ ಸರಸ್ವತಿಯ ಇನ್ನೊಂದು ತೀರದಲ್ಲಿದ್ದ ಅಭೂಮಿಕಾ ಎಂಬ ಕ್ಷೇತ್ರಕ್ಕೆ ಬಂದನು.

ಯತ್ರ ಚಾಪ್ಸರಸಃ ಶುಭ್ರಾಃ ಸರ್ವಕಾಲಮತಂದ್ರಿತಾಃ ।
ಕ್ರೀಡಾಭಿರ್ವಿಪುಲಾಭಿಶ್ಚ ಕ್ರೀಡಂತಿ ವಿಮಲಾನನಾಃ ॥೪॥

ಆ ಅಭೂಮಿಕೆ(ಸುಭೂಮಿಕೆ)ಯಲ್ಲಿ ಪರಿಶುದ್ಧರಾದ ಸುಂದರವದನದ ಅಪ್ಸರಸ್ತ್ರೀಯರು ಯಾವುದೇ ಸಂಕೋಚವಿಲ್ಲದೆ ಬಹಳವಾದ ಕ್ರೀಡೆಗಳನ್ನು ಆಡುತ್ತಿದ್ದರು.

ತತ್ರ ದೇವಾಃ ಸಗಂಧರ್ವಾ ಮಾಸಿ ಮಾಸಿ ಜನೇಶ್ವರ ।
ಅಭಿಗಚ್ಛಂತಿ ತತ್ತೀರ್ಥಂ ಪುಣ್ಯಂ ಬ್ರಾಹ್ಮಣಸೇವಿತಮ್ ॥೫॥

ಬ್ರಾಹ್ಮಣರಿಂದ ಸೇವಿಸಲ್ಪಡುವ ಆ ಪುಣ್ಯಪ್ರದವಾದ ತೀರ್ಥಕ್ಕೆ ದೇವತೆಗಳು ಗಂಧರ್ವರೊಡನೆ ಪ್ರತೀ ತಿಂಗಳು ಶ್ರದ್ಧೆಯಿಂದ ಬರುತ್ತಾರೆ.

ತತ್ರ ನೃತ್ಯಂತಿ ಗಂಧರ್ವಾಃ ತಥೈವಾಪ್ಸರಸಾಂ ಗಣಾಃ ।
ಸಮೇತಾಃ ಸಹಿತಾ ರಾಜನ್ ಯಥಾಪ್ರಾಪ್ತಂ ಯಥಾಸುಖಮ್ ॥೬॥

ಅಲ್ಲಿ ಗಂಧರ್ವರು ಅಪ್ಸರಸ್ತ್ರೀಯರ ಜೊತೆಗೆ ಸುಖವಾಗಿ ಯಥೇಷ್ಟವಾಗಿ ನೃತ್ಯವನ್ನು ಮಾಡುತ್ತಾರೆ.

ತತ್ರ ಮೋದಂತಿ ದೇವಾಶ್ಚ ಪಿತರಶ್ಚ ಸವೀರುಧಃ ।
ಪುಣ್ಯೈಃ ಪುಷ್ಪೈಃ ಸದಾ ದಿವ್ಯೈಃ ಕೀರ್ಯಮಾಣೈಃ ಪುನಃ ಪುನಃ ॥೭॥

ಅಲ್ಲಿ ದೇವತೆಗಳು, ಪಿತೃಗಳು ಕೂಡ ತಮಗಿಷ್ಟವಾದ ಲತೆ-ಗಿಡಗಳೊಂದಿಗೆ ಆನಂದವನ್ನು ಪಡುತ್ತಿದ್ದರು. ಅವರ ಮೇಲೆ ಮತ್ತೆ ಮತ್ತೆ ಪುಣ್ಯವಾದ ಪುಷ್ಪಗಳ ಮಳೆಯು ಸುರಿಯುತ್ತಿತ್ತು.

ಆಕ್ರೀಡಭೂಮಿಃ ಸಾ ರಾಜನ್ ತಾಸಾಮಪ್ಸರಸಾಂ ಶುಭಾ ।
ಸುಭೂಮಿಕೇತಿ ವಿಖ್ಯಾತಾ ಸರಸ್ವತ್ಯಾಸ್ತಟೇ ವನೇ ॥೮॥

ರಾಜನೇ! ಮಂಗಳಸ್ವರೂಪದ ಆ ಸುಭೂಮಿಕಾ ಕ್ಷೇತ್ರವು ಅಪ್ಸರಾಸ್ತ್ರೀಯರ ಕ್ರೀಡಾಸ್ಥಾನವಾಗಿತ್ತು. ಸರಸ್ವತೀನದಿಯ ತೀರದ ಕಾಡಿನಲ್ಲಿ ಇರುವ ಈ ಕ್ಷೇತ್ರವು ಸುಭೂಮಿಕಾ ಎಂದು ಪ್ರಸಿದ್ಧವಾಗಿದೆ.

ತತ್ರ ಸ್ನಾತ್ವಾ ಚ ದತ್ತ್ವಾ ಚ ವಸು ವಿಪ್ರೇಷು ಮಾಧವಃ ।
ಶ್ರುತ್ವಾ ಗೀತಂ ಚ ತದ್ ದಿವ್ಯಂ ವಾದಿತ್ರಾಣಾಂ ಚ ನಿಸ್ವನಮ್ ॥೯॥

ಮಧುಕುಲೋದ್ಭವನಾದ ಬಲರಾಮನು ಆ ತೀರ್ಥದಲ್ಲಿ ಸ್ನಾನವನ್ನು ಮಾಡಿ ಬ್ರಾಹ್ಮಣರಿಗೆ ಸಂಪತ್ತನ್ನು ದಾನ ಮಾಡಿದನು. ಅಲ್ಲಿ ಕೇಳಿಸುತ್ತಿದ್ದ ದಿವ್ಯವಾದ ಗೀತೆಗಳನ್ನು ಮತ್ತು ವಾದ್ಯಗಳ ಸುಶ್ರಾವ್ಯಧ್ವನಿಯನ್ನು ಕೇಳಿಸಿಕೊಂಡನು.

ಛಾಯಾಂ ಚ ವಿಪುಲಾಂ ದೃಷ್ಟ್ವಾ ದೇವಗಂಧರ್ವರಕ್ಷಸಾಮ್ ।
ಗಂಧರ್ವಾಣಾಂ ತತಸ್ತೀರ್ಥಮಗಮದ್ ರೋಹಿಣೀಸುತಃ ॥೧೦॥

ದೇವತೆಗಳ, ಗಂಧರ್ವರ, ರಕ್ಕಸರ ಪ್ರತೀಕಗಳನ್ನು ನೋಡಿದ ಬಲರಾಮನು ತೀರ್ಥಕ್ಷೇತ್ರಕ್ಕೆ ಹೋದನು.

ವಿಶ್ವಾವಸುಮುಖಾಸ್ತತ್ರ ಗಂಧರ್ವಾಸ್ತಪಸಾऽನ್ವಿತಾಃ ।
ನೃತ್ತವಾದಿತ್ರಗೀತಂ ಚ ಪ್ರಾಪ್ತವಂತೋ ಮನೋರಮಮ್ ॥೧೧॥

ತಪಸ್ಸಿನಿಂದ ಕೂಡಿದ ವಿಶ್ವಾವಸು ಮೊದಲಾದ ಗಂಧರ್ವರು ಅಲ್ಲಿ ಮನಸ್ಸಿಗೆ ಮುದನೀಡುವ ನೃತ್ಯ, ವಾದ್ಯ ಮತ್ತು ಗೀತೆಗಳನ್ನು ಪಡೆದುಕೊಂಡರು. ಅರ್ಥಾತ್ ಅವರೆಲ್ಲಾ ಒಳ್ಳೆಯ ನೃತ್ಯವನ್ನು ಮಾಡುತ್ತಾ ವಾದ್ಯಸಹಿತವಾಗಿ ಹಾಡುತ್ತಿದ್ದರು.

ತತ್ರ ದತ್ತ್ವಾ ಹಲಧರೋ ವಿಪ್ರೇಭ್ಯೋ ವಿವಿಧಂ ವಸು ।
ಅಜಾವಿಕಂ ಖರೋಷ್ಟ್ರಂ ಚ ಸುವರ್ಣಂ ರಜತಂ ತಥಾ ॥೧೨॥

ಅಲ್ಲಿ ಬಲರಾಮನು ಬ್ರಾಹ್ಮಣರಿಗೆ ಆಡು, ಒಂಟೆ, ಬಂಗಾರ, ಬೆಳ್ಳಿಗಳನ್ನು ದಾನ ಮಾಡಿದನು.

ಭೋಜಯಿತ್ವಾ ದ್ವಿಜಾನ್ ಕಾಮ್ಯೈಃ ಸಂತರ್ಪ್ಯ ಚ ಮಹಾಧನೈಃ ।
ಪ್ರಯಯೌ ಸಹಿತೋ ವಿಪ್ರೈಃ ಸ್ತೂಯಮಾನಶ್ಚ ಮಾಧವಃ ॥೧೩॥

ಬ್ರಾಹ್ಮಣರಿಗೆ ಅವರಿಗಿಷ್ಟವಾದ ಪದಾರ್ಥಗಳಿಂದ ಭೋಜನಮಾಡಿಸಿದನು. ಬಹಳ ಧನವನ್ನು ಕೊಟ್ಟು ಅವರನ್ನು ತೃಪ್ತಿಪಡಿಸಿದನು. ಎಲ್ಲರೂ ಅವನನ್ನು ಕೊಂಡಾಡುತ್ತಿದ್ದರು. ಬ್ರಾಹ್ಮಣರನ್ನು ಕೂಡಿಕೊಂಡು ಅಲ್ಲಿಂದ ಹೊರಟನು.

ತಸ್ಮಾದ್ ಗಂಧರ್ವತೀರ್ಥಾಚ್ಚ ಮಹಾಬಾಹುರರಿಂದಮಃ ।
ಗರ್ಗ್ಯಸ್ರೋತೋ ಮಹತ್ತೀರ್ಥಮಾಜಗಾಮೈಕಕುಂಡಲಃ ॥೧೪॥

ಮಹಾಬಾಹುವಾದ, ಒಂದು ಕಿವಿಯಲ್ಲಿ ಕುಂಡಲವನ್ನು ಧರಿಸಿರುವ ಬಲರಾಮನು ಆ ಗಂಧರ್ವತೀರ್ಥದಿಂದ ಹೊರಟು ಗರ್ಗ್ಯಸ್ರೋತಸ್ಸು ಎಂಬ ದೊಡ್ಡ ತೀರ್ಥಕ್ಷೇತ್ರಕ್ಕೆ ಬಂದನು.

ತತ್ರ ಗರ್ಗೇಣ ವೃದ್ಧೇನ ತಪಸಾ ಭಾವಿತಾತ್ಮನಾ ।
ಕಾಲಜ್ಞಾನಗತಿಶ್ಚೈವ ಜ್ಯೋತಿಷಾಂ ಗತಿರೇವ ಚ ॥೧೫॥

ಉತ್ಪಾತಾ ದಾರುಣಾಶ್ಚೈವ ಶುಭಾಶ್ಚ ಜನಮೇಜಯ ।
ಸರಸ್ವತ್ಯಾಃ ಶುಭೇ ತೀರ್ಥೇ ವಿಹಿತಾಶ್ಚ ಮಹಾತ್ಮನಾ ॥೧೬॥

ಜನಮೇಜಯನೇ! ಸರಸ್ವತೀ ನದಿಯಲ್ಲಿರುವ ಪುಣ್ಯಪ್ರದವಾದ ಆ ಕ್ಷೇತ್ರದಲ್ಲಿ ವೃದ್ಧನಾದ ಮಹಾತ್ಮ ಗರ್ಗಮುನಿಯು ತಪಸ್ಸಿನಿಂದ ತನ್ನಲ್ಲಿ ಸಾಮರ್ಥ್ಯವನ್ನು ವೃದ್ಧಿಸಿಕೊಂಡು ಕಾಲದ ಗತಿಯನ್ನೂ, ಜ್ಞಾನದ ಗತಿಯನ್ನೂ, ಗ್ರಹ-ತಾರೆಗಳ ಗತಿಯನ್ನೂ ಶುಭ ಮತ್ತು ಅಶುಭ ಉತ್ಪಾತಗಳನ್ನು ನಿರ್ಣಯಿಸಿದ್ದನು.

ತಸ್ಯ ನಾಮ್ನಾ ಚ ತತ್ತೀರ್ಥಂ ಗರ್ಗಸ್ರೋತ ಇತಿ ಸ್ಮೃತಮ್ ॥೧೭॥

ಆ ಕ್ಷೇತ್ರವು ಅವನ ಹೆಸರಿನಿಂದಲೇ ಗರ್ಗಸ್ರೋತಸ್ಸು ಎಂದು ಹೆಸರನ್ನು ಪಡೆಯಿತು.

ತತ್ರ ಗರ್ಗಂ ಮಹಾತ್ಮಾನಮೃಷಯಃ ಸುವ್ರತಾ ನೃಪ ।
ಉಪಾಸಾಂಚಕ್ರಿರೇ ನಿತ್ಯಂ ಕಾಲಜ್ಞಾನಂ ಪ್ರತಿ ಪ್ರಭೌ ॥೧೮॥

ರಾಜನೇ! ಆ ಗರ್ಗಸ್ರೋತಸ್ ಕ್ಷೇತ್ರದಲ್ಲಿ ವ್ರತನಿಷ್ಠರಾದ ಋಷಿಗಳು ನಿತ್ಯದಲ್ಲಿಯೂ ಕಾಲಜ್ಞಾನವನ್ನು ಪಡೆಯುವುದಕ್ಕಾಗಿ ಮಹಾತ್ಮನಾದ ಗರ್ಗನನ್ನು ಪೂಜಿಸಿದರು.

ತತ್ರ ಗತ್ವಾ ಮಹಾರಾಜ ಬಲಃ ಶ್ವೇತಾನುಲೇಪನಃ ।
ವಿಧಿವದ್ಧಿ ಧನಂ ಪ್ರಾದಾನ್ಮುನೀನಾಂ ಭಾವಿತಾತ್ಮನಾಮ್ ॥೧೯॥

ಮಹಾರಾಜನೇ! ಶ್ವೇತವರ್ಣದ ವರ್ಣಿಕೆಯನ್ನು ಲೇಪಿಸಿಕೊಂಡ ಬಲರಾಮನು ಆ ಗರ್ಗಕ್ಷೇತ್ರಕ್ಕೆ ಹೋಗಿ, ವಿಧಿವತ್ತಾಗಿ ಸಾಧಕರಾದ ಮುನಿಗಳಿಗೆ ಹಣವನ್ನು ದಾನವಾಗಿ ಕೊಟ್ಟನು.

ಉಚ್ಚಾವಚಾಂಸ್ತಥಾ ದೇಯಾನ್ ದ್ವಿಜೇಭ್ಯೋಽಭಿಪ್ರದಾಯ ಚ ।
ನೀಲಾವಾಸಾಸ್ತತೋಽಗಚ್ಛತ್ ಶಂಖತೀರ್ಥಂ ಮಹಾಯಶಾಃ ॥೨೦॥

ಕೊಡುವ ಪದಾರ್ಥಗಳು ಉತ್ತಮ, ಸಾಮಾನ್ಯ ಎಂದು ಎರಡು ಬಗೆಯವುಗಳು. ಅವೆಲ್ಲವನ್ನೂ ಜ್ಞಾನಿಯಾದ, ನೀಲವಸ್ತ್ರನಾದ ಬಲರಾಮನು ಬ್ರಾಹ್ಮಣರಿಗೆ ದಾನಮಾಡಿ ಅನಂತರ ಶಂಖತೀರ್ಥವೆಂಬ ಪ್ರಸಿದ್ಧವಾದ ತೀರ್ಥಕ್ಷೇತ್ರಕ್ಕೆ ಹೋದನು.

ತತ್ರಾಪಶ್ಯನ್ಮಹಾಶಂಖಂ ಮಹಾಪದ್ಮಮಿವೋತ್ಥಿತಮ್ ॥೨೧॥

ಅಲ್ಲಿ ದೊಡ್ಡ ಪದ್ಮದ ಹಾಗೆ ಮೇಲೆದ್ದು ಬಂದ ಮಹಾಶಂಖವೆಂಬ ವೃಕ್ಷವನ್ನು ನೋಡಿದನು.

ಶ್ವೇತಪರ್ವತಸಂಕಾಶಮೃಷಿಸಂಘೈರ್ನಿಷೇವಿತಮ್ ।
ಸರಸ್ವತ್ಯಾಸ್ತಟೇ ಜಾತಂ ನಗಂ ತಾಲಧ್ವಜೋ ಬಲೀ ॥೨೨॥

ಆ ವೃಕ್ಷವು ಬೆಳ್ಳಗಿನ ಪರ್ವತದ ಹಾಗೆ ಕಾಣಿಸುತ್ತಿತ್ತು. ಅದರ ಕೆಳಗೆ ಋಷಿ-ಮುನಿಗಳು ವಾಸಿಸುತ್ತಿದ್ದರು. ಸರಸ್ವತೀನದಿಯ ತೀರದಲ್ಲದು ಬೆಳೆದು ನಿಂತಿತ್ತು. ಅಂತಹ ಮರವನ್ನು, ತಾಳೆ ಮರದ ಚಿಹ್ನೆಯ ಧ್ವಜವನ್ನು ಹೊಂದಿರುವ ಬಲರಾಮನು ನೋಡಿದನು.

ಯಕ್ಷವಿದ್ಯಾಧರಾಶ್ಚೈವ ರಾಕ್ಷಸಾಶ್ಚ ಸಹಸ್ರಶಃ ।
ಪಿಶಾಚಾಶ್ಚಾಮಿತಬಲಾಸ್ತತ್ರ ಸಿದ್ಧಾಃ ಸಹಸ್ರಶಃ ॥೨೩॥

ತೇ ಸರ್ವೇ ಹ್ಯಶನಂ ಕೃತ್ವಾ ಫಲೈಸ್ತಸ್ಯ ವನಸ್ಪತೇಃ ।
ವ್ರತೈಶ್ಚ ನಿಯಮೈಶ್ಚೈವ ಕಾಲೇ ಕಾಲೇ ಸ್ಮ ಭುಂಜತೇ ॥೨೪॥

ಸಾವಿರಾರು ಸಂಖ್ಯೆಯಲ್ಲಿ ಯಕ್ಷರು, ವಿದ್ಯಾಧರರು, ರಾಕ್ಷಸರು, ಅಮಿತ ಬಲಶಾಲಿಗಳಾದ ಪಿಶಾಚರು, ಸಿದ್ಧರು ಇವರೆಲ್ಲರೂ ಈ ವೃಕ್ಷದ ಫಲವನ್ನು ತಮ್ಮ ಭೋಜವನ್ನಾಗಿ ಸ್ವೀಕರಿಸುತ್ತಿದ್ದರು. ವ್ರತ-ನಿಯಮಗಳಲ್ಲಿ ಆಸಕ್ತರಾದ ಅವರೆಲ್ಲರೂ ಕಾಲ ಕಾಲದಲ್ಲಿ ಈ ಫಲಗಳನ್ನು ತಿನ್ನುತ್ತಿದ್ದರು.

ಅದೃಶ್ಯಮಾನಾ ಮನುಜೈರ್ವ್ಯಚರನ್ ಭರತರ್ಷಭ ॥೨೫॥

ಭರತಕುಲಶ್ರೇಷ್ಠನೇ! ಇವರ್ಯಾರೂ ಕೂಡ ಮನುಷ್ಯರ ದೃಷ್ಟಿಗೆ ಬೀಳದೆ ಸಂಚಾರ ಮಾಡುತ್ತಿದ್ದರು.

ಏವಂ ಖ್ಯಾತೋ ನರಪತೇ ಲೋಕೇಽಸ್ಮಿನ್ ಸ ವನಸ್ಪತಿಃ ।
ತತ್ರ ತೀರ್ಥಂ ಸರಸ್ವತ್ಯಾಃ ಪಾವನಂ ಲೋಕವಿಶ್ರುತಮ್ ॥೨೬॥

ರಾಜನೇ! ಈ ವೃಕ್ಷವು ಲೋಕದಲ್ಲಿ ಈ ರೀತಿಯಲ್ಲಿ ಪ್ರಸಿದ್ಧವಾಗಿತ್ತು. ಅಲ್ಲಿ ಸರಸ್ವತಿಯ ತೀರ್ಥವೂ ಪವಿತ್ರವೆಂದು ಲೋಕಪ್ರಸಿದ್ಧವಾಗಿತ್ತು.

ತಸ್ಮಿಂಶ್ಚ ಯದುಶಾರ್ದೂಲೋ ದತ್ತ್ವಾ ತೀರ್ಥೇ ಯಶಸ್ವಿನಾಮ್ ।
ತಾಮ್ರಾಯಸಾನಿ ಭಾಂಡಾನಿ ವಸ್ತ್ರಾಣ್ಯಾಭರಣಾನಿ ಚ ॥೨೭॥

ಆ ಕ್ಷೇತ್ರದಲ್ಲಿ ಯದುಶ್ರೇಷ್ಠನಾದ ಬಲರಾಮನು ತಾಮ್ರದ, ಕಬ್ಬಿಣದ ಪಾತ್ರೆಗಳನ್ನು, ವಸ್ತ್ರಗಳನ್ನು, ಆಭರಣಗಳನ್ನು ದಾನ ಮಾಡಿದನು.

ಪೂಜಯಿತ್ವಾ ದ್ವಿಜಾಂಶ್ಚೈವ ಪೂಜಿತಶ್ಚ ದ್ವಿಜೋತ್ತಮೈಃ ।
ಪುಣ್ಯಂ ರಾಜನ್ನಾಜಗಾಮ ಮುನಿತೀರ್ಥಂ ಮಹಾಬಲಃ ॥೨೮॥

ರಾಜನೇ! ಅಲ್ಲಿ ಬ್ರಾಹ್ಮಣರನ್ನು ಪೂಜಿಸಿ, ಬೇರೆ ಬ್ರಾಹ್ಮಣರಿಂದ ತಾನು ಪೂಜೆಯನ್ನು ಸ್ವೀಕರಿಸಿ, ಬಲರಾಮನು ಮುನಿತೀರ್ಥಕ್ಷೇತ್ರಕ್ಕೆ ಬಂದನು

ತತ್ರ ಗತ್ವಾ ಮುನೀನ್ ದೃಷ್ಟ್ವಾ ನಾನಾವೇಷಧರಾನ್ ಬಹೂನ್ ।
ಆಪ್ಲುತ್ಯ ಸಲಿಲೇ ಚಾಪಿ ಪೂಜಯಾಮಾಸ ವೈ ದ್ವಿಜಾನ್ ॥೨೯॥

ಮುನಿತೀರ್ಥಕ್ಕೆ ಹೋದ ಬಲರಾಮನು ಅಲ್ಲಿ ಬೇರೆ ಬೇರೆ ವಿಧದಲ್ಲಿ ವೇಷಧಾರಣೆ ಮಾಡಿಕೊಂಡಿದ್ದ ಮುನಿಗಳನ್ನು ನೋಡಿದ. ತೀರ್ಥದಲ್ಲಿ ಅವಗಾಹನ ಸ್ನಾನವನ್ನು ಮಾಡಿ ಬ್ರಾಹ್ಮಣರನ್ನು ಪೂಜಿಸಿದನು.

ತಥೈವ ದತ್ತ್ವಾ ವಿಪ್ರೇಭ್ಯಃ ಪರಿಭೋಗಾನ್ ಸುಪುಷ್ಕಲಾನ್ ।
ತತಃ ಪ್ರಾಯಾದ್ ಬಲೋ ರಾಜನ್ ದಕ್ಷಿಣೇನ ಸರಸ್ವತೀಮ್ ॥೩೦॥

ಹಾಗೆಯೇ ಬ್ರಾಹ್ಮಣರಿಗೆ ಬಹಳವಾಗಿ ಭೋಗಪದಾರ್ಥಗಳನ್ನು ದಾನಮಾಡಿ ಬಲರಾಮನು ಅಲ್ಲಿಂದ ಮುಂದೆ ಸರಸ್ವತಿಯ ದಕ್ಷಿಣಭಾಗವನ್ನು ತಲುಪಿದನು.

ಗತ್ವಾ ಚೈನಾಂ ಮಹಾಬಾಹುರ್ನಾತಿದೂರೇ ಮಹಾಯಶಾಃ ।
ಧರ್ಮಾತ್ಮಾ ನಾಗಧನ್ವಾನಂ ತೀರ್ಥಂ ಚಾಗಮದಚ್ಯುತಃ ॥೩೧॥

ಮಹಾಕೀರ್ತಿಶಾಲಿಯಾದ, ಮಹಾಬಾಹುವಾದ ಧರ್ಮಾತ್ಮ ಬಲರಾಮನು ಸ್ವಲ್ಪದೂರದಲ್ಲಿಯೇ ಇದ್ದ ನಾಗಧನ್ವ ಎಂಬ ತೀರ್ಥಕ್ಕೆ ಹೋದನು.

ತತ್ತು ಪನ್ನಗರಾಜಸ್ಯ ವಾಸುಕೇಸ್ತನ್ನಿವೇಶನಮ್ ।
ಮಹಾದ್ಯುತೇರ್ಮಹಾರಾಜ ಬಹುಭಿಃ ಪನ್ನಗೈರ್ವೃತಮ್ ॥೩೨॥

ಮಹಾರಾಜನೇ! ಸರ್ಪಗಳಿಂದ ತುಂಬಿದ ಆ ನಾಗಧನ್ವ ತೀರ್ಥವು ನಾಗರಾಜನಾದ ಮಹಾಕಾಂತಿಮಂತ ವಾಸುಕಿಯ ಆವಾಸಸ್ಥಾನವಾಗಿತ್ತು.

ಯತ್ರಾಸನ್ ಋಷಯಃ ಸಿದ್ಧಾಃ ಸಹಸ್ರಾಣಿ ಚತುರ್ದಶ ॥೩೩॥

ಆ ಕ್ಷೇತ್ರದಲ್ಲಿ ಹದಿನಾಲ್ಕು ಸಾವಿರ ಋಷಿಗಳು ಮತ್ತು ಸಿದ್ಧರು ಇದ್ದರು.

ಯತ್ರ ದೇವಾಃ ಸಮಾಸಾದ್ಯ ವಾಸುಕಿಂ ಪನ್ನಗೋತ್ತಮಮ್ ।
ಸರ್ವಪನ್ನಗರಾಜಾನಮಭ್ಯಷಿಂಚನ್ ಯಥಾವಿಧಿ ॥೩೪॥

ಅಲ್ಲಿ ದೇವತೆಗಳು ಬಂದು ನಾಗಗಳಲ್ಲಿ ಉತ್ತಮನಾದ ವಾಸುಕಿಯನ್ನು ಸಕಲನಾಗಗಳಿಗೆ ರಾಜನನ್ನಾಗಿ ಪಟ್ಟಾಭಿಷೇಕ ಮಾಡಿದರು.

ಪನ್ನಗೇಭ್ಯೋ ಭಯಂ ತತ್ರ ನ ಚ ವಿದ್ಯೇತ ಭಾರತ ॥೩೫॥

ಭರತಕುಲೋದ್ಭವನೇ! ಅಲ್ಲಿ ಸರ್ಪಗಳಿಂದ (ಸರ್ಪಗಳಿಗೆ) ಭಯವೇ ಇರುವುದಿಲ್ಲ.

ತತ್ರಾಪಿ ವಿಧಿವದ್ ದತ್ತ್ವಾ ವಿಪ್ರಾಣಾಂ ವಿತ್ತಸಂಚಯಾನ್ ।
ಯಯೌ ಪ್ರಾಚೀಂ ದಿಶಂ ರಾಜನ್ ದೀಪ್ಯಮಾನಃ ಸ ವೀರ್ಯವಾನ್ ॥

ಅಲ್ಲಿಯೂ ಬಲರಾಮನು ಸಂಪತ್ತಿನ ಸಂಗ್ರಹವನ್ನೇ ಬ್ರಾಹ್ಮಣರಿಗೆ ವಿಧಿಬದ್ಧವಾಗಿ ದಾನ ಮಾಡಿದನು. ಕಾಂತಿಯಿಂದ ಶೋಭಿಸುತ್ತಿರುವ ವೀರ ಬಲರಾಮನು ಅಲ್ಲಿಂದ ಪೂರ್ವದಿಕ್ಕಿಗೆ ಹೋದನು.

ಆಪ್ಲುತ್ಯ ಬಹುಶೋ ಹೃಷ್ಟಸ್ತೇಷು ತೀರ್ಥೇಷು ಲಾಂಗಲೀ ।
ದತ್ತ್ವಾ ವಸು ದ್ವಿಜಾಗ್ರ್ಯೇಭ್ಯೋ ನಿರ್ಜಗಾಮ ಮಹಾಬಲಃ ॥೩೭॥

ಬಲರಾಮನು ಆ ತೀರ್ಥಗಳಲ್ಲಿ ಅನೇಕಬಾರಿ ಸ್ನಾನವನ್ನು ಮಾಡಿ ಬಹಳವಾಗಿ ಸಂತೋಷವನ್ನು ಹೊಂದಿದನು. ಮಹಾಬಲನಾದ ಬಲರಾಮನು ಉತ್ತಮ ಬ್ರಾಹ್ಮಣರಿಗೆ ಸಂಪತ್ತನ್ನು ದಾನ ಮಾಡಿದನು.

ತತ್ರಸ್ಥಾನ್ ಋಷಿಸಂಘಾಂಸ್ತಾನಭಿವಾದ್ಯ ಹಲಾಯುಧಃ ।
ತತೋ ರಾಮೋऽಗಮತ್ ತೀರ್ಥಂ ಋಷಿಭಿಃ ಸೇವಿತಂ ಮಹತ್ ॥

ಹಲಾಯುಧನು ಅಲ್ಲಿದ್ದ ಋಷಿಸಮೂಹವನ್ನೂ ನಮಸ್ಕರಿಸಿ ಅಲ್ಲಿಂದ ಮುಂದೆ ಋಷಿಗಳು ಆಶ್ರಯಿಸಿರುವ ದೊಡ್ಡದಾದ ತೀರ್ಥಕ್ಷೇತ್ರಕ್ಕೆ ಹೋದನು.

ಯತ್ರ ಭೂಯೋ ನಿವವೃತೇ ಪ್ರಾಙ್ಮುಖಾ ವೈ ಸರಸ್ವತೀ ।
ಋಷೀಣಾಂ ನೈಮಿಶೀಯಾನಾಮಪೇಕ್ಷಾರ್ಥಂ ಮಹಾತ್ಮನಾಮ್ ॥೩೯॥

ಅಲ್ಲಿ ಮಹಾತ್ಮರಾದ ನೈಮಿಷಕ್ಷೇತ್ರದ ಋಷಿಗಳ ಅಪೇಕ್ಷೆಯಂತೆ ಸರಸ್ವತಿನದಿಯು ಮತ್ತೆ ಪೂರ್ವಾಭಿಮುಖವಾಗಿ ತಿರುಗಿದ್ದಾಳೆ.

ನಿವೃತ್ತಾಂ ತಾಂ ಸರಿಚ್ಛ್ರೇಷ್ಠಾಂ ತತ್ರ ಗತ್ವಾ ತು ಲಾಂಗಲೀ ।
ಬಭೂವ ವಿಸ್ಮಿತೋ ರಾಜನ್ ಬಲಃ ಶ್ವೇತಾನುಲೇಪನಃ ॥೪೦॥

ರಾಜನೇ! ಅಲ್ಲಿ ಹೀಗೆ ಮಾರ್ಗವನ್ನು ಬದಲಿಸಿದ ಸರಸ್ವತೀನದಿಗೆ ಹೋಗಿ, ಬೆಳ್ಳಗಿನ ಸುಗಂಧ ದ್ರವ್ಯಗಳನ್ನು ಲೇಪಿಸಿಕೊಂಡಿರುವ ಬಲರಾಮನು ಬಹಳ ಆಶ್ಚರ್ಯಪಟ್ಟನು.

ಜನಮೇಜಯಃ

ಕಸ್ಮಾತ್ ಸರಸ್ವತೀ ಬ್ರಹ್ಮನ್ ನಿವೃತ್ತಾ ಪ್ರಾಙ್ಮುಖೀ ತತಃ ।
ಆಖ್ಯಾತುಮೇತದಿಚ್ಛಾಮಿ ಸರ್ವಮಧ್ವರ್ಯುಸತ್ತಮ ॥೪೧॥

ಜನಮೇಜಯ– ಸಕಲ ಅಧ್ವರ್ಯುಗಳಲ್ಲಿಯೇ ಶ್ರೇಷ್ಠನಾದ ಜ್ಞಾನಿಯೇ! ಸರಸ್ವತಿನದಿಯು ಆಲ್ಲಿಂದ ಮುಂದೆ ಯಾವ ಕಾರಣದಿಂದ ಪೂರ್ವದಿಕ್ಕಿಗೆ ತಿರುಗಿದಳು? ಇದರ ಬಗ್ಗೆ ನಿಮ್ಮಿಂದ ನಾನು ಕೇಳಲು ಇಚ್ಛಿಸುತ್ತೇನೆ.

ಕಸ್ಮಿಂಶ್ಚ ಕಾರಣೇ ತತ್ರ ವಿಸ್ಮಿತೋ ಯದುನಂದನಃ ।
ನಿವೃತ್ತಾ ಚ ಸರಿಚ್ಛ್ರೇಷ್ಠಾ ಕಥಮೇತದ್ ದ್ವಿಜೋತ್ತಮ ॥೪೨॥

ಯಾವ ಕಾರಣದಿಂದ ಬಲರಾಮನು ಆಶ್ಚರ್ಯಕ್ಕೆ ಒಳಗಾದನು? ದ್ವಿಜೋತ್ತಮನೇ ಉತ್ತಮನದಿಯಾದ ಸರಸ್ವತಿಯು ಯಾವ ರೀತಿಯಲ್ಲಿ ಮಾರ್ಗ ಬದಲಿದಳು?

ವೈಶಂಪಾಯನಃ

ಪೂರ್ವಂ ಕೃತಯುಗೇ ರಾಜನ್ ನೈಮಿಶೇಯಾಸ್ತಪೋಧನಾಃ ।
ವರ್ತಮಾನೇ ಸುಬಹುಲೇ ಸತ್ರೇ ದ್ವಾದಶವಾರ್ಷಿಕೇ ॥೪೩॥

ವೈಶಂಪಾಯನ– ರಾಜನೇ! ಹಿಂದೆ ಕೃತಯುಗದಲ್ಲಿ ನೈಮಿಷಕ್ಷೇತ್ರದ ತಪಸ್ವಿಗಳು ಹನ್ನೆರಡು ವರ್ಷಗಳವರೆಗೆ ನಡೆಯುವ ಬಹುವಿಸ್ತಾರವಾದ ಯಾಗವನ್ನು ಮಾಡುತ್ತಿದ್ದರು.

ಋಷಯೋ ಬಹವೋ ರಾಜನ್ ತತ್ರ ಸಂಪ್ರತಿಪೇದಿರೇ ।
ಉಷಿತ್ವಾ ಚ ಮಹಾಭಾಗಾಸ್ತತ್ರ ತೀರ್ಥೇ ಯಥಾವಿಧಿ ॥೪೪॥

ಅಲ್ಲಿಗೆ ಅನೇಕ ಋಷಿಗಳು ಬಂದಿದ್ದರು. ಮಹಾಭಾಗ್ಯಶಾಲಿಗಳಾದ ಅವರೆಲ್ಲ ಅಲ್ಲಿ ಶಾಸ್ತ್ರೋಕ್ತರೀತಿಯಲ್ಲಿ ವಾಸ ಮಾಡಿದರು.

ನಿರ್ವೃತ್ತೇ ನೈಮಿಶೇಯೇ ವೈ ಸತ್ರೇ ದ್ವಾದಶವಾರ್ಷಿಕೇ ।
ಆಜಗ್ಮುಃ ಋಷಯಸ್ತತ್ರ ಬಹವಸ್ತೀರ್ಥಕಾರಣಾತ್ ॥೪೫॥

ಹನ್ನೆರಡು ವರ್ಷಗಳ ಯಾಗವು ಸಂಪೂರ್ಣಗೊಂಡಾಗ ತೀರ್ಥಯಾತ್ರೆಗಾಗಿ ಮತ್ತೆ ಬಹಳ ಋಷಿಗಳು ಬಂದರು.

ಋಷೀಣಾಂ ಬಹುಲತ್ವಾತ್ ತು ಸರಸ್ವತ್ಯಾ ವಿಶಾಂಪತೇ ।
ತೀರ್ಥಾನಿ ನಗರಾಯಂತೇ ಕೂಲೇ ವೈ ದಕ್ಷಿಣೋತ್ತರೇ ॥೪೬॥

ಹೀಗೆ ಬಹಳ ಋಷಿಗಳು ಬಂದಿದ್ದರಿಂದ ಸರಸ್ವತಿಯ ದಕ್ಷಿಣ ಮತ್ತು ಉತ್ತರ ತೀರದಲ್ಲಿದ್ದ ತೀರ್ಥಕ್ಷೇತ್ರಗಳು ನಗರಗಳ ಹಾಗೆ ಆದವು.

ಸಮಂತಪಂಚಕಂ ಯಾವತ್ ತಾವತ್ತೇ ದ್ವಿಜಸತ್ತಮಾಃ ।
ತೀರ್ಥಲೋಭಾನ್ನರವ್ಯಾಘ್ರ ನದ್ಯಾಸ್ತೀರಂ ಸಮಾಶ್ರಿತಾಃ ॥೪೭॥

ಶ್ರೇಷ್ಠರಾಜನೇ! ತೀರ್ಥಗಳಲ್ಲಿ ವಾಸಮಾಡುವ ಲೋಭದಿಂದಾಗಿ ಋಷಿಗಳು ಸಮಂತಕಪಂಚಕದ ವರೆಗೆ ನದಿಯ ತೀರದಲ್ಲಿಯೇ ಆಶ್ರಯವನ್ನು ಪಡೆದರು.

ಜುಹ್ವತಾಂ ತತ್ರ ತೇಷಾಂ ತು ಮುನೀನಾಂ ಭಾವಿತಾತ್ಮನಾಮ್ ।
ಸ್ವಾಧ್ಯಾಯೇನಾಪಿ ಮಹತಾ ಬಭೂವುಃ ಪರಿತೋ ದಿಶಃ ॥೪೮॥

ಪವಿತ್ರಮನಸ್ಸುಳ್ಳ ಆ ಮುನಿಗಳ ಯಾಗಾನುಷ್ಠಾನದಿಂದ ಮತ್ತು ಶಾಸ್ತ್ರಗಳ ಅಧ್ಯಯನದಿಂದ ಎಲ್ಲಾ ದಿಕ್ಕುಗಳು ತುಂಬಿದವು.

ಅಗ್ನಿಹೋತ್ರೈಸ್ತತಸ್ತೇಷಾಂ ಹೂಯಮಾನೈರ್ಮಹಾತ್ಮನಾಮ್ ।
ಅಶೋಭತ ಸರಿಚ್ಛ್ರೇಷ್ಠಾ ದೀಪ್ಯಮಾನೈಃ ಸಮಂತತಃ ॥೪೯॥

ಮಹಾತ್ಮರಾದ ಅವರು ಸುತ್ತಲೂ ಅಗ್ನಿಹೋತ್ರವನ್ನು ಮಾಡುತ್ತಿದ್ದುದರಿಂದ ಸರಸ್ವತಿನದಿಯು ಆ ಹೋಮಗಳಿಂದ ಕಂಗೊಳಿಸುತ್ತಿತ್ತು.

ವಾಲಖಿಲ್ಯಾ ಮಹಾರಾಜ ಅಶ್ಮಕುಟ್ಟಾಶ್ಚ ತಾಪಸಾಃ ।
ದಂತೋಲೂಖಿಲಿನಶ್ಚಾನ್ಯೇ ಸಂಪ್ರಕ್ಷಾಲಾಸ್ತಥಾ ಪರೇ ॥೫೦॥

ವಾಯುಭಕ್ಷಾಃ ಫಲಾಹಾರಾಃ ಪರ್ಣಭಕ್ಷಾಶ್ಚ ತಾಪಸಾಃ ।
ನಾನಾನಿಯಮಧರ್ಮಾಶ್ಚ ತಥಾನ್ಯೇ ಸ್ಥಂಡಿಲೇಶಯಾಃ ॥೫೧॥

ಅವಸನ್ ಮುನಯಸ್ತತ್ರ ಸರಸ್ವತ್ಯಾಃ ಸಮೀಪತಃ ॥೫೨॥

ಮಹಾರಾಜನೇ! ಸರಸ್ವತಿನದಿಯ ಸಮೀಪದಲ್ಲಿ ವಾಲಖಿಲ್ಯರು, ಅಶ್ಮಕುಟ್ಟ ತಪಸ್ವಿಗಳು (ಕಲ್ಲುಗಳಿಂದ ಬೀಳಿಸಿದ ಸ್ವಲ್ಪ ಫಲವನ್ನು ಸ್ವೀಕರಿಸುವವರು), ದಂತೋಲೂಖಿಲಿಗಳೂ (ಹಲ್ಲುಗಳನ್ನೇ ಭತ್ತ ಕುಟ್ಟುವ ಕಲ್ಲುಗಳಂತೆ ಉಪಯೋಗಿಸುವವರು, ಕೇವಲ ಹಲ್ಲಿನಿಂದಲೇ ಜಗಿದು ತಿನ್ನುವವರು.) ಸಂಪ್ರಕ್ಷಾಲರು (ಕೆಳಗೆ ಬಿದ್ದ ಫಲಗಳನ್ನೇ ಸ್ವೀಕರಿಸುವವರು) ವಾಯುಭಕ್ಷರು, ಕೇವಲ ಫಲವನ್ನು ಆಹಾರವಾಗಿ ಸ್ವೀಕರಿಸುವವರು, ಎಲೆಯನ್ನು ತಿಂದು ಜೀವನಮಾಡುವವರು, ಹೀಗೆ ನಾನಾರೀತಿಯ ನಿಯಮಗಳನ್ನು ಪಾಲಿಸುವ ತಪಸ್ವಿಗಳು, ನೆಲದಲ್ಲಿಯೇ ಮಲಗುವ ನಿಯಮವುಳ್ಳವರು ಇವರೆಲ್ಲರೂ ವಾಸಮಾಡಿದ್ದರು.

ವ್ಯಶೋಭಯನ್ ಸರಿಚ್ಛ್ರೇಷ್ಠಾಂ ಗಂಗಾಮಿವ ದಿವೌಕಸಃ ॥೫೩॥

ತತೋ ಯಜ್ಞಂ ಸಮಾಪೇತುರ್ಮಹರ್ಷಯಃ ಸತ್ರಯಾಜಿನಃ ।
ತೇऽವಕಾಶಂ ಚ ದದೃಶುಃ ಕುರುಕ್ಷೇತ್ರೇ ಮಹಾಯಶಃ ॥೫೪॥

ಗಂಗೆಯಂತೆ ಶೋಭಿಸುವ ಸರಸ್ವತಿನದಿಯನ್ನು ದೇವತೆಗಳು ನೋಡಿದರು. ಅನಂತರ ಸತ್ರಯಾಜಕರಾದ ಋಷಿಗಳು ಯಾಗಕ್ಕೆ ಬಂದರು. ಮಹಾಕೀರ್ತಿವಂತರಾದ ಅವರು ಕುರುಕ್ಷೇತ್ರದಲ್ಲಿ ತಮಗೆ ವಾಸಕ್ಕೆ ಅವಕಾಶವನ್ನು ಕಲ್ಪಿಸಿಕೊಂಡರು.

ತತೋ ಯಜ್ಞೋಪವೀತೈಸ್ತೈಃ ತತ್ತೀರ್ಥಂ ನಿರ್ಮಿಮಾಯ ವೈ ।
ಜುಹುವುಶ್ಚಾಗ್ನಿಹೋತ್ರಾಣಿ ಚಕ್ರುಶ್ಚ ವಿವಿಧಾಃ ಕ್ರಿಯಾಃ ॥೫೫॥

ಅನಂತರ ತಮ್ಮ ಯಜ್ಞೋಪವೀತಗಳಿಂದಲೇ ನದಿಯ ನೀರನ್ನು ಅಲ್ಲಿಗೆ ತಂದುಕೊಂಡು ಬಂದು ಅಲ್ಲಿ ಅಗ್ನಿಹೋತ್ರವನ್ನು ಆಚರಿಸಿದರು ಮತ್ತು ಬೇರೆ ಬೇರೆ ನಿಯಮಾನುಷ್ಠಾನಗಳನ್ನು ನಡೆಸಿದರು.

ತತಸ್ತಮೃಷಿಸಂಘಾತಂ ನಿರಾಶಂ ಚಿಂತಯಾऽನ್ವಿತಮ್ ।
ದರ್ಶಯಾಮಾಸ ರಾಜೇಂದ್ರ ತೇಷಾಮರ್ಥೇ ಸರಸ್ವತೀ ॥೫೬॥

ಆ ಋಷಿಗಳು ಹೀಗೆ (ನದಿ ನೀರಿನ ವಿಷಯದಲ್ಲಿ) ಚಿಂತೆಗೊಳಗಾಗಿದ್ದನ್ನು ನೋಡಿದ ಸರಸ್ವತಿ ನದಿಯು ಅವರಿಗೋಸ್ಕರವಾಗಿ ಕಾಣಿಸಿಕೊಂಡಳು.

ತತಃ ಕುಡ್ಯಾನ್ (ಕುಂಜಾನ್) ಬಹೂನ್ ಕೃತ್ವಾ ಸನ್ನಿವೃತ್ತಾ ಸರಸ್ವತೀ ।
ಋಷೀಣಾಂ ಪುಣ್ಯತಪಸಾಂ ಮಾನನಾರ್ಥಂ ಮಹಾತ್ಮನಾಮ್ ॥೫೭॥

ಅದಕ್ಕಾಗಿ ಮಹಾತ್ಮರಾದ ಋಷಿಗಳಿಗೆ ಪ್ರತ್ಯೇಕವಾದ ಆಶ್ರಮವನ್ನು ಮಾಡಿಕೊಟ್ಟು ಅವರನ್ನು ಗೌರವಿಸುವುದಕ್ಕಾಗಿ ಸರಸ್ವತಿ ನದಿಯು ತನ್ನ ಹರಿಯುವ ಮಾರ್ಗದಲ್ಲಿ ಬಹಳವಾದ ಗಿಡಪೊದೆಗಳನ್ನು ಶೇಖರಿಸಿ ನೀರನ್ನು ತಡೆಹಿಡಿದುಕೊಂಡು ಪೂರ್ಣವಾಗಿ ಪೂರ್ವದಿಕ್ಕಿಗೆ ಮಾರ್ಗವನ್ನು ಬದಲಿಸಿಕೊಂಡಳು.

ತತೋ ನಿವೃತ್ತಾ ರಾಜೇಂದ್ರ ತೇಷಾಮರ್ಥೇ ಸರಸ್ವತೀ ।
ಭೂಯಃ ಪ್ರತೀಚ್ಯಭಿಮುಖೀ ಸುಸ್ರಾವ ಸರಿತಾಂ ವರಾ ॥೫೮॥

ರಾಜೇಂದ್ರನೇ! ಹೀಗೆ ಋಷಿಗಳಿಗಾಗಿ ಪೂರ್ವಕ್ಕೆ ತಿರುಗಿದ ಉತ್ತಮನದಿಯಾದ ಸರಸ್ವತಿಯು ಪುನಃ ಪಶ್ಚಿಮದಿಕ್ಕಿಗೆ ಅಭಿಮುಖವಾಗಿ ಹರಿದಳು.

ಅಮೋಘಂ ಗಮನಂ ಕೃತ್ವಾ ತೇಷಾಂ ಭೂಯೋ ಜಗಾಮ ಹ ।
ಅತ್ಯದ್ಭುತಂ ತದಾ ಚಕ್ರೇ ತತ್ರ ರಾಜನ್ ಮಹಾನದೀ ॥೫೯॥

ಹೀಗೆ ಆ ಋಷಿಗಳ ಯಾತ್ರೆಯು ವ್ಯರ್ಥವಾಗದ ರೀತಿಯಲ್ಲಿ ಮಾಡಿ ಮತ್ತೆ ತನ್ನ ಮಾರ್ಗದಲ್ಲಿ ಹೋದಳು. ರಾಜನೇ! ಅಲ್ಲಿ ಸರಸ್ವತಿ ಮಹಾನದಿಯು ಅತ್ಯದ್ಭುತವಾದುದನ್ನು ಮಾಡಿ ತೋರಿಸಿದಳು.

ಏವಂ ಹಿ ಕುಂಜೋ ರಾಜೇಂದ್ರ ನೈಮಿಷೀಯ ಇತಿ ಶ್ರುತಿಃ ।
ಕುರುಶ್ರೇಷ್ಠ ಕುರುಕ್ಷೇತ್ರೇ ಕುರುಷ್ವ ಮಹತೀ ಕ್ರಿಯಾಃ ॥೬೦॥

ಹೀಗೆ ಆ ಸ್ಥಳವು ಕುಂಜನೈಮಿಷೀಯ ಎಂಬುದಾಗಿ ಶ್ರುತಿ-ಸ್ಮೃತಿಗಳಲ್ಲಿ ಪ್ರಸಿದ್ಧವಾಯಿತು. ಜನಮೇಜಯನೇ! ನೀನೂ ಕೂಡ ಈ ಕುರುಕ್ಷೇತ್ರದಲ್ಲಿ ಮಹತ್ತಾದ ಕಾರ್ಯಗಳನ್ನು ಮಾಡು.

ತತ್ರ ಕುಂಜಾನ್ ಬಹೂನ್ ದೃಷ್ಟ್ವಾ ಸನ್ನಿವೃತ್ತಾಂ ಚ ತಾಂ ನದೀಮ್ ।
ಬಭೂವ ವಿಸ್ಮಯಸ್ತತ್ರ ರಾಮಸ್ಯಾಥ ಮಹಾತ್ಮನಃ ॥೬೧॥

ಆ ಜಾಗದಲ್ಲಿ ಬಹಳವಾದ ಗಿಡಪೊದೆಗಳನ್ನು ಮತ್ತು ಅದರಿಂದಾಗಿ ಪೂರ್ಣವಾಗಿ ವಿರುದ್ಧ ದಿಕ್ಕಿಗೆ ಮಾರ್ಗಬದಲಿಸಿದ ಸರಸ್ವತಿಯನ್ನು ನೋಡಿ ಮಹಾತ್ಮನಾದ ಬಲರಾಮನಿಗೆ ಬಹಳ ಆಶ್ಚರ್ಯವು ಉಂಟಾಯಿತು.

ಉಪಸ್ಪೃಶ್ಯ ಚ ತತ್ರಾಪಿ ವಿಧಿವದ್ ಯದುನಂದನಃ ।
ದತ್ತ್ವಾ ದೇಯಾನ್ ದ್ವಿಜಾತಿಭ್ಯೋ ಭಾಂಡಾನಿ ವಿವಿಧಾನಿ ಚ ॥೬೨॥

ಅಲ್ಲಿ ಯದುಕುಮಾರನಾದ ಬಲರಾಮನು ಆಚಮನ-ಸ್ನಾನಾದಿಗಳನ್ನು ಮಾಡಿ ಬ್ರಾಹ್ಮಣರಿಗೆ ವಿವಿಧ ರೀತಿಯ ಪೂರ್ಣಪಾತ್ರೆಗಳನ್ನು ದಾನ ಮಾಡಿದನು.

ಭಕ್ಷ್ಯಂ ಪೇಯಂ ಚ ವಿವಿಧಂ ಬ್ರಾಹ್ಮಣಾನ್ ಪ್ರತ್ಯಭೋಜಯತ್ ॥೬೩॥

ವಿವಿಧ ಭಕ್ಷ್ಯ, ಪೇಯಗಳಿಂದ ಬ್ರಾಹ್ಮಣರಿಗೆ ಊಟ ಮಾಡಿಸಿದನು.

ತತಃ ಪ್ರಾಯಾದ್ ಬಲೋ ರಾಜನ್ ಪೂಜ್ಯಮಾನೋ ದ್ವಿಜಾತಿಭಿಃ ।
ಸರಸ್ವತ್ಯಾಸ್ತೀರ್ಥವರಂ ನಾನಾದ್ವಿಜಗಣಾಯುತಮ್ ॥೬೪॥

ರಾಜನೇ! ಬ್ರಾಹ್ಮಣರಿಂದ ಸತ್ಕೃತನಾದ ಬಲರಾಮನು ಅನೇಕ ದ್ವಿಜರಿಂದ ತುಂಬಿದ ಸರಸ್ವತಿಯ ಶ್ರೇಷ್ಠವಾದ ತೀರ್ಥಕ್ಕೆ ಹೋದನು.

ಬದರೇಂಗುದಶ್ಯಾಮಾಕಪ್ಲಕ್ಷಾಶ್ವತ್ಥವಿಭೀತಕೈಃ ।
ಪನಸೈಶ್ಚ ಪಲಾಶೈಶ್ಚ ಕರವೀರೈಶ್ಚ ಪೀಲುಭಿಃ ॥೬೫॥

ಸರಸ್ವತೀತೀರರುಹೈಶ್ಚಂದನೈಃ ಸ್ಪಂದನೈಸ್ತಥಾ ।
ಕರೂಷಿಕವನೈಶ್ಚೈವ ಬಿಲ್ವೈರಾಮಲಕೈರಪಿ ॥೬೬॥

ಅತಿಮುಕ್ತಕಷಂಡೈಶ್ಚ ಪಾರಿಜಾತೈಶ್ಚ ಶೋಭಿತಮ್ ।
ಕದಲೀವನಭೂಯಿಷ್ಠಂ ದೃಷ್ಟಿಕಾಂತಂ ಮನೋಹರಮ್ ॥೬೭॥

ಆ ತೀರ್ಥವು ಬದರ, ಇಂಗುದ, ಶ್ಯಾಮಾಕ, ಪ್ಲಕ್ಷ, ಅಶ್ವತ್ಥ, ವಿಭೀತಕ, ಹಲಸು, ಮುತ್ತುಗ, ಕರವೀರ, ಪೀಲು, ಕರೂಷಿಕ, ಬಿಲ್ವ, ಆಮಲಕ (ನೆಲ್ಲಿ), ಅತಿಮುಕ್ತ, ಕಷಂಡ, ಪಾರಿಜಾತ ಮೊದಲಾದ ಮರಗಳಿಂದ ಶೋಭಿಸುತ್ತಿತ್ತು. ಕದಲೀವನಗಳು ಬಹಳವಾಗಿದ್ದವು. ನೋಡಲು ಸುಂದರವಾಗಿತ್ತು ಮತ್ತು ಮನಸ್ಸಿಗೆ ಮುದವನ್ನುಂಟುಮಾಡುತ್ತಿತ್ತು.

ವಾಯ್ವಂಬುಫಲಪರ್ಣಾದೈಃ ದಂತೋಲೂಖಲಿಕೈರಪಿ ।
ತಥಾಽಶ್ಮಕುಟ್ಟೈರ್ವಾ ತೋಯೈರ್ಮುನಿಭಿರ್ಬಹುಭಿರ್ವೃತಮ್ ॥೬೮॥

ಅಲ್ಲಿ ವಾಯುಭಕ್ಷರು, ಜಲಭಕ್ಷರು, ಫಲಭಕ್ಷರು, ಪರ್ಣಭಕ್ಷರು, ದಂತೋಲೂಖಲಿಕರು, ಅಶ್ಮಕುಟ್ಟರು, ತೋಯರು (ನೀರನ್ನೇ ಕುಡಿದು ಜೀವಿಸುವವರು) ಮೊದಲಾದ ಬಹಳ ಮುನಿಗಳು ಇದ್ದರು.

ಸ್ವಾಧ್ಯಾಯಘೋಷೈಃ ಸಂಘುಷ್ಟಂ ಮೃತಯೂಥಶತಾಕುಲಮ್ ।
ಅಹಿಂಸ್ರೈಃ ಧರ್ಮಪರಮೈರ್ನರ್ಭಿರತ್ಯಂತಸೇವಿತಮ್ ॥೬೯॥

ಆ ತೀರ್ಥವು ಋಷಿಗಳ ಅಧ್ಯಯನದ ಧ್ವನಿಯಿಂದ ತುಂಬಿಹೋಗಿತ್ತು. ಜಿಂಕೆಗಳ ಸಮೂಹವೇ ಅಲ್ಲಿತ್ತು. ಹಿಂಸೆಯನ್ನು ಮಾಡದ ಹಾಗು ಧಾರ್ಮಿಕರಾದ ಮುನಿಗಳು ಭಕ್ತಿಯಿಂದ ಬಹಳವಾಗಿ ಆ ತೀರ್ಥವನ್ನು ಸೇವಿಸುತ್ತಿದ್ದರು.

ಸಪ್ತಸಾರಸ್ವತಂ ತೀರ್ಥಮ್ ಆಜಗಾಮ ಹಲಾಯುಧಃ ।
ಯತ್ರ ಮಂಕಣಕಃ ಸಿದ್ಧಸ್ತಪಸ್ತೇಪೇ ಮಹಾಮುನಿಃ ॥೭೦॥

ಅಂತಹ ಸಪ್ತಸಾರಸ್ವತ ಎಂಬ ತೀರ್ಥಕ್ಕೆ ಬಲರಾಮನು ಬಂದನು. ಅಲ್ಲಿಯೇ ಮಂಕಣಕ ಎಂಬ ಮಹಾಮುನಿಯು ತಪಸ್ಸನ್ನು ಆಚರಿಸಿ ಜ್ಞಾನವನ್ನು ಪಡೆದಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಬಲಭದ್ರಸ್ಯ ತೀರ್ಥಯಾತ್ರಾವರ್ಣನಂ ನಾಮ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತನೆಯ ಅಧ್ಯಾಯ

ಸರಸ್ವತಿಯು ಏಳು ಭಾಗವಾಗಿ ವಿಭಾಗಗೊಂಡಿರುವುದಕ್ಕೆ ಕಾರಣನಿರೂಪಣೆ. ಏಳೂ ಭಾಗಗಳೂ ಒಂದು ತೀರ್ಥದಲ್ಲಿ ಒಟ್ಟು ಸೇರುವುದರಿಂದ ಆ ತೀರ್ಥಕ್ಕೆ ಸಪ್ತಸಾರಸ್ವತ ಎಂಬ ಹೆಸರು ಬಂದಿರುವುದು. ಮಂಕಣಕಮುನಿಯ ಚರಿತ್ರೆಯ ಪ್ರತಿಪಾದನೆ.

ಜನಮೇಜಯಃ

ಸಪ್ತಸಾರಸ್ವತಂ ಕಸ್ಮಾತ್ ಕಶ್ಚ ಮಂಕಣಕೋ ಮುನಿಃ ।
ಕಥಂ ಸಿದ್ಧಃ ಸ ಭಗವಾನ್ ಕಶ್ಚಾಸ್ಯ ನಿಯಮೋಽಭವತ್ ॥೧॥

ಜನಮೇಜಯ– ಸಪಸಾರಸ್ವತ ಎಂಬ ಹೆಸರು ಆ ತೀರ್ಥಕ್ಕೆ ಹೇಗೆ ಬಂತು? ಮಂಕಣಕ ಮುನಿಯು ಯಾರು? ಅವನು ಸಿದ್ಧಪುರುಷನು ಹೇಗಾದನು? ಅವನ ನಿಯಮವು ಯಾವುದು?

ಕಸ್ಯ ವಂಶೇ ಸಮುದ್ಭೂತಃ ಕಿಂ ವಾಽಧೀತಂ ಚ ವೈ ದ್ವಿಜ ।
ಏತನ್ಮೇ ಸರ್ವಮಾಚಕ್ಷ್ವ ಯಥಾವೃತ್ತಂ ಮಹಾಮುನೇ ॥೨॥

ಅವನು ಯಾವ ವಂಶದಲ್ಲಿ ಜನಿಸಿದನು? ದ್ವಿಜನೇ! ಅವನು ಏನೆಲ್ಲವನ್ನು ಅಧ್ಯಯನ ಮಾಡಿದ್ದನು? ಮಹಾಮುನಿಯೇ! ಇದೆಲ್ಲವನ್ನೂ ನನಗೆ ಹೇಳು.

ವೈಶಂಪಾಯನಃ

ಸಪ್ತ ನದ್ಯಃ ಸರಸ್ವತ್ಯೋ ಯಾಭಿರ್ವ್ಯಾಪ್ತಮಿದಂ ಜಗತ್ ।
ಆಹೂತಾ ಬಲವದ್ಭಿಸ್ತು ತತ್ರ ತತ್ರ ಸರಸ್ವತೀ ॥೩॥

ವೈಶಂಪಾಯನ– ಸರಸ್ವತಿ ಎಂಬ ಹೆಸರಿನಿಂದ ಕರೆಯಲ್ಪಡುವ ಏಳು ನದಿಗಳು ಇಡೀ ಜಗತ್ತನ್ನೇ ವ್ಯಾಪಿಸಿವೆ. ಮಹಾತಪಸ್ವಿಗಳು ತಮ್ಮ ತಪಸ್ಸಿನ ಬಲದಿಂದ ಸರಸ್ವತಿಯನ್ನು ಅಲ್ಲಲ್ಲಿ ಕರೆದು ಆವಾಹಿಸಿದ್ದರಿಂದ ಏಳು ಸರಸ್ವತಿನದಿಗಳು ಉಂಟಾದವು.

ಸುಪ್ರಭಾ ಕಾಂಚನಾಕ್ಷೀ ಚ ವಿಶಾಲಾ ಚ ಮನೋವೃತಾ ।
ಸರಸ್ವತ್ಯೋಘಮಾಲಾ ಚ ಸುವೇಣುರ್ವಿಮಲೋದಕಾ ॥೪॥

ಅವುಗಳ ಹೆಸರು ಹೀಗಿವೆ: ಸುಪ್ರಭಾ, ಕಾಂಚನಾಕ್ಷಿ, ವಿಶಾಲಾ, ಮನೋವೃತಾ, ಸರಸ್ವತೀ, ಓಘಮಾಲಾ (ಓಘವತಿ), ಸುವೇಣು, ವಿಮಲೋದಕಾ ಎಂದು.

ಪಿತಾಮಹಸ್ಯ ಮಹತೋ ವರ್ತಮಾನೇ ಮಹೀಪತೇ ।
ವಿತತೇ ಯಜ್ಞವಾಟೇ ವೈ ಸಮೇತೇಷು ದ್ವಿಜಾತಿಷು ॥೫॥

ರಾಜನೇ! ಒಂದು ಬಾರಿ ಮಹಾತ್ಮರಾದ ಬ್ರಹ್ಮದೇವರ ನೇತೃತ್ವದಲ್ಲಿ ಯಾಗವೊಂದು ನಡೆಯುತ್ತಿತ್ತು. ವಿಸ್ತಾರವಾದ ಯಜ್ಞಶಾಲೆಯಲ್ಲಿ ಬಹಳ ಬ್ರಾಹ್ಮಣರು ಸೇರಿದ್ದರು.

ಪುಣ್ಯಾಹಘೋಷೈರ್ವಿಮಲೈರ್ವೇದಾನಾಂ ನಿನದೈಸ್ತಥಾ ।
ವೇದೇಷು ಚೈವ ತ್ಯಂಗೇಷು ತಸ್ಮಿನ್ ಯಜ್ಞವಿಧೌ ತತಃ ॥೬॥

ಪುಣ್ಯಾಹದ ಮಂತ್ರಘೋಷಗಳು, ವೇದೋಚ್ಚಾರಣೆಯ ಶಬ್ದಗಳು, ಸಂಹಿತಾ-ಪದ-ಕ್ರಮ ಪಾಠಯುಕ್ತವಾದ ವೇದಗಳ ಪಠಣ, ಯಜ್ಞದ ವಿಧಿ-ವಿಧಾನಗಳು ಅಲ್ಲಿ ಕಂಡುಬರುತ್ತಿದ್ದವು.

ತತ್ರ ಚೈವಂ ಮಹಾರಾಜ ದೀಕ್ಷಿತೇ ಪ್ರಪಿತಾಮಹೇ ।
ಯಜತಸ್ತತ್ರ ಸತ್ರೇಣ ಸರ್ವಕಾಮಸಮೃದ್ಧಿನಾ ॥೭॥

ಮಹಾರಾಜನೇ! ಚತುರ್ಮುಖಬ್ರಹ್ಮನು ಯಜ್ಞದೀಕ್ಷೆಯಲ್ಲಿರಲು ಆ ಯಜ್ಞವು ಎಲ್ಲರ ಸರ್ವಕಾಮನೆಗಳನ್ನು ಪೂರ್ಣಗೊಳಿಸುತ್ತಿತ್ತು.

ಮನಸಾ ಚಿಂತಿತಾ ಹ್ಯರ್ಥಾ ಧರ್ಮಾರ್ಥಕುಶಲೈಸ್ತದಾ ।
ಉಪತಿಷ್ಠಂತಿ ರಾಜೇಂದ್ರ ದ್ವಿಜಾತೀಂಸ್ತತ್ರ ತತ್ರ ಹ ॥೮॥

ರಾಜೇಂದ್ರನೇ! ಆ ಯಾಗದಲ್ಲಿ ಧರ್ಮಾರ್ಥಕುಶಲರಾದವರು ಯಾವ ಪದಾರ್ಥಗಳನ್ನು ಮನಸ್ಸಿನಿಂದ ಚಿಂತಿಸುತ್ತಿದ್ದರೋ ಅವೆಲ್ಲವೂ ಅಲ್ಲಲ್ಲಿ ಬ್ರಾಹ್ಮಣರಿಗೆ ಸಿಗುತ್ತಿದ್ದವು.

ಜಗುಶ್ಚ ತತ್ರ ಗಂಧರ್ವಾ ನನೃತುಶ್ಚಾಪ್ಸರೋಗಣಾಃ ।
ವಾದಿತ್ರಾಣಿ ಚ ದಿವ್ಯಾನಿ ವಾದಯಾಮಾಸುರಂಜಸಾ ॥೯॥

ಅಲ್ಲಿ ಗಂಧರ್ವರು ಗಾನವನ್ನು ಮಾಡುತ್ತಿದ್ದರು. ಅಪ್ಸರಾಸ್ತ್ರೀಯರು ನೃತ್ಯವನ್ನು ಮಾಡುತ್ತಿದ್ದರು. ಜೊತೆಗೆ ದೇವಲೋಕದ ವಾದ್ಯಗಳನ್ನು ನುಡಿಸುತ್ತಿದ್ದರು.

ತಸ್ಯ ಯಜ್ಞಸ್ಯ ಸಂಪತ್ತ್ಯಾ ತುಷ್ಟುವುರ್ದೈವತಾನ್ಯಪಿ ।
ವಿಸ್ಮಯಂ ಚ ಪರಂ ಜಗ್ಮುಃ ಕಿಮು ಮಾನುಷಯೋನಯಃ ॥೧೦॥

ಆ ಯಜ್ಞದ ಸಂಪತ್ತಿನಿಂದ ದೇವತೆಗಳೂ ಸಂತುಷ್ಟರಾಗಿದ್ದರು ಮತ್ತು ಬಹಳವಾಗಿ ಆಶ್ಚರ್ಯವನ್ನು ಹೊಂದಿದ್ದರು. ದೇವತೆಗಳೇ ಹೀಗಿರುವಾಗ ಮನುಷ್ಯರ ಬಗ್ಗೆ ಏನು ಹೇಳಬೇಕು?

ವರ್ತಮಾನೇ ತಥಾ ಯಜ್ಞೇ ಪುಷ್ಕರಸ್ಥೇ ಪಿತಾಮಹೇ ।
ಅಬ್ರುವನ್ನೃಷಯೋ ರಾಜನ್ ನಾಯಂ ಯಜ್ಞೋ ಮಹಾಫಲಃ ॥೧೧॥

ನ ದೃಶ್ಯತೇ ಸರಿಚ್ಛ್ರೇಷ್ಠಾ ಯಸ್ಮಾದಿಹ ಸರಸ್ವತೀ ॥೧೨॥

ರಾಜನೇ! ಪುಷ್ಕರಕ್ಷೇತ್ರದಲ್ಲಿ ಬ್ರಹ್ಮನಿಂದ ದೀಕ್ಷಿತವಾದ ಯಜ್ಞವು ನಡೆಯುತ್ತಿರಲು ಋಷಿಗಳು ಹೀಗೆ ಹೇಳುತ್ತಾರೆ, ಈ ಯಜ್ಞವು ಮಹಾಫಲಕಾರಿಯಾಗುವುದಿಲ್ಲ. ಏಕೆಂದರೆ ನದಿಗಳಲ್ಲಿಯೇ ಉತ್ತಮವಾದ ಸರಸ್ವತಿನದಿಯು ಇಲ್ಲಿ ಹರಿಯುತ್ತಿಲ್ಲ. ಎಂದು.

ತಚ್ಛ್ರುತ್ವಾ ಭಗವಾನ್ ಪ್ರೀತಃ ಸಸ್ಮಾರಾಥ ಸರಸ್ವತೀಮ್ ॥೧೩॥
ಪಿತಾಮಹಂ ಮಾನಯಂತೀ ಕ್ರತುಂ ತೇ ಬಹು ಮೇನಿರೇ ॥೧೪॥

ಅದನ್ನು ಕೇಳಿದ ಬ್ರಹ್ಮನು ಸರಸ್ವತಿಯನ್ನು ಸ್ಮರಿಸಿಕೊಳ್ಳುವನು. ಪಿತಾಮಹನನ್ನು ಗೌರವಿಸಿ ಸರಸ್ವತಿಯು ಅಲ್ಲಿ ಬರುತ್ತಾಳೆ. ಆಗ ಋಷಿಗಳು ಆ ಯಜ್ಞವನ್ನು ಬಹಳ ಉತ್ತಮವಾದದ್ದೆಂದು ತಿಳಿದರು.

ಏವಮೇಷಾ ಸರಿಚ್ಶ್ರೇಷ್ಠಾ ಪುಷ್ಕರೇಷು ಸರಸ್ವತೀ ।
ಪಿತಾಮಹಾರ್ಥಂ ಸಂಭೂತಾ ತುಷ್ಟ್ಯರ್ಥಂ ಚ ಮನೀಷಿಣಾಮ್ ॥

ಹೀಗೆ ಪಿತಾಮಹ ಬ್ರಹ್ಮನ ಪ್ರೀತಿಗಾಗಿ ಮತ್ತು ಋಷಿಗಳ ತೃಪ್ತಿಗಾಗಿ ಉತ್ತಮನದಿಯಾದ ಸರಸ್ವತಿಯು ಪುಷ್ಕರಕ್ಷೇತ್ರದಲ್ಲಿ ಉದ್ಭವವಾದಳು.

ನೈಮಿಶೇ ಮುನಯೋ ರಾಜನ್ ಸಮಾಸಾದ್ಯ ಸಮಾಸತೇ ।
ತತ್ರ ಚಿತ್ರಾಃ ಕಥಾ ಹ್ಯಾಸನ್ ವೇದಂ ಪ್ರತಿ ಜನೇಶ್ವರ ॥೧೬॥

ರಾಜನೇ! ನೈಮಿಷಕ್ಷೇತ್ರದಲ್ಲಿ ಮುನಿಗಳು ಬಂದು ಸೇರಿದ್ದರು. ರಾಜನೇ! ಅಲ್ಲಿ ವೇದವಿಷಯದಲ್ಲಿ ಚಿತ್ರವಿಚಿತ್ರವಾದ ಕಥೆಗಳು ನಡೆದವು.

ಯತ್ರ ತೇ ಮುನಯೋ ಹ್ಯಾಸನ್ ನಾನಾಸ್ವಾಧ್ಯಾಯವಾದಿನಃ ।
ತೇ ಸಮಾಗಮ್ಯ ಮುನಯಃ ಸಸ್ಮರುರ್ವೈ ಸರಸ್ವತೀಮ್ ॥೧೭॥

ಯಾವ ನೈಮಿಷದಲ್ಲಿ ಬೇರೆ ಬೇರೆ ಶಾಖೆಗಳನ್ನು ಅಧ್ಯಯನ ಮಾಡುವ ಮುನಿಗಳು ಇದ್ದರೋ ಆ ಮುನಿಗಳೂ ಬಂದು ಸರಸ್ವತಿಯನ್ನು ಸ್ಮರಿಸಿಕೊಂಡರು.

ಸಾ ತು ಧ್ಯಾತಾ ಮಹಾರಾಜ ಋಷಿಭಿಃ ಸತ್ರಯಾಜಿಭಿಃ ।
ಸಮಾಗತಾನಾಂ ರಾಜೇಂದ್ರ ಸಾಹಾಯ್ಯಾರ್ಥಂ ಮಹಾತ್ಮನಾಮ್॥೧೮॥

ಆಜಗಾಮ ಮಹಾಭಾಗಾ ತತ್ರ ಪುಣ್ಯಾ ಸರಸ್ವತೀ ॥೧೯॥

ಮಹಾರಾಜನೇ! ಸತ್ರಯಾಗದಲ್ಲಿ ತೊಡಗಿರುವ ಋಷಿಗಳಿಂದ ಧ್ಯಾನಿಸಲ್ಪಟ್ಟ ಪುಣ್ಯನದಿಯಾದ ಸರಸ್ವತಿಯು, ಅಲ್ಲಿಗೆ ಬಂದಿರುವ ಮಹಾತ್ಮರಿಗೆ ಸಹಾಯವನ್ನು ಮಾಡುವ ಉದ್ದೇಶದಿಂದ ಅಲ್ಲಿಗೆ ಬಂದಳು.

ನೈಮಿಶೇ ಕಾಂಚನಾಕ್ಷೀ ಚ ಮುನೀನಾಂ ಸತ್ರಯಾಜಿನಾಮ್ ।
ಆಹೂತಾ ಸರಿತಾಂ ಶ್ರೇಷ್ಠಾ ತತ್ರ ಭಾರತ ಪೂಜಿತಾ ॥೨೦॥

ಭರತಕುಲೋದ್ಭವನೇ! ನೈಮಿಷಕ್ಷೇತ್ರದಲ್ಲಿ ಸತ್ರಯಾಜಕರಾದ ಮುನಿಗಳು ಆಹ್ವಾನಿಸಿ ಉದ್ಭವಿಸಿದ ಉತ್ತಮ ನದಿ ಸರಸ್ವತಿಯು ಕಾಂಚನಾಕ್ಷಿ ಎಂದು ಕರೆಯಲ್ಪಡುತ್ತಾಳೆ.

ಗಯಸ್ಯ ಯಜಮಾನಸ್ಯ ಗಯೇಷ್ವೇವ ಮಹಾಕ್ರತುಮ್ ।
ಆಹೂತಾ ಸರಿತಾಂ ಶ್ರೇಷ್ಠಾ ತತ್ರ ತೇನ ಸರಸ್ವತೀ ॥೨೧॥

ವಿಶಾಲಾಂ ತು ಗಯೇಷ್ವಾಹುರ್ಮುನಯಃ ಸಂಶಿತವ್ರತಾಃ ।
ಸರಿತ್ ಸಾ ಹಿಮವತ್ಪಾರ್ಶ್ವಾತ್ ಪ್ರಸೂತಾ ಶೀಘ್ರಗಾಮಿನೀ ॥೨೨॥

ಗಯನ ಯಜಮಾನತ್ವದಲ್ಲಿ ಗಯಾಕ್ಷೇತ್ರದಲ್ಲಿ ನಡೆದ ಮಹಾಯಾಗದಲ್ಲಿ ಶ್ರೇಷ್ಠನದಿಯಾದ ಸರಸ್ವತಿಯು ಆಹ್ವಾನಿತಳಾಗಿ ಪ್ರಾದುರ್ಭವಿಸಿದಳು. ಕಠಿಣವ್ರತದಲ್ಲಿ ದೀಕ್ಷಿತರಾದ ಮುನಿಗಳು ಈ ಗಯಾಕ್ಷೇತ್ರದಲ್ಲಿ ಅವಳನ್ನು ವಿಶಾಲಾ ಎಂದು ಕರೆಯುತ್ತಾರೆ.

ಔದ್ದಾಲಕೇಸ್ತಥಾ ಯಜ್ಞಂ ಯಜತಸ್ತತ್ರ ಭಾರತ ।
ಸಮೇತೇ ಸರ್ವತಃ ಸ್ಫೀತೇ ಮುನೀನಾಂ ಮಂಡಲೇ ತಥಾ ॥೨೩॥

ಉತ್ತರೇ ಕೋಸಲೇ ಭಾಗೇ ಪುಣ್ಯೇ ರಾಜನ್ ಮಹಾತ್ಮನಾ ।
ಔದ್ದಾಲಕೇನ ಯಜತಾ ಪೂರ್ವಂ ಧ್ಯಾತಾ ಸರಸ್ವತೀ ॥೨೪॥

ಆಜಗಾಮ ಸರಿಚ್ಛ್ರೇಷ್ಠಾ ತಂ ದೇಶಂ ಮುನಿಕಾರಣಾತ್ ।
ಪೂಜ್ಯಮಾನಾ ಮುನಿಗಣೈರ್ವಲ್ಕಲಾಜಿನಸಂವೃತೈಃ ॥೨೫॥

ಮನೋವೃತೇತಿ ವಿಖ್ಯಾತಾ ಸಾ ಹಿ ತೈರ್ಮನಸಾ ವೃತಾ ॥೨೬॥

ಅದೇ ಸರಸ್ವತಿನದಿಯು ಹಿಮಾಲಯಪರ್ವತದ ಬದಿಯಲ್ಲಿ ಹುಟ್ಟಿ ವೇಗವಾಗಿ ಹರಿಯುತ್ತಾ ಔದ್ದಾಲಕನ ಯಾಗದ ಸಮೀಪಬರುತ್ತಾಳೆ. ಭರತಕುಲೋದ್ಭವನೇ! ಔದ್ದಾಲಕನು ಯಜ್ಞವನ್ನು ನಡೆಸುತ್ತಿದ್ದಾಗ ಅವನ ಯಾಗಶಾಲೆಯು ಉತ್ತಮ ಮುನಿಗಳಿಂದ ಸಮೃದ್ಧವಾಗಿತ್ತು. ಉತ್ತರಕೋಸಲ ಭಾಗದ ಪುಣ್ಯಕ್ಷೇತ್ರದಲ್ಲಿ ನಡೆಯುತ್ತಿದ್ದ ಆ ಯಾಗದಲ್ಲಿ ಮೊದಲಿಗೆ ಯಜಮಾನನಾದ ಔದ್ದಾಲಕನು ಸರಸ್ವತಿಯನ್ನು ಧ್ಯಾನಿಸಿದನು. ಮುನಿಯ ಪ್ರಾರ್ಥನೆಯಂತೆ ಸರಸ್ವತಿಯು ಆ ಸ್ಥಳಕ್ಕೆ ಬಂದಳು. ನಾರುಮಡಿ ಮತ್ತು ಜಿಂಕೆಚರ್ಮವನ್ನು ಧರಿಸಿರುವ ಮುನಿಗಳಿಂದ ಅಲ್ಲಿ ಪೂಜಿತಳಾದಳು. ಮುನಿಗಳು ಮನಸ್ಸಿನಲ್ಲಿ ಧ್ಯಾನಿಸಿ ಬಂದ ಈ ಸರಸ್ವತಿಯು ಆ ಸ್ಥಳದಲ್ಲಿ ಮನೋವೃತಾ ಎಂಬ ಹೆಸರಿನಿಂದ ಪ್ರಸಿದ್ಧಳಾದಳು.

ಕುರೋಸ್ತು ಯಜಮಾನಸ್ಯ ಕುರುಕ್ಷೇತ್ರೇ ಮಹಾತ್ಮನಃ ।
ಆಜಗಾಮ ಮಹಾಭಾಗಾ ಸರಿಚ್ಛ್ರೇಷ್ಠಾ ಸರಸ್ವತೀ ॥೨೭॥

ಓಘವತ್ಯಪಿ ರಾಜರ್ಷೇ ವಸಿಷ್ಠೇನ ಮಹಾತ್ಮನಾ ।
ಸಮಾಹೂತಾ ಕುರುಕ್ಷೇತ್ರೇ ದಿವ್ಯತೋಯಾ ಸರಸ್ವತೀ ॥೨೮॥

ಮಹಾತ್ಮನಾದ ಕುರುಚಕ್ರವರ್ತಿಯು ಕುರುಕ್ಷೇತ್ರದಲ್ಲಿ ಯಾಗಮಾಡುತ್ತಿದ್ದಾಗ ಉತ್ತಮನದಿಯಾದ ಸರಸ್ವತಿಯು ಅಲ್ಲಿಗೆ ಬಂದಳು. ರಾಜೇಂದ್ರನೇ! ಮಹಾತ್ಮನಾದ ವಸಿಷ್ಠನು ಪ್ರಾರ್ಥಿಸಿದಾಗ ದಿವ್ಯಸಲಿಲವುಳ್ಳ ಸರಸ್ವತಿಯು ಕುರುಕ್ಷೇತ್ರದಲ್ಲಿ ಪ್ರಾದುರ್ಭೂತಳಾಗಿ ಓಘವತೀ (ಓಘಮಾಲಾ) ಎಂಬ ನಾಮವನ್ನು ಪಡೆದಳು.

ದಕ್ಷೇಣ ಯಜತಾ ಚೈವ ಗಂಗಾತೀರೇ ಸರಸ್ವತೀ ।
ಸುವೇಣೆರಿತಿ ವಿಖ್ಯಾತಾ ಪ್ರಸ್ರುತಾ ಶೀಘ್ರಗಾಮಿನೀ ॥೨೯॥

ಗಂಗಾತೀರದಲ್ಲಿ ದಕ್ಷಪ್ರಜಾಪತಿಯು ಯಾಗ ಮಾಡುತ್ತಾ ಅಹ್ವಾನಿಸಿದಾಗ ಶೀಘ್ರಗಾಮಿನಿಯಾಗಿ ಹರಿದ ಸರಸ್ವತಿಯು ಸುವೇಣಿ ಎಂಬ ಹೆಸರಿನಿಂದ ಪ್ರಸಿದ್ಧಳಾದಳು.

ವಿಮಲೋದಾ ಭಗವತೀ ಬ್ರಹ್ಮಣಾ ಯಜತಾ ಪುನಃ ।
ಸಮಾಹೂತಾ ಯಯೌ ತತ್ರ ಪುಣ್ಯೇ ಹ್ಯೈಮವತೇ ಗಿರೌ ॥೩೦॥

ಪುಣ್ಯಪ್ರದವಾದ ಹಿಮವತ್ಪರ್ವತದಲ್ಲಿ ಬ್ರಹ್ಮನು ಪುನಃ ಯಾಗವನ್ನು ಮಾಡುತ್ತಿದ್ದಾಗ ಬ್ರಹ್ಮದೇವನ ಅಹ್ವಾನದ ಮೇರೆಗೆ ಬಂದ ಸರಸ್ವತಿಯು ವಿಮಲೋದಾ ಎಂಬ ಹೆಸರಿನಿಂದ ಪ್ರಸಿದ್ಧಳಾದಳು.

ಏಕೀಭೂತಾಸ್ತತಸ್ತಾಸ್ತು ತಸ್ಮಿಂಸ್ತೀರ್ಥೇ ಸಮಾಗತಾಃ ।
ಸಪ್ತಸಾರಸ್ವತಂ ತೀರ್ಥಂ ತತಸ್ತತ್ ಪ್ರಥಿತಂ ಭುವಿ ॥೩೧॥

ಈ ಎಲ್ಲಾ ನದಿಗಳೂ ಈ ಸಪ್ತಸಾರಸ್ವತ ತೀರ್ಥದಲ್ಲಿ ಒಟ್ಟಿಗೆ ಸೇರಿದವು. ಆದ್ದರಿಂದಲೇ ಈ ತೀರ್ಥವು ಅದೇ ಹೆಸರಿನಿಂದ ಪ್ರಸಿದ್ಧವಾಯಿತು.

ಇತಿ ಸಪ್ತ ಸರಸ್ವತ್ಯೋ ನಾಮತಃ ಪರಿಕೀರ್ತಿತಾಃ ।
ಸಪ್ತಸಾರಸ್ವತಂ ಚೈವ ತೀರ್ಥಂ ಪುಣ್ಯತಮಂ ಸ್ಮೃತಮ್ ॥೩೨॥

ಹೀಗೆ ಏಳು ಸರಸ್ವತಿನದಿಗಳ ಬಗೆಗೆ ಅವುಗಳ ಹೆಸರಿನಿಂದ ಮತ್ತು ಉಗಮ ಕ್ರಮದಿಂದ ವರ್ಣಿಸಲಾಗಿದೆ. ಈ ಸಪ್ತಸಾರಸ್ವತತೀರ್ಥವು ಅತ್ಯಂತ ಪುಣ್ಯದಾಯಕವೆಂದು ಪ್ರಸಿದ್ಧವಾಯಿತು.

ಶೃಣು ಮಂಕಣಕಸ್ಯಾಪಿ ಕೌಮಾರಬ್ರಹ್ಮಚಾರಿಣಃ ।
ಅಪಗಾಮವಗಾಢಸ್ಯ ರಾಜನ್ ಪ್ರಕ್ರೀಡಿತಂ ಮಹತ್ ॥೩೩॥

ರಾಜನೇ! ಕುಮಾರಾವಸ್ಥೆಯಿಂದಲೇ ಬ್ರಹ್ಮಚಾರಿಯಾಗಿ ವ್ರತಪಾಲನೆಮಾಡುತ್ತಿದ್ದ ಮಂಕಣಕಮುನಿಯ ಬಗ್ಗೆಯೂ ನಿನಗೆ ಹೇಳುತ್ತೇನೆ, ಕೇಳು. ನದಿಯಲ್ಲಿ ಅವಗಾಹನ ಸ್ನಾನವನ್ನು ಮಾಡುತ್ತಿದ್ದ ಅವನು ಮಾಡಿದ ಮಹತ್ಕಾರ್ಯಗಳನ್ನು ಕೇಳು.

ದೃಷ್ಟ್ವಾ ಯದೃಚ್ಛಯಾ ತತ್ರ ಸ್ತ್ರಿಯಮಂಭಸಿ ಭಾರತ ।
ಸ್ನಾಯಂತೀಂ ರುಚಿರಾಕಾರಾಂ ದಿಗ್ವಾಸಸಮನಿಂದಿತಾಮ್ ॥೩೪॥

ಒಂದು ಸಲ ಅಲ್ಲಿ ಅಕಸ್ಮಾತ್ತಾಗಿ (ಯದೃಚ್ಛಯಾ - ಭಗವದಿಚ್ಛೆಯಿಂದ) ನೀರಿನಲ್ಲಿ ಸ್ನಾನವನ್ನು ಮಾಡುತ್ತಿದ್ದ ಸುಂದರಿಯಾದ, ವಸ್ತ್ರರಹಿತಳಾದ ಸ್ತ್ರೀಯನ್ನು ನೋಡಿದನು.

ಸರಸ್ವತ್ಯಾಂ ಮಹಾರಾಜ ಚಸ್ಕಂದೇ ರೇತ ಅಂಭಸಿ ॥೩೫॥

ಮಹಾರಾಜನೇ! ಅವಳನ್ನು ನೋಡಿದ ಮಂಕಣಕಮುನಿಯು ಸರಸ್ವತಿಯ ನೀರಿನಲ್ಲಿಯೇ ರೇತಸ್ಸನ್ನು ವಿಸರ್ಜಿಸಿದನು.

ತದ್ರೇತಃ ಸ ತು ಜಗ್ರಾಹ ಕಲಶೇನ ಮಹಾತಪಾಃ ।
ಋಷಿಃ ಪರಮಧರ್ಮಾತ್ಮಾ ತದಾ ಪುರುಷಸತ್ತಮಃ ॥೩೬॥

ಮಹಾತಪಸ್ವಿಯಾದ, ಪರಮಧಾರ್ಮಿಕನಾದ, ಪುರುಷೋತ್ತಮನಾದ ಮಂಕಣಕನು ಆ ರೇತಸ್ಸನ್ನು ಕಲಶದಲ್ಲಿ ಸಂಗ್ರಹಿಸಿ ಹಿಡಿದಿಟ್ಟುಕೊಂಡನು.

ಸಪ್ತಧಾ ಪ್ರವಿಭಕ್ತಂ ತತ್ ಕಲಶಸ್ಥಂ ಜಗಾಮ ಹ ।
ತತ್ರರ್ಷಯಃ ಸಪ್ತ ಜಾತಾ ಜಜ್ಞುರೇಭ್ಯೋ ಮರುದ್ಗಣಾಃ ॥೩೭॥

ಕಲಶದಲ್ಲಿ ಇದ್ದ ರೇತಸ್ಸು ಏಳು ಭಾಗವಾಗಿ ವಿಭಕ್ತವಾಯಿತು. ಅಲ್ಲಿ ಏಳು ಋಷಿಗಳು ಹುಟ್ಟಿದರು. ಅವರು ಮರುದ್ಗಣಗಳಿಗೆ ಮೂಲಭೂತರಾಗಿದ್ದರು.

ವಾಯುವೇಗೋ ವಾಯುಬಲೋ ವಾಯುಹಾ ವಾಯುಮಂಡಲಃ ।
ವಾಯುಜಾಲೋ ವಾಯುರೇತಾ ವಾಯುಚಕ್ರಶ್ಚ ವೀರ್ಯವಾನ್॥೩೮॥

ಆ ಏಳು ಋಷಿಗಳ ಹೆಸರುಗಳು ಹೀಗಿವೆ : ವಾಯುವೇಗ, ವಾಯುಬಲ, ವಾಯುಹಾ, ವಾಯುಮಂಡಲ, ವಾಯುಜಾಲ, ವಾಯುರೇತ ಮತ್ತು ವಾಯುಚಕ್ರ. ಇವರೆಲ್ಲರೂ ಮಹಾವೀರ್ಯವಂತರಾಗಿದ್ದರು.

ಏವಮೇತೇ ಸಮುತ್ಪನ್ನಾ ಮರುತಾಂ ಭಾವಯಿಷ್ಣವಃ ॥೩೯॥

ಹೀಗೆ ಮರುತ್ತುಗಳ ಉತ್ಪತ್ತಿಗೆ ಕಾರಣರಾದ ಈ ಏಳು ಋಷಿಗಳು ಜನಿಸಿದರು.

ಇದಮನ್ಯಚ್ಚ ರಾಜೇಂದ್ರ ಶೃಣ್ವಾಶ್ಚರ್ಯತಮಂ ಭುವಿ ।
ಮಹರ್ಷೇಶ್ಚರಿತಂ ಯಾದೃಕ್ ತ್ರಿಷು ಲೋಕೇಷು ವಿಶ್ರುತಮ್ ॥೪೦॥

ರಾಜನೇ! ಆಶ್ಚರ್ಯಜನಕವಾದ ಇದನ್ನು ಮತ್ತು ಬೇರೆ ವಿಷಯವನ್ನೂ ಕೇಳು. ಭೂಮಿಯಲ್ಲಿ ಮಂಕಣಕ ಮುನಿಯ ಚರಿತ್ರೆಯನ್ನು ಕೇಳು. ಈ ಚರಿತ್ರೆಗಳು ಮೂರು ಲೋಕದಲ್ಲಿಯೂ ಸುಪ್ರಸಿದ್ಧವಾಗಿವೆ.

ಪುರಾ ಮಂಕಣಕಃ ಸಿದ್ಧಃ ಕುಶಾಗ್ರೇಣೇತಿ ವಿಶ್ರುತಃ ॥೪೧॥

ಕ್ಷತಃ ಕಿಲ ಕರೇ ರಾಜನ್ ತಸ್ಯ ಶಾಕರಸೋಽಸ್ರವತ್ ।
ತಂ ವೈ ಶಾಕರಸಂ ದೃಷ್ಟ್ವಾ ಹರ್ಷಾವಿಷ್ಟಃ ಪ್ರನೃತ್ತವಾನ್ ॥೪೨॥

ಹಿಂದೆ ಇದೇ ಮಂಕಣಕನ ಕೈಯಲ್ಲಿನ ದರ್ಭೆಯ ತುದಿಯಿಂದ ಕೈಯಲ್ಲಿ ಗಾಯವಾದಾಗ ರಕ್ತದ ಬದಲಾಗಿ ಶಾಕರಸವು ಒಸರಿಬಂತು. ಆ ತರಕಾರಿಯ ರಸವನ್ನು ಕಂಡು ಮಂಕಣಕನು ಸಂತೋಷದಿಂದ ಕುಣಿದಾಡಿದನು.

ತತಸ್ತಸ್ಮಿನ್ ಪ್ರನೃತ್ತೇ ವೈ ಸ್ಥಾವರಂ ಜಂಗಮಂ ಚ ಯತ್ ।
ಪ್ರನೃತ್ತಮುಭಯಂ ವೀರ ತೇಜಸಾ ತಸ್ಯ ಮೋಹಿತಮ್ ॥೪೩॥

ವೀರನೇ! ಅವನು ನೃತ್ಯಮಾಡುತ್ತಿದ್ದಾಗ ಅವನ ತೇಜಸ್ಸಿನಿಂದ ಮೋಹಕ್ಕೊಳಗಾದ ಎಲ್ಲಾ ಸ್ಥಾವರಗಳು ಮತ್ತು ಜಂಗಮಪದಾರ್ಥಗಳು ನೃತ್ಯವನ್ನು ಮಾಡಿದವು.

ಬ್ರಹ್ಮಾದಿಭಿಃ ಸುರೈ ರಾಜನ್ ಋಷಿಭಿಶ್ಚ ತಪೋಧನೈಃ ।
ವಿಜ್ಞಪ್ತೋ ವೈ ಮಹಾದೇವ ಋಷೇರರ್ಥೇ ನರಾಧಿಪ ॥೪೪॥

ರಾಜನೇ! ಬ್ರಹ್ಮಾದಿದೇವತೆಗಳು ಮತ್ತು ತಪೋಧನರಾದ ಋಷಿಗಳು ಈ ಮಂಕಣಕ ಋಷಿಗಾಗಿ ರುದ್ರದೇವರಲ್ಲಿ ಪ್ರಾರ್ಥಿಸಿದರು.

ನಾಯಂ ನೃತ್ಯೇದ್ ಯಥಾ ದೇವ ತಥಾ ತ್ವಂ ಕರ್ತುಮರ್ಹಸಿ ॥೪೫॥

ದೇವನೇ! ಈ ಮಂಕಣಕನು ನೃತ್ಯವನ್ನು ಮಾಡದ ರೀತಿಯಲ್ಲಿ ನೀನು ಏನಾದರೂ ಮಾಡು.

ತತೋ ದೇವೋ ಮುನಿಂ ದೃಷ್ಟ್ವಾ ಹರ್ಷಾವಿಷ್ಟಮತೀವ ಹ ।
ಸುರಾಣಾಂ ಹಿತಕಾಮಾರ್ಥಂ ತಂ ಶಿವಃ ಪ್ರತ್ಯಭಾಷತ ॥೪೬॥

ಅನಂತರ ರುದ್ರದೇವನು ಅತ್ಯಂತ ಸಂತೋಷವನ್ನು ಪಡುತ್ತಿರುವ ಋಷಿಯನ್ನು ನೋಡಿ ದೇವತೆಗಳ ಹಿತಕ್ಕಾಗಿ ಆ ಮಂಕಣಕ ಋಷಿಗೆ ಹೇಳಿದನು.

ಶಿವಃ

ಹರ್ಷಾದ್ ಬ್ರಾಹ್ಮಣ ಧರ್ಮಜ್ಞ ಕಿಮರ್ಥಂ ತ್ವಂ ಪ್ರನೃತ್ಯಸಿ ।
ಹರ್ಷಸ್ಥಾನಂ ಕಿಮರ್ಥಂ ವಾ ತವೇದಂ ಮುನಿಸತ್ತಮ ॥೪೭॥

ಶಿವ– ಧರ್ಮಾತ್ಮನಾದ ಮುನಿಯೇ! ಸಂತೋಷದಿಂದ ಇದ್ದ ನೀನು ಧರ್ಮಜ್ಞನಿಯಾಗಿದ್ದರೂ ಏಕೆ ನೃತ್ಯವನ್ನು ಮಾಡುತ್ತಿರುವೆ? ಮುನಿಶ್ರೇಷ್ಠನೇ! ಯಾವ ಕಾರಣದಿಂದ ಈ ಸ್ಥಳವು ನಿನ್ನ ಆನಂದಕ್ಕೆ ಕಾರಣವಾಯಿತು?

ಮಂಕಣಃ

ಕಿಂ ನ ಪಶ್ಯಸಿ ಮೇ ದೇವ ಕರಾಚ್ಛಾಕರಸಂ ಸೃತಮ್ ।
ಯಂ ದೃಷ್ಟ್ವಾ ವೈ ಪ್ರನೃತ್ತೋಽಹಂ ಹರ್ಷೇಣ ಮಹತಾ ವಿಭೋ॥೪೮॥

ಮಂಕಣ– ರುದ್ರದೇವನೇ, ನನ್ನ ಶರೀರದಿಂದ ಶಾಕರಸವು ಹರಿಯುತ್ತಿರುವುದನ್ನು ನೀನು ನೋಡಲಿಲ್ಲವೇನು? ಅದನ್ನು ನೋಡಿಯೇ ಸಂತೋಷದಿಂದ ನಾನು ಬಹಳವಾಗಿ ನೃತ್ಯವನ್ನು ಮಾಡಿದೆನು.

ವೈಶಂಪಾಯನಃ

ತತಸ್ತಮಬ್ರವೀದ್ ದೇವೋ ಮುನಿಂ ರಾಗೇಣ ಮೋಹಿತಮ್ ॥೪೯॥

ವೈಶಂಪಾಯನ– ಅನುರಾಗದಿಂದ ಮೋಹಕ್ಕೆ ಒಳಗಾದ ಮಂಕಣನಿಗೆ ರುದ್ರದೇವನು ಈ ಮಾತನ್ನು ಹೇಳುತ್ತಾನೆ.

ಶಿವಃ

ಅಹಂ ವೈ ವಿಸ್ಮಯಂ ವಿಪ್ರ ನ ಗಚ್ಛಾಮೀಹ ಪಶ್ಯ ಮಾಮ್ ॥೫೦॥

ಶಿವ– ಬ್ರಾಹ್ಮಣನೇ! ಇಲ್ಲಿ ನಾನು ನಿನ್ನನ್ನು ನೋಡಿ ಆಶ್ಚರ್ಯವನ್ನು ಪಡುವುದಿಲ್ಲ ಎಂಬುದನ್ನು ನೋಡು.

ವೈಶಂಪಾಯನಃ

ಏವಮುಕ್ತ್ವಾ ಮುನಿಶ್ರೇಷ್ಠಂ ಮಹಾದೇವೇನ ಧೀಮತಾ ।
ಅಂಗುಲ್ಯಗ್ರೇಣ ರಾಜೇಂದ್ರ ಸ್ವಾಂಗುಷ್ಠಸ್ತಾಡಿತೋ ಭೃಶಮ್ ॥೫೧॥

ವೈಶಂಪಾಯನ– ಹೀಗೆ ಮಂಕಣ ಋಷಿಗೆ ಹೇಳಿ ತನ್ನ ಬೆರಳಿನ ತುದಿಯಿಂದ ಹೆಬ್ಬೆರಳಿಗೆ ಚೆನ್ನಾಗಿ ಹೊಡೆದುಕೊಳ್ಳುತ್ತಾನೆ.

ತತೋ ಭಸ್ಮಕ್ಷತಾದ್ ರಾಜನ್ ನಿರ್ಗತಂ ಹಿಮಸನ್ನಿಭಮ್ ।
ತದ್ ದೃಷ್ಟ್ವಾ ವ್ರೀಡಿತೋ ರಾಜನ್ ಸ ಮುನಿಃ ಪಾದಯೋರ್ನತಃ ॥

ಆ ಗಾಯದಿಂದ ಹಿಮಸದೃಶವಾದ ಭಸ್ಮವು ಹೊರಬಂತು. ಅದನ್ನು ನೋಡಿ ನಾಚಿಕೊಂಡ ಮಂಕಣಮುನಿಯು ಅವನ ಪಾದಗಳಿಗೆ ನಮಸ್ಕರಿಸಿದನು.

ಮಂಕಣಕಃ

ನಾನ್ಯಂ ದೈವಮಹಂ ಮನ್ಯೇ ರುದ್ರಾತ್ ಪರತರಂ ಮಹತ್ ।
ಸುರಾಸುರೇಷು ಜಗತೋ ಗತಿಸ್ತ್ವಮಸಿ ಶೂಲಧೃಕ್ ॥೫೩॥

ಮಂಕಣಕ– ಹೇ ಶೂಲಧಾರಿಯಾದ ರುದ್ರನೇ! ರುದ್ರನಿಗಿಂತ ಬೇರೆಯಾದ ಅತ್ಯುತ್ತಮ ದೇವತೆಯನ್ನು ದೇವತೆಗಳು ಮತ್ತು ಅಸುರರ ಮಧ್ಯದಲ್ಲಿ ನಾನು ತಿಳಿದಿಲ್ಲ. (ರುದ್ರಾಂತರ್ಗತ ನಾರಾಯಣನನ್ನು ಸ್ತುತಿಸುತ್ತಿದ್ದಾನೆ).

ತ್ವಯಾ ಸೃಷ್ಟಮಿದಂ ಸರ್ವಂ ವದಂತೀಹ ಮನೀಷಿಣಃ ।
ತ್ವಾಮೇವ ಸರ್ವಂ ವ್ರಜತಿ ಪುನರೇವ ಯುಗಕ್ಷಯೇ ॥೫೪॥

ಇದೆಲ್ಲವೂ ನಿನ್ನಿಂದಲೇ ಸೃಷ್ಟವಾಯಿತು ಎಂಬುದಾಗಿ ಜ್ಞಾನಿಗಳು ಹೇಳುತ್ತಾರೆ. ಯುಗಾಂತದಲ್ಲಿ ಎಲ್ಲವೂ ನಿನ್ನನ್ನೇ ಸೇರುತ್ತವೆ.

ದೇವೈರಪಿ ನ ಶಕ್ಯಸ್ತ್ವಂ ಪರಿಜ್ಞಾತುಂ ಕುತೋ ಮಯಾ ।
ತ್ವಯಿ ಸರ್ವೇಶ ದೃಶ್ಯಂತೇ ಸುರಾ ಬ್ರಹ್ಮಾದಯೋಽನಘ ॥೫೫॥

ನಿನ್ನನ್ನು ತಿಳಿದುಕೊಳ್ಳಲು ದೇವತೆಗಳಿಗೂ ಸಾಧ್ಯವಿಲ್ಲ. ನಾನೆಲ್ಲಿ ನಿನ್ನನ್ನು ತಿಳಿಯಲು ಸಾಧ್ಯ? ಉಳಿದ ದೇವತೆಗಳು ಮತ್ತು ಬ್ರಹ್ಮಾದಿಗಳು ನಿನ್ನ ಆಶ್ರಯವನ್ನು ಪಡೆಯುತ್ತಾರೆ.

ಸರ್ವಸ್ತ್ವಮಸಿ ದೇವಾನಾಂ ಕರ್ತಾ ಕಾರಯಿತಾ ಚ ಹ ।
ತತ್ಪ್ರಸಾದಾತ್ ಸುರಾಃ ಸರ್ವೇ ಮೋದಂತೇ ಹ್ಯಕುತೋಭಯಾಃ ॥೫೬॥

ದೇವತೆಗಳಿಗೆ ಸೃಷ್ಟಿಕರ್ತನೂ ನೀನೆ. ಕರ್ಮಗಳನ್ನು ಅವರ ಮೂಲಕ ಮಾಡಿಸುವವನೂ ನೀನೆ. ನಿನ್ನ ಅನುಗ್ರಹದಿಂದಲೇ ಎಲ್ಲಾ ದೇವತೆಗಳು ಸಕಲ ಭಾಗಗಳಿಂದ ಭಯರಹಿತರಾಗಿ ಆನಂದವನ್ನು ಅನುಭವಿಸುತ್ತಾರೆ.

ತ್ವಂ ಪ್ರಭುಃ ಪರಮೈಶ್ವರ್ಯಾದ್ ಅಧಿಕಂ ಭಾಸಿ ಶಂಕರ ।
ತ್ವಯಿ ಬ್ರಹ್ಮಾ ಚ ಶಕ್ರಶ್ಚ ಲೋಕಾನ್ ಸಂಧಾರ್ಯ ತಿಷ್ಠತಃ ॥೫೭॥

ಶಂಕರನೇ! ನೀನು ನಿನ್ನ ಐಶ್ವರ್ಯದಿಂದಾಗಿ ಚೆನ್ನಾಗಿ ಶೋಭಿಸುತ್ತಿದ್ದಿ. ಬ್ರಹ್ಮನು ಮತ್ತು ಇಂದ್ರನು ನಿನ್ನನ್ನು ಆಶ್ರಯಿಸಿಕೊಂಡು ಲೋಕಗಳ ಧಾರಣೆಯನ್ನು ಮಾಡುತ್ತಿದ್ದಾರೆ.

ತ್ವನ್ಮೂಲಂ ಚ ಜಗತ್ ಸರ್ವಂ ತ್ವದಂತಂ ಚ ಮಹೇಶ್ವರ ।
ತ್ವಯಾ ಹಿ ವಿತತಾ ಲೋಕಾಃ ಸಪ್ತೇಮೇ ಸರ್ವಸಂಭವ ॥೫೮॥

ಇಡೀ ಜಗತ್ತಿಗೆ ಮೂಲಕಾರಣನು ನೀನು. ಮಹೇಶ್ವರನೇ! ಎಲ್ಲವೂ ನಿನ್ನಲ್ಲೇ ಲಯವನ್ನು ಹೊಂದುತ್ತವೆ. ಸರ್ವಸಂಭವನೇ! ನಿನ್ನಿಂದ ತಾನೆ ಏಳು ಲೋಕಗಳು ವಿಸ್ತಾರವಾಗಿವೆ.

ಸರ್ವಥಾ ಸರ್ವಭೂತೇಶ ತ್ವಾಮೇವಾರ್ಚಂತಿ ದೇವತಾಃ ॥೫೯॥

ಸಕಲಪ್ರಾಣಿಗಳ ಒಡೆಯನೇ! ದೇವತೆಗಳು ಎಲ್ಲಾ ರೀತಿಯಿಂದಲೂ ನಿನ್ನನ್ನೇ ಪೂಜಿಸುತ್ತಾರೆ.

ತ್ವನ್ಮಯಂ ಹಿ ಜಗತ್ ಸರ್ವಂ ಭೂತಂ ಸ್ಥಾವರಜಂಗಮಮ್ ॥೬೦॥

ಸ್ಥಾವರ-ಜಂಗಮಯುಕ್ತವಾದ ಈ ಜಗತ್ತು ನಿನ್ನಲ್ಲಿಯೇ ಇದೆ.

ಸ್ವರ್ಗಂ ಚ ಪರಮಂ ಸ್ಥಾನಂ ನೃಣಾಮಭ್ಯುದಯಾರ್ಥಿನಾಮ್ ।
ದದಾಸಿ ಚ ಪ್ರಸನ್ನಸ್ತ್ವಂ ಭಕ್ತಾನಾಂ ಪರಮೇಶ್ವರ ॥೬೧॥

ಪರಮೇಶ್ವರನೇ! ಜೀವನದ ಶ್ರೇಷ್ಠತೆಯನ್ನು ಪಡೆಯಲು ಇಚ್ಛಿಸುವ ವ್ಯಕ್ತಿಗಳಿಗೆ ಸ್ವರ್ಗವೆಂಬುದು ಉತ್ತಮವಾದ ಸ್ಥಾನ. ಪ್ರಸನ್ನನಾದ ನೀನೇ ಅದೆಲ್ಲವನ್ನೂ ಭಕ್ತರಿಗೆ ಕೊಡುವೆ.

ಅನಾವೃತ್ತಿಪದಂ ನೃಣಾಂ ನಿತ್ಯಂ ನಿಃಶ್ರೇಯಸಾರ್ಥಿನಾಮ್ ।
ದದಾಸಿ ಕರ್ಮಿಣಾಂ ಕರ್ಮ ಭಾವಯನ್ ಧ್ಯಾನಯೋಗತಃ ॥೬೨॥

ನಿತ್ಯವಾದ ಮೋಕ್ಷವನ್ನು ಇಚ್ಛಿಸುವ ಮನುಷ್ಯರಿಗೆ ಮತ್ತೆ ಹಿಂತಿರುಗಿ ಬರಲಿಕ್ಕೆ ಇಲ್ಲದ ಮೋಕ್ಷವನ್ನು ಕೊಡುವಿ. ಕರ್ಮಿಗಳ ಕರ್ಮವನ್ನು ಕೂಡ ಇದೇ ರೀತಿಯಲ್ಲಿ ಧ್ಯಾನವನ್ನು ಮಾಡಿಸಿ ಕರ್ಮವನ್ನು ಶ್ರೇಷ್ಠ ಕರ್ಮವನ್ನಾಗಿ ಮಾಡುವಿ.

ನ ವೃಥಾಽಸ್ತಿ ಮಹಾದೇವ ಪ್ರಸಾದಸ್ತೇ ಮಹೇಶ್ವರ ।
ಯಸ್ಮಾತ್ ತ್ವಯೋಪಕರಣಾತ್ ಕರೋಮಿ ಕಮಲೇಕ್ಷಣ ॥೬೩॥

ಮಹಾದೇವನೇ! ಮಹೇಶ್ವರನೇ! ನಿನ್ನ ಅನುಗ್ರಹವು ಯಾವತ್ತೂ ವ್ಯರ್ಥವಾಗುವುದಿಲ್ಲ. ಕಮಲನೇತ್ರನೇ! ನಿನ್ನ ಜೊತೆಗೆ ಸೇರಿಕೊಂಡೇ ಎಲ್ಲವನ್ನೂ ಮಾಡುತ್ತಿದ್ದೇನೆ.

ಪ್ರಪದ್ಯೇ ಶರಣಂ ಶಂಭುಂ ಸರ್ವದಾ ಸರ್ವತಃ ಸ್ಥಿತಮ್ ॥೬೪॥

ಎಲ್ಲೆಡೆ ಇರುವ ಶಂಭುವನ್ನು ಶರಣು ಹೊಂದುತ್ತೇನೆ.

ಕರ್ಮಣಾ ಮನಸಾ ವಾಚಾ ತಮೇವಾಭಿಜಗಾಮ ಹ ॥೬೫॥

ಕರ್ಮ, ಮನಸ್ಸು ಮತ್ತು ಮಾತುಗಳಿಂದ ಅವನನ್ನೇ ಸ್ತುತಿಸುತ್ತೇನೆ.

ವೈಶಂಪಾಯನಃ

ಏವಂ ಸ್ತುತ್ವಾ ಮಹಾದೇವಮೃಷಿಃ ಸ ಪ್ರಣತೋಽಬ್ರವೀತ್ ॥೬೬॥

ವೈಶಂಪಾಯನ– ರುದ್ರನಿಗೆ ಹೀಗೆ ಸ್ತುತಿಸಿ, ನಮಸ್ಕರಿಸುತ್ತಾ ಹೀಗೆ ಹೇಳಿದನು

ಮಂಕಣಃ

ಭಗವನ್ ತ್ವತ್ಪ್ರಸಾದಾದ್ಮೆ ತಪೋ ಮೇ ನ ಕ್ಷರೇದಿತಿ ॥೬೭॥

ಮಂಕಣ– ಭಗವಂತನೇ! ನಿನ್ನ ಅನುಗ್ರಹದಿಂದ ನನ್ನ ತಪಸ್ಸು ನಾಶವಾಗದೇ ಹೋಗಲಿ.

ವೈಶಂಪಾಯನಃ

ತತೋ ದೇವಃ ಪ್ರೀಯಮಾಣಸ್ತಮೃಷಿಂ ಪುನರಬ್ರವೀತ್ ॥೬೮॥

ವೈಶಂಪಾಯನ– ಸಂತುಷ್ಟನಾದ ರುದ್ರನು ಮಂಕಣಮುನಿಗೆ ಪುನಃ ಹೀಗೆ ಹೇಳುತ್ತಾನೆ.

ಶಿವಃ

ತಪಸ್ತೇ ವರ್ಧತಾಂ ವಿಪ್ರ ಮತ್ಪ್ರಸಾದಾತ್ ಸಹಸ್ರಧಾ ।
ಆಶ್ರಮೇ ಚೇಹ ವತ್ಸ್ಯಾಮಿ ತ್ವಯಾ ಸಾರ್ಧಮಹಂ ಸದಾ ॥೬೯॥

ಶಿವ– ಬ್ರಾಹ್ಮಣನೇ! ನನ್ನ ಅನುಗ್ರಹದಿಂದ ನಿನ್ನ ತಪಸ್ಸು ಸಾವಿರಪಟ್ಟು ಹೆಚ್ಚಾಗಲಿ. ನಾನು ಈ ಆಶ್ರಮದಲ್ಲಿ ನಿನ್ನ ಜೊತೆಗೆ ವಾಸಮಾಡುವೆನು.

ಸಪ್ತಸಾರಸ್ವತೇ ಚಾಸ್ಮಿನ್ನರ್ಚಯಿಷ್ಯಂತಿ ಯೇ ನರಾಃ ।
ತೇಷಾಂ ನ ದುರ್ಲಭಂ ಕಿಂಚಿದ್ ಭವಿತೇಹ ಪರತ್ರ ಚ ॥೭೦॥

ಸಪ್ತಸಾರಸ್ವತತೀರ್ಥದಲ್ಲಿ ಯಾರು ಪೂಜಿಸುತ್ತಾರೆಯೋ ಅಂತಹವರಿಗೆ ಈ ಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ಸಿಗದ ಪದಾರ್ಥಗಳು ಯಾವುದೂ ಇಲ್ಲ.

ಸಾರಸ್ವತಂ ಚ ಲೋಕಂ ತೇ ಗಮಿಷ್ಯಂತಿ ನ ಸಂಶಯಃ ॥೭೧॥

ಅಂತಹವರು ಸಾರಸ್ವತಲೋಕಕ್ಕೆ ಹೋಗುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಏವಂ ಮಂಕಣಕಸ್ಯಾಪಿ ಚರಿತಂ ಭೂರಿಚೇತಸಃ ।
ಸ ಹಿ ಪುತ್ರಃ ಸುಕನ್ಯಾಯಾಮುತ್ಪನ್ನೋ ಮಾತರಿಶ್ವನಾ ॥೭೨॥

ಮಹಾಜ್ಞಾನಿಯಾದ ಮಂಕಣಕನ ಚರಿತ್ರೆಯು ಹೀಗಿದೆ. ಆ ಮಂಕಣಕನಾದರೂ ಮಾತರಿಶ್ವನಿಂದ ಸುಕನ್ಯೆಯಲ್ಲಿ ಹುಟ್ಟಿದ ಮಗ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೊಂದನೆಯ ಅಧ್ಯಾಯ

ಬಲರಾಮನು ಔಶನಸತೀರ್ಥಕ್ಕೆ ಹೋದುದು. ಆ ತೀರ್ಥಕ್ಕೆ ಕಪಾಲಮೋಚನತೀರ್ಥವೆಂಬ ಹೆಸರು ಬರಲು ಕಾರಣದ ನಿರೂಪಣೆ. ಬಲರಾಮನು ಉಶಂಗ್ವಾಶ್ರಮಕ್ಕೆ ಹೋದುದು. ಉಶಂಗುಚರಿತ್ರೆಯ ನಿರೂಪಣೆ. ಬಲರಾಮನು ಪೃಥೂದಕತೀರ್ಥದಲ್ಲಿ ಸ್ನಾನ-ದಾನಾದಿಗಳನ್ನು ಮಾಡಿದುದು.

ವೈಶಂಪಾಯನಃ

ಉಷಿತ್ವಾ ತತ್ರ ರಾಮಸ್ತು ಸಂಪೂಜ್ಯಾಶ್ರಮವಾಸಿನಃ ।
ತದಾ ಮಂಕಣಕೇ ಪ್ರೀತಿಂ ಪರಾಂ ಚಕ್ರೇ ಹಲಾಯುಧಃ ॥೧॥

ವೈಶಂಪಾಯನ– ಬಲರಾಮನು ಆ ಮಂಕಣಕತೀರ್ಥದಲ್ಲಿ ವಾಸ ಮಾಡಿ ಅಲ್ಲಿ ವಾಸಮಾಡುವ ಬ್ರಾಹ್ಮಣರನ್ನು ಪೂಜಿಸಿದನು. ಬಲರಾಮನು ಮಂಕಣಕಮುನಿಯ ಮೇಲೆ ಬಹಳ ಪ್ರೀತಿಯನ್ನು ಮಾಡಿದನು.

ದತ್ತ್ವಾ ದಾನಂ ದ್ವಿಜಾತಿಭ್ಯೋ ರಜನೀಂ ತಾಮುಪೋಷ್ಯ ಚ ।
ಪೂಜಿತೋ ಮುನಿಭಿಶ್ಚೈವ ಪ್ರಾತರುತ್ಥಾಯ ಲಾಂಗಲೀ ॥೨॥

ಅನುಜ್ಞಾಪ್ಯ ಮುನೀನ್ ಸರ್ವಾನ್ ಸ್ಪೃಷ್ಟ್ವಾ ತೋಯಂ ಚ ಭಾರತ ।
ಪ್ರಯಯೌ ತ್ವರಿತಂ ರಾಮಸ್ತೀರ್ಥಹೇತೋರ್ಮಹಾಬಲಃ ॥೩॥

ಬ್ರಾಹ್ಮಣರಿಗೆ ದಾನವನ್ನು ಕೊಟ್ಟು, ಆ ರಾತ್ರಿಯಲ್ಲಿ ಅಲ್ಲಿಯೇ ವಾಸ ಮಾಡಿದನು. ಮರುದಿನ ಬೆಳಿಗ್ಗೆ ಎದ್ದು ಮುನಿಗಳಿಂದ ಪೂಜ್ಯನಾಗಿ, ಆ ಮುನಿಗಳ ಅನುಜ್ಞೆಯನ್ನು ಸ್ವೀಕರಿಸಿ, ಆಚಮನಾದಿಗಳನ್ನು ಮಾಡಿ ತೀರ್ಥಯಾತ್ರೆಗಾಗಿ ಬಲರಾಮನು ಬೇಗನೇ ಅಲ್ಲಿಂದ ಹೋದನು.

ತತಸ್ತೌ ಶನಸಂ ತೀರ್ಥಮಾಜಗಾಮ ಹಲಾಯುಧಃ ॥೪॥

ಕಪಾಲಮೋಚನಂ ನಾಮ ಯತ್ರ ಮುಕ್ತೋ ಮಹಾಮುನಿಃ ।
ಮಹತಾ ಶಿರಸಾ ರಾಜನ್ ಗ್ರಸ್ತಜಂಘೋ ಮಹೋದರಃ ।
ರಾಕ್ಷಸಸ್ಯ ಮಹಾರಾಜ ರಾಮಕ್ಷಿಪ್ತಸ್ಯ ವೈ ಪುರಾ ॥೫॥

ಬಲರಾಮನು ಅಲ್ಲಿಂದ ಔಶನಸತೀರ್ಥಕ್ಕೆ ಹೋದನು. ಆ ಕ್ಷೇತ್ರಕ್ಕೆ ಕಪಾಲಮೋಚನ ಎಂಬ ಹೆಸರಿದೆ. ಅಲ್ಲಿ ಮಹೋದರ ಎಂಬ ಬ್ರಾಹ್ಮಣನು ತನ್ನ ಮೊಣಕಾಲಿಗೆ ತಗಲಿಕೊಂಡಿದ್ದ ಕಪಾಲದಿಂದ ಮುಕ್ತನಾದನು. ಮಹಾರಾಜನೇ! ಹಿಂದೆ ಶ್ರೀರಾಮನ ಬಾಣದ ಹೊಡೆತದಿಂದ ಹಾರಿದ ರಾಕ್ಷಸನ ತಲೆಯು ಈ ಮಹೋದರ ಬ್ರಾಹ್ಮಣನ ಮೊಣಕಾಲಿಗೆ ತಗಲಿ ಅಂಟಿಕೊಂಡಿತ್ತು. ಈ ತೀರ್ಥದಲ್ಲಿ ಆ ಬ್ರಾಹ್ಮಣನು ಆ ಕಪಾಲದಿಂದ ಬಿಡುಗಡೆಯನ್ನು ಪಡೆದನು.

ತತ್ರ ಪೂರ್ವಂ ತಪಸ್ತಪ್ತಂ ಕಾವ್ಯೇನ ಸುಮಹಾತ್ಮನಾ ॥೬॥

ಯತ್ರಾಸ್ಯ ನೀತಿರ್ನಿಖಿಲಾ ಪ್ರಾದುರ್ಭೂತಾ ಮಹಾತ್ಮನಃ ।
ಯತ್ರ ಸಂಚಿಂತಯಾಮಾಸ ದೇವದಾನವವಿಗ್ರಹಮ್ ॥೭॥

ಆ ತೀರ್ಥದಲ್ಲಿಯೇ ಹಿಂದೆ ದೈತ್ಯಗುರುವಾದ ಶುಕ್ರಾಚಾರ್ಯನು ಏಕಾಗ್ರಮನಸ್ಸಿನಿಂದ ತಪಸ್ಸನ್ನು ಆಚರಿಸಿದ್ದನು. ಅಲ್ಲಿಯೇ ಮಹಾತ್ಮನಾದ ಶುಕ್ರನ ಶುಕ್ರನೀತಿಯು ವ್ಯಕ್ತವಾಯಿತು. ಅಲ್ಲಿಯೇ ಮುಂದೆ ನಡೆಯಲಿದ್ದ ದೇವಾಸುರ ಯುದ್ಧವನ್ನು ಆಲೋಚಿಸಿದನು.

ತತ್ ಪ್ರಾಪ್ಯ ಚ ಬಲೋ ರಾಜನ್ ತೀರ್ಥಪ್ರವರಮುತ್ತಮಮ್ ।
ವಿಧಿವದ್ದಿ ದದೌ ವಿತ್ತಂ ಬ್ರಾಹ್ಮಣಾನಾಂ ಮಹಾತ್ಮನಾಮ್ ॥೮೪॥

ರಾಜನೇ! ಬಲರಾಮನು ಆ ಉತ್ತಮವಾದ ತೀರ್ಥಕ್ಷೇತ್ರಕ್ಕೆ ಬಂದು ಮಹಾತ್ಮರಾದ ಬ್ರಾಹ್ಮಣರಿಗೆ ವಿಧಿಪ್ರಕಾರವಾಗಿ ದಾನಗಳನ್ನು ಮಾಡಿದನು.

ಜನಮೇಜಯಃ

ಕಪಾಲಮೋಚನಂ ಬ್ರಹ್ಮನ್ ಕಥಂ ಪ್ರಾಪ್ತೋ ಮಹಾಮುನಿಃ ।
ಕಥಂ ಚಾಸ್ಯ ಶಿರೋ ಲಗ್ನಂ ಕೇನ ಚೈವ ತು ಹೇತುನಾ ॥೯॥

ಜನಮೇಜಯ– ಬ್ರಹ್ಮಜ್ಞಾನಿಯೇ! ಆ ಮಹಾಮುನಿಯು ಈ ತೀರ್ಥದಲ್ಲಿ ತನಗಂಟಿದ ಕಪಾಲದಿಂದ ಬಿಡುಗಡೆಯನ್ನು ಹೇಗೆ ಪಡೆದುಕೊಂಡನು? ಯಾವ ಕಾರಣದಿಂದಾಗಿ ಅವನಿಗೆ ಆ ಕಪಾಲವು ಅಂಟಿಕೊಂಡಿತು?

ವೈಶಂಪಾಯನಃ

ಪುರಾ ವೈ ದಂಡಕಾರಣ್ಯೇ ರಾಘವೇಣ ಮಹಾತ್ಮನಾ ।
ವಸತಾ ರಾಜಶಾರ್ದೂಲ ರಾಕ್ಷಸಾಸ್ತತ್ರ ಹಿಂಸಿತಾಃ ॥೧೦॥

ವೈಶಂಪಾಯನ– ರಾಜಸಿಂಹನೇ! ಹಿಂದೆ ಮಹಾತ್ಮನಾದ ಶ್ರೀರಾಮನು ದಂಡಕಾರಣ್ಯದಲ್ಲಿ ವಾಸಮಾಡುತ್ತಿದ್ದಾಗ ಅಲ್ಲಿ ಅನೇಕ ರಾಕ್ಷಸರನ್ನು ಕೊಂದುಹಾಕಿದ್ದನು.

ಜನಸ್ಥಾನೇ ಶಿರಶ್ಛಿನ್ನಂ ರಾಕ್ಷಸಸ್ಯ ದುರಾತ್ಮನಃ ।
ಕ್ಷುರೇಣ ಶಿತಧಾರೇಣ ತತ್ ಪಪಾತ ಮಹಾವನೇ ॥೧೧॥

ಜನಸ್ಥಾನದಲ್ಲಿ ದುಷ್ಟನಾದ ರಾಕ್ಷಸನ ತಲೆಯನ್ನು ಹರಿತವಾದ ಕತ್ತಿಯಿಂದ ತುಂಡರಿಸಿದ್ದನು. ಅದು ದೊಡ್ಡಕಾಡಿನಲ್ಲಿ ಬಿದ್ದಿತು.

ಮಹೋದರಸ್ಯ ತಲ್ಲಗ್ನಂ ಜಂಘಾಯಾಂ ವೈ ಯದೃಚ್ಛಯಾ ।
ವನೇ ವಿಚರತೋ ರಾಜನ್ನಸ್ಥಿ ಭಿತ್ತ್ವಾ ವ್ಯಸ್ಫುರತ್ ತದಾ ॥೧೨॥

ರಾಜನೇ! ಅಕಸ್ಮಾತ್ತಾಗಿ (ಭಗವದಿಚ್ಛೆಯಿಂದ) ಆ ತಲೆಯು ಕಾಡಿನಲ್ಲಿ ಸಂಚರಿಸುತ್ತಿದ್ದ ಮಹೋದರ ಎಂಬ ಮುನಿಯ ಮೊಣಕಾಲಿನ ಎಲುಬನ್ನು ಸೀಳಿ ತಗುಲಿಕೊಂಡಿತು.

ಸ ತೇನ ಲಗ್ನೇನ ತದಾ ದ್ವಿಜಾತಿರ್ನ ಶಶಾಕ ಹ ।
ಅಭಿಗಂತುಂ ಮಹಾಪ್ರಾಜ್ಞ ತೀರ್ಥಾನ್ಯಾಯತನಾನಿ ಚ ॥೧೩॥

ಬ್ರಾಹ್ಮಣಜಾತಿಯವನಾದ್ದರಿಂದ ಆ ಮಹಾಜ್ಞಾನಿಯಾದ ಮುನಿಯು, ಕಪಾಲವು ತನ್ನ ಮೊಣಕಾಲಿಗೆ ಅಂಟಿಕೊಂಡಿದ್ದರಿಂದ ತೀರ್ಥಕ್ಷೇತ್ರಗಳಿಗೆ ಮತ್ತು ದೇವಾಲಯಗಳಿಗೆ ಹೋಗಲು ಶಕ್ತನಾಗಲಿಲ್ಲ.

ಸಪೂತಿನಾ ವಿಸ್ರವತಾ ವೇದನಾರ್ತೋ ಮಹಾಮುನಿಃ ।
ಜಗಾಮ ಸರ್ವತೀರ್ಥಾನಿ ಪೃಥಿವ್ಯಾಮಿತಿ ನಃ ಶ್ರುತಮ್ ॥೧೪॥

ಮೊಣಕಾಲಲ್ಲಿ ದುರ್ಗಂಧಯುಕ್ತವಾದ ಕೀವು ಹೊರಸೂಸಲು ಆರಂಭಿಸಿತು. ಆ ಮಹಾಮುನಿಯು ಬಹಳವಾಗಿ ದುಃಖವನ್ನು ಅನುಭವಿಸುತ್ತಿದ್ದನು. ಆದರೂ ಪೃಥಿವಿಯಲ್ಲಿರುವ ಎಲ್ಲಾ ತೀರ್ಥಗಳನ್ನು ಸಂದರ್ಶಿಸಿದನು.

ಸ ಗತ್ವಾ ಸರಿತಃ ಸರ್ವಾಃ ಸಮುದ್ರಾಂಶ್ಚ ಮಹಾತಪಾಃ ।
ಕಥಯಾಮಾಸ ತತ್ ಸರ್ವಮೃಷೀಣಾಂ ಭಾವಿತಾತ್ಮನಾಮ್ ॥೧೫॥

ಆ ತಪಸ್ವಿಯಾದ ಮುನಿಯು ಎಲ್ಲಾ ನದಿಗಳಿಗೂ, ಎಲ್ಲಾ ಸಮುದ್ರಗಳಿಗೂ ಹೋಗಿ ತನಗೆ ನಡೆದ ಎಲ್ಲಾ ವಿಷಯಗಳನ್ನೂ ಅಲ್ಲಿ ಸಿದ್ಧಿಯನ್ನು ಪಡೆದುಕೊಂಡಿದ್ದ ಋಷಿಗಳಲ್ಲಿ ಹೇಳಿಕೊಂಡನು.

ಆಪ್ಲುತಃ ಸರ್ವತೀರ್ಥೇಷು ನ ಚ ಮೋಕ್ಷಮವಾಪ್ತವಾನ್ ।
ಸ ತು ಶುಶ್ರಾವ ವಿಪ್ರೇಂದ್ರೋ ಮುನೀನಾಂ ವಚನಂ ಮಹತ್ ॥೧೬॥

ಎಲ್ಲಾ ತೀರ್ಥಗಳಲ್ಲಿ ಅವಗಾಹಸ್ನಾನವನ್ನು ಮಾಡಿಯೂ ಕಪಾಲದಿಂದ ಬಿಡುಗಡೆ ಸಿಗಲಿಲ್ಲ. ಬ್ರಾಹ್ಮಣೋತ್ತಮನಾದ ಆತನು ಮುನಿಗಳ ವಿಶಿಷ್ಟವಾದ ಮಾತನ್ನು ಕೇಳಿಸಿಕೊಂಡನು.

ಸರಸ್ವತ್ಯಾಂ ತೀರ್ಥವರಂ ಖ್ಯಾತಮೌಶನಸಂ ತಥಾ ।
ಸರ್ವಪಾಪಪ್ರಶಮನಂ ಸಿದ್ಧಿಕ್ಷೇತ್ರಮನುತ್ತಮಮ್ ॥೧೭॥

ಸರಸ್ವತಿಯಲ್ಲಿ ಔಶನಸ ಎಂಬ ತೀರ್ಥವು ಶ್ರೇಷ್ಠ ತೀರ್ಥವೆಂದು ಪ್ರಸಿದ್ಧವಾಗಿದೆ. ಅದು ಎಲ್ಲಾ ಪಾಪಗಳನ್ನೂ ಕಳೆಯುವಂತಹದ್ದು. ಸರಿಸಾಟಿಯಿಲ್ಲದ ಸಿದ್ಧಿಕ್ಷೇತ್ರವಾಗಿದೆ.

ಸ ತು ಗತ್ವಾ ತತಃ ತತ್ರ ತೀರ್ಥಮೌಶನಸಂ ದ್ವಿಜಃ ।
ತತಶ್ಚೌಶನಸಂ ತೀರ್ಥಂ ತಸ್ಯೋಪಸ್ಪೃಶತಸ್ತದಾ ॥೧೮॥

ಆ ಮಹೋದರ ಬ್ರಾಹ್ಮಣನಾದರೂ ಔಶನಸತೀರ್ಥಕ್ಕೆ ಬರುತ್ತಾನೆ. ಆ ತೀರ್ಥದ ಜಲದಿಂದ ಆಚಮನಾದಿಗಳನ್ನು ಮಾಡುತ್ತಾನೆ.

ತಚ್ಚಿರಶ್ಚರಣಂ ಮುಕ್ತ್ವಾ ಪಪಾತಾಂತರ್ಜಲೇ ತತಃ ॥೧೯॥

ಅವನ ಕಾಲಿಗೆ ಅಂಟಿಕೊಂಡಿದ್ದ ತಲೆಯು ಕೆಳಗೆ ಬಿದ್ದು ನೀರಿನೊಳಗೆ ಸೇರಿಕೊಂಡಿತು.

ತತಃ ಸ ವಿರುಜೋ ಭೂತ್ವಾ ಪೂತಾತ್ಮಾ ವೀತಕಲ್ಮಷಃ ।
ಆಜಗಮಾಶ್ರಮಂ ಪ್ರೀತಃ ಕೃತಕೃತ್ಯೋ ಮಹೋದರಃ ॥೨೦॥

ಅನಂತರ ಅವನು ರೋಗರಹಿತನಾಗಿ ದುಃಖವನ್ನು ಕಳೆದುಕೊಂಡು ಪವಿತ್ರನಾಗಿ, ಮಹೋದರನು ಕೃತಕೃತ್ಯನಾಗಿ ಸಂತೋಷದಿಂದ ತನ್ನ ಆಶ್ರಮಕ್ಕೆ ಮರಳಿದನು.

ಸೋಽಥ ಗತ್ವಾಽಶ್ರಮಂ ಪುಣ್ಯಂ ವಿಪ್ರಮುಕ್ತೋ ಮಹಾತಪಾಃ ।
ಕಥಯಾಮಾಸ ತತ್ಸರ್ವಮ್ ಋಷೀಣಾಂ ಭಾವಿತಾತ್ಮನಾಮ್ ॥೨೧॥

ಹೀಗೆ ಕಷ್ಟವನ್ನು ಕಳೆದುಕೊಂಡ ಮಹಾತಪಸ್ವಿಯಾದ ಬ್ರಾಹ್ಮಣನು ಪುಣ್ಯಪ್ರದವಾದ ತನ್ನ ಆಶ್ರಮಕ್ಕೆ ಹೋಗಿ, ಜ್ಞಾನಿಗಳಾದ ಮುನಿಗಳಿಗೆ ನಡೆದಿದ್ದ ಎಲ್ಲಾ ವಿಷಯಗಳನ್ನು ನಿರೂಪಿಸಿದನು.

ತಚ್ಛ್ರುತ್ವಾ ವಚನಂ ತಸ್ಯ ತದಾ ತೀರ್ಥಸ್ಯ ಮಾನದ ।
ಕಪಾಲಮೋಚನಮಿತಿ ನಾಮ ಚಕ್ರುಃ ಸಮಾಗತಾಃ ॥೨೨॥

ಅವನ ಆ ಮಾತುಗಳನ್ನು ಕೇಳಿಸಿಕೊಂಡ ಮುನಿಗಳು ಆ ತೀರ್ಥಕ್ಕೆ ಕಪಾಲಮೋಚನ ಎಂಬ ಹೆಸರನ್ನು ಇಟ್ಟರು.

ತತ್ರ ದತ್ವಾ ಬಹೂನ್ ದೇಯಾನ್ ವಿಪ್ರಾನ್ ಸಂಪೂಜ್ಯ ಸಾದರಮ್ ।
ಜಗಾಮ ತತ್ರ ರಾಜೇಂದ್ರ ಉಶಂಗೋರಾಶ್ರಮಂ ಪ್ರತಿ ॥೨೩॥

ಅಲ್ಲಿ ಬಲರಾಮನು ದಾನಗಳನ್ನು ಮಾಡಿ ಬ್ರಾಹ್ಮಣರನ್ನು ಬಹಳ ಚೆನ್ನಾಗಿ ಪೂಜಿಸಿದನು. ರಾಜೇಂದ್ರನೇ! ಅಲ್ಲಿಂದ ಉಶಂಗುವಿನ ಆಶ್ರಮಕ್ಕೆ ಹೋದನು.

ಯತ್ರ ತಪ್ತಂ ತಪೋ ಘೋರಮಾರ್ಷ್ಟಿಷೇಣೇನ ಭಾರತ ।
ಬ್ರಾಹ್ಮಣ್ಯಂ ಲಬ್ಧವಾನ್ ಯತ್ರ ವಿಶ್ವಾಮಿತ್ರೋ ಮಹಾತಪಾಃ ॥೨೪॥

ಆರ್ಷ್ಟಿಶವಂಶದಲ್ಲಿ ಹುಟ್ಟಿದ ಒಬ್ಬ ಮುನಿಯು ಆ ತೀರ್ಥದಲ್ಲಿ ಮಹಾತಪಸ್ಸನ್ನು ಮಾಡಿದನು. ವಿಶ್ವಾಮಿತ್ರನು ಕೂಡ ಅಲ್ಲಿಯೇ ತಪಸ್ಸನ್ನು ಮಾಡಿ ಬ್ರಾಹ್ಮಣನಾದನು (ಬ್ರಹ್ಮರ್ಷಿಯಾದನು).

ತತೋ ಹಲಾಯುಧಃ ಶ್ರೀಮಾನ್ ಬ್ರಾಹ್ಮಣೈಃ ಪರಿವಾರಿತಃ ।
ಜಗಾಮ ತತ್ರ ರಾಜೇಂದ್ರ ಉಶಂಗುಸ್ತನುಮತ್ಯಜತ್ ॥೨೫॥

ಅಲ್ಲಿಂದ ಮುಂದೆ ಒಳ್ಳೆಯ ಕಾಂತಿಯುಳ್ಳ ಬಲರಾಮನು ಬ್ರಾಹ್ಮಣರನ್ನು ಸೇರಿಸಿಕೊಂಡು, ಉಶಂಗುಮುನಿಯು ತನ್ನ ಪ್ರಾಣವನ್ನು ಕಳೆದುಕೊಂಡ ತೀರ್ಥಕ್ಕೆ ಬರುತ್ತಾನೆ.

ಉಶಂಗುರ್ಬ್ರಾಹ್ಮಣೋ ವೃದ್ಧಃ ತಪೋನಿತ್ಯಶ್ಚ ಭಾರತ ।
ದೇಹನ್ಯಾಸೇ ಕೃತಮನಾ ವಿಚಿಂತ್ಯ ಬಹುಧಾ ನೃಪ ॥೨೬॥

ಉಶಂಗುವು ಒಬ್ಬ ವೃದ್ಧನಾದ ತಪೋನಿರತನಾದ ಬ್ರಾಹ್ಮಣ. ರಾಜನೇ! ಅನೇಕರೀತಿಯಲ್ಲಿ ಆಲೋಚನೆಮಾಡಿ ಕೊನೆಗೆ ದೇಹವನ್ನು ಬಿಟ್ಟುಬಿಡಲು ಮನಸ್ಸು ಮಾಡಿದನು.

ತತಃ ಸರ್ವಾನುಪಾದಾಯ ತನಯಾನ್ ವೈ ಮಹಾತಪಾಃ ।
ಉಶಂಗುರಬ್ರವೀತ್ ತತ್ರ ನಯಧ್ವಂ ಮಾಂ ಪೃಥೂದಕಮ್ ॥೨೭॥

ಮಹಾತಪಸ್ವಿಯಾದ ಉಶಂಗುವು ತನ್ನ ಎಲ್ಲಾ ಮಕ್ಕಳನ್ನೂ ಹತ್ತಿರ ಕರೆದು ಹೀಗೆ ಹೇಳುತ್ತಾನೆ- 'ನನ್ನನ್ನು ತೀರ್ಥಕ್ಷೇತ್ರಕ್ಕೆ ಕರೆದೊಯ್ಯಿರಿ'.

ವಿಜ್ಞಾಯಾತೀತವಯಸಮುಶಂಗುಂ ತಂ ತಪೋಧನಾಃ ।
ತದ್ವೈ ತೀರ್ಥಮುಪಾನಿನ್ಯುಃ ಸರಸ್ವತ್ಯಾಸ್ತಪೋಧನಮ್ ॥೨೮॥

ತಪಸ್ವಿಗಳಾದ ಮುನಿಗಳು ಉಶಂಗುವಿನ ಆಯುಷ್ಯವು ಅತ್ಯಲ್ಪವಾಗಿರುವುದಾಗಿ ತಿಳಿದುಕೊಂಡರು. ತಪಸ್ವಿಯಾದ ಉಶಂಗುವನ್ನು ಸರಸ್ವತಿಯ ತೀರ್ಥಕ್ಕೆ ಕರೆದುಕೊಂಡು ಹೋದರು.

ಸ ತೈಃ ಪುತ್ರೈಸ್ತದಾ ಧೀಮಾನಾನೀತೋ ವೈ ಸರಸ್ವತೀಮ್ ।
ಪುಣ್ಯಾಂ ತೀರ್ಥಶತೋಪೇತಾಂ ವಿದ್ವತ್ಸಂಘೈರ್ನಿಷೇವಿತಾಮ್ ॥೨೯॥

ಬುದ್ಧಿವಂತನಾದ ಉಶಂಗುವು ಪುಣ್ಯಪ್ರದವಾದ, ವಿದ್ವಾಂಸರಿಂದ ನಿತ್ಯದಲ್ಲಿಯೂ ಸೇವಿತಳಾದ ಸರಸ್ವತಿ ನದಿ ಇರುವ ಈ ಕ್ಷೇತ್ರಕ್ಕೆ ಭೇಟಿಕೊಟ್ಟನು.

ಸ ತತ್ರ ವಿಧಿನಾ ರಾಜನ್ನಾಪ್ಲುತ್ಯ ಸುಮಹಾತಪಾಃ ।
ಜ್ಞಾತ್ವಾ ತೀರ್ಥಗುಣಂ ಚೈವ ಪ್ರಾಹೇದಂ ಮುನಿಸತ್ತಮಃ ॥೩೦॥

ಸುಪ್ರೀತಃ ಪುರುಷವ್ಯಾಘ್ರಃ ಸರ್ವಾನ್ ಪುತ್ರಾನಿದಂ ವಚಃ ॥೩೧॥

ಮಹಾತಪಸ್ವಿಯಾದ ಉಶಂಗುವು ವಿಧಿಗಳಿಗನುಸಾರವಾಗಿ ಸ್ನಾನವನ್ನು ಮಾಡಿ, ತೀರ್ಥಗಳ ಮಹತ್ವವನ್ನು ತಿಳಿದು, ಬಹಳವಾದ ತೃಪ್ತಿಯನ್ನು ಪಡೆದು, ತನ್ನ ಮಕ್ಕಳಿಗೆ ಹೇಳಿದನು.

ಉಶಂಗುಃ

ಸರಸ್ವತ್ಯುತ್ತರೇ ತೀರೇ ಯಸ್ಯಜೇದಾತ್ಮನಸ್ತನುಮ್ ।
ಪೃಥೂದಕೇ ಜಪ್ಯಪರೋ ನೈನಂ ಶ್ವೋ ಮರಣಂ ತಪೇತ್ ॥೩೨॥

ಉಶಂಗು– ಸರಸ್ವತಿಯ ಉತ್ತರತೀರದಲ್ಲಿ ಪೃಥೂದಕದಲ್ಲಿ ಜಪ ಮಾಡುತ್ತಾ, ಯಾವನು ತನ್ನ ದೇಹವನ್ನು ಬಿಡುತ್ತಾನೆಯೋ ಅವನಿಗೆ ಮರಣವು ದುಃಖದಾಯಕವಾಗುವುದಿಲ್ಲ.

ವೈಶಂಪಾಯನಃ

ತತ್ರಾಪ್ಲುತ್ಯ ಸ ಧರ್ಮಾತ್ಮಾ ಉಪಸ್ಪೃಶ್ಯ ಹಲಾಯುಧಃ ।
ದತ್ತ್ವಾ ಚೈವ ಬಹೂನ್ ದೇಯಾನ್ ವಿಪ್ರಾಣಾಂ ವಿಪ್ರವತ್ಸಲಃ ॥೩೩॥

ವೈಶಂಪಾಯನ– ಧರ್ಮಾತ್ಮನಾದ ಬಲರಾಮನು ಅಲ್ಲಿ ಅವಗಾಹಸ್ನಾನವನ್ನು ಮಾಡಿ, ಆಚಮನಪುರಸ್ಸರವಾಗಿ ಮಾಡಬೇಕಾದ ದಾನಗಳನ್ನು ಬ್ರಾಹ್ಮಣರಿಗೆ ಮಾಡಿದನು. ಬಲರಾಮನು ಬ್ರಾಹ್ಮಣರ ಬಗ್ಗೆ ಬಹಳ ಪ್ರೀತಿವುಳ್ಳವನಾಗಿದ್ದನು.

ಸಸರ್ಜ ಯತ್ರ ಭಗವಾನ್ ಬ್ರಹ್ಮಾ ಲೋಕಪಿತಾಮಹಃ ॥೩೪॥

ಆ ತೀರ್ಥದಲ್ಲಿಯೇ ಚತುರ್ಮುಖನು ಸೃಷ್ಟಿಕಾರ್ಯವನ್ನು ಮಾಡಿದ್ದನು.

ಯತ್ರಾರ್ಷ್ಟಿಷೇಣಃ ಕೌರವ್ಯ ಬ್ರಾಹ್ಮಣಃ ಸಂಶಿತವ್ರತಃ ।
ತಪಸಾ ಮಹತಾ ರಾಜನ್ ಪ್ರಾಪ್ತವಾನ್ ಸಿದ್ಧಿಮುತ್ತಮಾಮ್ ॥೩೫॥

ಸಿಂಧುದ್ವೀಪಶ್ಚ ರಾಜರ್ಷಿರ್ದೇವಾಪಿಶ್ಚ ಮಹಾತಪಾಃ ।
ಸಿಂಧುದ್ವೀಪಂ ಚ ಸಂಪ್ರಾಪ್ಯ ಬ್ರಾಹ್ಮಣ್ಯಂ ಲಬ್ಧವಾನ್ ಪುರಾ ।
ಬ್ರಾಹ್ಮಣ್ಯಂ ಲಬ್ಧವಾನ್ ಯತ್ರ ವಿಶ್ವಾಮಿತ್ರೋ ಮಹಾತಪಾಃ ॥೩೬॥

ತಪಸ್ವೀ ಭಗವಾನುಗ್ರ ಉರುತೇಜಾ ಮಹಾಯಶಾಃ ।
ತತ್ರಾಜಗಾಮ ಬಲವಾನ್ ಬಲದೇವಃ ಪ್ರತಾಪವಾನ್ ॥೩೭॥

ಕೌರವರಾಜನೇ! ಅದೇ ತೀರ್ಥದಲ್ಲಿ ಆರ್ಷ್ಟಿಷೇಣ ಎಂಬ ತೀಕ್ಷ್ಣತಪಸ್ಸುಳ್ಳ ಬ್ರಾಹ್ಮಣನು ಕಠಿಣ ತಪಸ್ಸಿನಿಂದ ಉತ್ತಮವಾದ ಸಿದ್ಧಿಯನ್ನು ಪಡೆದನು. ಅಲ್ಲಿಯೇ ರಾಜರ್ಷಿಯಾದ ಸಿಂಧುದ್ವೀಪ, ಮಹಾತಪಸ್ವಿಯಾದ ದೇವಾಪಿ- ಇವರೆಲ್ಲಾ ಸಿದ್ಧಿಯನ್ನು ಪಡೆದರು. ಬ್ರಾಹ್ಮಣ್ಯವನ್ನು ಹೊಂದಿದರು. ಮಹಾತಪಸ್ವಿಯಾದ ತೇಜೋಭರಿತನಾದ, ಕೀರ್ತಿವಂತ ವಿಶ್ವಾಮಿತ್ರನು ಇಲ್ಲಿಯೇ ಬ್ರಾಹ್ಮಣ್ಯವನ್ನು ಪಡೆದದ್ದು. ಆ ತೀರ್ಥಕ್ಕೆ ಪ್ರತಾಪಿಯಾದ ಬಲಶಾಲಿ ಬಲರಾಮನು ಬಂದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಬಲಭದ್ರಯಾತ್ರಾಯಾಂ ವೃಷಘ್ನಚರಿತಂ ನಾಮ ಏಕಾದಶೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೆರಡನೆಯ ಅಧ್ಯಾಯ

ಆರ್ಷ್ಟಿಷೇಣನು ಪೃಥೂದಕದಲ್ಲಿ ತಪಸ್ಸನ್ನು ಮಾಡಿ ಎಲ್ಲಾ ವೇದಗಳ ಅಧ್ಯಯನವನ್ನು ಮಾಡಿದುದು. ವಿಶ್ವಾಮಿತ್ರಾದಿಗಳು ಆಯಾಯ ತೀರ್ಥಗಳಲ್ಲಿ ತಪಸ್ಸನ್ನು ಮಾಡಿ ಬ್ರಾಹ್ಮಣತ್ವವನ್ನು ಪಡೆದದ್ದು. ಬಲರಾಮನು ಅಲ್ಲಿ ಸ್ನಾನಾದಿಗಳನ್ನು ಮಾಡಿ ಬಕಾಶ್ರಮಕ್ಕೆ ಹೋದದ್ದು.

ಜನಮೇಜಯಃ

ಆರ್ಷ್ಟಿಷೇಣಃ ಕಥಂ ಬ್ರಹ್ಮನ್ ವಿಪುಲಂ ತಪ್ತವಾಂಸ್ತಪಃ ।
ಸಿಂಧುದ್ವೀಪಃ ಕಥಂ ಚಾಪಿ ಬ್ರಾಹ್ಮಣ್ಯಂ ಲಬ್ಧವಾನ್ ಪುರಾ ॥೧॥

ಜನಮೇಜಯ– ಬ್ರಹ್ಮಜ್ಞಾನಿಯೇ! ಆರ್ಷ್ಟಿಷೇಣನು ಬಹಳ ತಪಸ್ಸನ್ನು ಹೇಗೆ ಮಾಡಿದನು? ಹಿಂದೆ ಸಿಂಧುದ್ವೀಪನು ಹೇಗೆ ಬ್ರಾಹ್ಮಣ್ಯವನ್ನು ಪಡೆದನು?

ದೇವಾಪಿಶ್ಚ ಕಥಂ ರಾಜನ್ ವಿಶ್ವಾಮಿತ್ರಶ್ಚ ಸತ್ತಮ ॥೨॥

ದೇವಾಪಿಯೂ ಹೇಗೆ ಬ್ರಾಹ್ಮಣ್ಯವನ್ನು ಹೊಂದಿದನು? ವಿಶ್ವಾಮಿತ್ರನೂ ಹೇಗೆ ಬ್ರಾಹ್ಮಣ್ಯವನ್ನು ಪಡೆದುಕೊಂಡನು?

ತನ್ಮಮಾಚಕ್ಷ್ವ ಭಗವನ್ ಪರಂ ಕೌತೂಹಲಂ ಹಿ ಮೇ ॥೩॥

ಪೂಜ್ಯರೆ! ಇದೆಲ್ಲವನ್ನೂ ನನಗೆ ಹೇಳಿ. ನನಗೆ ಬಹಳ ಕುತೂಹಲವು ಉಂಟಾಗಿದೆ.

ವೈಶಂಪಾಯನಃ

ಪುರಾ ಕೃತಯುಗೇ ರಾಜನ್ನಾರ್ಷ್ಟಿಷೇಣೋ ದ್ವಿಜೋತ್ತಮಃ ।
ವಸನ್ ಗುರುಕುಲೇ ನಿತ್ಯಂ ನಿಯಮಾಧ್ಯಯನೇ ರತಃ ॥೪॥

ವೈಶಂಪಾಯನ– ರಾಜನೇ! ಹಿಂದೆ ಕೃತಯುಗದಲ್ಲಿ ಆರ್ಷ್ಟಿಷೇಣ ಎಂಬ ಉತ್ತಮಬ್ರಾಹ್ಮಣನು ಗುರುಕುಲದಲ್ಲಿ ವಾಸವನ್ನು ಮಾಡುತ್ತಾ ನಿತ್ಯವೂ ನಿಯಮಗಳನ್ನು ಆಸಕ್ತಿಯಿಂದ ಪಾಲಿಸುತ್ತಿದ್ದನು.

ತಸ್ಯ ರಾಜನ್ ಗುರುಕುಲೇ ವಸತೋ ನಿತ್ಯಮೇವ ಹಿ ।
ಸಮಾಪ್ತಿಂ ನಾಗಮನ್ ವಿದ್ಯಾ ನಾಪಿ ವೇದಾ ವಿಶಾಂಪತೇ ॥೫॥

ರಾಜನೇ! ಹೀಗೆ ಗುರುಕುಲವಾಸವನ್ನು ಮಾಡುತ್ತಿದ್ದ ಅವನ ಗುರುಕುಲವಾಸವು ಕೊನೆಗೊಳ್ಳಲಿಲ್ಲ. ವಿದ್ಯೆಯಾಗಲೀ, ವೇದಗಳಾಗಿ ಕಲಿತು ಮುಗಿಯಲಿಲ್ಲ.

ಸ ನಿರ್ವಿಣ್ಣಸ್ತತೋ ರಾಜನ್ ತಪಸ್ತೇಪೇ ಮಹಾತಪಾಃ ॥೬॥

ರಾಜನೇ! ಇದರಿಂದ ವಿಷಾದಕ್ಕೊಳಗಾದ, ಮಹಾತಪಸ್ವಿಯಾದ ಅವನು ತಪಸ್ಸನ್ನಾಚರಿಸಿದನು.

ತತೋ ವೈ ತಪಸಾ ತೇನ ಪ್ರಾಪ್ಯ ವೇದಾನನುತ್ತಮಾನ್ ।
ಸ ವಿದ್ವಾನ್ ವೇದಸಂಯುಕ್ತಃ ಸಿದ್ಧಶ್ಚಾಪ್ಯೃಷಿಸತ್ತಮಃ ॥೭॥

ಅನಂತರ ತಪಸ್ಸಿನಿಂದಾಗಿ ಅವನು ಉತ್ತಮ ವೇದವಿದ್ಯೆಯನ್ನು ಪಡೆದನು. ಹೀಗೆ ವೇದಯುಕ್ತನಾಗಿ ಸಿದ್ಧಿಯನ್ನು ಪಡೆದುಕೊಂಡ ಅವನು ಉತ್ತಮ ಋಷಿ ಎಂದು ಪ್ರಸಿದ್ಧನಾದನು.

ತತ್ರ ತೀರ್ಥೇ ವರಾನ್ ಪ್ರಾದಾತ್ ತ್ರೀನೇವ ಸುಮಹಾತಪಾಃ ॥೮॥

ಆ ತೀರ್ಥಕ್ಕೆ ಮೂರು ವರಗಳನ್ನು ಕೊಟ್ಟನು.

ಔರ್ಷ್ಟಿಷೇಣಃ

ಅಸ್ಮಿಂಸ್ತೀರ್ಥೇ ಮಹಾನದ್ಯಾ ಅದ್ಯಪ್ರಭೃತಿ ಮಾನವಃ ।
ಆಪ್ಲುತೋ ವಾಜಪೇಯಸ್ಯ ಫಲಂ ಪ್ರಾಪ್ನೋತಿ ಪುಷ್ಕಲಮ್ ॥೯॥

ಔರ್ಷ್ಟಿಷೇಣ– ಮಹಾನದಿಯಾದ ಸರಸ್ವತಿಯ ಈ ತೀರ್ಥದಲ್ಲಿ ಇಂದಿನಿಂದ ಯಾವ ಮನುಷ್ಯನು ಸ್ನಾನಮಾಡುವನೋ ಅವನು ವಾಜಪೇಯಯಾಗದ ಉತ್ತಮವಾದ ಫಲವನ್ನು ಹೊಂದುವನು.

ಅದ್ಯಪ್ರಭೃತಿ ವ್ಯಾಲೇಭ್ಯೋ ನ ಭಯಂ ಭವಿತಾ ಪುನಃ ।
ಅಪಿ ಚಾಲ್ಪೇನ ಯತ್ನೇನ ತಪಃ ಪ್ರಾಪ್ಸ್ಯತಿ ಪುಷ್ಕಲಮ್ ॥೧೦॥

ಇಂದಿನಿಂದ ಅವನು ಸರ್ಪಭಯದಿಂದ ದೂರನಾಗುತ್ತಾನೆ. ಸ್ವಲ್ಪ ಪ್ರಯತ್ನದಿಂದಲೇ ಉತ್ತಮವಾದ ತಪಸ್ಸಿನ ಫಲವು ಲಭಿಸುವುದು.

ವೈಶಂಪಾಯನಃ

ಏವಮುಕ್ತ್ವಾ ಮಹಾತೇಜಾ ಜಗಾಮ ತ್ರಿದಿವಂ ಮುನಿಃ ।
ಏವಂ ಸ ಸಿದ್ಧೋ ಭಗವಾನ್ ಆರ್ಷ್ಟಿಷೇಣಃ ಪ್ರತಾಪವಾನ್ ॥೧೧॥

ವೈಶಂಪಾಯನ– ಮಹಾತೇಜೋವಂತನಾದ ಮುನಿಯು ಹೀಗೆ ಹೇಳಿ ಸ್ವರ್ಗಕ್ಕೆ ಹೋದನು. ಹೀಗೆ ಪ್ರತಾಪಿಯಾದ ಭಗವಾನ್ ಆರ್ಷ್ಟಿಷೇಣನು ಸಿದ್ಧಿಯನ್ನು ಪಡೆದುಕೊಂಡನು.

ತಸ್ಮಿನ್ನೇವ ತದಾ ತೀರ್ಥೇ ಸಿಂಧುದ್ವೀಪಃ ಪ್ರತಾಪವಾನ್ ।
ದೇವಾಪಿಶ್ಚ ಮಹಾರಾಜ ಬ್ರಾಹ್ಮಣ್ಯಂ ಪ್ರಾಪತುರ್ಮಹತ್ ॥೧೨॥

ಮಹಾರಾಜನೇ! ಅದೇ ತೀರ್ಥದಲ್ಲಿ ಪ್ರತಾಪಿಯಾದ ಸಿಂಧುದ್ವೀಪ ಮತ್ತು ದೇವಾಪಿ ಇವರು ಮಹತ್ತಾದ ಬ್ರಾಹ್ಮಣ್ಯವನ್ನು ಹೊಂದಿದರು.

ತಥಾ ಕುಶಿಕದಾಯಾದಸ್ತಪೋನಿತ್ಯೋ ಜಿತೇಂದ್ರಿಯಃ ।
ತಪಸಾ ವೈ ಸುತಪ್ತೇನ ಬ್ರಾಹ್ಮಣತ್ವಮವಾಪ್ತವಾನ್ ॥೧೩॥

ಹಾಗೆಯೇ, ನಿತ್ಯವೂ ತಪೋನಿರತನಾದ, ಜಿತೇಂದ್ರಿಯನಾದ ಕುಶಿಕನ ವಂಶದಲ್ಲಿ ಹುಟ್ಟಿದ ವಿಶ್ವಾಮಿತ್ರನು ಬ್ರಾಹ್ಮಣತ್ವವನ್ನು ಹೊಂದಿದನು.

ಗಾಧಿರ್ನಾಮ ಮಹಾನಾಸೀತ್ ಕ್ಷತ್ರಿಯಪ್ರವರೋ ಭುವಿ ।
ತಸ್ಯ ಪುತ್ರಸ್ತ್ವಭೂದ್ ರಾಜನ್ ವಿಶ್ವಾಮಿತ್ರಃ ಪ್ರತಾಪವಾನ್ ॥೧೪॥

ಭೂಲೋಕದಲ್ಲಿ ಗಾಧಿ ಎಂಬ ಹೆಸರಿನ ಶ್ರೇಷ್ಠನಾದ ಕ್ಷತ್ರಿಯನಿದ್ದನು. ರಾಜನೇ ಅವನ ಮಗನೇ ಪ್ರತಾಪಿಯಾದ ವಿಶ್ವಾಮಿತ್ರ.

ಸ ರಾಜಾ ಕೌಶಿಕಸ್ತಾತ ಮಹಾಯೋಗ್ಯಭವತ್ ಕಿಲ ।
ಸ ಪುತ್ರಮಭಿಷಿಚ್ಯೈವ ವಿಶ್ವಾಮಿತ್ರಂ ಮಹಾತಪಾಃ ॥೧೫॥

ಮಹಾತಪಸ್ವಿಯಾದ ಗಾಧಿರಾಜನು ತನ್ನ ಮಗ ವಿಶ್ವಾಮಿತ್ರನಿಗೆ ಪಟ್ಟಾಭಿಷೇಕವನ್ನು ಮಾಡಿ ತಾನು ದೊಡ್ಡ ಯೋಗಿಯಾದನು.

ದೇಹನ್ಯಾಸೇ ಮನಶ್ಚಕ್ರೇ ತಮೂಚುಃ ಪ್ರಣತಾಃ ಪ್ರಜಾಃ ॥೧೬॥

ತಾನು ಶರೀರತ್ಯಾಗವನ್ನು ಮಾಡಿಕೊಳ್ಳಬೇಕೆಂದು ಗಾಧಿರಾಜನು ನಿರ್ಧಾರ ಮಾಡಿದಾಗ ಪ್ರಜೆಗಳು ನಮಸ್ಕರಿಸಿ ಹೀಗೆನ್ನುತ್ತಾರೆ.

ಪ್ರಜಾಃ

ನ ಗಂತವ್ಯಂ ಮಹಾಪ್ರಾಜ್ಞ ತ್ರಾಹಿ ಚಾಸ್ಮಾನ್ ಮಹಾಭಯಾತ್ ॥೧೭॥

ಪ್ರಜೆಗಳು– ಮಹಾಜ್ಞಾನಿಯೇ! ನೀನು ಹೋಗಬಾರದು. ದೊಡ್ಡಭಯದಿಂದ ನಮ್ಮನ್ನು ರಕ್ಷಿಸು.

ವೈಶಂಪಾಯನಃ

ಏವಮುಕ್ತಃ ಪ್ರತ್ಯುವಾಚ ತತೋ ಗಾಧಿಃ ಪ್ರಜಾಸ್ತತಃ ॥೧೮॥

ವೈಶಂಪಾಯನ– ಪ್ರಜೆಗಳು ಹೀಗೆ ಹೇಳಿದಾಗ ಗಾಧಿರಾಜನು ಅವರಿಗೆ ಉತ್ತರವನ್ನು ಕೊಡುತ್ತಾನೆ.

ಗಾಧಿಃ

ಕೃತ್ಸ್ನಸ್ಯ ಜಗತೋ ಗೋಪ್ತಾ ಭವಿಷ್ಯತಿ ಸುತೋ ಮಮ ॥೧೯॥

ಗಾಧಿ– ನನ್ನ ಮಗ ವಿಶ್ವಾಮಿತ್ರನು ಸಂಪೂರ್ಣ ಜಗತ್ತಿನ ರಕ್ಷಕನಾಗುತ್ತಾನೆ.

ವೈಶಂಪಾಯನಃ

ಇತ್ಯುಕ್ತ್ವಾ ತ್ವಥ ತತೋ ಗಾಧಿರ್ವಿಶ್ವಾಮಿತ್ರಂ ನಿವೇಶ್ಯ ಚ ।
ಜಗಾಮ ಸ ತದಾ ರಾಜಾ ಪಥಿ ವೈ ಪುಣ್ಯಕರ್ಮಣಾಮ್ ॥೨೦॥

ವೈಶಂಪಾಯನ– ಹೀಗೆ ಹೇಳಿ ಗಾಧಿರಾಜನು ವಿಶ್ವಾಮಿತ್ರನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ, ಪುಣ್ಯಕರ್ಮಮಾಡಿದವರು ಹೋದ ಮಾರ್ಗದಲ್ಲಿ ಹೊರಟುಹೋದನು. (ವೀರಕ್ಷತ್ರಿಯರು ಹೊಂದುವ ಲೋಕಕ್ಕೆ ಹೋದನು.)

ತದಾ ಗಾಧಿಸುತೋ ರಾಜಾ ವಿಶ್ವಾಮಿತ್ರೋಽಪ್ಯಭೂನ್ನೃಪಃ ।
ನ ಚ ಶಕ್ನೋತಿ ಪೃಥಿವೀಂ ಯತ್ನವಾನಪಿ ರಕ್ಷಿತುಮ್ ॥೨೧॥

ಆಗ ಗಾಧಿರಾಜನ ಮಗನಾದ ವಿಶ್ವಾಮಿತ್ರನು ರಾಜನಾದನು. ಅವನು ಬಹಳ ಪ್ರಯತ್ನಪಟ್ಟರೂ ಕೂಡ ಜಗತ್ತನ್ನು ರಕ್ಷಿಸಲು ಸಮರ್ಥನಾಗಲಿಲ್ಲ.

ತತಃ ಶುಶ್ರಾವ ರಾಜಾಽಸೌ ರಾಕ್ಷಸೇಭ್ಯೋ ಮಹದ್ ಭಯಮ್ ।
ನಿರ್ಯಯೌ ನಗರಾಚ್ಚಾಪಿ ಚತುರಂಗಬಲಾನ್ವಿತಃ ॥೨೨॥

ಆಗ ರಾಕ್ಷಸರಿಂದ ಬಹಳ ದೊಡ್ಡ ಭಯವುಂಟಾಗಿದೆ ಎಂಬುದನ್ನು ಅವನು ಕೇಳಿಸಿಕೊಂಡನು. ಚತುರಂಗಬಲಸಹಿತನಾಗಿ ನಗರದಿಂದ ಹೊರಟನು.

ಸ ಗತ್ವಾ ದೂರಮಧ್ವಾನಂ ವಸಿಷ್ಠಾಶ್ರಮಮುತ್ತಮಮ್ ।
ತತಸ್ತೇ ಸೈನಿಕಾ ರಾಜನ್ ಜಘ್ನುಸ್ತತ್ರ ಬಹೂನ್ ಮೃಗಾನ್ ॥೨೩॥

ಬಹಳ ದೂರ ಬಂದಾಗ ದಾರಿಯಲ್ಲಿ ವಸಿಷ್ಠರ ಉತ್ತಮವಾದ ಆಶ್ರಮವನ್ನು ನೋಡಿದನು. ವಿಶ್ವಾಮಿತ್ರನ ಸೈನಿಕರು ಅಲ್ಲಿ ಅನೇಕ ಜಿಂಕೆಗಳನ್ನು ಕೊಂದರು.

ತತಸ್ತು ಭಗವಾನ್ ವಿಪ್ರೋ ವಸಿಷ್ಠಸ್ತು ಸ್ವ ಆಶ್ರಮೇ ।
ದದೃಶೇ ತು ತತಃ ಸರ್ವಂ ವಧ್ಯಮಾನಂ ಮಹಾವನಮ್ ॥೨೪॥

ಆಗ ತನ್ನ ಆಶ್ರಮದಲ್ಲಿ ಇಡೀ ವನವು ನಾಶವಾಗುತ್ತಿರುವುದನ್ನು ಭಗವಾನ್ ವಸಿಷ್ಠರು ನೋಡಿದರು.

ತಸ್ಯ ಕ್ರುದ್ಧೋ ಮಹಾರಾಜ ವಸಿಷ್ಠೋ ಮುನಿಸತ್ತಮಃ ।
ವಿಸೃಜಸ್ವ ಬಲಂ ಘೋರಮಿತಿ ಸ್ಮಾಂ ಗಾಮುವಾಚ ಹ ॥೨೫॥

ಮಹಾರಾಜನೇ! ಕೋಪಗೊಂಡ ಶ್ರೇಷ್ಠಮುನಿಗಳಾದ ವಸಿಷ್ಠರು ತನ್ನ ಬಳಿಯಿದ್ದ ಹಸುವಿಗೆ ''ಘೋರವಾದ ಬಲವನ್ನು ಪ್ರಯೋಗಿಸು'' ಎಂದು ಆದೇಶಿಸಿದರು.

ತಥೋಕ್ತಾ ಸಾಽಸೃಜದ್ ಧೇನುಃ ಪುರುಷಾನ್ ಘೋರದರ್ಶನಾನ್ ।
ತೇ ಚ ತದ್ಬಲಮಾಸಾದ್ಯ ಬಭಂಜುಃ ಸರ್ವತೋದಿಶಮ್ ॥೨೬॥

ವಸಿಷ್ಠರ ಆದೇಶವನ್ನು ಪಡೆದ ಧೇನುವು ನೋಡಲು ಭಯಂಕರವಾದ ಪುರುಷರನ್ನು ಸೃಷ್ಟಿಸಿತು. ಆ ಪುರುಷರು ಧೇನುವಿನಿಂದ ಶಕ್ತಿಯನ್ನು ಪಡೆದುಕೊಂಡು ಎಲ್ಲಾ ಕಡೆಯೂ ಶತ್ರುಗಳನ್ನು ನಾಶಮಾಡಿದರು.

ತದ್ ದೃಷ್ಟ್ವಾ ವಿದ್ರುತಂ ಸೈನ್ಯಂ ವಿಶ್ವಾಮಿತ್ರಸ್ತು ಗಾಧಿಜಃ ।
ತಪಃ ಪರಂ ಮನ್ಯಮಾನಃ ತಪಸ್ಯೇವ ಮನೋ ದಧೇ ॥೨೭॥

ಸೈನ್ಯವೆಲ್ಲವೂ ಓಡಿಹೋಗುತ್ತಿರುವುದನ್ನು ನೋಡಿದ ಗಾಧಿಪುತ್ರ ವಿಶ್ವಾಮಿತ್ರನು ವಸಿಷ್ಠರ ತಪಸ್ಸು ಶ್ರೇಷ್ಠವಾದುದೆಂದು ತಿಳಿದು ತಾನೂ ಕೂಡ ತಪಸ್ಸು ಮಾಡಲು ನಿಶ್ಚಯಿಸಿದನು.

ಸೋಽಸ್ಮಿಂಸ್ತೀರ್ಥವರೇ ರಾಜನ್ ಸರಸ್ವತ್ಯಾಂ ಸಮಾಹಿತಃ ।
ನಿಯಮೈಶ್ಚೋಪವಾಸೈಶ್ಚ ಕ್ಷಪಯನ್ ದೇಹಮಾತ್ಮನಃ ॥೨೮॥

ರಾಜನೇ! ಆ ವಿಶ್ವಾಮಿತ್ರನು ಸರಸ್ವತಿನದಿಯಲ್ಲಿರುವ ಈ ತೀರ್ಥದಲ್ಲಿ ಮನೋನಿಗ್ರಹವನ್ನು ಸಂಪಾದಿಸಿ, ನಿಯಮ-ಉಪವಾಸಗಳಿಂದ ತನ್ನ ದೇಹವನ್ನು ದಂಡಿಸಿಕೊಂಡನು.

ಜಲಾಹಾರೋ ವಾಯುಭಕ್ಷಃ ಪರ್ಣಾಹಾರಶ್ಚ ಸೋಽಭವತ್ ।
ತತಃ ಸ್ಥಂಡಿಲಶಾಯೀ ಚ ಯೇ ಚಾನ್ಯೇ ನಿಯಮಾಃ ಪೃಥಕ್ ॥೨೯॥

ಕೇವಲ ನೀರನ್ನು ಸೇವಿಸುತ್ತಾ, ಕೇವಲ ಪ್ರಾಣಾಯಾಮದ ಗಾಳಿಯನ್ನು ಮಾತ್ರ ಸೇವಿಸುತ್ತಾ, ಎಲೆಗಳನ್ನಷ್ಟೇ ಸೇವಿಸುತ್ತಾ, ನೆಲದ ಮೇಲೆ ಮಲಗುತ್ತಾ, ಹೀಗೆ ಇನ್ನೂ ಅನೇಕ ನಿಯಮಗಳನ್ನು ಆಚರಿಸತೊಡಗಿದನು.

ಅಸಕೃತ್ ತಸ್ಯ ದೇವಾಶ್ಚ ವ್ರತವಿಘ್ನಂ ಪ್ರಚಕ್ರಿರೇ ।
ನ ತಸ್ಯ ನಿಯಮಾದ್ ಬುದ್ಧಿರಪಯಾತಿ ಮಹಾತ್ಮನಃ ॥೩೦॥

ದೇವತೆಗಳು ಅನೇಕ ಬಾರಿ ಅವನ ತಪಸ್ಸಿಗೆ ವಿಘ್ನವನ್ನುಂಟು ಮಾಡಿದರು. ಆದರೆ ಮಹಾತ್ಮನಾದ ವಿಶ್ವಾಮಿತ್ರನ ಬುದ್ಧಿಯು ನಿಯಮಗಳನ್ನು ಬಿಟ್ಟುಕೊಡಲಿಲ್ಲ.

ತತಃ ಪರೇಣ ಯತ್ನೇನ ತಪ್ತ್ವಾ ಬಹುವಿಧಂ ತಪಃ ।
ತೇಜಸಾ ಭಾಸ್ಕರಾಕಾರೋ ಗಾಧಿಜಃ ಸಮಪದ್ಯತ ॥೩೧॥

ಅನಂತರ ಉತ್ತಮವಾದ ಪ್ರಯತ್ನದಿಂದ ಅನೇಕ ರೀತಿಯಾಗಿ ತಪಸ್ಸನ್ನು ಆಚರಿಸಿ ವಿಶ್ವಾಮಿತ್ರನು ತೇಜಸ್ಸಿನಿಂದ ಸೂರ್ಯನಂತೆ ಕಾಣಿಸಿದನು.

ಆಗ ಗಾಧಿರಾಜನ ಮಗನಾದ ವಿಶ್ವಾಮಿತ್ರನು ರಾಜನಾದನು. ಅವನು ಬಹಳ ಪ್ರಯತ್ನಪಟ್ಟರೂ ಕೂಡ ಜಗತ್ತನ್ನು ರಕ್ಷಿಸಲು ಸಮರ್ಥನಾಗಲಿಲ್ಲ.

ತತಃ ಶುಶ್ರಾವ ರಾಜಾऽಸೌ ರಾಕ್ಷಸೇಭ್ಯೋ ಮಹದ್ ಭಯಮ್ ।
ನಿರ್ಯಯೌ ನಗರಾಚ್ಚಾಪಿ ಚತುರಂಗಬಲಾನ್ವಿತಃ ॥೨೨॥

ಆಗ ರಾಕ್ಷಸರಿಂದ ಬಹಳ ದೊಡ್ಡ ಭಯವುಂಟಾಗಿದೆ ಎಂಬುದನ್ನು ಅವನು ಕೇಳಿಸಿಕೊಂಡನು. ಚತುರಂಗಬಲಸಹಿತನಾಗಿ ನಗರದಿಂದ ಹೊರಟನು.

ಸ ಗತ್ವಾ ದೂರಮಧ್ವಾನಂ ವಸಿಷ್ಠಾಶ್ರಮಮುತ್ತಮಮ್ ।
ತತಸ್ತೇ ಸೈನಿಕಾ ರಾಜನ್ ಜಘ್ನುಸ್ತತ್ರ ಬಹೂನ್ ಮೃಗಾನ್ ॥೨೩॥

ಬಹಳ ದೂರ ಬಂದಾಗ ದಾರಿಯಲ್ಲಿ ವಸಿಷ್ಠರ ಉತ್ತಮವಾದ ಆಶ್ರಮವನ್ನು ನೋಡಿದನು. ವಿಶ್ವಾಮಿತ್ರನ ಸೈನಿಕರು ಅಲ್ಲಿ ಅನೇಕ ಜಿಂಕೆಗಳನ್ನು ಕೊಂದರು.

ತತಸ್ತು ಭಗವಾನ್ ವಿಪ್ರೋ ವಸಿಷ್ಠಸ್ತು ಸ್ವ ಆಶ್ರಮೇ ।
ದದೃಶೇ ತು ತತಃ ಸರ್ವಂ ವಧ್ಯಮಾನಂ ಮಹಾವನಮ್ ॥೨೪॥

ಆಗ ತನ್ನ ಆಶ್ರಮದಲ್ಲಿ ಇಡೀ ವನವು ನಾಶವಾಗುತ್ತಿರುವುದನ್ನು ಭಗವಾನ್ ವಸಿಷ್ಠರು ನೋಡಿದರು.

ತಸ್ಯ ಕ್ರುದ್ಧೋ ಮಹಾರಾಜ ವಸಿಷ್ಠೋ ಮುನಿಸತ್ತಮಃ ।
ವಿಸೃಜಸ್ವ ಬಲಂ ಘೋರಮಿತಿ ಸ್ಮಾಂ ಗಾಮುವಾಚ ಹ ॥೨೫॥

ಮಹಾರಾಜನೇ! ಕೋಪಗೊಂಡ ಶ್ರೇಷ್ಠಮುನಿಗಳಾದ ವಸಿಷ್ಠರು ತನ್ನ ಬಳಿಯಿದ್ದ ಹಸುವಿಗೆ ''ಘೋರವಾದ ಬಲವನ್ನು ಪ್ರಯೋಗಿಸು'' ಎಂದು ಆದೇಶಿಸಿದರು.

ತಥೋಕ್ತಾ ಸಾऽಸೃಜದ್ ಧೇನುಃ ಪುರುಷಾನ್ ಘೋರದರ್ಶನಾನ್ ।
ತೇ ಚ ತದ್ಬಲಮಾಸಾದ್ಯ ಬಭಂಜುಃ ಸರ್ವತೋದಿಶಮ್ ॥೨೬॥

ವಸಿಷ್ಠರ ಆದೇಶವನ್ನು ಪಡೆದ ಧೇನುವು ನೋಡಲು ಭಯಂಕರವಾದ ಪುರುಷರನ್ನು ಸೃಷ್ಟಿಸಿತು. ಆ ಪುರುಷರು ಧೇನುವಿನಿಂದ ಶಕ್ತಿಯನ್ನು ಪಡೆದುಕೊಂಡು ಎಲ್ಲಾ ಕಡೆಯೂ ಶತ್ರುಗಳನ್ನು ನಾಶಮಾಡಿದರು.

ತದ್ ದೃಷ್ಟ್ವಾ ವಿದ್ರುತಂ ಸೈನ್ಯಂ ವಿಶ್ವಾಮಿತ್ರಸ್ತು ಗಾಧಿಜಃ ।
ತಪಃ ಪರಂ ಮನ್ಯಮಾನಃ ತಪಸ್ಯೇವ ಮನೋ ದಧೇ ॥೨೭॥

ಸೈನ್ಯವೆಲ್ಲವೂ ಓಡಿಹೋಗುತ್ತಿರುವುದನ್ನು ನೋಡಿದ ಗಾಧಿಪುತ್ರ ವಿಶ್ವಾಮಿತ್ರನು ವಸಿಷ್ಠರ ತಪಸ್ಸು ಶ್ರೇಷ್ಠವಾದುದೆಂದು ತಿಳಿದು ತಾನೂ ಕೂಡ ತಪಸ್ಸು ಮಾಡಲು ನಿಶ್ಚಯಿಸಿದನು.

ಸೋಽಸ್ಮಿಂಸ್ತೀರ್ಥವರೇ ರಾಜನ್ ಸರಸ್ವತ್ಯಾಂ ಸಮಾಹಿತಃ ।
ನಿಯಮೈಶ್ಚೋಪವಾಸೈಶ್ಚ ಕ್ಷಪಯನ್ ದೇಹಮಾತ್ಮನಃ ॥೨೮॥

ರಾಜನೇ! ಆ ವಿಶ್ವಾಮಿತ್ರನು ಸರಸ್ವತಿನದಿಯಲ್ಲಿರುವ ಈ ತೀರ್ಥದಲ್ಲಿ ಮನೋನಿಗ್ರಹವನ್ನು ಸಂಪಾದಿಸಿ, ನಿಯಮ-ಉಪವಾಸಗಳಿಂದ ತನ್ನ ದೇಹವನ್ನು ದಂಡಿಸಿಕೊಂಡನು.

ಜಲಾಹಾರೋ ವಾಯುಭಕ್ಷಃ ಪರ್ಣಾಹಾರಶ್ಚ ಸೋಽಭವತ್ ।
ತತಃ ಸ್ಥಂಡಿಲಶಾಯೀ ಚ ಯೇ ಚಾನ್ಯೇ ನಿಯಮಾಃ ಪೃಥಕ್ ॥೨೯॥

ಕೇವಲ ನೀರನ್ನು ಸೇವಿಸುತ್ತಾ, ಕೇವಲ ಪ್ರಾಣಾಯಾಮದ ಗಾಳಿಯನ್ನು ಮಾತ್ರ ಸೇವಿಸುತ್ತಾ, ಎಲೆಗಳನ್ನಷ್ಟೇ ಸೇವಿಸುತ್ತಾ, ನೆಲದ ಮೇಲೆ ಮಲಗುತ್ತಾ, ಹೀಗೆ ಇನ್ನೂ ಅನೇಕ ನಿಯಮಗಳನ್ನು ಆಚರಿಸತೊಡಗಿದನು.

ಅಸಕೃತ್ ತಸ್ಯ ದೇವಾಶ್ಚ ವ್ರತವಿಘ್ನಂ ಪ್ರಚಕ್ರಿರೇ ।
ನ ತಸ್ಯ ನಿಯಮಾದ್ ಬುದ್ಧಿರಪಯಾತಿ ಮಹಾತ್ಮನಃ ॥೩೦॥

ದೇವತೆಗಳು ಅನೇಕ ಬಾರಿ ಅವನ ತಪಸ್ಸಿಗೆ ವಿಘ್ನವನ್ನುಂಟು ಮಾಡಿದರು. ಆದರೆ ಮಹಾತ್ಮನಾದ ವಿಶ್ವಾಮಿತ್ರನ ಬುದ್ಧಿಯು ನಿಯಮಗಳನ್ನು ಬಿಟ್ಟುಕೊಡಲಿಲ್ಲ.

ತತಃ ಪರೇಣ ಯತ್ನೇನ ತಪ್ತ್ವಾ ಬಹುವಿಧಂ ತಪಃ ।
ತೇಜಸಾ ಭಾಸ್ಕರಾಕಾರೋ ಗಾಧಿಜಃ ಸಮಪದ್ಯತ ॥೩೧॥

ಅನಂತರ ಉತ್ತಮವಾದ ಪ್ರಯತ್ನದಿಂದ ಅನೇಕ ರೀತಿಯಾಗಿ ತಪಸ್ಸನ್ನು ಆಚರಿಸಿ ವಿಶ್ವಾಮಿತ್ರನು ತೇಜಸ್ಸಿನಿಂದ ಸೂರ್ಯನಂತೆ ಕಾಣಿಸಿದನು.

ಘೃಣಯಾ ತು ತದಾ ಯುಕ್ತೋ ವಿಶ್ವಾಮಿತ್ರಂ ಪಿತಾಮಹಃ ।
ಅಮನ್ಯತ ಮಹಾತೇಜಾ ವರದೋऽದರ್ಶಯತ್ ತದಾ ॥೩೨॥

ಆಗ ಮಹಾತೇಜಸ್ಸುಳ್ಳ ಚತುರ್ಮುಖಬ್ರಹ್ಮನು ವಿಶ್ವಾಮಿತ್ರನ ಮೇಲೆ ಕರುಣೆಯನ್ನು ತೋರಿ ವರವನ್ನು ಕೊಡುವವನಾಗಿ ಪ್ರತ್ಯಕ್ಷನಾದನು.

ಸ ತು ವವ್ರೇ ವರಂ ರಾಜನ್ ಸ್ಯಾಮಹಂ ಬ್ರಾಹ್ಮಣಸ್ತ್ವಿತಿ ।
ತಥೇತಿ ಚಾಬ್ರವೀದ್ ಬ್ರಹ್ಮಾ ಸರ್ವಲೋಕಪಿತಾಮಹಃ ॥೩೩॥

ರಾಜನೇ! ವಿಶ್ವಾಮಿತ್ರನು ತಾನು ಬ್ರಾಹ್ಮಣನಾಗಬೇಕೆಂಬ ವರವನ್ನು ಕೇಳಿಕೊಂಡನು. ಸಕಲಲೋಕಕ್ಕೂ ಪಿತಾಮಹನಾದ ಚತುರ್ಮುಖಬ್ರಹ್ಮನು ತಥಾಸ್ತು ಎಂದು ಹೇಳಿದನು.

ಸ ಲಬ್ಧ್ವಾ ತಪಸೋಗ್ರೇಣ ಬ್ರಾಹ್ಮಣ್ಯಂ ಸುಮಹಾಯಶಾಃ ।
ವಿಚಚಾರ ಮಹೀಂ ಕೃತ್ಸ್ನಾಂ ಕೃತಕಾಮಃ ಸುರೋಪಮಃ ॥೩೪॥

ವಿಶ್ವಾಮಿತ್ರನು ಕಠಿಣತಪಸ್ಸಿನಿಂದ ಬ್ರಾಹ್ಮಣ್ಯವನ್ನು ಪಡೆದು, ಒಳ್ಳೆಯ ಕೀರ್ತಿವಂತನಾಗಿ, ದೇವತೆಗಳಿಂದಲೂ ಮಾನಿತನಾಗಿ, ಇಡೀ ಭೂಮಿಯಲ್ಲಿ ಸಂಚರಿಸಿದನು.

ತಸ್ಮಿಂಸ್ತೀರ್ಥವರೇ ರಾಮಃ ಪ್ರದಾಯ ವಿವಿಧಂ ವಸು ।
ಪಯಸ್ವಿನೀಸ್ತಥಾ ಧೇನೂರ್ಯಾನಾನಿ ವಿವಿಧಾನಿ ಚ ॥೩೫॥

ಬಲರಾಮನು ಆ ಉತ್ತಮ ತೀರ್ಥದಲ್ಲಿ ವಿವಿಧ ಸಂಪತ್ತನ್ನು ದಾನ ಮಾಡಿದನು. ಮತ್ತು ಹಾಲುಕರೆಯುವ ಹಸುಗಳನ್ನೂ, ವಿವಿಧ ವಾಹನಗಳನ್ನೂ ದಾನ ಮಾಡಿದನು.

ತಥಾ ವಸ್ತ್ರಾಣ್ಯಲಂಕಾರಂ ಭಕ್ಷ್ಯಂ ಪೇಯಂ ಚ ಶೋಭನಮ್ ।
ಅದದಾನ್ಮುದಿತೋ ರಾಜನ್ ಪೂಜಯಿತ್ವಾ ದ್ವಿಜೋತ್ತಮಾನ್ ॥೩೬॥

ರಾಜನೇ! ಹಾಗೆಯೇ ಉತ್ತಮಬ್ರಾಹ್ಮಣರನ್ನು ಸಂತೋಷದಿಂದ ಪೂಜಿಸಿ ಅವರಿಗೆ ವಸ್ತ್ರಗಳನ್ನು, ಅಲಂಕಾರಗಳನ್ನು, ಭಕ್ಷ್ಯಗಳನ್ನು, ಉತ್ತಮ ಪಾನೀಯಗಳನ್ನೂ ದಾನ ಮಾಡಿದನು.

ಯಯೌ ರಾಜಂಸ್ತತೋ ರಾಮೋ ಬಕಸ್ಯಾಶ್ರಮಮಂತಿಕಾತ್ ।
ಯತ್ರ ತೇಪೇ ತಪಸ್ತೀವ್ರಂ ಬಕೋ ದಾಲ್ಭ್ಯ ಇತಿ ಶ್ರುತಿಃ ॥೩೭॥

ರಾಜನೇ! ಅನಂತರ ಬಲರಾಮನು ಹತ್ತಿರದಲ್ಲಿಯೇ ಇದ್ದ ಬಕಾಶ್ರಮಕ್ಕೆ ಹೋದನು. ಆ ಆಶ್ರಮದಲ್ಲಿ ದಲ್ಭನ ಮಗ ಬಕನು ಕಠಿಣವಾದ ತಪಸ್ಸನ್ನು ಆಚರಿಸಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ವಿಶ್ವಾಮಿತ್ರಚರಿತಂ ನಾಮ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿಮೂರನೆಯ ಅಧ್ಯಾಯ

ಬಲರಾಮನು ಅವಾಕೀರ್ಣಕ್ಷೇತ್ರಕ್ಕೆ ಹೋದದ್ದು. ಬಕಮುನಿಯ ಚರಿತ್ರೆ.
ಅನಂತರ ಬಲರಾಮನು ವಸಿಷ್ಠಾಪವಾಹತೀರ್ಥಕ್ಕೆ ಹೋದುದು.

ವೈಶಂಪಾಯನಃ

ಬ್ರಹ್ಮಯೋನಿಭಿರಾಕೀರ್ಣೋ ಜಗಾಮ ಯದುನಂದನಃ ।
ಯತ್ರ ದಾಲ್ಭ್ಯೋ ಬಕೋ ರಾಜನ್ ಪಶ್ವರ್ಥಂ ಸುಮಹಾತಪಾಃ ॥೧॥

ಜುಹಾವ ಧೃತರಾಷ್ಟ್ರಸ್ಯ ರಾಷ್ಟ್ರಂ ಕೋಪಸಮನ್ವಿತಃ ॥೨॥

ವೈಶಂಪಾಯನ– ಬ್ರಾಹ್ಮಣರನ್ನು ಜೊತೆಗಿರಿಸಿಕೊಂಡು ಬಲರಾಮನು ಬಕಾಶ್ರಮಕ್ಕೆ ಹೋದನು. ಅಲ್ಲಿ ದಲ್ಭನ ಮಗನಾದ ಬಕನು ತಪಸ್ಸನ್ನು ಮಾಡಿದ್ದನು. ಹಿಂದೆ ಬಕನೆಂಬ ಮುನಿಯು ಧೃತರಾಷ್ಟ್ರನೆಂಬ ರಾಜನಲ್ಲಿ ಪಶುಗಳನ್ನು ಯಾಚಿಸಿದ್ದನು. ಧೃತರಾಷ್ಟ್ರನು ಉದಾಸೀನನಾಗಿದ್ದಾಗ ಮಹಾತಪಸ್ವಿಯಾದ ಬಕಮುನಿಯು ಕೋಪಗೊಂಡು ಆ ಧೃತರಾಷ್ಟ್ರನ ರಾಷ್ಟ್ರನಾಶ ಮಾಡುವ ಮೂಲಕ ಶರಣಾಗತನಾದ ರಾಜನಿಂದ ಪಶುಗಳನ್ನು ಪಡೆಯುವ ಉದ್ದೇಶದಿಂದ ಹೋಮವನ್ನು ಮಾಡಿದನು.

ತಪಸಾ ಘೋರರೂಪೇಣ ಕರ್ಶಯನ್ ದೇಹಮಾತ್ಮನಃ ।
ಕ್ರೋಧೇನ ಮಹತಾऽऽವಿಷ್ಟೋ ಧರ್ಮಾತ್ಮಾ ವೈ ಪ್ರತಾಪವಾನ್ ॥೩॥

ಘೃಣಯಾ ತು ತದಾ ಯುಕ್ತೋ ವಿಶ್ವಾಮಿತ್ರಂ ಪಿತಾಮಹಃ ।
ಅಮನ್ಯತ ಮಹಾತೇಜಾ ವರದೋऽದರ್ಶಯತ್ ತದಾ ॥೩೨॥

ಆಗ ಮಹಾತೇಜಸ್ಸುಳ್ಳ ಚತುರ್ಮುಖಬ್ರಹ್ಮನು ವಿಶ್ವಾಮಿತ್ರನ ಮೇಲೆ ಕರುಣೆಯನ್ನು ತೋರಿ ವರವನ್ನು ಕೊಡುವವನಾಗಿ ಪ್ರತ್ಯಕ್ಷನಾದನು.

ಸ ತು ವವ್ರೇ ವರಂ ರಾಜನ್ ಸ್ಯಾಮಹಂ ಬ್ರಾಹ್ಮಣಸ್ತಿ ತ್ವತಿ ।
ತಥೇತಿ ಚಾಬ್ರವೀದ್ ಬ್ರಹ್ಮಾ ಸರ್ವಲೋಕಪಿತಾಮಹಃ ॥೩೩॥

ರಾಜನೇ! ವಿಶ್ವಾಮಿತ್ರನು ತಾನು ಬ್ರಾಹ್ಮಣನಾಗಬೇಕೆಂಬ ವರವನ್ನು ಕೇಳಿಕೊಂಡನು. ಸಕಲಲೋಕಕ್ಕೂ ಪಿತಾಮಹನಾದ ಚತುರ್ಮುಖಬ್ರಹ್ಮನು ತಥಾಸ್ತು ಎಂದು ಹೇಳಿದನು.

ಸ ಲಬ್ಧ್ವಾ ತಪಸೋಗ್ರೇಣ ಬ್ರಾಹ್ಮಣ್ಯಂ ಸುಮಹಾಯಶಾಃ ।
ವಿಚಚಾರ ಮಹೀಂ ಕೃತ್ಸ್ನಾಂ ಕೃತಕಾಮಃ ಸುರೋಪಮಃ ॥೩೪॥

ವಿಶ್ವಾಮಿತ್ರನು ಕಠಿಣತಪಸ್ಸಿನಿಂದ ಬ್ರಾಹ್ಮಣ್ಯವನ್ನು ಪಡೆದು, ಒಳ್ಳೆಯ ಕೀರ್ತಿವಂತನಾಗಿ, ದೇವತೆಗಳಿಂದಲೂ ಮಾನಿತನಾಗಿ, ಇಡೀ ಭೂಮಿಯಲ್ಲಿ ಸಂಚರಿಸಿದನು.

ತಸ್ಮಿಂಸ್ತೀರ್ಥವರೇ ರಾಮಃ ಪ್ರದಾಯ ವಿವಿಧಂ ವಸು ।
ಪಯಸ್ವಿನೀಸ್ತಥಾ ಧೇನೂರ್ಯಾನಾನಿ ವಿವಿಧಾನಿ ಚ ॥೩೫॥

ಬಲರಾಮನು ಆ ಉತ್ತಮ ತೀರ್ಥದಲ್ಲಿ ವಿವಿಧ ಸಂಪತ್ತನ್ನು ದಾನ ಮಾಡಿದನು. ಮತ್ತು ಹಾಲುಕರೆಯುವ ಹಸುಗಳನ್ನೂ, ವಿವಿಧ ವಾಹನಗಳನ್ನೂ ದಾನ ಮಾಡಿದನು.

ತಥಾ ವಸ್ತ್ರಾಣ್ಯಲಂಕಾರಂ ಭಕ್ಷ್ಯಂ ಪೇಯಂ ಚ ಶೋಭನಮ್ ।
ಅದದಾನ್ಮುದಿತೋ ರಾಜನ್ ಪೂಜಯಿತ್ವಾ ದ್ವಿಜೋತ್ತಮಾನ್ ॥೩೬॥

ರಾಜನೇ! ಹಾಗೆಯೇ ಉತ್ತಮಬ್ರಾಹ್ಮಣರನ್ನು ಸಂತೋಷದಿಂದ ಪೂಜಿಸಿ ಅವರಿಗೆ ವಸ್ತ್ರಗಳನ್ನು, ಅಲಂಕಾರಗಳನ್ನು, ಭಕ್ಷ್ಯಗಳನ್ನು, ಉತ್ತಮ ಪಾನೀಯಗಳನ್ನೂ ದಾನ ಮಾಡಿದನು.

ಯಯೌ ರಾಜಂಸ್ತತೋ ರಾಮೋ ಬಕಸ್ಯಾಶ್ರಮಮಂತಿಕಾತ್ ।
ಯತ್ರ ತೇಪೇ ತಪಸ್ತೀವ್ರಂ ಬಕೋ ದಾಲ್ಭ್ಯ ಇತಿ ಶ್ರುತಿಃ ॥೩೭॥

ರಾಜನೇ! ಅನಂತರ ಬಲರಾಮನು ಹತ್ತಿರದಲ್ಲಿಯೇ ಇದ್ದ ಬಕಾಶ್ರಮಕ್ಕೆ ಹೋದನು. ಆ ಆಶ್ರಮದಲ್ಲಿ ದಲ್ಭನ ಮಗ ಬಕನು ಕಠಿಣವಾದ ತಪಸ್ಸನ್ನು ಆಚರಿಸಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ವಿಶ್ವಾಮಿತ್ರಚರಿತಂ ನಾಮ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿಮೂರನೆಯ ಅಧ್ಯಾಯ

ಬಲರಾಮನು ಅವಾಕೀರ್ಣಕ್ಷೇತ್ರಕ್ಕೆ ಹೋದದ್ದು. ಬಕಮುನಿಯ ಚರಿತ್ರೆ.
ಅನಂತರ ಬಲರಾಮನು ವಸಿಷ್ಠಾಪವಾಹತೀರ್ಥಕ್ಕೆ ಹೋದುದು.

ವೈಶಂಪಾಯನಃ

ಬ್ರಹ್ಮಯೋನಿಭಿರಾಕೀರ್ಣೋ ಜಗಾಮ ಯದುನಂದನಃ ।
ಯತ್ರ ದಾಲ್ಭ್ಯೋ ಬಕೋ ರಾಜನ್ ಪಶ್ವರ್ಥಂ ಸುಮಹಾತಪಾಃ ॥೧॥

ಜುಹಾವ ಧೃತರಾಷ್ಟ್ರಸ್ಯ ರಾಷ್ಟ್ರಂ ಕೋಪಸಮನ್ವಿತಃ ॥೨॥

ವೈಶಂಪಾಯನ– ಬ್ರಾಹ್ಮಣರನ್ನು ಜೊತೆಗಿರಿಸಿಕೊಂಡು ಬಲರಾಮನು ಬಕಾಶ್ರಮಕ್ಕೆ ಹೋದನು. ಅಲ್ಲಿ ದಲ್ಭನ ಮಗನಾದ ಬಕನು ತಪಸ್ಸನ್ನು ಮಾಡಿದ್ದನು. ಹಿಂದೆ ಬಕನೆಂಬ ಮುನಿಯು ಧೃತರಾಷ್ಟ್ರನೆಂಬ ರಾಜನಲ್ಲಿ ಪಶುಗಳನ್ನು ಯಾಚಿಸಿದ್ದನು. ಧೃತರಾಷ್ಟ್ರನು ಉದಾಸೀನನಾಗಿದ್ದಾಗ ಮಹಾತಪಸ್ವಿಯಾದ ಬಕಮುನಿಯು ಕೋಪಗೊಂಡು ಆ ಧೃತರಾಷ್ಟ್ರನ ರಾಷ್ಟ್ರನಾಶ ಮಾಡುವ ಮೂಲಕ ಶರಣಾಗತನಾದ ರಾಜನಿಂದ ಪಶುಗಳನ್ನು ಪಡೆಯುವ ಉದ್ದೇಶದಿಂದ ಹೋಮವನ್ನು ಮಾಡಿದನು.

ತಪಸಾ ಘೋರರೂಪೇಣ ಕರ್ಶಯನ್ ದೇಹಮಾತ್ಮನಃ ।
ಕ್ರೋಧೇನ ಮಹತಾऽऽವಿಷ್ಟೋ ಧರ್ಮಾತ್ಮಾ ವೈ ಪ್ರತಾಪವಾನ್ ॥೩॥

ಭಯಂಕರವಾದ ತಪಸ್ಸಿನಿಂದ ತನ್ನ ದೇಹವನ್ನು ತೆಳ್ಳಗೆ ಮಾಡಿಕೊಂಡಿರುವ ಮಹಾತ್ಮನಾದ ಪ್ರತಾಪಿ ಬಕಮುನಿಯು ಬಹಳವಾಗಿ ಕೋಪಕ್ಕೊಳಗಾದನು.

ಪುರಾ ಹಿ ನೈಮಿಶೇಯಾನಾಂ ಸತ್ರೇ ದ್ವಾದಶವಾರ್ಷಿಕೇ ।
ವೃತ್ತೇ ವೈಶ್ವಜಿತೋಽಂತೇ ವೈ ಪಾಂಚಾಲಾನೃಷಯೋಽಗಮನ್ ।
ತತ್ರೇಶ್ವರಮಯಾಚಂತ ದಕ್ಷಿಣಾರ್ಥೇ ಮನೀಷಿಣಃ ॥೪॥

ಹಿಂದೆ ನೈಮಿಷಕ್ಷೇತ್ರವಾಸಿಗಳಾದ ಋಷಿಗಳಿಂದ ಹನ್ನೆರಡು ವರ್ಷಗಳಲ್ಲಿ ನಡೆಯುವ ಸತ್ರವೊಂದು ನಡೆಯುತ್ತಿತ್ತು. ಅದರ ಒಂದು ಯಾಗವಾದ ಸರ್ವಸ್ವವನ್ನೂ ದಕ್ಷಿಣೆಯನ್ನಾಗಿ ಕೊಡುವ ವಿಶ್ವಜಿತ್ ಎಂಬ ಹೆಸರಿನ ಯಾಗದ ಕೊನೆಯಲ್ಲಿ ಜ್ಞಾನಿಗಳಾದ ಋಷಿಗಳು ಪಾಂಚಾಲದೇಶದ ರಾಜನನ್ನು ದಕ್ಷಿಣೆಗಾಗಿ ಬೇಡಿದರು.

ಬಲಾನ್ವಿತಾನ್ ವತ್ಸತರಾನ್ ನಿರ್ವ್ಯಾಧೀನ್ ಸಪ್ತವಿಂಶತಿಮ್ ।
ತಾನಬ್ರವೀದ್ ಬಕೋ ದಾಲ್ಭ್ಯೋ ವಿಭಜಧ್ವಂ ಪಶೂನಿತಿ ॥೫॥

ಪಶೂನೇತಾನಹಂ ತ್ಯಕ್ತ್ವಾ ಭಿಕ್ಷಿಷೇ ರಾಜಸತ್ತಮಮ್ ॥೬॥

ಬಲಶಾಲಿಗಳಾದ, ರೋಗರಹಿತವಾದ ಇಪ್ಪತ್ತೇಳು ಒಂದುವರ್ಷದ ಉತ್ತಮ ಕರುಗಳನ್ನು ಪಾಂಚಾಲರಾಜನಿಂದ ಪಡೆದರು. ಆಗ ಉಳಿದ ಋಷಿಗಳಿಗೆ ದಲ್ಭನ ಮಗ ಬಕನು- ಈ ಹಸುಗಳನ್ನು ನೀವು ನಿಮ್ಮಲ್ಲಿಯೇ ವಿಭಾಗ ಮಾಡಿಕೊಳ್ಳಿ. ನನಗೆ ಈ ಹಸುಗಳು ಬೇಡ. ನಾನು ಬೇರೆ ರಾಜನಲ್ಲಿ ಬೇಡಿಕೊಳ್ಳುವೆನು ಎಂದು ಹೇಳಿದನು.

ಏವಮುಕ್ತ್ವಾ ಬಕೋ ರಾಜನ್ನೃಷೀನ್ ಸರ್ವಾನ್ ಪ್ರತಾಪವಾನ್ ।
ಜಗಾಮ ಧೃತರಾಷ್ಟ್ರಸ್ಯ ಭವನಂ ಬ್ರಾಹ್ಮಣೋತ್ತಮಃ ॥೭॥

ಹೀಗೆ ಪ್ರತಾಪಿಯಾದ ಬಕನು ಎಲ್ಲಾ ಋಷಿಗಳಿಗೆ ಹೇಳಿ ತಾನು ಧೃತರಾಷ್ಟ್ರನ ಅರಮನೆಗೆ ಹೋದನು.

ಸ ಸಮೀಪಂ ಗತೋ ಭೂತ್ವಾ ಧೃತರಾಷ್ಟ್ರಂ ನರೇಶ್ವರಮ್ ।
ಅಯಾಚತ ಪಶೂನ್ ದಾಲ್ಭ್ಯಃ ಸ ಚೈನಂ ರುಷಿತೋಽಬ್ರವೀತ್ ॥೮॥

ಯದೃಚ್ಛಯಾ ಮೃತಾ ದೃಷ್ಟ್ವಾ ಗಾಸ್ತದಾ ನೃಪಸತ್ತಮ ॥೯॥

ಏತಾನ್ ಪಶೂನ್ ನಯ ಕ್ಷಿಪ್ರಂ ಬ್ರಹ್ಮಬಂಧೋ ಯದಿಚ್ಛಸಿ ॥೧೦॥

ರಾಜನಾದ ಧೃತರಾಷ್ಟ್ರನ ಸಮೀಪಕ್ಕೆ ಹೋಗಿ ಬಕನು ಪಶುಗಳನ್ನು ಕೇಳಿದನು. ರಾಜನಾದರೂ ಅಕಸ್ಮತ್ತಾಗಿ ಸತ್ತುಹೋದ ಹಸುಗಳನ್ನು ನೋಡಿ, ಕೋಪದಿಂದ ಇವನಿಗೆ ಹೀಗೆ ಹೇಳುತ್ತಾನೆ - ''ಬ್ರಾಹ್ಮಣಾಧಮನೇ! ನೀನು ಪಶುಗಳನ್ನು ಬಯಸುವೆಯಾದರೆ ಈ ಸತ್ತುಹೋದ ಹಸುಗಳನ್ನು ತೆಗೆದುಕೊಂಡು ಹೋಗು'' ಎಂದು.

ವೈಶಂಪಾಯನಃ

ಋಷಿಸ್ತ್ವಥ ಬಕಃ ಕ್ರುದ್ಧಃ ಚಿಂತಯಾಮಾಸ ಧರ್ಮವಿತ್ ॥೧೧॥

ವೈಶಂಪಾಯನ– ಧರ್ಮಜ್ಞಾನಿಯಾದ ಬಕನು ಕೋಪದಿಂದ ಆಲೋಚನಾ ಮಗ್ನನಾದನು.

ಬಕಃ

ಅಹೋ ಬತ ನೃಶಂಸಂ ವೈ ವಾಕ್ಯಮುಕ್ತೋಽಸ್ಮಿ ಸಂಸದಿ ॥೧೨॥

ಬಕ– ಅಯ್ಯೋ! ಸಭಾಮಧ್ಯದಲ್ಲಿ ಎಂತಹ ಕ್ರೂರವಾದ ಮಾತನ್ನು ಕೇಳುತ್ತಿದ್ದೇನೆ!

ವೈಶಂಪಾಯನಃ

ಚಿಂತಯಿತ್ವಾ ಮುಹೂರ್ತೇನ ರೋಷಾವಿಷ್ಟೋ ದ್ವಿಜೋತ್ತಮಃ ।
ಮತಿಂ ಚಕ್ರೇ ವಿನಾಶಾಯ ಧೃತರಾಷ್ಟ್ರಸ್ಯ ಭಾರತ ॥೧೩॥

ವೈಶಂಪಾಯನ– ಭಾರತನೇ! ಬ್ರಾಹ್ಮಣೋತ್ತಮನಾದ ಬಕನು ಕೋಪಾವಿಷ್ಟನಾಗಿ ಧೃತರಾಷ್ಟ್ರನ ನಾಶಕ್ಕೆ ನಿರ್ಧಾರವನ್ನು ಮಾಡಿದನು.

ಉತ್ಸೃಜ್ಯ ತು ಮೃತಾ ಗಾ ವೈ ಮಾಂಸಾನಿ ದ್ವಿಜಸತ್ತಮಃ ।
ಜುಹಾವ ಧೃತರಾಷ್ಟ್ರಸ್ಯ ರಾಷ್ಟ್ರಂ ನರಪತೇಃ ಪರಮ್ ॥೧೪॥

ಬ್ರಾಹ್ಮಣೋತ್ತಮನಾದ ಬಕನು ಸತ್ತ ಹಸುಗಳ ಮಾಂಸವನ್ನು ಕಿತ್ತುತೆಗೆದು ರಾಜ ಧೃತರಾಷ್ಟ್ರನ ಉತ್ತಮವಾದ ರಾಷ್ಟ್ರವನ್ನು ನಾಶಮಾಡಲಿಕ್ಕಾಗಿ ಹೋಮಿಸಿದನು.

ಅವತೀರ್ಣಃ ಸರಸ್ವತ್ಯಾಃ ತೀರ್ಥೇ ಪ್ರಜ್ವಾಲ್ಯ ಪಾವಕಮ್ ।
ಬಕೋ ದಾಲ್ಭ್ಯೋ ಮಹಾರಾಜ ಪರಮಂ ನಿಯಮಂ ಸ್ಥಿತಃ ॥೧೫॥

ಸರಸ್ವತಿಯ ತೀರ್ಥದಲ್ಲಿ ದಾಲ್ಭ್ಯ ಬಕನು ಉತ್ತಮ ನಿಯಮಗಳಲ್ಲಿ ಇದ್ದುಕೊಂಡು ಅಗ್ನಿಯನ್ನು ಪ್ರಜ್ವಲನಗೊಳಿಸಿಕೊಂಡನು.

ಸ ತೈರೇವ ಜುಹಾವಾಗ್ನೌ ರಾಷ್ಟ್ರಂ ಮಾಂಸೈರ್ಮಹಾತಪಾಃ ॥೧೬॥

ಮಹಾತಪಸ್ವಿಯಾದ ಬಕನು ಅದೇ ಹೋಮಾಗ್ನಿಯಲ್ಲಿ ಧೃತರಾಷ್ಟ್ರನ ರಾಷ್ಟ್ರದ ನಾಶಕ್ಕಾಗಿ ಆ ಗೋಮಾಂಸದಿಂದ ಹೋಮವನ್ನು ಮಾಡಿದನು.

ತಸ್ಮಿಂಸ್ತು ವಿಧಿವತ್ ಸತ್ರೇ ವರ್ತಮಾನೇ ಸುದಾರುಣೇ ।
ಅಕ್ಷೀಯತ ತತೋ ರಾಷ್ಟ್ರಂ ಧೃತರಾಷ್ಟ್ರಸ್ಯ ಪಾರ್ಥಿವ ॥೧೭॥

ರಾಜನೇ! ವಿಧ್ಯುಕ್ತವಾಗಿ ಆ ಭಯಂಕರವಾದ ಯಾಗವು ನಡೆಯಲು ಧೃತರಾಷ್ಟ್ರನ ರಾಷ್ಟ್ರವು ಕ್ಷೀಣಗೊಂಡಿತು.

ಛಿದ್ಯಮಾನಂ ಯಥಾ ಕಾಂತಂ ವನಂ ಪರಶುನಾ ತಥಾ ।
ಬಭೂವಾಪಹೃತಂ ತಚ್ಚ ವ್ಯವಕೀರ್ಣಮಚೇತನಮ್ ॥೧೮॥

ಮನೋಹರವಾದ ಕಾಡನ್ನು ಕೊಡಲಿಯಿಂದ ಕಡಿದಾಗ ಆ ಕಾಡು ಹೇಗಿರುತ್ತದೆಯೋ ಆ ರೀತಿಯಲ್ಲಿ ಧೃತರಾಷ್ಟ್ರನ ರಾಜ್ಯದಲ್ಲಿಯೂ ಎಲ್ಲವೂ ನಾಶವಾಯಿತು.

ದೃಷ್ಟ್ವಾ ತದವಕೀರ್ಣಂ ತು ರಾಜ್ಯಂ ಸ ಮನುಜಾಧಿಪಃ ।
ಬಭೂವ ದುರ್ಮನಾ ರಾಜನ್ ಚಿಂತಯಾ ಪರಯಾನ್ವಿತಃ ॥೧೯॥

ರಾಜನಾದ ಧೃತರಾಷ್ಟ್ರನು ತನ್ನ ರಾಜ್ಯವು ನಾಶವಾಗುತ್ತಿರುವುದನ್ನು ನೋಡಿ ಬಹಳ ಚಿಂತೆಗೊಳಗಾದನು ಮತ್ತು ಅವನ ಮನಸ್ಸು ಬಹಳ ದುಃಖವನ್ನು ಪಟ್ಟಿತು.

ಮೋಕ್ಷಾರ್ಥಮಕರೋದ್ ಯತ್ನಂ ಬ್ರಾಹ್ಮಣೈಃ ಸಹಿತಃ ಪುರಾ ।
ನ ಚ ಶ್ರೇಯೋಽಭ್ಯಗಚ್ಛತ್ತು ಕ್ಷೀಯತೇ ರಾಷ್ಟ್ರಮೇವ ಯತ್ ॥೨೦॥

ಈ ಕಷ್ಟದಿಂದ ಪಾರಾಗಲು ಬ್ರಾಹ್ಮಣರೊಡನೆ ಬಹಳ ಪ್ರಯತ್ನವನ್ನು ಮಾಡಿದರೂ ಅದರಲ್ಲಿ ಯಶಸ್ಸನ್ನು ಕಾಣಲಿಲ್ಲ. ಬದಲಾಗಿ ರಾಜ್ಯವು ಮತ್ತೂ ಕ್ಷೀಣಿಸತೊಡಗಿತು.

ಅಥಾಸೌ ಪಾರ್ಥಿವಃ ಖಿನ್ನಃ ತೇ ಚ ವಿಪ್ರಾಸ್ತದಾ ನೃಪ ॥೨೧॥

ರಾಜನೇ! ಆಗ ಆ ಧೃತರಾಷ್ಟ್ರರಾಜ ಮತ್ತು ಬ್ರಾಹ್ಮಣರು ತುಂಬ ದುಃಖಕ್ಕೆ ಒಳಗಾದರು.

ಯದಾ ಚಾಪಿ ನ ಶಕ್ನೋತಿ ರಾಷ್ಟ್ರಂ ಮೋಚಯಿತುಂ ನೃಪಃ ।
ಅಥ ವಿಪ್ರಶ್ನಿಕಾಂಸ್ತತ್ರ ಪಪ್ರಚ್ಛ ಜನಮೇಜಯ ॥೨೨॥

ಯಾವಾಗ ಅವನತಿಯ ಕಡೆಗೆ ಹೋಗುತ್ತಿರುವ ತನ್ನ ರಾಷ್ಟ್ರವನ್ನು ರಕ್ಷಿಸಲು ರಾಜನು ಸಮರ್ಥನಾಗಲಿಲ್ಲವೋ ಆಗ ಅವನು ಜ್ಞಾನಿಗಳ ಬಳಿ ಇದಕ್ಕೆ ಕಾರಣವನ್ನೂ, ಅದರ ಪರಿಹಾರವನ್ನು ಕೇಳುತ್ತಾನೆ.

ತತೋ ವಿಪ್ರಶ್ನಿಕಾಃ ಪ್ರಾಹುಃ ಪಶುವಿಪ್ರಕೃತಸ್ತ್ವಯಾ ।
ಮಾಂಸೈರಥ ಜುಹೋತೀದಂ ತವ ರಾಷ್ಟ್ರಂ ಮುನಿರ್ಬಕಃ ॥೨೩॥

ತೇನ ತೇ ಹೂಯಮಾನಸ್ಯ ರಾಷ್ಟ್ರಸ್ಯಾಸೀತ್ ಕ್ಷಯೋ ಮಹಾನ್ ।
ತಸ್ಯ ತತ್ತಪಸಃ ಕರ್ಮ ಯೇನ ತೇ ಹ್ಯನಯೋ ಮಹಾನ್ ॥೨೪॥

ಯದೀಚ್ಛಸಿ ಮಹಾಬಾಹೋ ಶಾಂತಿಂ ರಾಷ್ಟ್ರಸ್ಯ ಭೂಮಿಪ ।
ಅಪಾಂ ಕೂಲೇ ಸರಸ್ವತ್ಯಾಃ ತಂ ಪ್ರಸಾದಯ ಪಾರ್ಥಿವ ॥೨೫॥

'ಅವರು ರಾಜನಿಗೆ ಹೀಗೆ ಹೇಳಿದರು ನೀನು ಸತ್ತ ಹಸುಗಳನ್ನು ತೆಗೆದುಕೊಂಡು ಹೋಗು' ಎಂದು ಹೇಳಿ ಪಶುಗಳಿಂದ ಶಾಸ್ತ್ರವಿರುದ್ಧಕರ್ಮಗಳನ್ನು ಮಾಡಿರುವಿ. ಅದರ ಮಾಂಸದಿಂದಲೇ ಬಕಮುನಿಯು ರಾಷ್ಟ್ರನಾಶಕ್ಕಾಗಿ ಹೋಮವನ್ನು ಮಾಡುತ್ತಿದ್ದಾನೆ. ಆ ಕಾರಣದಿಂದಲೇ ನಿನ್ನ ರಾಷ್ಟ್ರವು ಅವನತಿಯನ್ನು ಹೊಂದುತ್ತಿದೆ. ನೀನು ದೊಡ್ಡದಾದ ಅನ್ಯಾಯವನ್ನು ಮಾಡಿರುವಿ. ಇದೆಲ್ಲವೂ ಬಕಮುನಿಯ ತಪಸ್ಸಿನ ಕಾರ್ಯ. ಮಹಾಬಾಹುವೇ! ರಾಜನೇ! ಒಂದು ಪಕ್ಷದಲ್ಲಿ ನೀನು ರಾಷ್ಟ್ರನಾಶವನ್ನು ಉಪಶಮನಗೊಳಿಸಲು ಇಚ್ಛಿಸುವಿಯಾದರೆ ರಾಜನೇ! ಸರಸ್ವತೀ ನದೀತೀರದಲ್ಲಿ ಅವನನ್ನು ಸಮಾಧಾನಪಡಿಸಿ ಅವನ ಅನುಗ್ರಹವನ್ನು ಸಂಪಾದಿಸು''.

ಸರಸ್ವತೀಂ ತತೋ ಗತ್ವಾ ಸ ರಾಜಾ ಬಕಮಬ್ರವೀತ್ ।
ನಿಪತ್ಯ ಶಿರಸಾ ಭೂಮೌ ಪ್ರಾಂಜಲಿರ್ಭರತರ್ಷಭ ॥೨೬॥

ಅನಂತರ ಧೃತರಾಷ್ಟ್ರನು ಸರಸ್ವತೀತೀರ್ಥಕ್ಕೆ ಹೋಗಿ ಬಕಮುನಿಯ ಮುಂದೆ ಸಾಷ್ಟಾಂಗನಮಸ್ಕಾರವನ್ನು ಮಾಡಿ ಕೈಜೋಡಿಸಿ ಅವನಿಗೆ ಹೀಗೆ ಹೇಳುತ್ತಾನೆ.

ರಾಜಾ

ಪ್ರಸಾದಯೇ ತ್ವಾಂ ಭಗವನ್ನಪರಾಧಂ ಕ್ಷಮಸ್ವ ಮೇ ।
ಮಮ ದೀನಸ್ಯ ಲುಬ್ಧಸ್ಯ ಮೌಖ್ಯೇಣ ಹತಚೇತಸಃ ॥೨೭॥

ರಾಜ– ಪೂಜ್ಯನೇ! ನಿನ್ನನ್ನು ಸ್ತುತಿಸುತ್ತೇನೆ. ಲೋಭಿಯಾದ, ದೀನನಾದ ನಾನು ಬುದ್ಧಿಕೆಟ್ಟು ಮೂರ್ಖತನದಿಂದ ಮಾಡಿದ ಅಪರಾಧವನ್ನು ಕ್ಷಮಿಸು.

ತ್ವಂ ಗತಿಸ್ತ್ವಂ ಚ ಮೇ ನಾಥಃ ಪ್ರಸಾದಂ ಕರ್ತುಮರ್ಹಸಿ ॥೨೮॥

ನನಗೆ ಗತಿಯೂ ನೀನೆ. ಸ್ವಾಮಿಯೂ ನೀನೆ. ನನ್ನ ಮೇಲೆ ಅನುಗ್ರಹವನ್ನು ಮಾಡು.

ವೈಶಂಪಾಯನಃ

ತಂ ತಥಾ ವಿಲಪಂತಂ ತು ಶೋಕೋಪಹತಚೇತಸಮ್ ।
ದೃಷ್ಟ್ವಾ ತಸ್ಯ ಕೃಪಾ ಜಜ್ಞೇ ರಾಷ್ಟ್ರಂ ತಸ್ಯ ವ್ಯಮೋಚಯತ್ ॥೨೯॥

ವೈಶಂಪಾಯನ– ದುಃಖದಿಂದ ಮನಸ್ಸನ್ನು ಹಾಳುಮಾಡಿಕೊಂಡು ಅಳುತ್ತಿರುವ ರಾಜನನ್ನು ನೋಡಿ ಬಕಮುನಿಗೆ ಅವನ ಮೇಲೆ ಕರುಣೆಯು ಉಂಟಾಯಿತು. ಅವನ ರಾಷ್ಟ್ರವನ್ನು ಅನವನತಿಯಿಂದ ಪಾರು ಮಾಡಿದನು.

ಋಷಿಃ ಪ್ರಸನ್ನಸ್ತಸ್ಯಾಸೀತ್ ಸಂರಂಭಂ ಚ ವಿಹಾಯ ಸಃ ।
ಮೋಕ್ಷಾರ್ಥಂ ತಸ್ಯ ರಾಷ್ಟ್ರಸ್ಯ ಜುಹಾವ ಪುನರಾಹುತಿಮ್ ॥೩೦॥

ಋಷಿಯು ತನ್ನ ಕೋಪವನ್ನು ಬಿಟ್ಟು ರಾಜನ ಮೇಲೆ ಪ್ರಸನ್ನನಾದನು. ರಾಷ್ಟ್ರದ ಕಷ್ಟನಿವಾರಣೆಗಾಗಿ ಮತ್ತೆ ಹೋಮವನ್ನು ಮಾಡಿದನು.

ಮೋಕ್ಷಯಿತ್ವಾ ತದಾ ರಾಷ್ಟ್ರಂ ಪ್ರತಿಗೃಹ್ಯ ತಥಾ ಪಶೂನ್ ।
ಹೃಷ್ಟಾತ್ಮಾ ನೈಮಿಷಾರಣ್ಯಂ ಜಗಾಮ ಪುನರೇವ ಹ ॥೩೧॥

ಹೀಗೆ ಬಕಮುನಿಯು ರಾಷ್ಟ್ರವನ್ನು ನಾಶದಿಂದ ಬಿಡುಗಡೆಗೊಳಿಸಿ, ತನಗೆ ಬೇಕಾದ ಪಶುಗಳನ್ನು ಸಂಗ್ರಹಿಸಿ, ಸಂತೋಷದಿಂದ ಪುನಃ ನೈಮಿಷಾರಣ್ಯಕ್ಕೆ ಹೋದನು.

ಧೃತರಾಷ್ಟ್ರೋಽಪಿ ಧರ್ಮಾತ್ಮಾ ಸ್ವಸ್ಥಚೇತಾ ಮಹಾಮನಾಃ ।
ಸ್ವಮೇವ ನಗರಂ ರಾಜನ್ ಪ್ರವಿವೇಶ ಮಹರ್ದ್ಧಿಮತ್ ॥೩೨॥

ಧರ್ಮಾತ್ಮನಾದ ಧೃತರಾಷ್ಟ್ರನು ಕೂಡ ಮನಸ್ಸಿನ ದುಗುಡವನ್ನು ಕಳೆದುಕೊಂಡು ಸಂತೋಷದಿಂದ, ಸಂಪತ್ತಿನಿಂದ ಭರಿತವಾದ ತನ್ನ ರಾಷ್ಟ್ರವನ್ನು ಪ್ರವೇಶಿಸಿದನು.

ತತ್ರ ತೀರ್ಥೇ ಮಹಾರಾಜ ಬೃಹಸ್ಪತಿರುದಾರಧೀಃ ।
ಅಸುರಾಣಾಮಭಾವಾಯ ಭವಾಯ ಚ ದಿವೌಕಸಾಮ್ ॥೩೩॥

ಮಾಂಸೈರಭಿಜುಹಾವೇಷ್ಟಿಮಕ್ಷೀಯಂತ ತತೋಽಸುರಾಃ ।
ದೈವತೈರಭಿಸಂಭಗ್ನಾ ಜಿತಕಾಶಿಭಿರಾಹವೇ ॥೩೪॥

ಅದೇ ತೀರ್ಥದಲ್ಲಿ ಮಹಾಜ್ಞಾನಿಯಾದ ಬೃಹಸ್ಪತಿಯು ಅಸುರರ ನಾಶ ಮತ್ತು ದೇವತೆಗಳ ಕ್ಷೇಮಕ್ಕಾಗಿ ಮಾಂಸದಿಂದ ಯಾಗವನ್ನು ಮಾಡಿದನು. ಅದರಿಂದಾಗಿ ಅಸುರರು ಕ್ಷೀಣಿಸಿದರು. ಯುದ್ಧದಲ್ಲಿ ಜಯಾಕಾಂಕ್ಷಿಗಳಾದ ದೇವತೆಗಳಿಂದ ಆ ದೈತ್ಯರು ಸೋತು ಹೋದರು.

ತತ್ರಾಪಿ ವಿಧಿವದ್ ದತ್ತ್ವಾ ಬ್ರಾಹ್ಮಣೇಭ್ಯೋ ಮಹಾಯಶಾಃ ।
ವಾಜಿನಃ ಕುಂಜರಾಂಶ್ಚೈವ ರಥಾಂಶ್ಚಾಶ್ವತರೀಯುತಾನ್ ॥೩೫॥

ರತ್ನಾನಿ ಚ ಮಹಾರ್ಹಾಣಿ ಧನಂ ಧಾನ್ಯಂ ಚ ಪುಷ್ಕಲಮ್ ।
ಯಯೌ ತೀರ್ಥಂ ಮಹಾರಾಜ ಯಾಯಾತಂ ಪೃಥಿವೀಪತೇ ॥೩೬॥

ಆ ತೀರ್ಥದಲ್ಲಿಯೂ ಬಲರಾಮನು ವಿಧಿಪ್ರಕಾರವಾಗಿ ಬ್ರಾಹ್ಮಣರಿಗೆ ಆನೆಗಳನ್ನು, ಕುದುರೆಗಳನ್ನು, ಒಳ್ಳೆಯ ಅಶ್ವಗಳ ಸಹಿತವಾಗಿ ರಥಗಳನ್ನು, ಬೆಲೆಬಾಳುವ ರತ್ನಗಳನ್ನು, ಯಥೇಷ್ಟವಾಗಿ ಧಾನ್ಯಗಳನ್ನು ದಾನ ಮಾಡಿದನು. ರಾಜನೇ ಮುಂದೆ ಅಲ್ಲಿಂದ ಯಾಯಾತ ಎಂಬ ಇನ್ನೊಂದು ತೀರ್ಥಕ್ಕೆ ಹೋದನು.

ಯತ್ರ ಯಜ್ಞೇ ಯಯಾತೇಸ್ತು ಮಹಾರಾಜ ಸರಸ್ವತೀ ।
ಸರ್ಪಿಃ ಪಯಶ್ಚ ಸುಸ್ರಾವ ನಾಹುಷಸ್ಯ ಮಹಾತ್ಮನಃ ॥೩೭॥

ಮಹಾರಾಜ, ಆ ತೀರ್ಥದಲ್ಲಿ ಮಹಾತ್ಮನಾದ ನಹುಷನ ವಂಶದಲ್ಲಿ ಬಂದ ಯಯಾತಿಯ ಯಜ್ಞದಲ್ಲಿ ಸರಸ್ವತಿಯು ಹಾಲು-ತುಪ್ಪಗಳನ್ನು ಸುರಿಸಿದ್ದಳು.

ಯತ್ರೇಷ್ಟ್ವಾ ಪುರುಷವ್ಯಾಘ್ರ ಯಯಾತಿಃ ಪೃಥಿವೀಪತಿಃ ।
ಆಕ್ರಾಮದೂರ್ಧ್ವಂ ತ್ವರಿತೋ ಲೇಭೇ ಕಾಮಾಂಶ್ಚ ಪುಷ್ಕಲಾನ್ ॥೩೮॥

ಪುರುಷಶ್ರೇಷ್ಠನೇ! ರಾಜನಾದ ಯಯಾತಿಯು ಅಲ್ಲಿ ಯಾಗವನ್ನು ಮಾಡಿ ಶೀಘ್ರದಲ್ಲಿಯೇ ಉತ್ತಮಲೋಕವನ್ನು ಹೊಂದಿದನು ಮತ್ತು ತನ್ನ ಎಲ್ಲಾ ಕಾಮನೆಗಳನ್ನು ಚೆನ್ನಾಗಿ ಅನುಭವಿಸಿದನು

ಯಯಾತೇರ್ಯಜಮಾನಸ್ಯ ಯತ್ರ ರಾಜನ್ ಸರಸ್ವತೀ ।
ಸಘೃತಾ ಪ್ರಯಯೌ ರಾಜನ್ ಬ್ರಾಹ್ಮಣಾನಾಂ ಮಹಾತ್ಮನಾಮ್ ॥೩೯॥

ರಾಜನೇ! ಯಯಾತಿಯು ಯಜಮಾನನಾಗಿದ್ದ ಆ ಯಾಗದಲ್ಲಿ ಮಹಾತ್ಮರಾದ ಬ್ರಾಹ್ಮಣರಿಗಾಗಿ ಸರಸ್ವತಿಯು ತುಪ್ಪದಿಂದ ತುಂಬಿಕೊಂಡು ಹರಿದಳು.

ಯತ್ರ ಯತ್ರ ಹಿ ಯೋ ವಿಪ್ರೋ ಯಾನ್ ಯಾನ್ ಕಾಮಾನಭೀಪ್ಸತಿ ।
ತತ್ರ ತತ್ರ ಸರಿಚ್ಛ್ರೇಷ್ಠಾ ಸಸರ್ಜ ಸುಬಹೂನ್ ರಸಾನ್ ॥೪೦॥

ಎಲ್ಲೆಲ್ಲಿ ಬ್ರಾಹ್ಮಣನು ಏನೇನು ಕಾಮನೆಗಳನ್ನು ಅಪೇಕ್ಷಿಸುತ್ತಾನೆಯೋ ಉತ್ತಮನದಿಯಾದ ಸರಸ್ವತಿಯು ಅಲ್ಲಲ್ಲಿ ಬಹಳ ರಸಗಳನ್ನು ಸೃಷ್ಟಿಮಾಡುತ್ತಾಳೆ.

ತತ್ರ ದೇವಾಃ ಸಗಂಧರ್ವಾಃ ಪ್ರೀತಾ ಯಜ್ಞಸ್ಯ ಸಂಪದಾ ।
ವಿಸ್ಮಿತಾ ಮಾನುಷಾ ಹ್ಯಾಸನ್ ದೃಷ್ಟ್ವಾ ತಾಂ ಯಜ್ಞಸಂಪದಮ್ ॥೪೧॥

ಅಲ್ಲಿ ಯಜ್ಞದಿಂದುಂಟಾದ ಸಂಪತ್ತನ್ನು ನೋಡಿ ದೇವತೆಗಳು, ಗಂಧರ್ವರು ಮತ್ತು ಮನುಷ್ಯರು ಆಶ್ಚರ್ಯಗೊಂಡರು.

ತತಸ್ತಾಲಕೇತುರ್ಮಹಾಧರ್ಮಸೇತುಃ
ಮಹಾತ್ಮಾ ಕೃತಾತ್ಮಾ ಮಹಾದಾನನಿತ್ಯಃ ।
ವಸಿಷ್ಠಾಪವಾಹಂ ಮಹಾಭೀಮವೇಗಂ
ಧೃತಾತ್ಮಾ ಜಿತಾತ್ಮಾ ಸಮಭ್ಯಾಜಗಾಮ ॥೪೨॥

ಅನಂತರ ತಾಲಚಿಹ್ನೆಯ ಧ್ವಜವನ್ನು ಹೊಂದಿರುವ ಧರ್ಮರಕ್ಷಕನಾದ, ಮಹಾತ್ಮ ಬಲರಾಮನು ಬಹಳವೇಗದಿಂದ ಹರಿಯುತ್ತಿದ್ದ ವಸಿಷ್ಠಾಪವಾಹತೀರ್ಥಕ್ಕೆ ಬಂದನು.

ಬಲರಾಮನು ನಿತ್ಯವೂ ಮಹಾದಾನಗಳನ್ನು ಮಾಡುತ್ತಿದ್ದನು. ತನ್ನ ಮಹತ್ಕಾರ್ಯಗಳಿಂದ ಕೃತಕೃತ್ಯನಾಗಿದ್ದನು. ಧರ್ಮವನ್ನು ಆಚರಿಸುತ್ತ, ಇಂದ್ರಿಯನಿಗ್ರಹವನ್ನು ಹೊಂದಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಗದಾಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾಲ್ಕನೆಯ ಅಧ್ಯಾಯ

ವಸಿಷ್ಠಾಪವಾಹತೀರ್ಥಕ್ಕೆ ಆ ಹೆಸರು ಬಂದ ರೀತಿಯ ವರ್ಣನೆ.

ಜನಮೇಜಯಃ

ವಸಿಷ್ಠಾಪವಾಹೋ ಬ್ರಹ್ಮನ್ ವೈ ಭೀಮವೇಗಃ ಕಥಂ ನು ಸಃ ।
ಕಿಮರ್ಥಂ ಚ ಸರಿಚ್ಛ್ರೇಷ್ಠಾ ತಮೃಷಿಂ ಪ್ರತ್ಯವಾಹಯತ್ ॥೧॥

ಜನಮೇಜಯ– ಬ್ರಹ್ಮಜ್ಞಾನಿಯೆ! ವಸಿಷ್ಠಾಪವಾಹತೀರ್ಥಕ್ಕೆ ಬಹಳವೇಗವು ಹೇಗೆ ಉಂಟಾಯಿತು? ಉತ್ತಮನದಿಯಾದ ಸರಸ್ವತಿಯು ಏಕೆ ಆ ಋಷಿಯನ್ನು ಸೆಳೆದೊಯ್ದಳು?

ಕೇನ ಚಾಪ್ಯಭವದ್ವೈರಂ ಕಾರಣಂ ಕಿಂ ಚ ತತ್ ಪ್ರಭೋ ।
ವದ ಪೃಷ್ಟೋ ಮಹಾಪ್ರಾಜ್ಞ ನ ಹಿ ತೃಪ್ಯಾಮಿ ತೇ ವಚಃ ॥೨॥

ಪ್ರಭುವೇ! ಯಾರ ಜೊತೆಗೆ ವೈರವು ಉಂಟಾಯಿತು? ವೈರ ಹುಟ್ಟಲು ಕಾರಣವೇನು? ಮಹಾಜ್ಞಾನಿಯೇ! ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಡು. ಇಲ್ಲದಿದ್ದರೆ ನನಗೆ ತೃಪ್ತಿಯು ಉಂಟಾಗದು.

ವೈಶಂಪಾಯನಃ

ವಿಶ್ವಾಮಿತ್ರಸ್ಯ ಚೈವರ್ಷೇರ್ವಸಿಷ್ಠಸ್ಯ ಚ ಭಾರತ ।
ಭೃಶಂ ವೈರಮಭೂದ್ ರಾಜನ್ ತಪಃಸ್ಪರ್ಧಾಕೃತಂ ಮಹತ್ ॥೩॥

ವೈಶಂಪಾಯನ– ಭರತಕುಲೋದ್ಭವನೇ! ವಿಶ್ವಾಮಿತ್ರನಿಗೂ, ವಸಿಷ್ಠನಿಗೂ ಬಹಳವಾದ ದ್ವೇಷವು ಉಂಟಾಯಿತು. ರಾಜನೇ! ಅವರಲ್ಲಿ ಪರಸ್ಪರವಾಗಿ ತಪಸ್ಸಿನ ವಿಷಯದಲ್ಲಿ ಸ್ಪರ್ಧೆಯುಂಟಾಯಿತು.

ಆಶ್ರಮೋ ವೈ ವಸಿಷ್ಠಸ್ಯ ಸ್ಥಾಣುತೀರ್ಥೇऽಭವನ್ಮಹಾನ್ ।
ಪೂರ್ವತಃ ಪಶ್ಚಿಮಶ್ಚಾಸೀದ್ ವಿಶ್ವಾಮಿತ್ರಸ್ಯ ಧೀಮತಃ ॥೪॥

ಸ್ಥಾಣುತೀರ್ಥದ ಪೂರ್ವಭಾಗದಲ್ಲಿ ವಸಿಷ್ಠನ ದೊಡ್ಡದಾದ ಆಶ್ರಮವಿತ್ತು. ಪಶ್ಚಿಮಭಾಗದಲ್ಲಿ ಬುದ್ಧಿವಂತನಾದ ವಿಶ್ವಾಮಿತ್ರನ ಆಶ್ರಮವು ಇತ್ತು.

ಯತ್ರ ಸ್ಥಾಣುರ್ಮಹಾರಾಜ ತಪ್ತವಾನ್ ಸುಮಹತ್ ತಪಃ ।
ಯತ್ರಾಸ್ಯ ಕರ್ಮ ತದ್ಘೋರಂ ಪ್ರವದಂತಿ ಮನೀಷಿಣಃ ॥೫॥

ಆ ತೀರ್ಥದಲ್ಲಿಯೇ ಸ್ಥಾಣುವು ಬಹಳವಾದ ತಪಸ್ಸನ್ನು ಆಚರಿಸಿದ್ದನು. ಆ ತೀರ್ಥದಲ್ಲಿ ಜ್ಞಾನಿಗಳು ಆ ಸ್ಥಾಣುವಿನ ಘೋರವಾದ ಕಾರ್ಯಗಳನ್ನೂ ಹೇಳುತ್ತಾರೆ.

ಯತ್ರೇಷ್ಟ್ವಾ ಭಗವಾನ್ ಸ್ಥಾಣುಃ ಪೂಜಯಿತ್ವಾ ಸರಸ್ವತೀಮ್ ।
ಸ್ಥಾಪಯಾಮಾಸ ತತ್ತೀರ್ಥಂ ಸ್ಥಾಣುತೀರ್ಥಮಿತಿ ಪ್ರಭುಃ ॥೬॥

ಈ ತೀರ್ಥದಲ್ಲಿಯೇ ಪೂಜ್ಯನಾದ ಸ್ಥಾಣುವು ಯಾಗವನ್ನು ಮಾಡಿ ಸರಸ್ವತಿಯನ್ನು ಪೂಜಿಸಿದನು. ಸಮರ್ಥನಾದ ಆತನು ಆ ತೀರ್ಥವನ್ನು ಸ್ಥಾಣುತೀರ್ಥವೆಂದು ಪ್ರಸಿದ್ಧಿಗೆ ತಂದನು.

ಯತ್ರ ಸರ್ವೇ ಸುರಾಃ ಸ್ಕಂದಮಭ್ಯಷಿಂಚನ್ ನರಾಧಿಪ ।
ಸೈನಾಪತ್ಯೇನ ತಂ ಸ್ಕಂದಂ ಸುರಾರಿವಿನಿಬರ್ಹಣಮ್ ॥೭॥

ರಾಜನೇ! ಈ ತೀರ್ಥದಲ್ಲಿಯೇ ಎಲ್ಲಾ ದೇವತೆಗಳು ಅಸುರಸಂಹಾರಕನಾದ ಸ್ಕಂದನನ್ನು ದೇವಸೇನಾಧಿಪತಿಯನ್ನಾಗಿ ಅಭಿಷೇಕ ಮಾಡಿದರು.

ತಸ್ಮಿನ್ ಸಾರಸ್ವತೇ ತೀರ್ಥೇ ವಿಶ್ವಾಮಿತ್ರೋ ಮಹಾತಪಾಃ ।
ವಸಿಷ್ಠಂ ಚಾಲಯಾಮಾಸ ತಪಸೋಗ್ರೇಣ ತಚ್ಛೃಣು ॥೮॥

ಸರಸ್ವತಿಯ ಆ ತೀರ್ಥದಲ್ಲಿ ಮಹಾತಪಸ್ವಿಯಾದ ವಿಶ್ವಾಮಿತ್ರನು ತನ್ನ ಉಗ್ರತಪಸ್ಸಿನಿಂದ ವಸಿಷ್ಠನನ್ನು ಅಲುಗಾಡಿಸಿದನು. ಅದನ್ನು ಕೇಳು.

ವಿಶ್ವಾಮಿತ್ರವಸಿಷ್ಠೌ ತಾವಹನ್ಯಹನಿ ಭಾರತ ।
ಸ್ಪರ್ಧಾಂ ತಪೋನ್ವಿತಾಂ ತೀವ್ರಾಂ ಚಕ್ರತುಸ್ತೌ ತಪೋಧನೌ ॥೯॥

ಭಾರತ! ತಪಸ್ಸೇ ಸಂಪತ್ತಾಗಿ ಉಳ್ಳ ಆ ವಿಶ್ವಾಮಿತ್ರ ಮತ್ತು ವಸಿಷ್ಠರು ಪ್ರತಿದಿನವೂ ತಪಸ್ಸಿನಿಂದ ಕೂಡಿದ ತೀವ್ರವಾದ ಸ್ಪರ್ಧೆಯನ್ನು ಮಾಡಿದರು.

ತತ್ರಾಪ್ಯಧಿಕಸಂತಪ್ತೋ ವಿಶ್ವಾಮಿತ್ರೋ ಮಹಾಮುನಿಃ ।
ದೃಷ್ಟ್ವಾ ತೇಜೋ ವಸಿಷ್ಠಸ್ಯ ಚಿಂತಾಮಭಿಜಗಾಮ ಹ ॥೧೦॥

ಅದರಲ್ಲಿಯೂ ಬಹಳವಾಗಿ ತಪಸ್ಸಿನಿಂದ ಬೆಂದುಹೋದ ಮಹಾಮುನಿ ವಿಶ್ವಾಮಿತ್ರನು ವಸಿಷ್ಠನ ತೇಜಸ್ಸನ್ನು ನೋಡಿ ಚಿಂತೆಗೊಳಗಾದನು.

ತಸ್ಯ ಬುದ್ಧಿರಿಯಂ ಚಾಸೀದ್ ಧರ್ಮನಿತ್ಯಸ್ಯ ಭಾರತ ॥೧೧॥

ಭಾರತ! ಧರ್ಮನಿಷ್ಠನಾದ ವಿಶ್ವಾಮಿತ್ರನ ಬುದ್ಧಿಯು ಹೀಗೆ ಚಿಂತಿಸತೊಡಗಿತು.

ವಿಶ್ವಾಮಿತ್ರಃ

ಇಯಂ ಸರಸ್ವತೀ ತೂರ್ಣಂ ಮತ್ಸಮೀಪಂ ತಪೋಧನಮ್ ।
ಆನಯಿಷ್ಯತಿ ವೇಗೇನ ಜಪಂತಂ ಜಪತಾಂ ವರಮ್ ॥೧೨॥

ವಿಶ್ವಾಮಿತ್ರ– ಈ ಸರಸ್ವತಿನದಿಯು ಜಾಪಕರಲ್ಲಿ ಶೇಷ್ಠನಾದ, ತಪೋಧನನಾದ ವಸಿಷ್ಠನನ್ನು ನನಗಾಗಿ ಶೀಘ್ರದಲ್ಲಿ ಕರೆದುತರುತ್ತಾಳೆ.

ಇಹಾಗತಂ ದ್ವಿಜಶ್ರೇಷ್ಠಂ ಹನಿಷ್ಯಾಮಿ ನ ಸಂಶಯಃ ॥೧೩॥

ಇಲ್ಲಿಗೆ ಬಂದ ಬ್ರಾಹ್ಮಣೋತ್ತಮನನ್ನು ನಾನು ಕೊಲ್ಲುವೆನು.

ವೈಶಂಪಾಯನಃ

ಏವಂ ನಿಶ್ಚಿತ್ಯ ಮನಸಾ ವಿಶ್ವಾಮಿತ್ರೋ ಮಹಾಮುನಿಃ ।
ಸಸ್ಮಾರ ಸರಿತಾಂ ಶ್ರೇಷ್ಠಾಂ ಕ್ರೋಧಸಂರಕ್ತಲೋಚನಃ ॥೧೪॥

ವೈಶಂಪಾಯನ– ಹೀಗೆ ವಿಶ್ವಾಮಿತ್ರನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಕೋಪದಿಂದ ಕಣ್ಣುಗುಡ್ಡೆಗಳನ್ನೂ ಕೆಂಪಾಗಿಸಿಕೊಂಡು ಉತ್ತಮನದಿಯಾದ ಸರಸ್ವತಿಯನ್ನು ಸ್ಮರಿಸಿದನು.

ಸಾ ಧ್ಯಾತಾ ಮುನಿನಾ ತೇನ ವ್ಯಾಕುಲತ್ವಂ ಜಗಾಮ ಹ ।
ಗತ್ವಾ ಚೈವ ಮಹಾವೀರ್ಯಂ ಮಹಾಕೋಪಂ ಚ ಭಾಮಿನೀ ॥೧೫॥

ವಿಶ್ವಾಮಿತ್ರಮುನಿಯು ಹೀಗೆ ಧ್ಯಾನಮಾಡಿದಾಗ ಸರಸ್ವತಿಯು ಅವನಿಂದಾಗಿ ದುಗುಡಕ್ಕೆ ಒಳಗಾದಳು. ಸರಸ್ವತಿಯು ಮಹಾವೀರನಾದ ಕೋಪಿಷ್ಠ ವಿಶ್ವಾಮಿತ್ರನನ್ನು ಭೇಟಿಯಾದಳು.

ತದಾ ತಂ ವೇಪಮಾನಾಂಗೀ ವಿವರ್ಣಾ ಪ್ರಾಂಜಲಿರ್ಭೃಶಮ್ ।
ಉಪತಸ್ಥೇ ಮುನಿವರಂ ವಿಶ್ವಾಮಿತ್ರಂ ಸರಸ್ವತೀ ॥೧೬॥

ಕಳೆಗುಂದಿದ ಮುಖವುಳ್ಳ, ಮೈಯು ನಡುಗುತ್ತಿರುವ ಸರಸ್ವತಿಯು ಕೈಯನ್ನು ಮುಗಿದುಕೊಂಡು ಮುನಿಶ್ರೇಷ್ಠನಾದ ವಿಶ್ವಾಮಿತ್ರರನ್ನು ಸೇವಿಸಿದಳು.

ಹತವೀರಾ ಯಥಾ ನಾರೀ ದುಃಖಿತಾ ಸಾಽಭವದ್ ಭೃಶಮ್ ।
ಬ್ರೂಹಿ ಕಿಂ ಕರವಾಣೀತಿ ಪ್ರೋವಾಚ ಮುನಿಸತ್ತಮಮ್ ॥೧೭॥

ವೀರನಾದ ಪತಿಯನ್ನು ಕಳೆದುಕೊಂಡ ಸ್ತ್ರೀಯ ಹಾಗೆ ಸರಸ್ವತಿಯು ಬಹಳವಾಗಿ ದುಃಖಿತಳಾದಳು. ಮುನಿಶ್ರೇಷ್ಠನಿಗೆ ''ನಾನೇನು ಮಾಡಲಿ?'' ಎಂದು ಕೇಳಿದಳು.

ತಾಮುವಾಚ ತತಃ ಕ್ರುದ್ಧೋ ವಸಿಷ್ಠಂ ಶೀಘ್ರಮಾನಯ ।
ಯಾವದೇನಂ ನಿಹನ್ಮ್ಯದ್ಯ ತಚ್ಛ್ರುತ್ವಾ ವ್ಯಥಿತಾ ನದೀ ॥೧೮॥

ಕೋಪಗೊಂಡಿದ್ದ ವಿಶ್ವಾಮಿತ್ರನು ಅವಳಿಗೆ ಹೇಳುತ್ತಾನೆ, ''ನಾನು ವಸಿಷ್ಠನನ್ನು ಕೊಲ್ಲಬೇಕು. ಅದಕ್ಕಾಗಿ ವಸಿಷ್ಠನನ್ನು ಬೇಗನೇ ಕರೆದುಕೊಂಡು ಬಾ'' ಎಂದು. ಇದನ್ನು ಕೇಳಿದ ಸರಸ್ವತಿಯು ಬಹಳವಾಗಿ ಮರುಕಪಟ್ಟಳು.

ಸಾಽಂಜಲಿಂ ತು ತದಾ ಕೃತ್ವಾ ಪುಂಡರೀಕನಿಭೇಕ್ಷಣಾ ।
ಪ್ರಾಕಂಪತ ಭೃಶಂ ಭೀತಾ ವಾಯುನೇವಾಹತಾ ಲತಾ ॥೧೯॥

ಕಮಲದ ಹಾಗೆ ಕಣ್ಣುಳ್ಳ ಸರಸ್ವತಿಯು ಕೈಗಳನ್ನು ಮುಗಿದುಕೊಂಡು, ಗಾಳಿಗೆ ನಡುಗುವ ಬಳ್ಳಿಯಂತೆ ಭಯದಿಂದಾಗಿ ತುಂಬಾ ನಡುಗಿಹೋದಳು.

ತಥಾಗತಾಂ ತು ತಾಂ ದೃಷ್ಟ್ವಾ ವೇಪಮಾನಾಂ ಕೃತಾಂಜಲಿಮ್ ।
ಅವಿಚಾರಂ ವಸಿಷ್ಠಂ ತ್ವಮಾನಯ ಸ್ವಾಂತಿಕಂ ಮಮ ॥೨೦॥

ಹಾಗೆ ಬಂದು ನಡುಗುತ್ತಾ ಕೈಮುಗಿದುಕೊಂಡಿದ್ದ ಸರಸ್ವತಿಯನ್ನು ನೋಡಿದ ವಿಶ್ವಾಮಿತ್ರನು ''ಯಾವುದೇ ವಿಚಾರವನ್ನು ಮಾಡದೆ ನೀನು ವಸಿಷ್ಠನನ್ನು ಕರೆದುಕೊಂಡು ನನ್ನ ಬಳಿಗೆ ಬಾ'' ಎಂದು ಹೇಳಿದನು.

ಸಾ ತಸ್ಯ ವಚನಂ ಶ್ರುತ್ವಾ ಗತ್ವಾ ಪಾಪಂ ಚಿಕೀರ್ಷಿತಮ್ ।
ವಸಿಷ್ಠಸ್ಯ ಪ್ರಭಾವಂ ಚ ಜಾನಂತ್ಯಪ್ರತಿಮಂ ಭುವಿ ॥೨೧॥

ವಿಶ್ವಾಮಿತ್ರನ ಮಾತನ್ನು ಕೇಳಿದ ಸರಸ್ವತಿಯು ತಾನು ಮಾಡಹೊರಟ ಪಾಪಕರ್ಮವನ್ನೂ, ಭೂಮಿಯಲ್ಲಿ ವಸಿಷ್ಠರ ಅಸದೃಶವಾದ ಪ್ರಭಾವವನ್ನೂ ತಿಳಿದಿದ್ದಳು. ಅಲ್ಲಿಂದ ಆಕೆ ಹೊರಟಳು.

ಸಾಽಭಿಗಮ್ಯ ವಸಿಷ್ಠಂ ಚ ಇಮಮರ್ಥಮಚೋದಯತ್ ।
ಯದುಕ್ತಾ ಸರಿತಾಂ ಶ್ರೇಷ್ಠಾ ವಿಶ್ವಾಮಿತ್ರೇಣ ಧೀಮತಾ ॥೨೨॥

ವಸಿಷ್ಠರ ಮುಂದೆ ಬಂದ ಸರಸ್ವತಿಯು ಬುದ್ಧಿವಂತನಾದ ವಿಶ್ವಾಮಿತ್ರನು ಏನನ್ನು ಹೇಳಿದ್ದನೋ ಆ ವಿಷಯವನ್ನು ಹೇಳಿದಳು.

ಉಭಯೋಃ ಶಾಪಯೋರ್ಭೀತಾ ವೇಪಮಾನಾ ಪುನಃ ಪುನಃ ।
ಚಿಂತಯಿತ್ವಾ ಮಹಾಶಾಪಮೃಷಿಭ್ಯಾಂ ತ್ರಾಸಿತಾ ಭೃಶಮ್ ॥೨೩॥

ವಸಿಷ್ಠ-ವಿಶ್ವಾಮಿತ್ರರ ಶಾಪಕ್ಕೆ ಹೆದರಿದ ಸರಸ್ವತಿಯು ಮತ್ತೆ ಮತ್ತೆ ನಡುಗತೊಡಗಿದಳು. ಋಷಿಗಳು ಕೊಡಬಹುದಾದ ಮಹಾಶಾಪಗಳನ್ನು ನೆನೆದು ನೆನೆದು ಬಹಳ ಆಯಾಸಗೊಂಡಳು.

ತಾಂ ಕೃಶಾಂ ಚ ವಿವರ್ಣಾಂ ಚ ದೃಷ್ಟ್ವಾ ಚಿಂತಾಸಮನ್ವಿತಾಮ್ ।
ಉವಾಚ ರಾಜನ್ ಧರ್ಮಾತ್ಮಾ ವಸಿಷ್ಠಃ ಸುಮಹಾತಪಾಃ ॥೨೪॥

ರಾಜನೇ! ದುಃಖದಿಂದ ಕೃಶಳಾದ ಕಳೆಗುಂದಿದ ಮುಖವುಳ್ಳ ಹಾಗೂ ಚಿಂತೆಗೊಳಗಾದ ಸರಸ್ವತಿಯನ್ನು ನೋಡಿದ ಮಹಾತಪಸ್ವಿಯಾದ, ಧಾರ್ಮಿಕ ವ್ಯಕ್ತಿಯಾದ ವಸಿಷ್ಠನು ಹೀಗೆ ಹೇಳಿದನು.

ವಸಿಷ್ಠಃ

ತ್ಯಾಹ್ಯಾತ್ಮಾನಂ ಸರಿಚ್ಛ್ರೇಷ್ಠೇ ವಹ ಮಾಂ ಶೀಘ್ರಗಾಮಿನೀ ।
ವಿಶ್ವಾಮಿತ್ರಃ ಶಪೇದ್ಧಿ ತ್ವಾಂ ಮಾ ಕೃಥಾಸ್ತ್ವಂ ವಿಚಾರಣಾಮ್ ॥೨೫॥

ವಸಿಷ್ಠ– ಶ್ರೇಷ್ಠಳಾದ ನದಿಯೇ! ನೀನು ವೇಗವಾಗಿ ಹರಿಯುವವಳು. ನನ್ನನ್ನು ರಕ್ಷಿಸು. ನನ್ನನ್ನು ಕರೆದುಕೊಂಡು ಹೋಗು. ಇದರ ಬಗ್ಗೆ ವಿಚಾರ ಮಾಡಬೇಡ. ವಿಶ್ವಾಮಿತ್ರನು ನಿನ್ನನ್ನು ಶಪಿಸಿಯಾನು.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಕೃಪಾಶೀಲಸ್ಯ ವೈ ಸರಿತ್ ।
ಚಿಂತಯಾಮಾಸ ಕೌರವ್ಯ ಕಿಂ ಕೃತ್ವಾ ಸುಕೃತಂ ಭವೇತ್ ॥೨೬॥

ವೈಶಂಪಾಯನ– ಕರುಣಾಸ್ವಭಾವನಾದ ವಸಿಷ್ಠನ ಮಾತನ್ನು ಕೇಳಿದ ಸರಸ್ವತಿ ನದಿಯು ಏನು ಮಾಡಿದರೆ ಒಳ್ಳೆಯದಾಗುವುದು ಎಂದು ವಿಚಾರ ಮಾಡಿದಳು.

ತಸ್ಯಾಶ್ಚಿಂತಾ ಸಮುತ್ಪನ್ನಾ ವಸಿಷ್ಠೋ ಮಯ್ಯತೀವ ಹಿ ।
ಕೃತವಾನ್ ಹಿ ದಯಾ ನಿತ್ಯಂ ತಸ್ಯ ಕಾರ್ಯಂ ಹಿತಂ ಮಯಾ ॥೨೭॥

ಅವಳು ಆಲೋಚಿಸತೊಡಗಿದಳು, ವಸಿಷ್ಠನು ನನ್ನಲ್ಲಿ ಬಹಳ ದಯೆಯನ್ನು ತೋರಿಸಿದ್ದಾನೆ. ಅವನಿಗೆ ನಾನು ಹಿತವನ್ನೇ ಮಾಡಬೇಕು.

ಅಥ ಕೂಲೇ ಸ್ಥಕೇ ರಾಜನ್ ಜಪಂತಮೃಷಿಸತ್ತಮಮ್ ।
ಜುಹ್ವಾನಂ ಕೌಶಿಕಂ ದೃಷ್ಟ್ವಾ ಸರಸ್ವತ್ಯಭ್ಯಚಿಂತಯತ್ ॥೨೮॥

ರಾಜನೇ! ಅನಂತರ ತನ್ನ ತೀರದಲ್ಲಿ ಕುಳಿತು ಜಪಮಾಡುತ್ತಾ ಹೋಮಿಸುತ್ತಿದ್ದ ವಿಶ್ವಾಮಿತ್ರನನ್ನು ನೋಡಿ ಹೀಗೆ ಆಲೋಚಿಸಿದಳು.

ಇದಮಂತರಮಿತ್ಯೇವ ತತಃ ಸಾ ಸರಿತಾಂ ವರಾ ।
ಕೂಲಾಪಹಾರಮಕರೋತ್ ಸ್ವೇನ ವೇಗೇನ ಭಾರತ ॥೨೯॥

ಭಾರತ! ಇದೇ ಅವಕಾಶವೆಂದು ತಿಳಿದು ಆ ಸರಸ್ವತಿಯು ವೇಗವಾಗಿ ಹರಿದು ತನ್ನ ತೀರವನ್ನು ಕೊಚ್ಚಿಕೊಂಡು ಹೋದಳು.

ಕೂಲಾಪಹಾರೇಣ ತೇನ ಮೈತ್ರಾವರುಣಿರೌಹ್ಯತ ।
ಉಹ್ಯಮಾನಶ್ಚ ತುಷ್ಟಾವ ತದಾ ರಾಜನ್ ಸರಸ್ವತೀಮ್ ॥೩೦॥

ತೀರವನ್ನು ಕೊಚ್ಚಿಕೊಂಡು ಹೋದಾಗ ವಸಿಷ್ಠನು ಕೂಡ ಜೊತೆಗೆ ಹೋದನು. ರಾಜನೇ! ಪ್ರವಾಹದಲ್ಲಿ ಹೋಗುತ್ತಿದ್ದ ವಸಿಷ್ಠನು ಸರಸ್ವತಿಯನ್ನು ಸ್ತುತಿಸಿದನು.

ಪಿತಾಮಹಸ್ಯ ಸರಸಃ ಪ್ರವೃತ್ತಾऽಸಿ ಸರಸ್ವತಿ ।
ವ್ಯಾಪ್ತಂ ಚೇದಂ ಜಗತ್ಸರ್ವಂ ತವೈವಾಂಭೋಭಿರುತ್ತಮೈಃ ॥೩೧॥

ಪಿತಾಮಹ ಬ್ರಹ್ಮನ ಸರೋವರದಿಂದ ಹರಿದು ಬಂದವಳಾಗಿದ್ದೀಯ! ನಿನ್ನ ಉತ್ತಮವಾದ ನೀರಿನಿಂದ ಇಡಿ ಜಗತ್ತು ವ್ಯಾಪ್ತವಾಗಿದೆ.

ತ್ವಮೇವಾಕಾಶಗಾ ದೇವಿ ಮೇಘೇಷೂತ್ಸೃಜತೇ ಪಯಃ ।
ಸರ್ವಾಶ್ಚಾಪಸ್ತ್ವಮೇವೇತಿ ಯಥಾ ವಯಮಧೀಮಹೇ ॥೩೨॥

ದೇವಿಯೇ! ನೀನೇ ಆಕಾಶದಲ್ಲಿದ್ದುಕೊಂಡು ಮೇಘದ ಮೂಲಕ ನೀರನ್ನು ಸುರಿಸುವಿ. ಲೋಕದಲ್ಲಿ ಕಾಣಿಸುವ ಎಲ್ಲಾ ನೀರೂ ನಿನ್ನದೇ ಎಂದು ನಾವು ತಿಳಿದಿದ್ದೇವೆ.

ಬುದ್ಧಿಃ ಪುಷ್ಟಿಸ್ತಥಾ ಕೀರ್ತಿಃ ಸಿದ್ಧಿರ್ವೃದ್ಧಿರ್ಯಥಾ ತಥಾ ।
ತ್ವಮೇವ ವಾಣೀ ತ್ವಂ ಸ್ವಾಹಾ ತ್ವಯ್ಯಾಯತ್ತಮಿದಂ ಜಗತ್ ॥೩೩॥

ಬುದ್ಧಿ, ಪುಷ್ಟಿ, ಕೀರ್ತಿ, ಸಿದ್ಧಿ, ವೃದ್ಧಿ, ವಾಣಿ, ಸ್ವಾಹಾ ಹೀಗೆ ಎಲ್ಲಾ ಜಗತ್ತೂ ನಿನ್ನ ಅಧೀನ.

ತ್ವಮೇವ ಸರ್ವಭೂತೇಷು ವಸಸೀಹ ಚತುರ್ವಿಧಾ ॥೩೪॥

ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ನಾಲ್ಕು ವಿಭಾಗಗಳಲ್ಲಿ ನೀನೇ ಎಲ್ಲಾ ಭೂತಗಳಲ್ಲಿ ವಾಸ ಮಾಡುತ್ತಿರುವಿ.

ವೈಶಂಪಾಯನಃ

ಏವಂ ಸರಸ್ವತೀ ರಾಜನ್ ಸ್ತುತಾ ತೇನ ಮಹಾತ್ಮನಾ ।
ವೇಗೇನೋವಾಹ ತಂ ವಿಪ್ರಂ ವಿಶ್ವಾಮಿತ್ರಾಶ್ರಮಂ ಪ್ರತಿ ॥೩೫॥

ವೈಶಂಪಾಯನ– ರಾಜನೇ! ಮಹಾತ್ಮನಾದ ವಸಿಷ್ಠನು ಹೀಗೆ ಸ್ತುತಿಸುತ್ತಿರಲು ಸರಸ್ವತಿಯು ವೇಗವಾಗಿ ಅವನನ್ನು ವಿಶ್ವಾಮಿತ್ರನ ಆಶ್ರಮದ ಕಡೆಗೆ ಕರೆದೊಯ್ದಳು.

ನ್ಯವೇದಯತ ಚಾಭೀಕ್ಷ್ಣಂ ವಿಶ್ವಾಮಿತ್ರಾಯ ತಂ ಮುನಿಮ್ ॥೩೬॥

ಕೂಡಲೇ ವಸಿಷ್ಠಮುನಿಯನ್ನು ವಿಶ್ವಾಮಿತ್ರನಿಗೆ ನಿವೇದಿಸಿದಳು.

ತಮಾನೀತಂ ಸರಸ್ವತ್ಯಾ ದೃಷ್ಟ್ವಾ ಕೋಪಸಮನ್ವಿತಃ ।
ಅಥಾನ್ವೇಷತ್ ಪ್ರಹರಣಂ ವಸಿಷ್ಠಾಂತಕರಂ ತದಾ ॥೩೭॥

ಸರಸ್ವತಿಯು ವಸಿಷ್ಠನನ್ನು ಕರೆದುಕೊಂಡು ಬಂದಿದ್ದನ್ನು ನೋಡಿ ಕುಪಿತನಾದ ವಿಶ್ವಾಮಿತ್ರನು ವಸಿಷ್ಠನನ್ನು ಕೊಲ್ಲಲು ಆಯುಧವನ್ನು ಹುಡುಕಿದನು.

ತಂ ಚ ಕ್ರುದ್ಧಮಭಿಪ್ರೇಕ್ಷ್ಯ ಬ್ರಹ್ಮಹತ್ಯಾಭಯಾನ್ನದೀ ।
ಅಪೋವಾಹ ವಸಿಷ್ಠಂ ತು ಪ್ರಾಚೀಂ ದಿಶಮತಂದ್ರಿತಾ ॥೩೮॥

ಕುಪಿತನಾದ ವಿಶ್ವಾಮಿತ್ರನನ್ನು ನೋಡಿದ ಸರಸ್ವತಿಯು, ಅವನಿಗೆ ಬರಬಹುದಾದ ಬ್ರಹ್ಮಹತ್ಯಾದೋಷವನ್ನು ಗಮನಿಸಿ, ಯಾವುದೇ ಔದಾಸೀನ್ಯಕ್ಕೆ ಒಳಗಾಗದೆ ವಸಿಷ್ಠನನ್ನು ಪೂರ್ವದಿಕ್ಕಿಗೆ ಕರೆದೊಯ್ದಳು.

ಉಭಯೋಃ ಕುರ್ವತೀ ವಾಕ್ಯಂ ವಂಚಯಿತ್ವಾ ಚ ಗಾಧಿಜಮ್ ॥೩೯॥

ಹೀಗೆ ಸರಸ್ವತಿಯು ವಸಿಷ್ಠ ಮತ್ತು ವಿಶ್ವಾಮಿತ್ರ ಇವರೀರ್ವರ ಮಾತನ್ನೂ ನಡೆಸಿದಳು. ಆದರೆ ಈ ಮೂಲಕ ವಿಶ್ವಾಮಿತ್ರನನ್ನು ವಂಚಿಸಿ ವಸಿಷ್ಠನನ್ನು ರಕ್ಷಿಸಿದಳು.

ತತೋಽಪವಾಹಿತಂ ದೃಷ್ಟ್ವಾ ವಸಿಷ್ಠಮೃಷಿಸತ್ತಮಮ್ ।
ಅಬ್ರವೀದಥ ಸಂಕ್ರುದ್ಧೋ ವಿಶ್ವಾಮಿತ್ರಃ ಸರಸ್ವತೀಮ್ ॥೪೦॥

ಪ್ರವಾಹದಲ್ಲಿ ತೇಲಿಹೋದ ಋಷಿಶ್ರೇಷ್ಠನಾದ ವಸಿಷ್ಠನನ್ನು ನೋಡಿ ಕೋಪಗೊಂಡ ವಿಶ್ವಾಮಿತ್ರನು ಸರಸ್ವತಿಗೆ ಹೀಗೆ ಹೇಳುತ್ತಾನೆ.

ವಿಶ್ವಾಮಿತ್ರಃ

ಯಸ್ಮಾತ್ ತ್ವಂ ಸರಿತಾಂ ಶ್ರೇಷ್ಠೇ ವಂಚಯಿತ್ವಾ ಪುನರ್ಗತಾ ।
ಶೋಣಿತಂ ವಹ ಕಲ್ಯಾಣಿ ರಾಕ್ಷಸಾನಾಂ ಚ ಸಮ್ಮತಮ್ ॥೪೧॥

ವಿಶ್ವಾಮಿತ್ರ– ನದಿಗಳಲ್ಲಿಯೇ ಶ್ರೇಷ್ಠಳಾದ ಸರಸ್ವತಿಯೇ! ಮಂಗಳಕರಳೇ! ನೀನು ನನಗೆ ಮೋಸಮಾಡಿ ಹೋಗಿರುವುದರಿಂದ ನೀನು ರಾಕ್ಷಸರಿಗೆ ಇಷ್ಟವಾದ ರಕ್ತದ ಪ್ರವಾಹವನ್ನು ಹರಿಸು.

ತತಃ ಸರಸ್ವತೀ ಶಪ್ತಾ ವಿಶ್ವಾಮಿತ್ರೇಣ ಧೀಮತಾ ।
ಅವಹಚ್ಛೋಣಿತೋನ್ಮಿಶ್ರಂ ತೋಯಂ ಸಂವತ್ಸರಂ ತದಾ ॥೪೨॥

ಜ್ಞಾನಿಯಾದ ವಿಶ್ವಾಮಿತ್ರರು ಸರಸ್ವತಿಯನ್ನು ಶಪಿಸಿದಾಗ ಶಾಪಗ್ರಸ್ತಳಾದ ಸರಸ್ವತಿಯು ಒಂದು ವರ್ಷದ ಕಾಲ ರಕ್ತದಿಂದ ಕೂಡಿದ ನೀರನ್ನು ಹರಿಸಿದಳು.

ಅಥರ್ಷಯಶ್ಚ ದೇವಾಶ್ಚ ಗಂಧರ್ವಾಪ್ಸರಸಸ್ತದಾ ।
ಸರಸ್ವತೀಂ ತಥಾ ದೃಷ್ಟ್ವಾ ಬಭೂವುರ್ಭೃಶದುಃಖಿತಾಃ ॥೪೩॥

ಋಷಿಗಳು, ದೇವತೆಗಳು, ಗಂಧರ್ವರು, ಅಪ್ಸರೆಯರು ಇವರೆಲ್ಲಾ ಈ ರೀತಿಯಲ್ಲಿ ರಕ್ತವನ್ನು ಹರಿಸುವ ಸರಸ್ವತಿಯನ್ನು ನೋಡಿ ಬಹಳ ದುಃಖಪಟ್ಟರು.

ಏವಂ ವಸಿಷ್ಠೋಽಪಹೃತಃ ಶೀಘ್ರಾದ್ ಯಾತೋ ಜನಾಧಿಪ ।
ಆಗಚ್ಛಚ್ಚ ತತೋ ಮಾರ್ಗಂ ಸ್ವಮೇವ ಸರಿತಾಂ ವರಾ ॥೪೪॥

ರಾಜನೇ! ಹೀಗೆ ವಸಿಷ್ಠನು ತಕ್ಷಣ ಅಲ್ಲಿಂದ ಇನ್ನೊಂದೆಡೆ ತೆಗೆದು ಹೋಗಲ್ಪಟ್ಟನು. ಅನಂತರ ಸರಸ್ವತಿಯು ತನ್ನ ಮಾರ್ಗದಲ್ಲಿಯೇ ಹರಿಯತೊಡಗಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ವಸಿಷ್ಠಾಪವಾಹೋ ನಾಮ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೈದನೆಯ ಅಧ್ಯಾಯ

ವಿಶ್ವಾಮಿತ್ರನ ಶಾಪದಿಂದ ರಕ್ತಸಿಕ್ತಳಾದ ಸರಸ್ವತಿಯನ್ನು ಋಷಿಗಳು ತಮ್ಮ ತಪಸ್ಸಿನ ಪ್ರಭಾವದಿಂದ ಶುದ್ಧಿಮಾಡಿದ್ದು. ಸರಸ್ವತಿ ಮತ್ತು ಅರುಣರ ಸಂಗಮಸ್ಥಳದಲ್ಲಿ ಯಾಗಮಾಡಿ ಇಂದ್ರನು ತನ್ನ ಬ್ರಹ್ಮಹತ್ಯಾದೋಷವನ್ನು ಪರಿಹರಿಸಿಕೊಂಡಿದ್ದು. ಬಲರಾಮನು ಅಲ್ಲಿ ಸ್ನಾನಾದಿಗಳನ್ನು ಮಾಡಿ ಅಲ್ಲಿಂದ ಸೋಮತೀರ್ಥಕ್ಕೆ ಹೋದದ್ದು.

ವೈಶಂಪಾಯನಃ

ಸಾ ಶಪ್ತಾ ತೇನ ಕ್ರುದ್ಧೇನ ವಿಶ್ವಾಮಿತ್ರೇಣ ಧೀಮತಾ ।
ತಸ್ಮಿಂಸ್ತೀರ್ಥವರೇ ಶುಭ್ರೇ ಶೋಣಿತಂ ಸಮುಪಾವಹತ್ ॥೧॥

ವೈಶಂಪಾಯನ– ಕೋಪಗೊಂಡ, ಜ್ಞಾನಿಯಾದ ವಿಶ್ವಾಮಿತ್ರನ ಶಾಪಕ್ಕೊಳಗಾದ ಸರಸ್ವತಿಯು ಪರಿಶುಭ್ರವಾದ ಆ ಉತ್ತಮತೀರ್ಥದಲ್ಲಿ ರಕ್ತವನ್ನು ಹರಿಸಿದಳು.

ಅಥಾಜಗ್ಮುಸ್ತತೋ ರಾಜನ್ ರಾಕ್ಷಸಾಸ್ತತ್ರ ಭಾರತ ।
ತತಸ್ತೇ ಶೋಣಿತಂ ಸರ್ವೇ ಪಿಬಂತಃ ಸಮುಪಾಸತೇ ॥೨॥

ಭಾರತನೇ! ರಾಜನೇ! ಅನಂತರ ಅಲ್ಲಿ ರಾಕ್ಷಸರು ಬಂದು ರಕ್ತವನ್ನು ಕುಡಿಯುತ್ತಾ ಸರಸ್ವತಿಯನ್ನು ಸೇವಿಸಿದರು.

ತೃಪ್ತಾಶ್ಚ ಸುಭೃಶಂ ತೇನ ಸುಖಿನೋ ವಿಗತಜ್ವರಾಃ ।
ನೃತ್ಯಂತಶ್ಚ ಹಸಂತಶ್ಚ ಯಥಾ ಸ್ವರ್ಗಜಿತೋ ನರಾಃ ॥೩॥

ಅದರಿಂದ ತುಂಬಾ ತೃಪ್ತಿಯನ್ನು ಹೊಂದಿದ ರಾಕ್ಷಸರು ಮನೋಕ್ಲೇಶವನ್ನು ಪರಿಹರಿಸಿಕೊಂಡು, ಸ್ವರ್ಗದಲ್ಲಿ ಸುಖವನ್ನು ಅನುಭವಿಸುವ ಮನುಷ್ಯರ ಹಾಗೆ ಆನಂದದಿಂದ ಕುಣಿದಾಡಿದರು. ಜೋರಾಗಿ ನಗುತ್ತಿದ್ದರು.

ಕಸ್ಯಚಿತ್ತ್ವಥ ಕಾಲಸ್ಯ ಋಷಯಃ ಸುತಪೋಧನಾಃ ।
ತೀರ್ಥಯಾತ್ರಾಂ ಸಮಾಜಗ್ಮುಃ ಸರಸ್ವತ್ಯಾಂ ಮಹೀಪತೇ ॥೪॥

ರಾಜನೇ! ಸ್ವಲ್ಪಕಾಲ ಕಳೆದುಹೋದ ನಂತರ ಮಹಾತಪಸ್ವಿಗಳಾದ ಋಷಿಗಳು ಸರಸ್ವತಿನದಿಗೆ ತೀರ್ಥಯಾತ್ರೆಗಾಗಿ ಬಂದರು.

ತೇಷು ಸರ್ವೇಷು ತೀರ್ಥೇಷು ಆಪ್ಲುತ್ಯ ಮುನಿಪುಂಗವಾಃ ।
ಪ್ರಾಪ್ಯ ಪ್ರೀತಿಂ ಪರಾಂ ಚಾಪಿ ತಪೋಲುಬ್ಧಾ ವಿಶಾರದಾಃ ॥೫॥

ನಿಪುಣರಾದ ಹಾಗೂ ತಪಸ್ಸನ್ನೇ ಅಪೇಕ್ಷಿಸುವ ಆ ಋಷಿಶ್ರೇಷ್ಠರು ಸರಸ್ವತಿಯ ಎಲ್ಲಾತೀರ್ಥಗಳಲ್ಲಿ ಅವಗಾಹಸ್ನಾನಾದಿಗಳನ್ನು ಮಾಡಿ ಉತ್ತಮವಾದ ಆನಂದವನ್ನು ಅನುಭವಿಸಿದರು.

ಪ್ರಯಯುರ್ಹಿ ತತೋ ರಾಜನ್ ಯೇನ ತೀರ್ಥಂ ತು ತತ್ ತದಾ ॥

ಅಲ್ಲಿಂದ ಆ ಋಷಿಗಳು ಹಿಂದೆ ವರ್ಣಿಸಿದ (ವಸಿಷ್ಠಾಪವಾಹ) ತೀರ್ಥಕ್ಕೆ ಬಂದರು.

ಅಥಾಗಮ್ಯ ಮಹಾಭಾಗಾಃ ತತ್ತೀರ್ಥಂ ದಾರುಣಂ ಪ್ರಭೋ ।
ದೃಷ್ಟ್ವಾ ತೋಯಂ ಸರಸ್ವತ್ಯಾಃ ಶೋಣಿತೇನ ಸಮುತ್ಥಿತಮ್ ॥೭॥
ಪೀಯಮಾನಂ ಚ ರಕ್ಷೋಭಿಃ ಬಹುಭೀ ರಾಜಸತ್ತಮ ॥೮॥

ರಾಜರಲ್ಲಿಯೇ ಉತ್ತಮನೇ! ಮಹಾತ್ಮರಾದ ಅವರು ಆ ಘೋರವಾದ ತೀರ್ಥವನ್ನು ನೋಡಿದರು. ಅಲ್ಲಿ ರಕ್ತದಿಂದ ಮಿಶ್ರವಾದ ಸರಸ್ವತಿಯ ನೀರನ್ನು ಅನೇಕ ರಾಕ್ಷಸರು ಕುಡಿಯುತ್ತಿರುವುದನ್ನೂ ನೋಡಿದರು.

ತಾನ್ ದೃಷ್ಟ್ವಾ ರಾಕ್ಷಸಾನ್ ರಾಜನ್ ಮುನಯಃ ಸಂಶಿತವ್ರತಾಃ ।
ಪರಿತ್ರಾಣೇ ಸರಸ್ವತ್ಯಾಃ ಪರಂ ಯತ್ನಂ ಪ್ರಚಕ್ರಿರೇ ॥೯॥

ಕಠಿಣವಾದ ತಪಸ್ಸನ್ನಾಚರಿಸುತ್ತಿದ್ದ ಆ ಋಷಿಗಳು ರಾಕ್ಷಸರನ್ನು ನೋಡಿ ಸರಸ್ವತಿಯನ್ನು ರಕ್ಷಿಸಲಿಕ್ಕಾಗಿ ಉತ್ತಮವಾದ ಪ್ರಯತ್ನವನ್ನು ಮಾಡಿದರು.

ತೇ ತು ಸರ್ವೇ ಮಹಾಭಾಗಾಃ ಸಮಾಗಮ್ಯ ಮಹಾವ್ರತಾಃ ।
ಆಹೂಯ ಸರಿತಾಂ ಶ್ರೇಷ್ಠಾಮಿದಂ ವಚನಮಬ್ರುವನ್ ॥೧೦॥

ಮಹಾನಿಯಮಗಳನ್ನು ಆಚರಿಸುತ್ತಿದ್ದ ಮಹಾತ್ಮರಾದ ಆ ಋಷಿಗಳು ನದಿಗಳಲ್ಲಿಯೇ ಶ್ರೇಷ್ಠಳಾದ ಸರಸ್ವತಿಯನ್ನು ಕರೆದು ಹೀಗೆ ಹೇಳುತ್ತಾರೆ.

ಋಷಯಃ

ಕಾರಣಂ ಬ್ರೂಹಿ ಕಲ್ಯಾಣಿ ಕಿಮರ್ಥಂ ತೇ ಹ್ರದೋ ಹ್ಯಯಮ್ ।
ಏವಮಗ್ರಾಹ್ಯತಾಂ ಯಾತಃ ಶ್ರುತ್ವಾ ಧ್ಯಾಸ್ಯಾಮಹೇ ವಯಮ್ ॥೧೧॥

ಋಷಿಗಳು– ಮಂಗಳಕರಳೆ! ನಿನ್ನಲ್ಲಿರುವ ಈ ನೀರಿನ ಸರೋವರವು ಏಕೆ ಬಳಸಲು ಅಯೋಗ್ಯವಾಯಿತು? ಅದಕ್ಕೆ ಕಾರಣವನ್ನು ಹೇಳು. ಅದನ್ನು ಕೇಳಿ ನಾವು ಏನು ಮಾಡಬೇಕೆಂಬುದನ್ನು ಚಿಂತಿಸುತ್ತೇವೆ.

ವೈಶಂಪಾಯನಃ

ತತಃ ಸಾ ಸರ್ವಮಾಚಷ್ಟ ಯಥಾವೃತ್ತಂ ಪ್ರವೇಪತೀ ।
ದುಃಖಿತಾಮಥ ತಾಂ ದೃಷ್ಟ್ವಾ ತ ಊಚುರ್ವೈ ತಪೋಧನಾಃ ॥೧೨॥

ವೈಶಂಪಾಯನ– ಆಗ ಸರಸ್ವತಿಯು ನಡುಗುತ್ತಾ ಎಲ್ಲವನ್ನೂ ನಡೆದ ಹಾಗೆ ಹೇಳಿದಳು. ಅಳುತ್ತಿರುವ ಸರಸ್ವತಿಯನ್ನು ನೋಡಿ ತಪಸ್ವಿಗಳು ಹೀಗೆ ಹೇಳುತ್ತಾರೆ.

ಋಷಯಃ

ಕಾರಣಂ ಶ್ರುತಮಸ್ಮಾಭಿಃ ಶಾಪಶ್ಚೈವ ಶ್ರುತೋಽನಘೇ ।
ಕರಿಷ್ಯಾಮಸ್ತು ಯತ್ಪ್ರಾಪ್ತಂ ಸರ್ವ ಏವ ತಪೋಧನಾಃ ॥೧೩॥

ಋಷಿಗಳು– ಪಾಪದೂರಳೇ! ಹೀಗಾಗಿರುವುದಕ್ಕೆ ಕಾರಣವನ್ನು ನಾವು ತಿಳಿದುಕೊಂಡೆವು. ನಿನಗೆ ಬಂದಿರುವ ಶಾಪದ ಬಗ್ಗೆಯೂ ತಿಳಿದುಕೊಂಡೆವು. ನಾವೆಲ್ಲಾ ತಪಸ್ವಿಗಳು ಏನನ್ನು ಮಾಡಬೇಕೋ ಅದನ್ನು ಮಾಡುತ್ತೇವೆ.

ವೈಶಂಪಾಯನಃ

ಏವಮುಕ್ತ್ವಾ ಸರಿಚ್ಛ್ರೇಷ್ಠಾಮೂಚುಸ್ತೇಽಥ ಪರಸ್ಪರಮ್ ॥೧೪॥

ವೈಶಂಪಾಯನ– ಸರಸ್ವತಿನದಿಗೆ ಹೀಗೆ ಹೇಳಿ ಆ ಋಷಿಗಳು ಪರಸ್ಪರವಾಗಿ ಮಾತನಾಡಿಕೊಂಡರು.

ಋಷಯಃ

ವಿಮೋಕ್ಷಯಾಮಹೇ ಸರ್ವೇ ಶಾಪಾದೇನಾಂ ಸರಸ್ವತೀಮ್ ॥೧೫॥

ಋಷಿಗಳು– ಈ ಸರಸ್ವತಿಯನ್ನು ಶಾಪದಿಂದ ಬಿಡುಗಡೆಗೊಳಿಸೋಣ.

ವೈಶಂಪಾಯನಃ

ತೇ ಸರ್ವೇ ಬ್ರಾಹ್ಮಣಾ ರಾಜಂಸ್ತಪೋಭಿರ್ನಿಯಮೈಸ್ತಥಾ ।
ಉಪವಾಸೈಶ್ಚ ವಿವಿಧೈರ್ಯಮೈಃ ಕಷ್ಟವ್ರತೈಸ್ತಥಾ ॥೧೬॥

ಆರಾಧ್ಯ ಪಶುಭರ್ತಾರಂ ಮಹಾದೇವಂ ಜಗತ್ಪತಿಮ್ ।
ಮೋಕ್ಷಯಾಮಾಸುಸ್ತಾಂ ದೇವೀಂ ಸರಿಚ್ಛ್ರೇಷ್ಠಾಂ ಸರಸ್ವತೀಮ್ ॥೧೭॥

ವೈಶಂಪಾಯನ– ರಾಜನೇ! ಆ ಬ್ರಾಹ್ಮಣರೆಲ್ಲರೂ ತಪಸ್ಸುಗಳಿಂದ, ನಿಯಮಗಳಿಂದ, ಉಪವಾಸಗಳಿಂದ, ಬೇರೆ ಬೇರೆ ರೀತಿಯ ನಿಗ್ರಹಗಳಿಂದ, ಕಠಿಣವಾದ ವ್ರತಗಳಿಂದ ಜಗತ್ಸ್ವಾಮಿಯಾದ, ನಂದಿವಾಹನನಾದ ರುದ್ರನನ್ನು ಆರಾಧಿಸಿದರು. ತನ್ಮೂಲಕವಾಗಿ ಉತ್ತಮನದಿಯಾದ ಸರಸ್ವತಿಯನ್ನು ಶಾಪದಿಂದ ಬಿಡುಗಡೆಗೊಳಿಸಿದರು.

ತೇಷಾಂ ತು ಸಾ ಪ್ರಭಾವೇಣ ಪ್ರಕೃತಿಸ್ಥಾ ಸರಸ್ವತೀ ।
ಪ್ರಸನ್ನಸಲಿಲಾ ಜಜ್ಞೇ ಯಥಾ ಪೂರ್ವಂ ತಥೈವ ಹಿ ।
ನಿರ್ಮುಕ್ತಾ ಚ ಸರಿಚ್ಛ್ರೇಷ್ಠಾ ವಿಬಭೌ ಸಾ ಯಥಾ ಪುರಾ ॥೧೮॥

ಅವರ ಪ್ರಭಾವದಿಂದ ಸರಸ್ವತಿಯು ತನ್ನ ಮೂಲರೂಪವನ್ನು ಪಡೆದಳು. ಹಿಂದಿನ ಹಾಗೆಯೇ ಶುಭ್ರವಾದ ನೀರನ್ನು ಹರಿಸತೊಡಗಿದಳು. ರಕ್ತದಿಂದ ಮುಕ್ತಳಾದ ಸರಸ್ವತಿಯು ಹಿಂದಿನ ಹಾಗೆಯೇ ಶೋಭಿಸಿದಳು.

ದೃಷ್ಟ್ವಾ ತೋಯಂ ಸರಸ್ವತ್ಯಾ ಮುನಿಭಿಸ್ತೈಸ್ತಥಾ ಕೃತಮ್ ।
ತಾನೇವ ಶರಣಂ ಜಗ್ಮೂ ರಾಕ್ಷಸಾಃ ಕ್ಷುಧಿತಾಸ್ತಥಾ ॥೧೯॥

ಮುನಿಗಳು ಶುದ್ಧಗೊಳಿಸಿದ ಸರಸ್ವತಿಯ ನೀರನ್ನು ನೋಡಿದ ರಾಕ್ಷಸರು ಅದೇ ಋಷಿಗಳನ್ನು ಶರಣು ಹೊಂದಿದರು.

ಕೃತ್ವಾಂಜಲಿಂ ತತೋ ರಾಜನ್ ರಾಕ್ಷಸಾಃ ಕ್ಷುಧಯಾऽರ್ದಿತಾಃ ।
ಊಚುಸ್ತಾನ್ ವೈ ಮುನೀನ್ ಸರ್ವಾನ್ ಕೃಪಾಯುಕ್ತಾನ್ ಪುನಃ ಪುನಃ ॥

ರಾಜನೇ! ಹಸಿವಿನಿಂದ ಕಂಗೆಟ್ಟ ರಾಕ್ಷಸರು ಕೈಮುಗಿದುಕೊಂಡು ಆ ದಯಾಮಯರಾದ ಆ ಎಲ್ಲಾ ಋಷಿಗಳಿಗೆ ಮತ್ತೆ ಮತ್ತೆ ಹೀಗೆ ಹೇಳುತ್ತಾರೆ.

ವಯಂ ಚ ಕ್ಷುಧಿತಾಶ್ಚೈವ ಧರ್ಮಾದ್ದೀನಾಶ್ಚ ಶಾಶ್ವತಾತ್ ।
ನ ಚ ನಃ ಕಾಮಕಾರೋಽಯಂ ಯದ್ವಯಂ ಪಾಪಕಾರಿಣಃ ॥೨೧॥

ನಾವು ಹಸಿದಿದ್ದೇವೆ. ನಾವು ನಿತ್ಯವೂ ಧರ್ಮಬಾಹಿರರಾಗಿದ್ದೇವೆ. ಪಾಪಿಗಳಾದ ನಾವು ನಮ್ಮ ಹಸಿವನ್ನು ನಮ್ಮಿಷ್ಟದಂತೆ ಪರಿಹಾರಮಾಡಿಕೊಳ್ಳಲು ಸಮರ್ಥರಾಗುವುದಿಲ್ಲ.

ಯುಷ್ಮಾಕಂ ಚಾಪ್ರಸಾದೇನ ದುಷ್ಕೃತೇನ ಚ ಕರ್ಮಣಾ ।
ಪಕ್ಷೋಽಯಂ ವರ್ಧತೇಽಸ್ಮಾಕಂ ಯತಃ ಸ್ಮೋ ಬ್ರಹ್ಮರಾಕ್ಷಸಾಃ ॥೨೨॥

ನಾವು ಸ್ವಭಾವತಃ ಒಳ್ಳೆಯವರಾದರೂ ಬ್ರಾಹ್ಮಣರನ್ನು, ಬ್ರಹ್ಮಜ್ಞಾನಿಗಳನ್ನು ಧಿಕ್ಕರಿಸಿದ್ದರಿಂದ ಬ್ರಹ್ಮರಾಕ್ಷಸರಾಗಿದ್ದೇವೆ. ನಮ್ಮ ಕೆಟ್ಟ ಕೆಲಸಗಳಿಂದಾಗಿ ನೀವು ನಮ್ಮ ಮೇಲೆ ಕೋಪಿಸಿಕೊಂಡಿದ್ದರಿಂದ ನಮ್ಮ ಗುಂಪು ಬೆಳೆಯುತ್ತಲೇ ಇದೆ.

ಯೋಷಿತಾಂ ಚೈವ ಪಾಪೇನ ಯೋನಿದೋಷಕೃತೇನ ಚ ॥೨೩॥

ಏವಂ ಹಿ ವೈಶ್ಯಶೂದ್ರಾಣಾಂ ಕ್ಷತ್ರಿಯಾಣಾಂ ತಥೈವ ಚ ।
ಯೇ ಬ್ರಾಹ್ಮಣಾನ್ ಪ್ರದ್ವಿಷಂತಿ ತೇ ಭವಂತೀಹ ರಾಕ್ಷಸಾಃ ॥೨೪॥

ಸ್ತ್ರೀಯರ ವಿಷಯದಲ್ಲಿ ಪಾಪಮಾಡುವುದರಿಂದ, ಯೋನಿಸಂಬಂಧಿ ತಪ್ಪುಗಳಿಂದ ನಾವು ಬ್ರಹ್ಮರಾಕ್ಷಸರಾಗಿದ್ದೇವೆ. ಹಾಗೆಯೇ ಕ್ಷತ್ರಿಯ, ವೈಶ್ಯ, ಶೂದ್ರರಲ್ಲಿಯೂ ಯಾರು ಬ್ರಾಹ್ಮಣರನ್ನು ದ್ವೇಷ ಮಾಡುತ್ತಾರೆಯೋ ಅವರೆಲ್ಲರೂ ರಾಕ್ಷಸರಾಗುತ್ತಾರೆ.

ಶಕ್ತಿಮಂತೋಽಪಿ ಯೇ ಕೇಚಿದಾಶ್ರಿತಾನಾಂ ಚ ರಕ್ಷಣಮ್ ।
ನ ಕುರ್ವಂತಿ ಮನುಷ್ಯಾಸ್ತೇ ಸಂಭವಂತೀಹ ರಾಕ್ಷಸಾಃ ॥೨೫॥

ತಮ್ಮನ್ನು ಆಶ್ರಯಿಸಿಕೊಂಡಿರುವ ಹೆಂಡತಿ-ಮಕ್ಕಳು, ತಂದೆ-ತಾಯಿ ಮೊದಲಾದವರನ್ನು ಸಲಹುವ ಶಕ್ತಿಯು ತಮ್ಮಲ್ಲಿ ಇದ್ದರೂ ಯಾರು ಸಲಹುವುದಿಲ್ಲವೋ ಅಂತಹ ಮನುಷ್ಯರು ರಾಕ್ಷಸರಾಗುತ್ತಾರೆ.

ಆಚಾರ್ಯಮೃತ್ವಿಜಂ ಚೈವ ಗುರುಂ ವೃದ್ಧಜನಂ ತಥಾ ।
ಪ್ರಾಣಿನೋ ಯೇಽವಮನ್ಯಂತೇ ತೇ ಭವಂತೀಹ ರಾಕ್ಷಸಾಃ ॥೨೬॥

ಆಚಾರ್ಯರನ್ನು, ಪುರೋಹಿತರನ್ನು, ಗುರುಗಳನ್ನು, ಹಿರಿಯರನ್ನು ಯಾವ ಜೀವರು ಅವಮಾನ ಮಾಡುತ್ತಾರೆಯೋ ಅವರು ರಾಕ್ಷಸರಾಗುತ್ತಾರೆ..

ತತ್ಕುರುಧ್ವಮಿಹಾಸ್ಮಾಕಂ ತಾರಣಂ ದ್ವಿಜಸತ್ತಮಾಃ ।
ಶಕ್ತಾ ಭವಂತಃ ಸರ್ವೇಷಾಂ ಲೋಕಾನಾಮಪಿ ತಾರಣೇ ॥೨೭॥

ಬ್ರಾಹ್ಮಣೋತ್ತಮರೇ! ಆದ್ದರಿಂದ ನಮ್ಮನ್ನು ಈ ಕಷ್ಟಗಳಿಂದ ಪಾರು ಮಾಡಿಸಿ. ನೀವು ಎಲ್ಲಾ ಲೋಕಗಳನ್ನೂ ದಾಟಿಸಲು ಸಮರ್ಥರಾಗಿದ್ದೀರಿ.

ತೇಷಾಂ ತು ವಚನಂ ಶ್ರುತ್ವಾ ತುಷ್ಟುವುಸ್ತಾಂ ಮಹಾನದೀಮ್ ।
ಮೋಕ್ಷಾರ್ಥಂ ರಕ್ಷಸಾಂ ತೇಷಾಮೂಚುಃ ಪ್ರಯತಮಾನಸಾಃ ॥೨೮॥

ಅವರ ಮಾತನ್ನು ಕೇಳಿದ ಋಷಿಗಳು ರಾಕ್ಷಸರ ಬ್ರಹ್ಮರಾಕ್ಷಸತ್ವವು ಕಳೆಯಲಿಕ್ಕಾಗಿ ಮಹಾನದಿಸರಸ್ವತಿಯನ್ನು ಸ್ತುತಿಸಿದರು. ಭಕ್ತಿಯಿಂದ ಸರಸ್ವತಿಗೆ ಹೀಗೆ ಹೇಳಿದರು.

ಋಷಯಃ

ಹುತಂ ಕೀಟಾವಪನ್ನಂ ಚ ಯಚ್ಚೋಚ್ಛಿಷ್ಟಾಚಿತಂ ಭವೇತ್ ।
ಸಕೇಶಮವಧೂತಂ ಚ ರುದಿತೋಪಹತಂ ಚ ಯತ್ ॥೨೯॥

ಶ್ವಭಿಃ ಸಂಸೃಷ್ಟಮನ್ನಂ ಚ ಭಾಗೋಽಸೌ ರಕ್ಷಸಾಮಿಹ ।
ತಸ್ಮಾಜ್ಜ್ಞಾತ್ವಾ ಸದಾ ವಿದ್ವಾನೇತಾನ್ ಯತ್ನಾದ್ ವಿವರ್ಜಯೇತ್ ।
ರಾಕ್ಷಸಾನ್ನಮಸೌ ಭುಂಕ್ತೇ ಯೋ ಭುಂಕ್ತೇ ಹ್ಯನ್ನಮೀದೃಶಮ್ ॥೩೦॥

ಋಷಿಗಳು– ಬೆಂಕಿಯಿಂದ ಸುಟ್ಟುಹೋದ ಪದಾರ್ಥಗಳು, ಕೀಟಗಳು ಬಿದ್ದ ಪದಾರ್ಥಗಳು, ತಿಂದು ಉಗುಳಿದ ಪದಾರ್ಥಗಳು, ಯಾವ ಪದಾರ್ಥಗಳಲ್ಲಿ ತಲೆಗೂದಲು ಬಿದ್ದಿರುತ್ತದೆಯೋ, ಕಣ್ಣೀರು ಯಾವ ಪದಾರ್ಥಗಳಲ್ಲಿ ಬಿದ್ದಿರುತ್ತದೆಯೋ, ನಾಯಿ ಮುಟ್ಟಿದ ಪದಾರ್ಥಗಳು, ಇವೆಲ್ಲವೂ ರಾಕ್ಷಸರಿಗೆ ಸಲ್ಲುವ ಭಾಗವಾಗಲಿ. ಆದ್ದರಿಂದ ಜ್ಞಾನಿಯಾದವನು ಪ್ರಯತ್ನಪೂರ್ವಕವಾಗಿ ಇಂತಹ ಪದಾರ್ಥಗಳನ್ನು ಬಿಡಬೇಕು. ಇಂತಹ ಅನ್ನವನ್ನು ತಿನ್ನುವವನು ರಾಕ್ಷಸಾನ್ನವನ್ನು ತಿಂದವನಾಗುತ್ತಾನೆ.

ಶೋಧಯಿತ್ವಾ ತತಸ್ತೀರ್ಥಮೃಷಯಸ್ತೇ ತಪೋಧನಾಃ ।
ಮೋಕ್ಷಾರ್ಥಂ ರಾಕ್ಷಸಾನಾಂ ಚ ನದೀಂ ತಾಂ ಪ್ರತ್ಯಚೋದಯನ್ ॥

ತಪೋನಿಧಿಗಳಾದ ಋಷಿಗಳು ಆ ತೀರ್ಥವನ್ನು ಶುದ್ಧೀಕರಿಸಿ, ರಾಕ್ಷಸರ ಬ್ರಹ್ಮರಾಕ್ಷಸತ್ವದ ಮೋಚನೆಗಾಗಿ ನದಿಯನ್ನು ಪ್ರಾರ್ಥಿಸಿ ಪ್ರೇರೇಪಿಸುತ್ತಾರೆ.

ಮಹರ್ಷೀಣಾಂ ಮತಂ ಜ್ಞಾತ್ವಾ ತತಃ ಸಾ ಸರಿತಾಂ ವರಾ ।
ಅರುಣಾಮಾನಯಾಮಾಸ ಸ್ವಾಂ ತನುಂ ಪುರುಷರ್ಷಭ ॥೩೨॥

ಮಹರ್ಷಿಗಳ ಅಭಿಪ್ರಾಯವನ್ನು ತಿಳಿದ ಶ್ರೇಷ್ಠನದಿಯಾದ ಸರಸ್ವತಿಯು ಗೋದಾವರೀನದಿಯ ಸಮೀಪದಲ್ಲಿದ್ದ ಅರುಣಾ ಎಂಬ ನದಿಯನ್ನು ತನ್ನ ಕಡೆಗೆ ಕರೆತಂದಳು. (ಅರುಣಾನದಿಯೊಡನೆ ಸಂಗಮಗೊಂಡಳು. ಅರುಣಾ ಸಂಗಮದಿಂದಲೇ ತನಗೆ ಬ್ರಹ್ಮಹತ್ಯಾಪಾಪಪರಿಹಾರಕಶಕ್ತಿಯನ್ನು ತಂದುಕೊಂಡಳು.)

ತಸ್ಯಾಂತೇ ರಾಕ್ಷಸಾಃ ಸ್ನಾತ್ವಾ ತನೂಸ್ಯಕ್ತ್ವಾ ದಿವಂ ಗತಾಃ ।
ಅರುಣಾಯಾಂ ಮಹಾರಾಜ ಬ್ರಹ್ಮವಧ್ಯಾಪಹಾ ಹಿ ಸಾ ॥೩೩॥

ಆ ಅರುಣಾನದಿಯ ಸಂಗಮದಲ್ಲಿ ರಾಕ್ಷಸರು ಸ್ನಾನವನ್ನು ಮಾಡಿ, ತಮ್ಮ ರಾಕ್ಷಸಶರೀರವನ್ನು ಬಿಟ್ಟು ಸ್ವರ್ಗಕ್ಕೆ ಹೋದರು. ಮಹಾರಾಜನೇ! ಆ ಅರುಣಾನದಿಯು ಬ್ರಹ್ಮಹತ್ಯಾದೋಷವನ್ನು ನಾಶಮಾಡುವವಳೆಂದು ಪ್ರಸಿದ್ಧಳಾಗಿದ್ದಾಳೆ.

ಏತಮರ್ಥಮಭಿಜ್ಞಾಯ ದೇವರಾಜಃ ಶತಕ್ರತುಃ ।
ತಸ್ಮಿಂಸ್ತೀರ್ಥೇ ವರೇ ಸ್ನಾತ್ವಾ ವಿಮುಕ್ತಃ ಪಾಪ್ಮನಾ ಕಿಲ ॥೩೪॥

ಈ ವಿಷಯವನ್ನು ತಿಳಿದ, ದೇವರಾಜನಾದ ಪುರಂದರನು ಆ ತೀರ್ಥದಲ್ಲಿ ಸ್ನಾನಮಾಡಿ ಬ್ರಹ್ಮಹತ್ಯಾಪಾಪದಿಂದ ಮುಕ್ತನಾದನು.

ಜನಮೇಜಯಃ

ಕಿಮರ್ಥಂ ಭಗವಾನ್ ಶಕ್ರೋ ಬ್ರಹ್ಮವಧ್ಯಾಮವಾಪ್ತವಾನ್ ।
ಕಥಮಸ್ಮಿಂಶ್ಚ ತೀರ್ಥೇ ವೈ ಆಪ್ಲುತ್ಯಾಕಲ್ಮಷೋಽಭವತ್ ॥೩೫॥

ಜನಮೇಜಯ– ಪೂಜ್ಯನಾದ ಇಂದ್ರನು ಯಾವ ಕಾರಣದಿಂದ ಬ್ರಹ್ಮಹತ್ಯಾದೋಷವನ್ನು ಪಡೆದುಕೊಂಡನು? ಈ ತೀರ್ಥದಲ್ಲಿ ಸ್ನಾನಮಾಡಿ ಹೇಗೆ ಆ ಪಾಪವನ್ನು ಕಳೆದುಕೊಂಡು ಪರಿಶುದ್ಧನಾದನು?

ವೈಶಂಪಾಯನಃ

ಶೃಣುಷ್ವೈತದುಪಾಖ್ಯಾನಂ ಯಥಾವೃತ್ತಂ ಜನೇಶ್ವರ ।
ಯಥಾ ಬಿಭೇದ ಸಮಯಂ ನಮುಚೇರ್ವಾಸವಃ ಪುರಾ ॥೩೬॥

ವೈಶಂಪಾಯನ– ಜನಾಧಿಪತಿಯೇ! ಈ ಘಟನೆಯನ್ನು ಹೇಗೆ ನಡೆದಿದೆಯೋ ಹಾಗೆ ಹೇಳುತ್ತೇನೆ, ಕೇಳು. ಹಿಂದೆ ನಮುಚಿಗೂ ಇಂದ್ರನಿಗೂ ಏರ್ಪಟ್ಟಿದ್ದ ನಿಬಂಧನೆಗಳು ಮುರಿದುಬಿದ್ದವು.

ನಮುಚಿರ್ವಾಸವಾದ್ ಭೀತಃ ಸೂರ್ಯರಶ್ಮಿಂ ಸಮಾವಿಶತ್ ।
ತೇನೇಂದ್ರಃ ಸಖ್ಯಮಕರೋತ್ ಸಮಯಂ ಚೇದಮಬ್ರವೀತ್ ॥೩೭॥

ಅದಕ್ಕಿಂತಲೂ ಹಿಂದೆ ನಮುಚಿಯು ಇಂದ್ರನಿಗೆ ಹೆದರಿ ಸೂರ್ಯರಶ್ಮಿಗಳ ಒಳಗೆ ಪ್ರವೇಶಿಸಿದನು. ಆಗ ಇಂದ್ರನು ಅವನೊಡನೆ ಸ್ನೇಹವನ್ನು ಮಾಡಿಕೊಂಡು ಒಂದು ಒಪ್ಪಂದನಿಯಮವನ್ನು ಹೇಳಿದನು.

ನ ಚಾದ್ರೇಣ ನ ಶುಷ್ಕೇಣ ನ ರಾತ್ರೌ ನಾಪಿ ಚಾಹನಿ ।
ವಧಿಷ್ಯಾಮ್ಯಸುರಶ್ರೇಷ್ಠ ಸಖೇ ಸತ್ಯೇನ ತೇ ಶಪೇ ॥೩೮॥

ಅಸುರೋತ್ತಮನೇ! ಗೆಳೆಯನೇ! ನಿನ್ನನ್ನು ನಾನು ಒದ್ದೆಯಾದ ಅಥವಾ ಒಣಗಿದ ಅಸ್ತ್ರದಿಂದ ಕೊಲ್ಲುವುದಿಲ್ಲ. ರಾತ್ರಿ ಅಥವಾ ಹಗಲು ಕೊಲ್ಲುವುದಿಲ್ಲ. ಇದು ನನ್ನ ಪ್ರತಿಜ್ಞೆ.

ಏವಂ ಸ ಕೃತ್ವಾ ಸಮಯಂ ಸೃ(ದೃ)ಷ್ಟ್ವಾ ನೀಹಾರಮೀಶ್ವರಃ ।
ಚಿಚ್ಛೇದಾಸ್ಯ ಶಿರೋ ರಾಜನ್ನಪಾಂ ಫೇನೇನ ವಾಸವಃ ॥೩೯॥

ರಾಜನೇ! ಹೀಗೆ ಪ್ರತಿಜ್ಞೆಯನ್ನು ಮಾಡಿಕೊಂಡು ಬಹಳವಾದ ಮಂಜನ್ನು ಸೃಷ್ಟಿಸಿದನು. ಆಗ ಸೂರ್ಯನ ಕಿರಣಗಳು ಮಂದವಾಗುವುದರಿಂದ ಹಗಲೂ ಅಲ್ಲ, ರಾತ್ರಿಯೂ ಆಗಿರುವುದಿಲ್ಲ. ಇಂದ್ರನು ನೀರಿನಿಂದ ಎದ್ದ ನೊರೆಯಿಂದ ನಮುಚಿಯ ತಲೆಯನ್ನು ಕಡಿದನು.

ತಚ್ಛಿರೋ ನಮುಚೇಶ್ಛಿನ್ನಂ ಪೃಷ್ಠತಃ ಶಕ್ರಮನ್ವಿಯಾತ್ ।
ಭೋಭೋ ಮಿತ್ರಹ ಪಾಪೇತಿ ಬ್ರುವಾಣಂ ಶಕ್ರಮಂತಿಕಾತ್ ॥೪೦॥

ತುಂಡಾದ ನಮುಚಿಯ ತಲೆಯು ಇಂದ್ರನನ್ನು ಹಿಂಬಾಲಿಸಿತು. ಎಲೈ ಮಿತ್ರದ್ರೋಹಿಯೇ! ಪಾಪಿಯೆ! ಎಂದು ಹೇಳುತ್ತಾ ಇಂದ್ರನ ಹತ್ತಿರ ಬಂದಿತು.

ಏವಂ ಸ ಶಿರಸಾ ತೇನ ಚೋದ್ಯಮಾನಃ ಪುನಃ ಪುನಃ ।
ಪಿತಾಮಹಾಯ ಸಂತಪ್ತ ಏತಮರ್ಥಂ ನ್ಯವೇದಯತ್ ॥೪೧॥

ಹೀಗೆ ನಮುಚಿಯ ತಲೆಯು ಪದೇ ಪದೇ ಇಂದ್ರನನ್ನು ಪ್ರಶ್ನಿಸುತ್ತಿದ್ದಾಗ ಬಹಳ ದುಃಖಕ್ಕೊಳಗಾದ ಇಂದ್ರನು ಈ ವಿಷಯವನ್ನು ಚತುರ್ಮುಖಬ್ರಹ್ಮನಲ್ಲಿ ಹೇಳಿಕೊಂಡನು.

ತಮಬ್ರವೀಲ್ಲೋಕಗುರುರರುಣಾಯಾಂ ಯಥಾವಿಧಿ ।
ಇಷ್ಟ್ವಾಪಸ್ಪ್ಲಹ ದೇವೇಂದ್ರ ತೀರ್ಥೇ ಪಾಪಭಯಾಪಹೇ ॥೪೨॥

ಏಷಾ ಪುಣ್ಯಜಲಾ ಶಕ್ರ ಕೃತಾ ಮುನಿಭಿರೇವ ತು ।
ನಿಗೂಢಮಸ್ಯಾಗಮನಮಿಹಾಸೀತ್ ಪೂರ್ವಮೇವ ತು ॥೪೩॥

ತತೋಽಭ್ಯೇತ್ಯಾರುಣಾಂ ದೇವೀಂ ಪ್ಲಾವಯಾಮಾಸ ವಾರಿಣಾ ।
ಸರಸ್ವತ್ಯಾರುಣಾಯಾಶ್ಚ ಪುಣ್ಯೋಽಯಂ ಸಂಗಮೋ ಮಹಾನ್ ॥೪೪॥

ಇಹ ತ್ವಂ ಯಜ ದೇವೇಂದ್ರ ದದ ದಾನಾನ್ಯನೇಕಶಃ ।
ಅತ್ರಾಪ್ಲುತ್ಯ ಸುಘೋರಾತ್ತ್ವಂ ಪಾತಕಾದ್ ವಿಪ್ರಮೋಕ್ಷ್ಯಸೇ ॥೪೫॥

ಲೋಕಗುರುವಾದ ಚತುರ್ಮುಖನು, ಇಂದ್ರನಿಗೆ ದೇವೇಂದ್ರ! ಪಾಪಭಯವನ್ನು ಪರಿಹರಿಸುವ ಅರುಣಾನದಿಯ ತೀರ್ಥದಲ್ಲಿ ವಿಧಿವತ್ತಾಗಿ ಯಾಗವನ್ನು ಮಾಡಿ, ಆಚಮನ-ಸ್ನಾನಾದಿಗಳನ್ನು ಮಾಡು. ಇಂದ್ರನೇ! ಈ ಪುಣ್ಯಜಲವನ್ನು ಮುನಿಗಳೇ ಮಾಡಿದ್ದಾರೆ. ಅರುಣಾನದಿಯ ಆಗಮನವು ಗುಪ್ತವಾಗಿ ಹಿಂದೆಯೇ ಇಲ್ಲಿ ಇತ್ತು. ಅನಂತರ ಸರಸ್ವತಿಯು ಅರುಣಾದೇವಿಯನ್ನೂ ತನ್ನ ಪ್ರವಾಹದೊಡನೆ ಹರಿಸಿದಳು. ಹೀಗೆ ಅರುಣಾ-ಸರಸ್ವತಿಯರ ಈ ಸಂಗಮವು ಬಹಳ ಪುಣ್ಯಪ್ರದವಾದುದು. ದೇವೇಂದ್ರನೇ! ಇಲ್ಲಿ ನೀನು ಯಾಗವನ್ನು ಮಾಡು. ಅನೇಕ ದಾನಗಳನ್ನು ಮಾಡು.

ಇಲ್ಲಿ ಸ್ನಾನವನ್ನು ಮಾಡಿ, ಬಹಳ ಭಯಾನಕವಾದ ಪಾಪದಿಂದ ಬಿಡುಗಡೆಯನ್ನು ಹೊಂದುವಿ.

ಇತ್ಯುಕ್ತಃ ಸ ಸರಸ್ವತ್ಯಾಃ ಕುಂಜೇ ವೈ ಜನಮೇಜಯ ।
ಇಷ್ಟ್ವಾ ಯಥಾವದ್ ಬಲಭಿದರುಣಾಯಾಮುಪಾಸ್ಪೃಶತ್ ॥೪೬॥

ಜನಮೇಜಯನೇ! ಬ್ರಹ್ಮದೇವನು ಹೀಗೆ ಹೇಳಿದಾಗ, ಇಂದ್ರನು ಸರಸ್ವತಿಯ ಈ ಕುಂಜದಲ್ಲಿ ಯಾಗವನ್ನು ಮಾಡಿ ಅರುಣಾನದಿಯಲ್ಲಿ ಸ್ನಾನವನ್ನು ಮಾಡಿದನು.

ಸ ಮುಕ್ತಃ ಪಾಪ್ಮನಾ ತೇನ ಬ್ರಹ್ಮವಧ್ಯಾಕೃತೇನ ಚ ।
ಜಗಾಮ ಸಂಹೃಷ್ಟಮನಾಸ್ತ್ರಿದಿವಂ ತ್ರಿದಶೇಶ್ವರಃ ॥೪೭॥

ದೇವೇಶನಾದ ಇಂದ್ರನು ಬ್ರಹ್ಮಹತ್ಯಾಪಾಪವನ್ನು ಕಳೆದುಕೊಂಡು ಮನಃಸಂತೋಷವನ್ನು ಪಡೆದುಕೊಂಡು ಸ್ವರ್ಗಕ್ಕೆ ಹೋದನು.

ಶಿರಸ್ತಚ್ಚಾಪಿ ನಮುಚೇಸ್ತತ್ರೈವಾಪ್ಲುತ್ಯ ಭಾರತ ।
ಲೋಕಾನ್ ಕಾಮದುಘಾನ್ ಪ್ರಾಪ್ತಮಕ್ಷಯಾನ್ ರಾಜಸತ್ತಮ ॥೪೮॥

ರಾಜೋತ್ತಮನೇ! ಭರತಕುಲೋದ್ಭವನೇ! ನಮುಚಿಯ ತಲೆಯಾದರೂ ಆ ತೀರ್ಥದಲ್ಲಿ ಮುಳುಗಿ ಕಾಮಿಸಿದ್ದನ್ನು ಕೊಡುವ ಶಾಶ್ವತವಾದ ಲೋಕಕ್ಕೆ ಹೋಯಿತು.

ವೈಶಂಪಾಯನಃ

ತತ್ರಾಪ್ಯುಪಸ್ಪೃಶ್ಯ ಬಲೋ ಮಹಾತ್ಮಾ
ದತ್ತ್ವಾ ಚ ದಾನಾನಿ ಪೃಥಗ್ವಿಧಾನಿ ।
ಅವಾಪ್ಯ ಧರ್ಮಂ ಪರಮಾರ್ಯಕರ್ಮಾ
ಜಗಾಮ ಸೋಮಸ್ಯ ಮಹತ್ತುತೀರ್ಥಮ್ ॥೪೯॥

ವೈಶಂಪಾಯನ– ಮಹಾತ್ಮನಾದ ಬಲರಾಮನು ಅಲ್ಲಿಯೂ ಸ್ನಾನ ಆಚಮನಾದಿಗಳನ್ನು ಮಾಡಿ ಅನೇಕ ರೀತಿಯ ದಾನಗಳನ್ನು ಮಾಡಿ, ಬಹಳ ಧರ್ಮ ಸಂಪಾದನೆಯನ್ನು ಮಾಡಿಕೊಂಡನು. ಉತ್ತಮವಾದ ಕಾರ್ಯವನ್ನು ಮಾಡುವ ಬಲರಾಮನು ಅಲ್ಲಿಂದ ಉತ್ತಮವಾದ ಸೋಮತೀರ್ಥಕ್ಕೆ ಹೋದನು.

ಯತ್ರಾಯಜದ್ ರಾಜಸೂಯೇನ ಸೋಮಃ
ಸಾಕ್ಷಾತ್ ಪುರಾ ವಿಧಿವತ್ ಪಾರ್ಥಿವೇಂದ್ರ ।
ಅತ್ರಿರ್ಧೀಮಾನ್ ಬ್ರಹ್ಮಪುತ್ರೋ ಬಭೂವ
ಹೋತಾ ಯಸ್ಮಿನ್ ಕ್ರತುಮುಖ್ಯೇ ಮಹಾತ್ಮಾ ॥೫೦॥

ರಾಜನೇ! ಆ ಸೋಮತೀರ್ಥದಲ್ಲಿ ಹಿಂದೆ ಸೋಮನು ತಾನೇ ಸ್ವತಃ ವಿಧಿ ಪ್ರಕಾರವಾಗಿ ರಾಜಸೂಯಯಾಗವನ್ನು ಮಾಡಿದ್ದನು. ಚತುರ್ಮುಖಬ್ರಹ್ಮನ ಮಗನಾದ ಮಹಾತ್ಮನಾದ ಜ್ಞಾನಿ ಅತ್ರಿಯು ಆ ಉತ್ತಮ ಯಾಗದಲ್ಲಿ ಹೋತೃವಾಗಿದ್ದನು.

ಯಸ್ಯಾಂತೇऽಭೂತ್ಸುಮಹದ್ ದಾನವಾನಾಂ
ದೈತೇಯಾನಾಂ ರಾಕ್ಷಸಾನಾಂ ಚ ದೇವೈಃ ।
ಸಂಗ್ರಾಮೋ ವೈ ತಾರಕಾಖ್ಯಃ ಸುತೀವ್ರೋ
ಯತ್ರ ಸ್ಕಂದಸ್ತಾರಕಾಖ್ಯಂ ಜಘಾನ ॥೫೧॥

ಈ ರಾಜಸೂಯಯಾಗದ ಕೊನೆಯಲ್ಲಿ ದಾನವರು, ದೈತ್ಯರು ಮತ್ತು ರಾಕ್ಷಸರು ಇವರಿಗೆ ದೇವತೆಗಳೊಡನೆ ದೊಡ್ಡದಾದ ಕಾದಾಟವು ಉಂಟಾಯಿತು. ಆ ಸಂಗ್ರಾಮಕ್ಕೆ ತಾರಕ ಎಂಬ ಹೆಸರು ಬಂತು. ಏಕೆಂದರೆ ಆ ಯುದ್ಧದಲ್ಲಿ ದೇವಸೇನಾನಿಯಾದ ಸ್ಕಂದನು ತಾರಕನೆಂಬ ಹೆಸರುಳ್ಳ ರಾಕ್ಷಸನನ್ನು ಕೊಂದನು.

ಸೈನಾಪತ್ಯಂ ಲಬ್ಧವಾನ್ ದೈವತಾನಾಂ
ಮಹಾಸೇನೋ ಯತ್ರ ದೈತ್ಯಾಂತಕರ್ತಾ ।
ಸಾಕ್ಷಾಚ್ಚೈವಂ ನ್ಯವಸತ್ ಕಾರ್ತಿಕೇಯಃ
ಸದಾ ಕುಮಾರೋ ಯತ್ರ ಸ ಪಕ್ಷರಾಜಃ ॥೫೨॥

ದೈತ್ಯನಾಶಕನಾದ ಮಹಾಸೇನ ಸ್ಕಂದನು ಇಲ್ಲಿಯೇ ದೇವತೆಗಳ ಸೇನಾಧಿಪತಿಯಾಗಿ ನಿಯುಕ್ತನಾದನು. ಈ ಉತ್ತಮವಾದ ಗೋಳಿಮರ ಇರುವ ಸ್ಥಳದಲ್ಲಿ ಕೃತ್ತಿಕಾಸುತ ಸ್ಕಂದನು ಕುಮಾರನಾಗಿ ಯಾವಾಗಲೂ ವಾಸಿಸುತ್ತಿರುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾರನೆಯ ಅಧ್ಯಾಯ

ಕುಮಾರನ ಉತ್ಪತ್ತಿಯ ವರ್ಣನೆ

ಜನಮೇಜಯಃ

ಸರಸ್ವತ್ಯಾಃ ಪ್ರಭಾವೋಽಯಮುಕ್ತಸ್ತೇ ದ್ವಿಜಸತ್ತಮ ।
ಕುಮಾರಸ್ಯಾಭಿಷೇಕಂ ತು ಬ್ರಹ್ಮನ್ನಾಖ್ಯಾತುಮರ್ಹಸಿ ॥೧॥

ಜನಮೇಜಯ– ಬ್ರಾಹ್ಮಣೋತ್ತಮನೇ! ಸರಸ್ವತಿಯ ಪ್ರಭಾವವನ್ನು ನನಗೆ ಹೇಳಿರುವಿ. ಬ್ರಹ್ಮಜ್ಞಾನಿಯೇ! ಸ್ಕಂದನ ಪಟ್ಟಾಭಿಷೇಕದ ಬಗ್ಗೆ ನನಗೆ ಹೇಳು.

ಯಸ್ಮಿನ್ ದೇಶೇ ಚ ಕಾಲೇ ಚ ಯಥಾ ಚ ವದತಾಂ ವರ ।
ಯೈಶ್ಚಾಭಿಷಿಕ್ತೋ ಭಗವಾನ್ ವಿಧಿನಾ ಯೇನ ಚ ಪ್ರಭುಃ ॥೨॥

ವಕ್ತೃಗಳಲ್ಲಿಯೇ ಶ್ರೇಷ್ಠನಾದವನೇ! ಸಮರ್ಥನಾದ ಭಗವಾನ್ ಸ್ಕಂದನ ಪಟ್ಟಾಭಿಷೇಕವು ಯಾವ ದೇಶದಲ್ಲಿ ನಡೆಯಿತು? ಯಾವಾಗ ನಡೆಯಿತು? ಯಾರು ಮಾಡಿದರು? ಯಾವ ವಿಧಿ-ವಿಧಾನಗಳಿಂದ ನಡೆಯಿತು?

ಸ್ಕಂದೋ ಯಥಾ ಚ ದೈತ್ಯಾನಾಮಕರೋದ್ ಕದನಂ ಮಹತ್ ।
ತಥಾ ಮೇ ಸರ್ವಮಾಚಕ್ಷ್ವ ಪರಂ ಕೌತೂಹಲಂ ಹಿ ಮೇ ॥೩॥

ಸ್ಕಂದನು ದೈತ್ಯರೊಡನೆ ಹೇಗೆ ದೊಡ್ಡದಾದ ಕಾದಾಟವನ್ನು ಮಾಡಿದನು? ನಾನು ಇವುಗಳ ಬಗ್ಗೆ ತುಂಬಾ ಕುತೂಹಲವುಳ್ಳವನಾಗಿದ್ದೇನೆ. ಇದೆಲ್ಲವನ್ನೂ ಹೇಳು.

ವೈಶಂಪಾಯನಃ

ಕುರುವಂಶಸ್ಯ ಸದೃಶಂ ಕೌತೂಹಲಮಿದಂ ತವ ।
ಹರ್ಷಮುತ್ಪಾದಯತ್ಯೇವ ವಚೋ ಮೇ ಜನಮೇಜಯ ॥೪॥

ವೈಶಂಪಾಯನ– ಜನಮೇಜಯನೇ! ಕುರುವಂಶದಲ್ಲಿ ಜನಿಸಿದ ನಿನಗೆ ಇಂತಹ ವಿಷಯಗಳಲ್ಲಿ ಕುತೂಹಲವು ಯೋಗ್ಯವಾಗಿದೆ. ನಿನ್ನ ಮಾತುಗಳು ನನಗೆ ಆನಂದವನ್ನೇ ಉಂಟುಮಾಡುತ್ತಿವೆ.

ಅಹಂ ತತ್ ಕಥಯಿಷ್ಯಾಮಿ ಶೃಣ್ವಾನಸ್ಯ ನರಾಧಿಪ ।
ಅಭಿಷೇಕಂ ಕುಮಾರಸ್ಯ ಪ್ರಭಾವಂ ಚ ಮಹಾತ್ಮನಃ ॥೫॥

ರಾಜನೇ! ಕೇಳುತ್ತಿರುವ ನಿನಗೆ ನಾನು ಎಲ್ಲವನ್ನೂ ಹೇಳುವೆನು. ಮಹಾತ್ಮನಾದ ಸ್ಕಂದನ ಪ್ರಭಾವವನ್ನೂ, ಅವನ ಪಟ್ಟಾಭಿಷೇಕವನ್ನೂ ಹೇಳುವೆನು.

ತೇಜೋ ಮಾಹೇಶ್ವರಂ ಸ್ಕನ್ನಮಗ್ನೌ ಪ್ರಪತಿತಂ ಪುರಾ ।
ತತ್ಸರ್ವಂ ಭಗವಾನಗ್ನಿರ್ನಾಶಕದ್ ಧರ್ತುಮಕ್ಷಯಮ್ ॥೬॥

ಹಿಂದೆ ರುದ್ರನ ತೇಜಸ್ಸು ವೀರ್ಯರೂಪದಲ್ಲಿ ಸ್ಖಲಿತವಾಗಿ ಅಗ್ನಿಯಲ್ಲಿ ಬಿದ್ದಿತು. ನಾಶರಹಿತವಾದ ಆ ವೀರ್ಯದಲ್ಲಿ ಪೂರ್ಣಭಾಗವನ್ನು ಹಿಡಿದಿಟ್ಟುಕೊಳ್ಳಲು ಅಗ್ನಿಗೆ ಸಾಧ್ಯವಾಗಲಿಲ್ಲ.

ತೇನ ಸೀದತಿ ತೇಜಸ್ವೀ ದೀಪ್ತಿಮಾನ್ ಹವ್ಯವಾಹನಃ ।
ನ ಚೈವಂ ಧಾರಯಾಮಾಸ ಬ್ರಹ್ಮಣೇ ಚೋಕ್ತವಾನ್ ಪ್ರಭುಃ ॥೭॥

ಕಾಂತಿಭರಿತವಾದ ಅಗ್ನಿಯೂ ಕೂಡ ಈ ವೀರ್ಯದಿಂದಾಗಿ ಆಯಾಸಗೊಂಡನು. ಆ ರುದ್ರತೇಜಸ್ಸನ್ನು ತಾನು ಧರಿಸಲಿಲ್ಲ ಮತ್ತು ಚತುರ್ಮುಖ ಬ್ರಹ್ಮನಲ್ಲಿ ನಿವೇದಿಸಿಕೊಂಡನು.

ಸ ಗಂಗಾಮುಪಸಂಗಮ್ಯ ನಿಯೋಗಾದ್ ಬ್ರಹ್ಮಣಃ ಪ್ರಭುಃ ।
ಗರ್ಭಮಾಹಿತವಾನ್ ದಿವ್ಯಂ ಭಾಸ್ಕರೋಪಮತೇಜಸಮ್ ॥೮॥

ಸಮರ್ಥನಾದ ಅಗ್ನಿಯು ಬ್ರಹ್ಮದೇವನ ಆದೇಶದಂತೆ ಗಂಗಾಸಂಗವನ್ನು ಮಾಡಿ ಅಲ್ಲಿ ಸೂರ್ಯಸದೃಶವಾದ ತೇಜಸ್ಸುಳ್ಳ ದಿವ್ಯವಾದ ಗರ್ಭವನ್ನು ಇರಿಸಿದನು.

ಅಥ ಗಂಗಾಪಿ ತಂ ಗರ್ಭಮಸಹಂತೀ ವಿಧಾರಣೇ ।
ಉತ್ಸಸರ್ಜ ಗಿರೌ ರಮ್ಯೇ ಹಿಮವತ್ಯಮರಾರ್ಚಿತೇ ॥೯॥

ಅನಂತರ ಗಂಗೆಯೂ ಕೂಡ ಆ ಗರ್ಭವನ್ನು ಧರಿಸಲು ಸಾಧ್ಯವಾಗದೆ ದೇವತೆಗಳಿಂದ ಪೂಜ್ಯವಾದ ಹಿಮಾಲಯ ಪರ್ವತದ ಸುಂದರವಾದ ಗಿರಿಯಲ್ಲಿ ವಿಸರ್ಜಿಸಿದಳು.

ಸ ತತ್ರ ವವೃಧೇ ಲೋಕಾನಾವೃತ್ಯ ಜ್ವಲನಾತ್ಮಜಃ ।
ದದೃಶುರ್ಜ್ವಲನಾಕಾರಂ ತಂ ಗರ್ಭಮಥ ಕೃತ್ತಿಕಾಃ ॥೧೦॥

ಅಗ್ನಿಯ ಪುತ್ರನು ಅಲ್ಲಿ ಲೋಕಗಳನ್ನೇ ಆವರಿಸಿಕೊಂಡು ಬೆಳೆದನು. ಬೆಂಕಿಯಂತಿರುವ ಆ ಗರ್ಭವನ್ನು ಕೃತ್ತಿಕಾದೇವಿಯರು ನೋಡಿದರು.

ಶರಸ್ತಂಭೇ ಮಹಾತ್ಮಾನಮನಲಾತ್ಮಜಮೀಶ್ವರಮ್ ।
ಮಮಾಯಮಿತಿ ತಾಃ ಸರ್ವಾಃ ಪುತ್ರಾರ್ಥಿನ್ಯೋಽಭಿಚುಕ್ರುಶುಃ ॥೧೧॥

ಶರವೆಂಬ ಹುಲ್ಲಿನ ಪೊದೆಯಲ್ಲಿ ಇದ್ದ ಮಹಾತ್ಮನಾದ ಅಗ್ನಿಪುತ್ರನನ್ನು ನೋಡಿದ ಕೃತ್ತಿಕೆಯರು ಇವನು ನನ್ನವನು, ಇವನು ನನ್ನವನು ಎಂದು ಜೋರಾಗಿ ಕೂಗಿಕೊಂಡರು. ಏಕೆಂದರೆ ಅವರೆಲ್ಲರೂ ಪುತ್ರನನ್ನು ಅಪೇಕ್ಷಿಸಿದ್ದರು.

ತಾಸಾಂ ವಿದಿತ್ವಾ ಭಾವಂ ತಂ ಮಾತೄಣಾಂ ಭಗವಾನ್ ಪ್ರಭುಃ ।
ಪ್ರಸ್ನುತಾನಾಂ ಪಯಃ ಷಡ್ಭಿರ್ವದನೈರಪಿಬತ್ತದಾ ॥೧೨॥

ಪೂಜ್ಯನಾದ, ಸಮರ್ಥನಾದ ಅಗ್ನಿಪುತ್ರನು ಅವರ ಅಭಿಪ್ರಾಯವನ್ನು ಅರಿತುಕೊಂಡು, ಆರು ಜನ ಕೃತ್ತಿಕಾದೇವಿಯರ ಸ್ತನಗಳ ಹಾಲನ್ನು ತನ್ನ ಆರು ಮುಖಗಳಿಂದ ಕುಡಿದನು.

ತಂ ಪ್ರಭಾವಂ ಸಮಾಲಕ್ಷ್ಯ ತಸ್ಯ ಬಾಲಸ್ಯ ಕೃತ್ತಿಕಾಃ ।
ಪರಂ ವಿಸ್ಮಯಮಾಪನ್ನಾ ದೇವ್ಯೋ ದಿವ್ಯವಪುರ್ಧರಾಃ ॥೧೩॥

ಅಲೌಕಿಕವಾದ ದೇಹವನ್ನು ಹೊಂದಿದ್ದ ಆ ಕೃತ್ತಿಕಾದೇವಿಯರು ಬಾಲಕನ ಆ ಸಾಮರ್ಥ್ಯವನ್ನು ನೋಡಿ ಬಹಳ ಆಶ್ಚರ್ಯಪಟ್ಟರು.

ಯತ್ರೋತ್ಸೃಷ್ಟಶ್ಚ ಗರ್ಭಃ ಸ ಗಂಗಯಾ ಗಿರಿಮೂರ್ಧನಿ ।
ಸ ಶೈಲಃ ಕಾಂಚನಃ ಸರ್ವಃ ಸಂಬಭೌ ಮೇರುವತ್ ತದಾ ॥೧೪॥

ಗಂಗೆಯು ತನ್ನಲ್ಲಿದ್ದ ಗರ್ಭವನ್ನು ಯಾವ ಪರ್ವತದಲ್ಲಿ ಹಾಕಿದ್ದಳೋ ಆ ಪರ್ವತವು ಬಂಗಾರಮಯವಾಗಿ ಮೇರುಪರ್ವತದಂತೆ ಶೋಭಿಸಿತು.

ವರ್ಧತಾ ಚೈವ ಗರ್ಭೇಣ ಪೃಥಿವೀ ತೇನ ರಂಜಿತಾ ।
ಅತಶ್ಚ ಸರ್ವೇ ಸಂವೃತ್ತಾ ಗಿರಯಃ ಕಾಂಚನಾತ್ಮಕಾಃ ॥೧೫॥

ಬೆಳೆಯುತ್ತಿದ್ದ ಆ ಗರ್ಭದಿಂದ ಪೃಥಿವಿಯೂ ಶೋಭಿಸುತ್ತಿತ್ತು. ಆದ್ದರಿಂದಲೇ ಅಲ್ಲಿದ್ದ ಎಲ್ಲಾ ಗಿರಿ-ಪರ್ವತಗಳೂ ಬಂಗಾರಮಯವಾದವು.

ಕುಮಾರಃ ಸುಮಹಾವೀರ್ಯಃ ಕಾರ್ತಿಕೇಯ ಇತಿ ಸ್ಮೃತಃ ।
ಗಾಂಗೇಯಃ ಪೂರ್ವಮಭವನ್ಮಹಾಕಾಯೋ ಬಲಾನ್ವಿತಃ ॥೧೬॥

ಮಹಾಶಕ್ತಿಶಾಲಿಯಾದ ಕುಮಾರನು ಕಾರ್ತಿಕೇಯ ಎಂದು ಪ್ರಸಿದ್ಧನಾದನು. ಬಲಶಾಲಿಯಾದ, ಬೃಹತ್ಕಾಯನಾದ ಅವನು ಮೊದಲು ಗಾಂಗೇಯನೆಂದು ಕರೆಯಿಸಿಕೊಂಡನು.

ಶಮೇನ ತಪಸಾ ಚೈವ ವೀರ್ಯೇಣ ಚ ಸಮನ್ವಿತಃ ।
ವವೃಧೇಽತೀವ ರಾಜೇಂದ್ರ ಚಂದ್ರವತ್ ಪ್ರಿಯದರ್ಶನಃ ॥೧೭॥

ರಾಜೇಂದ್ರನೇ! ಆ ಕುಮಾರನು ಇಂದ್ರಿಯನಿಗ್ರಹ, ತಪಸ್ಸು, ವೀರ್ಯಗಳಿಂದ ಕೂಡಿದವನಾಗಿ ನೋಡಲು ಚಂದ್ರನ ಹಾಗೆ ಸುಂದರನಾಗಿ ಚೆನ್ನಾಗಿ ಬೆಳೆದನು.

ಸ ತಸ್ಮಿನ್ ಕಾಂಚನೇ ದಿವ್ಯೇ ಶರಸ್ತಂಭೇ ಶ್ರಿಯಾ ವೃತಃ ।
ಸ್ತೂಯಮಾನಃ ಸದಾ ಶೇತೇ ಗಂಧರ್ವೈರ್ಮುನಿಭಿಸ್ತಥಾ ॥೧೮॥

ಕುಮಾರನು ಒಳ್ಳೆಯ ಕಾಂತಿಯಿಂದ ಯುಕ್ತನಾಗಿದ್ದುಕೊಂಡು ಬಂಗಾರಮಯವಾದ ಆ ಶರ (ಒಂದು ಜಾತಿಯ ದರ್ಭೆ) ಪುಂಜದಲ್ಲಿ ಮಲಗಿದ್ದನು. ಯಾವಾಗಲೂ ಗಂಧರ್ವರು, ಮುನಿಗಳು ಅವನನ್ನು ಸ್ತುತಿಸುತ್ತಿದ್ದರು.

ತಥೈನಮನ್ವನೃತ್ಯಂತ ದೇವಕನ್ಯಾಃ ಸಹಸ್ರಶಃ ।
ದಿವ್ಯವಾದಿತ್ರನೃತ್ಯಜ್ಞಾಃ ಸ್ತುವಂತ್ಯಶ್ಚಾರುದರ್ಶನಾಃ ॥೧೯॥

ದೇವತಾಸ್ತ್ರೀಯರು ಅವನ ಮುಂದೆ ಸಾವಿರಾರು ಸಂಖ್ಯೆಯಲ್ಲಿ ಬಂದು ನೃತ್ಯ ಮಾಡುತ್ತಿದ್ದರು. ಅಲೌಕಿವಾದ ವಾದ್ಯ ಮತ್ತು ನೃತ್ಯವನ್ನು ತಿಳಿದಿದ್ದ ಸುಂದರಿಯರಾದ ಅವರು ಕುಮಾರನನ್ನು ಸ್ತುತಿಸುತ್ತಿದ್ದರು.

ಅನ್ವಯುಶ್ಚಾಗ್ನಯಃ ಸರ್ವೇ ಗಂಗಾ ಚ ಸರಿತಾಂ ವರಾ ।
ದಧಾರ ಪೃಥಿವೀ ಚೈನಂ ಬಿಭ್ರತೀ ರೂಪಮುತ್ತಮಮ್ ॥೨೦॥

ಎಲ್ಲಾ ಅಗ್ನಿಗಳೂ ಅವನ ಹತ್ತಿರ ಬಂದರು. ಗಂಗೆಯೂ ಹಾಗೂ ಪೃಥಿವಿಯೂ ಉತ್ತಮವಾದ ರೂಪವನ್ನು ಧರಿಸಿಕೊಂಡು ಬಂದರು.

ಜಾತಕರ್ಮಾದಿಕಾಸ್ತಸ್ಯ ಕ್ರಿಯಾಶ್ಚಕ್ರೇ ಬೃಹಸ್ಪತಿಃ ।
ವೇದಶ್ಚೈನಂ ಚತುರ್ಮೂರ್ತಿರುಪತಸ್ಥೇ ಕೃತಾಂಜಲಿಃ ॥೨೧॥

ದೇವಗುರು ಬೃಹಸ್ಪತಿಯು ಆ ಕುಮಾರನಿಗೆ ಜಾತಕರ್ಮ ಮೊದಲಾದ ಸಂಸ್ಕಾರಗಳನ್ನು ಮಾಡಿದನು. ಸ್ವಯಂ ವೇದಪುರುಷನು ನಾಲ್ಕುರೂಪಗಳನ್ನು ಧಾರಣೆ ಮಾಡಿಕೊಂಡು ಅವನ ಸಮೀಪದಲ್ಲಿ ಕೈಮುಗಿದುಕೊಂಡು ನಿಂತನು.

ಧನುರ್ವೇದಶ್ಚತುಷ್ಪಾದಃ ಸಾಸ್ತ್ರಗ್ರಾಮಃ ಸಸಂಗ್ರಹಃ ।
ತತ್ರೈನಂ ಸಮುಪಾತಿಷ್ಠತ್ಸಾಕ್ಷಾದ್ ವಾಣೀ ಚ ಕೇವಲಾ ॥೨೨॥

ನಾಲ್ಕು ಪ್ರಕಾರಗಳಿಂದ ಸಹಿತವಾದ ಧನುರ್ವೇದ, ಎಲ್ಲಾ ಅಸ್ತ್ರಗಳು ಅಲ್ಲಿ ಬಂದು ನಿಂತವು. ಸಾಕ್ಷಾತ್ ವಾಣಿಯು ಅಲ್ಲಿ ಬಂದು ಉಪಸ್ಥಿತಳಾದಳು.

ಸ ದದರ್ಶ ಮಹಾತ್ಮಾನಂ ದೇವದೇವಮುಮಾಪತಿಮ್ ।
ಶೈಲಪುತ್ರ್ಯಾ ಸಮಾಗಮ್ಯ ಭೂತಸಂಘಶತೈರ್ವೃತಃ ॥೨೩॥

ಕುಮಾರನು ಮಹಾತ್ಮನಾದ ದೇವತೆಗಳಿಗೇ ದೇವತೆಯಾದ ರುದ್ರನನ್ನು ನೋಡಿದನು. ರುದ್ರನ ಪಕ್ಕದಲ್ಲಿ ಪಾರ್ವತಿಯೂ ಬಂದಿದ್ದಳು. ಮತ್ತು ಎಲ್ಲಾ ಭೂತಗಣಗಳು ಸುತ್ತುವರಿದಿದ್ದವು. ಇದೆಲ್ಲವನ್ನೂ ಕುಮಾರನು ನೋಡಿದನು.

ನಿಕಾಯಾ ಭೂತಸಂಘಾನಾಂ ಪರಮಾದ್ಭುತದರ್ಶನಾಃ ।
ವಿಕೃತಾ ವಿಕೃತಾಕಾರಾ ವಿಕೃತಾಭರಣಧ್ವಜಾಃ ॥೨೪॥

ಭೂತಗಣಗಳ ಸಮೂಹಗಳು ನೋಡಲು ಬಹಳ ಅದ್ಭುತವಾಗಿದ್ದವು. ವಿಚಿತ್ರವಾಗಿದ್ದ ಆ ಭೂತಗಣಗಳು ವಿಕಾರವುಳ್ಳ ಆಕಾರಗಳನ್ನು ಹೊಂದಿದ್ದವು. ಅವುಗಳ ಆಭರಣ, ಧ್ವಜ ಇವೆಲ್ಲವೂ ವಿಕಾರವಾಗಿದ್ದವು.

ವ್ಯಾಘ್ರಸಿಂಹರ್ಕ್ಷವದನಾ ಬಿಡಾಲಮಕರಾನನಾಃ ।
ವೃಷದಂಶಮುಖಾಶ್ಚಾನ್ಯೇ ಗಜೋಷ್ಟ್ರವದನಾಸ್ತಥಾ ॥೨೫॥

ಹುಲಿ, ಸಿಂಹ, ಕರಡಿ, ಬೆಕ್ಕು, ಕೋತಿ, ಎತ್ತು ಮೊದಲಾದವುಗಳ ಹಾಗೆ ಮುಖವುಳ್ಳವುಗಳಾಗಿದ್ದವು. ಕೆಲವು ಭೂತಗಳ ಮುಖಗಳು ಕಾಡುಬೆಕ್ಕಿನ ಮುಖದಂತೆ ಇದ್ದವು. ಇನ್ನು ಕೆಲವು ಭೂತಗಳು ಆನೆಯಂತೆ, ಒಂಟೆಯಂತೆ ಮುಖವುಳ್ಳವಾಗಿದ್ದವು.

ಉಲೂಕವದನಾಃ ಕೇಚಿದ್ ಗೃಧ್ರಗೋಮಾಯುದರ್ಶನಾಃ ।
ಕ್ರೌಂಚಪಾರಾವತನಿಭೈರ್ವದನೈಃ ರಾಂಕವೈರಪಿ ॥೨೬॥

ಕೆಲವು ಭೂತಗಳು ಗೂಬೆಯ ಮುಖವನ್ನು ಹೊಂದಿದ್ದವು. ಕೆಲವು ಗಿಡುಗನಂತೆಯೂ ಕೆಲವು ನರಿಯಂತೆಯೂ ಕಾಣಿಸುತ್ತಿದ್ದವು. ಕೆಲವು ಭೂತಗಳು ಕ್ರೌಂಚಪಕ್ಷಿಯ ಮುಖವನ್ನೂ, ಕೆಲವು ಪಾರಿವಾಳದ ಮುಖವನ್ನೂ ಹೊಂದಿದ್ದವು. ಕೆಲವು ರಂಕು ಮೃಗದ ಮುಖವನ್ನು ಧರಿಸಿದ್ದವು.

ಶ್ವಾವಿಚ್ಛಲ್ಯಕಗೋಧಾನಾಮಜೈಡಕಗವಾಂ ತಥಾ ।
ಸದೃಶಾನಿ ವಪೂಂಷ್ಯನ್ಯೇ ತತ್ರ ತತ್ರ ವ್ಯಧಾರಯನ್ ॥೨೭॥

ಅಲ್ಲಲ್ಲಿ ಭೂತಗಳು ನಾಯಿ, ಕುರಿ, ಶಲ್ಯ, ಉಡ, ಆಡು, ಚಿಗರೆ, ಹಸುಗಳ ಹಾಗೆ ಶರೀರವನ್ನು ಧರಿಸಿಕೊಂಡಿದ್ದವು.

ಕೇಚಿಚ್ಛೈಲಾಂಬುದಪ್ರಖ್ಯಾಶ್ಚಕ್ರಾಲಾತಗದಾಯುಧಾಃ ।
ಕೇಚಿದಂಜನಪುಂಜಾಭಾಃ ಕೇಚಿಚ್ಛ್ವೇತಾಚಲಪ್ರಭಾಃ ॥೨೮॥

ಕೆಲವು ಭೂತಗಳು ಪರ್ವತಾಕಾರದಲ್ಲಿ ಕಾಣಿಸುತ್ತಿದ್ದವು. ಕೆಲವು ನೀರುತುಂಬಿದ ಮೋಡದಂತಿದ್ದವು. ಕೈಯಲ್ಲಿ ಚಕ್ರ, ಬೆಂಕಿಯ ಕೊಳ್ಳಿ, ಗದೆ ಮೊದಲಾದ ಆಯುಧಗಳನ್ನು ಧರಿಸಿಕೊಂಡಿದ್ದವು. ಕೆಲವು ಕಪ್ಪು ಕಾಡಿಗೆಯ ರಾಶಿಯಂತೆ ಕಾಣಿಸುತ್ತಿದ್ದವು. ಕೆಲವು ಬೆಳ್ಳಗಿನ ಪರ್ವತದಂತಿದ್ದವು.

ಸಪ್ತಮಾತೃಗಣಾಶ್ಚೈವ ಸಮಾಜಗ್ಮುರ್ವಿಶಾಂಪತೇ ।
ಸಾಧ್ಯಾ ವಿಶ್ವೇऽಥ ಮರುತೋ ವಸವಃ ಪಿತರಸ್ತಥಾ ॥೨೯॥

ರುದ್ರಾದಿತ್ಯಾಸ್ತಥಾ ಸಿದ್ಧಾ ಭುಜಗಾ ದಾನವಾಃ ಖಗಾಃ ।
ಬ್ರಹ್ಮಾ ಸ್ವಯಂಭೂರ್ಭಗವಾನ್ ಸಪುತ್ರಃ ಸಹವಿಷ್ಣುನಾ ॥೩೦॥

ಶಕ್ರಸ್ತಥಾऽಭ್ಯಯಾದ್ ದ್ರಷ್ಟುಂ ಕುಮಾರಮಮಿತಪ್ರಭಮ್ ।
ನಾರದಪ್ರಮುಖಾಶ್ಚಾಪಿ ದೇವಗಂಧರ್ವಸತ್ತಮಾಃ ॥೩೧॥

ರಾಜನೇ, ಸಪ್ತಮಾತೃಗಣವೂ ಅಲ್ಲಿಗೆ ಬಂದಿತು. ಸಾಧ್ಯರು, ವಿಶ್ವೇದೇವತೆಗಳು, ಮರುದ್ಗಣಗಳು, ವಸುಗಳು, ಪಿತೃದೇವತೆಗಳು, ರುದ್ರರು, ಆದಿತ್ಯರು, ಸಿದ್ಧರು, ಸರ್ಪಗಳು, ದಾನವರು, ಪಕ್ಷಿಗಳು ಎಲ್ಲರೂ ಅಲ್ಲಿಗೆ ಬಂದರು. ಸ್ವಯಂಭೂ ಎನಿಸಿದ ಚತುರ್ಮುಖ ಬ್ರಹ್ಮ, ಅವನ ಮಕ್ಕಳು, ವಿಷ್ಣು, ಇಂದ್ರ ಇವರೂ ಅತಿಕಾಂತಿಯುಳ್ಳ ಕುಮಾರನನ್ನು ನೋಡಲು ಬಂದರು.

ದೇವರ್ಷಯಶ್ಚ ಸಿದ್ಧಾಶ್ಚ ಬೃಹಸ್ಪತಿಪುರೋಗಮಾಃ ।
ಪಿತರೋ ಜಗತಃ ಶ್ರೇಷ್ಠಾ ದೇವಾನಾಮಪಿ ದೇವತಾಃ ।
ತೇऽಪಿ ತತ್ರ ಸಮಾಜಗ್ಮುರ್ಯಾಮಾ ಧಾಮಾಶ್ಚ ಸರ್ವಶಃ ॥೩೨॥

ನಾರದ ಮೊದಲಾದ ದೇವ-ಗಂಧರ್ವಶ್ರೇಷ್ಠರು, ದೇವರ್ಷಿಗಳು, ಸಿದ್ಧರು, ಬೃಹಸ್ಪತಿಮೊದಲಾದವರು, ಪಿತೃಗಳು, ಜಗತ್ತಿನಲ್ಲಿಯೇ ಉತ್ತಮರಾದ ದೇವಾಧಿದೇವತೆಗಳೂ, ಎಲ್ಲಾ ಯಾಮಾಭಿಮಾನಿದೇವತೆಗಳು, ಸಕಲಧಾಮಾಭಿಮಾನಿ ದೇವತೆಗಳೂ ಅಲ್ಲಿಗೆ ಬಂದರು.

ಸ ತು ಬಾಲೋऽಪಿ ಬಲವಾನ್ ಮಹಾಯೋಗಬಲಾನ್ವಿತಃ ।
ಅಭ್ಯಾಜಗಾಮ ದೇವೇಶಂ ಶೂಲಹಸ್ತಂ ಪಿನಾಕಿನಮ್ ॥೩೩॥

ಮಹಾಯೋಗಬಲವನ್ನು ಹೊಂದಿರುವ ಆ ಬಲಶಾಲಿಯಾದ ಬಾಲಕ ಕುಮಾರನು ಶೂಲಧಾರಿಯಾದ ಪಿನಾಕಿರುದ್ರನನ್ನು ಎದುರುಗೊಂಡನು.

ತಮಾವ್ರಜಂತಮಾಲಕ್ಷ್ಯ ಶಿವಸ್ಯಾಸೀನ್ಮನೋಗತಮ್ ।
ಯುಗಪಚ್ಚೈಲಪುತ್ರ್ಯಾಶ್ಚ ಗಂಗಾಯಾಃ ಪಾವಕಸ್ಯ ಚ ॥೩೪॥

ತನ್ನ ಮುಂದೆ ಬರುತ್ತಿರುವ ಕುಮಾರನನ್ನು ನೋಡಿ ಶಿವ-ಪಾರ್ವತಿಯರ ಹಾಗೂ ಅಗ್ನಿಯ, ಗಂಗೆಯ ಮನಸ್ಸಿನಲ್ಲಿ ಆಲೋಚನೆಯೊಂದು ಮೂಡಿಬಂತು.

ಕಂ ನು ಪೂರ್ವಮಯಂ ಬಾಲೋ ಗೌರವಾದಭ್ಯುಪೈಷ್ಯತಿ ।
ಅಪಿ ಮಾಮಿತಿ ಸರ್ವೇಷಾಂ ತೇಷಾಮಾಸೀನ್ಮನೋಗತಮ್ ॥೩೫॥

ಈ ಬಾಲಕನು ಯಾರನ್ನು ಮೊದಲು ಗೌರವಪೂರ್ವಕವಾಗಿ ಸ್ವೀಕರಿಸುತ್ತಾನೆ? ನನ್ನನ್ನೋ? ಎಂದು ಎಲ್ಲರ ಮನಸ್ಸಿನಲ್ಲಿಯೂ ಯೋಚನೆಯು ಮೂಡಿಬಂದಿತು.

ತೇಷಾಮೇತಮಭಿಪ್ರಾಯಂ ಚತುರ್ಣಾಮುಪಲಕ್ಷ್ಯ ಸಃ ।
ಯುಗಪದ್ಯೋಗಮಾಸ್ಥಾಯ ಸಸರ್ಜ ವಿವಿಧಾಸ್ತನೂಃ ॥೩೬॥

ಕುಮಾರನು ಈ ನಾಲ್ಕುಮಂದಿಯ ಅಭಿಪ್ರಾಯವನ್ನು ತಿಳಿದವನಾಗಿ ಏಕಕಾಲದಲ್ಲಿ ಅನೇಕ ಶರೀರಗಳನ್ನು ಸೃಷ್ಟಿಸಿಕೊಂಡನು.

ತತೋऽಭವಚ್ಚತುರ್ಮೂರ್ತಿಃ ಕ್ಷಣೇನ ಭಗವಾನ್ ಪ್ರಭುಃ ।
ತಸ್ಯ ಶಾಖೋ ವಿಶಾಖಶ್ಚ ನೈಗಮೇಯಶ್ಚ ಪೃಷ್ಠತಃ ॥೩೭॥

ಆದ್ದರಿಂದಲೇ ಕ್ಷಣಮಾತ್ರದಲ್ಲಿ ಸಮರ್ಥನಾದ ಪೂಜ್ಯ ಕುಮಾರನು ನಾಲ್ಕುರೂಪವುಳ್ಳವನಾದನು. ಹೀಗೆ ಮೊದಲಿದ್ದ ಕುಮಾರರೂಪ, ನಂತರ ಉಂಟಾದ ಶಾಖ, ವಿಶಾಖ, ನೈಗಮೇಯ ಎಂಬ ಮೂರು ರೂಪ ಹೀಗೆ ಚತುರ್ಮೂರ್ತಿ ಉಳ್ಳವನಾದನು.

ಏವಂ ಸ ಕೃತ್ವಾ ಹ್ಯಾತ್ಮಾನಂ ಚತುರ್ಧಾ ಭಗವಾನ್ ಪ್ರಭುಃ ।
ಯತೋ ರುದ್ರಸ್ತತಃ ಸ್ಕಂದೋ ಜಗಾಮಾದ್ಭುತದರ್ಶನಃ ॥೩೮॥

ಸಮರ್ಥನಾದ ಕುಮಾರನು ತನ್ನನ್ನು ನಾಲ್ಕು ರೂಪಗಳಿಂದ ವ್ಯಕ್ತಗೊಳಿಸಿ ಎಲ್ಲಿ ರುದ್ರನಿದ್ದನೋ ಅಲ್ಲಿಗೆ ಅದ್ಭುತವಾದ ಸ್ಕಂದರೂಪದಿಂದ ಹೋದನು.

ವಿಶಾಖಸ್ತು ಯಯೌ ದೇವೀಂ ತತೋ ಗಿರಿವರಾತ್ಮಜಾಮ್ ।
ಶಾಖೋ ಯಯೌ ಸ ಭಗವಾನ್ ದಿವ್ಯಮೂರ್ತಿರ್ವಿಭಾವಸುಮ್ ॥

ಅನಂತರ ವಿಶಾಖ ಎಂಬ ರೂಪದಿಂದ ಪರ್ವತಕುಮಾರಿಯಾದ ಪಾರ್ವತಿಯ ಹತ್ತಿರ ಹೋದನು. ಶಾಖ ಎಂಬ ಅಲೌಕಿಕ ರೂಪದಿಂದ ಅಗ್ನಿಯ ಕಡೆಗೆ ಹೋದನು.

ನೈಗಮೇಯೋಽಗಮದ್ ಗಂಗಾಂ ಕುಮಾರಃ ಪಾವಕಃ ಪ್ರಭುಃ ॥೪೦॥

ಅಗ್ನಿಪುತ್ರಕುಮಾರ ನೈಗಮೇಯ(ಷ) ರೂಪದಿಂದ ಗಂಗೆಯ ಹತ್ತಿರಕ್ಕೆ ಹೋದನು.

ಸರ್ವೇ ಭಾಸ್ವರದೇಹಾಸ್ತೇ ಚತ್ವಾರಃ ಸಮರೂಪಿಣಃ ।
ತಾನ್ ಸಮಭ್ಯಯುರವ್ಯಗ್ರಾಸ್ತದದ್ಭುತಮಿವಾಭವತ್ ॥೪೧॥

ಹಾಹಾಕಾರೋ ಮಹಾನಾಸೀದ್ ದೇವದಾನವರಕ್ಷಸಾಮ್ ।
ದೃಷ್ಟ್ವಾ ತನ್ಮಹದಾಶ್ಚರ್ಯಮದ್ಭುತಂ ರೋಮಹರ್ಷಣಮ್ ॥೪೨॥

ಕಾಂತಿಯಿಂದ ಹೊಳೆಯುತ್ತಿದ್ದ ಆ ಎಲ್ಲಾ ನಾಲ್ಕು ಶರೀರಗಳೂ ಸಮಾನವಾಗಿದ್ದವು. ತಮ್ಮ ತಮ್ಮ ಕಡೆಗೆ ಬಂದ ಕುಮಾರನ ರೂಪಗಳನ್ನು ಅವರೆಲ್ಲರೂ ಯಾವುದೇ ವಿಕಾರ - ಗೊಂದಲಕ್ಕೊಳಗಾಗದೆ ಸ್ವೀಕರಿಸಿದರು. ಇದು ಬಹಳ ಅದ್ಭುತವಾಗಿತ್ತು.

ತತೋ ರುದ್ರಶ್ಚ ದೇವೀ ಚ ಪಾವಕಶ್ಚ ಪಿತಾಮಹಮ್ ।
ಗಂಗಯಾ ಸಹಿತಾಃ ಸರ್ವೇ ಪ್ರಣಿಪೇತುರ್ಜಗತ್ಪತಿಮ್ ॥೪೩॥

ಅನಂತರ ರುದ್ರ, ಪಾರ್ವತಿ, ಅಗ್ನಿ, ಮತ್ತು ಗಂಗೆಯರು ಜಗತ್ಪತಿಯಾದ ಬ್ರಹ್ಮನಿಗೆ ನಮಸ್ಕರಿಸಿದರು.

ಪ್ರಣಿಪತ್ಯ ತತಸ್ತೇ ತು ವಿಧಿವದ್ ರಾಜಪುಂಗವ ।
ಇದಮೂಚುರ್ವಚೋ ರಾಜನ್ ಕಾರ್ತಿಕೇಯಪ್ರಿಯೇಪ್ಸಯಾ ॥೪೪॥

ರಾಜಶ್ರೇಷ್ಠನೇ! ಅವರೆಲ್ಲರೂ ವಿಧ್ಯುಕ್ತವಾಗಿ ನಮಸ್ಕರಿಸಿ ಕಾರ್ತಿಕೇಯನಿಗೆ ಪ್ರಿಯವಾದುದನ್ನು ಮಾಡುವ ಇಚ್ಛೆಯಿಂದ ಈ ಮಾತನ್ನು ಹೇಳಿದರು.

ರುದ್ರಾದಯಃ

ಅಸ್ಯ ಬಾಲಸ್ಯ ಭಗವನ್ನಾಧಿಪತ್ಯಂ ಯಥೇಪ್ಸಿತಮ್ ।
ಅಸ್ಮತ್ಪ್ರಿಯಾರ್ಥಂ ದೇವೇಶ ಸದೃಶಂ ದಾತುಮರ್ಹಸಿ ॥೪೫॥

ರುದ್ರಾದಿಗಳು– ದೇವೇಶನೇ! ಈ ಬಾಲಕನಿಗೆ ಯೋಗ್ಯವಾದ ಹಾಗೂ ನಮಗೂ ಇಷ್ಟವಾದ ಒಂದು ಆಧಿಪತ್ಯವನ್ನು ಇವನಿಗೆ ತಾವು ಕೊಡಬೇಕು.

ವೈಶಂಪಾಯನಃ

ತತಃ ಸ ಭಗವಾನ್ ಪ್ರೀತಃ ಸರ್ವಲೋಕಪಿತಾಮಹಃ ।
ಮನಸಾ ಚಿಂತಯಾಮಾಸ ಕಿಮಯಂ ಲಭತಾಮಿತಿ ॥೪೬॥

ವೈಶಂಪಾಯನ– ಎಲ್ಲಾ ಲೋಕಗಳಿಗೂ ಪಿತಾಮಹನಾದ ಬ್ರಹ್ಮದೇವನು ಸಂತುಷ್ಟನಾಗಿ, ಇವನಿಗೆ ಏನನ್ನು ಕೊಡುವುದು ಎಂದು ಮನಸ್ಸಿನಿಂದ ಯೋಚಿಸಿದನು.

ಐಶ್ವರ್ಯಾಣಿ ಹಿ ಸರ್ವಾಣಿ ದೇವದಾನವರಕ್ಷಸಾಮ್ ।
ಭೂತಯಕ್ಷಪಿಶಾಚಾನಾಂ ಪನ್ನಗಾನಾಂ ಚ ಸರ್ವಶಃ ॥೪೭॥

ಪೂರ್ವಮೇವಾದಿದೇಶಾಸೌ ನಿಕಾಯೇಷು ಮಹಾತ್ಮನಾಮ್ ॥೪೮॥

ಸಾಮರ್ಥ್ಯಂ ಚ ತಥೈಶ್ವರ್ಯಂ ಮಹಾಮತಿರಮನ್ಯತ ॥೪೯॥

ದೇವತೆಗಳ, ದಾನವರ, ರಾಕ್ಷಸರ, ಭೂತಗಳ, ಪ್ರೇತಗಳ, ಪಿಶಾಚಗಳ, ಸರ್ಪಗಳ ಎಲ್ಲಾ ಐಶ್ವರ್ಯಗಳೂ ಮೊದಲೇ ನಿರ್ಧಾರಿತವಾಗಿತ್ತು. ಮತ್ತು ಆ ಗುಂಪುಗಳಲ್ಲಿ ಆಧಿಪತ್ಯವೂ ಒಬ್ಬೊಬ್ಬರಿಗೆ ಮೊದಲೇ ಕೊಡಲ್ಪಟ್ಟಿತ್ತು. ಈ ಎಲ್ಲಾ ವರ್ಗಗಳ ಆಧಿಪತ್ಯಸ್ವೀಕಾರಕ್ಕೆ ಬೇಕಾದ ಸಾಮರ್ಥ್ಯಮತ್ತು ಶಕ್ತಿಯು ಈ ಕುಮಾರನಲ್ಲಿದೆ ಎಂಬುದಾಗಿ ಮಹಾಜ್ಞಾನಿಯಾದ ಬ್ರಹ್ಮನು ತಿಳಿದುಕೊಂಡನು.

ತತೋ ಮುಹೂರ್ತಂ ಸ ಧ್ಯಾತ್ವಾ ದೇವಾನಾಂ ಶ್ರೇಯಸಿ ಸ್ಥಿತಃ ।
ಸೈನಾಪತ್ಯಂ ದದೌ ತಸ್ಮೈ ಸರ್ವಭೂತೇಷು ಭಾರತ ॥೫೦॥

ಭರತಕುಲೋದ್ಭವನೇ! ಅನಂತರ ಒಂದು ಮುಹೂರ್ತದಷ್ಟು ಕಾಲ ದೇವತೆಗಳ ಶ್ರೇಯಸ್ಸಿನ ಬಗ್ಗೆ ಧ್ಯಾನಮಗ್ನನಾಗಿ ಎಲ್ಲಾ ಜೀವರ ಸೇನಾಧಿಪತ್ಯವನ್ನು ಕುಮಾರನಿಗೆ ಕೊಟ್ಟನು.

ದಿವಿ ದೇವನಿಕಾಯಾನಾಂ ಯೇ ಚ ರಾಜನ್ ಪರಿಶ್ರುತಾಃ ।
ತಾನ್ ಸರ್ವಾನ್ ವ್ಯಾದಿದೇಶಾಸ್ಮೈ ಸರ್ವಭೂತಪಿತಾಮಹಃ ॥೫೧॥

ರಾಜನೇ! ಸಕಲಪ್ರಾಣಿಪ್ರಪಂಚಕ್ಕೆ ಪಿತಾಮಹನಾದ ಬ್ರಹ್ಮನು ಸ್ವರ್ಗಲೋಕದ ಎಲ್ಲಾ ದೇವತೆಗಳನ್ನು ಉದ್ದೇಶಿಸಿ ಆದೇಶವನ್ನು ಕೊಟ್ಟನು.

ತತಃ ಕುಮಾರಮಾದಾಯ ದೇವಾ ಬ್ರಹ್ಮಪುರೋಗಮಾಃ ।
ಅಭಿಷೇಕಾರ್ಥಮಾಜಗ್ಮುಃ ಶೈಲೇಂದ್ರಂ ಸಹಿತಾಸ್ತತಃ ॥೫೨॥

ಅನಂತರ ಚತುರ್ಮುಖಬ್ರಹ್ಮಮೊದಲಾದ ಎಲ್ಲಾ ದೇವತೆಗಳು ಕುಮಾರನನ್ನು ಕರೆತಂದು, ಅವನ ಪಟ್ಟಾಭಿಷೇಕಕ್ಕಾಗಿ ಎಲ್ಲರೂ ಸೇರಿ ಶ್ರೇಷ್ಠವಾದ ಹಿಮಾಲಯ ಪರ್ವತಕ್ಕೆ ಹೋದರು.

ಪುಣ್ಯಾಂ ಹೈಮವತೀಂ ದೇವೀಂ ಸರಿಚ್ಛ್ರೇಷ್ಠಾಂ ಸರಸ್ವತೀಮ್ ।
ಸ್ಯಮಂತಪಂಚಕೇ ಯಾ ವೈ ಪಿತೃಲೋಕೇಷು ವಿಶ್ರುತಾ ॥೫೩॥

ಹಿಮಾಲಯಪರ್ವತದಲ್ಲಿ ಹರಿಯುವ ಉತ್ತಮವಾದ ಪುಣ್ಯನದಿ ಸರಸ್ವತಿಯ ಸ್ಯಮಂತಪಂಚಕಕ್ಷೇತ್ರಕ್ಕೆ ಹೋದರು. ಆ ಸರಸ್ವತಿಯು ಪಿತೃಲೋಕಗಳಲ್ಲಿಯೂ ಪ್ರಸಿದ್ಧಳಾಗಿದ್ದಳು.

ತತ್ರ ತೀರೇ ಸರಸ್ವತ್ಯಾಃ ಪುಣ್ಯೇ ಸರ್ವಗುಣಾನ್ವಿತೇ ।
ನಿಷೇದುರ್ದೇವಗಂಧರ್ವಾಃ ಸರ್ವೇ ಸಂಪೂರ್ಣಮಾನಸಾಃ ॥೫೪॥

ಮನಸ್ಸಿನಲ್ಲಿ ಆನಂದವನ್ನು ತುಂಬಿಕೊಂಡಿರುವ ಎಲ್ಲಾ ದೇವ-ಗಂಧರ್ವರು ಸಕಲಗುಣಗಳನ್ನು ಹೊಂದಿದ್ದ ಸರಸ್ವತಿಯ ಪುಣ್ಯತೀರದಲ್ಲಿ ಕುಳಿತುಕೊಂಡರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಕುಮಾರಸೈನಾಪತ್ಯವರ್ಣನಂ ನಾಮ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೇಳನೆಯ ಅಧ್ಯಾಯ

ಸ್ಕಂದನ ಪಟ್ಟಾಭಿಷೇಕ. ಅವನ ಪರಿವಾರ ಗಣಗಳ
ಸ್ವರೂಪ ಮತ್ತು ಹೆಸರುಗಳ ವರ್ಣನೆ.

ವೈಶಂಪಾಯನಃ

ತತೋऽಭಿಷೇಕಸಂಭಾರಾನ್ ಸರ್ವಾನ್ ಸಂಭೃತ್ಯ ಶಾಸ್ತ್ರತಃ ।
ಬೃಹಸ್ಪತಿಃ ಸಮಿದ್ಧೇऽಗ್ನೌ ಜುಹಾವಾಜ್ಯಂ ಯಥಾವಿಧಿ ॥೧॥

ವೈಶಂಪಾಯನ– ಅನಂತರ ಪಟ್ಟಾಭಿಷೇಕಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಶಾಸ್ತ್ರೋಕ್ತರೀತಿಯಲ್ಲಿ ಸಂಗ್ರಹಿಸಿಕೊಂಡು ಬೃಹಸ್ಪತಿಯು ವಿಧ್ಯುಕ್ತವಾಗಿ ಪ್ರಜ್ವಲಿಸುವ ಅಗ್ನಿಯಲ್ಲಿ ತುಪ್ಪವನ್ನು ಹೋಮಿಸಿದನು.

ತತೋ ಹಿಮವತಾ ದತ್ತೇ ಮಣಿಪ್ರವರಶೋಭಿತೇ ।
ದಿವ್ಯರತ್ನಯುತೇ ದಿವ್ಯೇ ನಿಷಣ್ಣಃ ಪರಮಾಸನೇ ॥೨॥

ಹಿಮವಂತನು ಕೊಟ್ಟ ಒಳ್ಳೆಯ ಮಣಿಗಳಿಂದ ಶೋಭಿಸುತ್ತಿದ್ದ ದೇವಲೋಕದ ರತ್ನಗಳಿಂದ ಖಚಿತವಾದ ಉತ್ತಮ ಆಸನದಲ್ಲಿ ಕಾರ್ತಿಕೇಯನು ಕುಳಿತನು.

ಸರ್ವಮಂಗಲಸಂಭಾರೈರ್ವಿಧಿಮಂತ್ರಪುರಸ್ಕೃತಮ್ ।
ಅಭಿಷೇಚನಿಕಂ ದ್ರವ್ಯಂ ಗೃಹೀತ್ವಾ ದೇವತಾಗಣಾಃ ॥೩॥

ದೇವತಾಗಣಗಳು ಅಭಿಷೇಕಕ್ಕೆ ಬೇಕಾದ ಮಂಗಳದ್ರವ್ಯಗಳನ್ನು ಮಂತ್ರಪುರಸ್ಸರವಾಗಿ ಹಿಡಿದುಕೊಂಡು ವಿಧಿವತ್ತಾಗಿ ಅಲ್ಲಿ ಸೇರಿದ್ದವು.

ಇಂದ್ರಾವಿಷ್ಣೂ ಮಹಾವೀರ್ಯೌ ತಥಾ ಚಂದ್ರದಿವಾಕರೌ ।
ಧಾತಾ ಚೈವ ವಿಧಾತಾ ಚ ತಥೋಭಾವನಿಲಾನಲೌ ॥೪॥

ಪೂಷ್ಣಾ ಭಗೇನ ಚಾರ್ಯಮ್ಣಾ ಚಾಂಶೇನ ಚ ವಿವಸ್ವತಾ ।
ರುದ್ರಶ್ಚ ಸಹಿತೋ ಧೀಮಾನ್ ಮಿತ್ರೇಣ ವರುಣೇನ ಚ ॥೫॥

ರುದ್ರೈರ್ವಸುಭಿರಾದಿತ್ಯೈರಶ್ವಿಭ್ಯಾಂ ಚ ವೃತಃ ಪ್ರಭುಃ ।
ವಿಶ್ವೇದೇವೈರ್ಮರುದ್ಭಿಶ್ಚ ಸಾಧ್ಯೈಶ್ಚ ಪಿತೃಭಿಃ ಸಹ ॥೬॥

ಗಂಧರ್ವೈರಪ್ಸರೋಭಿಶ್ಚ ಯಕ್ಷರಾಕ್ಷಸಪನ್ನಗೈಃ ।
ದೇವರ್ಷಿಭಿರಸಂಖೇಯೈಸ್ತಥಾ ಬ್ರಹ್ಮರ್ಷಿಭಿರ್ವರೈಃ ॥೭॥

ವೈಖಾನಸೈರ್ವಾಲಖಿಲ್ಯೈರ್ವಾಯ್ವಾಹಾರೈರ್ಮರೀಚಿಪೈಃ ।
ಭೃಗುಭಿಶ್ಚಾಂಗಾರೋಭಿಶ್ಚ ಯತಿಭಿಶ್ಚ ಮಹಾತ್ಮಭಿಃ ॥೮॥

ಸರ್ವೈರ್ವಿದ್ಯಾಧರೈಃ ಪುಣ್ಯೈರ್ಯೋಗಸಿದ್ಧೈಶ್ಚ ಸಂವೃತಃ ।
ಪಿತಾಮಹಃ ಪುಲಸ್ತ್ಯಶ್ಚ ಪುಲಹಶ್ಚ ಮಹಾತಪಾಃ ॥೯॥

ಮಹಾವೀರ್ಯವಂತರಾದ ಇಂದ್ರ ಮತ್ತು ವಿಷ್ಣು, ಚಂದ್ರ ಮತ್ತು ಸೂರ್ಯ, ಧಾತಾ, ವಿಧಾತಾ, ವಾಯು, ಅಗ್ನಿ, ಪೂಷ, ಭಗ, ಅರ್ಯಮಾ, ವಿವಸ್ವಂತನ ಅಂಶ, ಮಹಾಜ್ಞಾನಿಯಾದ ರುದ್ರ, ಮಿತ್ರ, ವರುಣ, ಏಕಾದಶ ರುದ್ರರು, ಅಷ್ಟವಸುಗಳು, ದ್ವಾದಶ ಆದಿತ್ಯರು, ಅಶ್ವಿನೀದೇವತೆಗಳು, ವಿಶ್ವೇದೇವತೆಗಳು, ಮರುತ್ತುಗಳು, ಸಾಧ್ಯರು, ಪಿತೃಗಳು, ಗಂಧರ್ವರು, ಅಪ್ಸರಾಸ್ತ್ರೀಯರು, ಯಕ್ಷರು, ರಾಕ್ಷಸರು, ಸರ್ಪಗಳು, ಅನೇಕ ದೇವರ್ಷಿಗಳು, ಉತ್ತಮ ಬ್ರಹ್ಮರ್ಷಿಗಳು, ವೈಖಾನಸರು, ವಾಲಖಿಲ್ಯರು, ವಾಯುಭಕ್ಷರು, ಮರೀಚಿಮುಖ್ಯರು, ಭೃಗು, ಅಂಗಿರಸ್ಸು, ಮಹಾತ್ಮರಾದ ಯತಿಗಳು, ಪುಣ್ಯವಂತ, ಯೋಗಸಿದ್ಧರಾದ ಎಲ್ಲಾ ವಿದ್ಯಾಧರರು ಇವರೆಲ್ಲರು ಕುಮಾರನ ಸುತ್ತ ಸೇರಿದ್ದರು.

ಅಂಗಿರಾಃ ಕಶ್ಯಪೋಽತ್ರಿಶ್ಚ ಮರೀಚಿರ್ಭೃಗುರೇವ ಚ ।
ಕ್ರತುರ್ಹರಿಃ ಪ್ರಚೇತಾಶ್ಚ ಮನುರ್ದಕ್ಷಸ್ತಥೈವ ಚ ॥೧೦॥

ಋತವಶ್ಚ ಗ್ರಹಾಶ್ಚೈವ ಜ್ಯೋತೀಂಷಿ ಚ ವಿಶಾಂಪತೇ ।
ಮೂರ್ತಿಮತ್ಯಶ್ಚ ಸರಿತೋ ನದಾಶ್ಚೈವ ಸನಾತನಾಃ ॥೧೧॥

ಸಮುದ್ರಾಶ್ಚ ಹ್ರದಾಶ್ಚೈವ ತೀರ್ಥಾನಿ ವಿವಿಧಾನಿ ಚ ।
ಪೃಥಿವೀ ದ್ಯೌರ್ದಿಶಶ್ಚೈವ ಪಾದಪಾಶ್ಚ ಜನಾಧಿಪ ॥೧೨॥

ಅದಿತಿರ್ದೇವಮಾತಾ ಚ ಹ್ರೀಃ ಶ್ರೀಃ ಸ್ವಾಹಾ ಸರಸ್ವತೀ ।
ಉಮಾ ಶಚೀ ಸಿನೀವಾಲೀ ತಥಾ ಚಾನುಮತಿಃ ಕುಹೂಃ ॥೧೩॥

ರಾಕಾ ಚ ಧಿಷಣಾ ಚೈವ ಪತ್ನ್ಯಶ್ಚಾನ್ಯಾ ದಿವೌಕಸಾಮ್ ।
ಹಿಮವಾಂಶ್ಚೈವ ವಿಂಧ್ಯಶ್ಚ ಮೇರುಶ್ಚಾನೇಕಶೃಂಗವಾನ್ ॥೧೪॥

ಐರಾವತಃ ಸಾನುಚರಃ ಕಲಾಃ ಕಾಷ್ಠಾಸ್ತಥೈವ ಚ ।
ಮಾಸಾರ್ಧಮಾಸಾ ಋತವಸ್ತಥಾ ರಾತ್ರ್ಯಹನೀ ನೃಪ ॥೧೫॥

ಉಚ್ಚೈಶ್ರವಾ ಹಯಶ್ರೇಷ್ಠೋ ನಾಗರಾಜಶ್ಚ ವಾಸುಕಿಃ ।
ಅರುಣೋ ಗರುಡಶ್ಚೈವ ವೃಕ್ಷಾಶ್ಚೌಷಧಿಭಿಃ ಸಹ ॥೧೬॥

ಧರ್ಮಶ್ಚ ಭಗವಾನ್ ದೇವಃ ಸಮಾಜಗ್ಮುರ್ಹಿ ಸಂಗತಾಃ ।
ಕಾಲೋ ಯಮಶ್ಚ ಮೃತ್ಯುಶ್ಚ ಯಮಸ್ಯಾನುಚರಾಶ್ಚ ಯೇ ॥೧೭॥

ರಾಜನೇ! ಚತುರ್ಮುಖ ಬ್ರಹ್ಮ, ಪುಲಸ್ತ್ಯ, ಮಹಾತಪಸ್ವಿಯಾದ ಪುಲಹ, ಅಂಗಿರಸ್ಸು, ಕಶ್ಯಪ, ಅತ್ರಿ, ಮರೀಚಿ, ಭೃಗು, ಕ್ರತು, ಹರಿ, ಪ್ರಚೇತಸ್ಸು, ಮನು, ದಕ್ಷ, ಋತುಗಳು, ಗ್ರಹಗಳು, ನಕ್ಷತ್ರಗಳು, ಅನಾದಿಕಾಲೀನರಾದ ಮನುಷ್ಯರೂಪದಲ್ಲಿ ಇದ್ದ ನದ್ಯಭಿಮಾನಿದೇವತೆಗಳು, ನದಾಭಿಮಾನಿದೇವತೆಗಳು, ಸಮುದ್ರಗಳು, ಸರೋವರಗಳು, ವಿವಿಧ ತೀರ್ಥಗಳು, ಪೃಥಿವೀ, ಅಂತರಿಕ್ಷ, ದಿಕ್ಕುಗಳು, ಮರಗಳು, ದೇವಮಾತೆಯಾದ ಅದಿತಿ, ಹ್ರೀ, ಶ್ರೀ, ಸ್ವಾಹಾ, ಸರಸ್ವತಿ, ಉಮಾ, ಶಚೀ, ಸಿನೀವಾಲೀ, ಅನುಮತಿ, ಕುಹೂ, ರಾಕಾ, ಧಿಷಣಾ, ಇತರ ದೇವತೆಗಳ ಪತ್ನಿಯರು, ಹಿಮವಂತ, ವಿಂಧ್ಯ, ಅನೇಕಶಿಖರಗಳುಳ್ಳ ಮೇರು, ಐರಾವತ, ಉಚ್ಚೈಶ್ರವಸ್ಸು, ಕಲಾ, ಕಾಷ್ಠಾ, ಮಾಸ, ಪಕ್ಷ, ಋತುಗಳು, ಹಗಲು-ರಾತ್ರಿಗಳು, ನಾಗರಾಜನಾದ ವಾಸುಕಿ, ಅರುಣ, ಗರುಡ, ವೃಕ್ಷಗಳು, ಓಷಧಿಗಿಡಗಳು, ಪೂಜ್ಯನಾದ ಧರ್ಮದೇವತೆ, ಕಾಲ, ಯಮ, ಮೃತ್ಯು, ಯಮನ ಅನುಚರರು ಇವರೆಲ್ಲಾ ಒಟ್ಟಾಗಿ ಪಟ್ಟಾಭಿಷೇಕಕ್ಕೆ ಬಂದರು.

ಬಹುಲತ್ವಾಚ್ಚ ಯೇ ನೋಕ್ತಾ ವಿವಿಧಾ ದೇವತಾಗಣಾಃ ।
ತೇ ಕುಮಾರಾಭಿಷೇಕಾರ್ಥಂ ಸಮಾಜಗ್ಮುಸ್ತತಸ್ತತಃ ॥೧೮॥

ಬಂದಿರುವ ದೇವತಾಗಣಗಳು ಬಹಳವಾಗಿದ್ದುದರಿಂದ ಅವರನ್ನೆಲ್ಲಾ ಇಲ್ಲಿ ಉಲ್ಲೇಖಿಸಲಿಲ್ಲ. ಬೇರೆ ಬೇರೆ ಕಡೆಯಿಂದ ಅವರೆಲ್ಲರೂ ಕುಮಾರನ ಪಟ್ಟಾಭಿಷೇಕಕ್ಕೆ ಬಂದರು.

ಜಗೃಹುಸ್ತೇ ತದಾ ರಾಜನ್ ಸರ್ವ ಏವ ದಿವೌಕಸಃ ।
ಅಭಿಷೇಚನಿಕಂ ಭಾಂಡಂ ಮಂಗಲಾನಿ ಚ ಸರ್ವಶಃ ॥೧೯॥

ರಾಜನೇ! ಬಂದ ಎಲ್ಲಾ ದೇವತೆಗಳು ಅಭಿಷೇಕದ ಪಾತ್ರೆಗಳನ್ನು ಮತ್ತು ಮಂಗಳದ್ರವ್ಯಗಳನ್ನು ಕೈಯಲ್ಲಿ ಹಿಡಿದುಕೊಂಡರು.

ದಿವ್ಯಸಂಭಾರಸಂಯುಕ್ತೈಃ ಕಲಶೈಃ ಕಾಂಚನೈರ್ನೃಪ ।
ಸಮಿದ್ಭಿಃ ಪುಣ್ಯಗಂಧಾಭಿರದ್ಭಿಸ್ತಾಭಿರಲಂಕೃತೈಃ ॥೨೦॥

ಅಭ್ಯಷಿಂಚನ್ ಕುಮಾರಂ ವೈ ಹೃಷ್ಟರೂಪಾ ದಿವೌಕಸಃ ।
ಸೈನಾಪತ್ಯೇ ಮಹಾತ್ಮಾನಮಸುರಾಣಾಂ ಭಯಾವಹಮ್ ॥೨೧॥

ರಾಜನೇ! ಸಂತುಷ್ಟರಾದ ದೇವತೆಗಳು ಅಸುರರಿಗೆ ಭಯವನ್ನು ತಂದುಕೊಡುವ ಮಹಾತ್ಮನಾದ ಕುಮಾರನನ್ನು ಅಲೌಕಿಕವಾದ ಪದಾರ್ಥಗಳನ್ನು ತುಂಬಿಕೊಂಡಿದ್ದ ಬಂಗಾರದ ಕಲಶಗಳಿಂದ ಹಾಗೂ ಸುಗಂಧಭರಿತವಾದ ಸಮಿದ್ದ್ರವ್ಯಗಳಿಂದ ಸೇನಾಧಿಪತಿಯನ್ನಾಗಿ ಪಟ್ಟಾಭಿಷೇಕ ಮಾಡಿದರು.

ಪುರಾ ಯಥಾ ಮಹಾರಾಜ ವರುಣಂ ವೈ ಜಲೇಶ್ವರಮ್ ।
ತಥಾऽಭ್ಯಷಿಂಚದ್ ಭಗವಾನ್ ಬ್ರಹ್ಮಾ ಲೋಕಪಿತಾಮಹಃ ॥೨೨॥

ಕಾಶ್ಯಪಶ್ಚ ಮಹಾತೇಜಾ ಯೇ ಚಾನ್ಯೇ ನಾನುಕೀರ್ತಿತಾಃ ॥೨೩॥

ಮಹಾರಾಜನೇ! ಹಿಂದೆ ಯಾವ ರೀತಿಯಲ್ಲಿ ಜಲಾಧಿಪತಿಯನ್ನಾಗಿ ವರುಣನನ್ನು ಅಭಿಷೇಕವನ್ನು ಮಾಡಿದರೋ ಹಾಗೆ ಪೂಜ್ಯನಾದ ಲೋಕಪಿತಾಮಹ ಬ್ರಹ್ಮ, ಮಹಾತೇಜೋವಂತನಾದ ಕಾಶ್ಯಪ ಮತ್ತು ಇಲ್ಲಿ ಹೇಳದಿರುವ ದೇವತೆಗಳೂ ಅಭಿಷೇಕವನ್ನು ಮಾಡಿದರು.

ತಸ್ಮೈ ಬ್ರಹ್ಮಾ ದದೌ ಪ್ರೀತೋ ಬಲಿನೋ ವಾತರಂಹಸಃ ।
ಕಾಮವೀರ್ಯಧರಾನ್ ದಿವ್ಯಾನ್ ಮಹಾಪಾರಿಷದಾನ್ ಪ್ರಭುಃ ॥೨೪॥

ಸಂತುಷ್ಟನಾದ ಸಕಲಸಾಮರ್ಥ್ಯವುಳ್ಳ ಚತುರ್ಮುಖನು ಕುಮಾರನಿಗೆ ವಾಯುವೇಗವುಳ್ಳ, ಬಲಶಾಲಿಗಳಾದ, ಬೇಕಾದ ರೂಪವನ್ನು ತಾಳುವ ಸಾಮರ್ಥ್ಯವುಳ್ಳ ನಾಲ್ಕುಮಂದಿ ಅಲೌಕಿಕ ಅನುಚರರನ್ನು ಕೊಟ್ಟನು.

ನಂದಿಸೇನಂ ಲೋಹಿತಾಕ್ಷಂ ಘಣ್ಟಾಕರ್ಣಂ ಚ ಸಮ್ಮತಮ್ ।
ಚತುರ್ಥಂ ಚಾಪ್ಯತಿಬಲಂ ಖ್ಯಾತಂ ಕುಮುದಮಾಲಿನಮ್ ।

ತಥಾ ಸ್ಥಾಣುಂ ಮಹಾದೇವಂ ಮಹಾಪಾರಿಷದಂ ಕ್ರತುಮ್ ॥೨೫॥

ಮಾಯಾಶತಧರಂ ವೀರಂ ಕಾಮವೀರ್ಯಬಲಾನ್ವಿತಮ್ ।
ದದೌ ಸ್ಕಂದಾಯ ರಾಜೇಂದ್ರ ಸುರಾರಿವಿನಿಬರ್ಹಣಮ್ ॥೨೬॥

ಧರ್ಮಶ್ಚ ಭಗವಾನ್ ದೇವಃ ಸಮಾಜಗ್ಮುರ್ಹಿ ಸಂಗತಾಃ ।
ಕಾಲೋ ಯಮಶ್ಚ ಮೃತ್ಯುಶ್ಚ ಯಮಸ್ಯಾನುಚರಾಶ್ಚ ಯೇ ॥೧೭॥

ರಾಜನೇ! ಚತುರ್ಮುಖ ಬ್ರಹ್ಮ, ಪುಲಸ್ತ್ಯ, ಮಹಾತಪಸ್ವಿಯಾದ ಪುಲಹ, ಅಂಗಿರಸ್ಸು, ಕಶ್ಯಪ, ಅತ್ರಿ, ಮರೀಚಿ, ಭೃಗು, ಕ್ರತು, ಹರಿ, ಪ್ರಚೇತಸ್ಸು, ಮನು, ದಕ್ಷ, ಋತುಗಳು, ಗ್ರಹಗಳು, ನಕ್ಷತ್ರಗಳು, ಅನಾದಿಕಾಲೀನರಾದ ಮನುಷ್ಯರೂಪದಲ್ಲಿ ಇದ್ದ ನದ್ಯಭಿಮಾನಿದೇವತೆಗಳು, ನದಾಭಿಮಾನಿದೇವತೆಗಳು, ಸಮುದ್ರಗಳು, ಸರೋವರಗಳು, ವಿವಿಧ ತೀರ್ಥಗಳು, ಪೃಥಿವೀ, ಅಂತರಿಕ್ಷ, ದಿಕ್ಕುಗಳು, ಮರಗಳು, ದೇವಮಾತೆಯಾದ ಅದಿತಿ, ಹ್ರೀ, ಶ್ರೀ, ಸ್ವಾಹಾ, ಸರಸ್ವತಿ, ಉಮಾ, ಶಚೀ, ಸಿನೀವಾಲೀ, ಅನುಮತಿ, ಕುಹೂ, ರಾಕಾ, ಧಿಷಣಾ, ಇತರ ದೇವತೆಗಳ ಪತ್ನಿಯರು, ಹಿಮವಂತ, ವಿಂಧ್ಯ, ಅನೇಕಶಿಖರಗಳುಳ್ಳ ಮೇರು, ಐರಾವತ, ಉಚ್ಚೈಶ್ರವಸ್ಸು, ಕಲಾ, ಕಾಷ್ಠಾ, ಮಾಸ, ಪಕ್ಷ, ಋತುಗಳು, ಹಗಲು-ರಾತ್ರಿಗಳು, ನಾಗರಾಜನಾದ ವಾಸುಕಿ, ಅರುಣ, ಗರುಡ, ವೃಕ್ಷಗಳು, ಓಷಧಿಗಿಡಗಳು, ಪೂಜ್ಯನಾದ ಧರ್ಮದೇವತೆ, ಕಾಲ, ಯಮ, ಮೃತ್ಯು, ಯಮನ ಅನುಚರರು ಇವರೆಲ್ಲಾ ಒಟ್ಟಾಗಿ ಪಟ್ಟಾಭಿಷೇಕಕ್ಕೆ ಬಂದರು.

ಬಹುಲತ್ವಾಚ್ಚ ಯೇ ನೋಕ್ತಾ ವಿವಿಧಾ ದೇವತಾಗಣಾಃ ।
ತೇ ಕುಮಾರಾಭಿಷೇಕಾರ್ಥಂ ಸಮಾಜಗ್ಮುಸ್ತತಸ್ತತಃ ॥೧೮॥

ಬಂದಿರುವ ದೇವತಾಗಣಗಳು ಬಹಳವಾಗಿದ್ದುದರಿಂದ ಅವರನ್ನೆಲ್ಲಾ ಇಲ್ಲಿ ಉಲ್ಲೇಖಿಸಲಿಲ್ಲ. ಬೇರೆ ಬೇರೆ ಕಡೆಯಿಂದ ಅವರೆಲ್ಲರೂ ಕುಮಾರನ ಪಟ್ಟಾಭಿಷೇಕಕ್ಕೆ ಬಂದರು.

ಜಗೃಹುಸ್ತೇ ತದಾ ರಾಜನ್ ಸರ್ವ ಏವ ದಿವೌಕಸಃ ।
ಅಭಿಷೇಚನಿಕಂ ಭಾಂಡಂ ಮಂಗಲಾನಿ ಚ ಸರ್ವಶಃ ॥೧೯॥

ರಾಜನೇ! ಬಂದ ಎಲ್ಲಾ ದೇವತೆಗಳು ಅಭಿಷೇಕದ ಪಾತ್ರೆಗಳನ್ನು ಮತ್ತು ಮಂಗಳದ್ರವ್ಯಗಳನ್ನು ಕೈಯಲ್ಲಿ ಹಿಡಿದುಕೊಂಡರು.

ದಿವ್ಯಸಂಭಾರಸಂಯುಕ್ತೈಃ ಕಲಶೈಃ ಕಾಂಚನೈರ್ನೃಪ ।
ಸಮಿದ್ಭಿಃ ಪುಣ್ಯಗಂಧಾಭಿರದ್ಭಿಸ್ತಾಭಿರಲಂಕೃತೈಃ ॥೨೦॥

ಅಭ್ಯಷಿಂಚನ್ ಕುಮಾರಂ ವೈ ಹೃಷ್ಟರೂಪಾ ದಿವೌಕಸಃ ।
ಸೈನಾಪತ್ಯೇ ಮಹಾತ್ಮಾನಮಸುರಾಣಾಂ ಭಯಾವಹಮ್ ॥೨೧॥

ರಾಜನೇ! ಸಂತುಷ್ಟರಾದ ದೇವತೆಗಳು ಅಸುರರಿಗೆ ಭಯವನ್ನು ತಂದುಕೊಡುವ ಮಹಾತ್ಮನಾದ ಕುಮಾರನನ್ನು ಅಲೌಕಿಕವಾದ ಪದಾರ್ಥಗಳನ್ನು ತುಂಬಿಕೊಂಡಿದ್ದ ಬಂಗಾರದ ಕಲಶಗಳಿಂದ ಹಾಗೂ ಸುಗಂಧಭರಿತವಾದ ಸಮಿದ್ದ್ರವ್ಯಗಳಿಂದ ಸೇನಾಧಿಪತಿಯನ್ನಾಗಿ ಪಟ್ಟಾಭಿಷೇಕ ಮಾಡಿದರು.

ಪುರಾ ಯಥಾ ಮಹಾರಾಜ ವರುಣಂ ವೈ ಜಲೇಶ್ವರಮ್ ।
ತಥಾऽಭ್ಯಷಿಂಚದ್ ಭಗವಾನ್ ಬ್ರಹ್ಮಾ ಲೋಕಪಿತಾಮಹಃ ॥೨೨॥

ಕಾಶ್ಯಪಶ್ಚ ಮಹಾತೇಜಾ ಯೇ ಚಾನ್ಯೇ ನಾನುಕೀರ್ತಿತಾಃ ॥೨೩॥

ಮಹಾರಾಜನೇ! ಹಿಂದೆ ಯಾವ ರೀತಿಯಲ್ಲಿ ಜಲಾಧಿಪತಿಯನ್ನಾಗಿ ವರುಣನನ್ನು ಅಭಿಷೇಕವನ್ನು ಮಾಡಿದರೋ ಹಾಗೆ ಪೂಜ್ಯನಾದ ಲೋಕಪಿತಾಮಹ ಬ್ರಹ್ಮ, ಮಹಾತೇಜೋವಂತನಾದ ಕಾಶ್ಯಪ ಮತ್ತು ಇಲ್ಲಿ ಹೇಳದಿರುವ ದೇವತೆಗಳೂ ಅಭಿಷೇಕವನ್ನು ಮಾಡಿದರು.

ತಸ್ಮೈ ಬ್ರಹ್ಮಾ ದದೌ ಪ್ರೀತೋ ಬಲಿನೋ ವಾತರಂಹಸಃ ।
ಕಾಮವೀರ್ಯಧರಾನ್ ದಿವ್ಯಾನ್ ಮಹಾಪಾರಿಷದಾನ್ ಪ್ರಭುಃ ॥೨೪॥

ಸಂತುಷ್ಟನಾದ ಸಕಲಸಾಮರ್ಥ್ಯವುಳ್ಳ ಚತುರ್ಮುಖನು ಕುಮಾರನಿಗೆ ವಾಯುವೇಗವುಳ್ಳ, ಬಲಶಾಲಿಗಳಾದ, ಬೇಕಾದ ರೂಪವನ್ನು ತಾಳುವ ಸಾಮರ್ಥ್ಯವುಳ್ಳ ನಾಲ್ಕುಮಂದಿ ಅಲೌಕಿಕ ಅನುಚರರನ್ನು ಕೊಟ್ಟನು.

ನಂದಿಸೇನಂ ಲೋಹಿತಾಕ್ಷಂ ಘಣ್ಟಾಕರ್ಣಂ ಚ ಸಮ್ಮತಮ್ ।
ಚತುರ್ಥಂ ಚಾಪ್ಯತಿಬಲಂ ಖ್ಯಾತಂ ಕುಮುದಮಾಲಿನಮ್ ।

ತಥಾ ಸ್ಥಾಣುಂ ಮಹಾದೇವಂ ಮಹಾಪಾರಿಷದಂ ಕ್ರತುಮ್ ॥೨೫॥

ಮಾಯಾಶತಧರಂ ವೀರಂ ಕಾಮವೀರ್ಯಬಲಾನ್ವಿತಮ್ ।
ದದೌ ಸ್ಕಂದಾಯ ರಾಜೇಂದ್ರ ಸುರಾರಿವಿನಿಬರ್ಹಣಮ್ ॥೨೬॥

ಸ ಹಿ ದೇವಾಸುರೇ ಯುದ್ಧೇ ದೈತ್ಯಾನಾಂ ಭೀಮಕರ್ಮಣಾಮ್ ।
ಜಘಾನ ದೋರ್ಭ್ಯಾಂ ಸಂಕ್ರುದ್ಧಃ ಪ್ರಯುತಾನಿ ಚತುರ್ದಶ ॥೨೭॥

ನಂದಿಸೇನ, ಲೋಹಿತಾಕ್ಷ, ಘಂಟಾಕರ್ಣ ಮತ್ತು ಮಹಾಬಲಶಾಲಿಯಾದ ಕುಮುದಮಾಲಿ ಎಂದು ಪ್ರಸಿದ್ಧರಾದವರು ಆ ನಾಲ್ಕು ಅನುಚರರು. ಸ್ಥಾಣು ಎನಿಸಿದ ಮಹಾರುದ್ರನು ಕುಮಾರನಿಗೆ ಕ್ರತು ಎಂಬ ಅನುಚರನನ್ನು ಕೊಟ್ಟನು. ಆ ಅನುಚರನು ಮಾಯಾವಿದ್ಯೆಗಳನ್ನು ಬಲ್ಲವನಾಗಿದ್ದನು. ವೀರನಾದ ಆತನು ಬಹಳವಾದ ಬಲವುಳ್ಳವನಾಗಿದ್ದನು. ದೇವತೆಗಳ ಶತ್ರುಗಳಾದ ದೈತ್ಯರನ್ನು ನಾಶಮಾಡುವವನು. ಹಿಂದೆ ದೇವಾಸುರಯುದ್ಧದಲ್ಲಿ ಈತನು ಭಯಂಕರಕರ್ಮವುಳ್ಳ ಹದಿನಾಲ್ಕು ದಶಲಕ್ಷದೈತ್ಯರನ್ನು ತನ್ನ ಬಾಹುಗಳಿಂದಲೇ ನಾಶ ಮಾಡಿದ್ದನು.

ತಥಾ ದೇವಾ ದದುಸ್ತಸ್ಮೈ ಶಕ್ತಿಂ ನೈರ್ಋತಸೂದನೀಮ್ ।
ದೇವಶತ್ರುಕ್ಷಯಕರೀಮಜಯ್ಯಾಂ ವಿಶ್ವರೂಪಿಣೀಮ್ ॥೨೮॥

ಅದೇ ರೀತಿಯಲ್ಲಿ ದೇವತೆಗಳು ಕುಮಾರನಿಗೆ ರಾಕ್ಷಸಸಂಹಾರಕವಾದ ಶಕ್ತಿ ಎಂಬ ಆಯುಧವನ್ನು ಕೊಟ್ಟರು. ಅದನ್ನು ಯಾರೂ ಜಯಿಸಲು ಸಾಧ್ಯವಿರಲಿಲ್ಲ. ಜಗತ್ತನ್ನೇ ವ್ಯಾಪಿಸಿಕೊಳ್ಳುವ ರೂಪವನ್ನದು ಹೊಂದಿತ್ತು.

ಜಯಶಬ್ದಂ ತಥಾ ಚಕ್ರುರ್ದೇವಾಃ ಸರ್ವೇ ಸವಾಸವಾಃ ।
ಗಂಧರ್ವಯಕ್ಷರಕ್ಷಾಂಸಿ ಮುನಯಃ ಪಿತರಸ್ತಥಾ ॥೨೯॥

ಅನಂತರ ಇಂದ್ರಮೊದಲಾದ ದೇವತೆಗಳು, ಗಂಧರ್ವರು, ಯಕ್ಷರು, ರಕ್ಷಸ್ಸುಗಳು, ಮುನಿಗಳು, ಪಿತೃಗಳು ಇವರೆಲ್ಲರೂ ಕುಮಾರನಿಗೆ ಜಯವಾಗಲಿ ಎಂದು ಹೇಳಿದರು.

ತತಃ ಪ್ರಾದಾದನುಚರೌ ಯಮಃ ಕಾಲೋಪಮಾವುಭೌ ।
ಉನ್ಮಾಥಂ ಚ ಪ್ರಮಾಥಂ ಚ ಮಹಾವೀರ್ಯೌ ಮಹಾದ್ಯುತೀ ॥೩೦॥

ಯಮನು ಕುಮಾರನಿಗೆ ಇಬ್ಬರು ಅನುಚರರನ್ನು ಕೊಟ್ಟನು. ಉನ್ಮಥ ಮತ್ತು ಪ್ರಮಾಥ ಎಂಬ ಹೆಸರಿನ ಅವರು ಮಹಾಕಾಂತಿಯುಳ್ಳವರಾಗಿದ್ದರು ಮತ್ತು ಬಹಳ ವೀರ್ಯವಂತರಾಗಿದ್ದರು. ಅವರಿಬ್ಬರೂ ಕಾಲನಿಗೆ ಸದೃಶರಾಗಿದ್ದರು.

ಸುಭ್ರಾಜೌ ಭಾಸ್ವರೌ ಚೈವ ಯೌ ತೌ ಸೂರ್ಯಾನುಯಾಯಿನೌ ।
ತೌ ಸೂರ್ಯಃ ಕಾರ್ತಿಕೇಯಾಯ ದದೌ ಪ್ರೀತಃ ಪ್ರತಾಪವಾನ್ ॥೩೧॥

ಪ್ರತಾಪಿಯಾದ ಸೂರ್ಯನು ಪ್ರೀತನಾಗಿ ಕುಮಾರನಿಗೆ ಸುಭ್ರಾಜ ಮತ್ತು ಭಾಸ್ವರ ಎಂಬ ಇಬ್ಬರು ಅನುಚರರನ್ನು ಕೊಟ್ಟನು. ಅವರಿಬ್ಬರೂ ಸೂರ್ಯನನ್ನು ಅನುಸರಿಸಿ ಹೋಗುತ್ತಿದ್ದರು.

ಕೈಲಾಸಶೃಂಗಸಂಕಾಶೌ ಶ್ವೇತಮಾಲ್ಯಾನುಲೇಪನೌ ।
ಸೋಮೋಽಪ್ಯನುಚರೌ ಪ್ರಾದಾನ್ಮಣಿಂ ಸುಮಣಿಮೇವ ಚ ॥೩೨॥

ಚಂದ್ರನೂ ಕೂಡ ಮಣಿ ಮತ್ತು ಸುಮಣಿ ಎಂಬ ಇಬ್ಬರು ಅನುಚರರನ್ನು ಕುಮಾರನಿಗೆ ಕೊಟ್ಟನು. ಬೆಳ್ಳಗಿನ ಹಾರ ಮತ್ತು ಲೇಪನಗಳನ್ನು ಧರಿಸಿದ ಅವರೀರ್ವರು ಬೆಳ್ಳಗಿನ ಕೈಲಾಸಪರ್ವತದ ಶಿಖರದಂತೆ ಕಾಣಿಸುತ್ತಿದ್ದರು.

ಜ್ವಾಲಾಜಿಹ್ವಂ ತಥಾ ಜ್ಯೋತಿಮಾತ್ಮಜಾಯ ಹುತಾಶನಃ ।
ದದಾವನುಚರೌ ಶೂರೌ ಪರಸೈನ್ಯಪ್ರಮಾಥಿನೌ ॥೩೩॥

ಅಗ್ನಿಯು ತನ್ನ ಮಗನಾದ ಕುಮಾರನಿಗೆ ಜ್ವಾಲಾಜಿಹ್ವ ಮತ್ತು ಜ್ಯೋತಿ ಎಂಬ ಇಬ್ಬರು ಅನುಚರರನ್ನು ಕೊಟ್ಟನು. ಶತ್ರುಸೈನ್ಯವನ್ನು ನಾಶಮಾಡಬಲ್ಲ ಅವರಿಬ್ಬರೂ ಶೂರರಾಗಿದ್ದರು.

ಪರಿಘಂ ವಿಕಟಂ ಚೈವ ಭೀಮಂ ಚ ಸುಮಹಾಬಲಮ್ ।
ದಹತಿಂ ದಹನಂ ಚೈವ ಪ್ರಚಂಡೌ ವೀರ್ಯಸಮ್ಮತೌ ॥೩೪॥

ಅಂಶೋಽಪ್ಯನುಚರಾನ್ ಪಂಚ ದದೌ ಸ್ಕಂದಾಯ ಧೀಮತೇ ॥೩೫॥

ಅಂಶ ಎಂಬ ದೇವತೆಯು ಸ್ಕಂದನಿಗೆ ಪರಿಘ, ವಿಕಟ, ಬಲಶಾಲಿಯಾದ ಭೀಮ, ದಹತಿ ಮತ್ತು ದಹನ ಎಂಬ ಐವರು ಅನುಚರರನ್ನು ಕೊಟ್ಟನು. ಅವರಲ್ಲಿ ದಹತಿ ಮತ್ತು ದಹನರು ಬಹಳ ಸಮರ್ಥರು ಮತ್ತು ಬಲದ ವಿಷಯದಲ್ಲಿ ಎಲ್ಲರಿಂದಲೂ ಗೌರವಿಸಲ್ಪಟ್ಟವರಾಗಿದ್ದರು.

ಉತ್ಕ್ರೋಶಂ ಸಂಸ್ಕರಂ ಚೈವ ವಜ್ರದಂಡಧರಾವುಭೌ ।
ದದಾವನಲಪುತ್ರಾಯ ವಾಸವಃ ಪರವೀರಹಾ ॥೩೬॥

ಶತ್ರುವೀರರನ್ನು ಸದೆಬಡಿಯುವ ಇಂದ್ರನು ಸ್ಕಂದನಿಗೆ ಉತ್ಕ್ರೋಶ ಮತ್ತು ಸಂಸ್ಕರ ಎಂಬ ವಜ್ರಾಯುಧವನ್ನು ಧರಿಸಿರುವ ಅನುಚರರನ್ನು ಕೊಟ್ಟನು.

ತೌ ಹಿ ಶತ್ರೂನ್ ಮಹೇಂದ್ರಸ್ಯ ಜಘ್ನತುಃ ಸಮರೇ ಬಹೂನ್ ॥೩೭॥

ಅವರಿಬ್ಬರೂ ಯುದ್ಧದಲ್ಲಿ ಇಂದ್ರನ ಅನೇಕ ಶತ್ರುಗಳನ್ನು ಸಂಹರಿಸಿದ್ದರು.

ಚಕ್ರಂ ವಿಕ್ರಮಕಂ ಚೈವ ಸಂಕ್ರಮಂ ಚ ಮಹಾಬಲಮ್ ।
ಸ್ಕಂದಾಯ ತ್ರೀನನುಚರಾನ್ ದದೌ ವಿಷ್ಣುರ್ಮಹಾಯಶಾಃ ॥೩೮॥

ಮಹಾಕೀರ್ತಿವಂತನಾದ ವಿಷ್ಣುವು ಚಕ್ರ, ವಿಕ್ರಮಕ ಮತ್ತು ಮಹಾಬಲಶಾಲಿಯಾದ ಸಂಕ್ರಮ ಎಂಬ ಮೂವರು ಅನುಚರರನ್ನು ಸ್ಕಂದನಿಗೆ ಕೊಟ್ಟನು.

ವರ್ಧನಂ ನಂದನಂ ಚೈವ ಸರ್ವವಿದ್ಯಾವಿಶಾರದೌ ।
ಸ್ಕಂದಾಯ ದದತುಃ ಪ್ರೀತಾವಶ್ವಿನೌ ಭಿಷಜಾಂ ವರೌ ॥೩೯॥

ಶ್ರೇಷ್ಠವೈದ್ಯರಾದ ಅಶ್ವಿನಿದೇವತೆಗಳು ಸ್ಕಂದನಿಗೆ ವರ್ಧನ ಮತ್ತು ನಂದನ ಎಂಬ ಅನುಚರರನ್ನು ಕೊಟ್ಟರು

ಕುಂದರಂ ಕ್ರಮುಕಂ ಚೈವ ಕುಮುದಂ ಚ ಮಹಾಯಶಾಃ ।
ಡಂಬರಾಡಂಬರೌ ಚೈವ ದದೌ ಧಾತಾ ಮಹಾತ್ಮನೇ ॥೪೦॥

ಚತುರ್ಮುಖನು ಮಹಾತ್ಮನಾದ ಸ್ಕಂದನಿಗೆ ಕುಂದರ, ಕ್ರಮುಕ, ಕುಮುದ, ಡಂಬರ, ಆಡಂಬರೆಂಬ ಈ ಅನುಚರರನ್ನು ಕೊಟ್ಟನು.

ವಕ್ರಾನುವಕ್ರೌ ಬಲಿನೌ ಮೇಷವಕ್ತ್ರೌ ಬಲೋತ್ಕಟೌ ।
ದದೌ ತ್ವಷ್ಟಾ ಮಹಾಮಾಯೌ ಸ್ಕಂದಸ್ಯಾನುಚರೌ ವರೌ ॥೪೧॥

ತ್ವಷ್ಟೃವು ಸ್ಕಂದನಿಗೆ ವಕ್ರ ಮತ್ತು ಅನುವಕ್ರ ಎಂಬ ಅನುಚರರನ್ನು ಕೊಟ್ಟನು. ಆಡಿನ ಮುಖವುಳ್ಳ ಅವರಿಬ್ಬರು ಬಲವುಳ್ಳವರಾಗಿದ್ದರು ಮತ್ತು ಬಲದಿಂದಾಗಿ ಉತ್ಸುಕರಾಗಿದ್ದರು, ಮಹಾ ಮಾಯಾವಿಗಳಾಗಿದ್ದರು.

ಸುವ್ರತಂ ಸತ್ಯಸಂಧಂ ಚ ದದೌ ಮಿತ್ರೋ ಮಹಾತ್ಮನೇ ।
ಕುಮಾರಾಯ ಮಹಾತ್ಮಾನೌ ದದೌ ವಿದ್ಯಾಧರೌ ಪ್ರಭುಃ ॥೪೨॥

ಸುದರ್ಶನೀಯೌ ವರದೌ ತ್ರಿಷು ಲೋಕೇಷು ವಿಶ್ರುತೌ ।
ಸುಪ್ರಭಂ ಚ ಮಹಾತ್ಮಾನಂ ಶುಭಕರ್ಮಾಣಮೇವ ಚ ॥೪೩॥

ಕಾರ್ತಿಕೇಯಾಯ ಸಂಪ್ರಾದಾದ್ ವಿಧಾತಾ ಲೋಕವಿಶ್ರುತೌ ॥೪೪॥

ಮಹಾತ್ಮನಾದ ಸ್ಕಂದನಿಗೆ ಮಿತ್ರನು ಸುವ್ರತ ಮತ್ತು ಸತ್ಯಸಂಧರನ್ನು ಅನುಚರರನ್ನಾಗಿ ಕೊಟ್ಟನು. ವಿದ್ಯಾಧರಗಣಕ್ಕೆ ಸೇರಿದ ಇವರೀರ್ವರೂ ಮಹಾಸಾಮರ್ಥ್ಯ ಉಳ್ಳವರಾಗಿದ್ದರು. ಸುಂದರವಾದ ರೂಪವುಳ್ಳ ಹಾಗೂ ವರವನ್ನು ಕೊಡುವ ಇವರು ಮೂರು ಲೋಕಗಳಲ್ಲಿಯೇ ಪ್ರಸಿದ್ಧರಾಗಿದ್ದರು. ಮಹಾತ್ಮನಾದ ಸುಪ್ರಭ ಮತ್ತು ಶುಭಕರ್ಮ ಈ ಇಬ್ಬರನ್ನು ವಿಧಾತೃವು ಕಾರ್ತಿಕೇಯನಿಗೆ ಕೊಟ್ಟನು. ಇವರಿಬ್ಬರೂ ಲೋಕದಲ್ಲೆಲ್ಲ ಪ್ರಸಿದ್ಧರಾಗಿದ್ದರು.

ಪೂಷಾ ಪಾರಿಷದೌ ಪ್ರಾದಾತ್ ಕಾರ್ತಿಕೇಯಾಯ ಭಾರತ ।
ಪಾಲಿತುಂಗಂ ಕಲಿಂಗಂ ಚ ಮಹಾಮಾಯಾವಹಾವುಭೌ ॥೪೫॥

ಭರತಕುಲೋದ್ಭವನೇ! ಕಾರ್ತಿಕೇಯನಿಗೆ ಪೂಷನು ಪಾಲಿತುಂಗ ಮತ್ತು ಕಲಿಂಗ ಎಂಬ ಇಬ್ಬರು ಅನುಚರರನ್ನು ಕೊಟ್ಟನು. ಇವರಿಬ್ಬರೂ ಬಹಳವಾದ ಮಾಯೆಗಳನ್ನು ತಿಳಿದವರಾಗಿದ್ದರು.

ಸವಂ ಚಾತಿಸವಂ ಚೈವ ತಿಮಿವಕ್ತ್ರೌ ಮಹಾಬಲೌ ।
ಪ್ರದದೌ ಕಾರ್ತಿಕೇಯಾಯ ವರುಣಃ ಸತ್ಯಸಂಗರಃ ॥೪೬॥

ಯುದ್ಧನಿಪುಣನಾದ ವರುಣನು ಕಾರ್ತಿಕೇಯನಿಗೆ ಮಹಾಬಲಶಾಲಿಗಳಾದ, ತಿಮಿಂಗಿಲದ ಮುಖವುಳ್ಳ ಸವ ಮತ್ತ ಅತಿಸವ ಎಂಬ ಅನುಚರರನ್ನು ಕೊಟ್ಟನು.

ಬಲಂ ಚಾತಿಬಲಂ ಚೈವ ಮಹಾವಕ್ತ್ರೌ ಮಹಾಬಲೌ ।
ಪ್ರದದೌ ಕಾರ್ತಿಕೇಯಾಯ ವಾಯುರ್ಭರತಸತ್ತಮ ॥೪೭॥

ಭರತವಂಶದಲ್ಲಿ ಶ್ರೇಷ್ಠನಾದವನೇ! ವಾಯುವು ಕಾರ್ತಿಕೇಯನಿಗೆ ಬಲ ಮತ್ತು ಅತಿಬಲ ಎಂಬ ಮಹಾಬಲವುಳ್ಳ ಅನುಚರರನ್ನು ಕೊಟ್ಟನು.

ಸುವರ್ಚಸಂ ಮಹಾತ್ಮಾನಂ ತಥೈವಾऽಪ್ಯತಿವರ್ಚಸಮ್ ।
ಹಿಮವಾನ್ ಪ್ರದದೌ ರಾಜನ್ ಹುತಾಶನ ಹುತಾಯ ವೈ ॥೪೮॥

ರಾಜನೇ! ಅಗ್ನಿಪುತ್ರಕಾರ್ತಿಕೇಯನಿಗೆ ಹಿಮಾಲಯನು ಮಹಾತ್ಮನಾದ ಸುವರ್ಚಸ ಮತ್ತು ಅತಿವರ್ಚಸ ಎಂಬ ಅನುಚರರನ್ನು ಕೊಟ್ಟನು.

ಕಾಂಚನಂ ಚ ಮಹಾತ್ಮಾನಂ ಮೇಘಮಾಲಿನಮೇವ ಚ ।
ದದಾವನುಚರೌ ಮೇರುಃ ಅಗ್ನಿಪುತ್ರಾಯ ಭಾರತ ॥೪೯॥

ಮೇರುವು ಮಹಾತ್ಮನಾದ ಕಾಂಚನ ಮತ್ತು ಮೇಘಮಾಲಿ ಎಂಬ ಅನುಚರರನ್ನು ಕುಮಾರನಿಗೆ ಕೊಟ್ಟನು.

ಸ್ಥಿರಂ ಚಾತಿಸ್ಥಿರಂ ಚೈವ ಮೇರುರೇವಾಪರೌ ದದೌ ।
ಮಹಾತ್ಮನೇऽಗ್ನಿಪುತ್ರಾಯ ಮಹಾಬಲಪರಾಕ್ರಮೌ ॥೫೦॥

ಮಹಾಬಲ ಮತ್ತು ಪರಾಕ್ರಮವುಳ್ಳ ಸ್ಥಿರ ಮತ್ತಿ ಅತಿಸ್ಥಿರ ಎಂಬ ಇನ್ನಿಬ್ಬರನ್ನೂ ಹಿಮಾಲಯನು ಸ್ಕಂದನಿಗೆ ಕೊಟ್ಟನು.

ಉಚ್ಛ್ರಿತಂ ಚಾತಿಶೃಂಗಂ ಚ ಮೇಘಮಾಲಿನಮೇವ ಚ ।
ಪ್ರದದಾವಗ್ನಿಪುತ್ರಾಯ ವಿಂಧ್ಯಃ ಪಾರಿಷದಾನ್ ಶುಭಾನ್ ॥೫೧॥

ವಿಂಧ್ಯನು ಅಗ್ನಿಪುತ್ರಸ್ಕಂದನಿಗೆ ಉಚ್ಛ್ರಿತ, ಅತಿಶೃಂಗ ಮತ್ತು ಮೇಘಮಾಲಿಯನ್ನು ಅನುಚರರನ್ನಾಗಿ ಕೊಟ್ಟನು.

ಸಂಗ್ರಹಂ ವಿಗ್ರಹಂ ಚೈವ ಸಮುದ್ರೋऽಪಿ ಗದಾಧರೌ ।
ಪ್ರದದಾವಗ್ನಿಪುತ್ರಾಯ ಮಹಾಪಾರಿಷದಾವುಭೌ ॥೫೨॥

ಸಮುದ್ರನು ಗಧಾದಾರಿಗಳಾದ ಸಂಗ್ರಹ ಮತ್ತು ವಿಗ್ರಹ ಎಂಬ ಇಬ್ಬರು ಉತ್ತಮ ಅನುಚರರನ್ನು ಕೊಟ್ಟನು.

ಉನ್ಮಾದಂ ಪುಷ್ಪದಂತಂ ಚ ಶಂಕುಕರ್ಣಂ ತಥೈವ ಚ ।
ಪ್ರದದಾವಗ್ನಿಪುತ್ರಾಯ ಪಾರ್ವತೀ ಶುಭದರ್ಶನಾ ॥೫೩॥

ಮಂಗಳಸ್ವರೂಪಳಾದ ಪಾರ್ವತಿಯು ಸ್ಕಂದನಿಗೆ ಉನ್ಮಾದ, ಪುಷ್ಪದಂತ ಮತ್ತು ಶಂಕುಕರ್ಣ ಎಂಬ ಅನುಚರರನ್ನು ಕೊಟ್ಟಳು.

ಜಯಂ ಮಹಾಜಯಂ ಚೈವ ಗಂಗಾ ಜ್ವಲನಸೂನವೇ ।
ಪ್ರದದೌ ಪುರುಷವ್ಯಾಘ್ರ ಮಹಾಬಲಪರಾಕ್ರಮೌ ॥೫೪॥

ಪುರುಷಶ್ರೇಷ್ಠನೇ! ಗಂಗೆಯು ಕುಮಾರನಿಗೆ ಬಹಳವಾದ ಬಲ ಮತ್ತು ಪರಾಕ್ರಮವುಳ್ಳ ಜಯ ಮತ್ತು ಮಹಾಜಯರೆಂಬ ಇಬ್ಬರು ಅನುಚರರನ್ನು ಕೊಟ್ಟಳು.

ಏವಂ ಸಾಧ್ಯಾಶ್ಚ ಬಹವೋ ರುದ್ರಾಶ್ಚ ಪಿತರಸ್ತಥಾ ।
ಸಾಗರಾಃ ಸರಿತಶ್ಚೈವ ಗಿರಯಶ್ಚ ಮಹಾಬಲಾನ್ ॥೫೫॥

ದದುಃ ಸೇನಾಗಣಾಧ್ಯಕ್ಷಾನ್ ಶೂಲಪಟ್ಟಸಧಾರಿಣಃ ।
ದಿವ್ಯಪ್ರಹರಣೋಪೇತಾನ್ ನಾನಾವೇಷವಿಭೂಷಿತಾನ್ ॥೫೬॥

ಅದೇ ರೀತಿಯಲ್ಲಿ ಬಹಳ ಮಂದಿ ಸಾಧ್ಯರು, ರುದ್ರರು, ಪಿತೃಗಳು, ಸಾಗರಗಳು, ನದಿಗಳು, ಗಿರಿಗಳು ಇವರೆಲ್ಲರೂ ಸೇನಾಧ್ಯಕ್ಷರನ್ನು ಕೊಟ್ಟರು. ಆ ಸೇನಾಧ್ಯಕ್ಷರು ಕೈಯಲ್ಲಿ ಶೂಲ, ಪಟ್ಟಸ ಮೊದಲಾದ ಆಯುಧಗಳನ್ನು ಧರಿಸಿದ್ದರು. ಅಲೌಕಿಕವಾದ ಶಸ್ತ್ರಗಳನ್ನು ಹಿಡಿದಿದ್ದರು. ಅನೇಕ ವಿಧದ ವೇಷಗಳನ್ನು ಧರಿಸಿಕೊಂಡಿದ್ದರು.

ಶೃಣು ನಾಮಾನಿ ಚಾಪ್ಯೇಷಾಂ ಯೇ ಚಾನ್ಯೇ ಸ್ಕಂದಸೈನಿಕಾಃ ।
ವಿವಿಧಾಯುಧಸಂಪನ್ನಾಃ ಚಿತ್ರಾವರಣವರ್ಮಿಣಃ ॥೫೭॥

ವಿವಿಧ ರೀತಿಯ ಆಯುಧಗಳನ್ನು ಹಿಡಿದುಕೊಂಡಿರುವ, ಚಿತ್ರ-ವಿಚಿತ್ರವಾದ ಕವಚಗಳನ್ನು ಧರಿಸಿರುವ ಸ್ಕಂದಸೈನಿಕರ ಹೆಸರುಗಳನ್ನು ಹೇಳುತ್ತೇನೆ, ಕೇಳು.

ಗಜಕರ್ಣೋ ನಿಕುಂಭಶ್ಚ ಪದ್ಮಃ ಕುಮುದ ಏವ ಚ ।
ಸುನಂದೋ ದ್ವಾದಶಭುಜಃ ತಥಾ ಕೃಷ್ಣೋಪಕೃಷ್ಣಕೌ ॥೫೮॥

ದ್ರೋಣಶ್ರವಾಃ ಕಪಿಸ್ಕಂಧಃ (ಧ್ವಜಃ) ಕಾಂಚನಾಕ್ಷೋ ಜಲಂಧಮಃ ॥೫೯॥

ಅಕ್ಷಿಸಂತರ್ಜನೋ ರಾಜನ್ ಕುನದೀಕಸ್ತಥಾऽಭ್ರಕೃತ್ ।
ಏಕಾಕ್ಷೋ ದ್ವಾದಶಭುಜಃ ತಥೈವೈಕಜಟಃ ಪ್ರಭುಃ ॥೬೦॥

ಸಹಸ್ರಬಾಹುರ್ವಿಕಟೋ ವ್ಯಾಘ್ರಾಸ್ಯಃ ಕ್ಷಿತಿಕಂಪನಃ ।
ಪುಣ್ಯನಾಮಾ ಸುನಾಮಾ ಚ ಸುವಕ್ತ್ರಃ ಪ್ರಿಯದರ್ಶನಃ ॥೬೧॥

ಪರಿಸ್ರಾವಃ ಕೋಕನದಃ ಪ್ರಿಯಮಾಲ್ಯಾನುಲೇಪನಃ ।
ಗಜೋದರೋ ಗಜಶಿರಾಃ ಸ್ಕಂಧಾಕ್ಷಃ ಶತಲೋಚನಃ ॥೬೨॥

ಜ್ವಾಲಾಜಿಹ್ವಃ ಕರಾಲಶ್ಚ ವಜ್ರನಾಭೋ ವಸುಪ್ರಭಃ ।
ಚತುರ್ದಂಷ್ಟ್ರೋಽಷ್ಟಜಿಹ್ವಶ್ಚ ಮೇಘನಾದಃ ಪೃಥುಶ್ರವಾಃ ॥೬೩॥

ಏದ್ಯುದಕ್ಷೋ ಧನುರ್ವಕ್ತ್ರೋ ಜಠರೋ ಮಾರುತಾಶನಃ ।
ಉದಾರಾಕ್ಷೋ ಋಷಾಕ್ಷಶ್ಚ ವಜ್ರನಾಭೋ ವಸುಪ್ರದಃ ॥೬೪॥

ಸಮುದ್ರವೇಗೋ ರಾಜೇಂದ್ರ ಶೈಲಕಂಪೀ ತಥೈವ ಚ ।
ಮಂತ್ರಮೇಷಃ ಪ್ರಭಾವಶ್ಚ ತಥಾ ನಂದೋಪನಂದಕೌ ॥೬೫॥

ಧೂಮ್ರಃ ಶ್ವೇತಃ ಕಲಿಂಗಶ್ಚ ಸಿದ್ಧಾರ್ಥೋ ವರದಸ್ತಥಾ ।
ಪ್ರಿಯಕಶ್ಚೈವ ನಂದಶ್ಚ ಗೋನಂದಶ್ಚ ಪ್ರತಾಪವಾನ್ ॥೬೬॥

ಆನಂದಶ್ಚ ಪ್ರಮೋದಶ್ಚ ಸ್ವಸ್ತಿಕೋ ಧ್ರುವಕೃತ್ ತಥಾ ।
ಕ್ಷೇಮಪಾಪಃ ಸುಜಾತಶ್ಚ ಚಿತ್ರಯಾತ್ರಶ್ಚ ಭಾರತ ॥೬೭॥

ಗೋವ್ರಜಃ ಕನಕಾಪೀಡೋ ಮಹಾಪಾರಿಷದೇಶ್ವರಃ ।
ಗಾಯನೋ ಹಾಯನಶ್ಚೈವ ಬಾಣಖಡ್ಗಶ್ಚ ವೀರ್ಯವಾನ್ ॥೬೮॥

ವೈತಾಲೀ ಚಾತಿತಾಲೀ ಚ ತಥಾ ಕಾಲಿಕಪಾಲಿಕೌ ।
ಮಾಂಸಾಲೀಕಂಕದಿಗ್ದಾಂಗಃ ಸಮುದ್ರೋ ಮಾನಸಶ್ಚ ಹ ॥೬೯॥

ರಣೋತ್ಕಟಃ ಪ್ರಭಾಸಶ್ಚ ಶ್ವೇತಶೀರ್ಷಶ್ಚ ನಂದಕಃ ।
ಕಾಲಃ ಕಾಂಡಶರೀರಶ್ಚ ತಥಾ ಕುಂಭಾಂಡಕೋಽಪರಃ ॥೭೦॥

ಅಲಿಕಾಂಧಿಸ್ಥಿತಶ್ಚೈವ ಭೂತಲೋನ್ಮಾದನಸ್ತಥಾ ।
ಯಜ್ವಾಹಃ ಸುವಾಹಶ್ಚ ದೇವಯಾಜೀ ಚ ಸೋಮಪಃ ॥೭೧॥

ಜಾಲಕಶ್ಚ ಮಹಾತೇಜಾಃ ಕ್ರುದ್ಧಾಕ್ರುದ್ಧೌ ಚ ಭಾರತ ।
ತುಹನಶ್ಚ ತುಹಾನಶ್ಚ ಚಿತ್ರಸೇನಶ್ಚ ವೀರ್ಯವಾನ್ ॥೭೨॥

ಮಾತುರಃ ಸುಪ್ರಸಾದಶ್ಚ ಕಿರೀಟೀ ಚ ಮಹಾಬಲಃ ।
ವಸಾನೋ ಮಧುಕರ್ಣಶ್ಚ ಕಲಶೋದರ ಏವ ಚ ॥೭೩॥

ಯವಂತೋ ಮನ್ಮಥಕರಃ ಸೂಚೀವಕ್ತ್ರಶ್ಚ ವೀರ್ಯವಾನ್ ।
ಶ್ವೇತವಕ್ತ್ರೋಽಶ್ವವಕ್ತ್ರಶ್ಚ ಪಾಂಡರಃ ಸುಮಹಾಬಲಃ ॥೭೪॥

ಕುಂಡಬಾಹುಃ ಸುಬಾಹುಶ್ಚ ರಾಜನ್ ಕೋಕಿಲಕಸ್ತಥಾ ।
ಆಢಕಃ ಕನಕಾಕ್ಷಶ್ಚ ಬಾಲೋ ಮಾನಾಧಿಕಃ ಪ್ರಭುಃ ॥೭೫॥

ಸಂಚಾರಕಃ ಕೋಕನಕೋ ಗೃಧ್ರವಕ್ತ್ರಶ್ಚ ಚುಂಬುಕಃ ।
ಲೋಪಾಶವಕ್ತ್ರೋಽಜಫಲಃ ಶಾಖಾವಕ್ತ್ರಶ್ಚ ತುಂಡಕಃ ॥೭೬॥

ಉಗ್ರಗ್ರೀವಶ್ಚ ಕೃಷ್ಣಶ್ಚ ಹಂಸವಕ್ತ್ರಶ್ಚ ಚಂದ್ರಮಾಃ ।
ವಾಣಿಕರ್ಮಾ ಚ ಮಂಡೂಕಃ ಪಂಚವಕ್ತ್ರಶ್ಚ ಶಿಕ್ಷಕಃ ॥೭೭॥

ಮೇಷವಕ್ತ್ರಶ್ಚ ಜಂಬೂಕಃ ಶಾಕವಕ್ತ್ರಶ್ಚ ತುಂಡಕಃ ।
ಯೋಗಯುಕ್ತೋ ಮಹಾತ್ಮಾ ಚ ಸತತಂ ಬ್ರಾಹ್ಮಣಪ್ರಿಯಃ ॥೭೮॥

ಗಜಕರ್ಣ, ನಿಕುಂಭ, ಪದ್ಮ, ಕುಮುದ, ಸುನಂದ, ದ್ವಾದಶಭುಜ, ಕೃಷ್ಣ, ಉಪಕೃಷ್ಣ, ದ್ರೋಣಶ್ರವಸ್ಸು, ಕಪಿಧ್ವಜ, ಕಾಂಚನಾಕ್ಷ, ಜಲಂಧಮ, ಅಕ್ಷಿಸಂತರ್ಜನ, ಕುನದೀಕ, ಅಭ್ರಕೃತ್, ಏಕಾಕ್ಷ, ದ್ವಾದಶಭುಜ, ಏಕಜಟ, ಪ್ರಭು, ಸಹಸ್ರಬಾಹುಃ, ವಿಕಚ, ವ್ಯಾಘ್ರಾಸ್ಯ, ಕ್ಷಿತಿಕಂಪನ, ಪುಣ್ಯನಾಮ, ಸುನಾಮ, ಸುವಕ್ತ್ರ ಪ್ರಿಯದರ್ಶನ, ಪರಿಸ್ರಾವ, ಕೋಕನದ, ಪ್ರಿಯಮಾಲೀ, ಅನುಲೇಪನ, ಗಜೋದರ, ಗಜಶಿರ, ಸ್ಕಂಧಾಕ್ಷ, ಶತಲೋಚನ, ಜ್ವಾಲಾಜಿಹ್ವ, ಕರಾಲ, ವಜ್ರನಾಭ, ವಸುಪ್ರಭ, ಚತುರ್ದಂಷ್ಟ್ರ, ಅಷ್ಟಜಿಹ್ವ, ಮೇಘನಾದ, ಪೃಥುಶ್ರವಸ್ಸು, ವಿದ್ಯುದಕ್ಷ, ಧನುರ್ವಕ್ತ್ರ, ಜಠರ, ಮಾರುತಾಶನ, ಉದಾರಾಕ್ಷ, ಋಷಾಕ್ಷ, ವಜ್ರನಾಭ, ವಸುಪ್ರದ, ಸಮುದ್ರವೇಗ, ಶೈಲಕಂಪೀ, ಮಂತ್ರಮೇಷ, ಪ್ರಭಾವ, ನಂದ, ಉಪನಂದ, ಧೂಮ್ರ, ಶ್ವೇತ, ಕಲಿಂಗ, ಸಿದ್ಧಾರ್ಥ, ವರದ, ಪ್ರಿಯಕ, ನಂದ, ಗೋನಂದ, ಆನಂದ, ಪ್ರಮೋದ, ಸ್ವಸ್ತಿಕ, ಧ್ರುವಕೃತ್, ಕ್ಷೇಮಪಾಪ, ಸುಜಾತ, ಚಿತ್ರಯಾತ್ರ, ಗೋವ್ರಜ, ಕನಕಾಪೀಡ, ಮಹಾಪಾರಿಷದೇಶ್ವರ, ಗಾಯನ, ಹಾಯನ, ಬಾಣಖಡ್ಗ, ವೈತಾಲಿ, ಅತಿತಾಲಿ, ಕಾಲಿಕ, ಪಾಲಿಕ, ಮಾಂಸಾಲಿ, ಕಂಕದಿಗ್ಧಾಂಗ, ಸಮುದ್ರ, ಮಾನಸ, ರಣೋತ್ಕಟ, ಪ್ರಭಾಸ, ಶ್ವೇತಶೀರ್ಷ, ನಂದಕ, ಕಾಲ, ಕಾಂಡಶರೀರ, ಕುಂಭಾಂಡಕ, ಅಲಿಕಾಂಧಿ,

ಭೂತಲೋನ್ಮಾದನ, ಯಜ್ಞವಾಹ, ಸುವಾಹ, ದೇವಯಾಜೀ, ಸೋಮಪ, ಜಾಲಕ, ಮಹಾತೇಜಸ್ಸು ಕ್ರುದ್ಧ ಅಕ್ರುದ್ಧ, ತುಹನ, ತುಹಾನ, ಚಿತ್ರಸೇನ, ಮಾತುರ, ಸುಪ್ರಸಾದ, ಕಿರೀಟೀ, ವಸಾನ, ಮಧುಕರ್ಣ, ಕಲಶೋದರ, ಯವಂತ, ಮನ್ಮಥಕರ, ಸೂಚೀವಕ್ತ್ರ ಶ್ವೇತವಕ್ತ್ರ ಅಶ್ವವಕ್ತ್ರ ಪಾಂಡರ, ಸುಮಹಾಬಲ, ಕುಂಡಬಾಹು, ಸುಬಾಹು, ಕೋಕಿಲಕ, ಆಢಕ, ಕನಕಾಕ್ಷ ಬಾಲ, ಮಾನಾಧಿಕ, ಸಂಚಾರಕ, ಕೋಕನಕ, ಗೃಧ್ರವಕ್ತ್ರ ಚುಂಬುಕ, ಲೋಪಾಶವಕ್ತ್ರ ಅಜಫಲ, ಶಾಖಾವಕ್ತ್ರ ತುಂಡಕ, ಉಗ್ರಗ್ರೀವ, ಕೃಷ್ಣ ಹಂಸವಕ್ತ್ರ ಚಂದ್ರಮ, ವಾಣಿಕರ್ಮ, ಮಂಡೂಕ, ಪಂಚವಕ್ತ್ರ ಶಿಕ್ಷಕ, ಮೇಷವಕ್ತ್ರ ಜಂಬೂಕ, ಶಾಕವಕ್ತ್ರ ತುಂಡಕ, ಯೋಗ - ಇವು ಅವರ ಹೆಸರುಗಳು. ಇವರೆಲ್ಲರೂ ಯೋಗವುಳ್ಳವರಾಗಿದ್ದರು. ಮಹಾತ್ಮರಾದ ಇವರು ಯಾವಾಗಲೂ ಬ್ರಾಹ್ಮಣರಿಗೆ ಪ್ರಿಯರಾಗಿದ್ದರು.

ಪೈತಾಮಹೋ ಮಹಾತ್ಮಾ ಚ ಮಹಾಪಾರಿಷದಶ್ಚ ಯಃ ।
ಯೌವನಸ್ಥಾಶ್ಚ ಬಾಲಾಶ್ಚ ವೃದ್ಧಾಶ್ಚ ಜನಮೇಜಯ ॥೭೯॥

ಬ್ರಹ್ಮದೇವನು ಕೊಟ್ಟ ಅನುಚರನು ಮಹಾತ್ಮನಾಗಿದ್ದನು. ಜನಮೇಜಯನೇ! ಈ ಅನುಚರರಲ್ಲಿ ಯುವಕರು, ಬಾಲಕರು ಹಾಗೂ ವೃದ್ಧರಾದವರು ಇದ್ದರು.

ಸಹಸ್ರಶಃ ಪಾರಿಷದಾಃ ಕುಮಾರಮುಪತಸ್ಥಿರೇ ॥೮೦॥

ಸಾವಿರಾರು ಸಂಖ್ಯೆಯಲ್ಲಿ ಅನುಚರರು ಸ್ಕಂದನ ಹತ್ತಿರ ಬಂದರು.

ವಕ್ತ್ರೈರ್ನಾನಾವಿಧೈರ್ಯೇ ತು ಶೃಣು ತಾನ್ ಜನಮೇಜಯ ॥೮೧॥

ಜನಮೇಜಯನೇ! ಬೇರೆ ಬೇರೆ ರೀತಿಯ ಮುಖವುಳ್ಳ ಅನುಚರರ ಬಗ್ಗೆ ಹೇಳುತ್ತೇನೆ, ಕೇಳು.

ಕೂರ್ಮಕುಕ್ಕುಟವಕ್ತ್ರಾಶ್ಚ ಶಶಗೋಧಾಮುಖಾಸ್ತಥಾ ।
ಖರೋಷ್ಟ್ರವದನಾಶ್ಚೈವ ವರಾಹವದನಾಸ್ತಥಾ ॥೮೨॥

ಮನುಷ್ಯಮೇಷವಕ್ತ್ರಾಶ್ಚ ಸೃಗಾಲವದನಾಸ್ತಥಾ ।
ಮಾರ್ಜಾರಶಶವಕ್ತ್ರಾಶ್ಚ ದೀರ್ಘವಕ್ತ್ರಾಶ್ಚ ಭಾರತ ॥೮೩॥

ನಕುಲೋಲೂಕವಕ್ತ್ರಾಶ್ಚ ಶ್ವವಕ್ತ್ರಾಶ್ಚ ತಥಾ ಪರೇ ।
ಆಖುವಕ್ತ್ರಾಶ್ಶ್ವಭ್ರವಕ್ತ್ರಾ ಮಯೂರವದನಾಸ್ತಥಾ ॥೮೪॥

ಮತ್ಸ್ಯಮೇಷಾನನಾಶ್ಚಾನ್ಯೇ ಅಜಾವಿಮಹಿಷಾನನಾಃ ।
ಋಕ್ಷಶಾರ್ದೂಲವಕ್ತ್ರಾಶ್ಚ ದ್ವೀಪಿಸಿಂಹಾನನಾಸ್ತಥಾ ॥೮೫॥

ಭೀಮಾ ಗಜಾನನಾಶ್ಚೈವ ತರಕ್ಷುವದನಾಸ್ತಥಾ ।
ಗರುಡಾನನಾಃ ಖಡ್ಗಮುಖಾ ವೃಕಕಾಕಾಮುಖಾಸ್ತಥಾ ॥೮೬॥

ಗೋವಾನರಮುಖಾಶ್ಚಾನ್ಯೇ ಪೃಷದಂಶಮುಖಾಸ್ತಥಾ ।
ಮಹಾಜಠರಪಾದಾಂಗಾಃ ಕಾಕಾಕ್ಷಾಶ್ಚಾಪಿ ಭಾರತ ॥೮೭॥

ಆಮೆ-ಹುಂಜದ ಮುಖವುಳ್ಳವರು, ಮೊಲದ ಮುಖವುಳ್ಳವರು, ಉಡದ ಮುಖ ಉಳ್ಳವರು, ಕತ್ತೆಯ ಮುಖವುಳ್ಳವರು, ಒಂಟೆಯ ಮುಖವುಳ್ಳವರು, ಹಂದಿಯ ಮುಖವುಳ್ಳವರು, ಮನುಷ್ಯರ ಮುಖವುಳ್ಳವರು, ಆಡಿನ ಮುಖವುಳ್ಳವರು, ನರಿಯ ಮುಖವುಳ್ಳವರು, ಬೆಕ್ಕಿನ ಮುಖವುಳ್ಳವರು, ಮೊಲದ ಮುಖವುಳ್ಳವರು ಇದ್ದರು. ಉದ್ದವಾದ ಮುಖವುಳ್ಳವರು ಇದ್ದರು. ಮುಂಗುಸಿಯ ಮುಖವುಳ್ಳವರು, ಗೂಬೆಯ ಮುಖವುಳ್ಳವರು, ನಾಯಿಯ ಮುಖವುಳ್ಳವರು, ಇಲಿಯ ಮುಖವುಳ್ಳವರು, ಕುದುರೆಯ ಮುಖವುಳ್ಳವರು, ನವಿಲಿನ ಮುಖವುಳ್ಳವರು, ಮೀನಿನ ಮುಖವುಳ್ಳವರು, ಆಡಿನ ಮುಖವುಳ್ಳವರು, ಟಗರಿನ ಮುಖವುಳ್ಳವರು, ಕುರಿಯ ಮುಖವುಳ್ಳವರು, ಕೋಣದ ಮುಖವುಳ್ಳವರು, ಕರಡಿಯ ಮುಖವುಳ್ಳವರು, ಹುಲಿಯ ಮುಖವುಳ್ಳವರು, ಆನೆಯ ಮುಖವುಳ್ಳವರು, ಸಿಂಹದ ಮುಖವುಳ್ಳವರು, ಭಯಂಕರವಾದ ಆನೆಯ ಮುಖವುಳ್ಳವರು, ಚಿರತೆಯ ಮುಖವುಳ್ಳವರು, ಗಿಡುಗದ ಮುಖವುಳ್ಳವರು, ಖಡ್ಗಮೃಗದ ಮುಖವುಳ್ಳವರು, ತೋಳದ ಮುಖವುಳ್ಳವರು, ಕಾಗೆಯ ಮುಖವುಳ್ಳವರು, ಹಸುವಿನ ಮುಖವುಳ್ಳವರು, ಕೋತಿಯ ಮುಖವುಳ್ಳವರು, ಕಾಡುಬೆಕ್ಕಿನ ಮುಖವುಳ್ಳವರು ಇದ್ದರು. ದೊಡ್ಡದಾದ ಹೊಟ್ಟೆಯುಳ್ಳವರು, ದೊಡ್ಡದಾದ ಪಾದವುಳ್ಳವರು, ಕಾಗೆಯ ಕಣ್ಣುಳ್ಳವರು ಇದ್ದರು.

ಪಾರಾವತಮುಖಾಶ್ಚಾನ್ಯೇ ತಥಾ ವ್ಯಕ್ತಮುಖಾಃ ಪರೇ ।
ಕೋಕಿಲಾವದನಾಶ್ಚೈವ ಶ್ಯೇನತಿತ್ತಿರಿಕಾನನಾಃ ॥೮೮॥

ಪಾರಿವಾಳದ ಮುಖವುಳ್ಳವರು, ಚೆನ್ನಾಗಿ ಕಾಣಿಸುವ ಮುಖವುಳ್ಳವರು, ಕೋಗಿಲೆಯ ಮುಖವುಳ್ಳವರು, ಗಿಡುಗದ ಮುಖವುಳ್ಳವರು, ತಿತ್ತಿರಿಪಕ್ಷಿಯ ಮುಖವುಳ್ಳವರು ಇದ್ದರು.

ಆಶೀವಿಷಾಸಕ್ತಕಂಠಾ ಗೋನಾಸಾಭರಣಾಸ್ತಥಾ ।
ಸ್ಥೂಲೋದರಾಃ ಕೃಶಾಂಗಾಶ್ಚ ಸ್ಥೂಲಾಂಗಾಶ್ಚ ಕೃಶೋದರಾಃ ॥೮೯॥

ಹ್ರಸ್ವಗ್ರೀವಾ ಮಹಾಕಂಠಾ ನಾನಾವ್ಯಾಲವಿಭೂಷಿತಾಃ ।
ಗಜೇಂದ್ರಚರ್ಮವಸನಾಸ್ತಥಾ ಕೃಷ್ಣಾಜಿನಾಂಬರಾಃ ॥೯೦॥

ಕಂಠದಲ್ಲಿ ಸರ್ಪಗಳನ್ನು ಸುತ್ತಿಕೊಂಡವರು, ಹಸುವಿನ ಮೂಗಿನ ಆಭರಣಗಳನ್ನು ಧರಿಸಿದವರು ಇದ್ದರು. ದೊಡ್ಡಹೊಟ್ಟೆಯವರು, ತೆಳ್ಳಗಿನ ಅಂಗವುಳ್ಳವರು, ದಪ್ಪಗಿನ ಅಂಗವುಳ್ಳವರು, ತೆಳ್ಳಗಿನ ಹೊಟ್ಟೆಯುಳ್ಳವರು, ಗಿಡ್ಡದಾದ ಕುತ್ತಿಗೆಯುಳ್ಳವರು, ದಪ್ಪಗಿನ ಕುತ್ತಿಗೆಯುಳ್ಳವರು, ಅನೇಕ ಸರ್ಪಗಳಿಂದ ಅಲಂಕೃತರಾದವರು, ಆನೆಯ ಚರ್ಮವನ್ನು ಹೊದ್ದುಕೊಂಡವರು, ಕೃಷ್ಣಮೃಗದ ಚರ್ಮವನ್ನು ಹೊದ್ದುಕೊಂಡವರು ಇದ್ದರು.

ಸ್ಕಂದೇಮುಖಾ ಮಹಾರಾಜ ತಥಾ ಹ್ಯುದರತೋಮುಖಾಃ ।
ಪೃಷ್ಠೇಮುಖಾಸ್ತಥಾ ಕಂಠೇಮುಖಾ ಜಂಘಾಮುಖಾ ಅಪಿ ॥೯೧॥

ಪಾರ್ಶ್ವತನಾಶ್ಚ ಬಹವೋ ನಾನಾದೇಶಮುಖಾಃ ಪರೇ ।
ತಥಾ ಕೀಟಪತಂಗಾನಾಂ ಸದೃಶಾಸ್ಯಾ ಗಣೇಶ್ವರಾಃ ॥೯೨॥

ಮಹಾರಾಜನೇ! ಹೆಗಲಲ್ಲಿ ಮುಖವುಳ್ಳವರು, ಹೊಟ್ಟೆಯಲ್ಲಿ ಮುಖವುಳ್ಳವರು, ಬೆನ್ನಲ್ಲಿ ಮುಖವುಳ್ಳವರು, ಕುತ್ತಿಗೆಯಲ್ಲಿ ಮುಖವುಳ್ಳವರು, ಮೊಣಕಾಲಲ್ಲಿ ಮುಖವುಳ್ಳವರು, ದೇಹದ ಬದಿಯಲ್ಲಿ ಮುಖವುಳ್ಳವರು, ಬೇರೆ ಬೇರೆ ಕಡೆ ಮುಖವುಳ್ಳವರು ಇದ್ದರು. ಹಾಗೆಯೇ ಕೀಟಗಳ ಹಾಗೆ ಮುಖವುಳ್ಳವರು, ಚಿಟ್ಟೆಗಳ ಹಾಗೆ ಮುಖವುಳ್ಳವರು ಇದ್ದರು.

ನಾನಾವ್ಯಾಲಮುಖಾಶ್ಚಾನ್ಯೇ ಬಹುಬಾಹುಶಿರೋಧರಾಃ ।
ನಾನಾಕೃತಿಮುಖಾಃ ಕೇಚಿದ್ ಬಾಹುಕರ್ಣಾಕ್ಷಿನಾಸಿಕಾಃ ॥೯೩॥

ಅನೇಕ ಸರ್ಪಗಳ ಮುಖವುಳ್ಳವರು, ಅನೇಕ ಕೈ ಮತ್ತು ತಲೆಯುಳ್ಳವರು, ಅನೇಕ ಆಕಾರದ ಮುಖವುಳ್ಳವರು ಕೆಲವರು, ಬಾಹು, ಕರ್ಣ, ಅಕ್ಷಿ, ನಾಸವುಳ್ಳವರು ಇದ್ದರು.

ಭುಜಂಗಭೋಗವದನಾ ನಾನಾಗುಲ್ಮನಿವಾಸಿನಃ ।
ಚೀರಸಂವೃತಗಾತ್ರಾಶ್ಚ ತಥಾ ವಲ್ಕಲವಾಸಸಃ ॥೯೪॥

ಹಾವಿನ ಶರೀರದಂತೆ ಮುಖವುಳ್ಳವರು ಇದ್ದರು. ವಿವಿಧ ಪೊದೆಗಳಲ್ಲಿ ವಾಸಮಾಡುವವರು, ನಾರುಮಡಿಯನ್ನು ಸುತ್ತಿಕೊಂಡವರು, ಮರದ ತೊಗಟೆಗಳನ್ನು ಸುತ್ತಿಕೊಂಡವರು ಇದ್ದರು.

ನಾನಾವೇಷಧರಾಶ್ಚಾನ್ಯೇ ಚರ್ಮವಾಸಸ ಏವ ಚ ।
ಉಷ್ಣೀಷಿಣೋ ಮಕುಟಿನಃ ಕಂಬುಗ್ರೀವಾಃ ಸುವರ್ಚಸಃ ॥೯೫॥

ಅನೇಕವಿಧದ ವೇಷವನ್ನು ಹಾಕಿಕೊಂಡವರು ಇದ್ದರು. ಚರ್ಮದ ಬಟ್ಟೆ ಧರಿಸಿದವರು ಇದ್ದರು. ರುಮಾಲು (ಮುಂಡಾಸು) ಕಟ್ಟಿಕೊಂಡವರು, ಕಿರೀಟಧಾರಣೆ ಮಾಡಿದವರು ಇದ್ದರು. ಶಂಖದ ಹಾಗೆ ಕುತ್ತಿಗೆಯುಳ್ಳವರು ಇದ್ದರು. ಕಾಂತಿಮಂತರಾಗಿದ್ದರು.

ಕಿರೀಟಿನಃ ಪಂಚಶಿಖಾಸ್ತಥಾ ಕಠಿನಮೂರ್ಧಜಾಃ ।
ತ್ರಿಶಿಖಾ ದ್ವಿಶಿಖಾಶ್ಚೈವ ತಥಾ ಸಪ್ತಶಿಖಾಃ ಪರೇ ॥೯೬॥

ಕೆಲವರು ಕಿರೀಟವನ್ನು ಹಾಕಿಕೊಂಡಿದ್ದರು. ಕೆಲವರು ಐದು ಶಿಖೆಗಳನ್ನು ಧರಿಸಿಕೊಂಡಿದ್ದರು. ಕೆಲವರು ಜಟಾಧಾರಿಗಳಾಗಿದ್ದರು. ಕೆಲವರು ಎರಡು ಶಿಖೆಯುಳ್ಳವರು, ಕೆಲವರು ಒಂದು ಶಿಖೆ ಉಳ್ಳವರು, ಕೆಲವರು ಏಳು ಶಿಖೆಯುಳ್ಳವರು ಇದ್ದರು.

ಶಿಖಂಡಿನೋ ಮಕುಟಿನೋ ಮುಂಡಾಶ್ಚೈವ ಜಟಾಧರಾಃ ।
ಚಿತ್ರಮಾಲಾಂಬರಧರಾಃ ಕೇಚಿದ್ ರೋಮಾನನಾಸ್ತಥಾ ॥೯೭॥

ಕೆಲವರು ತಲೆಯಲ್ಲಿ ದೊಡ್ಡದಾದ ಜುಟ್ಟು (ಶಿಖೆ) ಉಳ್ಳವರು, ಕೆಲವರು ಕಿರೀಟವನ್ನು ಧರಿಸಿಕೊಂಡವರು, ಕೆಲವರು ತಲೆಯನ್ನು ಬೋಳಿಸಿಕೊಂಡವರು,

ಕೆಲವರು ಜಟೆಯನ್ನು ಬಿಟ್ಟವರು ಇದ್ದರು. ಕೆಲವರು ಚಿತ್ರವಿಚಿತ್ರವಾದ ಮಾಲೆ ಮತ್ತು ಬಟ್ಟೆಯನ್ನು ಹಾಕಿಕೊಂಡವರು ಇದ್ದರು. ಮುಖದಲ್ಲಿ ರೋಮವನ್ನು ಹೊಂದಿದವರು ಇದ್ದರು.

ವಿಗ್ರಹೈಕರಸಾ ನಿತ್ಯಮಜೇಯಾಃ ಸುರಸತ್ತಮೈಃ ।
ಕೃಷ್ಣಾಃ ನಿರ್ಮಾಂಸವಕ್ತ್ರಾಶ್ಚ ದೀರ್ಘಪೃಷ್ಠೋದರೋರಸಃ ॥೯೮॥

ಇವರೆಲ್ಲರೂ ಯುದ್ಧದಲ್ಲಿ ಪರಮಾಸಕ್ತಿಯುಳ್ಳವರಾಗಿದ್ದರು. ದೇವೋತ್ತಮರಿಂದಲೂ ಗೆಲ್ಲಲು ಅಸಾಧ್ಯರಾಗಿದ್ದರು. ಕೆಲವರು ಕಪ್ಪಗಿದ್ದರು. ಕೆಲವರ ಮುಖದಲ್ಲಿ ಮಾಂಸವೇ ಇರಲಿಲ್ಲ. ಉದ್ದವಾದ ಬೆನ್ನುಳ್ಳವರು ಕೆಲವರು, ಉದ್ದವಾದ ಹೊಟ್ಟೆಯುಳ್ಳವರು ಕೆಲವರು, ಉದ್ದವಾದ ಎದೆಯುಳ್ಳವರು ಕೆಲವರು ಇದ್ದರು.

ಸ್ಥೂಲಪೃಷ್ಠಾ ಹ್ರಸ್ವಪೃಷ್ಠಾಃ ಪ್ರಲಂಬೋದರಮೇಹನಾಃ ।
ಮಹಾಭುಜಾ ಹ್ರಸ್ವಭುಜಾ ಹ್ರಸ್ವಗಾತ್ರಾಃ ಪ್ರಬಾಹವಃ ॥೯೯॥

ದಪ್ಪಗಿನ ಬೆನ್ನುಳ್ಳವರು, ಗಿಡ್ಡದಾದ ಬೆನ್ನುಳ್ಳವರು, ಜೋತುಬಿದ್ದ ಉದ್ದವಾದ ಹೊಟ್ಟೆಯುಳ್ಳವರು, ಉದ್ದವಾದ ಮೂತ್ರವಿಸರ್ಜನಾಂಗವನ್ನು ಹೊಂದಿದವರು ಇದ್ದರು. ದೊಡ್ಡದಾದ ಭುಜವುಳ್ಳವರು, ಗಿಡ್ಡವಾದ ಭುಜವುಳ್ಳವರು, ಗಿಡ್ಡವಾದ ಶರೀರವುಳ್ಳವರು, ದೀರ್ಘವಾದ ಬಾಹುವುಳ್ಳವರು ಇದ್ದರು.

ಕುಬ್ಜಾಶ್ಚ ದೀರ್ಘಜಿಹ್ವಾಶ್ಚ ಹಸ್ತಿಕರ್ಣಶಿರೋಧರಾಃ ।
ಹಸ್ತಿನಾಸಾಃ ಕೂರ್ಮನಾಸಾ ವೃಕವ್ಯಾಘ್ರನಖಾಸ್ತಥಾ ॥೧೦೦॥

ಕೆಲವರು ಕಪ್ಪಗಿದ್ದರು. ಕೆಲವರು ಉದ್ದವಾದ ನಾಲಿಗೆಯುಳ್ಳವರಾಗಿದ್ದರು. ಆನೆಯ ಕಿವಿಯಂತಹ ಕಿವಿಯುಳ್ಳವರು, ಆನೆಯ ಕುತ್ತಿಗೆಯ ಹಾಗೆ ಕುತ್ತಿಗೆಯುಳ್ಳವರು ಕೆಲವರು ಇದ್ದರು. ಆನೆಯ ಸೊಂಡಿಲಿನ ಹಾಗೆ ಮೂಗು ಉಳ್ಳವರು, ಆಮೆಯ ಮೂಗಿನಂಥ ಮೂಗು ಉಳ್ಳವರು, ತೋಳದ ಉಗುರು ಉಳ್ಳವರು, ಹುಲಿಯ ಉಗುರು ಉಳ್ಳವರು ಇದ್ದರು.

ದೀರ್ಘೋಷ್ಠಾ ದೀರ್ಘಜಿಹ್ವಾಶ್ಚ ವಿಕರಾಳಾ ಹ್ಯಧೋಮುಖಾಃ ।
ಮಹಾದಂಷ್ಟ್ರಾ ಹ್ರಸ್ವದಂಷ್ಟ್ರಾ ಚಿತ್ರದಂಷ್ಟ್ರಾಸ್ತಥಾ ಪರೇ ॥೧೦೧॥

ಉದ್ದವಾದ ತುಟಿಯುಳ್ಳವರು, ಉದ್ದವಾದ ನಾಲಿಗೆಯುಳ್ಳವರು, ವಿಕಾರವಾದ ಆಕಾರವುಳ್ಳವರು, ಮುಖವನ್ನು ಕೆಳಗೆ ಹಾಕಿಕೊಂಡವರು, ದೊಡ್ಡದಾದ ಹಲ್ಲುಳ್ಳವರು, ಗಿಡ್ಡವಾದ ಹಲ್ಲುಳ್ಳವರು, ವಿಚಿತ್ರವಾದ ಹಲ್ಲುಳ್ಳವರು ಇದ್ದರು.

ವಾರಣೇಂದ್ರಮುಖಾಶ್ಚಾನ್ಯೇ ಭೀಮಾ ರಾಜನ್ ಸಹಸ್ರಶಃ ।
ಸುವಿಭಕ್ತಶರೀರಾಶ್ಚ ದೀಪ್ತಿಮಂತಃ ಸ್ವಲಂಕೃತಾಃ ॥೧೦೨॥

ರಾಜನೇ! ಆನೆಯ ಮುಖವುಳ್ಳ ಭಯಂಕರವಾದ ಸಾವಿರಾರು ಅನುಚರರು ಇದ್ದರು. ಒಳ್ಳೆಯ ರೀತಿಯಲ್ಲಿ ಹಂಚಿಹೋಗಿರುವ ಶರೀರವುಳ್ಳವರಾಗಿದ್ದರು. ಕಾಂತಿಯುಳ್ಳವರಾಗಿದ್ದರು. ಚೆನ್ನಾಗಿ ಅಲಂಕಾರವನ್ನು ಮಾಡಿಕೊಂಡಿದ್ದರು.

ಪಿಂಗಾಕ್ಷಾಃ ಶಂಕುಕರ್ಣಾಶ್ಚ ಚಕ್ರಪಾದಾಶ್ಚ ಭಾರತ ।
ಪೃಥುದಂಷ್ಟ್ರಾ ಮಹಾದಂಷ್ಟ್ರಾಃ ಸ್ಥೂಲೋಷ್ಠಾ ಹರಿಮೂರ್ದ್ಧಜಾಃ ॥೧೦೩॥

ಕಂದುಬಣ್ಣದ ಕಣ್ಣುಳ್ಳವರು, ಸುತ್ತಿದ ಕಿವಿಯುಳ್ಳವರು, ಚಕ್ರದಂತೆ ವರ್ತುಲವಾದ ಪಾದವುಳ್ಳವರು, ದಪ್ಪವಾದ ಹಲ್ಲುಳ್ಳವರು, ಗಿಡ್ಡವಾದ ಹಲ್ಲುಳ್ಳವರು, ದಪ್ಪವಾದ ತುಟಿಯುಳ್ಳವರು, ಕಪ್ಪಾದ ಕೂದಲು ಉಳ್ಳವರು ಇದ್ದರು.

ನಾನಾಪಾದೋಷ್ಠಪೃಷ್ಠಾಶ್ಚ ನಾನಾಹಸ್ತಶಿರೋಧರಾಃ ।
ನಾನಾವರ್ಮಭಿರಾಚ್ಛನ್ನಾ ನಾನಾಭಾಷಾಶ್ಚ ಭಾರತ ॥೧೦೪॥

ಅನೇಕ ಪಾದವುಳ್ಳವರು, ಅನೇಕ ಬೆನ್ನುಳ್ಳವರು, ಅನೇಕ ಕೈಯುಳ್ಳವರು, ಅನೇಕ ಕುತ್ತಿಗೆಯುಳ್ಳವರು ಇದ್ದರು. ಅನೇಕ ಕವಚಗಳಿಂದ ತಮ್ಮನ್ನು ಮುಚ್ಚಿಕೊಂಡಿದ್ದರು. ಅನೇಕ ಭಾಷೆಗಳನ್ನು ಮಾತನಾಡುತ್ತಿದ್ದರು.

ಕುಶಲಾ ದೇಶಭಾಷಾಸು ಜಲ್ಪಂತೋಽನ್ಯೋನ್ಯಮೀಶ್ವರಮ್ ।
ಹೃಷ್ಟಾಃ ಪರಿಪತಂತಿ ಸ್ಮ ರಾಜನ್ ಪಾರಿಷದಾಃ ಸ್ಮೃತಾಃ ॥೧೦೫॥

ಪ್ರಾದೇಶಿಕ ಭಾಷೆಗಳಲ್ಲಿ ನಿಪುಣರಾದ ಇವರು ತಮ್ಮ ತಮ್ಮಲ್ಲಿಯೇ ಹರಟೆ ಮಾಡುತ್ತಿದ್ದರು. ರಾಜನೇ! ಈ ಅನುಚರರು ಸಂತೋಷದಿಂದ ಕುಣಿದಾಡುತ್ತಿದ್ದರು.

ದೀರ್ಘಗ್ರೀವಾ ದೀರ್ಘನಖಾ ದೀರ್ಘಪಾದಶಿರೋರುಹಾಃ ।
ಪಿಂಗಾಕ್ಷಾ ನೀಲಕಂಠಾಶ್ಚ ಲಂಬಕರ್ಣಾಶ್ಚ ಭಾರತ ॥೧೦೬॥

ಉದ್ದವಾದ ಕುತ್ತಿಯುಳ್ಳವರು ಇದ್ದರು. ಉದ್ದವಾದ ಉಗುರುವುಳ್ಳವರು ಇದ್ದರು, ಉದ್ದವಾದ ಪಾದವುಳ್ಳವರು, ಉದ್ದವಾದ ಕೂದಲು ಉಳ್ಳವರು ಇದ್ದರು. ಕಂದುಬಣ್ಣದ ಕಣ್ಣುಳ್ಳವರು, ಕಪ್ಪಾದ ಕುತ್ತಿಗೆಯುಳ್ಳವರು, ಉದ್ದವಾದ ಕಿವಿಯುಳ್ಳವರು ಇದ್ದರು.

ಶುಕೋದರನಿಭಾಶ್ಚೈವ ಕೇಚಿದಂಜನಸನ್ನಿಭಾಃ ।
ಶ್ವೇತಾಂಗಾ ಲೋಹಿತಗ್ರೀವಾಃ ಪಿಂಗಲಾಕ್ಷಾಸ್ತಥಾ ಪರೇ ॥೧೦೭॥

ಗಿಳಿಯ ಹೊಟ್ಟೆಯ ಹಾಗೆ ಕಾಣಿಸುವವರು, ಕಾಡಿಗೆಯ ಬಣ್ಣವನ್ನು ಹೊಂದಿದವರು, ಬೆಳ್ಳಗಿನ ಅವಯವ ಉಳ್ಳವರು, ಕೆಂಪಾದ ಕುತ್ತಿಗೆಯುಳ್ಳವರು, ಕಂದು ಬಣ್ಣದ ಕಣ್ಣುಳ್ಳವರು ಇದ್ದರು.

ಕಲ್ಮಾಷಬಾಹವೋ ರಾಜನ್ ಚಿತ್ರಮಾಲಾಶ್ಚ ಭಾರತ ।
ಚಾಮೀಕರಾಪೀಡನಿಭಾಃ ಶ್ವೇತಲೋಹಿತರಾಜಯಃ ॥೧೦೮॥

ರಾಜನ್! ವಿಕಾರವಾದ ಬಾಹು ಉಳ್ಳವರು, ವಿಚಿತ್ರವಾದ ಮಾಲೆಯನ್ನು ಧರಿಸಿಕೊಂಡವರು, ಬಂಗಾರದ ಕಾಂತಿಯುಳ್ಳವರು, ಬೆಳ್ಳಗಿನ ಹಾಗೂ ಕೆಂಪಗಿನ ವರ್ಣದಿಂದ ಶೋಭಿಸುತ್ತಿರುವವರು ಇದ್ದರು.

ನಾನಾವರ್ಣಾಃ ಸುವರ್ಣಾಶ್ಚ ಮಯೂರಸದೃಶಪ್ರಭಾಃ ॥೧೦೯॥

ಅನೇಕ ಬಣ್ಣದವರು, ಚೆನ್ನಾಗಿರುವ ಬಣ್ಣವುಳ್ಳವರು, ನವಿಲಿನ ಸೊಬಗನ್ನು ಹೊಂದಿದವರು ಇದ್ದರು.

ಪುನಃ ಪ್ರಹರಣಾನ್ಯೇಷಾಂ ಕೀರ್ತ್ಯಮಾನಾನಿ ಮೇ ಶೃಣು ॥೧೧೦॥

ಆ ಅನುಚರರ ಕೈಯಲ್ಲಿದ್ದ ಆಯುಧಗಳನ್ನು ಹೇಳುತ್ತೇನೆ, ಕೇಳು.

ಶೇಷೈಃ ಕೃತಃ ಪಾರಿಷದ್ಯೈರಾಯುಧಾನಾಂ ಪರಿಗ್ರಹಃ ॥೧೧೧॥

ಉಳಿದೆಲ್ಲಾ ಅನುಚರರೂ ಆಯುಧಗಳನ್ನು ಹಿಡಿದುಕೊಂಡಿದ್ದರು.

ಪಾಶೋದ್ಯತಕರಾಶ್ಚೈವ ವ್ಯಾದಿತಾಸ್ಯಾಃ ಖರಾನನಾಃ ।
ಪೃಥುಶ್ಚಾ ನೀಲಕಂಠಾಶ್ಚ ತಥಾ ಪರಿಘಬಾಹವಃ ॥೧೧೨॥

ಪಾಶಾಯುಧವನ್ನು ಧರಿಸಿಕೊಂಡು, ಮುಖ ತೆರೆದುಕೊಂಡು, ಕ್ರೂರವಾದ ಮುಖವುಳ್ಳವರು ಇದ್ದರು. ದೊಡ್ಡದಾದ ಕಣ್ಣುಳ್ಳವರು ಇದ್ದರು. ಉದ್ದವಾದ ಹಾಗೂ ನೀಲಿಯ ಕಂಠವುಳ್ಳವರು ಆಗಿದ್ದರು. ಪರಿಘಾಯುಧವನ್ನು ಹಿಡಿದುಕೊಂಡಿದ್ದರು.

ಶತಘ್ನೀಪಾಶಹಸ್ತಾಶ್ಚ ತಥಾ ಮುಸಲಪಾಣಯಃ ।
ಅಸಿಪಟ್ಟಸಹಸ್ತಾಶ್ಚ ದಂಡಹಸ್ತಾಶ್ಚ ಭಾರತ ॥೧೧೩॥

ಶತಘ್ನಿ ಆಯುಧವನ್ನು, ಪಾಶಾಯುಧವನ್ನು ಹಿಡಿದುಕೊಂಡಿದ್ದರು. ಕೈಯಲ್ಲಿ ಒನಕೆಯನ್ನು ಹಿಡಿದುಕೊಂಡಿದ್ದರು. ಕೆಲವರು ಅಸಿಪಟ್ಟವನ್ನು ಹಿಡಿದುಕೊಂಡಿದ್ದರು. ಕೆಲವರು ದಂಡವನ್ನು ಹಿಡಿದುಕೊಂಡಿದ್ದರು.

ಗದಾಮುಸುಂಢೀಹಸ್ತಾಶ್ಚ ತಥಾ ಮುದ್ಗರಪಾಣಯಃ ।
ತೀಕ್ಷ್ಣಾಸಿಹಸ್ತಾಶ್ಚ ತಥಾ ದಂಡಹಸ್ತಾಶ್ಚ ಭಾರತ ॥೧೧೪॥

ಗದೆಯನ್ನು ಹಿಡಿದುಕೊಂಡವರು, ಮುಸುಂಢಿ (ಆಯುಧ)ಯನ್ನು ಹಿಡಿದುಕೊಂಡವರು, ಒನಕೆಯನ್ನು ಹಿಡಿದುಕೊಂಡವರು, ಹರಿತವಾದ ಕತ್ತಿಯನ್ನು ಹಿಡಿದುಕೊಂಡವರು, ದಂಡವನ್ನು ಹಿಡಿದುಕೊಂಡವರು ಇದ್ದರು.

ಆಯುಧೈರ್ವಿವಿಧೈಘೋರೈರ್ಮಹಾತ್ಮಾನೋ ಮಹಾಜವಾಃ ॥೧೧೫॥

ಬಹಳ ವೇಗವುಳ್ಳ ಆ ಮಹಾತ್ಮರಾದ ಅನುಚರರು ಭಯಂಕರವಾದ ವಿವಿಧ ಆಯುಧಗಳನ್ನು ಹಿಡಿದುಕೊಂಡಿದ್ದರು.

ಮಹಾಜವಾ ಮಹಾಭಾಗಾ ಮಹಾಪಾರಿಷದಾಸ್ತಥಾ ।
ಅಭಿಷೇಕಂ ಕುಮಾರಸ್ಯ ದೃಷ್ಟ್ವಾ ಹೃಷ್ಟಾ ರಣಪ್ರಿಯಾಃ ॥೧೧೬॥

ಮಹಾನುಚರರು ಬಹಳ ವೇಗವುಳ್ಳವರಾಗಿದ್ದರು, ಮಹಾಭಾಗ್ಯಶಾಲಿಗಳಾಗಿದ್ದರು. ಯುದ್ಧಪ್ರಿಯರಾದ ಅವರು ಕುಮಾರನ ಪಟ್ಟಾಭಿಷೇಕವನ್ನು ನೋಡಿ ಸಂತೋಷಪಟ್ಟರು.

ಘಂಟಾಜಾಲಪಿನದ್ಧಾಂಗಾ ನನೃತುಸ್ತೇ ಮಹೌಜಸಃ ॥೧೧೭॥

ಮಹಾಕಾಂತಿಯುಳ್ಳ ಅವರು ದೇಹವನ್ನು ಗಂಟೆಗಳ ಮಾಲೆಯಿಂದ ಮುಚ್ಚಿಕೊಂಡು ಕುಣಿಯುತ್ತಿದ್ದರು.

ಏತೇ ಚಾನ್ಯೇ ಚ ಬಹವೋ ಮಹಾಪಾರಿಷದಾ ನೃಪ ।
ಉಪತಸ್ಥುರ್ಮಹಾತ್ಮಾನಂ ಕಾರ್ತಿಕೇಯಂ ಯಶಸ್ವಿನಮ್ ॥೧೧೮॥

ರಾಜನ್! ಇವರು ಮತ್ತು ಇನ್ನೂ ಬೇರೆ ಅನೇಕ ಅನುಚರರು ಯಶೋವಂತನಾದ ಕಾರ್ತಿಕೇಯನನ್ನು ಸಮೀಪಿಸಿ ಸೇವಿಸಿದರು.

ದಿವ್ಯಾಶ್ಚಾಪ್ಯಾಂತರಿಕ್ಷಾಶ್ಚ ಪಾರ್ಥಿವಾಶ್ಚಾನಲೋಪಮಾಃ ।
ವ್ಯಾದಿಷ್ಟಾ ದೈವತೈಃ ಶೂರೈಃ ಸ್ಕಂದಸ್ಯಾನುಚರಾ ಭವನ್ ॥೧೧೯॥

ಶೂರರಾದ ದೇವತೆಗಳು ಕಳುಹಿಸಿಕೊಟ್ಟ ಈ ಅನುಚರರು ಅಸದೃಶರಾದ ದೇವಲೋಕವಾಸಿಗಳು, ಅಂತರಿಕ್ಷವಾಸಿಗಳು, ಭೂವಾಸಿಗಳು ಆಗಿದ್ದರು.

ತಾದೃಶಾನಾಂ ಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ಅಭಿಷಿಕ್ತಂ ಮಹಾತ್ಮಾನಂ ಪರಿವಾರ್ಯೋಪತಸ್ಥಿರೇ ॥೧೨೦॥

ಅಂತಹ ಅನುಚರರು ಸಾವಿರ, ಹತ್ತುಸಾವಿರ, ಅರ್ಬುದ ಸಂಖ್ಯೆಯಲ್ಲಿ ಇದ್ದರು. ಅವರೆಲ್ಲರೂ ಸ್ಕಂದನ ಪಟ್ಟಾಭಿಷೇಕದಲ್ಲಿ ಸುತ್ತಲೂ ನೆರೆದಿದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಕುಮಾರಾಭಿಷೇಕೋ ನಾಮ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೆಂಟನೆಯ ಅಧ್ಯಾಯ

ಕುಮಾರಮಾತೃಗಣದ ನಾಮಕೀರ್ತನವು, ಕುಮಾರನು ತಾರಕಾಸುರನನ್ನು ಸಂಹರಿಸಿದ್ದು ಮತ್ತು ಕ್ರೌಂಚಪರ್ವತವನ್ನು ಪುಡಿ ಮಾಡಿದ್ದು.

ವೈಶಂಪಾಯನಃ

ಶೃಣು ಮಾತೃಗಣಾನ್ ರಾಜನ್ ಕುಮಾರಾನುಚರಾನಿಮಾನ್ ।
ಕೀರ್ತ್ಯಮಾನಾನ್ ಮಹಾವೀರ್ಯಾನ್ ಸಪತ್ನಗಣಸೂದನಾನ್ ॥೧॥

ವೈಶಂಪಾಯನ– ರಾಜನೇ! ಕುಮಾರನ ಅನುಚರರಾಗಿದ್ದ ಮಾತೃಗಣಗಳ ಬಗ್ಗೆ ಹೇಳುತ್ತೇನೆ, ಕೇಳು. ಅವರೆಲ್ಲರೂ ಕೀರ್ತನೆಗೆ ಯೋಗ್ಯರಾಗಿದ್ದಾರೆ, ಮಹಾವೀರ್ಯವುಳ್ಳವರು, ತಮ್ಮ ದಾಯಾದಿಗಳನ್ನು ನಾಶ ಮಾಡುವವರು.

ಯಶಸ್ವಿನೀನಾಂ ಮಾತೃಣಾಂ ಶೃಣು ನಾಮಾನಿ ಭಾರತ ।
ಯಾಭಿರ್ವ್ಯಾಪ್ತಾಸ್ತ್ರಯೋ ಲೋಕಾಃ ಕಲ್ಯಾಣೇಭಿಶ್ಚರಾಚರಾಃ ॥೨॥

ಭರತಕುಲೋದ್ಭವನೇ! ಯಶೋವತಿಯರಾದ ಮಾತೆಯರ ಹೆಸರುಗಳನ್ನು ಕೇಳು. ಮಂಗಳಸ್ವರೂಪರಾದ ಇವರು ಚರಾಚರಪ್ರಪಂಚವನ್ನು ವ್ಯಾಪಿಸಿಕೊಂಡು ಇದ್ದಾರೆ.

ಪ್ರಭಾವತೀ ವಿಶಾಲಾಕ್ಷೀ ಪಾಲಿಕಾ ಗೋನಸಾ ತಥಾ ।
ಶ್ರೀಮತೀ ಬಹುಲಾ ಚೈವ ತಥೈವ ಬಹುಪುತ್ರಿಕಾ ॥೩॥

ಅಪ್ಸುಜಾತಾ ಚ ಗೋಪಾಲೀ ಬೃಹದಂಬಾಲಿಕಾ ತಥಾ ।
ಜಯಾವತೀ ಮಾಲಿನಿಕಾ ಧ್ರುವರತ್ನಾ ಭಯಂಕರೀ ॥೪॥

ಬಹುದಾಮಾ ಸುದಾಮಾ ಚ ಪಿಶಂಗೀ ನಂದಿನೀ ತಥಾ ।
ಏಕಚೂಡಾ ಮಹಾಚೂಡಾ ಚಕ್ರನೇಮಿಶ್ಚ ಭಾರತ ॥೫॥

ಅತೇಜಸ್ವೀ ಭವತ್ಸೇನಾ ಕಮಲಾಕ್ಷ್ಯಥ ಶೋಭನಾ ।
ಶತ್ರುಂಜಯಾ ತಥಾ ವಾಚೀ ಕ್ರೋಧನಾ ಶಲಭೀಮುಖಾ ॥೬॥

ಮಾಧವೀ ಶುಭವಕ್ತ್ರಾ ಚ ತೀರ್ಥನೇಮಿಶ್ಚ ಭಾರತ ।
ಗೀತಪ್ರಿಯಾ ಚ ಕಲ್ಯಾಣೀ ದ್ರುಮಮಾಲಾऽಮಿತೌಜಸಾ ॥೭॥

ತೇಜಸ್ವಿನೀ ಭೋಗವತೀ ಸುಭ್ರೂಶ್ಚ ಕನಕಾವತೀ ।
ಅಲಾತಾಕ್ಷೀ ವೀರ್ಯವತೀ ವಿದ್ಯುಜ್ಜಿಹ್ವಾ ಚ ಭಾರತ ॥೮॥

ಪದ್ಮಾವತೀ ಸುನಕ್ಷತ್ರಾ ಕಂದರಾ ಬಹುಲೋಚನಾ ।
ಸಂತಾನಿಕಾ ಚ ಕೌರವ್ಯ ಕಾಮಾ ಚ ಕಮಲಾವತೀ ॥೯॥

ಮಾಲಿದಾ ಬಹುದಾಮಾ ಚ ಪ್ರಸೂನಾ ಚ ಯಶಸ್ವಿನೀ ।
ನೃತ್ಯಪ್ರಿಯಾ ಚ ರಾಜೇಂದ್ರ ತಥೋಲೂಖಿಲಮೇಖಿಲಾ ॥೧೦॥

ಕುಕ್ಕುಟಿಕಾ ಶಂಖಿನಿಕಾ ತಥಾ ಜರ್ಝರಿಕಾ ನೃಪ ।
ಕುಂಡಲೀಕಾ ಕಲಾಲೀಲಾ ಕುಂಡಲಾऽಥ ಶತೋದರೀ ॥೧೧॥

ಉಕ್ತಾಧಿಕಾ ಜರೇಂದ್ರಾದಾ ಮಹಾವೇಗಾ ಚ ಕಂಕಣಾ ।
ಮನೋಜವಾ ಕಂಟಕಿನೀ ಪ್ರಘಸಾ ಪೂತನಾದಿನೀ ॥೧೨॥

ಐಷಿಕಾ ಪುಚ್ಛದಾ ವಾಮಾ ಕೋಪನಾऽಥ ತಡಿತ್ಪ್ರಭಾ ।
ಕುಂಡೋದರೀ ಪ್ರಚಂಡಾ ಚ ಕೋಟರಾ ಮೇಘವಾಸಿನೀ ॥೧೩॥

ಸುತರಾ ತಂತ್ರಿಣೀ ಲಂಬಾ ವಾಸಚೂಡಾ ವಿಕರ್ತನಾ ।
ಊರ್ಧ್ವವೇಣೀಧರಾ ಚೈವ ಪಿಂಗಾಕ್ಷೀ ಹೇಮಮೇಖಲಾ ॥೧೪॥

ಆಮೋದಾ ಚೈವ ಕೌರವ್ಯ ತಥಾ ಲಂಬಪಯೋಧರಾ ।
ಶಶೋಲೂಕಮುಖೀ ಕೃಷ್ಣಾ ಖರಜಂಘಾ ಮನೋಜವಾ ॥೧೫॥

ಶಿಂಶುಮಾರಮುಖೀ ಶ್ವೇತಾ ಲೋಹಿತಾಕ್ಷೀ ವಿಭೀಷಣಾ ।
ಜಟಾಲಿಕಾ ಕಾಮಚರೀ ದೀರ್ಘಜಿಹ್ವಾऽಥ ಲೋಭಗಾ ॥೧೬॥

ಕಾನೇಲಿಕಾ ವಾಶತಿಕಾ ಕುಮುದಾ ಚೈವ ಭಾರತ ।
ಶೋಣಿತಾಕ್ಷೀ ಮಹಾಕಾಯಾ ಗರದಾ ಚೈವ ಭಾರತ ॥೧೭॥

ಏಕಾಲೀಕಾ ಕುಂಕುಸುಮಾ ಕೃಷ್ಣವರ್ಣಾ ಚ ಭಾರತ ।
ಕ್ಷುರಕರ್ಣೀ ಚತುಷ್ಕರ್ಣಾ ಕರ್ಣಪ್ರಾವರಣಾ ತಥಾ ॥೧೮॥

ಚತುಷ್ಪಥನಿಕೇತಾ ಚ ಗೋಕರ್ಣೀ ಮಹಿಷಾನನಾ ।
ಖರಕರ್ಣೀ ಮಹಾಕರ್ಣೀ ಭೇರೀಸ್ವನಮಹಾಸ್ವನೇ ॥೧೯॥

ಶಂಖಿಕುಂಭಸ್ವರಾ ಚೈವ ಭವದಾ ಚ ಮಹಾಬಲಾ ।
ಗಣಾ ಚ ಸುಗಣಾ ಚೈವ ತಥಾ ಕಾಲೀ ಮದಾ ತಥಾ ॥೨೦॥

ಚತುಷ್ಪಥರಥಾ ಚೈವ ಭೂತಿನೀ ಧಾನ್ಯಗೋಚರಾ ।
ಪಶುದಾ ವಿತ್ತದಾ ಚೈವ ಮಹದಾ ಚ ಮಹಾಯಶಾಃ ॥೨೧॥

ಪಯೋದಾ ಗೋಮಹಿಷದಾ ಸುವರ್ಣಾನೀ ಚ ಭಾರತ ।
ಪ್ರತಿಷ್ಠಾ ಸುಪ್ರತಿಷ್ಠಾ ಚ ರೋಚಮಾನಾ ಸುರೋಚನಾ ॥೨೨॥

ನೈಕಣರ್ೇ ಮುಖಿಕಣರ್ೇ ಚ ಶಾಷ್ಕಿಲಿಕಾ ಸ್ಥಾರಿಕಾ ತಥಾ ।
ಸುರಚಕ್ರಾ ಮೇಘರವಾ ಮೇಘಮಾಲಾ ವಿರೋಚನಾ ॥೨೩॥

ಪ್ರಭಾವತೀ, ವಿಶಾಲಾಕ್ಷೀ, ಪಾಲಿಕಾ, ಗೋನಸಾ, ಶ್ರೀಮತೀ, ಬಹುಲಾ, ಬಹುಪುತ್ರಿಕಾ, ಅಪ್ಸುಜಾತಾ, ಗೋಪಾಲೀ, ಬೃಹದಂಬಾಲಿಕಾ ಜಯಾವತೀ, ಮಾಲಿನಿಕಾ, ಧ್ರುವರತ್ನಾ, ಭಯಂಕರೀ, ಬಹುದಾಮಾ. ಸುದಾಮಾ, ಪಿಶಂಗೀ, ನಂದಿನೀ, ಏಕಚೂಡಾ, ಮಹಾಚೂಡಾ, ಚಕ್ರನೇಮಿ, ಅತೇಜಸ್ವೀ, ಭವತ್ಸೇನಾ, ಕಮಲಾಕ್ಷೀ, ಶೋಭನಾ, ಶತ್ರುಂಜಯಾ, ವಾಚೀ, ಕ್ರೋಧನಾ, ಶಲಭೀಮುಖಾ, ಮಾಧವೀ, ಶುಭವಕ್ತ್ರಾ ತೀರ್ಥನೇಮಿ, ಗೀತಪ್ರಿಯಾ, ಕಲ್ಯಾಣೀ, ದ್ರುಮಮಾಲಾ, ಅಮಿತೌಜಸಾ, ತೇಜಸ್ವಿನೀ, ಭೋಗವತೀ, ಸುಭ್ರೂ, ಕನಕಾವತೀ, ಅಲಾತಾಕ್ಷೀ, ವೀರ್ಯವತೀ, ವಿದ್ಯುಜ್ಜಿಹ್ವಾ ಪದ್ಮಾವತೀ, ಸುನಕ್ಷತ್ರಾ, ಕಂದರಾ, ಬಹುಲೋಚನಾ, ಸಂತಾನಿಕಾ, ಕಾಮಾ, ಕಮಲಾವತೀ, ಮಾಲಿದಾ, ಬಹುದಾಮಾ, ಪ್ರಸೂನಾ, ಯಶಸ್ವಿನೀ, ನೃತ್ಯಪ್ರಿಯಾ, ಉಲೂಖಲಮೇಖಲಾ, ಕುಕ್ಕುಟಿಕಾ, ಶಂಖಿಣಿಕಾ, ಜರ್ಝರಿಕಾ, ಕುಂಡಲೀಕಾ, ಕಲಾಲೀಲಾ, ಕುಂಡಲಾ, ಶತೋದರೀ, ಉಕ್ತಾಧಿಕಾ, ಜರೇಂದ್ರಾದಾ, ಮಹಾವೇಗಾ, ಕಂಕಣಾ, ಮನೋಜವಾ, ಕಂಟಕಿನೀ, ಪ್ರಘಸಾ, ಪೂತನಾದಿನೀ, ಐಷಿಕಾ, ಪುಚ್ಛದಾ, ವಾಮಾ, ಕೋಪನಾ, ತಡಿತ್ಪಭಾ, ಕುಂಡೋದರೀ, ಪ್ರಚಂಡಾ, ಕೋಟರಾ, ಮೇಘವಾಸಿನೀ, ಸುತರಾ, ತಂತ್ರಿಣೀ, ಲಂಬಾ, ವಾಸಚೂಡಾ, ವಿಕರ್ತನಾ, ಊರ್ಧ್ವವೇಣೀಧರಾ, ಪಿಂಗಾಕ್ಷೀ, ಹೇಮಮೇಖಲಾ, ಆಮೋದಾ, ಲಂಬಪಯೋಧರಾ, ಶಶೋಲೂಕಮುಖೀ, ಕೃಷ್ಣಾ, ಖರಜಂಘಾ, ಮನೋಜವಾ, ಶಿಂಶುಮಾರಮುಖೀ, ಶ್ವೇತಾ, ಲೋಹಿತಾಕ್ಷೀ, ವಿಭೀಷಣಾ, ಜಟಾಲಿಕಾ, ಕಾಮಚರೀ, ದೀರ್ಘಜಿಹ್ವಾ, ಲೋಭಗಾ, ಕಾನೇಲಿಕಾ, ವಾಶತಿಕಾ, ಕುಮುದಾ, ಶೋಣಿತಾಕ್ಷೀ, ಮಹಾಕಾಯಾ, ಗರದಾ, ಏಕಾಲೀಕಾ, ಕುಂಕುಸುಮಾ, ಕೃಷ್ಣವರ್ಣಾ, ಕ್ಷುರಕರ್ಣೀ, ಚತುಷ್ಕರ್ಣಾ, ಕರ್ಣಪ್ರಾವರಣಾ, ಚತುಷ್ಪತನಿಕೇತಾ, ಗೋಕರ್ಣೀ, ಮಹಿಷಾಸನಾ, ಖರಕರ್ಣೀ, ಮಹಾಕರ್ಣೀ, ಭೇರೀಸ್ವನಾ, ಮಹಾಸ್ವನಾ, ಶಂಖಕುಂಭಸ್ತನಾ, ಭವದಾ, ಮಹಾಬಲಾ, ಗಣಾ, ಸುಗಣಾ, ಕಾಲೀ, ಮದಾ, ಚತುಷ್ಪಥರಥಾ, ಭೂತಿನೀ, ಧಾನ್ಯಗೋಚರಾ, ಪಶುದಾ, ವಿತ್ತದಾ, ಮಹದಾ, ಮಹಾಯಶಾ, ಪಯೋದಾ, ಗೋಮಹಿಷದಾ, ಸುವರ್ಣಾನೀ, ಪ್ರತಿಷ್ಠಾ, ಸುಪ್ರತಿಷ್ಠಾ, ರೋಚಮಾನಾ,

ಸುರೋಚನಾ, ನೈಕರ್ಣೀ, ಮುಖಕರ್ಣೀ, ಶ್ವಾಸಿಕಾ, ಸ್ಥಾರಿಕಾ, ಸುರಚಕ್ರಾ, ಮೇಘರವಾ, ಮೇಘಮಾಲಾ, ವಿರೋಚನಾ ಇವರೇ ಆ ಅನುಚರ ಮಾತೆಯರು.

ಏತಾಶ್ಚಾನ್ಯಾಶ್ಚ ಬಹುಲಾ ಮಾತರೋ ಭರತರ್ಷಭ ।
ಕಾರ್ತಿಕೇಯಾನುಯಾಯಿನ್ಯೋ ನಾನಾರೂಪಾಃ ಸಹಸ್ರಶಃ ॥೨೪॥

ಭರತಕುಲಶ್ರೇಷ್ಠನೇ! ಇವರು ಮತ್ತು ಇನ್ನೂ ಬೇರೆ ಬೇರೆ ರೂಪಗಳುಳ್ಳ ಸಾವಿರಾರು ಮಾತೆಯರು ಕಾರ್ತಿಕೇಯನಿಗೆ ಅನುಚರರಾಗಿದ್ದರು.

ದೀರ್ಘದಂತಾ ದೀರ್ಘನೇತ್ರಾ ದೀರ್ಘತುಂಡಾಶ್ಚ ಭಾರತ ।
ಸರಲಾ ಮಧುರಾಶ್ಚೈವ ಯೌವನಸ್ಥಾಃ ಸ್ವಲಂಕೃತಾಃ ॥೨೫॥

ಮಹತ್ತ್ವೇನ ಚ ಸಂಯುಕ್ತಾ ಕಾಮರೂಪಧರಾಸ್ತಥಾ ॥೨೬॥

ಯಾಮ್ಯಾ ರೌದ್ರಾಸ್ತಥಾ ಸೌಮ್ಯಾ ನಾನಾರೂಪಾ ಮಹಾಬಲಾಃ ॥೨೭॥

ನಿರ್ಮಾಂಸಗಾತ್ರಾಃ ಶ್ವೇತಾಶ್ಚ ತಥಾ ಕಾಂಚನಸನ್ನಿಭಾಃ ॥೨೮॥

ಕೃಷ್ಣಮೇಘನಿಭಾಶ್ಚಾನ್ಯಾ ಧೂಮ್ರಾಶ್ಚ ಭರತರ್ಷಭ ।
ಅರುಣಾಭಾ ಮಹಾಭಾಗಾ ದೀರ್ಘಕೇಶ್ಯಃ ಸಿತಾನನಾಃ ॥೨೯॥

ಊರ್ಧ್ವವೇಣೀಧರಾಶ್ಚೈವ ಪಿಂಗಾಕ್ಷೀ ರೋಮಮೇಖಿಲಾಃ ।
ಲಂಬೋದರಾ ಲಂಬಕರ್ಣಾಸ್ತಥಾ ಲಂಬಪಯೋಧರಾಃ ॥೩೦॥

ತಾಮ್ರಾಕ್ಷ್ಯಸ್ತಾಮ್ರವರ್ಣಾಶ್ಚ ಹರ್ಯಕ್ಷಾಶ್ಚ ತಥಾಽಪರಾಃ ।
ವರದಾಃ ಕಾಮಚಾರಿಣ್ಯೋ ನಿತ್ಯಂ ಪ್ರಮುದಿತಾಸ್ತಥಾ ॥೩೧॥

ವಾರುಣ್ಯೋಽಪ್ಯಥ ಮಾಹೇಂದ್ರ್ಯಸ್ತಥಾಽಽಗ್ನೇಯ್ಯಃ ಪರಂತಪ ।
ವಾಯವ್ಯಾಶ್ಚಾಥ ಕೌಬೇರ್ಯೋ ಬ್ರಾಹ್ಮ್ಯಶ್ಚ ಭರತರ್ಷಭ ॥೩೨॥

ಭರತಕುಲೋದ್ಭವನೇ! ಉದ್ದವಾದ ಹಲ್ಲುಳ್ಳವರು, ಉದ್ದವಾದ ಕಣ್ಣುಳ್ಳವರು, ಉದ್ದವಾದ ಮುಖವುಳ್ಳವರು, ಸರಳವಾದ ಆಕಾರವುಳ್ಳವರು, ಸುಂದರಿಯರು, ಯುವತಿಯರು, ಚೆನ್ನಾಗಿ ಅಲಂಕಾರ ಮಾಡಿಕೊಂಡವರು, ಮಹತ್ವವನ್ನು ಹೊಂದಿದವರು, ಇಷ್ಟಬಂದರೂಪವನ್ನು ಹೊಂದುವವರು, ಯಮನ ಸಂಬಂಧಿಗಳು,

ರುದ್ರನ ಸಂಬಂಧಿಗಳು, ಸೋಮನ ಸಂಬಂಧಿಗಳು, ಬೇರೆ ಬೇರೆ ರೂಪವುಳ್ಳವರು, ಮಹಾಬಲಶಾಲಿಗಳು, ಮಾಂಸವಿಲ್ಲದ ಶರೀರವುಳ್ಳವರು, ಬೆಳ್ಳಗಿರುವವರು, ಬಂಗಾರದ ಬಣ್ಣವುಳ್ಳವರು, ಕಪ್ಪಗಿನ ಮೋಡದ ಹಾಗೆ ಕಾಂತಿಯುಳ್ಳವರು, ಕಂದುಬಣ್ಣದವರು, ಕೆಂಪಾದ ಕಾಂತಿಯುಳ್ಳವರು, ಮಹಾಭಾಗ್ಯವಂತರು, ಉದ್ದವಾದ ಕೂದಲುಳ್ಳವರು, ಬೆಳ್ಳಗಿನ ಮುಖವುಳ್ಳವರು, ಎತ್ತರವಿರುವ ಕೂದಲಿನ ಜಡೆಯನ್ನು ಹೊಂದಿದವರು, ಕಂದುಬಣ್ಣದ ಕಣ್ಣುಳ್ಳವರು, ರೋಮದ ಸೊಂಟಪಟ್ಟಿಯನ್ನು ಧರಿಸಿದವರು, ದೊಡ್ಡಹೊಟ್ಟೆಯವರು, ಉದ್ದವಾದ ಕಿವಿಯುಳ್ಳವರು, ಜೋತುಬಿದ್ದ ಸ್ತನವುಳ್ಳವರು, ಕೆಂಪುಬಣ್ಣದ ಕಣ್ಣುಳ್ಳವರು, ಕೆಂಪಾದ ಬಣ್ಣವುಳ್ಳವರು, ಸಿಂಹದ ಕಣ್ಣುಳ್ಳವರು, ವರವನ್ನು ಕೊಡುವವರು ಸ್ವೇಚ್ಛಾವಿಹಾರಿಗಳು, ನಿತ್ಯತೃಪ್ತರು, ವರುಣನ ಸಂಬಂಧಿಗಳು, ಮಹೇಂದ್ರನ ಸಂಬಂಧಿಗಳು, ಅಗ್ನಿಯ ಸಂಬಂಧಿಗಳು, ವಾಯುವಿನ ಸಂಬಂಧಿಗಳು, ಕುಬೇರನ ಸಂಬಂಧಿಗಳು, ಬ್ರಹ್ಮನ ಸಂಬಂಧಿಗಳು ಇದ್ದರು.

ರೂಪೇಣಾಪ್ಸರಸಾಂ ತುಲ್ಯಾ ಜವೇ ವಾಯುಸಮಾಶ್ಚ ತಾಃ ॥೩೩॥

ಅವರು ರೂಪದಲ್ಲಿ ಅಪ್ಸರೆಯರಿಗೆ ಸಮಾನರಾಗಿದ್ದರು, ವೇಗದಲ್ಲಿ ವಾಯುವಿಗೆ ಸಮಾನರಾಗಿದ್ದರು.

ಶಕ್ರವೀರ್ಯೋಪಮಾ ಯುದ್ಧೇ ದೀಪ್ತವಹ್ನಿಸಮಪ್ರಭಾಃ ।
ಪರಪುಷ್ಟೋಪಮಾ ವಾಕ್ಯೇ ಧನಾಢ್ಯಾ ಧನದೋಪಮಾಃ ॥೩೪॥

ಯುದ್ಧದಲ್ಲಿ ದೇವೇಂದ್ರನಿಗೆ ಸದೃಶವಾದ ವೀರ್ಯವುಳ್ಳರಾಗಿದ್ದರು. ಪ್ರಕಾಶಿಸುತ್ತಿರುವ ಅಗ್ನಿಗೆ ಸಮಾನರಾಗಿದ್ದರು. ಕೋಗಿಲೆಯ ಧ್ವನಿಯುಳ್ಳವರಾಗಿದ್ದರು. ಕುಬೇರನಂತೆ ಸಂಪತ್ತುಳ್ಳವರಾಗಿದ್ದರು.

ವೃಕ್ಷಚತ್ವರವಾಸಿನ್ಯಃ ಚತುಷ್ಪಥನಿಕೇತನಾಃ ।
ಶುಭ್ರಾಃ ಶ್ಮಶಾನವಾಸಿನ್ಯಃ ಶೈಲಪ್ರಸ್ರವಣಾಲಯಾಃ ॥೩೫॥

ಮರದಲ್ಲಿ, ನಾಲ್ಕು ದಾರಿಗಳು ಸೇರುವಲ್ಲಿ, ದಾರಿಗಳಲ್ಲಿ ಮನೆಯನ್ನು ಮಾಡಿಕೊಂಡಿದ್ದರು. ಪರಿಶುದ್ಧರಾಗಿದ್ದರು, ಸ್ಮಶಾನವಾಸಿಗಳಾಗಿದ್ದರು. ಬೆಟ್ಟದ ತಪ್ಪಲಿನಲ್ಲಿ ವಾಸಿಸುತ್ತಿದ್ದರು.

ನಾನಾಭರಣಧಾರಿಣ್ಯೋ ನಾನಾಮಾಲ್ಯಾಂಬರಸ್ರಜಃ ।
ನಾನಾವಿಚಿತ್ರವೇಷಾಶ್ಚ ನಾನಾಭಾಷಾಸ್ತಥಾ ಪರಾಃ ॥೩೬॥

ವಿವಿಧ ಆಭರಣಗಳನ್ನು ಧರಿಸಿಕೊಂಡಿದ್ದರು. ವಿವಿಧ ಮಾಲೆಗಳನ್ನು ಸರಗಳನ್ನು ಹಾಕಿಕೊಂಡಿದ್ದರು. ವಿವಿಧವಿಚಿತ್ರವೇಷಗಳನ್ನು ತೊಟ್ಟುಕೊಂಡಿದ್ದರು. ಬೇರೆ ಬೇರೆ ಭಾಷೆಗಳನ್ನು ಮಾತಾಡುತ್ತಿದ್ದರು.

ಏತೇ ಚಾನ್ಯೇ ಚ ಮಾತೃಣಾಂ ಗಣಾಃ ಶತ್ರುಭಯಂಕರಾಃ ।
ಅನುಜಗ್ಮುರ್ಮಹಾತ್ಮಾನಂ ತ್ರಿದಶೇಂದ್ರಸ್ಯ ಸಮ್ಮತೇ ॥೩೭॥

ಇವರು ಮತ್ತು ಬೇರೆ ಮಾತೃಗಣಗಳು ಶತ್ರುಗಳಿಗೆ ಭಯವನ್ನು ಹುಟ್ಟಿಸುತ್ತಿದ್ದವು. ದೇವೇಂದ್ರನ ಒಪ್ಪಿಗೆಯನ್ನು ಪಡೆದು ಇವರೆಲ್ಲರೂ ಮಹಾತ್ಮನಾದ ಸ್ಕಂದನನ್ನು ಅನುಸರಿಸಿ ಹೋದರು.

ತತಃ ಶಕ್ಷಸ್ತ್ರಮದದಾದ್ ಭಗವಾನ್ ಪಾಕಶಾಸನಃ ।
ಗುಹಾಯ ರಾಜಶಾರ್ದೂಲ ವಿನಾಶಾಯ ಸುರದ್ವಿಷಾಮ್ ॥೩೮॥

ಮಹಾಸ್ವನಾಂ ಮಹಾಘಂಟಾಂ ದ್ಯೋತಮಾನಾಂ ಸಿತಪ್ರಭಾಮ್ ।
ತರುಣಾದಿತ್ಯವರ್ಣಾಂ ಚ ಪತಾಕಾಂ ಭರತರ್ಷಭ ॥೩೯॥

ರಾಜಶ್ರೇಷ್ಠನೇ! ಅನಂತರ ಪೂಜ್ಯನಾದ ಇಂದ್ರನು ದೇವತೆಗಳ ಶತ್ರುಗಳಾದ ಅಸುರರನ್ನು ಸಂಹರಿಸಲಿಕ್ಕಾಗಿ ಸ್ಕಂದನಿಗೆ ಶಕ್ಷಸ್ತ್ರವನ್ನು ಕೊಟ್ಟನು. ಹಾಗೆಯೇ ದೊಡ್ಡದಾದ ಧ್ವನಿಯನ್ನು ಉಂಟುಮಾಡುವ ದೊಡ್ಡದಾದ ಘಂಟೆ ಹಾಗೂ ತರುಣಸೂರ್ಯನ ಹಾಗೆ ಬೆಳ್ಳಗಿನ ವರ್ಣವುಳ್ಳ ಪತಾಕೆಯನ್ನು ಕೊಟ್ಟನು.

ದದೌ ಪಶುಪತಿಸ್ತಸ್ಮೈ ಸರ್ವಭೂತಮಹಾಚಮೂಮ್ ॥೪೦॥

ಉಗ್ರಾಂ ನಾನಾಪ್ರಹರಣಾಂ ತಪೋವೀರ್ಯಬಲಾನ್ವಿತಾಮ್ ।
ವಿಷ್ಣುರ್ದದೌ ವೈಜಯಂತೀಂ ಮಾಲಾಂ ಬಲವಿವರ್ಧಿ(ರ್ಧ)ನೀಮ್ ॥

ಭರತಕುಲಶ್ರೇಷ್ಠನೇ! ರುದ್ರನು ಸ್ಕಂದನಿಗೆ ಎಲ್ಲಾ ತರಹದ ವ್ಯಕ್ತಿಗಳುಳ್ಳ ದೊಡ್ಡ ಸೈನ್ಯವನ್ನು ಕೊಟ್ಟನು. ಅಲ್ಲಿದ್ದ ಯೋಧರು ವಿವಿಧ ಆಯುಧಗಳನ್ನು ಹಿಡಿದುಕೊಂಡಿದ್ದರು.

ತಪಸ್ಸು, ವೀರ್ಯ ಹಾಗೂ ಬಲವನ್ನು ಹೊಂದಿದ್ದರು. ವಿಷ್ಣುವು ಬಲವನ್ನು ಹೆಚ್ಚುಮಾಡುವ ವೈಜಯಂತೀಮಾಲೆಯನ್ನು ಕೊಟ್ಟನು.

ಉಮಾ ದದಾವರಜಸೀ ವಾಸಸೀ ಚಂದ್ರಸನ್ನಿಭೇ ।
ಗಂಗಾ ಕಮಂಡಲುಂ ದಿವ್ಯಮಮೃತೋದ್ಭವಮುತ್ತಮಮ್ ॥೪೨॥

ಪಾರ್ವತಿಯು ಚಂದ್ರನನ್ನು ಹೋಲುವ ಬೆಳ್ಳಗಿನ ಎರಡು ಬಟ್ಟೆಗಳನ್ನು ಕೊಟ್ಟಳು. ಗಂಗೆಯು ಅಮೃತವನ್ನು ಕೊಡುವ ದಿವ್ಯವಾದ ಕಮಂಡಲುವನ್ನು ಕೊಟ್ಟಳು.

ದದೌ ಪ್ರೀತ್ಯಾ ಕುಮಾರಾಯ ದಂಡಂ ಚೈವ ಬೃಹಸ್ಪತಿಃ ॥೪೩॥

ಬೃಹಸ್ಪತಿಯು ಕುಮಾರನಿಗೆ ಪ್ರೀತಿಯಿಂದ ದಂಡವನ್ನು ಕೊಟ್ಟನು.

ಗರುಡೋ ದಯಿತಂ ಪುತ್ರಂ ಮಯೂರಂ ಚಿತ್ರಬರ್ಹಿಣಮ್ ।
ಅರುಣಸ್ತಾಮ್ರಚೂಡಂ ಚ ಪ್ರದದೌ ಚರಣಾಯುಧಮ್ ॥೪೪॥

ಗರುಡನು ಚಿತ್ರವುಳ್ಳ ಗರಿಗಳನ್ನು ಹೊಂದಿದ, ತನ್ನ ಮಗನಾದ ನವಿಲನ್ನುಕೊಟ್ಟನು. ಅರುಣನು ಕೋಳಿಯನ್ನು ಕೊಟ್ಟನು. ಅದರ ಕಾಲು ಆಯುಧವಾಗಿತ್ತು. (ಕೋಳಿಗಳು ಕಾಲಿನಿಂದ ಕಾದಾಡುತ್ತವೆ.)

ಛಾಗಂ ತು ವರುಣೋ ದೇವೋ ಬಲವೀರ್ಯಸಮನ್ವಿತಮ್ ।
ಕೃಷ್ಣಾಜಿನಂ ದದೌ ಬ್ರಹ್ಮಾ ಬ್ರಹ್ಮಣ್ಯಾಯ ದದೌ ನೃಪ ॥೪೫॥
ಸಮರೇಷು ಜಯಂ ಚೈವ ಪ್ರದದೌ ಲೋಕಭಾವನಃ ॥೪೬॥

ವರುಣನು ಬಲ ಮತ್ತು ವೀರ್ಯವುಳ್ಳ ಆಡನ್ನು ಕೊಟ್ಟನು. ಚತುರ್ಮುಖಬ್ರಹ್ಮನು ಬ್ರಾಹ್ಮಣರಿಗೆ ಮಂಗಳವನ್ನುಂಟುಮಾಡುವುದರಿಂದ ಬ್ರಹ್ಮಣ್ಯನೆನಿಸಿದ ಸ್ಕಂದನಿಗೆ ಕೃಷ್ಣಾಜಿನವನ್ನು ಕೊಟ್ಟನು. ಲೋಕಪೂಜ್ಯನಾದ ಬ್ರಹ್ಮನು ಯುದ್ಧಗಳಲ್ಲಿ ಜಯವನ್ನೂ ಕೊಟ್ಟನು.

ಸೈನಾಪತ್ಯಮನುಪ್ರಾಪ್ಯ ಸ್ಕಂದೋ ದೇವಗಣಸ್ಯ ಹ ।
ಶುಶುಭೇ ಜ್ವಲನಾರ್ಚಿಷ್ಮಾನ್ ದ್ವಿತೀಯ ಇವ ಪಾವಕಃ ॥೪೭॥

ಸ್ಕಂದನು ದೇವಗಣದ ಸೇನಾಧಿಪತ್ಯವನ್ನು ಹೊಂದಿ, ಜ್ವಲಿಸುತ್ತಿರುವ ಅಗ್ನಿಯ ಕಾಂತಿಯನ್ನು ಹೊಂದಿ ಎರಡನೆಯ ಅಗ್ನಿಯಂತೆ ಶೋಭಿಸಿದನು.

ತತಃ ಪಾರಿಷದೈಶ್ಚೈವ ಮಾತೃಭಿಶ್ಚ ಸಮನ್ವಿತಃ ।
ಯಯೌ ದೈತ್ಯವಿನಾಶಾಯ ಹ್ಲಾದಯನ್ ಸುರಪುಂಗವಾನ್ ॥೪೮॥

ಅನಂತರ ಸ್ಕಂದನು ಅನುಚರರು ಮತ್ತು ಮಾತೆಯರಿಂದ ಕೂಡಿಕೊಂಡು, ದೇವಮುಖ್ಯರಿಗೆ ಆನಂದವನ್ನು ಉಂಟುಮಾಡುತ್ತಾ, ದೈತ್ಯನಾಶಕ್ಕಾಗಿ ಹೋದನು.

ಸಾ ಸೇನಾ ನೈರ್ಋತೀ ತತ್ರ ಸಘಂಟೋಚ್ಛ್ರಿತಕೇತನಾ ।
ಸಭೇರೀಶಂಖಮುರಜಾ ಸಾಯುಧಾ ಸಪತಾಕಿನೀ ॥೪೯॥

ಶಾರದೀ ದ್ಯೌರಿವ ಬಭೌ ಜ್ಯೋತಿರ್ಭಿರಿವ ಶೋಭಿತಾ ॥೫೦॥

ಭೂತಗಣಗಳುಳ್ಳ ಆ ನೈರ್ಋತಿ ಸೇನೆಯು ಘಂಟೆ ಮತ್ತು ಪತಾಕೆಯನ್ನು ಹೊಂದಿತ್ತು. ಭೇರಿ, ಶಂಖ, ಮುರಜಮೊದಲಾದ ವಾದ್ಯಗಳು ಅದರಲ್ಲಿ ಇದ್ದವು. ಆಯುಧ, ಪತಾಕೆಯನ್ನು ಹೊಂದಿತ್ತು. ಶರತ್ಕಾಲದಲ್ಲಿ ನಕ್ಷತ್ರಗಳಿಂದ ಕೂಡಿದ ಆಕಾಶದಂತೆ ಈ ಸೈನ್ಯವು ಶೋಭಿಸುತ್ತಿತ್ತು.

ತತೋ ದೇವನಿಕಾಯಾಸ್ತೇ ಭೂತಸೇನಾಗಣಾಸ್ತಥಾ ।
ವಾದಯಾಮಾಸುರವ್ಯಗ್ರಾ ಭೇರೀಃ ಶಂಖಾಂಶ್ಚ ಪುಷ್ಕಲಾನ್ ॥೫೧॥

ಪಟಹಾನ್ ಝರ್ಝರಾಂಶ್ಚೈವ ಕಂಕಣಾನ್ ಗೋವಿಷಾಣಕಾನ್ ।
ಆಡಂಬರಾನ್ ಗೋಮುಖಾಂಶ್ಚ ಡಿಂಡಿಮಾಂಶ್ಚ ಮಹಾಸ್ವನಾನ್ ॥೫೨॥

ಅನಂತರ ದೇವತಾಗಣ ಮತ್ತು ಭೂತಗಣಗಳು ಶಾಂತಚಿತ್ತದಿಂದ ಬಹಳವಾದ ಭೇರಿ, ಶಂಖ, ಪಟಹ, ಝರ್ಝರ, ಕಂಕಣ, ಗೋವಿಷಾಣ, ಆಡಂಬರ, ಗೋಮುಖ ಮತ್ತು ಡಿಂಡಿಮ ಇವುಗಳನ್ನು ಬಾರಿಸಿದವು.

ತುಷ್ಟುವುಸ್ತೇ ಕುಮಾರಂ ಚ ಸರ್ವೇ ದೇವಾಃ ಸವಾಸವಾಃ ।
ಜಗುಶ್ಚ ದೇವಗಂಧರ್ವಾ ನನೃತುಶ್ಚಾಪ್ಸರೋಗಣಾಃ ॥೫೩॥

ಇಂದ್ರಾದಿ ಸಕಲದೇವತೆಗಳು ಕುಮಾರನನ್ನು ಸ್ತುತಿಸಿದರು. ದೇವ-ಗಂಧರ್ವರು ಹಾಡಿದರು. ಅಪ್ಸರಗಣಗಳು ನರ್ತಿಸಿದವು.

ತತಃ ಪ್ರೀತೋ ಮಹಾಸೇನಃ ತ್ರಿದಶಾನಾಂ ವರಂ ದದೌ ।
ರಿಪೂನ್ ಹಂತಾಸ್ಮಿ ಸಮರೇ ಯೇಷಾಂ ವಧಚಿಕೀರ್ಷವಃ ॥೫೪॥

ಅವುಗಳಿಂದ ಪ್ರೀತನಾದ ಸ್ಕಂದನು ದೇವತೆಗಳಿಗೆ ವರವನ್ನು ಕೊಟ್ಟನು. ಯಾವ ದೈತ್ಯರ ವಧೆಯು ಆಗಬೇಕೆಂದು ನೀವು ಬಯಸಿರುವಿರೋ ಅಂತಹ ಶತ್ರುಗಳನ್ನು ಯುದ್ಧದಲ್ಲಿ ಕೊಲ್ಲುವೆನು ಎಂದು.

ಪ್ರತಿಗೃಹ್ಯ ವರಂ ದೇವಾಃ ತಸ್ಮಾದ್ ವಿಬುಧಸತ್ತಮಾತ್ ।
ಪ್ರೀತಾತ್ಮಾನೋ ಮಹಾತ್ಮಾನೋ ಮೇನಿರೇ ನಿಹತಾನ್ ರಿಪೂನ್ ॥೫೫॥

ದೇವತೆಗಳು ದೇವೋತ್ತಮನಾದ ಸ್ಕಂದನಿಂದ ವರವನ್ನು ಸ್ವೀಕರಿಸಿ, ಮನಃಪ್ರಸಾದವನ್ನು ಹೊಂದಿ, ಸಂತುಷ್ಟರಾಗಿ ಶತ್ರುಗಳು ಸತ್ತರು ಎಂಬುದಾಗಿ ಅಂದುಕೊಂಡರು.

ಸರ್ವೇಷಾಂ ಭೂತಸಂಘಾನಾಂ ಹರ್ಷಾನ್ನಾದಃ ಸಮುತ್ಥಿತಃ ।
ಅಪೂರಯತ ಲೋಕಾಂಸ್ತ್ರೀನ್ ವರೇ ದತ್ತೇ ಮಹಾತ್ಮನಾ ॥೫೬॥

ಮಹಾತ್ಮನಾದ ಸ್ಕಂದನು ವರವನ್ನು ಕೊಟ್ಟಾಗ ಎಲ್ಲಾ ಭೂತಗಣಗಳಿಂದ ಹೊರಬಂದ ಹರ್ಷೋದ್ಗಾರವು ಮೂರುಲೋಕಗಳಲ್ಲಿಯೂ ತುಂಬಿಹೋಯಿತು.

ಸ ನಿರ್ಯಯೌ ಮಹಾಸೇನೋ ಮಹತ್ಯಾ ಸೇನಯಾ ಸಹ ।
ವಧಾಯ ಯುಧಿ ದೈತ್ಯಾನಾಂ ರಕ್ಷಸಾಂ ಭರತರ್ಷಭ ॥೫೭॥

ಭರತವಂಶೋತ್ತಮನೇ! ಮಹಾಸೇನ ಸ್ಕಂದನು ಯುದ್ಧದಲ್ಲಿ ದೈತರು ಮತ್ತು ರಾಕ್ಷಸರನ್ನು ಕೊಲ್ಲಲಿಕ್ಕಾಗಿ ದೊಡ್ಡದಾದ ಸೈನ್ಯದೊಡನೆ ಹೊರಟನು.

ವ್ಯವಸಾಯೋ ಜಯೋ ಧರ್ಮಃ ಸಿದ್ಧಿರ್ಲಕ್ಷ್ಮೀರ್ಧೃತಿಃ ಸ್ಮೃತಿಃ ।
ಮಹಾಸೇನಸ್ಯ ಸೈನ್ಯಾನಾಮಗ್ರೇ ಜಗ್ಮುರ್ನರಾಧಿಪ ॥೫೮॥

ರಾಜನೇ! ಮಹಾಸೇನ ಕುಮಾರನ ಸೈನ್ಯದ ಮುಂಭಾಗದಲ್ಲಿ ವ್ಯವಸಾಯ, ಜಯ, ಧರ್ಮ, ಸಿದ್ಧಿ, ಲಕ್ಷ್ಮಿ, ಧೃತಿ ಮತ್ತು ಸ್ಮೃತಿ ಇವರು ಇದ್ದರು.

ಸ ತಯಾ ಭೀಮಯಾ ದೇವಃ ಶೂಲಮುದ್ಗರಹಸ್ತಯಾ ।
ಗದಾಮುಸಲನಾರಾಚಶಕ್ತಿತೋಮರಹಸ್ತಯಾ ॥೫೯॥

ವೃತಃ ಸಿಂಹನಿನಾದಿನ್ಯಾ ಏನದ್ಯ ಪ್ರಯಯೌ ಗುಹಃ ॥೬೦॥

ಸ್ಕಂದನ ಸೈನ್ಯದಲ್ಲಿ ಯೋಧರು ಶೂಲ, ಮುದ್ಗರ, ಗದಾ, ಮುಸಲ, ಬಾಣ, ಶಕ್ತಿ, ತೋಮರ ಮೊದಲಾದ ಆಯುಧಗಳನ್ನು ಧರಿಸಿದ್ದರು. ಸಿಂಹಗರ್ಜನೆಯನ್ನು ಮಾಡುತ್ತಿದ್ದರು. ಇಂತಹ ಭಯಂಕರವಾದ ಸೈನ್ಯದ ಜೊತೆಗೆ ಸ್ಕಂದನು ಗರ್ಜಿಸಿಕೊಂಡು ಹೊರಟನು.

ತಂ ದೃಷ್ಟ್ವಾ ಸರ್ವದೈತೇಯಾ ರಾಕ್ಷಸಾ ದಾನವಾಸ್ತಥಾ ।
ವ್ಯದ್ರವಂತ ದಿಶಃ ಸರ್ವಾ ಭಯೋದ್ವಿಗ್ನಾಃ ಸಮಂತತಃ ॥೬೧॥

ಸ್ಕಂದನನ್ನು ನೋಡಿ ಎಲ್ಲಾ ದೈತ್ಯರು, ರಾಕ್ಷಸರು, ದಾನವರು ಭಯೋದ್ವೇಗಕ್ಕೆ ಒಳಗಾಗಿ ಎಲ್ಲಾ ಕಡೆಯಲ್ಲಿಯೂ ದಿಕ್ಕಾಪಾಲಾಗಿ ಓಡಿದರು.

ಅಭ್ಯದ್ರವಂತ ದೇವಾಶ್ಚ ವಿವಿಧಾಯುಧಪಾಣಯಃ ॥೬೨॥

ದೇವತೆಗಳೂ ವಿವಿಧ ಆಯುಧಗಳನ್ನು ಕೈಯಲ್ಲಿ ಧರಿಸಿಕೊಂಡು ಶತ್ರುಗಳನ್ನು ಅಟ್ಟಿಸಿಕೊಂಡು ಹೋದರು.

ದೃಷ್ಟ್ವಾ ಚಾಪತತಃ ಕ್ರುದ್ಧಃ ಸ್ಕಂದಸ್ತೇಜೋಬಲಾನ್ವಿತಃ ।
ಶಕ್ರಾಸ್ತ್ರಂ ಭಗವಾನ್ ದೇವಃ ಪುನಃ ಪುನರರಿಂದಮಃ ॥೬೩॥

ಆದಧಚ್ಚಾತ್ಮನಸ್ತೇಜೋ ಹವಿಷೇವ ಯಥಾಽನಲಃ ॥೬೪॥

ಓಡುತ್ತಿರುವ ಶತ್ರುಗಳನ್ನು ನೋಡಿದ ಶತ್ರುಸಂಹಾರಕನಾದ, ತೇಜಸ್ಸು ಮತ್ತು ಬಲದಿಂದ ಕೂಡಿದ ಸ್ಕಂದನು ಕೋಪಗೊಂಡು ಶಕ್ರಾಸ್ತ್ರವನ್ನು ಪ್ರಯೋಗಿಸಿದನು. ಇದು ಅಗ್ನಿಯು ತನ್ನ ತೇಜಸ್ಸನ್ನು ಪ್ರಯೋಗಿಸಿದಂತೆ ಇತ್ತು.

ಅಭ್ಯಸ್ಯಮಾನೇ ಶಕ್ಯಸ್ತ್ರೇ ಸ್ಕಂದೇನಾಮಿತತೇಜಸಾ ।
ಉಲ್ಕಾಜಾಲಂ ಮಹಾರಾಜ ಪಪಾತ ವಸುಧಾತಳೇ ॥೬೫॥

ಮಹಾರಾಜನೇ! ಅಪರಿಮಿತ ತೇಜಸ್ಸುಳ್ಳ ಸ್ಕಂದನು ಶಕ್ಯಸ್ತ್ರವನ್ನು ಪ್ರಯೋಗಿಸಿದಾಗ ಭೂಮಿಯ ಮೇಲೆ ಉಲ್ಕೆಗಳ ಸಮೂಹವೇ ಬಿದ್ದಿತು.

ಸಂಹ್ರಾದಯಂತಃ ಶತಶೋ ನಿರ್ಘಾತಾಶ್ಚಾಪತನ್ ಕ್ಷಿತೌ ।
ಯಥಾಽಂತಕಾಲಸಮಯೇ ಸುಘೋರಾಃ ಸ್ಯುಸ್ತಥಾ ನೃಪ ॥೬೬॥

ಪ್ರಳಯಕಾಲದ ಹಾಗೆ ಜೋರಾಗಿ ಶಬ್ದವನ್ನುಂಟುಮಾಡುತ್ತಾ ಭೂಮಿಯ ಮೇಲೆ ವಜ್ರಪಾತಗಳು ಉಂಟಾದವು.

ಕ್ಷಿಪ್ತಾ ಹ್ಯೇಕಾ ಯದಾ ಶಕ್ತಿಃ ಸುಘೋರಾಽನಲಸೂನುನಾ ।
ತದಾ ಕೋಟ್ಯೋ ವಿನಿಷ್ಪೇತುಃ ಶಕ್ತೀನಾಂ ಭರತರ್ಷಭ ॥೬೭॥

ಭಾರತೋತ್ತಮನೇ! ಅಗ್ನಿಪುತ್ರ ಸ್ಕಂದನು ಒಂದು ಶಕ್ಯಸ್ತ್ರವನ್ನು ಪ್ರಯೋಗಿಸಿದಾಗ ಅನೇಕ ಕೋಟಿ ಶಕ್ತ್ಯಾಯುಧಗಳು ಬಿದ್ದವು.

ಸ ಶಕ್ಯಸ್ತ್ರೇಣ ದನುಜಾನ್ ಜಘಾನ ಭಗವಾನ್ ಪ್ರಭುಃ ॥೬೮॥

ಸಮರ್ಥನಾದ ಪೂಜ್ಯ ಸ್ಕಂದನು ಆ ಶಕ್ಯಸ್ತ್ರದಿಂದ ದನುಪುತ್ರರನ್ನು ಸಂಹರಿಸಿದನು.

ದೈತ್ಯೇಂದ್ರಂ ತಾರಕಂ ನಾಮ ಮಹಾಬಲಪರಾಕ್ರಮಮ್ ।
ವೃತಂ ದೈತ್ಯಾಯುತೈರ್ವೀರೈರ್ಬಲಿಭಿರ್ದಶಭಿಃ ಪ್ರಭುಃ ॥೬೯॥

ಮಹಾಬಲ ಮತ್ತು ಪರಾಕ್ರಮವುಳ್ಳ ತಾರಕ ಎಂಬ ದೈತ್ಯೇಂದ್ರನಿಗೆ ಹೊಡೆದು ಅವನನ್ನು ಕೊಂದನು. ಆ ತಾರಕನ ಸುತ್ತಲೂ ಒಂದು ಲಕ್ಷಸಂಖ್ಯೆಯ ಬಲಶಾಲಿಗಳಾದ ವೀರ ದೈತ್ಯರು ಸುತ್ತುವರಿದಿದ್ದರು.

ಮಹಿಷಂ ಚಾಷ್ಟಭಿಃ ಪದ್ಮೈರ್ವೃತಂ ಸಂಖ್ಯೇ ಜಘಾನ ಹ ॥೭೦॥

ಎಂಟು ಪದ್ಮಸಂಖ್ಯೆಯ (೧೦೧೫ ಅಥವಾ ೧೦೯) ದೈತ್ಯರಿಂದ ಸುತ್ತುವರಿಯಲ್ಪಟ್ಟ ಮಹಿಷ ಎಂಬ ದೈತ್ಯನನ್ನೂ ಯುದ್ಧದಲ್ಲಿ ಸ್ಕಂದನು ಕೊಂದನು.

ತ್ರಿಪಾದಂ ಚಾಯುತಶತೈರ್ಜಘಾನ ದಶಭಿರ್ವೃತಮ್ ॥೭೧॥

ಸಾವಿರ ಅಯುತ ೧೦ ಸಂಖ್ಯೆಯ ದೈತ್ಯರಿಂದ ಆವೃತನಾದ ತ್ರಿಪಾದದೈತ್ಯನನ್ನೂ ಕೊಂದನು.

ಹ್ರದೋದರಂ ನಿಖರ್ವೈಶ್ಚ ವೃತಂ ದಶಭಿರೀಶ್ವರಃ ।
ಜಘಾನಾನುಚರೈಃ ಸಾರ್ಧಂ ವಿವಿಧಾಯುಧಪಾಣಿಭಿಃ ॥೭೨॥

ಹತ್ತು ನಿಖರ್ವ (೧೦೧೧) ಸಂಖ್ಯೆಯ ದೈತ್ಯರಿಂದ ಆವೃತನಾದ ಹ್ರದೋದರ ಎಂಬ ದೈತ್ಯನನ್ನು ಕೊಂದನು. ಜೊತೆಗೆ ಬೇರೆ ಬೇರೆ ಆಯುಧಗಳನ್ನು ಹಿಡಿದುಕೊಂಡಿದ್ದ ದೈತ್ಯರ ಅನುಚರರನ್ನೂ ಕೊಂದನು.

ತತ್ಕಾರ್ವಂತ ತುಮುಲಂ ನಾದಂ ವಧ್ಯತ್ಸು ಶತ್ರುಷು ।
ಕುಮಾರಾನುಚರಾ ರಾಜನ್ ಪೂರಯಂತೋ ದಿಶೋ ದಶ ॥೭೩॥

ಸ್ಕಂದನು ಶತ್ರುಗಳನ್ನು ಕೊಲ್ಲುತ್ತಿದ್ದಾಗ ಸ್ಕಂದನ ಅನುಚರರು ಜೋರಾಗಿ ಶಬ್ದವನ್ನು ಮಾಡಿದರು. ಆ ಶಬ್ದವು ಎಲ್ಲಾ ದಿಕ್ಕುಗಳಲ್ಲಿಯೂ ತುಂಬಿಕೊಂಡಿತು.

ಶಕ್ತ್ಯಸ್ತ್ರಸ್ಯ ತು ರಾಜೇಂದ್ರ ತತೋಽರ್ಚಿಭಿರ್ವಿಶಾಂಪತೇ ।
ತ್ರೈಲೋಕ್ಯಂ ತ್ರಾಸಿತಂ ಸರ್ವಂ ಜೃಂಭಮಾಣಾಭಿರೇವ ಚ ॥೭೪॥

ರಾಜನೇ! ಅನಂತರ ಹಬ್ಬುತ್ತಿದ್ದ ಶಕ್ತ್ಯಸ್ತ್ರದ ಜ್ವಾಲೆಗಳಿಂದ ಮೂರುಲೋಕಗಳೂ ಸಂಕಟಕ್ಕೊಳಗಾದವು.

ದಗ್ಧಾಃ ಸಹಸ್ರಶೋ ದೈತ್ಯಾ ನಾದೈಃ ಸ್ಕಂದಸ್ಯ ಚಾಪರೇ ॥೭೫॥

ಬೇರೆ ಸಾವಿರಾರು ದೈತ್ಯರು ಸ್ಕಂದನ ನಾದದಿಂದಲೇ ಸತ್ತುಹೋದರು.

ಪತಾಕಯಾ ಚಾವಧೂತಾ ಹತಾಃ ಕೇಚಿತ್ ಸುರದ್ವಿಷಃ ।
ಕೇಚಿದ್ ಘಂಟಾರವತ್ರಸ್ತಾ ನಿಪೇತುರ್ಧರಣೀತಳೇ ॥೭೬॥

ಸ್ಕಂದನ ಪತಾಕೆಯಿಂದ ಬೀಸುವ ಗಾಳಿಯಿಂದಲೇ ಕೆಲವು ದೈತ್ಯರು ನಾಶವಾದರು. ಕೆಲವರು ಘಂಟೆಯ ಧ್ವನಿಯಿಂದ ಪೀಡಿತರಾಗಿ ಭೂಮಿಗೆ ಬಿದ್ದರು.

ಕೇಚಿತ್ ಪ್ರಹರಣೈಶ್ಚಿನ್ನಾ ವಿನಿಷ್ಪೇತುರ್ಗತಾಸವಃ ॥೭೭॥

ಕೆಲವರು ಆಯುಧಗಳ ಹೊಡೆತದಿಂದ ಪ್ರಾಣ ಕಳೆದುಕೊಂಡು ಬಿದ್ದರು.

ಏವಂ ಸುರದ್ವಿಷೋऽನೇಕಾನ್ ಸಬಲಾನಾತತಾಯಿನಃ ।
ಜಿಗಾಯ ಸಮರೇ ವೀರಃ ಕಾರ್ತಿಕೇಯೋ ಜಘಾನ ಹ ॥೭೮॥

ಹೀಗೆ ವೀರನಾದ ಸ್ಕಂದನು ಆತತಾಯಿಗಳಾದ, ಬಲಶಾಲಿಗಳಾದ ಅನೇಕ ದೈತ್ಯರನ್ನು ಯುದ್ಧದಲ್ಲಿ ಗೆದ್ದು ಕೊಂದು ಹಾಕಿದನು.

ಬಾಣೋ ನಾಮಾಥ ದೈತ್ಯೇಂದ್ರೋ ಬಲೇಃ ಪುತ್ರೋ ಮಹಾಬಲಃ ।
ಕ್ರೌಂಚಪರ್ವತಮಾಸಾದ್ಯ ದೇವಸಂಘಾನಬಾಧತ ॥೭೯॥

ಬಲಿಯ ಮಗನಾದ, ಬಲಶಾಲಿಯಾದ ಬಾಣ ಎಂಬ ದೈತ್ಯೇಂದ್ರನು ಕ್ರೌಂಚಪರ್ವತವನ್ನೇರಿ ದೇವಸಂಘವನ್ನು ಪೀಡಿಸತೊಡಗಿದನು.

ತಮಭ್ಯಯಾನ್ಮಹಾಸೇನಃ ಸುರಶತ್ರುಮುದಾರಧೀಃ ।
ಸ ಕಾರ್ತಿಕೇಯಸ್ಯ ಭಯಾತ್ ಕ್ರೌಂಚಂ ಶರಣಮೇಯಿವಾನ್ ॥೮೦॥

ಉತ್ಕೃಷ್ಟವಾದ ಜ್ಞಾನವುಳ್ಳ ಸ್ಕಂದನು ದೇವಶತ್ರುವಾದ ಆ ಬಾಣಾಸುರನನ್ನು ಎದುರಿಸಿದನು. ಆ ಅಸುರನು ಸ್ಕಂದನಿಗೆ ಹೆದರಿ ಕ್ರೌಂಚಪರ್ವತವನ್ನು ಆಶ್ರಯಿಸಿದನು.

ತತಃ ಕ್ರೌಂಚಮಭಿದ್ರುತ್ಯ ಕ್ರೌಂಚನಾದವಿನಾದಿತಮ್ ।
ಶಕ್ತ್ಯಾ ಬಿಭೇದ ಭಗವಾನ್ ಕಾರ್ತಿಕೇಯೋऽಗ್ನಿದತ್ತಯಾ ॥೮೧॥

ಕ್ರೌಂಚಪಕ್ಷಿಗಳ ಕಲರವದಿಂದ ಚೆನ್ನಾಗಿ ನಾದವನ್ನು ಹೊರಹಾಕುತ್ತಿದ್ದ ಕ್ರೌಂಚಪರ್ವತದ ಹತ್ತಿರ ಬಂದು ಸ್ಕಂದನು ಶಕ್ತಿಸ್ತ್ರದಿಂದ ಆ ಕ್ರೌಂಚಪರ್ವತಕ್ಕೆ ಬೆಂಕಿ ಹಚ್ಚಿ ಪರ್ವತವನ್ನು ಸೀಳಿದನು.

ಸಸಾಲಸ್ಕಂಧತರಲಂ ತ್ರಸ್ತವಾನರವಾರಣಮ್ ।
ಪ್ರಲೀನತ್ರಸ್ತವಿಹಗಂ ವಿನಿಷ್ಪತಿತಪನ್ನಗಮ್ ॥೮೨॥

ಸಾಲವೃಕ್ಷಗಳು ಬೀಳತೊಡಗಿದವು. ಕೋತಿಗಳು, ಆನೆಗಳು ಹೆದರಿದವು. ಹೆದರಿದ ಹಕ್ಕಿಗಳು ಹಾರಿಹೋದವು. ಬಿಲದೊಳಗಿದ್ದ ಹಾವುಗಳು ಹೊರಬಂದವು.

ಗೋಲಾಂಗೂಲರ್ಕ್ಷಚಮರೈರ್ದ್ರವದ್ಭಿರನುನಾದಿತಮ್ ।
ಕುರಂಗಾರುತನಿರ್ಘೋಷಮುದ್ಭ್ರಾಂತಭ್ರಮರಾಚಿತಮ್ ॥೮೩॥

ಗೋಲಾಂಗೂಲ ಜಾತಿಯ ಕಪಿಗಳು, ಕರಡಿಗಳು ಮತ್ತು ಚಮರೀಮೃಗಗಳು ಓಡತೊಡಗಿದಾಗ ಬಹಳವಾದ ಧ್ವನಿಯು ಉಂಟಾಯಿತು.

ವಿನಿಷ್ಪತದ್ಭಿಃ ಶರಭೈಃ ಸಿಂಹೈಶ್ಚ ಸಹಸಾ ದ್ರುತೈಃ ।
ಶೋಚ್ಯಾಮಪಿ ದಶಾಂ ಪ್ರಾಪ್ತೋ ರರಾಸೇವ ಸ ಪರ್ವತಃ ॥೮೪॥

ಶರಭಗಳು ಭಯದಿಂದ ಕುಪ್ಪಳಿಸಿದವು. ಸಿಂಹಗಳು ಭಯದಿಂದ ವೇಗವಾಗಿ ಓಡಿದವು. ಹೀಗೆ ದಯನೀಯವಾದ ಅವಸ್ಥೆಯನ್ನು ಹೊಂದಿದ ಪರ್ವತವು ಈ ರೀತಿಯಲ್ಲಿ ಶೋಭಿಸಿತು.

ವಿದ್ಯಾಧರಾಃ ಸಮುತ್ಪೇತುಸ್ತಸ್ಯ ಶೃಂಗನಿವಾಸಿನಃ ।
ಕಿನ್ನರಾಶ್ಚ ಭಯೋದ್ವಿಗ್ನಾಃ ಶಕ್ತಿಪ್ರಾಸರವೋದ್ಧತಾಃ ॥೮೫॥

ಆ ಪರ್ವತದ ಶಿಖರಗಳಲ್ಲಿ ವಾಸಮಾಡುತ್ತಿದ್ದ ವಿದ್ಯಾಧರರು ಅಲ್ಲಿಂದ ಹೊರಹೊರಟರು. ಶಕ್ತಿ ಮತ್ತು ಪ್ರಾಸ ಆಯುಧಗಳ ಶಬ್ದದಿಂದ ಭಯಕ್ಕೊಳಗಾಗಿ ಉದ್ವೇಗಗೊಂಡ ಕಿನ್ನರರೂ ಅಲ್ಲಿಂದ ಬೇರೆಡೆಗೆ ಹೋದರು.

ತತೋ ದೈತ್ಯಾ ವಿನಿಷ್ಪೇತುಃ ಶತಶೋಽಥ ಸಹಸ್ರಶಃ ।
ಪ್ರದೀಪ್ತಾತ್ ಪರ್ವತಶ್ರೇಷ್ಠಾದ್ ವಿಚಿತ್ರಾಭರಣಸ್ರಜಃ ॥೮೬॥

ಬೆಂಕಿಯಿಂದ ಸುಡುತ್ತಿದ್ದ ಆ ಶ್ರೇಷ್ಠಪರ್ವತದಿಂದ ವಿಚಿತ್ರವಾದ ಆಭರಣ ಮತ್ತು ಮಾಲೆಗಳನ್ನು ಧರಿಸಿದ್ದ ನೂರಾರು ಸಾವಿರಾರು ದೈತ್ಯರು ಹೊರಬಿದ್ದರು.

ತಾನ್ ನಿಜಘ್ನುರತಿಕ್ರಮ್ಯ ಕುಮಾರಾನುಚರಾ ಮೃಧೇ ।
ಬಿಭೇದ ಶಕ್ತ್ಯಾ ಕ್ರೌಂಚಂ ಚ ಪಾವಕಿಃ ಪರವೀರಹಾ ॥೮೭॥

ಆ ಯುದ್ಧದಲ್ಲಿ ಸ್ಕಂದನ ಅನುಚರರು ಆ ದೈತ್ಯರನ್ನು ಕೊಂದರು. ಶತ್ರುವೀರ್ಯವನ್ನು ನಾಶಮಾಡುವ ಸ್ಕಂದನು ಶಕ್ತ್ಯಸ್ತ್ರದಿಂದ ಕ್ರೌಂಚಪರ್ವತವನ್ನು ಪುಡಿ ಮಾಡಿದನು.

ಬಹುಧಾ ಚೈಕಧಾ ಚೈವ ಕೃತ್ವಾऽऽತ್ಮಾನಂ ಮಹಾತ್ಮನಾ ।
ಶಕ್ತಿಃ ಕ್ಷಿಪ್ತಾ ರಣೇ ತೇನ ಪಾಣಿಮೇತಿ ಪುನಃ ಪುನಃ ॥೮೮॥

ಸ್ಕಂದನು ತನ್ನನ್ನು ಒಂದುಸಲ ಅನೇಕ ರೂಪಗಳಲ್ಲಿ ವಿಭಾಗಿಸಿಕೊಂಡು, ಮತ್ತೊಮ್ಮೆ ಏಕರೂಪವನ್ನು ತಾಳಿ ಶಕ್ತ್ಯಾಯುಧವನ್ನು ಪ್ರಯೋಗಿಸಿದನು. ಹೀಗೆ ಯುದ್ಧನಡೆಯುತ್ತಿದ್ದಾಗ ಸ್ಕಂದನ ಕೈಯಲ್ಲಿ ಶಕ್ತಿಯು ಪುನಃ ಬಂದು ಸೇರಿಕೊಳ್ಳುತ್ತಿತ್ತು.

ಏವಂಪ್ರಭಾವೋ ಭಗವಾನತೋ ಭೂಯಶ್ಚ ಪಾವಕಿಃ ।
ಕ್ರೌಂಚಸ್ತೇನ ವಿನಿರ್ಭಿನ್ನೋ ದೈತ್ಯಾಶ್ಚ ಶತಶೋ ಹತಾಃ ॥೮೯॥

ಪೂಜ್ಯನಾದ ಸ್ಕಂದನ ಪ್ರಭಾವ ಹೀಗಿತ್ತು. ಇದಕ್ಕಿಂತಲೂ ಅಧಿಕವಾಗಿ ಸ್ಕಂದನ ಪ್ರಭಾವ ವೃದ್ಧಿಸಿತು. ಕ್ರೌಂಚಪರ್ವತವು ಪುಡಿಯಾಯಿತು. ದೈತ್ಯರು ಹತರಾದರು.

ತತಃ ಸ ಭಗವಾನ್ ಕ್ರೌಂಚಂ ನಿಹತ್ಯ ವಿಬುಧದ್ವಿಷಃ(ಮ್) ।
ಸಭಾಜ್ಯಮಾನೋ ವಿಬುಧೈಃ ಪರಂ ಹರ್ಷಮವಾಪ ಹ ॥೯೦॥

ಅನಂತರ ಪೂಜ್ಯನಾದ ಸ್ಕಂದನು ಕ್ರೌಂಚಪರ್ವತವನ್ನು ಒಡೆದು ಹಾಕಿ, ದೇವಶತ್ರುಗಳಾದ ದೈತ್ಯರನ್ನು ಕೊಂದಾಗ ದೇವತೆಗಳು ಅವನನ್ನು ಕೊಂಡಾಡಿದರು. ಅವರೆಲ್ಲರೂ ತುಂಬಾ ಸಂತೋಷವನ್ನು ಹೊಂದಿದರು.

ತತೋ ದುಂದುಭಯೋ ನೇದುರ್ದಿವ್ಯಾಃ ಶಂಖಾಶ್ಚ ಭಾರತ ।
ಮುಮುಚುರ್ದೇವಸೇನಾಶ್ಚ ಪುಷ್ಪವರ್ಷಮನುತ್ತಮಮ್ ।
ಯೋಗಿನಾಮೀಶ್ವರಂ ದೇವಂ ಶತಶೋऽಥ ಸಹಸ್ರಶಃ ॥೯೧॥

ಭರತಕುಲೋದ್ಭವನೇ! ಅನಂತರ ದೇವಲೋಕದ ದುಂದುಭಿಗಳು, ಶಂಖಗಳು ಮೊಳಗಿದವು. ಸಾವಿರಾರು ದೇವತೆಗಳು ದೇವಸೇನಾನಿಯಾದ ಸ್ಕಂದನ ಮೇಲೆ ಉತ್ತಮವಾದ ಪುಷ್ಪವೃಷ್ಟಿಯನ್ನು ಮಾಡಿದರು.

ದಿವ್ಯಗಂಧಮುಪಾದಾಯ ವವೌ ಪುಣ್ಯಶ್ಚ ಮಾರುತಃ ॥೯೨॥

ಮಂಗಳವಾದ ವಾಯುವು ಪರಿಮಳಯುಕ್ತವಾಗಿ ಬೀಸಿತು.

ಗಂಧರ್ವಾಸ್ತುಷ್ಟುವುಶ್ಚೈನಂ ಯಜ್ವಾನಶ್ಚ ಮಹರ್ಷಯಃ ॥೯೩॥

ಗಂಧರ್ವರು ಕುಮಾರನನ್ನು ಸ್ತುತಿಸಿದರು. ಮಹರ್ಷಿಗಳು ಯಾಗವನ್ನು ಮಾಡಿದರು.

ಕೇಚಿದೇನಂ ವ್ಯವಸ್ಯಂತಿ ಪಿತಾಮಹಸುತಂ ವಿಭುಮ್ ।
ಸನತ್ಕುಮಾರಂ ಸರ್ವೇಷಾಂ ಬ್ರಹ್ಮಯೋನಿಂ ತಮಗ್ರಜಮ್ ॥೯೪॥

ಕೆಲವರು ಹೀಗೆ ನಿಶ್ಚಯಿಸಿಕೊಂಡರು- ''ಈತನು ಬ್ರಹ್ಮಪುತ್ರನಾದ ಹಾಗೂ ಬ್ರಹ್ಮಪುತ್ರರಲ್ಲಿಯೇ ದೊಡ್ಡವನಾದ ಸನತ್ಕುಮಾರ'' ಎಂದು.

ಕೇಚಿನ್ಮಹೇಶ್ವರಸುತಂ ಕೇಚಿತ್ ಪುತ್ರಂ ವಿಭಾವಸೋಃ ।
ಉಮಾಯಾಃ ಕೃತ್ತಿಕಾಯಾಶ್ಚ ಗಂಗಾಯಾಶ್ಚ ವದಂತ್ಯುತ ॥೯೫॥

ಕೆಲವರು ಇವನನ್ನು ರುದ್ರನ ಪುತ್ರ ಎಂಬುದಾಗಿ ನಿಶ್ಚಯಿಸಿಕೊಂಡರು. ಕೆಲವರು ಅಗ್ನಿಯ ಪುತ್ರನೆಂಬುದಾಗಿ ಅಂದುಕೊಂಡರು. ಕೆಲವರು ಇವನನ್ನು ಪಾರ್ವತಿಯ ಮಗನನ್ನಾಗಿಯೂ, ಕೃತ್ತಿಕೆಯರ ಮಗನನ್ನಾಗಿಯೂ, ಗಂಗೆಯ ಮಗನನ್ನಾಗಿಯೂ ಹೇಳತೊಡಗಿದರು.

ಏಕಧಾ ಚ ದ್ವಿಧಾ ಚೈವ ಚತುರ್ಧಾ ಚ ಮಹಾಬಲಮ್ ।
ಯೋಗಿನಾಮೀಶ್ವರಂ ದೇವಂ ಶತಶೋऽಥ ಸಹಸ್ರಶಃ ॥೯೬॥

ಆ ಎಲ್ಲಾ ದೇವತೆಗಳು ಮತ್ತು ಗಂಧರ್ವಾದಿಗಳು ಒಬ್ಬೊಬ್ಬರಾಗಿ, ಇಬ್ಬರಿಬ್ಬರು ಸೇರಿಕೊಂಡು, ನಾಲ್ಕು ನಾಲ್ಕು ಮಂದಿ ಕೂಡಿಕೊಂಡು ಯೋಗೀಶ್ವರನಾದ ಸ್ಕಂದನನ್ನು ನೋಡಿದರು ಮತ್ತು ಅವನ ಬಗ್ಗೆ ಮಾತನಾಡಿಕೊಂಡರು.

ಏತತ್ ತೇ ಕಥಿತಂ ರಾಜನ್ ಕಾರ್ತಿಕೇಯಾಭಿಷೇಚನಮ್ ।
ಶೃಣು ಚೇಮಾಂ ಸರಸ್ವತ್ಯಾಃ ತೀರ್ಥವಂಶಸ್ಯ ಪುಣ್ಯತಾಮ್ ॥೯೭॥

ರಾಜನೇ! ಕಾರ್ತಿಕೇಯನ ಪಟ್ಟಾಭಿಷೇಕವನ್ನು ನಿನಗೆ ನಾನು ವರ್ಣಿಸಿರುವೆನು. ಈ ಸರಸ್ವತಿನದಿಯ ತೀರ್ಥಪರಂಪರೆಯ ಪುಣ್ಯಶಾಲಿತ್ವವನ್ನು ಹೇಳುವೆನು, ಕೇಳು.

ಬಭೂವ ತತ್ತೀರ್ಥವರಂ ಹತೇಷು ಸುರಶತ್ರುಷು ।
ಕುಮಾರೇಣ ಮಹಾರಾಜ ತ್ರಿವಿಷ್ಟಪಮಿವಾಪರಮ್ ॥೯೮॥

ಸ್ಕಂದನು ದೇವಶತ್ರುಗಳನ್ನು ಸಂಹರಿಸಿದ ನಂತರ ಸರಸ್ವತಿಯ ಆ ತೀರ್ಥವು ಸ್ವರ್ಗತುಲ್ಯವಾಯಿತು.

ಐಶ್ವರ್ಯಾಣಿ ಚ ತತ್ರಸ್ಥೋ ದದಾವೀಶಃ ಪೃಥಕ್ ಪೃಥಕ್ ।
ತಥಾ ನೈರ್ಋತಮುಖ್ಯೇಷು ತ್ರೈಲೋಕ್ಯೇ ಪಾವಕಾತ್ಮಜಃ ॥೯೯॥

ಸ್ವಾಮಿಯಾದ ಸ್ಕಂದನು ಅಲ್ಲಿದ್ದ ಸಂಪತ್ತನ್ನು ತನ್ನ ಸೇನೆಯ ಮುಖ್ಯಸ್ಥರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಹಂಚಿ ಕೊಟ್ಟನು.

ಏವಂ ಸ ಭಗವಾಂಸ್ತಸ್ಮಿನ್ ತೀರ್ಥೇ ದೈತ್ಯಕುಲಾಂತಕೃತ್ ।
ಅಭಿಷಿಕ್ತೋ ಮಹಾರಾಜ ದೇವಸೇನಾಪತಿಃ ಸುರೈಃ ॥೧೦೦॥

ಹೀಗೆ ಭಗವಾನ್ ಸ್ಕಂದನು ಆ ತೀರ್ಥದಲ್ಲಿ ದೇವತೆಗಳಿಂದ ದೇವಸೇನಾಧಿಪತಿಯಾಗಿ ಅಭಿಷಿಕ್ತನಾಗಿ ದೈತ್ಯಕುಲವನ್ನೇ ನಾಶ ಮಾಡಿದನು.

ತೈಜಸಂ ನಾಮ ತತ್ ತೀರ್ಥಂ ಯತ್ರ ತೀರ್ಥೇ ಮಹಾಮತಿಃ ।
ಅಭಿಷಿಕ್ತಃ ಸುರಗಣೈರ್ವರುಣೋ ಭರತರ್ಷಭ ॥೧೦೧॥

ಭರತಕುಲಶ್ರೇಷ್ಠನೇ! ಎಲ್ಲಿ ಮಹಾಜ್ಞಾನಿಯಾದ ವರುಣನು ದೇವತೆಗಳಿಂದ ಅಭಿಷಿಕ್ತನಾದನೋ ಆ ತೀರ್ಥಕ್ಕೆ ತೈಜಸತೀರ್ಥ ಎಂಬುದಾಗಿ ಹೆಸರು ಬಂತು.

ತಸ್ಮಿಂಸ್ತೀರ್ಥವರೇ ಸ್ನಾತ್ವಾ ಸ್ಕಂದಮಭ್ಯರ್ಚ್ಯ ಲಾಂಗಲೀ ।
ಬ್ರಾಹ್ಮಣೇಭ್ಯೋ ದದೌ ವಿತ್ತಂ ವಾಸಾಂಸ್ಯಾಭರಣಾನಿ ಚ ॥೧೦೨॥

ಬಲರಾಮನು ಆ ಉತ್ತಮತೀರ್ಥದಲ್ಲಿ ಸ್ನಾನವನ್ನು ಮಾಡಿ, ಸ್ಕಂದನನ್ನು ಆರಾಧಿಸಿ ಬ್ರಾಹ್ಮಣರಿಗೆ ಹಣ, ವಸ್ತ್ರಮತ್ತು ಆಭರಣಗಳನ್ನು ದಾನಮಾಡಿದನು.

ಉಷಿತ್ವಾ ರಜನೀಂ ತಾಂ ತು ಮಾಧವಃ ಪರವೀರಹಾ ।
ಆದ್ಯಂ ತೀರ್ಥವರಂ ತಚ್ಚ ಸ್ಪೃಷ್ಟ್ವಾ ತೋಯಂ ಚ ಲಾಂಗಲೀ ॥೧೦೩॥

ಶತ್ರುಸಂಹಾರಕನಾದ ಬಲರಾಮನು ಅಲ್ಲಿ ರಾತ್ರಿಯ ಹೊತ್ತು ವಾಸಮಾಡಿ ಮರುದಿನ ಬೆಳಿಗ್ಗೆ ತೀರ್ಥವನ್ನು ಸ್ಪರ್ಶಿಸಿ ಸ್ನಾನಾದಿಗಳನ್ನು ಮಾಡಿದನು.

ಹೃಷ್ಟಃ ಪ್ರೀತಮನಾಶ್ಚೈವ ಹ್ಯಭವನ್ಮಾಧವೋತ್ತಮಃ ॥೧೦೪॥

ಮಾಧವೋತ್ತಮನಾದ ಬಲರಾಮನು ಮನಸ್ಸಂತೋಷವನ್ನು ಹೊಂದಿ ಸಂತುಷ್ಟನಾದನು.

ಯತ್ರಾऽಭಿಷಿಕ್ತೋ ಭಗವಾನ್ ಸ್ಕಂದೋ ದೇವೈಃ ಸಮಾಗತೈಃ ।
ಸೇನಾನೀಶ್ಚ ಕೃತೋ ರಾಜನ್ ಬಾಲ ಏವ ಮಹಾರಥಃ ॥೧೦೫॥

ಆ ತೀರ್ಥದಲ್ಲಿಯೇ ಬಂದ ದೇವತೆಗಳು ಮಹಾರಥನಾದ ಬಾಲಕ ಸ್ಕಂದನಿಗೆ ಪಟ್ಟಾಭಿಷೇಕವನ್ನು ಮಾಡಿ ದೇವಸೇನಾಪತಿಯೆಂದು ಆರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಕುಮಾರಾಭಿಷೇಕಪ್ರಕಾರವರ್ಣನಂ ನಾಮ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತಪೋರ್ಧಿನಂ ಬ್ರಾಹ್ಮಣೇ ದತ್ತಗರ್ಭಾ
ಗೌರ್ಭೋಢಾರಂ ಧಾವಿತಾರಂ ತುರಂಗಃ ।
ಶೂದ್ರಾ ದಾಸಂ ಪಶುಪಾಲಂ ತು ವೈಶ್ಯಾ
ವಧಾರ್ಥಿನಂ ತ್ವದ್ವಿಧಾ ರಾಜಪುತ್ರೀ ॥

ಗರ್ಭಧರಿಸಿದ ಬ್ರಾಹ್ಮಣಿಯು ತಪಸ್ವಿ ಪುತ್ರನನ್ನು, ಹಸುವು ಭಾರಹೊರುವ ಎತ್ತನ್ನು, ಕುದುರೆಯು ವೇಗವಾಗಿ ಓಡುವ ಕುದುರೆಯನ್ನು, ಶೂದ್ರಳು ಸೇವಾಸಮರ್ಥನನ್ನು, ವೈಶ್ಯಳು ಪಶುಸಂರಕ್ಷಕನನ್ನು, ನಿನ್ನಂಥ ರಾಜಪುತ್ರಿಯು (ರಣರಂಗದಲ್ಲಿ) ಸಾವನ್ನು ಬಯಸುವ ಪುತ್ರನನ್ನು ಇಚ್ಛಿಸುತ್ತಾರೆ.

ISBN : 978-93-88813-00-6